ರಾಯಬಾಗ ಪರಿಸರದ
ಹಾಲುಮತ ಪರಂಪರೆ : ಸಾಂಸ್ಕೃತಿಕ ಚರಿತ್ರೆ

(ಪಿಎಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನ ಪ್ರಬಂಧ)



ಸಂಶೋಧಕರು

ಮಧುಸೂದನ ಕರೆಪ್ಪ ಬೀಳಗಿ

ಮಾರ್ಗದರ್ಶಕರು

ಡಾ. ಸ್ಮಿತಾ ಪ್ರಮೋದ ಸುರೇಬಾನಕರ



ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ ಜಿ. ಬೆಳಗಾವಿ

ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ -೫೮೩೨೭೬

೨೦೧೭

ರಾಯಬಾಗ ಪರಿಸರದ
ಹಾಲುಮತ ಪರಂಪರೆ : ಸಾಂಸ್ಕೃತಿಕ ಚರಿತ್ರೆ

(ಪಿಎಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನ ಪ್ರಬಂಧ)

ಸಂಶೋಧಕರು
ಮಧುಸೂದನ ಕರೆಪ್ಪ ಬೀಳಗಿ

ಮಾರ್ಗದರ್ಶಕರು
ಡಾ. ಸ್ಮಿತಾ ಪ್ರಮೋದ ಸುರೇಬಾನಕರ

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ
ಹಾರೂಗೇರಿ ಜಿ. ಬೆಳಗಾವಿ

ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ -೫೮೩೨೭೬
೨೦೧೭

ಸಂಶೋಧಕರ ಧೃಡೀಕರಣ ಪ್ರಮಾಣ ಪತ್ರ

ಇಂದ :

ಮಧುಸೂದನ ಕ. ಬೀಳಗಿ
ಯುನಿವರ್ಸಲ್ ಪದವಿ-ಪೂರ್ವ ಕಾಲೇಜು ಹಾರೂಗೇರಿ
ಅಂಚೆ॥ ಹಾರೂಗೇರಿ ತಾ॥ ರಾಯಬಾಗ
ಜಿಲ್ಲೆ॥ ಬೆಳಗಾವಿ ಪಿನ್‌ಕೋಡ್-೫೯೧ ೨೨೦

ಇವರಿಗೆ :

ಮಾನ್ಯ ನಿರ್ದೇಶಕರು
ಅಧ್ಯಯನಾಂಗ ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ-೫೮೩ ೨೭೬

ಮಾನ್ಯರೆ,

ವಿಷಯ : 'ರಾಯಬಾಗ ಪರಿಸರದ ಹಾಲುಮತ ಪರಂಪರೆ : ಸಾಂಸ್ಕೃತಿಕ ಚರಿತ್ರೆ' ಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟವಾಗಿಲ್ಲ ಎಂಬದನ್ನು ಧೃಡೀಕರಿಸುವ ಮತ್ತು ಕಲೋಕ್ವಿಯಂದಲ್ಲಿ ತಿಳಿಸಿದ ಸೂಚನೆಗಳನ್ನು ಮಹಾಪ್ರಬಂಧದಲ್ಲಿ ಪರಿಷ್ಕರಿಸಿ ಸಲ್ಲಿಸುವ ಕುರಿತು.

ಈ ಪ್ರಮಾಣ ಪತ್ರದ ಮೂಲಕ ನಾನು ಮಧುಸೂದನ ಕರೆಪ್ಪ ಬೀಳಗಿ ಧೃಡೀಕರಿಸುವುದೇನೆಂದರೆ, **ಶ್ರೀ ಬಿ. ಆರ್. ದರೂರ ಸಂಶೊಧನಾ ಕೇಂದ್ರ ಹಾರೂಗೇರಿ** ಮಾನ್ಯತಾ ಕೇಂದ್ರದ ಮೂಲಕ **'ರಾಯಬಾಗ ಪರಿಸರದ ಹಾಲುಮತ ಪರಂಪರೆ : ಸಾಂಸ್ಕೃತಿಕ ಚರಿತ್ರೆ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಸ್ಮಿತಾ ಪ್ರಮೋದ ಸುರೇಬಾನಕರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ದಿನಾಂಕ : ೧೮-೧೧-೨೦೧೭ ರಂದು ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದಲ್ಲಿ ಜರುಗಿದ ಕಲೋಕ್ವಿಯಂದಲ್ಲಿ, ವಿಷಯ ತಜ್ಞರು ಸೂಚಿಸಿದ ಎಲ್ಲ ಸೂಚನೆಗಳನ್ನು ಅಳವಡಿಸಿಕೊಂಡು ಕರುಡ ಪ್ರತಿಯನ್ನು ಪರಿಷ್ಕರಿಸಿ ಪಿಎಚ್. ಡಿ ಪದವಿಗಾಗಿ ಸಮಾಜ ವಿಜ್ಞಾನ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವನ್ನು ನಾನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಸಿಲ್ಲವೆಂದೂ ಮತ್ತು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಧೃಡೀಕರಿಸುತ್ತೇನೆ.

ವಂದನೆಗಳೊಂದಿಗೆ,

ಸ್ಥಳ : ಹಾರೂಗೇರಿ
ದಿನಾಂಕ : ೦೪-೧೨-೨೦೧೭

ತಮ್ಮ ವಿಶ್ವಾಸದ

(ಮಧುಸೂದನ ಕರೆಪ್ಪ ಬೀಳಗಿ)

ಮಾರ್ಗದರ್ಶಕರ ಧೃಡೀಕರಣ ಪ್ರಮಾಣ ಪತ್ರ

ಇಂದ :

ಡಾ. ಸ್ಮಿತಾ ಪ್ರಮೋದ ಸುರೇಬಾನಕರ
ಪ್ರಾಚಾರ್ಯರು ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರು,
ರಾಣಿ ಪಾರ್ವತಿದೇವಿ ಪ್ರಥಮ ದರ್ಜೆ ಮಹಾವಿದ್ಯಾಲಯ ಬೆಳಗಾವಿ

ಇವರಿಗೆ :

ಮಾನ್ಯ ನಿರ್ದೇಶಕರು
ಅಧ್ಯಯನಾಂಗ ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ-೫೮೩ ೨೭೬

ಮಾನ್ಯರೆ,

ವಿಷಯ : 'ರಾಯಬಾಗ ಪರಿಸರದ ಹಾಲುಮತ ಪರಂಪರೆ : ಸಾಂಸ್ಕೃತಿಕ ಚರಿತ್ರೆ' ಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟವಾಗಿಲ್ಲ ಎಂಬದನ್ನು ಧೃಡೀಕರಿಸುವ ಮತ್ತು ಕಲೋಕ್ವಿಯಂದಲ್ಲಿ ತಿಳಿಸಿದ ಸೂಚನೆಗಳನ್ನು ಮಹಾಪ್ರಬಂಧದಲ್ಲಿ ಪರಿಷ್ಕರಿಸಿ ಸಲ್ಲಿಸುವ ಕುರಿತು.

ಈ ಪ್ರಮಾಣ ಪತ್ರದ ಮೂಲಕ ಧೃಡೀಕರಿಸುವುದೇನೆಂದರೆ, **ಶ್ರೀ ಬಿ. ಆರ್. ದರೂರ ಸಂಶೊಧನಾ ಕೇಂದ್ರ ಹಾರೂಗೇರಿ** ಮಾನ್ಯತಾ ಕೇಂದ್ರದ ಮೂಲಕ ಮಧುಸೂದನ ಕರೆಪ್ಪ ಬೀಳಗಿ ಇವರು **'ರಾಯಬಾಗ ಪರಿಸರದ ಹಾಲುಮತ ಪರಂಪರೆ : ಸಾಂಸ್ಕೃತಿಕ ಚರಿತ್ರೆ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ದಿನಾಂಕ : ೧೮-೧೧-೨೦೧೭ ರಂದು ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದಲ್ಲಿ ಜರುಗಿದ ಕಲೋಕ್ವಿಯಂದಲ್ಲಿ, ವಿಷಯ ತಜ್ಞರು ಸೂಚಿಸಿದ ಎಲ್ಲ ಸೂಚನೆಗಳನ್ನು ಅಳವಡಿಸಿಕೊಂಡು ಕರುಡ ಪ್ರತಿಯನ್ನು ಪರಿಷ್ಕರಿಸಿ ಪಿಎಚ್. ಡಿ ಪದವಿಗಾಗಿ ಸಮಾಜ ವಿಜ್ಞಾನ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಸಲ್ಲಿಸುತ್ತಿರುವ ಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಸಿಲ್ಲವೆಂದೂ ಮತ್ತು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಧೃಡೀಕರಿಸುತ್ತೇನೆ.

ವಂದನೆಗಳೊಂದಿಗೆ,

ಸ್ಥಳ : ಹಾರೂಗೇರಿ

ದಿನಾಂಕ : ೦೪-೧೨-೨೦೧೭

ತಮ್ಮ ವಿಶ್ವಾಸದ

Dr. (MRS) SMITA P. SUREBANKAR
PRINCIPAL
Research Guide & Asso. Prof. in History
R. P. D. College BELAGAVI

ಪರಿವಿಡಿ	ಪುಟ ಸಂಖ್ಯೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ ೦೧-೧೦

ಅಧ್ಯಾಯ : ಎರಡು

ಹಾಲುಮತ ಚರಿತ್ರೆ ಮತ್ತು ಸಂಸ್ಕೃತಿ ೧೧-೪೬

೨.೧ ಹಾಲುಮತದ ಉಗಮ ಮತ್ತು ವಿಕಾಸ

೨.೨ ರಾಯಬಾಗ ಪರಿಸರದ ಹಾಲುಮತ ಸಾಂಸ್ಕೃತಿಕ ಪರಂಪರೆ

ಅಧ್ಯಾಯ : ಮೂರು

ರಾಯಬಾಗ ಪರಿಸರದ ಹಾಲುಮತ ಸಾಂಸ್ಕೃತಿಕ ನೆಲೆಗಳು ೪೭-೧೬೩

೩.೧ ಹಾಲುಮತದ ಚಾರಿತ್ರಿಕ ನೆಲೆಗಳು

೩.೨ ಧಾರ್ಮಿಕ ನೆಲೆಗಳು ಹಾಗೂ ದೈವಗಳು

ಅಧ್ಯಾಯ : ನಾಲ್ಕು

ಹಾಲುಮತದ ಆರಾಧನಾ ಕಲೆಗಳು, ಆಚರಣೆಗಳು, ನಂಬಿಕೆ-ಸಂಪ್ರದಾಯಗಳು ೧೬೪-೨೦೩

೪.೧ ಆರಾಧನಾ ಕಲೆಗಳು

೪.೨ ಆಚರಣೆಗಳು

೪.೩ ನಂಬಿಕೆ-ಸಂಪ್ರದಾಯಗಳು

ಅಧ್ಯಾಯ : ಐದು

ಹಾಲುಮತ ಒಳಪಂಗಡಗಳು ಮತ್ತು ಸಾಧಕರು ೨೦೪-೨೪೬

೫.೧ ಒಳಪಂಗಡಗಳು

೫.೨ ರಾಯಬಾಗ ಪರಿಸರದ ಸಾಧಕರು

ಅಧ್ಯಾಯ : ಆರು

ರಾಯಬಾಗ ಪರಿಸರದ ಹಾಲುಮತ ಸಮುದಾಯದ ಸ್ಥಿತ್ಯಂತರಗಳು ೨೪೭-೨೯೧

೬.೧ ರಾಜಕೀಯ

೬.೨ ಸಾಮಾಜಿಕ

೬.೩ ಶೈಕ್ಷಣಿಕ

೬.೪ ಧಾರ್ಮಿಕ ಮತ್ತು ಸಾಂಸ್ಕೃತಿಕ

೬.೫ ಸಹಕಾರಿ ಮತ್ತು ಆರ್ಥಿಕ

ಅಧ್ಯಾಯ : ಏಳು

ಸಮಾರೋಪ ೨೯೨-೩೦೦

ಅನುಬಂಧಗಳು :

೧. ರಾಯಬಾಗ ಪರಿಸರದ ಹಾಲುಮತ ಸಮುದಾಯದ ಕೇಂದ್ರಗಳು (ನಕ್ಷೆ) ೦೧
೨. ಶಂ. ಬಾ. ಜೋಶಿಯವರು ನೀಡಿದ ಹಾಲುಮತ ಸಮುದಾಯದ ವಂಶವೃಕ್ಷ ೦೨
೩. ವಕ್ತೃಗಳು ೦೩-೦೫
೪. ಆಯ್ದ ಐದು ಸಂದರ್ಶನಗಳು ೦೬-೨೫
೫. ಹಾಲುಮತದ ಕುಲದೈವ ಬೀರದೇವರ ಬಾವನ್ನ ಬಿರುದುಗಳು ೨೬
೬. ಡೊಳ್ಳಿನ ಹಾಡುಗಳ ಮೇಳ(ಸಂಘ)ಗಳು ೨೭-೨೯
೭. ಹಾಲುಮತದ ಶಿಕ್ಷಣ ಸಂಸ್ಥೆಗಳು ೩೦-೩೫
೮. ಹಾಲುಮತ ದೇವತೆಗಳ ಕುರಿತಾದ ಜನಪದ ತ್ರಿಪದಿಗಳ ೩೬-೩೮
೯. ಹಾಲುಮತ ದೇವಸ್ಥಾನದ ಛಾಯಾಚಿತ್ರಗಳು ೩೯-೫೦
೧೦. ಆಕರ ಗ್ರಂಥಗಳು ೫೧-೫೯

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

೧.೧ ಪ್ರಸ್ತಾವನೆ :

ಕರ್ನಾಟಕ ರಾಜ್ಯದ ಅತ್ಯಂತ ಪ್ರಾಚೀನ ಪಟ್ಟಣಗಳಲ್ಲಿ ಬೆಳಗಾವಿಯೂ ಒಂದು. ಇಂದು ರಾಜ್ಯದ ಎರಡನೇ ರಾಜಧಾನಿ ಎಂದು ಗುರುತಿಸಲ್ಪಟ ಬೆಳಗಾವಿ ಜಿಲ್ಲೆಯು, ಪ್ರಾಚೀನ ಕಾಲದಲ್ಲಿ ಹಲವಾರು ಆಳರಸರ ವ್ಯಾಪ್ತಿಗೆ ಒಳಪಟ್ಟಿತ್ತು. ಕರ್ನಾಟಕವನ್ನು ಆಳಿದ ಅಚ್ಚಕನ್ನಡ ಅರಸರಾದ ರಟ್ಟರ ಅಥವಾ ರಾಷ್ಟ್ರಕೂಟರ ಕೇಂದ್ರಸ್ಥಾನವಾಗಿದ್ದುದು ಈ ಜಿಲ್ಲೆಯೇ. ಹಲಸಿಯ ಕದಂಬರು, ದೇವಗಿರಿಯ ಯಾದವರು, ಕಳಚೂರ್ಯರು, ವಿಜಯನಗರದ ಅರಸರು, ಬಹಮನಿಯ ಸುಲ್ತಾನರು, ವಿಜಯಪುರದ ಆದಿಲ್‌ಶಾಹಿಗಳು, ಮರಾಠರು ಈ ಪ್ರದೇಶವನ್ನು ಆಳಿದ್ದಾರೆ. ಕರ್ನಾಟಕದ ಸಶಸ್ತ್ರ ಬಂಡಾಯದ ಪ್ರಮುಖ ಮೈಲಿಗಲ್ಲು ಕಿತ್ತೂರಿನ ದಂಗೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಪ್ರಥಮ ರಾಣಿಯೆಂಬ ಕೀರ್ತಿಗೆ ಪಾತ್ರಳಾದ "ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ" ಕಿತ್ತೂರಿನ ಚೆನ್ನಮ್ಮನ ಜನ್ಮ ಮತ್ತು ಕರ್ಮ ಭೂಮಿ ಇದಾಗಿದೆ.

ಉಜ್ವಲ ದೇಶಭಕ್ತ, ಸಂಗೊಳ್ಳಿ ರಾಯಣ್ಣನ ವೀರಭೂಮಿ ಇದು. ಬ್ರಿಟಿಷರ ವಿರುದ್ಧ ಬಂಡೆದ್ದ ಗಂಡುಗಲಿಗಳಿಂದಾಗಿ ಈ ಪ್ರದೇಶ "ಗಂಡುಮೆಟ್ಟಿನ ಸ್ಥಳ" ಎಂದು ಪ್ರಸಿದ್ಧಿವಾಗಿದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರಿಗೂ ಈ ಜಿಲ್ಲೆಗೂ ನಿಕಟವಾದ ಸಂಪರ್ಕವಿತ್ತು. ಅವರು ಬೆಳಗಾವಿ ಮತ್ತು ಹುದಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಹೆಮ್ಮೆಯ ಸಂಗತಿ. ಇಂದು ಸಕ್ಕರೆಯ ನಾಡೆಂದು ಖ್ಯಾತಿಗಳಿಸಿದ ಈ ಜಿಲ್ಲೆ ಸಾಂಸ್ಕೃತಿಕವಾಗಿಯೂ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶ ಕುಂತಲನಾಡು, ಕುಂದರನಾಡು, ಕುಹುಂಡಿ–ಮೂರು ಸಾವಿರ ಪ್ರದೇಶ ಎಂದು ಖ್ಯಾತಿ ಹೊಂದಿತ್ತು.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಮಧ್ಯೆ ಜ್ವಲಂತ ಸಮಸ್ಯೆಯಾಗಿರುವ ಮತ್ತು ಕರ್ನಾಟಕದ ಹೆಬ್ಬಾಗಿಲು ಎಂದೇ ಖ್ಯಾತಿಯನ್ನು ಪಡೆದಿರುವ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ೧೦ ತಾಲ್ಲೂಕುಗಳಿದ್ದು, ಅವುಗಳಲ್ಲಿ ರಾಯಬಾಗ ಒಂದು. ಬಹು ಪ್ರಾಚೀನ ಇತಿಹಾಸವನ್ನು ಹೊಂದಿರುವ ಬೆಳಗಾವಿಯ ವಡಗಾಂವ, ಮಾಧವಪುರಗಳಲ್ಲಿನ ಉತ್ಖನದಿಂದಾಗಿ ಕ್ರಿ. ಶ. ಪೂರ್ವದ ಇತಿಹಾಸ ಬೆಳಕಿಗೆ ಬಂದಿದೆ. ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಮಾರ್ಕಂಡೇಯ, ಹಿರಣ್ಯಕೇಶಿ, ದೂಧಗಂಗಾ, ವೇಧಗಂಗಾ ನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತಿದ್ದು ಹಸಿರು ತಾಣವನ್ನೆ ನಿರ್ಮಿಸಿವೆ. ಜಿಲ್ಲೆಯು ವೈವಿಧ್ಯಮಯವಾದ ಭೂಪ್ರದೇಶವನ್ನು ಹೊಂದಿದ್ದು ಸಮತಟ್ಟಾದ ಭೂಪ್ರದೇಶದೊಂದಿಗೆ ಅಲ್ಲಲ್ಲಿ ಚಿಕ್ಕ-ಚಿಕ್ಕ ಬೆಟ್ಟಗಳಿಂದ ಕೂಡಿದ ಪ್ರದೇಶವನ್ನು ಕಾಣುತ್ತೇವೆ. ಇಲ್ಲಿ ಇತಿಹಾಸ ಪೂರ್ವದ ಮಾನವನ ನೆಲೆಗಳು ಪತ್ತೆಯಾಗಿವೆ. ಭೌಗೋಳಿಕವಾಗಿ "Belgaum lying between 15° 23' and 16^{0} 58' north latitude and 74° 5' and 75^{0} 28' east longitude, has an area of about 4600 squre miles."[೧] (ಭೂ ವಿಸ್ತೀರ್ಣ ೧೩೪೧೦ ಚ. ಕಿ. ಮೀಟರ್ ಹೊಂದಿರುತ್ತದೆ.) ಸಮುದ್ರ ಮಟ್ಟದಿಂದ ಸರಾಸರಿ ೪೬೦ ರಿಂದ ೯೦೦ ಮೀಟರ ಎತ್ತರದಲ್ಲಿದೆ.

ಜಿಲ್ಲೆಯನ್ನು ಭೌಗೋಳಿಕವಾಗಿ ಮಲೆನಾಡು, ಅರೆಮಲೆನಾಡು ಹಾಗೂ ಬಯಲು ಪ್ರದೇಶವೆಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ರಾಯಬಾಗ, ಅಥಣಿ, ಚಿಕ್ಕೋಡಿ ಹಾಗೂ ಹುಕ್ಕೇರಿ ತಾಲೂಕಿನ ಉತ್ತರ ಭಾಗ ಬಯಲು ಪ್ರದೇಶದಿಂದ ಕೂಡಿದೆ. ಇಲ್ಲಿ ಮಳೆಯ ಪ್ರಮಾಣ ಕಡಿಮೆ. ಆದರೆ ಚಿಕ್ಕೋಡಿ, ರಾಯಬಾಗ ಮತ್ತು ಅಥಣಿ ತಾಲೂಕುಗಳನ್ನೊಳಗೊಂಡು ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಕೃಷ್ಣಾ ನದಿ ಈ ಭಾಗದಲ್ಲಿ ಸಮೃದ್ಧಿಯನ್ನುಂಟು ಮಾಡಿದೆ. ಘಟಪ್ರಭಾ ಎಡದಂಡೆ ಕಾಲುವೆಯೂ ರಾಯಬಾಗ ತಾಲೂಕಿನಲ್ಲಿ ಹರಿಯುವ ಮೂಲಕ ರೈತರಿಗೆ ವರದಾನವಾಗಿದೆ.

೧.೨ ಅಧ್ಯಯನದ ಉದ್ದೇಶ :

ರಾಯಬಾಗ ಪರಿಸರವು ಹಲವು ಸಂಸ್ಕೃತಿಗಳ ಸಂಗಮ. ಜೈನ, ಲಿಂಗಾಯತ, ಹಾಲುಮತ, ಮರಾಠಾ, ಮುಸ್ಲಿಂ, ದಲಿತ ಮುಂತಾದ ಹಲವು ಸಮುದಾಯಗಳು ಪರಸ್ಪರ ಸಾಮರಸ್ಯದಿಂದ ಬದುಕುತ್ತಲೇ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿವೆ. ಪ್ರತಿಯೊಂದು ಸಮುದಾಯವೂ ತನ್ನದೇ ಆದ ಸಾಹಿತ್ಯ, ಸಂಸ್ಕೃತಿ, ಚರಿತ್ರೆ ಜನಪದ ಸಾಹಿತ್ಯ ಸಂಪದವನ್ನು ಹೊಂದಿದೆ. ಹಾಲುಮತದವರ ಡೊಳ್ಳಿನ ಹಾಡು, ಜೈನರ ಜಿನ ಭಜನೆ, ಲಿಂಗಾಯತರ ಶಿವ ಭಜನೆ, ಮರಾಠರ ಕನ್ನಡ ಅಭಂಗ-ಕೀರ್ತನೆ, ಮುಸ್ಲಿಂರ ಮೊಹರಂ ಹಾಡು, ದಲಿತರ ಹಾಡು-ಗೀತ-ನೃತ್ಯ-ಕಲೆ-ಕೌಶಲ ಮೊದಲಾದವುಗಳು ಅಭ್ಯಸನೀಯವೆನಿಸುತ್ತವೆ.

ಈ ಪರಿಸರದ ಮೂಲನಿವಾಸಿಗಳು ಹಾಗೂ ಬಹುಸಂಖ್ಯಾತರಾದ (ಅಂದಾಜು ಪ್ರತಿಶತ ೩೮ ರಷ್ಟು) ಕುರುಬ (ಹಾಲುಮತ) ಜನಾಂಗದ, ಸಂಸ್ಕೃತಿ ಮತ್ತು ಚರಿತ್ರೆಯ ಶೋಧ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಹಾಲುಮತ ಸಮುದಾಯದ ದೈವಗಳು, ವಿಶಿಷ್ಟ ಆಚರಣೆಗಳು, ಸಾಮಾಜಿಕ ಸ್ಥಿತಿಗತಿಗಳು, ಸಾಂಸ್ಕೃತಿಕ ಸ್ಥಿತ್ಯಂತರಗಳು, ಒಳಪ್ರಬೇಧಗಳು, ಕಲೆ-ಕೌಶಲಗಳು ಮುಂತಾದ ನೆಲೆಗಳನ್ನು ವಿಶ್ಲೇಷಿಸುವುದರ ಮೂಲಕ ರಾಯವಾಗ ಪರಿಸರದ ಹಾಲಮತದ ಸ್ಥಳೀಯ ಚರಿತ್ರೆಯನ್ನು ಕಟ್ಟುವ ಯತ್ನ ಇಲ್ಲಿದೆ.

ರಾಯಬಾಗ ಪರಿಸರದ ಸಿದ್ಧ ಪರಂಪರೆಯಂತೂ ತುಂಬ ವಿಶಿಷ್ಟ. ಇಲ್ಲಿ ಕರೇಸಿದ್ಧ, ಅರಣ್ಯಸಿದ್ಧ, ಹಾಲಸಿದ್ಧ, ಅಮೋಘಸಿದ್ಧ, ಭೂತಾಳಸಿದ್ಧ, ರೇವಣಸಿದ್ಧ, ಮಲಕಾರಿಸಿದ್ಧ, ಗುರುಸಿದ್ಧ, ಮುಂತಾದ ಸಿದ್ಧರ ಆರಾಧನೆಯ ಪರಂಪರೆಯಿದೆ. ಈ ನೆಲೆಯಲ್ಲಿ ಬೆಳೆದು ಬಂದ ಪರಂಪರಾಗತ ನಂಬಿಕೆ, ಆಚರಣೆ, ಸಾಹಿತ್ಯ, ಐತಿಹ್ಯ ಮೊದಲಾದ ಆಕರಗಳನ್ನು ಬಳಸಿಕೊಂಡು ಈ ಪಶುಪಾಲಕ ವರ್ಗದ ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸುವ ಆಶಯವನ್ನು ಮಹಾಪ್ರಬಂಧ ಹೊಂದಿದೆ.

ಕುರುಬ ಅಥವಾ ಹಾಲುಮತದ ದೈವಗಳು ಮತ್ತು ಸಂಸ್ಕೃತಿಯ ಬಗ್ಗೆ ಜನಪದ ಸಾಹಿತ್ಯದಲ್ಲಿ ಸಾಕಷ್ಟು ಆಕರಗಳು ಲಭ್ಯವಿವೆ. ನಾಗರಿಕ ಬದುಕಿನಲ್ಲಿ ಏನೆಲ್ಲಾ ಕಲೆಗಳಿವೆಯೋ ಅವುಗಳ ಮೂಲ ಸೆಲೆ ಜನಪದವೇ ಆಗಿದೆ. "ಮಾನವ ಸಂಸ್ಕೃತಿಯ ಸಮಗ್ರ ತಿಳಿವಳಿಕೆಗೆ 'ಜಾನಪದ' ಅಧ್ಯಯನವು ಒಂದು ಮಹತ್ತರವಾದ ಅಂಶವೆಂಬ ಮಾತು ಇಂದು ವಿಶ್ವಮಾನ್ಯವಾಗಿದೆ. ವೈಜ್ಞಾನಿಕ ಪ್ರಗತಿಯಿಂದ ಯಂತ್ರ ನಾಗರಿಕತೆಯ ರೂಪದಲ್ಲಿ ಯುರೋಪಿನಾದ್ಯಂತ ವೈಚಾರಿಕ ಕ್ರಾಂತಿಯ ಚಂಡಮಾರುತ ಬೀಸಿತು. ಪಾಶ್ಚಾತ್ಯ ಜೀವನ ಕ್ರಮದಲ್ಲಿ ಯುಗಯುಗದ ಬಾಯಿಮಾತಿನ ಸಂಪ್ರದಾಯದ ಅವಿಚ್ಛಿನ್ನ ಪ್ರವಾಹದಲ್ಲಿ ಹರಿದು ಬಂದ

ನಂಬುಗೆ, ವಿಚಾರ, ಸಾಹಿತ್ಯ ಹಾಗೂ ಮೌಲ್ಯಗಳೆಲ್ಲ ಕೊಚ್ಚಿಹೋಗುವವೇನೋ ಎಂಬ ಭಯ ತಾಂಡವವಾಡಿತು. ತಮ್ಮ ತಮ್ಮ ಸಂಸ್ಕೃತಿ ವೈಲಕ್ಷಣಗಳನ್ನು ಉಳಿಸಿಕೊಳ್ಳುವ ಕಾರ್ಯದಲ್ಲಿ ನಿರಂತರವಾಗಿ ಕೈಕೊಂಡ ಸಾಹಸಪೂರ್ಣ ಆಧ್ಯಯನದ ಫಲವೇ ಇಂದು ವ್ಯಾಪಕವಾಗಿ ಬೆಳೆದು ನಿಂತ ಜಾನಪದ ವಿಜ್ಞಾನ ಇಲ್ಲವೇ ಜಾನಪದ."[೨] ಅದರ ಒಂದು ಭಾಗವಾಗಿ ಈ ಅಧ್ಯಯನವನ್ನು ರೂಪಿಸಬೇಕೆಂಬುದು ಆಶಯ.

ಕರ್ನಾಟಕದ ಬೃಹತ್ ಜನ ಸಮುದಾಯಗಳಲ್ಲೊಂದಾದ ಹಾಲುಮತದ ಚರಿತ್ರೆ ಹಾಗೂ ಸಂಸ್ಕೃತಿಯ ಕುರಿತು ಹಲವು ಅಧ್ಯಯನಗಳು ಬೆಳಕು ಕಂಡಿವೆ. ಆದರೆ ಹಾಲುಮತದ ಪ್ರಾಚೀನ ನೆಲೆಗಳಲ್ಲೊಂದಾದ ರಾಯಬಾಗ ಪರಿಸರದ ಈ ಸಮುದಾಯದ ಕುರಿತು ಆಳವಾದ ಅಧ್ಯಯನ ನಡೆದಿರಲಿಲ್ಲ. ಆದ್ದರಿಂದ ರಾಯಬಾಗ ತಾಲೂಕಿನ ವ್ಯಾಪ್ತಿಗೆ ಸಂಬಂಧಿಸಿದಂತೆ ಹಾಲುಮತ ಸಂಸ್ಕೃತಿ ಮತ್ತು ಚರಿತ್ರೆಯನ್ನು ತುಂಬಾ ಎಚ್ಚರಿಕೆಯಿಂದ ಕಟ್ಟಿಕೊಡುವ ಉದ್ದೇಶ ಹೊಂದಲಾಗಿದೆ.

ಅಲಖನೂರಿನ ಕರಿಸಿದ್ದೇಶ್ವರ, ಯಲ್ಪಾರಟ್ಟಿಯ ಅರಣ್ಯಸಿದ್ದೇಶ್ವರ, ಕಂಕಣವಾಡಿಯ ಹಾಲಸಿದ್ದೇಶ್ವರ, ಚಿಂಚಲಿಯ ಮಾಯಕ್ಕಾ, ಬೆಕ್ಕೇರಿಯ ಲಕ್ಕವ್ವ ಈ ಪರಿಸರದ ಪ್ರಮುಖ ಹಾಲುಮತ ದೈವಗಳು. ಪುರುಷ ಹಾಗೂ ಸ್ತ್ರೀ ದೈವಗಳ ಆಚರಣೆಗಳು ಜನರನ್ನು ತುಂಬಾ ಪ್ರಭಾವಿಸಿವೆ. ಆದ್ದರಿಂದ ಈ ದೈವಗಳ ಅಧ್ಯಯನ ಪ್ರಸ್ತುತ ಪ್ರಬಂಧದ ಪ್ರಮುಖ ಭಾಗವಾಗಿದೆ.

ಡಾ. ಸಿದ್ದಲಿಂಗಯ್ಯನವರು "ಒಂದು ದೇವತೆಗೆ ಸಂಬಂದಿಸಿದ ಹಾಡು, ಕಥೆ, ಐತಿಹ್ಯ, ದಂತ ಕಥೆ, ಪುರಾಣಗಳಲ್ಲಿ ಆಯಾ ಜನಾಂಗ ಹಲವು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಜೀವನ ಶೈಲಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಜ್ಞಾನದ ವಿವಿಧ ಶಾಖೆಗಳು ಅಂದರೆ ಇತಿಹಾಸ, ಮನಃಶಾಸ್ತ್ರ, ಭಾಷಾಜ್ಞಾನ, ಸಮಾಜಶಾಸ್ತ್ರ ಇನ್ನಿತರ ಶಿಸ್ತುಗಳು ಈ ಬಗೆಯ ಅಧ್ಯಯನದಿಂದ ನೆರವನ್ನು ಪಡೆಯಬಹುದು."[೩]

ಪ್ರಾಚೀನ ಪರಂಪರೆಯನ್ನು ಹೊಂದಿರುವ ರಾಯಬಾಗ ಪರಿಸರಕ್ಕೆ ಇತಿಹಾಸ ಪೂರ್ವದ ನಂಟಿದೆ. ತಾಲೂಕಿನ ಕುಡಚಿ, ಖೇಮಲಾಪೂರ, ಮುಗಳಖೋಡ, ಯಬರಟ್ಟಿ, ಶಿರಗೂರ, ಹಾರೂಗೇರಿ, ಭಿರಡಿ ಬೂದಿಹಾಳ ಮುಂತಾದೆಡೆಗಳಲ್ಲಿ ಸೂಕ್ಷ್ಮ ಶಿಲಾಯುಗ, ಶಿಲಾ-ತ್ರಾಮಯುಗ, ಇತಿಹಾಸ ಆರಂಭ ಯುಗದ ಮಾನವನ ನೆಲೆಗಳನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಡಾ. ಅ. ಸುಂದರ ತಾಲೂಕಿನ ಪ್ರಾಚ್ಯನೆಲೆಗಳ ಕುರಿತು ವಿಶೇಷ ಸಂಶೋಧನೆ ಕೈಕೊಂಡು ಆ ನೆಲೆಗಳ ವಿವರಗಳನ್ನು ನೀಡಿದ್ದಾರೆ. ಇತ್ತೀಚಿಗೆ ಡಾ. ಶ್ರೀನಿವಾಸ ಪಾಡಿಗಾರ ನೇತೃತ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚ್ಯ ಸಂಶೋಧನಾ ವಿಭಾಗ ಕುಡಚಿ ಬೂದಿದಿಬ್ಬದ ಉತ್ಖನನ ಕೈಕೊಂಡಿದೆ. ಈ ಎಲ್ಲ ಅಧ್ಯಯನಗಳು ಪೂರಕ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

'ರಾಯಬಾಗ ಪರಿಸರದ ಹಾಲುಮತ ಪರಂಪರೆ: ಸಾಂಸ್ಕೃತಿಕ ಚರಿತ್ರೆ' ಒಂದು ರೀತಿಯ ಜಾನಪದ ಅಧ್ಯಯನವೇ ಆಗಿದೆ. ಹಾಲುಮತದ ಉಗಮ, ವಿಕಾಸ, ಪರಂಪರೆಯ ಶೋಧಗಳು ಸಂಶೋಧಕರಿಗೆ ಸವಾಲುಗಳಂತಿವೆ. ಏಕೆಂದರೆ ಮೌಖಿಕ ಪರಂಪರೆಯ ಜನಪದೀಯ ಆಕರಗಳನ್ನೇ ಮುಂದಿಟ್ಟುಕೊಂಡು

ಚರಿತ್ರೆ ಕಟ್ಟುವ ಅನಿವಾರ್ಯತೆ ಇದೆ. ಪ್ರಸ್ತುತ ಅಧ್ಯಯನಕ್ಕೆ ಸ್ಥಳೀಯ ಆಕರಗಳೇ ಪ್ರಮುಖವಾಗುತ್ತವೆ. "ಸ್ಥಳೀಯ ಚರಿತ್ರೆ ಪರಿಕಲ್ಪನೆಯನ್ನು ವಿವರಿಸುವ ಬಗೆ ಯಾವುದು? ವಾಸ್ತವದಲ್ಲಿ, ಸ್ಥಳೀಯ ಚರಿತ್ರೆ ಎಂದರೇನು? ಜಾಗತಿಕ ಚರಿತ್ರೆ ಅಧ್ಯಯನದಲ್ಲಿ ಇದು ಹೊಂದಿರುವ ಸ್ಥಾನ ಯಾವುದು? ಈ ಕುರಿತು ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ. 'ಥಿಂಕ್ ಗ್ಲೋಬಲೀ ಅಂಡ್ ಆ್ಯಕ್ಟ್ ಲೋಕಲೀ (ರಾಬರ್ಟ್‌ಸನ್ : ೧೭೭) ಎಂಬ ಆಶಯವನ್ನು ಸದ್ಯದ ಸಂದರ್ಭದಲ್ಲಿ ಉಲ್ಲೇಖಿಸುವುದಾದರೆ, ಇದು ಸಾಂಸ್ಕೃತಿಕ ಏಕೀಕರಣ ಪ್ರಕ್ರಿಯೆಯತ್ತ ಬೊಟ್ಟು ಮಾಡುತ್ತದೆ. ಹಾಗೆಯೇ, ಪ್ರಾದೇಶಿಕರಣ ಅಥವಾ ದೇಸಿಕರಣ ಮತ್ತು ಜಾಗತೀಕರಣಗಳ ವೈರುದ್ಧ್ಯಗಳತ್ತಲೂ ಗಮನ ಸೆಳೆಯುತ್ತದೆ. ಸ್ಥಳೀಯತೆ ಅಥವಾ 'ಲೋಕ್ಯಾಲಿಟಿ'ಯನ್ನು ಸ್ಪಷ್ಟಪಡಿಸುವುದೇ 'ಗ್ಲೋಬ್ಯಾಲಿಟಿ' ಎಂಬುದೇ ಇಲ್ಲಿಯ ಆಶಯ."[೪]

ಇದು ಒಂದು ರೀತಿಯಲ್ಲಿ ರಾಯಬಾಗ ಪರಿಸರದ ಸ್ಥಳೀಯ ಚರಿತ್ರೆಯ ಅಧ್ಯಯನವಾಗಿದೆ. ದಿನದಿಂದ ದಿನಕ್ಕೆ ವಿಶ್ವ ಅಂಗೈಯ ತುದಿ ಬೆರಳಲ್ಲಿಯೇ ಅರಳುತ್ತ ದೇಸಿಯ ಅನನ್ಯತೆಯನ್ನು ಹೊಂದಿರುವ ಸ್ಥಳಗಳೆಲ್ಲವುಗಳು ಅಂತರ್‌ರಾಷ್ಟ್ರೀಕರಣಕ್ಕೆ ಒಳಗಾಗುತ್ತಿವೆ. ಈ ಮೂಲಕ ದೇಸಿಯ ಸಂಸ್ಕೃತಿಯಲ್ಲಿ ಜಾಗತಿಕ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಪ್ರಕಿಯೆ ಸದ್ದಿಲ್ಲದೆ ನಡೆದಿದೆ. ಈ ರೀತಿಯಾಗಿರುವ ದೇಸಿಯತೆ ಮತ್ತು ಜಾಗತೀಕರಣಗಳ ನಡುವಿನ ಸಂಬಂಧಗಳ ಸ್ವರೂಪ ಅರಿತುಕೊಳ್ಳುವುದು ಸ್ಥಳೀಯ ಅಧ್ಯಯನದ ಅಗತ್ಯಗಳಲ್ಲೊಂದಾಗಿದೆ. ಆದರೆ ಇಂದು ಜಾಗತೀಕರಣದ ನೆಪದಲ್ಲಿ ಸ್ಥಳೀಯ ಸಂಸ್ಕೃತಿಯನ್ನು ನಿರ್ಲಕ್ಷಿಸಿ ನೆಲಮೂಲ ಸಂಸ್ಕೃತಿಯೇ ಕಣ್ಮರೆಯಾಗುವ ಅಪಾಯದ ಗಂಟೆ ಬಾರಿಸುತ್ತಿರುವುದು ವಿಷಾದನೀಯ ಸಂಗತಿ. ಒಂದು ನಿರ್ದಿಷ್ಟ ನೆಲ ಅಥವಾ ಸ್ಥಳದಲ್ಲಿರುವ ಸಮುದಾಯವೊಂದು ತನ್ನದೇ ಆದ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಹೊಂದಿರುವುದು ಸಹಜವಾಗಿದ್ದು, ಇದೇ ರೀತಿಯ ಅಥವಾ ಇದರ ರೂಪಾಂತರಗಳೇ ಜಗತ್ತಿನ ಬೇರೆ–ಬೇರೆ ಸ್ಥಳಗಳಲ್ಲಿ ಅಸ್ತಿತ್ವದಲ್ಲಿರುವುದು ಕಂಡು ಬರುತ್ತಿರುವುದರಿಂದಾಗಿ, ಸ್ಥಳೀಯ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಗಳು ಹಿಂದೆದಿಂಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗುತ್ತಿವೆ. ಹೀಗಾಗಿ ಜಾಗತೀಕರಣಕ್ಕೆ ಪ್ರತಿಯಾಗಿ ಸ್ಥಳೀಯ ಅನನ್ಯತೆ ಮತ್ತು ಜ್ಞಾನ ಪರಂಪರೆಯನ್ನು ಬಲಗೊಳಿಸಿಬೇಕಾಗಿರುವುದು.

ಆದರೆ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವುದು ಅಷ್ಟು ಸುಲಭವಲ್ಲ. ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ಖಚಿತವಾದ ಅಧ್ಯಯನ ನಡೆಸುವುದು ಕಷ್ಟಕರವಾಗಿದ್ದು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನೇ ಅವಲಂಬಿಸಬೇಕಿದೆ. ಇಲ್ಲಿ ಲಿಖಿತ ಆಕರಗಳು ದೊರೆಯುವುದು ವಿರಳ. ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಲಭ್ಯವಿರುವ ಮೌಖಿಕ ಆಕರಗಳನ್ನೇ ಅವಲಂಬಿಸ ಬೇಕಾಗಿರುವುದು. ವಾಸ್ತವದಲ್ಲಿ ಸ್ಥಳೀಯ ಚರಿತ್ರೆಗೆ ಏನೇ ಇತಿಮಿತಿಗಳಿದ್ದರೂ ಕೂಡ ಇದು, ಸ್ಥಳೀಯ ಸಮುದಾಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಇತ್ಯಾದಿ ವಿವರಗಳನ್ನು ಸಂಗ್ರಹಿಸಿ ಕೊಡುತ್ತದೆ. ಈ ರೀತಿಯ ಸ್ಥಳೀಯ ಅಧ್ಯಯನಗಳು ಮುಂದಿನ ಸಂಶೋಧಕರಿಗೆ ಆಕರಗಳಾಗಿ ನೆರವಾಗಬಹುದು. ಜೊತೆಗೆ ಒಂದು ಸಮುದಾಯದ ಅಧ್ಯಯನವು ಇನ್ನೂಳಿದ ಸಮುದಾಯಗಳ ಅಧ್ಯಯನಕ್ಕೆ ಪ್ರೇರಣೆಯಾಗಬಹುದು. ಅಲ್ಲದೆ ಅವುಗಳ ತುಲನಾತ್ಮಕ ಅಧ್ಯಯನಕ್ಕೂ ಸಹಾಯಕವಾಗುತ್ತವೆ.

ಇದು ಒಂದು ಸೂಕ್ಷ್ಮ ತರಹದ ಅಧ್ಯಯನ. ಬಿಡಿ-ಬಿಡಿಯಾದ ವಿಷಯಗಳ ಮೂಲಕ ವಿಸ್ತೃತ ಅಧ್ಯಯನವನ್ನು ಕೈಕೊಳ್ಳುವ ಪ್ರಯತ್ನವಾಗಿದೆ. ಸಾಮಾನ್ಯವಾಗಿ ಸಮಾಜದ ಕೆಳಸ್ತರದ ಸಮುದಾಯಗಳಿಗೆ ಚರಿತ್ರೆಗಳಿಲ್ಲ. ಇದಕ್ಕೆ ರಾಯಬಾಗ ಪರಿಸರದ ಕುರುಬ ಸಮುದಾಯವು ಹೊರತಾಗಿಲ್ಲ. ೧೯೭೦ರ ದಶಕದಲ್ಲಿ ಸಮಾಜ ಚರಿತ್ರೆಯನ್ನು 'ತಳದಿಂದ ನೋಡುವ' ಅಧ್ಯಯನಗಳು ಪ್ರವರ್ಧಮಾನಕ್ಕೆ ಬಂದವು. ಚರಿತ್ರೆಗಳ ರಚನೆಯಲ್ಲಿ ಗಣ್ಯ ವ್ಯಕ್ತಿಗಳ ಮತ್ತು ಪ್ರಮುಖ ವಿಷಯಗಳನ್ನು ಮಾತ್ರ ವೈಭವೀಕರಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಕೆಳವರ್ಗದವರನ್ನು ಉಪೇಕ್ಷೆ ಮಾಡಲಾಗಿತ್ತು. ಈ ರೀತಿಯ ನಿರ್ಲಕ್ಷಿತ ಹೋರಾಟಗಳನ್ನು ಒತ್ತುಕೊಟ್ಟು ಅಧ್ಯಯನಕ್ಕೊಳಪಡಿಸಿದವರು ಸಬಾಲ್ಟರ್ನ್ ಚರಿತ್ರೆಕಾರರು. "ಸಬಾಲ್ಟರ್ನ್ ಅಧ್ಯಯನ ಯೋಜನೆ ಇಂದು ಸಮಾಜ ವಿಜ್ಞಾನಗಳಲ್ಲಿ ಮಾತ್ರವಲ್ಲದೆ ಸಾಹಿತ್ಯ ವಲಯಗಳಲ್ಲಿ ಕೂಡ ಪ್ರಭಾವಿಯಾಗಿ ಬೆಳೆದಿದೆ."[೫] "ಭಾರತದ ಮಟ್ಟಿಗೆ ಸಬಾಲ್ಟರ್ನ್ ಚಿಂತನೆಗಳನ್ನು ಪರಾಮರ್ಶಿಸಲು ಪ್ರಯತ್ನಿಸಿದ ಮೊದಲನೆಯ ವಿದ್ವಾಂಸರು ಸುಶೋಭನ್ ಸರ್ಕಾರ್."[೬]

"ಕೆಳವರ್ಗಗಳ ಚರಿತ್ರೆ ಬರವಣಿಗೆಯ ಆಶಯಗಳು ಇಂದಿನ ಅವಶ್ಯಕತೆಯಾಗಿವೆ. ಮೂಲೆಗೊತ್ತಲ್ಪಟ್ಟ ಸಮುದಾಯಗಳ/ವರ್ಗಗಳ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಗಳಿಂದಾಗಿ ಇತಿಹಾಸದ ಇನ್ನೊಂದು ಮಗ್ಗುಲನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಮೂಲಕ ಭಾರತದ ಜನಸಂಖ್ಯೆಯಲ್ಲಿರುವ ಬಲಾಢ್ಯರು ರೂಪಿಸಿದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೆ ಚಾರಿತ್ರಿಕವಾಗಿ ನಲುಗಿ ಹೋಗಿರುವ ಪ್ರಕ್ರಿಯೆಯನ್ನು ಅರಿಯಬೇಕಾಗಿದೆ ಮತ್ತು ಅಭ್ಯಸಿಸಬೇಕಾಗಿದೆ."[೭]

ಕರ್ನಾಟಕದ ಬಹುತೇಕ ಕೆಳವರ್ಗದ ಸಮುದಾಯಗಳೆಲ್ಲವುಗಳು ಲಿಖಿತ ಪರಂಪರೆಯಿಂದ ದೂರ ಇದ್ದವುಗಳಾಗಿವೆ. ಅಲ್ಪ ಪ್ರಮಾಣದಲ್ಲಿ ದೊರೆಯುವ ಮೌಖಿಕ ಆಕರಗಳು ಕಾಲಗತಿಸಿದಂತೆಲ್ಲ ಮೂಲ ಸತ್ಯವನ್ನು ಮರೆಮಾಚುತ್ತಾ ಹೋಗುತ್ತವೆ. ಹಾಗೆಯೇ ಆ ವಿಷಯ ಅಥವಾ ಘಟನೆಯ ಸುತ್ತ ಕಾಲಕ್ರಮೇಣ ಪರ-ವಿರೋಧ ಅಭಿಪ್ರಾಯಗಳು ಗರಿಗೆದರುತ್ತವೆ. ಕೊನೆ-ಕೊನೆಗೆ ಇತಿಹಾಸ ಜನಪದವಾಗಿ ನಂತರ ಪುರಾಣವಾಗಿ ರೂಪಗೊಳ್ಳುತ್ತ ಅತಿಮಾನುಷ ನೆಲೆಯಲ್ಲಿ ವೈಭವೀಕೃತವಾಗುತ್ತದೆ. ಇಂತಹ ಬೆಳವಣಿಗೆಗಳು ಹೆಚ್ಚು ಕಾಲ ತೆಗೆದುಕೊಂಡಂತೆಲ್ಲ ಅವು ಸತ್ಯದಿಂದ ದೂರ ಸರಿಯುತ್ತ ಮಿಥ್ಯದ ಕಡೆಗೆ ವಾಲುತ್ತವೆ. ಇಂತಹ ಮಿಥ್ಯಗಳಿಂದ ಆವೃತ್ತವಾದ ಚಾರಿತ್ರಿಕ ಅಂಶಗಳನ್ನು ವಿಶ್ಲೇಷಣೆಯಿಂದ ಹೆಕ್ಕಿ ತೆಗೆದು ನಿಜ ಸ್ವರೂಪವನ್ನು ಪತ್ತೆ ಹಚ್ಚುವುದು ಚರಿತ್ರಕಾರನ ಕೌಶಲ್ಯವನ್ನು ಅವಲಂಬಿಸಿದೆ.

"ಮೌಖಿಕ ಚರಿತ್ರೆಕಾರರು ಆಕರಗಳಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ಎದುರಿಸುತ್ತಾರೆ. ಲಕ್ಷಾಂತರ ಮಂದಿ ಆರಾಧಿಸುವ ಒಬ್ಬೊಬ್ಬ ಜಾನಪದ ಹೀರೋಗೂ ಏಳೆಂಟು ಭಿನ್ನ ಭಿನ್ನ ಪಠ್ಯಗಳು ಸಿಗುತ್ತವೆ."[೮] "ಪಿ.ಕೆ. ರಾಜಶೇಖರ್ ಅವರು ಅಭಿಪ್ರಾಯಪಟ್ಟಂತೆ ಶಿಷ್ಟ ಗ್ರಂಥಗಳಲ್ಲಿ ಪ್ರಾಚೀನ ಪ್ರತಿಯನ್ನು ಮೂಲವಾಗಿಟ್ಟುಕೊಳ್ಳುವಂತೆ ಇಲ್ಲಿ ಉತ್ತಮ ಗಾಯಕನ ಪಾಠವನ್ನು ಪ್ರಧಾನ ಪಾಠವೆಂದು ಇಟ್ಟುಕೊಳ್ಳಬೇಕಾಗುತ್ತದೆ."[೯] ಉದಾಹರಣೆಗೆ ಈ ಪರಿಸರದ 'ಜನಪದ ನಾಯಕ(ಕಿ)' ಅಥವಾ ಸಾಂಸ್ಕೃತಿಕ ವೀರರಾದ ಅಲಕನೂರಿನ ಬೀರಸಿದ್ಧೇಶ್ವರ ಅಂದರೆ ಕರೇಸಿದ್ಧೇಶ್ವರ, ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ,

ಚಿಂಚಲಿಯ ಮಾಯಕ್ಕನನ್ನು ಲಕ್ಷಾಂತರ ಮಂದಿ ಆರಾಧಿಸುವರು. ಪ್ರತಿಯೊಬ್ಬರ ಕುರಿತಾಗಿ ಹಲವಾರು ಭಿನ್ನ-ಭಿನ್ನ ಪಥ್ಯವಿಷಯಗಳು ಲಭ್ಯವಾಗುತ್ತವೆ.

ಈ ಪಥ್ಯಗಳನ್ನು ಕಂಠಪಾಠದಲ್ಲಿಟ್ಟುಕೊಂಡು ತಲೆತಲಾಂತರದವರೆಗೆ ವರ್ಗಾಯಿಸುವ ಹಲವಾರು ಜನರು ಇಂದು ರಾಯಬಾಗ ಪರಿಸರದಲ್ಲಿದ್ದು, ಅವರೆಲ್ಲ ಅನಕ್ಷರಸ್ಥ ಕೆಳವರ್ಗದ ಜನರೆಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು. ಇವುಗಳಲ್ಲಿ ವಿವರಿಸಿರುವ ಘಟನೆಗಳು, ಸನ್ನಿವೇಶಗಳು, ಪ್ರಸ್ತಾಪಿತವಾದ ಊರು, ಹೆಸರುಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಇಂಥ ಸಂದರ್ಭಗಳಲ್ಲಿ ಮೌಖಿಕ ರೂಪದಲ್ಲಿ ದೊರಕುವ ಮಾಹಿತಿ, ಐತಿಹ್ಯ, ಪುರಾಣ, ಡೊಳ್ಳಿನ ಹಾಡು, ಲಾವಣಿಗಳಿಂದ ಇಂಥ ವ್ಯತ್ಯಾಸಗಳನ್ನು ಸರಿಪಡಿಸಿ ಅವುಗಳ ಹಿಂದಿನ ಆಶಯವನ್ನು ಅರಿಯಬೇಕಿದೆ.

ಒಂದು ಜನ ಸಮುದಾಯದ "ಸಾಂಸ್ಕೃತಿಕ ಚರಿತ್ರೆ ಎಂದರೆ ಅದು ಸಮಾಜವನ್ನು ರೂಪಿಸುವ ಭಿನ್ನ ಭಿನ್ನ ಆಯಾಮಗಳ ಚರಿತ್ರೇ ಆಗಿರುವುದುರಿಂದ ಆ ಬಗೆಯ ಆಯಾಮಗಳನ್ನು ಅರ್ಥ ಮಾಡಿಕೊಳ್ಳುವುದು ಇಂದಿನ ಸಂದರ್ಭಗಳಲ್ಲಿ ಮುಖ್ಯವಾಗುತ್ತದೆ."[೧೦]

೧.೩ ಅಧ್ಯಯನದ ವ್ಯಾಪ್ತಿ :

ಇತಿಹಾಸದ ಅರ್ಥ ಮತ್ತು ವ್ಯಾಪ್ತಿಯು ಇಂದು ಬದಲಾವಣೆ ಹೊಂದಿದ್ದು, ಅದು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ರಾಜಮಹಾರಾಜರ ರಾಜಕೀಯವರೆಗೆ ಹಾಗೂ ಜನಸಾಮಾನ್ಯರ ಬದುಕಿನ ಎಲ್ಲ ಅಂಶಗಳನ್ನೊಳಗೊಂಡ ವಿಶಿಷ್ಟ ಅಧ್ಯಯನವಾಗಿ ವಿಸ್ತೃತಗೊಂಡಿದೆ. ಇತಿಹಾಸ ಒಂದು ರೀತಿಯಲ್ಲಿ ಜನಸಾಮಾನ್ಯರ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. ಒಂದು ಸಮುದಾಯದ ಪರಂಪರೆಯನ್ನು ಭೌಗೋಳಿಕ ಮಿತಿಗೆ ಒಳಪಡಿಸುವುದು ಕಷ್ಟದ ಕೆಲಸ. ಕಾಲಕ್ಕೆ ತಕ್ಕಂತೆ ಜನರ ಆರಾಧನೆ, ಸಂಸ್ಕೃತಿ, ಸಂಪ್ರದಾಯಗಳ ಆಚರಣೆಯಲ್ಲಿ ವೈವಿದ್ಯತೆಯನ್ನು ಕಾಣುತ್ತೇವೆ. ಆದರೂ ಪ್ರಸ್ತುತ ಅಧ್ಯಯನವು ರಾಯಬಾಗ ತಾಲೂಕಿನ ವ್ಯಾಪ್ತಿಗೆ ಸಿಮೀತವಾಗಿದೆ.

ಪ್ರಾದೇಶಿಕ ಅಧ್ಯಯನದಲ್ಲಿ ಸಾಮಾನ್ಯವಾಗಿ ಹಲವು ತೊಡಕುಗಳು ಎದುರಾಗುತ್ತವೆ. ಸಮುದಾಯದ ಅಧ್ಯಯನಕ್ಕೆ ಪ್ರಾದೇಶಿಕ ಆಕರಗಳ ಕೊರತೆ ಇದ್ದೇ ಇರುತ್ತದೆ. ಆದ್ದರಿಂದ ಕ್ಷೇತ್ರಕಾರ್ಯ ಆಧಾರಿತ ಮೂಲ ಆಕರಗಳನ್ನು ಹುಡುಕಿಕೊಳ್ಳುವುದೇ ಪ್ರಾಥಮಿಕ ಶೋಧ. ರಾಯಬಾಗ ಪರಿಸರದ ಪ್ರತಿಯೊಂದು ಗ್ರಾಮವನ್ನು ಸಂದರ್ಶಿಸುವ ಮತ್ತು ಅಧ್ಯಯನಕ್ಕೊಳಪಡಿಸುವ ಯೋಜನೆಯನ್ನು ಪೂರೈಸಲಾಗಿದೆ. ಆ ಮೂಲಕ ಕೆಳ ಸಮುದಾಯವೊಂದು ಬೆಳೆದು ಬಂದ ದಾರಿಯನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಲವು ಇತಿ-ಮಿತಿಗಳ ನಡುವೆ ಅಧ್ಯಯನದ ಸಮಗ್ರತೆಗೆ ವಿಶೇಷ ಒತ್ತು ನೀಡಲಾಗಿದೆ.

೧.೪ ಅಧ್ಯಯನದ ವೈಧಾನಿಕತೆ :

ಇದು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನ. ಇದಕ್ಕೆ ಹೊರಗಿನ ವೈಧಾನಿಕತೆಯನ್ನು ಆರೋಪಿಸಬೇಕಿಲ್ಲ. ಇದರೊಳಗಿನ ಸಂಗತಿಗಳನ್ನು ಗಮನಿಸಿ ಮೂಲ ಆಕರಗಳನ್ನು ಶೋಧಿಸುವ

ಕ್ಷೇತ್ರಕಾರ್ಯದ ವೈಧಾನಿಕತೆಯನ್ನು ಅನುಸರಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮೂಲ ಆಕರಗಳನ್ನು ಸಂಗ್ರಹಿಸುವುದು ಅಧ್ಯಯನದ ಮೊದಲ ಆದ್ಯತೆಯಾಗಿದೆ. ಇದಕ್ಕಾಗಿ ತಾಲ್ಲೂಕಿನ ಪ್ರತಿ ಗ್ರಾಮಗಳನ್ನು, ಹಾಲುಮತ ಕಲಾವಿದರನ್ನು, ಸಾಧಕರನ್ನು ಸಂದರ್ಶಿಸಿ ಅವರ ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿಗಳು ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೧.೫ ಅಧ್ಯಯನದ ಸ್ವರೂಪ :

ರಾಯಬಾಗ ತಾಲ್ಲೂಕು ಅಧ್ಯಯನದ ದೃಷ್ಟಿಯಿಂದ ಸಂಪೂರ್ಣವಾಗಿ ನಿರ್ಲಕ್ಷಿತ ಕ್ಷೇತ್ರ. ಇಲ್ಲಿಯ ಶಾಸನಗಳ ಸರ್ವೇಕ್ಷಣ ಕಾರ್ಯ ಪೂರ್ತಿಯಾಗಿಲ್ಲ. ಸಮುದಾಯಧ ಅಧ್ಯಯನಗಳು, ಸಾಂಸ್ಕೃತಿಕ ಅಧ್ಯಯನಗಳು ಇದುವರೆಗೂ ಪ್ರಕಟಗೊಂಡಿಲ್ಲ. ಜ್ಯೋತಿ ಹೊಸೂರ, ಬಿ. ಎ. ಜಂಬಗಿ, ಎಂ. ಬಿ. ನೇಗಿನಹಾಳ, ವಿ. ಎಸ್. ಮಾಳಿ, ವಾಯ್. ಬಿ. ಹಿಮ್ಮಡಿ, ಕೆ. ವಿ. ಬೀಳಗಿ, ಆರ್. ಬಿ. ಚಿಲಮಿ, ಟಿ. ಎಸ್. ವಂಟಗೂಡಿ, ವಿಷ್ಣು ಶಿಂಧೆ ಮೊದಲಾದವರು ಒಂದಿಷ್ಟು ಕಾರ್ಯ ಮಾಡಿದ್ದಾರೆ. ಜ್ಯೋತಿ ಹೊಸುರ ಅವರದು ಜಾನಪದ ಕ್ಷೇತ್ರ, ಕಳೆದ ೫೦ ವರ್ಷಗಳಿಂದ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ 'ಡೊಳ್ಳಿನ ಹಾಡುಗಳು' ಐದು ಮೌಲಿಕ ಲೇಖನಗಳ ಸಂಶೋಧನ ಕೃತಿ. ಇದರಲ್ಲಿ ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಹಿನ್ನೆಲೆ, ಜಾನಪದ ನೆಲೆ, ಡೊಳ್ಳಿನ ಹಾಡುಗಳ ಪ್ರಕಟಣೆಗಳನ್ನು ವಿಸ್ತೃತವಾಗಿ ಚರ್ಚಿಸಿ ವಿಶ್ಲೇಷಿಸಿರುವರು. ಇದಲ್ಲದೆ ಅವರು ಇಲ್ಲಿಯ ಜಾತಿಗಾರರ ಕುರಿತು ಜನಾಂಗಿಕ ಅಧ್ಯಯನ ಕೈಗೊಂಡು 'ಜಾತಿಗಾರರ ಜಾತಕ' ಪ್ರಕಟಿಸಿದ್ದಾರೆ.

ಈ ನಾಡಿನ ಪ್ರಸಿದ್ಧ ಕವಿ ಅಲಭೈರಿಯ ಕುರಿತು ಎಂ. ಬಿ. ನೇಗಿಹಾಳರು ಒಂದು ಲೇಖನ ಬರೆದಿರುವರು. ವಿ. ಎಸ್. ಮಾಳಿ ತಾಲೂಕಿನ ವಿವಿಧ ಕ್ಷೇತ್ರಗಳನ್ನು ತಮ್ಮ ಬಿಡಿ ಲೇಖನಗಳಲ್ಲಿ ಪರಿಚಯಿಸಿದ್ದಾರೆ. ರಾಯಬಾಗ ತಾಲೂಕು ಸಾಹಿತ್ಯ ಸಮೀಕ್ಷೆ, ಬಾಗೆನಾಡಿನ ಅಲಕನೂರಿನ ಕರಿಸಿದ್ಧ, ಕಂಕಣವಾಡಿಯ ಹಾಲಸಿದ್ಧ, ಮುಂತಾದವು ಅವರ ಪ್ರಮುಖ ಪ್ರಕಟಿತ ಲೇಖನಗಳು. ಆರ್. ಬಿ. ಚಿಲಮಿಯವರು ಅಲಭೈರಿಯ ತತ್ವಪದಗಳನ್ನು ಸಂಕಲಿಸಿದ್ದಾರೆ. ಕೆ. ವಿ. ಬೀಳಗಿ 'ಹಾಲುಮತ ಪುರಾಣ ದರ್ಶನ'ದಲ್ಲಿ ಬಾಗೆನಾಡಿನ ಬೀರಪ್ಪ ಮತ್ತು ಇತರ ಹಾಲುಮತ ದೈವಗಳ ಹಿನ್ನೆಲೆಯನ್ನು ವಿಮರ್ಶಾತ್ಮಕವಾಗಿ ವಿವರಿಸುತ್ತ ಭಂಡಾರ ಸಂಸ್ಕೃತಿಯ ಸಿದ್ಧ ಪರಂಪರೆಯನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ವಿಷ್ಣು ಶಿಂಧೆಯವರು 'ಚಿಂಚಲಿ ಮಾಯವ್ವ'ನ ಕುರಿತು ವಿಶೇಷ ಆಧ್ಯಯನ ಮಾಡಿರುವರು. ಟಿ. ಎಸ್. ವಂಟಗೂಡಿ 'ಬಾಗೆನಾಡಿನ ಹಾಲುಮತ ದೈವ'ಗಳನ್ನು ಸಂಕ್ಷೇಪ್ತವಾಗಿ ಪರಿಚಯಿಸಿರುವರು. ಹೀಗೆ ಈ ನಾಡಿನಲ್ಲಿರುವ ವೈಶಿಷ್ಟ್ಯತೆಗಳ ಕುರಿತು ಬಿಡಿ–ಬಿಡಿಯಾಗಿ, ಸಾಂದರ್ಭಿಕವಾಗಿ ಅಲ್ಪ–ಸ್ವಲ್ಪ ಅಧ್ಯಯನ ಕಾರ್ಯವಾಗಿರುವುದು ಕಂಡು ಬರುತ್ತದೆ. ಆದರೆ ರಾಯಬಾಗ ಪರಿಸರದಲ್ಲಿರುವ ಬಹುಸಂಖ್ಯಾತರಾದ ಕುರುಬ ಸಮುದಾಯದ ಬಗ್ಗೆ, ಅವರ ಮತವಾದ ಹಾಲುಮತದ ಬಗ್ಗೆ, ಅವರ ಪ್ರಮುಖ ದೈವಗಳು, ಪರಂಪರೆಗಳು, ಸಂಸ್ಕೃತಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಬೆಳಕು ಚೆಲ್ಲುವ ಅಧ್ಯಯನದ ಕಾರ್ಯ ಈವರೆಗೆ ಆಗದಿರುವುದು ಉಲ್ಲೇಖನೀಯ.

ಪ್ರಸ್ತುತ ಅಧ್ಯಯನ ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಅಧ್ಯಾಯ, ಅಧ್ಯಯನದ ಪ್ರವೇಶ. ಈ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪವನ್ನು ವಿವರಸಲಾಗಿದೆ.

ಎರಡನೆಯ ಅಧ್ಯಾಯವು ಹಾಲುಮತದ ಪರಂಪರೆಯ ಆಳವನ್ನು ಕೆದಕುತ್ತದೆ. ಹಾಲುಮತದ ಉಗಮಕ್ಕೆ ಸಂಬಂಧಿಸಿದಂತೆ ಇರುವ ಪೌರಾಣಿಕ ಮೂಲ ಮತ್ತು ಚಾರಿತ್ರಿಕ ಮೂಲಗಳನ್ನು ಹುಡುಕುವುದರ ಜೊತೆಗೆ ಹಾಲುಮತದ ವಿಕಾಸವನ್ನು ದಾಖಲಿಸುತ್ತದೆ. ಹಾಲುಮತ ಮೂಲದ ಬಗ್ಗೆ ಶಂಬಾ ಜೋಶಿಯವರು ಪ್ರಸ್ತುತ ಪಡಿಸಿರುವ ಶೋಧಗಳನ್ನು ಇಲ್ಲಿ ವಿವೇಚಿಸಲಾಗಿದೆ. ಅಲ್ಲದೆ ಇದು ರಾಯಬಾಗದ ಪ್ರಾಚೀನ ಚರಿತ್ರೆಯನ್ನು ಮತ್ತು ಈ ಪರಿಸರದಲ್ಲಿ ಬೆಳೆದು ಬಂದ ಹಾಲುಮತ ಸಮುದಾಯದ ವೈಶಿಷ್ಟತೆಯನ್ನು ಪರಿಚಯಿಸುತ್ತದೆ.

ಮೂರನೆಯ ಅಧ್ಯಾಯವು ಈ ಸಂಪ್ರಬಂಧದ ಹೃದಯ ಭಾಗವಾಗಿದ್ದು, ಇಲ್ಲಿ ರಾಯಬಾಗ ಪರಿಸರದ ಹಾಲುಮತದ ಚಾರಿತ್ರಿಕ ನೆಲೆಗಳನ್ನು ಅನಾವರಣಗೊಳಿಸಲಾಗಿದೆ. ಈ ಪ್ರದೇಶದಲ್ಲಿ ಕಂಡು ಬರುವ ಬೂದಿ ದಿಬ್ಬಗಳ ಚರಿತ್ರೆಯನ್ನು ಪರಾಮರ್ಶಿಸಲಾಗಿದೆ. ಜೊತೆಗೆ ಈ ಪರಿಸರದ ಹಾಲುಮತದ ಧಾರ್ಮಿಕ ನೆಲೆಗಳನ್ನು ಅಭ್ಯಸಿಸಲಾಗಿದೆ. ಇಲ್ಲಿ ಹತ್ತಾರು ಬಗೆಯ ಸಾಂಸ್ಕೃತಿಕ ವೀರರಿದ್ದರೂ ಈ ಅಧ್ಯಯನದ ಆಶಯಗಳನ್ನು ವ್ಯಕ್ತಪಡಿಸಲು ಮುಖ್ಯವಾಗಿ ಐದು ಸಾಂಸ್ಕೃತಿಕ ವೀರರನ್ನು ಅಭ್ಯಾಸ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪುರುಷ ದೈವಗಳಾದ ಅಲಕನೂರಿನ ಕರೇಸಿದ್ಧೇಶ್ವರ, ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ, ಕಂಕಣವಾಡಿಯ ಹಾಲಸಿದ್ಧೇಶ್ವರ, ಮತ್ತು ಸ್ತ್ರೀ ದೈವಗಳಾದ ಚಿಂಚಲಿಯ ಮಾಯವ್ವ, ಬೆಕ್ಕೇರಿಯ ಲಕ್ಕವ್ವಳ ಕುರಿತು ಸಮಗ್ರವಾದ ಅಧ್ಯಯನ ಮಾಡುವುದರ ಜೊತೆಗೆ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ವೀರರ ಸುತ್ತ ಕಾವ್ಯಗಳು ಹೆಣೆಯಲ್ಪಟ್ಟಿದ್ದು ಅವು ದುಷ್ಟರನ್ನು ಸಂಹರಿಸುವ ಮತ್ತು ಶಿಷ್ಟರನ್ನು ರಕ್ಷಿಸುವ ಉದ್ದೇಶವನ್ನು ಹೊಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅವು ಪವಾಡಗಳನ್ನು ಮೆರೆದು ಶಿಷ್ಟ ಪರಂಪರೆಯನ್ನು ಸೃಷ್ಟಿಸುತ್ತಿರುವುದು ಕಂಡು ಬರುತ್ತದೆ. ಹೀಗಾಗಿ ಇಲ್ಲಿ ಸಾಮಾನ್ಯವಾಗಿ ಕಾಲ್ಪನಿಕ ಹಾಗೂ ಪೌರಾಣಿಕ ಅಂಶಗಳು ಎದ್ದು ಕಾಣುತ್ತವೆ. ಕಾವ್ಯಗಳಲ್ಲಿ ವಿವರಿಸಲ್ಪಟ್ಟ ವೀರರ ಹುಟ್ಟು, ಜೀವನ ವಿವರಗಳು, ಯಾತ್ರೆಗಳು, ಪವಾಡರೂಪದ ಸಾಧನೆಗಳು ಕೆಲವು ಸಲ ಅತೀ ರಂಜನಿಯವಾಗಿ ಬಣ್ಣಿಸಲ್ಪಟ್ಟಿರುವುದೇ ಇದಕ್ಕೆ ಸಾಕ್ಷಿ. ದೇವತೆಗಳ ಸುತ್ತ ಹರಡಿಕೊಂಡಿರುವ ಜನಪದ ಕಥೆಗಳನ್ನು ಇಲ್ಲಿಯ ಸ್ಥಳೀಯರೊಂದಿಗೆ ಚರ್ಚಿಸಲಾಗಿದೆ. ವೀರಣ್ಣ ದಂಡೆಯವರ ಜನಪದ ಹಾಲುಮತ ಕಾವ್ಯದಲ್ಲಿ ವಿವರಿಸಿದ ದೇವತೆಗಳು, ಸ್ಥಳಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ರಾಯಬಾಗ ಪರಿಸರದ ಹಾಲುಮತದ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಗುರುತಿಸಲಾಗಿದೆ. ಇಲ್ಲಿಯ ಮಣ್ಣಿನಲ್ಲಿ, ಅಗಾಧ ವೈವಿಧ್ಯತೆಯಿದ್ದು ಅವು ಈ ಜನರ ದೈನಂದಿನ ಆಚರಣೆ, ಉತ್ಸವ, ಹಬ್ಬ-ಹರಿದಿನ, ಜಾತ್ರೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಉಳಿದೆಡೆಗಳಿಗಿಂತ ಭಿನ್ನವಾದ ಇಂತಹ ವಿಶೇಷತೆಗಳನ್ನು ಈ ಅಧ್ಯಾಯದಲ್ಲಿ ಪರಿಚಯಿಸುತ್ತ ಅವು ಜನಪದ ಕಲೆಗಳ ಉಗಮ ಹಾಗೂ ವಿಕಾಸಕ್ಕೆ

ಕಾರಣವಾದುದನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. ಅಲ್ಲದೆ ಹಾಲುಮತದ ಆಚರಣೆ-ಸಂಪ್ರದಾಯ ಮತ್ತು ಪರಂಪರಾಗತವಾಗಿ ಬೆಳೆದು ಬಂದ ಕಲೆಗಳಾದ ಡೊಳ್ಳು ಕುಣಿತ (ಡೊಳ್ಳು ಬಾರಿಸುವುದು), ಡೊಳ್ಳಿನ ಹಾಡುಗಳು, ದಟ್ಟಿ ಕುಣಿತ, ಡೊಳ್ಳಿನ ಕೈ ಪಟ್ಟು ವಾದನ, ಅಲಗ ಹಾಯುವುದು ಮುಂತಾದವುಗಳ ಬಗ್ಗೆ ವಿವೇಚಿಸಿ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗ್ರಹಿಸಲು ಯತ್ನಿಸಲಾಗಿದೆ.

ಹಾಲುಮತದ ವಿವಾಹ, ಗೋತ್ರಗಳು ಮತ್ತು ಬೆಡಗುಗಳು, ಈರಮುಖ (ವೀರಮುಖ), ಗುಗ್ಗಳ, ಹೊಂಗೊಡ, ಹಾಲಗಂಬ, ಕೂಡಿಕೆ-ಉಡಿಕೆಗಳನ್ನು ವಿವರಿಸಲಾಗಿದೆ. ಧಾರ್ಮಿಕ ಆಚರಣೆಗಳಾದ ಭಂಡಾರ ಹಿಡಿಯುವುದು, ಶಿವಸ್ಥಾನ, ಆಳು ಮಕ್ಕಳಿಗೆ ಊಟ, ಕರೀ ಕಟ್ಟುವುದು, ಚಾಂಗಬೋಲೋ, ಹಗಲು ದೀವಟಿಗೆ ಸೇವೆ, ದೀರ್ಘದಂಡ ನಮಸ್ಕಾರ, ಉರುಳ ಸೇವೆ, ಗುಡಿಯ ಮೇಲಿಂದ ಚಿಕ್ಕ ಮಕ್ಕಳನ್ನು ಹಾರಿಸುವುದು, ದೀಪಸ್ಥಂಬಗಳ ನಿರ್ಮಾಣಗಳ ಕುರಿತು ಚರ್ಚಿಸಲಾಗಿದೆ. ಹಾಲುಮತದ ನಂಬಿಕೆ-ಸಂಪ್ರದಾಯಗಳಾದ ದೇವರ ಕೌಲ, ಭಂಡಾರ ಸೇವೆ, ಕಂಬಳಿ, ಕಂಬಳಿ ಬೀಸಿದರೆ ಮಳೆ, ಕುರುಬರ ಬೋನಿಗೆ, ದೇವರ ಹೇಳಿಕೆಗಳು, ಕುರಿ ಬೆದರಿಸುವುದು, ಹಟ್ಟಿ ಹಬ್ಬಗಳನ್ನು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಹಾಲುಮತ ಸಮುದಾಯದ ವಿವಿಧ ಪಂಗಡಗಳ ಹಿನ್ನಲೆ, ವೈವಿಧ್ಯತೆ, ಅವುಗಳ ಸ್ವರೂಪ ಹಾಗೂ ವ್ಯತ್ಯಾಸಗಳನ್ನು ವಿವೇಚಿಸಲಾಗಿದೆ. ಜೊತೆಗೆ ಇಲ್ಲಿ ರಾಯಬಾಗ ಪರಿಸರದ ಹಾಲುಮತ ಸಾಧಕರ ಸಾಧನೆಗಳನ್ನು ವಿವರಿಸಲಾಗಿದೆ.

ಪಾಶ್ಚಿಮಾತ್ಯ ಮತ್ತು ಸಮೂಹ ಮಾಧ್ಯಮಗಳ ದಟ್ಟ ಪ್ರಭಾವದಿಂದಾಗಿ ಜನಪದ ಸಂಸ್ಕೃತಿ ಮತ್ತು ಕಲೆಗಳು ಕಳೆದುಹೋಗುವ ಅಪಾಯವಿದೆ. ಈಗಿನ ಬದುಕು ಅರ್ಥ ಕೇಂದ್ರಿಕೃತವಾಗಿದೆ. ಪ್ರಾಚೀನ ಸಂಪ್ರದಾಯಗಳು, ಆಚರಣೆಗಳು, ಜನಪದ ಕಲೆಗಳು ತಮ್ಮ ಗೌರವದ ಸ್ಥಾನ-ಮಾನಗಳನ್ನು ದಿನದಿಂದ ದಿನಕ್ಕೆ ಕಳೆದುಕೊಳ್ಳುತ್ತಿವೆ. ಜಾಗತೀಕರಣದ ಗಾಳಿ ಗ್ರಾಮೀಣ ಸಂಸ್ಕೃತಿಯನ್ನು ತಲ್ಲಣಗೊಳಿಸಿದೆ. ಇದು ಹಲವು ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಕಾರಣ. ಇದರ ವಿಸ್ತೃತ ವಿಶ್ಲೇಷಣೆ ಆರನೇ ಅಧ್ಯಾಯದಲ್ಲಿದೆ.

ಏಳನೆಯ ಅಧ್ಯಾಯವು ಸಮಾರೋಪ. ಅಧ್ಯಯನದ ಒಟ್ಟು ಫಲಿತಗಳನ್ನು ಸಂಕ್ಷಿಪ್ತವಾಗಿಯೂ ಸಮಗ್ರವಾಗಿಯೂ ಇಲ್ಲಿ ದಾಖಲಿಸಿ, ಅಧ್ಯಯನದ ಹೊಸ ಕ್ಷೇತ್ರಗಳನ್ನು ಸೂಚಿಸಲಾಗಿದೆ.

ಟಿಪ್ಪಣಿಗಳು :

೧) James M. Campbell **GAZETTEER BELGAUM.** GOVERNMENT CENTRAL PRESS, BOMBAY. 1884, Page-1

೨) ಸಿದ್ದು ಹುಲ್ಲೋಳಿ, **ಬಾಗೆನಾಡಿನ ಜನಪದ ಕಲಾವಿದರು,** ಸಿದ್ಧಕೀರ್ತಿ ಪ್ರಕಾಶನ, ಮುಗಳಖೋಡ, ೨೦೧೧, ಪುಟ-೪

೩) ಸಿದ್ದಲಿಂಗಯ್ಯ, **ಗ್ರಾಮ ದೇವತೆಗಳು,** ಪ್ರಕಾಶಕರು, ಅಂಕಿತ ಪುಸ್ತಕ, ಬೆಂಗಳೂರು, ೨೦೦೯, ಪುಟ-೧

೪) ಲಕ್ಷ್ಮಣ್ ತೆಲಗಾವಿ, **ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೩. ಪುಟ-೨

೫) ವಿಜಯ್ ಪೂಣಚ್ಚ ತಂಬಂಡ **ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಮರ್ಶೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯. ಪುಟ-೨

೬) **ಪೂರ್ವೋಕ್ತ,** ಪುಟ-೫

೭) **ಪೂರ್ವೋಕ್ತ,** ಪುಟ-೮೧

೮) ವಿಜಯ್ ಪೂಣಚ್ಚ ತಂಬಂಡ. **ಪಳಮೆ, ಮೌಖಿಕ ಆಕರಗಳು ಕಟ್ಟಿಕೊಡುವ ಕನ್ನಡ-ಕೊಡಗು-ತುಳುನಾಡಿನ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪. ಪುಟ-೧೪

೯) **ಪೂರ್ವೋಕ್ತ,** ಪುಟ-೧೪

೧೦) **ಪೂರ್ವೋಕ್ತ,** ಪುಟ-೧೩೭

ಅಧ್ಯಾಯ : ಎರಡು

ಹಾಲುಮತ ಚರಿತ್ರೆ ಮತ್ತು ಸಂಸ್ಕೃತಿ

೨.೧ ಹಾಲುಮತದ ಉಗಮ ಮತ್ತು ವಿಕಾಸ :

ನಮ್ಮ ದೇಶದಲ್ಲಿ ಮಾತ್ರವಲ್ಲದೆ ಜಗತ್ತಿನ ಎಲ್ಲೆಡೆಯೂ ಅನೇಕ ಜನಾಂಗಗಳು ಕಾಲ-ಕಾಲಕ್ಕೆ ವೈವಿಧ್ಯಮಯ ಸಂಸ್ಕೃತಿಯೊಂದಿಗೆ ಬೆಳೆದು ಬಂದಿವೆ. ಮಾನವ ಶಾಸ್ತ್ರಜ್ಞರು ಈ ಜನಾಂಗಗಳ ಹಿನ್ನೆಲೆಯನ್ನು ಗುರುತಿಸುತ್ತ ನಾಗರಿಕತೆಯ ಆರಂಭಿಕ ಹಂತದಲ್ಲಿ ಮೂರು ಬಗೆಯ ಬೆಳವಣಿಗೆಗಳನ್ನು ಗುರುತಿಸುತ್ತಾರೆ.

೧) ಆಹಾರ ಸಂಗ್ರಹಣಾ ಗುಂಪುಗಳು

೨) ಬೇಟೆಗಾರಿಕೆ ಮತ್ತು ಕೃಷಿ

೩) ಪಶುಪಾಲನೆ

"ಇವುಗಳು ಒಂದರ ನಂತರ ಒಂದು ಬಂದವುಗಳೆಂದು ಕೆಲವರು ಮತ್ತು ಇವು ಒಂದರೊಳಗೊಂದು ಸೇರಿಕೊಂಡು ಬಂದವುಗಳೆಂದು ಇನ್ನೂ ಕೆಲವರು ಅಭಿಪ್ರಾಯ ಪಡುತ್ತಾರೆ. ಭಾರತದಲ್ಲಿ ನಾಗರಿಕ ಇತಿಹಾಸದ ಆರಂಭದೊಂದಿಗೆ ಬೇಟೆ, ಕೃಷಿ ಮತ್ತು ಪಶುಪಾಲನೆಗಳು ಜನರ ಸಂಸ್ಕೃತಿಯನ್ನು ರೂಪಿಸಿಕೊಂಡು ಬಂದಿವೆ, ಹಾಗಾಗಿ ಇಲ್ಲಿ ಅತ್ಯಂತ ಸಮೃದ್ಧವಾದ ಜನಾಂಗಗಳ ಚರಿತ್ರೆಯನ್ನು ಮತ್ತು ತತ್ ಸಂಬಂಧವಾದ ವ್ಯವಹಾರವನ್ನು ಗುರುತಿಸಬಹುದಾಗಿದೆ. ಈ ಜನಾಂಗಗಳು ಅನುಸರಿಸಿದ ವೃತ್ತಿಗಳು ಅವರ ಆರ್ಥಿಕ ಚಟುವಟಿಕೆಗಳನ್ನು ರೂಪಿಸುವುದರ ಜೊತೆಗೆ ಅವರ ಸಾಮಾಜಿಕ ಮತ್ತು ಧಾರ್ಮಿಕ ಸ್ವರೂಪವನ್ನು ಕೂಡ ನಿರ್ಧರಿಸಿತು."[೧]

ಸಮಾಜದ ಮೇಲಸ್ಥರದ ಸಮುದಾಯಗಳು ಪಾರಂಪಾರಿಕವಾಗಿರುವ ತಮ್ಮ ಇತಿಹಾಸವನ್ನು ಬೆಳಸಿಕೊಂಡು ದಾಖಲಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಆದರೆ ಸಮಾಜದ ಕೆಳಸ್ಥರದಲ್ಲಿರುವ ಯಾವುದೇ ಜನಾಂಗಗಳು ತಮ್ಮ ಇತಿಹಾಸವನ್ನಾಗಲಿ ಅಥವಾ ಅದಕ್ಕೆ ಪೂರಕವಾದ ದಾಖಲೆ-ಸಾಮಗ್ರಿಗಳನ್ನಾಗಲಿ ಸಾಕಷ್ಟು ಪ್ರಮಾಣದಲ್ಲಿ ಉಳಿಸಿಕೊಂಡು ಬಂದಿಲ್ಲ. ಇದಕ್ಕೆ ಕಾರಣ ಕೆಳಸಮುದಾಯಗಳಲ್ಲಿನ ಅನಕ್ಷರತೆ, ಇತಿಹಾಸದ ಬಗ್ಗೆ ಅವರಿಗಿದ್ದ ಉದಾಸಿನತೆ ಮತ್ತು ಅಜ್ಞಾನಗಳು. ಇದೂ ಅಲ್ಲದೆ ಪುರೋಹಿತಶಾಹಿಯು ತಲ-ತಲಾಂತರದಿಂದಲೂ ಸಮಾಜದಲ್ಲಿ ತನ್ನ ಪ್ರಾಬಲ್ಯವನ್ನು ಪ್ರದರ್ಶಿಸಿದ್ದು, ತನ್ನಲ್ಲಿರುವ ಜ್ಞಾನ ಮತ್ತು ಶ್ರೇಷ್ಠತೆಯ ಭ್ರಮೆಯಲ್ಲಿದ್ದ ಮೇಲ್ವರ್ಗಗಳು ಯಾವತ್ತಿಗೂ ಕೆಳಸ್ಥರದ ಸಮುದಾಯಗಳಿಗೆ ಸುಲಭವಾಗಿ ಬೆಳೆಯಲು ಅವಕಾಶ ನೀಡದೆ ಶೋಷಿಸುತ್ತಲೇ ಬಂದಿವೆ. ಇದರ ಜೊತೆಗೆ ಆಗಾಗ ದಾಳಿ ಮಾಡುತ್ತ ಬಂದ ವಿದೇಶಿ ಸಂಸ್ಕೃತಿಗಳು ಸ್ಥಳೀಯ ಜನಾಂಗಗಳ ಸಾಂಸ್ಕೃತಿಕ ತಳಹದಿಯನ್ನು ಗುರುತಿಸಲಾರದೆ ನಾಶ ಮಾಡುತ್ತಲೇ ಬಂದಿವೆ. ಆದರೆ ಇವೆಲ್ಲವುಗಳನ್ನು ಮೀರಿ ಸಾವಿರಾರು ವರ್ಷಗಳಿಂದ ತಮ್ಮ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದ ಜನಾಂಗಗಳು ಇಂದಿಗೂ ಈ ದೇಶದಲ್ಲಿವೆ. ಅಂತಹ ಪ್ರಾಚೀನ ಜನಸಮುದಾಯಗಳಲ್ಲಿ ಕುರುಬ ಜನಾಂಗವೂ ಒಂದು.

ದಾಖಲಾತ್ಮಕ ಚರಿತ್ರೆಯ ಕೊರತೆ ಇದ್ದರು ಕೂಡ ಸಾವಿರಾರೂ ವರ್ಷಗಳಿಂದಲೂ ತನ್ನ ಅಸ್ತಿತ್ವವನ್ನು ಪ್ರದರ್ಶಿಸುತ್ತ ಬಂದು ನೂರಾರು ಹೊತ್ತಿಗೆಗಳಿಗಾಗುವಷ್ಟು ಸಾಂಸ್ಕೃತಿಕ, ಧಾರ್ಮಿಕ ವೈವಿಧ್ಯತೆಯನ್ನು ಹೊಂದಿರುವ ಕುರುಬ ಜನಾಂಗದ ಇತಿಹಾಸವು ನಿಜಕ್ಕೂ ವರ್ಣರಂಜಿತವಾದದ್ದು. ಇಡೀ ಭಾರತದಲ್ಲಿ ಕುರುಬ ಜನಾಂಗವು ಪ್ರಾಚೀನತಮವಾದ ಮತ್ತು ನೆಲಮೂಲ ಸಂಸ್ಕೃತಿಯನ್ನು ಹೊಂದಿರುವ ಒಂದು ಜನಾಂಗವಾಗಿದೆ. ವೈವಿಧ್ಯ ಪೂರ್ಣವಾದ ಸಂಸ್ಕೃತಿಯೊಂದಿಗೆ ಈ ನೆಲದ ಮಣ್ಣಿನಲ್ಲಿ ಗಟ್ಟಿ ಬೇರು ಬಿಟ್ಟಿರುವ ಕುರುಬ ಜನಾಂಗದ ಇತಿಹಾಸ ಹಾಗೂ ಈ ಜನಾಂಗ ತನ್ನ ಒಡಲಲ್ಲಿ ಇಟ್ಟುಕೊಂಡು ಬಂದಿರುವ ಧಾರ್ಮಿಕ ಆಚರಣೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಸಂಪ್ರದಾಯಗಳನ್ನು ವೈಜ್ಞಾನಿಕವಾಗಿ ಅಧ್ಯಯನಿಸುವುದು ಮತ್ತು ಅದನ್ನು ಪುನರ್‌ರಚಿಸುವುದು ಈಗ ಅವಶ್ಯಕವಾಗಿದೆ. ಕುರುಬರ ಜನಾಂಗದ ಮೂಲದ ಬಗ್ಗೆ ತಿಳಿಸುವ ಪೌರಾಣಿಕ ಮಾಹಿತಿ, ದಂತಕಥೆಗಳು, ದಾಖಲೆಗಳು, ಶಾಸನಗಳು, ಕಾವ್ಯ ಕೃತಿಗಳು ಇನ್ನಿತರ ಆಕರಗಳು ಸಮೃದ್ಧವಾಗಿದ್ದು ಇವುಗಳಿಂದ ಕುರುಬ ಜನಾಂಗದ ಉಗಮ, ವಿಕಾಸ, ದೇವರು–ಧರ್ಮ, ಆಚಾರ–ವಿಚಾರ ಮುಂತಾದವುಗಳ ಬಗ್ಗೆ ಹಲವು ಹತ್ತು ವಿಚಾರಗಳನ್ನು ತಿಳಿಯಬಹುದಾಗಿದೆ.

ಕುರುಬರ ಮೂಲವನ್ನು ತಿಳಿದುಕೊಳ್ಳುವುದು ಕಷ್ಟ ಸಾಧ್ಯವಾದರೂ ಅನೇಕ ಲಿಖಿತ ದಾಖಲೆಗಳು, ಶಾಸನ ಮತ್ತು ಸಾಹಿತ್ಯ ರಚನೆಗಳಿಂದ ಸ್ಥೂಲವಾಗಿ ಅರಿಯಬಹುದಾಗಿದೆ. ಪಶುಪಾಲನೆಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡ ಈ ಜನಾಂಗದ ಹೆಚ್ಚಿನ ವಿವರಗಳು ವಾಕ್ ಪರಂಪರೆಯಲ್ಲಿ ಉಳಿದುಕೊಂಡು ಬಂದಿವೆ. ಅವುಗಳಲ್ಲಿ ನಂಬಿಕೆ ಮತ್ತು ಆಚರಣೆಗಳು ಮುಖ್ಯವಾಗಿವೆ. ಅಲ್ಲದೆ ಹಾಲುಮತದ ಕುರಿತು ಅನೇಕ ಪುರಾಣಗಳು ರಚನೆಗೊಂಡಿವೆ. ಜನಪದ ಮತ್ತು ಪೌರಾಣಿಕ ಹಿನ್ನೆಲೆಗಳೊಂದಿಗೆ ಐತಿಹಾಸಿಕ ಅಥವಾ ಚಾರಿತ್ರಿಕ ದಾಖಲೆಗಳನ್ನಿಟ್ಟುಕೊಂಡು ಹಾಲುಮತದ ಉಗಮ ಮತ್ತು ವಿಕಾಸವನ್ನು ಕಟ್ಟಿಕೊಡಲು ಸಾಧ್ಯವಿರುವುದರಿಂದ ಆ ದಿಶೆಯಲ್ಲಿ ಈ ಅಧ್ಯಯನದಲ್ಲಿ ಪ್ರಯತ್ನವನ್ನು ಮಾಡಲಾಗಿದೆ. ಹಾಲುಮತ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರಗಳಾದ ಡೊಳ್ಳಿನ ಹಾಡುಗಳು ಈ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ. ಅದರಂತೆ ಪ್ರಾದೇಶಿಕ ವ್ಯತ್ಯಾಸದಲ್ಲಿ ಕಾಲಕ್ರಮದಲ್ಲಿ ರಚನೆಗೊಂಡ ಹಾಲುಮತ ಕಾವ್ಯ ಮತ್ತು ಪುರಾಣಗಳು ಇನ್ನೊಂದು ಬಗೆಯ ಆಕರಗಳಾಗಿವೆ. ಮೂಲಸ್ಥಂಬ ಪುರಾಣದೊಳಗೆ ಹಾಲುಮತದ ಚರಿತ್ರೆ ಇರುವುದಾಗಿ ಬಹಳಷ್ಟು ಜನ ಹೇಳುತ್ತಾರೆ. ಆದರೆ ಯಾವ ಪುರಾಣವು ಕೂಡ ಸ್ಪಷ್ಟವಾಗಿ ಹಾಲುಮತದ ಚರಿತ್ರೆಯನ್ನು ಕಟ್ಟಿಕೊಡುವುದಿಲ್ಲ. ಇವತ್ತು ಪುರಾಣಗಳಲ್ಲಿ ಇರಬಹುದಾದ ಕಲ್ಪಕಥೆ ಮತ್ತು ವರ್ಣನೆಗಳನ್ನು, ಒಡಪುಗಳನ್ನು, ಸಂಕೇತಗಳನ್ನು ಒಡೆದು ಅದರೊಳಗಿನ ಒಳಹುಗಳನ್ನು ಕಟ್ಟಿಕೊಳ್ಳುವುದರ ಮೂಲಕ ನಾವು ಈ ಹಾಲುಮತದ ಉಗಮ ಮತ್ತು ವಿಕಾಸದ ಚರಿತ್ರೆಯನ್ನು ಕಟ್ಟ ಬೇಕಾಗಿದೆ. ಆ ಆಕರಗಳ ಒಂದು ಭಾಗವಾದ ಡೊಳ್ಳಿನ ಹಾಡುಗಳಲ್ಲಿಯ ಸಾಂಸ್ಕೃತಿಕ ಅಂಶಗಳನ್ನಿಟ್ಟುಕೊಂಡು ಚರ್ಚಿಸಿ, ಅವುಗಳನ್ನು ಮೀರಿ ನಾವು ಆ ಚರಿತ್ರೆಯನ್ನು ಕಟ್ಟ ಬೇಕಾಗಿದೆ.

ಹಾಲುಮತ, ಕುರುಬ ಜನಾಂಗದ ಹುಟ್ಟು ವಿಕಾಸ ಮತ್ತು ಬೆಳವಣಿಗೆಯನ್ನು ತಿಳಿಯಲು ನಾವು ಅಂತರ್ ಶಿಸ್ತಿಯ ಅಧ್ಯಯನ ಕ್ರಮವನ್ನು ಅನುಸರಿಸುವುದು ಸೂಕ್ತ. ಅಂದರೆ ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ನೀತಿಶಾಸ್ತ್ರ, ಅರ್ಥಶಾಸ್ತ್ರ, ತರ್ಕಶಾಸ್ತ್ರ, ಧರ್ಮ, ಲಲಿತಕಲೆಗಳು ಮತ್ತು ಜಾನಪದ ಕಥೆಗಳು,

ಡೊಳ್ಳಿನ ಹಾಡುಗಳು, ಐತಿಹ್ಯಗಳು ಎಲ್ಲವನ್ನು ಬಳಸುವ ಮೂಲಕವಷ್ಟೇ ಹಾಲುಮತ ಕುರುಬ ಜನಾಂಗದಂಥ ಪ್ರಾಚೀನವಾದ ಮತ್ತು ಸಂಕೀರ್ಣವಾದ ಜನಾಂಗವೊಂದರ ಅಧ್ಯಯನ ಕೈಗೊಳ್ಳಬೇಕು. ಆಗ ಮಾತ್ರ ನೈಜವಾದ ಚರಿತ್ರೆ ರೂಪಗೊಳ್ಳಲು ಸಾಧ್ಯ.

ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುದೊಡ್ಡ ಪರಂಪರೆಯನ್ನು ಹೊಂದಿದ ಕುರುಬರು ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿಸಾಕಾಣಿಕೆ, ಕಂಬಳಿ ತಯಾರಿಕೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಆದಿಯಿಂದಲೂ ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು, ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದಿದ್ದಾರೆ. ಈ ಜನರೇ ಭಾರತದ ಮೂಲ ನಿವಾಸಿಗಳೆಂದು ಓಪರ್ಟ. ಥರ್ಸ್ಟನ್, ಸೊಂತೈಮರ, ಶಂಬಾ ಜೋಶಿ, ಚಿಂತಾಮಣಿರಾವ್ ಢೇರೆಯವರಂಥ ಹಲವಾರು ವಿದ್ವಾಂಸರು ಆಧಾರಸಹಿತ ಸ್ಪಷ್ಟಪಡಿಸಿದ್ದಾರೆ. ಇಂತಹ ವಿದ್ವಾಂಸರ ಅಧ್ಯಯನಗಳಿಂದ ಪಶುಪಾಲಕರು ಈ ನೆಲದ ಮೂಲ ನಿವಾಸಿಗಳೆಂಬುದು ಮತ್ತು ಅವರಿಂದ ಅನೇಕ ವೃತ್ತಿಗಳು, ಕಲೆಗಳು, ಆಚರಣೆಗಳು ಬೆಳೆದುಕೊಂಡು ಬಂದವೆಂಬುದು ತಿಳಿದು ಬರುತ್ತದೆ.

೨.೧.೧ ಪೌರಾಣಿಕ ಮೂಲ :

ಭಾರತೀಯರ ಪರಂಪರೆಯಲ್ಲಿ ಪ್ರತಿಯೊಂದು ಜಾತಿಗೂ ಮತ್ತು ಮತಕ್ಕೂ ವಿಶಿಷ್ಟ ಸ್ಥಾನವಿದೆ. ಇಂದಿನ ಜನಸಾಮಾನ್ಯರಲ್ಲಿ ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆ ಹಾಗೂ ಮತ ವ್ಯವಸ್ಥೆಗಳು ಭದ್ರವಾಗಿ ಬೇರುಬಿಟ್ಟಿವೆ. ಇದಕ್ಕೆ ಕಾರಣ ಬುದ್ಧಿವಂತರು ಜಾಣತನದಿಂದ ಮಾಡಿದ ಧರ್ಮಲೇಪಿತ ಸಂಪ್ರದಾಯಗಳು. ಮೂಲಭೂತವಾದಿಗಳು ಕರ್ಮ ಸಿದ್ಧಾಂತಕ್ಕೆ ತಮ್ಮದೇ ಆದ ಅರ್ಥ ವಿವರಣೆಯನ್ನು ನೀಡಿ ತಾವಿದ್ದುದೇ ಶ್ರೇಷ್ಠ, ಇದ್ದ ಸ್ಥಿತಿಯೇ ಶ್ರೇಷ್ಠ ಎನ್ನುವ ಮೂಲಕ ಆಯಾ ವರ್ಗದ ಜನರು ಇದ್ದ ವ್ಯವಸ್ಥೆಯಲ್ಲಿ ಮುಂದುವರೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಯಾರೂ ಕೂಡ ಈ ವ್ಯವಸ್ಥೆಯಿಂದ ಹೊರಬಂದು ಪ್ರಗತಿ ಭಾವನೆಯನ್ನು ಹೊಂದಿ ಹೋರಾಡಬಾರದೆಂದು ಮಾಡಿರುವ ವ್ಯವಸ್ಥಿತ ಪಿತೂರಿ ಇದಾಗಿದೆ. ಹೀಗಾಗಿ ಪ್ರತಿ ಜಾತಿಗೊಂದು ಪುರಾಣ, ಮತಕ್ಕೊಂದು ಪುರಾಣಗಳನ್ನು ಸೃಷ್ಟಿಸಿರುವ ಪಟ್ಟಭದ್ರ ಹಿತಾಸಕ್ತಿಗಳು, ಅವುಗಳನ್ನು ಚಾಚು ತಪ್ಪದೆ ಪಾಲಿಸುವಂತೆ ಜನತೆಗೆ ಧಾರ್ಮಿಕ ಹಿನ್ನೆಲೆಯ ದಿಗ್ಬಂಧನ ಮಾಡಿರುವುದನ್ನು ಕಾಣುತ್ತೇವೆ. ಈ ಕಟು ವಾಸ್ತವದ ಹಿನ್ನೆಲೆಯಲ್ಲಿ ಪುರಾಣಗಳ ಮಿಥ್ಯ-ಸತ್ಯಗಳ ಆಶಯಗಳನ್ನು ಪರಾಮರ್ಶಿಸುವುದು ಅತೀ ಅವಶ್ಯಕ.

ಪುರಾಣಗಳು ಕೂಡ ಮಾನವ ಸೃಷ್ಟಿಯಾಗಿದ್ದು ಅವುಗಳಿಗೂ ಒಂದು ಸಾಂಕೇತಿಕವಾದ ಅರ್ಥವಿದೆ. ಒಂದು ಜನಾಂಗದ ಚರಿತ್ರೆ, ಹಿನ್ನೆಲೆ, ಬೆಳವಣಿಗೆ, ಜನಾಂಗಗಳ ನಡುವಿನ ಸಂಘರ್ಷ, ಜನಾಂಗಗಳು ಬೇರ್ಪಟ್ಟು ಭಿನ್ನವಾಗುವುದರ ಇತೀವೃತ್ತ, ಅವರ ಆಸೆ-ನಿರಾಸೆಗಳೆಲ್ಲ ಅಲ್ಲಿ ಬಿಂಬಿತವಾಗಿರುತ್ತವೆ. ಪುರಾಣಗಳ ನಿರ್ಮಾಣ ಕೇವಲ ಮೇಲು ವರ್ಗಕ್ಕಷ್ಟೇ ಸಿಮೀತಗೊಂಡಿಲ್ಲ. ಪ್ರತಿಯೊಂದು ಸಮುದಾಯವು ತಮ್ಮ ಅಸ್ತಿತ್ವ ಮತ್ತು ಅನನ್ಯತೆಯನ್ನು ಸಾರಲೆಂದು ಪುರಾಣಗಳನ್ನು ನಿರ್ಮಿಸುತ್ತದೆ. ಹಾಗಾಗಿ ಮೇಲ್ವರ್ಗದವರ ಪುರಾಣಗಳನ್ನು ಅನುಸರಿಸಿ ಇತರರು ಪುರಾಣಗಳನ್ನು ಸೃಷ್ಟಿಸಿದರೆಂದು ಭಾವಿಸ ಬೇಕಾಗಿಲ್ಲ. ಕುಲಮೂಲ ಇತಿಹಾಸ ಮತ್ತು ಪರಂಪರೆಯ ಮುಂದೂವರಿಕೆಗಾಗಿ ಪುರಾಣವು ಒಂದು ಉಕ್ತ ಸಾಧನವಾಗಿದೆ. ಅದು

ಲಿಖಿತವಾಗಿರಬಹುದು ಇಲ್ಲವೆ ವಾಕ್ ಪರಂಪರೆಯಲ್ಲಿರಬಹುದು. ಸಾಮಾನ್ಯವಾಗಿ ಪಶುಪಾಲಕರ ಮತ್ತು ಬುಡಕಟ್ಟುಗಳ ಪುರಾಣಗಳು ಧೀರ್ಘ ಕಾಲದಿಂದ ವಾಕ್ ಪರಂಪರೆಯಲ್ಲಿ ಉಳಿದುಕೊಂಡು ಬಂದಿವೆ ಮತ್ತು ಅವು ಇತ್ತೀಚಿಗೆ ದಾಖಲುಗೊಳ್ಳುತ್ತಿವೆ.

ಕುರುಬರ ಮೂಲವನ್ನು ನೋಡಿದಾಗ ಅದು ಶಿವ ಮತ್ತು ದೇವತೆಗಳ ಪೌರಾಣಿಕ ಹಿನ್ನೆಲೆಯೊಂದಿಗೆ ತಳುಕುಗೊಂಡಿರುವುದು ಕಂಡು ಬರುತ್ತದೆ. ಪ್ರಚಲಿತದಲ್ಲಿರುವ ಕಥೆ ಪುರಾಣಗಳು ಕುರುಬರ ಮೂಲಕ್ಕೆ ಶಿವನನ್ನು ಒಂದಲ್ಲ ಒಂದು ರೀತಿಯಲ್ಲಿ ತಳಕು ಹಾಕುತ್ತವೆ. ಈ ಕಥೆಗಳನ್ನು ದಂತಕಥೆಗಳೆಂದು ಭಾವಿಸಿದರೂ ಇವುಗಳಲ್ಲಿ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಒಂದು ಈ ಜನಾಂಗದ ಮುಖ್ಯ ದೇವತೆ 'ಶಿವ' ಎಂಬುದು, ಎರಡು ಇದು ಅತ್ಯಂತ ಪ್ರಾಚೀನ ಜನಾಂಗ ಎಂಬುದು. ಒಂದನೆಯದಕ್ಕೆ ಸಾಕ್ಷಿಯಾಗಿ ಇಂದು ಕುರುಬರಲ್ಲಿ ಪ್ರಧಾನವಾಗಿ ಈಶ್ವರನ ರೂಪದಲ್ಲಿ ಬೀರೇಶ್ವರ ಪೂಜೆಗೊಳ್ಳುತ್ತಿದ್ದಾನೆ. ಅಂತೆಯೇ ಪೌರಾಣಿಕ ಕಾವ್ಯವಾದ, ಜನಪದ ಹಾಲುಮತ ಮಹಾಕಾವ್ಯದ ಪ್ರಥಮ ಅಧ್ಯಾಯ 'ಕೈಲಾಸ ಹಾಡಿಕೆ' ಭಾಗದಲ್ಲಿ ಸೃಷ್ಟಿ ಮತ್ತು ಜೀವಿಗಳ ಉಗಮದ ಕುರಿತು ವಿವರಿಸಲ್ಪಟ್ಟಿದೆ.

ಈ ಮಹತ್ವದ ವಿವರಣೆಯನ್ನು ಡಾ. ವೀರಣ್ಣ ದಂಡೆಯವರ 'ಜನಪದ ಹಾಲುಮತ ಮಹಾಕಾವ್ಯ'ವನ್ನು ಆಧರಿಸಿ ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಸೃಷ್ಟಿಯ ಆರಂಭದಲ್ಲಿ ಭೂಮಿ ಇರದೇ, ಕೇವಲ ನೀರು ಮಾತ್ರ ತುಂಬಿತ್ತು. ಗಾಳಿ ಇಲ್ಲ, ಅಲೆಗಳು ಇಲ್ಲ. ನೀರ ಮೇಲೆ ಗುರುಳಿಯೊಂದು ಎದ್ದಿತು. ಇದರಿಂದ ಮೊದಲು ರುಂಡ ಉತ್ಪತ್ತಿಯಾಗಿ ಅದಕ್ಕೆ ದೇಹ, ಕೈಕಾಲುಗಳು ಮೂಡಿದವು. ದೇಹದ ಒಳಗಡೆ ನರ-ನಾಡಿಗಳು ರಕ್ತ-ಮಾಂಸಗಳು ತುಂಬಿಕೊಂಡವು. ಹೀಗೆ ಅಖಂಡೇಶ್ವರ ತಯಾರಾದನು. ಅವನ ದೇಹದಲ್ಲಿ ನಾದ ಹುಟ್ಟಿತು. ಜ್ಯೋತಿರ್ಲಿಂಗ ಉದಯಿಸಿ ಮಾತು, ಮಂತ್ರಗಳು ಹುಟ್ಟಿಕೊಂಡವು. ೫೨ ನಾದದಲ್ಲಿ ೫೨ ಅಕ್ಷರಗಳು ಹುಟ್ಟಿದವು. ಇದರಿಂದ ವಿದ್ಯೆಬುದ್ಧಿಗಳು ಹುಟ್ಟಿಕೊಂಡು ಅಖಂಡೇಶ್ವರನ ರೂಪ ನಿರ್ಮಾಣವಾಯಿತು. ಹೀಗೆ ಸೃಷ್ಟಿಯ ಆರಂಭದಲ್ಲಿ ನೀರೇ ನಿರಂಕಾರದಲ್ಲಿ ನಿರ್ಭಯ ವಸ್ತುವಾಗಿ ಅಖಂಡೇಶ್ವರ ನಿರ್ಮಾಣವಾಗಲು ಎರಡು ಯುಗಗಳೇ ಕಳೆದವು. ನಂತರದಲ್ಲಿ ಅಖಂಡೇಶ್ವರ ತನ್ನ ಎಡಭಾಗದ ದೇಹದಿಂದ ಮೂರು ಗಣಿಕೆ ಎಲುವು ತೆಗೆದು ಅದಕ್ಕೆ ಮಂತ್ರ ಹಾಕಿದಾಗ ಅದರಿಂದ ಆದಿಶಕ್ತಿ ನಿರ್ಮಾಣವಾದಳು. ಕಾಮ, ಕ್ರೋಧ, ಮೋಹ, ಮದ, ಮತ್ಸರಗಳಿಂದ ಕೂಡಿದ ಇವಳೇ ಅಖಂಡೇಶ್ವರನ ಮಡದಿಯಾದಳು. ಆದಿಶಕ್ತಿ ಒಳಗೆ ಬೀಜದ ಮೇಲೆ ಅಂಕುರ ಪುಟಿದು ಗರ್ಭಿಣಿಯಾಗಿ ಅವಳಿಂದ ರಕ್ಕಸರು ಹುಟ್ಟಲು ಮೂರು ಯುಗಗಳೇ ಬೇಕಾಯಿತು. ಸೃಷ್ಟಿಯಲ್ಲೇಲ್ಲಾ ಅಂಧಕಾರ. ಈ ಅಂಧಕಾರದಲ್ಲಿ ಗಾಳಿ ಬಿಸಲು ಪ್ರಾರಂಭವಾಗಿ ನೀರಿನಲ್ಲಿ ಅಲೆಗಳು ಏಳಲಾರಂಭಿಸಿದವು. ನಿರ್ಮೂಲಬೀಜ ಹುಟ್ಟಿಕೊಂಡವು. ಲಕ್ಷಾನುಗಟ್ಟಲೆ ಅಂಡಾಂಡ-ಪಿಂಡಾಂಡಗಳು ಹುಟ್ಟಿಕೊಂಡವು. ಸೂರ್ಯಚಂದ್ರರು ಹುಟ್ಟಿದರು. ಇದರಿಂದ ಹಗಲು ರಾತ್ರಿಗಳು ಹುಟ್ಟಿದವು. ಹೀಗೆ ಮೂರು ಯುಗದ ನಂತರ ಕತ್ತಲೆಂಬುದು ಕಳೆದು ನಾಲ್ಕನೇ ಯುಗದಲ್ಲಿ ಸೂರ್ಯಚಂದ್ರರು ಉದಯಿಸಿದರು. ತಾಸು, ಗಳಿಗೆ, ವಾರ, ತಿಥಿ, ಹುಣ್ಣಿಮೆ, ಅಮಾವಾಸ್ಯೆಗಳು ಐದನೇ ಯುಗದಲ್ಲಿ ರೂಪಗೊಂಡವು. ೨೧ ಲಕ್ಷ ಜಲಚರಗಳು ಆರನೇ ಯುಗದಲ್ಲಿ ಜನಿಸಿದವು. ನಂತರದಲ್ಲಿ ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ, ಮಹಾದೇವರು ಹುಟ್ಟಿದರು. ಇದೇ ಅವಧಿಯಲ್ಲಿ ಶಾಂತಮುತ್ಯಾ ಹುಟ್ಟಿದನು.

ಈ ಶಾಂತಮುತ್ಯಾ ಐದು ಮಂದಿ ರಕ್ಕಸರನ್ನು ಸಂಹರಿಸಿ ಐದು ಕುರಿಗಳನ್ನು, ಇನ್ನೊಬ್ಬ ರಕ್ಕಸನನ್ನು ಸಂಹರಿಸಿ ಟಗರ ನಿರ್ಮಿಸಿದನು. ಈ ಕುರಿ ಮಂದೆಯನ್ನು ತಾನೇ ಕಾಯುತ್ತ ಅವುಗಳಿಂದ ಉಣ್ಣೆಯನ್ನು ಪಡೆದನು. ಡೊಳ್ಳಾಸೂರ ದೈತ್ಯನ ಶಿರ ಹೊಡೆದು ಕಂಬಳಿ ನೇಯಲು ಬೇಕಾದ ಸಾಮಗ್ರಿಗಳನ್ನು, ಡೊಳ್ಳು, ಶಂಖ, ತಾಳ, ಕತ್ತರಿ, ವಡ್ಡಿವಾಲಗ, ಸುಖದ ಕೊಳವಲ, ದು:ಖದ ಕೊಳವಲ ಇತ್ಯಾದಿಗಳನ್ನು ನಿರ್ಮಿಸಿಕೊಂಡನು. ದಕ್ಷಬ್ರಹ್ಮನು ತನ್ನ ಮಗಳಾದ ಪಾರ್ವತಿಯನ್ನು ಶಿವನಿಗೆ ಕೊಟ್ಟು ಮದುವೆ ಮಾಡುವಾಗ ಶಾಂತಮುತ್ಯಾ ವಡ್ಡಿವಾಲಗ ಸಮೇತನಾಗಿ ಬಂದು ತಾನೇ ಕುರಿ ಉಣ್ಣೆಯಿಂದ ನೇಯ್ದ ಕಂಬಳಿಯನ್ನು ಅವರಿಗೆ ಕಾಣಿಕೆಯಾಗಿ ಅರ್ಪಿಸಿದನು.

ತಾನೇ ನಿರ್ಮಿಸಿದ ಕುರಿಗಳನ್ನು ಕಾಯುವ ಕಾಯಕದಲ್ಲಿ ತೊಡಗಿದ್ದ ಶಾಂತಮುತ್ಯಾನಿಗೆ ಬರು–ಬರುತ್ತಾ ತನ್ನ ಕಾಯಕದಲ್ಲಿ ಬೇಸರ ಉಂಟಾಯಿತು. ಹೀಗಾಗಿ ಕುರಿ ಕಾಯುವ ತನ್ನ ಕಾಯಕವನ್ನು ಬ್ರಹ್ಮನಿಗೆ ಒಪ್ಪಿಸಿದ. ಕಾಲಾನಂತರದಲ್ಲಿ ವಿಷ್ಣು, ರುದ್ರ, ಮಹೇಶ, ಮಹಾದೇವ ಒಬ್ಬರಾದ ನಂತರ ಒಬ್ಬರು ಕುರಿಗಳನ್ನು ಕಾಯುವ ಕೆಲಸ ಮಾಡಿದರು. ಮಹಾದೇವನಿಗೂ ಬೇಸರವಾಗಲು ಈ ಕಾಯಕವನ್ನು ಪಾರ್ವತಿಗೆ ಒಪ್ಪಿಸಿದನು. ಪಾರ್ವತಿಯು ಮಗುವಾದ ಷಣ್ಮುಖನನ್ನು ಕಂಕುಳಲ್ಲಿ ಎತ್ತಿಕೊಂಡು ಸ್ವರ್ಗದ ಭೂಮಿಯಲ್ಲಿ ಕುರಿಕಾಯ ತೊಡಗಿದಳು. ನಂತರದಲ್ಲಿ ಆಕೆಗೂ ಬೇಸರವಾಗಿ ತನ್ನ ನಂತರದಲ್ಲಿ ಕುರಿಕಾಯುವ ಕಾಯಕಕ್ಕೆ ಯಾರೂ ಇಲ್ಲದಿದ್ದಾಗ ಸ್ವರ್ಗದ ಬಾಗಿಲನ್ನು ತೆರೆದು ಕುರಿಗಳನ್ನು ಮರ್ತ್ಯಲೋಕಕ್ಕೆ ಹೊಡೆದು ತರುತ್ತಾಳೆ. ಬಂಕಾಪುರದ ಭೂಮಿಯಲ್ಲಿರುವ ಮೂರು ಕಣ್ಣಿನ ಹುತ್ತವನ್ನು ನೋಡಿ, ಆ ಹುತ್ತದಲ್ಲಿ ಕುರಿಗಳನ್ನು ಹೊಗಿಸುತ್ತಾಳೆ. ಹುತ್ತದ ಮೇಲೊಂದು ಮುತ್ತಲ ಗಿಡವೊಂದನ್ನು ನೆಡುತ್ತಾಳೆ.

ಕುರಿ ಕಾಯುವ ಕಾಯಕದಿಂದ ಮುಕ್ತವಾದ ಪಾರ್ವತಿ ಈಗ ಷಣ್ಮುಖನನ್ನು ಕೆಳಗೆ ಇಳಿಸಿ, ಕೈಕಾಲು ಮುಖ ತೊಳೆದುಕೊಂಡು ಭೂಮಿಯ ಮೇಲೆ ಕುಳಿತಳು. ಕುರಿ ಕಾಯುವ ಕಾಯಕಕ್ಕೆ ಇಬ್ಬರು ವ್ಯಕ್ತಿಗಳನ್ನು ನಿರ್ಮಿಸುವ ವಿಚಾರ ಮಾಡಿ ಎಡಕಿನ ಕೈಯಲ್ಲಿ ಭೂಮಿಯ ಮಣ್ಣನ್ನು ಹಿಡಿದುಕೊಂಡು, ಬಲಕಿನ ಕೈಯಿಂದ ತನ್ನ ಎಡಗೈಲೆ ಬಲಮೊಲೆಯ ಹಾಲು ಹಿಂಡಿ ಕೆಸರ ಮುದ್ದೆ ಮಾಡಿದಳು. "ಎಡಗೈ ಮಣ್ಣಿನಿಂದ ಹೆಣ್ಣು ಗೊಂಬೆಯನ್ನು ಬಲಗೈ ಮಣ್ಣಿನಿಂದ ಗಂಡು ಗೊಂಬೆಯನ್ನು ತಯ್ಯಾರು ಮಾಡಿದಳು. ಅಷ್ಟರಲ್ಲಿ ಶಿವನು ಪಾರ್ವತಿಯಗೆ ಹುಡುಕುತ್ತ ಅಲ್ಲಿಗೆ ಬಂದನು. ಅವನಿಂದ ಎರಡು ಗೊಂಬೆಗಳಿಗೂ ಜೀವ ತುಂಬಿಸಿದಳು."[೨] ಇವರೇ ಶಿವಪಾರ್ವತಿಯರಿಂದ ನಿರ್ಮಾಣವಾದ ಮೊದಲ ಮಣ್ಣಿನ ಮಾನವ ಜೋಡಿಗಳು. ಆ ಹೆಣ್ಣು ಗಂಡುಗಳಿಗೆ ಮುದ್ದವ್ವ ಮುದ್ದುಗೊಂಡ ಎಂದು ಕರೆದು, ಇನ್ನೂ ಮುಂದೆ ನೀವು ಗಂಡ–ಹೆಂಡತಿಗಳಾಗಿ ಭೂಲೋಕದಲ್ಲಿ ಬಾಳಿ ಕೀರ್ತಿವಂತರಾಗಿರೆಂದು ದಂಪತಿಗಳಿಗೆ ಶಿವ–ಪಾರ್ವತಿಯರು ಶುಭ ಹಾರೈಸಿದರು. ಪಾರ್ವತಿಯ ಮೊಲೆ ಹಾಲಿನಿಂದ ಜನಿಸಿದ ಇವರನ್ನು 'ಹಾಲುಮತ'ದವರೆಂದು ಕರೆಯುತ್ತಾರೆ. ಈ ಮೊದಲ ಹೆಣ್ಣು ಮತ್ತು ಗಂಡಿನ ಕಥೆಗೂ, ಕ್ರಿಶ್ಚಿಯನ್ ಧರ್ಮದಲ್ಲಿ ಬರುವ ಮೊದಲ ಹೆಣ್ಣು ಮತ್ತು ಗಂಡಿನ ಕಥೆಗಳಿಗೆ (ಎಡಮ್ ಮತ್ತು ಈವ್) ತುಲನೆ ಮಾಡಿ ನೋಡಿದರೆ ಆಶ್ಚರ್ಯಕರವಾದ ಸಾಮ್ಯಗಳು ಕಂಡು ಬರುತ್ತವೆ. ಅದೇ ತೇರನಾಗಿ ಮಲೆ ಮಹಾದೇಶ್ವರ ಕಾವ್ಯ, ಜುಂಜಪ್ಪನ ಕಾವ್ಯದಲ್ಲಿಯೂ ಕೂಡ ಇಂತಹ ಕಥಾನಕಗಳಿವೆ.

"ಹಾಲು ಮತ್ತು ಮಣ್ಣು ಕೂಡಿ ಜೀವಿಗಳಾದ್ದರಿಂದ ಅರ್ಥಾತ್ ಹಾಲು+ಮೃತ್ (=ಹಾಲುಮೃತ್>) 'ಹಾಲುಮತ' ಆದಂತೆ ತೋರುತ್ತದೆ. ಆದರೆ ನಮ್ಮ ಹಾಡುಗಾರ 'ಹಾಲುಮತ'ದ ನಿಷ್ಪತ್ತಿಗೆ ಬೇರೆ ರೀತಿಯಿಂದ ವಿವರಣೆ ಕೊಡುವುದನ್ನು ಕಾಣುತ್ತೇವೆ.

ಹಾಲು ತಾಯಿ ಅಂದಾನೆ ಮತವ ಶಿವರಾಯಿಗಂದಾನೆ

ಮತವನಂದರ ಮಂತರ ಹಾಲುನಂದರ ಮಣ್ಣೀನ

ಹಾಲುಮತವನಲ್ಲೇನ ಹೆಸರ ಇಡುವುತಾರೇನ

ಇಲ್ಲಿ, ಜೀವ-ದೇಹದ ಕಲ್ಪನೆ ಕೊಡುವ ಪ್ರಯತ್ನ ಮಾಡಿದಂತಿದೆ. ಮಂತ್ರವು ಜೀವದ ಕಲ್ಪನೆಯಲ್ಲಿದೆ. ಗಾಳಿ ಮತ್ತು ನಾದಗಳನ್ನು ಅದರ ಜೀವಾಳವಾಗಿ ಪರಿಗಣಿಸಿದ್ದಾರೆ. ಮಂತ್ರದ (ಮಾತು) ಸ್ವರೂಪವೇ ಗಾಳಿ ಮತ್ತು ನಾದದಿಂದ ಕೂಡಿದೆ. ಮಣ್ಣಿನಲ್ಲಿ ಹಸಿ ಬೆರೆವ ಪ್ರಕ್ರಿಯೆ ಒಂದಾದರೆ, ಈ ಹಸಿಯಲ್ಲಿಯೇ ಜೀವ ಮೊಳಕೆಯೊಡೆಯುವ ವೈಜ್ಞಾನಿಕ ಕ್ರಿಯೆಯೊಂದು ಇಲ್ಲಿ ಹುದುಗಿದೆ."[೨] ಆದರೆ ಇಲ್ಲಿ ಜೀವ ದೇಹದ ಕಲ್ಪನೆಯ ಜೊತೆಗೆ ಹಾಲು ಪಾರ್ವತಿಗೆ, ಮತ ಶಿವನಿಗೆ ಅನ್ವಯವಾಗಿರುವುದನ್ನು ಗಮನಿಸಬೇಕು. ಅಂದರೆ ಇಲ್ಲಿ ಪ್ರಕೃತಿ, ಪುರುಷ, ಭೂಮಿ ಮತ್ತು ಸೃಷ್ಟಿಯ ತತ್ವಗಳು ಮಿಲನಗೊಂಡಿವೆ.

ಮುದ್ದವ್ವ-ಮುದ್ದಗೊಂಡ ದಂಪತಿಗಳಿಗೆ ಆದಿಗೊಂಡ, ಅನಂತಗೊಂಡ, ಸಿದ್ಧಗೊಂಡ ಮತ್ತು ಪದುಮಗೊಂಡ ಎಂಬ ನಾಲ್ಕು ಜನ ಗಂಡುಮಕ್ಕಳು ಜನಿಸಿದರು. ಬೆಳೆದು ದೊಡ್ಡವರಾದ ಇವರು ಒಕ್ಕಲುತನ ಕಾಯಕದಲ್ಲಿ ತೊಡಗಿದರು. ನಂತರದಲ್ಲಿ ಎಲ್ಲರಿಗೂ ಮದುವೆಯಾಯಿತು. ಕಿರಿಯವನಾದ ಪದುಮಗೊಂಡನು ಯಾವ ಕೆಲಸವನ್ನು ಮಾಡದೆ ಕುಳಿತು ಉಣ್ಣುತ್ತಾನೆಂದು ಅಣ್ಣಂದಿರು ಮತ್ತು ಅವರ ಪತ್ನಿಯರು ಆಪಾದಿಸಿದರು. ಹೀಗಾಗಿ ತಾಯಿಯ ಸಲಹೆಯಂತೆ ಪದುಮಗೊಂಡ ಒಕ್ಕಲುತನ ಕಾಯಕ ಮಾಡುವುದಕ್ಕಾಗಿ ಪ್ರತಿನಿತ್ಯವು ತಮ್ಮ ಹೊಲಕ್ಕೆ ಹೋಗುತ್ತಿದ್ದನು. ಹೊಲದಲ್ಲಿರುವ ಹುತ್ತವನ್ನು ತೋರಿಸಿದ ತಾಯಿಯು ಅದಕ್ಕೆ ನೇಗಿಲು ಹತ್ತದಂತೆ ನೇಗಿಲು ಹೊಡೆಯಲು ತಾಕೀತು ಮಾಡಿದ್ದಳು. ಆದರೆ ಒಂದು ದಿನ ಪದುಮಗೊಂಡ ಹುತ್ತಿನ ಸಮೀಪದಲ್ಲಿ ನೇಗಿಲು ಹೊಡೆಯಲು ಹೋದಾಗ ಆಕಸ್ಮಿಕವಾಗಿ ನೇಗಿಲು ಹುತ್ತಿನ ಮೇಲೆ ಹಾಯ್ದು, ಹುತ್ತವು ಒಡೆದು ಎರೆಡು ಹೋಳಾಗುತ್ತದೆ. ಒಡೆದ ಹುತ್ತದಿಂದ ಅನೇಕ ಕುರಿಗಳು ಹೊರಬರಲಾರಂಭಿಸಿದವು. ಹುತ್ತದಿಂದ ಹೊರಬರುತ್ತಿರುವದೆನೆಂಬುದು ಪದುಮಗೊಂಡನಿಗೆ ತಿಳಿಯಲಿಲ್ಲ. ಹುತ್ತದಿಂದ ಹೊರಬರುತ್ತಿರುವ ಅವುಗಳನ್ನು ತಡೆಯಲು ಬಾಗಿಲಿಗೆ ಕಸಕಡ್ಡಿ ಹಾಕಿ ಬೆಂಕಿ ಹಾಕುತ್ತಾನೆ. ಬೆಂಕಿಗೆ ಸುಡಲಾರದೆ ಇರುವ ಕುರಿಗಳು ಬೆಳ್ಳಗೆ, ಬೆಂಕಿಯ ಹೊಗೆ ಹತ್ತಿದವುಗಳು ಕಂದು ಬಣ್ಣದವುಗಳಾಗಿ ಮತ್ತು ಅರ್ಧಮರ್ಧ ಬೆಂದ ಕುರಿಗಳು ಹಂಡಬಂಡ(ಕಪ್ಪು-ಬಿಳುಪು)ದವುಗಳಾದವು. ಬಂಗಾರದ ಕೊಡಿನ ಟಗರುಗಳು ಮೇಲೆ ಬಂದವು. ಹೀಗೆ ಬಂಕಾಪುರದ ಹನ್ನೆರಡು ಕೂರಿಗಿ ಹೊಲದ ತುಂಬ ಕುರಿಗಳು ತುಂಬಿ ನಿಂತವು. ಈಗ ಪದುಮಗೊಂಡ ಕುರಿಗಳ ಬೆನ್ನು ಹತ್ತಿ ಅವುಗಳನ್ನು ಕಾಯುವ ಕಾಯಕದಲ್ಲಿ ನಿರತನಾದ. ಹೀಗೆ ಭೂಲೋಕದಲ್ಲಿ ಶಿವ-ಪಾರ್ವತಿಯರ ಕೃಪೆಯಿಂದಾಗಿ ಕುರಿ ಮತ್ತು ಕುರಿ ಕಾಯುವ ಕುರುಬರು ಹುಟ್ಟಿದರೆಂಬ ಐತಿಹ್ಯ ಬೆಳೆದು ಬಂದಿದೆ. ಪ್ರಚಲಿತದಲ್ಲಿರುವ ಜನಪದಕಥೆ ಮತ್ತು ಪುರಾಣಗಳು ಕುರುಬರ ಮೂಲಕ್ಕೆ

ಶಿವನನ್ನು ಒಂದಲ್ಲ ಒಂದು ತರದಲ್ಲಿ ತಳಕು ಹಾಕುತ್ತವೆ. ಇಂತಹ ಕಥೆಗಳ ಸತ್ಯಾಸತ್ಯತೆ ಏನೇ ಇರಲಿ, ಈ ಕಥೆಗಳಿಂದ ನಮಗೆ ಒಂದು ಅಂಶ ಸ್ಪಷ್ಟವಾಗುತ್ತದೆ. ಈ ಜನಾಂಗದ ಮುಖ್ಯ ದೇವತೆ 'ಶಿವ'. ಇವರು ಶೈವ ಸಂಪ್ರದಾಯಕ್ಕೆ ಸೇರಿದವರು. ಇವರ ಆರಾಧ್ಯ ದೈವ ಬೀರಪ್ಪ-ಬೀರೇಶ್ವರ. ಬೀರೇಶ್ವರನ ರೂಪದಲ್ಲಿರುವವನು ಸಾಕ್ಷಾತ್ ಶಿವನೇ.

ಮಂಗನಿಂದ ಮಾನವನಾಗಿ ವಿಕಾಸಗೊಂಡ ಮೂಲ ಮಾನವರು ಸಹಜವಾಗಿ ನೆಲೆಗೊಂಡಿದ್ದು ಗುಡ್ಡ ಬೆಟ್ಟಗಳಲ್ಲಿಯೇ ಎಂಬುದು ಸ್ಪಷ್ಟ. ಅಂತೆಯೇ ಕರ್ನಾಟಕಾಂತರ್ಗತ ಭಾರತದ ಮೂಲ ನಿವಾಸಿಗಳಲ್ಲಿ ಕುರುಬರ ಜನಾಂಗವೇ ಅತಿ ಪ್ರಮುಖವೆಂಬುದಾಗಿ ವಿದ್ವಾಂಸರ ಅಭಿಪ್ರಾಯ. ಈ ಮೂಲ ನಿವಾಸಿ ಕುರುಬರಲ್ಲಿ ಕಾಲಪ್ರವಾಹದ ನಿರಂತರವಾದ ಪರಿವರ್ತನೆಯ ಗತಿಯಲ್ಲಿ ಅದೆಷ್ಟೋ ಸಾವಿರ ವರ್ಷಗಳ ಹಿಂದೆಯೇ, ವೃತ್ತಿ ಭೇದದ ಭಿನ್ನತೆಯ ಕಾರಣದಿಂದಾಗಿ ಮತ್ತು ಪ್ರಾದೇಶಿಕ ಭಿನ್ನತೆಯ ಕಾರಣದಿಂದಾಗಿ ಕೆಲವು ಪಂಗಡಗಳು ಉಂಟಾದವು. ಅವೇ ಪಂಗಡಗಳು ದಿನಗಳದಂತೆ ಪ್ರತ್ಯೇಕಗೊಂಡು ಪರಸ್ಪರ ಸಂಬಂಧ ಕಳಚಿ ವೃತ್ತಿಮೂಲದ ಜಾತಿಗಳಾದವು. ಇಂದು ಕರ್ನಾಟಕದಲ್ಲಿ ಕಾಣುವ ಗೊಲ್ಲರು, ಹಣಬರು, ನಾಯಕರು, ಉಪ್ಪಾರರು, ಸುಣಗಾರರು, ಕವಲೆತ್ತಿನವರು, ಸುಡುಗಾಡಸಿದ್ಧರು, ಒಕ್ಕಲಿಗರು, ವಿವಿಧ ಪರಿಶಿಷ್ಟ ಜಾತಿ-ಪಂಗಡದವರು ಮುಂತಾದವರೆಲ್ಲ ಆದಿಮೂಲದಲ್ಲಿ ಕುರುಬರು ಎಂಬಂಥ ವಿಶಾಲಾರ್ಥದ ಜನಾಂಗದಲ್ಲಿ ಒಳಗೊಂಡಿದ್ದಾರೆ. ಕುರುಬರು ಒಂದು ಬುಡಕಟ್ಟು ಜನಾಂಗದವರೆಂಬುದು ಸ್ಪಷ್ಟ. ಅವರು ಇಂದಿಗೂ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಇದಕ್ಕೆ ಹಾಲುಮತ ಪುರಾಣವು ಸಾಂಕೇತಿಕವಾಗಿ ಆಧಾರ ನೀಡುತ್ತದೆ. ಅದರ ಆಶಯಗಳನ್ನು ಅರ್ಥಮಾಡಿಕೊಂಡರೆ ಕುರುಬ ಜನಾಂಗದ ಮೂಲ ಮತ್ತು ಬೆಳವಣಿಗೆ ವಿಧಿತವಾಗುತ್ತದೆ.

"ಆದಿಮೂಲ ಜನಾಂಗದ ಹಿನ್ನೆಲೆ ಹೊಂದಿರುವ ಕುರುಬರು ಜಾತಿ, ಮತ, ಧರ್ಮಗಳು ರೂಪುಗೊಳ್ಳುವುದಕ್ಕಿಂತ ಮೊದಲಿಗೇ ಅಸ್ತಿತ್ವದಲ್ಲಿದ್ದರು. ಆಗ ಕುರುಬರು ನಿಸರ್ಗ ಜೀವಿಗಳಾಗಿ ಬದುಕಿದವರು. ನಿಸರ್ಗದೊಂದಿಗೆ ತಾದ್ಯಾತ್ಮ ಹೊಂದಿ ಬಾಳಿದವರು. ನಿಸರ್ಗದೊಂದಿಗೆ ಬದುಕುವಾಗ ಹೋರಾಟ, ವೀರತನದ ಪ್ರದರ್ಶನ ಅವರಿಗೆ ಅನಿವಾರ್ಯ. ಅಂತೆಯೇ ಅವರು ವೀರತ್ವದ ಆರಾಧಕರು. ವೀರಪೂಜೆ ಅವರ ರಕ್ತಗುಣ. ಈ ಕಾರಣದಿಂದಾಗಿಯೇ ವೀರತ್ವದ ಪ್ರತೀಕವಾಗಿರುವ ಬೀರಪ್ಪ ಕುರುಬರಿಗೆ ಆರಾಧ್ಯ ದೇವರು."[೪]

೨.೧.೨ ಚಾರಿತ್ರಿಕ ಮೂಲ :

ಪ್ರಪಂಚದಲ್ಲಿ ಮಾನವ ನಾಗರಿಕತೆಯ ಘಟ್ಟ ಆರಂಭವಾದದ್ದು ಪಶುಪಾಲನೆಯಿಂದ. ಸುಮಾರು ೫ ಲಕ್ಷ ವರ್ಷಗಳ ಹಿಂದೆ ಭೂಮಿಯ ಮೇಲೆ ಆದಿಮಾನವನ ಜನನವಾಯಿತು. ಆದರೆ ಅವನು ಆಧುನಿಕ ಮಾನವನಾಗಿ ಪರಿವರ್ತನೆ ಹೊಂದಿದ್ದು ಸು. ೨.೨೫ ಲಕ್ಷ ವರ್ಷಗಳ ಹಿಂದೆ. ಆರಂಭದಲ್ಲಿ ಅವನು ಆಹಾರ ಸಂಪಾದನೆಗಾಗಿ ಬೇಟೆಯಾಡುತ್ತಿರಬೇಕು. ನಂತರದಲ್ಲಿ ಒಂದೆಡೆಗೆ ನೆಲೆನಿಂತಾಗ ಕೆಲವು ಉಪಯುಕ್ತ ಪ್ರಾಣಿಗಳನ್ನು ಸಾಕಿ, ಪಶುಪಾಲನೆಗೆ ಇಳಿದಾಗ, ಪಶುಪಾಲಕನಾಗಿ ಅವನ ಚರಿತ್ರೆ ರೂಪಗೊಂಡಿತು. ಬೇಟೆಗಾರಿಕೆಯ ಅನಾಗರಿಕ ಹಂತದಿಂದ ಬೇರ್ಪಟ್ಟು ಪಶುಪಾಲನೆಯ ನಾಗರಿಕತೆಯ ಹಂತವನ್ನು ತಲಪುವ ಮೂಲಕ ಪಶುಪಾಲಕರಾದ ಇವರು ಸಮಾಜದ ಪ್ರಥಮ ನಾಗರಿಕರೆಂಬ ಅಭಿದಾನಕ್ಕೆ ಒಳಗಾದರು.

ಮಾನವನು ಆಹಾರ ಉತ್ಪಾದನೆಯ ಬಗ್ಗೆ ತಿಳುವಳಿಕೆ ಇಲ್ಲದ ಸಮಯದಲ್ಲಿ ನಿಸರ್ಗ ಮಡಿಲಲ್ಲಿ ಸದಾ, ಸೌಮ್ಯ ಪ್ರಾಣಿಗಳ ಮಧ್ಯ ಬದುಕುತ್ತಿದ್ದ. ಈ ಅವಧಿಯಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಆಹಾರವಾಗಿ ಹೊಂದುವ ಕ್ರಿಯೆಯನ್ನು, ಒಂದು ಅನಿವಾರ್ಯ ಆಹಾರೋತ್ಪಾದನಾ ವಿಧಾನವೆಂದು ಭಾವಿಸಲಾಗಿತ್ತು. ನಿಜವಾಗಿ ಆಹಾರ ಉತ್ಪಾದನೆಗೆ ಅರ್ಥ ಬಂದಿದ್ದು ಪ್ರಾಣಿಗಳ ಸಾಕಾಣಿಕೆಯಿಂದ ಮತ್ತು ಅವುಗಳಿಂದ ಪಡೆಯುವ ಹಾಲಿನ ಉತ್ಪನ್ನಗಳಿಂದ. ಪಶುಪಾಲನೆಯು ಆಹಾರ ಉತ್ಪಾದನೆಯ ಆರಂಭದ ಸಾಂಸ್ಕೃತಿಕ ಘಟ್ಟವಾಗಿ ಪರಿವರ್ತಿತವಾದಾಗ ಬೇಟೆಗಾರಿಕೆ ಹಂತ-ಹಂತವಾಗಿ ಒಂದು ಪ್ರಾಸಂಗಿಕ ಕ್ರಿಯೆಯಾಗಿ ಉಳಿಯಿತು. ನಂತರದಲ್ಲಿ ಅದು ಹವ್ಯಾಸವಾಗಿ ಪರಿವರ್ತನೆಗೊಂಡಿತು. ಆದ್ದರಿಂದ ಪಶುಪಾಲನೆಯನ್ನು ಮಾನವನ ಪ್ರಥಮ ಸಂಸ್ಕೃತಿಯ ಮೆಟ್ಟಿಲು ಎಂದೇ ಗುರುತಿಸಬಹುದು.

ಭಾರತದ ಅತ್ಯಂತ ಪ್ರಾಚೀನ ಜನಸಮುದಾಯಗಳಲ್ಲಿ ಕುರುಬ ಜನಾಂಗವೂ ಒಂದು. ಈ ಜನಾಂಗದ ಮೂಲವೆಂದರೆ ಒಂದು ಅರ್ಥದಲ್ಲಿ ಮಾನವನ ಜನಾಂಗದ ಮೂಲವೆಂದೇ ಹೇಳಬೇಕಾಗುತ್ತದೆ. ಬೇಟೆ ಸಂಸ್ಕೃತಿಯಿಂದ ಕವಲೊಡೆದ ಪಶುಪಾಲಕರೇ ಕುರುಬರ ಮೂಲಿಗರು. ಕುರುಬರ ಜನಾಂಗವೇ ಭಾರತದ ಮೂಲ ನಿವಾಸಿಗಳಲ್ಲಿ ಅತೀ ಪ್ರಮುಖವೆಂಬುದಾಗಿ ವಿದ್ವಾಂಸರ ಅಭಿಪ್ರಾಯವಿದೆ. ಈ ಮೂಲನಿವಾಸಿ ಕುರುಬರಲ್ಲಿ, ಕಾಲಪ್ರವಾಹದ ನಿರಂತರವಾದ ಪರಿವರ್ತನೆಯ ಗತಿಯಲ್ಲಿ ಮತ್ತು ವೃತ್ತಿ ಭೇದದ ಭಿನ್ನತೆಯ ಕಾರಣಗಳಿಂದಾಗಿ ಕೆಲವು ಪಂಗಡಗಳು ಉಂಟಾದವು. ಅವೇ ಪಂಗಡಗಳು ಮುಂದೆ ಪ್ರತ್ಯೇಕಗೊಂಡು ಪರಸ್ಪರ ಸಂಬಂಧ ಕಳಚಿ ವೃತ್ತಿಮೂಲದ ಜಾತಿಗಳಾದವು. ಕುರುಬ ಜನಾಂಗವಾದ ಬೇರುಗಳು ವೇದಗಳ ಕಾಲದಲ್ಲಿ ಗೋಚರಿಸುತ್ತವೆ. ಕುರುಬ: ದನಗಾರರಿಗೆ, ಹಾಲುಮತದ ಜನ ಎಂಬ ವಾಡಿಕೆ ಸುಪ್ರಸಿದ್ಧವಾಗಿದೆ. ಹಾಲು-ಹೈನಿನ ವೃತ್ತಿಯಿಂದ ಉಪಜೀವಿಸುವ ಜನ ಎಂಬರ್ಥದಲ್ಲಿ 'ಹಾಲುಮತ'ದವರು ಈ ಹೆಸರು ವಾಡಿಕೆಗೆ ಬಂದಿರಬೇಕು ಎಂದು ತೋರುತ್ತದೆ.

ಪಶುಪಾಲನೆಯಿಂದ ಮಾನವನು ಅನೇಕ ಅನುಕೂಲತೆಗಳನ್ನು ಮನಗಂಡನು. ಆಡು-ಕುರಿ-ದನಗಳಿಂದ ಹೊಸ ಸಂತತಿ ಜೊತೆಗೆ ಹಾಲನ್ನು ಪಡೆದುಕೊಂಡನು. ಪಶುಗಳಿಂದ ಬರುತ್ತಿದ್ದ ಹಾಲು, ಮರಿಗಳಿಗಷ್ಟೇ ಅಲ್ಲದೆ ಅವುಗಳನ್ನು ಸಾಕಿದ ಮನುಷ್ಯನಿಗೂ ದೊರಕಿತು. ಹಾಲು ಮಾನವನ ಬದುಕಿಗೆ ಮೂಲಾಧಾರ ಮತ್ತು ಪೂರ್ಣಾಹಾರ ಎಂಬುದನ್ನು ಅರಿತುಕೊಂಡ ಮೇಲೆ ಪ್ರಾಣಿಗಳನ್ನು ಕೊಂದು ತಿನ್ನುವುದಕ್ಕಿಂತ ಅವುಗಳನ್ನು ಸಾಕಿ ಸಲುಹಿ, ಅವುಗಳಿಂದ ನಾನಾ ವಿಧದ ಅನುಕೂಲತೆಗಳನ್ನು ಪಡೆದುಕೊಳ್ಳುವ ವಿಚಾರ ಮಾಡಿದನು. ಮಾಂಸಾಹಾರಕ್ಕಿಂತ ಹಾಲು ಉತ್ತಮ ಎಂಬ ಅಂಶವನ್ನು ಅರಿತುಕೊಂಡ ಸಮಯದಲ್ಲಿಯೇ ಪ್ರಾಣಿಗಳ ಬೇಟೆಯು ಅಮಾನವೀಯವೆಂಬದನ್ನು ಮನಗಂಡು ಪ್ರಾಣಿ ಹಿಂಸೆಯನ್ನು ತ್ಯಜಿಸಿದನು. ಈ ರೀತಿ ಮಾನವನು ಆರಂಭದಲ್ಲಿ ಬೇಟೆ ವೃತ್ತಿಯಿಂದ ಪಶುಪಾಲನೆಗೆ ಪರಿವರ್ತನೆಗೊಂಡ. ಹಾಲಿನ ಶ್ರೇಷ್ಠತೆಯನ್ನು ತಿಳಿದ ಪಶುಪಾಲಕರು ಹಾಲನ್ನು ನಿತ್ಯ ಆಹಾರವಾಗಿ ಉಪಯೋಗಿಸಲು ಪ್ರಾರಂಭಿಸಿ, ಹಾಲಿನ ಜನಕರಾಗಿ ಮುಂದೆ ಇವರೇ 'ಹಾಲುಮತ'ದವರೆಂದು ಕರೆಯಲ್ಪಟ್ಟರು. ಹಾಲು ಎಂದು ಕರೆಯಲ್ಪಡುವ ಇಂದಿನ ಶಬ್ದವು ಅಂದು 'ಪಾಲು' ಎಂಬ ಪದದಿಂದ ಗುರುತಿಸಲ್ಪಡುತ್ತಿತ್ತು. ೧೦-೧೧ ನೇ ಶತಮಾನದಿಂದ ಇತ್ತೀಚಿಗೆ 'ಪ' ಕಾರಕ್ಕೆ 'ಹ' ಕಾರ ಆಗಮವಾಗಿ

ಉಪಯೋಗಿಸಲ್ಪಡುತ್ತಿದೆ. ಸಾಮಾನ್ಯವಾಗಿ ಅಂದು 'ಪಾಲ್' ಎಂಬ ಶಬ್ದವು 'ರಸ' ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ಪಾಲ್ ಅಥವಾ ಹಾಲು ರಸಾಹಾರ ಎಂಬ ಅರಿವು ಮಾನವ ಜಗತ್ತಿಗೆ ತಂದವನೇ ಕುರುಬ ಎಂಬುದು ಸ್ಪಷ್ಟ. ಮೊಸರು, ಮಜ್ಜಿಗೆ, ಕೆನೆ, ಬೆಣ್ಣೆ, ತುಪ್ಪ, ಗಿಣ್ಣ ಮುಂತಾದ ಹಾಲಿನಿಂದ ಉತ್ಪತ್ತಿಯಾಗುವ ಪದಾರ್ಥಗಳ ಶೋಧಕನೂ ಕೂಡ ಕುರುಬನೇ ಆಗಿದ್ದಾನೆ. ರಸಾಹಾರದ ಮೂಲ ಶೋಧಕನಾದ ಇವನನ್ನು 'ಹಾಲುಮತ'ದವ ಎಂದು ಕರೆಯುವುದರಲ್ಲಿ ಆಶ್ಚರ್ಯವಿಲ್ಲ.

"ಕುರುಬರು ತಮಗೆ ಹಿರಿಮೆ ಪಡೆದುಕೊಳ್ಳಲು ತೀರ ಇತ್ತೀಚಿಗೆ ಹಾಲುಮತಸ್ಥರು ಎಂಬುದಾಗಿ ಕರೆದುಕೊಳ್ಳಲಾರಂಭಿಸಿದರೆಂಬುದು ವಾಸ್ತವ ಸಂಗತಿ. ಬೌದ್ಧಮತ, ಜೈನಮತ, ಕ್ರಿಶ್ಚಿಯನ್ ಮತ, ವೀರಶೈವ ಮತ ಎಂಬುದಾಗಿ ಇರುವಂತೆ ನಿಮ್ಮದಾವ ಮತವೆಂಬುದಾಗಿ ಚರ್ಚಾ(ಸವಾಲು-ಜವಾಬು)ಗಳಲ್ಲಿ ಪ್ರಶ್ನೆಗಳೆದ್ದಾಗ ಉತ್ತರವಾಗಿ ಹುಟ್ಟಿಕೊಂಡ ಮತವೇ 'ಹಾಲುಮತ' ಎಂಬುದಾಗಿದೆ. ಈ ಬಗ್ಗೆ ಸ್ವಾರಸ್ಯವಾದ ಚರ್ಚೆ ಹಳ್ಳಿಗಾಡಿನ ಡೊಳ್ಳಿನ ಹಾಡುಗಾರರಲ್ಲಿ, ವಿವಿಧ ಬಗೆಯ ಸವಾಲ್ ಜವಾಬು ಮೇಳಗಳಲ್ಲಿ ನಡೆಯುತ್ತಿದ್ದುದನ್ನು ನಾನು ಚಿಕ್ಕಂದಿನಿಂದಲೂ (ಸುಮಾರು ೬೦ ವರ್ಷಗಳಿಂದ) ಕೇಳುತ್ತ ಬಂದಿದ್ದೇನೆ. ವಿಶಿಷ್ಟ ಹಿನ್ನೆಲೆಯಲ್ಲಿ ರೂಪುಗೊಂಡ 'ಹಾಲುಮತ' ಎಂಬ ಆಕರ್ಷಕ ಪದ ಬೇಗನೇ ಅಭಿಮಾನ ಮತ್ತು ಮೇಲ್ಮೆಯ ಪ್ರತೀಕವೆಂಬಂತೆ ಕರ್ನಾಟಕದ ಎಲ್ಲೆಡೆಯಲ್ಲಿ 'ಕುರುಬ' ಎಂಬುದಕ್ಕೆ ಪರ್ಯಾಯವಾಗಿ ಬಳಕೆಗೊಳ್ಳಲಾರಂಭವಾಯಿತು. ಕುರುಬ ಎಂಬುದಕ್ಕೆ ಪ್ರಾಪ್ತವಾಗಿದ್ದ ಹೀನಾರ್ಥ ಹಾಗೂ ಸಂಕುಚಿತಾರ್ಥಗಳಿಂದ ಹೊರಬಂದು ಹೆಮ್ಮೆ ಪ್ರದರ್ಶಿಸಲು 'ಹಾಲುಮತ' ಪದವು ಒಂದು ಆಯುಧದಂತೆ ಆಯಿತು."[೫] ಇನ್ನೊಂದು ಅಧ್ಯಯನದ ಪ್ರಕಾರ ಕುರುಬ ಜನಾಂಗದ ಮೂಲ ಮತ್ತು ಬೆಳವಣಿಗೆಯ ವಿವರಗಳು ಈ ತೆರನಾಗಿ ತಿಳಿದು ಬರುತ್ತದೆ.

"ಪ್ರಾಣಿಸಂಕುಲಗಳಲ್ಲಿ ಸೌಮ್ಯವೂ ಸುಂದರವೂ, ನಿರುಪದ್ರವಿಯಾಗಿರುವ ಕುರಿ (ಆಡು) ಮಾನವನ ಪ್ರಥಮ ಸಾಕು ಪ್ರಾಣಿಯಾಯಿತು. ಕು=ಪೃಥ್ವಿ, ಭೂಮಿ, ಪ್ರದೇಶ. ಕುರು=ಎತ್ತರ, ಉನ್ನತ, ಗುಡ್ಡ, ಬೆಟ್ಟಪ್ರದೇಶ ಎಂಬರ್ಥಗಳಿವೆ. ಈ ಪ್ರದೇಶದಲ್ಲಿ ವಾಸವಾಗಿರುವ ಪ್ರಾಣಿಗೆ ಕುರ್‍ರಿ (ಕುರಿ), ಮೇಕೆ ಎಂದು ಕರೆದರು. ಕುರಿ+ಪ(ರಕ್ಷಿಸುವವ, ಕಾಯುವವ)=ಕುರಿಪ>ಕುರುಪ= ಕುರುಂಬ>ಕುರುಬ ಎಂದು ಉಚ್ಚಾರ ವ್ಯತ್ಯಾಸದಿಂದ ಬದಲಾಯಿತೆಂದು ಕೆಲವರ ಅಭಿಪ್ರಾಯ. ಉತ್ತರ ಅಮೇರಿಕಾ ಮತ್ತು ಯುರೋಪ ಖಂಡಗಳನ್ನು ಹೊರತು ಪಡಿಸಿ ಏಷಿಯಾ, ಆಫ್ರಿಕಾ ದ.ಅಮೇರಿಕಾ, ಆಸ್ಟ್ರೇಲಿಯಾ ಮತ್ತು ಅಂಟಾರ್ಟಿಕಾ ಖಂಡಗಳಿಗೆ 'ಗೊಂಡಾವನ' ಖಂಡಗಳೆಂದು ಈ ಹಿಂದೆ ಕರೆಯುತ್ತಿದ್ದರು. ಭಾರತದಲ್ಲಿ ಕುರುಬರಿಗೆ ಗೊಂಡ, ಕುರುಂಬ, ಕುರುಕ-ಕುರುಖ, ಧನಗರ, ಪಾಲ, ಗಡರಿ ಮತ್ತು ಮಲಯರ್ ಮುಂತಾಗಿ ಕರೆಯುತ್ತಾರೆ. ಈ ಶಬ್ದಗಳು ಗುಡ್ಡ-ಬೆಟ್ಟ, ಭೂಮಿ ಹಾಗೂ ಜನಾಂಗ ಸೂಚಕ ಶಬ್ದಗಳಾಗಿರುವುದು ಅಭ್ಯಸನಿಯ.

ಗೊಂಡ ಎಂಬ ಪದದ ನಿಷ್ಪತ್ತಿಯನ್ನು ಭಾಷಾ ವಿದ್ವಾಂಸರು ಎರಡು ರೀತಿಯಲ್ಲಿ ವಿವರಿಸುತ್ತಾರೆ. 'ಗೊಂಡ' ಇದು ತೆಲಗಿನ 'ಕೊಂಡ' ದಿಂದ ಬಂದದ್ದು; ಕೊಂಡ>ಗೊಂಡ ಆಗಿದೆ; 'ಕೊಂಡ' ಎಂದರೆ ಗುಡ್ಡ ಅಥವಾ ಪರ್ವತ ಎಂದರ್ಥ. ಹೇಮಚಂದ್ರನೇ ಮೊದಲಾದ ನಿಘಂಟುಕಾರರು 'ಗೊಂಡಾ' ಶಬ್ದವನ್ನು ನಿಜ ಜಾತಿ ಸೂಚಕ ಎಂದಿದ್ದಾರೆ. ಗೊಂಡ ಎಂಬುದು ಗೌಡದಿಂದ ಬಂದಿರುವುದಾಗಿ ಜನರಲ್ ಕನ್ನಿಂಗಹ್ಯಾಮ್

ಅಭಿಪ್ರಾಯ ಪಟ್ಟಿದ್ದಾರೆ. ಗಾವುಂಡ>ಗಲುಂಡ>ಗಲುಡ>ಗಮಂಡ>ಗವುಂಢ>ಗವುಡ>ಗವುಡು>ಗಾಮುಂಡು> ಗವುಂಡು>ಗೊಂಡ, ಹೀಗೆ ಗಾಮುಂಡ ಪದವು ಹಲವಾರು ರೂಪಗಳನ್ನು ಪಡೆದು ಗೊಂಡ ಎಂಬ ಪದವಾಗಿದೆ. ಗೊಂಡ ಎಂಬುದರ ಅರ್ಥವು ದ್ರಾವಿಡ ವರ್ಗಕ್ಕೆ ಸೇರಿದೆ, ವಿಂಧ್ಯ ಪರ್ವತದ ಬಳಿ ಇರುವ ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ ಎಂದು ಕನ್ನಡ-ಕನ್ನಡ ನಿಘಂಟಿನಲ್ಲಿದೆ. ಗೊಂಡರು ಆದಿ ಕುರುಬರು ಎಂತಲೂ ಹೇಳಲಾಗುತ್ತದೆ. ಇವರು ಕೂಡ ತಮ್ಮ ಅವಸ್ಥೆಯಲ್ಲಿ ಆಡಳಿತ ನಡೆಸಿದ ಉಲ್ಲೇಖಗಳು ನಮಗೆ ದೊರೆಯುತ್ತವೆ. ಇವರನ್ನು 'ರಾಜಗೊಂಡ'ರು ಎಂದು ಕರೆಯಲಾಗುತ್ತದೆ. ಇವರು ಮೊಗಲರ ಮತ್ತು ಮರಾಠರ ವಿರುದ್ಧ ಹೋರಾಡಿದ ಪರಾಕ್ರಮಿಗಳು 'ರಥಕೃಷ್ಣ'ನ ಕಥೆ ಮತ್ತು 'ಶಿವಭಿಕ್ಷ' ಮಹಾರಾಜನ ಕಥೆಗಳಲ್ಲಿ ಇವುಗಳ ಉಲ್ಲೇಖಗಳು ದೊರೆಯುತ್ತವೆ."[೧]

ಕುರು(ರಿ)ಗಳನ್ನು ಸಾಕುವವನಿಗೆ ಕುರುಪ(ಬ) ಎಂದು ಹೆಸರು. ತೆಲಗು ನಿಘಂಟಿನ ಪ್ರಕಾರ 'ಕುರುಪ' ಎಂದರೆ ಉಣ್ಣೆನೇಕಾರ ಎಂದರ್ಥ. ಮಾನವನು ಕುರಿಗಾರಿಕೆ ಪ್ರಾರಂಭಿಸಿದ ಕಾಲವನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. "ಮೇಕೆ (The bezor-Capra Hircus Aegagrus) ಜಗತ್ತಿನಲ್ಲಿಯೇ ಮೊಟ್ಟ ಮೊದಲ ಸಾಕುಪ್ರಾಣಿ, ಅದನ್ನು ಕ್ರಿ. ಪೂ. ೮೦೦೦ ವರ್ಷಗಳಷ್ಟು ಹಿಂದೆಯೇ ಸಿಂಧೂ ತೀರದಿಂದ ಕಾವೇರಿ ತೀರದವರೆಗಿನ ಪ್ರದೇಶದಲ್ಲಿ ಸಾಕಲಾಗುತ್ತಿತ್ತೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಇತ್ತೀಚಿನ ಸಂಶೋಧನೆಯಲ್ಲಿ ಕುರಿಯ ಶಿಲಾಚಿತ್ರ ದೊರೆತಿದೆ. ಇದರ ಕಾಲಮಾನ ಸುಮಾರು ೧೦ ಸಾವಿರ ವರ್ಷಕ್ಕಿಂತಲೂ ಪ್ರಾಚೀನದ್ದಾಗಿದೆ. ಇದು ಇಂದಿನ ರಶಿಯಾ ದೇಶದ ಅಜರಬೈಜನ ದೇಶದ ರಾಜಧಾನಿ 'ಬಾಕು'ಗೆ ಸಮೀಪದ ಪುರಾತನ ಜನವಸತಿ ಇದ್ದ ಕುರುಹುಗಳಲ್ಲಿ ದೊರೆತಿದೆ. ಕುರಿ ಮತ್ತು ಹಡಗಿನ ಚಿತ್ರವಿರುವುದರಿಂದ ಈ ಪ್ರಾಣಿಯ ಸಾಕಾಣಿಕೆಯು ಸಾಕಷ್ಟು ಕಾಲ ಹಿಂದಿನದು ಎಂದು ಕಂಡು ಬರುತ್ತದೆ."[೨] ಕುರಿ ಸಾಕಾಣಿಕೆಯು ಗುಡ್ಡ-ಬೆಟ್ಟ, ಗಿರಿ-ಕಂದರಗಳಲ್ಲಿ ಮಾತ್ರ ಕಂಡು ಬರದೇ ಸಮುದ್ರ ಪ್ರದೇಶದಲ್ಲಿಯೂ ಸಾಕುತ್ತಿದ್ದ ಬಗ್ಗೆ ತಿಳಿದು ಬರುತ್ತದೆ.

"ಇತ್ತೀಚಿನ ಕೆಲವು ಸಂಶೋಧನಗಳ ಪ್ರಕಾರ ನವಶಿಲಾಯುಗದಲ್ಲಿಯೇ ಮೊಟ್ಟ ಮೊದಲು ಬುಡಕಟ್ಟು ಜನಾಂಗಗಳು ಕುರಿ ಮತ್ತು ಮೇಕೆ ಸಾಕುತ್ತಿರುವುದು ಕಂಡು ಬಂದಿದೆ. ಇವರನ್ನೇ ಕುರುಬರೆಂದು ಕರೆಯಲಾಯಿತು ಎಂದು ಎಂ. ಎಸ್. ರಾಧವಾ ಹೇಳುತ್ತಾರೆ. (Sheep and Goats were the first to be domesticated in Neolithic period) ಮೆಸೋಪೊಟೇಮಿಯಾ(ಇರಾಣ)ದಲ್ಲಿ ಬೆಳೆದ ಸುಮೇರಿಯನ್ ನಾಗರಿಕತೆಯಲ್ಲಿ (ಕ್ರಿ. ಪೂ. ೩೦೦೦) ಈಜಿಪ್ತಗೆ ತದ್ವಿರುದ್ಧವಾದ ಸ್ಥಿತಿ ಅಂದು ಇತ್ತು. ಹಾಲು, ಮಾಂಸಕ್ಕಾಗಿ ಹಾಗೂ ವಿಪುಲ ಉಣ್ಣೆಗಾಗಿ ಕುರಿಗಳನ್ನು ಭಾರಿಪ್ರಮಾಣದಲ್ಲಿ ಪಳಗಿಸಿ ಸಾಕುತ್ತಿದ್ದರು. ೬೦೦೦ ಜನಸಂಖ್ಯೆಯ ಒಂದು ಗ್ರಾಮದಲ್ಲಿ ಕುರುಬರು ಒಂದೇ ದಡ್ಡಿಯಲ್ಲಿ ಸುಮಾರು ೧೦,೦೦೦ ಕುರಿಗಳನ್ನು ಸಾಕುತ್ತಿದ್ದರು. ಗ್ರೀಸದಲ್ಲಿ ಕ್ರಿ. ಪೂ. ೬೦೦೦ದಲ್ಲಿ ಪಳಗಿದ ದನ-ಕುರಿಗಳು ಇದ್ದವು ಎಂದೂ. 'ಎನ್ ಸೈಕ್ಲೋಪಿಡಿಯಾ ಬ್ರಿಟನಿಕಾ' ವಿಶ್ವಕೋಶ ಹೇಳುತ್ತದೆ. ಆದರೆ ಇವುಗಳ ಬಗ್ಗೆ ಹೆಚ್ಚು ಸಂಶೋಧನೆ ನಡೆಯಲಿಲ್ಲವೆಂದೂ ಉಲ್ಲೇಖಿಸುತ್ತದೆ. ಇದೇ ಶಬ್ದಕೋಶವು ಪ್ಯಾಲೆಸ್ಟೈನ್‌ನ 'ನಟುಫಯನ್' ಜನಾಂಗ ಮತ್ತು ಇರಾಕಿನ ತಾಸಿದರ್‌ನಲ್ಲಿ ಕಾಡು ಜಾತಿಯ ಕುರಿ-ಆಡುಗಳನ್ನು ಕ್ರಿ. ಪೂ. ೯-೭ ಸಾವಿರ ವರ್ಷಗಳ ಹಿಂದೆಯೇ

ಸಾಕುತ್ತಿದ್ದರು. ಕ್ರಿ. ಪೂ. ೧೮೦೦ರಲ್ಲಿಯೇ ಕರ್ನಾಟಕದ ಹಿರೇಕೆರೂರು ತಾಲೂಕಿನ ಹಳ್ಳೂರು ಪ್ರದೇಶದಲ್ಲಿ ಕುರುಬರು ರಾಗಿ ಬೆಳೆಯುತ್ತಿದ್ದರೆಂದೂ, ರಾಗಿಯು ಕುರುಬರ ಮುಖ್ಯ ಆಹಾರವಾಗಿತ್ತೆಂದು ಎಂ. ಎಸ್. ನಾಗರಾಜ ಹೇಳುತ್ತಾರೆ. ಎಡಗರ ಥರ್ಸಟನ್ ಎಂಬುವವರು ಕರ್ನಾಟಕದ ಪ್ರಾಚೀನ ಬುಡಕಟ್ಟು ಜನಾಂಗದ ಸಮಾಧಿಗಳನ್ನು ಗುರುತಿಸಿ ಉತ್ಖನನ ನಡೆಸಿದ್ದಾರೆ. ಆ ಸಮಯದಲ್ಲಿ ಇಂದಿನ ಬಾಗಲಕೋಟೆ ಜಿಲ್ಲೆಯ ಕಲಾದಗಿಯಲ್ಲಿ ದೊರೆತ ಸಮಾಧಿಯ ಬಗ್ಗೆ ಬರೆಯುತ್ತಾ : ಈ ಸಮಾಧಿಯ ನಾಲ್ಕು ಕಡೆ ೧೮ ಅಂಗುಲ ದಪ್ಪದ ನಾಲ್ಕು ಕಲ್ಲುಗಳನ್ನು ಜೋಡಿಸಲಾಗಿದೆ. ಇದರ ತಳಭಾಗದಲ್ಲಿ ವೃತ್ತಾಕಾರ ಎರಡು ಕಲ್ಲುಗಳನ್ನು ಜೋಡಿಸಲಾಗಿದೆ. ಸಮಾಧಿಯ ಮೇಲೆ ದಪ್ಪನೆಯ ಕಲ್ಲು ಚಪ್ಪಡಿಯನ್ನು ಮುಚ್ಚಲಾಗಿದೆ. ಇದು ಕುರುಬ ಬುಡಕಟ್ಟಿನ ವ್ಯಕ್ತಿಯದೆಂದು ಅವರು ಹೇಳುತ್ತಾರೆ. (Edgar Thurston records the continuatation of megalith building practices of different tribes of Karanataka.... Writing concerning the Kurumbas of Shephards caste ....) (making of History Sakip.54). ಇದು ಲೋಹಯುಗಕ್ಕೆ ಸಂಬಂಧಿಸಿದ ಸಮಾಧಿಯಾಗಿದೆ. ಇದರಿಂದ ಕುರುಬರು ಆ ಕಾಲಕ್ಕೆ ನಾಗರಿಕರಾಗಿದ್ದರು ಎಂದು ಹೇಳಲಾಗಿದೆ. ಕೊಪ್ಪಳದ ಗವಿಮಠದ ಪ್ರದೇಶದಲ್ಲಿ ಉದ್ದನೆಯ ಗವಿಯಲ್ಲಿ ಆಕಳು ಮತ್ತು ಟಗರಿನ ರೇಖಾಚಿತ್ರಗಳಿರುವುದನ್ನು ಸಂಶೋಧಕರು ಕಂಡುಹಿಡಿದಿದ್ದಾರೆ. ಚಿತ್ರ ಕೆತ್ತನೆಗೆ ಕಬ್ಬಿಣ ಬಳಸಿರುವುದು ನಿಶ್ಚಿತವಾಗಿರುವುದಾಗಿ ಸಂಶೋಧನೆಯಿಂದ ಸಿದ್ಧವಾಗಿದೆ. ಆದ್ದರಿಂದ ಬೃಹತ್ ಶಿಲಾಯುಗದ ಸಮಯದಲ್ಲಿ ಈ ಭಾಗದಲ್ಲಿ ಕುರಿಗಾರಿಕೆ ಮತ್ತು ದನಗಾರಿಕೆ ಇರುವುದನ್ನು ಇದು ಸ್ಪಷ್ಟಪಡಿಸುತ್ತದೆ."[೮]

ಪ್ರಪಂಚದ ಪ್ರಾಚೀನ ನಾಗರಿಕತೆಗಳಾದ ಈಜಿಪ್ತ, ಮೆಸೋಪೊಟೇಮಿಯಾ, ಸುಮೇರಿಯಾ, ಮಾಯಾ, ಗ್ರೀಕ್, ರೋಮನ್, ಚೀನಾ ಮುಂತಾದವುಗಳಂತೆ ಭಾರತದ ಸಿಂಧೂ ನಾಗರಿಕತೆಯು ಪ್ರಾಚೀನ ನಾಗರಿಕತೆಯಾಗಿದೆ. ಸಿಂಧೂ ಕಣಿವೆಗಳಲ್ಲಿ ನಡೆದ ಉತ್ಖನನದಲ್ಲಿ ದೊರೆತ ವಸ್ತುಗಳನ್ನು ಅವಲೋಕಿಸಿದಾಗ ಅವರು ಪಶುಪಾಲಕರಾಗಿದ್ದುದು ಕಂಡು ಬರುತ್ತದೆ. ಪಶುಪಾಲಕರು ವೇದ ಪೂರ್ವ ಕಾಲದಿಂದಲೂ ಭಾರತದ ಮೂಲ ನಿವಾಸಿಗಳು ಎಂಬುದನ್ನು ಸಾಮಾನ್ಯವಾಗಿ ಎಲ್ಲ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕುರುಬರು ಈಜಿಪ್ತ, ಏಶಿಯಾ ಹಾಗೂ ಆಸ್ಟ್ರೇಲಿಯಾದವರೆಗೆ ವಾಸವಾಗಿದ್ದರೆಂಬುದು ವೇದ, ಉಪನಿಷತ್, ಬೈಬಲ್, ಖುರಾನ, ಮಹಾಭಾರತ ಮತ್ತು ರಾಮಾಯಣಗಳಿಂದ ತಿಳಿದುಬರುತ್ತದೆ.

ದ್ರಾವಿಡರೇ, ಭಾರತದ ಮೂಲಿಗರೆಂದು ಹೆಚ್ಚು ಜನ ವಿದ್ವಾಂಸರ ಅಭಿಪ್ರಾಯವಾಗಿದೆ. ದ್ರಾವಿಡರು ಮೂಲತಃ ಬೇಟೆಗಾರ ಜನಾಂಗದವರು. ದ್ರಾವಿಡರ ಮೂಲ ಸ್ಥಾನದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ೧೯೯೯ ರಲ್ಲಿ ಪ್ರೊ. ಸ್ಪೀವನ್ ಆಫನ್ ಹೈವನ ಎಂಬ ಸಂಶೋಧಕ ಖಂಡಾಂತರ ಮೂಲ ನಿವಾಸಿಗಳ D.N.A. (Deokyribo Nucleic Acid) R.N.A (Ribo Nucleic Acid) ಗಳನ್ನು ಆಧಾರವಾಗಿಟ್ಟುಕೊಂಡು ಈ ಬಗ್ಗೆ ಸಂಶೋಧನೆ ಕೈಕೊಂಡು, ಪ್ರಪಂಚದಲ್ಲಿ ಆಧುನಿಕ ಮಾನವವ ಜನ್ಮ ಮಧ್ಯ ಆಫ್ರಿಕಾದ ಇಂದಿನ ಇಥೋಪಿಯಾ ಎಂದು ತಮ್ಮ ಸಂಶೋಧನೆಯಲ್ಲಿ ವಿವರಿಸಿದ್ದಾರೆ.

ಆರ್ಯರ ಮೊದಲನೆಯ ತಂಡ ಭಾರತಕ್ಕೆ ಆಗಮಿಸಿದ್ದು ಕುರಿಗಾರರಾಗಿ, ನಂತರ ದನಗಾರರಾಗಿ. ಭಾರತದ ಮೂಲನಿವಾಸಿಗಳಾದ ದ್ರಾವಿಡರು ಕುರಿಗಾರರಾಗಿದ್ದರು. ಸಿಂಧೂ ಬಯಲು ಪ್ರದೇಶವು

ಪಶುಪಾಲನೆಗೆ ಅನುಕೂಲವಾಗಿದ್ದು ಕುರಿ ಮತ್ತು ಕುರಿ ಉತ್ಪನ್ನಗಳಿಗೆ ಪ್ರಸಿದ್ಧವಾದ ಪ್ರದೇಶವಾಗಿತ್ತು. ಇದನ್ನು ಅರಿತುಕೊಂಡ ಆರ್ಯರು ಭಾರತಕ್ಕೆ ವಲಸೆ ಬಂದಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಪಶುಪಾಲಕರಾಗಿ ಆಗಮಿಸಿದ ಆರ್ಯರಿಗೆ ಸಿಂಧೂ ಬಯಲಲ್ಲಿ ಸ್ಥಿರವಾಗಿ ನೆಲೆನಿಲ್ಲುವ ವಿಚಾರ ಆರಂಭದಲ್ಲಿ ಇರಲಿಲ್ಲ. ಆದರೆ ಇಲ್ಲಿ ಅನುಕೂಲಕರ ವಾತಾವರಣವು ಅವರನ್ನು ಇಲ್ಲಿಯೇ ಸ್ಥಿರವಾಗಿ ನಿಲ್ಲುವಂತೆ ಪ್ರಚೋದಿಸಿತು. ಆರ್ಯರ ಧನಗಾರಿಕೆ ಮತ್ತು ದ್ರಾವಿಡರ ಕುರಿಗಾರಿಕೆ ಎರಡೂ ಪಶುಪಾಲನೆಗಳೇ ಆಗಿದ್ದವು. ಪ್ರಾರಂಭದಲ್ಲಿ ಇಬ್ಬರಲ್ಲಿ ಪರಸ್ಪರ ವಿರೋಧವಿದ್ದರೂ ಸ್ವಲ್ಪ ಸಮಯದಲ್ಲಿಯೇ ಇಬ್ಬರೂ ಹೊಂದಾಣಿಕೆಯಾಗಿದ್ದು ಕಂಡು ಬರುತ್ತದೆ.

"ಕುರಿಗಿಂತಲೂ ದನಗಳು ಹಾಲಿನ ಮತ್ತು ಮಾಂಸದ ವಿಷಯದಲ್ಲಿ ಮೇಲುಗೈ ಸಾಧಿಸಿದ್ದರಿಂದ ದ್ರಾವಿಡರಾದ ಭಾರತೀಯರು ಆರ್ಯರಿಗೆ ಮಾನಸಿಕವಾಗಿ ಸೋತರೂ ಭಾರತೀಯ ಕುರಿಗಾರರ ಜೊತೆಗೆ ಶಾಶ್ವತ ವಿರೋಧ ಕಟ್ಟಿಕೊಳ್ಳವಷ್ಟು ಆರ್ಯರು ಪ್ರಬಲರಾಗಿರಲಿಲ್ಲ. ಆರ್ಯ ಮತ್ತು ದ್ರಾವಿಡರು ಪರಸ್ಪರ ಹೊಂದಾಣಿಕೆಯಾಗಿ ದನ-ಕುರಿಗಳನ್ನು ಸಾಕತೊಡಗಿದರು. ಕಾಲಕ್ರಮೇಣ ಪಶುಪಾಲಕರನ್ನು 'ಧನಗರ' ಎಂದು ಕರೆಯಲಾಯಿತು. ದನ+ಕುರಿ= ದನಕುರಿ> ದನಗುರಿ> ದನಗರಿ>ದನಗರ> ಧನಗರ ಎಂದು ಒಂದು ಕಡೆ ರೂಪಾಂತರಗೊಂಡರೆ, ಇನ್ನೊಂದು ಕಡೆಗೆ ದನ+ಕುರಿ=ದನಕುರಿ>ದನಕರು ಎಂಬ ಶಬ್ದೋತ್ಪತ್ತಿಯನ್ನು ಪಡೆದವು. ಆದ್ದರಿಂದ ಪ್ರಾಚೀನ ಕಾಲದಲ್ಲಿ ಪಶುಪಾಲಕರನ್ನು ದನಗಾರ(ಗೋಪಾಲಕ)ರೆಂದು ಕರೆಯಲಾಗಿದೆ. ಆರ್ಯರನ್ನು ನಾವು ಬ್ರಾಹ್ಮಣ್ಯದ ದೃಷ್ಟಿಯಲ್ಲಿ ಕಾಣುತ್ತಿರುವುದು ಸರಿಯಲ್ಲ. ಒಂದಾನೊಂದು ಕಾಲದಲ್ಲಿ ಅವರೂ ಕೂಡ ಪಶುಪಾಲಕರಾಗಿದ್ದನ್ನು ನಾವು ಒಪ್ಪಲೇಬೇಕಾಗಿದೆ. ಭಾರತೀಯ ಮೂಲನಿವಾಸಿಗಳಿಗಿಂತ ಆರ್ಯರ ಬದುಕಿನ ಪದ್ಧತಿ ಉತ್ತಮ ಮತ್ತು ಸ್ವಚ್ಚತೆಯಿಂದ ಕೂಡಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಭಾರತೀಯರ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಆರ್ಯರ ಪಿತೃಪ್ರಧಾನ ಪದ್ಧತಿಯು ಹಿಂದೆ ಹಾಕಿದ್ದನ್ನು ನಾವಿಲ್ಲಿ ಕಾಣಬಹುದು."[5]

ಇನ್ನೊಂದು ಅಧ್ಯಯನದ ಮೇರೆಗೆ ಕೆಲವು ವಿವರಗಳು ಕುತೂಹಲಕರವಾಗಿ ಬಂದಿವೆ. "ಕುರುಬ ಸಮುದಾಯ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟರು, ಇವುಗಳ ಶಬ್ದಾರ್ಥಗಳನ್ನು ವಿಶ್ಲೇಷಿಸಿದರೆ 'ಕುರಿ' ಅಥವಾ 'ದನಕಾಯಿ' ವೃತ್ತಿ ಅಥವಾ ಪಾಲನೆಯನ್ನು ಸೂಚಿಸುತ್ತವೆ. ಹಿಂದಿ ಪದದ ಗಡಾರಿಯವು ಪ್ರಾಕೃತ್ ಮೂಲದಿಂದ ಬಂದಿದೆ. ಪ್ರಾಕೃತದಲ್ಲಿ ಗಾಡರ್ ಎಂದರೆ ಕುರಿ ಎಂದರ್ಥ. ಮತ್ತೆ ಕೆಲವು ವಿದ್ವಾಂಸರು ಗಡಾರ್+ಆರ್ಯನ=ಗಡಾರ್ಯ ಎಂಬುವುದಾಗಿ ರೂಪಗೊಂಡಿದ್ದು ಆರ್ಯ ಮೂಲದಿಂದ ಬಂದಿದೆ ಎನ್ನುತ್ತಾರೆ. ಹಾಗೆಯೇ ಕುರಿ, ಕುರುಬ-ಕುಂಬಗಳು ದ್ರಾವಿಡ ಮೂಲದಿಂದ ಬಂದಿದೆಯೆನ್ನಬಹುದು. 'ಧನಗರ' ಪದವೂ ದನಗಳ ಸಂಪತನ್ನು ಸೂಚಿಸುತ್ತದೆ. 'ಧನಗರ್' ಶ್ರೀಮಂತ ಎಂಬ ಅರ್ಥವೂ ಇದೆ. 'ಗಾರ್' ಎಂದರೆ ಪಶುಪಾಲಕ ಅಥವಾ ಮೇಷ ಪಾಲಕರೆಂದು ಸಮಾನ ಅರ್ಥ ನೀಡುತ್ತದೆ. ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ದೊರಕಿರುವ ಬೌದ್ಧ ಗುಹಾ ಶಾಸನದಲ್ಲಿ 'ಧನಗರ್' ಶಬ್ದವನ್ನು ಕೆತ್ತಲಾಗಿದೆ. ಈ ಗುಹೆ ಶಾಸನವು ಕ್ರಿ. ಶ. ಒಂದನೇ ಶತಮಾನ ಮತ್ತು ಮೂರನೇ ಶತಮಾನದ ನಡುವೆ ಬರುತ್ತದೆಂದು ಯೋಚಿಸಿಲಾಗಿದೆ. ಡಾ॥ ಭಗವಾನ್ ಲಾಲ ಇಂದ್ರಜಿಯವರು 'ಧನಗರ್' ಸಮಾಜದಿಂದಲೇ ಈ ಶಾಸನದ ಪದ ಬಂದಿತೆಂದು ತಿಳಿಸಿದ್ದಾರೆ, 'ಧಾಂಗ್' ಎಂದರೆ ಬೆಟ್ಟ ಅಥವಾ ಪರ್ವತ ಎಂದರ್ಥ ಬರುತ್ತದೆ. ಆದುದರಿಂದ ಇವರು

ಗುಡ್ಡುಗಾಡಿನಲ್ಲಿ ನೆಲೆಸಿದುದರಿಂದ ಇವರಿಗೆ 'ಧನಗಾರ್' ಎಂಬ ಹೆಸರು ಬಂದಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. 'ಧನಗಾರ್' ಸಮಾಜದ ಒಂದು ಉಪಪಂಗಡ 'ನಿಖ್ಖಾರ್'. ಇವರು ಬೌದ್ಧ ಮತ್ತು ಬ್ರಾಹ್ಮಣ ಮತಗಳಿಂದ ಸಂಸ್ಕರಣ ಹೊಂದಿ ನಿಖ್ಖಾರವೆಂದು ಕರೆದುಕೊಂಡಿದ್ದಾರೆ. 'ನಿಖ್ಖಾರ್' ಎಂದರೆ ಶುದ್ಧಿಯಾದವರೆಂಬ ಅರ್ಥ ಬರುತ್ತದೆ. ಆದರೆ ಇವರು ತಮ್ಮ ಮೂಲ ಸಮಾಜದವರಾದ ಧನಗರ್‌ನ ಹೆಸರುಗಳು ಮತ್ತು ಅನೇಕ ಸಂಪ್ರದಾಯಗಳನ್ನು ಹಾಗೂ ಅವರೊಡನೆ ವಿವಾಹ ಸಂಬಂಧಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಅಂದರೆ ಕುರುಬ ಸಮಾಜವೇ ಪ್ರಧಾನವಾಗಿದ್ದ ಸುದೀರ್ಘವಾದ ಮಾನವ ನಾಗರಿಕತೆಯ ಹಂತವೊಂದಿತ್ತು. ಈ ಹಂತದಲ್ಲಿ ಭಾರತದ ಕುರುಬರು ಜಗತ್ತಿನ ಇತರೆಡೆಗಳ ಕುರುಬರಿಗಿಂತ ಹೆಚ್ಚು ನಾಗರಿಕರಾಗಿದ್ದರು. ರಥಗಳ ಸಂಸ್ಕೃತಿ, ಬಾಣ ಬಿರುಸು, ಗದೆ ಖಡ್ಗ ಸಂಸ್ಕೃತಿ, ನಗರ ಸಂಸ್ಕೃತಿ ಏರ್ಪಟ್ಟಿದ್ದವು. ಸ್ನಾನ ಗೃಹಗಳ, ಕೊಳಗಳ, ನಿರ್ಮಾಣದ ಕಲ್ಪನೆ ಅಂದಿನ ಜನರಿಗಿತ್ತು. ಆದ್ದರಿಂದ ಹಾಲುಮತ ಸಂಸ್ಕೃತಿಯ ಜನರೆಂದರೆ, ಸಮುದಾಯ ಬದುಕಿನ ಜನಸಮುದಾಯವೆಂದರ್ಥ."[೧೦]

ಕುರುಬರು "ತಾವು ವಾಸಿಸುತ್ತಿದ್ದ ದ್ರಾವಿಡ ಪಂಗಡದಿಂದ ದೂರ ಚದುರಿ ಹೋಗಿದ್ದರೂ ಮತ್ತು ಈಗ ಪರಸ್ಪರ ಎಷ್ಟೇ ದೂರ ದೂರವಾಗಿ ಜೀವಿಸುತ್ತಿದ್ದರೂ ಪ್ರಾಚೀನ ಕಾಲದಲ್ಲೇ ಈ ಜನಾಂಗ ಅಸ್ತಿತ್ವದಲ್ಲಿತ್ತು ಎನ್ನುವುದಕ್ಕೆ ಕೆಲವು ಅವಶೇಷಗಳನ್ನಾದರೂ ಹೊಂದಿರುವ ಯಾವ ಪ್ರಾಂತ್ಯವೂ ಭರತ ವರ್ಷದಲ್ಲಿಲ್ಲ, ಎಂಬುದಾಗಿ Oppert ಅವರು ತಮ್ಮ 'Original Inhabitants Of India' ಎಂಬ ಗ್ರಂಥದಲ್ಲಿ ಹೇಳುತ್ತಾರೆ. ಕುರುಬರು ಭಾರತದ ಅತ್ಯಂತ ಪ್ರಾಚೀನ ಜನಾಂಗವೆಂಬುದಾಗಿಯೂ ಅವರು ಅಭಿಪ್ರಾಯ ಪಡುತ್ತಾರೆ. ಇಂದಿನ ಹಲವಾರು ಪ್ರಮುಖ ಮನೆತನಗಳಿಗೆ, ಜಾತಿಗಳಿಗೆ, ನಾಗರಿಕತೆಗೆ ಮೂಲ ಪುರುಷರು ಕುರುಬರು ಎಂಬುದು ಸ್ಪಷ್ಟವಾಗುತ್ತದೆ."[೧೧]

ಕುರುಬರು "ಆರ್ಯರೋ, ದ್ರಾವಿಡರೋ ಎಂಬ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ. "ಈ ದೇಶಕ್ಕೆ ಬೇರೆ ಕಡೆಯಿಂದ ಬಂದು, ಇಲ್ಲಿನ ಮೂಲನಿವಾಸಿಗಳನ್ನು ಗೆದ್ದು, ಒತ್ತರಿಸಿ, ಅವರೊಡನೆ ಸಂಕರಗೊಂಡು ಸಾಮ್ರಾಜ್ಯವನ್ನು ಸ್ಥಾಪಿಸಿ ನಾಗರಿಕತೆಯನ್ನು ಹರಡಿದ ಆರ್ಯರ ಪ್ರಧಾನ ಕಸುಬು ಪಶುಪಾಲನೆಯಾಗಿತ್ತು. ಕುರುಬರ ಮುಖ್ಯ ಕಸುಬು ಇಂದಿಗೂ ಪಶುಪಾಲನೆಯೇ ಆಗಿದೆ. ವೇದಗಳಲ್ಲಿ ಕುರುಬ ಜನಾಂಗವನ್ನು ಸೂಚಿಸುವ ಕೆಲವು ಪದಗಳು ಕಾಣಬರುತ್ತವೆ. ಆದುದರಿಂದ ಇಂದಿನ ಕುರುಬರು ಆರ್ಯರು ಎಂಬ ವಾದವೊಂದಿದೆ. ಆದರೆ ಇದು ಆರ್ಯ ಪೂರ್ವ ಜನಾಂಗವೆಂಬುದಕ್ಕೆ ಬಲವಾದ ಆಧಾರಗಳಿವೆ. ಬೇರೆ ಬೇರೆ ಧರ್ಮ ಮತ್ತು ಬೇರೆ ಬೇರೆ ಜನಾಂಗಗಳ ಸಂಪರ್ಕದಿಂದಾಗಿ ಕಾಲಕ್ರಮದಲ್ಲಿ ಇವರಲ್ಲಿ ಹಲವು ಜಾತಿಗಳು ಉದ್ಭವಿಸಿದವು. ಅನ್ನ ವ್ಯವಹಾರಗಳು ನಿಂತು ಹೋದವು."[೧೨]

ದಕ್ಷಿಣ ಭಾರತದಲ್ಲಿ ದೊರೆಯುವ ಅತೀ ಪ್ರಾಚೀನ ನಾಣ್ಯಗಳೆಂದರೆ, ಕ್ರಿ. ಶ. ೩ ನೇ ಶತಮಾನಕ್ಕೆ ಸೇರಿದ ಕುರುಂಬರವು ಎಂಬುದಾಗಿ ಸರ್ ಇಲಿಯಟ್ ಅಭಿಪ್ರಾಯ ಪಡುತ್ತಾರೆ. ತಮಿಳು ಕಾವ್ಯಗಳಲ್ಲಿ ಕುರುಬರ(ಹಟ್ಟಿಕಾರ)ನ್ನು 'ಕುರುನಿಲ ಮನ್ನೆಯರ' ಎಂದು ವರ್ಣಿಸಿದೆ. ಸಂಘಂ ಸಾಹಿತ್ಯದ ಪ್ರಮುಖ ಕೃತಿಯಾದ ಶಿಲಪ್ಪದಿಗಾರಂನಲ್ಲಿ ಕುರುಬರ ಕುರಿತಾದ, ಇಳ್ಳೈಯರ್, ಆಂಡರ್, ಕುರುಂಬರ್, ವಡುಗರ್ ಎಂಬ

ಉಲ್ಲೇಖಗಳು ಕಂಡು ಬರುತ್ತವೆ. ಕ್ರಿ. ಶ. ೨ ನೇ ಶತಮಾನದಲ್ಲಿ ಭಾರತಕ್ಕೆ ಭೇಟ್ಟಿ ನೀಡಿದ ವಿದೇಶಿ ಪ್ರವಾಸಿಗ ಟಾಲೆಮಿಯು 'ಆಂಡರ್' (ಕುರುಬರಲ್ಲಿ ಈಗಲೂ ಅಂಡೆಯವರೆಂಬ ಒಂದು ಪಂಗಡವಿದೆ) ಹೆಸರು ಹೇಳಿದ್ದಾರೆ. ಈ ಅಂಶಗಳ ಮೂಲಕ ಕುರುಬ ಜನಾಂಗವು ೨ ನೇ ಶತಮಾನಕ್ಕೆ ಮೊದಲೇ ತನ್ನ ಸ್ವತಂತ್ರ ಅಸ್ತಿತ್ವವನ್ನು ಸಾಧಿಸಿಕೊಂಡಿದ್ದಿತೆಂಬುದು ನಿರ್ವಿವಾದ. ಪಾಲಿ ಗ್ರಂಥಗಳಲ್ಲಿ ಬರುವ ಅಂಧ, ಅಂಧಕರು, ಆಂಡರರೂ ಒಂದೇ ಎಂದೂ ಮತ್ತು ಇವರೇ ಆಂಧ್ರರೆಂದು ಡಾ॥ ಎಸ್. ಕೃಷ್ಣಸ್ವಾಮಿ ಆಯ್ಯಂಗಾರ್ ತಿಳಿಸಿದ್ದಾರೆ.

"ಈ ಆಂಧ್ರರ ಹೆಸರು ಐತರೇಯ ಬ್ರಾಹ್ಮಣದಲ್ಲಿ ಬರುತ್ತದೆ. 'ರುದ್ರಾಧ್ಯಾಯದಲ್ಲಿ ಪತ್ತಿ (ಪಟ್ಟಿ-ಹಟ್ಟಿ)ಗಳ ಉಲ್ಲೇಖವಿದೆ. ಆದ್ದರಿಂದ ಈ ಜನಾಂಗವು ವೇದ ಕಾಲದಲ್ಲೇ ಸುವಿಖ್ಯಾತವಾಗಿತ್ತೆಂದೂ ಕ್ರಿ. ಶ. ೧೨೦೦-೨೦೦೦ ವರ್ಷಗಳಷ್ಟು ಪ್ರಾಚೀನವೆಂದೂ, ಪ್ರಸಿದ್ಧ ಸಂಶೋಧಕರಾದ ಶಂ. ಬಾ. ಜೋಶಿಯವರು ಅಭಿಪ್ರಾಯ ಪಡುತ್ತಾರೆ. ಸುಮಾರು ೨ನೇ ಶತಮಾನದ ಕವಿಯೊಬ್ಬ ಯಾದವ ಸ್ತ್ರೀಯರನ್ನು 'ಅಂಡರ್ ಮಹಿಳರ್' ಎಂದು ಕರೆದಿರುವುದರಿಂದ ಗೋವಳರಾದ ಯಾದವರು ಅಂಡೆ ಕುರುಬರು ಪಂಗಡಕ್ಕೆ ಸೇರಿದವರಾಗಿರಬೇಕೆಂದು ಡಾ॥ ಎಸ್. ಕೃಷ್ಣಸ್ವಾಮಿಯವರು ಸೂಚಿಸಿರುತ್ತಾರೆ. ಆರ್ಕಾಟ್, ತಂಜಾವೂರ್ ಮುಂತಾದ ಕಡೆಗಳಲ್ಲಿ ಕುರುಬರನ್ನು 'ಯಾದವರು' ಎಂಬುದಾಗಿ ಕರೆಯುತ್ತಿರುವುದೂ ಈ ವಾದಕ್ಕೆ ಪುಷ್ಟಿ ಕೊಡುತ್ತದೆ. ಈ ಯಾದವರು, ಇವರೊಳಗಿನ ಅಂಧಕ ವೃಷ್ಣಿಗಳೂ ದ್ರಾವಿಡರೆಂದೂ ಜೀನ್ ಪ್ರಿಲಸ್ಕಿಯವರು ಸಿದ್ಧಾಂತಿಸಿದ್ದಾರೆ. ವೃಷ್ಣಿ ಎಂದರೆ ಟಗರು. ವೃಷ್ಣಿಗಳೆಂದರೆ, ಟಗರುಗಳನ್ನು ಅರ್ಥಾತ್ ಕುರಿಗಳನ್ನು ಸಾಕಿ ಬದುಕುವವರು. ಅಂಡೆಯವರ ವೃತ್ತಿಯೂ ಇದೆ. ಈ 'ಯದು' ಹಾಗೂ 'ತುರ್ವಶರು' ಎಂಬ ಹೆಸರು ಋಗ್ವೇದದಲ್ಲಿ ಬರುತ್ತದೆ. ಇವು ವ್ಯಕ್ತಿಗಳ ಹೆಸರಾಗಿರದೆ ಜನಾಂಗಗಳ ಹೆಸರಾಗಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ 'ಯದು' ಗಳಲ್ಲಿ ಅಂಧಕ ವೃಷ್ಣಿಗಳು ಸೇರುತ್ತಾರೆ. ಈ ವೇದ ಕಾಲದ ಆಂಧ್ರರು ದ್ರಾವಿಡರೇ ಎಂಬುದಾಗಿ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, (Cambridge History of India) ಕೃತಿಯ ಲೇಖಕರು ಪ್ರತಿಪಾದಿಸುತ್ತಾರೆ. ಹಡಗಿನ ಚಿತ್ರವುಳ್ಳ ಕುರುಬರ ನಾಣ್ಯಗಳು ಅವರ ಪರದೇಶ ವ್ಯಾಪಾರದ ಕುರುಹುಗಳಾಗಿವೆ. ದಕ್ಷಿಣಾ ಪಥದಲ್ಲಿ ದೊರೆಯುವ ಗೋರಿ ಮೊದಲಾದ ಅವಶೇಷಗಳು ಪ್ರಾಚೀನ ಕುರುಬರವು ಎಂದು ಸರ್ ಇಲಿಯಟ್ ರವರ ಅಭಿಪ್ರಾಯ. ಇವು ಕ್ರಿ. ಪೂ. ೪೦೦೦ ರಿಂದ ೫೦೦೦ ವರ್ಷಗಳಷ್ಟು ಪ್ರಾಚೀನವಾದವುಗಳೆಂದು ವಿದ್ವಾಂಸರು ಊಹಿಸಿದ್ದಾರೆ. ವಂಶಶಾಸ್ತ್ರಜ್ಞರಾದ ಹ್ಯಾಡೋನ್‌ರವರು ಕುರುಬರು ನಿಸ್ಸಂದೇಹವಾಗಿ ದ್ರಾವಿಡರೆಂದು ಹೇಳುತ್ತಾರೆ. ಈ ಎಲ್ಲಾ ಕಾರಣಗಳಿಂದ ಕುರುಬ ಜನಾಂಗವು ಸುಮಾರು ಆರೇಳು ಸಾವಿರ ವರ್ಷಗಳಷ್ಟು ಪ್ರಾಚೀನವಾದುದೆಂದು ಮತ್ತು ದ್ರಾವಿಡ ಪಂಗಡವೆಂದೂ ಅಭಿಪ್ರಾಯಪಡಬಹುದು."[೧೩]

"ಪ್ರಾಚೀನ ಶಾಸನಗಳಲ್ಲಿ 'ಕುರುಬರ ಹಟ್ಟಿ', 'ಕುರುಬರ ಹಳ್ಳಿ', 'ಕುರುಬರ ವಿಷಯ' ಇಂತಹ ವಿಷಯಗಳನ್ನು ಹೇರಳವಾಗಿ ಕಾಣಬಹುದು. ದಕ್ಷಿಣ ಭಾರತದಲ್ಲಂತೂ ಅತ್ಯಂತ ಪ್ರಾಚೀನರೆಂದರೆ ಇವರೇ. ಇವರು ಮೊದಲು ರಾಜ್ಯ ಸ್ಥಾಪನೆ ಮಾಡಿದ ಪಟ್ಟಣ ಪುಲಾಲ; ಆ ರಾಜನ ಹೆಸರು ಕಾಮಾಂಧಪ್ರಭು; ಆ ರಾಜ್ಯದ ಹೆಸರು 'ಕುರುಂಬರ ನಾಡು'. ಮಲಬಾರು ಜಿಲ್ಲೆಯಲ್ಲಿ ಈಗಲೂ ಈ ಹೆಸರಿನ ಪ್ರದೇಶವಿದೆ. ಈ

ರಾಜ್ಯಕ್ಕೆ ಕಸುಬಾ ಕುರುಂಬರ್ ನಾಡು ಇತ್ಯಾದಿಯಾಗಿ ಏಳು ತಾಲ್ಲೂಕುಗಳಿವೆ. ಇವರು ಕುರುಂಬ ರಾಜರು, ಕುರುಂಬ ರಾಯರು, ಕುರುಂಬ ಕ್ಷತ್ರಿಯರು, ಪಲ್ಲವ ರಾಜರು, ಕದಂಬ ಕ್ಷತ್ರಿಯರು ಎಂಬ ಹೆಸರುಗಳಿಂದ ರಾಜ್ಯಗಳನ್ನು ಸ್ಥಾಪಿಸಿ ಆಳಿದ್ದಾರೆ. ರೆವರೆಂಡ್ ಎಫ್. ಮೆಟ್ಜ್ ಅವರು ಕುರುಬರು ನೀಲಗಿರಿ ಪ್ರದೇಶಗಳಲ್ಲಿ ನೆಲೆಸಿದ ಬಗೆಗೆ ಬರೆಯುತ್ತಾ, "ಒಂದು ಕಾಲದಲ್ಲಿ ಇದು ಕುರುಬರ ಪ್ರಬಲ ನೆಲೆಯಾಗಿತ್ತು.. ... ಮೊಟ್ಟ ಎಂಬ ಹೆಸರಿನ ಹಳ್ಳಿಗಳೂ, ಅವರ ಮನೆಗಳ ಅವಶೇಷಗಳೂ ಇಂದೂ ಕಾಣಬರುತ್ತವೆ. ... ಹಲವು ವರ್ಷಗಳ ಹಿಂದೆ ಹಿಂದಿನ ಕುರುಬ ಪಟ್ಟಣದ ಒಂದು ನಿವೇಶನವನ್ನು ನಾನು ಕಂಡುಹಿಡಿದೆ...." ಇತ್ಯಾದಿಯಾಗಿ ಹೇಳುತ್ತಾರೆ. ಮೆಕೆಂಜಿಯವರ ಸಂಗ್ರಹದಲ್ಲಿ ತಮಿಳುನಾಡಿನ ಕುರುಬರ ಬಗ್ಗೆ ಮಹತ್ವದ ಹಾಗೂ ಕುತೂಹಲಕರವಾದ ಮಾಹಿತಿ ದೊರೆಯುತ್ತದೆ. ಹಿಂದೆ ತೊಂಡಮಂಡಲ ಪ್ರದೇಶ ಕಾಡುಮೃಗಗಳಿಂದ ಕೂಡಿದ ದಟ್ಟವಾದ ಅರಣ್ಯ ಪ್ರದೇಶವಾಗಿತ್ತು. ಬೇಡರೆಂಬ ಬೇಟೆಗಾರರು ಅದರಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡರು. (ಅದೀಗಲೂ ಬೇಡರ ಪಾಳ್ಯಮ್ ಎಂದು ಕರೆಯಲ್ಪಡುತ್ತಿದೆ) ಈ ವೇಳೆಗೆ ಕರ್ನಾಟಕದ ಕುರುಬರು ಪ್ರಬಲರಾಗಿ ಉಳಿದ ನಿವಾಸಿಗಳನ್ನು ಬೆದರಿಸಲಾರಂಭಿಸಿದರು. ಅವರು ತೊಂಡ ಮಂಡಲದ ಗಡಿಯವರೆಗೂ ವಿಸ್ತರಿಸಿದರು. ಅವರಲ್ಲಿ ಕೆಲವರು ಉತ್ತರ ಮಲ್ಲೂರಿನ ಸಮೀಪದ ಶಾಲಪಾಕ್ಕಮ್‌ನಲ್ಲಿ ನೆಲೆಸಿದರು. ಅವರನ್ನು ಈಗಲೂ ಕುರುಬರೆಂದೇ ಕರೆಯಲಾಗುತ್ತಿದೆ."[೧೪] ಎಂಬುದನ್ನು ತಿಳಿಸುವ ವಿದ್ವಾಂಸರು ಮುಂದುವರೆದು ಕುರುಬ ರಾಜ್ಯದ ತೊಂಡಮಂಡಲದ ಬಗ್ಗೆ ಬರೆಯುತ್ತಾ, "ಇಲ್ಲಿಯ ಕುರುಂಬರು ಕ್ರೂರಿಗಳೆಂದೂ, ಅನಾಗರಿಕರೆಂದೂ, ಶತ್ರುಗಳಿಂದ ಪರಿಗಣಿತವಾಗಿದ್ದರೂ ಆ ವೇಳೆಗಾಗಲೇ ಸಾಕಷ್ಟು ನಾಗರಿಕತೆಯನ್ನು ಪಡೆದಿದ್ದರು. ಚೋಳರ ವಶವಾದ ಆನಂತರ ಈ ಕುರುಂಬ ಭೂಮಿಗೆ ತೊಂಡಮಂಡಲವೆಂಬ ಹೆಸರಾಗಿ ಅಲ್ಲಿಯ ರಾಜನನ್ನು ತೊಂಡಮಾನ್ ಎಂದು ಕರೆಯುತ್ತಿದ್ದರು. ತಿರುಚನಾಪಳ್ಳಿ ಜಿಲ್ಲೆಯ ಪುದುಕೋಟೆಯ ರಾಜನಿಗೆ ಈಗಲೂ ಈ ಬಿರುದಿದೆ. ಈತ 'ಕಳ್ಳ'ರ ಮುಖಂಡ. ಇವರನ್ನು ಕುರುಂಬರ ಒಂದು ಪಂಗಡವೆಂದು ಅಪರ್ಟ್, ಟೇಲರ್, ಮೆಕೆಂಜಿ ಮುಂತಾದ ವಿದ್ವಾಂಸರು ಗುರುತಿಸಿದ್ದಾರೆ. ಅವರು ತೇವರ್ (ದೇವರ್) ಎಂದೂ ತಮ್ಮ ಹೆಸರಿನ ಜೊತೆಗೆ ಇಟ್ಟುಕೊಳ್ಳುತ್ತಾರೆ. ಈ ಕುರುಂಬ ಸಾಮಾಜ್ರ್ಯ ನಾಶವಾದರೂ ಇವರು ಬೇರೆ-ಬೇರೆ ಕಡೆಗಳಿಗೆ ಹೋಗಿ ಅಲ್ಲಿ ತಮ್ಮ ರಾಜ್ಯಗಳನ್ನು ಸ್ಥಾಪಿಸಿದರೆಂದು ತಿಳಿದು ಬರುತ್ತದೆ."[೧೫] ಎಂದು ಅಭಿಪ್ರಾಯ ಪಡುತ್ತಾರೆ.

ಪಶುಪಾಲಕರಾದ ಕುರುಬ(ದ್ರಾವಿಡ)ರ ಚಾರಿತ್ರಿಕ ಮೂಲವನ್ನು ಶೋಧಿಸಿದಾಗ ಕಂಡು ಬರುವ ಒಂದು ಅಂಶವೆಂದರೆ, ಇವರು ಆರ್ಯಪೂರ್ವ ಜನಾಂಗವೆಂದು ತಿಳಿದುಬರುತ್ತದೆ. ಸುಮಾರು ಆರೇಳು ಸಾವಿರ ವರ್ಷಗಳ ಸುಧೀರ್ಘ ಇತಿಹಾಸವುಳ್ಳ ಈ ಜನಾಂಗ ಭಾರತದ ಎಲ್ಲ ಪ್ರದೇಶಗಳಲ್ಲಿ ಹರಿದುಹಂಚಿಹೋಗಿದ್ದಾರೆ. ಕಾಲಚಕ್ರದಲ್ಲಿ ಈ ಜನಾಂಗವು ಒಮ್ಮೆ ಪ್ರಬಲವಾಗಿ, ಮತ್ತೊಮ್ಮೆ ಕ್ಷೀಣವಾಗಿ, ಇನ್ನೊಮ್ಮೆ ಸಮೃದ್ಧವಾಗಿ ಬೆಳೆದು ಬಾಳಿದೆ. ವಿವಿಧ ಮತ, ಪಂಥ, ಸುಧಾರಣಾ ಪ್ರವಾಹಗಳಿಗೆ ತುತ್ತಾದರೂ ಕೂಡ ಈ ಜನಾಂಗವು ತಮ್ಮ ವಿಶಿಷ್ಠ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಇನ್ನೂ ದೀರ್ಘವಾದ, ಆಳವಾದ, ವೈಜ್ಞಾನಿಕವಾದ ದೃಷ್ಠಿಯಿಂದ ಈ ಜನಾಂಗದ ಕುರಿತು ಅಧ್ಯಯನ ಮಾಡಿದಾಗ ಮಾತ್ರ

ಮಸುಕಾಗಿರುವ ಕುರುಬ ಜನಾಂಗದ ಇತಿಹಾಸ ಹೆಚ್ಚು ಸ್ಪಷ್ಟವಾಗಿ ಕಂಡು ಬರಲು ಸಾಧ್ಯವಾಗುತ್ತದೆ. ಇದರಿಂದ ನಮ್ಮ ನಾಡಿನ ಸಂಸ್ಕೃತಿ ಮತ್ತು ಇತಿಹಾಸದ ಬಗ್ಗೆ ಬೆಳಕನ್ನು ಚೆಲ್ಲಬಹುದು.

ಕುರುಬರು ಬುಡಕಟ್ಟು ಜನರಾದ್ದರಿಂದಲೇ ಎಲ್ಲ ದೇಶಗಳಲ್ಲೂ ಮೊಟ್ಟಮೊದಲಿಗೆ ರಾಜ್ಯಕಟ್ಟಿ ಆಳಿದವರಾಗಿದ್ದಾರೆ. ಅಂದು ವಿಭಿನ್ನ ಕುಲಗಳ ಗೋಪಾಲಕರು, 'ಧನಗರ್'ರರು, ಕುರಿ ಪಾಲಕರು ತಮ್ಮದೆ ಸಮುದಾಯಗಳನ್ನು ಹೊಂದಿದ್ದು ಸಣ್ಣಪುಟ್ಟ ಪಾಳೆಯ ಪಟ್ಟುಗಳನ್ನು ಸ್ಥಾಪಿಸಿಕೊಂಡಿದ್ದರು. ಇದು ಕ್ರಿ. ಶ. ದ ನಂತರದ ಸ್ಥಿತಿ ಆಗಿದೆ. ಹೀಗೆ ಕುರುಬರು ಸಮಾಜ, ರಾಜ್ಯ, ಗುರುವರ್ಗ, ಆಡಳಿತ, ಸೇನೆ, ಶ್ರೇಷ್ಠಿಗಳು, ವೈಶ್ಯರು, ಕಾರ್ಮಿಕರು, ರೈತರು, ಪಶುಪಾಲಕರು ಎಂಬ ವೃತ್ತಿಗಳನ್ನು, ಸಂಬಂಧಗಳ ಸಾಂಸ್ಥೀಕರಣವನ್ನು ಹುಟ್ಟು ಹಾಕಿದರು.

"ಕರ್ನಾಟಕದಲ್ಲಿ ಕುರುಬರು ಪ್ರಾಚೀನ ಬುಡಕಟ್ಟೆಂದು ಗುರುತಿಸಲಾಗಿದೆ. ಇವರಲ್ಲಿ ಪ್ರಮುಖವಾಗಿ ಊರ ಕುರುಬರು, ಜೇನು ಕುರುಬರು ಮತ್ತು ಕಾಡು ಕುರುಬರೆಂದು ಭಿನ್ನ ವರ್ಗಗಳಿವೆ. ಕರ್ನಾಟಕದಲ್ಲಿರುವ ಕುರುಬರಿಗೆ ಗೊಂಡ, ರಾಜಗೊಂಡ, ಕುರುಬ, ಬೆಟ್ಟ ಕುರುಬ, ಮುಳ್ಳು ಕುರುಬ, ವಕ್ಕೆ ಕುರುಬ, ಜಾಡಿ ಕುರುಬ, ಹಂಡೆ ಕುರುಬ, ಹಟಗಾರ, ಕರಗಾರ ಎಂಬ ಹೆಸರಿನಿಂದ ಕರೆಯಲಾಗುತ್ತದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ."[೧೬]

೨.೧.೩ ಶಂಬಾ ಜೋಶಿಯವರ ಶೋಧಗಳು :

ಭಾರತದಲ್ಲಿನ ಕೆಳವರ್ಗದ ಮತ್ತು ಅಲಕ್ಷಿತ ಜನಾಂಗಗಳ ಇತಿಹಾಸ, ಪುರಾಣ, ಮೌಖಿಕ ಜ್ಞಾನಗಳ ಅಧ್ಯಯನ ಆರಂಭವಾದದ್ದು ಬ್ರಿಟಿಷರಿಂದ ಎನ್ನುವುದರಲ್ಲಿ ಎರಡು ಮಾತಿಲ್ಲ. ಬ್ರಿಟಿಷ ವಿದ್ವಾಂಸರಲ್ಲಿನ ವೈಯಕ್ತಿಕ ಪ್ರೀತಿ ಮತ್ತು ಆಸಕ್ತಿಗಳ ಫಲವಾಗಿ ಭಾರತದಲ್ಲಿನ ಹಲವು ಸಂಸ್ಕೃತಿಗಳ ಅಧ್ಯಯನ, ಸಂಶೋಧನೆ, ವ್ಯಾಖ್ಯಾನಗಳು ಆರಂಭವಾದವು. ನಂತರದಲ್ಲಿ ಅನೇಕ ಭಾರತೀಯ ವಿದ್ವಾಂಸರು ಇದೇ ಹಾದಿಯಲ್ಲಿ ಸಾಗಿ ಮಹತ್ವಪೂರ್ಣವಾದ ವಿಷಯಗಳನ್ನು ಪತ್ತೆ ಹಚ್ಚುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಇತಿಹಾಸದಿಂದ ವಂಚಿತವಾಗಿದ್ದ ಸಮುದಾಯಗಳ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ಸಾಗುತ್ತಿದ್ದು, ಅಂತಹ ಸಮುದಾಯಗಳಲ್ಲಿ ಕುರುಬ ಸಮುದಾಯವೂ ಒಂದು. ಸುದೀರ್ಘ ಪರಂಪರೆಯನ್ನು ಹೊಂದಿರುವ ಕುರುಬ ಜನಾಂಗದ ಕುರಿತಂತೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿವರಗಳು ಬ್ರಿಟಿಷ ಆಡಳಿತದವರೆಗೂ ದೊರೆಯುವುದಿಲ್ಲ. ಬ್ರಿಟಿಷರ ಆಡಳಿತ ಪೂರ್ವದಲ್ಲಿ, ಭಾರತದ ಚರಿತ್ರೆ ಮೇಲ್ವರ್ಗದ ಮತ್ತು ಉಳ್ಳವರ ಪರವಾಗಿಯೇ ರಚಿತವಾಗಿತ್ತು. ಇತಿಹಾಸ ಏಕಮುಖಿಯಾದ ದೃಷ್ಟಿಕೋನದಲ್ಲಿ ವಿವರಿಸಲ್ಪಟ್ಟಿತ್ತು. ಇಂಥ ಚರಿತ್ರೆಯನ್ನು ಈಗ ಪುನರ್ ರಚಿಸುವ ಅವಶ್ಯಕತೆ ಇದೆ. ಏಕೆಂದರೆ ಇತಿಹಾಸವನ್ನು ಒಂದೇ ದೃಷ್ಟಿಕೋನದಿಂದ ವಿವರಿಸಿದರೆ ಅದೆಷ್ಟೋ ಜನಾಂಗಗಳ ಸಾಂಸ್ಕೃತಿಕ ಇತಿಹಾಸವನ್ನು ನಾವು ಕಳೆದುಕೊಳ್ಳಬೇಕಾಗುತ್ತದೆ. ಕುರುಬ ಜನಾಂಗದ ಇತಿಹಾಸವನ್ನು ಹತ್ತು ಹಲವು ದಿಕ್ಕುಗಳಿಂದ ವಿವೇಚಿಸಿ ಇತಿಹಾಸವನ್ನು ಶೋಧಿಸಿದಾಗ ಮಾತ್ರ ನೈಜ ಚರಿತ್ರೆಯನ್ನು ತಿಳಿಯಬಹುದಾಗಿದೆ.

ಕುರುಬ–ಹಾಲುಮತ ಜನಾಂಗದ ಬಗ್ಗೆ ಮೊದಲ ಬಾರಿಗೆ ಹೊಸಬೆಳಕನ್ನು ಚೆಲ್ಲಿ, ತಲಸ್ಪರ್ಶಿಯ ಅಧ್ಯಯನ, ಸಂಶೋಧನೆ ನಡೆಸಿ, ಆಧಾರಸ್ಥಿತವಾದ ಮತ್ತು ಸುಲಭವಾಗಿ ಅಲ್ಲಗಳೆಯಲಾಗದ ಸಾಕ್ಷ್ಯ–ಮಾಹಿತಿಗಳನ್ನು ಸಂಗ್ರಹಿಸಿ, ವ್ಯಾಖ್ಯಾನಮಾಡಿ, ಸಾಂಸ್ಕೃತಿಕ ಸಂಶೋಧಕರನ್ನು ಅಚ್ಚರಿಗೊಳಿಸಿದವರು ಮಹಾ ಸಂಶೋಧಕ ಡಾ. ಶಂಬಾ ಜೋಶಿಯವರು. ಹಾಲುಮತ ಸಂಸ್ಕೃತಿಯನ್ನು ಕುರಿತಂತೆ ಆಳವಾದ ಮತ್ತು ವ್ಯಾಪಕವಾದ ಸಂಶೋಧನೆ ಕೈಕೊಂಡವರಲ್ಲಿ ಇವರು ಅಗ್ರಗಣ್ಯರು. ಇವರಿಂದ ರಚಿತವಾದ 'ಹಾಲುಮತ ದರ್ಶನ' ಕುರುಬರ ಬಗ್ಗೆ ಸಮಗ್ರವಾದ ವಿಷಯವನ್ನು ತಿಳಿಸಿಕೊಡುತ್ತದೆ. ಕನ್ನಡ ನಾಡಿನ ಮೂಲ ಜನಾಂಗಗಳ ಬಗೆಗೆ ಅವರ ಭಾಷೆ ಮತ್ತು ಇತಿಹಾಸಗಳ ಬಗೆಗೆ, ದೇಶಿಯ ನೆಲೆಯಲ್ಲಿ ಆಧಾರ ಸಹಿತವಾದ ವಿಶ್ಲೇಣೆಯೊಂದನ್ನು ಡಾ. ಶಂ. ಬಾ. ಜೋಶಿಯವರು ಅದ್ಭುತವಾಗಿ ಮುಂದಿಡುತ್ತಾರೆ.

ಕನ್ನಡ ಜನರ ಮೂಲಸ್ಥಾನ, ಅವರ ಭೌಗೋಳಿಕ ಪರಿಸರ, ಬದುಕಿದ ಪರಿಸರ, ಉಸಿರಾಡಿದ ಸ್ಥಾನಗಳನ್ನು ಗುರುತಿಸಿಕೊಳ್ಳುವ ತವಕ ಶಂಬಾ ಅವರ ಆರಂಭದ ಅಧ್ಯಯನದ ಹಿನ್ನೆಲೆಯಾಗಿತ್ತು. ಮುಂದಿನ ಹಂತದಲ್ಲಿ ಅವರು ಕನ್ನಡ ಸಂಸ್ಕೃತಿಯನ್ನು, ಭೌಗೋಳಿಕ ವ್ಯಾಪ್ತಿ ಮತ್ತು ಜಾನಾಂಗೀಯ ಅಧ್ಯಯನದ ನೆಲೆಗಳ ಮುಖಾಂತರ ಶೋಧನೆಯ ನೆಲೆಯನ್ನು ವಿಸ್ತರಿಸಿಕೊಂಡರು. ಶಂಬಾ "ಅವರ ತೀರ್ಮಾನದ ಪ್ರಕಾರ! ಗೋದಾವರಿ, ನರ್ಮದಾ ನದಿಯ ತೀರವೇ ಕನ್ನಡರ ಮೂಲಸ್ಥಾನ. "ನಮ್ಮ ಹಳೆಯ ಕನ್ನಾಡು ಈಗಣ ಖಾನದೇಶವೆ ಆಗಿರಬೇಕೆಂದು ಮಾಡಿರುವ ನಿರ್ಧಾರವು ತುಂಬಾ ಶ್ಲಾಘನೀಯವೇ" ಎಂದು ಗೋವಿಂದ ಪೈ ಅವರು ಕೈವಾರಿಸಿದ್ದು ಶಂಬಾ ಅವರಿಗೆ ಸಂಶೋಧನೆಯ ದಿಕ್ಕಿನಲ್ಲಿ ಹೊಸ ಚೈತನ್ಯವನ್ನು ತಂದುಕೊಟ್ಟಿತು. ಈ ದಿಕ್ಕಿನಲ್ಲಿ ಅವರು ಸಂಶೋಧನೆಯನ್ನು ನಡೆಸಿದರು. ನಾಗಪುರ, ಚಂದಾ, ಬಂಡಾರ ಮೊದಲಾದ ಕಡೆ ಕಂದಮಿಳರ ನೆಲೆಗಳು ಇದ್ದುದನ್ನು ಪತ್ತೆ ಹಚ್ಚಿದ್ದು ಗಮನಾರ್ಹವಾದ ಶೋಧನೆಯೇ ಸರಿ. ಕಾವೇರಿಯಿಂದ ಗಂಗೆಯ ವರೆಗೆ, ನೀಲಗಿರಿಯಿಂದ ರಾಜ ಮಹಾಲದವರೆಗೆ ಕರ್ನಾಟಕ ಭೌಗೋಳಿಕವಾಗಿ ವ್ಯಾಪ್ತಿಯನ್ನು ಹಿಗ್ಗಲಿಸುತ್ತ–ಅದರೊಡನೆ ಕನ್ನಡರ ಮೂಲನೆಲೆ ಪತ್ತೆ ಹಚ್ಚಲು ತೊಡಗಿದರು. ಶಂಬಾ ಅವರು, ಕಾವೇರಿಯಿಂದ ಗಂಗೆಯ ವರೆಗೆ ಹಟ್ಟಿಕಾರರ ನೆಲೆಯಿರುವುದನ್ನು ಗಮನಿಸಿದರು. ಹೀಗೆ ವಿಸ್ತಾರಗೊಂಡಿದ್ದ ಹಟ್ಟಿಕಾರರ ನೆಲೆ, ಕಾಲಕ್ರಮೇಣ ಕುಗ್ಗುತ್ತ ಬಂದ ಕಾರಣಮೀಮಾಂಸೆಯ ಕಡೆಗೆ ಅವರು ಹೊರಳಿದರು."[೧೭] ಆರ್ಯೀಕರಣದ ಪ್ರಭಾವದಿಂದಾಗಿ ಕನ್ನಡ ಸಂಸ್ಕೃತಿ ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಂಡಿತು. ಆರ್ಯೀಕರಣದ ಪ್ರಭಾವದಿಂದಾಗಿ ಕಂದಮಿಳರು ತಮ್ಮಲ್ಲಿ ಕೀಳರಿಮೆಯನ್ನು ಹೆಚ್ಚಿಸಿಕೊಂಡರು. ಆರ್ಯತ್ವವನ್ನು ತಮ್ಮದಾಗಿಸಿಕೊಳ್ಳಬೇಕೆಂಬ ಭಾವನೆಗಳೇ ಕನ್ನಡವು ವಿಸ್ಮೃತಿಗೊಳ್ಳಲು ಕಾರಣವಾಯಿತು. ಹೀಗೆ ಕಂದಮಿಳರು ಆರ್ಯೀಕರಣದ ಪ್ರಭಾವಕ್ಕೆ ಒಳಪಟ್ಟರು.

ಪ್ರಾಚೀನ ಇತಿಹಾಸದ ಶೋಧನೆಯಲ್ಲಿ ಜನಪದರ ಹಾಡು, ಕಥೆ, ಸಂಪ್ರದಾಯ, ಪರಂಪರೆ, ಐತಿಹ್ಯಗಳು, ಸ್ಮಾರಕ ಮೊದಲಾದವುಗಳು ಬಹುಮುಖ್ಯವಾದ ಸಾಧನಗಳಾಗಿವೆ. ಇವುಗಳನ್ನು ತಿಳಿದುಕೊಳ್ಳದೇ ಯಾವುದೇ ಜನಾಂಗದ ಸಂಪೂರ್ಣ ಇತಿಹಾಸವನ್ನು ಅರಿತುಕೊಳ್ಳುವುದು ಸರಿಯಲ್ಲ. ಇಂತಹುಗಳ ಬೆಳಕಿನಲ್ಲಿ ಶಂಬಾ ಜನಾಂಗೀಯ ಅಧ್ಯಯನವನ್ನು ನಡೆಸಿದರು. "ಹಟ್ಟಿಕಾರ ಜನಾಂಗವೇ ಅಖಿಲ ಭಾರತೀಯ ಜನಾಂಗವೆಂಬುದನ್ನು ಅನೇಕ ದೃಷ್ಟಿಗಳಿಂದ ಶೋಧಿಸಿಕೊಂಡರು. ಯೂರೋಪೀಯ ಸಂಶೋಧಕರು

ಹೇಳುವ 'ದ್ರಾವಿಡ ಜನಾಂಗ' ಎಂಬ ಮಾತನ್ನು 'ಹಟ್ಟಿಕಾರ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಶಂಬಾ ಅವರು ಗುರುತಿಸಲು ಪ್ರಯತ್ನಿಸಿದರು. ದ್ರಾವಿಡ ಎಂಬ ಪರಿಕಲ್ಪನೆಯನ್ನು ಸಂಶೋಧನೆಯಲ್ಲಿ ಬಳಸುವುದು ಕಷ್ಟದ ಕೆಲಸ. ಅದನ್ನು ಬಳಸುವಾಗ ಇನ್ನಿತರ ಪೂರಕ ಪ್ರಮಾಣಗಳೊಂದಿಗೆ ನೆರವಾಗದಿರುವ ಅಪಾಯ ಯಾವತ್ತೂ ಇದ್ದೇ ಇರುತ್ತದೆ. ಹೀಗಾಗಿ 'ಹಟ್ಟಿಕಾರ' ಎಂಬ ಪರಿಕಲ್ಪನೆ ಪ್ರಾಚೀನ ಸಂಸ್ಕೃತಿಯನ್ನು ನಮ್ಮ ಮುಂದೆ ತಂದು ನಿಲ್ಲಿಸಲು-ಸಮರ್ಥವೆಂಬ ವಿಚಾರವನ್ನು ಹಲವು ಬಗೆಗಳಿಂದ ಶೋಧಿಸುತ್ತ ಹೊರಟರು. ವೇದದಲ್ಲಿ ಬರುವ 'ಪತ್ತೀಃ' ಎಂಬ ಪದವು ಮೂಲತಃ 'ಪಟ್ಟಿ'ಯಿಂದ ಬಂದದ್ದು. ಪಟ್ಟಿ>ಹಟ್ಟಿ, ಪಟ್ಟಿಕಾರರು ಹಟ್ಟಿಕಾರರು ಈ ಸಾಮ್ಯತೆ ಆ ಜನಾಂಗದ ಒಕ್ಕಲುನೆಲೆಯನ್ನು ತಿಳಿಯಲು ನೆರವಾಗುವ ಪರಿಯನ್ನು ತಿಳಿಸಿಕೊಟ್ಟರು- ಮಾತ್ರವಲ್ಲ; ಆ ದಿಕ್ಕಿನಲ್ಲಿ ಶಂಬಾ ಮೊದಲಬಾರಿಗೆ ಮುನ್ನಡೆದರು."[೧೮]

ಹಟ್ಟಿಕಾರರಲ್ಲಿ ಕುರು (೦ವ), ತುರುವ ಮತ್ತು ಕುಡುವ ಎಂಬ ಮೂರು ಬಗೆಗಳು. ಕುರುಂವರಲ್ಲಿ ಮತ್ತೆ ಕುಂತಲ, ಕಳವರ್, ಇಡೈಯರ್, ಮಲವರ್ ಎಂದು ಪರ್ಯಾಯ ಹೆಸರುಗಳಿಂದ ಕರೆಯುವ ಪಂಗಡಗಳಿವೆ. ಕ್ರಿ. ಪೂ. ೨೦೦೦ ದ ಸುಮಾರಿಗೆ ಇವರೆಲ್ಲರೂ ನರ್ಮದಾ-ಗೋದಾವರಿ ತೀರದಲ್ಲಿ ಬೀಡುಬಿಟ್ಟಿದ್ದರು. ಕುರುವ, ತುರುವ ಮತ್ತು ಕುಡುವ ಇವರನ್ನು ಕುರಿತು ವಿಶೇಷವಾದ ಅಧ್ಯಯನಗಳು ನಡೆಯಬೇಕಾಗಿವೆ. ಶಂಬಾ ಅಧ್ಯಯನದ ನೆಲೆಯಲ್ಲಿ ಕಂಡುಬರುವ ಕೆಲವು ಅಂಶಗಳನ್ನು ಚರಿತ್ರೆಯ ಬೆಳಕಿನಲ್ಲಿಟ್ಟು ನೋಡಬೇಕಾಗಿದೆ. ಕೆಲವು ವಿಚಾರಗಳು ಪ್ರತ್ಯಕ್ಷ ಶೋಧನೆಯಿಂದ ರುಜುವಾತುಪಡಿಸಲು ಸಾಧ್ಯವಾಗದಿದ್ದರೂ ಕೂಡ ಆ ಅಂಶಗಳನ್ನು ಅಲ್ಲಗಳೆಯುವಂತಿಲ್ಲ. ಶಂಬಾ ನಡೆಸಿರುವ ಅಧ್ಯಯನ ಮತ್ತು ಆಧಾರಗಳ ಮೇಲಿಂದ ಸ್ಥೂಲವಾಗಿ ಹಟ್ಟಿಕಾರರು (ನೆಯ್‌ಕಾರರು) ವೇದಪೂರ್ವ ಜನಾಂಗದವರೆಂಬುದನ್ನು ಖಚಿತವಾಗಿ ಹೇಳಬಹುದಾಗಿದೆ. ಇಂದು ಪ್ರತಿಯೊಂದು ಜನಾಂಗದ ಪೂರ್ವೋತ್ತರಗಳನ್ನು ಬಿಡಿ-ಬಿಡಿಯಾಗಿ ಶೋಧಿಸುವ ಅವಶ್ಯಕತೆಯಿದೆ. ಹೀಗೆ ಸಿಗುವ ಬಿಡಿ-ಬಿಡಿಯಾದ ವಿವರಗಳಿಂದಲೇ ಮಾತ್ರ ಇಡಿಯಾದ ಆಶಯಗಳನ್ನು ಗ್ರಹಿಸಲು ಸಾಧ್ಯ.

ಶಂಬಾ ಅವರು ಆರುವತ್ತು ವರ್ಷಗಳ ಹಿಂದೆಯೇ ಖಾನದೇಶ-ನಾಸಿಕಗಳ ಸುತ್ತಮುತ್ತಲಿನ ನಾಡಿನಲ್ಲಿ 'ಕಾನಡ'ರೆಂಬ ಹೆಸರಿನ ಹಟ್ಟಿಕಾರರು ಇದ್ದರೆಂದು ಹೇಳುತ್ತಾರೆ. ಇಂತಹ ಪ್ರಾಚೀನ ಬುಡಕಟ್ಟು ಜನಾಂಗದ ಅನ್ವೇಷಣೆಯನ್ನು ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನಿಸುವ ಅವಶ್ಯಕತೆಯ ಬಗ್ಗೆ ಶಂಬಾ ಒಲವನ್ನು ತೋರುತ್ತಾರೆ. " ದಕ್ಷಿಣದಲ್ಲಿ 'ಕುರುಬ' ಎಂಬ ಶಬ್ದವು ಔತ್ತರೇಯರ ಉಚ್ಚಾರದಲ್ಲಿ ಕುರುಕ-ಕುರ್ಪ ಎಂದು ವ್ಯತ್ಯಾಸ ಹೊಂದಿದೆ ಎಂದು ವಾದಿಸುತ್ತಾರೆ. ಕುರ್ಪ ಜನಾಂಗವು ನೀಲಗಿರಿಯಿಂದ ಉತ್ತರಕ್ಕೆ ಗಂಗಾ ಶೋಣಭದ್ರಾ ನದಿಯವರೆಗೆ ಈ ಜನಾಂಗವು ವ್ಯಾಪಿಸಿಕೊಂಡಿದೆ. ಈ ಕೆಲವು ಸಂಗತಿಗಳನ್ನು ಶಂಬಾ ತೀರ್ಮಾನದ ಧಾಟಿಯಲ್ಲಿ ಹೇಳುವುದಿಲ್ಲ : ಬದಲಾಗಿ ಶೋಧನೆಯ ಧಾಟಿಯಲ್ಲಿ ಹೇಳುತ್ತಾರೆ. ಹಟ್ಟಿಕಾರರು ಅನೇಕ ಉಪಪಂಗಡಗಳಾಗಿ ಕಾಲಕ್ರಮೇಣ ಒಬ್ಬರು ಮತ್ತೊಬ್ಬರಲ್ಲಿ, ಬೆರೆತುಹೋದರು. ಇದಕ್ಕೆ ಶಂಬಾ ಮೂರು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯವರು : ಪರ್ಯಟನ; ಎರಡನೆಯದು : ಯುದ್ಧ; ಮೂರನೆಯದು : ವ್ಯಾಪಾರ-ವ್ಯವಹಾರಗಳು, ವಂಶದ ಮಿಶ್ರಣ."[೧೯]

ಕರ್ನಾಟಕದ ವೀರಕ್ಷತ್ರಿಯರು ಅಥವಾ ಹಟ್ಟಿಕಾರರು :

ಪ್ರಾಚೀನ ಇತಿಹಾಸವನ್ನು ತಿಳಿಯಲು ಶಿಲಾಶಾಸನಗಳು, ತಾಮ್ರಪಟಶಾಸನಗಳು ಬಹಳ ಮಹತ್ವ ಸಾಧನಗಳಾಗಿವೆ. ಆದರೆ ಅದಕ್ಕಿಂತಲೂ ಹಿಂದಿನ ಅತಿಪ್ರಾಚೀನ ಇತಿಹಾಸವನ್ನು ತಿಳಿಯಲಿಕ್ಕೆ ಅವು ಮೌನವನ್ನು ತಾಳುತ್ತವೆ. ಹಟ್ಟಿಕಾರರು ಅದಕ್ಕಿಂತಲೂ ಪ್ರಾಚೀನ; ಆರ್ಯ-ಪೂರ್ವ ("ದ್ರಾವಿಡ") ಜನಾಂಗವೆಂದು ತಿಳಿಯಲಾಗಿದೆ. ಲಭ್ಯವಿರುವ ಅತಿಪ್ರಾಚೀನ ಗ್ರಂಥವೆಂದರೆ ಋಗ್ವೇದ. ಋಗ್ವೇದದಲ್ಲಿ ಆ ಕಾಲದ ಭಾರತದ ಎಷ್ಟೋ ಇತಿಹಾಸವು ಅಡಕವಾಗಿದೆ. ಋಗ್ವೇದದಲ್ಲಿ ಮೂಲಜನಾಂಗದ (ಹಟ್ಟಿಕಾರ) ಉಲ್ಲೇಖಗಳಿವೆ. ಆ ಮೂಲಜನಾಂಗದ ಸಮಗ್ರ ಇತಿಹಾಸವನ್ನು ಸಂಗ್ರಹಿಸಿ ಇಂದಿನ ಪೀಳಿಗೆಗೆ ತಿಳಿಸುವ ಒಂದು ಪ್ರಯತ್ನವೇ ಶಂಬಾ ಅವರಿಂದ ರಚಿತವಾದ "ಕರ್ನಾಟಕದ ವೀರಕ್ಷತ್ರಿಯರು ಅಥವಾ ಹಟ್ಟಿಕಾರರು". ಇಂದಿನವರೆಗೆ ಪ್ರಗತಿಯನ್ನು ಹೊಂದಿದ ಮಾನವನ ಇತಿಹಾಸವನ್ನು ಸ್ಥೂಲವಾಗಿ ಎರಡು ಭಾಗಗಳಲ್ಲಿ ಗುರುತಿಸಬಹುದು. ೧) ಆಹಾರ ಸಂಚಯನಕಾಲ, ೨) ಆಹಾರದ ಉತ್ಪಾದನೆಯಕಾಲ. ಮೊದಲನೆಯ ಅವಸ್ಥೆಯಲ್ಲಿ ಮಾನವನು ಅನ್ನಸಂಗ್ರಹಕ್ಕಾಗಿ ಬೆಟ್ಟ-ಗುಡ್ಡ, ಕಾಡು-ಮೆಡು, ಹಳ್ಳ-ಕೊಳ್ಳ ಅಲೆದಾಡಬೇಕಾಗುತ್ತಿತ್ತು. ಆಹಾರ ಸಂಚಯನ ಕಾಲದಲ್ಲಿ ಒಂದೇ ಸ್ಥಳದಲ್ಲಿ ನಿಲ್ಲುವುದು ಅವನಿಗೆ ಸಾಧ್ಯವೇ ಇರಲಿಲ್ಲ. ನಿತ್ಯವು ಹೊಟ್ಟೆ ಪಾಡಿಗಾಗಿ ಅವನದು ಹೋರಾಟದ ಬದುಕಾಗಿತ್ತು. ಎರಡನೆಯ ಅವಸ್ಥೆಯಲ್ಲಿ ಅವನು ಆಹಾರ ಉತ್ಪಾದನೆಯ ಹದವನ್ನು ತಿಳಿದುಕೊಂಡನು. ಇದು ಮಾನವ ಸಂಸ್ಕೃತಿಯ ಆರಂಭದ ಕಾಲ. ಈ ಅನ್ನ ಉತ್ಪಾದನೆಯ ಕಾಲದ ಪ್ರಾಥಮಿಕ ಅವಸ್ಥೆಯೇ ದನಗಾರಿಕೆ; ಈ ಕಾಲದಲ್ಲಿ ಕುರಿ, ಆಕಳು ಮೊದಲಾದ ಪ್ರಾಣಿಗಳನ್ನು ಮನುಷ್ಯ ಸಾಕತೊಡಗಿದ. ಬರು-ಬರುತ್ತ ಸಾಕುಪ್ರಾಣಿಗಳೇ ಆತನ ಜೀವನಾಧಾರವಾಗಿತ್ತು. ಆರಂಭ ಕಾಲದಲ್ಲಿ 'ದನ'ವೇ ಧನವಾಗಿದ್ದು (Cattel=Capital), ನಂತರದಲ್ಲಿ ದನಗಾರಿಕೆಯೇ ಮನುಷ್ಯ ಸಮಾಜದ ಮುಖ್ಯ ಸಂಪತ್ತಾಯಿತು.

ಹಟ್ಟಿಕಾರರು ಯಾರು ? :

ಹಟ್ಟಿಯೆಂದರೆ ದನಕರುಗಳ ಬೀಡು. ಕುರಿಗಾರರೂ ತುರು(ಗೋವು)ಕಾರರೂ ತಮ್ಮ ಸಾಕು ಪ್ರಾಣಿಗಳಿಗಾಗಿ ಕಟ್ಟಿಕೊಂಡಿರುವ ಗೂಡುಗಳೇ ಹಟ್ಟಿಗಳು. ಬೇಟೆಗಾರಿಕೆಯಿಂದ ಪಶುಪಾಲನೆಯ ಹಂತಕ್ಕೆ ಸ್ಥಿತ್ಯಂತರಗೊಂಡ ಅವಧಿಯಲ್ಲಿ ಕಂಡು ಬರುವ ಹಂತ. ಇವು ಮಾನವ ಸಂಸ್ಕೃತಿಯ ಆರಂಭದ ಜನವಸತಿಗಳು. 'ಹಟ್ಟಿ' ಮತ್ತು 'ಹಟ್ಟ' ಎಂಬ ಶಬ್ದಗಳ ವ್ಯುತ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಹೇಮಚಂದ್ರಾಚಾರ್ಯರು ತಮ್ಮ 'ದೇಶೀನಾಮಮಾಲೆ'ಯಲ್ಲಿ 'ಹಟ್ಟಿ ಗೃಹಭೇದೇ ಚ', 'ಗ್ರಾಮೇ ಊರುಃ' ಎಂದು ಹೇಳಿದ್ದು 'ಊರು' (ಗ್ರಾಮ)ದಂತೆ 'ಹಟ್ಟಿ' ಕೂಡ ದೇಶೀ ಶಬ್ದವೇ ಹೊರತು ಸಂಸ್ಕೃತವಲ್ಲವೆಂದು ಅಭಿಪ್ರಾಯಪಡುತ್ತಾರೆ. 'ಪಟ್ಟಿ' ಶಬ್ದಕ್ಕೆ ಕಿಟ್ಟೆಲ್ ಈ ರೀತಿಯ ಅರ್ಥಗಳನ್ನು ನೀಡುತ್ತಾರೆ. 'A place of lying down, a pen or fold, an abode, a hamlet'. ತಮಿಳು ಕೋಶದಲ್ಲಿ 'Cow stall, sheepfold, a measure of land sufficient for a sheepland, cattle pound, a hamlet, a village, a place' ಎಂಬ ಅರ್ಥಗಳಿವೆ. 'ಹಟ್ಟಿ' ಎಂದರೆ ಗೋಸ್ಥಾವಕ, ದನಕರುಗಳನ್ನು ಕಟ್ಟುವ ಸ್ಥಳ, ಗುಡಿಸಲು,

ಕೊಟ್ಟಿಗೆ ಮತ್ತು ಸಣ್ಣ ಹಳ್ಳಿ ಎಂಬ ಅರ್ಥ ಇಂದು ಕನ್ನಡದ ಆಡುಮಾತಿನಲ್ಲಿ ಪ್ರಚಲಿತದಲ್ಲಿದೆ. ಪಶುಪಾಲಕರು ಪಶುಸಾಕಾಣಿಕೆಯ ಅನುಕೂಲಕ್ಕಾಗಿ ತಮ್ಮ ಹಳ್ಳಿಯಿಂದ ಸ್ವಲ್ಪ ದೂರದಲ್ಲಿ, ಆದರೆ ಹೊಲದ ಹತ್ತಿರ ನಿರ್ಮಿಸಿದ ಗುಡಿಸಲುಗಳ ಒಂದು ಸಮೂಹವೇ ಪಟ್ಟಿ ಅಥವಾ ಹಟ್ಟಿಗಳು. ಇಂದು 'ಪಟ್ಟಿ' ಎಂಬ ಪ್ರಾಚೀನ ಶಬ್ದದ ಅರ್ಥವನ್ನು ಸ್ಪಷ್ಟಗೊಳಿಸಲು 'ತೋಟ'ವೆಂಬ ಆಧುನಿಕ ಶಬ್ದವನ್ನು ಬಳಸತೊಡಗಿದ್ದಾರೆ. 'ಪಟ್ಟಿ-ಹಟ್ಟಿ' ಶಬ್ದಗಳು ಪಶುಪಾಲನೆ ವೃತ್ತಿಯಿಂದ ಒಕ್ಕಲುತನದ ವರೆಗಿನ ವಿಕಾಸದ ಅವಸ್ಥೆಯನ್ನು ಪ್ರತಿಬಿಂಬಿಸುತ್ತವೆ.

'ಹಟ್ಟಿಕಾರ' ಎಂದರೆ ಗವಳಿಗರು ಎಂದರ್ಥ. 'ಹಟ್ಟಿಕಾರ-ಧನಗರ' ಇಲ್ಲವೆ 'ಹಟಕಾರ-ಧನಗರ' ಈ ಶಬ್ದಗಳು ಒಂದೇ ಅರ್ಥದ ಜೋಡಿ ಶಬ್ದಗಳು. (ಗೋ)ಧನವನ್ನು ಪಾಲಿಸುವವರು ಧನಗರ, ಅರ್ಥಾತ್ 'ಹಟ್ಟಿಕಾರ' ಎಂದರೆ 'ದನಗಾರ'. ಇಂದು ಪ್ರಚಲಿತದಲ್ಲಿರುವ 'ಹಾಲುಮತದವರು' ಎಂಬ ಪದ ಹಟಗಾರ-ಧನಗರ ಪದಗಳ ಪರ್ಯಾಯ ಪದವಾಗಿವೆ.

ಹಟ್ಟಿಕಾರ, ದನಗಾರರೆಂಬ ಹೆಸರುಗಳು ಸದ್ಯ ಮೂಲೆಗುಂಪಾಗಿದ್ದರೆ, ಇವುಗಳಿಗೆ ಪ್ರಾಶಸ್ತ್ಯವಿದ್ದ ಕಾಲವೊಂದಿತ್ತು.

"ತುರು-ಕರುವು ಇರದೂರು ನರಕಭಾಜನವಕ್ಕು;

ತುರುಕರು ಉಂಟಾದರೆ ಉಣಲು ಉಂಟು;"

ಆದ್ದರಿಂದ "ಜಗಕೆಲ್ಲ ತುರು-ಕರುವೆ ದೈವ" ಎಂದು ಸರ್ವಜ್ಞನು ಹೇಳಿದುದು, ಒಂದು ಕಾಲದಲ್ಲಿ ಅಕ್ಷರಶಃ ನಿಜವಾಗಿತ್ತು. ಪ್ರಾಚೀನ ಕಾಲದಲ್ಲಿ ಎಲ್ಲಕಡೆಗಳಲ್ಲಿ ಹಟ್ಟಿಗಳೇ ಇದ್ದವು. ಪಟ್ಟಿ ಎಂಬುದು ಹಟ್ಟಿ ಶಬ್ದದ ಆರಂಭದ ರೂಪವಾಗಿದೆ. ಪ್ರಾಚೀನ ಅವಸ್ಥೆಯಲ್ಲಿ ಹೊಳೆ, ಹಳ್ಳ, ಕೊಳ್ಳಗಳಲ್ಲಿಯೇ ಮಾನವನ ವಾಸಿಸುತ್ತಿದ್ದರಿಂದ ಹಟ್ಟಿಗಳೇ ಹೆಚ್ಚಾಗಿದ್ದವು. ಹಟ್ಟಿಕಾರರಲ್ಲಿ ಕುರುಬರು ಮತ್ತು ತುರುಕಾರರು ಎಂಬ ಎರಡು ಬಗೆಗಳಿದ್ದರೂ ಕೂಡ ಇವರೆಲ್ಲರೂ ದನಗಾರರು. ಇವರಿಗೆ ದನವೆ ದೈವ; ದನವೆ ಧನ. ಆದ್ದರಿಂದ ಇವರಿಗೆ ಮರಾಠಿಯಲ್ಲಿ 'ಧನಗರ'ರೆಂಬ ಹೆಸರು. 'ಹಿಂಡುಕಾರ-ದನಗಾರ'ರೆಂಬ ಮಾತು ಹಳ್ಳಿಗಳಲ್ಲಿ ಈಗಲೂ ಪ್ರಚಲಿತದಲ್ಲಿದೆ. "ಈ ಕನ್ನಡ ದನಗಾರನೇ ಮರಾಠಿಯಲ್ಲಿ ಧನಗಾರನಾದನು. ಈ ಜನಾಂಗಕ್ಕೆ ಮಹಾರಾಷ್ಟ್ರ ದೇಶದ ಗೆಜೆಟಿಯರುಗಳಲ್ಲಿ ಹಟಗಾರ-ಧನಗರರೆಂದು ಉಲ್ಲೇಖಿಸಿದ್ದಾಗಿದೆ. ಖಾನದೇಶ-ನಾಸಿಕಗಳ ಸುತ್ತಲಿನ ನಾಡಿನಲ್ಲಿ 'ಕನ್ನಡ' (ಕಾನಡ)ರೆಂಬ ಹೆಸರಿನಲ್ಲಿ ಹಟ್ಟಿಕಾರರಿದ್ದಾರೆ. ಬ್ರಿಟಿಶ ವರ್ಹಾಟ, ನಿಜಾಮ ಇಲಾಖೆಗೆ ಸೇರಿದ ವರ್ಹಾಟಗಳಲ್ಲಿಯೂ ಹತ್ತಿರದ ಭಾಗದಲ್ಲಿಯೂ "ಹಟಗಾರ-ಧನಗರರು" ಉಂಟು. ಧನಗರರು ಸಂಯುಕ್ತ ಪ್ರಾಂತದವರೆಗೂ ಹಬ್ಬಿರುವರು, ಎಂದು ಎಂಥೋವೆನರು ಹೇಳುತ್ತಾರೆ. 'ರಾಜಮಹಾಲ ಗುಡ್ಡಗಳು, ಛೋಟಾನಾಗಪೂರ, ಶೋಣ ನದೀತೀರದವರೆಗೂ ಒಂದು ಶಾಖೆಯು ವ್ಯಾಪಿಸಿಕೊಂಡಿದೆ' ಎಂದು ಡಾ. ಗ್ರಿಯರಸನ್‌ರು ಕಂಡು ಹಿಡಿದಿರುವರು. ಇಲ್ಲಿ ಈ ಜನಾಂಗಕ್ಕೆ ಕುರುಬರೆಂದೇ ಹೆಸರು! ಆದರೆ 'ಕುರುಬ' ಶಬ್ದವನ್ನು ಔತ್ತರೇಯರ ಉಚ್ಚಾರದಲ್ಲಿ ಕುರುಕ-ಕುರ್‍ಬ ಎಂದು ಸ್ವಲ್ಪ ವ್ಯತ್ಯಾಸ ಹೊಂದಿದೆ. ಕುರುಬ (ಕುರ್‍ಬ) ಶಬ್ದದ ಅರ್ಥವು ತಿಳಿಯದುದರಿಂದ ಅಲ್ಲಿಯ ಜನರು ಇವರಿಗೆ 'ಕುರುಕ-ದನಗರ'ರೆಂದು ಕರೆಯುತ್ತಾರೆ!"[೨೦]

ಹಟ್ಟಿಕಾರರು ಕಾವೇರಿಯಿಂದ ಗಂಗಾನದಿಯವರೆಗೆ, ನೀಲಗಿರಿ ಬೆಟ್ಟದಿಂದ ರಾಜಮಹಾಲದವರೆಗೆ ವ್ಯಾಪಿಸಿ ಕೊಂಡಿರುವುದು ಕಂಡು ಬರುತ್ತದೆ. ಇವರೆಲ್ಲ ಒಂದೇ ಜನಾಂಗದವರೆಂದು ಈ ಜನಗಳ ಪರಂಪರೆ, (ಆಚಾರ ವಿಚಾರ), ಭಾಷೆಗಳಿಂದ ಸಿದ್ಧವಾಗುತ್ತದೆ. ಈ ಹಟ್ಟಿಕಾರ-ದನಗಾರರು ದ್ರಾವಿಡ ಜನಾಂಗ; ಅದರಲ್ಲಿಯೂ ಕನ್ನಡ ಶಾಖೆಗೆ ಸೇರಿದವರು ಎಂಬುದು ನಿರ್ವಿವಾದ. ದ್ರಾವಿಡರು ಆರ್ಯ-ಪೂರ್ವ ಜನಾಂಗವೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಆದುದರಿಂದ ಆರ್ಯರಿಗಿಂತ ಮೊದಲು ಈ ಪ್ರದೇಶದಲ್ಲೆಲ್ಲ ವಿಶೇಷ ಪ್ರಬಲರಾಗಿದ್ದವರು ಇವರೇ ಎಂದು ಸಿದ್ಧಪಡಿಸಲು ಬೇರೆ ಪ್ರಮಾಣಗಳ ಅವಶ್ಯಕತೆಯೆ ಇಲ್ಲ. ಇವರು ಸಿಂಧೂ ತೀರದಿಂದ ಹಿಂದೂ ದೇಶದ ಪಶ್ಚಿಮ ಭಾಗದಲ್ಲಿ ಪ್ರಬಲರಾಗಿದ್ದರೆಂದು ಶಂಬಾ ಜೋಶಿಯವರ ಅಭಿಪ್ರಾಯವಾಗಿದೆ. ದ್ರಾವಿಡ ಭಾಷೆಗಳಲ್ಲಿ 'ಕುರುಕ' ಎಂಬ ಭಾಷೆ ಇರುವುದನ್ನು ಭಾಷೆಗಳ ಬಗ್ಗೆ ಅಧ್ಯಯನ ನಡೆಸಿರುವ ಕಾಲ್ಡವೇಲ್ ಅವರು ಅಭಿಪ್ರಾಯ ಪಡುತ್ತಾರೆ.

ಹಟ್ಟಿಕಾರರಲ್ಲಿಯ ಒಂದು ಶಾಖೆ ಜಾಡರು. ಇವರು ನೇಯಗೆಯಲ್ಲಿ ಲೋಕವಿಖ್ಯಾತರು. ಹಿಂದೂ ದೇಶದಿಂದಲೇ ಪಶ್ಚಿಮ ದೇಶಗಳಿಗೆ ಬಟ್ಟೆ ರವಾನೆಯಾಗುತ್ತಿತ್ತೆಂದು ಅನೇಕ ಸಂಶೋಧಕರು ಸಿದ್ಧಪಡಿಸಿದ್ದಾರೆ. "ಪ್ರಾಚೀನ ಇಜಿಪ್ತಿನಲ್ಲಿ ಬಟ್ಟೆಗೆ 'ಪಟ'ವೆಂಬ ಹೆಸರಿದ್ದಿತೆಂದೂ ಅದು ಹಿಂದೂ ದೇಶದಿಂದ ಬರುತ್ತಿದ್ದಿತೆಂದೂ ಪಂಚಾನನ ಮಿತ್ರರು ಪ್ರತಿಪಾದಿಸುತ್ತಾರೆ. ಪ್ರಾಚೀನ ಇಜಿಪ್ತಿನಲ್ಲಿ ವೃಷಭ ಧ್ವಜವಿದೆ. ಇದು ಪೂರ್ವದೇಶದಿಂದ ಎಂದರೆ ಹಿಂದುಸ್ತಾನದಿಂದ ಬಂದುದು ಎಂದು ಎಚ್. ಫ್ರಾಂಕ ಫೋರ್ಟರ ಅಭಿಪ್ರಾಯ. ನಮ್ಮ ಹಟ್ಟಿಕಾರರೂ ವೃಷಭ (ನಂದಿ) ಧ್ವಜವೇ; ಸಿಂಧು ತೀರದ ಹರಪ್ಪಾ, ಮೋಹೆಂಜೊದಾರೊಗಳಲ್ಲಿ ಸಿಕ್ಕ ಹಲವು ವಸ್ತುಗಳಲ್ಲಿ ಎತ್ತಿನ ಮುದ್ರೆಗಳು ಬಹಳೇ ಮಹತ್ವದವುಗಳಾಗಿವೆ. ಅದರಂತೆ, ಅಲ್ಲಿ ದೊರೆತ ಬಗೆ ಬಗೆಯ ಆಕಾರದ ಶಿವಲಿಂಗಗಳೂ ಪ್ರೇಕ್ಷಣೀಯವಾಗಿವೆ. ಹಟ್ಟಿಕಾರರು ರುದ್ರಗಣ; ಶಿವಭಕ್ತರು, ಈ ಸಂಗತಿಗಳಲ್ಲಿ ಪರಸ್ಪರ ಏನೂ ಸಂಬಂಧವು ಇರಲಿಕ್ಕಿಲ್ಲವೇ? ಹರಪ್ಪಾ, ಮೊಹೆಂಜೋದಾರೊದಲ್ಲಿ ದೊರೆತ ಬಂಗಾರವು, ಕೋಲಾರ, ಹಟ್ಟಿ (ಊರು)ಗಳಿಂದ ಬಂದುದಿರಬೇಕೆಂದು ಮಾರ್ಶಲರ ಅಭಿಪ್ರಾಯವಿದೆ."[೨೧]

ಇಜಿಪ್ತ ಸಂಸ್ಕೃತಿಯು ವೇದಪೂರ್ವಕಾಲಕ್ಕೆ ಸೇರಿದ್ದು. ಇಂತಹ ನಾಡಿಗೆ ಪಟ-ಬಟ್ಟೆ ಕಳಿಸಿದ ನಂದಿಧ್ವಜರಾದ ಹಟ್ಟಿಕಾರರು ಸುಮಾರು ೬೦೦೦-೭೦೦೦ ವರುಷಗಳ ಪ್ರಾಚೀನ ಜನಾಂಗವೆಂದು ತಿಳಿದು ಬರುತ್ತದೆ. ಹಡಗಿನ ಚಿತ್ರವುಳ್ಳ ಕುರು(ಂ)ಬರ ನಾಣ್ಯಗಳು ಮತ್ತು ಹಟ್ಟಿಕಾರರ ಬಟ್ಟೆ ಮೊದಲಾದ ಸರಕುಗಳು ಪರದೇಶದ ವ್ಯಾಪಾರವನ್ನು ಸಾಕ್ಷಿಕರಿಸುತ್ತವೆ. ದಕ್ಷಿಣಾಪಥದಲ್ಲಿ ದೊರೆಯುವ ಗೋರಿ ಮೊದಲಾದ ಅವಶೇಷಗಳು ಪ್ರಾಚೀನ ಕಾಲದ ಕುರುಂಬ (ಹಟ್ಟಿಕಾರ)ರವೆಂದು ಸರ್ ಇಲಿಯಟರ ಅಭಿಪ್ರಾಯ ಪಟ್ಟಿದ್ದಾರೆ. ಈ ಎಲ್ಲ ಅಂಶಗಳು ನಿಸಂದೇಹವಾಗಿ ಹಟ್ಟಿಗಾರರು ಪ್ರಾಚೀನ ಜನಾಂಗವೆಂಧು ಧೃಡಪಡುತ್ತದೆ.

ಆರ್ಯ ಪೂರ್ವ ಕಾಲದ ಭಾರತದ ಮೂಲನಿವಾಸಿಗಳು ದ್ರಾವಿಡ ಜನಾಂಗ. 'ರಸ' ತತ್ತ್ವಜ್ಞಾನವು ದ್ರಾವಿಡ ಸಂಸ್ಕೃತಿಯ ಮೂಲಸತ್ವ, ಶೈವ ತತ್ವಜ್ಞಾನ ಮತ್ತು ವೈಷ್ಣವ-ನಾರಾಯಣ ತತ್ವಜ್ಞಾನಗಳೆರಡರ ಮೂಲವೂ ರಸದಲ್ಲಿದೆ. ರಸವು ಜಲತತ್ತ್ವವನ್ನೊಳಗೊಂಡಿದೆ. ರಸವು ನೀರು; ನೀರು ಹಾಲು. ಜಲತತ್ವವು ವೈದಿಕ ರೂಪದ್ದಲ್ಲ, ಅದು ವೇದಪೂರ್ವ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ತತ್ವವಾದ. ಆರ್ಯರು ಭಾರತದ ಮೂಲನಿವಾಸಿಗಳಲ್ಲ, ಅವರು ಹೊರ ಪ್ರದೇಶದಿಂದ ಬಂದವರು. ವೇದಗಳು ಆರ್ಯರಿಂದ ರಚಿತವಾದ

ಸಾಹಿತ್ಯ. ಆದ್ದರಿಂದ ವೇದಪೂರ್ವ ಕಾಲದಲ್ಲಿ ಭಾರತದಲ್ಲಿ ಆರ್ಯರಲ್ಲದ ಜನಜೀವನ-ಸಂಸ್ಕೃತಿ ಇದ್ದಿತ್ತು. ಅವರದು ಜಲತತ್ವವಾದ. ಈ ಜಲತತ್ವದ ಸಂಪ್ರದಾಯವನ್ನು ಆರ್ಯ-ವೈದಿಕರು ತೆಗೆದುಕೊಂಡರೆಂದು ತಿಳಿದುಬರುತ್ತದೆ. ರಸವು ಹಾಲು; ಹಾಲು-ಕಳ್, ಕಲ್-ಕಂ. ಕಂ ಎಂದರೆ ನೀರು. ಆದ್ದರಿಂದ ಕಂ ತತ್ವವನ್ನು ಪಾಲಿಸುವ ದ್ರಾವಿಡ ಜನಾಂಗ ಇಂದಿಗೂ ಅಸ್ತಿತ್ವದಲ್ಲಿದೆ. ಅದುವೇ ಹಾಲುಮತ ಪಂಗಡ. ಈ ಹಾಲುಮತ ತತ್ವಜ್ಞಾನದಲ್ಲಿ ಅಡಗಿರುವ ತತ್ತ್ವವನ್ನು ವಿವರಿಸುವ ಗ್ರಂಥವೇ ಶಂಬಾ ಜೋಶಿಯವರ ಹಾಲುಮತ ದರ್ಶನ.

ಶಂಬಾ ಜೋಶಿಯವರು ಇಡೀ ಕರ್ನಾಟಕ ಸಂಸ್ಕೃತಿಯನ್ನು ಭಾಷಿಕವಾಗಿ ಮತ್ತು ಜನಾಂಗೀಕವಾಗಿ ಅನ್ವೇಷಿಸುತ್ತಾರೆ. ಆ ಎರಡು ಅನ್ವೇಷಣೆಗಳಲ್ಲಿ ಅವರು ಕುರುಬ ಜನಾಂಗದ ಬಗೆಗೆ ಅತ್ಯಂತ ಮಹತ್ವದ ಉಲ್ಲೇಖಗಳನ್ನು ನೀಡಿದ್ದಾರೆ. ಕರ್ನಾಟಕದ ಮೂಲ ನಿವಾಸಿಗಳಲ್ಲಿ ಮತ್ತು ಪಶುಪಾಲನೆಯಲ್ಲಿ ಮುಂಚೂಣಿಯಲ್ಲಿದ್ದ ಹಟ್ಟಿಕಾರರನ್ನು ಗುರುತಿಸಿದ್ದಾರೆ. ಇದನ್ನು ವಿವರಿಸುವಲ್ಲಿ ಅವರು ಭಾಷಿಕ ಸಂಕೇತಗಳನ್ನು, ಜನಾಂಗದ ಆಚರಣೆಗಳನ್ನು, ಅವೆರಡರ ಸಂಬಂಧಗಳನ್ನು ಎತ್ತಿ ಹೇಳಿ ಕುರುಬ ಜನಾಂಗದ ಮಹತ್ವವನ್ನು ಬಿಂಬಿಸಿದ್ದಾರೆ. ಅದು ಅವರ ಪಾಲಿಗೆ ನಾಡಿನ ಸಾಂಸ್ಕೃತಿಕ ಶೋಧವಾಗಿದೆ. "ಶಂಬಾ ಜೋಶಿಯವರು ಹಟ್ಟಿಕಾರರ ಜೂಲ-ಮೂಲಗಳನ್ನು ಅಧ್ಯಯನ ಮಾಡುತ್ತ ನೀಡಿರುವ ಹಟ್ಟಿಕಾರರ ವಂಶವೃಕ್ಷವು ಮಹತ್ವದ ದಾಖಲೆ ಎನಿಸಿದೆ."[೨೨]

ಹೀಗೆ ಹಾಲುಮತ ಪರಂಪರೆ ಮತ್ತು ಸಂಸ್ಕೃತಿಯನ್ನು ಕುರಿತು ಈಗಾಗಲೇ ಮಾನವ ಶಾಸ್ತ್ರಜ್ಞರು ಮತ್ತು ಜನಾಂಗೀಯ ಅಧ್ಯಯನಕಾರರು ವಿಸ್ತೃತವಾದ ಅಧ್ಯಯನವನ್ನು ಕೈಕೊಂಡಿದ್ದಾರೆ. ಇವರೆಲ್ಲರು, ಕುರುಬ ಜನಾಂಗ ಭಾರತ ದೇಶದ ಪ್ರಾಚೀನವಾದ ಜನಾಂಗವೆಂದು ಮತ್ತು ಪಶುಪಾಲನೆ ಇವರ ಮೂಲ ವೃತ್ತಿ ಎಂದು ಪ್ರತಿಪಾದಿಸಿದ್ದಾರೆ. ಈ ಹೇಳಿಕೆಯನ್ನು ಪುರಸ್ಕರಿಸುವಂತೆ ಕನ್ನಡದಲ್ಲಿ ಹಾಲುಮತ ಪುರಾಣಗಳು ಹೊರಬಂದಿವೆ. ಚಾರಿತ್ರಿಕವಾಗಿ ಸುಮಾರು ಆರು-ಏಳು ಸಾವಿರ ವರ್ಷಗಳಿಂದಲೂ ಕರ್ನಾಟಕದ ಬೇರೆ-ಬೇರೆ ಭಾಗಗಳಲ್ಲಿ ಕುರಬರು ವಾಸಿಸುತ್ತಿದ್ದರೆಂದು ಕಾಲಕ್ರಮದಲ್ಲಿ ಅವರಲ್ಲಿ ಕೆಲವು ವರ್ಗಗಳು ಕಂಡು ಬಂದವೆಂಬುದು ತಿಳಿದು ಬರುತ್ತದೆ. ಕರ್ನಾಟಕದ ಬುಡಕಟ್ಟು ಜನಾಂಗಗಳಲ್ಲಿ ಕುರುಬರು ಮಹತ್ವದ ಜನಾಂಗವಾಗಿದ್ದಾರೆ. ಆಧುನಿಕ ಕಾಲಕ್ಕಿಂತ ಪೂರ್ವದಲ್ಲಿ ಇವರ ಸಾಂಸ್ಕೃತಿಕ ಸಂರಚನೆ ತುಂಬ ವಿಶಿಷ್ಟವಾಗಿದ್ದು, ಅದು ಅವರ ಎಲ್ಲ ಬಗೆಯ ಆಚರಣೆ, ನಂಬಿಕೆ, ವಿಧಿಕ್ರಿಯೆಗಳಲ್ಲಿ ಎದ್ದು ಕಾಣುತ್ತಿತ್ತು. ಇದಕ್ಕೆ ಪೂರಕವಾಗಿ ಕರ್ನಾಟಕದ ಬೇರೆ-ಬೇರೆ ಭಾಗಗಳಲ್ಲಿ ಜನಮನದಲ್ಲಿ ಹಾಸುಹೊಕ್ಕಾಗಿದ್ದ ಡೊಳ್ಳಿನ ಹಾಡುಗಳು, ಒಡೆಯರ ಹೇಳಿಕೆಗಳು, ಕುರುಬರ ಕುಣಿತಗಳು ಆಧಾರವಾಗಿ ನಿಲ್ಲುತ್ತವೆ.

೨.೨ ರಾಯಬಾಗ ಪರಿಸರದ ಹಾಲುಮತ ಸಾಂಸ್ಕೃತಿಕ ಪರಂಪರೆ :

೨.೨.೧ ಹಾಲುಮತ ಪರಂಪರೆ ಪ್ರಸ್ತಾವನೆ :

ಹಾಲುಮತ ಸಮುದಾಯ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ಭಾರತದಾದ್ಯಂತ ವ್ಯಾಪಿಸಿದ್ದು, ಅದು ಮೂಲತಃ ಪಶುಪಾಲಕ ವೃತ್ತಿಯನ್ನು ಹೊಂದಿರುವಂತದ್ದು. ಆರಂಭದಲ್ಲಿ ಹಾಲುಮತ ಎನ್ನುವುದು ಒಂದು ಸಮುದಾಯಕ್ಕೆ ಸೀಮಿತವಾಗಿರದೆ ಅದೊಂದು ದೊಡ್ಡ ಪಂಥವಾಗಿ ಬೆಳೆದಿತ್ತು,

ಕಾಲಾನಂತರದಲ್ಲಿ ಅದರ ಅರ್ಥವು ರಾಜಕಾರಣದ ಕರಿನೆರಳಿನಿಂದಾಗಿ ಸಂಕುಚಿತಗೊಂಡು, ಅದು ಒಂದು ಸಮುದಾಯವಾಗಿ ಪರಿವರ್ತನೆಗೊಂಡಿದೆ.

ಎಲ್ಲಾ ದೇಶಗಳ ಸಂಸ್ಕೃತಿಯು ಮೂಲದಲ್ಲಿ ಹಾಲುಮತ ಸಂಸ್ಕೃತಿ ಆಗಿದೆ. ಅದು ಬೇಟೆಗಾರ ಪಶುಪಾಲಕ-ಕೃಷಿಕ ಸಂಸ್ಕೃತಿಯಾಗಿ ಬೆಳೆದು ಬಂದಿದೆ. ಆದ್ದರಿಂದ ಪ್ರತಿದೇಶದ ಪ್ರತಿ ಜನವರ್ಗದ ಚರಿತ್ರೆ ಅದರ ಸಮಗ್ರ ಚರಿತ್ರೆಯ ಭಾಗವಾಗಿರುತ್ತದೆ. ಕುರುಬರ ಪ್ರಾಚೀನತೆಯನ್ನು ಪಶುಪಾಲನೆಯ ಪರಿಕಲ್ಪನೆ ಅರ್ಥದ ವ್ಯಾಪ್ತಿಯಲ್ಲಿ ಗುರುತಿಸಬಹುದು. ಇದಕ್ಕೆ ಹಲವಾರು ಶಾಸ್ತ್ರಗಳ ನೆರವು ಅತ್ಯಗತ್ಯ. ಪುರಾತನ, ತತ್ವಸಂಶೋಧನಾಶಾಸ್ತ್ರ ಮತ್ತು ಭೂಪರಿಸರ ವಿಜ್ಞಾನಗಳೂ ಈ ಸಮಾಜದ ಪ್ರಾಚೀನತೆಯನ್ನು ಅರಿಯಲು ಉಪಯುಕ್ತವಾಗಿವೆ.

"ಹಾಲುಮತ ಸಂಸ್ಕೃತಿ ಎಂದರೆ ರಸ-ಜಲ ಸಂಸ್ಕೃತಿ. ಶಿವ ಪಾರ್ವತಿಯರ ಸಂಸ್ಕೃತಿ, ಜನಪರವಾದ ಸಮುದಾಯ ಜೀವನ ಲಕ್ಷಣಗಳುಳ್ಳ ನಿಸರ್ಗದೊಂದಿಗೆ ನೇರವಾಗಿ ಬೆಸೆದುಕೊಂಡ ಜೀವನ ಪದ್ಧತಿಯ ಸಂಸ್ಕೃತಿ ಆಗಿದೆ. ನಾಡು ಸಂಸ್ಕೃತಿಯ ಸೈದ್ಧಾಂತಿಕ ಚೌಕಟ್ಟಿನಲ್ಲಿ ಹಾಲು ಮತ ಸಂಸ್ಕೃತಿಯ ಸ್ಪಷ್ಟರೂಪವನ್ನು ಗುರುತಿಸಬಹುದು. ಕಾಡು ಅಥವಾ ಬುಡಕಟ್ಟು ಸಂಸ್ಕೃತಿಯಲ್ಲಿ ಮಿಲನಗೊಂಡು ಮುಂದುವರೆದು ಬಂದದ್ದೆ ಹಾಲು ಮತ ಸಂಸ್ಕೃತಿ ಎಂದು ಹೇಳಬಹುದು. ಇದು ಉತ್ತರ ಮತ್ತು ದಕ್ಷಿಣ ಸಂಸ್ಕೃತಿಗಳ ಸಂಘರ್ಷ ಮತ್ತು ಅನಂತರ ನಡೆದ ವಿಲೀನ ಪ್ರಕ್ರಿಯೆಯಿಂದ ಉದಯಿಸಿದ, ನಾಡ ಸಂಸ್ಕೃತಿಯೆಂದು ಹೇಳಬಹುದು. ಕೆಳವರ್ಗಗಳಲ್ಲಿ ವೈದಿಕ ಮತ್ತು ಅವೈದಿಕ ಸಂಸ್ಕೃತಿಗಳ ಸಮ್ಮಿಲನದ ಕುರುಹೆ, ಹಾಲುಮತದ ಸಂಸ್ಕೃತಿಯೆಂದು ವ್ಯಾಖ್ಯಾನಿಸಬಹುದಾಗಿದೆ. ಹಾಲುಮತದ ಸಂಸ್ಕೃತಿ ಇತರೆ ಕುರುಬ ಉಪ ಪಂಗಡಗಳಿಗಿಂತ ಭಿನ್ನಗೊಂಡು ಪಶುಪಾಲನೆ ಕೃಷಿ ವ್ಯವಸ್ಥೆಯನ್ನು ಪ್ರಧಾನವಾಗಿ ಮೈಗೂಡಿಸಿಕೊಂಡು, ನಾಡಿನ ಸಮ್ಮಿಶ್ರ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಗೆ ಭದ್ರವಾದ ಬುನಾದಿ ಹಾಕಿದ ಪಂಗಡಗಳಲ್ಲಿ ಒಂದಾಗಿ ಇತಿಹಾಸದಲ್ಲಿ ಕಂಡುಬರುತ್ತದೆ. ಪ್ರಕೃತಿ ಸಂಪನ್ನಮೂಲಗಳಾದ ಕುರಿ ಮೇಕೆ ಹಸುಗಳನ್ನು ಕ್ರೂರ ಪ್ರಾಣಿಗಳಿಂದ ಸಂರಕ್ಷಿಸಿ ತನ್ಮೂಲಕ ಮಾನವನಿಗೆ ಆಹಾರ ಉಡುಪು ಹೊದಿಕೆಗಳನ್ನು, ನಾಗರಿಕತೆಯ ನಾಡು ಪ್ರದೇಶಗಳಲ್ಲಿ ವಿಕಾಸಗೊಂಡು ಬೆಳೆಯಲು ಭೌತಿಕ ನೆಲೆಗಟ್ಟನ್ನು, ಒದಗಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ. ಜೈನ ಮತ, ಬೌದ್ಧ ಮತ, ವೈಷ್ಣವ ಮತ, ಹಾಗೆ ಶೈವ ಮತ, ವೈದಿಕ ಪರಂಪರೆಯಿಂದ ಸಂಸ್ಕರಣಗೊಂಡಂತೆ, ಹಾಲುಮತ ಪಶುಪಾಲನೆ ಮೂಲದಿಂದ ಸಂಸ್ಕಾರಗೊಂಡು ನಾಡಮತವಾಗಿ ವಿಕಾಸಗೊಂಡಿರುವದನ್ನು ಗುರುತಿಸಬಹುದು"[೨೩] ಎಂಬುದು ಒಪ್ಪತಕ್ಕ ವಿಚಾರವಾಗಿದೆ.

ಹಾಲುಮತ ಸಂಸ್ಕೃತಿಯು ಜೀವ ಪರವಾದ ಸಂಸ್ಕೃತಿಯಾಗಿದೆ. ಅದು ಅನೇಕಾನೇಕ ಇಂದಿನ ಶೂದ್ರಾತಿಶೂದ್ರ ಜನಾಂಗಳನ್ನು ಒಳಗೊಳ್ಳುವುದು. ಈ ಎಲ್ಲಾ ಶೂದ್ರ ಜಾತಿಗಳು ೨೫೦೦ ವರ್ಷಗಳಿಗೂ ಹಿಂದಿನಿಂದ ಪ್ರಾಚೀನ ಕಾಲದ ಅಂತ್ಯದವರೆಗೂ ಏಕ ಜನಾಂಗವಾಗಿದ್ದವು. ಈ ಜನಾಂಗವನ್ನೇ ಹಾಲುಮತ ಜನಾಂಗವೆಂದು ಶಂ. ಬಾ. ಜೋಷಿ ಕರೆದಿದ್ದಾರೆ. ಈ ಅರ್ಥದಲ್ಲಿ ಹಾಲುಮತದವರೆಂದು ಕರೆಸಿಕೊಳ್ಳುವ ಕುರುಬರು, ಹಾಲುಮತ ಜನಾಂಗದ ಒಂದು ಬಹುದೊಡ್ಡ ಘಟಕವಾಗಿದ್ದಾರೆ. ಸಂಸ್ಕೃತಿ

ಇತಿಹಾಸಕಾರರಾಗಿರುವ ಶಂ. ಬಾ. ಜೋಷಿಯವರ ದೃಷ್ಟಿಕೋನದ ಹಾಲುಮತ ದರ್ಶನ ಏನನ್ನು ಹೇಳುತ್ತದೆಂದು, ಮಲ್ಲೇಪುರಂ ಜಿ. ವೆಂಕಟೇಶ ಸಂಕ್ಷಿಪ್ತವಾಗಿ ಹೀಗೆ ವಿವರಿಸಿದ್ದಾರೆ.

"ನಮ್ಮ ದೇಶದ ಇತಿಹಾಸದಲ್ಲಿ ಅಗ್ನಿಪೂಜೆ-ಜಲಪೂಜೆಗಳು ಪ್ರಾರಂಭದಿಂದ ನಡೆದು ಬಂದಿವೆ. ಇವು ಒಂದಕ್ಕೊಂದು ವಿರುದ್ಧವಾದ ಎರಡು ಮಾರ್ಗಗಳನ್ನು ಸೂಚಿಸುತ್ತಾ ಬರುತ್ತಿವೆ. ಇವುಗಳ ತಾತ್ವಿಕ, ಸಾಂಕೇತಿಕ, ಪ್ರತಿಮಾತ್ಮಕ ವಿವರಗಳು ಬೇರೆ ಬೇರೆ. ಆದರೆ, ಇವುಗಳ ನಡುವೆ ವಿರೋಧ ಪ್ರಾಕ್‌ಕಾಲದಿಂದ ಹಾಗೆಯೇ ಬೆಳೆದು ಬಂದಿದ್ದರೆ ಸಮಸ್ಯೆ ಇರುತ್ತಿರಲಿಲ್ಲ, ಅದರ ಬದಲಾಗಿ ನಂಟು ಸ್ನೇಹವು ಉಳಿದುಬಿಟ್ಟಿದೆ. ಅಗ್ನಿ, ಸೂರ್ಯ, ಇಂದ್ರ ಹೀಗೆ ಒಂದು ಗುಂಪು. ನೀರು, ಹಾಲು, ವಿಷ, ಕತ್ತಲೆ, ಹಾವು, ಚಂದ್ರ ಎಂದು ಇನ್ನೊಂದು ಗುಂಪು, ಇವುಗಳೆಲ್ಲೆಲ್ಲ ಹೊಕ್ಕು ಬಳಕೆಗಳು ಉಂಟು. ನೀರಿನಲ್ಲಿರುವ ಬೆಂಕಿ, ಸೂರ್ಯನಲ್ಲಿರುವ ಕತ್ತಲೆ, ಹಾವು ಮೊದಲಾದ ಪ್ರತಿಮೆಗಳು ಇವೆ ಅಷ್ಟೆ. ಇವುಗಳ ಜೊತೆಗೆ ಪಿತೃಪ್ರಧಾನ ಕುಟುಂಬಗಳ ಗಂಡು ದೈವಗಳು, ಮಾತೃ ಪ್ರಧಾನ ಕುಟುಂಬದ ಹೆಣ್ಣು ದೈವಗಳು, ಪರಸ್ಪರ ಸಂಬಂಧಗಳನ್ನು ಬೆಳಸಿಕೊಂಡಿರಬೇಕು. ಶಂ.ಬಾ ರವರು ಆಗಾಗೆ ಪ್ರಸ್ತಾಪಿಸುವ ಆದಿತಿ ದೇವ ಮಾತೆ, ಅಂಭೃಣಿದೇವಿ, ಸ್ತ್ರೀ ಸೂಕ್ತದ ಲಕ್ಷ್ಮೀ, ಇವರ ಬಗೆಗೆ, ಸಂಕೇತ ಪ್ರತಿಮಾ ಶಾಸ್ತ್ರದ ಭೂಮಿಕೆಯಿಂದ ಸಾಕಷ್ಟು ಸಂಶ್ಲೇಷಣೆ ಮಾಡಿದ್ದಾರೆ. ಭಾರತೀಯ ಅಧ್ಯಯನದಲ್ಲಿ ಇದು ಹೊಸಬಗೆಯದು, ಹೊಸನೆಲೆಯು ಆಗಿದೆ. ಭಾರತೀಯ ಶಬ್ದಶಾಸ್ತ್ರಜ್ಞರು ದೈವಶಾಸ್ತ್ರಜ್ಞರು ತಲೆ ತುರುಸಿಕೊಂಡಿರುವ 'ಕಂ' ದೇವರು ಮತ್ತು ಚಂದ್ರ ಈ ದೇವತೆಗಳ ಲಿಂಗ ಸಂಜ್ಞೆಯವನ್ನು ಒಡಕಾಗಿ ನಿಂತಿದೆ. ಇವು ಇಂದಿನ ರೂಪಗಳನ್ನು ತಿಳಿಯಲು ಒಟ್ಟೊಟ್ಟಿಗೆ, ಸಹಾಯ ಮಾಡುತ್ತವೆಂದು ನಂಬುಗೆ ಶಂ. ಬಾ. ರವರಿಗೆ ಎಂದಿನಿಂದಲೂ ಇತ್ತು."[೨೪]

೨.೨.೨ ರಾಯಬಾಗದ ಪೌರಾಣಿಕ ಮತ್ತು ಪ್ರಾಗ್ಇತಿಹಾಸ :

ರಾಯಬಾಗದ ಐತಿಹಾಸಿಕ ಪರಂಪರೆ, ಪ್ರಾಚೀನವೂ ವಿಶಿಷ್ಟವೂ ಆದುದಾಗಿದೆ. ಭೌಗೋಳಿಕವಾಗಿ ಬೆಳಗಾವಿ ಜಿಲ್ಲೆಯಲ್ಲಿ ರಾಯಬಾಗವು ತನ್ನದೇ ಆದ ಪ್ರತ್ಯೇಕ ವಲಯವನ್ನು ಹೊಂದಿದ್ದು ಅದು ಕರ್ನಾಟಕದ ವೈವಿಧ್ಯತೆಯನ್ನು ಹೆಚ್ಚಿಸಿದೆ. ಈ ಪರಿಸರದ ಪ್ರಾಚೀನತೆಯು ರಾಜ್ಯದಲ್ಲಿ ಕಂಡು ಬರುವ ಪ್ರಾಚೀನತೆಗೆ ಸರಿಸಮನಾಗಿ ಬೆಳೆದು ಬಂದಿದೆ. ಶಿಲಾಯುಗದ ಪ್ರಾರಂಭದಿಂದ ಇತಿಹಾಸದ ಕಾಲದವರೆಗಿನ ಮಾನವನ ವಿವಿಧ ಸಾಂಸ್ಕೃತಿಕ ಸ್ತರಗಳು ಇಲ್ಲಿ ಬೆಳೆದು ಬಂದಿರುವುದಕ್ಕೆ ಗಣನೀಯ ಕುರುಹುಗಳು ದೊರೆತಿವೆ.

ರಾಯಬಾಗದ ಅನೇಕ ಸ್ಥಳಗಳು ರಾಮಾಯಣ ಮಹಾಭಾರತಗಳೊಂದಿಗೆ ಸಂಬಂಧ ಕಲ್ಪಿಸುವ ಐತಿಹ್ಯಗಳನ್ನು ಹೊಂದಿವೆ. ರಾಯಬಾಗದಿಂದ ಸುಮಾರು ೨೦ ಕಿ. ಮೀ. ಅಂತರದಲ್ಲಿ ರಾಮನಕಟ್ಟೆ ಗ್ರಾಮವಿದ್ದು, ಅಲ್ಲಿ ರಾಮನಿಂದ ನಿರ್ಮಿತವಾದ ಒಂದು ಹೊಂಡದ ಬಗ್ಗೆ ಸ್ಥಳೀಯರು ವಿವರಿಸುತ್ತಾರೆ. ವನವಾಸದ ಕಾಲದಲ್ಲಿ ಶ್ರೀರಾಮನು ಸೀತೆ, ಲಕ್ಷ್ಮಣರೊಂದಿಗೆ ಆಗಮಿಸಿ ಒಂದು ದಿನ ನಂದಿಕುರುಳಿಯಲ್ಲಿ ವಾಸಮಾಡಿದ್ದರಂತೆ. ಮರುದಿನ ಬೆಟ್ಟ ಗುಡ್ಡಗಳ ಮಧ್ಯೆ ರಾಮನಕಟ್ಟೆ ಸಮೀಪ ಹಾಯ್ದು ಹೋಗುವಾಗ ಸೀತೆಗೆ ಬಾಯಾರಿಕೆಯಾಗಿ ಕೃಷ್ಣೆಯ ನೀರನ್ನು ಕೇಳಿದಳು. ರಾಮನು ಸೀತೆಯ ಬಾಯಾರಿಕೆಯನ್ನು ತಣಿಸುವುದಕ್ಕಾಗಿ ಬಾಣ ಹೊಡೆದು ಕೃಷ್ಣೆಯನ್ನು ಕಾರಂಜಿ ರೂಪದಲ್ಲಿ ಅಲ್ಲಿ ಹರಿಸಿದನೆಂದು ಪ್ರತೀತಿ ಇದೆ. ಕಾರಂಜಿ ನಿರ್ಮಾಣವಾದ ಸ್ಥಳದಲ್ಲಿ ಹೊಂಡವಿದ್ದು ಸದಾಕಾಲವೂ ನೀರಿನಿಂದ ತುಂಬಿಕೊಂಡಿರುತ್ತದೆ. ರಾಮ ಕುಳಿತು

ವಿಶ್ರಮಿಸಿದ ಸ್ಥಳಕ್ಕೆ ಇಂದಿಗೂ ಜನ ಅದನ್ನು ರಾಮನಕಟ್ಟೆ ಎಂದು ಕರೆಯುತ್ತಾರೆ. ರಾಯಬಾಗದಿಂದ ಸುಮಾರು ೧೦ ಕಿ. ಮೀ. ದೂರದಲ್ಲಿ ಬಾವನಾಸವದತ್ತಿ ಗ್ರಾಮವಿದ್ದು, ಮಹಾಭಾರತದಲ್ಲಿ ಪ್ರಸ್ತಾಪಿತ ಸೌಗಂಧವತಿಯು ಇಲ್ಲಿಯ ನಿವಾಸಿಯಾಗಿದ್ದಳೆಂಬುದು ಅವಳಿಗಾಗಿ ನಿರ್ಮಿಸಿದ ದೇವಾಲಯದಿಂದ ಸ್ಪಷ್ಟವಾಗುತ್ತದೆ. ಹೀಗೆ ಪುರಾಣೇತಿಹಾಸಗಳಲ್ಲಿ ಬರುವ ಸಂಗತಿಗಳಿಗೂ ರಾಯಬಾಗ ಪರಿಸರಕ್ಕೂ ನಿಕಟ ಸಂಬಂಧವಿರುವುದು ತಿಳಿದುಬರುತ್ತದೆ. ಈ ರೀತಿಯ ಪೌರಾಣಿಕ ಅಂಶಗಳ ಘಟನೆಯನ್ನು ತಮ್ಮ ಪರಿಸರದೊಂದಿಗೆ ಹೆಮ್ಮೆಯಿಂದ ಗುರುತಿಸಿಕೊಳ್ಳುವ ಜನಪದರ ಭಾವನೆಗಳು, ಅವುಗಳೊಂದಿಗೆ ಅವರು ಹೊಂದಿರುವ ಭಾವನಾತ್ಮಕ ಸಂಬಂಧವನ್ನು ಸೂಚಿಸುತ್ತವೆ.

ದಕ್ಷಿಣ ಭಾರತದ ಎರಡನೇ ಅತೀ ದೊಡ್ಡ ನದಿ ಕೃಷ್ಣಾ. ಮಹಾರಾಷ್ಟ್ರದ ಮಹಾಬಳೇಶ್ವರದಲ್ಲಿ ಉಗಮಿಸುವ ಕೃಷ್ಣೆ, ಕರ್ನಾಟಕ, ಆಂಧ್ರಗಳ ಮೂಲಕ ಸುಮಾರು ೧೩೯೨ ಕಿ. ಮೀ. ಗಳಷ್ಟು ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಮಹಾರಾಷ್ಟ್ರದಿಂದ ಹರಿದು ಬರುವ ಕೃಷ್ಣೆ ಚಿಕ್ಕೋಡಿ ತಾಲೂಕಿನ ಮೂಲಕ ರಾಯಬಾಗ ತಾಲೂಕನ್ನು ಪ್ರವೇಶಿಸಿ ಕರ್ನಾಟಕದಲ್ಲಿ ಸುಮಾರು ೪೮೩ ಕಿ. ಮೀ. ಗಳಷ್ಟು ಹರಿಯುತ್ತದೆ. ಕೃಷ್ಣಾ ನದಿ ತೀರದ ಗ್ರಾಮಗಳ ಒಡಲಲ್ಲಿ ಇತಿಹಾಸ ಪೂರ್ವದ ಅದೆಷ್ಟೋ ಅವಶೇಷಗಳು ಅಡಗಿರುವುದು ಕಂಡು ಬರುತ್ತದೆ.

ಕೃಷ್ಣಾ ನದಿತೀರ ಪ್ರದೇಶಗಳು ಪ್ರಾಚೀನ ಶಿಲಾಯುಗ ಮಾನವನ ಚಟುವಟಿಕೆಯ ನೆಲೆಗಳಾಗಿದ್ದು, ಆದಿ (ಹಳೆ) ಶಿಲಾಯುಗದ ನೂರಾರು ಆಯುಧೋಪಕರಣಗಳು ಕೃಷ್ಣಾ ನದಿತೀರದಲ್ಲಿ ಪತ್ತೆಯಾಗಿವೆ. ಸುಮಾರು ೫೦ ವರ್ಷಗಳ ಹಿಂದೆ ರಾಯಬಾಗ ತಾಲೂಕಿನ ಕೃಷ್ಣಾನದಿ ತೀರದ ಕುಡಚಿಯಲ್ಲಿ ಆದಿಮಾನವನ ೫ ಪ್ರಾಚ್ಯ ನೆಲೆಗಳನ್ನು ಮೊದಲು ಗುರುತಿಸಿದವರು ಡಾ. ಅ. ಸುಂದರ. ನಂತರದಲ್ಲಿ ೨೦೦೫ರಲ್ಲಿ ಮತ್ತೊಮ್ಮೆ ಉತ್ಖನನ ಕಾರ್ಯ ಕೈಕೊಂಡ ಡಾ. ಶ್ರೀನಿವಾಸ ಪಾಡಿಗಾರ ಅವರ ನೇತ್ರತ್ವದ ತಂಡ ಇನ್ನೆರಡು ಪ್ರಾಚ್ಯ ನೆಲೆಗಳನ್ನು ಗುರುತಿಸಿದ್ದಾರೆ. ನದಿ ತೀರದ ನೆಲೆಗಳಲ್ಲಿ, ಮಸ್ಕಿ ಹಾಗೂ ಸಾವಳ್ಗಾ ಮಾದರಿಯ ಮಡಕೆ ಚೂರುಗಳು, ಅವಶೇಷಗಳು ಉತ್ಖನನದಲ್ಲಿ ದೊರೆತಿವೆ. ಈಗಲೂ ಈ ಕ್ಷೇತ್ರದಲ್ಲಿ ಮಡಿಕೆ ಚೂರುಗಳು, ಎಲುವಿನ ತುಂಡುಗಳು, ಶಿಲಾಯುಗದ ಜನರು ಉಪಯೋಗಿಸುತ್ತಿದ್ದ ಮೊಣಚು ಹಾಗೂ ಬೆಣಚು ಕಲ್ಲಿನ ಆಯುಧಗಳು ಅಪಾರ ಪ್ರಮಾಣದಲ್ಲಿ ಸಿಗುತ್ತವೆ. ಈ ಪ್ರಾಚ್ಯ ನೆಲೆಗಳು ರಾಯಬಾಗದ ಚರಿತ್ರೆಯನ್ನು ಆದಿಮಾನವನಿಂದ ಆಧುನಿಕ ಕಾಲದವರೆಗಿನ ಇತಿಹಾಸವನ್ನು ಸಾಕ್ಷಿಕರಿಸುತ್ತವೆ. ಕುಡಚಿ, ಚಿಂಚಲಿ, ಬೂದಿಹಾಳ ಮತ್ತು ಇನ್ನಿತರ ಸ್ಥಳಗಳಲ್ಲಿ ಬೂದಿದಿಬ್ಬಗಳು ಇರುವುದು ಕಂಡು ಬರುತ್ತದೆ.

ಖೇಮಲಾಪೂರದ ಸಮೀಪದ ಬೂದಿಹಾಳ (ಈಗ ಅಸ್ತಿತ್ವದಲ್ಲಿಲ್ಲ)ದಲ್ಲಿ ಇತಿಹಾಸ ಪೂರ್ವ ಕಾಲದಲ್ಲಿ ರೇಖಾ ಚಿತ್ರವೊಂದನ್ನು ಕೊರೆದ ಬಂಡೆಗಲ್ಲು ಲಭ್ಯವಾಗಿದೆ. ಅದರಲ್ಲಿ ಆಕಳನ್ನು ಹೋಲುವ ಪ್ರಾಣಿಯ ಮತ್ತು ಡಮರುಗದ ರೇಖಾ ಚಿತ್ರವಿದೆ. ಈ ಚಿತ್ರಗಳು ಒಂದು ಕಾಲದ ಜನಜೀವನದ ಸಾಂಸ್ಕೃತಿಕ ಕುರುಹುಗಳಂತೆ ನಮಗೆ ಗೋಚರಿಸುತ್ತವೆ. ಇದನ್ನು ಆಧರಿಸಿ ಅಂದಿನ ಜನರ ಮುಖ್ಯ ಉದ್ಯೋಗ ಮತ್ತು ಧಾರ್ಮಿಕ ಬದುಕನ್ನು ಕಟ್ಟಿಕೊಡಬಹುದಾಗಿದೆ. ಈ ಪ್ರಾಣಿಯ ಚಿತ್ರಣವು ಪಶುಪಾಲನೆಯ ಸಂಸ್ಕೃತಿಯ ಪ್ರಾಚೀನತೆಯನ್ನು ಗುರುತಿಸುವಲ್ಲಿ ಬಹು ಮುಖ್ಯ ಆಧಾರವಾಗುತ್ತದೆ. ಡಮರುಗದ ಚಿತ್ರದಿಂದ ಶೈವ

ಸಂಸ್ಕೃತಿಯು ಪ್ರಾಚೀನ ಕಾಲದಲ್ಲಿಯೇ ಆರಂಭವಾಗಿತ್ತೆಂದು ಊಹಿಸಬಹುದಾಗಿದೆ. ತಾಲೂಕಿನ ಇತಿಹಾಸ ಪೂರ್ವ ಕಾಲದ ಮಾನವನ ವಿಕಾಸದ ವಿವಿಧ ಹಂತಗಳನ್ನು, ವಿಶ್ವದ ವಿವಿಧ ಭಾಗಗಳಲ್ಲಾದ ಮಾನವ ವಿಕಾಸದ ಹಿನ್ನೆಲೆಯಲ್ಲಿ ತುಲನಾತ್ಮಕವಾಗಿ ವಿವೇಚಿಸಿ ರಾಯಬಾಗ ಪರಿಸರದ ಪ್ರಾಗಿತಿಹಾಸವನ್ನು ಅರಿಯಬಹುದಾಗಿದೆ.

೨.೨.೩ ರಾಯಬಾಗ ತಾಲೂಕಿನ ಚರಿತ್ರೆ :

ಇಂದು ಬೆಳಗಾವಿ ಜಿಲ್ಲೆಯ ಒಂದು ಪ್ರಮುಖ ತಾಲೂಕಾ ಸ್ಥಳವಾದ ರಾಯಬಾಗ, ಜಿಲ್ಲಾ ಸ್ಥಾನದಿಂದ ಸುಮಾರು ೯೦ ಕೀ. ಮೀ. ದೂರದಲ್ಲಿದೆ. ರಾಯಬಾಗ ಪಟ್ಟಣವು, ಬೆಳಗಾವಿಯಿಂದ ಉತ್ತರ ಭಾಗದಲ್ಲಿ ಸ್ಥಾನೀಕರಣ ಹೊಂದಿದ್ದು ವಾರ್ಷಿಕ ಮಳೆಯ ಪ್ರಮಾಣ ಸರಾಸರಿ ೫೮೯.೫ ಮಿ. ಮೀ. ಉತ್ತರ ಮತ್ತು ವಾಯುವ್ಯ ಭಾಗದಲ್ಲಿ ಕೃಷ್ಣಾ ನದಿ ಹರಿದಿದೆ. ಕೃಷ್ಣಾ ಕಣಿವೆ ಪ್ರದೇಶ ಬಿಟ್ಟರೆ ಉಳಿದೆಡೆ ಫಲವತ್ತಾದ ಮಣ್ಣು ಕಂಡು ಬರುವುದಿಲ್ಲ. ಸ್ವಲ್ಪ ದೂರದಲ್ಲಿಯೇ ಕೃಷ್ಣಾ ಹಾಗೂ ಘಟಪ್ರಭಾ ನದಿಗಳು ಹರಿಯುತ್ತಿರುವುದರಿಂದ ಈ ಭೂಪ್ರದೇಶ ನಂದನವನವಾಗಿ ಕಂಗೊಳಿಸುತ್ತಿದೆ. ರಾಯಬಾಗವು ದಕ್ಷಿಣೋತ್ತರವಾಗಿ, ಪೂರ್ವಪಶ್ಚಿಮವಾಗಿ ಅಕ್ಷಾಂಶ-ರೇಖಾಂಶಗಳ ಮಧ್ಯ ೧೭೮೧೭ ಹೆಕ್ಟೇರುಗಳಷ್ಟು ವಿಸ್ತೀರ್ಣವನ್ನು, ೨೦೦೧ ರ ಜನಗಣತಿಯ ಪ್ರಕಾರ ೩೮೫೦೦೦ ರಷ್ಟು ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಸಮಶೀತೋಷ್ಣ ವಾತಾವರಣದಿಂದ ಕೂಡಿದ ಪ್ರದೇಶವಾಗಿದೆ. ಭಾಗೋಳಿಕವಾಗಿ ರಾಯಬಾಗದ ಉತ್ತರಕ್ಕೆ ಅಥಣಿ ತಾಲೂಕು, ದಕ್ಷಿಣಕ್ಕೆ ಗೋಕಾಕ ತಾಲೂಕು, ಪೂರ್ವಕ್ಕೆ ಜಮಖಂಡಿ ಮತ್ತು ಮುಧೋಳ ತಾಲೂಕು, ಪಶ್ಚಿಮಕ್ಕೆ ಚಿಕ್ಕೋಡಿ ತಾಲೂಕು, ವಾಯುವ್ಯಕ್ಕೆ ಕಾಗವಾಡ, ಈಶಾನ್ಯಕ್ಕೆ ತೇರದಾಳ, ಆಗ್ನೇಯಕ್ಕೆ ಮಹಾಲಿಂಗಪೂರ ಮತ್ತು ಮೂಡಲಗಿ, ನೈಋತ್ಯಕ್ಕೆ ಬಾಗೇವಾಡಿ ಮತ್ತು ಹುಕ್ಕೇರಿ ತಾಲೂಕುಗಳ ಮೇರೆಯನ್ನು ಹೊಂದಿದೆ. ಕೃಷ್ಣಾ ಮತ್ತು ಘಟಪ್ರಭಾ ನದಿಗಳಿಂದಾಗಿ ಮತ್ತು ಕೆರೆ, ಕಾಲುವೆ ಹಾಗೂ ಕೊಳವೆಬಾವಿಗಳಿಂದ ಈ ಪ್ರದೇಶ ನೀರಾವರಿ ಕ್ಷೇತ್ರವಾಗಿ ಪರಿಣಮಿಸಿದೆ. ಇಲ್ಲಿನ ಪ್ರಮುಖ ಬೆಳೆಗಳೆಂದರೆ ಕಬ್ಬು, ಗೋವಿನಜೋಳ, ಗೋಧಿ, ಕಡಲೆ, ಎಣ್ಣೆಬೀಜಗಳು, ದ್ವಿದಳದಾನ್ಯಗಳು, ಬಾಳೆ ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ. ಇತ್ತೀಚೆಗೆ ಅರಿಶಿಣವನ್ನು ಆರ್ಥಿಕ ಬೆಳೆಯಾಗಿ ಬೆಳೆಯಲಾಗುತ್ತಿದೆ.

ರಾಯಬಾಗದ ಉತ್ತರ ದಿಕ್ಕಿನಲ್ಲಿ ಹರಿಯುವ ಕೃಷ್ಣಾ ನದಿ ರಾಯಬಾಗ ಮತ್ತು ಅಥಣಿ ತಾಲ್ಲೂಕುಗಳನ್ನು ಬೇರ್ಪಡಿಸುವ ಮೇರೆಯಾಗಿದೆ. ಈ ಪರಿಸರವು ಬೆಟ್ಟ ಕಣಿವೆಗಳಿಂದ ಕೂಡಿದ್ದು, ಒಂದು ಕಾಲದಲ್ಲಿ ಕುರುಚಲು ಕಾಡಾಗಿರಬಹುದು. ಬಾವಾನ-ಸವದತ್ತಿ, ದಿಗ್ಗೇವಾಡಿ, ಜಲಾಲಪೂರ, ಚಿಂಚಲಿ, ಕುಡಚಿ, ಗುಂಡವಾಡ, ಶಿರಗೂರ, ಪರಮಾನಂದವಾಡಿ, ಖೇಮಲಾಪೂರ, ಸಿದ್ಧಾಪೂರ ಮೊದಲಾದವು ಕೃಷ್ಣಾ ತೀರದ ಗ್ರಾಮಗಳು. ಇವುಗಳನ್ನು ಹೊರತುಪಡಿಸಿ ಪಶ್ಚಿಮ ಹಾಗೂ ದಕ್ಷಿಣ ಭಾಗ ಸಂಪೂರ್ಣವಾಗಿ ಬೆಟ್ಟಗಳಿಂದ ಕೂಡಿದೆ. ಅಲ್ಲಿಯ ಮಣ್ಣಿನ ಬಣ್ಣ ನಸುಗೆಂಪು. ಗರುಸಿನಿಂದ ಕೂಡಿದ ಮಸಾರಿ. ಕೃಷ್ಣಾ ತೀರದಲ್ಲಿ ಮಾತ್ರ ಕಪ್ಪು ಮಣ್ಣಿದೆ. ಆದರೆ ನದಿಯಿಂದ ೨-೩ ಕಿ.ಮೀ. ದಕ್ಷಿಣಕ್ಕೆ ಬಂದರೆ ಎತ್ತರದ ಬೆಟ್ಟಗಳು, ನದಿ ತೀರ, ಬಯಲು ಪ್ರದೇಶ ಹಾಗೂ ಕುರುಚಲು ಬೆಟ್ಟಗಳಲ್ಲಿ ಆದಿ ಮಾನವನ ನೆಲೆಗಳಿದ್ದು, ಅವುಗಳನ್ನು ಅಧ್ಯಯನಿಸುವ ಅವಶ್ಯಕತೆ ಇದೆ. ರಾಯಬಾಗ ತಾಲೂಕಿನ ಚರಿತ್ರೆ ಇತಿಹಾಸದ ಪುಟಗಳಲ್ಲಿ ಸ್ಪಷ್ಟವಾಗಿ

ಚಿತ್ರಿತವಾಗಿಲ್ಲ. ಸಾಧ್ಯವಿದ್ದಷ್ಟು ಆ ಚರಿತ್ರೆಯನ್ನು ಕಟ್ಟು ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸದ್ಯ ಲಭ್ಯವಿರುವ ಮಾಹಿತಿಯಂತೆ ರಾಯಬಾಗ ತಾಲೂಕಿನ ಇತಿಹಾಸ ಕಲ್ಯಾಣ ಚಾಲುಕ್ಯರಿಂದ ಮೊದಲಾಗುತ್ತದೆ. ಕಲ್ಯಾಣ ಚಾಲುಕ್ಯರ ಸಾಮಂತರಾದ ರಟ್ಟರು ಈ ಪ್ರದೇಶಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಶಾಸನಗಳು ಇದನ್ನು 'ಕುಂತಣಬಾಗೆ' ಎಂದು ಗುರುತಿಸುತ್ತವೆ. 'ಕುಂತಣ' ಎಂಬುದು ಕುಂತಳ ಪದದ ತದ್ಭವ; 'ಕುಂತಣ' ಎಂದರೆ ಕುಂದಣ ಕರ್ನಾಟಕ. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಕುಂತಣ, ಕುಂತಳ, ಕುಂದಣ ಎಂದು ಕರೆಯಲಾಗುತ್ತಿತ್ತು. ರಾಯಬಾಗವನ್ನು ಶಾಸನಗಳು 'ಕುಂತಣಬಾಗೆ' ಎಂದು ಗುರುತಿಸಿರುವುದು ವಿಶೇಷ ಗಮನೀಯ. ರಾಯಬಾಗ ತಾಲೂಕಿನಲ್ಲಿಯ ಒಂದು ಗ್ರಾಮವಾಗಿರುವ ಈಗಿನ ಕಂಕಣವಾಡಿ ಪ್ರಾಚೀನ ಕರ್ನಾಟಕದ ಕಂಕಣೂರು. ಇದು ರಟ್ಟರ ಉಪರಾಜಧಾನಿಯಾಗಿತ್ತು. ನಂತರದಲ್ಲಿ ಈ ಭಾಗವನ್ನು ಮೊಘಲ್, ಬಹಮನಿ ಸುಲ್ತಾನರು, ವಿಜಾಪುರದ ಆದಿಲ್‌ಶಾಹಿಗಳು, ಮರಾಠರು ಆಳಿದ್ದಕ್ಕೆ ಈ ತಾಲೂಕಿನಲ್ಲಿ ದೊರಕಿರುವ ಅವಶೇಷಗಳು, ದಾಖಲೆಗಳು, ಶಾಸನಗಳೇ ಸಾಕ್ಷಿಯಾಗಿವೆ. ಆದರೆ ರಾಯಬಾಗ ತಾಲೂಕಿನ ಚರಿತ್ರೆ ಆರಂಭಗೊಳ್ಳುವುದು ೧೧ನೇ ಶತಮಾನದಿಂದ. ೧೧ನೇ ಶತಮಾನದ ಪೂರ್ವದ ಇತಿಹಾಸದ ಕುರಿತಾದ ದಾಖಲೆಗಳು ಅತೀ ವಿರಳ.

ರಾಯಬಾಗ ತಾಲೂಕಗಳನ್ನೊಳಗೊಂಡು ಇಂದಿನ ಬೆಳಗಾವಿ ಜಿಲ್ಲೆಯ ಬಹುಭಾಗ ಪ್ರಾಚೀನ ಕರ್ನಾಟಕದ ಕುಹೂಂಡಿ ಮೂಸಾಸಿರ ವಿಭಾಗಕ್ಕೊಳಪಟ್ಟಿತ್ತು. ಕುಹೂಂಡಿ ಮಂಡಲವು ೧೪ ಭಾಗಗಳನ್ನು ಒಳಗೊಂಡಿದ್ದು, ಪೂವಿನಬಾಗೆ (ರಾಯಬಾಗ) ಅದರಲ್ಲಿಯ ಒಂದು ಭಾಗವಾಗಿತ್ತು. ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಹಾಗೂ ಕಲಚೂರ್ಯರಿಗೆ ಮಾಂಡಲಿಕರಾಗಿ ನಂತರದಲ್ಲಿ ಕೆಲಕಾಲ ಸ್ವತಂತ್ರರಾಗಿ, ಕ್ರಿ. ಶ. ೯೩೦ ರಿಂದ ೧೨೩೦ರ ವರೆಗಿನ ಸುಮಾರು ೩೦೦ ವರ್ಷಗಳ ಕಾಲ, ತೇರದಾಳ, ರಾಯಬಾಗ, ಯಕ್ಸಂಬಾ, ಕಲ್ಲೋಳಿ, ಕೊಣ್ಣೂರು, ಸಂಕೇಶ್ವರ ಮುಂತಾದ ಆಡಳಿತ ಕೇಂದ್ರಗಳನ್ನು ಆಳಿದ ಶ್ರೇಯಸ್ಸು ಸವದತ್ತಿ ರಟ್ಟರಿಗೆ ಸಲ್ಲುತ್ತದೆ. ಅದಕ್ಕೂ ಮೊದಲು ಇದು ಕಲ್ಯಾಣದ ಚಾಲುಕ್ಯರ ಆಡಳಿತಕ್ಕೆ ಸೇರಿತ್ತು. ಈಗ ರಾಯಬಾಗ ತಾಲೂಕಿನ ಬಹಳಷ್ಟು ಪ್ರಾಚೀನ ದೇವಾಲಯಗಳು ಬಾದಾಮಿ ಚಾಲುಕ್ಯ ವಾಸ್ತು ಮಾದರಿಯಲ್ಲಿರುವುದನ್ನು ಗಮನಿಸಿದರೆ ಈ ಭಾಗದಲ್ಲಿ ಅವರು ಆಡಳಿತ ನಡೆಸಿರಬಹುದೆಂದು ಊಹಿಸಬಹುದಾಗಿದೆ. ಆದರೆ ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯರ ಆಡಳಿತದ ಯಾವ ದಾಖಲೆಗಳಾಗಲಿ, ಚರಿತ್ರೆಯ ಉಲ್ಲೇಖಗಳಾಗಲಿ ಸಿಗುವುದಿಲ್ಲ.

ತಾಲ್ಲೂಕಾ ಕೇಂದ್ರವಾಗಿರುವ ಇಂದಿನ ರಾಯಬಾಗ, ಪ್ರಾಚೀನ ಕರ್ನಾಟಕದ 'ಕುಂತಣ ಬಾಗೆ'. ಕುಂತಣ ಬಾಗೆ, ಕುಹೂಂಡಿ ಮಂಡಲದ ಒಂದು ಭಾಗವಾಗಿತ್ತು. ಇದನ್ನು 'ತೆಂಕಲು ಬಾಗೆ' ಎಂದೂ ಗುರುತಿಸುತ್ತಿದ್ದರು. ಕ್ರಮೇಣ ಅದು ಪೂವಿನ ಬಾಗೆ, ಪೂಬಾಗೆ, ಬಾಗೆ, ಪೂಬಾಗಿ, ಬಾಗಿ ಎಂದು ಹೆಸರು ಬದಲಿಸಿಕೊಂಡಿತು. ಜನರ ಬಾಯಿಯಲ್ಲಿ 'ರಾಯಬಾಗ' ಇಂದಿಗೂ ಬಾಗೆ. ಈ ಪರಿಸರವನ್ನು ಬಾಗೆನಾಡು ಎಂದು ಕರೆಯುವುದು ರೂಢಿ. ರಟ್ಟರ ಉಪರಾಜಧಾನಿಯಾಗಿ ಸರ್ವಧರ್ಮ ಸಮನ್ವಯದ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ವ್ಯಾಪಾರಿ ಕೇಂದ್ರವಾಗಿ ರಾಯಬಾಗ ಮೆರೆದಿದೆ. ಸಹಜವಾದ ನಿಸರ್ಗ ಸೌಂದರ್ಯದಿಂದ

ಕೂಡಿರುವ ರಾಯಬಾಗನ್ನು ಹಲವು ಹೆಸರುಗಳಿಂದ ಶಾಸನಗಳಲ್ಲಿ ಕರೆಯಲಾಗಿದೆ. ಇಲ್ಲಿ ದೊರೆತ ೧೫ ಶಾಸನಗಳಲ್ಲಿ ೧೩ ಪ್ರಕಟಗೊಂಡಿವೆ. ಅವುಗಳಲ್ಲಿ ೧೧ ರಾಯಬಾಗಕ್ಕೆ ಸಂಬಂಧಿಸಿವೆ. ಉಳಿದ ನಾಲ್ಕರಲ್ಲಿ ೧ ನಂದಿಕುರಳಿ, ೨ ಕುಡಚಿ ಮತ್ತು ೧ ಮುಗಳಖೋಡದಲ್ಲಿ ದೊರಕಿವೆ.

"ಈಚೆಗೆ ರಾಯಬಾಗದಲ್ಲಿ ರಟ್ಟರ ಕಾಲದ ಸುಮಾರು ೨೫ ವಿವಿಧ ಗಾತ್ರದ ಲೋಹದ ವಿಗ್ರಹಗಳು ದೊರಕಿದ್ದು, ಕೆಲವು ವಿಗ್ರಹಗಳ ಪಾದಪೀಠಗಳ ಮೇಲೆ ಶಾಸನಗಳಿವೆ. ಈಚೆಗೆ ನಂದಿಕುರಳಿ ಗ್ರಾಮದ ಮಾನಸ್ತಂಭದ ಹತ್ತಿರ ನಾಲ್ಕು ಅಪ್ರಕಟಿತ ಶಾಸನಗಳು ಇದ್ದಿರುವುದಾಗಿ ತಿಳಿದು ಬಂದಿದೆ. ಇವೆಲ್ಲ ಸೇರಿದರೆ ರಾಯಬಾಗ ತಾಲೂಕಿನ ಶಾಸನಗಳ ಸಂಖ್ಯೆ ಮತ್ತಷ್ಟು ಹೆಚ್ಚುತ್ತದೆ."[೨೫]

ರಾಯಬಾಗದ ಪರಿಸರವನ್ನು ಉಲ್ಲೇಖಿಸುವ, ಹತ್ತು- ಹನ್ನೊಂದನೇ ಶತಮಾನಕ್ಕೆ ಸೇರಿದ ಅನೇಕ ಪ್ರಾಚೀನ ಶಾಸನಗಳು ಸಿಗುತ್ತವೆ. ರಾಯಬಾಗದ ಮೊದಲ ಹೆಸರು ಪೂವಿನಬಾಗೆ ಇಲ್ಲವೇ ಬಾಗ ಎಂದು ಶಾಸನಗಳಿಂದ ತಿಳಿದು ಬರುತ್ತದೆ. "ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕ್ರಿ. ಶ. ೧೧೮೫ರ ಹನ್ನಿಕೇರಿ ಶಾಸನದಲ್ಲಿ ತೆಂಕಲುಬಾಗಿ ಎಂದು ಉಲ್ಲೇಖವಾಗಿದೆ. ಇದೊಂದು ಘಟಿಕಾಸ್ಥಾನವೂ ಹೌದು."[೨೬] ಒಟ್ಟಿನಲ್ಲಿ ಇಂದಿನ ರಾಯಬಾಗವು, ಪೂವಿನಬಾಗೆ, ಹೂವಿನಬಾಗೆ, ತೆಂಕಲುಬಾಗಿ, ರಾಯರಬಾಗ, ಬಾಗಿನಾಡು ಎಂದು ರೂಢಿಯಲ್ಲಿ ಬಂದಿದೆ.

ಹನ್ನಿಕೇರಿ ಶಾಸನವು ರಾಯಬಾಗಕ್ಕೆ ತೀರ್ಥ ಕ್ಷೇತ್ರದ ಮಾನ್ಯತೆ ನೀಡಿದೆ. ಉತ್ತರದಲ್ಲಿ ಪ್ರಯಾಗ ಮಹಾಕ್ಷೇತ್ರ ವಿದ್ದಂತೆ ಪಶ್ಚಿಮದಲ್ಲಿ ತೆಂಕಲುಬಾಗೆ ಎಂದು ವರ್ಣಿಸಿಲಾಗಿದೆ. ಇಂದಿಗೂ ಈ ಪರಿಸರದಲ್ಲಿ ಅನೇಕ ಪ್ರಾಚೀನ ದೇವಾಲಯಗಳಿದ್ದು ಅವು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿವೆ. ಬೆಳಗಾವಿ ಜಿಲ್ಲೆಯ ಗೇಜಿಟಿಯರ ರಾಯಬಾಗ ಪರಿಸರದ ಜೀನಾಲಯಗಳನ್ನು ಸುಂದರವಾಗಿ ವಿವರಿಸಿದೆ. ರಾಯಬಾಗದ ಜೈನಗಲ್ಲಿಯಲ್ಲಿ ಪುರಾತನ ಬಸದಿಯಿದ್ದು, ಅದು ಕಲ್ಯಾಣಿ ಚಾಲುಕ್ಯರ ನಂತರದ ಶೈಲಿಯಲ್ಲಿದೆ. ಪ್ರಸ್ತುತ ಬಸದಿಯು ಕ್ರಿ. ಶ. ೧೦೪೦ರ ಸುಮಾರಿನಲ್ಲಿ ಕಟ್ಟಿರಬಹುದಾಗಿದೆ.

ಕ್ರಿ. ಶ. ೧೨೦೧ರ ರಾಯಬಾಗದ ಒಂದು ಜೈನ ಶಾಸನವನ್ನು ಸವದತ್ತಿ ರಟ್ಟರ ೪ನೇ ಕಾರ್ತವೀರ್ಯನು ಹೇಳಿ ಬರೆಸಿದ್ದಾನೆ. ಈ ಶಾಸನದಲ್ಲಿ ಸವದತ್ತಿ ರಟ್ಟರ ಎರಗನು ತನ್ನ ದಂಡಾಧಿಕಾರಿಯಾದ ಮಾದಿರಾಜನಿಗೆ ಯಾಪನೀಯ ಸಂಘದ ಮೂಲಬಸದಿಗಾಗಿ ಭೂಮಿಯನ್ನು ಸರ್ವಬಾಧಾ ಪರಿಹಾರವಾಗಿ ದಾನ ಮಾಡಿದ್ದಾನೆ. ಈ ಶಾಸನದಲ್ಲಿ ರಾಯಬಾಗದಲ್ಲಿ ಒಂದು ದಿಗಂಬರ ಮತ್ತು ಒಂದು ಯಾಪನೀಯ ಸಂಘದ ಬಸದಿಗಳಿರುವುದು ಸ್ಪಷ್ಟವಾಗುತ್ತದೆ. ರಟ್ಟರ ಅರಸು ಎರಗನ ಕಾಲ ಕ್ರಿ. ಶ. ೧೦೪೦. ಇವನು ಈ ಎರಡು ಬಸದಿಗಳಿಗೆ ದಾನವಾಗಿ ನೀಡಿದ ವಿವರಗಳನ್ನು ಹೇಳುವ ಶಾಸನ ಮುಂದುವರೆದು, ಪ್ರಭು ಪ್ರಧಾನವಾದ ಅವನು, ಅವೆರಡೂ ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿ ಪ್ರೀತಿಗೆ ಪಾತ್ರನಾದನು ಎಂದಿದೆ. ಇದರಿಂದ ಈ ಬಸದಿಗಳನ್ನು ಕ್ರಿ. ಶ. ೧೦೪೦ರ ಸುಮಾರಿಗಿಂತ ಮುಂಚಿತವಾಗಿ ಕಟ್ಟಲಾಗಿದೆ ಎಂದು ಊಹಿಸಲಾಗಿದೆ. ಕ್ರಿ. ಶ. ೧೧೪೯ರಲ್ಲಿ ಮಾರಸಿಂಗ ಸೆಟ್ಟಿಯು ಬಸದಿಯೊಂದನ್ನು ಕಟ್ಟಿಸಿದ್ದು, ಅದು ಯಾವ ತೀರ್ಥಂಕರನಿಗಾಗಿ ಕಟ್ಟಲಾಗಿದೆ ಎಂಬುದು ತಿಳಿದುಬಂದಿಲ್ಲ. ಕ್ರಿ. ಶ. ೧೧೪೯ರ ಕೊಲ್ಲಾಪೂರದಲ್ಲಿ ದೊರೆತ ಒಂದು ಜೈನ ಶಾಸನ ೧೧ನೇ ಜಗದೇಕಮಲ್ಲನ ಕಾಲದ್ದಾಗಿದೆ.

ರಾಯಬಾಗದಿಂದ ಸುಮಾರು ೨ ಕಿ. ಮೀ. ದೂರದಲ್ಲಿ, ಚಿಂಚಲಿಗೆ ಹೋಗುವ ಮಾರ್ಗದ ಬದಿಯಲ್ಲಿ ಗಡದ ಬಸದಿಯೆಂದು ಕರೆಯುವ ಬಸದಿ ಇದೆ. ಅದು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದು ಗರ್ಭಗೃಹ, ನವರಂಗ ಮತ್ತು ಮುಖಮಂಟಪ ಹೊಂದಿದೆ. ಗರ್ಭಗೃಹದಲ್ಲಿ ೨೪ನೇ ತೀರ್ಥಂಕರ ಮಹಾವೀರನ ಮೂರ್ತಿಯಿದೆ.

ತಾಲ್ಲೂಕಿನ ಉತ್ತರ ಮತ್ತು ವಾಯುವ್ಯ ಭಾಗಗಳಲ್ಲಿ ಕೃಷ್ಣಾನದಿ ಹರಿದಿದೆ. "ಕೃಷ್ಣಾನದಿಯ ದಡದಲ್ಲಿ ಇತಿಹಾಸ ಪೂರ್ವದ ಅವಶೇಷಗಳು ಕಾಣುತ್ತವೆ. ಕುಡಚಿ-ಚಿಂಚಲಿ ಮಧ್ಯದಲ್ಲಿ ಬೂದಿದಿಬ್ಬ ಪತ್ತೆಯಾಗಿದೆ. ಕುಡಚಿ, ಚಿಂಚಲಿ, ಜಲಾಲಪುರ, ದಿಗ್ಗೇವಾಡಿ, ಖೇಮಲಾಪುರ ಮುಂತಾದ ನದಿ ತಟದ ಗ್ರಾಮಗಳು ಇತಿಹಾಸ ಪೂರ್ವ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಬಗ್ಗೆ ದಾಖಲೆಗಳು ಲಭ್ಯವಿವೆ."[೨೭]

ನಿಸರ್ಗ ಸೌಂದರ್ಯದಿಂದ ಕೂಡಿದ ರಾಯಬಾಗ ಪಟ್ಟಣವು ಕನ್ನಡ ಸಾರಸ್ವತ ಲೋಕಕ್ಕೆ ರಾಜಾದಿತ್ಯನಂತಹ ಶ್ರೇಷ್ಠ ಕವಿ ಹಾಗೂ ಗಣಿತ ತಜ್ಞನನ್ನು ಕಾಣಿಕೆಯಾಗಿ ನೀಡಿದೆ. "ಇವನ ಕಾಲ ಹನ್ನೆರಡನೇ ಶತಮಾನ (ಕ್ರಿ.ಶ. ೧೧೯೦). ಪೂವಿನ ಬಾಗೆ ಅವನ ಜನ್ಮಸ್ಥಳ. ವ್ಯವಹಾರ ಗಣಿತ, ಕ್ಷೇತ್ರ ಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರ ಹಸುಗೆ, ಜೈನ ಗಣಿತ ಸೂತ್ರ, ಟೀಕೋದಾಹರಣ ಮೊದಲಾದ ಗಣಿತ ಗ್ರಂಥಗಳನ್ನು ರಚಿಸಿರುವ ರಾಜಾದಿತ್ಯ ಜಿನ ಧರ್ಮದ ಕವಿ."[೨೮] ಕವಿ ರಾಜಾದಿತ್ಯ ಕನ್ನಡದ ಗಣಿತ ಬ್ರಹ್ಮ, ಗಣಿತ ಭಾಸ್ಕರ. ಕನ್ನಡಕ್ಕೆ ಮೊದಲ ಗಣಿತಶಾಸ್ತ್ರವನ್ನು ನೀಡಿದ ಕೀರ್ತಿ ಇವನದು. ಈ ಪಟ್ಟಣವು ಕುಮಾರ ಕೀರ್ತಿ ಪಂಡಿತ ದೇವರಂತಹ ಶ್ರೇಷ್ಠ ಮುನಿಗಳ ಆವಾಸಸ್ಥಾನವು ಹಾಗೂ ಹಲವು ಧರ್ಮಗಳ ಕೇಂದ್ರ ಸ್ಥಾನವು ಆಗಿತ್ತೆಂದು ಇತಿಹಾಸದ ಪುಟಗಳಲ್ಲಿ ದಾಖಲಿಸಲ್ಪಟ್ಟಿದೆ.

ಕವಿ ರಾಜಾದಿತ್ಯನಿಂದ ರಚನೆಗೊಂಡ 'ವ್ಯವಹಾರ ಗಣಿತ' ಗ್ರಂಥದಲ್ಲಿ ರಾಯಬಾಗದ ಪ್ರಾಚೀನ ನಿಸರ್ಗ ಸಿರಿಯನ್ನು, 'ಕೂಂಡಿಮಂಡಲಕ್ಕನುಪಮಂ ಪೂವಿನಬಾಗೆ' ಎಂದು ವರ್ಣಿಸಲಾಗಿದೆ. ರಾಯಬಾಗವು ಒಂದೊಮ್ಮೆ ಜೈನ ಧರ್ಮದ ಪ್ರೌಢಾವಸ್ಥೆಯ ತಾಣವಾಗಿ ಮೆರೆದಿತ್ತು. "ರಾಯಬಾಗವು "ಕೂಹೂಂಡಿ ಮೂಸಾಸಿರ" ಆಡಳಿತದ ಒಂದು ಭಾಗವಾಗಿದ್ದು ದಕ್ಷಿಣಕ್ಕೆ ಘಟಪ್ರಭಾ, ಉತ್ತರಕ್ಕೆ ಕೃಷ್ಣಾನದಿಯ ಮಧ್ಯದ ನಿಸರ್ಗ ರಮಣೀಯ ತಾಣವಾಗಿದೆ. ಕುಹೂಂಡಿ ಮೂಸಾಸಿರ ನಾಡಿಗೆ ರತ್ನ ಸಮಾನವಾಗಿ ಪೂವಿನಬಾಗ ಇತ್ತೆಂಬುದು ರಾಜಾದಿತ್ಯ ಹೇಳುತ್ತಾನೆ."[೨೯] ಇದು ಸತ್ಯಕ್ಕೆ ದೂರವೆನಿಸಿದರು ಹಿಂದೊಮ್ಮೆ ಅಂಥ ಸ್ಥಾನವನ್ನು ರಾಯಬಾಗವು ಹೊಂದಿತ್ತೆಂಬುದು ಕೂಡ ಅಷ್ಟೇ ಸತ್ಯ.

ರಾಜಾದಿತ್ಯನ ದೈವ ನೇಮಿನಾಥ, ಗುರುಗಳು ಶುಭಚಂದ್ರ ಮುನಿಗಳು, ಆಶ್ರಯದಾತರು ಬಾಹುಬಲಿ, ಭರತರು. ಈ ಬಾಹುಬಲಿ ಭರತರು ಹೊಯ್ಸಳ ಎರಡನೇ ಬಲ್ಲಾಳ (ಕ್ರಿ. ಶ. ೧೧೭೩-೧೨೨೦)ನ ದಂಡನಾಯಕರು. ರಾಜಾದಿತ್ಯ 'ವ್ಯವಹಾರ ಗಣಿತ'ದ ಹಸ್ತಪ್ರತಿಯಲ್ಲಿ ವಿಷ್ಣುಪಾಲನ ಹೆಸರಿದೆ. ಈತ ಹೊಯ್ಸಳ ವಿಷ್ಣುವರ್ಧನನೇ ಆಗಿರಬೇಕು, ಅಥವಾ ವಿಷ್ನುವರ್ಧನನ ಆಸ್ಥಾನ ಪಂಡಿತನಾಗಿರಬಹುದು. ಈ ಆಧಾರದ ಎಳೆಯನ್ನು ಹಿಡಿದುಕೊಂಡು 'ಬಾಗೆನಾಡು' ಹೊಯ್ಸಳರ ಆಡಳಿತಕ್ಕೆ ಸೇರಿರಬಹುದೆಂದು ಊಹಿಸಬಹುದಾಗಿದೆ. ಈ ಊಹೆಗೆ ಪೂರಕವೆಂಬಂತೆ ಕಂಕಣವಾಡಿಯ ಲಕ್ಷ್ಮೀ ದೇವಾಲಯದ ಬೆನ್ನು ಗೋಡೆಯ ಮೇಲೆ ಹೊಯ್ಸಳ ಲಾಂಛನದ ಒಂದು ಶಿಲ್ಪವಿದೆ.

ಮುಲಿಗೆರೆಯ ತಿರುಳ್ಗನ್ನಡದಂತೆ ಕುಂತಣಬಾಗೆಯ ಕನ್ನಡ ಒಂದು ಪರಿಭಾಷೆಯಾಗಿತ್ತು. ಕವಿ ರಾಜಾದಿತ್ಯ ತಾನು ಬಾಗೆಯ ಪರಿಭಾಷೆಯಲ್ಲಿ ಬರವಣಿಗೆ ಮಾಡಿರುವುದಾಗಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಬಾಗೆಯ ಬಂಕನಾಥ ಈ ಭಾಗದಲ್ಲಿ ಸುಪ್ರಸಿದ್ಧ. ಈಗಲೂ ರಾಯಬಾಗದಲ್ಲಿ ಬಂಕನಾಥ ದೇವಾಲಯವನ್ನು ಕಾಣುತ್ತೇವೆ.

ಬಾದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಶಾಸನಗಳು ಪೂವಿನಬಾಗೆಯಲ್ಲಿ ಸಿಗುವುದಿಲ್ಲ. ಆದರೆ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ದೊರೆ ೫ನೇ ವಿಕ್ರಮಾದಿತ್ಯನ ಆಡಳಿತವನ್ನು ಸಾಕ್ಷೀಕರಿಸುವ ಶಾಸನಗಳು ಇಲ್ಲಿ ದೊರೆಯುತ್ತವೆ. ಅಂದು ಪೂವಿನಬಾಗೆಯನ್ನು ೬ನೇ ವಿಕ್ರಮಾದಿತ್ಯನ ಅಳಿಯ, ಮಹಾಮಂಡಳೇಶ್ವರ ಕೊಂಗಜರಸನು ಆಳುತ್ತಿದ್ದ. ಇವನು ವಿಕ್ರಮಾದಿತ್ಯನ ಅರಸಿ ಪದ್ಮಲದೇವಿಯ ಸಹೋದರನಾಗಿರಬೇಕು. "ಕೊಂಗಜರಸರು ವಿಕ್ರಮಾದಿತ್ಯನ ಅಳಿಯನೆಂಬುದು ರಾಯಬಾಗದ ಶಾಸನದಿಂದಲೇ ತಿಳಿದುಬರುತ್ತದೆ."[೩೦]

೫ನೇ ವಿಕ್ರಮಾದಿತ್ಯನ ನಂತರ ಅವನ ಕಿರಿಯ ಸಹೋದರನಾದ ಇಮ್ಮಡಿ ಜಯಸಿಂಹನು ಕ್ರಿ. ಶ. ೧೦೧೫ರಲ್ಲಿ ಅಧಿಕಾರ ವಹಿಸಿಕೊಂಡನು. ಇತನ ಕಾಲದಲ್ಲಿ "ರಾಜೇಂದ್ರ ಚೋಳ ತುಂಗಭದ್ರ ನದಿಯನ್ನು ಹಾಯ್ದು ಕೃಷ್ಣಾ ನದಿಯವರೆಗೂ ಆಕ್ರಮಣ ಕೈಗೊಂಡು ಜಯಸಿಂಹನನ್ನು ಸೋಲಿಸಿದನೆಂದು ತಿಳಿದುಬರುತ್ತದೆ. ಆದರೆ ಜಯಸಿಂಹನು ತನ್ನ ದಂಡನಾಯಕ ಚಾವಣರಸನ (ಪೂವಿನಬಾಗೆಯ ಮಂಡಲೇಶ್ವರನ ದಂಡನಾಯಕ) ನೇತೃತ್ವದಲ್ಲಿ ರಾಜೇಂದ್ರ ಚೋಳನನ್ನು ಸೋಲಿಸಿ ಹಿಂದಕ್ಕಟ್ಟಿದನು. ಇದೇ ಸಂದರ್ಭದಲ್ಲಿ ಪರಮಾರರ ಭೋಜರಾಜನು ಕೊಂಕಣವನ್ನು ಮುತ್ತಿದನು."[೩೧] ಇದಕ್ಕೆ ಪ್ರತಿಯಾಗಿ ಚಾಲುಕ್ಯ ಚಕ್ರವರ್ತಿ ಜಯಸಿಂಹನು ಪರಮಾರರ ರಾಜನ ಮೇಲೆ ದಂಡೆತ್ತಿ ಹೋದಾಗ ಪೂವಿನಬಾಗೆಯ ಮಹಾಮಂಡಲೇಶ್ವರನಾದ ಕೊಂಗಜರಸನು ತನ್ನ ಸೈನ್ಯದ ತುಕ್ಕಡಿಯೊಂದಿಗೆ ಯುದ್ಧಕ್ಕೆ ಹೋಗಿದ್ದನು. ಚಾಲುಕ್ಯ ಸೈನ್ಯ ಯುದ್ಧದಲ್ಲಿ ಜಯ ಪಡೆದು ಮರಳುವಾಗ ಮಾಂಡಲಿಕನಾಗಿದ್ದ ಶಿಲಾಹಾರ ಭೋಜನು ಚಾಲುಕ್ಯರ ವಿರುದ್ಧ ಯುದ್ಧ ಸಾರುತ್ತಾನೆ. ಈ ಯುದ್ಧದಲ್ಲಿ ಮಹಾಮಂಡಲೇಶ್ವರನಾದ ಕೊಂಗಜರಸನು, ಭೋಜನೂ ಮುಖಾಮುಖಿಯಾಗಿ ಕಾದಾಡುತ್ತಾರೆ. ಯುದ್ಧದಲ್ಲಿ ಕೊಂಗಜರಸನ ದಂಡನಾಯಕನಾದ ಚಂಡರಸ(ಚಾವಣ)ನು ಭೋಜನು ಕುಳಿತಿದ್ದ ಆನೆಯ ಕಡೆಗೆ ಧಾವಿಸಿ ಆನೆಯ ಮುಖದ ರಕ್ಷಾ ಕವಚ ಕಿತ್ತು ರಾಜನನ್ನು ಸಂಹರಿಸಿ ಯುದ್ಧದಲ್ಲಿ ಹೋರಾಡುತ್ತ ವೀರಮರಣ ಹೊಂದುತ್ತಾನೆ. ಈ ಯುದ್ಧವು ಕ್ರಿ. ಶ. ೧೦೨೨ ಮಾರ್ಚ್ ೧೯ ಕ್ಕಿಂತ ಮೊದಲೇ ಸಂಭವಿಸಿರಬೇಕು. ಏಕೆಂದರೆ ರಾಯಬಾಗದ ಶಾಸನದಲ್ಲಿ ವೀರಮರಣ ಹೊಂದಿದ ಚಂಡರಸನ ಸ್ಮರಣೆಗಾಗಿ ಕ್ರಿ. ಶ. ೧೦೨೨ ಮಾರ್ಚ್ ೧೯ರಂದು ವೀರಗಲ್ಲು ನೆಟ್ಟಬಗ್ಗೆ ಉಲ್ಲೇಖವಿದೆ. ಡಾ. ನಾಗಯ್ಯನವರು ಭೋಜ ಮತ್ತು ಚಂಡರಸನ ಮಧ್ಯೆ ಯುದ್ಧವು ರಾಯಬಾಗದಲ್ಲಿಯೇ ನಡೆದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಇದನ್ನು ಒಪ್ಪಲಾಗದು. ಬಹುಶಃ ಚಂಡರಸನು ರಾಯಬಾಗದವನಾಗಿದ್ದ ಕಾರಣಕ್ಕೆ ವೀರಗಲ್ಲನ್ನು ರಾಯಬಾಗದಲ್ಲಿ ನೇಡಲಾಗಿದೆ.

ಬಾಗೆನಾಡಿನ ಕಂಕನೂರನ್ನು (ಇಂದಿನ ಕಂಕಣವಾಡಿ) ರಟ್ಟ ಅರಸ ೪ನೇ ಕಾರ್ತವೀರ್ಯನ ಆಧೀನಕ್ಕೆ ಒಳಪಟ್ಟು ಮಾಂಡಲೀಕ ವೈಜರಸನು ಆಳುತ್ತಿದ್ದನು. ಕಂಕನೂರಿನ ಶಾಸನದಲ್ಲಿ ವೈಜರಸನ ನಾಲ್ಕು

ಜನ ಮಕ್ಕಳಲ್ಲಿ ಒಬ್ಬನಾದ ಹೆಮ್ಮಣಯ್ಯನನ್ನು ಕನ್ನಡದ ವಂಶಜನೆಂದು ಬಣ್ಣಿಸಲಾಗಿದ್ದು, ಜೊತೆಗೆ ಈತ ಕಲಿದೇವರು ಮತ್ತು ಎರಡು ಬಸದಿಗಳಿಗೆ ಜೀರ್ಣೋದ್ಧಾರ ಮಾಡಿದ ವಿಷಯವನ್ನು ತಿಳಿಸುತ್ತದೆ.

ರಟ್ಟರ ತರುವಾಯ ಈ ಪ್ರದೇಶ ಕೊಲ್ಲಾಪೂರದ ಶಿಲಾಹಾರರ ಆಡಳಿತಕ್ಕೆ ಒಳಪಟ್ಟಿತ್ತು. ಶಿಲಾಹಾರರರು ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಮಹಾಮಾಂಡಲೀಕರಾಗಿದ್ದರು. ಶಿಲಾಹಾರ ರಾಜ ಗಂಡರಾದಿತ್ಯನ ಮಾಂಡಲೀಕ ನಿಂಬಣಯ್ಯ (ನಿಂಬದೇವ) ಬಾಗೆನಾಡು ಪ್ರದೇಶವನ್ನು ಆಳುತ್ತಿದ್ದನು. ಈ ನಿಂಬದೇವನ ಸಹೋದರಿ ಕರ್ಣಾದೇವಿಯೇ ಶಿಲಿಹಾರ ರಾಜ ಗಂಡರಾದಿತ್ಯನ ರಾಣಿಯಾಗಿದ್ದಳು. ಇತನಿಗೂ ಮತ್ತು ಕಳಚೂರಿ ದೊರೆ ಬಿಜ್ಜಳನಿಗೂ ಯುದ್ಧ ನಡೆದು ಕೊನೆಯಲ್ಲಿ ಸಲ್ಲೇಖನ ವ್ರತ ಪಾಲಿಸಿ ಮಡಿದನೆಂದು 'ನಿಂಬಸಾಮಂತ ಚರಿತೆ' ಯಿಂದ ತಿಳಿದುಬರುತ್ತದೆ.

ಶಿಲಾಹಾರರ ನಂತರ ಕೆಲಕಾಲಾವಧಿಗೆ ಈ ಪ್ರದೇಶವು ಮುಸ್ಲಿಂರ ಆಡಳಿತಕ್ಕೆ ಒಳಪಟ್ಟಂತೆ ಕಾಣುತ್ತದೆ. ಏಕೆಂದರೆ ಈ ಸಮಯವು ಕುಡಚಿ ಮುಂಸ್ಲಿರ ಆಡಳಿತವನ್ನು ಸಾಕ್ಷಿಕರಿಸುತ್ತದೆ. ಮಹಮ್ಮದ್ ಬಿನ್ ತೊಘಲಕನ ಆಳ್ವಿಕೆಯ ಕಾಲದಲ್ಲಿ ಹಸನ್‌ಗಂಗೂ ಕುಡಚಿಯ ಜಹಗೀರದಾರನಾಗಿ ಆಡಳಿತ ಮಾಡುತ್ತಿದ್ದನು. ಇತನೇ ಮುಂದೆ ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನ ಷಾ (ಕ್ರಿ. ಶ. ೧೩೪೭-೧೩೫೮) ಹೆಸರಿನಿಂದ ಬಹಮನಿ ಸಾಮಾಜ್ರ್ಯವನ್ನು ಸ್ಥಾಪಿಸಿದನು. ಈ ಅವದಿಯಲ್ಲಿ ರಾಯಬಾಗ ಪರಿಸರವು ಸಂಪೂರ್ಣವಾಗಿ ಮುಸ್ಲಿಂರ ಆಡಳಿತಕ್ಕೆ ಒಳಪಟ್ಟಿತ್ತು. ಬಹಮನಿ ಸಾಮ್ರಾಜ್ಯ ಛಿದ್ರವಾಗಿ ೫ ರಾಜ್ಯಗಳಾಗಿ ಅಸ್ತಿತ್ವಕ್ಕೆ ಬಂದಾಗ ಈ ಪ್ರದೇಶವು ಆದಿಲ್‌ಶಾಹಿಗಳ ಆಡಳಿತಕ್ಕೆ ಒಳಪಡುತ್ತದೆ. ವಿಜಯಪುರದ ಆದಿಲ್‌ಶಾಹಿ ಮನೆತನಕ್ಕೂ ಕುಡಚಿಗೂ ಸಂಬಂಧವನ್ನು ಹೊಸೆಯಲಾಗುತ್ತದೆ. ಆದರೆ ಕುಡಚಿಯನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಮುಸ್ಲಿಂ ಪ್ರಾಬಲ್ಯ ಕಡಿಮೆ. ವಿಜಯಪುರದ ಅಧಿಕಾರಿ ಅಸಫ್‌ಖಾನ್‌ನ ಮಗ ಮಹಮ್ಮದ ಕಿಶೋರಖಾನ (ಕ್ರಿ. ಶ. ೧೫೪೯) ಹುಕ್ಕೇರಿ, ಬೆಳಗಾವಿ ಹಾಗೂ ರಾಯಬಾಗ ಆಡಳಿತ ಅಧಿಕಾರಿಯಾಗಿದ್ದನು.

ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದಲ್ಲಿ ಸಾಮ್ರಾಜ್ಯದ ಮೇರೆ ಉತ್ತರದಲ್ಲಿ ರಾಯಬಾಗದವರೆಗೂ ಹಬ್ಬಿತ್ತು. "ಕೃಷ್ಣದೇವರಾಯನ ಸೈನ್ಯಾಧಿಕಾರಿ ಬಾಗೆಯ ಬೊಮ್ಮ(ಪ್ಪ)ಣ್ಣನಾಯಕ ಈ ಭಾಗವನ್ನು ಆಳುತ್ತಿದ್ದನು. ಬೆಳಗಾವಿ ಮತ್ತು ಹುಕ್ಕೇರಿ ವಿಜಯಪುರದ ಆದಿಲ್‌ಶಾಹಿಗಳ ಆಡಳಿತಕ್ಕೆ ಒಳಪಟ್ಟಿದ್ದವು. A Kanarese Inscription dated 1514-15 (S. 1436) at ugargol three miles south-east of Saunadatti mentions the name of Bommappa, of Bagi that is Rayabag as one Krisha Ray's military officer or Naik."[೩]

ವಿಜಯಪುರದ ಆದಿಲ್‌ಶಾಹಿಯ ಕೊಲೆಯ ನಂತರ ಉಂಟಾದ ಅರಾಜಕತೆಯ ಲಾಭ ಪಡೆದುಕೊಂಡ ಅಹಮ್ಮದನಗರದ ನಿಜಾಮಷಾಹಿಗಳು ವಿಜಯಪುರವನ್ನು ಕಬಳಿಸಲು ಪ್ರಯತ್ನಿಸಿದರು. ಆದರೆ ಇದಕ್ಕೆ ವಿಜಯಪುರದ ದಿಲಾವರಖಾನ್ ಬಲವಾದ ಪೆಟ್ಟನ್ನು ನೀಡಿದನು. ದಾಳಿಯಿಂದ ಹಿಂದಿರುಗುವಾಗ ನಿಜಾಮಷಾಹಿಗಳು ಹುಕ್ಕೇರಿ, ರಾಯಬಾಗ ಮತ್ತು ಮಿರಜ್‌ಗಳನ್ನು ಲೂಟಿ ಮಾಡಿದರು. ನಂತರದಲ್ಲಿ ಈ ಪ್ರದೇಶವು ಕೆಲಕಾಲ ಮೊಘಲರ ಆಡಳಿತಕ್ಕೆ ಒಳಪಟ್ಟಿತು. ಕ್ರಿ. ಶ. ೧೬೩೫ರಲ್ಲಿ ಮೊಘಲ್‌ರ ಸೈನ್ಯಾಧಿಕಾರಿ

ಅಸಫ್‌ಖಾನ್ ಮಿರಜ ಮತ್ತು ರಾಯಬಾಗಗಳನ್ನು ಆದಿಲ್‌ಶಾಹಿಗಳಿಂದ ವಶಪಡಿಸಿಕೊಂಡಿದ್ದನು. ರಾಯಬಾಗದಲ್ಲಿ ರಣದುಲ್ಲಾಖಾನನ್ ಜಾಮಿಯಾ ಮಸೀದಿ ಇದೆ. ಈ ಮಸೀದಿಯಲ್ಲಿ ಕ್ರಿ. ಶ. ೧೬೭೯ರ ಅರೆಬಿಕ್ ಶಾಸನವಿದ್ದು ಅದನ್ನು ವಿಜಯಪುರದ ಸರದಾರ ಅಮೀನ್‌ಮುಸ್ತಫ್‌ಖಾನ್ ಕಟ್ಟಿಸಿರುವುದಾಗಿ ತಿಳಿದುಬರುತ್ತದೆ. ಆ ಕಾಲದಲ್ಲಿ ಮೊಘಲ್‌ರು ರಾಯಬಾಗಕ್ಕೆ ಮುಸ್ತಫ್‌ಬಾದ ಎಂದು ಕರೆಯುತ್ತಿದ್ದರು.

ಮೊಘಲ್ ಔರಂಗಜೇಬನ ದಕ್ಷಿಣದ ದಾಳಿಗೆ ಒಳಗಾದ ಮರಾಠರಲ್ಲಿ ರಾಷ್ಟ್ರೀಯ ಜ್ವಾಲೆಯನ್ನು ಹಬ್ಬಿಸಿದವನು ಸಂಭಾಜಿ ಮತ್ತು ಅವನ ಬಲಸಹೋದರ ರಾಜಾರಾಮ. ಈ ಮಧ್ಯೆ ಮರಾಠರು ಎರಡು ಶಾಖೆಗಳಾಗಿ ಒಡೆದು ಒಂದು ಕೊಲ್ಲಾಪೂರದಲ್ಲೂ ಮತ್ತೊಂದು ಸತಾರದಲ್ಲೂ ಅಸ್ತಿತ್ವಕ್ಕೆ ಬಂದವು. ಗೋವಾ, ಅಂಕೋಲಾ ಮತ್ತು ಉತ್ತರ ಕನ್ನಡ ಕರಾವಳಿ ಪ್ರದೇಶಗಳು ಕೊಲ್ಲಾಪೂರದ ಆಧೀನದಲ್ಲುಳಿದವು. ಹೀಗಾಗಿ ರಾಯಬಾಗ ಮರಾಠರ ವಶಕ್ಕೆ ಬಂದು, ಶಿರೋಳ ಮಹಲಿನ ಉಪಮಹಲಾಗಿ ಇದನ್ನು ಗುರುತಿಸಲಾಗುತ್ತಿತ್ತು. ಭಾರತದ ಬ್ರಿಟಿಷರ ಗೌರ್ನರ್ ಜನರಲ್ ಲಾರ್ಡ್ ಕಾರನ್‌ವಾಲೀಸ್‌ನು, ೩ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನ ಮೇಲೆ ದಾಳಿ ಮಾಡಲು ಬಾಂಬೆ ಸೈನ್ಯದೊಂದಿಗೆ ಮರಾಠ ಹಾಗೂ ನಿಜಾಮನ ಸೈನ್ಯ ಸಮೇತ ೧೭೯೨ರಲ್ಲಿ ಶ್ರೀರಂಗಪಟ್ಟಣವನ್ನು ಮುತ್ತಿದನು. ಟಿಪ್ಪು ಸೋತು ಮಾರ್ಚ್ ೨೨, ೧೭೯೨ರಂದು ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕಿದನು. ಒಪ್ಪಂದದಂತೆ ಬ್ರಿಟಿಷರು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶವನ್ನು ಮರಾಠರಿಗೆ ಬಿಟ್ಟುಕೊಟ್ಟರು. ಮರಾಠ ಸೈನ್ಯವು ಯುದ್ಧದಿಂದ ಮರಳಿ ಹಿಂದಿರುಗುವಾಗ ಗೋಕಾಕ, ಚಿಕ್ಕೋಡಿ ಮಾರ್ಗವಾಗಿ ರಾಯಬಾಗ ತಾಲೂಕಿನ ಬೆಂಡವಾಡದಲ್ಲಿ ಒಂದು ದಿನ ತಂಗುತ್ತದೆ. ಆಗ ಮರಾಠ ಸೈನ್ಯದ ನೇತೃತ್ವವನ್ನು ಸೇನಾಧಿಪತಿ ಪರಶುರಾಮಬಾಹು ವಹಿಸಿಕೊಂಡಿದ್ದನು. ಸೈನ್ಯ ನಂತರ ಬೆಂಡವಾಡದಿಂದ ರಾಯಬಾಗಕ್ಕೆ ಬಂದು ಅಲ್ಲಿಂದ ಹಾಲುಹಳ್ಳ ದಾಟಿ ಬಿರಡಿ-ಚಿಂಚಲಿ ಮೂಲಕ ಕುಡಚಿಗೆ ಬಂದು ತಲುಪಿತು. ಮುಂದೆ ಸ್ವತಂತ್ರ ಆಳ್ವಿಕೆ ಮಾಡಲು ಪ್ರಯತ್ನಿಸಿದ ಪರಶುರಾಮಬಾಹುನನ್ನು ಸೋಲಿಸಿ ನಿಯಂತ್ರಿಸಲಾಯಿತು.

ಹೈದರ್ ಮತ್ತು ಟಿಪ್ಪುಗಳ ಕಾಲದಲ್ಲಿ ಉತ್ತರ ಕರ್ನಾಟಕದ ಭಾಗವು ಮೈಸೂರಿನ ಆಡಳಿತದಲ್ಲಿ ಬಂದಿತ್ತು. ಟಿಪ್ಪು ಮರಣದ ನಂತರ ಉತ್ತರ ಕರ್ನಾಟಕದ ಭಾಗವು ಮರಾಠರ ಆಡಳಿತಕ್ಕೆ ಹೋಯಿತು. ಉತ್ತರ ಕರ್ನಾಟಕದ ಭಾಗವು ೧೮೧೮ರವರೆಗೆ ಮರಾಠರ ವಶದಲ್ಲಿದ್ದು, ನಂತರ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ಇಂಗ್ಲೀಷರ ವಶಕ್ಕೆ ಹೋಗಿ, ಅವು ೧೯೪೭ರವರೆಗೆ ಮುಂಬೈ ಪ್ರಾಂತದಲ್ಲಿದ್ದವು. ಆದರೆ ಮುಂಬೈ ಪ್ರಾಂತದ ರಾಯಬಾಗ ಪರಿಸರವು ಮಾತ್ರ ಸ್ವಾತಂತ್ರ್ಯ ಪಡೆದುಕೊಳ್ಳುವವರೆಗೆ ಕೊಲ್ಹಾಪುರ ಸಂಸ್ಥಾನದ ಮರಾಠಾ ಪೇಶ್ವೆಗಳ ಆಳ್ವಿಕೆಯ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಹೀಗೆ ರಾಯಬಾಗ ಇನ್ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಮರಾಠರ ಆಧೀನದಲ್ಲಿಯೇ ಉಳಿದಿತ್ತು. ಮುಂಬೈ ಪ್ರಾಂತದ ಇತರ ಭಾಗಗಳಲ್ಲಿ ಬ್ರಿಟಿಷರ ಆಡಳಿತವಿದ್ದಾಗಲೂ ಕೂಡ, ಕೊಲ್ಲಾಪೂರದ ಮರಾಠಾ ಸಂಸ್ಥಾನಿಕರು ರಾಯಬಾಗದ ಆಡಳಿತದ ಮೇಲೆ ಬಿಗಿ ಹಿಡಿತ ಸಾಧಿಸಿದ್ದನ್ನು ಕಾಣುತ್ತೇವೆ. ಅವರ ಬಳಸಿದ ಮರಾಠಿ ಭಾಷೆ, ಆಡಳಿತದ ಕುರುಹುಗಳನ್ನು ಇಂದಿಗೂ ಇಲ್ಲಿ ಕಾಣಬಹುದು.

ಬಾಗೆನಾಡು ಈಗಲೂ ಮಹಾರಾಷ್ಟ್ರದ ಗಡಿಗೆ ತುಂಬ ಸಮೀಪ. ಆಸ್ಪತ್ರೆ, ಆರ್ಥಿಕ, ವ್ಯವಹಾರಿಕ, ವೈವಾಹಿಕ ಕಾರಣಕ್ಕಾಗಿ ಈ ಭಾಗದ ಜನತೆ ಮಹಾರಾಷ್ಟ್ರದ ನಗರಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ. ಪ್ರತಿ ವರ್ಷ ಜರುಗುವ ಚಿಂಚಲಿಯ ಮಾಯಕ್ಕಾದೇವಿಯ ಜಾತ್ರೆಗೆ ಸಾವಿರಾರು ಭಕ್ತರು ಮಹಾರಾಷ್ಟ್ರದಿಂದ ಆಗಮಿಸುತ್ತಾರೆ. ಕೊಲ್ಲಾಪೂರದ ಮಹಾಲಕ್ಷ್ಮೀ ಮತ್ತು ಕಡ್ಡೋಲಿಯ ವಿಠ್ಠಲ ದೇವರ ಜಾತ್ರೆಗೆ ರಾಯಬಾಗ ಪರಿಸರದ ಹಲವು ಗ್ರಾಮಗಳಿಂದ ಭಕ್ತರು ಹೋಗುತ್ತಾರೆ.

ಛತ್ರಪತಿ ಶಾಹು ಮಹಾರಾಜರು ಸುಮಾರು ೭೦-೮೦ ವರ್ಷಗಳ ಹಿಂದೆ, ವರ್ಷಕ್ಕೆ ಒಂದೆರಡು ಸಲ ಬೇಟೆಯಾಡಲು ಈ ಪ್ರದೇಶಕ್ಕೆ ಆಗಮಿಸುತ್ತಿದ್ದರು. ಆಗ ಈ ಪ್ರದೇಶವೆಲ್ಲವೂ ಚಿಕ್ಕ-ಚಿಕ್ಕ ಕಾಡುಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿತ್ತು. ಬೇಸಿಗೆ ಸಮಯದಲ್ಲಿ ತಂಗಲು ಪಟ್ಟಣದ ದಕ್ಷಿಣ ದಿಕ್ಕಿನಲ್ಲಿ ಕಟ್ಟಿದ ಅರಮನೆಯು ಇಂದಿಗೂ ಮರಾಠರ ಆಳ್ವಿಕೆಯ ಪ್ರತೀಕವಾಗಿ ಗೋಚರಿಸುತ್ತದೆ. ಅರಮನೆಯ ಸುತ್ತಲೂ ಕೋಟೆ ನಿರ್ಮಿತವಾಗಿದ್ದು ಸಂಸ್ಥಾನಿಕರ ಆಡಳಿತವನ್ನು ಪ್ರತಿನಿಧಿಸುತ್ತದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮಲ್ಲಿ ರಾಯಬಾಗ ಪರಿಸರದ ವೀರಯೋಧರ ಹೋರಾಟ ನಿಜಕ್ಕೂ ಉಲ್ಲೇಖನಿಯ. ಸ್ವಾತಂತ್ರ್ಯದ ಸಾಕಾರಕ್ಕಾಗಿ ಹಲವಾರು ಮುಷ್ಕರ, ಸಭೆ-ಸಮಾರಂಭಗಳನ್ನು ಏರ್ಪಡಿಸಿ ಜನಸಾಮಾನ್ಯರನ್ನು ಹೋರಾಟದ ಮುಖ್ಯ ವಾಹಿನಿಗೆ ತರುವ ಪ್ರಯತ್ನ ಅವಿರತವಾಗಿ ನಡೆದದ್ದನ್ನು ಕಾಣುತ್ತವೆ. "೧೯೩೮ರಲ್ಲಿ ದಕ್ಷಿಣ ಭಾರತದಲ್ಲಿಯ ಸಂಸ್ಥಾನ ಪರಿಷತ್ತು ಕುಡಚಿಯಲ್ಲಿ ಸೇರಿತ್ತು. ಆ ಪರಿಷತ್ತಿಗೆ ಕೆ. ಎಸ್. ನಾರಿಮನ್ ಅಧ್ಯಕ್ಷರು. ಎ. ಬಿ. ಲಠ್ಠೆಯವರು ಮುಖ್ಯ ಅತಿಥಿಯಾಗಿ ಬಂದಿದ್ದರು."[೩೬] ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ನೂರಾರು ತರುಣರು ಹೋರಾಟದಲ್ಲಿ ಭಾಗವಹಿಸಿದ್ದ ಬಗ್ಗೆ ಇತಿಹಾಸದಲ್ಲಿ ದಾಖಲಾಗಿದೆ.

೨.೨.೪. ಹಾಲುಮತದ ನೆಲೆಗಳು :

೨.೨.೪.೧ ಧಾರ್ಮಿಕ ನೆಲೆಗಳು :

ರಾಯಬಾಗ ಪರಿಸರವು ವಿವಿಧ ಸಮುದಾಯಗಳ ಸಂಗಮ ಸ್ಥಳವಾಗಿದೆ. ಕುರುಬರು, ಲಿಂಗಾಯತರು, ದಲಿತರು, ಜೈನರು, ಮರಾಠರು, ಮುಸ್ಲಿಂರು ಇಲ್ಲಿಯ ಪ್ರಮುಖ ಸಮುದಾಯಗಳ ಜನರನ್ನು ಪ್ರಧಾನವಾಗಿ ಹೊಂದಿರುವ ಈ ಪ್ರದೇಶ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನೇ ಪಡೆದಿದೆ. ಇದುವೇ ಇಲ್ಲಿಯ ಸಾಂಸ್ಕೃತಿಕ ವೈವಿಧ್ಯತೆಗೆ ಕಾರಣ. ಈ ಪರಿಸರವು ಹಾಲುಮತದ ಹಲವು ನೆಲೆಗಳನ್ನು ಹೊಂದಿದೆ. ಅಲಖನೂರ ಕರೇಸಿದ್ಧೇಶ್ವರ, ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ, ರಾಯಬಾಗ ಬೀರೇಶ್ವರ, ಕಂಕಣವಾಡಿ ಮತ್ತು ಹಿಡಕಲ್ಲ ಹಾಲಸಿದ್ಧೇಶ್ವರ, ಹಾರೂಗೇರಿ ಭೂತಾಳಸಿದ್ಧೇಶ್ವರ ಮತ್ತು ಮಾಳಿಂಗರಾಯ, ಬೆಂಡವಾಡ ರೇವಣಸಿದ್ಧೇಶ್ವರ ಮುಂತಾದವು ಈ ಪ್ರದೇಶದ ಹಾಲುಮತದ ಪುರುಷ ದೈವಗಳು.

ಶಕ್ತಿ ದೇವತೆ ಚಿಂಚಲಿಯ ಮಾಯವ್ವ ಕರ್ನಾಟಕ-ಮಹಾರಾಷ್ಟ್ರ-ಆಂಧ್ರಗಳ ಭಕ್ತವರ್ಗದಲ್ಲಿ ಪ್ರಸಿದ್ಧಿ ಪಡೆದ ಬಾಗೆನಾಡಿನ ಪ್ರಮುಖ ಸ್ತ್ರೀ ದೇವತೆ. ಜನಪದ ಹಾಲುಮತ ಕಾವ್ಯದಲ್ಲಿ ಇವಳನ್ನು 'ಬಾಗೆನಾಡಿನ ಬಣ್ಣದ ಮಾಯವ್ವ' ಎಂದೇ ಬಣ್ಣಿಸಲಾಗಿದೆ. ಬೆಕ್ಕೇರಿ ಲಕ್ಷ್ಮೀದೇವಿ, ಸವಸುದ್ದಿ ಲಕ್ಕವ್ವ, ಹಿಡಕಲ್ಲದ ಬೆಳಗಲಿ

ಲಕ್ಕವ್ವ, ರಾಯಬಾಗ ರೇಲ್ವೇ ಸ್ಟೇಷನ್‌ದ ಲಕ್ಷ್ಮೀದೇವಿ ಮೊದಲಾದ ಹಾಲುಮತಕ್ಕೆ ಸೇರಿದ ಸ್ತ್ರೀದೇವತೆಗಳು. ಇವು ಹಾಲುಮತದ ದೈವದ ಪ್ರಮುಖ ಧಾರ್ಮಿಕ ಕೇಂದ್ರಗಳಿರುವುದು ರಾಯಬಾಗ ಪರಿಸರದ ವೈಶಿಷ್ಟ್ಯವಾಗಿದೆ. ಇದರೊಂದಿಗೆ ರಾಯಬಾಗ ಸುತ್ತ-ಮುತ್ತಲಿನ, ಆದರೆ ಈಗ ಬೇರೆ ತಾಲೂಕಿಗೆ ಸೇರಿರುವ ಮುರಗುಂಡಿ, ಕೇರೂರ, ಯಕ್ಸಂಬಾ, ಕ್ವಾಣೂರ ಮುಂತಾದ ಸ್ಥಳಗಳು ಕೂಡ ಹಾಲುಮತದ ದೃಷ್ಟಿಯಿಂದ ಬಹು ಪ್ರಮುಖವಾಗಿವೆ. ಇಲ್ಲಿ ಹಾಲುಮತ ಸಮುದಾಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಐತಿಹ್ಯಗಳು ಜನಪದೀಯ ರೂಪದಲ್ಲಿ ದೊರೆಯುತ್ತವೆ. ಆ ಐತಿಹ್ಯಗಳಲ್ಲಿರುವ ಚರಿತ್ರಾಂಶಗಳನ್ನು ಪತ್ತೆ ಹಚ್ಚಿ ವಿಶ್ಲೇಷಿಸುವುದು ಅತೀ ಅವಶ್ಯಕವಾಗಿದೆ.

೨.೨.೪.೨ ಸ್ಥಳನಾಮಗಳು :

ಬಾಗೆ ಪರಿಸರದ ಸ್ಥಳನಾಮಗಳನ್ನು ಅಧ್ಯಯನ ಮಾಡಿದಾಗ ಹಾಲುಮತ ಸಮುದಾಯದೊಂದಿಗೆ ನಿಕಟವಾದಂತಹ ಸಂಬಂಧವನ್ನು ಅನೇಕ ಸ್ಥಳಗಳು ಹೊಂದಿದ್ದು ಕಂಡು ಬರುತ್ತದೆ. ಉದಾಹರಣೆಗಾಗಿ ಬೀರನಹಾಳ, ಬೊಮ್ಮನಹಾಳ, ಬೀರನಗಡ್ಡಿ, ಹಾಲುಹಳ್ಳ, ಕುರುಬರಕೋಡಿ, ನಾಗರಹಾಳ, ಸುಟ್ಟಟ್ಟಿ, ಬೂದಿಹಾಳ, ಇಟ್ನಾಳ, ಯಬರಟ್ಟಿ, ಈ ಸ್ಥಳನಾಮಗಳ ಅಧ್ಯಯನದಿಂದ ಕುರುಬರು ಈ ಪ್ರದೇಶದ ಮೂಲ ನಿವಾಸಿಗಳಾಗಿದ್ದರೆಂಬ ಅಂಶ ಕಂಡು ಬರುತ್ತದೆ.

೨.೨.೪.೩. ಆಚರಣೆಗಳು :

ಕುರುಬರು ಒಂದು ಬುಡಕಟ್ಟು ಜನಾಂಗದವರೆಂಬುದು ಸ್ಪಷ್ಟ. ಅವರು ಇಂದಿಗೂ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಕರ್ನಾಟಕದ ಬೇರೆ-ಬೇರೆ ಪ್ರದೇಶಗಳಲ್ಲಿ ಕಂಡು ಬರದೇ ಇರುವ ಹಲವಾರು ವಿಶಿಷ್ಟ ಆಚರಣೆಗಳು ಇಲ್ಲಿಯ ಹಾಲುಮತ ಸಮುದಾಯದವರಲ್ಲಿ ಪ್ರಚಲಿತದಲ್ಲಿವೆ. ಉದಾಹರಣೆಗಾಗಿ, ಹೊಂಗವಾಡ, ಗುಗ್ಗಳ, ಅಲಗಹಾಯುವುದು ಇತ್ಯಾದಿ.

೨.೨.೪.೪ ಪ್ರಾಚೀನ ಹಾಲುಮತ ಪರಿಸರ :

ವೀರಣ್ಣ ದಂಡೆ ಯವರು ಸಂಪಾದಿಸಿದ 'ಜನಪದ ಹಾಲುಮತ ಮಹಾಕಾವ್ಯ' ಈ ಪರಿಸರದ ಐತಿಹ್ಯಗಳನ್ನು ಸುಂದರವಾಗಿ ಚಿತ್ರಿಸಿದೆ. ಇಲ್ಲಿರುವಂತಹ ಪೌರಾಣಿಕ ಸ್ಥಳಗಳು, ಪರಿಸರದ ಸನ್ನಿವೇಶಗಳು, ಪೌರಾಣಿಕ ದೇವ-ದೇವತೆಗಳೆಲ್ಲರೂ ರಾಯಬಾಗ ಪರಿಸರದ ಭಾಗಗಳೇ ಆಗಿವೆ. ದೈವಿ ನೆಲೆಗಳನ್ನು ಹೊಂದಿರುವ ಬಾಗೆನಾಡು ಹಾಲುಮತ ದೈವಗಳ ಪವಿತ್ರ ಸ್ಥಳವಾಗಿದೆ.

೨.೨.೪.೫ ಹಾಲುಮತ ಜನಾಂಗ :

ಹಾಲುಮತ ಸಮುದಾಯದವರು ಈ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಕಾರಣ ಅಂದು ಕೃಷ್ಣಾ ನದಿ ತೀರದ ಪ್ರದೇಶವನ್ನು ಹೊರತುಪಡಿಸಿದರೆ ಉಳಿದಂತೆ ಇಲ್ಲಿ ಚಿಕ್ಕ-ಪುಟ್ಟ ಬೆಟ್ಟ-ಗುಡ್ಡಗಳಿಂದ ಕೂಡಿದ ಮೊರಡಿ ಹಾಗೂ ಅರಣ್ಯದಿಂದ ಆವೃತವಾದ ಪ್ರದೇಶ. ಹೀಗಾಗಿ ಪ್ರಾಚೀನ ಕಾಲದಲ್ಲಿ ಈ ಮೈದಾನ ಪ್ರದೇಶವು ಪಶುಪಾಲನೆಗೆ ಅನುಕೂಲಕರ ಪರಿಸರವಾಗಿದ್ದು, ಪಶುಪಾಲಕರೇ ಹೆಚ್ಚಾಗಿ ಈ ಪ್ರದೇಶದಲ್ಲಿ ನೆಲೆಸುವಂತಾಯಿತು. ಇದನ್ನು ಪುಷ್ಟೀಕರಿಸುವಂತೆ ಕೃಷ್ಣಾ ನದಿ ತೀರದಗುಂಟ ಆದಿ ಮಾನವನ ನೆಲೆಗಳು

ಕಂಡುಬಂದಿವೆ. ಕೊಲ್ಲಾಪುರದ ರಾಜರು ಬೇಟೆಯಾಡಲು ಈ ಪ್ರದೇಶಕ್ಕೆ ಆಗಮಿಸುತ್ತಿದ್ದರು. ನಗರೀಕರಣದ ಹಂತದಲ್ಲಿ ಈ ಪಶುಪಾಲಕರು ಅಲೆಮಾರಿಗಳಾಗದೇ, ಇಲ್ಲಿರುವ ಕಾಡುಗಳನ್ನೇ ಕಡಿದು ಭೂಮಿಗಳನ್ನಾಗಿ ಪರಿವರ್ತಿಸಿ ಕೃಷಿ ಕಾಯಕದಲ್ಲಿ ತೊಡಗಿದರು. ಹೀಗಾಗಿ ಆರಂಭದ ಪಶುಪಾಲಕ ಸಮುದಾಯದವರೇ ಇಂದು ಈ ಪರಿಸರದಲ್ಲಿ ಬಹುಸಂಖ್ಯಾತರಾಗಿದ್ದಾರೆ. ಇಲ್ಲಿಯ ಬಹುತೇಕ ಹಳ್ಳಿಗಳ ಗೌಡರೆಲ್ಲ ಕುರುಬ ಸಮುದಾಯದವರು. ಹೀಗಾಗಿ ಈ ನಾಡಿನ ತುಂಬೆಲ್ಲ ಕುರುಬರದೇ ಬಾಹುಳ್ಯ.

ಟಿಪ್ಪಣಿಗಳು :

೧. ಎಂ. ಕೆ. ಮೇತ್ರಿ, **ಬುಡಕಟ್ಟು ಕುಲಕಸಬುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨, ಪುಟ-೭-೧೪

೨. ವೀರಣ್ಣ ದಂಡೆ (ಸಂ), **ಜನಪದ ಹಾಲುಮತ ಮಹಾಕಾವ್ಯ.** ಸಾಗರ್ ಪ್ರಕಾಶನ ಬೆಂಗಳೂರು, ೨೦೧೩, ಪುಟ-೬೬

೩. **ಪೂರ್ವೋಕ್ತ,** ಪುಟ-೨೬

೪. ಎಫ್. ಟಿ. ಹಳ್ಳಿಕೇರಿ (ಸಂ), **೧ ಹಾಲುಮತ ವ್ಯಾಸಂಗ.** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯, ಪುಟ-೧೨

೫. **ಪೂರ್ವೋಕ್ತ,** ಪುಟ-೯

೬. ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು ಒಂದು ಅಧ್ಯಯನ.** ಶೈಲಚಂದ್ರ ಪ್ರಕಾಶನ ವಿಜಾಪೂರ, ೨೦೦೬, ಪುಟ-೨೧

೭. **ಪೂರ್ವೋಕ್ತ,** ಪುಟ-೧೫

೮. **ಪೂರ್ವೋಕ್ತ,** ಪುಟ-೧೫

೯. **ಪೂರ್ವೋಕ್ತ,** ಪುಟ-೨೫

೧೦. ಒಡೆಯರ ಡಿ. ಹೆಗ್ಗಡೆ, **ಹಾಲುಮತ ಕುರುಬ ಜನಾಂಗದ ಇತಿಹಾಸ.** ಅಖಿಲಾ ಏಜೆನ್ಸೀಸ್ ಮೈಸೂರು, ೨೦೦೫, ಪುಟ-೪

೧೧. ಹೆಚ್. ಚಂದ್ರಪ್ಪ ಅಜ್ಜಂಪುರ, **ಕುರುಬರ ಕುರುಹುಗಳು.** ವಿದ್ಯಾನಿಧಿ ಪ್ರಕಾಶನ ಗದಗ, ೨೦೧೧, ಪುಟ-೫

೧೨. ಎಂ. ಜೈಕುಮಾರ್, **ಪಾವನ,** ಕಾಗಿನಲೆ ಪ್ರಸಾರಾಂಗ ಬೆಂಗಳೂರು, ೧೯೯೨, ಪುಟ-೧೭

೧೩. ಹೆಚ್. ಚಂದ್ರಪ್ಪ ಅಜ್ಜಂಪುರ, **ಕುರುಬರ ಕುರುಹುಗಳು.** ವಿದ್ಯಾನಿಧಿ ಪ್ರಕಾಶನ ಗದಗ, ೨೦೧೧, ಪುಟ-೬

೧೪. ಎಂ. ಜೈಕುಮಾರ್, **ಪಾವನ,** ಕಾಗಿನಲೆ ಪ್ರಸಾರಾಂಗ ಬೆಂಗಳೂರು, ೧೯೯೨, ಪುಟ-೧೮

೧೫. **ಪೂರ್ವೋಕ್ತ,** ಪುಟ-೧೯

೧೬. ಎಂ. ಕೆ. ಮೇತ್ರಿ, **ಬುಡಕಟ್ಟು ಕುಲಕಸಬುಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨, ಪುಟ- ೯೮

೧೭. ಮಲ್ಲೇಪುರಂ ಜಿ. ವೆಂಕಟೇಶ (ಸಂ), **ಶಂಬಾ ಕೃತಿ ಸಂಪುಟ ೧ ಕಂನಾಡು-ಕರ್ನಾಟ**. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯, ಪುಟ-xxi

೧೮. **ಪೂರ್ವೋಕ್ತ**, ಪುಟ-xxiii

೧೯. **ಪೂರ್ವೋಕ್ತ**, ಪುಟ-xxiv

೨೦. **ಪೂರ್ವೋಕ್ತ**, ಪುಟ-೨೭೨

೨೧. **ಪೂರ್ವೋಕ್ತ**, ಪುಟ-೨೯೨

೨೨. ಶಂಬಾ ಜೋಶಿಯವರ ಹಟ್ಟಿಕಾರರ ವಂಶವೃಕ್ಷಕ್ಕಾಗಿ ಅನುಬಂಧ ೧ನ್ನು ಗಮನಿಸಿ. (ಮಲ್ಲೇಪುರಂ ಜಿ. ವೆಂಕಟೇಶ ಸಂಪಾದನೆಯ, ಸಂಪುಟ ೧ ಪುಟ-೩೩೨)

೨೩. ಒಡೆಯರ ಡಿ. ಹೆಗ್ಗಡೆ, **ಹಾಲುಮತ ಕುರುಬ ಜನಾಂಗದ ಇತಿಹಾಸ**, ಅಖಿಲಾ ಏಜೆನ್ಸೀಸ್ ಮೈಸೂರು, ೨೦೦೫, ಪುಟ-೫

೨೪. ಮಲ್ಲೇಪುರಂ ಜಿ. ವೆಂಕಟೇಶ (ಸಂ), **ಶಂಬಾ ಕೃತಿ ಸಂಪುಟ ೩ ಕರ್ಣಾಟ-ಸಂಸ್ಕೃತಿ**. ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೯, ಪುಟ-xx

೨೫. ಆರ್. ಗೋಪಾಲ್ (ಸಂ), **ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೦, ಪುಟ-೯೬

೨೬. ಮಧುಸೂದನ ಬೀಳಗಿ, **ಹಿಡಕಲ್ಲದ ಸ್ವಾತಂತ್ರ್ಯ ಹೋರಾಟಗಾರರು** (ಅಪ್ರಕಟಿತ ಎಂ. ಫಿಲ್. ಸಂಪ್ರಬಂಧ) ೨೦೧೧, ಪುಟ-೯

೨೭. ಸಿದ್ದು ಹುಲ್ಲೋಳ್ಳಿ, **ಬಾಗೇನಾಡಿನ ಜನಪದ ಕಲಾವಿದರು**, ಸಿದ್ಧಕೀರ್ತಿ ಪ್ರಕಾಶನ ಮುಗಳಖೋಡ, ೨೦೧೧, ಪುಟ-೧

೨೮. **ಪೂರ್ವೋಕ್ತ** ಪುಟ-೧

೨೯. ಮಧುಸೂದನ ಬೀಳಗಿ, **ಹಿಡಕಲ್ಲದ ಸ್ವಾತಂತ್ರ್ಯ ಹೋರಾಟಗಾರರು** (ಅಪ್ರಕಟಿತ ಎಂ. ಫಿಲ್. ಸಂಪ್ರಬಂಧ) ೨೦೧೧, ಪುಟ-೪

೩೦. ಬಸವರಾಜ ಯಲಶೆಟ್ಟಿ, **ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು** (ಅಪ್ರಕಟಿತ ಎಂ. ಫಿಲ್. ಸಂಪ್ರಬಂಧ) ೨೦೧೧, ಪುಟ-೧೩

೩೧. ಬಿ. ಷೇಕ್ ಅಲಿ & ಜಿ. ಆರ್. ರಂಗಸ್ವಾಮಯ್ಯ, **ದಕ್ಷಿಣ ಭಾರತದ ಇತಿಹಾಸ** ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ೧೯೮೪, ಪುಟ-೨೫೧

೩೨. ಬಸವರಾಜ ಯಲಶೆಟ್ಟಿ, **ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು** (ಅಪ್ರಕಟಿತ ಎಂ. ಫಿಲ್. ಸಂಪ್ರಬಂಧ) ೨೦೧೧, ಪುಟ-೧೪

೩೩. ಸರೋಜಿನಿ ಚವಲಾರ, **ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು**, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ ಮೂರುಸಾವಿರ ಮಠ ಹುಬ್ಬಳ್ಳಿ, ೧೯೮೮, ಪುಟ-vi

ಅಧ್ಯಾಯ : ಮೂರು

ರಾಯಬಾಗ ಪರಿಸರದ ಹಾಲುಮತ ಸಾಂಸ್ಕೃತಿಕ ನೆಲೆಗಳು

೩.೧ ಹಾಲುಮತದ ಚಾರಿತ್ರಿಕ ನೆಲೆಗಳು :

ರಾಯಬಾಗ ಪರಿಸರವು ಪೂರ್ವದಿಂದಲೂ ಹಾಲುಮತ ಸಂಸ್ಕೃತಿಯ ಹಲವು ನೆಲೆಗಳನ್ನು ಹೊಂದಿದೆ. ಈ ಪರಿಸರದಲ್ಲಿ ಹಾಲುಮತದ ಜನಾಂಗಿಕ ನೆಲೆಗಳೇ ಹೆಚ್ಚಾಗಿವೆ. ಜನಸಂಖ್ಯೆಯ ಶೇಕಡಾ ೩೮ ರಷ್ಟು ಜನಸಮುದಾಯ ಹಾಲುಮತಸ್ಥರೇ ಆಗಿದ್ದಾರೆ. ಈ ಪರಿಸರದ ಹಾರೂಗೇರಿ, ಹಿಡಕಲ್ಲ, ಮುಗಳಖೋಡ, ಯಲ್ಪಾರಟ್ಟಿ, ಭಿರಡಿ, ಬೆಕ್ಕೇರಿ, ಬೊಮ್ಮನಹಾಳ, ಬೂದಿಹಾಳ, ಭರಮನಕೊಡಿ, ಕುರಬರಕೊಡಿ, ಇಟ್ಟಪ್ಪನಹಾಳ(ಇಟ್ನಾಳ), ಕಂಕಣವಾಡಿ, ಅಲಕನೂರ, ಚಿಂಚಲಿ ಮುಂತಾದ ಗ್ರಾಮಗಳು ಹಾಲುಮತದ ಜನಾಂಗಿಕ ನೆಲೆಗಳಾಗಿವೆ. ಈ ನೆಲೆಗಳು ಚರಿತ್ರೆ ದೃಷ್ಠಿಯಿಂದ ಅಭ್ಯಾಸನೀಯವೆನಿಸುತ್ತವೆ.

ಒಂದು ಪ್ರದೇಶದ ಪುರಾತತ್ವ ಸಂಶೋಧನೆಯನ್ನು ಕೈಕೊಳ್ಳುವ 'ಉದ್ದೇಶ ಆ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಪುನಃ ವೈಜ್ಞಾನಿಕ ನೆಲೆಗಟ್ಟಿನ ಮೇಲೆ ರಚಿಸುವುದಾಗಿರುತ್ತದೆ. ಪುರಾತತ್ವ ವಿಷಯಕ್ಕೆ ಸಂಬಂಧಿಸಿ ಪುರಾವೆಗಳನ್ನು ಹುಡುಕಿ ತೆಗೆಯುವುದು ಮತ್ತು ಬೆಳಕಿಗೆ ಬಂದ ಪುರಾವೆಗಳನ್ನು ದಾಖಲಿಸಿ, ಅವುಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೆ ಬಳಸಿಕೊಳ್ಳುವುದಾಗಿದೆ. ಈ ಹಿನ್ನೆಲೆಯಲ್ಲಿ ದೊರೆತ ಪುರಾವೆಗಳನ್ನು ಬಳಸಿಕೊಂಡು ಪ್ರಾದೇಶಿಕ ಮಟ್ಟದ ಇತಿಹಾಸವನ್ನು ಪುನಃ ರಚಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತ ಬಂದಿವೆ.

ಪುರಾತತ್ವಶಾಸ್ತ್ರಕ್ಕೆ ತಳಪಾಯ ಹಾಕಿದ ಬ್ರಿಟಿಷರು, ಭಾರತದ ಇತಿಹಾಸ ಶಿಲಾಯುಗದಿಂದ ಆರಂಭವಾಗಿದೆ ಎಂದು ಹೇಳುವ ಮೂಲಕ ಸಾಂಸ್ಕೃತಿಕ ಬೆಳವಣಿಗೆಯ ಮಾಹಿತಿಗಳನ್ನು ತಿಳಿದುಕೊಳ್ಳಲು ಮಾರ್ಗದರ್ಶನ ಮಾಡಿದರು. ಅನೇಕ ಸಾಹಿತ್ಯಿಕ ಕೃತಿಗಳಲ್ಲಿಯ ತಪ್ಪು ಮಾಹಿತಿಗಳನ್ನು ತಿದ್ದಿ ಹೇಳಲು ಪುರಾತತ್ವ ಪುರಾವೆಗಳು ನೆರವಾಗಿವೆ. ಈ ಪುರಾತತ್ವ ಅಧ್ಯಯನಗಳು ಹಾಳಾಗುತ್ತಿರುವ ಪ್ರಾಚೀನ ಜನವಸತಿ ನಿವೇಶವಗಳನ್ನು ತಕ್ಕಮಟ್ಟಿಗೆ ಸಂರಕ್ಷಿಸುವ ಕೆಲಸಕ್ಕೆ ಹಾಗೂ ಹೆಚ್ಚಿನ ಅಧ್ಯಯನಕ್ಕೆ ದಾರಿಮಾಡಿ ಕೊಟ್ಟಿವೆ.

ರಾಯಬಾಗ ಪರಿಸರದ ಅನೇಕ ಕಡೆಗಳಲ್ಲಿ ಪುರಾತನ ಪುರಾವೆಗಳಾದ ಶಿಲಾಉಪಕರಣಗಳು, ಶಾಸನಗಳು, ಸ್ಮಾರಕಗಳು, ಬೂದಿ ದಿಬ್ಬಗಳು, ಜಂಬಿಟ್ಟಿಗೆಗಳು ಮುಂತಾದ ವಸ್ತುಗಳು ಸರ್ವೇಕ್ಷಣ ಮತ್ತು ಉತ್ಖನನಗಳಿಂದ ಹೊರಬಂದಿವೆ.

೩.೧.೧ ಬೂದಿ ದಿಬ್ಬಗಳು :

ಬೆಳಗಾವಿ ಜಿಲ್ಲೆಯ ಚರಿತ್ರೆಯಲ್ಲಿ, ರಾಯಬಾಗ ಪರಿಸರದ ಇತಿಹಾಸದ ವಿಶೇಷತೆಯಿದೆ; ತನ್ನದೇ ಆದ ಕೊಡುಗೆಯಿದೆ. ರಾಯಬಾಗ ಪರಿಸರದ ಇತಿಹಾಸವೂ ಇನ್ನಿತರ ಕಡೆಗಳಂತೆ ಶಿಲಾಯುಗ ಕಾಲದಿಂದ ಆರಂಭವಾಗಿದೆ. ಈ ಪ್ರದೇಶದಲ್ಲಿ ನೂತನ ತಾಮ್ರ ಶಿಲಾ ಸಂಸ್ಕೃತಿಯ ವೈವಿಧ್ಯಮಯ ವಿಷಯಗಳು ಬೆಳಕನ್ನು ಕಂಡಿವೆ. ಅವುಗಳು ಹೆಚ್ಚಾಗಿ ಕೃಷ್ಣಾ ನದಿ ಬಯಲುಗಳಲ್ಲಿವೆ. ಇವುಗಳನ್ನು ಬೆಳಕಿಗೆ ತಂದ ಕೀರ್ತಿ ಹಿರಿಯ ಪುರಾತತ್ವಜ್ಞ ಡಾ॥ ಅ. ಸುಂದರ ಅವರಿಗೆ ಸಲ್ಲುತ್ತದೆ. ಈ ಕಾಲದ ಜನವಸತಿ ನಿವೇಶನಗಳಲ್ಲದೆ, ಬೂದಿದಿಬ್ಬ

ನೆಲೆಗಳು ಇರುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಇನ್ನಿತರ ಕಡೆಗಳಂತೆ ಈ ಕಾಲದ ಸಾಂಸ್ಕೃತಿಕ ಪುರಾವೆಗಳಲ್ಲಿ ಬೂದು, ಕೆಂಪು ವರ್ಣದ ಮೃತ್ತಿಕೆಯ (ಮಣ್ಣಿನ) ಪಾತ್ರೆಗಳು ಹಾಗೂ ಹೇರಳ ಪ್ರಮಾಣದ ಸೂಕ್ಷ್ಮ ಶಿಲಾ ಉಪಕರಣಗಳಲ್ಲಿ ಸಮಾಂತರ ಅಂಚುಳ್ಳ ಉದ್ದನೆಯ ತೆಲುವಾದ ಅಲಗುಗಳು ಪ್ರಮುಖವೆನ್ನಿಸಿವೆ.

ಬೂದಿ ದಿಬ್ಬಗಳು ಮಾನವನ ಪ್ರಾಚ್ಯ ನೆಲೆಗಳ ಕುರುಹುಗಳೆಂಬುದರಲ್ಲಿ ಯಾವ ಸಂದೇಹವಿಲ್ಲ. ತಾಲೂಕಿನ ಕುಡಚಿ, ಶಿಕನಾಳ, ಚಿಂಚಲಿ, ಬೂದಿಹಾಳ, ಖೇಮಲಾಪೂರಗಳಲ್ಲಿ ಬೂದಿ ದಿಬ್ಬದ ಕುರುಹುಗಳು ಕಂಡು ಬರುತ್ತವೆ. ಇವುಗಳು ಸುಮಾರು ೨೦-೩೦ ಅಡಿಗಳಷ್ಟು ಎತ್ತರವಿದ್ದ ಬಗ್ಗೆ ಸ್ಥಳೀಯರು ಹೇಳುತ್ತಾರೆ. ಆದರೆ ಸದ್ಯ ಅಷ್ಟು ಎತ್ತರದಲ್ಲಿರದೆ ಅವುಗಳ ಅವಷೇಶಗಳು ಮಾತ್ರ ಉಳಿದುಕೊಂಡಿವೆ. ಇಷ್ಟು ಎತ್ತರದ ಬೂದಿ ದಿಬ್ಬಗಳು ಹೇಗೆ ರಚನೆಗೊಂಡವು ಎಂಬುದು ಇಂದಿಗೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಇತಿಹಾಸಕಾರರು ಈ ಬೂದಿ ದಿಬ್ಬಗಳ ರಚನೆ ಕುರಿತು ಹಲವು ಊಹೆಗಳನ್ನು ಮುಂದಿಟ್ಟಿದ್ದಾರೆ. ಆದರೆ ಯಾವ ಸ್ಪಷ್ಟ ನಿಲುವು ಪ್ರಕಟಿಸಿಲ್ಲ. ಪಶುಪಾಲನೆ ಹಂತದಲ್ಲಿ ಪಶುಗಳ ಶಗಣಿಯನ್ನು ಒಂದೆಡೆ ಕಲೆ ಹಾಕಿ ಅದಕ್ಕೆ ಬೆಂಕಿ ಹಚ್ಚಿರಬಹುದೆಂಬುದು ಅವರ ಸಾಮಾನ್ಯ ಊಹೆ. ಆದರೆ ಇಷ್ಟು ಪ್ರಮಾಣದಲ್ಲಿ ಶಗಣಿಯನ್ನು ಕಲೆ ಹಾಕಿದರ ಕಾರಣ ಏನಿರಬಹುದು.? ಏಕೆ ಬೆಂಕಿ ಹಚ್ಚಿದರು? ಬೆಂಕಿ ಹಚ್ಚಿ ಬೂದಿ ರಾಶಿ ಸೃಷ್ಟಿಗೊಂಡರೂ ಏಕೆ ತೆರುವುಗೊಳಿಸಲಿಲ್ಲ.? ಈ ಬೂದಿ ದಿಬ್ಬಗಳು ಶಿಲಾಯುಗದ ಯಾವ ಘಟ್ಟದಲ್ಲಿ ರಚಿತಗೊಂಡವು.? ಇತ್ಯಾದಿ ಪ್ರಶ್ನೆಗಳು ಇಂದಿಗೂ ಪ್ರಶ್ನೆಗಳಾಗಿಯೇ ಉಳಿದಿವೆ. ಈ ಕುರಿತು ವಿದ್ವಾಂಸರ ಚರ್ಚೆ ಉಲ್ಲೇಖನಿಯ.

“ಬೂದಿ ದಿಬ್ಬಗಳಲ್ಲಿ ಕುಡಚಿ ನೆಲೆ ಅತ್ಯಂತ ಮಹತ್ವದ್ದು. ಈ ನೆಲೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ ಹಾಗೂ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಸಹಯೋಗದಲ್ಲಿ ೨೦೦೫ರಲ್ಲಿ ಅವರು ಮತ್ತು ಡಾ॥ ಎಸ್. ವಿ. ಪಾಡಿಗಾರ ಅವರು ಸೇರಿ ಅಲ್ಲಿ ಪರೀಕ್ಷಾ ಗುಂಡಿಗಳನ್ನು ಹಾಕುವ ಮೂಲಕ ಕಿರು ಕಾಲದ ಉತ್ಖನನವನ್ನು ಕೈಕೊಂಡರು. ಇದರಿಂದ ಈ ಬೂದಿ ದಿಬ್ಬವು ನೂತನ-ತಾಮ್ರ ಸಂಸ್ಕೃತಿ ಅಂತ್ಯ ಹಾಗೂ ಕಬ್ಬಣದ ಬೃಹತ್ ಶಿಲಾ ಸಂಸ್ಕೃತಿಯ ಪೂರ್ವದ ಹಂತವೆಂದು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿ ಬೂದು ಬಣ್ಣದ ಮೃತ್ (ಮಣ್ಣಿ) ಪಾತ್ರೆಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯ ಗಡಿಗೆಗಳನ್ನು ಹೋಲುವುದನ್ನು ತೋರಿಸಿರುವರು.”[೧]

ನೂತನ ಶಿಲಾಯುಗ ಸಂಸ್ಕೃತಿಯು ಮಾನವ ಸಂಸ್ಕೃತಿಯ ಭೌದ್ಧಿಕ ವಿಕಾಸದ ಹಂತವಾಗಿದ್ದು ಈ ಅವಧಿಯಲ್ಲಿ ಮಾನವ ಸಮಾಜ ಕೃಷಿ ಪ್ರಧಾನ ಸಮುದಾಯವಾಗಿ ವಿಕಾಸಗೊಳ್ಳಲು ಆರಂಭಿಸಿತು. “ಬೂದಿ ದಿಬ್ಬಗಳ ಬಗ್ಗೆ ಆಳವಾದ ಸಂಶೋಧನೆ ನಡೆಸಿರುವ ಅಲ್ಚಿನ್ ದಂಪತಿಗಳು ಈ ಬೂದಿ ದಿನ್ನೆಗಳು ಕೊಂಡವಾಡೆ ಬಳಿ ಸಂಗ್ರಹವಾದ ಸಗಣಿಯ ರಾಶಿಯನ್ನು ಸಮಾಜದ ವಿಧಿ ವಿಧಾನಗಳಂತೆ ಸುಡುತ್ತಿದ್ದ ವಾರ್ಷಿಕ ಕ್ರಿಯೆಯ ಉದಾಹರಣೆಗಳೆಂದು ಹೇಳುತ್ತಾ, ಇಂದಿನ ಹೋಳಿ, ಪೊಂಗಲ್ ಹಾಗೂ ದೀಪಾವಳಿಗಳು ಅದರ ಮುಂದುವರಿದ ಸುಧಾರಿತ ರೂಪಗಳೆಂದು ಅಭಿಪ್ರಾಯಪಡುತ್ತಾರೆ.”[೨] ಅದಲ್ಲದೆ ಮತ್ತೊಬ್ಬ ವಿದ್ವಾಂಸರು

ಇನ್ನೊಂದು ತೆರನಲ್ಲಿ ಸೂಚಿಸುತ್ತಾರೆ. "ದುಷ್ಟ ಮೃಗಗಳನ್ನು ದೂರವಿಡಲು ಈ ರೀತಿಯ ದಹನ ಕ್ರಿಯೆ ನಡೆಯುತ್ತಿತ್ತೆಂದು ಅಭಿಪ್ರಾಯಪಡಲಾಗಿದೆ."[೩]

ಬೂದಿ ದಿಬ್ಬಗಳ ಬೂದಿಯನ್ನು ಪ್ರಯೋಗಶಾಲೆಯಲ್ಲಿ ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದಾಗ ಸಗಣಿಯನ್ನು ದೊಡ್ಡ ಪ್ರಮಾಣದಲ್ಲಿ ಸು. ೮೦೦-೨೦೦೦ ಸೆಂಟಿಗ್ರೇಡ್‌ನಲ್ಲಿ ಸುಟ್ಟಿದ್ದರಿಂದ, ಇವು ಉಂಟಾಗಿವೆಯೆಂದು ತಿಳಿದುಬಂದಿದ್ದು, ಈ ಕ್ರಿಯೆ ಸುಮಾರು ಕ್ರಿ. ಪೂ. ೨೦೦೦-೮೦೦ ರ ಕಾಲಾವಧಿಯಲ್ಲಿ ಜರುಗಿರಬೇಕೆಂದು ಊಹಿಸಲಾಗಿದೆ. ಅತೀ ದೊಡ್ಡ ಪ್ರಮಾಣದಲ್ಲಿ ದನ-ಕರುಗಳ ಸಗಣಿಯನ್ನು ಹೆಚ್ಚಿನ ಉಷ್ಣತೆಯಲ್ಲಿ ಸುಡುವುದರಿಂದ ಈ ಬೂದಿ ದಿಬ್ಬಗಳು ನಿರ್ಮಾಣವಾಗಿವೆ.

ಡಾ. ಅ. ಸುಂದರ ರವರು ಕುಡಚಿಯಲ್ಲಿ ಎರಡು ಬೂದಿ ದಿಬ್ಬಗಳನ್ನು ಪತ್ತೆಹಚ್ಚಿ ರೋಚಕ ಮಾಹಿತಿಗಳನ್ನು ಹೊರಗೆಡೆವಿದ್ದಾರೆ. ಕುಡಚಿಯಿಂದ ಚಿಂಚಲಿಗೆ ಹೋಗುವ ಹಳೆಯ ಮಾರ್ಗಕ್ಕೆ ಹೊಂದಿಕೊಂಡು ನೈಋತ್ಯ ದಿಕ್ಕಿಗೆ ೨ ಕಿ. ಮೀ. ಅಂತರದಲ್ಲಿ ಸದ್ಯ ನೂರಕ್ಕೂ ಹೆಚ್ಚು ಕುಟುಂಬಗಳು ವಾಸಮಾಡುತ್ತಿರುವ ಪ್ರದೇಶವೇ ಟಿಕನಾಳ. ಈ ಪದವು 'ಟೆಕ್+ಹಾಳ' ದಿಂದ ನಿಷ್ಪನ್ನಗೊಂಡಿರಬೇಕು. ಟೆಕ್ ಅಂದರೆ ದಿಬ್ಬ. ಟೆಕಹಾಳ ಎಂದರೆ ಹಾಳುದಿಬ್ಬ. ಇಲ್ಲಿ ಪ್ರಾಚೀನ ಕಾಲದಲ್ಲಿ, ಚಮನ್ ಮಲಿಕ್ ಅವರಿಗೆ ಸೇರಿದ ಸುಮಾರು ೮ ರಿಂದ ೧೦ ಎಕರೆ ಜಮೀನದಲ್ಲಿ ೭೦-೮೦ ಅಡಿಗಳಷ್ಟು ಎತ್ತರದ ಬೂದಿ ದಿಬ್ಬವಿತ್ತು. ಸದ್ಯ ಆ ಸ್ಥಳದಲ್ಲಿ ೨-೩ ಅಡಿಗಳಷ್ಟು ಎತ್ತರದ ದಿಬ್ಬವಿದ್ದದ್ದು ಮಾತ್ರ ಕಂಡು ಬರುತ್ತದೆ. ಮಧ್ಯದಲ್ಲಿ ಕಾಡುಗಲ್ಲನ್ನು ಪೂಜಿಸುತ್ತಿದ್ದು, ಅದನ್ನು 'ಹಾಳನಾನಾ' ದೇವತೆಯೆಂದು ಕರೆಯಲಾಗುತ್ತಿದೆ. ಅಮವಾಸ್ಯೆ ಮತ್ತು ಹುಣ್ಣಿಮೆಗಳಂದು ಪೂಜಿಸಲ್ಪಡುವ ಈ ದೇವತೆ ಹಿಂದು-ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿದೆ. ದೇವತೆಯಿಂದಾಗಿ ಈ ಪ್ರದೇಶವು ಇಂದಿಗೂ ತನ್ನ ಗತ ಪ್ರಾಚೀನತೆಯನ್ನು ಸಾರುವ ಸ್ಮಾರಕವಾಗಿದೆ. ಉಳಿದಂತೆ ಬೂದಿ ದಿಬ್ಬ ಕರಗಿ ಕೃಷಿ ಭೂಮಿಯಾಗಿ ಪರಿವರ್ತಿತವಾಗಿದ್ದರೂ, ತನ್ನ ಪ್ರಾಚೀನತೆಯನ್ನು ಸಾರುವ ಬೂದಿ ಉಂಡೆಗಳು ಅಲ್ಲಲ್ಲಿ ಹರಡಿಕೊಂಡಿವೆ.

ಟಿಕನಾಳ ಪ್ರದೇಶದಿಂದ ಒಂದು ಕಿ. ಮೀ. ಉತ್ತರದಲ್ಲಿ ಬಕಾಲಾಬಾಗ ಇದೆ. ಈ ಪ್ರದೇಶದಲ್ಲಿ ಡಾ. ಅ. ಸುಂದರ ಮತ್ತು ಡಾ. ಶ್ರೀನಿವಾಸ ಪಾಡಿಗಾರ ರವರು ಹಾಗೂ ಸ್ಥಳೀಯರು ಬೂದಿ ದಿಬ್ಬ ಇತ್ತೆಂದು ಹೇಳುತ್ತಾರೆ. ಸದ್ಯ ಆ ಯಾವ ಬೂದಿ ದಿಬ್ಬದ ಕುರುಹುಗಳು ಕಂಡು ಬರುವುದಿಲ್ಲ.

ತಾಲೂಕಿನ ಧಾರ್ಮಿಕ ನೆಲೆಗಳಲ್ಲಿ ಒಂದಾದ ಕೃಷ್ಣಾ ನದಿತೀರದ ಚಿಂಚಲಿಯು ರಾಯಬಾಗದಿಂದ ೭ ಕಿ. ಮೀ. ಅಂತರದಲ್ಲಿದೆ. ಹಾಲುಹಳ್ಳ ಎಂದು ಕರೆಯಲಾಗುವ ಹಳ್ಳದ ದಡದಲ್ಲಿ ಪ್ರಾಚ್ಯ ನೆಲೆಯೊಂದಿತ್ತು. ಅದಕ್ಕೆ ಸಾಕ್ಷಿಯಾಗಿ ಇಲ್ಲಿ ಎರಡು ಸ್ಥಳಗಳಲ್ಲಿ ಜಂಬಿಟ್ಟಿಗೆಗಳು ಸಿಗುತ್ತವೆ. ಸ್ಥಳಿಯರು ಈ ಜಂಬಿಟ್ಟಿಗೆಗಳ ಕುರಿತು ಕಥೆಯೊಂದನ್ನು ಹೇಳುತ್ತಾರೆ. ಮಾಯವ್ವ ಒಂದು ಸಲ ಹಾಲುಹಳ್ಳಕ್ಕೆ ಹೋದಾಗ ಅಲ್ಲಿದ್ದ ಕುರಿಕಾಯುವ ಮಟ್ಟೆಪ್ಪನಿಗೆ ಕುರಿಯ ಹಾಲು ಮತ್ತು ಕಂಕಣಕ್ಕೆ ಕುರಿಯ ಉಣ್ಣೆ ಬೇಕೆಂದು ಕೇಳಿದಳು. ಆತ ಅವುಗಳನ್ನು ಕೊಡಲು ನಿರಾಕರಿಸಿದಾಗ ನಿನ್ನ ಕುರಿಗಳೆಲ್ಲಾ ಕಲ್ಲಾಗಿ ಹೋಗಲೆಂದು ಶಾಪಕೊಟ್ಟಳಂತೆ. ಅವಳ ಶಾಪದ ಫಲವಾಗಿ ಅವನ ಕುರಿಗಳೆಲ್ಲಾ ಕಲ್ಲಾಗಿ ಬಿದ್ದವೆಂದು ಇಲ್ಲಿನ ಜನರ ನಂಬಿಕೆ. ಆ ಕಲ್ಲುಗಳೇ ಈ ಜಂಬಿಟ್ಟಿಗೆಗಳು. ಪ್ರಾಚೀನತೆಯ ಇತಿಹಾಸವನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಜಂಬಿಟ್ಟಿಗೆಗಳು ಪ್ರಾಯಶಃ

ಬೂದಿ ಉಂಡೆಗಳಾಗಿರಬಹುದು. ಇವುಗಳನ್ನು ಇಂದು ವೈಜ್ಞಾನಿಕವಾಗಿ ಪರೀಕ್ಷಿಸಿ ಸತ್ಯವನ್ನು ಬಯಲು ಮಾಡುವ ಅವಶ್ಯಕತೆಯಿದೆ.

ರಾಯಬಾಗದಿಂದ ದಕ್ಷಿಣ ದಿಕ್ಕಿಗೆ ಸುಮಾರು ೬ ಕಿ. ಮೀ. ದೂರದಲ್ಲಿ ಬೂದಿಹಾಳ ಗ್ರಾಮವಿದೆ. ಗ್ರಾಮದಿಂದ ದಕ್ಷಿಣ ದಿಕ್ಕಿನಲ್ಲಿರುವ ಬೂದಿಹಾಳ ಕ್ರಾಸ್‌ದ ಪ್ರದೇಶವು ಪ್ರಾಚೀನ ಕಾಲದ ಬೂದಿ ದಿಬ್ಬದ ಪ್ರದೇಶವಾಗಿತ್ತು. ಈ ಪ್ರದೇಶದಲ್ಲಿ ೮-೧೦ ಅಡಿಗಳಷ್ಟು ಎತ್ತರವಾದ ಬೂದಿ ದಿಬ್ಬವು ೧೦ ಎಕರೆ ವ್ಯಾಪ್ತಿಯಲ್ಲಿ ವಿಸ್ತಾರವಾಗಿ ಹರಡಿಕೊಂಡಿತ್ತೆಂದು ಜಮೀನು ಮಾಲೀಕರಾದ ಹೆಗಡೆಯವರು ಹೇಳುತ್ತಾರೆ. ಸದ್ಯ ಬೂದಿ ದಿಬ್ಬವಿದ್ದ ಪ್ರದೇಶದಲ್ಲಿ ಪೂರ್ವಕ್ಕೆ ಮುಖಮಾಡಿ ಲಕ್ಷ್ಮೀ ದೇವತೆಯ ಗುಡಿಯಿದೆ. ಗುಡಿಯ ಸುತ್ತಲೆಲ್ಲ ಬೂದಿಯ ಚಿಕ್ಕ-ಚಿಕ್ಕ ಉಂಡೆಗಳು ಚದುರಿಕೊಂಡಿವೆ. ಕೈಕೊಡಲಿ, ಬಾಚಿ, ದೊಡ್ಡ ಪ್ರಮಾಣದ ಹರವಿಗಳು, ಒಡೆದ ಖಾಲಿ ಮಡಕೆಗಳು ಆರಂಭದಲ್ಲಿ ಈ ಪ್ರದೇಶದಲ್ಲಿ ದೊರೆತಿರುವುದಾಗಿ ಸ್ಥಳೀಯರು ಹೇಳುತ್ತಾರೆ.

ಈ ಹಿನ್ನೆಲೆಯಲ್ಲಿ ತಾಲೂಕಿನ ಬಿರನಾಳ (ಬೀರನಹಾಳ), ಬೊಮ್ಮನಾಳ (ಬೊಮ್ಮನಹಾಳ), ಇಟನಾಳ (ಇಟ್ಟಪ್ಪನಹಾಳ), ನಾಗರಾಳ (ನಾಗಪ್ಪನಹಾಳ), ಸುಟ್ಟಟ್ಟಿ (ಸುಟ್ಟಹಟ್ಟಿ), ಸೌಂದತ್ತಿ (ಸುಂದರಹಟ್ಟಿ), ಭಿರಡಿ (ಬೀರಪ್ಪನಹಟ್ಟಿ), ಯಲ್ಪಾರಟ್ಟಿ (ಯಲ್ಲಪ್ಪನಹಟ್ಟಿ) ಮುಂತಾದ ಗ್ರಾಮಗಳೂ ಪ್ರಾಚ್ಯ ನೆಲೆಗಳಾಗಿದ್ದು ಬೂದಿ ದಿಬ್ಬಗಳನ್ನು ಹೊಂದಿರುವ ಸಾಧ್ಯತೆಗಳಿದ್ದು ಪರೀಶೀಲಿಸಬೇಕಾಗಿದೆ. ರಾಯಬಾಗ ಪರಿಸರದ ಪ್ರಾಚೀನ ಜನ ವಸತಿಗಳು ವಿದ್ವಾಂಸರ ಸಂಶೋಧನೆಗಳಿಂದಾಗಿ ಈಚೆಗೆ ಹೆಚ್ಚು ಗಮನಕ್ಕೆ ಬರುತ್ತಿವೆ. ಈ ಭಾಗದಲ್ಲಿರುವ ಬೂದಿ ದಿಬ್ಬಗಳು, ಬೂದಿ ಉಂಡೆಗಳು ಪ್ರಾಗ್ ಇತಿಹಾಸದ ಕೊಂಡಿಗಳಾಗಿದ್ದು, ಅವುಗಳ ನಿರ್ಮಾಣ ಇಂದಿಗೂ ಸಂಶೋಧನೆಗೆ ಸಮನಾಗಿ ನಿಂತಿದೆ. ಈ ಬೂದಿ ದಿಬ್ಬಗಳ ನಿರ್ಮಾಣಕ್ಕೆ ಮಾತ್ರ ಪಶುಪಾಲನಾ ವೃತ್ತಿ ಮೂಲವೆಂಬುದು ಕಂಡು ಬರುತ್ತದೆ. ರಾಯಬಾಗ ಸುತ್ತ-ಮುತ್ತಲಿನ ಹಲವಾರು ಹಳ್ಳಿಗಳ ಸಾವಿರಾರು ವರ್ಷಗಳಿಂದ ಈ ಸಂಸ್ಕೃತಿಯ ತಾಣಗಳಾಗಿವೆ ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ತಾಲೂಕಿನ ಪ್ರಾಚೀನ ಪಶುಪಾಲನೆಯ ಸ್ಥಳಗಳನ್ನು ಪತ್ತೆ ಹಚ್ಚಿ ವೈಜ್ಞಾನಿಕವಾಗಿ ಅಧ್ಯಯನಿಸುವ ಅವಶ್ಯಕತೆಯಿದೆ.

೩.೨ ಧಾರ್ಮಿಕ ನೆಲೆಗಳು ಹಾಗೂ ದೈವಗಳು :

ಪ್ರಕೃತಿಯನ್ನು ಆರಾಧಿಸುತ್ತಿದ್ದ ಬೇಟೆಗಾರ ಸಂಸ್ಕೃತಿಯಿಂದ ಪಶುಪಾಲಕ ಸಂಸ್ಕೃತಿಗೆ ಸ್ಥಿತ್ಯಂತರಗೊಂಡ ಮಾನವರು ದೈವೀ ಆರಾಧನೆಯಲ್ಲಿ ಹೊಸತನವನ್ನು ಕಂಡುಕೊಂಡು ಮೂರ್ತಿಪೂಜೆಯನ್ನು ಆರಂಭಿಸಿದರು. ಜಗತ್ತಿನ ಅದರಲ್ಲೂ ಭಾರತದ ಸಂದರ್ಭದಲ್ಲಿ ಪಶುಪಾಲಕರಾದ ಹಟ್ಟಿಕಾರರು ಮೊದಲ ಮೂರ್ತಿ ಪೂಜಕರೆಂದರೆ ತಪ್ಪಲ್ಲ, ಅಂದರೆ ದೈವೀಸ್ವರೂಪಕ್ಕೆ ಒಂದು ಸ್ಪಷ್ಟ ಭೌತಿಕ ರೂಪ ನೀಡಿದವರು ಈ ಪತ್ತಿಕಾರ (ಹಟ್ಟಿಕಾರ)ರೆಂದೇ ಹೇಳಬೇಕು.

ಹಾಲುಮತ ಕುರುಬ ಹುಟ್ಟುವ ಮುನ್ನ

ಕುಲವಿಲ್ಲ ಗೋತ್ರವಿಲ್ಲ, ಕುರುಬನೇ

ಆದಿಗ, ಫಲ ಕಾಣೋ ಮಾನವ

ಇಲ್ಲಿರುವ ಕವಿ ಸಾಲುಗಳಂತೆ, ಹಾಲುಮತ ಜನಾಂಗವು ವೇದಪೂರ್ವ ಕಾಲದಿಂದಲೂ ಸ್ವತಂತ್ರ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ ಸಮುದಾಯವಾಗಿದೆ. ಕ್ರಿ. ಶ. ಪೂರ್ವ ೨೦೦೦ ವರ್ಷಗಳಿಗೂ ಹಿಂದಿನ ಹಟ್ಟಿಕಾರರ ಜನಾಂಗವಾಗಿದ್ದ ಈ ಸಂಯುಕ್ತ ಹಾಲುಮತ ಸಮುದಾಯವು ಜೀವಪರ ಮತ್ತು ಪರಿಸರಪರ ಸಂಸ್ಕೃತಿಯನ್ನು ಹೊಂದಿತ್ತು. ಇದಕ್ಕೆ ಪೂರಕವಾಗಿ ಈ ಜನಾಂಗವು ಪೂಜಿಸುವ ದೈವಗಳು ಮತ್ತು ಧಾರ್ಮಿಕ ಆಚರಣೆಗಳನ್ನು ಕಣ್ಣಾರೆ ಕಂಡರೆ ಈ ಮಾತನ್ನು ಸತ್ಯವೆಂದು ಒಪ್ಪಿಕೊಳ್ಳಲೇಬೇಕು. "ದೇಶದ ಪ್ರಾಚೀನ ಜನಾಂಗಗಳಲ್ಲಿ ಒಂದಾದ ಹಾಲುಮತ ಸಮಾಜದ ಜನಾಂಗ ಕಾಡುಗಲ್ಲನ್ನೇ ದೇವರೆಂದು ಆದಿಕಾಲದಿಂದಲೂ ನಂಬಿಕೊಂಡು ಪೂಜಿಸುತ್ತ ಬಂದುದಕ್ಕೆ ಬ್ರಹ್ಮದೇವ (ಭರಮಪ್ಪ) ಮತ್ತು ಬೀರದೇವರ ಮೂರ್ತಿಗಳೇ ಇಂದಿಗೂ ನಿದರ್ಶಗಳಾಗಿವೆ. ಇಂತಹ ಮುಗ್ಧ ನಂಬಿಕೆ ಇರುವುದರಿಂದಲೇ ಕಾಡುಗಲ್ಲಿನ ರೂಪದ ಈ ದೇವರುಗಳು ಜನಾಂಗದ ಜನರ ಇಷ್ಟಾರ್ಥಗಳನ್ನು ಈಡೇರಿಸುವರೆಂಬ ಭಾವನೆ ಬೇರೂರಿದೆ. ಅಂತೆಯೇ ಈ ದೇವರುಗಳು ಇಂದಿಗೂ ಈ ಜನಾಂಗದ ಆರಾಧ್ಯ ದೈವವಾಗಿದ್ದಾರೆ. ಅಷ್ಟೇ ಅಲ್ಲ ಆಗಾಗ ಈ ದೇವರ ಜಾತ್ರಾ ಉತ್ಸವಗಳನ್ನು ಭಕ್ತಿಯಿಂದ, ವಿಜೃಂಭಣೆಯಿಂದ ಜರುಗಿಸುತ್ತ ಬರಲಾಗಿದೆ."[೪]

ಅರಣ್ಯವಾಸಿಗಳಾದ ಕುರುಬರು ಪೂಜಿಸಲು ಆರಂಭಸಿದ ದೇವತೆಗಳು, ಗ್ರಾಮ ಸಮುದಾಯಗಳು ಬೆಳೆದಂತೆಲ್ಲ ಅವುಗಳಲ್ಲಿಯ ಕೆಲವುಗಳು ಗ್ರಾಮದೇವತೆಗಳಾಗಿ ಮಾರ್ಪಾಟು ಹೊಂದಿದವು. "ಗ್ರಾಮೀಣ ಜೀವನದಲ್ಲಿ ಅನಾದಿ ಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದ ಬದುಕಿನ ಭಾಗವಾಗಿವೆ. ಜನಪದ ಸಂಸ್ಕೃತಿ, ಅರ್ಥವ್ಯವಸ್ಥೆ, ಸಾಮಾಜಿಕ ಸ್ಥಿತಿಗಳನ್ನು ಅಧ್ಯಯನ ಮಾಡುವವರು ಗ್ರಾಮದೇವತೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯ, ದಂತಕಥೆ, ಪುರಾಣದಲ್ಲಿ ಆಯಾ ಜನಾಂಗದ ಹಲವು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಒಂದು ನಿರ್ದಿಷ್ಟ ದೇವತೆಯ ಸಮಗ್ರ ಅಧ್ಯಯನದಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನ ರೀತಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ."[೫] ಆದ್ದರಿಂದ ಗ್ರಾಮದೇವತೆಗಳ ಸ್ವರೂಪವನ್ನು ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಔಚಿತ್ಯಪೂರ್ಣವಾಗಿದೆ.

ರಾಯಬಾಗ ಪರಿಸರ ಹಾಲುಮತದವರ ತೊಟ್ಟಿಲು. ಇಲ್ಲಿಯ ಹಾಲುಮತ ಜನಾಂಗದ ಜನಸಂಖ್ಯೆ, ಹಾಲುಮತ ದೈವಗಳು, ಹಾಲುಮತದ ಸಾಂಸ್ಕೃತಿಕ ಆಚರಣೆಗಳು, ಹಬ್ಬ-ಉತ್ಸವಗಳನ್ನು ನೋಡಿದರೆ ಈ ನಾಡಿನ ಸಾಂಸ್ಕೃತಿಕ ಚರಿತ್ರೆಯ ವೈವಿಧ್ಯತೆ ತಿಳಿಯುತ್ತದೆ. ಆದರೆ ಆ ಆಕರಗಳೆಲ್ಲವೂ ಜನಪದೀಯ. ಎಲ್ಲಿಯೂ ದಾಖಲಿತಗೊಂಡಿಲ್ಲ. ತೊಂಡಿ ಸಂಪ್ರದಾಯದಲ್ಲಿ ಮಾತ್ರ ಉಳಿದುಕೊಂಡಿವೆ. ವಿಶೇಷವೆಂದರೆ ಅವೆಲ್ಲವೂ ಇಂದಿಗೂ ಈ ನಾಡಿನಲ್ಲಿ ಲಭ್ಯವಿರುವವು. ಈ ಹಿನ್ನೆಲೆಯಲ್ಲಿ ಅಪಾರ ವೈವಿಧ್ಯಮಯವಾದ, ಅನನ್ಯ ಜನಪದ ಸಾಹಿತ್ಯ ಬೆಳೆದು ಬಂದಿದ್ದು ಜನಪದ ಮಹಾಕಾವ್ಯಗಳು ಹುಟ್ಟಿಕೊಂಡಿವೆ. ಆದರೆ ಈ ಸಾಹಿತ್ಯದ ಪ್ರಾಚೀನತೆ ನಿಖರವಾಗಿ ತಿಳಿಯದು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರಾಚೀನ ಕಾಲದಲ್ಲಿ ಈ ನಾಡಿನ ಹಾಲುಮತ ಜನಾಂಗ ಕಾಲಚಕ್ರದ ಗತಿಯಲ್ಲಿ ಬೇರೆ-ಬೇರೆ ಸ್ಥಳಗಳಿಗೆ ಚದುರಿದಂತೆ ಅವರ ಜೊತೆ-ಜೊತೆಯಾಗಿ ಇಲ್ಲಿನ ಹಾಲುಮತ

ದೇವತೆಗಳು ಕರ್ನಾಟಕದ ವಿವಿಧ ಪ್ರದೇಶಗಳಿಗೆ ಪ್ರಸರಣವನ್ನು ಹೊಂದಿದ್ದು ಕಂಡು ಬರುತ್ತದೆ. ಸದ್ಯ ಆ ಎಲ್ಲ ದೇವತೆಗಳು ಅಲ್ಲಿನ ಪ್ರಾದೇಶಿಕ ದೇವತೆಗಳಾಗಿದ್ದು, ಮೂಲ ಸ್ಥಳ ಮಾತ್ರ ರಾಯಬಾಗ ಪರಿಸರವೇ ಆಗಿದ್ದು ಈ ನಾಡಿನಲ್ಲಿ ನಡೆಯುವ ಹಾಲುಮತ ದೇವತೆಗಳ ಜಾತ್ರೆಗೆ ಸಾವಿರ-ಸಾವಿರ ಜನರು ಬೇರೆ-ಬೇರೆ ರಾಜ್ಯಗಳಿಂದ ಆಗಮಿಸುತ್ತಿರುವುದು ಇಂದಿಗೂ ಸಾಕ್ಷೀಕರಿಸುತ್ತದೆ. ಬಾಗೆನಾಡಿನ ಹಾಲುಮತದ ದೇವತೆಗಳ ಭಕ್ತರಿಗೆ ಪ್ರಾದೇಶಿಕ ಮಿತಿ ಹಾಕುವುದು ಸಾಧ್ಯವೇ ಇಲ್ಲ. ರಾಯಬಾಗ ಪರಿಸರ ಹಾಲುಮತದ ಕೆನ್ನೆನೆಲೆ. ಹೀಗಾಗಿ ಈ ಪರಿಸರದಲ್ಲಿ ಹಲವು ಪುರುಷ ಮತ್ತು ಸ್ತ್ರೀ ದೈವಗಳು ನೆಲೆಸಿವೆ.

೩.೨.೧. ಪ್ರಮುಖ ಪುರುಷ ದೈವಗಳು :

ಆದಿ ಕಾಲದಿಂದ ಆಧುನಿಕ ಕಾಲದವರೆಗಿನ ಭಾರತದ ಸಾಮಾಜಿಕ ಇತಿಹಾಸವನ್ನು ಗಮನಿಸಿದರೆ ಹಲವಾರು ಸಾಂಸ್ಕೃತಿಕ ಏರುಪೇರುಗಳು, ವೈರುಧ್ಯಗಳು ಜೊತೆಗೆ ಸಾಮಾಜಿಕ ಧಾರ್ಮಿಕ ಅಂದೋಳನಗಳು ಕಂಡು ಬರುತ್ತವೆ. ಭಾರತೀಯ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಗಳು, ಸ್ಥಾಪಿತ ಹಿತಾಸಕ್ತಿಗಳೆನಿಸಿದ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವದ ಅಡಿಯಲ್ಲಿಯೇ ಕಾರ್ಯನಿರ್ವಹಿಸುತ್ತ ಬಂದಿರುವುದು ಕಂಡು ಬರುತ್ತದೆ. ಇವೆರಡೂ ಪ್ರಭುತ್ವಗಳಿಗೆ ಮುಖಾಮುಖಿಯಾಗಿ ಹಾಗೂ ಸದಾ ಎದುರಾಳಿಯಾಗಿ ಕಾಣಿಸಿಕೊಳ್ಳುವ ಕೆಳವರ್ಗದ ಜನಪದವು ಬದುಕುಳಿಯಬೇಕಾದರೆ ತನ್ನದೇ ಸಮೂಹದ ಸಾಂಸ್ಕೃತಿಕ ವೀರರನ್ನು ಹೊಂದಬೇಕಾದ ಅನಿವಾರ್ಯತೆ ಇತಿಹಾಸದ ಸೃಷ್ಟಿಯೆನ್ನಬಹುದು. ಇದಕ್ಕೆ ಯಾವುದೇ ಜಾತಿ, ಧರ್ಮ, ಪಂಗಡ, ಸಮೂಹಗಳು ಹೊರತಾಗಿಲ್ಲ. ಇವೆರಡೂ ಪ್ರಭುತ್ವಗಳ ವಿರುದ್ಧ ಬೀರಪ್ಪ, ರೇವಣಸಿದ್ಧ, ಅಲ್ಲಮಪ್ರಭು, ಬಸವಣ್ಣ ಮುಂತಾದವರು ಒಂದು ರೀತಿಯ ಹೋರಾಟವನ್ನು ಮಾಡಿದ್ದಾರೆ.

"ಜನಪದ ಸಾಂಸ್ಕೃತಿಕ ವೀರರ ಪ್ರಧಾನ ಉದ್ದೇಶ, ಸ್ಥಾಪಿತ ಹಿತಾಸಕ್ತಿಗಳನ್ನು ಎದುರಿಸುವುದರ ಜೊತೆಗೆ ತಮಗೆ ಮತ್ತು ತಮ್ಮ ಸಮುದಾಯಕ್ಕೆ ಒಂದು 'ಸ್ವಂತ ವ್ಯಕ್ತಿತ್ವ'ವಿದೆ ಎಂಬುದನ್ನು ಆ ಹಿತಾಸಕ್ತಿಗಳು ಗುರುತಿಸುವಂತೆ ಮಾಡುವುದು. ಯಾವ ಕಾಲದಲ್ಲಿ ಶ್ರೇಷ್ಠ, ಪ್ರಧಾನ, ಆಳುವ ಸಮಾಜ, ಧರ್ಮ ಮತ್ತು ಸಂಸ್ಕೃತಿಗಳು ಯಾರನ್ನು ನಿರ್ಲಕ್ಷಿಸಿ, ಕೀಳಾಗಿ ಅಥವಾ ಗುಲಾಮ ಸ್ಥಿತಿಗೆ ತಳ್ಳಿ ನಿಕೃಷ್ಟವಾಗಿ ನಡೆಸಿಕೊಳ್ಳುತ್ತ ಎಲ್ಲ ಕಡೆ ಅಸ್ಪೃಶ್ಯತೆ ಆಚರಣೆ ಮಾಡುತ್ತವೆ, ಆಗ ಇಂತಹ ಸಂಘರ್ಷ, ಪ್ರತಿಭಟನೆಯ ಪರ್ಯಾಯ ಕ್ರಿಯೆಗಳು ಆರಂಭವಾಗುತ್ತವೆ. ಈ ನೆಲೆಯಲ್ಲಿ ಹೋರಾಟಕ್ಕಿಳಿಯುವ ಅವರು ತಮ್ಮ ತಮ್ಮ ಸಮುದಾಯದ ಧರ್ಮವನ್ನು ಅಡಿಪಾಯ ಮಾಡಿಕೊಂಡಿರುತ್ತಾರೆ. ಇದಕ್ಕೆ ಹಲವು ಕಾರಣಗಳಿರುತ್ತವೆ, ಅಂದರೆ ತಮ್ಮ ಸಮುದಾಯದ ಧರ್ಮವನ್ನು ಸಂರಕ್ಷಣೆ ಮಾಡುವುದು, ತಮ್ಮ ಸಮುದಾಯದ ಬೆಂಬಲವನ್ನು ಪಡೆಯುವುದು ಮತ್ತು ತಮ್ಮ ಆತ್ಮ ರಕ್ಷಣೆಯನ್ನೂ ಮಾಡಿಕೊಳ್ಳುವುದಾಗಿದೆ."[೬]

ಹಾಲುಮತದ ಕುರುಬರು ಧೀರ್ಘ ಕಾಲದವರೆಗೆ ಪಶುಪಾಲನೆ ಮತ್ತು ಕೃಷಿಯನ್ನು ಅವಲಂಬಿಸಿ ನಾಗರಿಕ ಸಮಾಜದಿಂದ ದೂರವಿದ್ದು, ವೈದಿಕ (ಶ್ರೇಷ್ಠ) ಸಮಾಜದೊಂದಿಗೆ ಧಾರ್ಮಿಕ ಅಂತರವನ್ನು ಕಾಯ್ದುಕೊಂಡ ಸಮೂಹವೆಂದು ಗುರುತಿಸುತ್ತೇವೆ. ಈ ಅಂತರವನ್ನು ಕಾಯ್ದುಕೊಳ್ಳುವುದಕ್ಕೆ ಕಾರಣರಾದವರು

ಕುರುಬ ಸಾಂಸ್ಕೃತಿಕ ವ್ಯಕ್ತಿಗಳಾಗಿ ಹೊರಹೊಮ್ಮಿದ್ದಾರೆ. ಇಂತಹ ಸಾಂಸ್ಕೃತಿಕ ವ್ಯಕ್ತಿಗಳೆಂದರೆ, ಕರೇಸಿದ್ಧ, ಅರಣ್ಯಸಿದ್ಧ, ಹಾಲನಾಥಸಿದ್ಧ, ಮಾಯವ್ವಾ ಮುಂತಾದವರು.

ರಾಯಬಾಗ ಪರಿಸರದಲ್ಲಿ ಕಂಡು ಬರುವ ಸಾಂಸ್ಕೃತಿಕ ದೈವಗಳೆಂದರೆ, ಅಲಖನೂರಿನ ಕರೇಸಿದ್ಧ, ಯಲ್ಪಾರಟ್ಟಿಯ ಅರಣ್ಯಸಿದ್ಧ, ಕಂಕಣವಾಡಿ ಮತ್ತು ಹಿಡಕಲ್ಲಗಳ ಹಾಲಸಿದ್ಧ, ಹಾರೂಗೇರಿಯ ಭೂತಾಳಸಿದ್ಧ ಮತ್ತು ಅಮೋಘಸಿದ್ದ, ಮುಗಳಖೋಡದ ಬೀರಸಿದ್ಧ ಮತ್ತು ಯಲ್ಲಾಲಿಂಗರ ಮಠ, ಬೇಂಢವಾಡದ ರೇವಣಸಿದ್ಧ, ಮಲಕಾರಿಸಿದ್ಧ ಮುಂತಾದವುಗಳು. ಇವು ಸಿದ್ಧ ಪರಂಪರೆಯ ನೆಲೆ ಮತ್ತು ಆರಾಧನೆಯ ಕೇಂದ್ರಗಳಾಗಿವೆ. ಈ ಪರಿಸರದಲ್ಲಿನ ಪುರುಷ ದೈವಗಳಲ್ಲಿ ಸಿದ್ಧರ ಪರಂಪರೆಯಂತು ತುಂಬಾ ವಿಶಿಷ್ಟ.

೩.೨.೧.೧. ಬೀರದೇವ (ಕರೇಸಿದ್ಧ) ಚರಿತ್ರೆ :

ಬೀರದೇವರ ಮೂಲ :

ಕುರುಬರ ಕುಲದೈವ ಬೀರಪ್ಪ. ಬೀರಪ್ಪನಿಗೆ ಬೀರದೇವ, ಬೀರಲಿಂಗೇಶ್ವರ, ಬೀರೇಶ್ವರ, ಕರಿಸಿದ್ದೇಶ್ವರ, ಶಿವಸಿದ್ಧ ಬೀರೇಶ, ಬೀರಪ್ಪ ಮುಂತಾದ ಹೆಸರುಗಳು ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವುದು ಕಂಡು ಬರುತ್ತದೆ. ಬೀರದೇವರು ಒಬ್ಬ ಜನಪದ ದೈವ. ಒಂದು ಜನಾಂಗದ ಕ್ಷಾತ್ರತೇಜಸ್ಸನ್ನು ಪ್ರತಿನಿಧಿಸುವ ಬೀರಪ್ಪ ಇಂದು ಬೀರಲಿಂಗೇಶ್ವರನಾಗಿದ್ದಾನೆ. ಶಿವನ ಅಂಶವಾಗಿ ಪರಿವರ್ತನೆಗೊಂಡಿರುವ ಬೀರಪ್ಪನನ್ನು ಹೀಗೆ ಎಂದು ಅರ್ಥೈಸಿಕೊಳ್ಳುವುದು ಸುಲಭವಲ್ಲ. ಇಂತಹ ವಿಷಯಗಳ ಹಿಂದೆ ಇಡೀ ಸಮುದಾಯವನ್ನು ಧಾರ್ಮಿಕ ಹಿಡಿತದಲ್ಲಿ ತರುವಂತಹ ಸಾಂಸ್ಕೃತಿಕ ರಾಜಕಾರಣ ಇದೆಯೆಂಬುದು ವಾಸ್ತವಿಕ ಸತ್ಯ. ಕುರುಬರ ಸಾಂಸ್ಕೃತಿಕ ವೀರನಾದ ಬೀರಪ್ಪ ಎಂದಿನಿಂದ ಶೈವೀಕರಣಗೊಂಡ ಎಂಬುದು ಕೂಡ ತೊಡಕಿನ ಪ್ರಶ್ನೆಯಾಗಿದೆ. ಕುರುಬರು ಮೂಲತಃ ಶೈವರು, ಶಿವನ ಆರಾಧಕರು. ಪಶುಪತಿ ಇವರ ಆರಾಧ್ಯ ದೈವನಾಗಿದ್ದಾನೆ. ಪಶುಪಾಲಕರ ಸಾಂಸ್ಕೃತಿಕ ವೀರ ಬೀರಪ್ಪ ಅವರ ಆರಾಧ್ಯ ದೈವನಾಗಿ ಪರಿವರ್ತನೆಗೊಂಡಿದ್ದಾನೆ.

ಬೀರಪ್ಪನ ಆರಾಧನೆ ಎಂದಿನಿಂದ ಆರಂಭವಾಯಿತು ಎಂಬುದರ ಕುರಿತು ನಿಖರವಾಗಿ ಉತ್ತರ ಹುಡುಕುವುದು ಕಷ್ಟಸಾಧ್ಯ. "ಬೀರಪ್ಪ ಒಂದು ಪ್ರಾಚೀನಪೂರ್ವ ದೈವತ. ಹಾಲುಮತ ಕುರುಬರು ಪಶುಪಾಲನಾ ವೃತ್ತಿಯಿಂದ ಕೃಷಿಯತ್ತ ಒಲವು ತೋರಿದಾಗ ಬೀರಪ್ಪನ ಆಚರಣೆ, ಆರಾಧನೆಗಳು ಆರಂಭಗೊಂಡವೆಂದು ಹೇಳಬಹುದು. ಯಾಕೆಂದರೆ ಪಶುಪಾಲಕರಾಗಿದ್ದಾಗ ಕುರುಬರು ಮಲ್ಲಯ್ಯ(ಪರ್ವತದೇವರು), ಮಲ್ಲಿಯಮ್ಮ ಎಂಬ ಮಲೆಯರಾಜ(ಶಿವ ಪಾರ್ವತಿ)ನ ಆರಾಧನೆ ಮಾಡುತ್ತಿದ್ದುದು ಮೇಲು ನೋಟಕ್ಕೆ ಕಂಡುಬರುತ್ತದೆ. ಹಾಲುಮತ ಕುರುಬರಲ್ಲಿ ಅನೇಕ ಜನರು ಪಶುಪಾಲನೆ ತೊರೆದು, ಕೃಷಿಯನ್ನು ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡ ಸಂಕೀರ್ಣ ಕಾಲಘಟ್ಟದಲ್ಲಿ ಬೀರಪ್ಪನ ಆರಾಧನೆ ಆರಂಭಗೊಂಡಿರ ಬಹುದೆಂದು ಊಹಿಸಬಹುದಾಗಿದೆ. ಅಂದರೆ ಪ್ರಾಚೀನ ಪೂರ್ವಕಾಲದಲ್ಲಿಯೇ ಬೀರದೇವನ ಸೃಷ್ಟಿ ಮತ್ತು ಈ ಆಚರಣೆಗಳು ಹುಟ್ಟು ಪಡೆದಿದ್ದು ಸ್ಪಷ್ಟವಿದೆ. ಇದಕ್ಕೆ ನಾವು ಹಲವು ಪುರಾವೆಗಳನ್ನೂ ಕೊಡಬಹುದು. ಬೀರಪ್ಪನ ದೇವಾಲಯಗಳು ಕಾಡು ಕಲ್ಲಿನಿಂದ ನಿರ್ಮಿಸಿದ ಪುಟ್ಟ-ಪುಟ್ಟ ದೇವಾಲಯಗಳಾಗಿವೆ. ಇವುಗಳ ಆಕಾರ ಕಟ್ಟೆಯನ್ನು ಹೋಲುತ್ತದೆ. ಒಳಗಿರುವ ದೇವರೂ ಕಲ್ಲಿನ

ರೂಪದಲ್ಲಿದ್ದು, ಶಿಲ್ಪವು ಅಪರೂಪವೆಂದು ಹೇಳಬೇಕು. ಇವು ಕುರುಬರ ನೆಲೆಗಳಲ್ಲಿ ಕಂಡುಬರುತ್ತವೆ. ವಿಜಯನಗರ ವಾಸ್ತುಶೈಲಿಯಲ್ಲಿ ನಿರ್ಮಿತವಾದ ಹಲವು ದೊಡ್ಡ ದೇವಾಲಯಗಳೂ ಇವೆ."[೭]

"ಮೈಲಾರನನ್ನು ಪಶುಪಾಲಕರು ಅನಾದಿಕಾಲದಿಂದ ಪೂಜಿಸುತ್ತ ಬಂದಿದ್ದಾರೆ. ಅಲೆಮಾರಿಜೀವನ ತೊರೆದು ಒಂದು ಕಡೆ ನೆಲೆನಿಂತ ಇವರಿಗೆ ಹೊಸ ಸಮಸ್ಯೆಗಳು ಎದುರಾದವು. ಪಶುಗಳ ರಕ್ಷಣೆಯ ಜೊತೆಗೆ ಇತರ ಆಸ್ತಿ–ಪಾಸ್ತಿ ರಕ್ಷಣೆ, ಕುಟುಂಬದ ಸ್ತ್ರೀಯರ ರಕ್ಷಣೆ, ಗ್ರಾಮ ರಕ್ಷಣೆ ಮುಂತಾದವುಗಳನ್ನು ರಕ್ಷಿಸುವ ಹೊಣೆಗಾರಿಕೆ ಇವನ ಮೇಲೆ ಬೀಳುತ್ತದೆ. ಗ್ರಾಮಗಳಲ್ಲಿ ದನಗಳ್ಳರನ್ನು ತಡೆಯುವಾಗ ಜೀವತೆತ್ತ, ಜನರ ಆಸ್ತಿಪಾಸ್ತಿ ರಕ್ಷಣೆಯ ಸಂರಕ್ಷಣೆಯ ಸಮಯದಲ್ಲಿ ಕಾದಾಡಿ ಬಲಿಯಾದ, ಯುದ್ಧದಲ್ಲಿ ಹೋರಾಡಿ ಅಸುನೀಗಿದ, ಕೆರೆಭಾವಿಗಳಿಗೆ ಬಲಿ ಅರ್ಪಿಸಿದವರ, ಸ್ತ್ರೀಯರ ಮಾನ ಕಾಪಾಡಲು ಹೋಗಿ ಜೀವ ಕಳೆದುಕೊಂಡ ವೀರ ಪುರುಷರನ್ನು ವೀರತೆಯ ದ್ಯೋತಕವಾಗಿ ಆರಾಧಿಸುವ ಪರಂಪರೆಯು ಭಾರತದ ಉದ್ದಗಲಕ್ಕೂ ಬೆಳೆದು ಬಂತು. ಪ್ರತಿ ಗ್ರಾಮಗಳಲ್ಲಿ ವೀರರ ಸಂಖ್ಯೆ ಬೆಳೆಯುತ್ತ ಹೋಯಿತು. ಮೈಲಾರನೊಂದಿಗೆ ದಿನೆ ದಿನೆ ಆರಾಧನೆಗೊಳ್ಳುವ ದೇವತೆಗಳ ಸಂಖ್ಯೆ ನಾಯಿ ಕೊಡೆಗಳಂತೆ ಬೆಳೆಯತೊಡಗಿದವು. ಬಹು ದೇವೋಪಾಸನೆಯನ್ನು ತಡೆಯುವ ಸಂಕಲ್ಪದೊಂದಿಗೆ ಬೌದ್ಧ, ಜೈನ, ಕ್ರೈಸ್ತ ಮುಂತಾದ ಧರ್ಮಗಳು ಉದಯವಾದವು. ಬಹು ದೇವೋಪಾಸನೆಗೆ ಬೇಸತ್ತ ಹಿಂದೂಗಳು ಧರ್ಮ ಬದಲಾವಣೆಯತ್ತ ವಾಲಿದರು. ಇದನ್ನು ತಡೆಯುವ ಉದ್ದೇಶದಿಂದ ಎಲ್ಲ ಕ್ಷುದ್ರ ದೇವತೆಗಳನ್ನು ಒಂದುಗೂಡಿಸಿ ಬಹಳ ದಿನದಿಂದ ಪೂಜಿಸುತ್ತಿದ್ದ ಮೈಲಾರನ ಸ್ಥಾನದಲ್ಲಿ ಹೊಸ ವೀರಪ್ಪನನ್ನು ಸೃಷ್ಟಿಸಿದರು. ಕಾಲಾಂತರದಲ್ಲಿ ವೀರಪ್ಪನೇ ಬೀರಪ್ಪನಾಗಿ ರೂಪಾಂತರಗೊಂಡನೆಂದು ಒಂದು ಐತಿಹ್ಯವುದೆ. ಬೀರಪ್ಪನ ಪ್ರಚಾರದ ಉಪಯೋಗ ಈ ರೀತಿಯಲ್ಲಿ ಬಳಸಿಕೊಂಡಿರುವ ಸಾಧ್ಯತೆಯೂ ಇಲ್ಲಿ ಇರಬಹುದು. ಇಂದು ಪ್ರತಿಯೊಂದು ಹಟ್ಟಿ, ಗ್ರಾಮಗಳಲ್ಲಿ ಬೀರಪ್ಪನ ಮಂದಿರಗಳು ಕಾಣಸಿಗುತ್ತವೆ."[೮]

ಹಾಲುಮತದ ಪ್ರಾಚೀನ ದೈವನಾದ ಬೀರಪ್ಪನ ಕಾಲವನ್ನು ನಿರ್ಧರಿಸುವುದು ಸ್ವಲ್ಪ ತೊಡಕಿನ ವಿಚಾರವಾದರೂ, ಪೌರಾಣಿಕ ಅಭಿಪ್ರಾಯ ಮತ್ತು ಚರಿತ್ರೆಯಲ್ಲಿ ದೊರೆಯುವ ಸಂಗತಿಗಳನ್ನು ಗಮನಿಸಿದರೆ, ಸುಮಾರು ಕ್ರಿ. ಶ. ೧ನೇ ಶತಮಾನಕ್ಕಿಂತಲೂ ಪೂರ್ವದ ಪುರಾತನ ದೈವನಾಗಿರಬಹುದೆಂದು ನಿರ್ಧರಿಸಬಹುದು.

ಬೀರದೇವರಿಗೆ ಸಂಬಂಧಿಸಿದಂತೆ ಬಸವಣ್ಣನವರು ಒಂದು ವಚನದಲ್ಲಿ,

"ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ,

ಕೆರೆ ಬಾವಿ ಹೂಗಿಡ ಮರಂಗಳಲ್ಲಿ,

ಗ್ರಾಮಮಧ್ಯಂಗಳಲ್ಲಿ ಜಲಪಥ ಪಟ್ಟಣ ಪ್ರವೇಶದಲ್ಲಿ

ಹಿರಿಯಾಲದ ಮರದಲ್ಲಿ ಮನೆಯ ಮಾಡಿ,

ಕರೆವೆಮ್ಮು ಹಸುಗೂಸು ಬಸುರಿ ಬಾಣಂತಿ

ಕುಮಾರಿ ಕೊಡಗೂಸು ಎಂಬವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರಬೆಂತರ
ಕಾಳಯ್ಯ ಮಾರಯ್ಯ ಮಾಳಯ್ಯ ಕೇತಯ್ಯಗಳೆಂಬ· ನೂರು ಮಡಕೆಗೆ
ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದೆ ದಡಿಸಾಲದೆ?"[೯]

ಹೀಗೆ ಗ್ರಾಮದ ಹಲವಾರು ಜನಪದ ದೇವತೆಗಳನ್ನು ಉಲ್ಲೇಖಿಸಿರುವುದು ಕಂಡು ಬರುತ್ತದೆ. ಇದರಿಂದ ಬೀರಪ್ಪನ ಆಚರಣೆ ಬಸವಣ್ಣವರ ಕಾಲದಲ್ಲಿ ಪ್ರಚಲಿತದಲ್ಲಿದ್ದುದು ವ್ಯಕ್ತವಾಗುತ್ತದೆ. ಶರಣರ ಕಾಲಕ್ಕಿಂತಲೂ ಪೂರ್ವದಲ್ಲಿ ಬೀರಪ್ಪನ ಪೂಜೆಯ ಆಚರಣೆಗಳು ಪ್ರಚಲಿತದಲ್ಲಿದ್ದವು ಎಂದಾದರೆ, ಇವನು ಶರಣಪೂರ್ವ ಯುಗದವನು ಎಂಬುದು ಸ್ಪಷ್ಟ. ಬೀರಪ್ಪನ ಪ್ರಾಚೀನತೆಯನ್ನು ಕುರಿತು ಚರ್ಚಿಸುತ್ತ, ಮಹಾರಾಷ್ಟ್ರದಲ್ಲಿ ಕ್ರಿ. ಶ. ೪ನೇ ಶತಮಾನದಲ್ಲಿಯೆ ಖಂಡೋಬಾ ಮತ್ತು ಬಿರೋಬ ಆರಾಧನೆಗೊಳ್ಳುತ್ತಿರುವ ಬಗ್ಗೆ ದಾಖಲೆಗಳಿವೆ. ಜೊತೆಗೆ ಕಾಲೀ(ಳಿ)ಅಮ್ಮಾ, ಮಾರಿಅಮ್ಮ ಮುಂತಾದ ಗ್ರಾಮ ದೇವತೆಗಳೂ ಇದ್ದರು. ಆದರೆ ಕುರುಬರು ಇತ್ತೀಚಿನ ಡೊಳ್ಳಿನ ಹಾಡುಗಳಲ್ಲಿ ಹಾಗೂ ಜನಪದ ಕಥೆಗಳಲ್ಲಿ ಗುರು ರೇವಣಸಿದ್ಧರ ಶಿಷ್ಯ ಬೀರಪ್ಪ ಎನ್ನುವ ರೀತಿಯಲ್ಲಿ ಕಥೆ ಸೃಷ್ಟಿಯಾಗಿರುವುದತ್ತ ಗಮನ ಹರಿಸಿದರೆ ಕಥೆ–ಪುರಾಣ ರಚನೆಕಾರರಿಗೆ ಇತಿಹಾಸದ ತಿಳವಳಿಕೆ ಇಲ್ಲದಿರುವುದು ಎದ್ದುಕಾಣುತ್ತದೆ. ಇಲ್ಲವೆ ರೇವಣಸಿದ್ಧರ ಶಿಷ್ಯ ಎಂದು ಕರೆಯಲ್ಪಡುವ ಬೀರಪ್ಪನು ಅಭಿನವ ಬೀರಪ್ಪನಾಗಿರಬೇಕು. ಮಾಳಿಂಗರಾಯ, ಕರಿಸಿದ್ದೇಶ್ವರ, ಪದ್ಮಗೊಂಡ ಮುಂತಾದವರ ಪುರಾಣಗಳಲ್ಲಿ ಇವನನ್ನು ಹುನ್ನೂರ ಬೀರಪ್ಪನೆಂತಲೂ, ಕೊಣ್ಣೂರು ಬೀರಪ್ಪ(ಕರಿಸಿದ್ಧ)ನೆಂತಲೂ ಹಾಗೂ ಸಿದ್ಧ ಬೀರಪ್ಪನೆಂತಲೂ ಹೇಳಲಾಗಿದೆ. ರೇವಣಸಿದ್ಧರ ಕಾಲಮಾನ ೧೨ನೇ ಶತಮಾನವೆಂದು ಶಿಲಾಶಾಸನಗಳಿಂದ ಸಿದ್ಧವಾಗಿದೆ. ಇವನು ಬಿಜ್ಜಳ, ರಾಜೇಂದ್ರ ಚೋಳ, ಬಸವಣ್ಣ, ಸಿದ್ಧರಾಮ ಮುಂತಾದವರ ಸಮಕಾಲೀನನಾಗಿದ್ದರಿಂದ ರೇವಣಸಿದ್ಧ ೧೨ ನೆಯ ಶತಮಾನದಲ್ಲಿ ಬದುಕಿದ್ದ ಕಾಲಮಾನದ ಬಗ್ಗೆ ಯಾವುದೇ ವಿವಾದ ಕಂಡುಬರುವುದಿಲ್ಲ. ಮಹಾರಾಷ್ಟ್ರ ಖಂಡೋಬಾ ಹಾಗೂ ಬೀರಪ್ಪರು ೪ ನೆಯ ಶತಮಾನದಿಂದಲೂ ಆ ಪ್ರದೇಶದಲ್ಲಿ ಪೂಜೆಗೊಳ್ಳುತ್ತಿರುವುದರಿಂದ ೪ ನೆಯ ಶತಮಾನಕ್ಕಿಂತಲೂ ಹಿಂದೆ ಸುಮಾರು ೨–೩ ನೆಯ ಶತಮಾನದ ಮೊದಲು ಬೀರಪ್ಪನ ಅಸ್ತಿತ್ವ ಇರಲ್ಲಿಕ್ಕೇ ಬೇಕು. ಬೀರಪ್ಪನ ಕಾಲಮಾನವನ್ನು ಸುಮಾರಾಗಿ ಕ್ರಿಸ್ತನ ಆಸುಪಾಸಿನಲ್ಲಿ ಇರಬಹುದೆಂದು ಗ್ರಹಿಸಿದರೂ ಗುರು ರೇವಣಸಿದ್ಧನ ಹಾಗೂ ಶಿಷ್ಯ ಬೀರಪ್ಪನ ನಡುವಿನ ಅಂತರ ಕನಿಷ್ಟ ೧೦೦೦ ವರ್ಷ. ೧೨ನೇ ಶತಮಾನದ ಗುರುವಿಗೆ ೧೨ನೇ ಶತಮಾನದ ಶಿಷ್ಯನಿರುವುದು ಉಚಿತವಾದದು. ಎಲ್ಲಿಯೋ ಇದ್ದ ಬೀರಪ್ಪನನ್ನು ರೇವಣಸಿದ್ಧರ ಶಿಷ್ಯನೆಂದು ತಳಕುಹಾಕುವುದು ಉಚಿತವೆನಿಸಲಾರದು. ಇಂದು ಪ್ರತಿಯೊಂದು ಹಟ್ಟಿ, ಗ್ರಾಮಗಳಲ್ಲಿ ಬೀರಪ್ಪನ ಮಂದಿರಗಳು ಕಾಣಸಿಗುತ್ತವೆ.

"ಹಂಪಿ ಕ್ಷೇತ್ರವು ಮತ್ತು ಬಳ್ಳಾರಿ ಪರಿಸರವು ಕುರುಬರ ನೆಲೆಯೆಂದು ಇತಿಹಾಸವು ಹೇಳುತ್ತದೆ. ಹಂಪಿಯಲ್ಲಿರುವ ವೀರೂಪಾಕ್ಷನು ಪರಿಷ್ಕೃತಗೊಂಡ ಕುರುಬರ ಬೀರಪ್ಪನೆಂದು ನಾಡಿನ ಖ್ಯಾತವಿದ್ವಾಂಸರುಗಳ ಅಭಿಪ್ರಾಯವಾಗಿದೆ."[೧೦] "ಖ್ಯಾತ ಮರಾಠಿ ವಿದ್ವಾಂಸರಾದ ಡಾ. ರಾಮಚಂದ್ರ ಚಿಂತಾಮಣಿ ಢೇರೆ ಅವರು

ಹಂಪಿಯ ವಿರೂಪಾಕ್ಷನನ್ನು ಮತ್ತು ವಿಜಯನಗರ ಸ್ಥಾಪಕರಾದ ಹುಕ್ಕಬುಕ್ಕ ರಾಜಕುಮಾರರನ್ನು ಕುರಿತು ದಾಖಲಿಸಿರುವ ಸಂಶೋಧನೆಯ ಅಂಶವು ಬ್ರಾಹ್ಮನೀಕರಣಗೊಂಡ ಬೀರಪ್ಪನು ವಿರೂಪಾಕ್ಷನೆಂದು ತಿಳಿಸುತ್ತದೆ."[೧೧] ಒಟ್ಟಾರೆ ಬೀರದೇವರ ಆಚರಣೆ ಸಿದ್ಧಪಂಥ(ಭಂಡಾರ ಸಂಸ್ಕೃತಿ)ಕ್ಕೆ ಸೇರಿದ ಅತ್ಯಂತ ಪ್ರಾಚೀನ ಆಚರಣೆಯಾಗಿ ಗಮನ ಸೆಳೆಯುತ್ತದೆ.

ಬೀರಪ್ಪನ ಜನನ ವೃತ್ತಾಂತ

ಬೀರದೇವರು ಯಾರು? ಅವನ ಹುಟ್ಟಿನ ಹಿನ್ನೆಲೆಯಲ್ಲಿರುವ ಕಥೆಗಳಾವವು? ಹಾಲುಮತ ಕುರುಬರು ಬೀರಪ್ಪನನ್ನೇ ಕುಲದೈವವೆಂದು ಸ್ವೀಕರಿಸಲು ಕಾರಣಗಳೇನು? ಎಂಬ ಪ್ರಶ್ನೆಗಳಿಗೆ ಹಾಲ್ಮತೋತ್ತೇಜಕ ಪುರಾಣ, ಇನ್ನಿತರ ಹಾಲುಮತ ಪುರಾಣಗಳಲ್ಲಿ ಮತ್ತು ಡೊಳ್ಳಿನ ಹಾಡುಗಳಲ್ಲಿ ಉತ್ತರಗಳನ್ನು ಕಂಡುಕೊಳ್ಳಬಹುದು. ಬೀರೇಶ ನಾಯಕ ಗುಣದ ಧೀರೋದಾತ್ತ ವ್ಯಕ್ತಿ. ಹಾಲುಮತಸ್ಥರಿಗೆ ಪೂಜ್ಯದೇವರು ಇವನಾಗಿರುವುದರಿಂದ ಬೀರೇಶ ಗೈದ ಅನೇಕ ಪರಾಕ್ರಮದ ಪ್ರಸಂಗಗಳು ಇವನನ್ನು ಕುರಿತಾದ ಪುರಾಣಗಳಲ್ಲಿ ವಿಜೃಂಭಿಸುತ್ತವೆ. ವಿಶೇಷವಾಗಿ ಜನಪದ ಮಹಾಕಾವ್ಯದಲ್ಲಿ ಬೀರಪ್ಪನ ಶೌರ್ಯ ಪ್ರದರ್ಶನದ ಅನೇಕ ಘಟನೆಗಳು ತುಂಬಿವೆ. ಇದರ ಜೊತೆಗೆ ಲಭ್ಯವಿರುವ ಎಲ್ಲಾ ವಿವರಗಳು ಬಹುತೇಕ ಏಕರೂಪವಾಗಿದ್ದು ಅಲ್ಪ-ಸ್ವಲ್ಪ ಬದಲಾವಣೆಯೊಂದಿಗೆ ದಾಖಲಿಸಲ್ಪಟ್ಟಿವೆ. ಬೀರದೇವರ ಬಗ್ಗೆ ಅನೇಕ ಕತೆ, ಐತಿಹ್ಯ, ನಂಬಿಕೆಗಳಿವೆ. ಹಲವಾರು ವಿದ್ವಾಂಸರು ಇದನ್ನು ಕುರಿತು ಈಗಾಗಲೇ ಚರ್ಚಿಸಿದ್ದಾರೆ. ಬೀರಪ್ಪನನ್ನು ಕುರಿತಾಗಿ ಬಂದಿರುವ ಸಂಶೋಧನೆ ಮತ್ತು ಪುರಾಣ, ಕಥೆ, ಹಾಡುಗಳನ್ನು ಆಧರಿಸಿ ಈ ಕೆಳಗಿನ ಅಂಶಗಳಲ್ಲಿ ಸ್ಥೂಲವಾಗಿ ಚರಿತ್ರೆಯನ್ನು ಕಟ್ಟಿಕೊಡಬಹುದಾಗಿದೆ.

೧) ಹಾಲ್ಮತೋತ್ತೇಜಕ ಪುರಾಣದ ಮೇರೆಗೆ ಶಿವಭಕ್ತನಾದ ಪುಷ್ಪದತ್ತ ಮತ್ತು ಸುರಾವತಿಯರ ಪುತ್ರನೇ ಬೀರದೇವ. ಆ ಭಕ್ತ ದಂಪತಿಗಳಿಗೆ ಕಾರಣಿಕ ಶಿಶು ಹುಟ್ಟುವುದನ್ನು ಶಿವನು ಮುಂಚೆಯೇ ಸಾರುತ್ತಾನೆ. ಈ ಮಗು ಭೂಮಿಗೆ ಅವತರಿಸಿದಂತೆ ಹರಿ ಮತ್ತು ಲಕ್ಷ್ಮೀಯರು ಹಲವು ಸಂಕಟಗಳನ್ನು, ತೊಡಕುಗಳನ್ನು ಸೃಷ್ಟಿಸುತ್ತಾರೆ. ಆದರೆ ವೀರ ಗುಣದ ಬೀರಣ್ಣ ಹುಟ್ಟಿ ತಂದೆ-ತಾಯಿಗಳಿಗೆ ಮತ್ತು ಸುತ್ತ-ಮುತ್ತಲಿನ ಎಲ್ಲ ಜನರಿಗೆ ಶುಭವನ್ನು ತರುತ್ತಾನೆ.

೨) ಬೀರಪ್ಪ ಮಗುವಾಗಿರುವಾಗಲೇ ಶಕ್ತಿಶಾಲಿಯಾಗಿದ್ದು ಅನೇಕ ಪವಾಡಗಳನ್ನು ಮೆರೆಯುತ್ತಾನೆ ಮತ್ತು ತನ್ನ ಅಕ್ಕ ಮಾಯಕ್ಕನನ್ನು ಅಗಾಧವಾಗಿ ಪ್ರೀತಿಸುತ್ತಾನೆ. ತುಸು ಬೆಳೆದು ಬಾಲಕನಾದ ಬೀರಪ್ಪ ಹುಲಿ ಹೊಡೆದು ಶೌರ್ಯ ಪ್ರದರ್ಶಿಸುತ್ತಾನೆ.

೩) ಬೀರಪ್ಪ ಅರಮನೆಯಲ್ಲಿದ್ದ ಕನ್ನಿಕಾಮಾಲೆಯನ್ನು ತನ್ನ ವೀರ ಗುಣದಿಂದ ಅಪಹರಿಸಿಕೊಂಡು ಹೋಗಿ ವಿವಾಹವಾಗುತ್ತಾನೆ.

೪) ಅಕ್ಕ ಮಾಯಕ್ಕ ಬೀರಪ್ಪನನ್ನು ಬಗಲಿನಲ್ಲಿ ಕೂಸಾಗಿ ಮಾಡಿಕೊಂಡು ನಾಡ ಸಂಚಾರಕ್ಕೆ ತೆರಳುತ್ತಾಳೆ. ಬೀರಪ್ಪ ಬೇಕಾದಾಗ ನಿಜರೂಪ ಧರಿಸಿ ಪವಾಡ ಮಾಡಿ ಮತ್ತೇ ಕೂಸಾಗಿ ಅಕ್ಕನ ಹತ್ತಿರ ಇರುತ್ತಿದ್ದನು.

೫) ಜನರಿಗೆ ಉಪಟಳ ನಿಡುತ್ತಿದ್ದ ದೈತ್ಯ ಕ್ವಾಣೆಸೂರನನ್ನು ಎದುರಿಸಿ ಹೋರಾಡಿ ವದಿಸಿದನು. ಜನರಿಂದ ಖರೇ-ಖರೇ ಸಿದ್ಧನೆಂಬ ಅಭಿದಾನವನ್ನು ಪಡೆದನು. ಇವನಿಗೆ ಬಾವನ್ನ ಬಿರುದುಗಳು.

೬) ಬೀರಪ್ಪ ಮತ್ತು ಕನ್ನಿಕಮಾವ್ವ ದಂಪತಿಗಳಿಗೆ ಬಲ್ಲಾಳನೆಂಬ ಮಗು ಜನಿಸುತ್ತದೆ.

೭) ಪ್ರೌಢನಾದ ಬೀರಪ್ಪ ವೈರಾಗ್ಯ ಭಾವಕ್ಕೆ ತಿರುಗುತ್ತಾನೆ. ಕದಳಿ ಬನದಲ್ಲಿ ತಪಸ್ಸು ಮಾಡುತ್ತಾನೆ ಮತ್ತು ಹುಲಿಜಂತಿ ಮಾಳಿಂಗರಾಯನನ್ನು ಶಿಷ್ಯನನ್ನಾಗಿ ಪಡೆಯುತ್ತಾನೆ.

೮) ಕಾಲಾನಂತರದಲ್ಲಿ ಬೀರಪ್ಪ ಯೋಗ ಮತ್ತು ತಪಸ್ಸಿನಿಂದ ಜೀವನ ಸಾಗಿಸಿ ಹಲವು ಭಕ್ತರನ್ನು ಉದ್ಧರಿಸುತ್ತಾನೆ. ಕೊನೆಗೆ ಸೀಗಿ ಮಠದ ಧ್ಯಾನ ಮಂದಿರದಲ್ಲಿ ತನ್ನ ಶಿಷ್ಯರಿಗೆ ಮುಂಚಿತವಾಗಿ ಸೂಚನೆ ನೀಡಿದ ಮೇರೆಗೆ ಐಕ್ಯನಾಗುತ್ತಾನೆ.

ಹೀಗೆ ಸಂಕ್ಷೀಪ್ತವಾಗಿ ಹೇಳಬಹುದಾದ ಬೀರಪ್ಪನ ಚರಿತ್ರೆ, ಕೆಲವು ಪ್ರಸಂಗಗಳಲ್ಲಿ ಬೇರೆ-ಬೇರೆ ವೈವಿಧ್ಯತೆ ಮತ್ತು ಪಾಠಾಂತರಗಳನ್ನು ಪಡೆದುಕೊಂಡು ಭಿನ್ನವಾಗಿಯೂ ಕೂಡ ಕಾಣಿಸಿಕೊಂಡಿದೆ.

ಶಿವಸಿದ್ಧಬೀರ ದೈವಾಂಶ ಸಂಭೂತ. ತಾಯಿಯ ಗರ್ಭದಲ್ಲಿದ್ದಾಗಲೇ ತನ್ನ ಸೋದರ ಮಾವನಿಂದ ತನ್ನನ್ನು ರಕ್ಷಿಸಿಕೊಳ್ಳುವ ಸಲಹೆಯನ್ನು ತಾಯಿಗೆ ನೀಡುತ್ತಾನೆ. ಇಲ್ಲಿಂದ ಆರಂಭವಾಗುವ 'ಅಸ್ತಿತ್ವಕ್ಕಾಗಿ ಹೋರಾಟ'ವು ನಿರಂತವಾಗಿ ಮುಂದುವರೆಯುತ್ತದೆ. ಜನಪದ ಸಾಂಸ್ಕೃತಿಕ ವೀರರ ಹೋರಾಟದ ಮೂಲ ಉದ್ದೇಶವು ಇಲ್ಲದವರ ಪರ ಮತ್ತು ಬಹು ಸಂಖ್ಯಾತರ ಹಿತರಕ್ಷಣೆ ಪರ ಎಂಬುದನ್ನು ನಾವು ಗಮನಿಸಲೇಬೇಕು. ಇದಕ್ಕೆ ಶಿವಸಿದ್ಧಬೀರನ ಕಥೆಯೂ ಹೊರತಾಗಿಲ್ಲ. ಬೀರದೇವರ ಕುರಿತಾದ ಪೌರಾಣಿಕ ಕಥೆಯಂತಹ ಐತಿಹ್ಯಗಳು ಇತಿಹಾಸವಾಗಲಾರವು, ಆದರೆ ಅವು ಇತಿಹಾಸ ನಡೆದು ಹೋದ ದಾರಿಯ ಸುಳಿವನ್ನು ಹಾಗೂ ಇತಿಹಾಸ ಪುರುಷರ ಆದರ್ಶ, ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಬೀರಪ್ಪ ಭಕ್ತರ ದೃಷ್ಟಿಯಲ್ಲಿ ಪವಾಡ ಪುರುಷ. ಆದರೆ ವಾಸ್ತವದಲ್ಲಿ ಸಮಾಜ, ಸಂಸ್ಕೃತಿಗಳ ಸೇವಕ.

ಅಲಕನೂರಿನ ಕರೇಸಿದ್ದೇಶ್ವರ :

ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯಲ್ಲಿ ದೇವತೆಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಇಲ್ಲಿರುವ ವಿವಿಧ ಮತ ಧರ್ಮಗಳು ತಮ್ಮ ದೇವತೆಗಳಿಗಾಗಿ, ತಮ್ಮ-ತಮ್ಮವೇ ಆದ ರೀತಿಯಲ್ಲಿ ದೇವಾಲಯಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಈ ದೇವಾಲಯಗಳು ಕೇವಲ ಭಕ್ತರ ಭಕ್ತಿ ಕೇಂದ್ರಗಳಲ್ಲ. ಅವು ಸಾಂಸ್ಕೃತಿಕ ನೆಲೆಗಳು. ಜನಾಂಗವೊಂದು ರೂಢಿಸಿಕೊಂಡು ಬಂದಿರುವ ನಂಬಿಕೆ, ಸಂಪ್ರದಾಯ, ಆಚರಣೆ, ಕಲೆ, ಶಿಲ್ಪಗಳೆಲ್ಲ ಇಲ್ಲಿ ಪ್ರತಿಫಲನ ಪಡೆಯುತ್ತೇವೆ. ಭಾರತ ಉದ್ದಗಲಕ್ಕೂ ಹರಡಿಕೊಂಡಿರುವ ಕುರುಬ ಸಮುದಾಯ(ಹಾಲುಮತ)ದ ಧರ್ಮಕ್ಕೆ ತನ್ನದೇ ಆದ ಅನನ್ಯತೆಯಿದೆ. ಈ ಅನನ್ಯತೆಯು ಅವರ ಪೂಜಿಸುವ ದೇವತೆ, ಕಟ್ಟಿರುವ ದೇವಾಲಯದ ವಿನ್ಯಾಸದಲ್ಲಿ, ಆಚರಿಸುವ ಧಾರ್ಮಿಕ ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಪಶುಪಾಲಕರಾದ ಹಾಲುಮತದವರು ಮೂಲತಃ ಅಲೆಮಾರಿಗಳು. ತಾವಿದ್ದ ಸ್ಥಳಗಳಲ್ಲಿ ತಮ್ಮ ದೈವವಾದ ಬೀರಪ್ಪನನ್ನು ಸಹಜ ಶಿಲೆಗಳಲ್ಲಿ ಭಾವಿಸಿಕೊಂಡು ಆರಾಧಿಸಿದವರು. ಹೀಗಾಗಿ ಅವರ ದೇವತೆಗಳು, ಪೂಜಾ ವಿಧಾನ, ಭಕ್ತಿ ಎಲ್ಲವೂ ಸರಳ ಮತ್ತು ನಿಸರ್ಗ ಸಹಜ. ಅವರ ಅಮೂರ್ತ ಭಾವಕ್ಕೆ ನಿರ್ಧಿಷ್ಟ

ಆಕಾರ, ಅವಯವಗಳಿಲ್ಲದೇ ಇರುವ ಕಲ್ಲುಗುಂಡುಗಳೇ ಸಾಕ್ಷಿ. ಪ್ರತಿ ಪ್ರದೇಶದವರು ತಮ್ಮ-ತಮ್ಮ ಭಾಗದಲ್ಲಿರುವ ದೇವರನ್ನು ಆಶ್ರಯಿಸಿದಂತೆ ಈ ಭಾಗದ ಕುರುಬರೂ ಅಲಕನೂರಿನ ಕರೇಸಿದ್ದೇಶ್ವರ ದೇವರಿಗೆ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಈ ದೇವತೆಯ ಸುತ್ತ ಹೆಣೆದುಕೊಂಡಿರುವ ಪುರಾಣ ಕಥೆಗಳು, ಸ್ಥಳ ಐತಿಹ್ಯಗಳು ಹಾಲುಮತ ಸಂಸ್ಕೃತಿ ಅಧ್ಯಯನಕ್ಕೆ ಎಷ್ಟೋ ಪೂರಕ ಅಂಶಗಳನ್ನು ಒದಗಿಸುತ್ತವೆ. ಈ ಹಿನ್ನೆಲೆಯಲ್ಲಿ ಹಾಲುಮತದವರ ಶ್ರದ್ಧಾಕ್ಷೇತ್ರವಾದ ಅಲಕನೂರಿನ ಕರೇಸಿದ್ದೇಶ್ವರನ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಅಂಬಲಿ ಮಾಡಿರೆಂದ, ಗೊಂಗಡಿ ಹೊರರೆಂದ ।
ಒಂಬತ್ತ ಡೊಳ್ಳ ಬಡಿಯಂದ ॥ ಕರೇಸಿದ್ದ ।
ತಪ್ಪದ ಸೇವಕ ಬರ್‍ರೆಂದ ।

ಎಂದು ಜನಮನದಲ್ಲಿ ಅಲಕನೂರಿನ ಕರೇಸಿದ್ದೇಶ್ವರ ಸ್ಥಾಯಿಯಾಗಿಬಿಟ್ಟಿರುವ ದೈವಿ ಪುರುಷನಾಗಿದ್ದಾನೆ. ಕೊಂಕಣನಾಡಿಗೆ ತಲೆಬಾಗಿಲನಂತಿರುವ ಬಾಗೆನಾಡು (ರಾಯಬಾಗ) ಬೀರಣ್ಣ ದೇವರ ಆಡಂಬೋಲ. ತಾಲೂಕಾ ಕೇಂದ್ರ ರಾಯಬಾಗದಿಂದ ವಾಯುವ್ಯ ದಿಕ್ಕಿಗೆ ಸುಮಾರು ೩೦ ಕೀ. ಮೀ. ಮತ್ತು ಬೆಳಗಾವಿ-ಮೀರಜ ರೈಲ್ವೆ ಮಾರ್ಗ ಮಧ್ಯದಲ್ಲಿರುವ ಚಿಂಚಲಿ ರೈಲ್ವೆ ಸ್ಟೇಷನದಿಂದ ಪೂರ್ವಕ್ಕೆ ೧೦ ಕೀ. ಮೀ. ಹಾಗೂ ಮಿರಜ-ಜಮಖಂಡಿ ರಸ್ತೆಮಾರ್ಗದ ಪಾವಿನತೋಟದಿಂದ ದಕ್ಷಿಣಕ್ಕೆ ೪ ಕೀ. ಮೀ. ಅಥಣಿ-ಗೋಕಾಕ ಮಧ್ಯದಲ್ಲಿರುವ ಹಾರೂಗೇರಿಯಿಂದ ಪಶ್ಚಿಮಕ್ಕೆ ೫· ಕೀ. ಮೀ. ಅಂತರದಲ್ಲಿರುವ ಅಲಕನೂರ ಗ್ರಾಮವೇ ಕರೇಸಿದ್ದೇಶ್ವರನ ಅರಮನೆ. ಅಲಕನೂರಿನ ಅಧಿದೇವತೆಯಾದ ಕರೇಸಿದ್ದೇಶ್ವರನೆಂಬುದು ಬೀರದೇವರಿಗಿರುವ ಪರ್ಯಾಯ ಹೆಸರು.

ಘಟಪ್ರಭೆಯ ಕಾಲುವೆಯ ಸಂಪರ್ಕವನ್ನು ಪಡೆದಿರುವ ಅಲಕನೂರಿನ ಮೊರಡಿ ಭೂಮಿ ಇಂದು ಹಚ್ಚು ಹಸಿರನ ಫಲವತ್ತಾದ ಪ್ರದೇಶ. ಎತ್ತರವಾದ ಬಯಲು ಪ್ರದೇಶದಲ್ಲಿರುವ ಅಲಕನೂರು ಅಷ್ಟೇನು ಪ್ರಾಚೀನವಾದುದಲ್ಲ. ಪ್ರಾಚೀನತೆಯ ಯಾವ ಅವಶೇಷಗಳು ಇಲ್ಲಿ ದೊರೆಯುವುದಿಲ್ಲ. ಗ್ರಾಮದಲ್ಲಿ ಬೇಡ, ಲಿಂಗಾಯತ ದಲಿತ ವರ್ಗದವರಿದ್ದು ಶೇ ೭೫ ಕ್ಕಿಂತಲೂ ಹೆಚ್ಚು ಪ್ರಮಾಣದ ಜನರು ಹಾಲುಮತದವರಾಗಿದ್ದಾರೆ. ಆರಂಭದ ಜನವಸತಿ ಪ್ರದೇಶದಲ್ಲಿರುವ ಮನೆಗಳು ಸದ್ಯ ಪಾಳುಬಿದ್ದಿದ್ದು ವಾಸಕ್ಕೆ ಯೋಗ್ಯವಾಗಿರದೆ ಅವಸಾನದ ಅಂಚಿನಲ್ಲಿವೆ. ಭೂಮಾಲೀಕರೆಲ್ಲರೂ ಸಾಮಾನ್ಯವಾಗಿ ತಮ್ಮ-ತಮ್ಮ ಜಮೀನುಗಳಲ್ಲಿಯೇ ಮನೆಗಳನ್ನು ಕಟ್ಟಿಕೊಂಡಿದ್ದು ಗ್ರಾಮದಲ್ಲಿ ವಾಸಿಸುವವರ ಸಂಖ್ಯೆ ಕಡಿಮೆ. ದೇವಾಲಯದ ಅಕ್ಕ-ಪಕ್ಕದಲ್ಲಿ ಜನವಸತಿ ದಟ್ಟವಾಗಿದೆ.

ಗ್ರಾಮದ ಇನ್ನಿತರ ಪ್ರದೇಶಗಳಿಗಿಂತ ತುಸು ಎತ್ತರದ ಬಯಲು ಪ್ರದೇಶದಲ್ಲಿ ನಿರ್ಮಿತವಾದ ಕರೇಸಿದ್ದೇಶ್ವರನ ಭವ್ಯವಾದ ದೇವಾಲಯವು ಗ್ರಾಮದ ಪ್ರಮುಖ ಆಕರ್ಷಣೆ ಕೇಂದ್ರ. ಸುಮಾರು ನಾಲ್ಕು ಎರಕೆಗಳಷ್ಟು ವಿಸ್ತೀರ್ಣದಲ್ಲಿ ಅನಾವರಣಗೊಂಡಿರುವ ದೇವಾಲಯವು ಪೂರ್ವದಿಕ್ಕಿನಲ್ಲಿ ಪ್ರಮುಖ ಪ್ರವೇಶ(ಮಹಾ)ದ್ವಾರವನ್ನು ಹೊಂದಿದೆ. ಮಹಾದ್ವಾರಕ್ಕೆ ನಗಾರಿಖಾನೆ ಎಂದು ಕರೆಯಲ್ಪಡುತ್ತಿದ್ದು ಇಕ್ಕೆಲ್ಲಗಳಲ್ಲಿ ಎರಡು ಹಜಾರಗಳಿದ್ದು ಇದು ಎರಡು ಅಂತಸ್ಥಿನ ಕರಿಯ ಕಲ್ಲಿನ ಕಟ್ಟಡವಾಗಿದೆ. ಮೇಲ್ಭಾಗದಲ್ಲಿ

ಸುಂದರವಾದ ನಕ್ಷೆಯ ಕರಿಯ ಕಲ್ಲಿನ ಐದು ಕಮಾನುಗಳಿವೆ. ಪ್ರವೇಶದ್ವಾರದಲ್ಲಿ ನಿಂತು ನೋಡಿದರೆ ದೂರದ ಗರ್ಭಗುಡಿಯಲ್ಲಿಯ ಕರೇಸಿದ್ಧೇಶ್ವರನ ಮೂರ್ತಿಯು ಸ್ಪಷ್ಟವಾಗಿ ಕಾಣಿಸುವುದು.

ಜೋಡು ಕಂಬಗಳ ಆಧಾರದ ಮೇಲೆ ನಿಂತ ಗರ್ಭಗುಡಿಯಲ್ಲಿ ಮೇಲೆ ಕುರುಣಿ ಕಲ್ಲಿನ ಛಾವಣಿ ಇದೆ. ದೇವಾಲಯದ ಸುತ್ತಲೂ ಎತ್ತರದ ಪ್ರಾಕಾರಗೋಡೆ ಕರಿಕಲ್ಲಿನಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಹೊರಗೆ ಬಲಬದಿಯ ಪ್ರಕಾರಗೋಡೆಗೆ ಅಂಟಿಕೊಂಡಂತೆ ವಿಶಾಲವಾದ ಆರ್.ಸಿ.ಸಿ. ಮೇಲ್ಛಾವಣಿಯ ಮಂಟಪವು ಉತ್ಸವ ಹಬ್ಬ-ಹರಿದಿನಗಳ ಕಾರ್ಯಕ್ರಮಕ್ಕಾಗಿ ಕಟ್ಟಲ್ಪಟ್ಟಿದೆ. ದೇವಾಲಯವು ಗರ್ಭಗೃಹ, ಸುಕನಾಸಿ, ಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದ್ದು ಪ್ರಾಂಗಣಕ್ಕಿಂತಲೂ ತಗ್ಗು ಪ್ರದೇಶದಲ್ಲಿದೆ. ದೇವಾಲಯವು ವಿಜಯನಗರ ವಾಸ್ತುಶೈಲಿಯ ಮಾದರಿಯಲ್ಲಿ ನಿರ್ಮಿತವಾಗಿದೆ.

ಗರ್ಭಗೃಹ :

ಆಯತಾಕಾರದ ಗರ್ಭಗುಡಿಯಲ್ಲಿ ನಿಂತ ಭಂಗಿಯಲ್ಲಿರುವ ಚತುರ್ಭಜದ ಅಸ್ಪಷ್ಟ ಮೂರ್ತಿಶಿಲ್ಪವಿದೆ. ಮೂರ್ತಿಗೆ ಬಂಗಾರದ ಮುಖವಾಡ, ಕುಂದರ ಹರಳಿನಲ್ಲಿ ಮಾಡಿದ ಕಣ್ಣುಗಳು, ಬಂಗಾರದ ಕೋರೆ ಮೀಸೆಯಿಂದ ಅಲಂಕರಿಸಲಾಗಿದೆ. ಎಡಭಾಗದ ಒಂದು ಕೈಯಲ್ಲಿ ಚಕ್ರ, ಬಲಭಾಗದ ಒಂದು ಕೈಯಲ್ಲಿ ಖಡ್ಗವನ್ನು ಹೊಂದಿದ್ದು ಅವುಗಳನ್ನು ಬಂಗಾರ ಮತ್ತು ಬೆಲೆಬಾಳುವ ಹರಳುಗಳಿಂದ ಅಲಂಕರಿಸಲಾಗಿದೆ. ಕರಿದೇವರದು ಶ್ವೇತವರ್ಣ. ಕರಿಸಿದ್ಧನ ಬಲಗಡೆ ಮಾಯವ್ವಳ ಮತ್ತು ಎಡಗಡೆಗೆ ಚಿಕ್ಕ ಆಕಾರದ ಕನ್ನಿಕಾಮಾಲೆ ಹಾಗೂ ಬ್ರಹ್ಮದೇವರ ಮೂರ್ತಿಗಳಿವೆ. ಗರ್ಭಗೃಹದಲ್ಲಿ ಪೂಜಾರಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶವಿರುವುದಿಲ್ಲ. ಪೂಜಾರಿ ಬಿಳಿಪಂಚೆ, ಬಿಳಿ ಅಂಗಿ ತೊಟ್ಟುಕೊಂಡು ತಲೆಗೆ ಶುಭ್ರ ರುಮಾಲು ಸುತ್ತಿಕೊಳ್ಳುತ್ತಾನೆ.

ಗರ್ಭಗೃಹದ ಒಳಗೆ ಬಲಬದಿಯಲ್ಲಿ ತೂಗುಮಂಚವಿದೆ. ತೂಗುಮಂಚದ ಕಂಬಳಿಯ ಮೇಲೆ ಕುಳಿತುಕೊಂಡ ಕಂಠಿಕಾರ, ಕರಿದೇವರ ಪತ್ರಿಕೌಲುಗಳನ್ನು ಭಕ್ತರ ಇಚ್ಛೆಯಂತೆ ಕೇಳಿ ಭವಿಷ್ಯವನ್ನು ನುಡಿಯುತ್ತಾನೆ. ದೇವರಿಗೆ ಬೇರಾವುದೇ ಆಡಂಬರವಿಲ್ಲ. ರವಿವಾರದಂದು ದೇವಾಲಯಕ್ಕೆ ಆಗಮಿಸುವ ಭಕ್ತರ ಸಂಖ್ಯೆ ಅಧಿಕವಾಗಿರುತ್ತದೆ. ಭಕ್ತರು ಉಪ್ಪಿಲ್ಲದ (ಸಪ್ಪನೆಯ) ಅನ್ನ ಮತ್ತು ತುಪ್ಪವನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸುತ್ತಾರೆ. ಸ್ವಗ್ರಾಮದ ಬೇಡ ಜನಾಂಗದವರು ಮಾತ್ರ ನೈವೇದ್ಯದ ಬದಲಾಗಿ 'ಪಡಿ' ಕೊಡುವರು. ಗರ್ಭಗೃಹದ ಮೇಲೆ ಶಿಖರವಿಲ್ಲದಿರುವುದು ವಿಶೇಷ.

ಸುಖನಾಸಿ :

ಗರ್ಭಗೃಹ ಮುಂದೆ ಆಯತಾಕಾರದ ಸುಕನಾಸಿ ಇದ್ದು ದರ್ಶನಕ್ಕೆ ಬರುವ ಭಕ್ತರು ಇಲ್ಲಿಂದಲೇ ಕರೇಸಿದ್ದೇಶ್ವರನ ದರ್ಶನ ಪಡೆದುಕೊಳ್ಳುತ್ತಾರೆ. ಗರ್ಭಗೃಹ ಮತ್ತು ಸುಖನಾಸಿಯನ್ನು ಬೇರ್ಪಡಿಸುವ ಕಬ್ಬಿಣದ ಕಟಂಜನವಿದೆ. ದೇವರ ಪತ್ರಿಕೌಲು ಕೇಳುವವರು ಇಲ್ಲಿಯೇ ಕುಳಿತುಕೊಳ್ಳುತ್ತಾರೆ.

ಮಂಟಪ :

ಮಂಟಪದ ದ್ವಾರವು ಕಂಚಿನ ತಗಡಿನಿಂದ ಆಚ್ಛಾದಿತವಾಗಿದ್ದು ಅಂಲಕಾರಿಕವಾಗಿದೆ. ದೇವಾಲಯಕ್ಕೆ ಬರುವ ಭಕ್ತರು ದ್ವಾರದಲ್ಲಿ ಕುಳಿತ ಪೂಜಾರಿಗೆ ತಾವು ತಂದ ನೈವೇದ್ಯ, ಕಾಯಿ, ಕರ್ಪೂರ ಇತ್ಯಾದಿಗಳನ್ನು ಇಲ್ಲಿಯೇ ಸಲ್ಲಿಸುವರು. ಭಕ್ತರ ಹಣೆಗೆ ಬಂಡಾರವನ್ನು ಲೇಪಿಸುವುದು ಪೂಜಾರಿಯ ಕಾರ್ಯ.

ಮುಖಮಂಟಪ :

ದೇವಸ್ಥಾನದ ಮುಖಮಂಟಪವು ಆರಂಭದಲ್ಲಿ ಕಬ್ಬಿಣದ ಕಂಬಗಳಿಂದ ನಿರ್ಮಾಣಗೊಂಡಿದ್ದು, ಛಾವಣಿಗೆ ತಗಡಿನ ಶೀಟುಗಳನ್ನು ಜೋಡಿಸಲಾಗಿತ್ತು. ಏಳೆಂಟು ವರ್ಷಗಳ ಹಿಂದೆ ಅವುಗಳನ್ನು ತೆಗೆದುಹಾಕಲಾಗಿದೆ. ಸದ್ಯ ಮೂರು ಅಡಿ ಅಗಲದ ಚಚ್ಚೌಕಾಕಾರದ ಬಲಿಷ್ಟವಾದ ೧೨ ಕಂಬಗಳನ್ನು ಕಲ್ಲಿನಲ್ಲಿಯೇ ನಿರ್ಮಿಸಿ ಮೇಲ್ಛಾವಣಿಯನ್ನು ಆರ್.ಸಿ.ಸಿ. ಮೂಲಕ ನಿರ್ಮಿಸಲಾಗಿದೆ. ಚಚ್ಚೌಕಾಕಾರದ ಅಳತೆಯಲ್ಲಿರುವ ಕಂಬಗಳು ಆಕಾರದಲ್ಲಿ ಒಂದೇ ರೀತಿಯಾಗಿವೆ. ಕಲ್ಲಿನಿಂದ ನಿರ್ಮಿಸಿರುವ ಕಂಬಗಳು ನೋಡಲು ಭವ್ಯವಾಗಿವೆ. ಕಂಬಗಳ ಮೇಲ್ಭಾಗದಲ್ಲಿ ಸರಸ್ವತಿ, ಲಕ್ಷ್ಮೀ, ಭೃಂಗಿ, ಬ್ರಹಸ್ಪತಿ, ಸೇವಕರ, ಡೊಳ್ಳುವಾದಕರ ಮುಂತಾದ ಬೋದಿಗೆ ಶಿಲ್ಪಗಳನ್ನು ಮಾಡಲಾಗಿದೆ. ಒಟ್ಟು ೮ ಭುವನೇಶ್ವರಿಗಳಿದ್ದು ಸಿಮೆಂಟದಲ್ಲಿ ವಿವಿಧ ವಿನ್ಯಾಸಗಳಿಂದ ಚಿತ್ರಿಸಲಾಗಿದೆ.

ನಂದಿ ವಿಗ್ರಹಗಳು :

ಮಂಟಪ ಮತ್ತು ಮುಖಮಂಟಪದ ಮಧ್ಯದಲ್ಲಿ ಕಟ್ಟೆಯಿದ್ದು, ಅದರ ಮೇಲೆ ಸುಮಾರ ಎರಡು ಅಡಿ ಎತ್ತರದ ಕಂಚಿನಿಂದ ಮಾಡಿದ ಜೋಡಿ ನಂದಿಗಳ ವಿಗ್ರಹವಿದೆ. ಅವುಗಳ ಮುಂದೆ ಕಂಚಿನ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದು ಕರೇಸಿದ್ದೇಶ್ವರ ಶೈವ ಸಂಪ್ರದಾಯಕ್ಕೆ ಸೇರಿದವನ್ನೆನ್ನುವುದಕ್ಕೆ ಪುಷ್ಟಿ ನೀಡುತ್ತದೆ.

ಟಗರಿನ ಮೂರ್ತಿ :

ಮಹಾದ್ವಾರದಿಂದ ದೇವಾಲಯ ಪ್ರವೇಶಿಸುವ ಎಡ-ಬಲಗಳಲ್ಲಿ ನಾಲ್ಕು ಅಡಿ ಎತ್ತರದ ಕಟ್ಟೆಗಳನ್ನು ನಿರ್ಮಿಸಿದ್ದು, ಕಟ್ಟೆಯ ಮೇಲೆ ಗರ್ಭಗೃಹದತ್ತ ಮುಖಮಾಡಿ ಸುಮಾರು ೨ ಅಡಿ ಎತ್ತರದ ಕರಿಕಲ್ಲಿನಲ್ಲಿ ಮಾಡಿದ ಎರಡು ಟಗರಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ.

ಆರಾಧನಾ ಮಂಟಪಗಳು :

ಮಂಟಪದ ಉತ್ತರ ಮತ್ತು ದಕ್ಷಿಣ ಬದಿಗಳಲ್ಲಿ ಕೆಂಪು ಕಲ್ಲಿನಲ್ಲಿ ಮಾಡಿದ ಕಮಾನುಗಳಿಂದ ಕೂಡಿದ ಅಂತಸ್ತಿನ ಮಂಟಪಗಳನ್ನು ಕಾಣುತ್ತೇವೆ. ಮಂಟಪದ ದಕ್ಷಿಣದ ಭಾಗದಲ್ಲಿ, ಉತ್ತರ ದಿಕ್ಕಿಗೆ ಮುಖಮಾಡಿ ಬ್ರಹ್ಮದೇವರಿ(ಕರೇಸಿದ್ಧಶ್ವರನ ತಂದೆ)ಗಾಗಿ ನಿರ್ಮಿಸಿದ ಚಿಕ್ಕ ಗುಡಿಯಿದೆ. ಅದರ ಮಗ್ಗುಲಿಗೆ ಪೂರ್ವಕ್ಕೆ ಮುಖಮಾಡಿ ಮಾಯವ್ವಳ ಚಿಕ್ಕ ಗುಡಿಯಿದೆ. ಈ ಎರಡು ಚಿಕ್ಕ ಗುಡಿಗಳ ಹಿಂಬದಿಯಲ್ಲಿ ಮುತ್ಯಾನ ಗುಡಿಯಿದೆ.

ಇದು ಕರಿದೇವರ ಪ್ರಮುಖ ಪೂಜಾರಿಗಳ ಮೃತರ ಅಸ್ಥಿಯನ್ನು ಹೊಂದಿರುವ ಗುಡಿಯಾಗಿದೆ. ಆರಂಭದಲ್ಲಿ ಗುಡಿಯ ಒಳಗೆ ಇದ್ದ ಪೂಜಾರಿಗಳ ಅಸ್ಥಿಗಳನ್ನು ತೆಗೆದು ಹೊರಗೆ ಇಡಲಾಗಿತ್ತು. ಇದರಿಂದಾಗಿ ಗ್ರಾಮದಲ್ಲಿ ಸಕಾಲಕ್ಕೆ ಮಳೆ-ಬೆಳೆಗಳಾಗಲಿಲ್ಲ. ಹೀಗಾಗಿ ಮತ್ತೆ ಅವುಗಳನ್ನು ಗುಡಿಯ ಆವರಣದಲ್ಲಿಯೇ ತಂದು ಗುಡಿಕಟ್ಟಿ ಇಡಲಾಗಿದೆ. ಕರೇಸಿದ್ದೇಶ್ವರ ದೇವರ ಜೊತೆಗೆ ಪ್ರತಿ ನಿತ್ಯವೂ ಈ ಚಿಕ್ಕ ಗುಡಿಗಳು ಪೂಜೆಗೊಳ್ಳುತ್ತವೆ.

ಒಳಪ್ರಾಂಗಣ :

ದೇವಾಲಯದ ಒಳಗಡೆಗೆ ಸುತ್ತಲೂ ಪಶ್ಚಿಮ ಮತ್ತು ದಕ್ಷಿಣೋತ್ತರ ದಿಕ್ಕುಗಳಲ್ಲಿ ಅಂತಸ್ತಿನ ಸುಂದರ ಮೊಗಸಾಲೆಗಳಿವೆ. ಸ್ಥಂಭ ಮತ್ತು ಕಮಾನುಗಳಿಂದೊಡಗುಡಿದ ಮೊಗಸಾಲೆಯು ಬಣ್ಣಗಳಿಂದ ಅಲಂಕೃತವಾಗಿದೆ. ಮೇಲಂತಸ್ತಿನ ಮೊಗಸಾಲೆಗಳ ಗೋಡೆಗಳ ಮೇಲೆ ಹಾಲುಮತ ಪುರಾಣದ ಸನ್ನಿವೇಶಗಳು ಮತ್ತು ಮಹಾಪುರುಷರನ್ನು ವಿವಿಧ ತೈಲವರ್ಣಗಳಲ್ಲಿ ಬಿಡಿಸಲಾಗಿದೆ. ಪೌಳಿಯು ಭವ್ಯವಾದ ಕಲ್ಲಿನ ಕಂಬಗಳ ಆಧಾರದ ಮೇಲೆ ತಿರುವಿರುವ ಕಮಾನುಗಳು, ಅವುಗಳ ಮೇಲೆ ಸುಂದರ ಕೆತ್ತನೆಯ ಕಲ್ಲಿನ ಛಾವಣಿಯಿದೆ. ಜಾತ್ರೆ ಮತ್ತು ಉತ್ಸವಗಳ ಸಮಯದಲ್ಲಿ ವಿವಿಧೆಡೆಗಳಿಂದ ಆಗಮಿಸುವ ಭಕ್ತರು ಈ ಮೊಗಸಾಲೆಗಳಲ್ಲಿ ಉಳಿದುಕೊಂಡು ದೇವರ ಸೇವೆಯನ್ನು ನೇರವೆರಿಸುತ್ತಾರೆ. ಒಳಗಾಂಗಣದ ಪೂರ್ವಗೋಡೆ ಹೊಂದಿಕೊಂಡು ಒಳಭಾಗದಲ್ಲಿ ಭಂಡಾರ ಕೋಣೆಯಿದೆ.

ಅನ್ನದಾಸೋಹ :

ಒಳ ಪ್ರಾಂಗಣದ ಪಶ್ಚಿಮ ಭಾಗದಲ್ಲಿ ಪಾಕಶಾಲೆಯಿದೆ. ಪಾಕಶಾಲೆಯು ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು ಪ್ರಸಾದ ತಯಾರಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ. ದಿನದ ೨೪ ಗಂಟೆಯು ದೇವಾಲಯಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ವ್ಯವಸ್ಥೆ ಇರುವುದು ಇಲ್ಲಿಯ ಇನ್ನೊಂದು ವಿಶೇಷ.

ದೀಪಾವಳಿ ಮತ್ತು ಯುಗಾದಿಗಳಂದು ನಡೆಯುವ ಜಾತ್ರೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಅನ್ನದಾಸೋಹ ನಡೆಯುವುದು. ದೇವಸ್ಥಾನ ಉಸ್ತುವಾರಿ ನಾಗಪ್ಪ ಕಂಠಿಕಾರ ಅವರು ಪತ್ರಿಕೌಲದ ಮೂಲಕ ಪ್ರತಿ ಜಾತ್ರೆಯ ಅನ್ನದಾಸೋಹದ ಪದಾರ್ಥಗಳನ್ನು ನಿಗದಿಪಡಿಸುತ್ತಾರೆ. ಪತ್ರಿಕೌಲದ ಆಧಾರಿಸಿ ಬುಂದೆ, ಹಾಲುಹುಗ್ಗಿ, ಜಿಲೇಬಿ, ಶಿರಾ, ಮಸಾಲಿ ಅನ್ನ ಮುಂತಾದ ಪ್ರಸಾದಗಳನ್ನು ತಯಾರಿಸಿ ಭಕ್ತರಿಗೆ ನೀಡುತ್ತಾರೆ. ದೊಡ್ಡ ಜಾತ್ರೆಗಳ ಸಮಯದಲ್ಲಿ ಅನ್ನದಾಸೋಹವು ಹೊರ ಪ್ರಾಂಗಣದ ಆವರಣದಲ್ಲಿ ನೇರವೆರುತ್ತದೆ. ವಿಶೇಷವೆಂದರೆ ಕರಿಸಿದ್ಧನ ಜಾತ್ರೆ-ಉತ್ಸವಗಳಿಗಾಗಿ ಭಕ್ತರಿಂದ ವಂತಿಗೆ ಸಂಗ್ರಹಿಸುವ ಸಂಪ್ರದಾಯ ಇಲ್ಲಿ ಇರುವುದಿಲ್ಲ. ಭಕ್ತರೆ ತಮ್ಮ ಇಚ್ಚಾನುಸಾರವಾಗಿ ದವಸ-ಧಾನ್ಯ, ಬೆಳ್ಳಿ-ಬಂಗಾರ, ಕುರಿ-ಟಗರು, ಕುರಿಉಣ್ಣೆ, ಹಣವನ್ನು ಸಲ್ಲಿಸುತ್ತಾರೆ.

ಕುದುರೆಯ ಕೋಣೆ :

ಒಳ ಪ್ರಾಂಗಣದಿಂದ ಹೊರಪ್ರಾಂಗಣಕ್ಕೆ ಸಂಪರ್ಕಿಸಲು ದಕ್ಷಿಣ ದಿಕ್ಕಿನಲ್ಲಿ ದ್ವಾರವಿದೆ. ಇವೆರಡರುಗಳ ಮಧ್ಯೆದಲ್ಲಿಯೇ ಕರಿಸಿದ್ಧನ ವಾಹನವಾದ ಕುದುರೆಯ ಕೋಣೆಯಿದೆ. ಅಂದಾಜು ಒಂದು ಲಕ್ಷ

ಐವತ್ತು ಸಾವಿರಕಿಂತಲೂ ಹೆಚ್ಚು ಬೆಲೆಬಾಳುವ ಕಾಠೆವಾಡ ಜಾತಿಯ ಬಿಳಿ ಕುದುರೆಯನ್ನು ಕರೇಸಿದ್ಧನ ವಾಹನವಾಗಿ ಸಾಕುವುದು ಆರಂಭದಿಂದಲೂ ನಡೆದುಕೊಂಡ ಬಂದ ಪದ್ಧತಿಯಾಗಿದೆ. ತನ್ನನ್ನು ನಂಬಿದ ಭಕ್ತವರ್ಗವನ್ನು ಕಾಯುವುದಕ್ಕಾಗಿ ಇವತ್ತಿಗೂ ಕರಿಸಿದ್ಧ ಕುದುರೆ ಸವಾರಿ ಮಾಡುತ್ತಾನೆಂಬ ನಂಬಿಕೆ ಭಕ್ತವರ್ಗದಲ್ಲಿ ಮನೆಮಾಡಿದೆ.

ಸುತ್ತ-ಮುತ್ತಲಿನ ಭಕ್ತರ ಇಚ್ಛೆಯಂತೆ ಕರಿಸಿದ್ಧನ ಕುದುರೆಯು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತದೆ. ತಮ್ಮ ಮನೆಗೆ ಆಗಮಿಸಿದ ಕುದುರೆಯನ್ನು ಕರಿಸಿದ್ಧನೆಂದೆ ಭಾವಿಸುವ ಭಕ್ತರು ಕುದುರೆಯನ್ನು ಪೂಜಿಸಿ ತಮ್ಮ ಶಕ್ತ್ಯಾನುಸಾರ ಕಾಣಿಕೆಯನ್ನು ನೀಡುತ್ತಾರೆ.

ಹೊರಪ್ರಾಂಗಣ :

ಒಳಾಂಗಣದ ಪ್ರಾಂಗಣವನ್ನು ಸುತ್ತುವರೆದು ಹೊರ ಪ್ರಾಂಗಣವು ರಚನೆಯಾಗಿದೆ. ಈ ಪ್ರಾಂಗಣವು ಕೆಂಪು ಕಲ್ಲಿನಲ್ಲಿ ಮಾಡಿದ ಸ್ಥಂಭ ಮತ್ತು ಕಮಾನುಗಳಿಂದ ನಿರ್ಮಿತವಾಗಿದೆ. ಉತ್ಸವ ಮತ್ತು ಜಾತ್ರೆಗಳ ಸಮಯದಲ್ಲಿ ಇದು ಸಾಮೂಹಿಕ ಭೋಜನಾಯದ ಸ್ಥಳವಾಗಿದೆ. ಪುಟ್ಟ ಮೃಗಾಲಯವು ಪ್ರಾಂಗಣದ ಹೊರಗೋಡೆಗೆ ಹೊಂದಿಕೊಂಡಿದೆ. ಈ ಪ್ರಾಂಗಣಕ್ಕೆ ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಪ್ರತ್ಯೇಕವಾದ ದ್ವಾರಗಳಿವೆ.

ಆನೆಯ ಲಾಯ :

ಹೊರ ಪ್ರಾಂಗಣಕ್ಕೆ ಹೊಂದಿಕೊಂಡಂತೆ ಆನೆಯ ಲಾಯವನ್ನು ನಿರ್ಮಿಸಲಾಗಿದೆ. ಇಂದಿನ ದಿನಮಾನಗಳಲ್ಲಿ ಮಠಮಾನ್ಯ ದೇವಾಲುಗಳಲ್ಲಿ ಆನೆಯನ್ನು ಸಾಕುವುದು ಬಹು ವಿರಳ. ಆದರೆ ಕರಿಸಿದ್ಧನ ಆಲಯದಲ್ಲಿ ಆನೆಯನ್ನು ಸಾಕಿದ್ದು ವಿಶೇಷವಾಗಿದೆ. ಭಕ್ತರ ಆಮಂತ್ರಣದ ಮೇರೆಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಮದುವೆ ಸಮಾರಂಭಗಳಿಗೆ ಆನೆಯು ಹೋಗುತ್ತದೆ.

ಮನೆಗೆ ಆಗಮಿಸಿದ ಆನೆಗೆ ಭಕ್ತರು ಕನಿಷ್ಠ ಒಂದು ಸಾವಿರ ಕಾಣಿಕೆಯನ್ನು ನೀಡುತ್ತಾರೆ. ಆನೆಯ ಉಸ್ತುವಾರಿಯನ್ನು ಮಾಡುವ ಮಾವುತ ಈ ಕಾಣಿಕೆಯನ್ನು ಪಡೆದುಕೊಂಡು ವರ್ಷಕ್ಕೆ ನಿಗದಿಪಡಿಸಿದ ಕಾಣಿಕೆಯನ್ನು ದೇವಾಲಯದ ಆಡಳಿತಾಧಿಕಾರಿ ಕಂಠಿಕಾರ ಇವರಿಗೆ ಕೊಡುತ್ತಾನೆ. ಸದ್ಯ ತೇರದಾಳ ಪಟ್ಟಣದ ಮಾವುತ ಆನೆಯ ಉಸ್ತುವಾರಿಯನ್ನು ಮಾಡುತ್ತಿದ್ದಾನೆ.

ದೇವಾಲಯದ ಮಹಾದ್ವಾರ :

ಮಹಾದ್ವಾರದ ಮೇಲೆ ಗೋಪುರ ನಿರ್ಮಾಣವಾಗಿಲ್ಲ. ಅದಕ್ಕೆ ಸ್ಥಳೀಯರು ನೀಡುವ ವಿವರಣೆ ಹೀಗಿದೆ. ಬಾಗಿನ ಬಂಕನಾಥನನ್ನು ಸಂಹಾರಮಾಡಿದ ಕರೇಸಿದ್ಧೇಶ್ವರನಿಗೆ 'ನನ್ನ ಮೇಲೆ ದಾಳಿ ಮಾಡಿ ರಾಜ್ಯ ಹಾಳು ಮಾಡಿದ ನಿನ್ನ ದೇಗುಲಕ್ಕೆ ಶಿಖರವಿಲ್ಲದಂತಾಗಲಿ' ಎಂದು ಬಂಕನಾಥ ಶಾಪವಿತ್ತ. ಹೀಗಾಗಿ ಕರೇಸಿದ್ಧೇಶ್ವರನ ಯಾವ ದೇವಾಲಯಗಳಿಗೂ ಗರ್ಭಗೃಹದ ಮೇಲೆ ಶಿಖರವಾಗಲಿ ಮತ್ತು ಮಹಾದ್ವಾರದ ಮೇಲೆ ಗೋಪುರಗಳಾಗಲಿ ಕಟ್ಟಿರುವುದಿಲ್ಲ.

ಸ್ವಾಗತ ಮಹಾದ್ವಾರಗಳು :

ಕರೇಸಿದ್ಧೇಶ್ವರನ ದೇವಾಯಲಕ್ಕೆ ಆಗಮಿಸುವ ಪ್ರಮುಖ ನಾಲ್ಕು ದಿಕ್ಕಿನ ರಸ್ತೆಗಳಲ್ಲಿ ಮಹಾದ್ವಾರಗಳನ್ನು ನಿರ್ಮಿಸಲಾಗುತ್ತಿದೆ. ಪೂರ್ವ ದಿಕ್ಕಿನ ಮಹಾದ್ವಾರವು ಗೋಕಾಕ-ಅಥಣಿ ರಸ್ತೆಯ ಮಾರ್ಗದಲ್ಲಿರುವ ಹಾರೂಗೇರಿ ಬಸ್ ನಿಲ್ದಾಣದ ಪಕ್ಕದಲ್ಲಿ, ಪಶ್ಚಿಮ ದಿಕ್ಕಿನ ಮಹಾದ್ವಾರವು ಬೆಳಗಾವಿ-ಮಿರಜ್ ರೈಲು ಮಾರ್ಗದಲ್ಲಿ ಬರುವ ಚಿಂಚಲಿ ರೈಲು ನಿಲ್ದಾಣದ ಪೂರ್ವ ಬಾಜುದಲ್ಲಿ, ಉತ್ತರ ದಿಕ್ಕಿನ ಮಹಾದ್ವಾರವು ಮಿರಜ್-ಜಮಖಂಡಿ ರಸ್ತೆಯ ಅಲಕನೂರಿನ ಪಾವಿನ ತೋಟದ ಸಮೀಪ ಹಾಗೂ ದಕ್ಷಿಣ ದಿಕ್ಕಿನ ಮಹಾದ್ವಾರವು ಹಾರೂಗೇರಿ-ರಾಯಬಾಗ ಮಾರ್ಗದ ಬೀರಪ್ಪನ ಗುಡಿ ಸಮೀಪದಲ್ಲಿ ನಿರ್ಮಾಣವಾಗುತ್ತಿದೆ. ಪ್ರತಿಯೊಂದು ಮಹಾದ್ವಾರದ ಅಂದಾಜು ವೆಚ್ಚ ಸುಮಾರು ರೂ. ೩೫ ಲಕ್ಷಕ್ಕಿಂತಲೂ ಹೆಚ್ಚಾಗಿರುತ್ತದೆ. ಒಂದೆರಡು ಮಹಾದ್ವಾರಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದರೆ ಇನ್ನೆರಡು ಮಹಾದ್ವಾರಗಳ ಕಾರ್ಯ ಕೊನೆ ಹಂತದಲ್ಲಿದೆ. ಎಲ್ಲಾ ಮಹಾದ್ವಾರಗಳು ಅರಬಾಂವಿ ಕೆಂಪು ಕಲ್ಲಿನಿಂದ ನಿರ್ಮಾಣವಾಗುತ್ತಿದ್ದು ನೋಡಲು ಭವ್ಯವಾಗಿವೆ.

ದೀಪಸ್ಥಂಬ :

ದೇವಾಲಯದ ಪೂರ್ವ ಮಹಾದ್ವಾರದಿಂದ ೫೦ ಅಡಿಗಳ ಅಂತರದಲ್ಲಿ ಚೌಕಾದ ಮೂರು ಅಡಿ ಎತ್ತರದ ಕಲ್ಲಿನ ಕಟ್ಟೆಯಿದೆ. ಅದರ ಮಧ್ಯ ಭಾಗದಲ್ಲಿ ಅಂದಾಜು ೧೦ ಅಡಿ ಎತ್ತರದ ದೀಪ ಸ್ಥಂಬವನ್ನು ನಿರ್ಮಿಸಲಾಗಿದೆ. ಈ ದೀಪ ಸ್ಥಂಬದಿಂದ ೧೦೦ ಮೀಟರ ಅಂತರಧದಲ್ಲಿ ಹೊಸದಾಗಿ ಇನ್ನೊಂದು ದೀಪಸ್ಥಂಬವನ್ನು ನಿರ್ಮಿಸಲಾಗುತ್ತಿದೆ. ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ೧೦೧ ಅಡಿ ಎತ್ತರದ ದೀಪಸ್ಥಂಬವನ್ನು ನಿರ್ಮಿಸುವ ಯೋಜನೆಯನ್ನು ಹೊಂದಿದ್ದು ಈಗಾಗಲೇ ೬೦ ಅಡಿಗಳ ಕಾರ್ಯ ಮುಗಿದಿದ್ದು ಇನ್ನೂ ೪೧ ಅಡಿಗಳ ನಿರ್ಮಾಣದ ಕಾರ್ಯ ಪ್ರಗತಿ ಹಂತದಲ್ಲಿದೆ. ಬಹುಶಃ ಈ ಭಾಗದ ಅತೀ ಎತ್ತರದ ದೀಪಸ್ಥಂಬ ಇದಾಗಬಹುದೆಂದು ಇಲ್ಲಿ ಜನರು ಹೇಳುತ್ತಾರೆ.

ಶಿವಸ್ಥಾನ :

ಸತ್ತಿಗೆ, ನಿಶಾನೆ, ಗೊಂಡೆಯ ಕಂಬಳಿ, ಬೆತ್ತ, ಭಂಡಾರ, ಡೊಳ್ಳು, ತಾಳ ಇವು ದೇವರ ಲಾಂಛನಗಳು. ಇವುಗಳ ಮೇಳಕ್ಕೆ ಶಿವಸ್ಥಾನವೆಂದು ಕರೆಯುವರು. ಮದುವೆ, ವಾಸ್ತುಶಾಂತಿ, ಹಬ್ಬ ಮೊದಲಾದ ಸಂದರ್ಭಗಳಲ್ಲಿ ಭಕ್ತರು ತಮ್ಮ ಮನೆಗಳಿಗೆ ಶಿವಸ್ಥಾನವನ್ನೇ ಒಯ್ಯುತ್ತಾರೆ. ಕರಿದೇವರಾಗಲಿ ಆತನ ಪಲ್ಲಕ್ಕಿಯಾಗಲಿ ಯಾವ ಭಕ್ತರ ಮನೆಗೂ ಹೋಗುವುದಿಲ್ಲ. ದೇವರ ಕ್ಷೋತ್ವಾಲರೆಂದು ಹೇಳುವ ಆನೆ-ಕುದುರೆಗಳು ಮಾತ್ರ ಆಮಂತ್ರಣದ ಮೇರೆಗೆ ಭಕ್ತರ ಮನೆಗೆ ಹೋಗುತ್ತವೆ. ಸಾಮಾನ್ಯವಾಗಿ "ಭಕ್ತರು ಮನೆಗೆ ಬಂದ ಕರೆದೇವರ ಕುದುರೆಗೆ ಐನೂರು, ಆನೆಗೆ ಸಾವಿರ, ಪೂಜಾರಿಗೆ ಐನೂರು, ಹಾಡುವ ಮೇಳಕ್ಕೆ ಐನೂರು ರೂಪಾಯಿಗಳಂತೆ ಲೆಕ್ಕಹಾಕಿ ಕಾಣಿಕೆಯನ್ನು ನೀಡುತ್ತಾರೆ."[೧೨] ಕೆಲವು ಜನರು ಇದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ತಾವು ಈ ಮೊದಲೇ ಬೇಡಿಕೊಂಡಂತೆ ಕಾಣಿಕೆ ಹಣವನ್ನು ಕೊಡುತ್ತಾರೆ. ಈ ಹಣವೆಲ್ಲ ದೇವರ

ಭಂಡಾರಕ್ಕೆ ಸಂದಾಯವಾಗುವುದು. ಭಕ್ತರ ಹಣವನ್ನು ಭಂಡಾರಕ್ಕೆ ಸೇರಿಸಿ, ಉತ್ಸವಗಳ ವೆಚ್ಚಕ್ಕೆ ವಿನಿಯೋಗಿಸಲಾಗುತ್ತದೆ.

ಕಂಠಿಕಾರ :

ಅಂದು ಕರೇಸಿದ್ದೇಶ್ವರನ ಸೇವಕ ಮತ್ತು ಮಹಾನ ಭಕ್ತನೆಂದರೆ ಶಿಷ್ಯ ಮಾಳಿಂಗರಾಯ. ಕರೇಸಿದ್ದೇಶ್ವರನ ಆಧುನಿಕ ಮಾಳಿಂಗರಾಯನೆಂದರೆ ನಾಗಪ್ಪ ಶಿಂಗಾಡಿ ಕಂಟಿಕಾರ. ಕರೇಸಿದ್ದೇಶ್ವರ ದೇವಸ್ಥಾನದ ಪ್ರತಿ ಕಾರ್ಯಕ್ರಮವು ಇವರ ನಿರ್ದೇಶನದಲ್ಲಿಯೇ ಜರುಗುತ್ತವೆ. ಇವರೇ ಕರೇಸಿದ್ಧನ ಖಜಾನೆಯ ನಿರ್ವಹಣಾಧಿಕಾರಿ. ಭಕ್ತರಿಗೆ ಭವಿಷ್ಯವಾಣಿಯಾಗಿರುವ ಪತ್ರಿಕೌಲುಗಳ ಫಲಾಫಲಗಳನ್ನು ಇವರೇ ಹೇಳಬೇಕು, ಆಗ ಮಾತ್ರ ಭಕ್ತರಿಗೆ ಸಮಾಧಾನ. ಕೌಲುಕೊಡುವುದು ವಿಳಂಬವಾದಾಗ (ತುಂಬಿಕೊಂಡಾಗ) ದೇವರು ಹೇಳುವ ವಜ್ಜಿ(ಕಾಣಿಕೆ)ಯ ಮುಖವಾಣಿ ಈ ಕಂಠಿಕಾರ. ಇವರ ಮಾತು ಕರೇಸಿದ್ಧನ ದೈವವಾಣಿಯೆಂದೇ ಭಕ್ತರ ನಂಬಿಕೆ. ದೇವರ ದರ್ಶನವನ್ನು ಪಡೆದುಕೊಂಡ ಎಲ್ಲ ಭಕ್ತರು ಇವರಿಗೆ ಭೇಟ್ಟಿಯಾಗಿ ನಮಸ್ಕರಿಸಿ, ಅಂಗಾರವಾದ ಭಂಡಾರ ಪಡೆಯುವುದು ಸರ್ವೆಸಾಮಾನ್ಯ. ಭಕ್ತರು ಇವರಲ್ಲಿಯೇ ತಮ್ಮ ಕಾಣಿಕೆಗಳನ್ನು ಸಲ್ಲಿಸುವುದರ ಜೊತೆಗೆ, ಚಿಕ್ಕ-ಪುಟ್ಟ ಸಮಸ್ಯೆಗಳಿಗೆ ಅವರಿಂದ ಪರಿಹಾರ ರೂಪದ ಸಲಹೆಯನ್ನು ಪಡೆದುಕೊಳ್ಳುತ್ತಾರೆ. ಚಿಕ್ಕ ಗುಡಿಯನ್ನು ಬೃಹದ ದೇವಾಲಯವನ್ನಾಗಿ ಮಾಡುವಲ್ಲಿ ಇವರ ಪರಿಶ್ರಮವನ್ನು ಅಲ್ಲಗಳೆಯುವಂತಿಲ್ಲ. ಇವರ ಮಗನಾದ ಶಿಂಗಾಡಿ ಕಂಠಿಕಾರ ಸೌಮ್ಯ ಸ್ವಭಾವದವರಾಗಿದ್ದು ದೇವಸ್ಥಾನದ ಎಲ್ಲ ಕಾರ್ಯಕ್ರಮಗಳಿಗೆ ನೇರವಾಗುತ್ತಿದ್ದು ಉತ್ತರದಾಯಿತ್ವದ ಗುಣ-ಲಕ್ಷಣಗಳನ್ನು ಹೊಂದಿದ್ದಾರೆ.

ಕರಿಸಿದ್ಧನ ಪೂಜಾರಿಗಳು :

ಕರೇಸಿದ್ಧೇಶ್ವರನ ಪೂಜೆಯನ್ನು ನಾಲ್ಕು ಮನೆತನದವರು ಪಾಳೆ ಪದ್ಧತಿಯಲ್ಲಿ ಮಾಡಿಕೊಂಡು ಬರುತ್ತಿದ್ದಾರೆ. ಪೂಜೇರಿ ಎಂಬ ಹೆಸರು ಸಾಮಾನ್ಯವಾಗಿದ್ದರು ಕೂಡ, ಪ್ರತಿ ಮನೆತನದವರು ಉಪನಾಮಗಳಿಂದ ಕರೆಯಲ್ಪಡುತ್ತಿದ್ದಾರೆ. ಪ್ರತಿ ಮನೆತನದ ಒಬ್ಬರು ದೇವಸ್ಥಾನದ ಪ್ರಮುಖರಾಗಿದ್ದು ಆಡಳಿತದ ಭಾಗವಾಗಿದ್ದಾರೆ. ಜುಗಳ ಮನೆತನದ ಮಾರುತಿ ಭರಮಪ್ಪ ಪೂಜೇರಿ, ಮಾರ್‍ಯಾಗೋಳ ಮನೆತನದ ಮಾರುತಿ ಕರೆಪ್ಪ ಪೂಜೇರಿ, ರಾಗ್ಯಾಗೋಳ ಮನೆತನದ ಇಟ್ಟಪ್ಪ ರಾಮಪ್ಪ ಪೂಜೇರಿ, ಹುಚ್ಚಗೋಳ ಮನೆತನದ ಹುಚ್ಚಪ್ಪ ಸಿದ್ದಲಿಂಗ ಪೂಜೇರಿ ಹಾಲಿ ದೇವಸ್ಥಾನದ ಪ್ರಮುಖರಾಗಿದ್ದು ದೇವಸ್ಥಾನದ ಕಾರ್ಯಗಳಿಗೆ ಕಂಠಿಕಾರರಿಗೆ ಬೆನ್ನೆಲುಬಾಗಿದ್ದಾರೆ.

ಕರೇಸಿದ್ಧ ಮತ್ತು ದಂತಕಥೆ :

ಕರೆಸಿದ್ಧ, ಕರಸಿದ್ಧ, ಕರಿಸಿದ್ಧ, ಖರಸಿದ್ಧ, ಕರಿಯಪ್ಪ, ಕರಿಯದೇವರು, ಕರಿಹೊಳಿಸಿದ್ಧ ಹೀಗೆ ಮುಂತಾದ ಹೆಸರುಗಳಿಂದ ಪ್ರಚಲಿತದಲ್ಲಿರುವ ಈ ದೇವರ ಉಗಮದ ಕುರಿತು ಹಲವಾರು ದಂತಕಥೆಗಳು ಈ ಪರಿಸರದಲ್ಲಿ ಪ್ರಚಲಿತದಲ್ಲಿವೆ. ಕರಿದೇವರದು ಉದ್ಭವ ಮೂರ್ತಿಯೆಂದು ನಂಬಿರುವ ಇಲ್ಲಿಯ ಜನರು ಹಲವು

ಕಥೆಗಳನ್ನು ಹೇಳುತ್ತಾರೆ. ಅಲಕನೂರಿನ ಮೂಲ ಹೆಸರು ತಿಪ್ಪರಟ್ಟಿ. ಕಂಕಣವಾಡಿಯ ದೇಸಾಯಿ ಮನೆತದನ ಆಡಳಿತಕ್ಕೆ ಒಳಪಟ್ಟ ಈ ಊರಿನ ನಾಯಕರು ಬೇಡರು.

ಜಂಬುಖಂಡಿ ನಾಡಿನ ಕೃಷ್ಣಾ ನದಿ ತೀರದ ಪ್ರದೇಶದಲ್ಲಿ ಜನತೆಗೆ ಉಪಟಳ ನೀಡುತ್ತಿದ್ದ 'ಕ್ವಾಣೆಸೂರ' ದೈತ್ಯನನ್ನು ಬೀರದೇವರು ಕಾಳಗದಲ್ಲಿ ಸಂಹರಿಸಿದ. ಕ್ವಾಣೆಸೂರ ದೈತ್ಯನ ಸಂಹಾರದ ನಂತರ ಕೈಯಲ್ಲಿದ್ದ ರಕ್ತ-ಸಿಕ್ತ ಖಡ್ಗವನ್ನು (ಅಲಗ) ಬೀರದೇವ ಹಾರಿಸಿದ. ಅದು ತಿಪ್ಪರಟ್ಟಿಯ ಆಲದಕಟ್ಟೆಯ ಮೇಲೆ ಬಂದುಬಿತ್ತು. ಅಂದಿನಿಂದ ತಿಪರಟ್ಟಿ, ಅಲಗ ಬಿದ್ದ ಊರು, ಅಲಕನೂರು ಎಂದಾಗಿ ಹೆಸರು ಮಾರ್ಪಾಟ್ಟಿತ್ತೆಂದು ಜನರ ಹೇಳುತ್ತಾರೆ.

ಇನ್ನೊಂದು ಐತಿಹ್ಯದ ಪ್ರಕಾರ ಅದೊಂದು ದಿನ ನಾಥ ಪಂಥದ ಸನ್ಯಾಸಿಯೊಬ್ಬ ಅಂಡಲೆಯುತ್ತ ತಿಪ್ಪರಟ್ಟಿಗೆ ಬಂದ. "ಎಲ್ಲೆಲ್ಲಿ ತಿರುಗಿದರೂ ಅವನ ಹಸಿದ ಹೊಟ್ಟೆಗೆ ಅನ್ನ ಸಿಕ್ಕಿರಲಿಲ್ಲ. ಇಲ್ಲಿ ಬಂದಾಗ ಅವನ ಕಂಗಾಲ ಸ್ಥಿತಿಯನ್ನು ಕಂಡು ಮನದಲ್ಲಿ ಮರುಗಿದವರಾಗಿ ಪೂಜಾರಿಗಳು ಖರೇಸಿದ್ಧನ ನೈವೇದ್ಯವಾಗಿ ಬಂದ ಅಖಂಡ ಕಡಬು ಹೋಳಿಗೆಯ ರಾಸಿಯಲ್ಲಿಯ ಸ್ವಲ್ಪಭಾಗವನ್ನು ಅವನಿಗೆ ನೀಡಿ ಮೇಲೆ ತುಪ್ಪ ಸುರುವಿದರು. ಅವೆಲ್ಲವನ್ನು ತಿಂದ ನಂತರ ಮೇಲೆ ಅನ್ನ ಸಾರು ಅಂಬಲಿ ನೀಡಿದರು.

ಎಲ್ಲ ದಾನಗಳಲ್ಲಿ ಅನ್ನದಾನವೇ ಶ್ರೇಷ್ಠವಲ್ಲವೇ? ಹೊಟ್ಟೆ ತುಂಬಿತು. ಮನಸ್ಸು ಸಹ ತುಂಬಿ ಸಂತೋಷ ಸಾಗರದಲ್ಲಿ ತೇಲಾಡುತ್ತ ಅವನು ತನ್ನ ಖಡ್ಗ ಹಿರಿದು ಆನಂದದಿಂದ ಕುಣಿದಾಡುತ್ತಾ

ಜೈ ಅಲಖ-ಖರೇಸಿದ್ಧಾ

ಜೈ ಅಲಖ-ಖರೇಸಿದ್ಧಾ

ಜೈ ಅಲಖ-ಖರೇಸಿದ್ಧಾ

ಎಂದು ದೇವರ ಘೋಷಣೆ ಮಾಡುತ್ತಾ ಕುಣಿಯುತ್ತಾ ಆನಂದಪಟ್ಟನು. ಅಲ್ಲಿಯವರೆಗೆ-ಬೇಡರ ಹಟ್ಟಿಯಾಗಿದ್ದ ಆ ಊರು ಸನ್ಯಾಸಿಯ ಜೈ ಅಲಖ ಎಂಬ ಘೋಷಣೆಯಿಂದಾಗಿ "ಅಲಕನೂರ" ಎಂದು ಹೆಸರಾಯಿತು ಅಂದಿನಿಂದ."[೧೩]

ಅಲಕನೂರು ಅಂದು ವಿಶಾಲವಾದ ಬಯಲು ಪ್ರದೇಶವನ್ನು ಹೊಂದಿದ್ದು, ದಕ್ಷಿಣದ ಭಾಗವು ಗೋಮಾಳವಾಗಿತ್ತು. ಅದು ದನ-ಕರುಗಳು ಮೇಯುವುದಕ್ಕೆ ಅನುಕೂಲವಿದ್ದ ಪ್ರದೇಶ. ಪಕ್ಕದಲ್ಲಿ ಹಳ್ಳದ ಒರತಿಯಿತ್ತು. ಹೀಗಾಗಿ ಸುತ್ತ-ಮುತ್ತಲಿನ ದನಕರುಗಳು ಇಲ್ಲಿ ಮೇಯುವುದಕ್ಕೆ ಬರುತ್ತಿದ್ದವು. ಪಕ್ಕದ ಊರು ಹರನಕೇರಿ ಅಂದರೆ ಇಂದಿನ ಹಾರೂಗೇರಿ. ಊರಿನ ಪ್ರಮುಖರು ಗೌಡಸಿದಮಲ್ಲ. ಗೌಡರ ಸುಂದರ ಪತ್ನಿಗೆ ಭೂತಬಾಧೆಯಾಗಿತ್ತು. ಈ ಭೂತಭಾದೆಯನ್ನು ಬೀಡಿಸಲು ಗೌಡರು ಹರಸಾಹಸ ಪಟ್ಟರು. ಒಂದು ಸಲ ಗೌಡರ ಮನೆಗೆ ಬಂದ ಸನ್ಯಾಸಿಗೆ ಗೌಡತಿಗಂಟಿದ ಭೂತಭಾದೆಯ ವಿಷಯ ಗೊತ್ತಾಯಿತು.

ಗೌಡರೇ "ನಿಮ್ಮ ಪೂರ್ವಜರ ಯಾವುದೋ ಒಂದು ಅಚಾತುರ್ಯದ ಕಾರ್ಯದಿಂದಾಗಿ ಈ ಭೂತ ಬಂದು ನಿಮ್ಮ ಮನೆ ಸೇರಿಕೊಂಡಿದೆ. ಇದು ಅಂತಿಂಥವರಿಗೆ ಮನಿಯುವಂಥದಲ್ಲ ಆ ಭೂತನಾಥನೇ

ಮಾತ್ರ ಇದನ್ನು ಓಡಿಸಬಲ್ಲ."[೧೪] ಎಂದು ಹೇಳಿದ ಸನ್ಯಾಸಿಯು ಭೂತಭಾದೆಯಿಂದ ಬಿಡುಗಡೆ ಪಡೆಯಲು ಕರೇಸಿದ್ಧ(ಬೀರದೇವ)ನಿರುವ ಕೋಣಗನೂರಿಗೆ ಹೋಗಿ ಶ್ರೀರಕ್ಷೆ ಪಡೆಯಲು ತಿಳಿಸಿದನು.

ದಂಪತಿಗಳಿಬ್ಬರು ಕೋಣಗನೂರಿಗೆ ಪ್ರಯಾಣ ಮಾಡಿ ಭಯಭಕ್ತಿಯಿಂದ ಕರೇಸಿದ್ಧನಿಗೆ ನಮಿಸಿ ಒಂದು ಸಪ್ತಾಹ ಕಾಲ ಅಲ್ಲಿಯೇ ನೆಲೆಸಿದರು. ಅವರು ಅಲ್ಲಿದ್ದಷ್ಟು ದಿನ ದೇವರ ಪೂಜೆ ಆರಾಧನೆಯಲ್ಲಿಯೇ ಕಾಲಕಳೆದು ಭೂತಭಾದೆಯಿಂದ ಮುಕ್ತರಾದರು. ಭೂತಭಾದೆಯಿಂದ ಮುಕ್ತರಾಗಿ ಊರಿಗೆ ಹೊರಡಲನುವಾದ ದಂಪತಿಗಳಿಗೆ ಕರೇಸಿದ್ಧ ನಸುನಗುತ್ತ "ಗೌಡರೆ ನಿಮ್ಮ ತಲೆಮಾರಿನಲ್ಲಿ ಯಾರೋ ಒಬ್ಬರು ಒಂದು ಹೆಣ್ಣಿಗೆ ಮಾಡಿದ ಅಪರಾದಕ್ಕಾಗಿ ಆ ಹೆಣ್ಣು ಅಂತರ ಪಿಶಾಚಿಯಾಗಿ ನಿಮ್ಮ ಮನೆತನವನ್ನೇ ನಾಶಮಾಡುವ ಪಣತೊಟ್ಟು ಭೂತವಾಗಿ ಕಾಡುತ್ತಿತ್ತು. ಈಗ ನಾನು ಅದರ ಬೇರನ್ನೇ .ಕೊಯ್ದಿರುವೆನು. ಆ ಪಿಶಾಚಿಯ ಅಂತರಾತ್ಮವನ್ನು ಶುದ್ಧಗೊಳಿಸಿ ಅದಕ್ಕೆ ಮುಕ್ತಿಯನ್ನು ಕರುಣಿಸಿರುವೆನು. ಇನ್ನು ಯಾವ ಭಯವೂ ಇಲ್ಲ. ನೀವು ನಿರಾತಂಕವಾಗಿ ಸಾಗಿರಿ, ಮುಂದೆ ನಿಮಗೆ ಮಕ್ಕಳ ಭಾಗ್ಯವೂ ಲಭಿಸುವುದು"[೧೫] ಎಂದರು.

ಊರಿಗೆ ಹಿಂದುರುಗಿ ಬಂದ ಗೌಡರಿಗೆ ಒಂದೇ ಸಮನೇ ಕರೇಸಿದ್ಧನ ಧ್ಯಾನ. ಪತ್ನಿಯ ಕಾಯಿಲೆಯನ್ನು ವಾಸಿ ಮಾಡಿದ ಕರೇಸಿದ್ಧನ ಸಾನಿಧ್ಯದಲ್ಲಿ ನಿತ್ಯವೂ ಇರಬೇಕೆಂಬ ಹಂಬಲ. ಈ ಹಂಬಲದಿಂದ ಒಮ್ಮೆ ಅವರು ಕೊಣಗನೂರಿಗೆ ಹೋಗಿ ದೇವರಿಗೆ ಶಿರಸಾಷ್ಟಾಂಗ ನಮಸ್ಕಾರ ಸಲ್ಲಿಸಿ ತಮ್ಮ ಮನದ ಬಯಕೆಯನ್ನು ತಿಳಿಸಿದರು. ಆಗ ಕರೇದೇವರು ನಗುತ್ತಾ ನುಡಿದರು 'ನೆನೆದಲ್ಲಿ ನಾನಿರುವೆ ಗೌಡರೆ, ಆದರೂ ನನ್ನ ಸಾಕಾರ ಮೂರ್ತಿಯ ಸಾನಿಧ್ಯದಲ್ಲಿರಬೇಕೆಂಬುದು ನಿಮ್ಮ ಬಯಕೆ' ಇರಲಿ ನಿಮ್ಮಂತೆಯೇ ಇನ್ನೂ ಎಷ್ಟೊ ಜನ ಭಕ್ತರ ಬಯಕೆಯೂ ಇದೇ ಆಗಿದೆ. ಕುರುಡನ ಮುಂದಿರುವ ಕಾಂಚಾಣದಂತಾಗಿದೆ ಸ್ಥಿತಿ. ಕಣ್ಣ ಮುಂದೆಯೇ ಇದ್ದರೂ ಕಾಣದಂತಿರುವುರಿ ಎಂದು ದೇವರು ನಕ್ಕರು.

ಈ ಒಗಟಿನ ಮಾತು ಗೌಡರಿಗೆ ಅರ್ಥವಾಗಲಿಲ್ಲ. ತುಸು ಗೊಂದಲಕ್ಕೀಡಾದವರಂತೆ ಸುಮ್ಮನಾದರು. ಆಗ ಖರೇದೇವರೇ ನಕ್ಕು ಹೇಳಿದರು 'ಗೌಡರೇ ನಾನು ನಿಮ್ಮ ಬೆನ್ನ ಹಿಂದೆಯೇ ಇದ್ದೇನೆ' ಕಾಣುವ ಆಸೆ ಇದ್ದರೆ ನೋಡಿರಿ, ನಿಮ್ಮ ಊರಿನಿಂದ ನೇರವಾಗಿ ಪಶ್ಚಿಮಕ್ಕೆ ತುಸು ದೂರ ನಡೆದರೆ ಕಾಣುವುದು ಚಕಮಕಿ ಗುತ್ತಿ. ಆ ಗುತ್ತಿ ನಮ್ಮ ತಂದೆ ಭರಮದೇವರು ಕುರಿ ಕಾಯುತ್ತ ತಪಸ್ಸು ಮಾಡಿದ ಸ್ಥಳ. ಆ ನನ್ನ ತಂದೆಯ ಕರುಣೆಯ ಕೂಸಾಗಿ ನಾನು ಅಲ್ಲಿನ ಖನಿಯಲ್ಲಿ 'ರೂಹು' ತಳೆದಿರುವೆ. ಹುತ್ತ ಬೆಳೆದಿದೆ ನನ್ನ ಮೇಲೆ. ನಿಮ್ಮಲ್ಲಿ ಅಷ್ಟು ಉತ್ಕಟ ಭಕ್ತಿಯೇ ಇದ್ದರೆ ನಿನ್ನ ಆಕಳುಗಳ ಬೆನ್ನು ಹತ್ತು. ಎಲ್ಲವೂ ವಿದಿತವಾಗುವುದು ಎಂದು ಹೇಳಿದರು."[೧೬] ಗೌಡರು ದೇವರಿಗೆ ನಮಸ್ಕರಿಸಿ ಊರಿಗೆ ಹಿಂದುರಿಗಿದರು.

ದೈವವಾಣಿಯನ್ನು ಪರೀಕ್ಷಿಸುವುದಕ್ಕಾಗಿ ಗೌಡರು ಒಂದು ದಿನ ಅಕಳುಗಳ ಹಿಂಡಿನ ಜೊತೆ ಹೋಗಿ ಪರೀಕ್ಷಿಸಲು ನಿರ್ಧರಿಸಿದರು. ದಿನವೂ ಅಲಕನೂರಿನ 'ಚಕಮಕಿ' ಗುಡ್ಡಕ್ಕೆ ಗೌಡರ ಆಕುಳಗಳ ಹಿಂಡು ಮೇಯಲು ಬರುತ್ತಿದ್ದವು. "ಅವುಗಳನ್ನು ಸಿದರಾಯ ಮುತ್ಯಾ ಎಂಬ ಆಳುಮಗ ಕಾಯುತ್ತಿದ್ದ. ದನಗಳನ್ನು ಮೇಯಲು ಬಿಟ್ಟು ಆತ ವಿಶ್ರಮಿಸುತ್ತಿದ್ದ ಸಮಯದಲ್ಲಿ ಆ ಹಿಂಡಿನಲ್ಲಿಯ (ಹುಟ್ಟುಗೋಮಾರಿ) ಹುಟ್ಟು ಕುಮಾರಿ ಆಕಳೊಂದು ಅಲ್ಲಿದ್ದ ಹುತ್ತಿನಲ್ಲಿ ಪ್ರತಿನಿತ್ಯ ಹಾಲು ಕರೆಯುತ್ತಿತ್ತಂತೆ. ಯಾರೂ ಇದನ್ನು

ಗಮನಿಸಿರಲಿಲ್ಲ. ಆ ಆಕಳ ಮೊಲೆಗಳಿಗೆ ನೊರೆ ಮಾತ್ರ ಹಾಗೆಯೇ ಉಳಿಯುತ್ತಿತ್ತು. ಹೀಗೆ ಹನ್ನೆರಡು ವರ್ಷ ಕಳೆದವು.[೬೭]

ಒಂದು ದಿನ ಆಕಳ ಮೊಲೆಗಳಿಗೆ ಅಂಟಿದ ನೊರೆ ಗೌಡತಿಯ ಕಣ್ಣಿಗೆ ಬಿತ್ತು. ಅವಳು ಈ ವಿಸ್ಮಯವನ್ನು ಗಂಡನಿಗೆ ತಿಳಿಸಿದಳು. ಅವರಿಗೆ ಆಶ್ಚರ್ಯವಾಯಿತು. ಗೌಡತಿ ಮತ್ತು ಕರೇದೇವರು ಹೇಳಿದ ಮಾತಿ ರಹಸ್ಯವನ್ನು ಭೇಧಿಸಲು ಗೌಡರು ಆಕಳುಗಳ ಹಿಂಡಿನ ಜೊತೆ ಚಕಮಕಿ ಗುಡ್ಡಕ್ಕೆ ಬರುತ್ತಾರೆ. ಸೂಕ್ಷ್ಮ ದೃಷ್ಟಿಯಿಂದ ಸುತ್ತಲಿನ ಪರಿಸರವನ್ನು ವಿಕ್ಷೀಸಿದರು. ಹಿಂಡಿನಲ್ಲಿದ್ದ ಒಂದು ಆಕಳು ಎಂದಿನಂತೆ ಹುತ್ತಿಗೆ ಹಾಲೆರೆಯುತ್ತಿರುವುದನ್ನು ಗೌಡರು ನೋಡಿ ರೋಮಾಂಚಿತರಾದರು. ಹುತ್ತದ ಮೇಲೆ ಆಕಳೊಂದು ನಿಂತಿಕೊಂಡಿದೆ. ಆಕಳಿನ ಕೆಚ್ಚಲಿನ ನಾಲ್ಕು ಮೊಲೆಗಳಿಂದ ಬಳಬಳನೇ ಸುರಿವ ಹಾಲು ಮೇಲ್ಮೊಗವಾಗಿ ಬೆಳೆದ ಆ ಹುತ್ತದ ಬಾಯಲ್ಲಿ ಬೀಳುತ್ತಿವೆ. ಕೆಚ್ಚಲಿನ ಹಾಲೆಲ್ಲವೂ ತೀರಿದ ನಂತರ ಆಕಳು ತನ್ನ ಹಿಂಡನ್ನು ಸೇರಿಕೊಂಡಿತು. ಆಗ, 'ಹಾಳು ಹಾರೂಗೇರಿಗೆ ಬರುವವನಿದ್ದೇನೆ; ಹಳುವಿನ ಬಂಡಿಗೆ ಹನ್ನೆರಡು ಎತ್ತು ಹೂಡಿ, ಐವರು ಮುತ್ತೈದೆಯರೊಂದಿಗೆ ಬಂದು ನನ್ನನ್ನು ಕರೆದುಕೊಂಡು ಹೋಗು' ಎಂಬ ಅಶರೀರವಾಣಿ ಗೌಡನ ಕಿವಿಗೆ ಬೀಳುವುದು.

ರವಿವಾರದಂದು ಗೌಡ ಬಂಗಾರದ ತಟ್ಟೆಗಳಲ್ಲಿ ಮುತ್ತಿನಾರತಿ ಹಿಡಿದುಕೊಂಡು ಐವರು ಮುತ್ತೈದೆಯರೊಂದಿಗೆ ಹನ್ನೆರಡು ಎತ್ತುಗಳ ಹಳುವಿನ ಬಂಡಿ ಹೂಡಿಕೊಂಡು ಆಳುಗಳೊಂದಿಗೆ ಅಲಕನೂರಿನ ಒಡಕಿ ತಾಣಕ್ಕೆ ಬರುತ್ತಾನೆ. ಗುಡ್ಡದಲ್ಲಿರುವ ನಿಧಿ ಶೋಧನೆಗಾಗಿ, ಗುಡ್ಡ ಹಡ್ಡಲು ತಮ್ಮನ್ನು ಕರೆತಂದಿರಬೇಕೆಂದು ಆಳುಗಳ ಭಾವನೆ. ಆದರೆ ಭವಸಾಗರವನ್ನು ಪಾರುಮಾಡುವಂಥ ಭಾಗ್ಯನಿಧಿ ಅಲ್ಲಿದೆ ಎಂಬುದು ಪಾಮರರಾದ ಅವರಿಗೇನು ಗೊತ್ತು! ಆಳುಗಳು ಗೌಡರ ಆದೇಶದಂತೆ ಮೆಲ್ಲನೆ, ಬಹುಮೆಲ್ಲನೆ ಹುತ್ತನ್ನು ಅಗೆಯಲು ಪ್ರಾರಂಭಿಸಿದರು. ಸ್ವಲ್ಪ-ಸ್ವಲ್ಪವಾಗಿ ಮೇಲಿನ ಭಾಗವನ್ನು ಅನಾವರಣ ಮಾಡುತ್ತ ಸಾಗಿದರು.

ಸ್ವಲ್ಪ ಸಮಯದ ನಂತರ ತಲೆಯನ್ನು ಹೋಲುವ ಮೇಲ್ಭಾಗವು ಗೋಚರಿಸಿತು. ಕ್ರಮೇಣ ಹುತ್ತಿನ ಮಣ್ಣನ್ನು ಬದಿಗೆ ಸರಿಸುತ್ತ-ಸರಿಸುತ್ತ ಸಂಪೂರ್ಣ ಮೂರುತಿಯ ಅನಾವರಣ ಮಾಡಿದರು. ಗೌಡರ ಆನಂದಕ್ಕೆ ಪಾರವೇ ಇಲ್ಲದಾಯಿತು. ಆಳುಗಳನ್ನು ಓಡಿಸಿ ಹಿರೀ ಹೊಳೆಯಿಂದ ಕೊಡಗಳಲ್ಲಿ ನೀರು ತರಿಸಿ ಮೂರ್ತಿಗೆ ಸ್ನಾನ ಮಾಡಿಸಿದರು. ಆಕಳುಗಳನ್ನು ಹಿಂಡಿಸಿ ಕೊಡಗಟ್ಟಲೇ ಹಾಲು ತರಿಸಿ ಅಭಿಷೇಕ ಮಾಡಿದರು. ಕುಂಕುಮ ಹಚ್ಚಿ ಮೇಲೆ ಭಂಡಾರ ಎರಚಿ ಕೊರಳಿಗೆ ಹೂವಿನ ಮಾಲೆ ಹಾಕಿದರು. ಮೂರ್ತಿಯನ್ನು ಕಂಡು ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ! ಇಷ್ಟಾಗುವ ಹೊತ್ತಿಗೆ ಸೂರ್ಯನು ಗುತ್ತಿಯ ಹಿಂದುಗಡೆ ಅಡಗುತ್ತಲಿದ್ದನು. ಇನ್ನು ರಾತ್ರಿಯಾಗುವದೆಂದು ಗೌಡರು ಗಡಬಡಿಸಿ ಕೂಡಲೇ ಎತ್ತಿನ ಬಂಡಿಯನ್ನು ಮೂರ್ತಿಯ ಹತ್ತಿರ ತರಿಸಿದರು. ಅಲ್ಲಿ ಕೂಡಿದ ಕುರುಬರೆಲ್ಲರಿಗೂ ಮೂರ್ತಿಯನ್ನೆತ್ತಿ ಗಾಡಿಯಲ್ಲಿಡಲು ಹೇಳಿದರು.

ಗೌಡರಿಗೇನೋ ಕರೇಸಿದ್ಧನ ಮೂರ್ತಿ ಸಿಕ್ಕಿತೆಂದು ಆನಂದ, ಸಂಭ್ರಮ. ಆದಷ್ಟು ಬೇಗನೆ ಮೂರ್ತಿಯನ್ನು ತಮ್ಮೂರಿಗೆ ಒಯ್ದು ಪ್ರತಿಷ್ಠಾಪಿಸಬೇಕೆಂಬ ತವಕ. ಆದರೆ ಅಲ್ಲಿ ಕೂಡಿದ ಕುರುಬರಿಗೆಲ್ಲ

ಒಂದು ತೆರನಾದ ದುಃಖ, ಹಳಹಳಿ, ಕಳವಳ. ಆ ಹುತ್ತದ ಹತ್ತಿರ ಬಂದಾಗಲೆಲ್ಲ ಅದೇನೋ ಒಂದು ತೆರನಾದ ಅವ್ಯಕ್ತ ಆನಂದವಾಗುತ್ತಿತ್ತವರಿಗೆ. ತಮ್ಮ ಕುರಿಗಳಿಗೇನಾದರೂ ರೋಗರುಜಿನ ಬಂದರೆ ಆ ಗುತ್ತಿಗೆ ಅವುಗಳನ್ನು ಹೊಡೆದುಕೊಂಡು ಬರುತ್ತಿದ್ದರು. ಆ ಹುತ್ತದ ಆಸುಪಾಸಿನಲ್ಲಿ ನಿಂತರೆ ಕುರಿಗಳ ರೋಗರುಜಿನಗಳೆಲ್ಲ ವಾಸಿಯಾಗುತ್ತಿದ್ದವು. ಅದೇನೋ ಒಂದು ತೆರನಾದ ಮೋಡಿ ಆ ಹುತ್ತದ ಪರಿಸರದಲ್ಲೆಲ್ಲ ಹರಡಿರುವಂತೆ ಭಾಸವಾಗುತ್ತಿತ್ತು ಅವರಿಗೆ.

ಗೌಡರು ಮೂರ್ತಿಯನ್ನು ಬಂಡೆಯಲ್ಲಿಟ್ಟುಕೊಂಡು ಹಾರೂಗೇರಿಗೆ ಬರುವಾಗ ದಾರಿಯಲ್ಲಿ (ಈಗಿನ ಕರೆಸಿದ್ಧನ ದೇವಸ್ಥಾನವಿರುವ ಸ್ಥಳದಲ್ಲಿ) ಬಂಡಿಯ ಹಾರಿ ಮುರಿದು, ನೆಲಕ್ಕೆ ಕುಸಿಯಿತು. ಆಗ ದೇವರ ಮೂರ್ತಿ ನೆಲಕ್ಕುರುಳಿತು. ಅದನ್ನೆತ್ತಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. 'ಅಲಕನೂರಿನಲ್ಲಿಯೇ ನೆಲೆಸಿ, ಅಲಕನೂರನ್ನು ಅರಮನೆ ಮಾಡುವುದಾಗಿ' ದೇವವಾಣಿ ಮೊಳಗಿತು. ಹಾರೂಗೇರಿಯ ಗೌಡ ಕರೆಸಿದ್ಧನ ಮೂರ್ತಿಯನ್ನು ಬಿಟ್ಟು ಹಿಂದಿರುಗಿದ.

"ಗೌಡನ ಆಳುಮಗ 'ಸಿದರಾಯಮುತ್ಯಾ' ಕರೆಸಿದ್ಧನ ಮುಖಪೂಜೆ ಮಾಡುತ್ತ ಅಲ್ಲಿಯೇ ನೆಲೆಸಿದ. ಮಣ್ಣಮಾಳಿಕೋಟೆಯ ಹೆಣ್ಣು ಮಗಳೊಬ್ಬಳು ತನ್ನ ನಾಲ್ವರು ಗಂಡುಮಕ್ಕಳೊಂದಿಗೆ ಅಲಕನೂರಕ್ಕೆ ಬಂದಿದ್ದಳು. ಅವರಲ್ಲಿಯ ಮೂವರು ಮಕ್ಕಳು ಒಂದೇ ದಿನ ತೀರಿದರು. ಉಳಿದವನು ೧೨ ವರ್ಷಗಳ ಕಾಲ ದೇವರ ಬೆನ್ನುಪೂಜೆ ಮಾಡಿ ವರಪಡೆಯುತ್ತಾನೆ. ಆತನ ವಂಶಜರೇ ಇಂದು ಕರೆಸಿದ್ಧನ ಪೂಜಾರಿಗಳಾಗಿರುವರು. ಭವಿಷ್ಯ ಹೇಳುತ್ತಿದ್ದ ಕಂಟಿಕಾರ ಸಿದ್ಧಪ್ಪನ ವಂಶಜರು ದೇವಸ್ಥಾನದ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಹದಿನಾರು ಹಳ್ಳಿಯ ಒಡೆಯನಾಗಿದ್ದ ಕಂಕಣವಾಡಿ ದೇಸಾಯಿ ದೇವಸ್ಥಾನಕ್ಕೆ ೮೪ ಎಕರೆ ಜಮೀನು ದತ್ತಿಯಾಗಿ ನೀಡಿದುದನ್ನೂ, ಉತ್ತೂರು ಕಟ್ಟಿಗೆ ವ್ಯಾಪಾರಿ ಹರಕೆ ಹೊತ್ತು ಗುಡಿ ಕಟ್ಟಿಸಿದುದನ್ನೂ ಊರಿನ ಹಿರಿಯರು ಕಥೆಕಟ್ಟಿ ಹೇಳುವರು. ಇತ್ತೀಚಿಗೆ ಹಳೆಯ ಗುಡಿಯನ್ನು ತೆಗೆದುಹಾಕಿ ಆಧುನಿಕ ಭವ್ಯ ದೇವಾಲಯ ನಿರ್ಮಿಸಲಾಗಿದೆ. ಹಳೆಯ ಚಿಕ್ಕಗುಡಿಯನ್ನು ಹಿರಿಯರು ಇಂದಿಗೂ ನೆನೆಪಿಸಿಕೊಳ್ಳುತ್ತಾರೆ."[೧೮]

"ಬಾಗಿಯ ಬಂಕನಾಥನನ್ನು ಸಂಹರಿಸಿದ ಬೀರೇಶ್ವರನು 'ಹಾಲಹಳ್ಳಕ್ಕೆ ಬಂದು ಅಲ್ಲಿ ಸಿಂಗಾಡಿ ಸುಲ್ತಾನನೆಂದು ಹೆಸರಾಗಿ ಅಲಕನೂರಿರುವ ಸ್ಥಳದಲ್ಲಿ ಬೀರಪ್ಪನಾಗಿ ನೆಲೆಸಿದನೆಂದು ವರ್ಣಿಸಲಾಗಿದೆ."[೧೯] ಹುತ್ತಕ್ಕೆ ಹಾಲು ಕರೆಯುವ ಅನೇಕ ಐತಿಹ್ಯಗಳು ಕರ್ನಾಟಕದ ತುಂಬೆಲ್ಲಾ ಲಭಿಸುತ್ತವೆ. ಇದನ್ನು ಸಮಾಜ ವಿಜ್ಞಾನಿಗಳು ಭೂಮಿ ಪೂಜೆ, ಫಲವಂತಿಕೆಯ ಪೂಜೆ, ಮಾತೃತ್ವದ ಪೂಜೆಯ ಜೊತೆಗೆ ಪರಿಭಾವಿಸುತ್ತಾರೆ. ಹಾಲು ಜೀವ ಚೈತನ್ಯದ ಸಂಕೇತವಾಗಿ, ಹುತ್ತ ಮಾತೃ ಫಲವಂತಿಕೆಯ ಸಂಕೇತವಾಗಿ ಬಳಕೆಗೊಂಡಿರುತ್ತವೆ.

ಕರೆಸಿದ್ಧ ಯಾರು? :

ಕರೆಸಿದ್ಧ ಯಾರು ಎಂಬುದರ ಕುರಿತು ಸಂಶೋಧನೆ ಅಗತ್ಯ. ಆತ ಸಿದ್ಧಪುರುಷನೋ, ದೈವಪುರುಷನೋ ಎಂಬುದು ತಿಳಿಯದು. ಆದರೆ ಇಲ್ಲಿಯ ಜನರು ಮಾತ್ರ ಆತನೊಬ್ಬ ದೈವಿಪುರುಷನೆಂದೇ ನಂಬಿಕೊಂಡಿರುವರು. ಹುನ್ನೂರು ಬೀರಪ್ಪ, ಕೊಣ್ಣೂರು ಕರಿಯಪ್ಪ, ಅಲಕನೂರಿನ ಕರೇಸಿದ್ಧ ಇವರೆಲ್ಲರೂ ಒಂದೇ ಎಂದು ಇಲ್ಲಿಯ ಜನರು ಹೇಳುತ್ತಾರೆ. ಬೀರದೇವರಿಗೆ ಬಾವನ್ನ (೫೨) ಬಿರುದುಗಳು. ಅವುಗಳಲ್ಲಿ

ಒಂದು ಕರಿಸಿದ್ಧ ಎಂಬುದು. 'ಕ್ವಾಣಗನೂರಿನ ಕ್ವಾಣೇಸೂರ ದೈತ್ಯನನ್ನು ಸಂಹರಿಸಿದ ಬೀರದೇವರಿಗೆ ದೊರೆತ ಬಿರುದೇ ಕರೇಸಿದ್ಧ.' ಈ ಸಂಗತಿಯನ್ನು ಹಲವು ಗ್ರಂಥಗಳು ಸಾಕ್ಷಿಕರಿಸುತ್ತವೆ. 'ಜನಪದ ಹಾಲುಮತ ಮಹಾಕಾವ್ಯದಲ್ಲಿಯ ಒಂದು ಪದ್ಯ ಇಂತಿದೆ.

"ಕ್ವಾಣಗಸೂರ ದೈತ್ಯನಿಗೆ ನಾನೇ ಹೊಡದೀನಿ ಅಂದಾನ
ಕರಿಯಾ ದೇವರಲ್ಲಪ್ಪ ಧೈತ್ಯ ಕ್ವಾಣೆಸುರಗ
ಕ್ವಾಣೇಸೂರನ ವಧವ ಮಾಡ್ಯಾನ ಕರಿಯದೇವರು ಅನಸ್ಯಾನ
ತುಂಡು ಬಿದ್ದಲ್ಲಲ್ಲೇಳ ಮುಂಡಗನೂರ ಅನಸೇನ
ಮುಂಡಿಯ ಬಿದ್ದಲ್ಲಲ್ಲೇಳ ಮುಂಡಗನೂರ ಅನಸೇನ
ಕ್ವಾಣೇಸೂರ ಧೈತ್ಯನ ತಲಿಯಾ ಗುದ್ದುಗಿ ಆಗುತಾವೇನ
ಗುದ್ದಗಿ ಮ್ಯಾಲೋ ತಮ್ಮ ಲಿಂಗಬೀರಣ್ಣ ದೇವರ
ಲಿಂಗ ಬೀರಣ್ಣ ದೇವರ ಕರಿಯಾ ದೇವರು ಅನಸ್ಯಾನ"[೨೦]

ಹಾರೂಗೇರಿಯ ಜನಪದ ಕವಿ 'ಅಲಭೈರಿ' ಇದೇ ಅಭಿಪ್ರಾಯವನ್ನು ಬೆಂಬಲಿಸುತ್ತಾ ಈ ಕೆಳಗಿನಂತೆ ಪದ ರಚಿಸಿದ್ದಾರೆ.

"ವೀರಭದ್ರನವತಾರವ ತಾಳಿದವ ಬೀರೇಶ್ವರ ಬೀರಪ್ಪನೋ
ಸಾರ ಕುರುಬರಿಗೆ ತೋರಿದ ಕಂಟಕ ಹಾರಿಸಿದ ಬೀರಪ್ಪನೋ
ಕ್ವಾಣೇಸೂರನ ಪ್ರಾಣ ಹೊಡೆದಾನೊ ಜಾಣದೇವ ಬೀರಪ್ಪನೋ
ಕರೆಸಿದ್ಧನಾಗಿ ಧರೆಯೊಳು ಮೇಲಾಗಿ ಮೆರೆದವ ತಾ ಬೀರಪ್ಪನೋ
ಮೆರೆದವ ಗುರುಸಿದ್ಧೇಶ್ವರನೆನಿಸಿದ ಬಿರಾದಾವಳಿ ಬೀರಪ್ಪನೋ
ಜಾತಿ, ನೀತಿ, ಕುಲ-ಗೋತ್ರಕ ಸಿಲುಕಿದಾತನುತಾ ಬೀರಪ್ಪನೋ
ಮಾತು ಮನಸಿಗೆ ತೀರ್ಥವಾದವು ತಾತನಾದ ಬೀರಪ್ಪನೋ"[೨೧]

ಈ ಮೇಲಿನ ವಿಷಯವನ್ನು ಪುಷ್ಟಿ ನೀಡುವಂತೆ ಒಂದು ಕಥೆಯನ್ನು ಜನಪದರು ಹೇಳುತ್ತಾರೆ. ಬ್ರಹ್ಮದೇವನಿಂದ ವರವನ್ನು ಪಡೆದ ಹಿರಣ್ಯಕಶ್ಯಪ ಮೂರುಲೋಕಗಳನ್ನು ಪೀಡಿಸತೊಡಗಿದ. ಆಗ ದೇವತೆಗಳೆಲ್ಲ ಒಂದುಗೂಡಿ ವಿಷ್ಣುವಿನ ಬಳಿಗೆ ಬರುತ್ತಾರೆ. ಅವರ ಅಳಲನ್ನು ಕೇಳಿದ ವಿಷ್ಣು ನರಸಿಂಹ ಅವತಾರವನ್ನು ತಾಳಿ ಹಿರಣ್ಯಕಶ್ಯಪನನ್ನು ಸಂಹರಿಸುತ್ತಾನೆ. ಆಗ ನರಸಿಂಹನ ಭಯಂಕರತೆಯನ್ನು ದೇವತೆಗಳಿಂದ ನೋಡಲಾಗಲಿಲ್ಲ. ಮತ್ತೆ ಎಲ್ಲ ದೇವತೆಗಳು ಬ್ರಹ್ಮನ ನಾಯಕತ್ವದಲ್ಲಿ ಶಿವನಲ್ಲಿಗೆ ಬಂದು ತಮಗಾದ ತೊಂದರೆಯನ್ನು ಭಿನ್ನವಿಸಿಕೊಂಡರು. ಶಿವನು ವೀರಭದ್ರನನ್ನು ಕಳುಹಿಸಿ ಮೊದಲು

ನರಸಿಂಹನನ್ನು ಶಾಂತಗೊಳಿಸಲು ಪ್ರಯತ್ನಿಸು ಒಂದು ಪಕ್ಷ ಆತ ಶಾಂತನಾಗದಿದ್ದರೆ ಆತನನ್ನು ಸಂಹರಿಸೆಂದು ಹೇಳಿದನು. ವೀರಭದ್ರ ಬಂದಾಗಲೂ ನರಸಿಂಹ ಶಾಂತನಾಗಲಿಲ್ಲ. ಆಗ ಬೀರಭದ್ರ ಆತನ ತಲೆಯನ್ನು ಕತ್ತಿರಿಸಿ ತಂದು ಶಿವನಿಗೆ ಅರ್ಪಿಸಿದನು. ಶಿವ ಆ ತಲೆಯನ್ನು ಕೊರಳಲ್ಲಿ ಧರಿಸಿದ. ಸುದ್ದಿ ತಿಳಿದ ವಿಷ್ಣುವಿಗೆ ಅಪಾರ ಸಿಟ್ಟುಬಂತು.

ಶಿವ–ಪಾರ್ವತಿ ಕೈಲಾಸದಲ್ಲಿದ್ದಾಗ ಅಲ್ಲಿಗೆ ಬಂದ ವೀರಭದ್ರ ತನಗೆ ಭೂಲೋಕಕ್ಕೆ ಹೋಗಬೇಕೆಂಬ ಇಚ್ಚೆಯಾಗಿದೆ, ವರ ನೀಡಬೇಕೆಂದು ಹಠ ಹಿಡಿದು ಪಡೆದುಕೊಂಡನು. ಇದರ ಫಲವಾಗಿ ವೀರಭದ್ರ ಸರಸ್ವತಿಯ ಉದರದಲ್ಲಿ ಜನಿಸಿದ. ವಿಷಯ ತಿಳಿದ ವಿಷ್ಣು ವೀರಭದ್ರನ ಮೇಲೆ ಸೇಡು ತೀರಿಸಿಕೊಳ್ಳಲು ಯತ್ನಿಸಿದ. ವಿಷ್ಣು ಬ್ರಾಹ್ಮಣನ ರೂಪತಾಳಿ ಸರಸ್ವತಿಯ ಹತ್ತಿರ ಬಂದು ನಿನಗೆ ಜನಿಸಿದ ಮಗು ಅಪಶಕುನದ ಮಗುವಾಗಿದ್ದು, ಅದರ ಮುಖವನ್ನು ನೋಡುವುದು ಒಳ್ಳೆಯದಲ್ಲ. ಆದಷ್ಟು ಬೇಗನೆ ಮಗುವನ್ನು ಸ್ಮಶಾನದಲ್ಲಿ ಬಿಟ್ಟು ಬರುವಂತೆ ಹೇಳಿದನು. ಸರಸ್ವತಿಯು ವಿಷ್ಣುವಿನ ಸಲಹೆಯಂತೆ ಮಗುವನ್ನು ಸ್ಮಶಾನದಲ್ಲಿ ಬಿಟ್ಟು ಬರುವಳು. ಅನಾಥ ಮಗುವನ್ನು 'ಮಾಯವ್ವ' ಎಂಬಳು ಸಾಕಿದಳು. ಮಗುವಿಗೆ 'ವೀರಲಿಂಗ' ಎಂಬ ಹೆಸರಿಟ್ಟಳು. ಮಗು ಬೆಳೆದು ದೊಡ್ಡವನಾದ. ಜಮಖಂಡಿ ಪರಿಸರದಲ್ಲಿರುವ 'ಕೋಣಾಸುರ'ನೆಂಬ ನಾರಾಯಣ ಗೋತ್ರದ ದೈತ್ಯನು ಏಳುನೂರು ಕುರುಬರನ್ನು ಪೀಡಿಸುತ್ತಿದ್ದ. ಕುರುಬರೆಲ್ಲ ವೀರಲಿಂಗನಲ್ಲಿಗೆ ಬಂದು ತಮ್ಮನ್ನು ರಾಕ್ಷಸನಿಂದ ರಕ್ಷಿಸುವಂತೆ ವಿನಂತಿಸಿದರು. ವೀರಲಿಂಗನು ಕೋಣಾಸುರನನ್ನು ಕ್ವಾಣೂರು (ಕೊಣ್ಣೂರು) ಎಂಬಲ್ಲಿ ಸಂಹರಿಸುತ್ತಾನೆ. ಈ ಕಾರಣದಿಂದಾಗಿ ವೀರಲಿಂಗ ಖರೇಸಿದ್ಧನಾಗಿ ಕುರುಬರಿಗೆ ಕುಲದೈವನಾಗಿ ಆರಾಧಿಸಲ್ಪಡುತ್ತಿದ್ದಾನೆಂದು ಜನಪದರು ಕಥೆ ಹೇಳುವರು.

"ಖರೇಸಿದ್ಧನಾಗಿ ಧರೆಯೊಳು ಮೆರೆದವ
ಬೀರದೇವ ಬೀರಪ್ಪನೋ!
ಬಡವಗ ಭಾಗ್ಯ ಬಂಜೆಗಿ ಫಲಗಳ
ಕೊಟ್ಟಾಂವ ತಾ ಬೀರಪ್ಪನೋ
ಹರನೋ ವೀರನೋ ಕುರುಬರಿಗಾದಾಂವ
ಖರೇಸಿದ್ಧ ಬೀರಪ್ಪನೋ!"[೨೨]

ಹಲವು ಜನಪದ ಕವಿಗಳು ಕರಿಸಿದ್ಧನನ್ನು ಅಲ್ಲಮನ ಅವತಾರವೆಂದು ಬಣ್ಣಿಸಿರುವರು.[೨೩]

ಕರಿಸಿದ್ಧ (ಬೀರದೇವ) 'ಹರ'ನ ಅವತಾರವೇ ಅಥವಾ 'ಹರಿ'ಯ ಅವತಾರವೇ ಎಂಬುದರ ಬಗ್ಗೆ ಜಿಜ್ಞಾಸೆಗಳಿವೆ. ಕರಿಸಿದ್ಧ 'ಹರ'ನ ಅವತಾರವೆಂಬುದು ಬಹುಜನರ ಅಭಿಪ್ರಾಯ. ಆದರೆ ಕೆಲವರು ಆತ 'ಹರಿ'ಯ ಅವತಾರವೆಂದು ಸಾಧಿಸುತ್ತಾರೆ. ಸುಮಾರು ೨೫೦೦ ವರ್ಷಗಳ ಸುಧೀರ್ಘ ಅವಧಿಯ ಧಾರ್ಮಿಕ ಇತಿಹಾಸವಿರುವ ಹಾಲುಮತ ಜನಾಂಗವು ಮೂಲತಃ ಶೈವ (ಶಿವನ ಆರಾಧನೆ) ಪರಂಪರೆಯ

ಜನಾಂಗವಾಗಿದೆ. ಶಿವನ ಪ್ರಾಚೀನ ರೂಪ, ವೇಷ ಭೂಷಣಕ್ಕೂ ಇಂದಿನ ಕುರುಬರ ರೂಪಕ್ಕೂ ಸಾಮ್ಯವಿದೆ. ಜಡೆ, ಗಡ್ಡ–ಮೀಸೆ ಬೀಡುವ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಕುರುಬರಲ್ಲಿ ರೂಢಿಯಲ್ಲಿದೆ.

ಅನಾದಿಕಾಲದಿಂದಲೂ ಅಡವಿಯಲ್ಲಿದ್ದುಕೊಂಡು ಸಿದ್ಧಸಾಧನೆಗಳಲ್ಲಿ ನಿರತರಾದವರು ಕುರಿಗಾರರು. ಸಿದ್ಧಪರಂಪರೆಗೆ ಪಶುಪಾಲಕರೇ ಮೂಲ ಎಂಬ ಅಂಶ, ಶಿವನ ಹಿನ್ನೆಲೆ ಕುರಿತು ನಡೆಸಿದ ಅಧ್ಯಯನಗಳಿಂದ ವ್ಯಕ್ತವಾಗುತ್ತದೆ. ಕುರುಬರ ಆರಾಧ್ಯ ದೈವಗಳಲ್ಲಿ ಸಿದ್ಧಪುರುಷರೇ ಅಧಿಕ. ಕಾಡುಸಿದ್ಧ, ಅಮೋಘಸಿದ್ಧ, ಕರಿಸಿದ್ಧ ಮುಂತಾದ ಸಿದ್ಧರು ಶಿವನ ಅವತಾರಿಗಳೆಂದು ಜನ ಇಂದಿಗೂ ನಂಬಿದ್ದಾರೆ. ಈ ಹಿನ್ನೆಲೆಯಲ್ಲಿ ಬೀರದೇವರು (ಕರಿಸಿದ್ಧ) ಶಿವನ ಅವತಾರವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಕರಿಸಿದ್ಧನ ಬಣ್ಣ ಕರಿ ಎಂದರೆ ಕೃಷ್ಣವರ್ಣ. ಚತುರ್ಭಜನಾದ ಅಲಕನೂರಿನ ಕರೇಸಿದ್ಧನ ಒಂದು ಕರದಲ್ಲಿ ಚಕ್ರವಿದೆ. ಇದನ್ನು ಆಧಾರವಾಗಿಟ್ಟುಕೊಂಡು ಮುಗಳಖೋಡದ ನಿವೃತ್ತ ಪ್ರಾಚಾರ್ಯ ಕೆ. ವಿ. ಬೀಳಗಿಯವರು ಕರಿಸಿದ್ಧ ಹರಿಯ ಅವತಾರವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಜನಸಾಮಾನ್ಯರಿಗೆ ಗರ್ಭಗುಡಿಯಲ್ಲಿ ಪ್ರವೇಶ ಮಾಡಲು ಅವಕಾಶ ಇಲ್ಲದ್ದರಿಂದ ಮೂರ್ತಿಯನ್ನು ಸ್ಪಷ್ಟವಾಗಿ ಅಧ್ಯಯನ ಮಾಡಿ ಸ್ಪಷ್ಟ ತೀರ್ಮಾನ ಕೈಕೊಳ್ಳಲು ಸಾಧ್ಯಗುವುದಿಲ್ಲ. ಹೀಗಾಗಿ ಕರಿಸಿದ್ಧ ಶೈವನೋ ಮತ್ತು ವೈಷ್ಣವನೋ ಎಂಬ ಧಾರ್ಮಿಕ ಸಂಘರ್ಷದ ಸೂಕ್ಷ್ಮ ಎಳೆಗಳನ್ನು ಸಂಶೋಧಿಸುವುದು ಕಷ್ಟದಾಯಕ.

ಸುಮಾರು ೧೫೦ ವರ್ಷಗಳ ಇತಿಹಾಸವನ್ನು ಹೊಂದಿರುವ ಕರಿಸಿದ್ಧನ ದೇವಾಲಯದಲ್ಲಿರುವ ಮೂರ್ತಿ ಚಪ್ಪಟೆಯಾಕಾರದಲ್ಲಿರುವ ಒಂದು ಶಿಲೆ. (ಆಧಾರ: ಗರ್ಭಗುಡಿಯ ಮೇಲೆ ಲಭ್ಯವಿರುವ ದೇವಾಲಯ ನಿರ್ಮಾಣವಾದ ಕಾಲ ಕೋದ್ರಿ ನಾಮ ಸಂವತ್ಸರ ೧೯೦೪). ಈ ದೇವಾಲಯವು ಬೆಳೆದು ಪ್ರವರ್ಧಮಾನಕ್ಕೆ ಬಂದದ್ದು ತೀರ ಇತ್ತೀಚಿಗಷ್ಟೆ. ಇದಲ್ಲದೆ ತಾಲೂಕಿನ ಹಾರೂಗೇರಿ ಮತ್ತು ಮುಗಳಖೋಡ, ಜಮಖಂಡಿ ತಾಲೂಕಿನ ಕೊಣ್ಣೂರು, ಗೋಕಾಕ ತಾಲೂಕಿನ ಬಸಳಿಗುಂದಿ ಮೊದಲಾದ ಕಡೆಗಳಲ್ಲಿಯೂ ಕರೇಸಿದ್ಧನ ದೇವಾಲಯಗಳು ಕಂಡು ಬರುತ್ತವೆ.

'ಕರೆಸಿದ್ಧ' ಪದನಿಷ್ಪತ್ತಿ :

'ಕರೆಸಿದ್ಧೇಶ್ವರ' ಪದದ ನಿಷ್ಪತ್ತಿಯನ್ನು ಜನಪದರು ಹಲವು ರೀತಿಯಲ್ಲಿ ಸಾಧಿಸುತ್ತಾರೆ. ಅವರ ದೃಷ್ಟಿಯಲ್ಲಿ 'ಕರೆಸಿದ್ಧ', ಖರೇಸಿದ್ಧ. 'ಖರೆ' ಎಂದರೆ ಸತ್ಯ ಎಂದರ್ಥ. "ಕ್ವಾಣಗನೂರಿನ ದೈತ್ಯನನ್ನು ಸಂಹರಿಸಲು ಬೀರಪ್ಪನನ್ನು ಹೊರತು ಪಡಿಸಿ ಬೇರಾವ ಸಿದ್ಧರಿಗೂ ಸಾಧ್ಯವಾಗಲಿಲ್ಲ. ಅದಕ್ಕಾಗಿಯೇ ಆತನನ್ನು ಕರೆ (ಖರೆ)ಸಿದ್ಧನೆಂದು ಕರೆದರು. (ಅಂದರೆ ಉಳಿದವರೆಲ್ಲ ಸುಳ್ಳುಸಿದ್ಧರು). 'ಕರೆ' ಎಂಬ ವಿಶೇಷಣಕ್ಕೆ ಅನೇಕ ಅರ್ಥಗಳಿವೆ. ಅದು ನಾಮವೂ ಹೌದು; ಧಾತುವೂ ಹೌದು. ಈ ವಿಶೇಷಣವನ್ನು ದೇವರ ಮಹಿಮೆಯನ್ನು ಬಣ್ಣಿಸಲು ಪೂರಕವಾಗಿ ಅರ್ಥೈಸಲಾಗುತ್ತದೆ."[೨೪]

ಅಲಕನೂರಿನ ಬೇಡರ ಗುಂಪೊಂದು ಒಂದು ರಾತ್ರಿ ಕಳ್ಳತನಕ್ಕಾಗಿ ಕುಡಚಿಗೆ ಹೋಗಿದ್ದರು. ರೈತರೊಬ್ಬರ ತೋಟದಲ್ಲಿ ಹುಲುಸಾಗಿ ಬೆಳೆದು ನಿಂತ ಬಿಳಿಜೋಳದ ತೆನೆಗಳನ್ನು ಕೊಯ್ದು ಕಳ್ಳರು ಅವುಗಳನ್ನು ಹೊತ್ತುಕೊಂಡು ಅಲಕನೂರಿಗೆ ವಾಪಸಾಗುತ್ತಿದ್ದರು. ವಿಷಯ ತಿಳಿದ ಹೊಲದ ಮಾಲೀಕ ಮತ್ತು

ಸಂಗಡಿಗರು ಕಳ್ಳರನ್ನು ಬೆನ್ನಟ್ಟಿದರು. ಓಡುತ್ತ ಬಂದ ಕಳ್ಳರು ಕಳ್ಳತನ ಮಾಡಿದ ಬಿಳಿಜೋಳದ ತೆನೆಗಳನ್ನು ಅಲಕನೂರಿನ ಕರಿಸಿದ್ಧನ ದೇವಾಲಯದಲ್ಲಿ ಇಟ್ಟು ಬಾಗಿಲು ಹಾಕಿದರು. ಅಪಾಯದಿಂದ ಪಾರಾಗಲು ಯೋಚಿಸಿದ ಕಳ್ಳರು ಒಂದು ದಾರಿ ಹುಡುಕಿ, ದೇವರಿಗೆ ಹೀಗೆ ಸವಾಲು ಹಾಕಿದರು. 'ನೀನು ಖರೇಸಿದ್ಧನಾಗಿದ್ದರೆ ಈ ಬಿಳಿಜೋಳದ ತೆನೆಗಳನ್ನು ಕಾರಜೋಳ ತೆನೆಗಳನ್ನಾಗಿ ಮಾಡು'. ಅಷ್ಟರಲ್ಲಿ ಕಳ್ಳರು ಭೂ ಮಾಲಿಕನಿಗೆ ಸಿಕ್ಕಿಬಿದ್ದರು. ಮರುದಿನ ಊರ ಹಿರಿಯರ ಸಮ್ಮುಖದಲ್ಲಿ ವಿಚಾರಣೆ ಪ್ರಾರಂಭವಾಯಿತು. ವಿಚಾರಣೆಯ ಸಮಯದಲ್ಲಿ ಬೇಡರು ತಾವು ಬಿಳಿಜೋಳದ ತೆನೆಗಳನ್ನೇ ತಂದಿಲ್ಲವೆಂದು ವಾದಿಸಿದರು. ಬೇಕಿದ್ದರೆ ದೇವಾಲಯದ ಬಾಗಿಲನ್ನು ತೆರೆದು ಪರೀಕ್ಷಿಸಬಹುದೆಂದು ಹೇಳಿದರು. ದೇವಸ್ಥಾನದ ಬಾಗಿಲನ್ನು ತೆರೆದು ನೋಡಿದಾಗ ಬಿಳಿಜೋಳದ ತೆನೆಗಳೆಲ್ಲ ಕಾರಜೋಳದ ತೆನೆಗಳಾಗಿದ್ದವು. ಕಳ್ಳರು ಅಪಾಯದಿಂದ ಪಾರಾದರು. ಆಗ ಅಲಕನೂರಿನ ಬೇಡರು ಬೀರಸಿದ್ಧನ ಮಹಿಮೆಗೆ ತಲೆಬಾಗಿ, ಅಂದಿನಿಂದ ಆತನನ್ನು 'ಖರೇಸಿದ್ಧ'ನೆಂದು ಒಪ್ಪಿಕೊಂಡು ಪೂಜಿಸಿದ ಕಥೆಯನ್ನು ಅಲಕನೂರಿನ ಮತ್ತು ಸುತ್ತ-ಮುತ್ತಲಿನ ಭಕ್ತರು ರಸವತ್ತಾಗಿ ಹೇಳುತ್ತಾರೆ.

ಕರೆಸಿದ್ಧ ಒಂದು ಸಮಾಸಪದ. ಕರಿಯ ಸಿದ್ಧ=ಕರಿಸಿದ್ಧ, ಕರೆಸಿದ್ಧ. 'ಕರೆ' ಎಂಬ ವಿಶೇಷಣ ವರ್ಣಸೂಚಕವಾದುದು. ಕರೆಸಿದ್ಧನ ದೇವಸ್ಥಾನದಲ್ಲಿ ನೀಲೇಶ್ವರನ ಭಾವಚಿತ್ರ ಬಿಡಿಸಿ, ಆತನೇ ಕರೆಸಿದ್ಧನೆಂದು ಸೂಚಿಸಲಾಗಿದೆ.

ಕರಿಸಿದ್ಧನ ಪತ್ರಿಕೌಲು :

ಕರೀದೇವರ ಕೌಲು (ಒಪ್ಪಂದ/ಕರಾರು) ಮೇಲೆ ಈ ಭಾಗದ ಭಕ್ತರಿಗೆ ಅಪಾರ ನಂಬಿಕೆ. ಅದು ಸಾಕ್ಷಾತ ದೈವವಾಣಿ. ಅದು ಎಂದಿಗೂ ಸುಳ್ಳಾಗುವುದಿಲ್ಲವೆಂಬ ನಂಬಿಕೆ ಭಕ್ತರಲ್ಲಿ ಬಲವಾಗಿ ಬೇರೂರಿದೆ. ಪ್ರತಿ ದಿನ ಮುಂಜಾನೆ ಮತ್ತು ಸಾಯಂಕಾಲದ ಪೂಜೆಯಾದ ಒಂದು ತಾಸಿನ ನಂತರ ಕೌಲುಗಳು ಪ್ರಾರಂಭವಾಗುತ್ತವೆ. ಕರೇಸಿದ್ಧನಿಗೆ ನಿತ್ಯದಲ್ಲಿ ಶುದ್ಧಮಡಿಯಿಂದ ಎರಡು ಹೊತ್ತು ಪೂಜಾರಿಗಳು ಪೂಜೆ ಮಾಡಿ ದೇವರ ಮೈತುಂಬ ಕತ್ತರಿಸಿದ ಚೌಕಾಕಾರದ ಪತ್ರಿಗಳನ್ನು ಅಂಟಿಸುವರು. ದೇವಸ್ಥಾನದ ಉಸ್ತುವಾರಿ ಹೊತ್ತ ಕಂಟಿಕಾರನ ಮನೆತನದ ನಾಗಪ್ಪ ಎಂಬುವರು ಕೌಲಿನ ಫಲಶ್ರುತಿಗಳನ್ನು ಹೇಳುವನು. ಕಂಟಿಕಾರನು ಗರ್ಭಗುಡಿಯಲ್ಲಿ ಏಕಾಗ್ರತಿಯಿಂದ ಕುಳಿತುಕೊಂಡು ದೇವರ ಮೈ ಮೇಲಿನ ಪತ್ರಿಗಳು ನೆಲಕ್ಕುರುಳಿದ ಆಧಾರದ ಮೇಲಿಂದ ಕೌಲಿನ ಶುಭಾಶುಭ ಫಲಗಳನ್ನು ಹೇಳುವನು. ಪ್ರತಿ ಸಮಯದಲ್ಲೂ ಸುಮಾರು ೨೦-೩೦ ಜನರು ಜಾತಿಭೇದವಿಲ್ಲದೆ ಕೌಲು ಕೇಳಲು ಸುಖನಾಸಿಯಲ್ಲಿ ಉಪಸ್ಥಿತರಿರುವರು.

ಕೌಲು ಕೇಳಲು ಸುತ್ತ-ಮುತ್ತಲಿನ ಪರಿಸರದವರು ಮಾತ್ರವಲ್ಲದೆ ನೇರೆಯ ಮಹಾರಾಷ್ಟ್ರ, ಕೊಂಕಣ, ಆಂಧ್ರಪ್ರದೇಶ ಮುಂತಾದ ಪ್ರದೇಶಗಳಿಂದ ಜನರೂ ಬರುತ್ತಾರೆ. ಭಕ್ತರು ಸಣ್ಣ-ಸಣ್ಣ ವಿಷಯಗಳಿಂದ ಪ್ರಮುಖ ವಿಷಯಗಳವರೆಗೂ ಕೌಲು ಕಟ್ಟುತ್ತಾರೆ. ಕೆಲವರಂತು ಕೌಲು ಕೇಳದೆ ಯಾವ ಕೆಲಸಗಳನ್ನು ಮಾಡುವುದಿಲ್ಲ. ಅಷ್ಟು ಭರವಸೆ ಕರಿಸಿದ್ಧನ ಕೌಲಿನ ಮೇಲೆ. ದವಾಖಾನೆಗೆ ಹೋಗುವುದಿರಲಿ, ರಾಸಿ ಮಾಡುವುದಿರಲಿ, ಕಬ್ಬು ಗಾಣ ಮಾಡುವುದಿರಲಿ, ದನಕರುಗಳನ್ನು ಕೊಂಡುಕೊಳ್ಳುವುದಿರಲಿ, ಮದುವೆ ನಿಶ್ಚಿತಾರ್ಥ ಮಾಡುವುದಿರಲಿ, ಮಕ್ಕಳ ವಿದ್ಯಾಭ್ಯಾಸದ ಕುರಿತಾಗಿರಲಿ ಏನೇ ಕೆಲಸವಿದ್ದರೂ ಕರೇಸಿದ್ಧನ ಕೌಲು

ಆದ ಹಾಗೆಯೇ ಕೆಲಸ ಮಾಡುವರು. ದೇವರ ಕೌಲು ಬಲ ಆಯಿತೆಂದರೆ ತೀರತು. ಆ ಕೇಲಸ ಆಗಲೇಬೇಕು. ಅದಕ್ಕೆ ಎಷ್ಟೇ ವಿಘ್ನಗಳು ಎದುರಾಗಲಿ ಅವೆಲ್ಲವುಗಳನ್ನು ಕರೇಸಿದ್ಧನೇ ನಿವಾರಿಸುತ್ತಾನೆ. ಇಲ್ಲಿಯವರೆಗ ಕರೇಸಿದ್ಧನ ಕೌಲು ಸುಳ್ಳಾದದ್ದೇ ಇಲ್ಲವೆಂದು ಜನ ಮಾತನಾಡುತ್ತಾರೆ.

ಕೊಂಕಣದ ಕುರುಬರು ಮಳೆಗಾಲದಲ್ಲಿ ತಮ್ಮ ಕುರಿಗಳನ್ನು ಕೆಳನಾಡಿಗೆ ತರುತ್ತಾರೆ. ತಾವು ತಮ್ಮ ಹಿಂಡುಗಳನ್ನು ಯಾವ ಕಡೆಗೆ ಕರೆದೊಯ್ಯಬೇಕೆಂದು ಅವರು ಕರೇಸಿದ್ಧನ ಕೌಲಿನಿಂದಲೇ ನಿರ್ಧರಿಸುವರು. ತಮ್ಮ ಕುರಿಗಳಿಗೆ ರೋಗಗಳು ಬಂದು ಸಾಯುತ್ತಿದ್ದರೆ ದೇವರಿಗೆ ಹರಕೆ ಬೇಡಿಕೊಳ್ಳುವರು. ಕಾಯುತ್ತೆನೆಂದು ದೇವರು ಕೌಲು ಕೊಟ್ಟರೆ ತೀರಿತು. ಎಷ್ಟೇ ಕಷ್ಟ ಪ್ರಸಂಗ ಬಂದರು ದೇವರು ನಮ್ಮನ್ನು ಕಾಯ್ದೇ ಕಾಯುತ್ತಾನೆ ಎನ್ನುವ ನಂಬಿಕೆ. ಹರಕೆ ಹೊತ್ತವರು ದೇವರಿಗೆ ಬೇಡಿಕೊಂಡಷ್ಟು ಹರಕೆಯನ್ನು ಕುರಿ, ಉಣ್ಣೆ, ಬಂಗಾರ, ಬೆಳ್ಳಿ, ಹಣ ರೂಪದಲ್ಲಿ ತಂದು ದೇವರಿಗೆ ಸಲ್ಲಿಸುತ್ತಾರೆ.

ಭಕ್ತರ ಮನಸ್ಸಿನ ವಿಚಾರದ ಕುರಿತು ದೇವರ ಕೌಲು ಶುಭಾಶುಭಗಳನ್ನು ಹೇಳಲು ವಿಳಂಬವಾದಲ್ಲಿ ಅಥವಾ ಕೌಲು ತುಂಬಿಕೊಂಡಲ್ಲಿ (ಯಾವ ಶುಭಾಶುಭಗಳನ್ನು ಕೌಲು ನೀಡದಿದ್ದಲ್ಲಿ) ಭಕ್ತರು ಇಂತಿಷ್ಟು ಕುರಿ/ಬಂಗಾರ/ಬೆಳ್ಳಿ/ಹಣ/ಧಾನ್ಯ ಇತ್ಯಾದಿಗಳನ್ನು ಒಪ್ಪಿಸುವುದಾಗಿ ಬೇಡಿಕೊಂಡು ಕೌಲನ್ನು ನೀಡುವಂತೆ ದೇವರಿಗೆ ಬೇಡಿಕೊಳ್ಳುವರು. ಇದಕ್ಕೆ ಒಜ್ಜೆ ಕೌಲೆಂದು ಕರೆಯುತ್ತಾರೆ. ಕಂಟಿಕಾರನು ದೇವರು ಕೌಲು ನೀಡುವವರೆಗೆ ಈ ಒಜ್ಜೆ ಪ್ರಮಾಣವನ್ನು ನಿರ್ಧರಿಸುತ್ತ ಮತ್ತು ಹೆಚ್ಚಿಸುತ್ತಾ ಹೋಗುತ್ತಾನೆ. ಕೌಲು ಕೊನೆಗೊಂಡ ನಂತರ ಕಂಟಿಕಾರ ಹೇಳಿದ ಒಜ್ಜೆಯ ಪ್ರಮಾಣವನ್ನು ಆಧರಿಸಿ ಭಕ್ತರು ತಮ್ಮ ಒಜ್ಜೆಯ ವಸ್ತು/ಹಣವನ್ನು ದೇವಸ್ಥಾನದ ಭಂಡಾರಕ್ಕೆ ಸಲ್ಲಿಸುತ್ತಾರೆ. ಒಜ್ಜೆ ತೀರಿಸಿದ ಭಕ್ತರ ಬೇಡಿಕೆಯನ್ನು ಪೂರೈಸುವುದು ದೇವರಿಗೆ ಬಿಟ್ಟದ್ದು.

ಆರಂಭದಲ್ಲಿ ಕೌಲು ಕೇಳಲು ಭಕ್ತರು ಖುದ್ದಾಗಿ ದೇವಸ್ಥಾನಕ್ಕೆ ಆಗಮಿಸಬೇಕಾಗಿತ್ತು. ಆದರೆ ಇಂದು ಆ ಪದ್ಧತಿಯಲ್ಲಿ ಸ್ವಲ್ಪ ರಿಯಾಯಿತಿ ನೀಡಲಾಗಿದೆ. ಒತ್ತಡದ ಕಾರ್ಯದಲ್ಲಿ ದೇವಸ್ಥಾನಕ್ಕೆ ಬರಲು ಅನಾನುಕೂಲವಿದ್ದವರು, ದೂರ-ದೂರದ ಸ್ಥಳದಲ್ಲಿರುವ ಭಕ್ತರು, ಕೌಲು ಸಮಯದಲ್ಲಿ ಕಂಟಿಕಾರನನ್ನು ಮೊಬೈಲ್ ಫೋನದಲ್ಲಿ ಸಂಪರ್ಕಿಸಿ ತಮ್ಮ ಶುಭಾಶುಭಗಳ ಫಲಶ್ರುತಿಯನ್ನು ತಿಳಿದುಕೊಳ್ಳಲು ಅವಕಾಶವಿದೆ. ಭಕ್ತರು ತಮ್ಮ ಕಾರ್ಯ ಯಶಸ್ವಿಯಾದ ನಂತರ ದೇವಾಲಯಕ್ಕೆ ಆಗಮಿಸಿ ಕಾಣಿಕೆ ನೀಡುವರು. ಹರಕೆ ಮತ್ತು ಒಜ್ಜೆ ಕೌಲಿನಿಂದ ಬರುವ ಆದಾಯವನ್ನು ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೊಗಿಸುವರು.

ಕೌಲು ಕೇಳುವ ಪದ್ಧತಿಯನ್ನು ಪ್ರಜ್ಞಾವಂತರು ಮೂಢನಂಬಿಕೆಯ ಕುರುಹೆಂದು ಕುಟುಕುತ್ತಾರೆ. ಅದು ಭಕ್ತರ ಅಜ್ಞಾನದ ನಿದರ್ಶನವೆಂದು ಜರಿಯುತ್ತಾರೆ. ಆದರೆ ಶ್ರದ್ಧಾಭಕ್ತಿಯಿಂದ ಕೂಡಿರುವ ಭಕ್ತ ವೃಂದಕ್ಕೆ ಅದು, ತಮ್ಮನ್ನು ಉದ್ಧಾರ ಮಾಡುವ ದೇವರು ನಿರ್ಧರಿಸುವ ಭವಿಷ್ಯವಾಗಿದೆ.

ಜಾತ್ರೆ-ಉತ್ಸವಗಳು :

ಯುಗಾದಿಯ ಮತ್ತು ಮಹಾನವಮಿಗಳಂದು ಕರಿಸಿದ್ಧೇಶ್ವರನ ಮಹಾ ಉತ್ಸವ ಜರಗುವುದು. ದೀಪಾವಳಿ, ಭಾರತ ಹುಣ್ಣಿಮೆ ಸಂದರ್ಭಗಳಲ್ಲಿ ವಿಶೇಷ ಉತ್ಸವಗಳು ಜರಗುತ್ತವೆ. ವರ್ಷದಲ್ಲಿ ನಡೆಯುವ

ನಾಲ್ಕು ಉತ್ಸವಗಳಲ್ಲಿ ದೇವರ ಪಲ್ಲಕ್ಕಿ ದೇವಸ್ಥಾನದ ಸುತ್ತಲು ಸುತ್ತುವುದು. ಮಹಾನವಮಿ ಅಮವಾಸ್ಯೆಯಂದು ಪೂಜಾರಿ ದೇವಾಲಯದಲ್ಲಿ ಘಟಸ್ಥಾಪಿಸಿ 'ಮುಳ್ಳಾವಿಗೆ' ಮೆಟ್ಟುತ್ತಾನೆ. ಅವನ ವಂಶದ ಗಂಡುಮಕ್ಕಳು ಪಾದರಕ್ಷೆ ಮೆಟ್ಟುವುದಿಲ್ಲ.

ಮಹಾನವಮಿ ಹಬ್ಬವನ್ನು ಕರೇಸಿದ್ಧನ ಆಲಯದಲ್ಲಿ ವಿಶೇಷವಾಗಿ ಆಚರಿಸಲಾಗುತ್ತದೆ. ಅಂದು ಕರೇಸಿದ್ಧೇಶ್ವರ ಪಲ್ಲಕ್ಕಿ ಏರಿ ಹೊರಬರುತ್ತಾನೆ. ಹುನ್ನೂರಿನ ಬೀರಪ್ಪ, ಹುಲಜಂತಿಯ ಮಾಳಿಂಗರಾಯ ಮತ್ತು ಕೊಣ್ಣೂರಿನ ಕರೇಸಿದ್ಧೇಶ್ವರನ ಡೊಳ್ಳು, ತಾಳ, ಸತ್ತಿಗೆ ನಿಶಾನೆಗಳೊಂದಿಗೆ ಭಕ್ತರು ಇಲ್ಲಿಗೆ ಆಗಮಿಸುತ್ತವೆ. ಜಾತ್ರೆಗೆ ಬಂದ ಸಹಸ್ರಾರು ಭಕ್ತರಿಗೆಲ್ಲ ಜಿಲೇಬಿ, ಬುಂದೆ, ಶಿರಾ ಮುಂತಾದ ಸಿಹಿ ಭಕ್ಷ್ಯಗಳ ಅನ್ನ ದಾಸೋಹ ಏರ್ಪಡಿಸಲಾಗಿರುತ್ತದೆ.

"ದೀಪಾವಳಿಯ ಬ್ರಹ್ಮನ ಹಬ್ಬದಂದು ದೇವರಿಗೆ ವಿಶೇಷ ಪೂಜೆ ಸಲ್ಲುವುದು. ಕರಿಸಿದ್ಧನ ತಂದೆ ಎಂದು ನಂಬಲಾಗಿರುವ ಬ್ರಹ್ಮದೇವರ ದೇವಾಲಯ ಅಲಕನೂರಿನ ಒಡಕಿಯಲ್ಲಿದೆ. ಅಲ್ಲಿಯೂ ಪೂಜೆ ನೆರವೇರುವುದು. ಚತುರ್ದಶಿ ದಿನ ಸತ್ತಿಗೆ, ಕಂಬಳಿ, ನಿಶಾನೆ, ಡೊಳ್ಳುಗಳೊಂದಿಗೆ ದೇವರ ಪಲ್ಲಕ್ಕಿ ಗುಡಿ ಸುತ್ತುವುದು. ಕೈಪಟ್ಟು, ದಟ್ಟಿ ಕುಣಿತ ಲಾಗ ಹಾಕುವ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ಹನ್ನೆರಡು ವರ್ಷಗಳಿಗೊಮ್ಮೆ ಹನ್ನೆರಡು ಊರುಗಳ ದೇವರು ಕರೆಸಿದ್ಧನ ಭೇಟಿಗೆ ಬರುತ್ತವೆ."[೨೫]

ಭಾರತ ಹುಣ್ಣಿಮೆಯಂದು ಜರಗುವ ಕರಿಸಿದ್ಧನ ಉತ್ಸವವು ಬಹಳ ವಿಶೇಷವಾಗಿ ನಡೆಯುವುದು. ಅಂದು ರಾತ್ರಿ ಹತ್ತು ಗಂಟೆಗೆ ಆನೆ-ಕುದುರೆ-ಸತ್ತಿಗೆ-ನಿಶಾನೆ-ಲಾಂಛನಗಳೊಂದಿಗೆ ಕರಿಸಿದ್ಧ ಪಲ್ಲಕ್ಕಿ ಏರಿ ದೇವಸ್ಥಾನದಿಂದ ಹೊರಬರುವನು. ಊರ ಹೊರವಲಯದಲ್ಲಿರುವ ಆಲದ ಕಟ್ಟೆಯವರೆಗೆ ಡೊಳ್ಳುವಾದ್ಯಗಳೊಂದಿಗೆ ಆಗಮಿಸುವ ದೇವರು ಆಲದ ಕಟ್ಟೆಯ ಮೇಲೆ ಕೆಲಹೊತ್ತು ವಿಶ್ರಮಿಸುವನು. ಮಧ್ಯರಾತ್ರಿಯ ನಂತರ ಮತ್ತೆ ಮೂಲಸ್ಥಳವಾದ ದೇವಸ್ಥಾನಕ್ಕೆ ಮರಳುವನು. ಆ ಸಮಯದಲ್ಲಿ 'ಹರಿಮರಿ' ಅರ್ಪಣೆ ನಡೆಯುವುದು. ಅಂದರೆ ಪಲ್ಲಕ್ಕಿ ಏರಿ ದೇವಸ್ಥಾನವನ್ನು ಪ್ರವೇಶಿಸುವ ಸಮಯದಲ್ಲಿ ಪ್ರವೇಶದ್ವಾರದಲ್ಲಿ ಪೂಜಾರಿಯೊಬ್ಬ 'ಕುರಿಮರಿ'ಯೊಂದನ್ನು ಕತ್ತರಿಸುತ್ತಾನೆ. ಆದರೆ ಶುದ್ಧ ಸಸ್ಯಾಹಾರಿಯಾದ ಕರಿಸಿದ್ಧೇಶ್ವರನಿಗೆ ಬೇಟೆಯ ಬೋನ ನಿಷಿದ್ಧ.

ಕರಿಸಿದ್ಧೇಶ್ವರನ ಜಾತ್ರೆ-ಉತ್ಸವಗಳಿಗಾಗಿ ಯಾರ ಕಡೆಯಿಂದಲೂ ಒತ್ತಾಯವಾಗಿ ಪಟ್ಟಿ (ಕಾಣಿಕೆ) ಸಂಗ್ರಹಿಸುವುದಿಲ್ಲ. ಭಕ್ತರು ಸ್ವಇಚ್ಚೆಯಿಂದ ಭಂಡಾರಕ್ಕೆ ಸಲ್ಲಿಸಿದ ಕಾಣಿಕೆ ಮತ್ತು ಹರಕೆಯ ಹಣದಿಂದಲೇ ಎಲ್ಲ ವೆಚ್ಚವನ್ನು ಸರಿದೂಗಿಸಲಾಗುವುದು.

ಸಾಂಸ್ಕೃತಿಕ ಕಲೆಗಳ ಸಂಗಮಸ್ಥಾನ :

ಅಲಕನೂರಿನ ಕರಿಸಿದ್ಧೇಶ್ವರನ ಆಲಯವು ಬುಡಕಟ್ಟು ಜನಾಂಗವೊಂದರ ಸಾಂಸ್ಕೃತಿಕ ಕಲೆಗಳ ಸಂಗಮಸ್ಥಾನ. ಹಾಲುಮತದ ಪರಂಪರಾಗತ ಕಲೆಗಳಾದ ಡೊಳ್ಳಿನ ಹಾಡು, ಡೊಳ್ಳು ಕುಣಿತ, ದಟ್ಟಿ ಕುಣಿತ, ಕೈಪಟ್ಟುವಾದನ, ಅಲಗ ಹಾಯುವುದು ಮುಂತಾದ ಕಲೆಗಳು ಈ ದೇವಾಲಯದಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿವೆ. ಅಲಕನೂರು ಡೊಳ್ಳಿನ ಮೇಳಗಳ ತವರು ಮನೆಯಾಗಿದ್ದು ಇಲ್ಲಿ ೧೦-೧೨ ಹಾಡುವ

ಮೇಳಗಳಿವೆ. ಸುತ್ತ-ಮುತ್ತಲಿನ ಗ್ರಾಮಗಳಲ್ಲಿರುವ ದೇವಸ್ಥಾನದ ಕಮೀಟಿಯವರು ಬಟ್ಟ (ಭೇಟ್ಟಿ) ಕೊಡುವುದು, ಅಂದರೆ ಎಲೆ ಅಡಿಕೆ ನೀಡಿ ಹಾಡುಗಾರಿಕೆಗೆ ನೀಡಿದ ಆಹ್ವಾನ ಮೇರೆಗೆ ಈ ಮೇಳದವರು ಭಕ್ತರ ಮನೆಗಳಿಗೆ ಮತ್ತು ಪರಊರುಗಳ ಜಾತ್ರೆ-ಉತ್ಸವಗಳಲ್ಲಿ ಹಾಡಲು ಹೋಗುತ್ತಾರೆ.

ಈ ಮೇಳದವರು ಕಂಟಿಕಾರನ ಅನುಮತಿ ಇಲ್ಲದೆ ಎಲ್ಲಿಯೂ ಡೊಳ್ಳಿನ ಹಾಡು ಹಾಡಲು ಹೋಗುವುದಿಲ್ಲ. ಭಕ್ತರ ಆಹ್ವಾನದ ಮೇರೆಗೆ ಕಂಟಿಕಾರನು ಸರತಿಯಂತೆ ಹಾಡುವ ಮೇಳಗಳಿಗೆ ಅವಕಾಶ ನೀಡುತ್ತಾನೆ. ಸಂಘಟಕರು ಕೊಡುವ ಹಣವನ್ನು ಮೇಳದವರು ಕಂಟಿಕಾರನಿಗೆ ಒಪ್ಪಿಸುವರು. ಅವನು ಅದರಲ್ಲಿಯ ಅರ್ಧದಷ್ಟು ಮೊತ್ತವನ್ನು ದೇವರ ಭಂಡಾರಕ್ಕೆ ಸೇರಿಸಿಕೊಂಡು, ಉಳಿದ ಮೊತ್ತವನ್ನು ಡೊಳ್ಳಿನ ಹಾಡು ಮೇಳಕ್ಕೆ ಕೊಡುವನು. ಅದನ್ನೇ ಅವರು ಮಹಾಪ್ರಸಾದವೆಂದು ಸ್ವೀಕರಿಸುವರು. ದೇವಸ್ಥಾನದ ಆಶ್ರಯದಲ್ಲಿ ಹಾಲುಮತದ ಜನಪದ ಕಲೆಗಳು ಸುಭದ್ರವಾಗಿದ್ದು ಆಧುನಿಕ ಕಲೆಗಳ ಅಬ್ಬರದ ಮಧ್ಯದಲ್ಲಿಯೂ ಭದ್ರ ನೆಲೆಪಡೆದುಕೊಂಡಿವೆ.

ಉದ್ಯೋಗ ಸೇವಾ ಕೇಂದ್ರ :

ಅಲಕನೂರಿನ ಕರೇಸಿದ್ಧೇಶ್ವರನ ದೇವಸ್ಥಾನವು ನೂರಾರು ಜನರಿಗೆ ಉದ್ಯೋಗ ಒದಗಿಸುವ 'ಕೃಷಿ ಕಾರ್ಮಿಕರ ಉದ್ಯೋಗ ವಿನಿಮಯದ ಕೇಂದ್ರ'ವಾಗಿದೆ. ದೇವಸ್ಥಾನದ ತೋಟಗಳ ನಿರ್ವಹಣೆ, ದನ-ಕರುಗಳ ಪಾಲನೆ-ಪೋಷಣೆ, ದೇವಾಲಯದ ಸೇವೆಯಲ್ಲಿ ನೂರಾರು ಆಳುಮಕ್ಕಳು ದಿನನಿತ್ಯ ಕಾಯಕದಲ್ಲಿ ನಿರತರಾಗಿರುತ್ತಾರೆ. ಅವರೆಲ್ಲರಿಗೂ ಈ ಕಾಯಕ ಜೀವನ ನಿರ್ವಹಣೆಯ ಆಧಾರವಾಗಿದೆ. ಅವರೆಲ್ಲರಿಗೂ ದೇವಸ್ಥಾನದ ಉಸ್ತುವಾರಿ ಅಧಿಕಾರಿ ಕಂಟಿಕಾರ ಯೋಗ್ಯತಾನುಸಾರವಾಗಿ ವೇತನ ಕೊಡುತ್ತಾನೆ. ಯಾವ ಕಾರ್ಮಿಕರು ಬಿಟ್ಟಿ (ಪುಕ್ಕಟೆ) ಕಾಯಕ ಮಾಡಬೇಕಾಗಿಲ್ಲ. ದೇವಸ್ಥಾನಕ್ಕೆ ಹರಕೆ, ಕಾಣಿಕೆ ಮತ್ತು ಭೂಮಿ ಫಸಲಿನ ಉತ್ಪನ್ನಗಳಿಂದ ಸಾಕಷ್ಟು ಆದಾಯವು ಭಂಡಾರಕ್ಕೆ ಬಂದು ಸಂದಾಯವಾಗುತ್ತದೆ.

ಈ ಸಂಪತ್ತನ್ನು ದೇವಾಲಯದ ಜಾತ್ರೆ-ಉತ್ಸವಗಳಿಗೆ, ದೇವಾಲಯದ ಆಧುನೀಕರಣ(ಪುನರುಜ್ಜೀನ)ಕ್ಕೆ, ದೇವಾಲಯದ ತೋಟಗಳನ್ನು ಅಭಿವೃದ್ಧಿ ಪಡಿಸಲು, ಹೊಸ ಜಮೀನುಗಳನ್ನು ಖರೀದಿಸಲು ಹೀಗೆ ಅನೇಕ ಕಾರ್ಯಗಳಿಗೆ ಬಳಸಲಾಗುತ್ತದೆ. ದೇವಸ್ಥಾನದ ಭಂಡಾರಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತವಾದ ಲೆಕ್ಕಪತ್ರಗಳನ್ನು ಇಡುವ ಪದ್ಧತಿ ಇಲ್ಲದಿದ್ದರೂ ಕೂಡ ಉಸ್ತುವಾರಿ ಅಧಿಕಾರಿಯಾದ ಕಂಟಿಕಾರನು ಮಾಡುವ ಹಣಕಾಸಿನ ನಿರ್ವಹಣೆ ಮೇಲೆ ಎಲ್ಲರಿಗೂ ಎಲ್ಲಿಲ್ಲದ ವಿಶ್ವಾಸ.

ಸಮನ್ವಯದ ಸೋಮಪ್ರಭೆ :

ಕರೇಸಿದ್ಧೇಶ್ವರನ ದೇವಸ್ಥಾನವು ಹಾಲುಮತ ದೈವದ ಪ್ರತೀಕವಾಗಿ ಅಸ್ತಿತ್ವದಲ್ಲಿದ್ದರು ಕೂಡ ಇದೊಂದು ಜಾತ್ಯಾತೀತ ನೆಲೆಯಾಗಿದೆ. ಇಲ್ಲಿ ಜಾತಿ, ಮತ, ಲಿಂಗ ಭೇದವಿಲ್ಲ. ಇಲ್ಲಿಗೆ ಬರುವವರೆಲ್ಲರೂ ಕರೇಸಿದ್ಧೇಶ್ವರನ ಭಕ್ತರೇ. ಯಾವುದೇ ಭೇದಭಾವವಿಲ್ಲದೆ ದೇವರ ದರ್ಶನ ಪಡೆಯಬಹುದು. ಹಾಲುಮತದವರಿಂದ ಮೊದಲುಗೊಂಡು ಎಲ್ಲ ಮತ-ಪಂಥಗಳ ಜನರು 'ಕರಿದೇವರ'ಲ್ಲಿ ಅಖಂಡ

ನಂಬಿಗೆಯನ್ನು ಮುಂದುವರೆಸಿಕೊಂಡು ಬಂದಿರುವರು. ಒಂದರ್ಥದಲ್ಲಿ ಕರೇಸಿದ್ಧೇಶ್ವರನ ದೇವಾಲಯ ಸರ್ವಧರ್ಮ, ಸಮನ್ವಯದ ಮಹಾಲಯವಾಗಿದೆ.

ಕರಿಸಿದ್ಧನ ಭಂಡಾರ :

ಕರೇಸಿದ್ಧೇಶ್ವರನ ದೇವಸ್ಥಾನದಲ್ಲಿ ಅರಿಷಿಣ ಪುಡಿಯಿಂದ ಮಾಡಿದ ಭಂಡಾರವು ಸದಾ ರಾರಾಜಿಸುತ್ತದೆ. ಗುಡಿಗೆ ಬರುವ ಪ್ರತಿಯೊಬ್ಬ ಭಕ್ತರ ಹಣೆಯೂ ಭಂಡಾರದಿಂದ ಅಲಂಕೃತಗೊಳ್ಳುವುದು. ಗುಡಿಯಿಂದ ಹೋಗುವಾಗ ಪ್ರತಿಯೊಬ್ಬರು ತಮ್ಮ ಪದರಿನಲ್ಲಿ ಭಂಡಾರ ಕಟ್ಟಿಕೊಂಡೇ ಮುಂದಡಿಯಿಡುವರು. ಮನೆಗೆ ಹೋದ ಮೇಲೆ ಈ ಭಂಡಾರವನ್ನು ಮನೆಯಲ್ಲಿರು ದವಸಧಾನ್ಯ, ಆಡು, ಕುರಿ, ಎತ್ತು, ಆಕಳುಗಳ ಮೇಲೆ ಪ್ರೋಕ್ಷಿಸುವರು. ಭಂಡಾರಮಯವಾದ ವಸ್ತುಗಳೆಲ್ಲವು ಕರಿಸಿದ್ಧನ ಸಂರಕ್ಷಣೆಗೆ ಒಳಪಟ್ಟುವುಗಳೆಂಬ ನಂಬಿಕೆ ಭಕ್ತರದ್ದು. ಭಂಡಾರ ನಿಷ್ಪಕ್ಷಪಾತ ನಿರ್ಣಯದ ಸಂಕೇತವು ಹೌದು.

ಅಪರಾದಿಯೊಬ್ಬ ಸುಪ್ರಿಂ ಕೋರ್ಟನಲ್ಲಿ ಭಗವದ್ಗೀತೆಯನ್ನು ಹಿಡಿದು ಸುಳ್ಳ ಪ್ರಮಾಣ ಮಾಡಿ ತಾನೊಬ್ಬ ನಿರಪರಾಧಯೆಂದು ಸಿದ್ಧಿಸಿ ಪಾರಾಗಿ ಬರಬಹುದು. ಆದರೆ ಯಾವೊಬ್ಬ ಅಪರಾಧಿಯು ತನ್ನ ತಪ್ಪನ್ನು ಮುಚ್ಚಿಟ್ಟುಕೊಂಡು ಕರಿಸಿದ್ಧನ ಭಂಡಾರದ ಮೇಲೆ ಪ್ರಮಾಣ ಮಾಡಿ ತನ್ನ ಮೇಲಿನ ಆರೋಪವನ್ನು ಸುಲಭವಾಗಿ ತಳ್ಳಿ ಹಾಕಲು ಸಾಧ್ಯವಿಲ್ಲ. ಭಂಡಾರ ಸಾಕ್ಷಾತ್ ದೈವಿ ಸ್ವರೂಪದ್ದಾಗಿದ್ದು ಅದಕ್ಕೆ ತಪ್ಪು ನುಡಿದಲ್ಲಿ ಕ್ಷಮೆಯೇ ಇಲ್ಲವೆಂಬ ಭಾವನೆ ಇಂದಿಗೂ ಈ ಪರಿಸರದ ಜನರ ಮನಸ್ಸಿನಲ್ಲಿ ಗಾಢವಾಗಿ ಬೇರೂರಿರುವುದನ್ನು ಕಾಣುತ್ತೇವೆ. ಅಷ್ಟರ ಮಟ್ಟಿಗೆ ಬಂಡಾರ ತನ್ನ ಮಹಿಮೆಯನ್ನು ಜನರ ಮನಸ್ಸಿನಾಳದಲ್ಲಿ ನಿಷ್ಪಕ್ಷಪಾತ ನಿರ್ಣಯದ ಸ್ಥಾನವನ್ನು ಪಡೆದುಕೊಂಡಿದೆ. ಸಾಕ್ಷಾತ್ ಕರೇಸಿದ್ಧನೇ ಭಂಡಾರ ಸ್ವರೂಪದಲ್ಲಿಯೇ ಇರುವನೆಂದು ಜನರ ನಂಬಿಕೆ.

ಅಲಕನೂರಿನ ಕರೇಸಿದ್ಧ, ಬೀರಪ್ಪನ ಅವತಾರವೆಂದು, ಶಿವನ ಅಂಶವುಳ್ಳ ವೀರನೆಂದು, ಹಾಲುಮತದ ಮಹಾ ನಾಯಕನೆಂದು ಈ ಭಾಗದಲ್ಲಿ ಇಂದಿಗೂ ಅಪಾರವಾದ ನಂಬಿಕೆಯಿದೆ. ಕರೇಸಿದ್ಧನ ಬಗ್ಗೆ ಇರುವ ಐತಿಹ್ಯ, ದಂತಕಥೆ, ಪುರಾಣಗಳ ವಿವರಗಳನ್ನು ಗಮನಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಕರೇಸಿದ್ಧನು ಅತ್ಯಂತ ವೀರನಾದ ಧೈರ್ಯಶಾಲಿ ಪುರುಷನಾಗಿದ್ದನು. ಜನರಿಗೆ ಬಂದೊದಗಿದ ಕಷ್ಟ-ನಷ್ಟಗಳನ್ನು, ರೋಗ-ಪೀಡನೆಗಳನ್ನು ಪರಿಹರಿಸಿದನು. ಎಲ್ಲಾ ಜನ-ಜಾತಿಗಳ ಭಾವುಕ ಭಕ್ತರಿಗೆ ಆರಾಧ್ಯ ದೈವತ್ವವಾದನು. ಆದರೂ ಇಲ್ಲಿ ಒಂದು ಚಾರಿತ್ರಿಕ ಪ್ರಶ್ನೆಯನ್ನು ಎತ್ತಲು ಅವಕಾಶವಿದೆ. ಅಲಕನೂರಿನಲ್ಲಿ ಪೂಜಿತನಾಗುವ ಕರೇಸಿದ್ಧನು ಐತಿಹಾಸಿಕ ಪುರುಷನೇ, ಇಲ್ಲವೇ ಪೌರಾಣಿಕ ಪುರುಷನೇ ಎಂಬುದು. ಐತಿಹಾಸಿಕ ಪುರುಷನಾಗಿದ್ದಲ್ಲಿ ಆತ ವೀರಗುಣದಿಂದ ಈ ಭಾಗದಲ್ಲಿ ಹಲವಾರು ಸಾಹಸದ ಕೆಲಸಗಳನ್ನು ಮಾಡಿ ಜನರಲ್ಲಿ ಧೈರ್ಯ ತುಂಬಿ ಅವರಿಂದ ಗೌರವಾದರಕ್ಕೆ ಒಳಪಟ್ಟಿದ್ದಾನೆ ಎಂಬುದು ಖಚಿತ. ಈ ಐತಿಹಾಸಿಕ ವೀರ ಪುರುಷನ ಜನನ, ಕಾಲ, ಇತಿವೃತ್ತಗಳನ್ನು ಸರಿಯಾಗಿ ಸಂಶೋಧಿಸಬೇಕಾದ ಅಗತ್ಯವಿದೆ.

೩.೨.೧.೨ ಯಲ್ಪಾರಟ್ಟಿ ಅರಣ್ಯಸಿದ್ಧೇಶ್ವರ :

ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ ರಾಯಬಾಗ ತಾಲೂಕಿನ ಪ್ರಮುಖ ಹಾಲುಮತ ದೈವಗಳಲ್ಲಿ ಒಂದು. ರಾಯಬಾಗದಿಂದ ವಾಯುವ್ಯ ದಿಕ್ಕಿಗೆ ಸುಮಾರು ೨೨ ಕೀ. ಮಿ. ಅಂತರದಲ್ಲಿ ಯಲ್ಪಾರಟ್ಟಿ ಗ್ರಾಮವಿದ್ದು, ಅಲ್ಲಿಯ ಜನಸಮುದಾಯದಲ್ಲಿ ಹಾಲುಮತ ಸಮುದಾಯದವರ ಪಾಲು ಹೆಚ್ಚಿನದು. ಇಪ್ಪತ್ತೈದು–ಮೂವತ್ತು ವರ್ಷಗಳ ಹಿಂದೆ ಸಣ್ಣ ದೇವಾಲಯವಾಗಿದ್ದ ಅರಣ್ಯಸಿದ್ಧೇಶ್ವರನ ದೇವಸ್ಥಾನ ಇಂದು ಬೃಹದ್ಾಕಾರದಲ್ಲಿ ಬೆಳೆದು ನಿಂತಿದ್ದು ತಾಲೂಕಿನ ಪ್ರಮುಖ ದೇವಾಲಯಗಳಲ್ಲಿ ಒಂದಾಗಿ ಎದ್ದು ಕಾಣುತ್ತದೆ. ಈ ದೇವಾಲಯವು ಅಮೋಘಸಿದ್ಧೇಶ್ವರನ ಸಂಪ್ರದಾಯಕ್ಕೆ ಸಂಬಂಧಿಸಿದುದಾಗಿ ತಿಳಿದು ಬರುತ್ತದೆ. ಕರ್ನಾಟಕದ ಸಾಂಸ್ಕೃತಿಕ ದೈವಗಳಲ್ಲಿ ಅಮೋಘಸಿದ್ಧನೂ ಒಬ್ಬ. ವಿಜಯಪುರದ ಸಮೀಪವಿರುವ ಅರಕೇರಿ ಈತನ ಮೂಲ ನೆಲೆ. ಈ ನೆಲೆಯ ಮೂಲಕ ಅಮೋಘಸಿದ್ಧನು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ವ್ಯಾಪಕವಾಗಿ ಆರಾಧನೆಗೊಳ್ಳುತ್ತಿದ್ದಾನೆ. ಈ ಆರಾಧನೆಯಿಂದಾಗಿ ಅಮೋಘಸಿದ್ಧನ ಶಿಷ್ಯ–ಪ್ರಶಿಷ್ಯ ಪರಂಪರೆಗಳಲ್ಲಿ ನೂರಾರು ದೈವಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಒಂದು ದೈವ ಅರಣ್ಯಸಿದ್ಧೇಶ್ವರನ ಪರಂಪರೆಯಾಗಿದೆ.

ಅಮೋಘಸಿದ್ಧನಿಗೆ ಜನ್ನವ್ವ ಎನ್ನುವ ಮಗಳಿದ್ದು ಅವಳನ್ನು ಮುಂಜಿ ಪಟ್ಟಣದ ಅರಸ ಚೌಡಲನಿಗೆ ಕೊಟ್ಟಿದ್ದು ಅವನು ತನ್ನ ದಾಯಾದಿಗಳೊಂದಿಗೆ ಜಗಳವಾಡಿ ಆ ಪ್ರದೇಶವನ್ನು ಬಿಟ್ಟು ಚಿಕ್ಕೋಡಿ ಸಮೀಪದ ಕೆರೂರ ಗ್ರಾಮಕ್ಕೆ ಬಂದರು. ಆ ದಂಪತಿಗಳಿಗೆ ಮಲಕಾರಿಸಿದ್ಧ ಮತ್ತು ಅರಣ್ಯಸಿದ್ಧ ಎಂಬ ಇಬ್ಬರು ಮಕ್ಕಳು. ತಮ್ಮ ಅರಣ್ಯಸಿದ್ಧ, ಅಣ್ಣ ಮಲಕರಿಸಿದ್ಧನೊಂದಿಗೆ ಪಶುಪಾಲನೆ ನಿಮಿತ್ಯ ಆಕಳ ಹಿಂಡಿನೊಂದಿಗೆ ರಾಯಬಾಗ ಪರಿಸರದ, ಯಲ್ಪಾರಟ್ಟಿ ದಕ್ಷಿಣದಲ್ಲಿರುವ ಅಲಕನೂರಿಗೆ ಬಂದನು. ತನ್ನ ದನಕರುಗಳಿಗೆ ನೀರು ಕುಡಿಸಲು ಕೆರೆ ಇರುವ ಸ್ಥಳವನ್ನು ಹುಡುಕುತ್ತಿರುವಾಗ ಯಾರೋ ಇವರಿಗೆ ಹಳೆ ಕೆರೆಯೊಂದು ಯಲ್ಪಾರಟ್ಟಿಯ ಹತ್ತಿರ ಇರುವುದಾಗಿ ಹೇಳುತ್ತಾರೆ. ಆ ಕೆರೆಯ ಹೆಸರು ಕರ್ಲಹೊಂಡ. ಆ ಕೆರೆಯಲ್ಲಿಯೇ ತನ್ನ ದನಗಳಿಗೆ ನೀರು ಕುಡಿಸಿ ಸುತ್ತ–ಮುತ್ತಲಿನ ಮೊರಡಿ ಪ್ರದೇಶದಲ್ಲಿ ದನಗಳನ್ನು ಮೇಯಿಸುತ್ತ ಜೊತೆಗೆ ಅನೇಕ ಪವಾಡಗಳನ್ನು ಮೆರೆದು ಒಬ್ಬ ಭಕ್ತಿ ಪುರುಷನಾಗಿ ಮೆರೆದ ಅರಣ್ಯಸಿದ್ಧೇಶ್ವರ ಅದೇ ಕೆರೆಯ ಸಮೀಪದಲ್ಲಿಯೇ ಐಕ್ಯನಾದ ಬಗ್ಗೆ ಅನೇಕ ಐತಿಹ್ಯಗಳನ್ನು ಇಲ್ಲಿಯ ಜನ ಸೇರಿಸುತ್ತಾರೆ.

ಅರಣ್ಯಸಿದ್ಧೇಶ್ವರ ಜನಪದ ಕಾವ್ಯದ ಸಂಕ್ಷೇಪ್ತ ಕಥಾಸಾರ :

ಅರಣ್ಯಸಿದ್ದೇಶ್ವರನ ಕುರಿತು ಅನೇಕ ಸಂಗತಿಗಳು ಮೌಖಿಕ ಮೂಲದಿಂದ ತಿಳಿದು ಬರುತ್ತದೆ. ಇಲ್ಲಿ ನಮಗೆ ನಾಲ್ಕೈದು ಡೊಳ್ಳಿನ ಹಾಡುಗಳ ಮೇಳಗಳಿದ್ದು ಅವರು ನಮಗೆ ಅರಣ್ಯಸಿದ್ದೇಶ್ವರನ ಕುರಿತು ಕಥನಗಳನ್ನು ಕಥಿಸುತ್ತಾರೆ. ಅದರಲ್ಲಿ ಸಿದ್ರಾಮಪ್ಪ ಯಲ್ಲಪ್ಪ ಲಾಳಿ ಎಂಬ ಹಿರಿಯ ಡೊಳ್ಳಿನ ಹಾಡಿನ ಕಲಾವಿದ ಹೇಳುವ ಹಾಗೆ, ಅರಣ್ಯಸಿದ್ಧೇಶ್ವರನ ಕುರಿತಾದ ಒಂದು ಜನಪದ ಮಹಾಕಾವ್ಯವಿದ್ದು, ಅದನ್ನು ಆತ ನಿರಂತರವಾಗಿ ಸುಮಾರು ಎರಡು ರಾತ್ರಿಗಳವರೆಗೆ ಹಾಡುವುದಾಗಿ ತಿಳಿಸುತ್ತಾನೆ. ಆ ಡೊಳ್ಳಿನ ಹಾಡುಗಳ ಮೂಲಕ, ಜನಪದ ಮಹಾಕಾವ್ಯದಲ್ಲಿರುವ ಅರಣ್ಯಸಿದ್ದೇಶ್ವರನ ಇತಿವೃತವನ್ನು ಆ ಕಲಾವಿದ ಕಥಿಸುತ್ತಾನೆ.

೧. ಅರಣ್ಯಸಿದ್ಧನ ಪೂರ್ವಜರ ವೃತ್ತಾಂತ :

"ಹಾಳೂರ ಹವಳೂರ ಮುಂಜಿಪಟ್ಟಣದ ಗೌಡ, ಹೊನ್ನಪ್ಪಗೌಡ. ಆತನ ಪತ್ನಿ ಗಂಗಾಂಬಿ. ಈ ದಂಪತಿಗಳಿಗೆ ಕನಕನಮುತ್ಯಾ, ಖಣನಮುತ್ಯಾ, ಅವಲಕ್ಕಿಮುತ್ಯಾ, ಸಣ್ಣಬಾಳ, ಚೌಡಲಮುತ್ಯಾ ಎಂಬ ಆರು ಜನ ಗಂಡು ಮಕ್ಕಳು. ಹೊನ್ನಪ್ಪಗೌಡರು ಮುಂಜಿಪಟ್ಟಣದ ಆಡಳಿತವನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರು. ವಯಸ್ಕ ಹಂತ ತಲುಪಿದ ಹೊನ್ನಪ್ಪಗೌಡರ ಆರು ಜನ ಗಂಡು ಮಕ್ಕಳಲ್ಲಿ ಬೇಧಭಾವ (ಕಲಹ) ಬಂತು. ಇದರಿಂದ ಬೇಸರಗೊಂಡು ಚೌಡಲಮುತ್ಯಾ ಮುಂಜಿಪಟ್ಟಣ್ಣವನ್ನು ತೊರೆದು ಊರಿಂದೂರಿಗೆ ಅಲೆದಾಡತೊಡಗಿದ."[೬] ಈ ಸಂದರ್ಭದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತ, ದೇವರ ನಾಮಸ್ಮರಣೆ ಮಾಡುತ್ತ ಒಂದು ದಿನ ವಿಜಾಪೂರ ಜಿಲ್ಲೆಯ ಅರಕೇರಿ ಊರಿನ ಅಗಸಿ ಬಾಗಲಿಗೆ ಬಂದು ತಲುಪಿದ. ಅಗಸಿ ದ್ವಾರಪಾಲಕ ಅಪರಿಚಿತನಾದ ಚೌಡಲಮುತ್ಯಾನನ್ನು ಊರಿನೊಳಕ್ಕೆ ಬಿಡದೆ ದ್ವಾರಬಾಗಿಲಲ್ಲೆ ನಿಲ್ಲಿಸಿ, ನೀವು ಯಾರು? ಎಲ್ಲಿಂದ ಬರುತ್ತಿದ್ದಿರಿ? ಈ ಊರಿನಲ್ಲಿ ಯಾರನ್ನು ಭೇಟ್ಟಿಯಾಗಬೇಕು? ಮುಂತಾಗಿ ಪ್ರಶ್ನಿಸಿದ. ಆಗ ಚೌಡಲಮುತ್ಯಾ ಈ ಊರಿನಲ್ಲಿರುವ ದೈವಿ ಸ್ವರೂಪಿಯಾದ ಅಮೋಘಸಿದ್ಧರನ್ನು ಭೇಟ್ಟಿಯಾಗಲು ಬಂದಿರುವುದಾಗಿ ತಿಳಿಸಿದನು. ದ್ವಾರಪಾಲಕರು ವಿಷಯವನ್ನು ಅಮೋಘಸಿದ್ಧನಿಗೆ ತಿಳಿಸಿದರು. ಸ್ವತಃ ಅಮೋಘಸಿದ್ಧನೇ ಊರಿನ ಅಗಸಿ ದ್ವಾರದವರೆಗೆ ಬಂದು ಚೌಡಲಮುತ್ಯಾನನ್ನು ಆದರದಿಂದ ಬರಮಾಡಿಕೊಂಡು ತನ್ನ ಅರಮನೆಯತ್ತ ಅವರನ್ನು ಕರೆದುಕೊಂಡು ನಡೆದರು.

ಅದು ಮುಂಜಾನೆಯ ಸಮಯ ಅಮೋಘಸಿದ್ಧನ ಮಗಳಾದ ಜನ್ನವ್ವ (ರೇಬಕವ್ವ)ಳು ದೇವರ ಪೂಜೆಗೆಂದು ಮನೆಯಂಗಳದ ಹೂದೋಟದಲ್ಲಿ ಹೂಗಳನ್ನು ಕೀಳುತ್ತಿದ್ದಳು. ಇದೇ ವೇಳೆಯಲ್ಲಿ ತನ್ನ ತಂದೆಯ ಜೊತೆ ಮನೆಯತ್ತ ಬರುತ್ತಿದ್ದ ಸುಂದರ ರೂಪದ ಸಧೃಡಕಾಯದ ಚಲುವ ಚೌಡಲಮುತ್ಯಾನನ್ನು ನೋಡಿದಳು. ತಾನು ಮಾಡುತ್ತಿದ್ದ ಕಾಯಕವನ್ನು ಒಂದು ಕ್ಷಣ ಮರೆತ ಅವಳು, ಅವನ ಸುಂದರ ರೂಪಕ್ಕೆ ಮಾರುಹೋದಳು. ಸಂಕೋಚ ಮತ್ತು ನಾಚಿಕೆಯಿಂದ ಮುಗುಳ್ನಗೆಯನ್ನು ಬೀರುತ್ತಾ ಮನೆಯೊಳಗೆ ಓಡಿಹೋದಳು. ಈ ದೃಶ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದ ಅಮೋಘಸಿದ್ಧ ತನ್ನ ಮಗಳ ಮನದಾಳವನ್ನು ತಿಳಿದುಕೊಂಡನು.

ಅಮೋಘಸಿದ್ಧ ಚೌಡಲಮುತ್ಯಾನನ್ನು ಬಹು ಆದರದಿಂದ ಮನೆಯೊಳಗೆ ಬರಮಾಡಿಕೊಂಡು ಸಿಂಹಾಸನದ ಮೇಲೆ ಕುಳ್ಳಿರಿಸಿ, ಪವಿತ್ರ ಜಲದಿಂದ ಪಾದ ತೊಳೆದು ಪಾದ ಪೂಜೆ ಮಾಡಿದನು. ಉಪಹಾರವಾಗಿ ತಿನ್ನಲು ಹಣ್ಣುಗಳನ್ನು ನೀಡಿ ಕುಡಿಯಲು ಕೆನೆಭರಿತ ಹಾಲನ್ನು ನೀಡಿ ಉಪಚರಿಸಿದನು. ಉಪಹಾರದ ನಂತರ ಮಹಾನುಭಾವರೇ ತಮ್ಮ ಹೆಸರೇನು? ತಾವು ಯಾವ ಊರಿನವರು? ಇಲ್ಲಿಗೆ ಬಂದ ಕಾರಣವೇನು? ಮುಂತಾಗಿ ಪ್ರಶ್ನಿಸಿದನು.

ನನ್ನ ಹೆಸರು ಚೌಡಲ. ಹಾಳೂರ ಹವಳೂರ ಮುಂಜಿಪಟ್ಟಣದ ಗೌಡನಾದ ಹೊನ್ನಪ್ಪಗೌಡ ನನ್ನ ತಂದೆ. ನನಗೆ ಐದು ಜನ ಅಣ್ಣಂದಿರು. ಮನೆತನದ ವಿಚಾರವೊಂದಕ್ಕೆ ಅವರ ಜೊತೆಗೆ ಮನಸ್ತಾಪಗೊಂಡು ಮನೆಬಿಟ್ಟು ಬಂದಿರುವೆ. ಸದ್ಯ ಊರಿಂದೂರಿಗೆ ತಿರುಗಾಡುತ್ತ ಇಲ್ಲಿಗೆ ಬಂದಿರುವೆ. ಈ ಊರಲ್ಲಿ ಪರಶಿವನ ಭಕ್ತರಾದ ತಮ್ಮ ಹೆಸರು ಕೇಳಿ ಅತೀ ಆನಂದಭರಿತನಾದೆ. ಒಂದು ಸಲ ತಮ್ಮ ದರ್ಶನ

ಪಡೆದುಕೊಳ್ಳಬೇಕೆಂದು ಬಯಸಿ ಇಲ್ಲಿಗೆ ಬಂದಿರುವುದಾಗಿ ತಿಳಿಸಿದನು. ಉಭಯ ಕುಶಲೋಪರಿಗಳ ಸಂಭಾಷಣೆಯ ಮಧ್ಯದಲ್ಲಿ ಇಂದು ಮುಂಜಾನೆ ಮನೆಯತ್ತ ಬರುತ್ತಿರುವಾಗ ಹೂದೋಟದಲ್ಲಿ ಹೂ ಕೀಳುತ್ತಿದ್ದ ಯುವತಿಯ ಬಗ್ಗೆ ವಿಚಾರಿಸಿದ.

ಅಮೋಘಸಿದ್ಧರು ಅವಳು ತನ್ನ ಮಗಳು ಜನ್ನವ್ವಳೆಂದು ತಿಳಿಸಿದರು. ಆಗ ಚೌಡಲ, ತಾನು ಜನ್ನವ್ವಳ ರೂಪ, ಗುಣಗಳಿಗೆ ಮನಸೋತ್ತಿದ್ದು, ತಾವು ಒಪ್ಪಿಗೆ ನೀಡಿದರೆ ನಿಮ್ಮ ಮಗಳನ್ನು ಮದುವೆಯಾಗಿ ಮನೆ ಅಳಿಯನಾಗಿ ಇಲ್ಲಿಯೇ ಇರುವುದಾಗಿ ಅಮೋಘಸಿದ್ಧರಿಗೆ ತಿಳಿಸಿದ. ಈ ಮಾತನ್ನು ಕೇಳಿ ಅಮೋಘಸಿದ್ಧನ ಮನಸ್ಸಿಗೆ ಅತೀ ಸಂತೋಷವಾಯಿತು. ತನ್ನ ಮಗಳಾದ ಜನ್ನವ್ವಳ ಒಪ್ಪಿಗೆಯನ್ನು ಪಡೆದು ಗುರು-ಹಿರಿಯರ ಸಮಕ್ಷಮದಲ್ಲಿ ಒಂದು ಒಳ್ಳೆಯ ಮಹೂರ್ತದಲ್ಲಿ ಅವರಿಬ್ಬರಿಗೂ ಮದುವೆಯನ್ನು ನಿಶ್ಚಯಿಸಿದರು. ಸುತ್ತ-ಮುತ್ತಲಿನ ಹತ್ತೂರಿನ ಜನರಿಗೆ ಆಮಂತ್ರಣವನ್ನು ನೀಡಲಾಯಿತು. ಮುದುವೆಯ ಮುನ್ನಾದಿನವೇ, ಅರಕೇರಿ ಊರಿನ ಪ್ರಮುಖ ಹಾದಿಗಳನ್ನು ಸ್ವಚ್ಛಗೊಳಿಸಿ ಹಂದರಹಾಕಿ ತಳಿರು-ತೋರಣಗಳಿಂದ ಸಂಪೂರ್ಣವಾಗಿ ಅಲಂಕರಿಸಲಾಯಿತು. ಶುಭ ಮಹೂರ್ತದಲ್ಲಿ ನಡೆದ ಚೌಡಲ ಮತ್ತು ಜನ್ನವ್ವಳ ಮದುವೆಗೆ ನೆರೆಹೊರೆಯ ಊರಿನ ಗಣ್ಯಮಾನ್ಯರು ಮತ್ತು ದೇವಲೋಕದ ದೇವತೆಗಳು ಉಪಸ್ಥಿತರಿದ್ದರು ನವ ದಂಪತಿಗಳನ್ನು ಹರಿಸಿದರು.

ಚೌಡಲ ಮದುವೆಯ ನಂತರ ಜನ್ನವ್ವಳೊಂದಿಗೆ ಅರಕೇರಿಯಲ್ಲಿಯೇ ಸ್ವತಂತ್ರವಾಗಿ ತನ್ನ ಕೌಟುಂಬಿಕ ಜೀವನವನ್ನು ಆರಂಭಿಸಿದ. ದೀಪಾವಳಿಯ ಹಬ್ಬಕ್ಕೆಂದು ಒಂದು ಸಲ ಜನ್ನವ್ವ ತವರು ಮನೆಗೆ ಬಂದು ಅಣ್ಣಂದಿರಗೆ ಆರತಿ ಬೆಳಗುತ್ತಾಳೆ. ಖುಷಿಗೊಂಡ ಅಣ್ಣಂದಿರು ಏನು ಕಾಣಿಕೆ ಬೇಕು, ಕೇಳು ನಾವು ಕೊಡುತ್ತೇವೆಂದರು. ಆಗ ಜನ್ನವ್ವಳು 'ಹರಿಯಲಾರದ ಸೀರೆ' ತನಗೆ ಬೇಕು ಎಂದು ಕೇಳಿ ಅಣ್ಣಂದಿರಿಂದ ಅರಕೇರಿಯ ಆಸ್ತಿಯನ್ನು ಹಾಗೂ ಗೌಡಕಿಯನ್ನು ಪಡೆಯುತ್ತಾಳೆ.

ಅಮೋಘಸಿದ್ಧನ ಕೊನೆಯ ಮಗ ಕನ್ನಮುತ್ತ್ಯಾ. ಇತನಿಗೆ ಮೂರು ಜನ ಮಕ್ಕಳು. ಕರಿಯೋಗಿಸಿದ್ಧ, ಮಲಕಾರಿಸಿದ್ಧ ಮತ್ತು ಮಹಾ(ಮಾದಣ್ಣ)ಸಿದ್ಧ. ಕನ್ನಮುತ್ತ್ಯಾ ಮುಪ್ಪಾವಸ್ಥೆಯಲ್ಲಿದ್ದ ತನ್ನ ತಂದೆ-ತಾಯಿಗಳ (ಅಮೋಘಸಿದ್ಧ ಮತ್ತು ಪದ್ಮಾವತಿ) ಉಪಚಾರಕ್ಕಾಗಿ ಕೊನೆಯ ಮಗನಾದ ಮಹಾಸಿದ್ಧ (ಬ್ರಹ್ಮ ಒಡೆಯ)ನನ್ನು ಅರಕೇರಿಗೆ ಕಳುಹಿಸಿದನು. ಅಜ್ಜ-ಅಜ್ಜಿಯ ಆರೈಕೆಗಾಗಿ ಬಂದ ಇತನನ್ನು ಅತ್ತೆಯಾದ ಜನ್ನವ್ವಳು ಎಮ್ಮೆ ಕಾಯುವ ಮತ್ತು ಇನ್ನಿತರ ಕಾಯಕಕ್ಕೆ ಹಚ್ಚಿದಳು. ನಿಗದಿತ ಕಾಯಕದಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾದರು ಊಟಕ್ಕಿಂತ ಹೆಚ್ಚಿನ ಬೈಗುಳನ್ನೇ ತಿನ್ನಬೇಕಾಗುತ್ತಿತ್ತು. ಮಹಾಸಿದ್ಧನ ಶೋಚನಿಯ ಸ್ಥಿತಿಯನ್ನು ತಿಳಿದುಕೊಂಡ ಆತನ ಸಹೋದರ ಮಲಕಾರಿಸಿದ್ಧ ಅರಕೇರಿಗೆ ಬಂದು ಅತ್ತೆ ಜನ್ನವ್ವಳ ಜೊತೆ ಕಲಹಕ್ಕಿಳಿದನು. ಈ ಕಲಹ ಇಲ್ಲಿಗೆ ಮುಗಿದಿದ್ದರೆ ಒಳ್ಳೆಯದಿತ್ತು. ಆದರೆ ಕಾಲಾಂತರದಲ್ಲಿ ಅಮೋಘಸಿದ್ಧನ ಮೊಮ್ಮಕ್ಕಳು ತಮ್ಮ ತಂದೆಯವರು ಕಾಣಿಕೆ ರೂಪದಲ್ಲಿ ಕೊಟ್ಟಿದ್ದ ಅರಕೇರಿಯ ಆಸ್ತಿ ಮತ್ತು ಗೌಡಕಿಯನ್ನು ಅತ್ತೆ ಜನ್ನವ್ವಳಿಂದ ಮರಳಿ ಪಡೆಯುತ್ತಾರೆ. ಈ ಘಟನೆಯಿಂದ ಜನ್ನವ್ವ ಮತ್ತು ಅವಳ ಗಂಡ ಚೌಡಲ ತತ್ತರಿಸಿ ಹೋಗುತ್ತಾರೆ. ಅವಮಾನಿತಳಾದ ಜನ್ನವ್ವ ಇಲ್ಲಿರುವುದು ಸರಿಯಲ್ಲವೆಂದು ಊರನ್ನೇ ಬಿಟ್ಟು ಬೇರೆಡೆಗೆ ಹೋಗುವ ವಿಚಾರ ಮಾಡುತ್ತಾಳೆ.

ಉಟ್ಟ ಬಟ್ಟೆಯ ಮೇಲೆ ಅವಶ್ಯಕ ಅಡಿಗೆ ಸಾಮಗ್ರಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು ಊರಿನ ಗಡಿಯನ್ನು ದಾಟಿ ಜಾಲಗೇರಿ ಗ್ರಾಮ ಸೀಮೆ ಪ್ರವೇಶಿಸಿದಳು. ಊರು ಬಿಟ್ಟು ಹೋಗುವ ಮುನ್ನ ತಂದೆಗೆ ನಡೆದ ವಿಷಯವನ್ನು ಹೇಳಬೇಕೆಂದುಕೊಂಡಳು. ತಲೆ ಮೇಲೆ ಹೊತ್ತು ತಂದ ಬುಟ್ಟಿಯನ್ನು ಜಾಲಗೇರಿ ಸೀಮೆಯಲ್ಲಿ ಇಳಿಸಿದಳು. ತಂದೆ ಅಮೋಘಸಿದ್ಧನ ಮುಂದೆ ಅಳಿಯಂದಿರರು ಮಾಡಿದ ಕಥೆಯನ್ನೆಲ್ಲ ವಿವರವಾಗಿ ಹೇಳಿದಳು. ಆಗ ಅಮೋಘಸಿದ್ಧ 'ಒಡೆಯರ ಮನೆತನದ ಆಸ್ತಿ ಶಿಸ್ತಿನಿಂದ ನಡೆದರೆ ಮಾತ್ರ ದಕ್ಕುತ್ತದೆಂದು ನಿನಗೆ ಮೊದಲೇ ನಾನು ಹೇಳಿರಲಿಲ್ಲವೇ?' ಎಂದನು. ಜನ್ನವ್ವ ತನಗೊದಗಿ ಬಂದ ಸ್ಥಿತಿಗಾಗಿ ತಂದೆಯ ಮುಂದೆ ಕಣ್ಣೀರಿಟ್ಟಳು. ಕೊನೆಗೆ ಅಮೋಘಸಿದ್ಧ ತನ್ನ ಬಳಿಯಿದ್ದ ಕೆಲವು ಕಿಲ್ಲಾರಿಗಳನ್ನು ಅವಳಿಗೆ ಕೊಟ್ಟು 'ಇನ್ನೂ ಮೇಲೆ ನೀನು ಮೇಲಿನ (ಪಶ್ಚಿಮ) ನಾಡಿನ ಕಡೆಗಡೆಗೆ ಹೋಗು. ಅಲ್ಲಿ ನಿನ್ನ ಕೀರ್ತಿ ಬೆಳೆಯುತ್ತದೆ' ಎಂದನು.

ಜನ್ನವ್ವ ಅಮೋಘಸಿದ್ಧನಿಗೆ ನಮಿಸಿ ಆಶೀರ್ವಾದ ಪಡೆದುಕೊಂಡಳು. ತಂದೆ ಕೊಟ್ಟ ಕಿಲ್ಲಾರಿಗಳನ್ನು ಹೊಡೆದುಕೊಂಡು ತಾನಿಟ್ಟ ಅಡುಗೆಯ ಪರಿಕರಗಳನ್ನು ತೆಗೆದುಕೊಂಡು ಹೋಗಬೇಕೆಂದು ಜಾಲಗೇರಿಯ ಸೀಮೆಗೆ ಬಂದು ತಾನಿಟ್ಟ ಬುಟ್ಟಿಯನ್ನು ಎತ್ತಿದಳು. ಬುಟ್ಟಿ ಮೇಲಕ್ಕೆ ಬರಲೇ ಇಲ್ಲ. ಬುಟ್ಟಿಯು ಆಗಲೇ ನೆಲದಲ್ಲಿ ಬೇರು ಬಿಟ್ಟಿತ್ತು. 'ಒಡೆಯರ ಮನೆತನದ ಯಾವ ವಸ್ತುಗಳು ನಮಗೆ ದಕ್ಕುವುದಿಲ್ಲವೆಂದು' ತಿಳಿದು ಮನದಲ್ಲಿಯೇ ಮರುಗಿದಳು. ತಂದೆಯಿಂದ ಕಾಣಿಕೆ ರೂಪದಲ್ಲಿ ಪಡೆದುಕೊಂಡ ಕಿಲ್ಲಾರಗಳನ್ನು ಹೊಡೆದುಕೊಂಡು ಜನ್ನವ್ವ ಗಂಡ ಚೌಡಲನೊಂದಿಗೆ ಪಶ್ಚಿಮ ದಿಕ್ಕಿನೆಡೆಗೆ ಪ್ರಯಾಣ ಬೆಳೆಸಿದರು. ಈ ಪರಿಸರದಲ್ಲಿ ಇಂದಿಗೂ ಹಾಲುಮತ ಸಮುದಾಯದಲ್ಲಿ ಮದುವೆಯಾಗಿ ಗಂಡನ ಮನೆಗೆ ಹೋಗುವ ಹೆಣ್ಣುಮಕ್ಕಳಿಗೆ ತವರು ಮನೆಯವರಿಂದ ಕಾಣಿಕೆ(ಬಳುವಳಿ/ಬಳ್ಳೊಳ್ಳಿ) ರೂಪದಲ್ಲಿ ಹಸುಗಳನ್ನು ಕೊಡುವ ಪದ್ಧತಿ ಮುಂದುವರೆದುಕೊಂಡು ಬಂದಿರುವುದು.

ಕಿಲ್ಲಾರಗಳ ಸಮೇತ ಪ್ರಯಾಣ ಆರಂಭಿಸಿದ ದಂಪತಿಗಳಿಬ್ಬರು ಹಲವಾರು ಊರುಗಳನ್ನು ದಾಟುತ್ತ ಸಂಜೆಯ ವೇಳೆಗೆ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಸಪ್ತಸಾಗರ ಗ್ರಾಮಕ್ಕೆ ಬಂದು ಮುಟ್ಟಿದರು. ಮಳೆಗಾಲದ ಸಮಯವಾಗಿದ್ದು ಸಂಜೆ ಎಲ್ಲ ದಿಕ್ಕುಗಳಿಂದ ಮಳೆ ಜೋರಾಗಿಯೇ ಆಯಿತು. ಅಪರಿಚಿತ ಊರು. ಹೀಗಾಗಿ ಗ್ರಾಮದ ಹೊರಭಾಗದಲ್ಲಿದ್ದ ಒಂದು ದೊಡ್ಡ ಮರದ ಪೊಟರೆಯಲ್ಲಿಯೇ ಆಶ್ರಯ ಪಡೆದುಕೊಂಡರು. ಕಲ್ಲಿನ (ಗಂಗಾಳ) ಪಾತ್ರೆಯನ್ನು ಮಾಡಿ ಮಳೆ ನೀರಿನಲ್ಲಿಯೇ ಅನ್ನವನ್ನು ತಯಾರಿಸಿಕೊಂಡು ಊಟ ಮಾಡಿ ಅಂದು ಅಲ್ಲಿಯೇ ಮಲಗಿಕೊಂಡರು. ಇಬ್ಬರು ಮರುದಿನ ಮುಂಜಾನೆ ಬೇಗನೆ ಎದ್ದು ಕೃಷ್ಣಾ ನದಿಯಲ್ಲಿ ಪವಿತ್ರ ಸ್ನಾನ ಮಾಡಿಕೊಂಡು ದೇವರ ಪೂಜೆ ಮುಗಿಸಿಕೊಂಡು ಮುಂದಿನ ಪ್ರಯಾಣವನ್ನು ಬೆಳೆಸಿದರು. ರಾಯಬಾಗ ತಾಲ್ಲೂಕಿನ ಬಿರಡಿ ಗ್ರಾಮದ ಮೂಲಕ ಯಕ್ಸಂಬಾ ನಗರಕ್ಕೆ ಹೋದರು. ನಂತರ ಚಿಕ್ಕೋಡಿ ತಾಲ್ಲೂಕಿನ ಕೆರಪನಹಟ್ಟಿ(ಕರ್ಲಹೊಂಡ, ಇಂದಿನ ಕೇರೂರು)ಯಲ್ಲಿ ನೆಲೆ ನಿಂತರು.

೨. ಅರಣ್ಯಸಿದ್ಧನ ಜನನ ವೃತ್ತಾಂತ :

ಚೌಡಲ ಮತ್ತು ಜನ್ನವ್ವಳ ಜೀವನ ಸುಖಮಯವಾಗಿಯೇ ಸಾಗುತ್ತಿತ್ತು. ದಾಪಂತ್ಯದ ಫಲವಾಗಿ ಇವರಿಗೆ ಹುಟ್ಟಿದ ಮೊದಲ ಮಗ ಮಲಕಾರಿಸಿದ್ಧ. ಇತನ ಜನನ ನಂತರ ಬಹಳ ವರ್ಷಗಳವರೆಗೆ ಅವರಿಗೆ ಮತ್ತೆ ಮಕ್ಕಳಾಗಲಿಲ್ಲ. ಅಲ್ಲದೆ ಒಂದೇ ಗಂಡು ಮಗುವನ್ನು ಪಡೆದುಕೊಂಡ ತಾಯಿಗೆ ಸಮಾಧಾನವಿಲ್ಲ. ಕಾರಣ 'ಒಂದು ಕಣ್ಣಲ್ಲ ಒಂದೇ ಮಗುವಲ್ಲ' ಎಂಬ ನಂಬಿಕೆಯಿಂದ ತಾಯಿ ಜನ್ನವ್ವ ಇನ್ನೊಬ್ಬ ಗಂಡು ಮಗನಿಗಾಗಿ ಹಂಬಲಿಸಿ ಕಡೋಲಿ ವಿಠ್ಠಲರಾಯನಿಗೆ ಪ್ರಾರ್ಥನೆ ಮಾಡಿಕೊಂಡಳು. ಜೊತೆಗೆ ತಾನಿರುವ ಸ್ಥಳದಲ್ಲಿಯೇ ಶಂಕರಲಿಂಗನನ್ನು ಸ್ಥಾಪನೆ ಮಾಡಿ ಪ್ರತಿದಿನ ಪೂಜಿಸುತ್ತಿದ್ದಳು. ಅವಳ ಪೂಜೆಯ ಫಲ ಸಾಕಾರಗೊಳ್ಳುವ ಸಮಯ ಬಂತು. ಒಂದು ದಿನ ಗುರುಶಿಷ್ಯರಾದ ಅಥಣಿ ತಾಲೂಕಿನ ಮುರಗುಂಡಿಯ ಮುರುಸಿದ್ಧ ಹಾಗೂ ಮಹಾರಾಷ್ಟ್ರ ಇಂಚಲಕರಂಜಿ ತಾಲೂಕಿನ ಕಡೋಲಿಯ ವಿಠ್ಠಲರಾಯ ಜೊತೆಗೂಡಿ ದೇಶ ಸಂಚಾರ ಮಾಡುತ್ತ ಕೇರೂರ(ಕರ್ಲಹೊಂಡ)ದ ಜನ್ನವ್ವಳ ಮನೆಗೆ ಬಂದರು.

ಮನೆಯಂಗಳಕ್ಕೆ ಬಂದ ಪೂಜ್ಯರನ್ನು ಆದರದಿಂದ ಬರಮಾಡಿಕೊಂಡ ಜನ್ನವ್ವ ಪಾದಪೂಜೆ ಮಾಡಿ ವಂದಿಸಿದಳು. ಆತಿಥ್ಯ ಸ್ವೀಕರಿಸಿದ ಗುರುಶಿಷ್ಯರು ತಾಯಿಯ ಮುಖದಲ್ಲಿರುವ ವೇದನೆಯನ್ನು ತಿಳಿದುಕೊಳ್ಳುವುದಕ್ಕಾಗಿ, ಏಕೆ ತಾಯಿ ನಿನ್ನ ಮುಖದಲ್ಲಿ ಖಿನ್ನತೆ ಮತ್ತು ದುಃಖ ಮಡುಗಟ್ಟಿದೆ? ನಿನ್ನ ಚಿಂತೆಯಾದರೂ ಏನು? ಎಂದು ಅವಳನ್ನು ಕೇಳಿದರು. ಆಗ ತಾಯಿ ನನಗೆ ಈಗಾಗಲೇ ಒಬ್ಬ ಗಂಡು ಮಗನಿದ್ದು ಇನ್ನೊಬ್ಬ ಗಂಡು ಮಗನಿಗಾಗಿ ಜೀವ ಹಂಬಲಿಸುತ್ತಿದ್ದೆ ಆ ಮಗುವನ್ನು ಪಡೆಯುವ ಭಾಗ್ಯವನ್ನು ತನಗೆ ಕರುಣಿಸ ಬೇಕೆಂದು ಪ್ರಾರ್ಥಿಸಿದಳು. ಆಗ ಗುರುಶಿಷ್ಯರಿಬ್ಬರು, ಹೆಣ್ಣು ಮಗು ಹುಟ್ಟಿದರೆ ನಿನಗೆ, ಗಂಡು ಮಗು ಹುಟ್ಟಿದರೆ ನಮ್ಮ ಸೇವೆಗೆ ಮೀಸಲಿಡಬೇಕೆಂಬ ಕರಾರಿನೊಂದಿಗೆ ಅವಳಿಗೆ ವರ್ಷದಲ್ಲಿ ಮಕ್ಕಳಾಗುವ ವರವನ್ನು ಕರುಣಿಸಿದರು.

ದಂಪತಿಗಳಿಬ್ಬರು ಕಡುಭಕ್ತಿಯಿಂದ ಅತೀ ನಿಷ್ಠೆಯಿಂದ ದಿನವೂ ಗಂಡು ಮಗನ ಭಾಗ್ಯವನ್ನು ಕರುಣಿಸೆಂದು ಶಂಕರಲಿಂಗನನ್ನು ಪೂಜಿಸುತ್ತಿದ್ದರು. ದೇವರ ಕರುಣೆ ಮತ್ತು ಮಹಾತ್ಮರ ಆಶೀರ್ವಾದದ ಫಲವೆಂಬಂತೆ ತಾಯಿ ಜನ್ನವ್ವ ಗರ್ಭವತಿಯಾದಳು. ದೈವಿ ಪುರುಷನ ಜನನದ ದಿನದಂದು ಆಕಾಶವೆಲ್ಲ ಕಪ್ಪು ಮೋಡಗಳಿಂದ ಆವರಿಸಿತ್ತು. ಗುಡುಗು-ಸಿಡಿಲು-ಮಿಂಚುಗಳ ಅಬ್ಬರವಿತ್ತು. ಪರಿಸರವೆಲ್ಲವೂ ಬಿರುಗಾಳಿಯಿಂದ ತುಂಬಿಕೊಂಡಿತ್ತು. ಭೂಮಂಡಲ ದೇವತಾ ಪುರುಷನ ಆಗಮನವನ್ನು ಸೂಚಿಸುತ್ತಿತ್ತು. ದೇವಾನು ದೇವತೆಗಳೆಲ್ಲರೂ ದೈವಿ ಪುರುಷನ ಜನನ ಸಂಭ್ರಮಕ್ಕೆ ಸಾಕ್ಷಿಯಾಗಲು ಆಕಾಶದಲ್ಲಿ ಉಪಸ್ಥಿತರಿದ್ದರು. ಶುಭ ದಿನದಂದು ತಾಯಿ ಜನ್ನವ್ವ ನವಮಾಸಗಳನ್ನು ಪೂರೈಸಿ ಗಂಡು ಮಗುವಿಗೆ ಜನ್ಮ ನೀಡಿದಳು. ಧರ್ಮ ಕಾಯಕ ನಿಮಿತ್ಯ ಜನ್ಮ ಪಡೆದ ದೈವಿ ಪುತ್ರನಿಗೆ ಆಕಾಶದಲ್ಲಿದ್ದ ದೇವತೆಗಳೆಲ್ಲರೂ ಹೂಮಳೆಗರೆಯುತ್ತ ಹರಸಿದರು.

ಜನ್ನವ್ವಳು ಎರಡನೇ ಗಂಡು ಮಗುವಿಗೆ ಜನ್ಮ ನೀಡಿದ ಸುದ್ದಿ ತಿಳಿದ ಅರಕೇರಿಯ ತವರು ಮನೆಯವರು ಸಂಭ್ರಮಿಸಿದರು. ಹನ್ನೊಂದನೇ ದಿನದಂದು ಜರುಗುವ ಮಗುವಿನ ನಾಮಕರಣ ಕಾರ್ಯಕ್ಕೆ ಅವರು ಕರ್ಲಹೊಂಡಕ್ಕೆ ಆಗಮಿಸಿದರು. ನಾಮಕರಣ ಸಮಾರಂಭಕ್ಕೆ ಸೂರ್ಯ-ಚಂದ್ರರಾದಿಯಾಗಿ ಸಕಲ

ದೇವಾನು-ದೇವತೆಗಳು, ಗಂಧರ್ವಲೋಕ ಸ್ತ್ರೀ-ಪುರುಷರೆಲ್ಲರು ಆಗಮಿಸಿದ್ದರು. ಗಂಧರ್ವ ಕನ್ಯೆಯರು ಮಕ್ಕಳನ್ನು ಅಲಂಕೃತ ತೊಟ್ಟಿಲಲ್ಲಿ ಹಾಕಿ ಹೂಮಳೆ ಸುರಿಸುತ್ತ ಜಯಘೋಷದೊಂದಿಗೆ ಮಗುವಿಗೆ ಅರಣ್ಯಸಿದ್ಧನೆಂದು ನಾಮಕರಣ ಮಾಡಿದರು. ಮಗು ಬೀದಿಗೆಯ ಚಂದ್ರನಂತೆ ಬೆಳೆಯಲಾರಂಭಿಸಿತು.

೩. ಮಹಾರಾಷ್ಟ್ರದ ಕಡೋಲಿ ಪಟ್ಟಣದಲ್ಲಿ ಬಾಲ ಅರಣ್ಯಸಿದ್ಧನ ಲೀಲೆ :

ಮಹಾರಾಷ್ಟ್ರದ ಕರವೀರಪುರ (ಕೊಲ್ಹಾಪೂರ) ನಾಡಿನ ಪೂರ್ವಭಾಗವೂ ಬೆಟ್ಟ-ಗುಡ್ಡಗಳಿಂದ ಕೂಡಿದ ಮರಡಿ ಪ್ರದೇಶ. ಮಲೆನಾಡಿನ ಅಂಚಿನಲ್ಲಿರುವ ಈ ಭಾಗದ ಒಂದು ಊರು ಕಡೋಲಿ. ಇಲ್ಲಿ ಮಹಿಮಾಪುರುಷ ಬೀರದೇವನಿಗಾಗಿ ಅವನ ಶಿಷ್ಯ ವಿಠ್ಠಲನು ಗುಡಿಯೊಂದನ್ನು ಕಟ್ಟುತ್ತಿದ್ದನು. ಗುಡಿ ನಿರ್ಮಿಸುವ ಜಾಗೆಯಲ್ಲಿ ಏಳು ಮಕ್ಕಳ ತಾಯಿ ಖನ್ನೆರವ್ವ ಎಂಬ ಭಯಂಕರ ರಾಕ್ಷಸಿ ವಾಸವಾಗಿದ್ದಳು. ವಿಠ್ಠಲ ಮತ್ತು ಭಕ್ತರು ಹಗಲು ಹೊತ್ತಿನಲ್ಲಿ ನಿರ್ಮಿಸಿದ ಗುಡಿಯನ್ನು ರಾಕ್ಷಸಿ ಖನ್ನೆರವ್ವ ರಾತ್ರಿ ಸಮಯದಲ್ಲಿ ನೆಲಸಮ ಮಾಡುತ್ತಿದ್ದಳು. ಹಲವು ದಿನಗಳವರೆಗೆ ಗುಡಿಯನ್ನು ಹಗಲು ಕಟ್ಟುವುದು ಮತ್ತು ರಾತ್ರಿ ಕೆಡುವ ಕಾರ್ಯ ನಡೆಯಿತು. ಆಗ ವಿಠ್ಠಲನು ಆ ಏಳು ಮಕ್ಕಳ ತಾಯಿ ಖನ್ನೇರವ್ವಳನ್ನು ಯಾಕೆ ಈ ರೀತಿ ಮಾಡುತ್ತಿರುವಿ? ಎಂದು ಪ್ರಶ್ನಿಸಿದನು.

ಅವಳು ತನಗೆ ಜಡೆಯಿರುವ ಮೂರೇಳು (೩*೭=೨೧) ಮಕ್ಕಳ ಆಹಾರ ಬೇಕಾಗಿದ್ದು ಅದನ್ನು ನೀಡಿದರೆ ದೇವಾಲಯ ಕಟ್ಟಡ ನಿರ್ಮಾಣಕ್ಕೆ ತೊಂದರೆ ಮಾಡುವುದಿಲ್ಲವೆಂದಳು. ಇದರಿಂದ ದಿಕ್ಕು ತೋಚದೆ ವಿಠ್ಠಲ ಚಿಂತಿತನಾಗಿ ಗುರು ಮುರುಗುಂಡಿಯ ಮುರುಸಿದ್ಧನಲ್ಲಿ ಪರಿಹಾರಕ್ಕಾಗಿ ಮೊರೆ ಹೋದನು. ಆಗ ಗುರು ಮುರುಸಿದ್ಧನು, ಯಕ್ಸಂಬಾದ ಕರ್ಲಹೊಂಡ ಊರಿನ ತಾಯಿ ಜನ್ನವ್ವಳಿಗೆ ನಾವು ಮಾಡಿದ ಆಶೀರ್ವಾದದ ಫಲದಿಂದ ಗಂಡು ಮಗುವಿಗೆ ಜನ್ಮ ನೀಡಿರುವಳು. ಚಿಕ್ಕ ಮಗುವಾದ ಬಾಲ ಅರಣ್ಯಸಿದ್ಧನಿಂದ ಮಾತ್ರ ಅವಳನ್ನು ಸದೆಬಡೆಯಲು ಸಾಧ್ಯ ಮತ್ತು ಅವನಿಂದಲೇ ನೀನು ಕಟ್ಟುತ್ತಿರುವ ಗುಡಿ ನಿರ್ಮಾಣದ ಕಾರ್ಯ ಪೂರ್ಣಗೊಳ್ಳುವುದು, ಅದಕ್ಕಾಗಿ ಅಲ್ಲಿಗೆ ಹೋಗಿ ಅವನ ಸಹಾಯ ಪಡೆಯುವುದು ಸೂಕ್ತವೆಂದನು.

ವಿಠ್ಠಲ ಮತ್ತು ಮುರುಸಿದ್ಧ ಇಬ್ಬರೂ ಯಕ್ಸಂಬಾದ ಕರ್ಲಹೊಂಡ ಗ್ರಾಮದ ಚೌಡಲ ಮತ್ತು ಜನ್ನವ್ವಳ ಮನೆಗೆ ಆಗಮಿಸಿದರು. ತಾಯಿಯ ಪಕ್ಕದಲ್ಲಿ ಬಾಲ ಅರಣ್ಯಸಿದ್ಧ ಪಡಸಾಲೆಯಲ್ಲಿ ಆಟವಾಡುತ್ತಿದ್ದ. ಮನೆಗೆ ಆಗಮಿಸಿದ ಪೂಜ್ಯರನ್ನು ಕಂಡು ಪುಳಕಿತಳಾದ ಜನ್ನವ್ವ ಸಂತೋಷದಿಂದ ಅವರನ್ನು ಒಳಗೆ ಕರೆದು ಚೌಕಿಮನಿ ಹಾಕಿ ಕುಳ್ಳಿರಿಸಿದಳು. ಭಕ್ತಿಯಿಂದ ಪಾದ ಪೂಜೆ ಮಾಡಿ ಉಪಹಾರ ನೀಡಿ ಉಪಚರಿಸಿದಳು. ಪೂಜ್ಯರು ಕುಡಿಯಲು ಹಾಲನ್ನು ಕೇಳಿದರು. ಆಗ ಜನ್ನವ್ವ ತನ್ನಲ್ಲಿರುವ ಸ್ಥಿತಿಯನ್ನು ಹೇಳಿದಳು. “ಗುರುಗಳೇ ನನ್ನ ಕಷ್ಟಕ್ಕೆ ಪರಿಹಾರವಾಗಿ ಮಹಾರಾಜ ಧರ್ಮರಾಯರು ಒಂದು ಆಕಳನ್ನು ಕೊಟ್ಟಿರುವರು. ಆ ಹಸು ಹನ್ನೆರಡು ವರ್ಷಗಳಿಂದಲೂ ಹಾಲನ್ನು ಕೊಟ್ಟಿರುವುದಿಲ್ಲ, ಹೀಗಾಗಿ ನಮಗೆ ಹಾಲಿನ ಭಾಗ್ಯವಿಲ್ಲವೆಂದಳು.”[೨೭] ಆಗ ಗುರುಗಳು ತಾಯಿ ಚಿಂತಿಸಬೇಡ ದೇವರ ನಾಮಸ್ಮರಣೆ ಮಾಡುತ್ತ ಭಕ್ತಿಯಿಂದ ಆಕಳ ಮೊಲೆಯಿಂದ ಹಾಲನ್ನು ಕರೆ, ದೇವರು ಕರುಣಿಸುವನೆಂದರು. ಜನ್ನವ್ವ ಸಂಭ್ರಮದಿಂದ ದೇವರ ನಾಮಸ್ಮರಣೆ ಮಾಡುತ್ತ ಆಕಳ ಕೆಚ್ಚಲಿಗೆ ಕೈಹಾಕಿದಳು. ಹನ್ನೆರಡು ವರ್ಷಗಳಿಂದ ಹಾಲನ್ನೇ ನೀಡದ ಆಕಳು ಅಂದು ಮಹಾತ್ಮರ

ವರದಿಂದಾಗಿ ಹಾಲನ್ನು ನೀಡಿತು. ಹಸುವಿನಿಂದ ಪಡೆದ ಹಾಲನ್ನು ಪೂಜ್ಯರಿಗೆ ಕುಡಿಯಲು ನೀಡಿ ಅವರ ಹಸಿವಿನ ದಾಹವನ್ನು ತಣಿಸಿದಳು.

ಉಪಚಾರದ ನಂತರ ಜನ್ನವ್ವ ಪೂಜ್ಯರ ಆಗಮನದ ವಿಚಾರವನ್ನು ಕೇಳಿದಳು. ಆಗ ಮುರುಸಿದ್ಧರು, 'ತಾಯಿ ಈ ಹಿಂದೆ ನಾವು ಇಲ್ಲಿಗೆ ಬಂದಾಗ ನೀನು ಪುತ್ರಸಂತಾನದ ಕೊರಗಿನಲ್ಲಿದ್ದೆ. ಆಗ ನಾವು ನಿನಗೆ ಒಂದು ಕರಾರಿನ ಮೇರೆಗೆ ಗಂಡು ಮಗುವಾಗುವ ಭಾಗ್ಯವನ್ನು ಕರುಣಿಸಿದ್ದೆವು. ಹೆಣ್ಣು ಮಗು ಹುಟ್ಟಿದರೆ ನಿನಗೆ, ಗಂಡು ಮಗು ಹುಟ್ಟಿದರೆ ನಮ್ಮ ಸೇವೆಗೆ ಮೀಸಲಿಡಬೇಕೆಂಬ ಕರಾರಿನ ಮೆರೇಗೆ ಆಶೀರ್ವಾದವನ್ನು ಮಾಡಿದ್ದೆವು. ಈಗ ನಿನ್ನ ಚಿಕ್ಕ ಮಗನಾದ ಅರಣ್ಯಸಿದ್ಧನ ಸೇವೆಯನ್ನು ಪಡೆಯಬೇಕಾಗಿದೆ ಎಂದ.

ಲೋಕ ಕಲ್ಯಾಣಕ್ಕಾಗಿ ವಿಠ್ಠಲನು ಪಟ್ಟಣ ಕಡೋಲಿಯಲ್ಲಿ ದೇವತೆಯಾದ ಬೀರದೇವರ ಗುಡಿಯೊಂದನ್ನು ಕಟ್ಟುತ್ತಿರುವನು. ಭಯಂಕರ ರಾಕ್ಷಸಿಯೊಂದ ದೇವಾಲಯ ನಿರ್ಮಾಣಕ್ಕೆ ಅಡ್ಡಿ ಪಡಿಸುತ್ತಿರುವುದು. ಆ ರಕ್ಕಸಿಯನ್ನು ಸಂಹಾರ ಮಾಡುವ ಶಕ್ತಿ ನಿನ್ನ ಚಿಕ್ಕ ಮಗ ಅರಣ್ಯಸಿದ್ಧನಲ್ಲಿ ಮಾತ್ರ ಇರುವುದು. ಕಾರಣ ಆತನನ್ನು ನಮ್ಮ ಜೊತೆ ಕಳುಹಿಸಬೇಕೆಂದನು. ವಿಷಯ ಕೇಳಿ ಜನ್ನವ್ವ "ಚಿಕ್ಕ ಬಾಲ ಅರಣ್ಯಸಿದ್ಧನನ್ನು ಭಯಂಕರ ರಕ್ಕಸಿ ಜೊತೆ ಹೋರಾಡಲು ಕಳುಹಿಸುವುದೇ? ಅವನ ಜೀವಕ್ಕೆ ತೊಂದರೆಯಾದರೆ ಹೇಗೆ?" ಮುಂತಾಗಿ ಭಯಗೊಂಡಳು. ಆಗ ಮುರುಸಿದ್ಧನು, ತಾಯಿ "ಆ ರಕ್ಕಸಿಯನ್ನು ಸಂಹರಿಸುವ ಅಗಾದ ಶಕ್ತಿ ದೈವಿ ಪುರುಷನಾದ ಆತನಲ್ಲಿರುವುದು. ನೀನು ಲವಲೇಶವು ಭಯ ಪಡುವ ಅವಶ್ಯಕತೆಯಿಲ್ಲ ಈ ಕಾರ್ಯದಿಂದ ಅವನ ಕೀರ್ತಿ ಈ ನಾಡಿನಲ್ಲೆಲ್ಲ ಹರಡುವ ಜೊತೆಗೆ ಯಶಸ್ಸು ಲಭಿಸುವದೆಂದನು." ಉಭಯ ಸಂಕಟದಿಂದಲೇ ಜನ್ನವ್ವ ಚಿಕ್ಕ ಬಾಲ ಅರಣ್ಯಸಿದ್ಧನನ್ನು ಪೂಜ್ಯರ ಜೊತೆಗೆ ಕಳುಹಿಸಿದಳು.

ಬಾಲ ಅರಣ್ಯಸಿದ್ಧನನ್ನು ಕರೆದುಕೊಂಡು ಗುರುಗಳಿಬ್ಬರೂ ಪಟ್ಟಣ ಕಡೋಲಿಯತ್ತ ನಡೆದರು. ಚಿಕ್ಕೋಡಿ ಹತ್ತಿರವಿರುವ ಸದಲಗಾ ಗ್ರಾಮದ ಹತ್ತಿರ ಹರಿಯುತ್ತಿರುವ ಕೃಷ್ಣಾ ನದಿ ಸಮೀಪಕ್ಕೆ ಬರುವಷ್ಟರಲ್ಲಿ ಚಿಕ್ಕ ಬಾಲಕ ಅರಣ್ಯಸಿದ್ಧನು ಬೆಳೆದು ಹನ್ನೆರಡು ವರುಷದವನಾದನು. ನದಿ ತೀರದಲ್ಲಿರುವಾಗಲೇ ಅವನು ಗುರುಗಳಿಂದ ಅಗಾಧ ಶಕ್ತಿಯನ್ನು ಸಕಲ ಮಂತ್ರ ವಿದ್ಯೆಗಳನ್ನು ಪಡೆದುಕೊಂಡನು. ಬಾಲಕ ಬಲಾಢ್ಯನಾಗಿ ಅವತಾರತಾಳಿದನು. ಮೂವರು ಹಾತಕಲಂಗಡಿ ಮಾರ್ಗವಾಗಿ ಸಾಯಂಕಾಲದ ವೇಳೆಗೆ ಕಡೋಲಿಗೆ ಬಂದು ಮುಟ್ಟಿದರು. ಆ ಸಮಯಕ್ಕೆ ಸರಿಯಾಗಿ ಕಟ್ಟಡದ ಆಳುಗಳು ಅಂದಿನ ಕೆಲಸವನ್ನು ಮುಗಿಸಿ ಮನೆಯತ್ತ ತೆರಳಿದರು. ಅಂದು ರಾತ್ರಿ ಅರಣ್ಯಸಿದ್ಧನು ಗುಡಿಯ ಹತ್ತಿರದಲ್ಲಿಯೇ ಉಳಿದುಕೊಂಡನು. ಮಧ್ಯರಾತ್ರಿ ಹೊತ್ತಿಗೆ ರಕ್ಕಸಿಯು (ಏಳು ಮಕ್ಕಳ ತಾಯಿ ಖನ್ನೇರವ್ವ) ಗುಡಿಯ ಆವರಣಕ್ಕೆ ಆಗಮಿಸಿ ಕಟ್ಟಿದ ಗುಡಿಯನ್ನು ಒಂದೇ ಹೊಡೆತಕ್ಕೆ ಕೆಡವಿ ಹಾಕಿತು.

ಏಳು ಮಕ್ಕಳ ತಾಯಿಗೂ ಮತ್ತು ಅರಣ್ಯಸಿದ್ಧನಿಗೂ ಭಯಂಕರ ಯುದ್ಧವೇ ನಡೆಯಿತು. ಮಗುವಿನ ರೂಪದಲ್ಲಿದ್ದ ಅರಣ್ಯಸಿದ್ಧ ತನ್ನ ಪವಾಡವನ್ನು ಮೆರೆಯುವುದರ ಮೂಲಕ ಅವಳನ್ನು ಸದೆಬಡೆದು ಸೋಲಿಸಿದನು. ಅಷ್ಟೇ ಅಲ್ಲದೇ ವಿಠ್ಠಲರಾಯ ನಿರ್ಮಿಸುತ್ತಿದ್ದ ಗುಡಿ ನಿರ್ಮಾಣದ ಕೆಲಸವನ್ನು ಅಂದೇ,

ಒಂದೇ ರಾತ್ರಿಯಲ್ಲಿ ಅವಳಿಂದಲೇ ನಿರ್ಮಿಸಿದನು. ತನ್ನಿಂದ ಆಗಬೇಕಾದ ಕಾರ್ಯವನ್ನು ಪೂರ್ಣಗೊಳಿಸಿದ ಅರಣ್ಯಸಿದ್ಧ, ಗುರು ವಿಠ್ಠಲನಿಗೆ ಭಕ್ತಿಪೂರ್ವಕವಾಗಿ ನಮಿಸಿದ.

ಗುರು ವಿಠ್ಠಲರಾಯ ಬಾಲ ಅರಣ್ಯಸಿದ್ಧೇಶ್ವರನ ಕಾರ್ಯದಿಂದ ಸಂತೋಷಗೊಂಡು ವರವನ್ನು ಕೇಳುವಂತೆ ತಿಳಿಸಿದ. ಆಗ ಅರಣ್ಯಸಿದ್ಧೇಶ್ವರ 'ತನಗೆ ಏನುಬೇಡ, ಕೊಡುವುದಾದರೆ ಆ ಏಳುಮಕ್ಕಳ ತಾಯಿ ಖನ್ನೇರವ್ವಳನ್ನೇ ಕೊಡಬೇಕೆಂದು' ಕೇಳಿಕೊಂಡನು. ಆಗ ವಿಠ್ಠಲರಾಯನು ಆಗಲೆಂದು ಹರಸಿ ಏಳುಮಕ್ಕಳ ತಾಯಿಯನ್ನು ಅರಣ್ಯಸಿದ್ಧೇಶ್ವರನೊಂದಿಗೆ ಕಳುಹಿಸಿದನು. ಅವಳೊಂದಿಗೆ ಯಲ್ಪಾರಟ್ಟಿಗೆ ಆಗಮಿಸಿದ ಅರಣ್ಯಸಿದ್ಧೇಶ್ವರ ಅವಳನ್ನು ಯಲ್ಪಾರಟ್ಟಿ-ಖೇಮಲಾಪೂರ ಸೀಮೆಯ ದಟ್ಟ ಅರಣ್ಯದಲ್ಲಿರುವ ಬಾವಿಯೊಂದರಲ್ಲಿ ಇಟ್ಟು ಅವಳನ್ನು ತೃಪ್ತಿ ಪಡಿಸುವುದಕ್ಕಾಗಿ ಪ್ರತಿ ವರ್ಷಕ್ಕೊಮ್ಮೆ ನಿನಗೆ ನಿವಾಳಿಕೆ (ಆಹಾರ) ಕೊಡುವುದಾಗಿ ಅವಳಿಗೆ ಹೇಳಿದನು. ಅದೇ ಪರಂಪರೆಯು ಇಂದಿಗೂ ಕೂಡ ಮುಂದುವರೆದುಕೊಂಡು ಬಂದಿರುತ್ತದೆ. ಜಾತ್ರೆಯು ಮುಕ್ತಾಯವಾಗುವಾಗ ಮಾಡುವ ನಿವಾಳಿಕೆಯ ಪದ್ಧತಿಯ ಮೂಲಕ ಇವಳಿಗೆ ಅಹಾರ ನೀಡುವ ಪದ್ಧತಿ ಮುಂದುವರೆದುಕೊಂಡು ಬಂದಿರುತ್ತದೆ.

೪. ಅರಣ್ಯಸಿದ್ಧನು ಕಿಲ್ಲಾರಗಳನ್ನು ಕಾಯುತ್ತ ದೇಶ ಸಂಚಾರ ಮಾಡಿದ್ದು :

ಹರಯಕ್ಕೆ ಬಂದ ಅರಣ್ಯಸಿದ್ಧನು ತಂದೆಯ ಕಾಯಕವಾದ ಹಸು(ಕಿಲ್ಲಾರ)ಗಳನ್ನು ಕಾಯುವ ಕೆಲಸಕ್ಕೆ ಅಣಿಯಾದನು. ತಂದೆ-ತಾಯಿಯರ ಅಪ್ಪಣೆ ಪಡೆದುಕೊಂಡು ದನಗಳ ಹಿಂಡನ್ನು ಕಾಯುತ್ತಾ ದೇಶ ಸಂಚಾರ ಹೊರಟನು. ಆಗ ತಾಯಿ 'ಮಗನೇ ನಮಗೆ ವಯಸ್ಸಾಗಿದೆ. ಹೀಗೆ ನೀನು ದೇಶ ಸಂಚಾರ ಹೊರಟರೆ ನಮ್ಮನ್ನು ನೋಡಿಕೊಳ್ಳುವವರಾರು? ಕಿಲ್ಲಾರಗಳೆಲ್ಲವನ್ನು ನೀನೇ ಹೊಡೆದುಕೊಂಡು ಹೋದರೆ ನಮಗೆ ಹಾಲಿನ ಗತಿಯೇನು?' ಎಂದಳು. ಆಗ ಅರಣ್ಯಸಿದ್ಧ 'ತಾಯಿ ಚಿಂತಸಬೇಡ ನೀನು ಕೂಗಿದಾಗ ನಿನ್ನ ಬಳಿಬರುವೆ. ಪ್ರತಿ ದಿನವೂ ಗೂಳಿಯೊಂದು ನಿಮಗೆ ಹಾಲನ್ನು ತಂದು ಕೊಡುತ್ತದೆ ಮತ್ತು ನಾನು ಕಾಯಕದಲ್ಲಿದ್ದಾಗ ಅಥವಾ ಸಿದ್ಧಾಟಿಕೆಯಲ್ಲಿದ್ದಾಗ ನನ್ನ ಜೀನಕ್ಕೆ ಏನಾದರೂ ಅಪಾಯವಾದರೆ ಗೂಳಿ ತರುವ ಹಾಲು ರಕ್ತಮಯವಾಗಿರುತ್ತದೆ ಹಾಗೂ ಧರ್ಮರಾಯಕೊಟ್ಟ ಕಾಮಧೇನು ಕಲ್ಲಾಗುತ್ತದೆ.' ಎಂದನು.

ತಂದೆ-ತಾಯಿ ಮತ್ತು ಅಣ್ಣ ಮಲಕಾರಿಸಿದ್ಧನನ್ನು ಕೇರೂರು ಗ್ರಾಮದಲ್ಲಿಯೇ ಬಿಟ್ಟು ಅರಣ್ಯಸಿದ್ಧ ದನಗಳ ಹಿಂಡಿನೊಂದಿಗೆ ಚನ್ನ್ಯಾನಹಟ್ಟಿಯ (ಚಿಕ್ಕೋಡಿ ತಾಲೂಕ) ತಾದ್ನಳ್ಳಿ ಗುಡ್ಡಕ್ಕೆ ಬಂದನು. ದಟ್ಟವಾದ ಮರಗಳಿಂದ ಕೂಡಿದ ತಾದ್ನಳ್ಳಿಗುಡ್ಡದಲ್ಲಿ ತನ್ನ ದನಗಳ ಹಿಂಡು ಮೇಯಿಸಿದನು. ಮಧ್ಯಾಹ್ನ ತನ್ನ ಕಿಲ್ಲಾರಗಳಿಗೆ ನೀರು ಕುಡಿಸಲೆಂದು ಜೀವ ಜಲಕ್ಕಾಗಿ ಹುಡುಕಾಡ ತೊಡಗಿದ. ಅರಣ್ಯ ಮಧ್ಯದಲ್ಲಿ ನೀರು ತುಂಬಿಕೊಂಡ ಒಂದು ವಿಶಾಲವಾದ ಕೆರೆ ಕಾಣಿಸಿತು. ಆ ಕೆರೆಯ ಕಾವಲಿಗೆ ಗ್ರಾಮಸ್ಥರು, ಅದೇ ಊರಿನ ಭಾಗಮ್ಮ ಎನ್ನುವ ಹೆಣ್ಣು ಮಗಳನ್ನು ನೇಮಿಸಿದ್ದರು. ಕೆರೆ ಸಮೀಪ ಬಂದ ಅರಣ್ಯಸಿದ್ಧ ತನ್ನ ದನಗಳ ಹಿಂಡಿಗೆ ಕೆರೆಯಲ್ಲಿ ನೀರು ಕುಡಿಯಲು ಅವಕಾಶ ನೀಡಬೇಕೆಂದು ಅವಳನ್ನು ಕೇಳಿದನು. ಕಾವಲುಗಾರ ಭಾಗಮ್ಮ ಇದಕ್ಕೆ ಸಮ್ಮತಿಸಲಿಲ್ಲ. ಇದರಿಂದ ಸಿಟ್ಟೆಗೆದ್ದ ಅರಣ್ಯಸಿದ್ಧ ತನ್ನ ದನಗಳಿಗೆ ಮೈತುಂಬಿಕೊಂಡ ಕೆರೆಯ ಒಡ್ಡನ್ನು ಒಡೆಯುವಂತೆ ಆಜ್ಞೆ ಮಾಡಿದನು. ದನಗಳ ಹಿಂಡು ಕ್ಷಣ ಮಾತ್ರದಲ್ಲಿ ತಮ್ಮ ಕಾಲಿನ ಗೊರೆಸಿನಿಂದ ಕೆರೆಯ ಒಡ್ಡನ್ನು ಒಡೆದು ನೀರು ಹೊರ ಹೋಗುವಂತೆ ಮಾಡಿದವು. ಇದರಿಂದಾಗಿ ಹರಿಯುವ ನೀರನ್ನು ಕುಡಿದ ದನಗಳ ಹಿಂಡು

ತೃಪ್ತಿಗೊಂಡಿತು. ತನ್ನ ಕಣ್ಣ ಮುಂದೆ ನಡೆದ ಅರಣ್ಯಸಿದ್ಧನ ಸಿದ್ಧಾಡಿಕೆಯನ್ನು ನೋಡಿದ ಭಾಗಮ್ಮ, ಇವನು ಸಾಮಾನ್ಯನಲ್ಲ, ದೈವಿ ಪುರುಷನೇ ಇರಬೇಕೆಂದು ತಿಳಿದುಕೊಂಡು ತಾನು ಮಾಡಿದ ತಪ್ಪನ್ನು ಮನ್ನಿಸಬೇಕೆಂದು ಪಾದಕ್ಕೆ ಎರಗಿ ಕೇಳಿಕೊಂಡಳು. ಅರಣ್ಯಸಿದ್ಧ ಭಾಗಮ್ಮಳ ತಪ್ಪನ್ನು ಮನ್ನಿಸಿ ಆಶೀರ್ವದಿಸಿದನು.

ಹಲವು ದಿನಗಳ ನಂತರ ಅರಣ್ಯಸಿದ್ಧ ತನ್ನ ದನಗಳ ಹಿಂಡಿನೊಂದಿಗೆ ತಾದ್ನಳ್ಳಿ ಗುಡ್ಡದಿಂದ ಗೋಕಾಕ ತಾಲೂಕಿನ ಜೋಕಾನಟ್ಟಿ ಗ್ರಾಮಕ್ಕೆ ಬಂದನು. ಇಲ್ಲಿರುವಾಗ ತನ್ನ ಸಿದ್ಧಾಟಿಕೆಯನ್ನು ಮೆರೆದು ಶಿವಲಿಂಗವೊಂದನ್ನು ಸ್ಥಾಪಿಸಿದನು. ಅದು ಇಂದು ಅರಣ್ಯಸಿದ್ಧೇಶ್ವರ ದೇವಾಲಯವೆಂದು ಪ್ರಚಾರದಲ್ಲಿದೆ. ಕೆಲವು ದಿನಗಳ ನಂತರ ಅರಣ್ಯಸಿದ್ಧ ಜೋಕಾನಟ್ಟಿ ಗ್ರಾಮದಿಂದ ದಂಡಾಪೂರ ಗ್ರಾಮಕ್ಕೆ ತನ್ನ ಹಿಂಡಿನೊಂದಿಗೆ ಬಂದು ಬೀಡು ಬಿಟ್ಟನು. ಇಲ್ಲಿರುವಾಗ ಪರಪ್ಪ ಎನ್ನುವ ಬಡವನಿಗೆ ಶ್ರೀಮಂತಿಕೆಯ ಭಾಗ್ಯವನ್ನು ಕರುಣಿಸಿದನು. ತನ್ನ ಪವಾಡಗಳ ಮೂಲಕ ಅನೇಕ ಬಂಜೆಯರಿಗೆ ಮಕ್ಕಳಾಗುವ ಭಾಗ್ಯವನ್ನು ಕಲ್ಪಿಸಿದನು. ಅರಣ್ಯಸಿದ್ಧ ಮುಂದೆ ದಂಡಾಪೂರದಿಂದ ಕಬ್ಬೂರ ಗ್ರಾಮಕ್ಕೆ ತನ್ನ ದನಗಳ ಹಿಂಡಿನೊಂದಿಗೆ ಆಗಮಿಸಿದ. ಅಲ್ಲಿ ಬತ್ತಿ ಹೋಗಿದ್ದ ಕೆರೆಗೆ ತನ್ನ ಪವಾಡದ ಮೂಲಕ ನೀರನ್ನು ತುಂಬಿಸಿದ. ತನ್ನ ಕಿಲ್ಲಾರಗಳನ್ನು ಹಾಗೆಯೇ ಮೇಯಿಸುತ್ತ, ಸಿದ್ಧಾಟಿಕೆ ಮಾಡುತ್ತ ಕಬ್ಬೂರದಿಂದ ಬಾಗೇವಾಡಿ, ಮುನ್ನೋಳ್ಳಿ, ಕರೋಶಿ ಗ್ರಾಮಗಳನ್ನು ದಾಟಿಕೊಂಡು ತೆಳಗಿನ (ಪೂರ್ವದ) ಗ್ರಾಮಗಳಾದ ತೇರದಾಳ, ಜಮಖಂಡಿ, ನಾವಲಗಿ ಗ್ರಾಮಗಳಿಗೆ ಬಂದನು.

೫. ಅಲಕನೂರಿನ ಮಡ್ಡಿ ಪ್ರದೇಶಕ್ಕೆ ಅರಣ್ಯಸಿದ್ಧನ ಆಗಮನ ಮತ್ತು ಕರೇಸಿದ್ಧನೊಂದಿಗೆ ಸಂಘರ್ಷ :

ನಾವಲಗಿ ಗ್ರಾಮದ ನಂತರ ಅರಣ್ಯಸಿದ್ಧ ತನ್ನ ಕಿಲ್ಲಾರಗಳನ್ನು ಮೇಯಿಸುತ್ತ ಮೇಲ(ಪಶ್ಚಿಮ)ಕ್ಕೆ ಮುಖಮಾಡಿ ಸಂಚರಿಸುತ್ತ ಕೊನೆಗೆ ರಾಯಬಾಗ ತಾಲೂಕಿನ ಹಾರೂಗೇರಿ–ಅಳಗವಾಡಿ–ಅಲಕನೂರ ಎಂಬ ಮೂರು ಗ್ರಾಮಗಳು ಕೂಡುವ ವಿಶಾಲ ಮರಡಿ ಪ್ರದೇಶಕ್ಕೆ ಬಂದು ಠಿಕಾಣಿ ಹೂಡಿದನು. ಅಂದು ಈ ಪ್ರದೇಶವು ಬೀರಸಿದ್ಧ(ಕರೇಸಿದ್ಧ)ನೆಂಬ ಇನ್ನೊಬ್ಬ ಸಿದ್ಧಿಪುರುಷನಿಂದ ಪ್ರಭಾವಿತವಾಗಿದ್ದು, ಅದು ಬೀರಪ್ಪನ ಮಡ್ಡಿಯೆಂದು ಕರೆಯಲ್ಪಡುತ್ತಿತ್ತು. ಇಂಥ ಸ್ಥಳಕ್ಕೆ ಆಗಮಿಸಿದ ಅರಣ್ಯಸಿದ್ಧ ತನ್ನ ದನಕರುಗಳನ್ನು ಮೇಯಿಸುತ್ತ ಒಂದು ದಿನ ಅಲಖನೂರ ಗ್ರಾಮದ ಕೊತ್ತಲಕೇರಿ ಎಂಬ ಕೆರೆಗೆ ನೀರು ಕುಡಿಸಲು ಬಂದನು. ಆಗ ಕರೇಸಿದ್ಧ ತನ್ನ ಪ್ರದೇಶದಲ್ಲಿ, ಅರಣ್ಯಸಿದ್ಧನಿಗೆ ದನಗಳನ್ನು ಮೇಯಿಸುವುದಕ್ಕೆ ಮತ್ತು ಕೊತ್ತಲಕೇರಿಯ ಕೆರೆಯಲ್ಲಿ ನೀರು ಕುಡಿಸುವುದಕ್ಕೆ ಅವಕಾಶ ನೀಡಲಿಲ್ಲ. ಈ ವಿಚಾರವಾಗಿ ಅವರಿಬ್ಬರ ಮಧ್ಯದಲ್ಲಿ ದೊಡ್ಡ ಯುದ್ಧವೇ ನಡೆಯಿತು. ಈ ಸಂಘರ್ಷವು ಪ್ರಮುಖ ಎರಡು ದೈವಗಳ ನಡುವಿನ ಹೋರಾಟವಾಗಿತ್ತು. ಹೀಗಾಗಿ ಈ ಹೋರಾಟವು ಪವಾಡಗಳ ರೂಪವನ್ನು ಪಡೆದುಕೊಂಡಿದ್ದು ವಿಶೇಷ.

ಆರಂಭದಲ್ಲಿ ಕರೇಸಿದ್ಧ, ತನ್ನಲ್ಲಿರುವ ಸರ್ಪಗಳನ್ನು ಅರಣ್ಯಸಿದ್ಧನ ಮೇಲೆ ದಾಳಿ ಮಾಡಲು ಬಿಟ್ಟನು. ಸಿದ್ಧಪುರುಷನಾದ ಅರಣ್ಯಸಿದ್ಧ ಅವುಗಳನ್ನು ತನ್ನ ಪವಾಡದ ಮೂಲಕ ಹೂವಿನ ಮಾಲೆಗಳನ್ನಾಗಿ ಮಾಡುವ ಮೂಲಕ ಕೊರಳಿಗೆ ಹಾರ ಮಾಡಿಕೊಂಡನು. ನಂತರ ಚೇಳುಗಳ ದಾಳಿಯಾದಾಗ ಅವುಗಳನ್ನು ಕೈಬೆರಳುಗಳಿಗೆ ಉಂಗುರಗಳನ್ನಾಗಿ ಮಾಡಿಕೊಂಡನು. ಏಡಿಗಳ ದಾಳಿಯಾದಾಗ ಅವುಗಳನ್ನು ಕಾಲಿಗೆ ಕಡಗಗಳನ್ನಾಗಿ ಮಾಡಿಕೊಂಡನು. ಕಾಳಿಂಗ ಸರ್ಪದ ದಾಳಿಯಾದಾಗ ಅದನ್ನು ಸೋಲಿಸಿ ತನ್ನ ಸೇವಕನನ್ನಾಗಿ

ಮಾಡಿಕೊಂಡನು. ಈ ಎಲ್ಲ ದಾಳಿಗಳಿಗೆ ಅರಣ್ಯಸಿದ್ಧ ಸೋಲದೇ ಇದ್ದಾಗ ಕರೇಸಿದ್ಧ ತನ್ನಲ್ಲಿರುವ ರಾಕ್ಷಸ ಪಡೆಯನ್ನು ಕಳುಹಿಸಿದ. ಈ ರಾಕ್ಷಸರ ದಾಳಿಯನ್ನು ಎದುರಿಸಲು ಅರಣ್ಯಸಿದ್ಧ, ಈ ಹಿಂದೆ ಗುರು ವಿಠ್ಠಲರಾಯನಿಂದ ಕಾಣಿಕೆ ರೂಪದಲ್ಲಿ ಪಡೆದುಕೊಂಡ ಬಂದ ಕನ್ನೆರವ್ವ ಎನ್ನುವ ರಾಕ್ಷಸಿಯನ್ನು ಕರೆದು ಕೊಂಡ ಬಂದನು. ಶಕ್ತಿಶಾಲಿ ಕನ್ನೆರವ್ವ ರಾಕ್ಷಸಿಯು, ದಾಳಿ ಮಾಡಲು ಬಂದ ಎಲ್ಲ ರಾಕ್ಷಸ ಪಡೆಯನ್ನು ಸೋಲಿಸಿ ಅರಣ್ಯಸಿದ್ಧನಿಗೆ ಜಯದೊರಕಿಸಿ ಕೊಟ್ಟಳು.

ಯುದ್ಧದ ನಂತರ ಕನ್ನೆರವ್ವಳನ್ನು ಮತ್ತೆ ಯಲ್ಪಾರಟ್ಟಿ-ಖೇಮಲಾಪೂರ ಸೀಮೆಯಲ್ಲಿರುವ ಬಾಂವಿಯಲ್ಲಿ ತಂದಿಟ್ಟನು. ಅಲ್ಲದೆ ಪ್ರತಿ ವರ್ಷಕ್ಕೊಮ್ಮೆ ನಿವಾಳಿಕೆ ರೂಪದಲ್ಲಿ ಅವಳಿಗೆ ಆಹಾರ ನೀಡುವುದಾಗಿ ಮಾತು ಕೊಟ್ಟ ಅಲ್ಲಿಂದ ಹಿಂದುರುಗಿದ. ಅರಣ್ಯಸಿದ್ಧ ಎಂದಿನಂತೆ ದನಗಳ ಹಿಂಡನ್ನು ಕಾಯುವ ತನ್ನ ಕಾಯಕದಲ್ಲಿ ನಿರತನಾದ. ದನಗಳನ್ನು ಮೇಯಿಸುತ್ತ ಅರಣ್ಯಸಿದ್ಧ ಎರಡನೇ ಬಾರಿಗೆ ತನ್ನ ದನ-ಕರುಗಳಿಗೆ ನೀರು ಕುಡಿಸುವುದಕ್ಕಾಗಿ ಅಲಕನೂರಿನ ಕೊತ್ತಲಕೇರಿಯ ಕೆರೆಗೆ ಬಂದನು. ಆಗ ಕರೇಸಿದ್ಧನು ಬೇಡರ ಗುಂಪೊಂದನ್ನು ಆತನ ವಿರುದ್ಧ ಹೋರಾಡಲು ಕಳುಹಿಸಿದನು. ಅರಣ್ಯಸಿದ್ಧ ಬೇಡರ ಗುಂಪಿನೊಂದಿಗೆ ಹೋರಾಟ ಮಾಡಿದ.

೬. ತಾಯಿ ಜನ್ನವ್ವಳ ಪ್ರಲಾಪ ಮತ್ತು ಅರಣ್ಯಸಿದ್ಧನ ಅಂತ್ಯ :

ಅರಣ್ಯಸಿದ್ಧನ ದನಗಳ ಹಿಂಡಿನಲ್ಲಿದ್ದ ಆಕಳೊಂದು ತಾನಿರುವ ಸ್ಥಳದಿಂದ ದಿನವೂ ಕೇರೂರ ಗ್ರಾಮದಲ್ಲಿದ್ದ ತಾಯಿ ಜನ್ನವ್ವ ಮತ್ತು ಮನೆಯವರಿಗೆ ಹಾಲನ್ನು ತೆಗೆದುಕೊಂಡು ಹೋಗುತ್ತಿತ್ತು. ಅರಣ್ಯಸಿದ್ಧ ಮರಣ ಶಯ್ಯೆಯಲ್ಲಿದ್ದ ದಿನವೂ ಕೂಡ ಆಕಳು ಹಾಲನ್ನು ತೆಗೆದುಕೊಂಡು ಮನೆಗೆ ಹೋಯಿತು. ತಾಯಿ ಜನ್ನವ್ವ ಎಂದಿನಂತೆ ಕೊಡವನ್ನು ಕೆಳಗಿಳಿಸಿಕೊಂಡು ನೋಡುತ್ತಾಳೆ. ಕೊಡದಲ್ಲಿದ್ದ ಹಾಲು ರಕ್ತಮಯವಾಗಿತ್ತು. ಅಶುಭ ಸೂಚನೆಯನ್ನು ಕಂಡು ದಿಗಿಲುಗೊಂಡ ತಾಯಿ ಮನೆಯಂಗಳಕ್ಕೆ ಬಂದು ಧರ್ಮರಾಯ ಕೊಟ್ಟ ಕಾಮಧೇನುವನ್ನು ನೋಡಿದಳು. ಅದು ಕಲ್ಲಾಗಿ ನಿಂತಿತ್ತು. ಇದರಿಂದ ಆಘಾತಗೊಂಡ ತಾಯಿ ತನ್ನ ಮಗ ಅರಣ್ಯಸಿದ್ಧನಿಗೆ ಏನೋ ಅವಗಡ ಸಂಭವಿಸಿ ಆತನ ಜೀವಕ್ಕೆ ಅಪಾಯವಾಗಿರುವುದಾಗಿ ಭಯಗೊಂಡಳು. ತನ್ನ ಹಿರಿಯ ಮಗ ಮಲಕಾರಿಸಿದ್ಧನನ್ನು ಕರೆದು ಕೊಂಡು ಅರಣ್ಯಸಿದ್ಧನಿರುವ ಜಾಗಕ್ಕೆ ಹೋಗಲು ಚಡಪಡಿಸಿದಳು. ಅದು ರಾತ್ರಿಯ ಸಮಯವಾದ್ದರಿಂದ ಗ್ರಾಮದ ಯಾರೂ ಇವರ ಜೊತೆ ಬರಲು ಒಪ್ಪಿಕೊಳ್ಳಲಿಲ್ಲ. ಆದರೂ ಧೃತಿಗೇಡದ ತಾಯಿ ಮತ್ತು ಮಲಕಾರಿಸಿದ್ಧ ದಿವಟಿಗೆಗಳನ್ನು ತಯಾರಿಸಿಕೊಂಡು ಅವುಗಳ ಬೆಳಕಿನಲ್ಲಿ ಗ್ರಾಮದ ಇಬ್ಬರು ಹರಿಜನರ ಸಂಗಡ ರಾಯಬಾಗದೆಡೆಗೆ ನಡೆದರು.

ಕರಳು ಕುಡಿಯಾದ ಅರಣ್ಯಸಿದ್ಧನನ್ನು ಮನದಲ್ಲಿಯೇ ನೆನೆಯುತ್ತ ಪ್ರತಿ ಹೆಜ್ಜೆಗೂ ಆತನನ್ನು ಕಾಣಲು ಹಂಬಲಿಸಿದಳು. ಚಿಕ್ಕ ಧ್ವನಿ ಕೇಳಿದರು ಸಾಕು 'ಸಿದ್ಧಾ ಎಲ್ಲಿರುವೇ?' ಎಂದು ತನ್ನ ಮಗನಿಗಾಗಿ ಹುಡುಕಿದಳು. ಹೀಗೆ ಅವರು ಅರಣ್ಯಸಿದ್ಧನನ್ನು ಹುಡುಕುತ್ತ ರಾಯಬಾಗ ದಾಟಿ ಮೊರಬ ಗ್ರಾಮದ ಹಳ್ಳಕ್ಕೆ ಬಂದಾಗ ಇನ್ನೂ ಮೂಡಲು ಹರಿಯಲು ಒಂದೆರಡು ಗಳಿಗೆ ಇತ್ತು. ಆದರೆ ಆ ಹೊತ್ತಿಗಾಗಲೇ ಬೆಳಕು ನೀಡುವ ದೀವಟಿಗೆಗಳಲ್ಲಿದ್ದ ಎಣ್ಣೆ ಮುಗಿದು ಹೋಗಿ ಅವು ನಂದಿದವು. ಇದು ಎರಡನೇ ಅಪಶಕುನವಾಯಿತೆಂದು ತಾಯಿ ಚಡಪಡಿಸಿದಳು. ಎದೆಯಲ್ಲಿ ಏನೋ ತಳಮಳ, ವೇದನೆ. ದೀವಟಿಗೆಯ

ಬೆಳಕಿನಂತೆ ಎಲ್ಲಿ ತನ್ನ ಮಗನು ಕೂಡ ನಂದಿ ಹೋದನೇ, ಎಂದೂ ಭಯಗೊಂಡಳು. ಅಪಶಕುನಗಳನ್ನು ಕಂಡರೂ ಕೂಡ ತನ್ನ ಮಗ ಅರಣ್ಯಸಿದ್ಧನಿಗೆ ಜೀವಕ್ಕೆ ಯಾವ ತೊಂದರೆಯೂ ಆಗದೇ ಸುರಕ್ಷಿತವಾಗಿರಲೆಂದು ದೇವರಲ್ಲಿ ಬೇಡಿಕೊಂಡಳು. ದೇವರ ನಾಮಸ್ಮರಣೆ ಮಾಡುತ್ತ ಹಳ್ಳದ ನೀರನ್ನೇ ನಂದಿದ ದೀವಟಿಗೆಗಳಿಗೆ ಹಾಕಿ ದೀಪ ಹೊತ್ತಿಸಿದಳು.

ಬೆಳಕು ಹರಿಯುವ ಹೊತ್ತಿಗೆ ಅವರು ಅಲಕನೂರ-ಅಳಗವಾಡಿ-ಹಾರೂಗೇರಿ ಗ್ರಾಮಗಳ ಹದ್ದಿಯಲ್ಲಿರುವ ಬೀರಪ್ಪನ ಮಡ್ಡಿಗೆ ಬಂದು ತಲುಪಿದರು. ತಾಯಿ, 'ಮಗನೇ ಅರಣ್ಯಸಿದ್ಧ ಎಲ್ಲಿರುವೆ?' ಎಂದು ಕೂಗಿದಳು. ಆ ಸಮಯದಲ್ಲಿ ಉತ್ತರ ದಿಕ್ಕಿನಿಂದ ಆರ್ತ ಧ್ವನಿಯೊಂದು ಕೇಳಿ ಬರುತ್ತಿತ್ತು. ಆ ಧ್ವನಿಯನ್ನು ಬೆನ್ನತ್ತಿದ್ದ ಅವರು ದಟ್ಟ ಅರಣ್ಯ ಮಧ್ಯದಲ್ಲಿರುವ ಅಲಕನೂರಿನ ಕೊತ್ತಲಕೆರೆಗೆ ಬಂದು ತಲುಪಿದರು. ಸುತ್ತ-ಮುತ್ತಲೂ, ಗಿಡ-ಗಂಟಿ ಪೊದೆಗಳ ಮಧ್ಯ ಹುಡುಕಿದರು ಅರಣ್ಯಸಿದ್ಧ ಕಾಣಲಿಲ್ಲ. ಕೊನೆಗೆ ಅಣ್ಣ ಮಲಕಾರಿಸಿದ್ಧ 'ತಮ್ಮಾ ಅರಣ್ಯಸಿದ್ಧ ಎಲ್ಲಿರುವೆ?' ಎಂದು ಕೂಗಿದನು. ಅಲ್ಲಿ ಎಷ್ಟೇ ಹುಡುಕಿದರು ತಮ್ಮ ಅರಣ್ಯಸಿದ್ಧನ ಧ್ವನಿ ಮಾತ್ರ ಕೇಳುತ್ತಿತ್ತು, ಅವನು ಮಾತ್ರ ಕಣ್ಣಿಗೆ ಕಾಣಲಿಲ್ಲ. ತಮ್ಮನನ್ನು ಹುಡುಕುತ್ತ-ಹುಡುಕುತ್ತ ಅಲ್ಲಿಯೇ ಮಲಕಾರಿಸಿದ್ಧ ಐಕ್ಯನಾದನು. ಯಲ್ಪಾರಟ್ಟಿಯಿಂದ ವಾಯುವ್ಯ ದಿಕ್ಕಿನಲ್ಲಿ ಅವನು ಐಕ್ಯನಾದ ಸ್ಥಳದಲ್ಲಿ ಇಂದು ಮಲಕಾರಿಸಿದ್ಧನ ದೇವಾಲಯವೊಂದನ್ನು ಕಟ್ಟಲಾಗಿದೆ.

ತಾಯಿ ಜನ್ನವ್ವ ಮಾತ್ರ ಮಗ ಅರಣ್ಯಸಿದ್ಧನನ್ನು ಹುಡುಕುತ್ತ ಅಲಕನೂರಿನ ಹದ್ದನ್ನು ದಾಟಿ ಯಲ್ಪಾರಟ್ಟಿ ಗ್ರಾಮದ ದಟ್ಟ ಅರಣ್ಯದಲ್ಲಿ ತನ್ನ ಪ್ರಯತ್ನವನ್ನು ಮುಂದುವರೆಸಿದಳು. ತಾಯಿಯು ಕೂಗಿದಾಗೊಮ್ಮೆ, ಮಗ ಅರಣ್ಯಸಿದ್ಧನ ಧ್ವನಿ ಒಂದು ಸಲ ಒಂದು ದಿಕ್ಕಿನಲ್ಲಿ ಕೇಳಿದರೆ ಮತ್ತೊಮ್ಮೆ ಇನ್ನೊಂದು ದಿಕ್ಕಿಗೆ ಕೇಳಿಸುತ್ತಿತ್ತು. ಆ ಧ್ವನಿ ಬರುವ ಸ್ಥಳವನ್ನು ಹುಡುಕುವುದು ತಾಯಿಗೆ ಕಷ್ಟವಾಯಿತು. ಕೊನೆಯ ಬಾರಿಗೆ ಆರ್ತನಾದದಿಂದ 'ಮಗು ಅರಣ್ಯಸಿದ್ಧ ಈಗಲಾದರೂ ನಿನ್ನ ಮುಖವನ್ನು ನನಗೆ ತೋರಿಸಲಾರೆಯಾ?' ಎಂದು ಪ್ರಲಾಪಿಸಿದಳು. ತನ್ನ ರಕ್ತ-ಸಿಕ್ತ ಮುಖವನ್ನು ತಾಯಿಗೆ ತೋರಿಸಿ ಅವಳ ದುಃಖವನ್ನು ಇನ್ನೂ ಹೆಚ್ಚಿಸುವುದು ಬೇಡವೆಂದುಕೊಂಡ ಅರಣ್ಯಸಿದ್ಧ ತಾಯಿಗೆ ತನ್ನ ಮುಖವನ್ನು ತೋರಿಸದೆ ಆ ಸ್ಥಳದಲ್ಲಿಯೇ ಐಕ್ಯನಾದನು. ಅರಣ್ಯಸಿದ್ಧ ಐಕ್ಯನಾದ ಸ್ಥಳದಲ್ಲಿ ಇಂದು ಭವ್ಯ ದೇವಾಲಯವೊಂದನ್ನು ಕಟ್ಟಲಾಗಿದೆ. ತಾಯಿ ಜನ್ನವ್ವ ಮಗನನ್ನು ಕಾಣದೆ ಆತನಿಗಾಗಿ ಹಂಬಲಿಸಿ ಈ ಪರಿಸರದಲ್ಲಿಯೇ ಪ್ರಾಣಬಿಟ್ಟಳು.

ಈ ಮೇಲೆ ವಿವರಿಸಿದ ಅರಣ್ಯಸಿದ್ಧೇಶ್ವರ ಕಾವ್ಯದ ಮುಖ್ಯ ನಿರೂಪಕರು ಸಿದ್ರಾಮಪ್ಪ ಯಲ್ಲಪ್ಪ ಲಾಳಿ ಮತ್ತು ಆತನ ಸಂಗಡಿಗರು. ತೋಂಡಿ ಸಂಪ್ರದಾಯದಲ್ಲಿ ದೊರೆಯುವ ಈ ಡೊಳ್ಳಿನ ಹಾಡುಗಳು ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರನ ಅಧ್ಯಯನಕ್ಕಿರುವ ಪ್ರಮುಖ ಆಕರಗಳು. ಇದೂ ಅಲ್ಲದೆ ಈ ಪರಿಸರದಲ್ಲಿರುವ ಹಾಲುಮತಸಂಬಂಧಿ ಅನ್ಯ ಪುರಾಣ ಕಥನಗಳಲ್ಲಿ, ಡೊಳ್ಳಿನ ಹಾಡುಗಳಲ್ಲಿ, ಈ ದೇವತೆಯ ಕುರಿತು ವಿವರಗಳು ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಲಭ್ಯವಿರುತ್ತವೆ. ಕಡಿಮೆ ಅವಧಿಯಲ್ಲಿ ಮತ್ತು ರಾಯಬಾಗ ಪರಿಸರದ ಒಟ್ಟು ಹಾಲುಮತ ದೈವಗಳನ್ನು ಅಧ್ಯಯಿನಿಸುವ ಸಂದರ್ಭದಲ್ಲಿ, ಅರಣ್ಯಸಿದ್ಧೇಶ್ವರನ ಸಂಪೂರ್ಣ ಕಾವ್ಯವನ್ನು ಕಟ್ಟಿ ಕೊಡುವುದು ಕಷ್ಟದಾಯಕ. ಹೀಗಾಗಿ ಇಲ್ಲಿ ಅದರ ಸಂಕ್ಷಿಪ್ತ ರೂಪವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಮುಂಬರುವ ಸಂಶೋಧಕರು ಇನ್ನೂ ಹೆಚ್ಚಿನ ಕ್ಷೇತ್ರಕಾರ್ಯ

ಮಾಡಿದಲ್ಲಿ ಅರಣ್ಯಸಿದ್ಧೇಶ್ವರನ ಮಹಾಕಾವ್ಯವನ್ನು ವಿಸ್ತೃತವಾಗಿ ಮತ್ತು ಸಂಪೂರ್ಣವಾಗಿ ರೂಪಿಸಿ ಸಾರಸ್ವತ ಲೋಕಕ್ಕೆ ಸಮರ್ಪಿಸಲು ಅವಕಾಶವಿದೆ.

ಅರಣ್ಯಸಿದ್ಧೇಶ್ವರ ದೇವಾಲಯ :

ಪ್ರಾಚೀನ ಕಾಲದ ಅರಣ್ಯಸಿದ್ಧೇಶ್ವರನ ದೇವಾಲಯವು ಚಿಕ್ಕದಾಗಿದ್ದು ಇಂದು ಆ ದೇವಾಲಯವೇ ಬೃಹದ್ದಾಕಾರವಾಗಿ ಜೀರ್ಣೋದ್ಧಾರಗೊಂಡಿರುವುದು. ಹಳೆಯ ದೇಗುಲದ ಹಿಂದಿನ ಭಾಗವು ಚಚ್ಚೌಕಾಕಾರದ ಗರ್ಭಗುಡಿಯಾಗಿದೆ. ಗರ್ಭಗುಡಿಯಲ್ಲಿ ಒಂದು ಕಟ್ಟೆಯಿದ್ದು ಇದರಲ್ಲಿಯ ಒಂದು ಭಾಗ ಗರ್ಭಗುಡಿ ಇನ್ನೊಂದು ಭಾಗ ಸುಖನಾಸಿಯಾಗಿದೆ. ಗರ್ಭಗುಡಿಯಲ್ಲಿರುವ ಕಟ್ಟೆಯ ಮೇಲೆ ಮೂರ್ತಿ ಇರದೇ ಒಂದು ಗದ್ದಿಗೆಯಿದ್ದು ಅಲ್ಲಿ ಆಕಾರವಿಲ್ಲದಂತಹ ಕೆಲವು ಗುಂಡುಕಲ್ಲುಗಳಿವೆ. ಅವುಗಳಿಗೆಯೇ ಬೆಳ್ಳಿಯ ಮುಖತೊಡಿಸಿ ಅರಣ್ಯಸಿದ್ಧೇಶ್ವರನ ಪೂಜೆಯನ್ನು ಮಾಡುತ್ತಾರೆ. ಆ ಗದ್ದಿಗೆಗೆ ಚಂದ್ರ (ಕೆಂಪುಬಣ್ಣ) ಸವರಿ ಪೂಜೆ ಮಾಡುತ್ತಿರುವರು. ಸುಖನಾಸಿಯ ಮುಂದೆ ಚೌಕಾಕಾರದ ಮಂಟಪವಿದೆ. ಮಂಟಪದ ಮುಂದಿನ ಎರಡು ಬದಿಗಳಲ್ಲಿ ಒಂದೊಂದು ಕಲ್ಲಿನಲ್ಲಿ ಕೆತ್ತಿದ ಟಗರುಗಳನ್ನು ಇಡಲಾಗಿತ್ತು. (ಸದ್ಯ ಅವುಗಳನ್ನು ಸ್ಥಳಾಂತರಿಸಲಾಗಿದೆ) ಈ ತೆರನಾದ ಪ್ರಾಚೀನ ದೇವಾಲಯವಿದ್ದು ನಂತರದಲ್ಲಿ ಜೀರ್ಣೋದ್ಧಾರಗೊಂಡಿದ್ದಾಗಿದೆ. ಅಂದರೆ ದೇವಾಲಯದ ಸುತ್ತಲೂ ಪೌಳಿಗಳನ್ನು ಕಟ್ಟಲಾಗಿದೆ. ಇಂದು ಒಂದು ಎಕರೆ ವಿಸ್ತೀರ್ಣದಲ್ಲಿ ದೇವಾಲಯ ಬೃಹದ್ದಾಕಾರವಾಗಿ ಬೆಳೆದು ನಿಂತಿದೆ. ದೇವಾಲಯಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ದ್ವಾರಗಳಿವೆ. ಪೂರ್ವ ದ್ವಾರವು ಪ್ರಮುಖ ದ್ವಾರವಾಗಿದ್ದು ಅರಭಾಂವಿಯ ಬಿಳಿ ಕಲ್ಲಿನಿಂದ ಭವ್ಯವಾಗಿ ಕಟ್ಟಲಾಗಿದೆ. ದೇವಾಲಯದ ಮುಂದೆ ವಿಶಾಲವಾದ ವರಾಂಡವಿದೆ. ದೇವಾಲಯದ ಮುಂದುಗಡೆ ಇತ್ತೀಚಿಗೆ ನಿರ್ಮಾಣವಾದ ಭವ್ಯವಾದ ಮಂಟಪವಿದೆ. ಅದು ಆರ್.ಸಿ.ಸಿ. ಸ್ಲ್ಯಾಬನಲ್ಲಿ ನಿರ್ಮಿತವಾಗಿದ್ದು ಅದರ ಮುಂದುಗಡೆ ಸುತ್ತ-ಮುತ್ತಲೂ ಬಹಳ ವಿಶಾಲವಾದ ಜಾಗವಿದೆ. ಅದರ ನೆಲೆ ಹಾಸನ್ನು ಸಿಮೆಂಟ ಬ್ಲಾಕಗಳಿಂದ ಅಂದಗೊಳಿಸಿದ್ದಾರೆ. ದಕ್ಷಿಣ ಮತ್ತು ಉತ್ತರಗಳಲ್ಲಿ ಸಣ್ಣ-ಸಣ್ಣ ದೇವಾಲಯಗಳಿವೆ. ಉತ್ತರದಲ್ಲಿರುವ ಚಿಕ್ಕ ದೇವಾಲಯದಲ್ಲಿ ದಕ್ಷಿಣಕ್ಕೆ ಮುಖಮಾಡಿ ಹನುಮಂತನ ಮೂರ್ತಿಯಿದೆ.

ದೇವಾಲಯದ ಪಕ್ಕದಲ್ಲಿ ಒಂದು ಭಂಡಾರಖಾನೆಯಿದೆ. ಭಂಡಾರಖಾನೆ ಇರುವುದು ಕುರುಬರ ದೇವಾಲಯದ ವಿಶೇಷತೆ. ಇಲ್ಲಿ ದೇವತಾ ಆರಾಧನೆಗೆ ಅವಶ್ಯವಿರುವ ಸಾಮಾನ್ಯವಾಗಿ ಡೊಳ್ಳು, ಸತ್ತಿಗೆ, ನಿಶಾನೆ, ತಾಳ ಜೊತೆಗೆ ಅಂಗಾರವಾದ ಭಂಡಾರವನ್ನು ಇಡುವ ಸ್ಥಳವಾಗಿರುತ್ತದೆ. ಭಂಡಾರಖಾನ ಅನ್ನುವ ಪದಕ್ಕೆ ವಿವಿಧ ಅರ್ಥಗಳಿವೆ. ಭಂಡಾರ ಎಂದರೆ ಕೋಶ-ಬ್ಯಾಂಕ. ಇನ್ನೊಂದು ಅರ್ಥ ದೇವಾಲಯದಲ್ಲಿರುವ ದೇವತೆಯನ್ನು ಪೂಜಿಸುವ ಸಾಮಾನುಗಳನ್ನು ಇಡುವ ಕೊಠಡಿ. ಇದರ ಮುಂದುಗಡೆ ಲಿಂಗಾಕಾರದ ಎರಡು ಶಿಲೆಗಳಿವೆ. ಇವತ್ತು ಅಲ್ಲಿ ಹೊಸದಾಗಿ ಇನ್ನೊಂದು ಶಿವಲಿಂಗವನ್ನು ಸ್ಥಾಪಿಸಲಾಗಿದೆ. ಅಲ್ಲದೆ ಅರಣ್ಯಸಿದ್ಧೇಶ್ವರ ದೇವಾಸ್ಥಾನದ ಮಂಟಪದ ಮುಂದುಗಡೆ ಒಂದು ಕಟ್ಟೆಯನ್ನು ನಿರ್ಮಿಸಿದ್ದು ಅದರ ಮೇಲೆ ಕಂಚಿನಿಂದ ತಯಾರಿಸಿದ ನಂದಿ ವಿಗ್ರಹವಿದೆ. ಅದರ ಮುಂದೆ ಕರಿಕಲ್ಲಿನಲ್ಲಿ ನಿರ್ಮಿಸಿದ ಪಂಚಮುಖಿ ಲಿಂಗವನ್ನು ಸ್ಥಾಪಿಸಲಾಗಿದೆ. (ಆರಂಭದಲ್ಲಿ ಇದು ಅರಣ್ಯಸಿದ್ಧೇಶ್ವರ ದೇವತೆಗೆ ಕರ್ಪೂರ ಬೆಳಗುವ ಸ್ಥಳವಾಗಿತ್ತು.) ಇದರ

ಜೊತೆಗೆ ಗರ್ಭಗೃಹವನ್ನು ಹೊಸದಾಗಿ ನಿರ್ಮಿಸಲಾಗಿದ್ದು ಅದನ್ನು ಈ ಮೊದಲಿನ ಚಚ್ಚೌಕಾಕಾರದ ದೇವಾಲಯಕ್ಕೆ ಜೋಡಿಸಲಾಗಿದೆ. ದೇವಾಲಯದ ಮಂಟಪದ ಮೇಲ್ಛಾವಣಿಯ ಎರಡು ಬದಿಗಳಲ್ಲಿ ಕಲ್ಲಿನಲ್ಲಿ ನಿರ್ಮಿಸಿದ ಎರಡು ನಂದಿ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಮಧ್ಯದಲ್ಲಿ ಕೋಷ್ಠಕವಿದ್ದು ಅಲ್ಲಿ ನಿಂತ ಭಂಗಿಯಲ್ಲಿರುವ ಚತುರ್ಭುಜನಾದ ಶಿವನ ಮೂರ್ತಿಯನ್ನು ಇಡಲಾಗಿದೆ.

ದೇವಸ್ಥಾನದ ಆವರಣಕ್ಕೆ ಹೊಂದಿಕೊಂಡಂತೆ ಹೊರಭಾಗದಲ್ಲಿ ದಕ್ಷಿಣ ದಿಕ್ಕಿನಲ್ಲಿ ಕಲ್ಯಾಣ ಮಂಟಪ ಹಾಗೂ ಇನ್ನಿತರ ಕಟ್ಟಡಗಳನ್ನು ಕಟ್ಟುವ ಮೂಲಕ ದೇವಾಲಯವನ್ನು ಭಕ್ತಿ ಕೇಂದ್ರವಾಗಿ, ಪ್ರೇಕ್ಷಣಿಯ ಸ್ಥಳವನ್ನಾಗಿ ಮತ್ತು ಪ್ರವಾಸಿ ಕೇಂದ್ರವಾಗಿ ನಿರ್ಮಿಸಲು ಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಲಾಗಿದೆ. ಇಷ್ಟು ಅದರ ಭೌತಿಕ ಕುರುಹುಗಳಾಗಿವೆ.

ಅರಣ್ಯಸಿದ್ಧೇಶ್ವರನ ಪೂಜಾ ವಿಧಾನ :

ಅರಣ್ಯಸಿದ್ಧೇಶ್ವರ ಇಡೀ ಗ್ರಾಮದ ಪ್ರಮುಖ ದೇವತೆ. ಇವತ್ತು ಅರಣ್ಯಸಿದ್ಧೇಶ್ವರ ಅಲ್ಲಿರುವ ಹಾಲುಮತ ಸಮುದಾಯಕ್ಕೆ ಮಾತ್ರ ಸಿಮೀತವಾಗಿಲ್ಲ. ಅಲ್ಲಿ ಎಲ್ಲಾ ಸಮುದಾಯದ ಜನರು ಇದ್ದಾರೆ. ಹಾಲುಮತ ಸಮುದಾಯವನ್ನು ಬಿಟ್ಟರೆ ಹೆಚ್ಚಿನ ಸಂಖ್ಯೆಯಲ್ಲಿರುವವರು ಲಿಂಗಾಯತರು. ಇವರು ಕೂಡ ಅರಣ್ಯಸಿದ್ಧೇಶ್ವರ ನಿಷ್ಠಾವಂತ ಭಕ್ತರು. ಇವರಲ್ಲದೇ ದಲಿತ, ಕೆಳವರ್ಗದ, ಮುಸ್ಲಿಂ ಇನ್ನೂಳಿದ ಎಲ್ಲ ಹಿಂದುಳಿದ ವರ್ಗದವರು ಗ್ರಾಮದಲ್ಲಿದ್ದಾರೆ. ಆದರೆ ಇಲ್ಲಿರುವ ಎಲ್ಲಾ ಸಮುದಾಯದವರು ಅರಣ್ಯಸಿದ್ಧೇಶ್ವರನ ಆರಾಧಕರು. ಇದು ಇಲ್ಲಿಯ ವಿಶೇಷ. ಈ ಆರಾಧನೆಯು ಕೂಡ ಬಹಳ ವಿಶಿಷ್ಟವಾದ ಪರಂಪರೆಯನ್ನು ಹೊಂದಿದೆ.

ಅರಣ್ಯಸಿದ್ಧೇಶ್ವರನನ್ನು ಪೂಜೆ ಮಾಡುವವರು ಒಡೆಯರ ಸಮುದಾಯದವರು. "ಕುರುಬರ ಗುರುವರ್ಗದವರಾದ ಇವರನ್ನು ಒಡೆಯರು, ಒಡೇರು, ಒಡೇರಯ್ಯೋರು, ಅಯ್ನೋರು, ಗುರುವಿನವರು, ಗುರುಗಳು, ಮಾರಾಯಗೋಳು ಎಂದು ಮುಂತಾಗಿ ಕರೆಯುತ್ತಾರೆ. ಈ ಎಲ್ಲಾ ಪದಗಳು ಅವರು ಪುರೋಹಿತವರ್ಗದವರು ಎಂಬುದನ್ನು ಸೂಚಿಸುತ್ತವೆ. 'ಒಡೆಯ' ಎಂದರೆ ಸಾಮಾನ್ಯವಾಗಿ ನಾಯಕ, ಯಜಮಾನ, ಮುಖ್ಯಸ್ಥ, ಸ್ವಾಮಿ, ಮುಂದಾಳು, ಅರಸ ಎಂದು ಕನ್ನಡ ನಿಘಂಟುಗಳಲ್ಲಿ ಹೇಳಲಾಗಿದೆ. ಪ್ರಸ್ತುತ ಇಲ್ಲಿ ಒಡೆಯ ಎಂದರೆ ಸ್ವಾಮಿ, ಧಾರ್ಮಿಕ ಮುಖಂಡ ಎನ್ನುವ ಪರಿಕಲ್ಪನೆಯಲ್ಲಿ ಬಳಕೆ ಆಗುತ್ತದೆ. ಇವರು ಅನನ್ಯತೆಗಾಗಿ ತಮ್ಮ ಹೆಸರುಗಳ ಕೊನೆಯಲ್ಲಿ 'ಒಡೆಯರು' ಎಂದು ಸೇರಿಸಿಕೊಳ್ಳುತ್ತಾರೆ."[೨೮]

ಕುರುಬರಲ್ಲಿರುವ ಒಡೆಯರು, ಈಗಾಗಲೇ ನಡೆದಿರುವ ಅಧ್ಯಯನಗಳಿಂದ ಅವರು ಕುರುಬರ ಗುರುಗಳು. ಇವರು ಶುದ್ಧ ಸಸ್ಯಾಹಾರಿಗಳು. ಇವರು ಇತರ ಹಾಲುಮತ ಸಮಾಜದ ಒಳಪಂಗಡಗಳ ಜೊತೆ ವೈವಾಹಿಕ ಸಂಬಂಧ ಬೆಳೆಸುವುದು ಕಡಿಮೆ. ವೈವಾಹಿಕ ಸಂಬಂಧ ಬೆಳೆಸಿದರು ಕೂಡ ಸಸ್ಯಾಹಾರಿಗಳೊಂದಿಗೆ ಮಾತ್ರ ಅವರು ಸಂಬಂಧಗಳನ್ನು ಬೆಳೆಸುತ್ತಾರೆ. ಲಿಂಗಾಯತ ಸಮುದಾಯದಲ್ಲಿ ಹೇಗೆ ಜಂಗಮರಿದ್ದಾರೋ ಹಾಗೆ ಕುರುಬ ಸಮಾಜದಲ್ಲಿ ನಾವು ಪೂಜ್ಯ ಸ್ಥಾನದಲ್ಲಿರುವುದರ ಬಗ್ಗೆ ಸ್ಪಷ್ಟವಾಗಿ ಹೇಳಿಕೊಳ್ಳುತ್ತಾರೆ. ಜೊತೆಗೆ ಅವರು ಬಹಳ ನಿಷ್ಠಾವಂತರು. ಇಲ್ಲಿರುವ ಜನರು ಕೂಡ ಅರಣ್ಯಸಿದ್ಧೇಶ್ವರನ ಆರಾಧನೆಯ ಅಂಗವಾಗಿ

ಒಡೆಯರರನ್ನು ಕರೆದು ಊಟಕ್ಕೆ ಬಡಿಸುತ್ತಾರೆ. ಲಿಂಗಾಯತರು ಜಂಗಮರಿಗೆ ಪ್ರಸಾದ ಸೇವೆ ಮಾಡುವಂತೆ ಇಲ್ಲಿರುವ ಭಕ್ತವೃಂದ ಒಡೆಯರರಿಗೆ ಪ್ರಸಾದ ಸೇವೆಯನ್ನು ಮಾಡುತ್ತಾರೆ. ಇಲ್ಲಿಯೂ ಕೂಡ ದಾಸೋಹ ಪರಂಪರೆಯ ಪ್ರಭಾವವನ್ನು ಕಾಣುತ್ತೇವೆ.

ಅರಣ್ಯಸಿದ್ಧೇಶ್ವರನ ಇವತ್ತೀನ ದೇವಸ್ಥಾನವನ್ನು ವಿಕ್ಷೀಸಿ, ಅಲ್ಲಿರುವ ಕುರುಹುಗಳನ್ನು ಪರೀಕ್ಷಿಸಿದರೆ, ಅಲ್ಲಿರುವ ಕಂಬಳಿ ಮತ್ತು ಭಂಡಾರ, ಡೊಳ್ಳು, ತಾಳ, ಸತ್ತಿಗೆ ಮುಂತಾದ ಕುರುಹುಗಳನ್ನು ಬಿಟ್ಟರೆ ಅಲ್ಲಿ ಹಾಲುಮತ ಸಮುದಾಯಕ್ಕೆ ಸಂಬಂಧಿಸಿದ ಯಾವುದೇ ಕುರುಹುಗಳು ಗೋಚರಿಸುವುದಿಲ್ಲ. ಸದ್ಯ ಅದು ಹೇಗೆ ಗೋಚರಿಸುತ್ತದೆಯೆಂದರೆ, ಹಾಲುಮತ ಸಮುದಾಯದಿಂದ ಶೈವ ಸಂಪ್ರದಾಯದತ್ತ ಅಂದರೆ ಭಂಡಾರ ಸಂಸ್ಕೃತಿಯಿಂದ ವಿಭೂತಿ ಸಂಸ್ಕೃತಿಯತ್ತ ಹೊರಳುತ್ತಿರುವ ಎಲ್ಲಾ ಲಕ್ಷಣಗಳು ಇಲ್ಲಿ ಗೋಚರಿಸುತ್ತವೆ. ದೇವಾಲಯದ ಹೊರಭಾಗದಲ್ಲಿ ಸ್ಥಾಪಿಸಿರುವ ಪಂಚಮುಖಿ ಲಿಂಗ, ನಂದಿ, ಮಂಟಪದ ಮೇಲಿರುವ ಶಿವನ ಮೂರ್ತಿ ಇವೆಲ್ಲವುಗಳನ್ನು ನೋಡಿದರೆ ಸಂಪೂರ್ಣವಾಗಿ ಇದು ಶೈವ ಸಂಸ್ಕೃತಿಯತ್ತ ವಾಲುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದಕ್ಕೆ ಏನೇ ಕಾರಣಗಳಿರಬಹುದು, ಅದಕ್ಕೆ ಮುಖ್ಯವಾದ ಕಾರಣವೇನೆಂದರೆ, ದೇವಾಲಯದ ಮುಖ್ಯ ಆಡಳಿತ ಮಂಡಳಿ(ಟ್ರಸ್ಟಿ)ಯವರೆಲ್ಲ ಶೈವ ಸಮುದಾಯದವರು (ಲಿಂಗಾಯತರು). ಹೀಗಿರುವಾಗ ಅರಣ್ಯಸಿದ್ಧೇಶ್ವರನನ್ನು ಅಗೋಚರವಾಗಿ ಸಾಂಸ್ಕೃತಿಕವಾಗಿ ಪರಿವರ್ತಿಸುತ್ತಿರುವ ಕ್ರಿಯೆ ತಿಳಿದೋ ಅಥವಾ ತಿಳಿಯದಯೋ ನಡೆಯುತ್ತ ಬಂದಿದೆ. ಆದರೆ ಅಲ್ಲಿರುವಂತಹ ದೇವತಾ ಆರಾಧನೆಯ ಅಂಶಗಳೆಲ್ಲ ಮಾತ್ರ ಸ್ಪಷ್ಟವಾಗಿ ಹಾಲುಮತ ಸಂಸ್ಕೃತಿಯನ್ನು ಕಾಣುತ್ತೇವೆ. ಉದಾಹರಣೆಗಾಗಿ ಪೂಜೆಯ ವೇಳೆಯಲ್ಲಿ ಡೊಳ್ಳು ಬಾರಿಸುವುದು, ಜಾತ್ರೆಯ ಸಮಯದಲ್ಲಿ ಭಂಡಾರ ಎರಚುವುದು, ದೇವಸ್ಥಾನಕ್ಕೆ ಬಂದ ಭಕ್ತರಿಗೆ ಭಂಡಾರವನ್ನು ಲೇಪಿಸುವುದು, ಅರಣ್ಯಸಿದ್ಧೇಶ್ವರನಿಗೆ ಚಾಂಗಭೋಲೋ ಎಂದು ಹೇಳುವುದು, ದೇವತೆಯನ್ನು ಪೂಜೆ ಮಾಡುವ ಸಂದರ್ಭಗಳಲ್ಲಿ ಒಡೆಯರು ಕಂಬಳಿ(ಜಾಡಿ)ಯನ್ನು ತಲೆಯ ಮೇಲೆ ಹೊತ್ತುಕೊಂಡು ಪೂಜಿಸುವುದು.

ಅರಣ್ಯಸಿದ್ಧೇಶ್ವರನ ಜಾತ್ರೆ :

"ಅರಣ್ಯಸಿದ್ಧೇಶ್ವರನ ಜಾತ್ರೆಯು ಕರಿಕಟ್ಟುವುದರ ಮೂಲಕ ಆರಂಭವಾಗಿ ನಿವಾಳಿಕೆಯಾಗುವುದರ ಮೂಲಕ ಕೊನೆಗೊಳ್ಳುತ್ತದೆ. ಕರಿಕಟ್ಟಿದ ನಂತರ ಗ್ರಾಮದ ಯಾರೊಬ್ಬರು ಕೂಡ ಯಲ್ಪಾರಟ್ಟಿ ಊರಿಂದ ಹೊರಹೋಗುವುದಿಲ್ಲ. ಸರ್ಕಾರಿ ನೌಕರಸ್ಥರು ಕೂಡ ರಜೆ ಪಡೆದುಕೊಂಡು ಊರ ವ್ಯಾಪ್ತಿಯಲ್ಲಿಯೇ ಉಳಿದುಕೊಳ್ಳುತ್ತಾರೆ. ನಿವಾಳಿಕೆಯಾದ ನಂತರವೇ ಗ್ರಾಮಸ್ಥರು ಊರಿನಿಂದ ಹೊರಹೋಗುತ್ತಾರೆ. ಜಾತ್ರೆಗೆ ಬರುವ ಭಕ್ತರು 'ಅರಣ್ಯಸಿದ್ಧನ ಜಾತ್ರೆ ಒಂದ ದಿನ ರಾತ್ರಿ' ಎಂದು ಘೋಷಣೆ ಮಾಡುತ್ತ ಜಾತ್ರೆಗೆ ಆಗಮಿಸುತ್ತಾರೆ."[೨೯] ಅರಣ್ಯಸಿದ್ಧೇಶ್ವರ ಜಾತ್ರೆಯು ಒಂದು ದಿನಕ್ಕೆ ಸಿಮೀತವಾದದ್ದು. ಅರಣ್ಯಸಿದ್ಧೇಶ್ವರನ ವಾಹನ ಕುದುರೆ. ಮಲಕಾರಿಸಿದ್ಧನ ವಾಹನವು ಕೂಡ ಕುದುರೆ. ಇಲ್ಲಿರುವ ಅರಣ್ಯಸಿದ್ಧೇಶ್ವರನ ಜಾತ್ರೆಯ ನಿವಾಳಿಕೆಗೆ ಸದ್ಯ ಕಾಡಾಪೂರದ ಪೂಜಾರಿ ಬರುತ್ತಾನೆ. ಈ ಮೊದಲು ಕೇರೂರ ಗ್ರಾಮದ ಪೂಜಾರಿ ಜಾತ್ರೆಯ ನಿವಾಳಿಕೆಗೆ ಬರುತ್ತಿದ್ದು ಪೂಜಾರಿಯಿಂದೊಡಗೂಡಿದ ಐದು ಜನರ ತಂಡ ಬಂದು ನಿವಾಳಿಕೆ ಮಾಡಿ

ಹೋಗುತ್ತಿದ್ದರು. ಈ ನಿವಾಳಿಕೆ ಮಾಡುವ ಕ್ರಮದ ಹಿಂದೆ ಏಳುಮಕ್ಕಳ ತಾಯಿ ಖನ್ನೇರವ್ವಳ ಸ್ವಾರಸ್ಯಕರ ಕಥೆಯಿದೆ.

ಯಲ್ಲಾರಟ್ಟಿ ಗ್ರಾಮದ ಉತ್ತರ ದಿಕ್ಕಿನ ಬಾವಿಯೊಂದರಲ್ಲಿರುವ ಏಳುಮಕ್ಕಳ ತಾಯಿ ಖನ್ನೇರವ್ವಳನ್ನು ತೃಪ್ತಿ ಪಡಿಸುವುದಕ್ಕಾಗಿ ಪ್ರತಿ ವರ್ಷಕ್ಕೊಮ್ಮೆ ಅವಳಿಗೆ ನಿವಾಳಿಕೆ (ಆಹಾರ) ಕೊಡುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದೇ ಪರಂಪರೆಯು ಇಂದಿಗೂ ಕೂಡ ಮುಂದುವರೆದುಕೊಂಡು ಬಂದಿರುತ್ತದೆ.

ಏಳುಮಕ್ಕಳ ತಾಯಿಗೆ ಆಹಾರ ನೀಡಲು ಹೋಗುವ ಅರಣ್ಯಸಿದ್ಧೇಶ್ವರನ ಪೂಜಾರಿಯು ತಲೆ ಮೇಲೆ ಜಾಡಿ ಹೊತ್ತು ಭತ್ತಲೆಯಾಗಿ ಆ ಭಾವಿಯತ್ತ ತೆರಳುತ್ತಾನೆ. (ಭಕ್ತರು ನಾಲ್ಕು ದಿಕ್ಕಿನಲ್ಲಿ ಸುತ್ತಲೂ ಹಿಡಿದ ಕಂಬಳಿ ಮರೆಯಲ್ಲಿ ಪೂಜಾರಿ ಸಾಗುತ್ತಾನೆ). ಈ ರೀತಿಯಾಗಿ ಪೂಜೇರಿ ಭತ್ತಲೆಯಾಗಿ ಹೋಗುವುದು ವೈರಾಗ್ಯದ ಸಂಕೇತ. ಇಲ್ಲಿ ಅರಣ್ಯಸಿದ್ಧೇಶ್ವರ ಆರಾಧನೆಯ ಅಂಗವಾಗಿ ನಿವಾಳಿಕೆ ಮಾಡುವುದು ನಡೆದುಕೊಂಡು ಬಂದಿರುವುದು. ನಿವಾಳಿಕೆಯ ನಂತರ ದೇವರ ಪಲ್ಲಕ್ಕಿ ದೇವಾಲಯದ ಸುತ್ತುಹಾಕುತ್ತದೆ. ಪಲ್ಲಕ್ಕಿ ದೇವಾಲಯದ ಸುತ್ತ ಸುತ್ತುವಾಗ, ಪಲ್ಲಕ್ಕಿ ಮತ್ತು ದೇವಸ್ಥಾನದ ಮೇಲೇ ಭಕ್ತರು ಖಾರಿಕ, ಕೊಬ್ಬರಿ, ಕುಂಕುಮ, ಭಂಡಾರ, ಬಾಳೆಹಣ್ಣುಗಳನ್ನು ಹಾರಿಸುತ್ತಾರೆ. ಇಲ್ಲಿಗೆ ಒಂದು ದಿನದ ಜಾತ್ರೆಯು ಮುಕ್ತಾಯವಾಗಿ, ಒಡೆದ ಜಾತ್ರೆ ಒಂದೆರಡು ದಿನಗಳವರೆಗೆ ಮುಂದುವರೆಯುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಜಾತ್ರೆಯು ೩ ದಿನಗಳವರೆಗೆ ನಡೆದು, ಅದು ಅಧಿಕೃತವಾಗಿ ೩ ದಿನಗಳವರೆಗೆ ನೇರವೆರುವ ಜಾತ್ರೆಯಾಗಿ ಮಾರ್ಪಟ್ಟಿದೆ. ಆದರೆ ಮೂಲದಲ್ಲಿ ಅರಣ್ಯಸಿದ್ಧೇಶ್ವರನ ಜಾತ್ರೆ ಒಂದೇ ದಿನದ್ದು.

ಅರಣ್ಯಸಿದ್ಧೇಶ್ವರನ ಪ್ರಭಾವ :

ಅರಣ್ಯಸಿದ್ಧೇಶ್ವರ ತನ್ನ ಭಕ್ತರ ಮನೆಗೆ ಹೋಗುವುದು ಸಂಪ್ರದಾಯವಿದೆ. ಪೂಜಾರಿ ದೇವರ ಕುದುರೆ, ಜೊತೆಗೆ ವಾಲಗ ಮೇಳದವರು ಭಕ್ತರ ಮನೆಗೆ ಹೋಗಿ ಪೂಜಾ ವಿಧಿ-ವಿಧಾನಗಳನ್ನು ನೇರವೇರಿಸಿಕೊಡುತ್ತಾರೆ. ಭಕ್ತರು ಮನೆಗೆ ಬಂದ ದೈವಕ್ಕೆ ಔತಣಕೂಟದ ಏರ್ಪಾಡು ಮಾಡಿರುತ್ತಾರೆ. ಜಾತ್ರೆಯ ಸಂದರ್ಭದಲ್ಲೂ ಒಡೆಯರನ್ನು ಮತ್ತು ದೇವರ ಸೇವೆಯಲ್ಲಿ ನಿರತರಾದ ಆಳುಮಕ್ಕಳನ್ನು ತಮ್ಮ ಬಿಡಾರಕ್ಕೆ ಆಹ್ವಾನಿಸುವ ಭಕ್ತರು, ಬಾಳೆಹಣ್ಣಿನಿಂದ ತಯಾರಿಸಿದ ಸಿಕರಣೆಯ ಊಟವನ್ನು ಮಾಡಿಸುವ ಮೂಲಕ ಅನ್ನ ಸಂತರ್ಪಣೆಯನ್ನು ಮಾಡುತ್ತಾರೆ. ಒಡೆಯರರಿಗೆ ಕೊನೆಯಲ್ಲಿ ತಾಂಬೂಲದ ಜೊತೆಗೆ ದಕ್ಷಿಣೆಯನ್ನು ಕೊಡುತ್ತಾರೆ.

ಬಾಳೆಹಣ್ಣಿನಿಂದ ತಯಾರಿಸಿದ ಸಿಕರಣೆಯ ನೈವದ್ಯವು ವಿಶಿಷ್ಟವಾಗಿದ್ದು, ಅದು ಈ ದೇವತೆಗೆ ಅರ್ಪಿತವಾಗುವ ಒಂದು ಬಗೆಯ ವಿಶಿಷ್ಟವಾದ ಖಾದ್ಯ. ಈ ಪರಿಸರದ ಬೇರೆ ಇನ್ನಾವುದೇ ದೇವತೆಗೂ ಈ ರೀತಿಯ ನೈವದ್ಯ ಸಮರ್ಪಿತವಾಗುವುದಿಲ್ಲ. ಸಮಪ್ರಮಾಣದಲ್ಲಿ ಬೆಲ್ಲ ಮತ್ತು ಬಾಳೆಹಣ್ಣುಗಳನ್ನು ನೀರಿನಲ್ಲಿ ಹಾಕಿ ಈ ಸಿಕರಣೆಯನ್ನು ತಯಾರಿಸಲಾಗುತ್ತದೆ. ಈ ದೇವತೆ ಶುದ್ಧ ಸಸ್ಯಾಹಾರಿ ದೇವರು. ಇಲ್ಲಿ ಮಾಂಸಾಹಾರದ ಯಾವುದೇ ಲವಲೇಷವು ಕಂಡು ಬರುವುದಿಲ್ಲ. ಮಾಂಸಾಹಾರ ಸೇವನೆ ಮಾಡಿದ ಭಕ್ತರು

ದೇವಾಲಯವನ್ನು ಪ್ರವೇಶಿಸುವುದು ಅಘೋಷಿತ ನಿರ್ಬಂದವಾಗಿರುತ್ತದೆ. ಮಾಂಸಾಹಾರ ಸೇವಿಸಿದವರು ದೇವತಾ ದರ್ಶನಕ್ಕೆ ಬರುವುದಾದಲ್ಲಿ ಸ್ನಾನ ಮಾಡಿ ಶುಚಿತ್ವಗೊಳ್ಳುವುದು ಇಲ್ಲಿಯ ಸಂಪ್ರದಾಯ.

ವೈಶಿಷ್ಟ್ಯಗಳು :

ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರನ ಕುರಿತಾದ ಎಲ್ಲ ಅಂಶಗಳನ್ನು ಗಮನಿಸಿದಾಗ ಕಂಡುಬರುವ ಮಹತ್ವದ ಅಂಶವೇನೆಂದರೆ, ಅರಣ್ಯಸಿದ್ಧೇಶ್ವರ ಹಾಲುಮತ ಸಮುದಾಯದ ಒಬ್ಬ ಧೀಮಂತ ನಾಯಕನಾಗಿರಬಹುದು. ಏಕೆಂದರೆ, ಆತನು ಹಸುಗಳನ್ನು ಮೇಯಿಸುತ್ತ ಬಂದ ಪರಿಸರವನ್ನು ವೀಕ್ಷಿಸಿದಾಗ ಅದು ಗೋಚರಿಸುತ್ತದೆ. ಉದಾಹರಣೆಗೆ ಕೇರೂರು, ಯಕ್ಸಂಬಾ, ಕಾಡಾಪೂರ ಮೊದಲಾದ ಈ ಪ್ರದೇಶಗಳು ಈ ಸಮುದಾಯದ ಒಬ್ಬ ಧಿರೋದಾತ್ತ ನಾಯಕನಾಗಿದ್ದು ತನ್ನ ಸಮರ್ಥ್ಯ ಮತ್ತು ಯುಕ್ತಿಯೊಂದಿಗೆ ನಾಯಕತ್ವವನ್ನು ಪಡೆದು ಕೊಂಡಿರಬಹುದು. ಯಾಕೆಂದರೆ ಅಂದು ನಮ್ಮಲ್ಲಿ ಗೋಗ್ರಹಣ ಮಾಡುವ ಕಳ್ಳರಿದ್ದರು. ಗೋವುಗಳೇ ಧನಸಂಪತ್ತು.

ಇಲ್ಲಿ ಜನಜನಿತವಾಗಿರುವ ಒಂದು ವಿಷಯವೇನೆಂದರೆ, ಕರೇಸಿದ್ಧೇಶ್ವರನಿಗೂ ಮತ್ತು ಅರಣ್ಯಸಿದ್ಧೇಶ್ವರನಿಗೂ ಸಂಘರ್ಷ ಏರ್ಪಟ್ಟಿರುವುದು. ಅರಣ್ಯಸಿದ್ಧೇಶ್ವರನ ದನಗಳನ್ನು ಅಪಹರಿಸಲು ಕರೇಸಿದ್ಧ ಅಲಕನೂರಿನ ೫೦೦ ಜನ ಬೇಡರನ್ನು ಕಳುಹಿಸಿದ್ದ. ಅಲಕನೂರಿನಿಂದ ಬಂದ ಬೇಡರ ಗುಂಪು ಅರಣ್ಯಸಿದ್ಧೇಶ್ವರನ ಗೋವುಗಳನ್ನು ಅಪಹರಣ ಮಾಡಲು ಪ್ರಯತ್ನಿಸಿದಾಗ ಅವರಿಗೂ ಮತ್ತು ಅರಣ್ಯಸಿದ್ಧೇಶ್ವರನಿಗೂ ಕಾದಾಟ ಆದದ್ದು ಸಹಜ. ಆ ಕಾದಾಟದಲ್ಲಿ ಬೇಡರನ್ನು ಹತ್ತಿಕ್ಕಿ ತನ್ನ ಗೋವುಗಳನ್ನು ಕಾಪಾಡಿ ಕೊಳ್ಳುತ್ತಾನೆ. ಬಹುಶಃ ಈ ಕಾರಣದಿಂದ ಇತನ ನಾಯಕತ್ವದ ಪಟ್ಟವನ್ನು ಪಡೆದುಕೊಂಡನೋ ಅಥವಾ ತನ್ನ ಜನಸಂಪರ್ಕದೊಂದಿಗೆ ಮತ್ತು ತನ್ನ ಸಮುದಾಯದ ಜನರನ್ನು ಆಕರ್ಷಿಸಿ ನಾಯಕನಾದನೋ ಎಂಬುದನ್ನು ಹೇಳುವುದು ಕಷ್ಟ, ಅಥವಾ ಈ ಎರಡು ಕಾರಣಗಳಿದ್ದರೂ ಇರಬಹುದು. ಒಂದು ರೀತಿಯಲ್ಲಿ ವೀರತ್ವ/ಶೌರ್ಯ, ಇನ್ನೊಂದು ಕಡೆ ತನ್ನ ಆಂತರಿಕ ಶಕ್ತಿಯನ್ನು ಪ್ರದರ್ಶಿಸುವ ಮೂಲಕ ನಾಯಕನಾಗಿ ರೂಪಗೊಂಡಿರಬಹುದು. ಇವತ್ತು ಆ ಶಕ್ತಿಯ ಆರಾಧಕರೇ ಇವತ್ತಿನ ಅವನ ಭಕ್ತರಾಗಿರುವುದನ್ನು ಕಾಣುತ್ತೇವೆ. ಕೇವಲ ಯಲ್ಪಾರಟ್ಟಿ ಮಾತ್ರವಲ್ಲ ರಾಯಬಾಗ ತಾಲೂಕಿಗೂ ಸಿಮೀತವಾಗಿರದೇ ಬೆಳಗಾವಿ ಜಿಲ್ಲೆಯೊಳಗೊಂಡಂತೆ ವಿಜಯಪುರ, ಬಾಗಲಕೋಟ ಜೊತೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿ ಪ್ರದೇಶಗಳ ಅನೇಕ ಭಕ್ತರು ಕೂಡ ಇವತ್ತು ಅರಣ್ಯಸಿದ್ಧೇಶ್ವರನ ದೈವತ್ವವನ್ನು ಒಪ್ಪಿಕೊಂಡು ಆರಾಧನೆಯನ್ನು ಮಾಡುತ್ತಿದ್ದಾರೆ.

೩.೨.೧.೩ ಕಂಕಣವಾಡಿ ಹಾಲಸಿದ್ಧೇಶ್ವರ :

ರಾಯಬಾಗ ತಾಲೂಕ ಹಾಲುಮತದ ಪ್ರಮುಖ ದೇವತೆಗಳ ಉಗಮಸ್ಥಾನವಾಗಿದ್ದು, ಹಾಲುಮತದ ತವರೂರೆಂದು ಖ್ಯಾತಿ ಹೊಂದಿದೆ. ಹಾಲುಮತ ಅಧ್ಯಯನದ ಸಾಕಷ್ಟು ಆಕರಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಈ ನೆಲವನ್ನು ಬಗೆದಷ್ಟು-ಅಗೆದಷ್ಟು ಹೊಸ-ಹೊಸ ಅಂಶಗಳು ಬೆಳಕಿಗೆ ಬರುತ್ತಲೇ ಇದ್ದು, ಈ ಪರಿಸರದ ನಿಧಿಯನ್ನು ಶೋಧಿಸುವುದು ಅತೀ ಅವಶ್ಯಕ. ಇಲ್ಲಿ ಕಂಡು ಬರುವ ಪ್ರಮುಖ ದೇವತೆಗಳಲ್ಲಿ ಕಂಕಣವಾಡಿಯ ಹಾಲಸಿದ್ಧನಾಥನು ಒಬ್ಬ. ಹಾಲಸಿದ್ಧನ ದೇವಸ್ಥಾನ ಶೈವ ಮತ್ತು ನಾಥ ಸಂಪ್ರದಾಯಗಳ ಮಹಾಸಮನ್ವಯದ ಸಂಗಮ ಸ್ಥಳವಾಗಿದೆ. ಹಾಲಸಿದ್ಧನ ಕುರಿತಾಗಿ ಲಭ್ಯವಾಗುವ ಎಲ್ಲ ಮಾಹಿತಿಗಳು ತೊಂಡಿ ಮೂಲದ ಡೊಳ್ಳಿನ ಹಾಡುಗಳಿಂದ ಕೂಡಿದ್ದು ಸ್ಪಷ್ಟವಾಗಿಲ್ಲ. ಆದರೂ ಹಾಲಸಿದ್ಧನಾಥ ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಲಕ್ಷಾಂತರ ಭಕ್ತರನ್ನು ಹೊಂದಿದ್ದಾನೆ.

ಐತಿಹಾಸಿಕವಾಗಿ ಕಂಕಣವಾಡಿಯು ತನ್ನದೇ ಆದ ಅಸ್ತಿತ್ವವನ್ನು ಹೊಂದಿದ್ದು, ರಟ್ಟರ ಆಳ್ವಿಕೆಯ ಕಾಲದಲ್ಲಿ ಇದು ಕೂಂಡಿ ಮೂರುಸಾವಿರ ನಾಡಿನ ಕುರುಂಬೆಟ್ಟ ಕಂಪನದ ಬಳಿಯ ಬಾಡ ಎಂದು ಕರೆಯಲ್ಪಡುತ್ತಿತ್ತು. ಇದರ ಪ್ರಾಚೀನ ಹೆಸರು ಕಂಕಣೂರು. ಸದ್ಯ ಕಂಕಣವಾಡಿ ಎಂದು ಕರೆಯಲ್ಪಡುವ ಈ ಪಟ್ಟಣ, ರಾಯಬಾಗ ತಾಲೂಕಾ ಸ್ಥಳದಿಂದ ದಕ್ಷಿಣಕ್ಕೆ ಸುಮಾರು ೨೦ ಕಿ. ಮೀ. ದೂರದಲ್ಲಿದ್ದು, ಸಂಕೇಶ್ವರ-ಮುಧೋಳ ರಾಜ್ಯ ಹೆದ್ದಾರಿಯ ಮೇಲಿದೆ. ಇತ್ತೀಚಿಗೆ ಗ್ರಾಮ ಪಂಚಾಯತಿಯಿಂದ ಪಟ್ಟಣ ಪಂಚಾಯತಿಗೆ ಮೇಲ್ದರ್ಜೆಗೆರಿದ್ದು ತಾಲೂಕಿನ ಕೊನೆಯ ಗಡಿ ಪಟ್ಟಣವಾಗಿದೆ. ಗೋಕಾಕ ತಾಲೂಕಿನ ಮೂಡಲಗಿ ಪಟ್ಟಣಕ್ಕೆ ತುಂಬಾ ಸಮೀಪವಾಗಿದ್ದು ಜನ ತಮ್ಮ ನಿತ್ಯದ ವಹಿವಾಟಿಗೋಸ್ಕರ ಅಲ್ಲಿಗೆ ಹೋಗುತ್ತಾರೆ. ಇಲ್ಲಿಯ ಒಟ್ಟು ಜನಸಂಖ್ಯೆ ಇಪ್ಪತ್ತೈದು ಸಾವಿರ. ಸುಮಾರು ಹತ್ತು ಸಾವಿರದಷ್ಟಿರುವ ಹಾಲುಮತ ಸಮುದಾಯದವರಿದ್ದು ಬಹುಸಂಖ್ಯಾತರಾಗಿದ್ದಾರೆ. ಉಪ್ಪಾರರದು ಎರಡನೆಯ ಪ್ರಮುಖ ಸಮುದಾಯವಾಗಿದ್ದರೆ, ಲಿಂಗಾಯತರದು ಮೂರನೆಯ ಸಮುದಾಯವಾಗಿದೆ.

ಗ್ರಾಮ/ಪಟ್ಟಣದ ಪ್ರಮುಖ ಅಧಿದೇವತೆ ಹಾಲಸಿದ್ಧೇಶ್ವರ. ಇವನನ್ನು ಹಾಲಪ್ಪ, ಹಾಲಸಿದ್ಧಪ್ಪ, ಹಾಲಸಿದ್ಧ, ಹಾಲಸಿದ್ಧನಾಥ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹಾಲಸಿದ್ಧನಾಥ ದೇವಾಲಯದ ಪಕ್ಕದಲ್ಲಿಯೇ ಇರುವ ಲಕ್ಕವ್ವ, ಇನ್ನೊರ್ವ ಪ್ರಮುಖ ಸ್ತ್ರೀ ದೇವತೆಯಾಗಿದ್ದಾಳೆ. ಆದರೆ ಇವುಗಳಿಗಿಂತಲೂ ಪ್ರಾಚೀನವಾದ ದೇವತೆಯೆಂದರೆ ಮಹಾಲಿಂಗೇಶ್ವರನದು. ದೇವಾಲಯದಲ್ಲಿ ಶಿವಲಿಂಗವಿದ್ದು ಅದನ್ನು ಜಂಗಮರು ಪೂಜಿಸುತ್ತಾರೆ. ಇದಲ್ಲದೇ ಸ್ಥಳೀಯರು ನಾಗದೇವತೆಯ ಪ್ರತಿಮೆಯೊಂದನ್ನು ಆರಾಧಿಸುತ್ತಿದ್ದು, ಅದನ್ನು ಕಟ್ಟೆಪ್ಪನೆಂದು ಕರೆಯುತ್ತಾರೆ. ವಿಷಕಾರಿಗಳಾದ ಹಾವು-ಚೇಳುಗಳ ನಿವಾರಕ ದೇವತೆ ಕಟ್ಟೆಪ್ಪ. ಇವನನ್ನು ಪೂಜಿಸಿದರೆ ಮನೆಗಳಲ್ಲಿ ಹಾವು-ಚೇಳುಗಳ ಕಾಟವಿರುವುದಿಲ್ಲವೆಂಬ ನಂಬಿಕೆ. ಇಟ್ಟಪ್ಪ ಮತ್ತು ಮುರುಸಿದ್ಧನ ಮತ್ತು ರೇವಣಸಿದ್ಧನ ಗುಡಿಗಳು ಪಟ್ಟಣದಲ್ಲಿದ್ದು ಹಾಲುಮತದವರು ಪೂಜಿಸುತ್ತಾರೆ. ಇದನ್ನು ಹೊರತು ಪಡಿಸಿ ಹರಿಜನಕೇರಿಯಲ್ಲಿ ಗೋಣೆಪ್ಪನ ದೇವಾಲಯವಿದ್ದು ಅದನ್ನು ದಲಿತರು ಪೂಜಿಸಿತ್ತಾರೆ. ದುರ್ಗವ್ವ ದೇವತೆಯನ್ನು ಮಾದಿಗರು ಪೂಜಿಸುತ್ತಾರೆ. ಜೈನರ ಬಸದಿಯೊಂದು ದೇಶಪಾಂಡೆಯವರ ಮನೆಯ ಹತ್ತಿರ ಇತ್ತೆಂದು ಕೆಲವು ಹಿರಿಯರು ಹೇಳುತ್ತಾರೆ. ಆದರೆ ಅದನ್ನು ಕಣ್ಣಾರೆ ಕಂಡವರು ಯಾರು

ಇಂದು ಲಭ್ಯವಿಲ್ಲ. ಆದರೆ ಹಾಲಸಿದ್ಧನ ದೇವಸ್ಥಾದ ಪೌಳಿಯನ್ನು ಕಟ್ಟುವಾಗ ಬಸದಿಯೊಂದರ ಅವಶೇಷಗಳನ್ನು ಬಳಸಿರುವುದಾಗಿ ಪೂಜಾರಿಗಳು ಹೇಳುತ್ತಾರೆ. ಇವಲ್ಲದೆ ಇತ್ತಿಚೀಗೆ ಕಂಕಣವಾಡಿಯಲ್ಲಿ ಯಲ್ಲಮ್ಮ, ಹಣಮಂತ, ವಿಠ್ಠಲರ ದೇವಾಲಯಗಳು ನಿರ್ಮಿಸಲ್ಪಟ್ಟಿದ್ದು, ಪೂಜಿಸಲ್ಪಡುತ್ತಿವೆ. ಈ ಎಲ್ಲ ದೇವತೆಗಳು ಪೂಜಿಸಲ್ಪಡುತ್ತಿದ್ದರು ಕೂಡ ಹಾಲಸಿದ್ಧನಾಥನೇ ಪಟ್ಟಣದ ಪ್ರಮುಖ ದೈವನಾಗಿದ್ದಾನೆ.

ಕಂಕಣವಾಡಿಯ ಪ್ರಾಚೀನತೆ :

ರಾಯಬಾಗ ಪರಿಸರಕ್ಕೆ ಸಂಬಂಧಿಸಿದ ಪ್ರಾಚೀನ ಇತಿಹಾಸ ಅತ್ಯಲ್ಪ ಪ್ರಮಾಣದಲ್ಲಿ ಲಭ್ಯವಾಗಿದ್ದು, ಆರಂಭದ ಚರಿತೆಯು ಅಸ್ಪಷ್ಟತೆಯಿಂದ ಕೂಡಿದೆ. ಆದರೆ ಕಲ್ಯಾಣದ ಚಾಲುಕ್ಯರ ಆಡಳಿತ ಮತ್ತು ನಂತರದ ಚರಿತ್ರೆಗೆ ಸಂಬಂದಿಸಿದಂತೆ ಸಾಕಷ್ಟು ಮಾಹಿತಿಗಳು ಲಭ್ಯವಾಗುತ್ತವೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ರಾಯಬಾಗ ಪ್ರದೇಶ ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಆಗ ಈ ಪ್ರದೇಶವನ್ನು ಚಾಲುಕ್ಯರ ಮಾಂಡಲಿಕರಾದ ವೇಣುಗ್ರಾಮದ ಅಂದರೆ ಇಂದಿನ ಬೆಳಗಾವಿಯ ರಟ್ಟರು ಆಳುತ್ತಿದ್ದರು. ನಂತರ ಬಹಮನಿ, ಆದಿಲಶಾಹಿ, ಪೇಶ್ವೆ ಇವರ ಆಳ್ವಿಕೆಗೆ ಒಳಪಟ್ಟಿತ್ತು. ಬ್ರಿಟಿಷ ಆಳ್ವಿಕೆಗಿಂತ ಮೊದಲು ಶಾಹು ಮನೆತನದ ಸಂಸ್ಥಾನವೆನಿಸಿತ್ತು. ವೈವಿಧ್ಯಮಯವಾದ ಆಳರಸರ ಆಡಳಿತ ವ್ಯಾಪ್ತಿಗೆ ಒಳಪಟ್ಟ ಬೆಳಗಾವಿ ಸಹಜವಾಗಿ, ಸಾಂಸ್ಕೃತಿಕವಾಗಿ, ಭಾಷಿಕವಾಗಿ ಅನೇಕ ಏರುಪೇರುಗಳನ್ನು ಕಂಡ ಜಿಲ್ಲೆಯಾಗಿದೆ. ಈ ಜಿಲ್ಲೆಯೂ "ಅನೇಕ ಅರಸರ ಆಡಳಿತಕ್ಕೆ ಒಳಪಟ್ಟಿದ್ದರೂ, ಇಲ್ಲಿಯೇ ಉದಯವಾಗಿ, ಇಲ್ಲಿಯೇ ಪತನವಾದ ಏಕೈಕ ಸಾಮಾಜ್ಯವೆಂದರೆ 'ರಟ್ಟರ ಸಾಮ್ರಾಜ್ಯ'. ವಿಶೇಷವಾಗಿ ಜಿಲ್ಲೆಯ ಬಹುಬಾಗ ಆಳಿದ ರಟ್ಟರ ಸ್ಮಾರಕಗಳು ಇನ್ನೂ ಇದ್ದು, ಅವರು ಜೈನ ಧರ್ಮಿಯರು ಮತ್ತು ಅಪ್ಪಟ ಕನ್ನಡಿಗರೆಂದು ಸಾರುತ್ತಿದೆ. ಇವರ ಮೊದಲ ರಾಜಧಾನಿ ಸೌಗಂಧವರ್ತಿ, ಈಗಿನ ಸವದತ್ತಿ. ನಂತರ ಬೆಳಗಾವಿ ಈ ರಾಜಧಾನಿಯನ್ನು ಸ್ಥಳಾಂತರಿಸಲಾಯಿತು."[೩೦]

ರಟ್ಟ ಮನೆತನಕ್ಕೆ ಸೇರಿದ "ಶಾಸನವು (ಸಂ.೬) ಮೂಲತಃ ಚಿಕ್ಕೋಡಿ ತಾಲೂಕಿನ ರಾಯಬಾಗದಲ್ಲಿ ದೊರೆತಿದ್ದು ಅದು ಈಗ ಕೊಲ್ಹಾಪೂರದಲ್ಲಿಯ ಲಕ್ಷ್ಮೀವಿಲಾಸ ಅರಮನೆಯ ವಸ್ತು ಸಂಗ್ರಹಾಲಯದಲ್ಲಿದೆ. ಇದಕ್ಕೆ ಪೂರ್ವದಲ್ಲಿ ಇದನ್ನು ಇದೇ ಊರಿನ ಇರ್ವಿನ್ ಒಕ್ಕಲುತನ ಸಂಗ್ರಹಾಲಯದಲ್ಲಿ ಇಡಲಾಗಿತ್ತು. ಇದನ್ನು ಪ್ರೊ. ಕುಂದಣಗಾರರವರು ತಮ್ಮ Inscritions in Northern Karnataka and Kolhapur State ಇದರಲ್ಲಿ ಪ್ರಕಟಿಸಿದ್ದಾರೆ. (ಸಂ.೨೩) ಈ ಶಾಸನದಲ್ಲಿ ಆಳರಸನಾದ ಚಾಲುಕ್ಯ ಅರಸನ ಹೆಸರಿಲ್ಲ. ರಟ್ಟ ಕಾರ್ತವೀರ್ಯನ ಪ್ರಶಸ್ತಿಯಿಂದ ಇದು ಆರಂಭವಾಗುತ್ತದೆ."[೩೧]

ಆದರೆ ಲಭ್ಯವಾಗುವ ಇನ್ನಿತರ ವಂಶಾವಳಿಗಳ ಆಧಾರಗಳಿಂದ ಇಲ್ಲಿ ಉಲ್ಲೇಖಿತನಾಗಿರು ಕಾರ್ತವೀರ್ಯನು ೨ನೇ ಅಥವಾ ೪ನೇ ಕಾರ್ತವೀರ್ಯನೇ ಎನ್ನುವುದು ಸ್ಪಷ್ಟವಾಗಿ ಗುರುತಿಸುವುದು ಕಷ್ಟವಾಗಿದೆ. ಈ ಶಾಸನವೂ ಒಡೆದು ಹೋಗಿದ್ದರಿಂದ ಅದೇ ಅರ್ಥವನ್ನು ಕೊಡುವ ಶಾಸನವೊಂದನ್ನು ಕಾರ್ತವೀರ್ಯನ ಆಧೀನನಾದ ಹೆಮ್ಮಣಯ್ಯನೆಂಬುವನು ಪುನರ್ಲಿಖಿತ ಗೊಳಿಸಿದಂತೆ ಶಾಸನ ಹೇಳುತ್ತದೆ. ಆ ಶಾಸನದ ಪಾಠ ಇಂತಿದೆ.

೧೫) ಬಪ್ಪನ ಸಿಂಗಂ ನಾಮಾದಿ ಪ್ರಶಸ್ತಿಸಹಿತಂ ಶ್ರೀಮನ್ಮಹಾ ಮಂಡಳೇಶ್ವರ ಕಾರ್ತ್ರವೀರ್ಯ ದೇವರಸರ್ ವೇಣುಗ್ರಾಮೆಯ ನೆಲೆ

೧೬) ವೀಡಿನೊಳೆ ಸುಕಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತುಮಿರೆ ತತ್ಪಾದಪದ್ಮೋಪಜೀವಿಗಳ್॥ ಕಂಕಣನೂರ ಪ್ರ

೧೭) ಭು ವೀತಾಂಕುಶ ಬಾಚರಸನಮಹಾತ್ಮನ ಸತಿ ಸತ್ಪಂಕರುಹವದನೆ ಪುಂಣ್ಯಾಳಂ. . . ವೇಣಿ ಪರಸಿಯವ್ವೆಯ

೧೮) ವರ್ಗ್ಗಳ ತನುಜರ್ ॥ ೬ ॥ ಶ್ರೀಕಾಂತಂ ಹೆಮ್ಮಣಯಂ ನಿಜಕುಳಫಳಿತಾಂಮ್ರಾಕರೋತ್ತುಂಗ ವಜ್ರ । ಪ್ರಾಕಾ

೧೯) ರಂ ಚಿಟ್ಟಣಯ್ಯಂ ಪ್ರಕಟಿತಮಹಿಮಂ ತೋಷಿತಾಶೇಷಿವಿದ್ವ । ಲ್ಲೋಕಂ ಶ್ರೀ ಕಾಳಿಮಯ್ಯಂ ಸಕಳನೃಪಸಭಾ ಸ್ತುತ್ಯ

೨೦) ಸಾಹಿತ್ಯವಾಕ್ಯಾಂ । ತಾಕಾಂತಂ ರಟ್ಟರಾಜ್ಯೋದ್ಧರಣ ಪರಿಣತಂ ಮಂತ್ರಿ ಚಾವುಂಡರಾಯಂ ॥ ೭ ॥ ನಯನಿ

೨೧) ಪುಣರುಪಾಯಚತು । ಷ್ಟಯಂಗಳಂ ರಟ್ಟರಾಜ್ಯದೊಳ್ದೆಶೆ ವರುಣಾ । ಶ್ರಯದೊಳ್ ಬಿದಿ ನಿಲಿಸಿದ

೨೨) ನೆನೆ । ಜಯಾಶ್ರಯರ್ತ್ತಂಮ್ಮ ನಾಲ್ವರುಂ ಸೊಗಯಿಸುವರ್ ॥ ೮ ॥ ಅಗ್ರಜನವರೊಳ್ವಾದಾ । ನುಗ್ರಹಸರ್ವ್ವಜ್ಞ

೨೩)ನಾತ ಪತಿಯ ಮಹೀಮಾ ।ಳಾಗ್ರಣಿಯ ಕಾರ್ತವೀರ್ಯ್ಯನುಗ್ರಹದಿಂದ ಹೆಂಮರಾಜನೂರ್ಜಿತ ತೇಜಂ ॥ ೯ ॥

೨೪) ಬರೆಯಿಸಿದಂ ನಿಜವಂಶದ । ಪುರಾತನರ್ಪ್ಪಡೆದ ಶಾಸನಮಂ ತಾ ಪರಂ । ಪರೆಯಿಂ ಸ್ಫುಟಿಯಿಸೆ ಮುನ್ನಂ । ಬರೆದರ್ತ್ಥ

೨೫) ಮನಿದರೊಳದರ ಲಿಖಿತಕ್ರಮದಿಂದ ॥ ೧೦ ॥ ಅದೆಂತೆಂದೊಡೆ ॥ ಸ್ವಸ್ತಿ ಸಮಸ್ತ ಧರಾವೃತ । ವಿಸ್ತೀರ್ಣ್ನಯಶಃ ಪ್ರಕಾಶನೆ

೨೬) ರೆಗನೃಪಲೋ । ಕಸ್ತುತ ರಟ್ಟಾನ್ವಯಮೂ । ಲಸ್ತಂಭಂ ಪ್ರಾಜ್ಯರಾಜ್ಯವಿಭವಾರಂಭಂ ॥ ೧೧ ॥ ಸುಖದಿಂ ನಿಜರಾಜಧಾನಿ

೨೭) ಕೂಂಡಿಯ ಪಟ್ಟಣದೊಳು ರಾಜ್ಯಂಗೆಯ್ಯುತ್ತುಮಿರ್ದ್ದು ಶಕವರ್ಷದ ೫೦೦ ನೆಯ ಭಾವ ಸಂವತ್ಸರದ ಆಷಾ

೨೮) ಢ ಶುದ್ಧ ೧೦ ಸೋಮವಾರದಂದು ಶ್ರೀಮನ್ಮಹಾ ಮಂಡಳೇಶ್ವರನೆರಗದೇವರಸರ್ ಶ್ರೀಮನ್ಮಹಾಪ್ರಧಾನಂ ಮಾದಿ

೨೯) ರಾಜದಣ್ನಾಯಕರ್ಗ್ಗೆ ಕೂಂಡಿಮೂರು ಸಾಸಿರದ ಕುರುಂಬೆಟ್ಟ ಗಂಪಣದ ಬಳಿಯ ಬಾಡ ಕಂಕಣನೂರ ಪ್ರಜಾಪ್ರಭುತ್ವಮಂ

೩೦) ಅಷ್ಟಭೋಗ ತೇಜಸಾಮ್ಯ ಸಹಿತಂ ಧಾರಾಪೂರ್ವ್ವಕಂ ಕೊಟ್ಟ ಸಾಮಾನ್ಯಭೂಮಿ ಊರಿಂ ಮೂಡಲ್ ಮೋದಿಣಿಯ ಸೀ—

ಈ ಮೇಲಿನ ಶಾಸನದ ವಿವರಣೆಯಂತೆ, ಇದು ರಟ್ಟ ವಂಶದ ದೊರೆ ಕಾರ್ತ್ತವೀರ್ಯನಿಗೆ ಸಂಬಂಧಿಸಿದ ಶಾಸನವಾಗಿದ್ದು, ಮಹಾಮಂಡಳೇಶ್ವರ ಕಾರ್ತ್ತವೀರ್ಯ ದೇವನು ವೇಣುಗ್ರಾಮೆಯ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳುತ್ತದೆ. ಆತನ ಆಧೀನ ಅಧಿಕಾರಿಯಾದ ಕಂಕಣನೂರಿನ ಪ್ರಭು ಬಾಚರಸ (ವೈಜರಸ) ಹಾಗೂ ಆತನ ಪತ್ನಿ ಪರಸಿಯವ್ವೆಯನ್ನು ಉಲ್ಲೇಖಿಸುತ್ತದೆ. ಇವರ ಮಗ ಶ್ರೀಕಾಂತ ಹೆಂಮ್ಮಣಯ್ಯ ಅತ್ಯಂತ ಪರಾಕ್ರಮಿಯಾಗಿದ್ದ. ಅಲ್ಲದೆ ಮಂತ್ರಿ ಚಾವುಂಡನೂ ರಟ್ಟರಾಜ್ಯದ ಏಳಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದನೆಂದು ಈ ಶಾಸನದಿಂದ ತಿಳಿದು ಬರುತ್ತದೆ.

ಈ ಶಾಸನವು ಶಕವರ್ಷ ೫೦೦ರಲ್ಲಿ ಮಹಾಮಂಡಳೇಶ್ವರ ಎರಿಗದೇವನ ಮಹಾಪ್ರಧಾನ ಮಾದಿರಾಜ ದಣ್ಣಾಯಕನಿಗೆ ಕೂಂಡಿ ಮೂರು ಸಾಸಿರದ ಕುರುಂಬೆಟ್ಟಗಂಪಣದ ಬಳಿಯ ಬಾಡ ಕಂಕಣನೂರ ಪ್ರಭುತ್ವವನ್ನು ವಹಿಸಿಕೊಟ್ಟ ಅಂಶವನ್ನು ತಿಳಿಸುತ್ತದೆ. ಮಾದಿರಾಜದಂಡಾಧೀಶನನ್ನು ಕನ್ನಡಿಗಂ ವಂಶದವನೆಂದು ತಿಳಿಸುತ್ತದೆ. ಈತನ ಕಾಲ ಶಕವರ್ಷ ೫೦೦(?). ಇದೆ ಶಾಸನ ಮುಂದುವರೆದು ಇತನು ಮಹಾದಾನಿಯೂ ಆಗಿದ್ದು ಮೂಲಸ್ಥಾನ ಕಲಿದೇವ ದೇವಾಲಯ ಹಾಗೂ ಯಾಪನೀಯ ಸಂಘದ ಮೂಲ ಬಸದಿಯನ್ನು ಜೀರ್ಣೋದ್ಧಾರಗೈದು ದಾನ ನೀಡಿದ ವಿವರವನ್ನು ನೀಡುತ್ತದೆ. ಅಲ್ಲದೆ ಆತ ಅನೇಕ ಜನೋಪಕಾರಿ ಕಾರ್ಯಗಳಲ್ಲಿ ಭಾಗಿಯಾಗಿದ್ದ ವಿವರವನ್ನು ಈ ಶಾಸನವೂ ತಿಳಿಸುತ್ತದೆ. ಅಂದರೆ ಕಂಕಣವಾಡಿಯ ಪ್ರಾಚೀನತೆ ಸು. ೧೫೦೦ ವರ್ಷಗಳಷ್ಟು ಹಿಂದೆ ಹೋಗುತ್ತದೆ. ಬ್ರಹ್ಮೇಶ್ವರ ಮತ್ತು ಅಷ್ಟೇಶ್ವರ ದೇವಾಲಯಗಳು ಕಂಕಣವಾಡಿಯಲ್ಲಿದ್ದುದಾಗಿ ಶಾಸನ ಉಲ್ಲೇಖಿಸುತ್ತದೆ. ಹೀಗೆ ಕಂಕಣನೂರಿನ ಪ್ರಾಚೀನತೆ ಮತ್ತು ಅದನ್ನಾಳಿದ ರಾಜರ ಬಗ್ಗೆ ಪ್ರಥಮ ಬಾರಿಗೆ ಈ ಶಾಸನದಲ್ಲಿ ಮಾಹಿತಿ ಲಭ್ಯವಾಗುವುದರ ಜೊತೆಗೆ, ಈ ಸ್ಥಳವು ಪ್ರಾಚೀನ ಕಾಲದಿಂದಲೂ ಧಾರ್ಮಿಕ ಕೇಂದ್ರವಾಗಿತ್ತೆಂದು ಈ ಮೂಲಕ ವಿಧಿತವಾಗುತ್ತದೆ.

ಹಾಲಸಿದ್ಧನಾಥನ ಚರಿತ್ರೆ :

ಹಾಲಸಿದ್ಧನಾಥನಿಗೆ ಸಂಬಂಧಿಸಿದ ಚರಿತ್ರೆ ಅಸ್ಪಷ್ಟವಾಗಿದೆ. ಅವನ ತಂದೆ-ತಾಯಿಗಳು ಯಾರು? ಜನನ ಸ್ಥಳ ಯಾವುದು? ಜೀವಿತಾವಧಿ ಯಾವುದು? ಮುಂತಾದ ಪ್ರಶ್ನೆಗಳಿಗೆ ಮಾಹಿತಿಯೇ ಇಲ್ಲ. ಹಾಲಸಿದ್ಧನ ತಂದೆ-ತಾಯಿಗಳ ಹೆಸರು ಹೇಳುವವರು ಹೇಳಬಾರದು, ಕೇಳುವವರು ಕೇಳಬಾರದು ಎನ್ನುತ್ತಾರೆ ಕಂಕಣವಾಡಿ ದೇವಸ್ಥಾನದ ಪೂಜೆರಿಗಳು. ಕೆಲವು ಭಕ್ತರು ಅವನನ್ನು ರೇವಣಸಿದ್ಧನ ಅವತಾರವೆಂದು ನಂಬಿಕೊಂಡಿರುವರು. ರೇವಣಸಿದ್ಧ ಪವಾಡಗಳನ್ನು ಹಾಲಸಿದ್ಧನೊಂದಿಗೆ ತಳಕು ಹಾಕಿ ಗೊಂದಲಗಳನ್ನು ಸೃಷ್ಟಿಸಿರುವರು. ಡೊಳ್ಳಿನ ಹಾಡುಗಳನ್ನು ರಚಿಸುವ ಸಾಹಿತ್ಯಕಾರರು ಹಾಲಸಿದ್ಧನನ್ನು ರೇವಣಸಿದ್ಧನೆಂದೇ ಹೇಳುತ್ತಾರೆ. ಹೀಗಾಗಿ ಅವನ ಪೂರ್ವಾಪರ ಮತ್ತು ಕಾಲಮಾನದ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರೆಯುವುದಿಲ್ಲ. ಹಾಲಸಿದ್ಧನನ್ನು ಪವಾಡ ಪುರುಷನನ್ನಾಗಿ ಸ್ವೀಕರಿಸಿರುವ ಭಕ್ತರು, ಅವನೊಬ್ಬ ಚಾರಿತ್ರಿಕ ವ್ಯಕ್ತಿಯೆಂಬ ಹಿನ್ನೆಲೆಯಲ್ಲಿ ತಿಳಿದುಕೊಳ್ಳಲು ಆಸಕ್ತಿಯನ್ನು ಹೊಂದಿಲ್ಲ. ಇಲ್ಲಿಯವರೆಗೆ ಪ್ರಕಟಗೊಂಡಿರುವ ಹಾಲುಮತ ಕೃತಿಗಳಲ್ಲಿ ಹಾಲಸಿದ್ಧನ ಚರಿತ್ರೆ ದೊರೆಯುವುದಿಲ್ಲ.

ಹಾಲಸಿದ್ಧ ಜಾತ್ಯಾತೀತ ದೇವತೆ. ಅವನಿಗೆ ನಿರ್ಧಿಷ್ಟ ರೂಪವಿಲ್ಲ. ಭಕ್ತರ ಭಾವಕ್ಕೆ ತಕ್ಕಂತೆ ವಿವಿಧ ರೂಪತೋರುವನು. ಹಾಲಸಿದ್ಧ ವೈಷ್ಣವರಿಗೆ ಹರಿ, ಶೈವರಿಗೆ ಶಿವ, ಸಾಧಕರಿಗೆ ಸಿದ್ಧಪುರುಷ, ನಾಥರಿಗೆ ಯೋಗಿ, ಮುಸ್ಲಿಂರಿಗೆ ಅಲ್ಲಾ. ಹಾಲಸಿದ್ಧನ ಕುರಿತಾಗಿ ಹಲವಾರು ಪವಾಡಗಳು ಹುಟ್ಟಿಕೊಂಡಿವೆ. ಅವು ತಿಳಿಸುವ ವಿಚಾರಗಳಿಗೆ ಹಲವು ಮುಖಗಳು. ಡೊಳ್ಳಿನ ಹಾಡುಗಳಲ್ಲಿ ವ್ಯಕ್ತವಾಗಿರುವಂತೆ ಹಾಲಸಿದ್ಧ ಪವಾಡ ಪುರುಷನಲ್ಲ ಆತನೊಬ್ಬ ಚಾರಿತ್ರಿಕ ವ್ಯಕ್ತಿ. ಆದಾಗ್ಯೂ ಇವನ ಸುತ್ತ ಹಲವಾರು ಕಥೆಗಳನ್ನು ಹೆಣೆದು ವೈಭವೀಕರಿಸಿರುವುದು ಕಂಡು ಬರುತ್ತದೆ.

ಕೊಲ್ಲಾಪೂರ ಪರಿಸರದಲ್ಲಿ ಸುಮಾರು ೩೦ ವರ್ಷಗಳ ಕಾಲ 'ಚಂದನ ಚೌತಿ'ಯೆಂಬ ಭೀಕರ ಬರಗಾಲ ಸಂಭವಿಸಿತು. ಕುರಿಕಾಯುತ್ತಿದ್ದ ಹಾಲಸಿದ್ಧನ ತಂದೆ-ತಾಯಿಗಳಿಗೆ ಊಟಕ್ಕೂ ಗತಿಇಲ್ಲದೇ ಪರದಾಡುವಂತಾಯಿತು. ತಮ್ಮ ಮಗ ಉಂಡುಟ್ಟು ಇನ್ನೊಬ್ಬರ ಮನೆಯಲ್ಲಾದರೂ ಚೆನ್ನಾಗಿರಲೆಂದು ಭಾವಿಸಿದ ತಂದೆ-ತಾಯಿಗಳು ಮೂಡಣ ನಾಡಿಗೆ ಬಂದು ಹಸುಳೆ ಹಾಲಸಿದ್ಧನನ್ನು ಮಾರಾಟ ಮಾಡಿದರು. (ಎಲ್ಲಿ ಮತ್ತು ಯಾರಿಗೆ ಮಾರಾಟ ಮಾಡಿದರು?) ಮಗು ಹಾಲಸಿದ್ಧ (ನವಲಣ್ಣ) ಮೂಡಣದಿಂದ ಪಡುವಣಕ್ಕೆ ಬಂದು ಸಿದ್ಧರೇ ನಿರ್ಮಿಸಿದ ಕೊಲ್ಲಾಪೂರ ಕಾಳಿಕೆರೆ (ಬಹುಶಃ ಇಂದಿನ ರಂಕಾಳ ಕೆರೆ) ಹತ್ತಿರ ನಿಂತುಕೊಂಡಿದ್ದ. ಹಾಲಸಿದ್ಧನ ಆರಂಭಿಕ ಹೆಸರು ನವಲಣ್ಣ. ಅಲ್ಲಿಗೆ ಬಂದ ಎಲಿಗಾರ ತುಳಜಣ್ಣ 'ಉಣ್ಣಲು ಅಂಬಲಿ, ತೊಡಲು ಕಂಬಳಿ' ಕೊಡುವ ಕರಾರಿ ಮೇರೆಗೆ ನವಲಣ್ಣನನ್ನು ಚಾಕರಿಗೆ ಇಟ್ಟುಕೊಳ್ಳುವನು. ನವಲಣ್ಣ ಹಗಲು ಹೊತ್ತಿನಲ್ಲಿ ದನಗಳನ್ನು ಮೇಯಿಸುವುದು, ರಾತ್ರಿ ಎಲೆತೋಟದಲ್ಲಿ ಎಲೆ ಕೊಯ್ಯದು ಕಟ್ಟುವ ಕೆಲಸ ಮಾಡುತ್ತಿದ್ದ. ತುಳಜಣ್ಣ, ನವಲಣ್ಣನಿಗೆ ಊಟ ಕೊಡುತ್ತಿರಲಿಲ್ಲವಾದ್ದರಿಂದ ದಿನಕ್ಕೆ ೨೫ ಎಲೆಗಳನ್ನು ತಿಂದು ೧೨ ವರ್ಷಗಳವರೆಗೆ ಚಾಕರಿ ಕೆಲಸ ಮಾಡಿದನು. ನವಲಣ್ಣ ಹೊಟ್ಟೆ ತುಂಬ ಊಟ, ಹೊರಲಿಕ್ಕೆ ಕಂಬಳಿ ಮತ್ತು ಚಾಕರಿ ಮಾಡಿದಕ್ಕಾಗಿ ಹಣ ಕೇಳಿದಾಗ ತುಳಜಣ್ಣ ಅವನನ್ನು ಹೊಡೆಯಲು ಹೋದ. "ಆಗ ಮಾಯಾ ರೂಪದ ಹಾಲಣ್ಣ ಮಾಯದ ಮಾತುಗಳನ್ನು ಆಡಿ 'ನಿನ್ನ ಮನೆತನ ಮೊದಲು ಹೇಗೆ ಇತ್ತೋ ಹಾಗೇ ಆಗಲಿ, ರೊಕ್ಕ ರೂಪಾಯಿ ಇದ್ದಿಲು ಆಗಲಿ, ನಿನ್ನ ಮನ್ಯಾಗಿನ ದನಗಳೆಲ್ಲ ಕುಂಟಾಗಲಿ, ಕುದುರೆಗಳು ನಾಶವಾಗಲಿ' ಎಂದು ಹಾಲಸಿದ್ಧ ಆವನಿಗೆ ಶಾಪ ಕೊಡುವಷ್ಟರಲ್ಲಿಯೇ ಹೊಲದೊಳಗಿದ್ದ ಆಳು ಮನುಷ್ಯ ಓಡೋಡಿ ಬಂದು, 'ಮಾಲಕರ ಎತ್ತು ಕುಂಟಾಗೇತಿ, ಎಮ್ಮೆಗೆ ಏಳಾಕ ಬರವಾಲ್ದು ನೀವು ತೋಟಾ ನೋಡಾಕ ಬರಬೇಕು'"[೩೩] ಎಂದು ಹೇಳುತ್ತಾನೆ. ತುಳಜಣ್ಣ ತೋಟಕ್ಕೆ ಹೋಗಲು ಕುದುರೆ ತರವಂತೆ ಆಳಿಗೆ ಹೇಳುತ್ತಾನೆ. ಆಳು ಬಂದು ಕುದುರೆ ನೋಡಲು ಅದು ಕುಂಟಾಗಿತ್ತು. ಹಣದ ಪೆಟ್ಟಿಗೆ ತೆಗೆದು ನೋಡಲಾಗಿ ಹಣವೆಲ್ಲ ಇದ್ದಿಲಿಯಾಗಿತ್ತು. ದಿಕ್ಕು ತೋಚದ ತುಳಜಣ್ಣ ತನ್ನ ತಪ್ಪಿನ ಅರಿವಾಗಿ ನವಲಣ್ಣನಲ್ಲಿ ಕ್ಷಮೆ ಕೇಳುತ್ತಾನೆ. ನವಲಣ್ಣ ಮನದಲ್ಲೇ ತುಳಜಣ್ಣನನ್ನು ಶಪಿಸುತ್ತ ಕೊಲ್ಲಾಪೂರದಿಂದ ಕಡೋಲಿಯತ್ತ ನಡೆದನು.

ಕಡೋಲಿ ಇಟ್ಟಪ್ಪರಾಯನ ಮಗಳು ಭಾಗುಬಾಯಿ. ಅವಳು ಕೊಲ್ಲಾಪೂರದಿಂದ ಸಂತೆ ಮಾಡಿಕೊಂಡು ತನ್ನೂರಾದ ಕಡೋಲಿಯತ್ತ ನಡೆದಿದ್ದಳು. ಮಾರ್ಗ ಮಧ್ಯದಲ್ಲಿ ನವಲಣ್ಣನ ಪರಿಚಯವಾಯಿತು. ಇದೇ ವೇಳೆ ತಾನು ಅವಸರದಲ್ಲಿ ಊರಿನೆಡೆಗೆ ಬರುವಾಗ ಎಲೆ ಕೊಳ್ಳುವುದನ್ನು ಮರೆತು ಬಂದದ್ದನ್ನು ಜ್ಞಾಪಿಸಿಕೊಂಡಳು. ಅದಕ್ಕಾಗಿ ತಾನು ಸಂತೆ ಮಾಡಿದ ಬುಟ್ಟಿಯನ್ನು ಒಂದು ಸ್ಥಳದಲ್ಲಿಟ್ಟು ಎಲೆ

ಕೊಂಡು ತರುವವರೆಗೆ ಅದನ್ನು ಜೋಪಾನವಾಗಿ ಕಾಯುವಂತೆ ನವಲಣ್ಣನಿಗೆ ಹೇಳಿ ಅವಳು ಕೊಲ್ಲಾಪೂರದ ಸಂತೆಗೆ ಎಲೆ ತರಲು ಹೋದಳು. ಸಂತೆಯಿಂದ ಹಿಂತಿರುಗಿದ ಅವಳು ನವಲಣ್ಣನಿಗೆ ಕೃತಜ್ಞತೆ ಸಲ್ಲಿಸಿ ಅಳುತ್ತಾ ನಿಂತ ಅವನ ಬಗ್ಗೆ ವಿಚಾರಿಸಿದಳು. ಆಗ ನವಲಣ್ಣ ತಾನು ತುಳಜಣ್ಣನ ಮನೆಯಲ್ಲಿ ಕಷ್ಟಪಟ್ಟು ಹನ್ನೆರಡು ವರುಷ ಚಾಕರಿ ಮಾಡಿದ್ದೇನೆ. ನನಗೀಗ ಗುರು ಬೇಕಾಗಿದ್ದು ಅವನಿಗಾಗಿ ದುಃಖಿಸುತ್ತಿದ್ದೆನೆಂದು ಹೇಳಿ ತನಗೊಬ್ಬ ಗುರುವನ್ನು ಹುಡುಕಿ ಕೊಡಲು ಕೇಳಿಕೊಂಡ. ಭಾಗುಬಾಯಿ ಅವನನ್ನು ಕಡೋಲಿಗೆ ಜೊತೆಯಲ್ಲಿ ಕರೆದುಕೊಂಡು ಬಂದು ತಂದೆ ಇಟ್ಟಪ್ಪರಾಯನಿಗೆ ಪರಿಚಯಿಸಿ ಗುರುಪಾದ ತೋರಿಸಿದಳು. ತನಗೆ 'ಗುರು'ವನ್ನು ತೋರಿಸಿಕೊಟ್ಟ ಭಾಗುಬಾಯಿಯನ್ನು ನವಲಣ್ಣ ಸಹೋದರಿಯೆಂದು ಸ್ವೀಕರಿಸಿದ. ಗುರು ಇಟ್ಟಪ್ಪರಾಯನಲ್ಲಿ 'ಗುರುದೀಕ್ಷೆ' ಪಡೆದುಕೊಂಡು ಪಶುಪಾಲಕ ನವಲಣ್ಣ ಸಿದ್ಧ ಸಾಧಿಸಿ ಹಾಲಪ್ಪ>ಹಾಲಸಿದ್ಧನಾದ.

ಹಲವು ದಿನಗಳ ನಂತರ ಗುರು ಇಟ್ಟಪ್ಪನೊಂದಿಗೆ ಹಾಲಸಿದ್ಧ ಆಕಳುಗಳನ್ನು ಕಾಯುತ್ತ ಪೂರ್ವ ದಿಕ್ಕಿಗೆ ಹೊರಟ. ವಿಷಯ ತಿಳಿದ ಎಲಿಗಾರ ತುಳಜಣ್ಣ ಹಾಗೂ ಇತರರು ಇಟ್ಟಪ್ಪ ಮತ್ತು ಹಾಲಸಿದ್ಧರನ್ನು ಕಳುಹಿಸಲು ದೂರದವರೆಗೆ ಆಗಮಿಸಿದರು. ಸ್ವಲ್ಪ ದೂರ ಕ್ರಮಿಸಿದ ನಂತರ ಹಾಲಸಿದ್ಧ, ತುಳಜಣ್ಣ ಮತ್ತು ಸಂಗಡಿಗರಿಗೆ ಇನ್ನೂ ಬಹಳ ದೂರದವರೆಗೆ ನಮ್ಮ ಜೊತೆ ಬರುವುದು ಸಾಕು ಕೊಲ್ಲಾಪೂರದತ್ತ ಹಿಂತಿರುಗಿ, ಹೋಗುವಾಗ ನಮ್ಮನ್ನು ಹಿಂತಿರುಗಿ ನೋಡಬೇಡವೆಂದು ಹೇಳಿ ಅವರೆಲ್ಲರನ್ನು ಕಳುಹಿಸಿದ. ಅವರೆಲ್ಲರೂ ಕೊಲ್ಲಾಪೂರದತ್ತ ಸಾಗತೊಡಗಿದರು, ಸ್ವಲ್ಪ ದೂರ ಹೋದ ನಂತರ ತುಜಣ್ಣನಿಗೆ ನವಲಣ್ಣನನ್ನು ಒಂದು ಬಾರಿ ನೋಡಬೇಕೆನ್ನಿಸಿತು. ಹಿಂತಿರುಗಿ ನೋಡಿದ, ಆಗ ತಾನಿರುವ ಸ್ಥಳದಲ್ಲಿಯೇ ಹಾಲಸಿದ್ಧ 'ಗಪ್ಪ' (ಕಣ್ಮರೆ) ಆದ. (ಗಪ್ಪ>ಅಪ್ಪ>ಅಪ್ಪನಹಟ್ಟಿ>ಅಪ್ಪಚವಾಡಿ) ಆ ಸ್ಥಳವೇ ಇಂದಿನ 'ಅಪ್ಪಾಚಿವಾಡಿ'ಯಾಗಿದೆ ಎಂದು ಕಂಕಣವಾಡಿಯ ಪೂಜಾರಿಗಳು ಕಥೆ ಹೇಳುತ್ತಾರೆ. ಈ ಪ್ರದೇಶದಲ್ಲಿಯೇ ತನ್ನ ದನ-ಕರುಗಳೊಂದಿಗೆ ಕೆಲಕಾಲ ತಂಗಿದ್ದ ಹಾಲಸಿದ್ಧ ನಂತರ ಹುಕ್ಕೇರಿನಾಡಿನ ಮದುಮಕ್ಕಳ ಹಳ್ಳಕ್ಕೆ ಬಂದ.

"ಅಂದು ಮುಸ್ಲಿಂ ಸಮುದಾಯದ ಗಜಬಿರಸಾಬ ಹುಕ್ಕೇರಿ ನಾಡಿನ ಒಡೆಯನಾಗಿದ್ದ. ಅವನ ಮಗಳು ಬೇಗಮ್‌ಸಾಬ. ಅವಳು ಹಾಲಸಿದ್ಧನ ಹಿಂಡಿನಲ್ಲಿದ್ದ ಆಕಳುಗಳನ್ನು ನೋಡಿ, ಅವುಗಳಲ್ಲಿಯ ಒಂದನ್ನು ತಂದು ಅಡುಗೆ ಮಾಡುವುದಕ್ಕೆ ತಂದೆಗೆ ಹೇಳಿದಳು. ಗಜಬಿರಸಾಬ ತನ್ನ ಆಳಿಗೆ, ಹಾಲಸಿದ್ಧ ಹಿಂಡಿನಲ್ಲಿದ್ದ ಆಕಳೊಂದನ್ನು ತರಲು ಹೇಳಿದ. ಆಳು ಆಕಳನ್ನು ಒಯ್ಯುವುದನ್ನು ನೋಡಿದ ಹಾಲಸಿದ್ಧ ಅದನ್ನು ತಡೆದರೆ ಪಾಪವಾಗುವುದೆಂಬ ಕಾರಣಕ್ಕೆ ಅವನನ್ನು ತಡೆಯಲಿಲ್ಲ. ಆಕಳನ್ನು ತಂದು ಕಡಿದು ಮಾಸಾಂಹಾರ ಸಿದ್ಧಗೊಳಿಸಿ ಹಾಲಸಿದ್ಧನನ್ನು ಊಟಕ್ಕೆ ಆಹ್ವಾನಿಸಿದರು. ಹೋಗದಿದ್ದರೆ ಪಾಪವಾಗುತ್ತದೆಂದು ಊಟಕ್ಕೂ ಬಂದು ಕುಳಿತಕೊಂಡ. ತಾನೇ ಮೇಯಿಸಿ ಬೆಳೆಸಿದ ಆಕಳನ್ನೇ ಕಡಿದು ಮಾಡಿದ ಅಡಿಗೆಯನ್ನು ಹೇಗೆ ಉಣ್ಣುವುದೆಂದು ಸಂಕಟಪಟ್ಟ, ಹಣೆಗೆ ವಿಭೂತಿ ಧರಿಸಿಕೊಳ್ಳುತ್ತ ಮನದಲ್ಲಿಯೇ ದೇವರನ್ನು ನೆನೆದು ಸಂಕಷ್ಟದಿಂದ ಪಾರುಮಾಡುವಂತೆ ಭಿನ್ನವಿಸಿಕೊಂಡ. ಗಜಬಿರಸಾಬ, ಹಾಲಸಿದ್ಧ ಮತ್ತು ಆಳು ಮನುಷ್ಯನಿಗಾಗಿ ಮೂರು ಎಡೆಗಳನ್ನು ಮಾಡಿದ್ದರು. ಹಾಲಸಿದ್ಧನ ಮುಂದೆ ಕೆಂಪು ವಸ್ತ್ರದಿಂದ ಮುಚ್ಚಿದ ಎಡೆಯನ್ನು ತಂದಿಡಲಾಯಿತು. ಮನದಲ್ಲಿ ಮೂಲ ಗುರು ರೇವಣಸಿದ್ಧನನ್ನು ನೆನೆದು ಎಡೆಯ ಮೇಲಿನ ಬಟ್ಟೆಯನ್ನು

ತೆಗೆದಾಗ ಖಂಡ ಖಣಗಲ ಹೂವಾಗಿ, ಅನ್ನ ಮಲ್ಲಿಗೆ ಹೂವಾಯಿತು. ಗಜಬರಸಾಬ ಆಳಿಗೆ ಸಿಟ್ಟುಮಾಡಿ ಹಾಲಸಿದ್ಧನ ಮುಂದಿದ್ದ ಎಡೆಯನ್ನು ತನಗೆ ಕೊಡುವಂತೆ ಹೇಳಿ ಕೈಯಲ್ಲಿದ್ದ ಇನ್ನೊಂದು ಎಡೆಯನ್ನು ಅವನಿಗೆ ಕೊಡಲು ಹೇಳಿದ. ಹಾಲಸಿದ್ಧ ಮನದಲ್ಲಿ ಗುರುವನ್ನು ನೆನೆದು ಎಡೆಯ ಮೇಲಿನ ವಸ್ತ್ರವನ್ನು ತೆಗೆದ. ಮತ್ತೆ ಖಂಡ ಖಣಗಲ ಹೂವಾಗಿ, ಅನ್ನ ಮಲ್ಲಿಗೆ ಹೂವಾಯಿತು. ಈ ಪವಾಡವನ್ನು ಕಣ್ಣಾರೆಕಂಡ ಗಜಬರಸಾಬ ತನ್ನ ತಪ್ಪನ್ನು ಮನ್ನಿಸುವಂತೆ ಹೇಳಿ ಕಾಲಿಗೆರಗಿ ಕ್ಷಮೆಯಾಚಿಸಿದನು. (ಆ ಸಮಯದಲ್ಲಿ ಹಾಲಸಿದ್ಧ, ಹುಕ್ಕೇರಿ ಇಂದಿನಿಂದ ಹೋಲಿ ಹುಕ್ಕೇರಿಯಾಗಲೆಂದು ಶಪಿಸಿದ್ದಾಗಿ ಕೆಲವರು ಹೇಳುವರು.) ನೀನಿದ್ದಲ್ಲಿ ನಿನ್ನ ಸೇವಕನಾಗಿರುತ್ತೇನೆ. ನಿಮಗೇನು ಬೇಕು ಕೇಳಿ ಕೊಡುತ್ತೇನೆಂದ. ಹಾಲಸಿದ್ಧ ತನಗೇನೂ ಬೇಡವೆಂದರೂ, ಶ್ರದ್ಧಾ ಭಕ್ತಿಯಿಂದ ಉಡುಗರೆಯಾಗಿ ತನ್ನಲ್ಲಿದ್ದ ಹುದೆ (ಕತ್ತಿ)ಯನ್ನು ಕೊಟ್ಟು ಗೌರವಿಸಿದನು. ಗಜಬರಸಾಬ ಕೊಟ್ಟ ಹುದೆ ಸದ್ಯ ದೇವಸ್ಥಾನದಲ್ಲಿದ್ದು ನಿತ್ಯವೂ ಪೂಜೆಗೊಳ್ಳುತ್ತದೆ."[೩೪] (ಅದಕ್ಕೊಂದು ಪೆಟ್ಟಿಗೆ ಮಾಡಿ ಅದರಲ್ಲಿಟ್ಟಿರುವರು). ಹುದೆ ಇಂದಿಗೂ ಗಜಬರಸಾಬ ಮತ್ತು ಹಾಲಸಿದ್ಧರ ಮಧ್ಯದಲ್ಲಿದ್ದ ಸಾಮರಸ್ಯದ ಸಂಬಂಧವನ್ನು ಸಾಕ್ಷಿಕರಿಸುತ್ತದೆ.

ಈ ಘಟನೆಯ ನಂತರ ಹಾಲಸಿದ್ಧ ತನ್ನ ಹಿಂಡಿನ್ನು ಮೇಯಿಸುತ್ತ ಗುರು ರೇವಣಸಿದ್ಧರ ನೆಲೆಯಾದ ಬೆಂಡವಾಡದ ರಾಮನಕಟ್ಟೆಗೆ ಬಂದನು. ಇದನ್ನು ಸಾಕ್ಷಿಕರಿಸುವಂತೆ ಇಲ್ಲಿ ಹಾಲಸಿದ್ಧನ ಗುಡಿ, ಖಣಗಲ ಹೂವಿನ ಗಿಡ, ಕಲ್ಲುಗಳ ಗೋಡೆಯಿಂದ ನಿರ್ಮಿಸಿದ ದನಗಳ ದಡ್ಡಿಯಿದೆ. ಆರಂಭದಲ್ಲಿ ಗರ್ಭಗುಡಿಯಲ್ಲಿ ಮದಾರ ನಿರ್ಮಿಸಿ ಗುಂಡುಕಲ್ಲನ್ನಿಟ್ಟು ಪೂಜಿಸಲಾಗುತ್ತಿತ್ತು. ಇತ್ತೀಚಿಗೆ ಹಾಲಸಿದ್ಧನ ಮೂರ್ತಿ ಮಾಡಿ ಪೂಜಿಸುತ್ತಿರುವರು. ಇಲ್ಲಿ ಕೆಲವು ದಿನಗಳವರೆಗೆ ನೆಲೆಸಿದ್ದ ಹಾಲಸಿದ್ಧ ನಂತರದಲ್ಲಿ ಆಕಳುಗಳ ಹಿಂಡಿನೊಂದಿಗೆ ಬ್ಯಾಕೂಡಕ್ಕೆ ಬಂದನು.

ಬ್ಯಾಕೂಡನ್ನು ಒಳಗೊಂಡಂತೆ ೩೬ ಹಳ್ಳಿಗಳ ಒಡತಿ ಕೊರವಂಜಿ. ಅವಳೇ ಬ್ಯಾಕೂಡದ ಲಕ್ಕವ್ವ ಬ್ಯಾಕೂಡದಲ್ಲಿ ದೊಡ್ಡದಾದ ಕೆರೆಯಿದ್ದು ಕಾವಲಕ್ಕಾಗಿ ಗೊಂಬೆಯೊಂದನ್ನು ಮಾಡಿ ನಿಲ್ಲಿಸಿದ್ದಳು. ಹಾಲಸಿದ್ಧ ಆಕಳುಗಳನ್ನು ಕಾಯುತ್ತ ಹಿಂಡಿನೊಂದಿಗೆ ಅಲ್ಲಿಗೆ ಬಂದ. ಕೆರೆ ಸಮೀಪ ಆಕಳುಗಳನ್ನು ಮೇಯಲು ಬಿಟ್ಟು ಆಲದ ಮರದಡಿಯಲ್ಲಿ ವಿಶ್ರಾಂತಿಗಾಗಿ ಮಲಗಿಕೊಂಡ. ಹಿಂಡಿನಲ್ಲಿದ್ದ ಆಕಳೊಂದು ಕೆರೆಗೆ ನೀರು ಕುಡಿಯಲು ಹೋದಾಗ ಕೊರವಂಜಿ ಆಕಳ ಮುಖಕ್ಕೆ ಹೊಡೆದಳು. ವಿಷಯ ಗೊತ್ತಾಗಿ ಹಾಲಸಿದ್ಧ ಅವಳಲ್ಲಿಗೆ ಬಂದು ಪ್ರಶ್ನಿಸಿದ. ಆಗ ಕೊರವಂಜಿ ನೀನ್ಯಾರು? ಯಾವೂರು? ಎಂದೆಲ್ಲ ಪ್ರಶ್ನಿಸಿದಳು. ಹಾಲಸಿದ್ಧ ನನಗೆ ಊರೇ ಇಲ್ಲ. ನನಗೆ ತಂದೆ-ತಾಯಿ, ಬಂಧು-ಬಳಗ ಯಾರು ಇಲ್ಲವೆಂದ. ಆಗ ಕೊರವಂಜಿ ನನಗೂ ತಂದೆ-ತಾಯಿ, ಬಂಧು-ಬಳಗವಿಲ್ಲ ನಾವಿಬ್ಬರೂ ಅಣ್ಣ-ತಂಗಿಯರಾಗೋಣವೆಂದಳು. ನಿನ್ನನ್ನೂ ಅಣ್ಣನಾಗಿ ಸ್ವೀಕರಿಸಬೇಕಾದರೆ ಮುಂಜಾನೆ, ಮಧ್ಯಾಹ್ನ ಮತ್ತು ಸಂಜೆ ಮೂರು ವಿವಿಧ ರೂಪಗಳನ್ನು ತಾಳಿ ಪವಾಡ ಮಾಡಿ ಯಶಸ್ವಿಯಾಗಬೇಕೆಂದು ಹಾಲಸಿದ್ಧನಿಗೆ ಪರೀಕ್ಷೆಯೊಡಿದ್ದಳು. ಆಗಲಿ ಎಂದ ಹಾಲಸಿದ್ಧ ಕೊರವಂಜಿಯ ಜೊತೆ ಕರೆಯಿಂದ ಊರಿಗೆ ಬಂದರು.

ಊರ ಹೊರಗಿನ ಆಲದ ಮರದ ಕೆಳಗೆ ಹಾಲಸಿದ್ಧ ಮೂರು ರೂಪಗಳನ್ನು ತಾಳಲಾರಂಭಿಸಿದ. ಮುಂಜಾನೆ ಚಿಕ್ಕಮಗುವಾಗಿ ಹಸಿರಂಗಿ ಹಾಲಕಡಗ ತೊಟ್ಟು ಗಿಡದ ಕೆಳಗೆ ಆಡಲಾರಂಭಿಸಿದ. ಇದೇ

ದಾರಿಯಿಂದ ಊರಿನ ೭ ಜನ ಹೆಣ್ಣು ಮಕ್ಕಳು ನೀರು ತರಲು ಕೆರೆಗೆ ಹೊರಟ್ಟಿದ್ದರು. ಮುದ್ದಾದ ಮಗುವನ್ನು ಕಂಡು ಎತ್ತಿಕೊಳ್ಳಲು ಹೋದಾಗ ಅವರ ಕೈಗೆ ಸಿಗಲಿಲ್ಲ. ಆಗ ಸಮೀಪದಲ್ಲಿದ್ದ ಅಗಸರ ಹೆಣ್ಣುಮಗಳು ಅವರಿಗೆ, 'ಅವನು ಯಾರ ಕೈಗೂ ಸಿಗುವ ಕೂಸಲ್ಲ, ಯಾಕೆ ಅವನನ್ನು ಹಿಡಿದೆತ್ತಿಕೊಳ್ಳಲು ಪ್ರಯತ್ನಿಸುತ್ತಿರಿ' ಎಂದಳು. ನೀರು ತುಂಬಿಕೊಂಡು ಬರುವಾಗ ಎತ್ತಿಕೊಂಡರಾಯಿತೆಂದು ಅವರೆಲ್ಲ ಕೆರೆಯ ಕಡೆಗೆ ಹೋದರು. ಮಧ್ಯಾಹ್ನ ಮರಳಿ ಕೆರೆಯಿಂದ ಬರುವಾಗ ಗಿಡದ ಕೆಳಗೆ ಮಗುವಿರದೆ, ಗಡ್ಡ ಮೀಸೆಗಳಿದ್ದ ಪ್ರಾಯದ ವ್ಯಕ್ತಿಯಾಗಿದ್ದ. ಅವರಿಗೆ ರೂಪ ಬದಲಿಸಿದ್ದ ಹಾಲಸಿದ್ಧನ ಗುರುತು ಸಿಗಲಿಲ್ಲ. ಅಗಸರ ಮಹಿಳೆ ಮುಂಜಾನೆ ಮಗುವಾಗಿದ್ದಾತ ಈಗ ಪ್ರಾಯದ ವ್ಯಕ್ತಿಯಾಗಿದ್ದಾನೆಂದಳು. ಸಾಯಂಕಾಲ ಮತ್ತೆ ಕೆರೆಗೆ ನೀರು ತರಲು ಹೊರಟ ಮಹಿಳೆಯರಿಗೆ ಕೈಯಲ್ಲಿ ಬಡಿಗೆ ಹಿಡಿದುಕೊಂಡ ಮುದುಕನ ರೂಪದಲ್ಲಿ ಗೋಚರಿಸಿದನು. ಆಗ ಅಗಸರ ಮಹಿಳೆ ಮಧ್ಯಾಹ್ನದಲ್ಲಿದ್ದ ಪ್ರಾಯದ ವ್ಯಕ್ತಿಯೇ ಸಂಜೆ ಮುದುಕನಾಗಿರುವನೆಂದು ಹೇಳಿದಳು. ಹಾಲಸಿದ್ಧನ ೩ ರೂಪಗಳನ್ನು ಪತ್ತೆ ಹಚ್ಚುವಲ್ಲಿ ಅಗಸರ ಮಹಿಳೆ ಯಶಸ್ವಿಯಾದಳು. ಅದಕ್ಕಾಗಿ ಅವಳಿಗೆ 'ನನ್ನ ಮೂರು ರೂಪಗಳನ್ನು ಗುರುತಿಸಿದ ನಿನ್ನ ಅಂಗೈಯಲ್ಲಿ ಊಟ ಮಾಡುತ್ತೇನೆಂದು' ಭಾಷೆ ನೀಡಿದನು. ಇಂದು ಅಲ್ಲಿ ಹಾಲಸಿದ್ಧನ ಗುಡಿಯನ್ನು ನಿರ್ಮಿಸಲಾಗಿದೆ. ಕೊಟ್ಟ ಭಾಷೆಯಂತೆ ಪ್ರತಿ ಜಾತ್ರೆಯ ಸಮಯದಲ್ಲಿ ಇಂದಿಗೂ ಹಾಲಸಿದ್ಧ ಪಲ್ಲಕ್ಕಿಯೊಂದಿಗೆ ಅಗಸರ ಮನೆಯ ಭೇಟ್ಟಿಗೆ ಹೋಗುತ್ತಾನೆ. ಈ ಪವಾಡ ನಡೆದದ್ದು ಬ್ಯಾಕೂಡದಲ್ಲಾದರೂ ವಚನ ಪಾಲನೆಗಾಗಿ ಹಾಲಸಿದ್ಧನ ಪಲ್ಲಕ್ಕಿ ಕಂಕಣವಾಡಿಯ ಅಗಸರ ಮನೆಗೆ ಹೋಗುತ್ತಾನೆ.

ಲಕ್ಕವ್ವ/ಕೊರವಂಜಿ ಹಾಕಿದ ಸವಾಲನ್ನು ಸಾಧಿಸಿದ ಹಾಲಸಿದ್ಧ ತನಗೆ ನೆಲೆನಿಲ್ಲಲು ಜಾಗ ನೀಡೆಂದು ತಂಗಿಯನ್ನು ಕೇಳಿದನು. ಆಗಲೆಂದ ತಂಗಿ ಲಕ್ಕವ್ವ, ಹಾಲಸಿದ್ಧನಿಗೆ ಕೈಮಾಡಿ ಕಡೆಹಳ್ಳಿ ಕಂಕಣವಾಡಿ ಭಾಗಕ್ಕೆ ಕಳುಹಿಸಿದಳು. ಹಾಲಸಿದ್ಧ ಕಂಕಣವಾಡಿಯಿಂದ ೨ ಕಿ. ಮೀ. ದೂರದಲ್ಲಿರುವ ಇಂದಿನ ಚಿನ್ನಕಟ್ಟೆವ್ವನ ಸ್ಥಳದಲ್ಲಿ ನೆಲೆನಿಂತ. ಇದು ಪ್ರಾಚೀನ ಕಂಕಣವಾಡಿಯಾಗಿದ್ದು ಅಲ್ಲಿ ಮಹಾಲಿಂಗೇಶ್ವರ ವಾಸವಾಗಿದ್ದ. ಹಾಲಸಿದ್ಧ ಬಂದು ನೆಲೆನಿಂತಲ್ಲಿ ತನ್ನ ಪ್ರಭಾವ ಕಡಿಮೆಯಾಗಬಹುದೆಂಬ ಭಯದಿಂದ ಹಾಲಸಿದ್ಧನಿಗೆ ನೆಲೆನಿಲ್ಲಲು ಅವಕಾಶ ಕೊಡಬಾರದೆಂದು ಊರಿನ ಎಲ್ಲ ದೇವತೆಗಳನ್ನು ಕೂಡಿಕೊಂಡು ಸಂಘರ್ಷಕ್ಕೆ ನಿಂತನು. ಆಗ ಲಕ್ಕವ್ವನೇ ಬಂದು ಹಾಲಸಿದ್ಧನಿಗೆ ರಕ್ಷಣೆ ನೀಡಿ ಅವರೆಲ್ಲರನ್ನು ಸೋಲಿಸಿ ಓಡಿಸಿ ನನ್ನ ದೇವಾಲಯದ ಮುಂದೆ ನೀನಿರೆಂದು ಹೇಳಿದಳು. ಆಗ ಹಾಲಸಿದ್ಧ ನಾನು ನಿನ್ನ ಗುಡಿಯ ಮುಂದಿದ್ದರೆ ನಿನ್ನನ್ನು ಭಕ್ತರು ಮರೆಯಬಹುದು, ನನಗೆ ಆಶ್ರಯ ನೀಡಿದ ನೀನು ನನಗಿಂತಲೂ ಮುಂದೆ ಇರು, ನಾನು ನಿನ್ನ ಹಿಂದೆ ಇರುತ್ತೇನೆಂದನು.

ಇಂದು ಕಂಕಣವಾಡಿಯಲ್ಲಿ ಹಾಲಸಿದ್ಧನ ಗುಡಿಯ ಪ್ರಾಕಾರ ಗೋಡೆಗೆ ಹೊಂದಿಕೊಂಡಂತೆ ಪೂರ್ವ ದಿಕ್ಕಿನ ಮುಂದಿನ ಬದಿಯಲ್ಲಿ ಇವಳ ಗುಡಿಯನ್ನು ನಿರ್ಮಿಸಲಾಗಿದೆ. ದೇವಸ್ಥಾನವು ಗರ್ಭಗುಡಿ ಮತ್ತು ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ಲಕ್ಷ್ಮೀ ದೇವಿಯು ಅಷ್ಟ ಭುಜಗಳನ್ನು ಹೊಂದಿದ್ದು ಕೈಯಲ್ಲಿ ಶಂಖ, ತ್ರಿಶೂಲ, ಖಡ್ಗ ಮುಂತಾದವುಗಳಿಂದ ಅಲಂಕೃತವಾಗಿರುವಳು. ಹಾಲುಮತದ ನಾಲ್ಕು ಪೂಜಾರಿ ಮನೆತನದವರು ಸರತಿಯಂತೆ ಅವಳನ್ನು ಪೂಜಿಸುತ್ತಿರುವರು.

ಕಂಕಣವಾಡಿಗೆ ಆಗಮಿಸಿದ ಹಾಲಸಿದ್ಧ ತಪ್ಪಸಿಗೆ ಕುಳಿತ. ಆತನ ಮೇಲೆ ಹುತ್ತ ಬೆಳೆಯಿತು. ಕಂಕಣವಾಡಿಯ ದೇಸಾಯಿಯವರು ಹದಿನಾರು ಹಳ್ಳಿಗಳ ದೇಸಗತಿಯನ್ನು ಹೊಂದಿದ ವತನದಾರರು. ಅವರು ದೊಡ್ಡ ಪ್ರಮಾಣದಲ್ಲಿ ಆಕಳ ಹಿಂಡನ್ನು ಹೊಂದಿದ್ದರು. ಅವರ ಹಿಂಡಿನಲ್ಲಿದ್ದ ಬರಡು ಹಸುವೊಂದು ಮೇಯಲು ಹೋದಾಗ ದಿನವೂ ಹುತ್ತದ ಮೇಲೆ ಹಾಲು ಕರೆಯುತ್ತಿತ್ತು. ಹುತ್ತದೊಳಗಿನ ಹಾವು ಹಾಲನ್ನು ಕುಡಿಯುತ್ತಿತ್ತು. ಅದನ್ನು ನೋಡಿದ ಆಕಳ ಹಿಂಡನ್ನು ಕಾಯುವ ಆಳು ದೇಸಾಯಿಯವರಲ್ಲಿ ತಾನು ಕಂಡ ದೃಶ್ಯಾವಳಿಗಳನ್ನು ಹೇಳಿದ. ಅದೇ ದಿನ ಹಾಲಸಿದ್ಧ ದೇಸಾಯಿಯವರ ಕನಸಿನಲ್ಲಿ ಬಂದು, 'ಹುತ್ತದಲ್ಲಿ ಹಾಲು ಕುಡಿಯುವ ಹಾವು ನಾನೇ. ನನಗಾಗಿ ದೇವಸ್ಥಾನವೊಂದನ್ನು ನಿರ್ಮಿಸಬೇಕು. ನನ್ನ ದೇವಸ್ಥಾನದ ಯಜಮಾನಿಕೆ ನಿನ್ನದು ಎಂದನು'.

ಇಟ್ನಾಳದ ಅಜ್ಜನಳ್ಳಿ ರಾಯಪ್ಪ ಊರಿನ ಗುರುಗುದ್ದಿ ಹಳ್ಳಪ್ರದೇಶದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದ. ಪ್ರತಿ ದಿನ ಸಾಯಂಕಾಲ ಕುರಿ-ಆಡುಗಳನ್ನು ಹಿಂಡಿ ಹಾಲನ್ನು ಬಿಂದಿಗೆಯಲ್ಲಿ ತುಂಬಿಕೊಂಡು ಮನೆಗೆ ಒಯ್ಯುತ್ತಿದ್ದ. ಒಂದು ದಿನ ಹಾಲು ತುಂಬಿಟ್ಟ ಬಿಂದಿಗಿಗೆ ಸರ್ಪವೊಂದು ಬಾಯಿ ಹಾಕಿ ಹಾಲು ಕುಡಿಯುತ್ತಿತ್ತು. ಇದನ್ನು ನೋಡಿದ ಅಜ್ಜ ರಾಯಪ್ಪ ಬೇರಗಾಗುವುದರ ಜೊತೆಗೆ ಕಳವಳಗೊಂಡ. ಉಪಜೀವನಕ್ಕಾಗಿರುವ 'ಹಾಲನ್ನು ಹಾವು ಕಡಿದರೆ ತಮ್ಮ ಪಾಡೇನು' ಎಂದು ಚಿಂತೆಯಲ್ಲಿ ಮನೆಗೆ ಮರಳಿದ. ರಾತ್ರಿ ಹಾಲಸಿದ್ಧ ಕನಸಿನಲ್ಲಿ ಬಂದು, 'ನಾನು ಹಾಲಸಿದ್ಧ, ಕಂಕಣವಾಡಿಯಲ್ಲಿ ನಿರ್ಮಿಸುತ್ತಿರುವ ನನ್ನ ದೇವಾಲಯಕ್ಕೆ ನೀನು ಪೂಜಾರಿಯಾಗಿ ಬರಬೇಕು' ಎಂದು ಹೇಳಿದನು. ಹೀಗೆ ಹಾಲಸಿದ್ಧನ ಗುಡಿಗೆ ದೇಸಾಯಿಗಳೂ ಯಜಮನರಾದ ಬಗ್ಗೆ ಮತ್ತು ಅಜ್ಜನಳ್ಳಿ ರಾಮಪ್ಪ ಪೂಜಾರಿಯಾದ ಬಗ್ಗೆ ಡೊಳ್ಳಿನ ಹಾಡುಗಾರರು ಮತ್ತು ಪೂಜಾರಿಗಳು ಜನಪದ ಕಥೆಯನ್ನು ಹೇಳುತ್ತಾರೆ. ಹುತ್ತದಲ್ಲಿ ಬೆಳೆದು ಬಂದ ಹಾಲಸಿದ್ಧನ ಕಥೆ, ಅಲಕನೂರಿನ ಕರೇಸಿದ್ಧನ ಕಥೆಯನ್ನು ಹೋಲುತ್ತದೆ. ಸಾಮಾನ್ಯವಾಗಿ ಎಲ್ಲ ಸ್ಥಳೀಯ ದೇವತೆಗಳ ಉಗಮಕ್ಕೂ ಇಂಥಹುದೇ ಕಥೆಗಳನ್ನು ಜನಪದರು ಹಣೆದಿರುವುದನ್ನು ಕಾಣುತ್ತೇವೆ.

ಕಂಕಣವಾಡಿಯಲ್ಲಿ ದೇಸಾಯಿಯವರ ನೇತೃತ್ವದಲ್ಲಿ ದೇವಸ್ಥಾನ ನಿರ್ಮಾಣವಾಯಿತು. ಅಜ್ಜನಳ್ಳಿ ರಾಯಪ್ಪ ಹಾಲಸಿದ್ಧನ ಪೂಜಾರಿಯಾಗಿ ಕಂಕಣವಾಡಿಗೆ ಬಂದನು. ರಾಯಪ್ಪ, ದೇಸಾಯಿಯವರ ಕೃಪೆಯಲ್ಲಿ ಅಪ್ಪಾಚಿವಾಡಿಯಲ್ಲಿರುವ ಹಾಲಸಿದ್ಧನಾಥನ ತೋರುಗದ್ದುಗೆಯನ್ನು ತಂದು ಕಂಕಣವಾಡಿಯಲ್ಲಿ ನಿರ್ಮಿಸಿರಬಹುದೆಂದು ಅನಿಸುತ್ತದೆ. ಈ ವಿಚಾರವನ್ನು ತಿಳಿಸುವ ಸನ್ನದು ದೇಸಾಯಿಯವರ ಮನೆಯಲ್ಲಿರುವುದಾಗಿ ಹಾಲಸಿದ್ಧನ ಪೂಜಾರಿಗಳು ಹೇಳುವರು. ಆದರೆ ಇಲ್ಲಿಯವರೆಗೂ ಅದನ್ನು ಪ್ರತ್ಯಕ್ಷವಾಗಿ ನೋಡಿದವರಾರು ಇಲ್ಲ. "ಕಂಕಣವಾಡಿ ದೇಸಾಯಿಯವರು ಅಲಕನೂರು, ಅಳಗವಾಡಿ, ಸವಸುದ್ದಿ, ಬಸ್ತವಾಡ, ಬಾವಚಿ, ಬೂದಿಹಾಳ, ಮೂಡಲಗಿ, ಬೆಂಡವಾಡ, ನಿಪನಾಳ, ಕಟಕಬಾವಿ, ಹಿಡಕಲ್ ಮೊದಲಾದ ರಾಯಬಾಗ ತಾಲೂಕಿನ ೧೬ ಹಳ್ಳಿಗಳಲ್ಲಿ ಹಾಲಸಿದ್ಧನಾಥನಿಗೆ ಜಮೀನು ದಾನವಾಗಿ ಕೊಟ್ಟಿರುವರು. ಈಗ ಹಿಡಕಲ್ಲದಲ್ಲಿ ೧೬ ಎಕರೆ ಹಾಗೂ ಕಂಕಣವಾಡಿಯಲ್ಲಿ ೫೦ ಎಕರೆ ಜಮೀನು ಮಾತ್ರ ಉಳಿದಿದೆ."[೩೨] ಸದ್ಯ ರಾಯಬಾಗ ಪರಿಸರದ ಹಿಡಕಲ್ಲ, ಹಾರೂಗೇರಿ, ಹಂದಿಗುಂದ, ಗುಡ್ಡದ ಬ್ಯಾಕೂಡ, ರಾಯಬಾಗ,

ಮಾವಿನಹುಂಡಾ, ರಾಮನಕಟ್ಟೆ, ಶಿರಗೂರ, ಕಂಚಕಾರವಾಡಿ, ಬೆಂಡವಾಡ, ಬಡಬ್ಯಾಕೂಡ ಮತ್ತು ಅಲಕನೂರ ಸ್ಥಳಗಳಲ್ಲಿ ಹಾಲಸಿದ್ಧನ ಗುಡಿಗಳಿವೆ.

ಹಿಡಕಲ್ಲದಲ್ಲಿ ಹಾಲಸಿದ್ಧನಾಥ :

ದಿನಗಳೆದಂತೆ ಹಾಲಸಿದ್ಧನ ಮಹಿಮೆಗಳು ಪವಾಡಗಳು ಸುತ್ತ ನಾಡಿನಲ್ಲೆಲ್ಲ ಪಸರಿಸುತ್ತ ನಡೆಯಿತು. ಭಕ್ತರ ಸಂಖ್ಯೆ ದಿನದಿಂದ-ದಿನಕ್ಕೆ ಏರುತ್ತಲೇ ನಡೆಯಿತು. ಕಂಕಣವಾಡಿಯಿಂದ ಸುಮಾರು ಇಪ್ಪತ್ತು ಕಿ. ಮೀ. ಅಂತರದಲ್ಲಿರುವ ಹಿಡಕಲ್ಲದ ಘಂಟಿ ಮನೆತನದ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ. ಕಂಕಣವಾಡಿಯ ಹಾಲಸಿದ್ಧನಿಗೆ ನಡೆದುಕೊಂಡಲ್ಲಿ ಮಕ್ಕಳಾಗುತ್ತದೆಂದು ಭಕ್ತರೊಬ್ಬರು ಹೇಳಿದರು. ದಂಪತಿಗಳು ಭಕ್ತಿಯಿಂದ ಹಾಲಸಿದ್ಧನಲ್ಲಿಗೆ ಬಂದು ಸೇವೆ ಸಲ್ಲಿಸಿ ವಂಶೋದ್ಧಾರಕನಾಗಿ ಗಂಡು ಮಗುವನ್ನು ಪಡೆದುಕೊಂಡರು. ಅಂದಿನಿಂದ ಅವರಿಗೆ ಹಾಲಸಿದ್ಧ ಮನೆದೇವರಾದ. ತಮ್ಮ ಊರಲ್ಲಿಯೇ ಆತನ ಗದ್ದುಗೆಯನ್ನು ಸ್ಥಾಪಿಸಬೇಕೆಂದು ಅಲ್ಲಿಂದ ಮೂರ್ತಿಯೊಂದನ್ನು ತಂದು ಪ್ರತಿಷ್ಠಾಪಿಸಿ ದೇವಸ್ಥಾನವನ್ನು ಕಟ್ಟಿದ್ದರು. ಹಿಡಕಲ್ಲದಲ್ಲಿರುವ ಹಾಲಸಿದ್ಧನಾಥ ಮೂಲತಃ ಕಂಕಣವಾಡಿಯವನು. ಹೀಗಾಗಿ ಅಲ್ಲಿಯ ಪೂಜಾರಿಗಳಿಗೆ ಹಾಲಸಿದ್ಧನ ಪೂಜೆಗಾಗಿ ಹಿಡಕಲ್ಲಕ್ಕೆ ಬರಬೇಕೆಂದು ಕೇಳಿದಾಗ ಉಪಜೀವನಕ್ಕಾಗಿ ಭೂಮಿಯನ್ನು ಕೊಡುವಂತೆ ಕೇಳಿದರು. ಆಗ ಘಂಟಿ ಮನೆತನದವರು ಅವರಿಗೆ ೮ ಎಕರೆ ಜಮೀನವನ್ನು ಉಂಬಳಿಯಾಗಿ ನೀಡಿದರು. ಇಂದು ಕೂಡ ಅದು ಹಾಲಸಿದ್ಧನ ಪೂಜಾ ಭೂಮಿಯೆಂದೇ ಕರೆಯಲ್ಪಡುತ್ತಿರುವುದು.

ಹಾಲಸಿದ್ಧನ ಮೂಲ ನೆಲೆ ಅಪ್ಪಾಚಿವಾಡಿ :

ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ಗಡಿಯಂಚಿನಲ್ಲಿರುವ ನಿಪ್ಪಾಣಿ ಸಮೀಪದ ಅಪ್ಪಾಚಿವಾಡಿ ಹಾಲಸಿದ್ಧನಾಥನ ಮೂಲ ನೆಲೆ. ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಚಿಕ್ಕೋಡಿ ತಾಲೂಕಿನ ಒಂದು ಸಣ್ಣ ಗ್ರಾಮ ಕುರ್ಲೆ. ಒಂದು ಮೂಲದ ಪ್ರಕಾರ ಹಾಲಸಿದ್ಧನಾಥನ ಮೂಲ ನೆಲೆ ಕುರ್ಲೆ. ಇಲ್ಲಿಂದ ಪಶ್ಚಿಮಕ್ಕೆ ಒಂದು ಕಿ. ಮೀ. ಅಂತರದಲ್ಲಿ ಅಪ್ಪಾಚಿವಾಡಿ ಇದ್ದು ಅದನ್ನೇ ಹಾಲಸಿದ್ಧನಾಥನ ನೆಲೆಯೆಂದು ಸಾಮಾನ್ಯವಾಗಿ ಡೊಳ್ಳಿನ ಹಾಡುಗಾರರು ಮತ್ತು ಭಕ್ತರು ಗುರುತಿಸುತ್ತಾರೆ. ಅಪ್ಪಾಚಿವಾಡಿಯಲ್ಲಿ ಹಾಲಸಿದ್ಧನಾಥನ ಭವ್ಯವಾದ ದೇವಾಲಯವಿದೆ. ಅಪ್ಪಾಚಿವಾಡಿಯಲ್ಲಿರುವ ದೇವಾಲಯವು ಸಂಪೂರ್ಣ ನವೀಕರಣಗೊಂಡಿದ್ದು, ಅದರ ಮೂಲಸ್ವರೂಪವನ್ನು ಗುರುತಿಸುವುದು ಕಷ್ಟದಾಯಕ. ಇಲ್ಲಿರುವ ಹಾಲಸಿದ್ಧನಾಥನ ದೇವಾಲಯವು, ಕಂಕಣವಾಡಿ ಹಾಲಸಿದ್ಧನಾಥನ ದೇವಾಲಯದಂತೆ ಇಂಡೋ-ಇಸ್ಲಾಮಿಕ ಶೈಲಿಯಲ್ಲಿಯೇ ನಿರ್ಮಾಣವಾಗಿತ್ತೆಂದು ಇಲ್ಲಿರುವ ಹಿರಿಯರು ಹೇಳುತ್ತಾರೆ. ಸುಮಾರ ೨೦-೨೫ ವರ್ಷಗಳ ಹಿಂದೆ ಮೂಲ ದೇವಸ್ಥಾನವು ಜೀರ್ಣೋದ್ಧಾರಗೊಂಡಿದ್ದು ಅದರ ಹಳೆಯ ಅವಶೇಷಗಳು ಅತ್ಯಲ್ಪ ಪ್ರಮಾಣದಲ್ಲಿ ಉಳಿದುಕೊಂಡಿವೆ. ಇಲ್ಲಿ ಇವನನ್ನು ಹಾಲಸಿದ್ಧನಾಥನೆಂದು ಕರೆಯುತ್ತಾರೆ.

ಹಾಲಸಿದ್ಧನಾಥ ಸಾಮಾನ್ಯವಾಗಿ ಒಬ್ಬ ಪಶುಪಾಲಕ (ದನಗಾಹಿ) ಅಂದರೆ ಗೋಪಾಲಕ. ಪಶುಪಾಲನೆಯಲ್ಲಿ ತೊಡಗಿಸಿಕೊಂಡ ಇತ, ಮೂಲತಃ ಹಾಲುಮತ ಸಮಾಜಕ್ಕೆ ಸೇರಿದವನು. ಇವನ ಕಾಲ

ಸುಮಾರು ೧೯ನೇ ಶತಮಾನದ ಪೂರ್ವಾರ್ಧವಿರಬಹುದು. ಹಾಲಸಿದ್ಧನ ಕಾಲಮಾನ ಮತ್ತು ಚರಿತ್ರೆಯ ಕುರಿತು ಇನ್ನಷ್ಟು ಖಚಿತ ಮಾಹಿತಿಗಾಗಿ ಸಂಶೋಧನೆ ಕೈಕೊಳ್ಳುವುದು ಅವಶ್ಯಕವಿದೆ. ಪಶುಪಾಲಕನಾದ ಇತ ಸ್ಥಳೀಯ ನಾಥ ಪಂಥದ ಪ್ರಭಾವದಿಂದಾಗಿ ನಾಥ ಪಂಥದ ದೀಕ್ಷೆಯನ್ನು ಪಡೆದುಕೊಂಡು ಯೋಗಿಯಾಗಿರಬೇಕು. ಯಾಕೆಂದರೆ ಅಂದು ನಿಪ್ಪಾಣಿಯನ್ನೊಳಗೊಂಡಂತೆ, ಕೊಲ್ಹಾಪೂರ ಮತ್ತು ಹಂಡಿಬಡಗನಾಥ ಮುಂತಾದವುಗಳು ನಾಥ ಸಂಪ್ರದಾಯದ ನೆಲೆಗಳಾಗಿದ್ದವು. ವಿಶೇಷವೆಂದರೆ ನಾಥ ಸಂಪ್ರದಾಯದವರು ಜಾತಿವಾದಿಗಳಲ್ಲ. ಅವರದು ಜಾತ್ಯಾತೀತ ಮನೋಧರ್ಮ. ಹೀಗಾಗಿ ಹಾಲುಮತದ ಹಾಲಸಿದ್ಧ ನಾಥ ದೀಕ್ಷೆಯನ್ನು ಸ್ವೀಕರಿಸಿರಬಹುದೆಂಬ ಶಂಕೆ. ಅಪ್ಪಾಚಿವಾಡಿಯಲ್ಲಿರುವ ಹಾಲಸಿದ್ಧನ "ಭಾವಚಿತ್ರ ಯೋಗಮುದ್ರೆಯಲ್ಲಿದೆ. ಕಿವಿಗಳಲ್ಲಿ ದೊಡ್ಡದಾದ ಕುಂಡಲಗಳಿವೆ. ಕಿವಿ ತೂತು ವಿಶಾಲ (ಕಾನಾ ಫಟಾ). ಕೊರಳಲ್ಲಿ ರುದ್ರಾಕ್ಷಿಸರ, ಕೈಯಲ್ಲಿ ತ್ರಿಶೂಲ, ಹೆಗಲಿಗೆ ಜೋಳಿಗೆ , ಬೆನ್ನಿಗೊಂದು ಕೊಂಬು. ತಲೆ ತುಂಬ ಜಡೆ, ಮುಖದಲ್ಲಿ ಗಡ್ಡ, ಹಣೆ-ಕೈ-ಎದೆ-ಹೊಟ್ಟೆಗಳಿಗೆ ವಿಭೂತಿ. ಮೈಮೇಲಿನ ಏಕೈಕ ವಸ್ತ್ರವೆಂದರೆ ಕೌಪೀನ. ಯೋಗಕ್ಕೆ ನೆರವಾಗಲೆಂದು ಹೊಟ್ಟೆಯಿಂದ ಸೊಂಟದವರೆಗೆ ಕಂಬಳಿಕರಿಯಿಂದ ಸುತ್ತಿದ ಅಗಲವಾದ ಸೊಂಟಪಟ್ಟಿ. ತಲೆ ಮೇಲೆ ಕಂಬಳಿಕಪ್ಪೆ."[೩೬]

ಅಪ್ಪಾಚಿವಾಡಿಯ ಹಾಲಸಿದ್ಧನ ಜಾತ್ರೆ ಪ್ರತಿವರ್ಷ ಚೈತ್ರದಂದು ದೊಡ್ಡ ಪ್ರಮಾಣದಲ್ಲಿ ಜರಗುತ್ತದೆ. ಹಾಲುಮತ ಸಮುದಾಯದವರನ್ನು ಒಳಗೊಂಡಂತೆ ಇತರೆಲ್ಲ ಸಮುದಾಯದವರು ಜಾತ್ರೆಗೆ ಆಗಮಿಸುತ್ತಾರೆ. ಆಗಮಿಸುವ ಲಕ್ಷಾಂತರ ಭಕ್ತರಲ್ಲಿ ಹಾಲುಮತ ಬಾಂಧವರ ಪ್ರಮಾಣ ಹೆಚ್ಚಾಗಿರುವುದು. ಸದ್ಯ ಕಂಕಣವಾಡಿಯಲ್ಲಿರುವ ತೋರು ಗದ್ದುಗೆ ಮೂಲತಃ ಅಪ್ಪಾಚಿವಾಡಿಯದ್ದು. ಹೀಗಾಗಿ ಅಪ್ಪಾಚಿವಾಡಿ ಹಾಲಸಿದ್ಧನ ಜಾತ್ರೆಗೆ ಕಂಕಣವಾಡಿ ಮತ್ತು ಸುತ್ತ-ಮುತ್ತಲಿನ ಭಕ್ತರು ಹೋಗುವರು.

ನಿಪ್ಪಾಣಿ ನಾಥ ಸಂಪ್ರದಾಯದ ಪ್ರಮುಖ ನೆಲೆ. ೧೨ ವರ್ಷಕ್ಕೊಮ್ಮೆ ಉತ್ತರ ಭಾರತದಿಂದ ನಾಥಸಾಧುಗಳ ದೊಡ್ಡ ಗುಂಪು ಇಲ್ಲಿಗೆ ಆಗಮಿಸಿ ಒಂದು ದಿನ ವಾಸ್ತವ್ಯ ಮಾಡುತ್ತಾರೆ. ನಿಪ್ಪಾಣಿಯ ಪಶ್ಚಿಮ ದಿಕ್ಕಿನಲ್ಲಿ ಹಾಲಸಿದ್ಧನಾಥನ ದೇವಾಲಯವಿದೆ. ಈ ಪ್ರದೇಶವೆಲ್ಲ ಮೊರಡಿ ಪ್ರದೇಶದಿಂದ ಆವೃತವಾಗಿದ್ದು ಪಶುಪಾಲನೆಗೆ ಅನುಕೂಲಕರವಾಗಿತ್ತು. ಇಲ್ಲಿ ಹಾಲಸಿದ್ಧ ಆಕಳುಗಳನ್ನು ಮೇಯಿಸುತ್ತಿದ್ದ. ನಿಪ್ಪಾಣಿ ದೇಸಾಯಿಯವರ ವಾಡೆಯಲ್ಲಿ ಕೆಲವು ದಿನಗಳವರೆಗೆ ಹಾಲಸಿದ್ಧ ಇದ್ದನಂತೆ. "ನಿಪ್ಪಾಣಿ ವಾಡೆಯಲ್ಲಿ ಆತನ ಭಾವಚಿತ್ರವಿತ್ತು. ಅದನ್ನು ಶಿವರಾಮ ಕಾರಂತರು 'ಭಾರತೀಯ ಚಿತ್ರಕಲೆ' ಎಂಬ ತಮ್ಮ ಪುಸ್ತಕದಲ್ಲಿ ನಮೂದಿಸಿದ್ದಾರೆ. ಈಗ ಈ ವಾಡೆ ಬಿದ್ದು ಹಾಳಾಗಿದೆ."[೩೭]

ಹಾಲುಮತದ ಅನೇಕ ಮಹಾತ್ಮರ ಜೊತೆಗೆ ಸಿದ್ಧ ಮತ್ತು ನಾಥ ಪರಂಪರೆಯ ಗಾಢವಾದ ಸಂಬಂಧವಿರುವುದು ವಿಧಿತವಾಗುತ್ತದೆ. ರೇವಣಸಿದ್ಧ, ಸಿದ್ಧರಾಮ, ಸಿದ್ಧನಾಥ, ಅಮೋಘಸಿದ್ಧ, ಅರಣ್ಯಸಿದ್ಧ, ಕರೇಸಿದ್ಧ, ಸಿದ್ಧಮಂಕ, ಹಾಲಸಿದ್ಧ, ಭೂತಾಳಸಿದ್ಧ ಮುಂತಾದವರುಗಳ ಹೆಸರುಗಳಲ್ಲಿಯೇ ಇದು ಅಡಕವಾಗಿದೆ. ಹಾಗಾಗಿ ರಾಯಬಾಗ ಪರಿಸರದ ಹಾಲುಮತದ ಪ್ರಮುಖ ಪುರುಷ ದೈವಗಳ ಸಂಬಂಧ ಕೂಡ ಸಿದ್ಧ ಮತ್ತು ನಾಥ ಪರಂಪರೆಯೊಂದಿಗೆ ಕಂಡು ಬರುತ್ತದೆ.

ಸಿದ್ಧ ಸಂಪ್ರದಾಯ :

ಸಿದ್ಧ ಎಂದರೆ ಪರಿಪೂರ್ಣನಾದ, ಪಕ್ವವಾದ, ಸಾಧನೆಯ ಗುರಿ ಮುಟ್ಟಿದ ಎಂಬ ಅರ್ಥವನ್ನು ನೀಡಬಹುದು. 'ಸಿದ್ಧ' ದೇವಯೋನಿಗಳಲ್ಲಿ ಒಂದು. 'ಸಿದ್ಧ' ಎಂಬ ಶಬ್ದವು 'ಒಂದು ವಿಧವಾದ ಸಾಧನೆಯ ಸಾಧಕ', ಎಂಬರ್ಥದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದೆ. "'ಸಿದ್ಧ' ಶಬ್ದಕ್ಕೂ 'ಸಿದ್ಧಿ'ಗೂ ನಿಕಟ ಸಂಬಂಧವಿದೆ. ಸಿದ್ಧ ಸಾಧನೆಗೆ ಸಂಬಂಧಿಸಿದುದು. ಸಾಧನೆಯಿಂದ ಸಿದ್ಧಿ ದೊರೆತ ಮೇಲೆ ಸಾಧಕ 'ಸಿದ್ಧ' ನೆನಿಸಿಕೊಳ್ಳುತ್ತಾನೆ. ಸಿದ್ಧಿಗಳಲ್ಲೂ ಹಲವು ವಿಧ : ವಾಕ್‌ಸಿದ್ಧಿ, ಮಂತ್ರಸಿದ್ಧಿ ಮೊದಲಾದವುಗಳನ್ನು ಉಲ್ಲೇಖಿಸಬಹುದು. ಕೆಲವು ಸಿದ್ಧಿಗಳು ಬರಿಯ ಚಮತ್ಕಾರ ಪ್ರಧಾನವಾದವು. ಆದರೆ ಉತ್ತಮ ಸಿದ್ಧಿಯೆಂದರೆ ಆಧ್ಯಾತ್ಮಿಕ ಸಿದ್ಧಿ. ವಿಭಿನ್ನ ಭಾರತೀಯ ಗ್ರಂಥಗಳಲ್ಲಿ ಅಣಿಮಾ, ಮಹಿಮಾ, ಲಘಿಮಾ, ಪ್ರಾಕಾಮ್ಯ, ಗರಿಮಾ, ಈಶಿತ್ವ, ವಶಿತ್ವವೇ ಮೊದಲಾದ ಸಿದ್ಧಿಗಳ ಉಲ್ಲೇಖ ಕಂಡು ಬರುತ್ತದೆ."[೩೮] ಈ ರೀತಿಯ ಸಿದ್ಧಿಗಳ ವರ್ಣನೆ ಪ್ರಾಚೀನ ಸಾಹಿತ್ಯದಲ್ಲಿ ಹೇರಳವಾಗಿ ಕಂಡು ಬರುತ್ತದೆ. ಇಂಥ ಸಿದ್ಧಿಗಳನ್ನು ಪಡೆದುಕೊಂಡವನೇ ಸಿದ್ಧ.

'ಸಿದ್ಧ' ಶಬ್ದ ಭಾರತೀಯ ಸಾಹಿತ್ಯದಲ್ಲಿ ಹಲವಾರು ಅರ್ಥಗಳಲ್ಲಿ ಬಳಕೆಯಾಗಿದೆ. ಅಮರಕೋಶದಲ್ಲಿ ಯಕ್ಷ, ಗಂಧರ್ವ, ಕಿನ್ನರ, ವಿದ್ಯಾದರ ಮುಂತಾದ ಅರ್ಥದಲ್ಲಿ ಬಳಸಲ್ಪಟ್ಟಿದೆ. ಪುರಾಣಗಳ ಪ್ರಕಾರ ಸಿದ್ಧ ಜನ ಭುವರ್ಲೋಕದಲ್ಲಿ ವಾಸಿಸುತ್ತಿದ್ದರಂತೆ, ಕೆಲವು ಕಡೆ ಅವರು ಅಂತರಿಕ್ಷವಾಸಿಗಳು ಎಂದು ಹೇಳಿದೆ. ಆದರೆ ಪುರಾಣಗಳ ಅಧ್ಯಯನದಿಂದ ಅವರು ಪರ್ವತವಾಸಿ ಜನಾಂಗದವರೆಂದು ಊಹಿಸಬಹುದು. ತುಳಸೀದಾಸರು ತಮ್ಮ ಗ್ರಂಥಗಳಲ್ಲಿ ಸಿದ್ಧರನ್ನು, ವಿರಕ್ತರು, ಮಹಾಮುನಿಗಳು ಹಾಗೂ ಯೋಗಿಗಳೆಂದು ಹೇಳಿದ್ದು ಅವರು ಎಂದಿಗೂ ಕಾಮವಶರಾಗರು ಎಂದು ಹೇಳಿದ್ದಾರೆ. ಇವರು ತಮ್ಮ ಅಲೌಕಿಕ ಸಾಧನೆಗಳ ಫಲವಾಗಿ ವಿವಿಧ ಸಿದ್ಧಿಗಳನ್ನು ಪಡೆದಿದ್ದು, ಅವುಗಳ ಬಲದಿಂದ ಅನೇಕ ವಿಧವಾದ ಅತಿಮಾನವೀಯ ಕಾರ್ಯ ಮಾಡಬಲ್ಲವರಾಗಿದ್ದು, ಜೊತೆಗೆ ಕೆಲವು ಸಂದರ್ಭಗಳಲ್ಲಿ ಭವಿಷ್ಯ ನುಡಿಯಬಲ್ಲವರಾಗಿದ್ದರು.

ಭಾರತೀಯ ಸಾಹಿತ್ಯದಲ್ಲಿ ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದಾಗ ಹಲವು ತೆರನಾದ ಸಿದ್ಧರಿದ್ದರೆಂಬುದು ಕಂಡುಬರುತ್ತದೆ. ಬೌದ್ಧ ಸಿದ್ಧರು, ನಾಥ ಸಿದ್ಧರು, ಜ್ಞಾನ ಸಿದ್ಧರು, ರಸ ಸಿದ್ಧರು, ಮಾಹೇಶ್ವರ ಸಿದ್ಧರು, ಕಾಪಾಲಿ ಸಿದ್ಧರು, ನವಕೋಟಿ ಸಿದ್ಧರು ಮುಂತಾಗಿ ಇವರನ್ನು ಅನೇಕ ಸಂಪ್ರದಾಯಗಳಲ್ಲಿ ವಿಂಗಡಿಸಲಾಗಿದೆ. ಇವುಗಳಲ್ಲದೆ ಕನ್ನಡ ನಾಡಿನಲ್ಲೂ ಹಲವು ಸಿದ್ಧ ಪರಂಪರೆಗಳಿವೆ. ಇವುಗಳಲ್ಲಿ ಬೌದ್ಧಸಿದ್ಧ, ಶೈವಸಿದ್ಧ ಮತ್ತು ಜೈನ ಪರಂಪರೆಗಳು ಮುಖ್ಯವಾದವುಗಳು. ವೀರಶೈವ ಸಾಹಿತ್ಯದಲ್ಲಿ ಹಲವಾರು ಸಿದ್ಧರ ಪ್ರಸಂಗಗಳು, ಉಲ್ಲೇಖಗಳು ದೊರೆಯುತ್ತವೆ. ಬಸವಣ್ಣನವರ ಒಂದು ವಚನದಲ್ಲಿ, ಗೋರಖನಾಥರ ಮತ್ತು ಪ್ರಭುದೇವರ ವಚನವೊಂದರಲ್ಲಿ ನವನಾಥರ ಉಲ್ಲೇಖಗಳಿವೆ. ಹರಿಹರ, ರಾಘವಾಂಕ ಮೊದಲಾದವರ ಕಾವ್ಯಗಳಲ್ಲಿ ಹಲವು ಸಿದ್ಧರ ಪ್ರಸಂಗಗಳು ಕಂಡು ಬರುತ್ತವೆ.

ರೇವಣಸಿದ್ಧ, ಮರುಳಸಿದ್ಧ, ಸಿದ್ಧರಾಮ ಮೊದಲಾದವರು ಶೈವಸಿದ್ಧ ಪರಂಪರೆಗೆ ಸೇರಿದವರಾಗಿದ್ದಾರೆ. ಹರಿಹರ ತನ್ನ 'ರೇವಣಸಿದ್ಧೇಶ್ವರ ರಗಳೆ'ಯಲ್ಲಿ ರೇವಣಸಿದ್ಧರನ್ನು ಮಹಾಸಿದ್ಧ, ಸಿದ್ಧರದೇವ, ಸಿದ್ಧಕುಲ ಚಕ್ರವರ್ತಿ ಮೊದಲಾದ ವಿಶೇಷಣಗಳಿಂದ ಸ್ತುತಿಸಿದ್ದಾರೆ. "ರಾಘವಾಂಕ ತನ್ನ ಕಾವ್ಯದಲ್ಲಿ ಸಿದ್ಧರಾಮರನ್ನು ಸಿದ್ಧಕುಲತಿಲಕ, ಸಿದ್ಧೇಶ್ವರ, ಸಿದ್ಧಕುಲ ಕಮಲವಿರ, ಸಿದ್ಧವರೇಣ್ಯ, ಸಿದ್ಧರದೇವ,

ಸಿದ್ಧರಾದಿತ್ಯ, ಸಿದ್ಧನಿಧಾನ ಮೊದಲಾದ ಶಬ್ದಗಳಿಂದ ಸಂಬೋಧಿಸಿದ್ದಾನೆ."[೩೯] ಕರ್ನಾಟಕದ ಒಂದು ಭಾಗವಾಗಿದ್ದ ಕೊಲ್ಹಾಪೂರ ಸಿದ್ಧಪೀಠಗಳಲ್ಲಿ ಒಂದಾಗಿತ್ತು. ಹಾಗೆಯೇ ಉತ್ತರ ಕರ್ನಾಟಕದಲ್ಲಿರುವ ಕೆಲವು ಸ್ಥಳಗಳು ಸಿದ್ಧಮತದ ಅಸ್ತಿತ್ವವನ್ನು ತೆರೆದು ತೋರಿಸುತ್ತವೆ. ಅವುಗಳಲ್ಲಿ ರಾಯಬಾಗ ಪರಿಸರದ ಕಂಕಣವಾಡಿಯೂ ಒಂದು. ಇಲ್ಲಿರುವ ಹಾಲಸಿದ್ಧನಾಥ ದೇವತೆ ಸಿದ್ಧ ಮತ್ತು ನಾಥ ಪಂಥಗಳ ಸಂಗಮವಾಗಿದ್ದಾನೆ.

ನಾಥ ಪಂಥ :

ನಾಥ ಸಂಪ್ರದಾಯ ಎಂದು ಮತ್ತು ಹೇಗೆ ಆರಂಭವಾಯಿತು ಎಂಬುದನ್ನು ಖಚಿತವಾಗಿ ಹೇಳುವುದು ಕಷ್ಟ. ಮತ್ಸ್ಯೇಂದ್ರನಾಥನ ಶಿಷ್ಯನಾದ ಗೋರಕ್ಷನಾಥ ಅಥವಾ ಗೋರಖನಾಥ ಈ ಮತದ ಪ್ರವರ್ತಕನೆಂದು ಕೆಲವರು ಹೇಳಿದರು ಕೂಡ, ಆತ ಈ ಪಂಥದ ಸಂಸ್ಥಾಪಕನಲ್ಲ, ಆತ ಈ ಪಂಥದ ಒಬ್ಬ ಸಾಧಕ. ನಾಥ ಸಂಪ್ರದಾಯವನ್ನು ಸಿದ್ಧಮತ, ಸಿದ್ಧಮಾರ್ಗ, ಯೋಗಮಾರ್ಗ, ಅವಧೂತಮತ, ಅವಧೂತ ಸಂಪ್ರದಾಯ ಎಂದು ಕರೆಯುತ್ತಾರೆ. "ಗೋರಖನಾಥನಿಂದ ಪ್ರವರ್ತಿತವಾದ ಬಾರಹ ಪಂಥೀ ಮಾರ್ಗಗಳು (ದ್ವಾದಶ ಪಂಥಗಳು) 'ನಾಥ ಸಂಪ್ರದಾಯ' ಎಂದು ಪ್ರಸಿದ್ಧವಾದವು. ಈ ಸಂಪ್ರದಾಯದ ಸಾಧಕರರು ತಮ್ಮ ಹೆಸರಿನೊಡನೆ 'ನಾಥ' ಶಬ್ದವನ್ನು ಸೇರಿಸಿಕೊಳ್ಳುತ್ತಾರೆ. ಕಿವಿಯನ್ನು ಚುಚ್ಚಿಸಿಕೊಳ್ಳುವುದರಿಂದ 'ಕನಫಟಾ' (ಕಿವಿ ಹರಕರು) ಎಂದು ಮತ್ತು 'ದರ್ಶನ್' ಎಂದರೆ ಪವಿತ್ರದುಂಗುರವನ್ನು ಧರಿಸುವುದರಿಂದ 'ದರ್ಶನಿಸಾಧು' ಎಂದೂ ಕರೆಯಲ್ಪಡುತ್ತಾರೆ. ಇವರಲ್ಲಿ ಗೃಹಸ್ಥರೂ ಉಂಟು, ವಿರಕ್ತರೂ ಉಂಟು. ಕಿವಿ ಚುಚ್ಚಿಸಿಕೊಳ್ಳದವರನ್ನು 'ಔಘಡ್' ಎಂದು ಕರೆಯುತ್ತಾರೆ. ಗೃಹಸ್ಥ ಯೋಗಿಗಳಲ್ಲಿ ನೇಕಾರರು, ಕುರುಬರೇ ಹೆಚ್ಚು."[೪೦]

ನಾಥಸಿದ್ಧರ ಸಾಲಿನಲ್ಲಿ ಕನ್ನಡನಾಡಿನ ಸಂತರಾದ ರೇವಣಸಿದ್ಧ ಹಾಗೂ ಅಲ್ಲಮಪ್ರಭು ದೇವರ ಹೆಸರುಗಳನ್ನು ಸೇರಿಸಲಾಗಿದೆ. ಉತ್ತರ ಕರ್ನಾಟಕದ ಬೇಡಕೀಹಾಳ, ಕಪ್ಪತಗುಡ್ಡ ಮೊದಲಾದ ಸ್ಥಳಗಳಲ್ಲಿ ನಾಥರ ಅವೇಶಷಗಳಿವೆ. ಹೀಗಾಗಿ ನಾಥಪಂಥವು ಕರ್ನಾಟಕದಲ್ಲಿಯೂ ಪ್ರಸಿದ್ಧಿಯನ್ನು ಪಡೆದಿತ್ತೆಂಬುದು ಸ್ಪಷ್ಟ. ಬಸವಾದಿ ಪ್ರಮಥರ ಕಾಲದಲ್ಲಿ ನಾಥಪಂಥ ಕನ್ನಡನಾಡಿನಲ್ಲಿ ಸಾಕಷ್ಟು ಪ್ರಚಲಿತದಲ್ಲಿತ್ತು. ಬ್ರಹ್ಮಚರ್ಯ, ಸದಾಚಾರ, ಯೋಗ ಮತ್ತು ಸ್ವಾನುಭೂತಿಗೆ ಎಲ್ಲಿಲ್ಲದ ಮಹತ್ವ ನೀಡಿ ಹಿಂದೂ ಧರ್ಮಕ್ಕೆ ಒಂದು ಹೊಸ ಕಾಯಕಲ್ಪ ನೀಡಿದ ಮಹಾಪಂಥ ನಾಥಪಂಥ. ಅಂತೆಯೇ ಭಾರತದ ಮೂಲೆ-ಮೂಲೆಯಲ್ಲಿ ನಾಥಪಂಥವಿದೆ. ಅದರ ಪ್ರಭಾವಕ್ಕೆ ಸಿಲುಕದ ಧರ್ಮಪಂಥಗಳೇ ಇಲ್ಲ. ಇದೇ ರೀತಿಯ ಹಿನ್ನೆಲೆಯನ್ನು ಹೊಂದಿರುವ ಬೆಳಗಾವಿ ಜಿಲ್ಲೆಯ ಬಾಗೆನಾಡಿನ ಕಂಕಣವಾಡಿಯ ಹಾಲಸಿದ್ಧನಾಥನ ದೇವಸ್ಥಾನವು ಸಿದ್ಧ, ನಾಥ, ದತ್ತ, ಸೂಫಿ ಸಂಪ್ರದಾಯಗಳ ಸಮನ್ವಯದ ಸಂಗಮ ಸ್ಥಳವಾಗಿದೆ.

ಕಂಕಣವಾಡಿ ದೇವಾಲಯದ ವಾಸ್ತುಶಿಲ್ಪ :

ಹಾಲಸಿದ್ಧನಾಥ ದೇವಾಲಯವು ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಸುಮಾರು ಎರಡು ಎಕರೆಗಳಷ್ಟು ವಿಶಾಲವಾದ ಪ್ರದೇಶದಲ್ಲಿರುವುದು. ದೇವಾಲಯದ ಕಟ್ಟಡವು ಒಂದು ಎಕರೆಯಷ್ಟು ವಿಸ್ತಾರತೆಯನ್ನು ಹೊಂದಿದೆ. ಹೊಯ್ಸಳ ಅಥವಾ ನಂತರದ ಕಲಾ ಶೈಲಿಯನ್ನು ಒಳಗೊಂಡಂತೆ ಇಂಡೋ-ಇಸ್ಲಾಮಿಕ

ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯದ ವಾಸ್ತು ೧. ಗರ್ಭಗುಡಿ ೨. ಮುಖಮಂಟಪ ೩. ಕಲ್ಯಾಣ ಮಂಟಪ ಎಂಬ ಪ್ರಮುಖ ಮೂರು ಭಾಗಗಳಿಂದ ರಚನೆಗೊಂಡಿದೆ. ಪ್ರಾಚೀನ ಕಾಲದಲ್ಲಿ ನಿರ್ಮಿಸಲ್ಪಟ್ಟ ಈ ದೇವಾಲಯವು ಕಾಲಾನಂತರದಲ್ಲಿ ಜೀರ್ಣೋದ್ಧಾರಗೊಂಡಿರುವುದು.

ಗರ್ಭಗುಡಿ :

ಗರ್ಭಗುಡಿಯು ಆಯತಾಕಾರದಲ್ಲಿ ನಿರ್ಮಾಣಗೊಂಡಿದೆ. ಮುಖಮಂಟಪಕ್ಕೆ ಹೊಂದಿಕೊಂಡಂತೆ ಪೂರ್ವಕ್ಕೆ ಮುಖ ಮಾಡಿ ಎರಡು ಗರ್ಭಗುಡಿಗಳಿವೆ. ಪ್ರಮುಖ ಗರ್ಭಗುಡಿಯ ದ್ವಾರವನ್ನು ಬೆಳ್ಳಿಯಿಂದ ಅಲಂಕರಿಸಲಾಗಿದೆ. ಅಲ್ಲಿರುವ ಹೂಬಳ್ಳಿಗಳ ವಿನ್ಯಾಸ ನೋಡುಗರನ್ನು ಆಕರ್ಷಿಸುತ್ತದೆ. ದ್ವಾರದ ಹಣೆಪಟ್ಟಿಯ ಮಧ್ಯದಲ್ಲಿ ಗಣಪತಿಯ ಸುಂದರ ವಿಗ್ರಹವನ್ನು ಕೆತ್ತಲಾಗಿದೆ. ಪ್ರಮುಖ ಗರ್ಭಗುಡಿಯಲ್ಲಿ ಸುಮಾರು ೩.೫ ಅಡಿ ಎತ್ತರದ ಮದಾರ (ಜಗಲಿ) ಇದ್ದು, ಅದರ ಮೇಲೆ ಗುಂಡುಕಲ್ಲಿನಾಕಾರದ ಎರಡು ಮೂರ್ತಿಗಳಿವೆ. ಒಂದು ಹಾಲಸಿದ್ಧನದು, ಇನ್ನೊಂದು ಇಟ್ಟಪ್ಪರಾಯನದು. ಸದ್ಯ ಆ ಗುಂಡುಕಲ್ಲುಗಳಿಗೆ ಲೋಹದ ಮುಖಗಳನ್ನು ತೊಡಿಸಿ ಅಲಂಕಾರಗಳನ್ನು ಮಾಡಿರುವರು. ತಲೆಗೆ ಪೇಟಾ ಸುತ್ತಿ, ಅರ್ಧ ಚಂದ್ರಾಲಂಕಾರ ಮಾಡಿರುವರು. ದೇವತೆಗಳ ಮೂರ್ತಿಯ ಮುಂದೆ ವಾಹನವಾದ ಕುದರೆ ಮತ್ತು ಟಗರಿನ ಮೂರ್ತಿಗಳನ್ನಿಟ್ಟು ಪೂಜಿಸುವರು. ಹಾಲಸಿದ್ಧ ಮತ್ತು ಇಟ್ಟಪ್ಪರಾಯನ ಮೂರ್ತಿಗಳು ಜೊತೆ-ಜೊತೆಯಾಗಿರುವರು. ಇಲ್ಲಿರುವ ಇಟ್ಟಪ್ಪ ಮಹಾರಾಷ್ಟ್ರದ ಕಡೋಲಿಯ ಇಟ್ಟಪ್ಪನಾಗಿದ್ದು, ಇವನನ್ನು ಹಾಲಸಿದ್ಧನ ಗುರುವೆಂದು ಹೇಳುತ್ತಾರೆ.

ಗರ್ಭಗುಡಿಗೆ ಸಮಾನಾಂತರದಲ್ಲಿ ಬಲಬದಿಗೆ ಇನ್ನೊಂದು ಗರ್ಭಗುಡಿ ಇದ್ದು ಅಲ್ಲಿ ಬಾಗುಬಾಯಿಯ (ಭಾಗವ್ವ) ಮೂರ್ತಿಯಿದೆ. ಇವಳು ಕಡೋಲಿ ಇಟ್ಟಪ್ಪರಾಯನ ಮಗಳು. ಹಾಲಸಿದ್ಧನಿಗೆ ಗುರು ಇಟ್ಟಪ್ಪನನ್ನು ಹುಡುಕಿಕೊಟ್ಟವಳು. ಆ ಕಾರಣಕ್ಕಾಗಿ ಇವಳನ್ನು ಹಾಲಸಿದ್ಧ ತಂಗಿಯೆಂದು ಸ್ವೀಕರಿಸಿರುವನು. ಇವಳು ಖಾಸಾ ಸಹೋದರಿಯಲ್ಲ. ಭಾಗವ್ವನ ಶಿಲಾಮೂರ್ತಿ ಸುಂದರ ಪ್ರಾಚೀನ ಶಿಲ್ಪವಾಗಿದ್ದು ಪುರುಷ ವಿಗ್ರಹದಂತಿದೆ. ಆದರೆ ಭಕ್ತರು ಅವಳನ್ನು ಸ್ತ್ರೀ ದೇವತೆಯಾಗಿ ಪೂಜಿಸುತ್ತಿರುವರು. ಪ್ರಮುಖ ಗರ್ಭಗುಡಿಯಿಂದ ಒಳಭಾಗದಲ್ಲಿಯೇ ದ್ವಾರವಿದ್ದು ಅದರ ಮೂಲಕವು ಪೂಜಾರಿಗಳು ಪ್ರವೇಶಿಸಬಹುದು. ಇವಳನ್ನು ಚಿಕ್ಕ ಜಗಲಿ ಮೇಲೆ ಪ್ರತಿಷ್ಠಾಪಿಸಲಾಗಿದ್ದು ಮೂರ್ತಿಯನ್ನು ಕಪ್ಪು ಶಿಲೆಯಿಂದ ನಿರ್ಮಿಸಲಾಗಿದೆ. ಚತುರ್ಭುಜಳಾದ ಬಾಗುಬಾಯಿಯ ಮೂರ್ತಿಯ ಮುಖಕ್ಕೆ ಬೆಳ್ಳಿಯ ಕಣ್ಣಬಟ್ಟು, ಕೊರಳಲ್ಲಿ ಬಂಗಾರದ ಸರ ಮತ್ತು ತಲೆಯ ಮೇಲೆ ಬೆಳ್ಳಿ ಕಿರೀಟ ತೊಡಿಸಲಾಗಿದೆ. ಗರ್ಭಗುಡಿಯಲ್ಲಿ ಪೂಜಾರಿಗಳಿಗೆ ಮಾತ್ರ ಪ್ರವೇಶ. ಗರ್ಭಗುಡಿಯ ಮೇಲ್ಭಾಗವು ಗುಮ್ಮಟದಿಂದ ಕೂಡಿದೆ.

ಮುಖಮಂಟಪ :

ಮುಖಮಂಪವು ನಾಲ್ಕು ಭಾಗಗಳಿಂದ ಕೂಡಿದೆ. ದೇವತೆಯ ದರ್ಶನಕ್ಕೆ ಬರುವ ಭಕ್ತರು ಮಧ್ಯದಲ್ಲಿರುವ ಎರಡನೇ ಭಾಗದಲ್ಲಿ ನಿಂತು ಕೊಂಡು ಹಾಲಸಿದ್ಧ ಮತ್ತು ಇಟ್ಟಪ್ಪರ ದರ್ಶನವನ್ನು ಪಡೆದುಕೊಳ್ಳುವರು. ಎಡಕ್ಕೆ ಇರುವ ನಾಲ್ಕನೇ ಭಾಗದಲ್ಲಿ ನಿಂತುಕೊಂಡು ಬಾಗುಬಾಯಿಯ ದರ್ಶನವನ್ನು ಭಕ್ತರು ಪಡೆಯುವರು. ಮುಖಮಂಟಪದ ಮುಂದಿನ ಭಾಗವು ಮೂರು ಸ್ವತಂತ್ರ ಮತ್ತು ಎರಡು

ಅರ್ಧಕಂಬಗಳಿಂದ ಕೂಡಿದ್ದು ಒಟ್ಟು ನಾಲ್ಕು ಕಮಾನುಗಳಿಂದ ರಚನೆಗೊಂಡಿದೆ. ಮಂಟಪದ ಮಧ್ಯದಲ್ಲಿಯೂ ಸ್ವತಂತ್ರ ಮತ್ತು ಗೋಡೆಗಂಟಿಕೊಂಡಿರುವ ಕಂಬಗಳಿದ್ದು ಅವುಗಳ ಮೇಲ್ಭಾಗಗಳಲ್ಲಿ ಕಮಾನುಗಳನ್ನು ರಚಿಸಲಾಗಿದೆ. ಮಂಟಪದ ಮೇಲ್ಭಾಗದಲ್ಲಿ ಮುಂದೆ ನಾಲ್ಕು ಹಿಂದೆ ನಾಲ್ಕು ಮಿನಾರಗಳನ್ನು ರಚಿಸಿರುವುದು ಇಲ್ಲಿಯ ವಿಶೇಷ.

ಮಂಟಪದ ಹೊರಭಾಗದ ಮೇಲ್ಭಾವಣಿಯ ಮೇಲೆ ಹಲವು ಮೂರ್ತಿಗಳನ್ನು ಇಡಲಾಗಿದೆ. ಎಡದಿಂದ ಮೊದಲು ಬಾಗುಬಾಯಿ, ಅದರ ಪಕ್ಕದಲ್ಲಿ ಚತುರ್ಭುಜಳಾದ ಬ್ಯಾಕೂಡವ್ವ ಅಂದರೆ ಬ್ಯಾಕೂಡದ ಲಕ್ಕವ್ವ, ಮಧ್ಯದಲ್ಲಿ ತ್ರಿಶೂಲಧಾರಿ ಶಿವನ, ಅಭಯ ಹಸ್ತದ ಪಾರ್ವತಿಯ, ಬಲಕ್ಕೆ ಬೀರದೇವ ಮತ್ತು ಬಗಲಲ್ಲಿ ಹುಲಿಮರಿ, ಕೈಯಲ್ಲಿ ಹಾಲಿನ ತಂಬಿಗೆ ಹಿಡಿದ ಮಾಳಿಂಗರಾಯ ಮೂರ್ತಿಗಳಿವೆ. ಇದಲ್ಲದೆ ಬಲಕ್ಕೆ ಮರಿಯೊಂದಿಗಿರುವ ಹುಲಿ ಮತ್ತು ಎಡಕ್ಕೆ ಕರುವಿನೊಂದಿಗಿರುವ ಹಸುವಿನ ಮೂರ್ತಿಗಳಿವೆ. ಈ ಮೂರ್ತಿಗಳ ಕೆಳಗೆ ಇತ್ತೀಚಿಗೆ ಬಿಡಿಸಿದ ತೈಲಚಿತ್ರಣಗಳಿವೆ. ಇವು ಹಾಲಸಿದ್ಧನಾಥ ಕಥೆಯನ್ನು ಕಥಿಸುತ್ತದೆ. ಮಂಟಪದ ಮುಂದುಗಡೆ ಗದಾಧಾರಿಗಳಾದ ಜಯ ಮತ್ತು ವಿಜಯರ ಚಿತ್ರಗಳನ್ನು ಬಿಡಿಸಲಾಗಿದೆ.

ಕಲ್ಯಾಣ ಮಂಟಪ :

ಪ್ರಾಚೀನ ಕಾಲದ ಹಾಲಸಿದ್ಧೇಶ್ವರನ ದೇವಾಲಯವು ಚಿಕ್ಕದಾಗಿದ್ದು ಕಲ್ಯಾಣ ಮಂಟಪವನ್ನು ಒಳಗೊಂಡಿರಲಿಲ್ಲ. ಇತ್ತೀಚಿಗೆ ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಮಂಟಪವು ವಿಶಾಲವಾಗಿದ್ದು ಜಾತ್ರೆ ಉತ್ಸವಗಳಲ್ಲಿ ವಾಲಗ ಬಾರಿಸಲು, ಡೊಳ್ಳಿನ ಹಾಡುಗಾರಿಕೆಗೆ ಉಪಯುಕ್ತವಾಗಿದೆ. ಜೊತೆಗೆ ದೇವತಾ ಕಾರ್ಯಕ್ರಮಗಳನ್ನು ನೇರವೇರಿಸಲು ಅನುಕೂಲಕರವಾಗಿದೆ. ಮಂಟಪದ ಮೇಲ್ಭಾಗವು ತಗಡಿನ (ಝಿಂಕ್) ಶೀಟಗಳಿಂದ ಹೊದಿಸಲಾಗಿದೆ. ಇದು ಚಿಂಚಲಿಯ ಮಾಯವ್ವ, ಅಲಕನೂರಿನ ಕರೇಸಿದ್ಧೇಶ್ವರನ ಕಲ್ಯಾಣ ಮಂಟಪದಂತಿದೆ. ಮಂಟಪವು ಗರ್ಭಗುಡಿ ಮತ್ತು ಮುಖ ಮಂಟಪಕ್ಕಿಂತಲೂ ಎತ್ತರವಾಗಿದ್ದು ಆಕರ್ಷಕವಾಗಿ ಕಾಣುತ್ತದೆ.

ಗಣಪತಿ ಮಂಟಪ :

ದೇವಾಲಯದ ಪ್ರಾಂಗಣದಲ್ಲಿಯೇ ಮುಖ ಮಂಟಪದ ಪಶ್ಚಿಮದಲ್ಲಿ ಮಂಟಪವೊಂದನ್ನು ನಿರ್ಮಿಸಲಾಗಿದೆ. ಅದರಲ್ಲಿ ಸುಮಾರು ೪ ಅಡಿ ಎತ್ತರದ ಗಣಪತಿಯ ಕಲ್ಲಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಮಹಾದ್ವಾರ ಮತ್ತು ಪ್ರಾಕಾರ ಗೋಡೆ :

ದೇವಾಲಯದ ಎಲ್ಲ ಭಾಗಗಳನ್ನು ಒಳಗೊಂಡಂತೆ ಸುತ್ತಲೂ ಎತ್ತರವಾದ ಪ್ರಾಕಾರ ಗೋಡೆಯನ್ನು ನಿರ್ಮಿಸಲಾಗಿದೆ. ಇದು ವಿಜಯನಗರ ಶೈಲಿಯ ಕೋಟೆಗೋಡೆಯನ್ನು ಹೋಲುವಂತಿದೆ. ದೇವಾಲಯದ ಒಳಭಾಗದ ಪ್ರಾಕಾರ ಗೋಡೆಗೆ ಅಂಟಿಕೊಂಡಂತೆ ಪಶ್ಚಿಮ ಮತ್ತು ದಕ್ಕಿಣೋತ್ತರಗಳಲ್ಲಿ ಪೌಳಿಗಳಿವೆ. ಪೂರ್ವ ದಿಕ್ಕಿನಲ್ಲಿ ಪ್ರಮುಖ ಪ್ರವೇಶ ದ್ವಾರವಿದ್ದು ನೋಡಲು ಬೃಹದ್ದಾಕಾರ ಮತ್ತು

ಸುಂದರವಾಗಿದೆ. ದ್ವಾರದ ಮೇಲೆ ಎಡ-ಬಲಗಳಲ್ಲಿ ಇಂಡೋ-ಇಸ್ಲಾಮಿಕ ಶೈಲಿಯ ಚಿಕ್ಕದಾಗಿರುವ ನಾಲ್ಕು ಮಿನಾರಗಳಿವೆ.

ಹಾಲಸಿದ್ಧನ ಪೂಜೆ :

ಹಾಲಸಿದ್ಧನಿಗೆ ನಿತ್ಯದಲ್ಲಿ ಮೂರು ಸಲ ಪೂಜೆಯಾಗುತ್ತದೆ. ಬೆಳಗಿನ ನಾಲ್ಕು ಗಂಟೆ, ಮಧ್ಯಾಹ್ನ ಹನ್ನೆರಡು ಗಂಟೆ, ಸಂಜೆ ಎಂಟು ಗಂಟೆಗೆ ಹಾಲಸಿದ್ಧ ಪೂಜೆಯಾಗುತ್ತದೆ. ಹಾಲಸಿದ್ಧ ಮುಂಜಾನೆ ಮಗುವಾಗಿ ಆಡುತ್ತಾನೆ, ಮಧ್ಯಾಹ್ನ ಯುವಕನಾಗಿ ಬೆಳೆಯುತ್ತಾನೆ, ಸಂಜೆ ಮುದುಕನಾಗಿ ಕಾಣುತ್ತಾನೆ. ಹೀಗೆ ಅವನು ಮೂರು ರೂಪಗಳನ್ನು ಧರಿಸಿದಕ್ಕಾಗಿ ಮೂರು ಸಲ ಪೂಜೆಗೊಳ್ಳುತ್ತಾನೆ. ಸಾಮಾನ್ಯವಾಗಿ ಹಾಲುಮತ ದೇವಸ್ಥಾನಗಳಲ್ಲಿ ಮುಂಜಾನೆ ಮತ್ತು ಸಾಯಂಕಾಲ ಎರಡು ಬಾರಿ ದೇವತೆಗಳು ಪೂಜೆಗೊಳ್ಳುತ್ತಾರೆ ಅದರೆ ಇಲ್ಲಿ ಮಾತ್ರ ಮೂರು ಬಾರಿ ಪೂಜೆಯಾಗುತ್ತಿರುವುದು ವಿಶೇಷ. ಗ್ರಾಮದಲ್ಲಿರುವ ಯಾವುದೇ ಸಮುದಾಯದ ವ್ಯಕ್ತಿ ಮರಣ ಹೊಂದಿದರೆ ಅಂತ್ಯ ಸಂಸ್ಕಾರ ಆಗುವವರೆಗೆ ಹಾಲಸಿದ್ಧನ ಪೂಜೆಯಾಗುವುದಿಲ್ಲ. ಅಂತ್ಯ ಸಂಸ್ಕಾರದ ನಂತರ ಗುಡಿಯನ್ನು ಶುಚಿಗೊಳಿಸಿದ ನಂತರವೇ ಪೂಜೆಯಾಗುತ್ತದೆ.

ಹಾಲಸಿದ್ಧನ ನೈವೇದ್ಯ :

ಹಾಲಸಿದ್ಧನಿಗೆ ಹಾಲು ಮತ್ತು ಬಾಳೆಹಣ್ಣು ಪ್ರಮುಖ ನೈವೇದ್ಯವಾಗಿ ಅರ್ಪಿತವಾಗುತ್ತದೆ. ವರ್ಷಕ್ಕೊಮ್ಮೆ ಜರಗುವ ಮೋಹರಮ್ ಹಬ್ಬದಲ್ಲಿ ಮಾತ್ರ ಮಾಲಿದಿ ನೈವೇದ್ಯವನ್ನು ಭಕ್ತರು ಸಲ್ಲಿಸುವರು. ಹಾಲಸಿದ್ಧ ಶುದ್ಧ ಶಾಖಾಹಾರಿ, ಮಾಂಸಾಹಾರ ನೈವೇದ್ಯ ನಿಷಿದ್ಧ. ಕಟ್ಟುನಿಟ್ಟಾದ ಮಡಿ ಪಾಲಿಸಬೇಕು. ಎಂಜಲು, ಮೈಲಿಗೆ ನಿಷಿದ್ಧ. ಇಟ್ಟಪ್ಪ ಮತ್ತು ಭಾಗವ್ವರಿಗೆ ಭಕ್ತರು ಹೋಳಿಗೆ, ಕಡಬು, ಹುಗ್ಗಿ, ಕಿಚಡಿ, ಅನ್ನಗಳನ್ನು ನೈವೇದ್ಯಗಳನ್ನು ಅರ್ಪಿಸುವ ಜೊತೆಗೆ ತೆಂಗು ಒಡೆಯುವರು.

ಹಾಲಸಿದ್ಧನ ಪೂಜಾ ನಿಯಮ(ನಿಷಿದ್ಧ)ಗಳು :

ಹಾಲಸಿದ್ಧನ ಗರ್ಭಗುಡಿಯಲ್ಲಿ ಪೂಜಾರಿಗಳನ್ನು ಹೊರತು ಪಡಿಸಿ ಬೇರೆ ಯಾರಿಗೂ ಪ್ರವೇಶಿಸಲು ಅವಕಾಶವಿಲ್ಲ. ಹಾಲಸಿದ್ಧನ ದೇವಸ್ಥಾನವನ್ನು ಪ್ರವೇಶಿಸುವ ಪೂಜಾರಿಗಳು ಶುಚಿಯಾಗಿರಬೇಕು. ಬೀಡಿ-ತಂಬಾಕು ಸೇದುವಂತಿಲ್ಲ. ತಂಬಾಕು-ಗುಟುಕಾ ತಿನ್ನುವಂತಿಲ್ಲ. ಸಿಂದಿ-ಸರಾಯಿ ಕುಡಿಯುವಂತಿಲ್ಲ. ನಾಥ ಪಂಥಿಯರು ಬಂಗಿ ಸೇದುವುದು ಸಾಮಾನ್ಯ ಆದರೆ ಇಲ್ಲಿ ಸಂಪೂರ್ಣ ನಿಷಿದ್ಧ. ಈ ನಿಮಯಗಳು ಪೂಜಾರಿಗಳಿಗಷ್ಟೇ ಅಲ್ಲದೆ ದೇವಾಲಯ ಪ್ರವೇಶಿಸುವ ಭಕ್ತರಿಗೂ ಅನ್ವಯಿಸುತ್ತವೆ. ಇವುಗಳನ್ನು ನೀಷೇಧಿಸಿದ್ದಾಗಿ ದೇವಸ್ಥಾನ ಮಹಾದ್ವಾರದ ಮುಂದಿನ ಗೋಡೆಗೆ ಸ್ಪಷ್ಟವಾಗಿ ಬರೆಯಲಾಗಿದೆ.

ಪೂಜಾರಿಗಳು ಹಸಿ ಈರುಳ್ಳಿ, ಬೆಳ್ಳುಳ್ಳಿ ತಿಂದು ಗದ್ದುಗೆ ಪೂಜೆ ಮಾಡುವಂತಿಲ್ಲ. ಇವರಲ್ಲಿ ಹರಿಮರಿಯ (ಬಲಿ ಕೊಡುವ) ಸಂಪ್ರದಾಯವಿಲ್ಲ. ಪೂಜಾರಿಗಳಿಗೆ ಮಾಂಸಹಾರ ನಿಷಿದ್ಧ. ಮಾಂಸಾಹಾರಿಗಳ ಜೊತೆಗೆ ರಕ್ತ ಸಂಬಂಧವನ್ನು ಬೆಳೆಸುವುದಿಲ್ಲ. ಶುದ್ಧ ಸಸ್ಯಾಹಾರಿಗಳಾದ ಒಡೆಯರ ಜೊತೆ ವೈವಾಹಿಕ ಸಂಬಂಧವಿದೆ. ಇವರದು ಹತ್ತಿ ಕಂಕಣ, ಬಣ್ಣೆನ್ನವರ ಬೆಡಗು. ಉಣ್ಣೆ ಕಂಕಣದವರ ಜೊತೆ ಸಂಬಂಧ

ಬೆಳೆಸುವುದಿಲ್ಲ. ಪೂಜಾರಿಗಳ ಮದುವೆ ದೇವರ ಸತ್ತಿಗೆಯ ನೆರಳಲ್ಲಿಯೇ ಮದುಮಕ್ಕಳ ತಲೆಯ ಮೇಲೆ ಅಕ್ಷತೆ ಬೀಳಬೇಕು.

ದೇವತೆಯನ್ನು ಪೂಜೆ ಮಾಡುವ ಪೂಜಾರಿಗಳು ಮದುವೆ ಮಾಡಿಕೊಂಡವಳ ಮಕ್ಕಳಾಗಿರಬೇಕು. ಉಡಿಕೆಯವಳ ಮಕ್ಕಳಿಗೆ ಪೂಜೆ ನಿಷಿದ್ಧ. ಅವರು ದೇವರ ಗದ್ದುಗೆಯನ್ನು ಹತ್ತುವಂತಿಲ್ಲ ಹಾಗೂ ಪಲ್ಲಕ್ಕಿಯನ್ನು ಹೊರುವಂತಿಲ್ಲ. ಒಂದು ವೇಳೆ ಪೂಜಾರಿಯ ಮೊದಲನೇ ಹೆಂಡತಿ ತೀರಿಕೊಂಡರೆ, ಇನ್ನೊಬ್ಬಳನ್ನು ಉಡಿಕೆ ಮಾಡಿಕೊಳ್ಳುವಂತಿಲ್ಲ, ಮದುವೆಯನ್ನೇ ಮಾಡಿಕೊಳ್ಳಬೇಕು.

ಈ ನಿಷಿದ್ಧ ಜಾರಿಗೆ ಬರಲು ಪೂಜಾರಿಗಳು ಒಂದು ಕಥೆ ಹೇಳುವರು. ಹಾಲಸಿದ್ಧನ ಪೂಜೆ ಮಾಡುವ ಪೂಜಾರಿಯೊಬ್ಬರ ಪತ್ನಿ ಮೂವರು ಗಂಡು ಮಕ್ಕಳಿಗೆ ಜನ್ಮ ನೀಡಿ ಮರಣ ಹೊಂದಿದಳು. ಚಿಕ್ಕ ಮಕ್ಕಳನ್ನು ಜೋಪಾನ ಮಾಡುವವರು ಯಾರು ಇಲ್ಲದಾದಾಗ, ಪೂಜಾರಿ ಒಬ್ಬಳನ್ನು ಉಡಿಕೆ ಮಾಡಿಕೊಂಡ. ಕಾಲಾನಂತರದಲ್ಲಿ ಅವಳಿಗೂ ಮೂವರು ಗಂಡು ಮಕ್ಕಳು ಹುಟ್ಟಿದರು. ಅವರು ಬೆಳೆದು ದೊಡ್ಡವರಾದರು. ಮದುವೆ ಮಾಡಿಕೊಂಡ ತಾಯಿಗೆ ಹುಟ್ಟಿದ ಮಕ್ಕಳು ದೇವತೆಯನ್ನು ಪೂಜೆ ಮಾಡುತ್ತ 'ಉಡಿಕೆಕಿ ಮಕ್ಕಳಿಗೆ ಗಿಡಕೊಂದ ಕೊಂಚಿಗೆ (ಕುಲಾಯಿ) ಡಂ ಡಂ ಡುಂ ಡುಂ' ಎಂದು ಮಲತಾಯಿ (ಉಡಕಿ) ಮಕ್ಕಳನ್ನು ಮೂದಲಿಸುತ್ತಿದ್ದರು. ಈ ಅಪಮಾನವನ್ನು ಸಹಿಸದ ಉಡಕಿಯ ಮಕ್ಕಳು ಸತ್ತು ಹೋದರು. ಈ ಅನಾಹುತದ ತರುವಾಯ ಪೂಜಾರಿ ವರ್ಗದ ಪ್ರಮುಖರು, ಉಡಕಿ ಹೆಂಡತಿಗೆ ಹುಟ್ಟುವ ಮಕ್ಕಳಿಗೆ ಪೂಜೆಯ ಜವಾಬ್ದಾರಿಯನ್ನು ಕೊಡುವುದು ಬೇಡವೆಂಬ ನಿರ್ಣಯಿಸಿದರು. ಈ ಹಿನ್ನೆಲೆಯಲ್ಲಿ ಪೂಜಾರಿಗಳು ಉಡಿಕೆ ಮಾಡಿಕೊಳ್ಳುವುದು ಬಹಳ ಅಪರೂಪ.

ಕಂಕಣವಾಡಿ ಹಾಲಸಿದ್ಧನ ಪೂಜಾರಿಗಳು ಮತ್ತು ಅಲಕನೂರಿನ ಕರೇಸಿದ್ಧನ ಪೂಜಾರಿಗಳು ಮೂಲತಃ ಒಂದೇ ಮನೆತನಕ್ಕೆ ಸೇರಿದವರು. ಅಜ್ಜ ರಾಯಪ್ಪನ ನಂತರ ಹಾಲಿಸಿದ್ಧನ ಪೂಜೆ ಅವನ ಮೂವರು ಮಕ್ಕಳಲ್ಲಿ ಹಂಚಿಕೆಯಾಯಿತು. ಆ ಮೂರು ಮನೆತನಗಳು ಇಂದು ನೂರಾರು ಮನೆತನಗಳಾಗಿ ಎಲ್ಲ ಮನೆತನಗಳಿಗೂ ಪೂಜಾ ಕಾರ್ಯ ಹಂಚಿಹೋಗಿದ್ದು ಸುಮಾರು ೫೦-೬೦ ವರ್ಷಗಳಿಗೆ ಒಂದು ಸರತಿ ಬರುತ್ತದೆ.

ಹಾಲಸಿದ್ಧನ ವಾಹನ :

ಹಾಲಸಿದ್ಧನ ವಾಹನ ಕುದುರೆ. ಶುಭ್ರವಾದ ಮತ್ತು ಸುಂದರವಾದ ಶ್ವೇತಾಶ್ವ ಹಾಲಸಿದ್ಧನ ದೇವಾಲಯದಲ್ಲಿದೆ. ಹಾಲುಮತ (ಪಶುಪಾಲನೆ) ಹಿನ್ನೆಲೆಯ ದೇವತೆಗಳು ಕುದುರೆಯನ್ನು ವಾಹನವಾಗಿ ಹೊಂದಿರುವರು. ಉದಾಹರಣೆಗೆ ಅಲಕನೂರಿನ ಕರೇಸಿದ್ಧ, ಯಲ್ಪಾರಟ್ಟಿಯ ಅರಣ್ಯಸಿದ್ಧ, ಚಿಂಚಲಿಯ ಮಾಯವ್ವ, ಬೆಕ್ಕೇರಿ ಲಕ್ಕವ್ವ ಮುಂತಾದವು. ಸಾಮಾನ್ಯವಾಗಿ ನಾಥಪಂಥದ ಯೋಗಿಗಳು ಕುದುರೆಯ ಮೇಲೆ ಕುಳಿತು ಸಂಚಾರ ಮಾಡುತ್ತಾರೆ. ಹಾಲಸಿದ್ಧನ ಉತ್ಸವ ಮೂರ್ತಿ ಮತ್ತು ಪಲ್ಲಕ್ಕಿ ಭಕ್ತರ ಮನೆಗೆ ಹೋಗುವುದಿಲ್ಲ. ಆದರೆ ಅವನ ವಾಹನವಾದ ಕುದುರೆ ಮತ್ತು ಅವನ ಪ್ರತಿ ರೂಪವಾದ ಹುದೆ (ಕತ್ತಿ),

ಬೆಳ್ಳಿಯ ಬೆತ್ತ, ಸತ್ತಿಗೆ, ನಿಶಾನೆ, ಚೌರಿ, ವಾಲಗ ಮುಂತಾದವು ಭಕ್ತರ ಮನೆಗೆ ಹಾಲಸಿದ್ಧನ ಪ್ರತಿರೂಪವಾಗಿ ಹೋಗಿ ಪೂಜೆಗೊಳ್ಳುತ್ತವೆ.

ಹಾಲಸಿದ್ಧನ ದೇವಸ್ಥಾನ ಭಾವೈಕ್ಯದ ತಾಣ :

ಕಂಕಣವಾಡಿಯ ಹಾಲಸಿದ್ಧನಾಥನ ದೇವಸ್ಥಾನವು ಶೈವ, ಸಿದ್ಧ, ನಾಥ, ಮುಸ್ಲಿಂ ಸಂಪ್ರದಾಯಗಳ ಸಮನ್ವಯವನ್ನು ಸಾರುವ ಭಾವೈಕ್ಯತೆ ತಾಣವಾಗಿದೆ. ಜಾತ್ಯಾತಿತನಾದ ಹಾಲಸಿದ್ಧನಿಗೆ ಎಲ್ಲ ಮತ-ಧರ್ಮಗಳ ಬಾಂಧವರು ಬಂದು ಹರಕೆ ತೀರಿಸುತ್ತಾರೆ. ಮೋಹರಮ್ ಹಬ್ಬದಲ್ಲಿ ಒಂದು ಬಾರಿ ಮಾತ್ರ ಮುಸ್ಲಿಂರು, ಪೀರರಿಗೆ ಗಂಧ ಏರಿಸುವ ಪೂರ್ವದಲ್ಲಿ ಹಾಲಸಿದ್ಧನ ಗುಡಿಗೆ ಲಾಲಸಾಬನೊಂದಿಗೆ ಆಗಮಿಸಿ ಹಾಲಸಿದ್ಧನಿಗೆ ಗಂಧ ಏರಿಸಿ, ಮಾಲಿದ್ದಿ ನೈವೇದ್ಯವನ್ನು ಅರ್ಪಿಸಿ, ಆನಂತರವೇ ಮಸಿದಿಗೆ ಹೋಗುವರು. ಹಾಲಸಿದ್ಧನ ಗರ್ಭಗುಡಿ ಮೇಲಿನ ಗುಮ್ಮಟ ಮತ್ತು ಮಿನಾರ್‌ಗಳು, ಗಜಬರಸಾಬ ಕೊಟ್ಟ ಹುದೆ ಹಿಂದೂ-ಮುಸ್ಲಿಂರ ಮಧ್ಯದ ಭಾವೈಕ್ಯತೆಯನ್ನು ಸಾಕ್ಷಿಕರಿಸುತ್ತವೆ.

ಹಾಲಸಿದ್ಧನ ಜಾತ್ರೆಗೆ ಮೊದಲ ನೈವೇದ್ಯದ ಗೌರವ ಪತ್ತಾರರದು. ಜಾತ್ರೆ ಆರಂಭವಾದ ಮೊದಲ ದಿನ ಪತ್ತಾರ ಮನೆತನದ ಭಕ್ತನೊಬ್ಬ ಶುಚಿಗೊಂಡು ದೇವಸ್ಥಾನಕ್ಕೆ ಬಂದು, ಮಡಿಯಿಂದ ತಯಾರಿಸಿದ ನೈವೇದ್ಯವನ್ನು ಕೊಟ್ಟು ಹೋಗುವುದು ವಿಶೇಷ. ಆ ನಂತರವೇ ಇನ್ನೂಳಿದ ಎಲ್ಲ ಭಕ್ತರು ನೈವೇದ್ಯವನ್ನು ದೇವರಿಗೆ ಅರ್ಪಿಸುವರು. ಯಾವ ಭಕ್ತರ ಮನೆಗೂ ಹೋಗದ ಹಾಲಸಿದ್ಧನ ಪಲ್ಲಕ್ಕಿ ಅಗಸರ ಮನೆಗೆ ಹೋಗುವುದು ಇನ್ನೊಂದು ವಿಶೇಷ. ಬ್ಯಾಕೂಡದ ಗಿಡದ ಬುಡದಲ್ಲಿ ಹಾಲಸಿದ್ಧ ಧರಿಸಿದ ಮೂರು ರೂಪಗಳನ್ನು ಗುರುತಿಸಿದ್ದು ಅಗಸರ ಹೆಣ್ಣುಮಗಳು. ಆ ಕಾರಣಕ್ಕಾಗಿ ಹಾಲಸಿದ್ಧ ಅಂದಿನಿಂದ ಇಂದಿನವರೆಗೆ ಪ್ರತಿ ವರ್ಷದ ಜಾತ್ರೆಯ ಸಮಯದಲ್ಲಿ ಅವರ ಮನೆಗೆ ಭೇಟ್ಟಿ ಕೊಡುವ ಸಂಪ್ರದಾಯ ನಡೆದು ಕೊಂಡು ಬಂದಿರುವುದು.

ಅಪ್ಪಾಚಿವಾಡಿಯಿಂದ ಕಂಕಣವಾಡಿಗೆ ತಂದ ಹಾಲಸಿದ್ಧನ ಮೂಲ ತೋರು ಗದ್ದುಗೆ ಸ್ಥಾಪನೆಯಾದದ್ದು ದೇಸಾಯಿಯವರ ವಾಡೆಯಲ್ಲಿ. ಈ ದೇಸಾಯಿಯವರು ಕ್ಷತ್ರಿಯರು. ಇವರು ದೇವಸ್ಥಾನ ನಿರ್ಮಾಣಕ್ಕೆ ಧನ ಸಹಾಯ ಮಾಡುವುದರ ಜೊತೆಗೆ ದೇವರಿಗಾಗಿ ಭೂಮಿಯನ್ನು ಉಂಬಳಿಯಾಗಿ ನೀಡಿದವರು. ಹಾಲಸಿದ್ಧನ ಕೊರಳಲ್ಲಿ ಲಿಂಗವಿದೆ. ಹೀಗೆ ಕಂಕಣವಾಡಿಯ ಹಾಲಸಿದ್ಧ ಹಲವು ಮತ-ಧರ್ಮಗಳ ಸಂಗಮವಾಗಿದ್ದು, ಸಾಮರಸ್ಯವನ್ನು ಸಾರುವ ಭಾವೈಕ್ಯದ ತಾಣವೆಂದು ಪ್ರಸಿದ್ಧಿಯನ್ನು ಹೊಂದಿದೆ.

ಜಾತ್ರೆ-ಉತ್ಸವಗಳು :

ಕಂಕಣವಾಡಿ ಹಾಲಸಿದ್ಧನ ಜಾತ್ರೆ ಚೈತ್ರ, ಶ್ರಾವಣ ಹಾಗೂ ಆಶ್ವೀಜ ಮಾಸಗಳಲ್ಲಿ ಅಂದರೆ ವರ್ಷದಲ್ಲಿ ಮೂರು ಸಲ ನಡೆಯುವುದು. ಯುಗಾದಿ ಮತ್ತು ಸೀಗೆ ಹುಣ್ಣಿಮೆ ಉತ್ಸವಗಳು ವಿಜೃಂಭಣೆಯಿಂದ ಜರಗುತ್ತವೆ. ಅದರಲ್ಲಿ ಸೀಗೆ ಹುಣ್ಣಿಮೆಯ ಜಾತ್ರೆಯೂ ವಿಶಿಷ್ಟವಾಗಿದ್ದು ಹದಿನೈದು ದಿನಗಳವರೆಗೆ ನಡೆಯುತ್ತದೆ. ಸೀಗೆ ಹುಣ್ಣಿಮೆಯ ಜಾತ್ರೆಗೆ ಕಂಕಣವಾಡಿಯಿಂದ ಹತ್ತು ಕಿ. ಮೀ. ಅಂತರದಲ್ಲಿರುವ ಬ್ಯಾಕೂಡದ ಲಕ್ಕವ್ವ ಇಲ್ಲಿಗೆ ಆಗಮಿಸುವಳು. ಲಕ್ಕವ್ವ ಈ ಪರಿಸರದ ೩೬ ಹಳ್ಳಿಗಳ ಒಡತಿ. ಹಾಲಸಿದ್ಧ ಮತ್ತು

ಲಕ್ಕವ್ವ ಇಬ್ಬರೂ ತಂದೆ-ತಾಯಿಗಳಿಲ್ಲದವರು. ಹೀಗಾಗಿ ಹಾಲಸಿದ್ಧ ಅವಳನ್ನು ಸಹೋದರಿಯಾಗಿ ಸ್ವೀಕರಿಸುವ ಭಾಷೆ ಕೊಟ್ಟನು. ಬ್ಯಾಕೂಡದ 'ಅಪ್ಪನ ಮರ' ಈ ಭಾಷೆಗೆ ಸಾಕ್ಷಿಯಾಗಿದೆ. ಅವರಿಬ್ಬರ ಮಧ್ಯೆ 'ಕಿನ್ನರ ಭಾಷೆ'ಯಾದವು. ಅಂದಿನಿಂದ ದೀಪಾವಳಿ ಹಬ್ಬಕ್ಕೆಂದು ಸೀಗೆ ಹುಣ್ಣಿಮೆಯಂದು ಲಕ್ಕವ್ವ ಕಂಕಣವಾಡಿಗೆ ಬರುವಳು. ಹದಿನೈದು ದಿನ ಅವಳಿಗೆ ತವರಿನ ಭಾಗ್ಯ ಕೊಟ್ಟು ಗೌರವಿಸುವನು. ಹಾಲಸಿದ್ಧನಿಗೆ ಕಂಕಣವಾಡಿಯಲ್ಲಿ ನೆಲೆ ನಿಲ್ಲಲು ತೊಂದರೆಯಾದಾಗ ಅದನ್ನು ನಿವಾರಿಸಿ ಭದ್ರ ನೆಲಯನ್ನು ಒದಗಿಸಿಕೊಟ್ಟವಳು ಲಕ್ಕವ್ವ. ಹೀಗಾಗಿ ಹಾಲಸಿದ್ಧ ಲಕ್ಕವ್ವಳಿಗೆ ಸಹೋದರಿಯ ಮನ್ನಣೆ ಸಲ್ಲಿಸಿದನು. ಅದೇ ಸಂಪ್ರದಾಯ ಇಂದಿಗೂ ಮುಂದುವರೆದು ಕೊಂಡು ಬಂದಿದೆ ಎಂದು ಭಕ್ತರು ಹೇಳುವರು.

ಸೀಗೆ ಹುಣ್ಣಿಮೆಯ ಜಾತ್ರೆಗೆ ಬ್ಯಾಕೂಡದ ಲಕ್ಕವ್ವ ಕಂಕಣವಾಡಿಗೆ ಬರುವಳು. ಹದಿನೈದು ದಿನ ವಾಸ್ತವ್ಯ ಮಾಡಿ ಚತುರ್ದಶಿಯಂದು ಮುಂಜಾನೆ ಹಾಲಸಿದ್ಧನಿಗೆ ಆರತಿ ಬೆಳಗುವಳು. ಸಂಜೆ ತವರು ಮನೆಯ ಸೀರೆ, ಕುಪ್ಪಸ, ಬಂಗಾರದ ಒಡವೆಗಳೊಂದಿಗೆ ತನ್ನೂರಿಗೆ ತೆರಳುವಾಗ ಹಾಲಸಿದ್ಧನ ಪಲ್ಲಕ್ಕಿ ಅವಳನ್ನು ಕಳುಹಿಸಲು ಬ್ಯಾಕೂಡಕ್ಕೆ ಹೋಗುವುದು.

ಸೀಗೆ ಹುಣ್ಣಿಮೆಯ ಜಾತ್ರೆ :

ಸೀಗೆ ಹುಣ್ಣಿಮೆಯ ಜಾತ್ರೆಯು ಕರಿಕಟ್ಟುವುದರ ಮೂಲಕ ಆರಂಭವಾಗುತ್ತದೆ. ಅಂದು ಹಾಲಸಿದ್ಧನ ಕೊತ್ವಾಲವು ಸತ್ತಿಗೆ ವಾಲಗಗಳೊಂದಿಗೆ ಸಡಗರ ಸಂಭ್ರಮದಿಂದ ಮೆರವಣಿಗೆಯಲ್ಲಿ ದೇಸಾಯಿಯವರ ಮನೆಗೆ ಹೋಗುವುದು. ಅಲ್ಲಿ ದೇಸಾಯಿಯವರು ಕರಿಕಟ್ಟುವುದರ ಮೂಲಕ ಜಾತ್ರೆಗೆ ಚಾಲನೆಯನ್ನು ನೀಡುವರು. ಜಾತ್ರೆ ಆರಂಭವಾದ ಏಳನೇ ದಿನಕ್ಕೆ ದೇಸಾಯಿಯವರು ದೇವಸ್ಥಾನಕ್ಕೆ ಬಂದು ಕರಿಹರಿಯುವರು. ಕರಿಹರಿದ ನಂತರವೂ ಹಾಲಸಿದ್ಧನ ಜಾತ್ರೆ ಮತ್ತೆ ಏಳು ದಿನಗಳವರೆಗೆ ಮುಂದುವರೆಯುವುದು.

ಕರಿಕಟ್ಟಿದ ೫ನೇ ದಿನಕ್ಕೆ ಕಮತ್ಯಾನಟ್ಟಿಯಿಂದ ಹೆಗಡೆ ಮನೆತನದವರು ಹಾಲು ಬಿಂದಿಗೆಗಳನ್ನು ಹೊತ್ತುಕೊಂಡು ಜಾತ್ರೆಗೆ ಬರುವರು. ಅಂದು ಅವರು ಅಡುಗೆಯನ್ನು ಮಾಡಿ ಹಾಲಸಿದ್ಧನ ಪೂಜಾರಿಗಳಿಗೆ ಊಟ ಮಾಡಿಸುವರು. ಆ ದಿನವೇ ಕಬ್ಬೂರಿನಿಂದ ದೀವಟಿಗೆ ಸೇವೆ ಮಾಡುವವರು ಬರುತ್ತಾರೆ. ಕರಿಕಟ್ಟಿದ ೬ನೇ ದಿನ ಹಾಲಸಿದ್ಧನಿಗೆ ನೈವೇದ್ಯ ಅರ್ಪಿಸಲಾಗುವುದು. ಅಂದು ಒಂದು ದಿನ ಕಮತ್ಯಾನಟ್ಟಿಯವರು ಮತ್ತು ಕರಿಹರಿಯುವ ೭ನೇ ದಿನದಂದು ಕಬ್ಬೂರಿನವರು ಹಾಲಸಿದ್ಧನನ್ನು ಪೂಜಿಸುವ ಹಕ್ಕು ಹೊಂದಿರುವರು. ಹಣ ಮತ್ತು ಬಂಗಾರವನ್ನು ಬಿಟ್ಟು ಹಾಲಸಿದ್ಧನಿಗೆ ಭಕ್ತರು ಅರ್ಪಿಸಿದ ಎಲ್ಲ ವಸ್ತುಗಳನ್ನು ತಮ್ಮ ಪೂಜಾ ದಿನಗಳಂದು ಅವರು ಪಡೆದು ಕೊಳ್ಳುತ್ತಾರೆ.

ಹಾಲಸಿದ್ಧನ ಉತ್ಸವ ಮೂರ್ತಿಯ ಮೆರವಣಿಗೆ :

ಕರಿಕಟ್ಟಿದ ೬ನೇ ದಿನ ಅಂದರೆ ನೈವೇದ್ಯದ ದಿನ ಮುಂಜಾನೆ ಹಾಲಸಿದ್ಧನ ಉತ್ಸವ ಮೂರ್ತಿಯ ಮೆರವಣಿಗೆಯಾಗುತ್ತದೆ. ಅಂದು ಹಾಲಸಿದ್ಧನ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ವಾಲಗ ಮೇಳಗಳೊಂದಿಗೆ ಪೂರ್ವ ದಿಕ್ಕಿನಲ್ಲಿ ಸುಮಾರು ಒಂದು ಕಿ. ಮೀ. ದೂರದಲ್ಲಿರುವ ಗುರು ಇಟ್ಟಪ್ಪನಲ್ಲಿಗೆ

ಬರುವರು. ಇಟ್ಟಪ್ಪನ ದೇವಸ್ಥಾನದ ಮುಂದೆ 'ಅಲಗ ಹಾಯುವ' ಸಂಪ್ರದಾಯ ನೇರವೇರುವುದು. ಈ ರೀತಿ ಅಲಗ ಹಾಯುವುದನ್ನು 'ಸಿದ್ಧರ ಸಿದ್ಧಾಟಿಗೆ' ಎಂದು ಕರೆಯುವರು. ಮರುದಿನ ಅಂದರೆ ಕರಿಹರಿಯುವ ದಿನದಂದು ಮಧ್ಯಾಹ್ನ ೧೨ ಗಂಟೆ ಸುಮಾರಿಗೆ ಹಾಲಸಿದ್ಧ ತನ್ನ ಗುರು ಇಟ್ಟಪ್ಪನೊಂದಿಗೆ ವಾಲದ ಮೇಳದೊಂದಿಗೆ ಮೂಲ ಗುಡಿಗೆ ಬರುತ್ತಾನೆ. ಆಗ ಸಂಪ್ರದಾಯದಂತೆ ದೇಸಾಯಿಯವರು ದೇವಸ್ಥಾನಕ್ಕೆ ಬಂದು ಕರಿಹರಿಯುವರು.

ಕರಿ ಹರಿಯುವುದು :

ಸೀಗೆ ಹುಣ್ಣಿಮೆಯ ೭ನೇ ದಿನಕ್ಕೆ ಕರಿ ಹರಿಯುವ ಕಾರ್ಯಕ್ರಮ ಜರಗುವದು. ಅಂದು ದೇವಾಲಯವನ್ನು ಕಬ್ಬು, ಬಾಳೆ, ತೆಂಗಿನ ಗರಿ, ಮಾವಿನ ತಳಿರು-ತೋರಣಗಳಿಂದ ಭಕ್ತರು ಶೃಂಗಾರ ಮಾಡುವರು. ನೈವೇದ್ಯದ ದಿನದಂದು ತನ್ನ ಗುರು ಇಟ್ಟಪ್ಪನನ್ನು ಕರೆತರಲು ತೆರಳಿದ್ದ ಹಾಲಸಿದ್ಧ, ಪಲ್ಲಕ್ಕಿ, ವಾಲಗದ ಮೆರವಣಿಗೆಯೊಂದಿಗೆ ಅಂದು ಮೂಲ ಗುದ್ದಗೆಗೆ ಮರಳುವನು. ಹಾಲಸಿದ್ಧನ ವಾಲಗದ ಮುಂದೆ ದೇಸಾಯಿಯವರ ವಾಲಗ ಇರುತ್ತದೆ. ದೇಸಾಯಿಯವರು ದೇವಾಲಯದ ಸಮೀಪ ಆಗಮಿಸುತ್ತಿದಂತೆ ಕೈಯಲ್ಲಿದ್ದ ತೆಂಗಿನಕಾಯಿಯನ್ನು ಮಹಾದ್ವಾರಕ್ಕೆ ಒಗೆದು ಒಡೆಯುವರು. ಆ ನಂತರ ಆಗಮಿಸಿದ ಭಕ್ತರೆಲ್ಲರು ಗೋಡೆಗೆ ತೆಂಗಿನಕಾಯಿಗಳನ್ನು ಎಸೆದು ಒಡೆಯುವರು. ದೇಸಾಯಿಯವರು ದೇವಾಲಯವನ್ನು ಶೃಂಗರಿಸಿದ್ದ ಕಬ್ಬು, ಬಾಳೆಗಳನ್ನು ಕತ್ತರಿಸಿ, ತಳಿರು-ತೋರಣಗಳನ್ನು ಹರಿದು ಹಾಕುವ ಮೂಲಕ ಕರಿ ಹರಿಯುವರು. ಅಂದು ಕೆಲವರು ಕರಿ ಹರಿಯುವವರೆಗೆ ಊಟ ಮಾಡದೆ ವ್ರತ ಪಾಲಿಸುವರು. ದೇವರುಗಳು ಗುಡಿಯನ್ನು ಪ್ರವೇಶಿದ ಮೇಲೆ 'ಭವಿಷ್ಯ ನುಡಿ'ಗಳಾಗುತ್ತವೆ. ಗುರು ಇಟ್ಟಪ್ಪ ಗದ್ದುಗೆಗೊಳ್ಳುತ್ತಾನೆ, ಆದರೆ ಹಾಲಸಿದ್ಧ ಮಾತ್ರ ಮತ್ತೆ ಗುರು ಇಟ್ಟಪ್ಪನ ಗುಡಿಗೆ ಹೋಗುತ್ತಾನೆ. ಕರಿ ಹರಿದ ನಂತರ ಮಧ್ಯಾಹ್ನ ಭಕ್ತರೆಲ್ಲರೂ ಮಹಾಪ್ರಸಾದವನ್ನು ಪಡೆದುಕೊಳ್ಳುತ್ತಾರೆ. ಕಾರ್ಯಕ್ರಮಗಳೆಲ್ಲ ಮುಗಿದ ತರುವಾಯ ದೇವಸ್ಥಾನವನ್ನು ತೊಳೆದು ಸ್ವಚ್ಛಗೊಳಿಸುವರು.

ದೇವಾಲಯ ಶುಚಿಯಾದ ಮೇಲೆ ಸಾಯಂಕಾಲ ಹಾಲಸಿದ್ಧ ದೇವಸ್ಥಾನಕ್ಕೆ ಬಂದು ಗದ್ದುಗೆಗೊಳ್ಳುವನು. ಆಗ ಅವನ ಬಲದೊಡೆಯ ಮೇಲೆ ಬ್ಯಾಕೂಡದ ಲಕ್ಕವ್ವ ಪ್ರತಿಷ್ಠಾನಗೊಂಡು ಚತುದರ್ಶಿಯವರೆಗೆ ಅಂದರೆ ೭ ದಿನಗಳವರೆಗೆ ಪೂಜೆಗೊಳ್ಳುವಳು. ಆ ಏಳು ದಿನಗಳಲ್ಲಿ ದೇವಸ್ಥಾನದ ಅಂಗಳದಲ್ಲಿ ಸುತ್ತ-ಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಜನಪದ ಕಲಾವಿದರು ಡೊಳ್ಳಿನ ಹಾಡು, ಕೈಪಟ್ಟು ವಾದನ, ದಟ್ಟಿ ಕುಣಿತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವರು. ನರಕ ಚತುದರ್ಶಿಯಂದು ಲಕ್ಕವ್ವ ಬ್ಯಾಕೂಡದ ದೇವಸ್ಥಾನಕ್ಕೆ ಹೋಗುವುದರೊಂದಿಗೆ ಜಾತ್ರೆ ಕೊನೆಗೊಳ್ಳುವುದು. ಲಕ್ಕವ್ವಳನ್ನು ಕಳುಹಿಸಲು ಹಾಲಸಿದ್ಧನ ವಾಲಗದ ಮೇಳ ಹೋಗುವುದು. ಅವಳನ್ನು ಕಳುಹಿಸಿ ವಾಲಗದ ಮೇಳ ದೇವಸ್ಥಾನಕ್ಕೆ ಮರಳಿದ ಮೇಲೆ ಕಂಕಣವಾಡಿ ಮತ್ತು ಬ್ಯಾಕೂಡದ ಸೀಮೆಯಲ್ಲಿ ಕಂಬಳಿ ಹಾರಿಸುವರು. ಅದೇ ಸಮಯದಲ್ಲಿ ಬ್ಯಾಕೂಡದಲ್ಲಿ ಲಕ್ಕವ್ವಳಿಗೆ ಹರಿಮರಿ ಹರಿಯುತ್ತಾರೆ. ಲಕ್ಕವ್ವಳನ್ನು ಪೂಜಿಸುವವರು ಕ್ಷತ್ರಿಯರೆಂಬುದು ವಿಶೇಷ.

ಯುಗಾದಿ ಜಾತ್ರೆ :

ಹಾಲಸಿದ್ಧನ ಜಾತ್ರೆಯು ಯುಗಾದಿ ಅಮವಾಸ್ಯೆಯಂದು (ಚೈತ್ರದಂದು) ಜರಗುವುದು. ಅಂದು ಮುಂಜಾನೆ ಕರಿಕಟ್ಟುವುದು. ಅಂದಿನಿಂದ ಐದು ದಿನಗಳವರೆಗೆ ವಿವಿಧ ಕಾರ್ಯಕ್ರಮಗಳು ಜರಗುವವು. ೫ನೇ ದಿನ ಕರಿ ಹರಿಯುವುದರೊಂದಿಗೆ ಕಂಕಣವಾಡಿ ಹಾಲಸಿದ್ಧನ ಜಾತ್ರೆ ಕೊನೆಗೊಳ್ಳುವುದು. ಆದರೆ ಅಂದೇ ಹಿಡಕಲ್ಲದ ಹಾಲಸಿದ್ಧನ ಜಾತ್ರೆ ಕರಿ ಕಟ್ಟುವುದರ ಮೂಲಕ ಆರಂಭವಾಗುವುದು. ಇಬ್ಬರೂ ಹಾಲಸಿದ್ಧರು ಒಂದೇ ಆಗಿದ್ದು ಜಾತ್ರೆಗೆ ಕಂಕಣವಾಡಿಯಿಂದ ಕುದುರೆ (ಕೊತವಾಲ), ವಾಲಗ, ಸತ್ತಿಗೆ, ಡೊಳ್ಳು, ನಿಶಾನೆಗಳು ಆಗಮಿಸುತ್ತವೆ. ಅಂದು ನಡೆಯುವ ದೇವರ ಜಾತ್ರಾ ಮೆರವಣಿಗೆಯಲ್ಲಿ ಕೈ ಪಟ್ಟು ಬಾರಿಸುವುದು, ದಟ್ಟಿ ಕುಣಿತ, ಅಲಗ ಹಾಯುವುದು, ಭಂಡಾರ ಹಾರಿಸುವುದು ವಿಶೇಷವಾಗಿರುತ್ತದೆ.

ಭೂತ ಬಿಡಿಸುವ ಕೇಂದ್ರ :

ಹಾಲಸಿದ್ಧನ ದೇವಾಲಯ ಭೂತ ಬಿಡಿಸುವ ಕೇಂದ್ರ. ಸುತ್ತ-ಮುತ್ತಲಿನ ಪ್ರದೇಶದಲ್ಲಿರುವ ಮೈಯಲ್ಲಿ ಭೂತ ಹೊಕ್ಕವರು ನಿವಾರಣೆಗಾಗಿ ಇಲ್ಲಿಗೆ ಬರುವರು. ದೆವ್ವ ಬಡಿದುಕೊಂಡವರು ಈ ಸ್ಥಳಕ್ಕೆ ಬರುತ್ತಿದ್ದಂತೆ ಅವರ ಮೈಯಲ್ಲಿ ದೆವ್ವ ಬಂದು ಕುಣಿದಾಡಹತ್ತುವರು. ಆಗ ಅಲ್ಲಿದ್ದವರು 'ಹೆಳವನನ್ನು ಕರೆಯಲೇ' ಎಂದಾಕ್ಷಣ ದೆವ್ವ-ಭೂತಗಳು ಅವರ ಮೈಬಿಟ್ಟು ಓಡಿ ಹೋಗುವವು. ಈ ಹೆಳವನ ಕುರಿತಾಗಿಯೂ ಜನ ಒಂದು ಕಥೆಯನ್ನು ಹೆಳುವರು.

ಹಾಲಸಿದ್ಧ ಕಂಕಣವಾಡಿಗೆ ಬಂದು ನೆಲೆಸುವ ಪೂರ್ವದಲ್ಲಿ, ದೇವಸ್ಥಾನವಿರುವ ಸ್ಥಳದಲ್ಲಿ ಏಳು ಮಕ್ಕಳ ತಾಯಿ ವಾಸವಾಗಿದ್ದಳಂತೆ. ಹಾಲಸಿದ್ಧ ಆ ಸ್ಥಳದಲ್ಲಿ ತಾನು ನೆಲೆಸುವುದಕ್ಕಾಗಿ ಅಲ್ಲಿದ್ದ ಏಳು ಮಕ್ಕಳ ತಾಯಿ ಮತ್ತು ಅವಳ ಆರು ಮಕ್ಕಳನ್ನು ದಂಡಾಪೂರದ ಕೆರೆಗೆ ಎಸೆದನು. ಒಬ್ಬನು ಮಾತ್ರ ಉಳಿದುಕೊಂಡ ಅವನೇ ಈ ಹೆಳವ. ಅವನನ್ನು ಹಾಲಸಿದ್ಧ ತಾನೇ ಸಾಕಿದ. ಅವನು ಮರಣ ಹೊಂದಿ ಈಗ ಪಿಶಾಚಿಯಾಗಿ ದೇವಸ್ಥಾನದಲ್ಲಿಯೇ ಇದ್ದುಕೊಂಡು ದೆವ್ವ-ಭೂತಗಳಿಂದ ಬಾಧಿತರಾದವರನ್ನು ರಕ್ಷಿಸುವ ಕೆಲಸ ಮಾಡುತ್ತಿರುವನು.

ಈ ಕಥೆಯ ಹಿಂದೆ ಹಲವಾರು ಅಂಶಗಳಿವೆ. ಹಾಲಸಿದ್ಧನ ಗದ್ದುಗೆ ಸ್ಥಾಪಿತಗೊಳ್ಳುವ ಪೂರ್ವದಲ್ಲಿ ಅಲ್ಲೊಂದು ಪ್ರಾಚೀನ ದೇವಾಲಯವಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಏಳು ಮಕ್ಕಳ ತಾಯಿ ಅಂದರೆ ಸಪ್ತ ಮಾತ್ರಿಕಾ ಶಿಲ್ಪ, ವೀರಗಲ್ಲು, ಶಿವಲಿಂಗ ಮುಂತಾದ ಅವಶೇಷಗಳು ಇಲ್ಲಿ ಕಂಡು ಬರುತ್ತವೆ. ಪಕ್ಕದ ಸ್ಥಳದಲ್ಲಿ ಸ್ಥಾಪಿತವಾದ ಭಾಗವ್ವಳೆಂದು ಪೂಜಿತವಾಗುವ ಮೂರ್ತಿ ಶಿಲ್ಪ ಪುರುಷ ವಿಗ್ರಹವಾಗಿದೆ. ಹಾಲಸಿದ್ಧನ ದೇವಸ್ಥಾನದಿಂದ ಸುಮಾರು ೧೫೦ ಅಡಿ ದೂರದಲ್ಲಿ ದೊರೆತ ಹಳೆಯ ದೇವಾಲಯದ ಕಂಬಗಳನ್ನೇ ಬಳಸಿ ಪೌಳಿಯನ್ನು ಕಟ್ಟಲಾಗಿದೆ ಎಂದು ಕೆಲವರು ಹೇಳಿದರೆ ಇನ್ನೂ ಕೆಲವರು ದೇಶಪಾಂಡೆಯವರ ಮನೆಯ ಹತ್ತಿರ ಜೈನ ಬಸದಿಯೊಂದಿದ್ದು ಅದು ಅವಸಾನಗೊಂಡಾಗ ಅದರ ಕಂಬಗಳನ್ನೇ ತಂದು ಹಾಲಸಿದ್ಧನ ಪೌಳಿ ನಿರ್ಮಿಸಲಾಗಿದೆ ಎಂದು ಹೇಳುವರು. ಒಟ್ಟಿನಲ್ಲಿ ಹಾಲಸಿದ್ಧನ ದೇವಸ್ಥಾನ ಸಂಶೋಧನೆಯ ಕೆನ್ನೆಲವಾಗಿದೆ.

ಹಾಲಸಿದ್ಧ ಕೃಷ್ಣಾ ನದಿ ಸ್ನಾನ :

ಹಾಲಸಿದ್ಧನ ಗುರು ಕಡೋಲಿಯ ಇಟ್ಟಪ್ಪ, ಇಟ್ಟಪ್ಪನ ಗುರು ಮುರಗುಂಡಿಯ ಮುರಸಿದ್ಧ. ಮೂವರು ಹನ್ನೆರಡು ವರ್ಷಕ್ಕೊಮ್ಮೆ ಕಾಶಿ ಯಾತ್ರೆಗೆ ಹೋಗುತ್ತಿದ್ದರು. ಕಂಕಣವಾಡಿಯಿಂದ ಹಾಲಸಿದ್ಧ, ಕಡೋಲಿಯಿಂದ ಇಟ್ಟಪ್ಪ, ಮುರುಗುಂಡಿಯಿಂದ ಮುರುಸಿದ್ಧ ದಾರಿ ಮಧ್ಯದಲ್ಲಿರುವ ಅಥಣಿ ತಾಲೂಕಿನ ಹುಲಗಬಾಳಿ ಹತ್ತಿರದ ಕೃಷ್ಣಾ ನದಿ ಸಮೀಪ ಒಂದುಗೂಡುತ್ತಿದ್ದರು. ಅಲ್ಲಿ ಒಂದು ದಿನ ವಾಸ್ತವ್ಯ ಮಾಡಿ ಅಲ್ಲಿಂದ ಮುಂದೆ ತಮ್ಮ ಕಾಶಿ ಯಾತ್ರೆಯನ್ನು ಮುಂದುವರೆಸುತ್ತಿದ್ದರು. ಒಂದು ಸಲ ಮುಂಜಾನೆ ಎದ್ದ ಎಲ್ಲರೂ ನದಿ ಸ್ನಾನವನ್ನು ಮಾಡಿ ಉಭಯ ಕುಶಲೋಪರಿ ಚರ್ಚೆ ಮಾಡಿದರು. ಮುರುಸಿದ್ಧ ಮುಂದೆ ಹೊರಟ. ಊರಿನ ಅಡಗಲಿ ಮನೆತನದ ಹೆಣ್ಣುಮಗಳೊಬ್ಬಳು ಪುತ್ರ ಭಾಗ್ಯಕ್ಕಾಗಿ ಬೇಡಿಕೊಂಡು ಆತನ ಮುಂದೆ ಅಂಗಾತವಾಗಿ ಮಲಗಿಕೊಂಡಳು. ಆಗ ಮುರುಸಿದ್ಧ ಅವಳಿಗೆ ಮಳೆಕೀಲ, ಬೆಳೆಕೀಲ ಎಲ್ಲವುಗಳನ್ನೂ ಕೊಡುವ ಅಧಿಕಾರ ನನಗಿಲ್ಲ. ಅದೇನಿದ್ದರೂ ಹಾಲಪ್ಪ ಮತ್ತು ಇಟ್ಟಪ್ಪರಲ್ಲಿದೆ ಎಂದು ಹೇಳಿ ಮುಂದೆ ನಡೆದನು. ದಾರಿಗೆ ಅಡ್ಡಲಾಗಿ ಆ ಹೆಣ್ಣುಮಗಳು ಮತ್ತೆ ಮಲಗಿಕೊಂಡಳು. ಅಲ್ಲಿಗೆ ಬಂದ ಹಾಲಪ್ಪ ಮತ್ತು ಇಟ್ಟಪ್ಪರು ಅವಳನ್ನು ಪ್ರಶ್ನಿಸಿದರು. ಅವಳು ತನಗೆ ಮಕ್ಕಳಿಲ್ಲ ಹಾಗಾಗಿ ಮಕ್ಕಳಾಗುವ ಭಾಗ್ಯವನ್ನು ಕರುಣಿಸಬೇಕೆಂದು ಕೇಳಿಕೊಂಡಳು. ತಾವು ದಯಪಾಲಿಸುವುದಾಗಿ ಹೇಳಿ ಅವಳಿಗೆ ಪ್ರಸಾದ ನೀಡಿದರು. ಮುಂದಿನ ಹನ್ನೆರಡು ವರ್ಷಕ್ಕೆ ನಾವು ಆಗಮಿಸುವ ವೇಳೆಗೆ ನಿನಗೆ ಗಂಡು ಮಗುವಾಗಿ ಆತನಿಂದ ನಾವು ಊಟ ಮಾಡುವುದಾಗಿ ಹೇಳಿ ಕಾಶಿಯತ್ತ ನಡೆದರು.

ಹನ್ನೆರಡು ವರ್ಷದ ನಂತರ ಕಾಶಿ ಯಾತ್ರೆಗೆ ತೆರಳುವುದಕ್ಕಾಗಿ ಮತ್ತೊಮ್ಮೆ ಹಾಲಸಿದ್ಧ, ಇಟ್ಟಪ್ಪ, ಮುರುಸಿದ್ಧ ಮೂವರು ಹುಲಗಬಾಳಿ ಹತ್ತಿರದ ಕೃಷ್ಣಾ ನದಿಗೆ ಬಂದರು. ಸುದ್ದಿ ತಿಳಿದ ಹಡಗಲಿ ಮನೆತನದ ತಾಯಿ, ಮಗ ಮತ್ತು ಮನೆಯವರೆಲ್ಲರೂ ಬಂದು ಅವರೆಲ್ಲರಿಗೂ ದೀರ್ಘದಂಡನಮಸ್ಕಾರ ಸಲ್ಲಿಸಿ ಆಶೀರ್ವಾದ ಪಡೆದರು. ತಮ್ಮ ಮನೆತನಕ್ಕೆ ಮಕ್ಕಳ ಭಾಗ್ಯವನ್ನು ಕರುಣಿಸಿದ ದೇವರುಗಳಿಗೆ ನೈವೆದ್ಯ ಅರ್ಪಿಸಿ ಭಕ್ತರಿಗೆ ಊಟದ ವ್ಯವಸ್ಥೆ ಮಾಡಿದರು. ಅಂದಿನಿಂದ ಈ ಮನೆತನದವರು ಹನ್ನೆರಡು ವರ್ಷಕ್ಕೊಮ್ಮೆ ನದಿ ಸ್ನಾನಕ್ಕೆ ಆಗಮಿಸುವ ಮೂರು ದೇವತೆಗಳ ಪೂಜಾರಿಗಳಿಗೆ ಮತ್ತು ಭಕ್ತ ವೃಂದಕ್ಕೆ ದಾಸೋಹವನ್ನು ಏರ್ಪಡಿಸುತ್ತಿರುವರು.

ಕಂಕಣವಾಡಿಯಿಂದ ಹಾಲಸಿದ್ಧ ಕೃಷ್ಣಾ ನದಿ ಸ್ನಾನಕ್ಕೆ ಹೋಗುವಾಗ ಹಿಡಕಲ್ಲದಲ್ಲಿ ಒಂದು ದಿನ ವಾಸ್ತವ್ಯ ಮಾಡುವನು. ಮಗದುಮ್ಮ ಮನೆತನದವರೆಲ್ಲರೂ ಕೂಡಿಕೊಂಡು ಹಬ್ಬ ಹಾಕಿ ದೇವರಿಗೆ ನೈವೆದ್ಯ ಅರ್ಪಿಸಿ ಹರಕೆ ತಿರಿಸುವರು. ಬೆಳಿಗ್ಗೆ ದೇವರು ಹೋಗುವಾಗ ಹೇಳಿಕೆಗಳಾಗುತ್ತವೆ. ಮರುದಿನ ಇನ್ನೊಂದು ಊರಿನಲ್ಲಿ ವಾಸ್ತವ್ಯ ಮಾಡುವನು. ಹೀಗೆ ಕೃಷ್ಣಾ ನದಿ ಸ್ನಾನಕ್ಕೆ ತೆರಳುವ ಹಾಲಸಿದ್ಧನಿಗೆ ತನ್ನ ಮೂಲ ಸ್ಥಳಕ್ಕೆ ಬಂದು ಮುಟ್ಟಲು ಹದಿನಾಲ್ಕು ದಿನಗಳೇ ಬೇಕು.

ಹಾಲಸಿದ್ಧನ ಶಿವಸ್ಥಾನ :

ಹಾಲಸಿದ್ಧನ ಪಲ್ಲಕ್ಕಿ ಭಕ್ತರ ಮನೆಗೆ ಹೋಗುವುದಿಲ್ಲ. ಆತನ ಮೂರು ರೂಪಗಳನ್ನು ಗುರುತಿಸಿದ ಅಗಸರ ಹೆಣ್ಣುಮಗಳ ಮನೆಗೆ ಮಾತ್ರ ಜಾತ್ರೆಯ ದಿನ ಹೋಗುತ್ತದೆ. ಇನ್ನೂಳಿದ ಎಲ್ಲ ಕಡೆಗಳಲ್ಲಿ ಅವನ ಪರವಾಗಿ ಶಿವಸ್ಥಾನವೇ ಹೋಗುತ್ತದೆ. ಅಂದರೆ ಹುದೆ, ಕೊತ್ವಾಲ (ಕುದುರೆ) ಮತ್ತು ಓಲಗದವರು ಹೋಗುತ್ತಾರೆ.

ಹಿಂದೂ ಮುಸ್ಲಿಂರ ಭಾವೈಕ್ಯದ ಕೇಂದ್ರ :

ಹಾಲಸಿದ್ಧನಾಥ ದೇವಾಲಯ ಹಿಂದೂ ಮುಸ್ಲಿಂರ ಭಾವೈಕ್ಯತೆಯ ಕೇಂದ್ರವಾಗಿದೆ. ದೇವಾಲಯದ ಪೂರ್ವ ಮಹಾದ್ವಾರದ ಮೇಲೆ ಬಲಕ್ಕೆರಡು ಮತ್ತು ಎಡಕ್ಕೆರಡು ಮಿನಾರಗಳಿವೆ. ಗರ್ಭಗುಡಿಯ ಮೇಲೆ ಗುಮ್ಮಟವಿದೆ. ಮುಖ ಮಂಟಪ ಹಲವು ಕಮಾನುಗಳಿಂದ ಕೂಡಿದೆ. ಒಟ್ಟು ದೇವಾಲಯ ಇಂಡೋ-ಇಸ್ಲಾಮಿಕ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ. ರಮಜಾನ ಹಬ್ಬದ ದಿವಸ ಲಾಲಸಾಬನ ಉತ್ಸವ ಮೂರ್ತಿ ಹಾಲಸಿದ್ಧನ ಗುಡಿ ಪ್ರವೇಶಿಸಿ ಎದುರು ಭೇಟ್ಟಿ ಮಾಡಿ ಗದ್ದುಗೆಗೆ ನಮಸ್ಕಾರ ಸಲ್ಲಿಸುತ್ತದೆ. ಇದು ಹಿಂದೂ-ಮುಸ್ಲಿಂರ ಮಧ್ಯದ ಭಾವೈಕ್ಯತೆಯನ್ನು ಸಾಕ್ಷಿಕರಿಸುತ್ತದೆ. ಕೆಲವು ವರ್ಷಗಳ ಮೊದಲು ಇಲ್ಲಿರುವ ಮುಸ್ಲಿಂರು ದೇವಸ್ಥಾನಕ್ಕೆ ಆಗಮಿಸಿ ಪೂಜಾ ಸಮಯದಲ್ಲಿ ಡೊಳ್ಳು, ನಗಾರಿ, ತಾಳಗಳನ್ನು ಬಾರಿಸುತ್ತಿದ್ದರು ಮತ್ತು ಭಂಡಾರನ್ನು ಹಣೆಗೆ ಲೇಪಿಸಿಕೊಳ್ಳುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ.

ಹಾಲಸಿದ್ಧನ ಹುದೆ :

ಹುದೆಯು ಹಾಲಸಿದ್ಧನ ಪ್ರತಿಬಿಂಬವೆಂದು ಭಕ್ತರು ಭಾವಿಸಿರುವರು. ಭಕ್ತರ ಮನೆ ಬಾಗಿಲಿಗೆ ಹಾಲಸಿದ್ಧನ ಪಲ್ಲಕ್ಕಿ ಹೋಗುವುದಿಲ್ಲ. ಅವನ ಹುದೆ ಅವರಲ್ಲಿಗೆ ದೇವರ ಪ್ರತಿರೂಪವಾಗಿ ಹೋಗುವ ಪದ್ಧತಿ ಇಂದಿಗೂ ಇದೆ. ಹುದೆಯ ಮೂಲಕ ಗಜಬರಸಾಬನ ಸ್ನೇಹ ಹಿಂದೂ-ಮುಸ್ಲಿಂರ ಭಾವೈಕ್ಯದ ಸಂಕೇತವಾಗಿ ಇಂದಿಗೂ ಮುಂದುವರೆದಿರುವುದು.

೩.೨.೨. ಪ್ರಮುಖ ಸ್ತ್ರೀ ದೈವಗಳು :

ಸ್ತ್ರೀ ದೇವತೆಗಳ ಆರಾಧನೆ ಸಿಂಧೂ ನಾಗರಿಕತೆಯ ಕಾಲದಿಂದಲೂ ಇತ್ತು ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಹಿಂದೂ ಧರ್ಮವು ಹುಟ್ಟು ಹಾಕಿದ ಸ್ತ್ರೀ ದೇವತೆಗಳಿಗೆ ಲೆಕ್ಕವೇ ಇಲ್ಲ. ಈ ದೇವತೆಗಳು ಸೌಮ್ಯವಾಗಿರುವುದಕ್ಕಿಂತ ಹೆಚ್ಚಾಗಿ ಉಗ್ರವಾಗಿವೆ. ಕ್ರೂರ ರಾಕ್ಷಸರನ್ನೊ, ಜನಪೀಡಕರನ್ನೊ ಮರ್ಧಿಸಲು ಪುರುಷ ದೇವತೆಗಳಿಗೆ ಸಾಧ್ಯವಾಗದಿದ್ದಾಗ ಈ ಸ್ತ್ರೀ ದೇವತೆಗಳೇ ಅವರನ್ನು ಮರ್ದಿಸಿ ಯಶಸ್ವಿಯಾದ ವಿಷಯಗಳನ್ನು ನಮ್ಮ ಜನಪದ ಮಹಾಕಾವ್ಯ, ಖಂಡಕಾವ್ಯ ಹಾಗೂ ಹಾಡುಗಳು ತಿಳಿಸುತ್ತವೆ. ಹೀಗಾಗಿ ಪುರುಷ ದೇವತೆಗಳಿಗಿಂತ ಸ್ತ್ರೀ ದೇವತೆಗಳೇ ಹೆಚ್ಚಾಗಿ ಗ್ರಾಮಗಳ ಅಧಿದೇವತೆಗಳಾಗಿದ್ದಾರೆ. ಪರಂಪರಾಗತವಾಗಿ ಆರಾಧಿಸುತ್ತ ಬಂದಿರುವ ಈ ಮಾತೃದೇವತೆಗಳ ಪ್ರಾಚೀನತೆಯನ್ನು ಗಮನಿಸಿದರೆ ಕ್ರಿ. ಪೂ. ೧ನೇ ಶತಮಾನದಲ್ಲಿಯೇ ಜೇಡಿಮಣ್ಣಿನಿಂದ ತಯಾರಿಸಲ್ಪಟ್ಟ ಸ್ತ್ರೀ ಮೂರ್ತಿಗಳು ಮಹಾರಾಷ್ಟ್ರದ ನೆವೆಸಾ ಮತ್ತು ಬಹಲಗಳಲ್ಲಿ ದೊರೆತಿವೆ.

ಕ್ರಿ. ಪೂ. ೩ನೇ ಮತ್ತು ೨ನೇ ಶತಮಾಗಳಿಗೆ ಸಂಬಂಧಿಸಿದ ಕುಳಿತ ಮಾತೃದೇವತೆಗಳ ಚಿಕ್ಕ-ಚಿಕ್ಕ ಮೂರ್ತಿಗಳು ಕೊಲ್ಹಾಪೂರ, ನಾಸಿಕ, ನೆವೆಸಾ, ತೇರ್‌ವಾಹವರ ಕಾಲದವರೆಗೂ ಮುಂದುವರೆದುಕೊಂಡು ಬಂದು ಗ್ರಾಮದೇವತೆಗಳಾಗಿ ಮಾರ್ಪಾಟ್ಟವು ಎಂದು ಶಾತವಾಹನರ ಅರಸ ಹಾಲ ತನ್ನ ಕೃತಿ 'ಗಾಥಾಸಪ್ತಸತಿ'ಯಲ್ಲಿ ಉಲ್ಲೇಖಿಸಿದ್ದಾನೆ. ಈ ತೆರನಾದ ದೇವತೆಗಳೇ ಕಾಲಕ್ರಮೇಣ ಗ್ರಾಮದೇವತೆಗಳಾಗಿ ಪ್ರಸಿದ್ಧಿಯನ್ನು ಪಡೆದುಕೊಂಡದ್ದು ಕಂಡು ಬರುತ್ತದೆ.

ಗ್ರಾಮದೈವಗಳಲ್ಲಿ ಮತ್ತು ನಾಡದೈವಗಳಲ್ಲಿ ಹೆಣ್ಣು ದೈವಗಳೇ ಪ್ರಧಾನಸ್ಥಾನ ಪಡೆದಿವೆ. ಈ ದೈವಗಳೆಲ್ಲಾ ಮಾತೃಪ್ರಧಾನ ವ್ಯವಸ್ಥೆಯ ಶಾಕ್ತ ಸಂಪ್ರದಾಯದಿಂದ ಹುಟ್ಟಿದವುಗಳಾಗಿವೆ. ಭಾರತದಲ್ಲಿ ಶಕ್ತಿ ಪೂಜೆ ಅತ್ಯಂತ ಪ್ರಾಚೀನವಾಗಿದ್ದು ಎಲ್ಲ ಕಡೆಗಳಲ್ಲಿ ಶಕ್ತಿ ದೇವತೆಗಳ ಗುಡಿಗಳಿವೆ. ಆದಿಶಕ್ತಿ(ಪಾರ್ವತಿ)ಯ ಭಿನ್ನ-ಭಿನ್ನ ರೂಪಗಳಾಗಿ ಈ ದೇವತೆಗಳು ಗ್ರಾಮಗಳಲ್ಲಿ ಕಾಣಿಸಿಕೊಂಡಿವೆ. ಆದರೆ ಅನೇಕ ಗ್ರಾಮದೇವತೆಗಳನ್ನು ಅವುಗಳ ಸ್ಥಳ ಕಥೆ ಮತ್ತು ವಿವರಗಳನ್ನು ನೋಡಿದಾಗ ಆಯಾ ಪ್ರದೇಶದ ವ್ಯಕ್ತಿ ಮೂಲವೂ ಆಗಿರುವಂತೆ ಕಂಡು ಬರುತ್ತದೆ. ಗ್ರಾಮದ ಅಧಿದೈವವಾಗಿ, ಆ ದೈವವನ್ನು ಪ್ರತಿಯೊಂದು ಗ್ರಾಮದವರು ತಮಗಾಗಿ ಸೃಷ್ಟಿಸಿ ಸ್ಥಾಪಿಸಿ ಆರಾಧನೆ ಆರಂಭಿಸಿದ್ದರಿಂದಲೇ ಪ್ರತಿ ಗ್ರಾಮಕ್ಕೂ ಒಂದು ಗ್ರಾಮದೇವತೆ ಕಂಡು ಬರುತ್ತದೆ.

"ಜನಪದ ಹೆಣ್ಣು ದೈವಗಳ ಲಕ್ಷಣಗಳು ತುಂಬಾ ವಿಶಿಷ್ಟವಾಗಿವೆ. ಶಿಷ್ಟ ದೈವಗಳಿಗಿಂತ ಜನಪದ ದೈವಗಳು ಜನಸಾಮಾನ್ಯರ ಬದುಕಿಗೆ ಹತ್ತಿರವಾಗಿವೆ. ಜನಪದ ದೈವಗಳ ವಿಶಿಷ್ಟ ಲಕ್ಷಣಗಳನ್ನು ಗುರುತಿಸುವುದೆಂದರೆ ಜನಪದರ ಬದುಕಿನ ವಿಶಿಷ್ಟ ಲಕ್ಷಣಗಳನ್ನು ಗುರುತಿಸಿದಂತೆಯೇ ಆಗುತ್ತದೆ. ಜನಪದರಿಂದಲೇ ಈ ದೈವಗಳು ಸೃಷ್ಟಿಯಾಗಿರುವುದರಿಂದ ಅವರ ಪ್ರಭಾವ ಈ ದೈವಗಳ ಮೇಲೆ ದಟ್ಟವಾಗಿರುವುದನ್ನು ಕಾಣಬಹುದಾಗಿದೆ."[೪೧] ಜನಪದಿಯ ದೈವಗಳೆಲ್ಲ ಸಾಮಾನ್ಯವಾಗಿ ಕೆಳವರ್ಗದವರ ದೈವಗಳಾಗಿವೆ.

ಗ್ರಾಮದೇವತೆಗಳು ಹಿಂದೂ ಸಮಾಜದಲ್ಲಿ ಜನರ ಧನ್ವಂತರಿಯಾಗಿ ಕಾರ್ಯ ಮಾಡಿವೆ. ಇವತ್ತಿಗೂ ಸಹ ಗ್ರಾಮಕ್ಕೆ ಶೃಂಗಾರ ಅಲ್ಲಿಯ ಗ್ರಾಮದೇವತೆಯೇ ಆಗಿದ್ದಾಳೆ. ಅವಳು ಮಾರಿಯಾಗಿರಬಹುದು, ಕಾಳಿಯಾಗಿರಬಹುದು, ಚಂಡಿ-ಚಾಮುಂಡಿಯಾಗಿರಬಹುದು. ಅವಳು ಏನೇ ಆದರೂ ಜನರಲ್ಲಿ ಮಾತ್ರ ಅವಳು ಗ್ರಾಮದೇವತೆ. ಗ್ರಾಮದೇವತೆಗಳು ಸಿಟ್ಟಾದರೆ ಕಷ್ಟ, ಸಂಕಟ, ರೋಗ-ರುಜಿನಗಳಿಗೆ ಕಾರಣಳಾಗುತ್ತಾಳೆ. ಅವುಗಳ ನಿವಾರಕಳು ಅವಳೆ ಎಂಬ ನಂಬಿಕೆ ನಮ್ಮ ಹಳ್ಳಿಗರಲ್ಲಿದೆ. ಅವಳ ಆರಾಧನೆಯ ಫಲವಾಗಿ ನಡೆಯುವ ಹಬ್ಬ, ಜಾತ್ರೆಗಳು ವಿಶಿಷ್ಟವಾದ ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿವೆ. ಇಂತಹ ಹಬ್ಬ, ಜಾತ್ರೆಗಳು ಕೇವಲ ಮೋಜಿನ ಆಟಗಳಾಗಿರದೆ ಧಾರ್ಮಿಕ ಹಿನ್ನೆಲೆಯಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವ ಅಡಗಿದೆ. ಆದುದರಿಂದಲೇ ಜನಪದಿಗರಾದ ನಮಗೆ 'ಗ್ರಾಮದೇವತೆ' ಮುಖ್ಯವಾಗುತ್ತದೆ.

"ಗ್ರಾಮದೇವತೆ ಆ ಗ್ರಾಮದ ಜನರ ಜೀವನದಲ್ಲಿ ಎಷ್ಟು ಹಾಸು ಹೊಕ್ಕಾಗಿದ್ದಾಳೆಂದರೆ ಅವರ ಪ್ರತಿಯೊಂದು ಕಾರ್ಯದಲ್ಲೂ ಅವಳ ಪಾಲಿದೆ. ಮಳೆ, ಬೆಳೆ, ರೋಗ, ರುಜಿನ, ಶಾಂತಿ, ಆಸ್ತಿ, ಮದುವೆ, ಮಕ್ಕಳು ಎಲ್ಲದರಲ್ಲಿ ಅವಳ ಪಾತ್ರವಿದೆ ಎಂಬ ಭಾವನೆ ಅವರದಾಗಿದೆ. ಅವಳನ್ನು ಪ್ರಸನ್ನಗೊಳಿಸಲು ಹಬ್ಬ ಹರಿದಿನಗಳನ್ನು, ವಿವಿಧ ರೀತಿಯ ಹರಕೆಗಳನ್ನು, ಉತ್ಸವಗಳನ್ನು ಮಾಡುತ್ತ ಅವರು ಬಂದಿದ್ದಾರೆ."[೮೨] ಇಂತಹ ಗ್ರಾಮದೇವತೆಗಳ ಮಹಿಮೆಯನ್ನು ತಮ್ಮದೆ ಆದ ಜನಪದ ಭಾಷೆಯಲ್ಲಿ ಸಾರುವ, ಕಥಾನಕವಾಗಿ ವರ್ಣಿಸಬಲ್ಲ ಜನರು ಇಂದಿಗೂ ಹಳ್ಳಿಗಳಲ್ಲಿ ಇದ್ದಾರೆ.

ಜನಪದ ದೈವಗಳ ವೈಶಿಷ್ಟ್ಯವೆಂದರೆ ಇವು ಜಾತ್ಯಾತೀತವಾಗಿವೆ, ಭಾಷಾತೀತವಾಗಿವೆ. ಈ ದೇವತೆಗಳನ್ನು ಪೂಜಿಸುವ ಪೂಜಾರಿಗಳೆಲ್ಲ ಬ್ರಾಹ್ಮಣೇತರರು, ಕೆಳವರ್ಗದಿಂದ, ದುಡಿವ ವರ್ಗದಿಂದ ಬಂದವರಾಗಿದ್ದಾರೆ. ಸರಳತೆಯನ್ನು ಮೈಗೂಡಿಸಿಕೊಂಡಿರುವ ಈ ದೇವತೆಗಳು ಪ್ರತಿಷ್ಠಿತ ಸಂಸ್ಕೃತ ಭಾಷೆಯನ್ನು ಬಿಟ್ಟು ಸ್ಥಳೀಯ-ಪ್ರಾದೇಶಿಕ ಭಾಷೆಗಳಲ್ಲಿಯೇ ವ್ಯವಹರಿಸುತ್ತವೆ. ಆಯಾ ಪ್ರದೇಶದ ಭಕ್ತರ ಭಾಷೆಯೇ ಈ ದೈವಗಳ ಭಾಷೆಯಾಗಿವೆ. ಇವುಗಳ ಪೂಜಾ ವಿಧಾನ ಬಹು ಸರಳವಾದುದ್ದಾಗಿರುತ್ತದೆ. ನೆನೆದವರ ಮನದಲ್ಲೆಂಬಂತೆ ಬಡವರ ಬೆಳಕಾಗಿ, ಶೋಷಿತರ ಆಸರೆಯಾಗಿ ಈ ದೈವಗಳಿರುವುದನ್ನು ಕಾಣಬಹುದಾಗಿದೆ. ವರ್ಣ-ವರ್ಗಗಳ ಭೇದವನ್ನು ತೊಡೆದು ಭಾವಕ್ಯತೆಯನ್ನು ಮೂಡಿಸುವ ಸೌಹಾರ್ದತೆಯನ್ನು ಕಲಿಸುವ, ಸಾಮರಸ್ಯವನ್ನು ಬೆಳೆಸುವ ಜನಪದ ದೈವಗಳು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ತುಂಬ ಮುಖ್ಯವಾಗಿವೆ.

ರಾಯಬಾಗ ಪರಿಸರದಲ್ಲಿ ಅತ್ಯಂತ ಪ್ರಾಚೀನ ಕಾಲದ ಮಾತೃದೇವತೆಯ ಹಲವಾರು ಮೂರ್ತಿಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾದವುಗಳು ಚಿಂಚಲಿಯ ಮಾಯಕ್ಕಾದೇವಿ, ರಾಯಬಾಗ ಮತ್ತು ಸೌಸುದ್ದಿಯ ಲಕ್ಷ್ಮೀ ದೇವತೆಗಳು, ಬೆಕ್ಕೇರಿಯ ಲಕ್ಕವ್ವ ದೇವತೆ, ಹಿಡಕಲ್‌ದ ಬೆಳಗಲಿಯ ಲಕ್ಷ್ಮೀ ದೇವಿ ಮುಂತಾದವುಗಳು. ಕೆಲವಡೆಗಳಲ್ಲಿ ಎರಡು ಗ್ರಾಮಗಳ ಮಧ್ಯದಲ್ಲಿ ಸೀಮೆ ಲಕ್ಕವ್ವ ಪ್ರತಿಷ್ಠಾಪನೆಗೊಂಡಿರುವಳು. ಸ್ತ್ರೀ ದೇವತೆಗಳು ಜನಪದಿಯ ದೈವಗಳಾಗಿದ್ದು, ಹಾಲುಮತ ಸಮುದಾಯದವರ ಆರಾಧ್ಯ ದೈವಗಳಾಗಿವೆ.

೩.೨.೨.೧ ಚಿಂಚಲಿಯ ಮಾಯಕ್ಕ :

ಉತ್ತರ ಕರ್ನಾಟಕ ಹಾಗೂ ದಕ್ಷಿಣ ಮಹಾರಾಷ್ಟ್ರದ ಅತ್ಯಂತ ಪ್ರಭಾವಿಶಾಲಿ ಮತ್ತು ಶಕ್ತಿಶಾಲಿ ದೇವತೆ ಎಂದು ಪ್ರಸಿದ್ಧಿಯನ್ನು ಪಡೆದವಳು ಚಿಂಚಲಿಯ ಮಾಯಕ್ಕದೇವಿ. ಆದ್ದರಿಂದ ಚಿಂಚಲಿ ಅತ್ಯಂತ ಜಾಗೃತ ಸ್ಥಳ ಎಂಬ ನಂಬಿಕೆಗೆ ಪಾತ್ರವಾಗಿದೆ. ಇವಳನ್ನು ಶಕ್ತಿ ದೇವತೆಯೆಂದು, ಪಾರ್ವತಿಯ ಅವತಾರ ಎಂತಲು ಭಕ್ತರು ನಂಬಿದ್ದಾರೆ. ಕರ್ನಾಟಕದ ವಿವಿಧ ಜಿಲ್ಲೆಗಳ ಭಕ್ತರಲ್ಲದೆ, ನೆರೆಯ ಮಹಾರಾಷ್ಟ್ರದ ಕೊಲ್ಹಾಪೂರ, ಸಾಂಗಲಿ, ಸಾತಾರಾ, ಕರಾಡ, ಮುಂಬಯಿ, ಪುಣೆ, ನಾಗಪೂರ ಪಟ್ಟಣಗಳಿಂದ, ಕೊಂಕಣ, ವಿದರ್ಭ, ಮಾನದೇಶ ಮತ್ತು ನೆರೆಯ ರಾಜ್ಯಗಳಾದ ಗೋವಾ, ಆಂಧ್ರಪ್ರದೇಶ, ಕೇರಳ, ತಮಿಳುನಾಡು ಸೇರಿದಂತೆ ದೇಶದ ಮೂಲೆ ಮೂಲೆಗಳಿಂದಲ್ಲದೇ ವಿದೇಶಗಳಿಂದ ೨೦ ಲಕ್ಷಕ್ಕೂ ಹೆಚ್ಚು ಭಕ್ತರು ದೇವಿಯ ದರ್ಶನ ಹಾಗೂ ಜಾತ್ರೆಗೆ ಆಗಮಿಸುತ್ತಾರೆ.

ಅಪಾರ ಭಕ್ತರನ್ನು ಸೆಳೆಯುವ ಮಾಯವ್ವ ಅಪ್ಪಟ ಜನಪದೀಯ ಸ್ತ್ರೀದೈವ. ಇವಳು ಜಾತ್ಯಾತೀತ ದೇವತೆ. ಹೀಗಾಗಿ ಇವಳನ್ನು ಎಲ್ಲಾ ಜನಾಂಗದ ಜನರು ಆರಾಧಿಸುತ್ತಾರೆ. ಅವಳಿಗೆ ಎಲ್ಲ ಕೋಮಿನ ಎಲ್ಲ ಜಾತಿಯ ಭಕ್ತರಿದ್ದರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ದೇವಿಯ ದರ್ಶನಕ್ಕಾಗಿ ಬರುವ ಮತ್ತು ತಮ್ಮ ಹರಕೆಯನ್ನು ಸಲ್ಲಿಸುವವರೆಂದರೆ ಕುರುಬ ಸಮುದಾಯದವರು. ಕುರುಬರು ತಮ್ಮ ಡೊಳ್ಳಿನ ಹಾಡುಗಳನ್ನು ಹಾಡಿ ಮುಗಿಸಿದ ನಂತರ 'ಹೆಜ್ಜೆ ಹೆಜ್ಜೆಗೆ ಪವಾಡ ಮಾಡ್ಯಾನ ಗುಜ್ಜಿ ಮಾಯವ್ವಾನ ತಮ್ಮನೊ' ಎಂದು ಮುಗಿಸುವ ಈ ಮುದ್ರಿಕೆಯನ್ನು ನೋಡಿದರೆ ಮಾಯವ್ವನಿಗೂ ಮತ್ತು ಕುರುಬ ಸಮುದಾಯಕ್ಕೂ ನಿಕಟ ಸಂಬಂಧವಿರುವುದು ಸ್ಪಷ್ಟವಾಗುತ್ತದೆ. ಅವಳ ಬಗೆಗಿನ ಕಥೆಗಳಲ್ಲಿ ಭಕ್ತರ ಸಂಖ್ಯೆಯ ದೃಷ್ಟಿಯಿಂದ, ಆಕೆಯ ಸೇವಕರ ಸಂಖ್ಯೆಯಿಂದ 'ಕುರುಬರು' ಹೆಚ್ಚು ಮಾಯಕ್ಕನನ್ನು ಆರಾಧಿಸುವುದು ತಿಳಿದು ಬರುತ್ತದೆ. ಇದು ಮಹಾರಾಷ್ಟ್ರದಿಂದ ಆಗಮಿಸುವ ಭಕ್ತರಲ್ಲಿಯೂ ಸಹ ಕಂಡು ಬರುತ್ತದೆ.

ಮಹಾರಾಷ್ಟ್ರದ ಕುಣಬಿಗಳು, ಲಾಟರು, ಧನಗರರು, ಕರ್ನಾಟಕದ ಕುರುಬರು ಹಾಗೂ ಯತಿಯರು ಮೂಲತಃ ಒಂದೇ ಸಮುದಾಯಕ್ಕೆ ಸೇರಿದವರು. ಕಾಲಕ್ರಮೇಣ ಇವರು ಬೇರೆ-ಬೇರೆಯಾಗಿದ್ದರೂ ಇವರು ಆರಾಧಿಸುವ ದೈವ ಒಂದೇ ಆಗಿತ್ತು. ಅದುವೆ ಚಿಂಚಲಿ ಮಾಯವ್ವಾ. ಹೀಗಾಗಿ ಮಾಯವ್ವ ಕರ್ನಾಟಕ ಮತ್ತು ಮಹಾರಾಷ್ಟ್ರದ ಭಕ್ತರ ಸಾಂಸ್ಕೃತಿಕ ಪ್ರತೀಕವಾಗಿದ್ದಾಳೆ.

ಮಾಯಕ್ಕಳ ಸಂಪ್ರದಾಯ, ಪೂಜಾ ವಿಧಿ-ವಿಧಾನಗಳನ್ನು ಗಮಿಸಿದಾಗ ವೈದಿಕ ಸಂಪ್ರದಾಯದಿಂದ ಭಿನ್ನವಾಗಿ ಸಾಮಾನ್ಯರ ದೇವತೆಯಾಗಿ ಇವಳು ಕಂಡು ಬರುತ್ತಾಳೆ. ಇವಳನ್ನು ಭಕ್ತರೂ ಯಾವುದೇ ಜಾತಿ, ಮತ ಭೇದವಿಲ್ಲದೆ ಆರಾಧಿಸುವುದು ವಿಶಿಷ್ಟವಾದರೂ, ಮಾಯವ್ವಾ ಕೆಳವರ್ಗದ ದೇವತೆ, ಅದರಲ್ಲಿಯೂ ಕುರುಬರ ಪ್ರಮುಖ ಸ್ತ್ರೀದೈವ. "ಬೀರದೇವರು ಹಾಲುಮತದವರ ಕುಲದೇವರು. ಮೈಲಾರಲಿಂಗ, ಮಾಳಿಂಗರಾಯ, ರೇವಣಸಿದ್ಧ, ಮಾಯವ್ವಾ, ಅಮೋಘಸಿದ್ಧ ಹಾಲುಮತ ಜನಾಂಗವೂ ಪೂಜಿಸುವ ಇತರ ದೇವತೆಗಳಾಗಿವೆ."[೬೩] ಕುಲದೇವತೆಯಾದ ಬೀರಪ್ಪನನ್ನು ಸಾಕಿದವಳು ಮಾಯವ್ವಳೆಂಬ ನಂಬಿಕೆ ಹಾಲುಮತದವರದ್ದು. ಹೀಗಾಗಿ ಇವಳು ಹಾಲುಮತ ಸಮುದಾಯದ ದೇವತೆಯಾಗಿ ಆರಾಧನೆಗೊಳ್ಳುತ್ತಿದ್ದಾಳೆ.

ಒಂದು ಕಾಲದಲ್ಲಿ ರಾಯಬಾಗ (ಬಾಗೆನಾಡು) ಪರಿಸರವೆಲ್ಲವೂ ಕುರುಚಲು ಕಾಡಿನಿಂದ ಆವೃತ್ತಗೊಂಡು ಪಶುಪಾಲನೆಗೆ ಪೂರಕ ಪ್ರದೇಶವಾಗಿತ್ತು. ಪಶುಪಾಲಕರಿಂದ ತುಂಬಿಕೊಂಡಿರುವ ಈ ಪ್ರದೇಶವೇ ಹಾಲುಮತ ದೇವತೆಗಳ ಉಗಮಸ್ಥಾನವೂ ಹೌದು. 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ಚಿಂಚಲಿ ಮಾಯಕ್ಕನನ್ನು ಬಾಗೆನಾಡಿನ ಬಣ್ಣದ ಮಾಯವ್ವನೆಂದು ಬಣ್ಣಿಸಲಾಗಿದೆ. ಬಹುಶಃ ಬಣ್ಣ ಎಂಬ ಪದ 'ಬನ'ದ ಅಪಭ್ರಂಶ ರೂಪವಾಗಿರಬಹುದು. ಅವಳು ಬಾಗೆನಾಡಿನ ಬನದ ಮಾಯವ್ವಾ ಆಗಿರಬಹುದು.

ಚಿಂಚಲಿಯ ಪ್ರಾಚೀನತೆ :

ಪ್ರಾಚೀನ ಗ್ರಾಮವಾದ ಚಿಂಚಲಿಯಲ್ಲಿ, ಅದರ ಪ್ರಾಚೀನತೆಯನ್ನು ಸಾರುವ ಹಲವಾರು ಅವಶೇಷಗಳು ಕಂಡು ಬರುತ್ತವೆ. ಈ ಗ್ರಾಮದ ಮೊದಲ ಉಲ್ಲೇಖ ನಾಲ್ಕನೇ ರಟ್ಟ ಕಾರ್ತವೀರ್ಯನ ಕ್ರಿ. ಶ. ೧೨೦೧ರ 'ರಾಯಬಾಗ ಶಾಸನ'ದಲ್ಲಿದೆ. ಆತ ಚಿಂಚಲಿ ಗ್ರಾಮವನ್ನು ರಾಯಬಾಗದ ಜೈನ ಗಲ್ಲಿಯಲ್ಲಿರುವ ಆದಿನಾಥ ಬಸದಿಗೆ ದತ್ತಿಯಾಗಿ ನೀಡಿದ್ದನ್ನು. ಆದರೆ ಚಿಂಚಲಿ ಮಾಯವ್ವಳ ಕುರಿತಾದ ಯಾವ ಉಲ್ಲೇಖಗಳು ಶಾಸನ, ಸಾಹಿತ್ಯಗಳಲ್ಲಿ ಸಿಗುವುದಿಲ್ಲ. ಕಾರಣ ಜನಪದ ದೈವಗಳು ಕೆಳ-ತಳ ಸಮುದಾಯಗಳ ದೈವಗಳಾಗಿದ್ದು, ಶಿಷ್ಟರಿಂದ ಕಡೆಗಣಿಸಲ್ಪಟ್ಟ ಪರಿಶಿಷ್ಟ ದೇವತೆಗಳಾಗಿವೆ. ಹೀಗಾಗಿ ಆಳರಸರ ಮನ್ನಣೆಯಿಂದ ಪುರಸ್ಕರಿಸಲ್ಪಡದೇ ಇರುವುದರಿಂದ ಶಾಸನ, ಕಾವ್ಯ, ಚರಿತ್ರೆಗಳಲ್ಲಿ ಈ ದೈವಗಳು ದಾಖಲೆಗೊಂಡಿಲ್ಲ.

ಮಾಯವ್ವಳ ಹಿರಿಮೆ ಮತ್ತು ಐತಿಹಾಸಿಕ ಹಿನ್ನೆಲೆ :

ಭಕ್ತರ ಮನಸ್ಸಿನಲ್ಲಿ, ಮಾಯವ್ವಾ, 'ಶಕ್ತಿದೇವಿ' ಎಂದೂ ಹಾಗೂ ಪಾರ್ವತಿಯ ಅವತಾರ ಎಂಬ ನಂಬಿಕೆ ಮತ್ತು ಪ್ರಭಾವ ಇರುವುದು ಕಂಡು ಬರುತ್ತದೆ. ಅವಳ ಬಗೆಗೆ ಇರುವ ಕಥೆಗಳು, ಐತಿಹ್ಯಗಳು, ವಿಧಿ-ವಿಧಾನಗಳು ಮಾಯವ್ವಳ ಹಿರಿಮೆಯನ್ನು ಪರಿಚಯಿಸುವ ಮೂಲ ಸಾಮಗ್ರಿಗಳೆನಿಸುತ್ತವೆ. ಚಿಂಚಲಿಯಲ್ಲಿ ಹಲವಾರು ದೇವತೆಗಳಿದ್ದರೂ ಸಹ, ಅವುಗಳಲ್ಲಿ ಮಾಯಕ್ಕಾ ಒಬ್ಬಳೇ ಅತೀ ಪ್ರಭಾವಿ ದೈವವಾಗಿರುವುದು ಅವಳ ಹಿರಿಮೆಯಿಂದ ಕಂಡು ಬರುತ್ತದೆ. ಜನರು ಉಳಿದ ದೇವರುಗಳಿಗೆ ಸಾಂದರ್ಭಿಕ ಮಹತ್ವವನ್ನು ನೀಡುತ್ತಾರೆ. ಆದರೆ ಮಾಯವ್ವಳಿಗೆ ಇರುವಷ್ಟು ಪ್ರಾಮುಖ್ಯತೆ ಉಳಿದ ದೇವತೆಗಳಿಗೆ ಇಲ್ಲ.

ಮಾಯವ್ವ ದೇವತೆಯ ಮೂಲಸ್ಥಳ ಮತ್ತು ಅವಳು ಚಿಂಚಲಿಗೆ ಬಂದಿದ್ದು ಇತ್ಯಾದಿಗಳ ಬಗ್ಗೆ ಪಾರಂಪರಿಕ ಹೇಳಿಕೆಗಳಿವೆ. ಮಾಯವ್ವ ಮೂಲತಃ ಮಹಾರಾಷ್ಟ್ರ ಮೂಲದವಳು. ಮಹಾರಾಷ್ಟ್ರದ ಧನಗರರ ಬಾರಾಹಟ್ಟಿ ಎಂಬ ಗುಡ್ಡಗಾಡು ಪ್ರದೇಶವು ಹನ್ನೆರಡು ವಾಡೆಗಳಿಂದ ಕೂಡಿತ್ತು. ಅಲ್ಲಿಯ ಗುಡ್ಡಗಾಡುಗಳು ದಟ್ಟವಾದ ಅರಣ್ಯ ಪ್ರದೇಶಗಳಿಂದ ಕೂಡಿದ್ದು ಅವುಗಳಲ್ಲಿ ಜನರು ಅಡಗಿ ಕುಳಿತುಕೊಳ್ಳಬಹುದಿತ್ತು. "ಈ ಪ್ರದೇಶದಲ್ಲಿ ಒಂದು ಹುಡುಗಿ ಇದ್ದಳು. ಅವಳೇ ಚಿಂಚಲಿಯ ಮಾಯವ್ವಾ ಎಂದು ಡಾ. ಜಿ. ಡಿ. ಸೊಂತ್ಯೆಮಾರ ಹೇಳುತ್ತಾರೆ. ಆದರೆ ಎಕ್ಕವ್ವ ಮತ್ತು ಮಾಯವ್ವಾ ಕರ್ನಾಟಕದಿಂದ ಹಿವಾರ ಕಾಡಿಗೆ ಬಂದರು ಎಂಬುದನ್ನು ಅವರೆ ಮತ್ತೊಂದು ಸಂದರ್ಭದಲ್ಲಿ ಹೇಳುತ್ತಾರೆ. ಅವರ ಈ ಹೇಳಿಕೆಗಳು ಸರಿಯಾಗಿವೆ ಎಂದೆನಿಸುತ್ತದೆ."[೪೪]

ಬೀರದೇವರ ಚರಿತ್ರೆಯ ಪ್ರಕಾರ ಮಾಯವ್ವಾ ಬಾಲಕನಾದ ಬೀರದೇವನನ್ನು ತನ್ನ ಉಡಿಯಲ್ಲಿ ಕಟ್ಟಿಕೊಂಡು ಬಂಕಾಪುರ ಮಾರ್ಗವಾಗಿ ಮಹಾರಾಷ್ಟ್ರದ ಬಾರಾಹಟ್ಟಿ ಪ್ರದೇಶಕ್ಕೆ ಬಂದು ನೆಲೆಸಿ, ಬೀರದೇವರು ಯುವಕನಾದ ಮೇಲೆ ಕುರಿಗಳನ್ನು ಕಾಯುತ್ತಾ ಅಲೆಯುತ್ತಾ ಬಾಗೆನಾಡಿನ ಪ್ರಮುಖ ಸ್ಥಳವಾದ ಚಿಂಚಲಿಗೆ ಬಂದು ನೆಲೆಸಿರಬೇಕೆಂಬ ಪ್ರತೀತಿ ಇದೆ. ಮಾಯವ್ವಾ ಮಹಾರಾಷ್ಟ್ರದ ಮಾನದೇಶ(ಕೊಂಕಣ)ದಿಂದ ಬಂದವಳು ಮತ್ತು ಅದು ಅವಳ ತವರುಮನೆ ಎಂದು ಜನ ಹೇಳುವುದನ್ನು ನೋಡಿದರೆ ಈ ಮೇಲಿನ ವಿಷಯಕ್ಕೆ ಪುಷ್ಟಿ ದೊರೆಯುತ್ತದೆ. ಮಾಯಕ್ಕಾ ಚಿಂಚಲಿಗೆ ಬಂದು ನೆಲೆಸಿದ ನಂತರವೇ ಅದು ಮಾಯಕ್ಕನ ಚಿಂಚಲಿ ಎಂದು ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ಕ್ರಿ. ಶ. ೧೮೮೮ರ ದಾಖಲೆಗಳ ಪ್ರಕಾರ ಮಾಯಕ್ಕಾ ದೇವಿಯ ಮೂಲ ಸ್ಥಳ ಮಹಾರಾಷ್ಟ್ರದ ಮಾನ ದೇಶ ಅಂದರೆ ಕೊಂಕಣದಿಂದ ಬಂದವಳು ಎಂದು ಹೇಳುತ್ತಾರೆ. ಆದರೆ ಅಲ್ಲಿಯ ನಿಶ್ಚಿತವಾದ ಸ್ಥಳದ ಕುರಿತು ಸ್ಪಷ್ಟವಾದ ಮಾಹಿತಿ ದೊರೆಯುವುದಿಲ್ಲ. ದೇವಿಯು ಕೀಲ-ಕಟ್ಟ ಎಂಬ ರಾಕ್ಷಸರನ್ನು ಬೆನ್ನಟ್ಟಿಕೊಂಡು ಚಿಂಚಲಿಗೆ ಬಂದು ಅವರನ್ನು ಸಂಹಾರ ಮಾಡಿದಳೆಂಬ ಐತಿಹ್ಯವಿದೆ. ರಾಕ್ಷಸರ ಸಂಹಾರದ ನಂತರ ಮಾಯಕ್ಕಾ ಇಲ್ಲಿಯೇ ನೆಲೆಯೂರಿ ನಿಂತಳೆಂದು ಮೌಖಿಕ ಮೂಲಗಳಿಂದ ತಿಳಿದು ಬರುತ್ತದೆ. ಮಾಯಕ್ಕ ಹಾಗೂ ಚಿಂಚಲಿ ಗ್ರಾಮದ ಬಗ್ಗೆ ಖಚಿತವಾಗಿ ವಿವರಿಸುವ ಶಾಸನಗಳಾಗಲಿ, ಲಿಖಿತ ಅಥವಾ ಐತಿಹಾಸಿಕ ಮಾಹಿತಿಗಳಾಗಲಿ ದೊರೆಯುವುದಿಲ್ಲ. ಜನರು ಒದಗಿಸುವ ಮೌಖಿಕ ಮೂಲದಿಂದಲೇ ಅದನ್ನು ಊಹಿಸಬೇಕಾಗಿದೆ. ಮಾಯಕ್ಕಾಳ ಬಗೆಗೆ ಇರುವ ಹೆಚ್ಚು ಕಥೆಗಳು ಪೌರಾಣಿಕ ಸಮೀಕರಣ ಹೊಂದಿದವುಗಳಾಗಿವೆ. ಹೀಗಾಗಿ ಗ್ರಾಮದ ಮತ್ತು ದೇವತೆಯ, ಇತಿಹಾಸ ಮತ್ತು ಪ್ರಾಚೀನತೆಯನ್ನು ಸಂಶೋಧನೆ ಕಾರ್ಯದ ಮೂಲಕ ಪತ್ತೆ ಹಚ್ಚುವುದು ಅವಶ್ಯಕವಾಗಿದೆ. ಈ ಕುರಿತು ಸಂಶೋಧನೆಯಾದಲ್ಲಿ ಹಲವಾರು ಹೊಸ ಅಂಶಗಳ ಮೇಲೆ ಬೆಳಕು ಚೆಲ್ಲಬಹುದು.

ಮಾಯಕ್ಕನ ಬಗೆಗೆ ತಿಳಿದು ಬರುವ ಪುರಾಣ ಕಥೆಗಳಲ್ಲಿ ಮಾಯಕ್ಕ ಸಾಕ್ಷಾತ್ ವಿಷ್ಣುವಿನ ಅವತಾರವೆಂತಲೂ, ಪಾರ್ವತಿಯ (ಅರ್ಧನಾರಿಶ್ವರ) ಅವತಾರವೆಂತಲೂ ನಂಬಿಕೆ ಇದೆ. ರಾಕ್ಷಸ ಸಂಹಾರಕ್ಕಾಗಿ ಅವಳು ಅವತಾರ ಧರಿಸಿದವಳೆಂದು ಜನರು ಹೇಳುತ್ತಾರೆ. ಅದಕ್ಕೆ ಪುಷ್ಟಿ ನೀಡುವಂತೆ ವಿವಿಧ ಉಪಕಥೆಗಳನ್ನು ಭಕ್ತರು ಹೇಳುತ್ತಾರೆ. ಆ ಎಲ್ಲ ಕಥೆಗಳೂ ಪಾರ್ವತಿಯ ಅವತಾರಕ್ಕೆ ಬಂದು ಸೇರುವಂತಹವುಗಳಾಗಿವೆ.

ಸ್ಥಳ ಮತ್ತು ಸಾರಿಗೆ ವ್ಯವಸ್ಥೆ :

ಗಡಿನಾಡಿನ ವಿಶಿಷ್ಟ ಸಂಸ್ಕೃತಿಯ ಬೀಡು ಚಿಂಚಲಿ. ಇತ್ತೀಚಿಗೆ ಪಟ್ಟಣ ಪಂಚಾಯತಿಯಾಗಿ ಪರಿವರ್ತನೆಯಾದ ಈ ಸುಕ್ಷೇತ್ರಕ್ಕೆ, ರಾಜ್ಯದ ವಿವಿಧ ಮೂಲೆಗಳಿಂದ ಮತ್ತು ಹೊರ ರಾಜ್ಯಗಳಿಂದಲೂ ಬರುವ ಭಕ್ತರಿಗೆ ಬಸ್ಸು ಮತ್ತು ರೈಲುಗಳ ಮೂಲಕ ಆಗಮಿಸಲು ಸೌಕರ್ಯವಿದೆ. ಚಿಂಚಲಿಯು ತಾಲ್ಲೂಕಾ ಸ್ಥಳವಾದ ರಾಯಬಾಗದಿಂದ ಉತ್ತರಕ್ಕೆ ೮ ಕಿ. ಮೀ. ಅಂತರದಲ್ಲಿದೆ. ಬೆಳಗಾವಿಯಿಂದ ೧೨೦ ಕಿ. ಮೀ. ದೂರದಲ್ಲಿದೆ. ಜಾತ್ರೆ ಮತ್ತು ಉತ್ಸವ ಸಂದರ್ಭಗಳಲ್ಲಿ ರಾಜ್ಯದ ಪ್ರಮುಖ ನಗರಗಳಿಂದ ಇಲ್ಲಿಗೆ ತಲುಪಲು ಸಾಕಷ್ಟು ಸರ್ಕಾರಿ

ಸಾರಿಗೆ ಬಸ್ಸುಗಳ ಸೌಕರ್ಯ ಒದಗಿಸಲಾಗಿರುತ್ತದೆ. ಮಹಾರಾಷ್ಟ್ರ ಸಾರಿಗೆ ಇಲಾಖೆಯವರು ಪ್ರತಿ ಜಾತ್ರೆಗೂ ಭಕ್ತರಿಗಾಗಿ ಸುಮಾರು ೫೦೦ಕ್ಕೂ ಹೆಚ್ಚು ಬಸ್ಸುಗಳ ವ್ಯವಸ್ಥೆಯನ್ನು ಮಾಡಿಕೊಡುತ್ತಾರೆ.

ರೈಲು ನಿಲ್ದಾಣ :

ದೂರದ ಹೊರ ರಾಜ್ಯಗಳಿಂದಲೂ ಬರುವ ಭಕ್ತರಿಗೆ ಅನುಕೂಲವೆಂಬಂತೆ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ರೈಲು ನಿಲ್ದಾಣವು ಇದ್ದು ದೇವಸ್ಥಾನದಿಂದ ೨ ಕಿ. ಮೀ. ಅಂತರದಲ್ಲಿದೆ. ಬ್ರಿಟಿಷರ ಕಾಲದಲ್ಲಿ ಪ್ರಾರಂಭವಾದ ಈ ರೈಲು ನಿಲ್ದಾಣ ಯಾವುದೇ ಆಧುನಿಕ ಮೂಲ ಸೌಕರ್ಯ, ಸುಧಾರಣೆಗಳನ್ನು ಕಾಣದೆ ಬಳಲುತ್ತಿದೆ. ಆದರೂ ಇಲ್ಲಿಯವರೆಗೆ ರೈಲು ನಿಲ್ದಾಣವನ್ನು ಉನ್ನತ್ತಿಸಿಕರಿಸುವ ಯಾವ ಯೋಜನೆಗಳು ಜಾರಿಗೆ ಬಾರದೆ ಕಾಯಕಲ್ಪಕ್ಕಾಗಿ ಕಾಯಬೇಕಾಗಿದೆ. ಜಾತ್ರೆ ಮತ್ತು ಉತ್ಸವ ಸಮಯದಲ್ಲಿ ಈ ಮಾರ್ಗದ ಮೂಲಕ ಹಾದು ಹೋಗುವ ಎಲ್ಲಾ ಎಕ್ಸ್‌ಪ್ರೆಸ್ ರೈಲುಗಾಡಿಗಳಿಗೆ ಇಲಾಖೆಯವರು ತಾತ್ಕಾಲಿಕ ನಿಲುಗಡೆಯ ವ್ಯವಸ್ಥೆ ಮಾಡಿ ಭಕ್ತರಿಗೆ ಅನುಕೂಲ ಮಾಡಿಕೊಡುತ್ತಾರೆ.

ದೇವಸ್ಥಾನ :

ಮಾಯಕ್ಕಾ ದೇವಿಯ ದೇವಾಲಯವು ಹಾಳು ಮಣ್ಣಿನ ಪ್ರದೇಶದಲ್ಲಿ ನಿರ್ಮಿತವಾಗಿರುವುದಾಗಿ ಕಂಡು ಬರುತ್ತದೆ. ಈ ಹಿಂದೆ ದೇವಸ್ಥಾನದ ಸ್ಥಳದಲ್ಲಿ ಹಾಳು ಮಣ್ಣಿನ ದಿಬ್ಬವಿತ್ತಂತೆ. ಇವತ್ತಿಗೂ ದೇವಾಲಯ ಸುತ್ತ-ಮುತ್ತಲಿನ ಪ್ರದೇಶವು ಬಿಳಿ ಮಣ್ಣಿನಿಂದ ಕೂಡಿದೆ. ಈ ದಿಬ್ಬದ ಮೇಲೆಯೇ ಆರಂಭಿಕ ದೇವಸ್ಥಾನ ನಿರ್ಮಾಣವಾಗಿತ್ತು. ಆರಂಭದಲ್ಲಿ ದೇವಾಲಯವು ಚಿಕ್ಕದಾಗಿದ್ದು ನಂತರದಲ್ಲಿ ಅದೇ ಚಿಕ್ಕ ಗುಡಿಯನ್ನು ಒಳಗೊಂಡಂತೆ ದೊಡ್ಡ ದೇವಾಲಯವನ್ನು ನಿರ್ಮಿಸಿ ಅದರ ಮೇಲೆ ದೊಡ್ಡ ಶಿಖರವನ್ನು ನಿರ್ಮಿಸಲಾಗಿದೆ.

ದೇವಾಲಯದ ವಾಸ್ತು :

ಮಾಯಕ್ಕಾ ದೇವಿಯ ದೇವಸ್ಥಾನ ವಿಜಯನಗರ ಶೈಲಿಯಲ್ಲಿದೆ. ದೇವಾಲಯವು ವಿಶಾಲವಾದ ಪ್ರಾಂಗಣವನ್ನು ಹೊಂದಿದ್ದು ಬಿಳಿಯ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಸುತ್ತೆಲ್ಲ ಎರಡು ಅಂತಸ್ತಿನ ಪೌಳಿಯಿದ್ದು ಮಧ್ಯದಲ್ಲಿ ದೇವಸ್ಥಾನ ನಿರ್ಮಾಣವಾಗಿದೆ. ಪ್ರವೇಶ ದ್ವಾರವು ಪೂರ್ವಾಭಿಮುಖವಾಗಿದ್ದು, ಅದರ ಮೇಲೆ ಸುಮಾರು ೫೦ ಅಡಿ ಎತ್ತರದ ಗೋಪುರವಿದ್ದು, ಮಧ್ಯದಲ್ಲಿ ನಗಾರಿಖಾನೆ ಇದೆ. ಮುಂಜಾನೆ ಮತ್ತು ಸಂಜೆಯ ಪೂಜಾ ಸಮಯಗಳಲ್ಲಿ ನಗಾರಿಗಳ ವಾದನ ನಡೆಯುತ್ತದೆ. ಮಹಾದ್ವಾರವು ದೊಡ್ಡದಾಗಿದ್ದು, ನಿರ್ಮಾಣ ಶೈಲಿ ಆಕರ್ಷಕವಾಗಿದೆ. ಪ್ರವೇಶದ್ವಾರದ ಎದುರಿನಲ್ಲಿ ಪೂರ್ವಕ್ಕೆ ಮುಖ ಮಾಡಿ ಎರಡು ಬೃಹತ್ ಆನೆಗಳ ಶಿಲ್ಪಗಳಿವೆ. ಈ ಶಿಲ್ಪಗಳ ಮಧ್ಯದಲ್ಲಿ ಸೋಪಾನಗಳಿವೆ. ಬಿಳಿಯ ಕಲ್ಲಿನಲ್ಲಿ ನಿರ್ಮಿಸಲಾದ ಗೋಪುರ ಅತ್ಯಂತ ಆಕರ್ಷಕವಾಗಿದೆ. ಅದರಲ್ಲಿ ವಿವಿಧ ಹಿಂದೂ ದೇವತೆಗಳನ್ನು ಕೆತ್ತಲಾಗಿದೆ. ಈ ರೀತಿಯಾದ ಬೃಹತ್ ಮಹಾದ್ವಾರವು ಈ ಪರಿಸರದ ಯಾವ ದೇವಸ್ಥಾನಗಳಲ್ಲಿಯೂ ಕಂಡು ಬರುವುದಿಲ್ಲ. ಪ್ರವೇಶದ್ವಾರದ ಪಕ್ಕದಲ್ಲಿಯೇ ಇತ್ತೀಚಿಗೆ ಮತ್ತೊಂದು ದ್ವಾರ ನಿರ್ಮಿಸಲಾಗಿದೆ.

ಪೂರ್ವದ ಪ್ರವೇಶ ದ್ವಾರವನ್ನು ದಾಟಿ ಒಳಗೆ ಹೋದಾಗ ವಿಶಾಲ ಆವರಣದಲ್ಲಿ ನಿರ್ಮಿಸಿರುವ ಕಲ್ಯಾಣ ಮಂಟಪ ಸಿಗುತ್ತದೆ. ಅದರ ಮೂಲಕ ಹಾಯ್ದು ಪಶ್ಚಿಮದತ್ತ ಸಾಗಿದರೆ ಮಾಯವ್ವಳ ದೇವಾಲಯ

ಎದುರಾಗುತ್ತದೆ. ಮಂದಿರವು ತುಂಬಾ ಪ್ರಾಚೀನವಾದ ವಾಸ್ತು ಹೊಂದಿದ್ದು ಬಹಳಷ್ಟು ಸಲ ಜೀರ್ಣೋದ್ಧಾರಗೊಂಡಿರುವುದು. ಆದಾಗ್ಯೂ ಹಳೆಯ ಕಟ್ಟಡದ ಅವಶೇಷಗಳು ಅಲ್ಲಲ್ಲಿ, ಗೋಡೆಗಳಲ್ಲಿ ಇವತ್ತಿಗೂ ಕಂಡು ಬರುತ್ತವೆ. ಮುಖ್ಯದೇವಾಲಯವು ಮೂರು ಭಾಗಗಳನ್ನು ಹೊಂದಿದೆ. ಒಂದನೆಯದು ಪೂರ್ವ ಮುಖಮಂಟಪ, ಎರಡನೆಯದು ಗರ್ಭಗುಡಿ, ಮೂರನೆಯದು ಪಶ್ಚಿಮ ಮುಖಮಂಟಪ. ಗರ್ಭಗುಡಿಯ ಮೇಲೆ ಐದು ಸ್ಥರಗಳಲ್ಲಿ ಶಿಖರವನ್ನು ನಿರ್ಮಿಸಲಾಗಿದೆ. ಈಗ ಕಂಡು ಬರುವ ದೊಡ್ಡ ಶಿಖರವು ಮೊದಲಿನ ಕಿರಿದಾದ ಗುಡಿಯ ಮೇಲೆ ನಿರ್ಮಿಸಿದ್ದಾಗಿದೆ. ಗೋಪುರದ ಪ್ರತಿ ಸ್ಥರದಲ್ಲಿ ಕೋಷ್ಠಕಗಳನ್ನು ನಿರ್ಮಿಸಿ ಅಲ್ಲಿ ದೇವತೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಮೇಲ್ಭಾಗವು ಕುಂಭದಿಂದ ಅಲಂಕೃತಗೊಂಡಿದೆ. ದೇವಾಲಯದ ಸುತ್ತಲೂ ಒಳಭಾಗದಲ್ಲಿ ಪೌಳಿಗಳನ್ನು (ಕಮಾನು) ಹೊಂದಿದ್ದು. ಹೊರಭಾಗದ ಗೋಡೆಯು ಗುಡಿಯಷ್ಟೇ ಎತ್ತರವಾದ ಹೊರಗೋಡೆಯನ್ನು ಹೊಂದಿರುವುದು. ಬಹುಶಃ ಗೋಡೆ ಇಷ್ಟು ಎತ್ತರಕ್ಕೆರಲು ಕೃಷ್ಣಾ ನದಿಯ ಪ್ರವಾಹವೂ ಕಾರಣ ಇರಬಹುದು. ಊರ ಹಿರಿಯರ ಅಭಿಪ್ರಾಯದ ಪ್ರಕಾರ ನದಿಗೆ ಪ್ರವಾಹ ಬಂದಾಗ ನೀರು ದೇವಸ್ಥಾನದ ಕಟ್ಟೆಯವರೆಗೂ ಬಂದಿತ್ತೆಂಬುದು ತಿಳಿದು ಬರುತ್ತದೆ.

ಪೂರ್ವ ಮುಖಮಂಟಪದ ಎಡಗಡೆ ಕೋಷ್ಠದಲ್ಲಿ ಯೋಗನಾರಾಯಣನ ಕಪ್ಪುಶಿಲೆಯ ಸುಂದರ ವಿಗ್ರಹವಿದೆ. ಇಲ್ಲಿರುವ ಯೋಗನಾರಾಯಣನನ್ನು ಜನರು ಶಿವ (ಮಹಾದೇವ)ನೆಂದು ಕರೆಯುತ್ತಿದ್ದು, ಕೋಷ್ಠಕವು ಮೇಲೆ ಕಳಸವನ್ನು ಹೊಂದಿದೆ. ಅದರ ಮುಂದೆ ಶಿವಲಿಂಗ ಮತ್ತು ನಂದಿಗಳಿವೆ. ಎಡಗಡೆಗೆ ಇನ್ನೊಂದು ಕೊಷ್ಠಕವಿದ್ದು ಅಲ್ಲಿ ಕಾಡುಗಲ್ಲಿನ ಪಡೆಯಿದೆ. ಅದಕ್ಕೆ ಚಂದ್ರ (ಕೆಂಪು ಬಣ್ಣ) ಲೇಪಿಸಿದ್ದು, ಅದನ್ನು ಬ್ರಹ್ಮದೇವರೆಂದು ಕರೆಯುವರು. ಒಟ್ಟು ದೇವಸ್ಥಾನದಲ್ಲಿ ಐದು ಬ್ರಹ್ಮದೇವರುಗಳಿವೆ. ಅವೆಲ್ಲವೂ ಆಕಾರವಿಲ್ಲದ ಗುಂಡು ಕಲ್ಲುಗಳಾಗಿವೆ. ಮುಖಮಂಟಪಕ್ಕೆ ಮೂರು ಪೌಳಿಗಳಿವೆ. ನಡುವಿನ ಪೌಳಿಯ ಇಕ್ಕೆಲದಲ್ಲಿ ದ್ವಾರಪಾಲಕರ ಕಲ್ಲಿನ ಮೂರ್ತಿಗಳಿದ್ದು, ಅಲ್ಲಿಯೇ ಕೆಳಗೆ ಆನೆಯ ಪ್ರತಿಮೆಗಳಿವೆ. ದೇವಾಲಯದ ಒಳ ಪ್ರಾಂಗಣದಲ್ಲಿ ಎತ್ತರವಾದ ಮಂಟಪವಿದು, ಅದರ ಮೇಲ್ಭಾಗವನ್ನು ಪ್ಲಾಸ್ಟಿಕ ಶೀಟುಗಳಿಂದ ನಿರ್ಮಿಸಿದ್ದಾರೆ.

ಪೂರ್ವದಿಂದ ದೇವಸ್ಥಾನವನ್ನು ಪ್ರವೇಶಿಸಿದಾಗ ಎಡಗಡೆ ಒಂದು ತೊಟ್ಟಿಲು ಇರುವುದು. ಅದು ಹಿರಿದೇವಿಯ ತೊಟ್ಟಿಲೆಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಅದು ಗಾಣಿಗೇರ ಹಿರಾಬಾಯಿಯನ್ನು ಸಾಂಕೇತಿಸುವ ತೊಟ್ಟಿಲೆಂದು ಹೇಳುವರು. ತೊಟ್ಟಿಲು ಸಂತಾನದ ಸಂಕೇತವಾಗಿದ್ದು, ಮಕ್ಕಳಾಗದವರು ಅದನ್ನು ತೂಗಿ, ಮಕ್ಕಳಾಗುವಂತೆ ಬೇಡಿಕೆ ಸಲ್ಲಿಸುವರು. ಮಕ್ಕಳಾದಲ್ಲಿ ತೊಟ್ಟಿಲೊಂದನ್ನು ಕಟ್ಟಿ ಹರಕೆ ಕೊಡುವ ಪದ್ಧತಿ ಇಲ್ಲಿದೆ. ಗರ್ಭಗುಡಿಯಲ್ಲಿ ಪೂರ್ವಾಭಿಮುಖವಾಗಿರುವ ತ್ರಿಶೂಲ ಖಡ್ಗಧಾರಿಣಿಯಾದ ಹಿರಿದೇವಿಯ ವಿಗ್ರಹ ಸಿಗುತ್ತದೆ. ಇವಳೇ ಚಿಂಚಲಿಯ ಮೂಲ ಗ್ರಾಮದೇವತೆ ಹಿರಿದೇವಿ. ಮಾಯ್ವಿಳಿಗಿಂತ ಮೊದಲೂ ಇವಳಿಗೆ ಪೂಜೆ, ನೈವೆದ್ಯಗಳು ಅರ್ಪಿತವಾಗುತ್ತವೆ. ದೇವಿಯ ವಿಗ್ರಹದ ಎದುರು ಉತ್ತರಾಭಿಮುಖವಾಗಿ ಶಿವಲಿಂಗ, ಪಕ್ಕದಲ್ಲಿ ಪೂರ್ವಾಭಿಮುಖವಾಗಿ ನಂದಿ ವಿಗ್ರಹಗಳಿವೆ.

ಹಿರಿದೇವಿಯ ವಿಗ್ರಹದ ಹಿಂದೆ ಪ್ರಾಚೀನ ಶಿಲ್ಪವೊಂದಿದೆ. ಅದು ಆಕಾರದಲ್ಲಿ ಚಿಕ್ಕದಾಗಿದ್ದು, ಅದು ಭೈರವನ ಬಿಂಬದಂತೆ ಕಾಣುತ್ತದೆ. ಹಿರಿದೇವಿಯ ಮುಂದೆ ನಿಂತಾಗ ಉತ್ತರಮುಖಿಯಾದ ಪ್ರವೇಶದ್ವಾರ

ಕಾಣುತ್ತದೆ. ಅಲ್ಲಿಂದ ಒಳಹೋದಾಗ ಪಶ್ಚಿಮಕ್ಕೆ ಮುಖಮಾಡಿದ ಮಾಯವ್ವನ ವಿಗ್ರಹವಿದೆ. ಮಾಯವ್ವನ ದರ್ಶನ ಮಾಡಿ ಪಶ್ಚಿಮ ಬಾಗಿಲಿನಿಂದ ಹೊರಹೋಗಬಹುದು. ಆದರೆ ಜಾತ್ರೆ ಮತ್ತು ಉತ್ಸವಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಿರುವುದರಿಂದ ಸಾಮಾನ್ಯವಾಗಿ ಭಕ್ತರೆಲ್ಲರೂ ಪಶ್ಚಿಮದಲ್ಲಿರುವ ದ್ವಾರದಿಂದಲೇ ಮಾಯವ್ವನ ದರ್ಶನ ಮಾಡುತ್ತಾರೆ. ಪಶ್ಚಿಮ ದ್ವಾರದ ಎದುರು ಚಿಕ್ಕದಾದ ಮುಖಮಂಟಪವಿದೆ. ಇದು ದ್ವಿಕುಟಾಚಲ ಮಾದರಿಯಲ್ಲಿದೆ. ಮಾಯವ್ವಳಿಗೆ ಪಶ್ಚಿಮದ್ವಾರವಾದರೆ, ಹಿರಿದೇವಿಗೆ ಪೂರ್ವದ್ವಾರ.

ಸರಳ ವಾಸ್ತು ವಿನ್ಯಾಸವನ್ನು ಹೊಂದಿರುವ ಈ ದೇವಾಲಯದ ವಿಶೇಷತೆಯೆಂದರೆ, ಪೂರ್ವ ಹಾಗೂ ಪಶ್ಚಿಮ ದಿಕ್ಕಿನಲ್ಲಿರುವ ಎರಡು ಪ್ರವೇಶದ್ವಾರಗಳು. ಪೂರ್ವದ್ವಾರದ ಮುಖಮಂಟಪ ವಿಶಾಲವಾಗಿದ್ದರೆ, ಪಶ್ಚಿಮದ್ವಾರದ ಮುಖಮಂಟಪ ಚಿಕ್ಕದು. ಗರ್ಭಗುಡಿಯ ದಕ್ಷಿಣಕ್ಕೊಂದು ಕಿರಿದಾದ ದ್ವಾರ ಕಂಡು ಬರುತ್ತದೆ. ಗುಡಿಯಲ್ಲಿ ತುಳಸಿಯ ಕಟ್ಟೆಗಳು ಸಾಂದರ್ಭಿಕ ಮಹತ್ವವನ್ನು ಪಡೆದುಕೊಂಡಿವೆ. ದೇವಿಯ ಉತ್ಸವ ಪಲ್ಲಕ್ಕಿಯನ್ನು ಸುರಕ್ಷಿತವಾಗಿಡಲು ಆವರಣದಲ್ಲಿಯೇ ಪಲ್ಲಕ್ಕಿ ಕೋಣೆ ಇದೆ. ಬೇರೆಲ್ಲ ದೇವಸ್ಥಾನಗಳಲ್ಲಿ ಇರುವಂತೆ ಇಲ್ಲಿಯೂ ದೇವಾಲಯದ ಸುತ್ತ ಪ್ರದಕ್ಷಿಣಾ ಪಥವನ್ನು ನಿರ್ಮಿಸಲಾಗಿದೆ.

ಮಾಯವ್ವಾ ದೇವಿಯ ಮೂರ್ತಿ :

ಅರ್ಧನಾರಿಶ್ವರ ರೂಪದ ಮಾಯಕ್ಕಾ ದೇವಿಯು ಸ್ತ್ರೀ-ಪುರುಷ ಈರ್ವರ ಲಕ್ಷಣಗಳನ್ನು ಹೊಂದಿದ್ದಾಳೆ. ದೇವಿಯ ಮೂರ್ತಿ ಪಶ್ಚಿಮಕ್ಕೆ ಮುಖ ಮಾಡಿದೆ. ಕಪ್ಪು ಶಿಲೆಯಲ್ಲಿರುವ ದೇವಿಯ ಮೂರ್ತಿ ೩ ಅಡಿ ಎತ್ತರವಿದ್ದು ಆಕರ್ಷಕವಾಗಿದ್ದು, ಮುಖ ಮಾತ್ರ ಕಾಣುತ್ತದೆ. ಉಳಿದೆಲ್ಲ ಭಾಗವು ಸೀರೆಯಿಂದ ಮುಚ್ಚಿರುವುದರಿಂದ ಕಾಣುವುದಿಲ್ಲ. ತಲೆಯ ಮೇಲೆ ಬಂಗಾರದ ಕಿರೀಟ, ಅದರ ಮೇಲೆ ಏಳು ಹೆಡೆಯ ಬೆಳ್ಳಿಯ ಸರ್ಪವಿದೆ. ಮೂರ್ತಿಯ ಹಿಂದೆ ಬೆಳ್ಳಿಯ ಬಳ್ಳಿಯ ಹೊದಿಕೆಯಿದೆ. ದೇವಿಗೆ ನಾಲ್ಕು ಕೈಗಳಿದ್ದು ಅವುಗಳು ಮೂಲ ಕೈಗಳಂತೆನಿಸದೆ, ಆ ನಂತರದಲ್ಲಿ ಮೂರ್ತಿಗೆ ಹೊಂದಿಸಿದಂತಿದೆ. ನಾಲ್ಕೂ ಕೈತುಂಬಾ ಹಸಿರು ಮತ್ತು ಕೆಂಪು ಬಳೆಗಳು, ಮೈತುಂಬಾ ಚಿನ್ನದ ಒಡವೆಗಳು, ಬಲಗೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಪುಷ್ಪ ಮತ್ತೊಂದು ಕೈಯಲ್ಲಿ ತ್ರಿಶೂಲ ಮತ್ತು ಎಡಗೈಯಲ್ಲಿ ಹಾವು ಇದೆ. ದೇವಿಯ ಮುಖದಲ್ಲಿ ಮಾರುತಿ ಮೀಸೆ, ಕಣ್ಣುಬಟ್ಟು ತೋಡಿಸಲಾಗಿದೆ. ಹಣೆಯಲ್ಲಿ ವಿಭೂತಿ, ಲಲಾಟದಲ್ಲಿ ಶೋಭಿಸುವ ಕುಂಕುಮ, ಮೈತುಂಬ ಆಭರಣಗಳು, ಕೊರಳಲ್ಲಿ ಲಿಂಗ ಹೊಂದಿದ್ದು ವಿಶೇಷವಾಗಿದೆ. ಆದ್ದರಿಂದ ದೇವಿಯನ್ನು ಮಾಯವ್ವಾ, ಮಾಯ ಕಾರತಿ, ಮಹಾ ಕಾಳಿ, ಮಾಯಿ ಎಂದೆಲ್ಲ ಕರೆಯುತ್ತಾರೆ.

ಬೆನ್ನು ಪೂಜೆ :

"ಮೂರ್ತಿ ಹಾಗೂ ಹಿಂಬದಿಯ ಗೋಡೆಯ ನಡುವೆ ಒಂದೆರಡು ಅಡಿ ಅಂತರವಿದ್ದು, ಪೂಜಾರಿಗಳು, ಮೊದಲು ಹಿಂದಿನ ಗೋಡೆಗೆ ಪೂಜೆ ಸಲ್ಲಿಸಿ, ನಂತರ ಮಾಯವ್ವನ ಪೂಜೆ ಮಾಡುವುದು ಸಂಪ್ರದಾಯ. ಮಾಯವ್ವಾ ಗೋಡೆಯಲ್ಲಿ ಅಡಗಿದ್ದು, ಅವಳ ಬೆನ್ನು ಮಾತ್ರ ಕಾಣಿಸುವುದೆಂದು ಪ್ರತೀತಿ, ಅದಕ್ಕೆ ಅವಳದು ಬೆನ್ನುಪೂಜೆಯಂತೆ."[೪೫]

ಪೂಜಾ ವೈಶಿಷ್ಟ್ಯ :

ಮಾಯಕ್ಕಳ ಪೂಜಾ ವಿಧಾನವು ಸರಳವಾಗಿದೆ. ಪ್ರತಿದಿನ ಮುಂಜಾನೆ ೬ ಗಂಟೆಗೆ ಬೆಳಗಿನ ಪೂಜೆ ಮತ್ತು ಸಾಯಂಕಾಲ ೬ ಗಂಟೆಗೆ ಸಂಜೆಯ ದೇವಿಯ ನಡೆಯುತ್ತದೆ. ರವಿವಾರದಂದು ಅಭಿಷೇಕ ಮಾಡುವ ಪದ್ಧತಿಯಿದ್ದು, ಅಂದು ಮುಂಜಾನೆ ೯ ಗಂಟೆಯವರೆಗೆ ಪೂಜೆ ಜರಗುವುದು. ಕಾರಹುಣ್ಣಿಮೆಯಾದ ಐದನೆಯ ದಿನ ಮಾತ್ರ ಮಾವಿನಹಣ್ಣಿನ ಅಭಿಷೇಕದೊಂದಿಗೆ ಸಾಯಂಕಾಲ ಒಂದೇ (ವರ್ಷದಲ್ಲಿ ಒಂದು ದಿನ ಮಾತ್ರ) ಪೂಜೆ ಮಾಡಲಾಗುತ್ತದೆ.

ಪೂಜೆ ಮಾಡುವ ಪೂಜಾರಿಗಳು ಶ್ವೇತ ಪಂಚೆ (ಧೋತ್ರ) ಉಟ್ಟುಕೊಂಡು, ಹೆಗಲ ಮೇಲೆ ಕರಿಕಂಬಳಿ ಹಾಕಿಕೊಂಡು ದೇವಿಯ ಪೂಜೆ ಮಾಡುತ್ತಾರೆ. ಭಾರತ ಹುಣ್ಣಿಮೆಯಂದು ಜರುಗುವ ಜಾತ್ರೆಯಲ್ಲಿ ಹನ್ನೊಂದು ದಿನ ಪೂಜಾರಿಗಳು ಬಿಳಿ ನಿಲುವಂಗಿ ಧರಿಸಿಕೊಂಡು ಪೂಜೆ ಮಾಡುತ್ತಾರೆ ಮತ್ತು ದೇವಿಗೂ ಶ್ವೇತ ನಿಲುವಂಗಿಯನ್ನೇ ಹಾಕುತ್ತಾರೆ.

ಮಾಯವ್ವಳ ಬಂಗಾರದ ಪಲ್ಲಕ್ಕಿ :

ಮಾಯಕ್ಕಾ ದೇವಿಯ ಜಾತ್ರೆ ನಿಮಿತ್ಯ ನೂತನವಾಗಿ ನಿರ್ಮಿಸಲಾದ ಚಿನ್ನದ ಪಲ್ಲಕ್ಕಿಯನ್ನು ಮಾಯಕ್ಕಾ ದೇವಿ ದೇವಸ್ಥಾನ ಕಮಿಟಿಯವರು ೨೦೧೭ರ ಫೆಬ್ರುವರಿ ೧೨ರಂದು ಸಾವಿರಾರು ಭಕ್ತರ ಸಮ್ಮುಖದಲ್ಲಿ ಲೋಕಾರ್ಪಣೆ ಮಾಡಿದರು. ಮಾಯಕ್ಕಾ ದೇವಿಗೆ ಭಕ್ತರು ಹಾಗೂ ದಾನಿಗಳು ನೀಡಿದ ದೇಣಿಗೆಯಿಂದ ಸುಮಾರು ೪ ಕೀಲೋ ಬಂಗಾರ ಹಾಗೂ ೧೨ ಕೀಲೋ ಬೆಳ್ಳಿಯಿಂದ ಈ ಪಲ್ಲಕ್ಕಿಯನ್ನು ಮಾಡಲಾಗಿದೆ. ಮಹಾರಾಷ್ಟ್ರದ ಕೊಲ್ಹಾಪೂರದ ನುರಿತ ಅಕ್ಕಸಾಲಿಗರು ಸುಮಾರು ೨೫ ದಿನಗಳ ಕಾಲ ಪರಿಶ್ರಮಪಟ್ಟು ಇದನ್ನು ತಯಾರಿಸಿರುವರು. ಬಂಗಾರದ ಪಲ್ಲಕ್ಕಿಯನ್ನು ದೇವಸ್ಥಾನದ ಕಮಿಟಿ ಅಧ್ಯಕ್ಷ ಜಿತೇಂದ್ರ ಜಾಧವ ಮತ್ತವರ ಕುಟುಂಬ ಹಾಗೂ ಸದಸ್ಯರ ನೇತೃತ್ವದಲ್ಲಿ ಸಕಲ ವಿಧಿ ವಿಧಾನಗಳ ಮೂಲಕ ಹೋಮ, ಹವನಗಳೊಂದಿಗೆ ಪೂಜಾ ಕಾರ್ಯ ನೇರವೇರಿಸಿ ಭಕ್ತರ ಸಮ್ಮುಖ ದೇವಸ್ಥಾನಕ್ಕೆ ಹಸ್ತಾಂತರಿಸಲಾಗಿದೆ.

ಈ ಮೊದಲು ಮಾಯಕ್ಕಾ ದೇವಿಯ ಸುಮಾರು ೩೩ ಕೀಲೋ ತೂಕದ ಬೆಳ್ಳಿಯ ಪಲ್ಲಕ್ಕಿ ಇದ್ದು ಅದನ್ನು ಪ್ರತಿ ಭಾನುವಾರ, ಹುಣ್ಣಿಮೆ, ಕಾರಹುಣ್ಣಿಮೆ, ದೀಪಾವಳಿ. ಮಹಾನವಮಿ ಹಾಗೂ ಜಾತ್ರೆ-ಉತ್ಸವಗಳಲ್ಲಿ ಮಾಯಕ್ಕಾ ದೇವಿಯ ಉತ್ಸವ ಮೂರ್ತಿ ಹೊತ್ತು ಪಲ್ಲಕ್ಕಿ ಉತ್ಸವ ಜರಗುತ್ತಿತ್ತು. ಇನ್ನೂ ಮುಂದೆ ಮಾಯಕ್ಕಾದೇವಿಯ ಜಾತ್ರೆ, ದಸರಾ, ಕಾರಹುಣ್ಣಿಮೆಗಳಲ್ಲಿ ಚಿನ್ನದ ಪಲ್ಲಕ್ಕಿಯನ್ನು ದೇವಿಯ ಸೇವೆಗೆ ಬಳಸಿಕೊಂಡು, ಇನ್ನುಳಿದ ಸಂದರ್ಭಗಳಲ್ಲಿ ಬೆಳ್ಳಿ ಪಲ್ಲಕ್ಕಿ ಬಳಕೆಗೆ ನಿರ್ಧರಿಸಲಾಗಿದೆಯೆಂದು ದೇವಸ್ಥಾನ ಕಮೀಟಿಯವರು ತಿಳಿಸಿರುವರು.

ಪೂಜಾ ವಿಧಾನ :

ದೇವಿಯ ಪೂಜಾರಿಗಳು ಸಂಪ್ರದಾಯದಂತೆ ಹಾಲುಹಳ್ಳದಲ್ಲಿ ಮಡಿಸ್ನಾನ ಮಾಡಿ, ಹಾಲುಹಳ್ಳದಿಂದಲೇ ಬೆಳ್ಳಿಯ ಕೊಡದಲ್ಲಿ ಒರತೆಯ ನೀರು ತಂದು ಪೂಜಿಸುವರು. ದೇವಿಯ

ಮೂರ್ತಿಯನ್ನು ಸ್ನಾನ ಮಾಡಿಸಿ, ವಸ್ತ್ರಾಭರಣ ತೊಡಿಸಿ, ವಿಭೂತಿ-ಕುಂಕುಮ, ಗಂಧಲೇಪಿಸಿ, ಹೂ-ಹಾರಗಳನ್ನು ಹಾಕಿ ಅಂಲಕರಿಸುವರು. ಜಾತ್ರೆ-ಉತ್ಸವಗಳಲ್ಲಿ ಭಕ್ತರು ಹಣೆತುಂಬ ಲೇಪಿಸಿಕೊಳ್ಳುವ ಮತ್ತು ಹಾರಿಸುವ ಭಂಡಾರವನ್ನು ಮಾತ್ರ ದೇವಿಗೆ ಲೇಪಿಸದೇ ಇರುವುದು ಸೋಜಿಗದ ಸಂಗತಿ. ಧೂಪಾರತಿ, ಏಕಾರತಿಗಳನ್ನು ಬೆಳಗಿ, ಪಂಚಾರತಿ ಮಾಡಿ, ಕರ್ಪೂರ ಬೆಳಗಿ, ನೈವೇದ್ಯ ಅರ್ಪಿಸುವರು.

ರವಿವಾರ ಮಾಯವ್ವಳ ವಾರವಾಗಿದ್ದು, ಅಂದು ಅವಳಿಗೆ ವಿಶೇಷ ಪೂಜೆ, ಅಭಿಷೇಕ ನಡೆಯುತ್ತದೆ. ರವಿವಾರದ ಅಭಿಷೇಕದಂದು ಹಾಲುಹಳ್ಳದಿಂದ ತಂದ ನೀರನ್ನು ಕಾಯಿಸಿ, ದೇವಿಗೆ ಸ್ನಾನ ಮಾಡಿಸಿ ಪೂಜಾ ವಿಧಿಗಳನ್ನು ಪೂರೈಸುವರು. ಅಂದು ದೇವಿಯ ಪಲ್ಲಕ್ಕಿ ದೇವಸ್ಥಾನ ಸುತ್ತುವುದು. ಭಕ್ತರು ರವಿವಾರದಂದು ದೇವಿಯ ಹೆಸರಿನಲ್ಲಿ ಉಪವಾಸವನ್ನು ಕೈಕೊಳ್ಳುವರು.

ದೇವಿಯ ನೈವೇದ್ಯ :

ದೇವಿಗೆ ಚಪಾತಿ, ಅನ್ನ, ಬೆಲ್ಲ, ನೈವೇದ್ಯಗಳನ್ನು ಸಾಮಾನ್ಯವಾಗಿ ಪ್ರತಿದಿನ ಅರ್ಪಿಸಿದರೆ, ಅಮಾವಾಸ್ಯೆ-ಹುಣ್ಣಿಮೆಗಳಂದು ಹುಗ್ಗಿ, ಹೋಳಿಗೆ, ಬಾಳೆಹಣ್ಣಿನ ನೈವೇದ್ಯಗಳನ್ನು ಅರ್ಪಿಸುವರು. ಹಿರಿದೇವಿಗೆ ನೈವೇದ್ಯವನ್ನು ಅರ್ಪಿಸಿದ ಮೇಲೆಯೇ ಮಾಯವ್ವಳಿಗೆ ನೈವೇದ್ಯವನ್ನು ಅರ್ಪಿಸುವ ಸಂಪ್ರದಾವಿರುತ್ತದೆ. ಅಲ್ಲದೆ ಜಾತ್ರೆ, ಹಬ್ಬ, ಉತ್ಸವಗಳಲ್ಲಿ ಹುಗ್ಗಿ, ಹೋಳಿಗೆ, ಬಾಳೆಹಣ್ಣಿನ ನೈವೇದ್ಯಗಳನ್ನೆ ಮಹಾಪ್ರಸಾದವಾಗಿ ಭಕ್ತರಿಗೆ ಹಂಚಲಾಗುತ್ತದೆ. ದೇವಿಗೆ ಮಾಂಸಾಹಾರ ನಿಷಿದ್ಧವಾಗಿದೆ. ಪೂಜಾರಿಗಳಲ್ಲಿ ಹಾಗೂ ದೇವಾಲಯದ ಆವರಣದಲ್ಲಿ ಮಾಂಸಾಹಾರಕ್ಕೆ ಅವಕಾಶವಿಲ್ಲ. 'ಕೀಲ-ಕಟ್ಟ'ರ ಜಾತ್ರೆಯ ಸಂದರ್ಭದಲ್ಲಿ ಹರಿಮರಿ ಬಲಿ ಅರ್ಪಿಸಲಾಗುತ್ತದೆ. ಅದು ಕೀಲ-ಕಟ್ಟರಿಗೆ ಹೊರತು ಮಾಯಕ್ಕನಿಗಲ್ಲ.

ದೇವಿಯ ಪೂಜೆಯ ನಂತರ ದೇವಸ್ಥಾನದಲ್ಲಿರುವ ಎಲ್ಲ ದೇವರುಗಳಿಗೆ ಧೂಪಾರತಿ ಸೇವೆ ನಡೆಯುತ್ತದೆ. ಧೂಪಾರತಿ ಹಿಡಿದು ಪೂಜಾರಿ ಗರ್ಭಗುಡಿಯಿಂದ ಹೊರಬಂದಾಗ, ಭಕ್ತರು ನೆಲದ ಮೇಲೆ ಮಲಗಿಕೊಳ್ಳುವರು. ಪೂಜಾರಿ ಅವರನ್ನು ದಾಟಿಕೊಂಡು ಹೋಗುತ್ತಾನೆ. ಈ ರೀತಿ ಮಾಡುವುದರಿಂದ ದೇವಿಯು ಯಾವಾಗಲೂ ತಮ್ಮನ್ನು ಬೆನ್ನಿಗೆ ಕಟ್ಟಿಕೊಂಡು ಸಂರಕ್ಷಿಸುತ್ತಾಳೆಂಬ ನಂಬಿಕೆ ಭಕ್ತ ವರ್ಗದವರಲ್ಲಿ ಮನೆಮಾಡಿಕೊಂಡಿದೆ.

ದೇವಿಯ ಮಲಗುವ ಗದ್ದಿಗೆ :

ದೇವತೆಗಳಿಗೆ ಹಾಸಿಗೆಯನ್ನು ಸಿದ್ದಗೊಳಿಸುವ ಸಂಪ್ರದಾಯ ಬಹಳಷ್ಟು ದೇವತೆಗಳಲ್ಲಿ ಕಂಡು ಬರುವುದಿಲ್ಲ. ಆದರೆ ಮಾಯವ್ವಳ ದೇವಸ್ಥಾನದಲ್ಲಿ ಇದು ಕಂಡು ಬರುತ್ತಿದ್ದು ವಿಶೇಷವಾಗಿದೆ. ದೇವಸ್ಥಾನದ ಗರ್ಭಗೃಹದಲ್ಲಿ ದೇವಿಯ ಮೂರ್ತಿ ಇದ್ದು, ಅದರ ಎಡ ಮೂಲೆಯಲ್ಲಿ ದೇವಿಯು ವಿಶ್ರಮಿಸುವ ಗದ್ದುಗೆ ಕಂಡು ಬರುತ್ತದೆ. ದೇವಿಯು ರಾತ್ರಿಯ ಹೊತ್ತು ನಿದ್ರಿಸುವ ಹಾಸಿಗೆ ಇದೆಂಬ ನಂಬಿಕೆ ಭಕ್ತರದ್ದು. ರಾತ್ರಿ ಹಾಸಿಗೆಯನ್ನು ಹೂ ಹಾಸಿ ಅಲಂಕಾರ ಮಾಡಲಾಗಿರುತ್ತದೆ. ಪಕ್ಕದಲ್ಲಿಯೇ ಹಾಲು, ತಾಂಬೂಲಗಳನ್ನು ಇಟ್ಟಿರುತ್ತಾರೆ.

ದೇವಿಯ ಪೂಜಾರಿಗಳು :

ಮಾಯವ್ವಳ ಪೂಜೆಯನ್ನು ಹಾಲುಮತ ಮತ್ತು ಲಿಂಗಾಯತ ಸಮಾಜದವರಿಬ್ಬರೂ ಸೇರಿ ಪಾಲಿನಿಂದ ಪೂಜಾ ಕಾರ್ಯ ನಡೆಸಿಕೊಂಡು ಹೋಗುತ್ತಿರುವುದು ಇಲ್ಲಿಯ ವಿಶೇಷ. ಇದು ಅನುವಂಶೀಯವಾಗಿ ಬೆಳೆದು ಬಂದಿರುವುದಾಗಿ ತಿಳಿದು ಬರುತ್ತದೆ. ಒಂದು ವಾರ ಕುರುಬರು ಪೂಜೆ ಮಾಡಿದರೆ ಮರುವಾರ ಲಿಂಗಾಯತರು ದೇವಿ ಪೂಜೆಯನ್ನು ಮಾಡುತ್ತಾರೆ. ಬುಧವಾರದಿಂದ ಬುಧವಾರಕ್ಕೆ ಪೂಜಾ ಹಕ್ಕು ಬದಲಾಗುತ್ತದೆ. ನಾಲ್ಕು ಕುರುಬರ ಮತ್ತು ನಾಲ್ಕು ಲಿಂಗಾಯತರ, ಒಟ್ಟು ಎಂಟು ಮನೆತನದವರು ದೇವಿಯ ಪೂಜಾ ಹಕ್ಕನ್ನು ಪಡೆದಿರುವರು. ಇದು ಒಂದು ವಿಧದಲ್ಲಿ ಜಾತಿ ಸಾಮರಸ್ಯದ ಸೂಚಕವು ಹೌದು ಮತ್ತು ಉಚ್ಚ ಮತ್ತು ಕೆಳವರ್ಗ (ಶಿಷ್ಟ-ಪರಿಶಿಷ್ಟ)ಗಳ ಸಮಾಗಮವು ಹೌದು.

ಪುರುಷರಿಗೆ ಮಾತ್ರ ದೇವಿಯನ್ನು ಪೂಜೆ ಮಾಡುವ ಅವಕಾಶವಿದೆ. ಹೆಣ್ಣು ಮಕ್ಕಳು ದೇವಿಯನ್ನು ಪೂಜಿಸುವುದಿಲ್ಲ. ಮದುವೆಯಾದ ಪೂಜಾರಿ ಮಾತ್ರ ಗದ್ದುಗೆ ಏರಲು ಅರ್ಹನೆಂಬ ವಿಧಿಯು ಇದೆ. ಮದುವೆಯಾಗದ ಪುರುಷರು ದೇವಿಯ ಜಗಲಿ ಮುಟ್ಟುವಂತಿಲ್ಲ. ಪೂಜಾರಿಗಳು ಈರುಳ್ಳಿ, ಬೆಳ್ಳುಳ್ಳಿ ಸೇವಿಸುವಂತಿಲ್ಲ. ಮಡಿಯಲ್ಲಿಯೇ ಪೂಜಿಸಬೇಕು. ಪೂಜಾರಿ ಮಾಂಸಾಹಾರವನ್ನು ಸೇವಿಸುವಂತಿಲ್ಲ. ಮನೆಯಲ್ಲಿ ಸೂತಕ ಬಂದಾಗ ದೇವಿಯ ಪೂಜೆಯನ್ನು ಮಾಡುವುದಿಲ್ಲ. ಆ ಸಮಯದಲ್ಲಿ ಬೇರೆ ಪೂಜಾರಿಗಳು ದೇವಿಯ ಪೂಜೆಯನ್ನು ನೇರವೇರಿಸುತ್ತಾರೆ. ಮದುವೆ ಮಾಡಿಕೊಂಡ ಯುವಕ ದೀಪಾವಳಿ ಅಥವಾ ಯುಗಾದಿ ಪಾಡ್ಯದಂದು ಪೂಜೆ ಮಾಡಿ, ದೇವಿಯನ್ನು ಪೂಜೆ ಮಾಡುವ ಅರ್ಹತೆಯನ್ನು ಪಡೆಯುತ್ತಾನೆ.

ದೇವಸ್ಥಾನದ ಉಸ್ತುವಾರಿಕೆ :

ಹಾಲುಮತ ಸಮುದಾಯದ ಆರಾಧ್ಯ ದೈವಗಳ ದೇವಸ್ಥಾನಗಳ ನಿರ್ವಹಣಾ ವ್ಯವಸ್ಥೆಯು ತನ್ನದೇ ಆದ ವ್ಯವಸ್ಥೆಯನ್ನು ಹೊಂದಿರುತ್ತದೆ. ದೇವಸ್ಥಾನದ ಒಟ್ಟು ಆಡಳಿತ ವ್ಯವಸ್ಥೆಯನ್ನು ಕಂಠಿಕಾರ(ಕಟ್ಟಿಕಾರ) ನೋಡಿಕೊಳ್ಳುತ್ತಾನೆ. ದೇವಾಲಯದ ಪೂಜೆ-ಪುನಸ್ಕಾರಗಳ ವ್ಯವಸ್ಥೆಯನ್ನು ಪೂಜಾರಿ ಮಾಡುತ್ತಾನೆ. ಜಾತ್ರೆ-ಉತ್ಸವಗಳಲ್ಲಿ ನಡೆಯುವ ರಂಗಸೇವೆ, ಮನರಂಜನೆ ಹಾಗೂ ಪಲ್ಲಕ್ಕಿ ಸೇವೆಗಳನ್ನು ಈರಗಾರರು ಮಾಡುತ್ತಾರೆ. ಇವರದು ಪೂಜಾರಿಗಳ ನಂತರದ ಸ್ಥಾನವಾಗಿದ್ದು ಪೂಜಾರಿಗಳ ಅನುಪಸ್ಥಿತಿಯಲ್ಲಿ ಅವರ ಎಲ್ಲಾ ಕೆಲಸ-ಕಾರ್ಯಗಳನ್ನು ಮಾಡಬೇಕಾಗುತ್ತದೆ. ದೇವಸ್ಥಾನದ ಉಸ್ತುವಾರಿಕೆಯಲ್ಲಿ ಪ್ರಮುಖ ಸ್ಥಾನವನ್ನು ನಿರ್ವಹಿಸುವವರು ಆಳುಮಕ್ಕಳು. ದೇವಸ್ಥಾನದಲ್ಲಿ ಆಳುಮಕ್ಕಳು ಮಾಡದ ಕೆಲಸವೇ ಇಲ್ಲ. ಎಲ್ಲ ಕೆಲಸಗಳಿಗೂ ಅವರು ಬೇಕು. ದೇವರ ಪೂಜೆ, ಹಬ್ಬ-ಉತ್ಸವ-ಜಾತ್ರೆಗಳ ಸಮಯದಲ್ಲಿ ದೇವಸ್ಥಾನವನ್ನು ಶುಚಿಗೊಳಿಸುವುದು, ಡೊಳ್ಳಿನ ಓಲಗವನ್ನು ಕಟ್ಟುವುದು, ಡೊಳ್ಳಿನ ಹಾಡು ಹಾಡುವುದು, ಕೈಪಟ್ಟು ಬಾರಿಸುವುದು, ಅಲಗ ಹಾಯುವ ಕಾರ್ಯಕ್ಕೆ ಬೇಕಾದ ಪೂರ್ವ ತಯಾರಿಯನ್ನು ಮಾಡುವುದು ಒಟ್ಟಿನಲ್ಲಿ ದೇವಸ್ಥಾನದಲ್ಲಿ ಜರುಗುವ ಎಲ್ಲಾ ಕಾರ್ಯಕ್ರಮಗಳ ಸೇವಾ ಕಾರ್ಯ ಇವರದಾಗಿರುತ್ತಾರೆ. ಹೀಗೆ ದೇವಸ್ಥಾನದ ಸೇವೆಯಲ್ಲಿ ತೊಡಗಿರುವ ಕಂಠಿಕಾರ, ಪೂಜಾರಿ, ಈರಗಾರ ಮತ್ತು ಆಳುಮಕ್ಕಳು ವಂಶ ಪಾರಂಪರೆಯಾಗಿ ದೇವಿಗಾಗಿ ತಮ್ಮ ಕಾಯಕವನ್ನು ಮಾಡುತ್ತಾ ಬಂದಿರುವರು.

ಈ ಎಲ್ಲಾ ವ್ಯವಸ್ಥೆಗಳ ಕೇಂದ್ರಬಿಂದುಗಳು ದೇವಿಯ ಭಕ್ತರು. ದೇವರು ಮತ್ತು ಭಕ್ತರು ಒಂದೇ ನಾಣ್ಯದ ಎರಡು ಮುಖಗಳು. ಭಕ್ತರಿದ್ದಲ್ಲಿ ದೇವರಿದ್ದಾನೆ. ದೇವರಿದ್ದಲ್ಲಿ ಭಕ್ತರಿದ್ದಾರೆ. ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು, ಭಕ್ತಿ-ಭಾವದಿಂದ ಹರಕೆಗಳನ್ನು ಸಲ್ಲಿಸಿ ಹರ್ಷೋದ್ಗಾರಗಳಿಂದ ಜೈಕಾರ ಹಾಕಿ ತಮ್ಮ ಭಕ್ತಿಯ ಪರಾಕಾಷ್ಠತೆಯನ್ನು ಮೆರೆಯುವವರು ಈ ಭಕ್ತರು. ಈ ಭಕ್ತಿವೃಂದ ಬೆಳೆದಂತೆ ದೇವಸ್ಥಾನದ ಮಹಿಮೆಯೂ ಬೆಳೆಯುವುದು. ದೇವಸ್ಥಾನದ ಮಹಿಮೆ ಬೆಳೆದಂತೆ ಭಕ್ತ ಸಮೂಹವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗುವುದು ಸಾಮಾನ್ಯ.

ಹೆಗಡೆಯರು :

ಹಾಲುಮತ ಸಮುದಾಯಕ್ಕೆ ಸೇರಿದ ಹೆಗಡೆಯವರು, ಮಾಯವ್ವಳ ಸೇವೆಯನ್ನು ಮಾಡುವ ಪ್ರಮುಖರಲ್ಲಿ ಒಬ್ಬರು. ದೇವಿಯ ದರ್ಶನಕ್ಕೆ ಬರುವ ಭಕ್ತರ ಹಣೆಗೆ ಭಂಡಾರವನ್ನು ಲೇಪಿಸುವುದು ಇವರ ಕಾಯಕ. ಬಿಳಿಯ ಅಂಗಿ ಮತ್ತು ಧೋತರವನ್ನು ಉಟ್ಟುಕೊಳ್ಳುವ ಇವರು ತಲೆಗೆ ಬಿಳಿ ಪೇಟಾವನ್ನು ಸುತ್ತಿಕೊಂಡಿರುತ್ತಾರೆ. ಬಲಗೈಯಲ್ಲಿ ಬೆಳ್ಳಿಯ ಕಡಗ, ಎಡಗಡೆ ಹೆಗಲಿಗೆ ಭಂಡಾರ ಚೀಲ, ಅದರ ಮೇಲೆ ಮಡಚಿದ ಕಂಬಳಿ ಹಾಕಿಕೊಳ್ಳುವರು. ಇವರು ಬಲಗೈಯಲ್ಲಿ ಭಂಡಾರವನ್ನು ಹಿಡಿದು, ದೇವಿಯ ದರ್ಶನಕ್ಕೆ ಬರುವ ಭಕ್ತರ ಹಣೆಗೆ ಭಂಡಾರ ಲೇಪಿಸುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಇವರು ತಲೆತಲಾಂತರದಿಂದ ದೇವಿಯ ಭಂಡಾರವನ್ನು ಭಕ್ತರಿಗೆ ಲೇಪಿಸುವ ಕಾಯಕವನ್ನು ಮಾಡುತ್ತ ಬಂದಿರುವರು. ಆದರೆ ದೇವಿಗೆ ಭಂಡಾರ ಅರ್ಪಣೆಯಾಗದೇ ಇರುವುದು ಸೋಜಿಗದ ಸಂಗತಿಯೇ ಹೌದು.

ದೀವಟಿಗೆ ಹಾಗೂ ಜಾಂಗಟೆಯವರು :

ದೀವಟಿಗೆಯವರು ದೀವಟಿಗೆ ಸೇವೆ ಮಾಡುವುದು ಮತ್ತು ಜಾಗಟೆಯವರು ಜಾಗಟೆಗಳನ್ನು ಬಾರಿಸುತ್ತ ಸೇವೆ ಮಾಡುವುದು ಮೈಲಾರಪ್ಪನ ಸಂಪ್ರದಾಯ. ಇಂತಹ ಸಂಪ್ರದಾಯ ಮಾಯವ್ವಳ ಆಚರಣೆಯಲ್ಲಿಯೂ ಕಂಡು ಬರುವುದು ವಿಶೇಷ. ಮಾಯವ್ವಳ ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಇವರು ದೇವಿಗೆ ಸೇವೆ ಸಲ್ಲಿಸುವುದು ಸಾಮಾನ್ಯವಾದುದು. ದೀವಟಿಗೆ ಸೇವೆಯ ಕಾಯಕವನ್ನು ತಲೆತಲಾಂತರದಿಂದ ಮಾಡಿಕೊಂಡು ಬಂದಿದ್ದರಿಂದಾಗಿ ಇವರ ಮನೆತನಕ್ಕೆ 'ದೀವಟೆ' ಎಂಬ ಹೆಸರು ಅಂಟಿಕೊಂಡಿದೆ. ಹಾಗೆಯೇ ಜಾಗಟೆ ಬಾರಿಸುವ ಸೇವೆ ಮಾಡುವ ಭಕ್ತರ ಮನೆತನಕ್ಕೆ 'ಜಂಗಟೆ' ಎಂಬ ಹೆಸರು ಅಂಟಿಕೊಂಡಿದೆ. ಈ ಎರಡು ಮನೆತನದವರು ಇಂದಿಗೂ ತಮ್ಮ ಸೇವೆಯನ್ನು ಚಾಚೂ ತಪ್ಪದೇ ಮಾಡಿಕೊಂಡು ಬರುತ್ತಿದ್ದಾರೆ.

ಗೊಂದಲಿಗರು :

ಮೂಲತಃ ಇವರು ಅಂಬಾ ಭವಾನಿಯ ಭಕ್ತರು. ಅದರೂ ಕೂಡ ಇವರು ಮಾಯವ್ವಳಿಗೆ ತಮ್ಮ ಸೇವೆಯನ್ನು ಅನಾದಿಕಾಲದಿಂದಲೂ ಸಲ್ಲಿಸುತ್ತಾ ಬಂದಿರುವರು. ಇವರು ವಿಶಿಷ್ಟವಾದ ವೇಷಭೂಷಣಗಳನ್ನು ತೊಟ್ಟುಕೊಂಡು ಸಂಬಾಳ, ಚೌಡಿಕೆ ಹಾಗೂ ತಾಳಗಳನ್ನು ನುಡಿಸುತ್ತಾ, ಗತ್ತಿನೊಂದಿಗೆ ಗದ್ಯ-ಪದ್ಯ ಮಿಶ್ರಣದೊಂದಿಗೆ ಮಾಯವ್ವ ದೇವಿಯ ಮಹಿಮೆಯನ್ನು ಸಾರುವ ಕಥೆ, ಉಪಕಥೆಗಳನ್ನು ಹೇಳುತ್ತ ಬೆಳಗಿನತನಕ ಜಾಗರಣೆ ಮಾಡುವ ಗೊಂದಲಿಗರದು ವಿಶಿಷ್ಟವಾದ ಸೇವೆಯಾಗಿದೆ.

ಸಿಂಗು–ಬೀರು :

ಮಾಯಕ್ಕಾ ದೇವಿಯ ಮೂರ್ತಿಯ ಎಡಭಾಗದಲ್ಲಿ ಕಟ್ಟಿಗೆಯ ಎರಡು ವಿಗ್ರಹಗಳು ವರ್ಷದಲ್ಲಿ ೪ ಬಾರಿ ಪೂಜೆಗೊಳ್ಳುತ್ತವೆ. ಇವರನ್ನು ಸಿಂಗು–ಬೀರು ಎಂದು ಇನ್ನೂ ಕೆಲವರು ಸಿಂಗಾಡಿ–ಸುಲತಾನ ಎಂದೂ ಕರೆಯುತ್ತಾರೆ. ಇವರು ಮಾಯಕ್ಕನ ತಮ್ಮಂದಿರೆಂದು ಜನ ಹೇಳುತ್ತಾರೆ. "ಇವರು 'ಶಿವ' ಮತ್ತು 'ಬ್ರಹ್ಮ' ಎಂದು ಹೇಳುವ ಪ್ರತೀತಿ ಇದೆ. ಸಿಂಗಾಡಿಯ ಕೀರಿಟದಲ್ಲಿ ಗಂಗೆಯ ಚಿತ್ರವಿರುವುದು ಸಿಂಗಾಡಿಯನ್ನು 'ಶಿವ' ಎಂದು ಹೇಳಿ ಸುಲತಾನ 'ಬ್ರಹ್ಮ', ಮಾಯಕ್ಕಾ 'ವಿಷ್ಣು' ಎಂದೂ ತ್ರಿಮೂರ್ತಿ ಕಲ್ಪನೆಯು ವ್ಯಕ್ತವಾಗುತ್ತದೆ."[೪೬] ಸಿಂಗು ತಲೆಯ ಮೇಲೆ ತ್ರಿಕೋನಾಕಾರದ ಉದ್ದದ ಟೋಪಿಗೆಯಿದ್ದರೆ, ಬೀರು ತಲೆಯ ಮೇಲೆ ಪಗಡಿಯಿದೆ. "ಇವರು ಬೀರಪ್ಪ–ಬಪ್ಪಣ್ಣ ಇರಬಹುದೆ? ತಿಳಿಯದು."[೪೭]

ನೂಲ ಹುಣ್ಣಿಮೆ, ಕಾರಹುಣ್ಣಿಮೆ, ಭಾರತ ಹುಣ್ಣಿಮೆ ಹಾಗೂ ದೀಪಾವಳಿಗಳಲ್ಲಿ ಮಾತ್ರ ಇವರನ್ನು ದೇವಿಯ ಜೊತೆ ಪೂಜಿಸಲಾಗುತ್ತದೆ. ಇನ್ನೂಳಿದ ಸಮಯದಲ್ಲಿ ಪೆಟ್ಟಿಗೆಯಲ್ಲಿಡುವರು. ಕಾರಹುಣ್ಣಿಮೆಯಲ್ಲಿ ಎರಡು ತಿಂಗಳ ಕಾಲ ಇವರನ್ನು ಪೂಜಿಸಲಾಗುತ್ತಿದ್ದು, ನೂಲಹುಣ್ಣಿಮೆ, ಭಾರತ ಹುಣ್ಣಿಮೆ ಹಾಗೂ ದೀಪಾವಳಿಗಳಂದು ಕೇವಲ ಐದು ದಿನಗಳವರೆಗೆ ಪೂಜಿಸಲಾಗುತ್ತದೆ.

ಮಾಯವ್ವನ ಪ್ರಾಣಿ ಸಂಕುಲ :

ಜನಪದ ದೇವತೆಗಳು ಭಕ್ತ ಸಂಕುಲದೊಂದಿಗೆ ಪ್ರಾಣಿ ಸಂಕುಲವನ್ನು ಹೊಂದಿವೆ. ಈ ಪ್ರಾಣಿ ಸಂಕುಲಗಳು ಆಯಾ ದೇವತೆಗಳ ಹಿನ್ನೆಲೆಯಿಂದ ಬಂದಿರುವಂತಹುಗಳು. ಇವುಗಳನ್ನು ಭಕ್ತರು ಭಕ್ತಿಯಿಂದ ಪೂಜಿಸುತ್ತಿದ್ದು ದೇವತೆಗಳಿಗೆ ಕೊಡುವಷ್ಟೇ ಪೂಜ್ಯನೀಯ ಸ್ಥಾನಮಾನಗಳನ್ನು ಈ ಪ್ರಾಣಿಗಳಿಗೂ ನೀಡುತ್ತಾರೆ. ಮಾಯವ್ವಳ ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳಲ್ಲಿ ಕೆಲವು ಪ್ರಾಣಿಗಳು ಪ್ರಾಮುಖ್ಯತೆಯನ್ನು ಪಡೆದು ಕೊಂಡಿವೆ. ಅವುಗಳಲ್ಲಿ ಮಾಯವ್ವನ ಕುದುರೆ, ಕಟ್ಲೆತ್ತು, ಗೂಳಿ ಮತ್ತು ಕುರಿಗಳು ಪ್ರಮುಖವಾದವುಗಳು.

ಮಾಯವ್ವನ ಕುದುರೆ :

ದೇವಿಯ ಮುಖ್ಯ ವಾಹನ ಕುದುರೆ. ಅವಳ ವಿಗ್ರಹಗಳು, ಪಲ್ಲಕ್ಕಿ, ಉತ್ಸವ ಮೂರ್ತಿ ಇವೆಲ್ಲವೂ ಅಶ್ವಾರೂಢ. ಹೀಗಾಗಿ ಮಾಯಕ್ಕನ ಕುದುರೆಗೆ ಆಕೆಯೊಂದಿಗೆ ಇಂದಿಗೂ ವಿಶಿಷ್ಟ ಮಹತ್ವ ನೀಡಲಾಗಿದೆ. ಮಾಯಕ್ಕಾ ದೇವಿಯ ಕುದುರೆ ಮೂರ್ತಿ ಇದ್ದು, ಭಕ್ತರು ಅದರ ಹಣೆಯ ಮೇಲೆ ಭಂಡಾರ ಲೇಪಿಸಿ, ತಮ್ಮ ಹಣೆಗೂ ಹಚ್ಚಿಕೊಳ್ಳುವುದು ವಾಡಿಕೆ. ಈ ಕುದುರೆ ಕೀಲ–ಕಟ್ಟ ರಾಕ್ಷಸರೊಂದಿಗೆ, ಮಾಯವ್ವ ಮಾಡಿದ ಯುದ್ಧದ ಸಂಕೇತವಾಗಿರಬಹುದು.

ಮಾಯವ್ವ ಕುದುರೆಯನ್ನೇರಿ ಸವಾರಿ ಮಾಡುತ್ತಾಳೆಂಬ ಬಲವಾದ ನಂಬಿಕೆ ಭಕ್ತರಲ್ಲಿದೆ. ಮಾಯವ್ವಳ ಕುದುರೆಯ ಕೊರಳಲ್ಲಿ ವಿವಿಧ ಬಗೆಯ ಬೆಳ್ಳಿಯ ಒಡವೆಗಳು, ಕಾಲಲ್ಲಿ ಬೆಳ್ಳಿಯ ಕಡಗ, ಬೆನ್ನ ಮೇಲೆ ಥಡಿ, ಅದರ ಮೇಲೆ ಇಳಿಬಿಟ್ಟ ರೇಷ್ಮೆಯ ಕೆಂಪು ಬಟ್ಟೆಯ ಉದ್ದನೆಯ ಗಲ್ಲಿಮ, ಹಣೆಗೆ ಹಣೆಪಟ್ಟಿ ಹೀಗೆ ವಿವಿಧ ಅಲಂಕಾರ ಮತ್ತು ಒಡವೆಗಳಿಂದ ಕುದುರೆಯನ್ನು ಶೃಂಗರಿಸಲಾಗಿರುತ್ತದೆ. ಉತ್ತಮ ತಳಿಯ ಕಾಟೆವಾಡದ ಕುದುರೆಯನ್ನೇ ದೇವಿಯ ವಾಹನವಾಗಿ ಆಯ್ಕೆ ಮಾಡಲಾಗಿರುತ್ತದೆ. ದೇವಾಲಯದ

ಪ್ರಾಂಗಣದಲ್ಲಿಯೇ ಇರುವ ಕುದುರೆಯನ್ನು ಭಕ್ತರು ಮುಟ್ಟುವುದು ನಿಷಿದ್ಧವಿದ್ದರೂ ಕೂಡ ಭಕ್ತರು ಕುದುರೆಯನ್ನು ಮುಟ್ಟಿ ನಮಸ್ಕರಿಸಿ ಅದರ ಹಣೆಯ ಮೇಲಿರುವ ಕುಂಕುಮ-ಭಂಡಾರವನ್ನು ತೆಗೆದುಕೊಂಡು ತಮ್ಮ ಹಣೆಗೆ ಹಚ್ಚಿಕೊಳ್ಳುವುದು ವಾಡಿಕೆ. ದೇವಿಗೆ ಸಲ್ಲಿಸುವ ಭಕ್ತಿಭಾವದ ನಮಸ್ಕಾರವನ್ನು ಅವಳ ವಾಹನವಾದ ಬಿಳಿಯ ಕುದುರೆಗೂ ಸಲ್ಲಿಸುವುದು ಇಲ್ಲಿಯ ವಿಶೇಷ. ಪ್ರಾಣಿ ಸಂಕುಲವನ್ನು ಕಾಪಾಡುವ ಸಹೃದಯ ಪ್ರೇಮವೇ ಕುದುರೆಯನ್ನು ಆರಾಧಿಸುವುದರ ಹಿಂದಿನ ಉದ್ದೇಶವಾಗಿರಬಹುದೇ? ಅಥವಾ ಕುರಿಗಾರರ ಸರಕು-ಸರಂಜಾಮುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಮತ್ತು ವಾಹನವು ಆದ ಕುದುರೆಗೆ ದೈವಿ ಸ್ವರೂಪವನ್ನು ನೀಡಿ ತಮ್ಮ ಆರಾಧ್ಯ ದೈವವಾದ ಮಾಯಕ್ಕಳ ಜೊತೆಯಲ್ಲಿ ಅದನ್ನು ಆರಾಧಿಸುವ ಪ್ರಯತ್ನವಾಗಿರಬಹುದೇ? ಎನ್ನುವುದು ಅಭ್ಯಸನೀಯ.

ಮಾಯವ್ವಳ ಸೇವೆಗಾಗಿ ಸದ್ಯವು ಒಂದು ಕುದುರೆಯಿದ್ದು, ಚಿಂಚಲೀಕರ (ಸರಕಾರ) ದೇಸಾಯಿ ಅದರ ಉಸ್ತುವಾರಿ ವಹಿಸಿಕೊಂಡಿದ್ದು, ಅವರ ಅರಮನೆಯ ಪಕ್ಕದ ಪಾಗಾದಲ್ಲಿಯೇ ಅದು ಇರುತ್ತದೆ. ಅದರ ವ್ಯವಸ್ಥೆಗೆ ಒಬ್ಬ ಸೇವಕ ನೇಮಕಗೊಂಡಿದ್ದಾನೆ. ಪ್ರತಿ ರವಿವಾರ ಮತ್ತು ಹಬ್ಬ-ಉತ್ಸವಗಳಲ್ಲಿ ಕುದುರೆ ಸಮೇತ ದೇವಿಯ ಪಲ್ಲಕ್ಕಿ ಗುಡಿಯನ್ನು ಐದು ಸುತ್ತು ಸುತ್ತುವುದು. ಕುದುರೆ ಪ್ರದಕ್ಷಿಣೆ ಹಾಕುವಾಗ ಭಕ್ತರು ಅದರ ಮುಂದೆ ಮಲಗುತ್ತಾರೆ. ಕುದುರೆ ಅವರನ್ನು ದಾಟಿಕೊಂಡು ಹೋಗುವುದು, ಅದನ್ನೇ ಭಕ್ತರು ಆಶೀರ್ವಾದವೆಂದು ತಿಳಿಯುತ್ತಾರೆ. ಭಕ್ತರು ಮಾಯವ್ವಳಿಗೆ ಸಲ್ಲಿಸುವ ವಿವಿಧ ಹರಕೆಗಳಲ್ಲಿ ಇದು ಕೂಡ ಒಂದು ಹರಕೆಯಾಗಿದೆ. ಪ್ರತಿವರ್ಷ ಕಾರಹುಣ್ಣಿಮೆಯಂದು ಕುದುರೆಯ ಮುಂದೆ ಹರಿಮರಿ ಕಡಿಯಲಾಗುತ್ತದೆ.

ಮಾಯವ್ವಳ ಕುದುರೆ ಮರಣ ಹೊಂದಿದಾಗ ದೇಸಾಯಿಯವರೇ ಮತ್ತೊಂದು ಕುದುರೆಯನ್ನು ಕೊಂಡು ತರುತ್ತಾರೆ. ಇತ್ತೀಚಿಗೆ ಮಾಯಕ್ಕಾ ದೇವಿಯ ಕುದುರೆ ಮರಣ ಹೊಂದಿದಾಗ, ಈಚೆಗೆಷ್ಟೇ ಮಹಾರಾಷ್ಟ್ರದಿಂದ ಹೊಸ ಕುದುರೆಯೊಂದನ್ನು ತರಲಾಗಿದ್ದು, ಚಿಂಚಲಿ ಪಟ್ಟಣದಲ್ಲಿ ಸಹಸ್ರಾರು ಭಕ್ತರು ಮೆರವಣಿಗೆ ಮೂಲಕ ಅದನ್ನು ಸ್ವಾಗತಿಸಿದ್ದು ಇಲ್ಲಿ ಉಲ್ಲೇಖನಿಯ.

ಮಾಯಕ್ಕನ ಕಟ್ಲೆತ್ತು :

ಮಾಯಕ್ಕಾದೇವಿ ಪಲ್ಲಕ್ಕಿ ಹಿಂದೆ ಕುದುರೆ ಜತೆ ಯಾವಾಗಲೂ ಕಟ್ಲೆತ್ತು ಇರುತ್ತವೆ. ಕುದುರೆ ಮಾಯವ್ವಳ ವಾಹನವಾದರೆ ಕಟ್ಲೆತ್ತು ಪೂಜಾರಿಯ ವಾಹನಗಳಾಗಿವೆ. ಎತ್ತನ್ನು ಭಕ್ತರು ತಮ್ಮ ಹರಕೆಯಂತೆ ದೇವಿಗೆ ಅರ್ಪಿಸಿರುತ್ತಾರೆ. ಮಾಯವ್ವಳ ಉತ್ಸವ ಮತ್ತು ಜಾತ್ರೆಗಳ ಸಮಯದಲ್ಲಿ ಪೂಜಾರಿಯು ಕೈಯಲ್ಲಿ ಬೆಳ್ಳಿ ಬೆತ್ತ ಹಿಡಿದುಕೊಂಡು ಕಟ್ಲೆತ್ತಿನ ಮೇಲೆ ಹತ್ತಿ ದೇವಿಯ ಪಲ್ಲಕ್ಕಿಯ ಹಿಂದೆ ಸಾಗುತ್ತಾನೆ. ಪೂಜಾರಿಗಳು ಕೆಲವು ಸಲ ದೂರ-ದೂರದ ಭಕ್ತರ ಮನೆಗೆ ತೆರಳಲು ಕೂಡ ಎತ್ತನ್ನು ಬಳಸುತ್ತಾರೆ. ಭಕ್ತರು ಎತ್ತನ್ನು ಬಹಳ ಗೌರವ ಮತ್ತು ಭಕ್ತಿಯಿಂದ ಕಾಣುತ್ತಾರೆ. ಹರಕೆ ಹೊತ್ತ ಕೆಲವು ಭಕ್ತರು ಹಸುವಿನ ಗಂಡು ಕರುಗಳನ್ನು ದೇವಿಯ ಹೆಸರಿನಲ್ಲಿ 'ಗೂಳಿ' ಬಿಡುವ ಪರಂಪರೆ ರೂಢಿಯಲ್ಲಿದೆ. ಇವುಗಳನ್ನು ಇತರ ಹಸುಗಳಂತೆ ಕಟ್ಟಿ ಹಾಕುವುದಿಲ್ಲ. ಸ್ವಚಂದವಾಗಿ ತಿರುಗಾಡುವ ಇವುಗಳು ಎಲ್ಲಂದರಲ್ಲಿ ಮುಕ್ತವಾಗಿ ತಿರುಗಾಡುತ್ತವೆ. ಇವುಗಳನ್ನು 'ಮಾಯಕ್ಕನ ಗೂಳಿ'ಯೆಂದು ಗೌರವಿಸುವುದರಿಂದ ಯಾರು ಇವುಗಳನ್ನು ಹಿಂಸಿಸುವುದಿಲ್ಲ.

ಸಂಪ್ರದಾಯದಂತೆ ಪಕ್ಕದ ಊರಿನ ಸುಟ್ಟಟ್ಟಿ ಗ್ರಾಮದ ಶಂಕರ ಸಿದ್ದಪ್ಪಾ ನಿಂಗನೂರೆ ಅವರ ಮನೆತನದ ಈ ಎತ್ತು ಕಾರ ಹುಣ್ಣಿಮೆ, ಮಹಾನವಮಿ (ದಸರಾ) ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ದೇವಿಯ ವಾಹನವಾದ ಕುದುರೆಯ ಜತೆ ದೇವಿಯ ಹಿಂದೆ ಸಾಗುತ್ತದೆ. ಇತ್ತೀಚಿಗೆ ದೇವಸ್ಥಾನದ ಎತ್ತು ತೀವ್ರ ಅನಾರೋಗ್ಯದಿಂದ ಬಳಲಿ ಅಕಾಲಿಕ ಮರಣ ಹೊಂದಿದಾಗ, ಸಕಲ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಅಂತ್ಯ ಸಂಸ್ಕಾರ ಮಾಡಲಾಯಿತು. ಸದ್ಯ ಹೊಸ ಎತ್ತೊಂದನ್ನು ತರುವ ಮೂಲಕ ಧಾರ್ಮಿಕ ವಿಧಿ ವಿಧಾನಗಳ ಕಾರ್ಯಕ್ರಮಗಳು ಸಾಂಗವಾಗಿ ನೇರವೇರಲು ವ್ಯವಸ್ಥೆ ಮಾಡಲಾಗಿದೆ.

ಮಾಯಕ್ಕನ ಕುರಿಗಳು :

ಮಾಯವ್ವ ಮೂಲತಃ ಕುರುಬರ ದೇವತೆ. ಯೌವ್ವನದ ಆರಂಭದಲ್ಲಿ ಮಾಯವ್ವ ಬಾಗೆನಾಡಿನ ಅರಣ್ಯದಲ್ಲಿ, ಸಾಕು ತಂದೆ ಕೊಟ್ಟ ಕುರಿಗಳನ್ನು ಕಾಯ್ದುವಳೇ? ಆ ನಂತರದಲ್ಲಿ ಕೀಲಕಟ್ಟ ರಾಕ್ಷಸರನ್ನು ಸಂಹಾರ ಮಾಡಿ ದೈವವಾಗಿ ಪೂಜಿಸಲ್ಪಟ್ಟವಳು. ಹೀಗಾಗಿ ಕುರಿ ಕಾಯುವ ಕುರುಬರಿಗೆಲ್ಲ ಮಾಯವ್ವ ಬಲು ಅಚ್ಚು-ಮೆಚ್ಚಿನ ದೇವತೆ. ತಮ್ಮ ಪರಂಪರೆಯಲ್ಲಿಯೇ ಬೆಳೆದು ಬಂದ ಮಾಯವ್ವಳಿಗೆ ಭಕ್ತಿಪೂರ್ವಕವಾಗಿ ಮತ್ತು ಗೌರವದ್ಯೋತಕವಾಗಿ ಕುರಿಗಾರರು ತಮ್ಮ ಹಿಂಡುಗಳಲ್ಲಿನ ಕೆಲವು ಕುರಿಗಳನ್ನು ದೇವಿಯ ಹೆಸರಿನಲ್ಲಿ ಮೀಸಲು ಬಿಡುವ ಸಂಪ್ರದಾಯವಿದೆ. ಇಂಥ ಕುರಿಗಳನ್ನು ತಮ್ಮ ಹಿಂಡುಗಳಲ್ಲಿಯೇ ಸಂರಕ್ಷಿಸಿ ಬೆಳೆಸುತ್ತಾರೆ. ಇಂಥ ಕುರಿಗಳ ಉಣ್ಣೆಯನ್ನು ದೇವಿಯ ಪಲ್ಲಕ್ಕಿ ಕೆಳಗೆ ಹಾಸುವ ಕಂಬಳಿ ತಯಾರಿಸಲು ಮತ್ತು ಜಾತ್ರೆ-ಉತ್ಸವಗಳಲ್ಲಿ ದೇವಿಯ ಪಲ್ಲಕ್ಕಿ ಮೇಲೆ ಹಾರಿಸಲು ಉಪಯೋಗಿಸುತ್ತಾರೆ. ಮೀಸಲು ಬಿಟ್ಟ ಕುರಿಗಳ ಹಾಲನ್ನು ದೇವಿಯ ನೈವೇದ್ಯಕ್ಕಾಗಿ ದೊಡ್ಡ-ದೊಡ್ಡ ಕೊಡಗಳಲ್ಲಿ ತುಂಬಿಕೊಂಡು ಬಂದು ದೇವಿಗೆ ಅರ್ಪಿಸುತ್ತಾರೆ. ಕೊನೆಯಲ್ಲಿ ಅವುಗಳನ್ನು ಮಾರಾಟ ಮಾಡಿ ಬಂದ ಹಣವನ್ನು ತಂದು ದೇವಸ್ಥಾನ ಕಮೀಟಿ ಸಲ್ಲಿಸುತ್ತಾರೆ. ಒಂದು ವೇಳೆ ಅಕಾಲಿಕವಾಗಿ ಕುರಿಗಳು ಸತ್ತರೆ ಅವುಗಳ ಚರ್ಮವನ್ನು ತಂದು ದೇವಸ್ಥಾನದಲ್ಲಿರುವ ಡೊಳ್ಳಿನ ಎಡ-ಬಲ ಬಂಕಗಳಿಗೆ ಉಪಯೋಗಿಸಲು ಕೊಡುತ್ತಾರೆ. ದೇವಿಗೆ ಮಾಂಸಾಹಾರ ನಿಷಿದ್ಧವಾದ್ದರಿಂದ ಕುರಿಯ ಬಲಿ ನಡೆಯುವುದಿಲ್ಲ.

ಮಾಯವ್ವಳ ಉತ್ಸವ ಮತ್ತು ಜಾತ್ರೆಗಳು :

ಮಾಯವ್ವ ದೇವಿಯ ಹೆಸರಿನಲ್ಲಿ ವರ್ಷದಲ್ಲಿ ಹಲವಾರು ಹಬ್ಬ-ಉತ್ಸವ-ಜಾತ್ರೆಗಳು ಆಚರಿಸಲ್ಪಡುತ್ತವೆ. ರವಿವಾರದಂದು ಸುತ್ತ-ಮುತ್ತಲಿನ ಭಕ್ತರಲ್ಲದೆ ದೂರ-ದೂರ ಸ್ಥಳಗಳಿಂದಲೂ ಭಕ್ತರು ದೇವಸ್ಥಾನಕ್ಕೆ ಆಗಮಿಸುತ್ತಾರೆ. ಪ್ರತಿ ಹುಣ್ಣಿಮೆಯಂದು ದೇವಿಯ ಸಣ್ಣ ಜಾತ್ರೆಯೇ ನೇರವೇರುತ್ತದೆ. ಕಾರ ಹುಣ್ಣಿಮೆ, ನೂಲ ಹುಣ್ಣಿಮೆ, ಮಹಾನವಮಿ ದೀಪಾವಳಿಗಳಂದು ಉತ್ಸವ ಮತ್ತು ಭಾರತ ಹುಣ್ಣಿಮೆಯಂದು ಐದು ದಿನಗಳ ದೊಡ್ಡ ಜಾತ್ರೆ ಜರುಗುತ್ತದೆ.

ಕಾರಹುಣ್ಣಿಮೆಯ ಪಲ್ಲಕ್ಕಿ ಉತ್ಸವ :

ಕಾರಹುಣ್ಣಿಮೆಯ ಹಬ್ಬದಂದು ಮಾಯಕ್ಕಾ ದೇವಿಗೆ ಅದ್ಧೂರಿ ಪೂಜೆ ಮತ್ತು ಸಕಲ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಸಂಖ್ಯ ಭಕ್ತರ ಮಧ್ಯೆ ಪಲ್ಲಕ್ಕಿ ಉತ್ಸವ ವೈಭವಯುತವಾಗಿ ನೇರವೇರುತ್ತದೆ.

ಕಾರಹುಣ್ಣಿಮೆಯೆಂದು ಭಕ್ತರು ಜಾಗರಣೆಯನ್ನು ಮಾಡುವರು. ಹುಣ್ಣಿಮೆಯ ಹಿಂದಿನ ದಿನ ಮಾಯವ್ವ ದೈತ್ಯರೊಡನೆ ಹೋರಾಡಿದ ದಿನವೆಂದು ಭಕ್ತರು ಹೇಳುವರು. ಆ ರಾತ್ರಿ ದೇವಿಯ ಪಲ್ಲಕ್ಕಿ ಊರ ಹೊರಗಿನ ಕಿಲಕಟ್ಟೆಗೆ ಬರುತ್ತದೆ. ರಾತ್ರಿಯೆಲ್ಲ ಜಾಗರಣೆ, ಕಾರ್ಯಕ್ರಮಗಳು ನಡೆಯುವವು. ಬೆಳಗು ಮುಂಜಾನೆಯ ಸಮಯಕ್ಕೆ ಪಲ್ಲಕ್ಕಿ ದೇವಸ್ಥಾನಕ್ಕೆ ಮರುಳುತ್ತದೆ. ಮತ್ತೆ ಮುಂಜಾನೆ ಹತ್ತು ಗಂಟೆಗೆ ಸಕಲ ವಾದ್ಯಮೇಳಗಳೊಂದಿಗೆ ದೇವಿಯ ಪಾಲಿಕೆ ಗರ್ಭಗುಡಿಯಿಂದ ಜಾತ್ರಾ ಸ್ಥಳದ ಮಾರ್ಗವಾಗಿ ಮೆರವಣಿಗೆ ಹೊರಟು ದೇವಿಯ ಪವಾಡ ಪ್ರಸಿದ್ಧ ಸ್ಥಳಗಳಲ್ಲಿ ಒಂದಾದ ಐತಿಹಾಸಿಕ ಹಾಲುಹಳ್ಳಕ್ಕೆ ಬಂದು ತಲಪುತ್ತದೆ. ನಂತರ ಪಲ್ಲಕ್ಕಿ ಉತ್ಸವವು ಉಣ್ಣೆ ಮುತ್ತೆಪ್ಪ(ಮಂಟೆಪ್ಪ)ನ ಕಲ್ಲುಗಳ ಮಾರ್ಗವಾಗಿ ಹಿಮ್ಮರಳಿ, ದೇವಿಯು ಕೀಲ ಮತ್ತು ಕಟ್ಟ ದೈತ್ಯರನ್ನು ಸಂಹರಿಸಿದ ಸ್ಥಳವಾದ ಒಳಗಿನ ಕೀಲಕಟ್ಟಿ ಹಾಗೂ ಹೊರಗಿನ ಕೀಲಕಟ್ಟಿಗಳನ್ನು ಪ್ರದಕ್ಷಿಣೆ ಹಾಕಿ ಪುನಃ ಗರ್ಭಗುಡಿ ಪ್ರವೇಶಿಸುವುದು. ನಂತರ ಶೃಂಗಾರಗೊಂಡ ಎತ್ತುಗಳು ಸಂಜೆಯ ವೇಳೆಯಲ್ಲಿ ಕಾರಹುಣ್ಣಿಮೆ ಕರಿಹರಿಯುವ ಕಾರ್ಯಕ್ರಮದೊಂದಿಗೆ ಉತ್ಸವವು ಕೊನೆಗೊಳ್ಳುವುದು.

ಹಲವು ದಶಕಗಳ ಸಂಪ್ರದಾಯದಂತೆ ನಡೆದು ಬರುತ್ತಿರುವ ಈ ಅದ್ದೂರಿ ಕಾರಹುಣ್ಣಿಮೆ ಕಾರ್ಯಕ್ರಮದಲ್ಲಿ ತಾಲೂಕು, ಜಿಲ್ಲೆ ಸೇರಿದಂತೆ ನೆರೆಯ ಮಹಾರಾಷ್ಟ್ರದ ಅಸಂಖ್ಯಾತ ಭಕ್ತರು ದೇವಿಯ ಪಲ್ಲಕ್ಕಿ ಉತ್ಸವದ ಮೆರವಣಿಗೆಯಲ್ಲಿ ಪಾಲ್ಗೊಂಡು ದೇವಿಗೆ 'ಮಾಯಕ್ಕಾಚಿ ನಾವ್ಹಾನಾ ಚಾಂಗಭಲೋ' ಎಂಬ ಘೋಷಣೆಗಳೊಂದಿಗೆ ಹರ್ಷೋದ್ಗಾರ ಘೋಷಣೆ ಮಾಡಿ ಸಂಭ್ರಮಿಸುವರು. ಭಕ್ತರು ದೇವಿಗೆ ಭಕ್ತಿಯಿಂದ ಹೋಳಿಗೆ, ಕಡಬು, ಅನ್ನ ಇತ್ಯಾದಿ ನೈವೇದ್ಯಗಳನ್ನು ಸಮರ್ಪಿಸಿ ಕೃತಾರ್ಥರಾಗುವರು. ಕೆಲ ಭಕ್ತರು ಪವಿತ್ರ ಹಾಲಹಳ್ಳದಲ್ಲಿ ಮಡಿಸ್ನಾನ ಮಾಡಿ ಹುಟ್ಟಿಗೆ ಉಟ್ಟು, ದೇವಿಗೆ ದೀರ್ಘದಂಡ ಪ್ರಣಾಮ ಸಲ್ಲಿಸುವರು. ಹೂವು, ಭಂಡಾರ, ಖಾರೀಕ, ಖೊಬ್ಬರಿ, ಹವಳ, ಮುತ್ತ ಹಾರಿಸಿ ತಮ್ಮ ಹರಕೆ ತೀರಿಸುವರು.

ದೇವಿಯ ನವರಾತ್ರಿ ಉತ್ಸವ :

ಉತ್ತರ ಕರ್ನಾಟಕದ ಪ್ರಸಿದ್ಧ ಶಕ್ತಿ ಪೀಠಗಳಲ್ಲಿ ಒಂದಾಗಿರುವ ಚಿಂಚಲಿಯ ಮಾಯಕ್ಕಾ ದೇವಿಯ ನವರಾತ್ರಿ ಉತ್ಸವ ಮೈಸೂರಿನಲ್ಲಿ ನಡೆಯುವ ದಸರಾದಷ್ಟೇ ಸಡಗರದಿಂದ ಆಚರಿಸಲಾಗುತ್ತದೆ. ಮಾಯಕ್ಕಾ ದೇವಿಯ ದೇವಸ್ಥಾನದಲ್ಲಿ ಒಂಭತ್ತು ದಿನಗಳ ಕಾಲ ನವರಾತ್ರಿ ಉತ್ಸವ ವೈವಿಧ್ಯಮಯವಾಗಿ ವಿವಿಧ ಧಾರ್ಮಿಕ ವಿಧಿಗಳೊಂದಿಗೆ ಸಂಭ್ರಮದಿಂದ ಆಚರಿಸಲಾಗುತ್ತದೆ. ಈ ಉತ್ಸವವು ದೇವಸ್ಥಾನದಲ್ಲಿ ಘಟಸ್ಥಾಪನೆ ಮೂಲಕ ಪ್ರಾರಂಭವಾಗುತ್ತದೆ. ಘಟಸ್ಥಾಪನೆಯ ನಂತರ ದೇವಿಯ ದರ್ಶನಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತ ಸಮೂಹ ಹರಿದು ಬರುತ್ತದೆ.

ಐತಿಹಾಸಿಕ ಹಾಗೂ ಪೌರಾಣಿಕ ಕಥೆಗಳ ಜಾಡನ್ನು ಹೊಂದಿರುವ ಮಾಯಕ್ಕಾ ದೇವಿಯು ದೈತ್ಯ ರಾಕ್ಷಸರನ್ನು ಸಂಹಾರ ಮಾಡುವ ಶಕ್ತಿಯನ್ನು ಕಠಿಣ ತಪಸ್ಸಿನಿಂದ ಸಾಧಿಸಿ, ಈ ಪ್ರದೇಶದಲ್ಲಿನ ಅಸಂಖ್ಯ ಭಕ್ತ ಸಮೂಹವನ್ನು ಹೊಂದಿರುವವಳಾಗಿದ್ದು, ಈ ನಿಟ್ಟಿನಲ್ಲಿ ವಿಜಯ ದಶಮಿ ಹಬ್ಬವನ್ನು ಒಂಭತ್ತು ದಿನಗಳ ಕಾಲ ವಿವಿಧ ರೂಪಗಳಲ್ಲಿ ಅಲಂಕರಿಸಿ ಪೂಜೆ ನೆರವೇರಿಸುವ ವಿಧಿಗಳು ಸಂಪ್ರದಾಯ ಬದ್ಧವಾಗಿ ಜರಗುತ್ತವೆ. ಪ್ರತಿದಿನ ಬೆಳಿಗ್ಗೆ ಹಾಗೂ ರಾತ್ರಿ ನಡೆಯುವ ವಿಶೇಷ ಪೂಜೆಗೆ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ

ಅಸಂಖ್ಯಾತ ಭಕ್ತರು ಆಗಮಿಸುತ್ತಾರೆ. ದೇವಸ್ಥಾನದ ಪೌಳಿಯಲ್ಲಿ ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನಕ್ಕೆ ಜನ ಕಾತರದಿಂದ ಕಾಯುತ್ತಾರೆ.

ವಿವಿಧ ರೂಪಗಳಲ್ಲಿ ದೇವಿ ಪೂಜೆ :

ಮಾಯಕ್ಕಾ ದೇವಿಯನ್ನು ಭಕ್ತಿಪೂರ್ವಕವಾಗಿ ಆರಾಧಿಸುವುದರಿಂದ ದೇವಿಯು ಸಂಕಷ್ಟ ಪರಿಹರಿಸಿ ಸುಖ ಸಮೃದ್ಧಿ ಕರುಣಿಸುತ್ತಾಳೆಂಬ ಗಾಢವಾದ ನಂಬಿಕೆ ಭಕ್ತ ಸಮೂಹದಲ್ಲಿದೆ. ನವರಾತ್ರಿ ಉತ್ಸವದ ನಿಮಿತ್ತ ದೇವಿಗೆ ಮುಂಜಾನೆ ಹಾಗೂ ಸಂಜೆ ವಿಶೇಷ ಪೂಜೆಯ ಸಲ್ಲಿಸುವರು. ದೇವಿಯನ್ನು ಕುದುರೆ, ನವಿಲು, ಹುಲಿ, ಸಿಂಹಾರೂಢಳಾಗಿ ರಾಕ್ಷಸನನ್ನು ಸಂಹಾರ ಮಾಡುತ್ತಿರುವ ವಿನ್ಯಾಸದಲ್ಲಿ ಬಹು ವೈಶಿಷ್ಟ್ಯವಾಗಿ ಪೂಜಿಸುವರು. ಪೂಜಾಲಂಕಾರ ನೋಡಲು ದೇವಸ್ಥಾನಕ್ಕೆ ಅಪಾರ ಪ್ರಮಾಣದ ಭಕ್ತರ ದಂಡು ದಿನಂಪ್ರತಿ ಬರುತ್ತದೆ. ನವರಾತ್ರಿಯ ಸಮಯದಲ್ಲಿ ದೇವಸ್ಥಾನಕ್ಕೆ ಬಂದು ಎಣ್ಣೆ ದೀಪ ಹಚ್ಚುವುದು ಭಕ್ತರ ವಾಡಿಕೆ. ದೇವಿಗೆ ವಿಶೇಷವಾದ ಉಡುಪು ಸೀರೆಗಳನ್ನು ಮುಡುಪಾಗಿ ನೀಡುವ ಭಕ್ತರು ತಮ್ಮ ಹರಕೆ ತೀರಿಸಿಕೊಂಡು ಪುನೀತರಾಗಿ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

ವೈಭವದ ಪಲ್ಲಕ್ಕಿ ಉತ್ಸವ ಮತ್ತು ದೇವಿಯ ಜಾಗೃತ ಸ್ಥಳಗಳಿಗೆ ಭೇಟ್ಟಿ :

ದಸರಾ ಉತ್ಸವದ ಅಂಗವಾಗಿ ಒಂಭತ್ತನೆಯ ದಿನದಂದು ಸಂಜೆ ಮಾಯಕ್ಕಾ ದೇವಿಯ ಪಾಲಕಿ ಹಾಗೂ ದೇವಿಯ ಮುಖ್ಯ ವಾಹನವಾದ ಕುದುರೆ, ಕಟ್ಲೆತ್ತು, ಭಕ್ತರು, ಪೂಜಾರಿಗಳು ಮಂಗಳವಾದ್ಯಗಳೊಂದಿಗೆ ಊರ ಮಧ್ಯದ ಮರಗವ್ವನ ಗುಡಿಗೆ ಬರುವರು. ಊರಿನ ದೇಸಾಯಿ ಬಂದು ಅಪ್ಪಣೆ ಕೊಟ್ಟಾಗ ಈರಗಾರರು ಅಲಗ ಹಾಯುವರು. ಜೋಗುತಿಯರು ಜೋಗ ಹಾಕುವರು. ಹತ್ತು ಸಾವಿರಕ್ಕೂ ಹೆಚ್ಚು ದೀವಟಿಗೆಗಳು ಹೊತ್ತಿಕೊಂಡಿರುತ್ತವೆ. ಎಲ್ಲೆಲ್ಲೂ ಬೆಳಕೇ ಬೆಳಕು. ಗ್ರಾಮದಲ್ಲಿ ಇರುವ ದೇವಿಯ ವಿವಿಧ ಜಾಗೃತ ಸ್ಥಳಗಳಲ್ಲಿ ಸುಮಾರು ೧೦ ಕಿ. ಮೀ. ವರೆಗೆ ನಿರಂತರವಾಗಿ ಓಡುತ್ತಾ ಆಕರ್ಷಕ ಮೆರವಣಿಗೆ ನಡೆಯುತ್ತದೆ. ಮೆರವಣಿಗೆಯಲ್ಲಿ ಸುತ್ತ-ಮುತ್ತಲಿನ ಹಳ್ಳಿಗಳಿಂದ ಆಗಮಿಸಿದ ವಿವಿಧ ಜಾನಪದ ರೂಪಕಗಳು ಮತ್ತು ವಾದ್ಯ ಮೇಳಗಳು ಪಾಲ್ಗೊಂಡಿರುತ್ತವೆ. ದೇವಿಯ ಪಲ್ಲಕ್ಕಿಯು ಬಂಗಾರ ಗಿಡ, ಖ್ವಾರಿಕೊಪ್ಪ, ಕರಗುತ್ತಿ, ಎಡಿ ಮಾಯವ್ವಾ, ಗುಡತಾಯಿ ಮೊದಲಾದ ಜಾಗೃತ ಸ್ಥಳಗಳಲ್ಲಿ ಸುತ್ತಿಕೊಂಡು ಸೀಮೋಲ್ಲಂಘನ ಮಾಡುತ್ತದೆ. ಎಲ್ಲರೂ ಬಂಗಾರ ಗಿಡದತ್ತ ಧಾವಿಸಿ ಬನ್ನಿ ಮುಡಿಯುವರು. ಊರ ಹೊರಗಿನ ಕಿಲಕಟ್ಟೆಗೆ ಪಲ್ಲಕ್ಕಿ ಬರುವಾಗ, ರಸ್ತೆಯ ಎರಡೂ ಬದಿಗಳಲ್ಲಿ ಸುಮಂಗಲಿಯರು ಆರತಿ ಹಿಡಿದು ನಿಂತಿರುತ್ತಾರೆ. ಗ್ರಾಮ ಸೇರಿದಂತೆ ಸುತ್ತ-ಮುತ್ತಲಿನ ಸಾವಿರಾರು ಭಕ್ತರ ಮಧ್ಯದಲ್ಲಿ ಪಲ್ಲಕ್ಕಿ ಮೆರವಣಿಗೆಯೂ ಸಕಲ ವಾದ್ಯ ಮೇಳದೊಂದಿಗೆ, ಪಟಾಕಿ ಸಿಡಿಮದ್ದು ಹಾಗೂ ಸುರಬಾನಗಳನ್ನು ಹಾರಿಸುತ್ತಾ ಬೆಳಕಿನ ದೀವಟಿಗೆಯನ್ನು ಹಿಡಿದು ಓಡುತ್ತಾ ಪ್ರದಕ್ಷಿಣೆ ಹಾಕುತ್ತಾ ಮರಳಿ ದೇವಸ್ಥಾನಕ್ಕೆ ಬರುವ ದೃಶ್ಯ ನಯನ ಮನೋಹರವಾಗಿರುತ್ತದೆ. ಪಲ್ಲಕ್ಕಿ ದೇವಸ್ಥಾನಕ್ಕೆ ಬಂದು ತಲುಪಿದ ಮೇಲೆ ಭಕ್ತರು ಮಾಯವ್ವಳಿಗೆ ಬನ್ನಿ ಅರ್ಪಿಸಿದ ಅನಂತರವೇ ಬೇರೆಯವರಿಗೆ ಬನ್ನಿ ಕೊಡುತ್ತಾರೆ.

ನವರಾತ್ರಿ ಉತ್ಸವದ ಕೊನೆಯ ಮೆರವಣಿಗೆಯಲ್ಲಿ ಸುತ್ತ-ಮುತ್ತಲಿನ ಹಳ್ಳಿಗಳಿಂದ ಆಗಮಿಸುವ ವಿವಿಧ ಜಾನಪದ ರೂಪಕಗಳು ಮತ್ತು ವಾದ್ಯ ಮೇಳಗಳು ಸಾಲು ಸಾಲಾಗಿ ಸೇರುತ್ತವೆ. ಭಕ್ತ ಸಮೂಹವೆಲ್ಲ ಭಕ್ತಿಪೂರ್ವಕವಾಗಿ "ಚಾಂಗ್ ಭಲೋ. ಹೋಕ್ ಭಲೋ", "ಮಾಯಕ್ಕಾ ದೇವಿ ನಾಂವ್ಚಾ ಚಾಂಗ್ ಭಲೋ" ಎಂದು ಕೂಗುವ ಜಯ ಘೋಷಗಳು ಮುಗಿಲು ಮುಟ್ಟುತ್ತವೆ. ಬಳಿಕ ಗ್ರಾಮಸ್ಥರೆಲ್ಲರೂ ಪರಸ್ಪರ ಬನ್ನಿ ನೀಡಿ "ಬನ್ನಿ ತಗೊಂಡ ಬಂಗಾರದಂತಿರೋಣ" ಎಂದು ಸಂತೋಷದಿಂದ ದಸರಾ ಹಬ್ಬವನ್ನು ಆಚರಿಸುತ್ತಾರೆ. ಮಾಯಕ್ಕಾ ದೇವಿಯ ನವರಾತ್ರಿ ಉತ್ಸವವನ್ನು ಮೈಸೂರಿನ ದಸರಾದಂತೆ ಆಚರಿಸಲು ರಾಜ್ಯ ಸರ್ಕಾರ ವಿಶೇಷ ಧನ ಸಹಾಯ ಮಾಡಬೇಕೆಂಬುದು ದೇವಸ್ಥಾನ ಕಮೀಟಿಯವರ ಒತ್ತಾಯವಾಗಿದೆ.

ಭಾರತ ಹುಣ್ಣಿಮೆಯ ಜಾತ್ರೆ :

ಮಾಯಕ್ಕಾ ದೇವಿಯ ಜಾತ್ರೆ ಪ್ರತಿ ವರ್ಷ ಭಾರತ ಹುಣ್ಣಿಮೆಯ ನಂತರ ಬರುವ ಹಸ್ತಾ ನಕ್ಷತ್ರದ ಶುಭ ಗಳಿಗೆಯಲ್ಲಿ ಜರುಗುತ್ತದೆ. ವರ್ಷದ ಹನ್ನೆರಡು ಹುಣ್ಣಿಮೆಗಳಲ್ಲಿ ತರಳು ಬಾಳು (ಭಾರತ) ಹುಣ್ಣಿಮೆ ಶ್ರೀಕ್ಷೇತ್ರ ಮಾಯವ್ವ ದೇವಸ್ಥಾನದಲ್ಲಿ ಅತ್ಯಂತ ಮಹತ್ವವಾದ ಹುಣ್ಣಿಮೆಯಾಗಿದ್ದು, ನಿರೀಕ್ಷೆಗೂ ಮೀರಿ ಭಾರತ ಹುಣ್ಣಿಮೆಯಂದು ಅಪಾರ ಸಂಖ್ಯೆಯಲ್ಲಿ ಭಕ್ತ ಸಮೂಹ ಶ್ರೀಕ್ಷೇತ್ರದಲ್ಲಿ ಸೇರುತ್ತದೆ. ಹೀಗಾಗಿ ಬಾಗೆ ಪರಿಸರದಲ್ಲಿರುವ ಶ್ರೀ ಮಾಯಕ್ಕಾದೇವಿ ದೇವಸ್ಥಾನವು ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿ, ಭಕ್ತರ ಆಕರ್ಷಣೀಯ ತಾಣವಾಗಿ ಮಾರ್ಪಟ್ಟಿದೆ.

ಈ ಜಾತ್ರೆ ಉತ್ತರ ಕರ್ನಾಟಕದಲ್ಲಿಯೇ ದೊಡ್ಡ ಜಾತ್ರೆ. ಮುಂಗಾರಿ ಸುಗ್ಗಿ ಮುಗಿದು ಹಿಂಗಾರಿ ಮಾಗಿ ಶೃಂಗಾರವಾಗುವಾಗ ಮಾಯಕ್ಕಾದೇವಿಯ ಜಾತ್ರೆ ಸುಮಾರು ಒಂದು ತಿಂಗಳ ಕಾಲ ನಡೆಯುತ್ತದೆ. ದೇವಿ ದರ್ಶನಕ್ಕೆ ಭಕ್ತರ ಮಹಾಪೂರವೇ ಹರಿದು ಬರುತ್ತದೆ. ನಾಡಿನ ಮೂಲೆ-ಮೂಲೆಗಳಿಂದ ತಂಡೋಪತಂಡವಾಗಿ ಜಾತ್ರೆಗೆ ಆಗಮಿಸುತ್ತಿರುವ ಜನರಿಂದಾಗಿ ಎಲ್ಲಿ ನೋಡಿದರಲ್ಲಿ ಜನ ಜಾತ್ರೆಯೇ ಕಂಡು ಬರುತ್ತದೆ. ದೇವಸ್ಥಾನದ ಸುಮಾರು ಆರೇಳು ಕಿ. ಮೀ ಪ್ರದೇಶ ಕಿಕ್ಕಿರಿದು ತುಂಬುತ್ತದೆ. ಸಿಂಗಾರಗೊಂಡ ರಾಸುಗಳ ಎತ್ತಿನಗಾಡಿ ಹಾಗೂ ಕುದುರೆ ಬಂಡಿ, ರೈಲ್ವೆ, ಖಾಸಗಿ ಬಸ್, ಜೀಪು ಮುಂತಾದ ವಾಹನಗಳ ಮೂಲಕ ಲಕ್ಷಾಂತರ ಭಕ್ತರು ದೇವಸ್ಥಾನಕ್ಕೆ ಆಗಮಿಸುತ್ತಾರೆ. ಲಕ್ಷಾಂತರ ಭಕ್ತರು ಸೇರುವುದರೊಂದಿಗೆ ಒಂದು ತಿಂಗಳ ಕಾಲ ಅತ್ಯಂತ ಭಕ್ತಿ, ಸಡಗರ ಸಂಭ್ರಮದಿಂದ ಆಚರಿಸುವ ಅತೀ ದೊಡ್ಡ ಜಾತ್ರೆ ಇದಾಗಿದೆ. ಜಾತ್ರೆಗೆ ಬರುವ ಭಕ್ತರಲ್ಲಿ ಶೇ ೨೫ ರಷ್ಟು ಕರ್ನಾಟಕ ಮತ್ತು ಇತರ ರಾಜ್ಯದವರಾದರೆ ಇನ್ನೂಳಿದ ಶೇ ೭೫ ರಷ್ಟು ಮಹಾರಾಷ್ಟ್ರದವರು. ಅದರಲ್ಲಿ ಕೊಂಕಣದವರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಮಹಾರಾಷ್ಟ್ರ ಭಕ್ತರು, ಮೈದುಂಬಿದಂತೆ ಕುಣಿಯುತ್ತ, ಹಾಡುತ್ತ, ಭಂಡಾರ ತೂರುವುದನ್ನು ನೋಡುವುದೇ ಒಂದು ವಿಶೇಷ. ಅವರ ಹಾಡುಗಳ ಅಧ್ಯಯನದಿಂದಲೇ ಮಾಯವ್ವಳ ಚರಿತ್ರೆಯನ್ನು ತಿಳಿದುಕೊಳ್ಳಬೇಕಾಗುತ್ತದೆ.

ಏಳು ಮಕ್ಕಳ ತಾಯಿಯ ಪೂಜೆ :

ಭಾರತದ ಹುಣ್ಣಿಮೆಯ ದಿನದಂದು ಪ್ರಾರಂಭವಾಗುವ ಮಾಯವ್ವಳ ಜಾತ್ರೆಯು ಒಂದು ತಿಂಗಳ ಕಾಲ ನಡೆದರೂ ಕೂಡ, ದೇವಿಯ ವಿಶೇಷ ಆರಾಧನೆ ನಡೆಯುವುದು ಕೇವಲ ಐದು ದಿನಗಳು ಮಾತ್ರ. ಏಳು

ಮಕ್ಕಳ ತಾಯಿಗೆ ನೈವೇದ್ಯ ನೀಡಿ ಪೂಜೆ ಸಲ್ಲಿಸಿದ ನಂತರವೇ ಐದು ದಿನಗಳ ಜಾತ್ರೆಯು ಆರಂಭವಾಗುವುದು. ಜಾತ್ರೆಗೆ ಬರುವ ಭಕ್ತರು ವಿಶೇಷವಾಗಿ ಕೊಂಕಣದಿಂದ ಬರುವ ಭಕ್ತರು ಮೊದಲು ಕೃಷ್ಣಾ ನದಿಗೆ ಹೋಗಿ ಸ್ನಾನ ಮಾಡಿ ಮಡಿ ಹೊಂದುವರು. ನದಿ ದಡದಲ್ಲಿಯೇ ಒಲೆಯನ್ನು ಹೂಡಿ ಮಡಿಯಿಂದಲೇ ಹೋಳಿಗೆ ನೈವೇದ್ಯವನ್ನು ತಯಾರಿಸುವರು. ನದಿ ದಂಡೆಯ ಮೇಲೆ ಆಯತಾಕಾರದ ಒಂದು ತೆಪ್ಪವನ್ನು ತಯಾರಿಸುವರು. ತೆಪ್ಪದ ಮಧ್ಯದಲ್ಲಿ ಒಂದು ನೈವೇದ್ಯವನ್ನಿಟ್ಟು ಅದರ ಎಡ-ಬಲಗಳಲ್ಲಿ ಮೂರು-ಮೂರು ನೈವೇದ್ಯಗಳನ್ನಿಡುವರು. ಒಟ್ಟು ಏಳು ನೈವೇದ್ಯಗಳು ಅವುಗಳ ಮುಂದೆ ಅನ್ನ-ಮೊಸರದಿಂದ ಅಥವಾ ಕನಕದಿಂದ ಮಾಡಿದ ಏಳು ಆರತಿಗಳನ್ನಿಡುವರು. ನದಿಯ ದಡದಲ್ಲಿಯೇ ಇರುವ ಏಳು ಚಿಕ್ಕ-ಚಿಕ್ಕ ಬೆಣಚುಕಲ್ಲುಗಳನ್ನು ತಂದು ಆ ತೆಪ್ಪದ ಮುಂದೆ ಒಂದು ಸಾಲಿನಲ್ಲಿ ಐದು ಮತ್ತು ಅದರ ಎದುರಿನ ಸಾಲಿನಲ್ಲಿ ಎರಡು ಬೆಣಚು ಕಲ್ಲುಗಳನ್ನಿಟ್ಟು ಅವುಗಳಿಗೆ ಸುಣ್ಣ, ಕೆಂಪು ಮತ್ತು ಕರಿಯ ಬಣ್ಣವನ್ನು ವರ್ತುಳಾಕಾರದಲ್ಲಿ ಸವರುವರು. ಆ ಏಳು ದೇವತೆಗಳಿಗೆ ಭಕ್ತಿಭಾವದಿಂದ ಆರತಿಯನ್ನು ಮಾಡಿ ನೈವೇದ್ಯವನ್ನು ಹಿಡಿಯುವರು. ನಂತರ ಏಳು ನೈವೇದ್ಯ ಮತ್ತು ಏಳು ದೀಪಗಳಿರುವ ತೆಪ್ಪವನ್ನು "ಅಕ್ಕವ್ವಗ ಮಾಯವ್ವಗ ಚಾಂಗ ಬೋಲೊ" ಎಂದು ಜೈಕಾರ ಹಾಕುತ್ತಾ ನದಿಯಲ್ಲಿ ತೇಲಿ ಬಿಡುವರು. ಬಹುಶಃ ಈ ರೀತಿಯಾಗಿ ಆರಾಧನೆಗೊಳ್ಳುವವರು ಮಾಯವ್ವ ಮತ್ತವಳ ಆರು ಸಹೋದರಿಯರಾಗಿರಬಹುದೆಂಬ ಶಂಕೆ ವ್ಯಕ್ತವಾಗುತ್ತದೆ. ಮಾಯವ್ವ ಮತ್ತು ಅಕ್ಕಮ್ಮಳ ಜನನದ ತರುವಾಯ ಅವರ ತಂದೆ ತಾಯಿಯಿಂದಿರು, ಚಿಕ್ಕ ಮಕ್ಕಳನ್ನು ಕೃಷ್ಣಾ ನದಿಯಲ್ಲಿ, ಒಂದು ತೆಪ್ಪದಲ್ಲಿ ತೇಲಿ ಬಿಟ್ಟ ಸಂಗತಿಯನ್ನು ನೆನಪಿಸುವಂತಿದೆ ಅಥವಾ ತಂದೆ-ತಾಯಂದಿರಿಂದ ಬೇರ್ಪಟ್ಟು ಕೃಷ್ಣಾ ನದಿಯಲ್ಲಿ ತೇಲುತ್ತಾ ಬಾಗೆನಾಡಿಗೆ ಮಾಯವ್ವ ಬಂದಿರುವ ಸನ್ನಿವೇಶವನ್ನು ಇದು ನೆನಪಿಸುವಂತಿದೆ. ಹೀಗೆ ಏಳು ಮಂದಿ ಸ್ತ್ರೀ ದೇವತೆಗಳ ಪೂಜಾ ಕಾರ್ಯವನ್ನು ಮಾಡಿದ ನಂತರ ವಾದ್ಯಗಳನ್ನು ಊದಿಸುತ್ತ-ಬಾರಿಸುತ್ತ ಭಕ್ತರು ಮಾಯಕ್ಕನ ದೇವಸ್ಥಾನಕ್ಕೆ ಬರುವ ಸಂಪ್ರದಾಯವಿರುವುದು. ಮಾಯವ್ವ ದೇವತೆಗೆ ಹೊಸ ವಸ್ತ್ರ-ಒಡವೆಗಳನ್ನು ನೀಡಿ, ಭಕ್ತಿ-ಭಾವದಿಂದ ಕರ್ಪೂರ ಹಚ್ಚಿ, ಕಾಯಿ ಒಡೆದು, ದೇವಾಲಯವನ್ನು ಮೂರು ಸಲ ಪ್ರದಕ್ಷಿಣೆ ಹಾಕಿ ದೇವಿಯ ದರ್ಶನ ಪಡೆದು ತಮ್ಮ ಹರಕೆಯನ್ನು ಸಲ್ಲಿಸುವರು.

ಭಾರತ ಹುಣ್ಣಿಮೆಯ ಹಸ್ತಾ ನಕ್ಷತ್ರದಂದು ದೇವಿಯ ಮಹಾನೈವೇದ್ಯ (ಬಾನಾ) ಮತ್ತು ಅಂದೇ ಮಧ್ಯರಾತ್ರಿ ೧೨ ಗಂಟೆಗೆ ೩೩ ಕೆ. ಜಿ. ತೂಕದ ಬೆಳ್ಳಿ ಪಲ್ಲಕ್ಕಿಯಲ್ಲಿ ೪.೫ ಕೆ. ಜಿ. ಬಂಗಾರದ ಉತ್ಸವ ಮೂರ್ತಿ ಮತ್ತು ೨೫ ಕೆ. ಜಿ. ಯ ಎರಡು ಬೆಳ್ಳಿಯ ಮೂರ್ತಿಗಳೊಂದಿಗೆ ಪಲ್ಲಕ್ಕಿ ಉತ್ಸವ ಜರುಗುವುದು. ಸಂಪ್ರದಾಯದ ಪ್ರಕಾರ ದೇವಿಯ ವಾಹನವಾದ ಕುದುರೆ ಹಾಗೂ ಸಕಲ ವಾದ್ಯಗಳೊಂದಿಗೆ ದೇವಿಯ ಪಲ್ಲಕ್ಕಿ ಗರ್ಭಗುಡಿಯನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತದೆ. ನೆರೆದ ಲಕ್ಷಾಂತರ ಭಕ್ತರು ದೇವಿಯ ಪಲ್ಲಕ್ಕಿ ಮೇಲೆ ಕೊಬ್ಬರಿ, ಖಾರಿಕ್, ಹವಳ, ಮುತ್ತು, ಭಂಡಾರ ಹಾಗೂ ಅರಶಿಣ-ಕುಂಕುಮ ಹಾರಿಸಿ ಹರಕೆ ತೀರಿಸುತ್ತಾರೆ. ಸುಮಾರು ೨-೩ ಕಿ. ಮೀ. ಸುತ್ತಲಿನ ಪ್ರದೇಶವೆಲ್ಲ ಭಂಡಾರದಿಂದ ಆವರಿಸಲ್ಪಟ್ಟು, ಎಲ್ಲಿ ನೋಡಿದರಲ್ಲಿ ಬಂಗಾರವರ್ಣವನ್ನೇ ಗೋಚರಿಸುತ್ತದೆ.

ಕ್ಷೇತ್ರದ ಸುತ್ತಲಿನ ಆರೇಳು ಕಿ. ಮೀ. ಪ್ರದೇಶದಲ್ಲಿ ನೋಡಿದಲ್ಲೆಡೆ ಭಕ್ತಸಮೂಹವೇ ಎದ್ದು ಕಾಣುತ್ತಿರುತ್ತದೆ. ಲಕ್ಷಾಂತರ ಭಕ್ತರಿಂದ ಗಿಜುಗುಡುತ್ತಿದ್ದ ದೇವಿಯ ಕ್ಷೇತ್ರದಲ್ಲಿ ನೂಕು ನುಗ್ಗಲು ಲೆಕ್ಕಿಸದೆ ಭಕ್ತರು

ತಮ್ಮ ಹರಕೆ ಸೇವೆ ಸಲ್ಲಿಸುವಲ್ಲಿ ನಿರತರಾಗಿರುವರು. ಒಂದು ಹಂತದಲ್ಲಿ ಪೋಲಿಸರು ವಾಹನಗಳನ್ನು ಮುಖ್ಯ ರಸ್ತೆಯಿಂದ ಪಾರು ಮಾಡಲು ಹೈರಾಣಾಗಿ ಹೋಗುತ್ತಾರೆ. ವಿವಿಧ ಕಡೆಗಳಿಂದ ಜಾತ್ರೆಗೆ ಬಂದ ಭಕ್ತರು ಅಲ್ಲಿಲ್ಲಿ ಬೀಡು-ಬಿಟ್ಟು ದೇವಿಯ ನೈವೇದ್ಯ ತಯಾರಿಸಲು ದಾರಿಯುದ್ದಕ್ಕೂ ಒಲೆಗಳನ್ನು ಹೂಡಿ ಅಡುಗೆ ಮಾಡುತ್ತಿದ್ದ ದೃಶ್ಯ ನಯನ ಮನೋಹರವಾಗಿರುತ್ತದೆ.

ಜಾತ್ರೆ ಅಂಗವಾಗಿ ಬಾರೀ ಪ್ರಮಾಣದಲ್ಲಿ ಜಾನುವಾರುಗಳ ಜಾತ್ರೆ ಸಹ ನಡೆಯುತ್ತದೆ. ದಾಖಲೆಗಳ ಪ್ರಕಾರ ೧೮೮೧ ರಿಂದ ಜಾತ್ರೆ ವಿಶೇಷ ಪ್ರಸಿದ್ಧಿ ಪಡೆದಿದೆ. ಆ ಸಮಯದಲ್ಲಿ ೬೦ ಸಾವಿರ ಜಾನುವಾರಗಳು ಮಾರಾಟವಾದ ಬಗ್ಗೆ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಗೆಜಿಟಿಯರ್ ಮೂಲಕ ತಿಳಿಯಬಹುದಾಗಿದೆ. ಇಂದಿಗೂ ಸಹ ಹತ್ತಾರು ಎಕರೆ ಪ್ರದೇಶದಲ್ಲಿ ಕಣ್ಣು ಕುಕ್ಕುವಂತಹ ಮೂಡಲ ಹೋರಿಗಳು ಸೇರುವುದರ ಜೊತೆಗೆ, ಅಧಿಕ ಸಂಖ್ಯೆಯಲ್ಲಿ ಜಾನುವಾರಗಳು ಜಾತ್ರೆಯ ವೇಳೆ ಮಾರಾಟವಾಗುತ್ತವೆ. ದೇಶದಲ್ಲಿಯೇ ಅತೀ ದೊಡ್ಡ ಜಾನುವಾರು ಜಾತ್ರೆ ಇದಾಗಿದೆ. ಅದಲ್ಲದೆ ದಿನಬಳಕೆ ವಸ್ತುಗಳ ಮಾರಾಟ, ಕೃಷಿ ಮಳಿಗೆಗಳು, ಗೃಹೋಪಯೋಗಿ ವಸ್ತುಗಳು, ಮಕ್ಕಳ ಆಟಿಕೆಗಳ ವ್ಯಾಪಾರ ಭರ್ಜರಿಯಾಗಿ ನಡೆಯುತ್ತದೆ. ಈ ಜಾತ್ರೆ ಊರಿಗೆ ಒಂದು ಕೋಟಿ ಆದಾಯ ತರುತ್ತದೆ. ಜಾನುವಾರಗಳ ಮಾರಾಟ ಮತ್ತು ವಸ್ತು ಪ್ರದರ್ಶನ ಅನನ್ಯವಾದದ್ದು.

ಕಳೆದ ವರ್ಷದಲ್ಲಿ ಮಾಯಕ್ಕಾ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಚಿಂಚಲಿಯಲ್ಲಿ ಐದು ದಿನ ಉತ್ತರ ಕರ್ನಾಟಕ ಮಟ್ಟದ ಬೃಹತ್ ಸಾವಯವ ಕೃಷಿ ಮೇಳ ಹಾಗೂ ರೈತರಿಗೆ ನೂತನ ತಂತ್ರಜ್ಞಾನದ ವಿವಿಧ ಯಂತ್ರೋಪಕರಣಗಳ ಮಾರಾಟ, ಪ್ರದರ್ಶನ ಹಾಗೂ ವಿಚಾರ ಸಂಕಿರ್ಣವನ್ನು ಏರ್ಪಡಿಸಲಾಗಿತ್ತು. ಕೃಷಿ ಮೇಳವನ್ನು ೩ ಎಕರೆ ಜಮೀನನಲ್ಲಿ ಆಯೋಜಿಸಿದ್ದು ಇದರಲ್ಲಿ ಸುಮಾರು ೧೦೦ಕ್ಕೂ ಹೆಚ್ಚು ಮಾರಾಟ ಮಳಿಗೆಗಳು ಹಾಗೂ ಪ್ರದರ್ಶನ ಮಳಿಗೆಗಳು ಪಾಲ್ಗೊಂಡಿದ್ದವು. ರೈತರಿಗೆ ಸವಳು ಜವಳು, ಹನಿ ನೀರಾವರಿ, ಸಾವಯವ ಕೃಷಿ ಪದ್ಧತಿ, ಹೈನುಗಾರಿಕೆ ಹಾಗೂ ರಸಗೊಬ್ಬರಗಳ ಉಪಯೋಗ, ಸೌರ ಶಕ್ತಿಯ ವಿವಿಧ ಉಪಕರಣಗಳು, ಟ್ರಾಕ್ಟರ್, ಜೆ.ಸಿ.ಬಿ. ಹಾಗೂ ಉಗಾರ ಸಕ್ಕರೆ ಕಾರ್ಖಾನೆಯವರಿಂದ ಯಾಂತ್ರೀಕೃತ ಕಬ್ಬು ಕಟಾವ್ ಮಾಡುವ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಿಕೊಡಲಾಯಿತು. ರೈತರಿಗೆ ನುರಿತ ವಿಷಯ ತಜ್ಞರಿಂದ ವಿಚಾರ ಸಂಕೀರ್ಣ ಏರ್ಪಡಿಸಲಾಗಿತ್ತು. ಇದರ ಜೊತೆಗೆ ಗೃಹೋಪಯೋಗಿ ವಸ್ತುಗಳು, ಆಯುರ್ವೇದಿಕ್ ಹಾಗೂ ಗೃಹಾಲಂಕಾರ ವಸ್ತುಗಳ ಮಳಿಗೆಗಳು ಸಹ ಪಾಲ್ಗೊಂಡಿದ್ದವು. ಭಕ್ತರಿಗೆ ಮನರಂಜನೆ ನೀಡಲೆಂದು ಉತ್ಸವಕ್ಕೆ ಆಗಮಿಸಿರುವ ಅನೇಕ ಸಿನಿಮಾ, ನಾಟಕ, ತಮಾಷಾ, ಮೇಳಾ ಅಲ್ಲದೆ ಉತ್ತರ ಭಾರತ, ಕೇರಳ, ತಮಿಳುನಾಡು ಹಾಗೂ ಕಡೆಗಳಿಂದ ಆಗಮಿಸಿದ ಪ್ರದರ್ಶನಗಳು ಜಾತ್ರೆಯ ಮೆರಗು ಹೆಚ್ಚಿಸುತ್ತವೆ. ನಾಯಿಗಳ ಪ್ರದರ್ಶನವನ್ನು ಆಯೋಜಿಸಲಾಗಿರುತ್ತದೆ.

ಕಿಲಕಟ್ಟೆ :

ಚಿಂಚಲಿಯಲ್ಲಿ ಹೊರಗಿನ ಕಿಲಕಟ್ಟೆ ಮತ್ತು ನಡುವಿನ ಕಿಲಕಟ್ಟೆ ಎಂಬ ಎರಡು ಕಿಲಕಟ್ಟೆಗಳಿವೆ. ಹೊರಗಿನ ಕಿಲಕಟ್ಟೆ, ಊರ ಹೊರಗಿನ ಬಸ್ ನಿಲ್ದಾಣದ ಹತ್ತಿರವಿದ್ದರೆ, ನಡುವಿನ ಕಿಲಕಟ್ಟೆ ಊರ ಮಧ್ಯದಲ್ಲಿದೆ. ಪ್ರತಿ ಕಿಲಕಟ್ಟೆಗಳಿಗೆ ದೊಡ್ಡದಾದ ಮಂಟಪಗಳನ್ನು ನಿರ್ಮಿಸಿದ್ದಾರೆ. ಇವುಗಳನ್ನು ನಿರ್ಮಿಸುವ

ಪೂರ್ವದಲ್ಲಿ ಅಲ್ಲಿ ಹುಣಸೆ ಮತ್ತು ಬೇವಿನ ಮರಗಳಿದ್ದವು. ಪ್ರತಿ ಮೂರು ವರ್ಷಕ್ಕೊಮ್ಮೆ ಕಾರಹುಣ್ಣಿಮೆಯಂದು ಕಿಲಕಟ್ಟೆಯ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ಹೊರಗಿನ ಮತ್ತು ಒಳಗಿನ ಕಿಲಕಟ್ಟೆಗಳಲ್ಲಿ ಎರಡೆರಡು ಮಣ್ಣಿನ ಹುತ್ತಗಳಿವೆ. ಅವುಗಳ ಸುತ್ತಲೂ ಉಕ್ಕಿನ ಚೌಕಟ್ಟುಗಳನ್ನು ನಿರ್ಮಿಸಿರುವರು. ಈ ಮಣ್ಣಿನ ಹುತ್ತಗಳ ಮುಚ್ಚಳಗಳನ್ನು ತೆಗೆದಾಗ ಒಳಗೆ ದೊಡ್ಡ ಮಣ್ಣಿನ ರಂಜಣಿಗೆಗಳಿವೆ. ಮೂರು ವರ್ಷಕ್ಕೊಮ್ಮೆ ನಡೆಯುವ ಕಿಲಕಟ್ಟೆ ಜಾತ್ರೆಯ ಸಮಯದಲ್ಲಿ ಈ ರಂಜಣೆಗಳನ್ನು ಧಾನ್ಯದಿಂದ ತುಂಬಲಾಗುತ್ತದೆ. ಅವುಗಳಲ್ಲಿ ಮೂರು ಖಂಡುಗ ಧಾನ್ಯ ಹಿಡಿಯುತ್ತದೆ. ಕುರುಬ ಸಮಾಜದ ಹುಟ್ಟೆ ಮನೆತನದವರು ಈ ಜಾತ್ರೆ ಮಾಡುವ ಹಕ್ಕನ್ನು ಪಡೆದು ಕೊಂಡವರಾಗಿರುತ್ತಾರೆ.

ಕಿಲಕಟ್ಟೆ ಜಾತ್ರೆ :

ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಅತ್ಯಂತ ಶಕ್ತಿಶಾಲಿ ದೇವತೆ, ವಿಷ್ಣು ರೂಪಿಣಿ, ಮಾಯಕ್ಕಾ ದೇವಿಯು ಸಂಹಾರ ಮಾಡಿದ ಕೀಲ ಮತ್ತು ಕಟ್ಟರೆಂಬ ರಾಕ್ಷಸರ (ಕಿಲ-ಕಟ್ಟೆ) ಜಾತ್ರೆಯು ಸಂಪ್ರದಾಯದಂತೆ ಮೂರು ವರ್ಷಕೊಮ್ಮೆ ಅದ್ಧೂರಿಯಾಗಿ ನಡೆಯುತ್ತದೆ. ಇದು ಸ್ವತಃ ಮಾಯಕ್ಕಾ ದೇವಿ ನಿಂತು ಮಾಡುವ ಜಾತ್ರೆಯಾಗಿರುತ್ತದೆ. ಜಾತ್ರೆ ನಿಮಿತ್ಯ ಗ್ರಾಮಸ್ಥರೆಲ್ಲರೂ ಮೂರು ದಿನಗಳ ಕಾಲ ಯಾರೂ ತಮ್ಮ ಮನೆಯಲ್ಲಿ ಅಡುಗೆ ಮಾಡುವುದಿಲ್ಲ.

ಮೊದಲ ದಿನ ಭಕ್ತರು ಮತ್ತು ಪ್ರಮುಖರು ಮಾಯಕ್ಕ ದೇವಸ್ಥಾನದಿಂದ ಸಲಕ ವಾದ್ಯ ಮೇಳದೊಂದಿಗೆ ಧೂಪದಾರತಿ ಮೆರವಣಿಗೆಯಲ್ಲಿ ಕಿಲಕಟ್ಟೆಗೆ ಆಗಮಿಸಿ ಜಾತ್ರೆಗೆ ಚಾಲನೆ ನೀಡುವರು. ಸ್ವಯಂ ಪ್ರೇರಿತವಾಗಿ ಗ್ರಾಮದ ಎಲ್ಲರೂ ನಡುವಿನ ಕಿಲಕಟ್ಟ ಹತ್ತಿರ ಬಂದು ಅಲ್ಲಿ ಒಂದು ದಿನ ಅಂಬಲಿ-ಕಿಚಡಿ ಮಾಡುತ್ತಾರೆ. ಎರಡನೇ ದಿನ ಹೋಳಿಗೆ ಊಟ ಹಾಗೂ ಮೂರನೇ ದಿನ ಹುಗ್ಗಿ ಮಾಡಿ ತಾವು ಪ್ರಸಾದ ಸ್ವೀಕರಿಸಿ ಬಂದ ಭಕ್ತರಿಗೆ ನೀಡುತ್ತಾರೆ.

ಮೊದಲ ದಿನ ಮುತ್ತೈದೆಯರ ಪೂಜೆ ಹಾಗೂ ಅಂಬಲಿ-ಕಿಚಡಿ ನೈವೇದ್ಯ ಮತ್ತು ಮಹಾಪ್ರಸಾದದ ವ್ಯವಸ್ಥೆ ಇರುತ್ತದೆ. ಅಂದು ಮುಂಜಾನೆ ಹರಿಮರಿ ಹರಿಯುವ ಮೂಲಕ ಜಾತ್ರೆ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ಮದುವೆಯಲ್ಲಿ ಆಚರಿಸಲಾಗುವ ಎಲ್ಲ ಆಚರಣೆಗಳನ್ನು ಆಚರಿಸಲಾಗುತ್ತದೆ. ಹಾಲುಗಂಭ ತರುವುದು, ಒಳಕಲ್ಲು, ಬೀಸುಕಲ್ಲು ಪೂಜಿಸುವುದು, ಐರಣಿಗೆ ತರುವುದು ಇತ್ಯಾದಿ.

ಮೊದಲ ದಿನ ಗ್ರಾಮದ ಮಹಿಳೆಯರು ದಿನವಿಡೀ ಅಂಬಲಿ-ಕಿಚಡಿ ಮಾಡಿ ಪ್ರಸಾದ ತಯಾರಿಸಿದರೆ, ಯುವಕರು ಮಹಾ ಪ್ರಸಾದಕ್ಕೆ ಬೇಕಾಗುವ ಅಡುಗೆ ತಯಾರಿಸಿ ಸಹಾಯ ಕಾರ್ಯದಲ್ಲಿ ಮಗ್ನವಾಗಿರುವ ದೃಶ್ಯ ಭಕ್ತಿಯ ಪರಾಕಾಷ್ಠೆಯನ್ನು ತೋರಿಸುತ್ತದೆ. ದೇವಿಯ ಪಲ್ಲಕ್ಕಿ ಮೆರವಣಿಗೆಯ ನಂತರ ಅಪಾರ ಭಕ್ತರು ಮಹಾ ಪ್ರಸಾದ ಸ್ವೀಕರಿಸುವರು. ಡೊಳ್ಳಿನ ತಂಡದವರು ವಿವಿಧ ರೂಪಕಗಳನ್ನು ಪ್ರದರ್ಶನ ಮಾಡಿ ಗಮನ ಸೆಳೆದರೆ, ಭಕ್ತರು ಮೆರವಣಿಗೆಯುದ್ದಕ್ಕೂ ಚಾಂಗ ಭೊಲೋ ಎಂಬ ಜಯಘೋಷ

ಮೊಳಗಿಸುವುದರ ಜೊತೆಗೆ ಭಂಡಾರವನ್ನು ಪಲ್ಲಕ್ಕಿ ಮತ್ತು ವಾಲಗದವರ ಮೇಲೆ ಎರಚುವರು. ಇಡೀ ಗ್ರಾಮ ಭಂಡಾರಮಯವಾಗಿ ಬಂಗಾರ ವರ್ಣದಿಂದ ಕಂಗೊಳಿಸುತ್ತದೆ.

ಜಾತ್ರೆಯ ಎರಡನೇ ದಿನ ದೇವಿಗೆ ಹೋಳಿಗೆ ನೈವೇದ್ಯೆ ಮತ್ತು ದೇವಿಯ ಪಾಲಕಿ ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಗ್ರಾಮದ ಮಹಿಳೆಯರೆಲ್ಲ ಮಣೆ ಲಟ್ಟಣಿಗೆ ಹಿಡಿದುಕೊಂಡು ನಡುವಿನ ಕಿಲಕಟ್ಟೆಗೆ ಬರುವರು. ಮಂಟಪದ ಸುತ್ತ ಇರುವ ಪೌಳಿಯಲ್ಲಿ ಕುಳಿತು ಒಲೆ ಹೂಡಿ ಹೋಳಿಗೆ ತಯಾರಿಸುವರು. ಹೋಳಿಗೆ ಮಾಡಲು ಬೇಕಾಗುವ ಎಲ್ಲ ಸಾಮಗ್ರಿಗಳನ್ನು ದೇವಸ್ಥಾನ ಕಮೀಟಿಯವರು ಪೂರೈಸುತ್ತಾರೆ. ಕಳೆದ ೨೦೧೩ ರಲ್ಲಿ ನಡೆದ ಜಾತ್ರೆಯಲ್ಲಿ ಸುಮಾರು ೮ ಟನ್ ಗೋಧಿ, ೧೫ ಟನ್ ಅಕ್ಕಿ, ೪.೫ ಕ್ವಿಂಟಾಲ್ ಬೆಲ್ಲ, ೪ ಕ್ವಿಂಟಾಲ್ ಸಕ್ಕರೆ, ೧೦ ಕ್ವಿಂಟಾಲ್ ಬೇಳೆ, ೨೦ ಡಬ್ಬಿ ತುಪ್ಪ, ೩೦ ಡಬ್ಬಿ ಎಣ್ಣೆ ಹಾಗೂ ಹುಗ್ಗಿ ಮಾಡಲು ಮಸಾಲೆ ಸಾಮಗ್ರಗಳಿಗಾಗಿ ಒಂದು ಲಕ್ಷದ ಗೋಡಂಬಿ, ಒಣ ದ್ರಾಕ್ಷಿ, ಇನ್ನಿತರೆ ಸಾಮಗ್ರಗಳನ್ನು ಖರೀದಿ ಮಾಡಿರುವುದಾಗಿ ದೇವಸ್ಥಾನ ಟ್ರಸ್ಟ್ ಕಮಿಟಿಯ ನಿರ್ದೇಶಕ ಮಹೇಶ ಕೊಂಬೆನ್ನವರ ತಿಳಿಸುತ್ತಾರೆ.

ಅಂದು ಮಧ್ಯಾಹ್ನ ದೇವಿಯ ಪಾಲಕಿ ಉತ್ಸವದ ನಂತರ ದೇವಿಗೆ ಹೋಳಿಗೆ ನೈವೇದ್ಯೆ ಅರ್ಪಿಸುವರು. ಮಧ್ಯಾಹ್ನ ೧೨ ಗಂಟೆಗೆ ಮಾಯವ್ವಳ ಪಲ್ಲಕ್ಕಿ ಅಲ್ಲಿಗೆ ಬಂದಾಗ, ಹತ್ತು ಕ್ವಿಂಟಲ್ ಬೇಳೆಯ ಹೋಳಿಗೆಗಳು ಸಿದ್ಧವಾಗಿರುತ್ತವೆ. ಮುತ್ತೈದೆಯರು ಹೋಳಿಗೆ ನೈವೇದ್ಯೆ ಅರ್ಪಿಸಿದ ನಂತರ ಉಡಿ ತುಂಬುವರು. ಕಿಲ–ಕಟ್ಟರಿಗೆ ಆಹಾರ ನೀಡಿ, ಸಕಲ ವಿಧಿ ವಿಧಾನದೊಂದಿಗೆ ಹಗೆಗಳ ಬಾಯಿ ಮುಚ್ಚಿದ ಬಳಿಕ, ಅದೇ ರಾತ್ರಿ ಕಾರ ಹುಣ್ಣಿಮೆ ಹೊನ್ನುಗ್ಗಿ ನಿಮಿತ್ತ ಜಾಗರಣೆ ಮಾಡುವರು.

ಮೂರನೇ ದಿನ ಹುಗ್ಗಿ ಜಾತ್ರೆ, ಹಾಲುಗ್ಗಿ, ಅನ್ನ–ಸಾರು, ನೈವೇದ್ಯ. ಅಂದು ಗೌಳಿಗರು ಯಾರು ಹಾಲನ್ನು ಮಾರುವುದಿಲ್ಲ. ಟ್ಯಾಂಕರದಷ್ಟು ಹಾಲನ್ನು ಉಚಿತವಾಗಿ ನೈವೇದ್ಯ ತಯಾರಿಸಲು ಕೊಡುವರು. ಊರಿನ ರೈತರು ಹಿಟ್ಟಕ್ಕಿ ತಂದು ಕೊಡುವರು. ಅದಾದ ಮೇಲೆ ಸಾಯಂಕಾಲ ಕಿಲಕಟ್ಟೆ ಬಾಯಿ ಮುಚ್ಚುವ ಕಾರ್ಯಕ್ರಮ ನಡೆಯುತ್ತದೆ. ಮಣ್ಣಿನ ಹುತ್ತ ಕಿತ್ತು ರಂಜಣಿಗೆಗಳನ್ನು ಖಾಲಿ ಮಾಡಿ ಅವುಗಳಲ್ಲಿ ಧಾನ್ಯ ತೆಗೆದು ಬಾಯಿ ಮುಚ್ಚುವರು. ಹೀಗೆ ತೆಗೆದ ಒಂದಿಷ್ಟು ಧಾನ್ಯಗಳನ್ನು ರೈತಭಕ್ತರು ತಂತಮ್ಮ ಮನೆಗಳಿಗೆ ಕೊಂಡೊಯ್ದು ತಮ್ಮಲ್ಲಿರುವ ಧಾನ್ಯಗಳಲ್ಲಿ ಕೂಡಿಸುವರು. ಇದರಿಂದ ತಮ್ಮ ಮನೆಯಲ್ಲಿ ಧಾನ್ಯ ಹುಲುಸಾಗುವುದೆಂಬ ನಂಬಿಕೆ ಅವರದು.

ಸಾಯಂಕಾಲ ದೇವಿ ಪಲ್ಲಕ್ಕಿ ಉತ್ಸವ ಜರುಗುತ್ತದೆ. ಕರಿ ಹರಿಯುವುದರೊಂದಿಗೆ ಕಾರ ಹುಣ್ಣಿಮೆ ಜಾತ್ರೆ ಕೊನೆಗೊಳ್ಳುವುದು. ಜಾತ್ರೆಯ ನಂತರದ ಒಂದೆರಡು ದಿನಗಳವರೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯುವುದು. ಜಾತ್ರೆಯ ಮಹೋತ್ಸವಕ್ಕೆ ಆಗಮಿಸುವ ವಾಲಗದವರಿಗೆ ಕಮೀಟಿಯವರು ಕಾಣಿಕೆ ಕೊಟ್ಟು ಕಳುಹಿಸುವುದು ಇಲ್ಲಿಯ ಸಂಪ್ರದಾಯ.

ಪೌರಾಣಿಕ ಹಿನ್ನಲೆ :

ಈ ಭಾಗದ ದುಷ್ಟರಾದ ಕಿಲ ಮತ್ತು ಕಟ್ಟರ ಹಾವಳಿ ಹೆಚ್ಚಾಗಿತ್ತಂತೆ. ಇವರನ್ನು ಕಂಡರೆ ಮನುಷ್ಯರಿಗೆ ಮಾತ್ರವಲ್ಲ ಪ್ರಾಣಿಗಳಿಗೂ ಭಯವಾಗಿತ್ತು. ಜನರ ಪಾಡು ಹೇಳತೀರದಾಗಿತ್ತು. ಕಿಲ ಮತ್ತು ಕಟ್ಟ ಇವರಿಬ್ಬರೂ ಘೋರ ತಪಸ್ಸು ಮಾಡಿ ಬ್ರಹ್ಮನಿಂದ ವರ ಪಡೆದಿದ್ದರು. ಯಾವ ಪಕ್ಷಿ, ಪ್ರಾಣಿಗಳಿಂದ, ಹೆಣ್ಣು-ಗಂಡಿನಿಂದ ನಮಗೆ ಸಾವು ಬರಬಾರದು ಎಂಬ ವರ ಅದಾಗಿತ್ತು. ಕೊಂಕಣ (ಮಾನ) ದೇಶದಿಂದ ಮಾಯಕ್ಕಾ ದೇವಿ ಭಕ್ತರ ಕಷ್ಟ ಪರಿಹರಿಸಲು ಈ ನಾಡಿಗೆ ಆಗಮಿಸಿದ್ದಳು. ಆ ಸಮಯದಲ್ಲಿ ಗ್ರಾಮದ ಹಿರಿದೇವಿಯು ಮತ್ತು ಗ್ರಾಮಸ್ಥರು ದೇವಿಯನ್ನು ಭೇಟ್ಟಿಯಾಗಿ ಕಿಲ-ಕಟ್ಟರ ವಿಷಯ ತಿಳಿಸಿದರು. ಕಿಲ-ಕಟ್ಟರೊಂದಿಗೆ ಹೋರಾಡಲು ಮಾಯಕ್ಕಾ ದೇವಿ ನಿರ್ಧರಿಸಿದಳು. ಸಮಯ ಸಾಧಿಸಿ ಕಿಲ-ಕಟ್ಟ ದೈತ್ಯರೊಡನೆ ಹೋರಾಡಲು ವೀರರನ್ನು ಸಹಾಯಕ್ಕೆ ಪಡೆದುಕೊಂಡು ಸಂಹಾರಕ್ಕಾಗಿ ಒರಿಯಿಂದ ಖಡ್ಗ ಹಿರಿದಳು. ಮಾಯವ್ವಳಿಗೆ ಕಿಲಕಟ್ಟರನ್ನು ಸಂಹರಿಸುವುದು ಸುಲಭವಾಗಿರಲಿಲ್ಲ. ಅವರ ಒಂದು ಹನಿ ರಕ್ತ ನೆಲೆಕ್ಕೆ ಬಿದ್ದರೆ ೯೦೦ ರಾಕ್ಷಸರು ಹುಟ್ಟುತ್ತಿದ್ದರು. ಇಂತಹ ರಕ್ತ ಬೀಜಾಸುರರನ್ನು ಸಂಹಾರ ಮಾಡುವುದು ಸುಲಭವಾದುದ್ದಾಗಿರಲಿಲ್ಲ.

ಮಾಯವ್ವ ಯುದ್ಧ ಮಾಡುವ ಸುದ್ದಿ ತಿಳಿದ ಕಿಲ-ಕಟ್ಟರು ಅವಳ ಜೊತೆ ಯುದ್ಧ ಸಾರಿದರು. ಹೋರಾಟ ನಡೆಯಿತು. ಮಾಯಕ್ಕಾ ದೈತ್ಯರನ್ನು ಓಡಾಡಿಸಿದಳು. ಕೊನೆಗೆ ಮಾಯಕ್ಕಾ ಅರ್ಧನಾರಿಶ್ವರನ ಅವತಾರ ತಾಳಿ ಈ ದೈತ್ಯರ ಮೇಲೆ ಏರಿ ಹೋದಳು. ದೇವಿಯ ಈ ರೂಪ ನೋಡಿ ತಮ್ಮ ಸಾವು ಸಮೀಪಿಸಿದೆಂದು ತಿಳಿದು ಅವರು ದೇವಿಗೆ ಶರಣಾದರು. ಬೇಡಿದ್ದನ್ನು ಕೊಟ್ಟರೆ ಜೀವ ಬಿಡುವುದಾಗಿ ಮಾಯಕ್ಕನಿಗೆ ಮಾತು ಕೊಟ್ಟರು. ಮಾಯಕ್ಕ ಮಾತನ್ನು ನಡೆಸಿ ಕೊಡುವುದಾಗಿ ವಚನ ಕೊಟ್ಟಳು. ಆಗ ಈ ದೈತ್ಯರು ತಮ್ಮ ಮದುವೆ ಮಾಡಬೇಕು ಹಾಗೂ ಬೆಂಕಿ ಇಲ್ಲದೆ ಮೂರು ಖಂಡುಗ ಅನ್ನದ ಅಡುಗೆ ಮಾಡಿ ಇಡೀ ಜಗತ್ತಿನ ಜನರನ್ನು ಕೂಡಿಸಿ ಅವರಿಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಊಟ ನೀಡಬೇಕು ಎಂದರು. ತಪ್ಪಿದರೆ ಭಕ್ತರಿಗೆ ಕಷ್ಟ, ತೊಂದರೆ ಕೊಡುವುದಾಗಿ ಹೇಳಿದರು. ದೇವಿ ಅವರ ಆಸೆ ಈಡೇರಿಸುವುದಾಗಿ ವಚನ ಕೊಟ್ಟು ಸಂಹಾರ ಮಾಡಿದಳು. ಅದಕ್ಕಾಗಿ ಜಾತ್ರೆಯ ಸಮಯದಲ್ಲಿ ಹುತ್ತದಲ್ಲಿರುವ ಆ ಮಣ್ಣಿನ ಹರವಿಗಳಲ್ಲಿ ಮೂರು ಖಂಡುಗ ಧಾನ್ಯ ಸುರಿಯುತ್ತಾರೆ.

ಕಿಲ-ಕಟ್ಟ ದೈತ್ಯರ ಸಂಹಾರ ಮಾಡಿದ ನಂತರ ಮಾಯಕ್ಕ ದೇವಿ, ಭಕ್ತರೆಲ್ಲರನ್ನು ಕರೆಯಿಸಿ, ಮದುವೆಯ ಉತ್ಸವದಂತೆ ಹಾಲುಗಂಭ ನೆಟ್ಟು, ಹಂದರ ಹಾಕಿ ನಾಲ್ಕು ರಂಜನಿಗೆ(ದೊಡ್ಡ ಹರವಿ) ಗಳಲ್ಲಿ ಬೆಂಕಿ ಇಲ್ಲದೆ ಅಡುಗೆ ತಯಾರಿಸಿ ಭಕ್ತರಿಗೆ ಊಟ ಬಡಿಸಿದಳು. ಆ ರಂಜನಿಗೆಗಳನ್ನು ಎರಡು ಸ್ಥಳಗಳಲ್ಲಿ ಇಟ್ಟು ಕಿಲ-ಕಟ್ಟರ ಆಸೆಯನ್ನು ನೇರವೇರಿಸಿ ತೃಪ್ತಿಪಡಿಸಿದಳು. ಅಂದಿನಿಂದ ಇಂದಿನವರೆಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಬೆಂಕಿ ಇಲ್ಲದೇ ಅಡುಗೆ ತಯಾರಾಗಿ ದೈತ್ಯರ ಮದುವೆ ನಡೆಯುತ್ತದೆ.

ಜಾತ್ರಾ ಉತ್ಸವ :

ಸಂಪ್ರದಾಯದಂತೆ ಜರಗುವ ಕಿಲ ಮತ್ತು ಕಟ್ಟ ದೈತ್ಯರ ಮದುವೆ ಉತ್ಸವದಲ್ಲಿ, ಮಾಯವ್ವಳ ದೇವಸ್ಥಾನದಿಂದ ಸಾಯಂಕಾಲ ಧೂಪದಾರತಿಯು ಹೊರಗೆ ಬರುತ್ತಿದ್ದಂತೆ ವಾಲಗದವರ ಮುಂದೆ ಭಕ್ತರು ನೂರಾರು ತೆಂಗಿನಕಾಯಿ ಒಡೆದು ಜೈಕಾರ ಹಾಕುತ್ತಾರೆ. ಈ ಮದುವೆ ಉತ್ಸವದಲ್ಲಿ ನೂರಾರು ಡೊಳ್ಳಿನ ವಾಲಗ ತಂಡಗಳು, ವೇದಘೋಷಗಳೊಂದಿಗೆ ಡೊಳ್ಳುಕುಣಿತ, ಬ್ಯಾಂಡ್ ತಂಡ, ಶಹನಾಯಿ, ಕರಡಿ ಮೇಳ ತಂಡಗಳು ಹಾಗೂ ವಿವಿಧ ರೂಪಕಗಳು ಪಾಲ್ಗೊಂಡು ಜನಮನ ಸೆಳೆಯುತ್ತವೆ. ದೇವಸ್ಥಾನದ ಆವರಣದ ತುಂಬೆಲ್ಲ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಝಗಮಗಿಸುವ ದೀಪಗಳ ಅಲಂಕಾರ ನೋಡುಗರ ಕಣ್ಣು ಕುಕ್ಕುವಂತಿದ್ದು ಮೈಸೂರು ಅರಮನೆಯನ್ನು ನೆನಪಿಸುವಂತಿರುತ್ತದೆ.

ಹಾಲುಗಂಭ ನೆಡುವುದು :

ಕಿಲ–ಕಟ್ಟರ ಮದುವೆ ಉತ್ಸವವು ಹಾಲುಗಂಭ ನೆಡುವುದರ ಮುಖಾಂತರ ಆರಂಭವಾಗುತ್ತದೆ. ಸಂಪ್ರದಾಯದಂತೆ ಚಿಂಚಲಿ ಗ್ರಾಮದ ಊರ ಪ್ರಮುಖರು ಮತ್ತು ಮಾಯಕ್ಕಾ ದೇವಿ ಟ್ರಸ್ಟ್ ಕಮೀಟಿಯ ಅಧ್ಯಕ್ಷರಾದ ಜಿತೇಂದ್ರ ಜಾಧವ ಕುಟುಂಬ ಸದಸ್ಯರ ಮತ್ತು ಭಕ್ತರ ನೇತೃತ್ವದಲ್ಲಿ, ಕಿಲ–ಕಟ್ಟೆಯ ಹತ್ತಿರ ಹಾಲುಗಂಬ ನೆಡುವ ಕಾರ್ಯ ನಡೆಯುತ್ತದೆ.

ಅಲಗ ಹಾಯುವುದು :

ಜನಪದರು ಪೋಷಿಸಿಕೊಂಡು ಬಂದ ವಿಶಿಷ್ಟವಾದ ಆರಾಧನಾ ಕಲೆಗಳಲ್ಲಿ ಅಲಗ ಹಾಯುವ ಕಲೆಯು ಒಂದು. ಈ ರೀತಿಯ ಆರಾಧನೆ ಕಲೆಯು ಕೇವಲ ಹಾಲುಮತ ಸಮುದಾಯಗಳ ದೇವತೆಗಳಿಗೆ ಮಾತ್ರ ಸೀಮಿತವಾಗಿರುವು ಇನ್ನೊಂದು ವಿಶೇಷ. ಕಾರ ಹುಣ್ಣಿಮೆ, ದೀಪಾವಳಿ, ಮಹಾನವಮಿ ಹಾಗೂ ಕಿಲ–ಕಟ್ಟ ಜಾತ್ರೆಗಳಂದು ಮಾಯಕ್ಕಾ ದೇವಿಯ ಪಲ್ಲಕ್ಕಿ ಮುಂದೆ ಈರಗಾರರು ಅಲಗನ್ನು ಹಾಯುತ್ತಾರೆ. ಮದುವೆಯಾದ ಈರಗಾರರು ಮಾತ್ರ ಅಲಗ ಹಾಯಬೇಕೆಂಬ ನಿಯಮವಿದೆ. ಇಂಥ ಸೇವೆಯನ್ನು ಮಾಡುವವರು ಕಟ್ಟುನಿಟ್ಟಿನ ವಿಧಿ–ವಿಧಾನಗಳನ್ನು ಪಾಲಿಸಬೇಕಾಗುತ್ತದೆ. ಅಲಗ ಹಾಯುವ ಈರಗಾರರು ವಾಲಗದ ಡೊಳ್ಳಿನ ವಿಶೇಷ ಗತ್ತಿಗೆ ಹೆಜ್ಜೆ ಹಾಕುತ್ತ ಹರಿತವಾದ ಖಡ್ಗವನ್ನು ಕೈಯಲ್ಲಿ ಹಿಡಿದು ಅದನ್ನು ನೆಲಕ್ಕೆ ಹಚ್ಚಿ ಭೂತಾಯಿಗೆ ನಮಿಸುವರು. ನಂತರ ಖಡ್ಗದ ಎತ್ತಿ ನಾಲ್ಕು ದಿಕ್ಕುಗಳಲ್ಲಿರುವ ದೇವತೆಗಳಿಗೆ ನಮಿಸಿ, ಪಲ್ಲಕ್ಕಿಯಲ್ಲಿರುವ ದೇವಿಯತ್ತ ಕೈಮುಗಿಯುವರು. ಅಲಗ ಹಾಯುವವರು ಡೊಳ್ಳಿನ ತೀವ್ರತೆಗೆ ತಕ್ಕಂತೆ ಕುಣಿದಾಡುತ್ತ, ಕೂಗಾಡುತ್ತ, ವೀರಾವೇಷದಿಂದ ಆಕಡೆ–ಈಕಡೆ ನೆಗೆಯುತ್ತಾ ಹರಿತವಾದ ಖಡ್ಗದಿಂದ ಹೊಟ್ಟೆಗೆ ಈರಿದುಕೊಳ್ಳುವ ಆ ದೃಶ್ಯ ಭಯಾನಕವಾಗಿರುತ್ತದೆ. ಈರಾಡುತ್ತ ದಣಿದ ಅಲಗ ಹಾಯುವವನನ್ನು ಹೆಗ್ಗಡೆ ಎನ್ನುವವನು ಹೋಗಿ ಗಟ್ಟಿಯಾಗಿ ಹಿಡಿದುಕೊಳ್ಳುವನು. ಅಲಗ ಹಾಯುವ ವ್ಯಕ್ತಿಯು ವೀರಾವೇಶದಲ್ಲಿ ಏನಾದರೂ ಹೇಳಿಕೆಗಳನ್ನು ಹೇಳುವಂತೆ ಕಂಡು ಬಂದಾಗ ಅವನಿಗೆ ಕಂಬಳಿಯಿಂದ ಮುಸುಕ ಹಾಕುತ್ತಾರೆ. ಆ ಸಮಯದಲ್ಲಿ ಅಲಗ ಹಾಯುವವರು ನುಡಿಗಳನ್ನು ಹೇಳುತ್ತಾರೆ. ಈ ನುಡಿಗಳನ್ನು ಕೇಳಲು ಭಕ್ತರು ಕಾತರದಿಂದ ಕಾಯುತ್ತಿರುತ್ತಾರೆ. ಅವರ ನುಡಿಗಳು ಭವಿಷ್ಯದ ದಿಕ್ಸೂಚಿಗಳೆಂಬ ನಂಬಿಕೆ ಭಕ್ತ ವರ್ಗದಲ್ಲಿದೆ.

ಕಿಲ-ಕಟ್ಟ ಜಾತ್ರೆಯ ಉತ್ಸವದ ಮೊದಲ ದಿನದಂದು ಪಲ್ಲಕ್ಕಿ ಎದುರು ನಡೆಯುವ ಅಲಗ ಹಾಯುವ ದೃಶ್ಯವು (ಒಂದು/ಎರಡು ಕೈಗಳಲ್ಲಿ ಖಡ್ಗ ಹಿಡಿದು ಹೊಟ್ಟೆಗೆ ಇರಿದು/ಚುಚ್ಚಿ ಕೊಳ್ಳುವುದು) ನೋಡುಗರನ್ನು ರೋಮಾಂಚನಗೊಳಿಸುವುದರೊಂದಿಗೆ ಮಂತ್ರ ಮುಗ್ಧರನ್ನಾಗಿಸುತ್ತದೆ. ಆದಿ ಕಾಲದಿಂದಲೂ ಈರಗಾರ ಸಮುದಾಯದವರು ಮಾತ್ರ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಹಿರಿಯರು ಕಿರಿಯರು ಎನ್ನದೇ ಪುರುಷರು ಮಾಯಕ್ಕಾ ದೇವಿಯ ಪಲ್ಲಕ್ಕಿ ಮುಂದೆ ವಿವಿಧ ಜಾಗೃತ ಸ್ಥಳಗಳಲ್ಲಿ ಅಲಗ ಹಾಯುವ ದೃಶ್ಯ ನೋಡುಗರ ಎದೆ ಝಲ್ಲ ಎನಿಸುವಂತೆ ಮಾಡುತ್ತದೆ. ಮಾಯಕ್ಕಾ ದೇವಿ ಪಲ್ಲಕ್ಕಿ ಮುಂದೆ ನಡೆಯುವ ವಿವಿಧ ಪ್ರದರ್ಶನಗಳು ರೋಮಾಂಚನಕಾರಿ ಅನಿಸಿದರೂ ಎಲ್ಲ ಭಕ್ತರು ಇದನ್ನು ದೇವಿಯ ಲೀಲೆ ಎಂದು ಕಣ್ತುಂಬಿಕೊಳ್ಳುವುದು ವಿಶೇಷ.

ನಂಬಿಕೆಗಳು :

ಮೂರು ವರ್ಷಕ್ಕೊಮ್ಮೆ ನಡೆಯುವ ಕಿಲ-ಕಟ್ಟೆ ಜಾತ್ರೆಯ ಸಮಯದಲ್ಲಿ ಹಗೆಗಳ ಮುಚ್ಚಳಗಳನ್ನು ತೆರೆದಾಗ ಹಾವು, ಚೇಳುಗಳು ಬರಬಾರದು. ಅವುಗಳು ಬಂದಲ್ಲಿ ಮುಂದೆ ಕೆಡಗಾಲ ಸಂಭವಿಸುವ ಮತ್ತು ಇರಿವೆಗಳು ಬಂದರೆ ಬರಗಾಲ, ಕಪ್ಪೆಗಳು ಬಂದಲ್ಲಿ ಮಳೆಗಾಲ ಮತ್ತು ಸಮೃದ್ಧಿ ಸೂಚಕ ಎಂಬ ನಂಬಿಕೆ ದೇವಿಯ ಭಕ್ತ ವರ್ಗದಲ್ಲಿದೆ. ೩ ವರ್ಷಕ್ಕೊಮ್ಮೆ ನಡೆಯುವ ಕೀಲಕಟ್ಟೆ ಜಾತ್ರೆಯಲ್ಲಿನ ಹಗೆಯನ್ನು ತುಂಬುವ ವಿಧಾನವು, ಪ್ರಾಚೀನ ಕಾಲದಿಂದಲೂ ನಡೆದುಕೊಂಡ ಬಂದ ಆಹಾರ ಸಂಸ್ಕರಕ್ಷಿಸುವ ಒಂದು ಪದ್ಧತಿಯಾಗಿರಬಹುದು. ಬಹುಶಃ ಅದು ಇಂದಿನ ಆಧುನಿಕ ಯುಗದಲ್ಲಿ ಬಳಸುವ ಫ್ರಿಜ್ ವ್ಯವಸ್ಥೆಯಂತಿದೆ.

ಚಾಂಗ ಭಲೋ-ಹೋಕ ಭಲೋ :

ಜಾತ್ರಾ ಸಮಯದಲ್ಲಿ ದೇವಿಯು ಮೈಮೇಲೆ ಬಂದಂತೆ ಕುಣಿಯುವ ಭಕ್ತರು ಸಾಮಾನ್ಯವಾಗಿ ಕಂಡು ಬರುತ್ತಾರೆ. ಮಹಾರಾಷ್ಟ್ರದ ಭಕ್ತರು ಕಂಚಣಿಕೆ ಧರಿಸಿ, ಕೋಲು ಹಿಡಿದು, 'ಚಾಂಗ ಭಲೋ, ಹೋಕ ಭಲೋ' ಎಂದು ಘೋಷಣೆ ಕೂಗುತ್ತ ಕುಣಿಯುವುದು ನೋಡುಗರ ಮನ ಸೆಳೆಯುತ್ತದೆ. ಬೆತ್ತದ ಕೋಲು ಹಿಡಿದು ವೀರಾವೇಶದಿಂದ ಕುಣಿಯುವ ಇವರು ಗಂಡು ಹೆಣ್ಣು ಬೇಧವಿಲ್ಲದೆ ಡೊಳ್ಳಿನ ನಾದಕ್ಕೆ ತಕ್ಕಂತೆ ಕುಣಿಯುತ್ತಾರೆ. ಇವರು ಮಾಯಕ್ಕಾನ ಅವತಾರ ಎಂಬ ಪ್ರತೀತಿ ಇದೆ.

ಮಾಸ್ತಿಗಲ್ಲಿನ ಅವಶೇಷಗಳು :

ಊರ ಮಧ್ಯದಲ್ಲಿರುವ ನಡುವಿನ ಕೀಲಕಟ್ಟೆಯ ಮಂಟಪದಲ್ಲಿ ಅನೇಕ ಕಟ್ಟೆಗಳಿವೆ. ಪೂರ್ವ ದಿಕ್ಕಿನಲ್ಲಿರುವ ಕಟ್ಟೆಯ ಮೇಲೆ ಎರಡು ಜೊತೆ ಪಾದುಕೆಗಳಿವೆ. ಪಕ್ಕದಲ್ಲಿ ಒಂದು ಸ್ತಂಭವಿದ್ದು ಮೇಲೆ ಕುದುರೆಯ ಪ್ರತಿಮೆಯಿದೆ. ಈ ಕಟ್ಟೆಯ ಹಿಂದೆ ಸ್ವಲ್ಪ ದೂರದಲ್ಲಿ ಮತ್ತೊಂದು ಕಟ್ಟೆಯಿದ್ದು ಅಲ್ಲಿ ಎರಡು ಮಾಸ್ತಿಗಲ್ಲುಗಳಿವೆ. ಅವೆರಡು ಒಕ್ಕೈ ಮಾಸ್ತಿಗಲ್ಲುಗಳಾಗಿದ್ದು, ಅವುಗಳನ್ನೇ ಸ್ಥಳೀಯರು ಕಿಲಕಟ್ಟ ರಾಕ್ಷಸರೆಂದು ಕರೆಯುತ್ತಾರೆ. ಪಶ್ಚಿಮ ದಿಕ್ಕಿನಲ್ಲಿ ಮತ್ತೊಂದು ಕಟ್ಟೆಯಿದ್ದು, ಅದು ಬಾಣಾಸುರನ ಕಟ್ಟೆ.

ಇಲ್ಲಿರುವ ಎಲ್ಲ ಮಾಸ್ತಿಗಲ್ಲುಗಳ ಅವಶೇಷಗಳನ್ನು ನೋಡಿದರೆ, ಕಿಲಕಟ್ಟ ರಾಕ್ಷಸರ ಹೆಸರಿನಲ್ಲಿ ಆಚರಿಸುವ ಜಾತ್ರೆಯು ಮಾಸ್ತಿಗಳ (ಸತಿ ಪದ್ಧತಿ ಹೋದ ಮಹಿಳೆಯರ) ಜಾತ್ರೆಯಾಗಿರಬಹುದೇ? ಎಂಬ

ಶಂಕೆ ಮೂಡುತ್ತದೆ. ಮದುವೆ ಸಂಧರ್ಭದಲ್ಲಿ ಆಚರಣೆ ಮಾಡುವ ಎಲ್ಲ ಪದ್ಧತಿಗಳನ್ನು ಕಿಲಕಟ್ಟ ಜಾತ್ರೆಯಲ್ಲಿ ಆಚರಿಸುವುದು ಈ ಊಹೆಗೆ ಮತ್ತಷ್ಟು ಪುಷ್ಟಿ ನೀಡುತ್ತದೆ. ಬಹುಶಃ ಕಿಲಕಟ್ಟರ ಸ್ಥಳವು ಸತಿಯರಿಬ್ಬರು ಚಿತೆಹೋದ ಸ್ಥಳವಿರಬಹುದು.

ಇದಕ್ಕೆ ಪುಷ್ಟಿ ನೀಡುವಂತೆ ಶಂಕರ ಶಿ. ಕುಂಬಾರ 'ಹಾಲುಮತದ ಸ್ತ್ರೀಯರು' ಎಂಬ ಪುಸ್ತಕದಲ್ಲಿ ಈ ರೀತಿಯ ವಿವರಣೆಯನ್ನು ನೀಡುತ್ತಾರೆ. ಕೀಲ-ಕಟ್ಟ ರಾಕ್ಷಸರ ಸಂಹಾರದ ನಂತರ ಅವರ ಪತ್ನಿಯರು ಮಾಯವ್ವಳ ಹತ್ತಿರ ಬಂದು ನಮಸ್ಕಾರ ಮಾಡಿ, ದೇವಿ ಈ ಭಾಗದಲ್ಲಿರುವ ರಾಕ್ಷಸ ಕುಲವನ್ನೇ ನಿರ್ಮೂಲನೆ ಮಾಡಿ ಬಿಟ್ಟಿರುವೆ. ಆದರೆ ನಮ್ಮ ಪತಿಯಂದಿರ ಮತ್ತು ನಮ್ಮಗಳ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡು ಎಂದು ಅವಳಲ್ಲಿ ಬೇಡಿಕೊಂಡರು. ಆಗ ಮಾಯವ್ವ, ಕೀಲ-ಕಟ್ಟ ರಾಕ್ಷಸರ ಎರಡು ಕಲ್ಲು ಮತ್ತು ಅವರ ಹೆಂಡತಿಯರ ಎರಡು ಕಲ್ಲುಗಳನ್ನು ಪೂಜಿಸಲಿಕ್ಕೆ ಅವಕಾಶ ಮಾಡಿಕೊಟ್ಟಳು. ಬಹುಶಃ ಕೀಲ-ಕಟ್ಟ ರಾಕ್ಷಸರ ಮಂಟಪಗಳಲ್ಲಿ ಕಾಣ ಸಿಗುವ ಮಾಸ್ತಿಕಲ್ಲುಗಳು ಅವರ ಪತ್ನಿಯರು ಸತಿ ಹೋದ ಘಟನೆಗೆ ಪುಷ್ಟಿಯನ್ನು ನೀಡುವಂತಿವೆ.

"ಕಿಲಕಟ್ಟೆ ಕೀಲಾರ ಹಟ್ಟಿಯಾಗಿರಬಹುದೇ? ಶೋಧಿಸಬೇಕು, ಕ್ಷೀರ>ಕೀರು>ಕೀಲ. ಕೀಲಾರ ಪದಕ್ಕೆ ಕ್ಷೀರಾಗಾರ (ದಡ್ಡಿ, ಹಟ್ಟಿ) ಎಂಬರ್ಥವಿದೆ. ದನಗಾರರು ಈ ಹಂಡೆಗಳಲ್ಲಿ ಹಾಲು ರಕ್ಷಿಸಿಡುತ್ತಿದ್ದರೆ? ಕೀಲಕಟ್ಟೆ ಜಾತ್ರೆಯಂದು ಗ್ರಾಮಸ್ಥರು ಯಾರು ಹಾಲು ಮಾರುವುದಿಲ್ಲ. ಗೌಳಿಗರು ಸಂಗ್ರಹಿಸಿದ ಹಾಲು ಕೊಡುವುದು ಯಾವುದರ ಸಂಕೇತವಿರಬಹುದು, ತಿಳಿಯದು. ಕೀಲ ಎಂಬ ಪದಕ್ಕೆ ಉರಿನಾಲಗೆ ಎಂಬ ಅರ್ಥವೂ ಇದೆ. ಅದು ಚಿತೆಯ ಕಟ್ಟೆಯೆ? ಯಾವುದಕ್ಕೂ ಉತ್ತರ ಸಿಗುವುದಿಲ್ಲ. ತುರುಗೊಳ್ ಘಟನೆಯೊಂದರ ನೆನಪಿನಲ್ಲಿ ಇದು ನಡೆಯುತ್ತಿರಬಹುದೆನಿಸುತ್ತದೆ. ಮಾಯವ್ವನ ಐತಿಹ್ಯಗಳೆಂದು ಹೇಳುವ ಸ್ಥಳಗಳು ದನಗಾರರ ಹಟ್ಟಿಯ ಕುರುಹುಗಳಾಗಿರಬೇಕು. ಈ ಜಾತ್ರೆಯ ಜಾಗವಿರುವುದು ಕುರುಬರ ಹಟ್ಟೆ ಮನೆತನಕ್ಕೆ ಎಂಬುದು ಸಹ ಗಮನಾರ್ಹ. ಹುಟ್ಟೆ ಪದವು ಹಟ್ಟಿಯ ಅಪಭ್ರಂಶ ರೂಪವಾಗಿರಬಹುದು. ಒಟ್ಟಿನಲ್ಲಿ ಕಿಲಕಟ್ಟೆಯ ಜಾತ್ರೆ ಅಪ್ಪಟ ಜಾನಪದೀಯ ಆಚರಣೆ. ಅದು ಹಾಲುಮತದ ಸಮುದಾಯದೊಂದಿಗೆ ತಳುಕು ಹಾಕಿಕೊಂಡ ಹಟ್ಟಿ ಸಮಾರಾಧನೆ. ಈ ಕುರಿತು ಇನ್ನಷ್ಟು ಸಂಶೋಧನೆಗಳಾಬೇಕು."[೪೮]

ಮಾಯವ್ವ ಹಾಲಿನ ಅದಿದೇವತೆ :

ಕುರುಬರು ಪಾರ್ವತಿಯಲ್ಲಿ ತಮ್ಮ ಮೂಲವನ್ನು ಹುಡುಕುತ್ತಾರೆ. ಪಾರ್ವತಿ ಎಂದರೆ ಪ್ರಕೃತಿ. ಪ್ರಕೃತಿ ಮಾತೃತ್ವದ ಪ್ರತೀಕ. ಪಾರ್ವತಿಯ ಎದೆ ಹಾಲಿನಿಂದ ಜನಿಸಿದವರು ಹಾಲುಮತದವರು. ಹಾಲು ಜೀವಿಗಳ ಪಾಲಿನ ಜೀವಾಮೃತ, ಹಾಲು ಪ್ರಪಂಚದ ಮಾಯೆ. ಮಾತೃತ್ವದ ಮೊತ್ತಮೊದಲ ಚಿನ್ಹೆ ಮೂಡುವುದು ತಾಯಿಯ ಎದೆಯಲ್ಲಿ. ಮಾತೃಪ್ರಧಾನ ಸಂಸ್ಕೃತಿಯ ಹಲವಾರು ಅಂಶಗಳನ್ನು ತನ್ನೊಡಲೊಳಗೆ ಬಚ್ಚಿಟ್ಟುಕೊಂಡಿರುವ ಮಾಯವ್ವನ ಆರಾಧನೆಯನ್ನು ವಿಶ್ಲೇಷಣೆಗೊಳಪಡಿಸುವುದು ತೀರ ಅಗತ್ಯವೆನಿಸುತ್ತದೆ.

ಅಡವಿಯಲ್ಲಿ ದೊರೆತ ಬೀರಪ್ಪನ ತೊಟ್ಟಿಲನ್ನು ಸುತ್ತು ಹಾಕಿದ ಮಾಯವ್ವಳ ಎದೆ ಬದಿಗಳು, ಚಿಗಿಯುತ್ತವೆ. ಹೀಗಾಗಿ ಅವಳು ಮಹಾ>ಮಾ+ಅವ್ವ= ಮಾಯವ್ವಳಾಗಿರಬಹುದು. ಮಾಯವ್ವ ತಾಯ್ತನದ ಪ್ರತೀಕ. ಆದ್ದರಿಂದ ಮಾಯವ್ವಳ ಆರಾಧನೆಯು ಹಾಲಿನ ರೂಪದಲ್ಲಿ ನಡೆಯುತ್ತದೆ. ಇಂದಿಗೂ 'ಮಾಯವ್ವನ ಹಾಲು' ಎಂಬ ವಿಶಿಷ್ಟವಾದ ಆಚರಣೆ ಅವಳ ಭಕ್ತರ ಮನೆಗಳಲ್ಲಿ ಆಚರಿಸಲ್ಪಡುತ್ತಿದೆ. ದೇವಸ್ಥಾನದ ಪಕ್ಕದಲ್ಲಿಯೇ ಹಾಲುಹಳ್ಳ ಹರಿಯುತ್ತಿದೆ. ಅಲ್ಲದೆ ಅವಳಿಗೆ ಅರ್ಪಿತವಾಗುವ ನೈವೇದ್ಯಗಳಲ್ಲಿ ಹಾಲು, ಅಂಬಲಿ, ಕಿಚಡಿ ಪ್ರಮುಖವಾಗಿದ್ದು ಇವುಗಳೆಲ್ಲ ಹಾಲಿನಿಂದ ತಯಾರಿಸಲ್ಪಟ್ಟವುಗಳು. ಉತ್ಸವ ಜಾತ್ರೆಗಳಲ್ಲಿ ಕುರಿಯ ಉಣ್ಣೆಯು ಅವಳಿಗೆ ಸಮರ್ಪಿಸಲ್ಪಡುತ್ತದೆ. ಇವೆಲ್ಲವುಗಳು ಪಶುಪಾಲನೆಯ ಸಂಸ್ಕೃತಿಯ ಪಳಿಯುಳಿಕೆಗಳಾಗಿವೆ. "ಒಟ್ಟಿನಲ್ಲಿ ಮಾಯವ್ವ ಪಶುಪಾಲಕರ ಶಕ್ತಿದೇವತೆ, ಸೃಷ್ಟಿಯನ್ನು ನಾಶಗೊಳಿಸುವ ದೌಷ್ಟ್ಯವೇ ರಾಕ್ಷಸ. ಆ ಕೌರ್ಯವನ್ನು ಕೊನೆಗೊಳಿಸಲು ಕಾಳಿಯಾಗುತ್ತಾಳೆ. ಮಕ್ಕಳನ್ನು ಪೊರೆಯಲು ತಾಯಿಯಾಗುತ್ತಾಳೆ. ವೈದಿಕ ಸಂಸ್ಕೃತಿಯಲ್ಲಿ ಶಕ್ತಿಯನ್ನು ಕುಂಕುಮದಿಂದ ಅರ್ಚಿಸಲಾಗುತ್ತದೆ. ಆದರೆ ಹಾಲುಮತ ಸಂಸ್ಕೃತಿಯಲ್ಲಿ ಭಂಡಾರದಿಂದ ಮೈ ದುಂಬಿಸಿಕೊಳ್ಳುವುದು ಹಾಲುಮತದ ಅಸ್ಮಿತೆ."[೪೯] ಮಾತೃಪ್ರಧಾನ ಸಂಸ್ಕೃತಿಯ ಹಲವು ಅಂಶಗಳನ್ನು ತನ್ನೊಡಲೊಳಗೆ ಬಚ್ಚಿಟ್ಟುಕೊಂಡಿರುವ ಮಾಯವ್ವನ ಆರಾಧನೆಯನ್ನು ವಿಶ್ಲೇಷಣೆಗೆ ಒಳಪಡಿಸುವುದು ತೀರ ಅಗತ್ಯವೆನಿಸುತ್ತದೆ.

ದೇವದಾಸಿಯರು :

ಮಾಯವ್ವ ದೇವಿಯ ಸೇವೆಗೆಂದು ಸುಮಾರು ೧೦-೧೫ ಜನ ದೇವದಾಸಿಯರಿದ್ದು, ಇದು ಪರಂಪರಾಗತವಾಗಿ ಬಂದ ಸಂಪ್ರದಾಯವಾಗಿರುತ್ತದೆ. ದೇವದಾಸಿಯರೆಲ್ಲ' ಕೆಳವರ್ಗದವರಾಗಿದ್ದು ದೇವಿಯ ಹೆಸರಿನಲ್ಲಿ ಮುತ್ತು ಕಟ್ಟಿಸಿಕೊಂಡಿರುತ್ತಾರೆ. ಹುಟ್ಟಿಗೆ ಉಟ್ಟು ಹರಕೆ ಸಲ್ಲಿಸಲು ಆಗಮಿಸಿದ ಭಕ್ತರಿಗೆ ಹುಟ್ಟಿಗೆ ಉಡಿಸುವುದು, ಮಾಯವ್ವಳಿಗೆ ಜೋಗ ಹಾಕುವುದು, ಹಬ್ಬ-ಹರಿದಿನಗಳಲ್ಲಿ ಪಲ್ಲಕ್ಕಿಯಲ್ಲಿ ದೇವಿ ಹೊರಗೆ ಬಂದಾಗ ಚೌರಿ ಬೀಸುವುದು ದೇವದಾಸಿಯರ ಪ್ರಮುಖ ಸೇವೆಗಳಾಗಿವೆ. ಇವರು ಬಳೆ ಒಡೆದುಕೊಳ್ಳುವುದಿಲ್ಲ. ಇವರು ದೇವಿಗೆ ಜೋಗ ಹಾಕುವುದನ್ನು ಬಿಟ್ಟು ಬೇರೆ ಹಾಡುವುದಿಲ್ಲ. ಜೋಗ ಹಾಕುವಾಗ ಶ್ರುತಿಗೆ ಪ್ರಾಮುಖ್ಯತೆಯನ್ನು ನೀಡುವುದಿಲ್ಲ ಮತ್ತು ಚೌಡಿಕೆಯನ್ನು ಬಳಸುವುದಿಲ್ಲ. ಗುಡಿಯಿಂದ ದೇವಿಯ ಪಲ್ಲಕ್ಕಿ ಹೊರಬಂದು ಮರಳುವಾಗ ಇವರು ಜೋಗ ಹಾಕುತ್ತಾರೆ. ಅವರು ಜೋಗ ಹಾಕಿದ ಮೇಲೆಯೇ ಪಲ್ಲಕ್ಕಿ ಗುಡಿಯನ್ನು ಪ್ರವೇಶಿಸುವುದು. ಅವರ ಜೋಗ ಈ ರೀತಿಯಾಗಿದೆ.

"ಉದೋ ಎನಗಾತಿ ಮಾಕಳಿ ಜೋ ವನಾಲೆಮ್ಮಾ
ಮುತ್ತಿನ ಮುಡಿ ಮುತ್ತೋಲೆ । ಮಾ
ಕೆಂಜಡೆ ಕರಿಜಡೆ ನೊಸಲಗಂಗಾ । ಮಾ
ಉರಿಗಣ್ಣಾ ಹಸಿರುಟಗೆ । ಮಾ
ನೊಸಲಪಾಡು । ಮಾ ಕ್ವಾಗಡೆ ಎದ್ದೊರೆ । ಮಾ
ಕರೆಫಲೇ ಖಂಡದೇ ಕೈಯ । ಮಾ
ತ್ರಿಶೂಲದಮಾ ಬಾಳಬಟ್ಟಲ । ಮಾ

ನಡೆದ ಒಡ್ಯಾಣ । ಮಾ ಕಾಲಂದಿಗೆ । ಮಾ
ಕಣ್ಣಕಾಡ್ಗೆ ಗಲ್ಲಾಗೆ ಹೊನ್ನ ಕೀಲ ಹಾಲಕೀಲ । ಮಾ
ಮುತ್ತಿನ ಗದ್ದುಗೆ ಚಿನ್ನದ ಗದ್ದುಗೆ । ಮಾ
ನಿತ್ಯಪೂಜೆ ಪಲ್ಲಕ್ಕಿ ಪದವಿ । ಮಾ
ಎನಗಾತಿ ಮಾಕಾಳಿ ಸಿಂಗಾ ಬೀರಣ್ಣಾ
ಬೆಕ್ಕೇರಿ ಲಕ್ಕಿ ಜಲಾದೇವರು ಕನ್ಯೇ ಕೋಮಾಲೆ

ಇದು ಮಾಯವ್ವಾನ ಬಿರುದಾವಳಿ, ಅವಳು ಎಕನಾತಿ, ಮಾಕಾಳಿ, ಬನಶಂಕರಿ, ಅವಳ ಸ್ವರೂಪದ ಶಬ್ದಚಿತ್ರವೇ ಇಲ್ಲದೆ, ಮಾಯವ್ವಾ ಶಕ್ತಿದೇವತೆಯಾದರೂ ಸಂಪೂರ್ಣ ಉಗ್ರಸ್ವರೂಪಿಯೂ ಅಲ್ಲ; ಶಾಂತಮೂರ್ತಿಯೂ ಅಲ್ಲ, ಆಕೆಯ ಉರಿಗಣ್ಣು, ಕೆಂಜೆಡೆ, ಖಡ್ಗ, ತ್ರಿಶೂಲ ನೋಡಿದರೆ ಮಹಾಕಾಳಿ: ಒಡ್ಯಾಣ, ಕಾಲಂದಿಗೆ, ಕಾಲಗೆಜ್ಜೆ ಮುಂತಾದ ಆಭರಣಗಳನ್ನು ನೋಡಿದರೆ ಕೋಮಲೆ, ಚಿಂಚಲಿ ಮಾಯವ್ವಾ ಯುದ್ಧ-ಶಾಂತಿಯ ಸಮಾಗಮ, ಶಿವಶಿವೆಯ ಸಂಗಮ."[೫೦] ಕಾನೂನಿನ ಮೇರೆಗೆ ಈ ಪದ್ಧತಿ ನಿಷೇಧಿತವಾಗಿರುವುದರಿಂದ ಈಗ ದೇವದಾಸಿಯರನ್ನಾಗಿ ಮಾಡುವುದು, ಬಿಡುವುದು, ಆರಾಧಿಸುವುದು ಇಳಿಗತಿಯನ್ನು ಪಡೆದಿದೆ.

ಭೈರವ :

ಮಾಯವ್ವಳ ಗುಡಿಯಲ್ಲಿರುವ ಹಿರಿದೇವಿಯ ಹಿಂದಿನ ಒಂದು ಕಲ್ಲಿನಲ್ಲಿ ಚಿಕ್ಕದಾದ ಭೈರವನ ಮೂರ್ತಿ ಕಾಣುತ್ತದೆ. ಇದೊಂದು ಪ್ರಾಚೀನ ಶಿಲ್ಪವಾಗಿದ್ದು ಚಿಂಚಲಿ ಗ್ರಾಮದ ಉತ್ಪತ್ತಿಯನ್ನು ಕುರಿತು ತರ್ಕಿಸಲು ಕೆಲವು ಸಂಗತಿಗಳಿಗೆ ಇದು ಪುಷ್ಟಿ ನೀಡುತ್ತದೆ. ಚಿಂಚಲಿ ಎಂಬ ಹೆಸರಿನ ಉತ್ಪತ್ತಿಯನ್ನು ಶೋಧಿಸಿದಾಗ ಹಲವು ವಿಚಾರಗಳು ಸಂಘರ್ಷಿಸುತ್ತವೆ. ಬಹುಶಃ ಇದು ಚುಂಚಪ್ಪನಿಂದಲೇ ಬಂದಿರಬೇಕೆಂದು ಕೆಲವು ವಿದ್ವಾಂಸರ ಊಹೆ. ಚುಂಚಪ್ಪ ಎಂದರೆ ಭೈರವ ಅಥವಾ ಕಾಳಭೈರವ. ಅವನ ಪತ್ನಿ ಭೈರವಿ ಅಥವಾ ಮಹಾಕಾಳಿ. "ಬದುಕಿನ ವಿಕಾಸ ಕ್ರಮದಲ್ಲಿ ಪ್ರಥಮ ಹಂತದ್ದು ಬೇಟೆಯ ಸಂಸ್ಕೃತಿ. ಇದರ ದೈವತ ಭೈರವ. ದ್ವಿತೀಯ ಹಂತದ್ದು ಪಶುಪಾಲನೆ ಸಂಸ್ಕೃತಿ, ಇದರ ದೈವತ ಮೈಲಾರ. ತೃತೀಯ ಹಂತದ್ದು ಕೃಷಿ ಸಂಸ್ಕೃತಿ, ಇದರ ದೈವತ ಮಲ್ಲಯ್ಯ (ಮಲ್ಲಿಕಾರ್ಜುನ, ಶಿವ). ಇವುಗಳಲ್ಲಿ ಮೊದಲನೆಯ ಎರಡು ಮಾಸಾಂಹಾರ ಸಂಸ್ಕೃತಿ, ಮೂರನೆಯದು ಶಾಕಾಹಾರ ಸಂಸ್ಕೃತಿ"[೫೧] ಯನ್ನು ಹೊಂದಿದೆ.

ಭೈರವನ ಜನನದ ಕುರಿತು ಸ್ವಾರಸ್ಯಕರವಾದ ಕಥೆಯಿದೆ. ಘೋರ ತಪಸ್ಸನ್ನು ಮಾಡಿ ವರವನ್ನು ಪಡೆದುಕೊಂಡ ಭಸ್ಮಾಸುರ ದೇವತೆಗಳಿಗೆ ಕಾಟ ನೀಡುತ್ತಿದ್ದ. ಇತನ ಕಾಟವನ್ನು ತಾಳಲಾರದ ದೇವತೆಗಳು ಅವನನ್ನು ಸಂಹಾರ ಮಾಡಲು ವಿಷ್ಣುನನ್ನು ಮೊರೆಹೋದರು. ಆಗ ವಿಷ್ಣು ಮೋಹಿನಿ ರೂಪವನ್ನು ಧರಿಸಿ ಭಸ್ಮಾಸುರನು ತನ್ನಿಂದ ತಾನೇ ಸಾಯುವಂತೆ ಮಾಡಿದನು. ವಿಷ್ಣು, ಮೋಹಿನಿ ರೂಪದಲ್ಲಿಯೇ ಶಿವನ ಆಸ್ಥಾನಕ್ಕೆ ಬಂದನು. ಮೋಹಿನಿ ರೂಪಕ್ಕೆ ಮೋಹಗೊಂಡ ಶಿವ ತನ್ನೊಂದಿಗೆ ಒಂದು ರಾತ್ರಿ ಕಳೆಯುವಂತೆ ಕೇಳಿಕೊಂಡನು. ಅವರ ಸಮಾಗಮದಿಂದ 'ಹರಿ-ಹರ ಪುತ್ರ' ಕಾಲಭೈರವ ಜನಿಸಿದನೆಂಬ ಕಥೆಯಿದೆ.

ಹಿರಿದೇವಿ :

ಗ್ರಾಮದ ಹಿರಿಯರ ಪ್ರಕಾರ 'ಹಿರಿದೇವಿ' ಚಿಂಚಲಿಯ ಮೂಲ ದೇವತೆ. ಇವಳೇ ಆರಂಭದ ಗ್ರಾಮದೇವತೆಯೂ ಹೌದು. ಮಾಯಕ್ಕಾ ದೇವಿ ಚಿಚಂಲಿಯಲ್ಲಿ 'ನೆಲೆ' ನಿಂತಿದ್ದನ್ನು ಕುರಿತಂತೆ ಒಂದು ಐತಿಹ್ಯವಿದೆ. ದೇವಿಯ ತನ್ನ ನೆಲೆಗಾಗಿ ಚಿಂಚಲಿಯಲ್ಲಿ ಕ್ಯಾರಿಕೊಪ್ಪ, ಎಡಿಮಾಯವ್ವಾ, ಕರಗುತ್ತಿ, ಬಂಗಾರಗಿಡ ಮೊದಲಾದ ಕಡೆ ಅಲೆದಳು. ಕೊನೆಗೆ ದೊಡ್ಡಹಾಳು ಮಣ್ಣಿನ ದಿಣ್ಣೆ ಸ್ಥಳದಲ್ಲಿ ಇರುವ ಗುಡಿಗೆ ಬಂದು ಅಲ್ಲಿಯ ದೇವತೆಯಾದ ಹಿರಿದೇವಿಯಲ್ಲಿ ತನಗೆ ಆಶ್ರಯ ನೀಡುವಂತೆ ಮಾಯಕ್ಕಾ ಕೇಳಿಕೊಳ್ಳುತ್ತಾಳೆ. ಹಿರಿದೇವಿ ಭಕ್ತರಿಂದ ಮೊದಲ ಮಾನ ನನಗೆ ಸಿಗಬೇಕು, ಭಕ್ತರ ಮೊದಲ ದರ್ಶನ ನನ್ನದೇ ಆಗಬೇಕು ಎಂಬ ಕರಾರುಗಳೊಂದಿಗೆ ಮಾಯಕ್ಕಳಿಗೆ ಆಶ್ರಯ ನೀಡಿದಳಂತೆ. ಇಂದಿಗೂ ಚಿಂಚಲಿಯಲ್ಲಿ ಮೊದಲು ಹಿರಿದೇವಿಯ ದರ್ಶನ ಪಡೆದು, ನೈವೇದ್ಯ ಸಲ್ಲಿಸಿದ ನಂತರವೇ ಮಾಯಕ್ಕಳಿಗೆ ಪೂಜೆ ಸಲ್ಲಿಸುವ ವಾಡಿಕೆ ಇದೆ. ಮಾಯವ್ವಳ ಗುಡಿಯನ್ನು ಪೂರ್ವದಿಂದ ಪ್ರವೇಶಿಸಿದರೆ ಎಡಗಡೆಗೆ ಮೊದಲು ಕಾಣುವುದು ಒಂದು ತೊಟ್ಟಿಲು. ಅದು ಹಿರಿದೇವಿಯ ತೊಟ್ಟಿಲು. ಮಕ್ಕಳಾಗದವರು ಅದನ್ನು ತೂಗಿದರೆ, ಮಕ್ಕಳಾಗುತ್ತದೆಂಬ ನಂಬಿಕೆಯಿದೆ. ಮಕ್ಕಳಾದವರು ಹಿರಿದೇವಿಯ ಹೆಸರಿನಲ್ಲಿ ತೊಟ್ಟಿಲನ್ನು ಕಟ್ಟಿ ಹರಕೆ ಸಲ್ಲಿಸುವ ಪದ್ಧತಿ ಈಗಲೂ ಇದೆ. ಗರ್ಭಗುಡಿಯಲ್ಲಿ ಪೂರ್ವಾಭಿಮುಖವಾಗಿರುವ ತ್ರಿಶೂಲ ಮತ್ತು ಖಡ್ಗಧಾರಿಣಿಯಾದ ಹಿರಿದೇವಿಯನ್ನು ಪ್ರತಿಷ್ಠಾಪಿಸಲಾಗಿದೆ.

ಹಿರಾಬಾಯಿಯ ತೊಟ್ಟಿಲು ? :

ಕೀಲ–ಕಟ್ಟ ರಾಕ್ಷಸರು ಮತ್ತು ಮಾಯವ್ವಳ ಮಧ್ಯೆ ಸಂಘರ್ಷ ನಡೆದಾಗ ಒಂದು ಸಲ ರಾಕ್ಷಸರು ಮಾಯವ್ವಳ ಮೇಲೆ ಆಕ್ರಮಣ ಮಾಡಿದರು. ತನ್ನ ಬೆನ್ನು ಹಿಂದೆ ಬಿದ್ದ ರಾಕ್ಷಸರಿಂದ ರಕ್ಷಣೆಗಾಗಿ ಅವಳು ಬೀದಿಯಲ್ಲಿ ಓಡುತ್ತ ಕೊನೆಗೆ ದೊಡ್ಡ ಮನೆಯಾದ ಗಾಣಿಗೇರ ಹಿರಾಬಾಯಿಯ ಮನೆಯನ್ನು ಪ್ರವೇಶಿಸಿದಳು. ಗಂಡಸರ್ಯಾರು ಇಲ್ಲದ ಮನೆಯಲ್ಲಿ ಒಬ್ಬಳೇ ಇದ್ದ ಹಿರಾಬಾಯಿ, ಪಡಸಾಲೆಯಲ್ಲಿರುವ ತೊಟ್ಟಿಲದಲ್ಲಿ ಮಗುವನ್ನು ಹಾಕಿ ತೊಟ್ಟಿಲು ತೂಗುತ್ತ ಮಗುವಿನ ಆರೈಕೆಯಲ್ಲಿ ನಿರತಳಾಗಿದ್ದಳು. ಇದೇ ಸಮಯದಲ್ಲಿ ಮನೆಗೆ ಬಂದ ಮಾಯವ್ವ ನನಗೆ ಸ್ವಲ್ಪ ಸ್ಥಳವನ್ನು ಕೊಡು ಸಾಧ್ಯವಾದಷ್ಟು ಬೇಗನೆ ಇಲ್ಲಿಂದ ಹೋಗುತ್ತೇನೆಂದು ಹೇಳಿದಳು. "ಹಿರಾಬಾಯಿಯು ಮಾಯಕ್ಕನ ವೀರಾವೇಶದ ಮುಖವನ್ನು ನೋಡಿ ನಮ್ಮ ಮನೆಯಲ್ಲಿ ಗಂಡಸರು ಯಾರು ಇಲ್ಲ ನನಗೆ ಹೆದರಿಕೆ ಬರುತ್ತದೆ ನೀನು ಹೊರಗೆ ಹೋಗು ಅಂದಳು."[೫೨]

ಆದರೆ ಮಾಯವ್ವ, ಕಷ್ಟದಲ್ಲಿರುವ ತನಗೆ ಸಹಾಯ ಮಾಡಬೇಕೆಂದು ಹಿರಾಬಾಯಿಯಲ್ಲಿ ಕೇಳಿಕೊಂಡಳು. ಅಲ್ಲದೆ ತನ್ನೆಲ್ಲ ಶಕ್ತಿಯನ್ನು ಹಿರಾಬಾಯಿಗೆ ನೀಡಿ, ಮನೆಯ ಒಂದು ಕೋಣೆಯಲ್ಲಿ ಅಡಗಿ ಕುಳಿತುಕೊಂಡಳು. ಮಾಯವ್ವಳನ್ನು ಹುಡುಕಿಕೊಂಡು ಬಂದ ದೈತ್ಯರು ಹಿರಾಬಾಯಿಯ ಮನೆಯನ್ನೆಲ್ಲಾ ಶೋಧಿಸಿದರು. ಆದರೆ ಆ ಮನೆಯಲ್ಲಿ ಎಲ್ಲಿ ನೋಡಿದರಲ್ಲಿ ಗಂಡಸರೇ ಕಾಣಿಸಿದರು. ಹಿರಾಬಾಯಿಯನ್ನು ಹೊರತು ಪಡಿಸಿ ಮಾಯವ್ವಳಾಗಲೀ ಅಥವಾ ಇನ್ನಾವುದೇ ಸ್ತ್ರೀಯರು ಆ ಮನೆಯಲ್ಲಿ ರಾಕ್ಷಸರಿಗೆ ಗೋಚರಿಸಲಿಲ್ಲ. ಮನೆಯಲ್ಲಿ ಯಾವ ಹೆಂಗಸರು ಇಲ್ಲವೆಂದು ಅವರು ಮನೆಯಿಂದ ಹೊರಹೋದರು.

ಕೀಲಾಸುರ ದೈತ್ಯರನ್ನು ಸಂಹಾರ ಮಾಡಿದ ತರುವಾಯ, ಮಾಯವ್ವ ಗಾಣಿಗೇರ ಹಿರಾಬಾಯಿಯನ್ನು ಭೇಟ್ಟಿ ಮಾಡಲು ಅವಳಲ್ಲಿಗೆ ಬರುತ್ತಾಳೆ. "ಹಿರಾ ನಿನ್ನ ಉಪಕಾರವು ನನ್ನ ಮೇಲೆ ಬಹಳಾಗಿದೆ."[೫೩] ರಾಕ್ಷಸರು ನನ್ನನ್ನು ಬೆನ್ನಟ್ಟಿ ಬಂದಾಗ ನೀನು ತೊಟ್ಟಿಲಲ್ಲಿ ಮಗುವನ್ನು ಆಡಿಸುತ್ತ ಹೊರಗೆ ಕುಳಿತು, ನನ್ನನ್ನು ಮನೆಯ ಒಳಗೆ ಬಚ್ಚಿಟ್ಟು ಉಪಕಾರ ಮಾಡಿರುವೆ. ನನ್ನ ದರ್ಶನಕ್ಕೆ ಬರುವ ಭಕ್ತರು ಮೊದಲು ನಿನ್ನ ಸ್ಮರಣಾರ್ಥವಾಗಿ ಕಟ್ಟಿದ ತೊಟ್ಟಿಲಕ್ಕೆ ಕೈ ಹಚ್ಚಿ ತೂಗಿ ನಮಿಸಿದ, ನಂತರವೇ ನನ್ನ ದರ್ಶನವನ್ನು ಪಡೆಯುವಂತಾಗಲೆಂದು ಅಭಯವನ್ನು ನೀಡಿದಳು. ಮಕ್ಕಳಾಗದ ದಂಪತಿಗಳು ಈ ತೊಟ್ಟಿಲನ್ನು ಭಕ್ತಿಯಿಂದ ತೂಗಿದರೆ ಮಕ್ಕಳಾಗುತ್ತವೆಂಬ ನಂಬಿಕೆ ಭಕ್ತರಲ್ಲಿ ಇಂದಿಗೂ ಇದೆ. ಅದರೆ ಮಾಯವ್ವಳ ದೇವಸ್ಥಾನ ಪ್ರವೇಶಿಸಿದಾಗ ಕಂಡು ಬರುವ ತೊಟ್ಟಿಲು ಹಿರಿದೇವಿಯದೇ ಅಥವಾ ಹಿರಾಬಾಯಿಯದೇ?. ಹಿರಿದೇವಿ ಮತ್ತು ಹಿರಾಬಾಯಿ ಇಬ್ಬರೂ ಒಂದೇ ಅಥವಾ ಬೇರೆ-ಬೇರೆಯೇ ಎಂಬುದಕ್ಕೆ ಸ್ಪಷ್ಟವಾದ ಉತ್ತರ ದೊರಕುವುದಿಲ್ಲ.

ಹುಟ್ಟಿಗೆ ಉಡುವುದು :

ದೇವಿಗೆ ಸಲ್ಲಿಸುವ ವಿವಿಧ ರೀತಿಯ ಹರಕೆಗಳಲ್ಲಿ ಇದು ಒಂದು. ಸವದತ್ತಿಯ ಯಲ್ಲಮ್ಮ ದೇವಿಗೆ ಸಲ್ಲಿಸುವಂತೆ ಭಕ್ತರು ಮಾಯವ್ವಳಿಗೂ ಹುಟ್ಟಿಗೆ ಉಡುವ ಸಂಪ್ರದಾಯವನ್ನು ಮಾಡುತ್ತಾರೆ. ಆದರೆ ಇಲ್ಲಿ ಯಲ್ಲಮ್ಮನಷ್ಟು ಪ್ರಮಾಣದಲ್ಲಿ ಕಂಡು ಬರುವುದಿಲ್ಲ. ಅದರೂ ಹುಟ್ಟಿಗೆ ಉಡುವ ಆಚರಣೆಯೂ ಇಲ್ಲಿ ಜೀವಂತವಾಗಿದೆ. ಮಹಾರಾಷ್ಟ್ರದ ಭಕ್ತರು ಮಾಯವ್ವಳಿಗೆ ಬೇವಿನ ಉಡಿಗೆಯ (ಹುಟ್ಟಿಗೆ) ಹರಕೆಯನ್ನು ಸಲ್ಲಿಸುತ್ತಾರೆ. ಹರಕೆ ತೀರಿಸುವವರು ಹಾಲುಹಳ್ಳದಲ್ಲಿ ಸ್ನಾನ ಮಾಡಿ ಮಡಿ ಬಟ್ಟೆಯಲ್ಲಿ ನಡುವಿಗೆ ಬೇವಿನ ಸೊಪ್ಪನ್ನು ಕಟ್ಟಿಕೊಂಡು ಮಾಯವ್ವಳನ್ನು ಪೂಜಿಸುತ್ತಾರೆ. ಭಕ್ತರು ಹಾಲಹಳ್ಳದ ದಂಡೆಯ ಮೇಲೆ ಸಾಮಾನ್ಯವಾಗಿ ಹುಟ್ಟಿಗೆ ಉಟ್ಟು ಹರಕೆಯನ್ನು ಸಲ್ಲಿಸುತ್ತಾರೆ. ಕೆಲವೊಮ್ಮೆ ದೇವಸ್ಥಾನದಲ್ಲಿಯೂ ಹುಟ್ಟಿಗೆ ಉಡುತ್ತಾರೆ. ಹುಟ್ಟಿಗೆ ಉಟ್ಟು ಹರಕೆ ಸಲ್ಲಿಸುವ ಭಕ್ತರಿಗೆ ದೇವದಾಸಿಯರು ಸಹಾಯ ಮಾಡುತ್ತಾರೆ. ಹುಟ್ಟಿಗೆ ಹರಕೆ ಸಲ್ಲಿಸಿದ ಭಕ್ತರು ಹೊಸ ಬಟ್ಟೆಗಳನ್ನು ತೊಟ್ಟುಕೊಂಡು ದೇವಿಗೆ ನಮಸ್ಕರಿಸುತ್ತಾರೆ. ಭಕ್ತರು ಈ ಹರಕೆಯನ್ನು ತಮ್ಮಿಷ್ಟದಂತೆ ೩ ಅಥವಾ ೫ ವರ್ಷಗಳವರೆಗೆ ಸಲ್ಲಿಸುತ್ತಾರೆ. ಕೆಲವೊಮ್ಮೆ ಭಕ್ತರು ಈ ಹರಕೆಯನ್ನು ರವಿವಾರ, ಹುಣ್ಣಿಮೆಗಳಂದು ಕೂಡ ಸಲ್ಲಿಸುತ್ತಾರೆ. ಒಂದು ಕಾಲಕ್ಕೆ ಧಾರ್ಮಿಕವಾಗಿ ಅದ್ದೂರಿಯಾಗಿ ಆಚರಣೆ ಎನಿಸಿಕೊಳ್ಳುತ್ತಿದ ಹುಟ್ಟಿಗೆ ಉಡುವುದು ಈಗ ಅಗೌರವದ ಪದ್ಧತಿ ಎನಿಸುವುದರಿಂದ ಮತ್ತು ಸಾಮಾಜಿಕ ಬದಲಾವಣೆಯ ಕಾರಣವಾಗಿ ಆಚರಣೆ ಕಣ್ಮರೆಯಾಗುತ್ತಿದೆ.

ದೇವಿಯ ಭಂಡಾರ :

ಶ್ರೀ ಕ್ಷೇತ್ರದಲ್ಲಿ ಬಳಕೆಯಾಗುವ ವಸ್ತುಗಳಲ್ಲಿ ಭಂಡಾರವು ಪ್ರಮುಖವಾದುದಾಗಿದೆ. ಬರುವಂತ ಭಕ್ತರು ಜಾತ್ರೆ ಮತ್ತು ಉತ್ಸವಗಳಲ್ಲಿ ಬಂಗಾರಮಯವಾದ ಭಂಡಾರವನ್ನು ತೂರುತ್ತ ಒಬ್ಬರಿಗೊಬ್ಬರು ಮೈಯೆಲ್ಲಾ ಲೇಪನ ಮಾಡಿಕೊಳ್ಳುವುದು ಇಲ್ಲಿನ ಸಂಪ್ರದಾಯ. ಜಾತ್ರೆಗಳಲ್ಲಿ ಭಕ್ತರು ಭಕ್ತಿಯಿಂದ ಪರಸ್ಪರ ಭಂಡಾರ ತೂರುತ್ತ ಗರ್ಭಗುಡಿಗೆ ಗುಂಪು-ಗುಂಪಾಗಿ ಬರುವ ಸನ್ನಿವೇಶ ನೋಡುಗರ ಗಮನ ಸೆಳೆಯುತ್ತದೆ. ಹಬ್ಬ-ಉತ್ಸವಗಳಂದು, ಹುಣ್ಣಿಮೆಯಂದು ದೇವಸ್ಥಾನದ ಪೌಳಿಯು ಬಂಗಾರ ವರ್ಣದ ಭಂಡಾರದಿಂದ

ಹಳದಿವರ್ಣಮಯವಾಗಿ ಕಂಗೊಳಿಸುತ್ತದೆ. ವಿಚಿತ್ರವೆಂದರೆ ಮಾಯವ್ವಳ ಹೆಸರಿನಲ್ಲಿ ಭಕ್ತರೆಲ್ಲರೂ ಲೇಪಿಸಿಕೊಳ್ಳುವ, ಹಾರಿಸುವ ಭಂಡಾರವನ್ನು ಮಾಯ್ವಳಿಗೆ ಲೇಪಿಸುವುದಿಲ್ಲ. ಬಹುಶಃ ಈ ಕ್ರಮ ಭಂಡಾರ ಸಂಸ್ಕೃತಿಯಿಂದ, ವಿಭೂತಿ ಸಂಸ್ಕೃತಿಯತ್ತ ಹೊರಳಿರುವುದರ ಬಗ್ಗೆ ಸ್ಪಷ್ಟವಾದ ಮತ್ತು ಖಚಿತವಾದ ಉದಾಹರಣೆಯಾಗಿದೆ.

ಮಾಯವ್ವನ ಐತಿಹ್ಯಗಳು :

ಚಿಂಚಲಿಯ ಪಟ್ಟಣದ ತುಂಬೆಲ್ಲ ಮಾಯವ್ವನ ಐತಿಹ್ಯಗಳು ಹರಡಿಕೊಂಡಿವೆ. ಇವುಗಳು ಮಾಯವ್ವಳ ಕುರಿತಾಗಿ ಪೂರಕ ಮಾಹಿತಿಗಳನ್ನು ನೀಡುವುದರ ಜೊತೆಗೆ ಜನಸಾಮಾನ್ಯರಲ್ಲಿ ಮನೆ ಮಾಡಿಕೊಂಡಿರುವ ವಿಷಯಗಳನ್ನು ಸಾಕ್ಷಿಯೊಂದಿಗೆ ಸಮರ್ಥಿಸುತ್ತವೆ. ಕೆಲವರು ಐತಿಹ್ಯಗಳನ್ನು ಬಲವಾಗಿ ನಂಬುತ್ತಾರೆ. ಇನ್ನೂ ಕೆಲವರಿಗೆ ಇವುಗಳ ಮೇಲೆ ನಂಬಿಕೆ ಇಲ್ಲ. ಐತಿಹ್ಯಗಳ ಸತ್ಯಾಸತ್ಯೆಯು ಅವುಗಳನ್ನು ನಂಬುವ ಜನರ ಮೇಲೆ ನಿರ್ಧರಿತವಾಗುತ್ತದೆ. ಆದರೆ ಐತಿಹ್ಯಗಳು ಹೇಳುವ ಕಥೆಗಳು ಈ ಹಿಂದೆ ನಡೆದಿರಬಹುದಾದ ಘಟನೆಗೆ ಪೂರಕ ವಿಷಯಗಳಾಗಿ ಜನರು ನಂಬುವಂತೆ ಅವರ ಮನಸ್ಸನ್ನು ಪರಿವರ್ತಿಸುವಲ್ಲಿ ಪರಿಣಾಮಕಾರಿ ಕೆಲಸ ಮಾಡುತ್ತವೆ ಎನ್ನುವುದು ಮಾತ್ರ ಸತ್ಯ. ಚಿಂಚಲಿಯಲ್ಲಿರುವ ಮಾಯವ್ವಳ ಪ್ರತಿ ಐತಿಹ್ಯವು ಕಥೆಯೊಂದರಿಂದ ಹೆಣೆಯಲ್ಪಟ್ಟಿದೆ. ಹೀಗಾಗಿ ಮಾಯಕ್ಕಳ ಪರಿಚಯಕ್ಕೆ ಇವುಗಳು ಮಹತ್ವಪೂರ್ಣ ಎನಿಸುತ್ತವೆ. ಈ ಐತಿಹ್ಯಗಳು ಚಿಂಚಲಿ ಊರಲ್ಲಿ ಮತ್ತು ಊರ ಹೊರಗೆ ಒಂದೆರಡು ಕಿ. ಮೀ. ಅಂತರದಲ್ಲಿ ಕಂಡು ಬರುತ್ತವೆ. ಹೊರಗಿನ ಕಿಲಕಟ್ಟಿ, ಒಳಗಿನ ಕಿಲಕಟ್ಟಿ, ಹಾಲುಹಳ್ಳ, ಉಣ್ಣೆ ಮಟ್ಟೆಪ್ಪನ ಕಲ್ಲುಗಳು, ಬಂಗಾರ ಗಿಡ, ಎಡಿ ಮಾಯವ್ವ, ಕರಗುತ್ತಿ, ಗುಡ್ಡದತಾಯಿ, ಹೊಸಬಾಂವಿ, ದೀಪಸ್ತಂಭ, ಕ್ವಾರಿಕೊಪ್ಪ, ಕುದುರೆ ಸ್ಮಶಾನ, ಮುಂತಾದವು ಮಾಯವ್ವಳ ಕುರಿತಾಗಿ ಇರುವ ಐತಿಹ್ಯಗಳು.

ಕಿಲಕಟ್ಟಿ :

ಮಾಯವ್ವ ಕುರಿತಾಗಿ ಕಂಡು ಬರುವ ಅತಿ ಮುಖ್ಯ ಐತಿಹ್ಯಗಳಲ್ಲಿ ಈ ಕಿಲಕಟ್ಟಿಗಳು ಪ್ರಮುಖವಾದವುಗಳು. ಕೀಲ ಮತ್ತು ಕಟ್ಟ ಎಂಬ ರಾಕ್ಷಸರನ್ನು ಮಾಯಕ್ಕ ಚಿಂಚಲಿಯಲ್ಲಿ ಸಂಹಾರ ಮಾಡಿದಳು ಎಂಬುದಕ್ಕೆ ಒಳಗಿನ ಕೀಲಕಟ್ಟಿ ಮತ್ತು ಹೊರಗಿನ ಕೀಲಕಟ್ಟಿಗಳೇ ಸಾಕ್ಷಿಯಾಗಿವೆ. ಮಾಯವ್ವ ಕೀಲಕಟ್ಟರ ರಾಕ್ಷಸರನ್ನು ಸಂಹರಿಸಲು ಸುಧಿರ್ಘ ಹೋರಾಟವನ್ನೇ ಮಾಡಬೇಕಾಯಿತು. ಯುದ್ಧ ಸಮಯದಲ್ಲಿ "ಮಾಯವ್ವನನ್ನು ರಾಕ್ಷಸರು ಬೆನ್ನಟ್ಟಿದ್ದರಂತೆ, ಅವಳು ಅಡಗಿಕೊಳ್ಳಲು ಓಡಾಡಿದಳು, ಕರಗುತ್ತಿ ಹತ್ತಿರ ಕರಗಿದಳು. ಎಡೆ ಮಾಯವ್ವನ ಬಳಿಯಲ್ಲಿ ಎಡವಿದಳು. ಗುಡತಾಯಿ ಸ್ಥಳದಲ್ಲಿ ಕೂತಳು, ಕ್ವಾರಿಕೊಪ್ಪದಲ್ಲಿ ಕಾರಿದಳು. ಕೊನೆಗೆ ಕಿಲಕಟ್ಟಿ ಹತ್ತಿರ ರಾಕ್ಷಸರ ಸಂಹಾರ ಮಾಡಿದಳೆಂದು ಹೇಳುವರು."[೨೪] ೩ ವರ್ಷಗಳಿಗೊಮ್ಮೆ ಕೀಲ ಮತ್ತು ಕಟ್ಟರಿಗಾಗಿ ಜಾತ್ರೆಯನ್ನು ಮಾಡಲಾಗುತ್ತದೆ.

ಹಾಲಹಳ್ಳ :

ಮಾಯಕ್ಕಳ ಪ್ರಮುಖ ಐತಿಹ್ಯಗಳಲ್ಲಿ ಹಾಲಹಳ್ಳವು ಒಂದು. ಚಿಂಚಲಿಯ ನೈಋತ್ಯಕ್ಕೆ ಅರ್ಧ ಕಿ. ಮೀ. ಅಂತರದಲ್ಲಿ ಹಾಲಹಳ್ಳ ಹರಿಯುತ್ತದೆ. ಇದು ಪಶ್ಚಿಮಕ್ಕೆ ಹರಿದು ಕೃಷ್ಣಾ ನದಿಯನ್ನು ಸೇರುತ್ತದೆ.

ಮಾಯಕ್ಕಾ ಒಂದು ದಿನ ಚಿಂಚಲಿ ಹೊರವಲಯದ ಹಳ್ಳದ ಹತ್ತಿರ ಹೋಗಿ ಅಲ್ಲಿ ಕುರಿ ಕಾಯುತ್ತಿದ್ದವನ ಬಳಿ ಸ್ವಲ್ಪ ಹಾಲು ಬೇಕೆಂದು ಕೇಳಿಕೊಂಡಳಂತೆ. ಆತ ನಿರಾಕರಿಸಿದಾಗ ಮಾಯಕ್ಕಾ ತನ್ನ ಶಕ್ತಿಯಿಂದ ಹಳ್ಳವೆಲ್ಲವೂ ಹಾಲಾಗಿ ಹರಿಯಲಿ ಎಂದಳಂತೆ. ಆಗ ಹಳ್ಳವೆಲ್ಲ ಹಾಲಾಗಿ ತುಂಬಿ ಹರಿಯಿತೆಂಬ ಐತಿಹ್ಯವಿದೆ. ಅದಕ್ಕಾಗಿ ಇಂದಿಗೂ ದೇವಿಯ ಲಕ್ಷಾಂತರ ಭಕ್ತರು ಈ ಹಾಲಹಳ್ಳದಲ್ಲಿ ಪವಿತ್ರ ಸ್ನಾನ ಮಾಡುವುದುಂಟು. ದೇವಿಯ ಭಕ್ತರು ಐತಿಹಾಸಿಕ ಪವಿತ್ರ ಹಾಲಹಳ್ಳದ ನೀರಿನಲ್ಲಿ ಸ್ನಾನ ಮಾಡಿ ಅಲ್ಲಿಂದ ದೇವಸ್ಥಾನದವರೆಗೆ ಮಡಿ ಬಟ್ಟೆಯಲ್ಲಿಯೇ ಬಂದು ಪೂಜೆ ಸಲ್ಲಿಸುವರು. ಇನ್ನೂ ಕೆಲವು ಭಕ್ತರು ದೀರ್ಘದಂಡ ನಮಸ್ಕಾರಗಳೊಂದಿಗೆ ಭಕ್ತಿ ಪೂರ್ವಕ ಸೇವೆ ಸಲ್ಲಿಸುವರು.

ಆದರೆ ಕಳೆದ ನಾಲ್ಕಾರು ವರ್ಷಗಳಿಂದ ಈ ಪರಿಸರದಲ್ಲಿ ಮಳೆ ಪ್ರಮಾಣ ಕಡಿಮೆಯಿರುವುದರಿಂದಾಗಿ ಹಾಲಹಳ್ಳದ ನೀರು ಜಾತ್ರೆಯ ಸಮಯದಲ್ಲಿ ದೊರಕುವುದೇ ಕಠಿಣವಾಗಿದೆ. ಇರುವ ಸ್ವಲ್ಪ ಪ್ರಮಾಣದ ನೀರು ಕಲುಷಿತವಾಗಿದೆ. ಈ ಹಿಂದೆ ಪವಿತ್ರವಾಗಿದ್ದ ಐತಿಹಾಸಿಕ ಹಾಲಹಳ್ಳದ ನೀರು ಈಗ ಸಂಪೂರ್ಣ ಕಲುಷಿತಗೊಂಡಿರುವುದರಿಂದ ಹಾಗೂ ನೀರು ಹರಿದು ಹೋಗದಿರುವುದರಿಂದ ಭಕ್ತರು ಕೆಸರು ನೀರಿನಲ್ಲಿಯೇ ಅನಿವಾರ್ಯವಾಗಿ ಸ್ನಾನ ಮಾಡುವಂತಾಗಿದೆ. ಪ್ರತಿ ವರ್ಷವೂ ಜಾತ್ರೆಗೆ ಮುನ್ನ ಹಳ್ಳದಲ್ಲಿನ ತ್ಯಾಜ್ಯ ಹೊರ ತೆಗೆಯದೆ ಹಾಗೂ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿಸದೇ ಇರುವುದರಿಂದ ನೀರು ಸಂಪೂರ್ಣ ಮಲಿನವಾಗಿರುವುದು. ಪರಿಣಾವಾಗಿ ಭಕ್ತರಿಗೆ ಕೆಸರು ನೀರಿನ ಸ್ನಾನ ಮಾಡುವುದು ಅನಿವಾರ್ಯವಾಗಿದೆ.

ಉಣ್ಣೆ ಮಟ್ಟೆಪ್ಪನ ಕಲ್ಲು :

ಮಾಯವ್ವಳ ಕುರಿತಾಗಿ ಹಾಲಹಳ್ಳದ ಪಕ್ಕದಲ್ಲೇ ಇರುವ ಇನ್ನೊಂದು ಐತಿಹ್ಯವೆಂದರೆ ಉಣ್ಣೆಮಟ್ಟೆಪ್ಪನ ಕಲ್ಲುಗಳು. ಈ ಐತಿಹ್ಯಕ್ಕೂ ಒಂದು ಕಥೆಯಿದೆ. ಮಾಯವ್ವ ಒಂದು ದಿನ ಹಾಲಹಳ್ಳದ ಪಕ್ಕದಲ್ಲಿ ಕುರಿ ಕಾಯುತ್ತಿದ್ದವರ ಬಳಿ ಕುರಿಯ ಉಣ್ಣೆ ಕೊಡುವಂತೆ ಕೇಳಿದಾಗ ಅವರೂ ನಿರಾಕರಿಸುತ್ತಾರೆ. ಆಗ ಸಿಟ್ಟಿನಿಂದ ದೇವಿ ಕುರಿಗಳೆಲ್ಲವೂ ಕಲ್ಲಾಗಲಿ ಎಂದು ಶಪಿಸಿದಳಂತೆ. ಹೀಗಾಗಿ ಕುರಿಗಳೆಲ್ಲ ಕಲ್ಲಾಗಿ ಬಿದ್ದವು. ಇಂದಿಗೂ ಹಾಲ ಹಳ್ಳದ ದಡದಲ್ಲಿ ಗುಂಪಾಗಿ ಬಿದ್ದಿರುವ ಕಲ್ಲುಗಳನ್ನು ಉಣ್ಣೆ ಮಟ್ಟೆಪ್ಪನ ಕಲ್ಲುಗಳು ಎಂದು ಕರೆಯುವುದುಂಟು. ಉತ್ಸವ ಸಮಯದಲ್ಲಿ ದೇವಿಯ ಪಲ್ಲಕ್ಕಿ ಹಾಲಹಳ್ಳಕ್ಕೆ ಆಗಮಿಸಿದಾಗ ಕುರುಬರು ಉಣ್ಣೆ ಅರ್ಪಿಸುತ್ತಾರೆ. ಇಂತಹ ಕಲ್ಲುಗಳು ಈ ಪರಿಸರದ ಮತ್ತಾವ ಪ್ರದೇಶಗಳಲ್ಲಿಯೂ ಕಂಡು ಬರುವುದಿಲ್ಲ. ಈ ಐತಿಹ್ಯವು ಕುರುಬರಿಗೂ ಮತ್ತು ಮಾಯಕ್ಕಳ ಮಧ್ಯೆ ಇರುವ ನಿಕಟ ಸಂಬಂಧವನ್ನು ಕಲ್ಪಿಸುವುದರ ಜೊತೆಗೆ ಅವಳು ಹಾಲುಮತ ದೇವತೆ ಎಂಬುದನ್ನು ಪುಷ್ಟಿಕರಿಸುವುದರ ಜೊತೆಗೆ ಬೂದಿ ದಿಬ್ಬಗಳ ವಿಚಾರವನ್ನು ಕೆದಕುತ್ತದೆ.

ಗುಡ್ಡದತಾಯಿ :

ಚಿಂಚಲಿಯಿಂದ ಉತ್ತರಕ್ಕೆ ಒಂದು ಕಿ. ಮೀ. ಅಂತರದಲ್ಲಿ ಒಂದು ಸಣ್ಣ ಗುಡ್ಡವಿದೆ. ಅಲ್ಲಿಯೇ ಚಿಕ್ಕ ಗಾತ್ರದ ಗುಡಿ ಇದೆ. ಭಕ್ತರು ಗುಡಿಯಲ್ಲಿರುವ ದೇವಿಗೆ ಮಾಯವ್ವ ಎಂದು ಕರೆಯುವರು. ಗುಡಿಯ

ಮುಂದೆ ಕಟ್ಟೆಯಿದ್ದು ಅಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಕಿಲಕಟ್ಟರ ಸಂಹಾರದ ಸುಧೀರ್ಘ ಹೋರಾಟದಲ್ಲಿ ಮಾಯಕ್ಕ ಈ ಸ್ಥಳದಲ್ಲಿ ವಿಶ್ರಮಿಸಿದ್ದಳೆಂದು ಜನರು ಕಥೆ ಹೇಳುತ್ತಾ ಈ ಐತಿಹ್ಯವನ್ನು ಸಾಕ್ಷಿಕರಿಸುತ್ತಾರೆ. ದಸರಾ ಮಹೋತ್ಸವದ ಸಮಯದಲ್ಲಿ ಮಾಯಕ್ಕಾ ದೇವಿಯ ಕುದುರೆ, ಕಟ್ಲೆತ್ತು, ಪಲ್ಲಕ್ಕಿ ಮತ್ತು ಭಕ್ತರು ಈ ಸ್ಥಳಕ್ಕೆ ಆಗಮಿಸುತ್ತಾರೆ. ಅಷ್ಟೊಂದು ಪ್ರಾಮುಖ್ಯತೆಯನ್ನು ಈ ಐತಿಹ್ಯವು ಪಡೆದುಕೊಳ್ಳದಿದ್ದರು ಕೂಡ ಮಾಯವ್ವಳ ಕುರಿತಾಗಿ ಇರುವ ಐತಿಹ್ಯಗಳಲ್ಲಿ ಇದು ಕೂಡ ಒಂದಾಗಿದೆ.

ಎಡಿ ಮಾಯವ್ವಾ :

ಮಾಯವ್ವಳ ಕುರಿತಾಗಿ ಇರುವ ಇನ್ನೊಂದು ಐತಿಹ್ಯ ಇದಾಗಿದೆ. ಚಿಂಚಲಿಯಿಂದ ಪೂರ್ವಕ್ಕೆ ಕಲ್ಲುಗಳನ್ನೇ ಸೇರಿಸಿ ಕಟ್ಟಿದ ಗುಡಿ ಇದಾಗಿದ್ದು ಜನರು ಇದನ್ನು ಎಡಿ ಮಾಯವ್ವಳ ಗುಡಿಯೆಂದು ಕರೆಯುತ್ತಾರೆ. 'ಎಡಿ' ಎನ್ನುವ ಪದವು ಸಾಮಾನ್ಯವಾಗಿ ಎರಡು ಅರ್ಥಗಳನ್ನು ನೀಡುತ್ತದೆ. ಒಂದು 'ನೈವೆದ್ಯ' ಇನ್ನೊಂದು 'ಎಡುವುವದು' ಎಂಬರ್ಥಗಳಿದ್ದರೂ ಕೂಡ ಇಲ್ಲಿ ಮಾತ್ರ ಅದು 'ಎಡುವುವದು' ಎಂಬ ಅರ್ಥದಲ್ಲಿ ಬಳಕೆಯಾಗಿರುವುದಾಗಿ ಜನರು ಹೇಳುತ್ತಾರೆ. ಅಂದರೆ ಕೀಲಕಟ್ಟರ ಜೊತೆಗಿನ ಯುದ್ಧದಲ್ಲಿ ಮಾಯವ್ವ ಈ ಸ್ಥಳದಲ್ಲಿ ಎಡವಿದಳೆಂದು ಭಕ್ತರ ನಂಬಿಕೆ. ಆದರೆ ವಾಸ್ತವವಾಗಿ ಯೋಚಿಸಿದರೆ ನೈವೆದ್ಯದ ತಾಣವೆಂಬ ಅರ್ಥವೇ ಹೆಚ್ಚು ಅನ್ವರ್ಥಕವಾಗಿ ಬರುತ್ತದೆ. ದಸರಾ ಉತ್ಸವದ ಸಮಯದಲ್ಲಿ ಮಾಯವ್ವಳ ಕುದರೆ, ಕಟ್ಲೆತ್ತು, ಪಲ್ಲಕ್ಕಿ ಮತ್ತು ಭಕ್ತ ಸಮೂಹ ಇಲ್ಲಿಗೆ ಆಗಮಿಸುತ್ತದೆ.

ಬಂಗಾರ ಗಿಡ :

ಮಾಯವ್ವಳ ಪ್ರಮುಖ ಐತಿಹ್ಯಗಳಲ್ಲಿ ಒಂದಾದ ಇದು ಚಿಂಚಲಿಯಿಂದ ಪೂರ್ವಕ್ಕೆ ೧ ಕಿ. ಮೀ. ಅಂತರದಲ್ಲಿದೆ. ಬಂಗಾರಗಿಡವು ಹಲವಾರು ಮರಗಳಿಂದ ಕೂಡಿದ ತಾಣವಾಗಿದೆ. ಇಲ್ಲಿ ಪಶ್ಚಿಮಕ್ಕೆ ಮುಖಮಾಡಿ ಒಂದು ಚಿಕ್ಕ ಗುಡಿಯಿದ್ದು ಅದನ್ನು ಮಾಯವ್ವಳ ಗುಡಿಯೆಂದು ಕರೆಯುತ್ತಾರೆ. ದಸರಾ ಉತ್ಸವದಂದು ಭಕ್ತರು ಇಲ್ಲಿಗೆ ಬಂದು ಬನ್ನಿ ಮುಡಿದ ಮೇಲೆಯೇ ಇತರಿಗೆ ಬನ್ನಿ ಕೊಡುವ ಸಂಪ್ರದಾಯವಿರುವುದು. ಹೀಗಾಗಿ ಈ ಐತಿಹ್ಯವು ಮಾಯಕ್ಕಳ ಪ್ರಮುಖ ಐತಿಹ್ಯಗಳಲ್ಲಿ ಒಂದಾಗಿದೆ.

ದಸರಾ ಉತ್ಸವದ ಅಂಗವಾಗಿ ಒಂಭತ್ತನೆಯ ದಿನದಂದು ಸಂಜೆ ಮಾಯಕ್ಕಾ ದೇವಿಯ ಪಲ್ಲಕ್ಕಿ ಹಾಗೂ ಮುಖ್ಯ ವಾಹನವಾದ ಕುದುರೆ, ಕಟ್ಲೆತ್ತು, ಭಕ್ತರು, ಪೂಜಾರಿಗಳು ಮಂಗಳವಾದ್ಯಗಳೊಂದಿಗೆ ವಿವಿಧ ಜಾಗೃತ ಸ್ಥಳಗಳನ್ನು ಸುತ್ತಿಕೊಂಡು ಸೀಮೋಲ್ಲಂಘನ ಮಾಡುತ್ತ ಈ ಸ್ಥಳಕ್ಕೆ ಬರುವರು. ಎಲ್ಲರೂ ಬಂಗಾರ ಗಿಡದತ್ತ ಧಾವಿಸಿ ಬಂದು ಬನ್ನಿ ಮುಡಿಯುವರು. ಪಲ್ಲಕ್ಕಿ ದೇವಸ್ಥಾನಕ್ಕೆ ಬಂದು ತಲುಪಿದ ಮೇಲೆ ಭಕ್ತರು ಮಾಯವ್ವಳಿಗೆ ಬನ್ನಿ ಅರ್ಪಿಸಿದ ಅನಂತರವೇ ಬೇರೆಯವರಿಗೆ ಬನ್ನಿ ಕೊಡುತ್ತಾರೆ. ದೇವಿಯ ಬನ್ನಿ ಮುಡಿಯುವ ಪ್ರಮುಖ ಸ್ಥಳ ಇದಾಗಿರುವುದರಿಂದ ಈ ಸ್ಥಳವನ್ನು ಬಂಗಾರಗಿಡವೆಂದು ಕರೆಯುವುದು ವಾಡಿಕೆಯಾಗಿದೆ. ಮಳೆ ಕಡಿಮೆಯಾದ ಬರಗಾಲದ ಸಮಯದಲ್ಲಿ ಬಂಗಾರ ಗಿಡದ ಜಾತ್ರೆ ಮಾಡಿದರೆ ಮಳೆಯಾಗುತ್ತದೆ ಎಂಬ ನಂಬಿಕೆಯು ಜನರಲ್ಲಿ ಮನೆಮಾಡಿಕೊಂಡಿದೆ. ಈಗಲೂ ಬಂಗಾರ ಗಿಡದ ಜಾತ್ರೆಯು ಆಗಾಗ್ಗೆ ನಡೆಯುತ್ತಿದ್ದು ಇದಕ್ಕೆ ನಿರ್ದಿಷ್ಟ ದಿನಾಂಕ ಇಲ್ಲ. ಭಕ್ತರೆಲ್ಲ ಕೂಡಿಕೊಂಡು ತಮಗೆ ಅನುಕೂಲವಾದ

ದಿನವನ್ನು ನಿಗದಿಪಡಿಸಿಕೊಂಡು ಜಾತ್ರೆಯನ್ನು ಮಾಡುತ್ತಾರೆ. ಸಾಮಾನ್ಯವಾಗಿ ಮಂಗಳವಾರ, ಶುಕ್ರವಾರ, ರವಿವಾರಗಳಂದು ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಕಣಿ ಹೇಳುವುದು, ಡೊಳ್ಳಿನ ಹಾಡುಗಳನ್ನು ಹಾಡುವುದು, ದೇವಿಯ ಉಡಿ ತುಂಬುವುದು, ಮಹಾ ಪ್ರಸಾದ ವಿತರಿಸುವುದು ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ.

ಕ್ವಾರಿಕೊಪ್ಪ :

ಬಂಗಾರ ಗಿಡದ ಅನತಿ ದೂರದಲ್ಲಿ ಈ ಐತಿಹ್ಯದ ಸ್ಥಳವಿದೆ. ಮಾಯವ್ವಳು ಕಿಲಕಟ್ಟ ರಾಕ್ಷಸರನ್ನು ಸಂಹಾರ ಮಾಡುವ ಸಂದರ್ಭದಲ್ಲಿ ಇಲ್ಲಿ ಕಾರಿಕೊಂಡ(ವಾಂತಿ ಮಾಡಿದ)ಳೆಂಬ ಪ್ರತೀತಿ ಇದೆ. ದಿಣ್ಣೆಯ ಮೇಲಿರುವ ಈ ಸ್ಥಳದಲ್ಲಿ ಕೆಲವಾರು ಕಲ್ಲುಗಳಿದ್ದು ಅವುಗಳನ್ನೇ ಮಾಯವ್ವಳ ಹೆಸರಿನಲ್ಲಿ ಭಕ್ತರು ಪೂಜಿಸುತ್ತಾರೆ. ದಸರಾ ಉತ್ಸವದಲ್ಲಿ ಮಾಯವ್ವಳ ಪಲ್ಲಕ್ಕಿಯು ಈ ಸ್ಥಳವನ್ನು ಸುತ್ತಿಕೊಂಡು ಹೋಗುತ್ತದೆ.

ಕರಗುತ್ತಿ :

ಕ್ವಾರಿಕೊಪ್ಪದಿಂದ ಸ್ವಲ್ಪ ದೂರದಲ್ಲಿ ದಿಣ್ಣೆಯ ಮೇಲಿರುವ ಕಲ್ಲಿನ ಗುಡಿಯೇ ಕರಗುತ್ತಿಯ ಗುಡಿ. ಕೀಲಕಟ್ಟರನ್ನು ಸಂಹಾರ ಮಾಡುವ ಸಂದರ್ಭದಲ್ಲಿ ಮಾಯವ್ವ ಇಲ್ಲಿ ಕರಗಿದ್ದ(ಮಾಯವಾಗಿದ್ದ)ಳೆಂಬ ನಂಬಿಕೆಯಿದೆ. ದಸರಾ ಉತ್ಸವದಲ್ಲಿ ಮಾಯವ್ವಳ ಪಲ್ಲಕ್ಕಿಯು ದೇವಿಯ ಎಲ್ಲ ಜಾಗೃತ ಸ್ಥಳಗಳಿಗೆ ಭೇಟ್ಟಿ ನೀಡುವಂತೆ ಈ ಸ್ಥಳಕ್ಕೂ ಭೇಟ್ಟಿಯನ್ನು ನೀಡುತ್ತದೆ.

ಹೊಸಬಾಂವಿ :

ಊರಿನ ಮಧ್ಯಭಾಗದಲ್ಲಿ ಕಲ್ಲಿನಲ್ಲಿ ನಿರ್ಮಿಸಿದ ಬಾವಿಯು ಇದಾಗಿದೆ. ಬಾವಿ ಸುತ್ತಲೂ ನಿರ್ಮಿಸಿರುವ ಗೋಡೆಗಳಲ್ಲಿ ವಿವಿಧ ದೇವತೆಗಳ ವಿಗ್ರಹಗಳಿವೆ. ದಸರಾ ಉತ್ಸವದ ಸಮಯದಲ್ಲಿ ದೇವಿಯ ಪಲ್ಲಕ್ಕಿಯು ಇಲ್ಲಿಗೆ ಆಗಮಿಸುತ್ತದೆ. ಇದನ್ನು ಹೊರತು ಪಡಿಸಿ ಬೇರೆ ಯಾವ ವಿಶೇಷಗಳು ಈ ಐತಿಹ್ಯದೊಂದಿಗೆ ಬೆರೆತುಕೊಂಡಿಲ್ಲ.

ಹೀಗೆ ಮಾಯವ್ವನ ದೇವಾಲಯ ಮತ್ತು ಸುತ್ತ-ಮುತ್ತಲಿನ ಅನೇಕ ತಾಣಗಳು ಹೋರಾಟದ ಮತ್ತು ಆರಾಧನೆಯ ಜೀವಂತ ಸಾಕ್ಷಿಗಳಂತೆ ಕಂಡು ಬರುತ್ತವೆ. ವೀರ ಯೋಧಳಾಗಿ ರಾಕ್ಷಸರೊಂದಿಗೆ ಎಲ್ಲೆಲ್ಲ ಹೋರಾಟ ನಡೆಸಿರಬಹುದೆಂಬುದನ್ನು ಇವುಗಳನ್ನೆಲ್ಲ ಜೋಡಿಸಿದರೆ ತಿಳಿದು ಬರುತ್ತದೆ. ದೈತ್ಯ ಶಕ್ತಿಯ ಮೇಲೆ ದೈವ ಶಕ್ತಿಯ ವಿಜಯದ ಕುರುಹುಗಳೆಂಬಂತೆ ಜನಮನದಲ್ಲಿ ಇಂದಿಗೂ ಹಚ್ಚ-ಹಸಿರಾಗಿವೆ.

ಕೃಷ್ಣೆಯ ಮಡಿಸ್ನಾನ :

ಚಿಂಚಲಿಯ ಪಶ್ಚಿಮಕ್ಕೆ ಅನತಿದೂರದಲ್ಲಿ ಕೃಷ್ಣಾ ನದಿ ಹರಿಯುತ್ತದೆ. ದೇವಸ್ಥಾನದ ಸಮೀಪದಲ್ಲಿ ಹರಿಯುವ ಕೃಷ್ಣಾ ನದಿ ಪ್ರವಾಹ ಬಂದಾಗ ಅದರ ನೀರು ದೇವಸ್ಥಾನದ ಹಿಂದಿನ ಗೋಡೆಗೆ ತಟ್ಟುತ್ತದೆ. ಉತ್ಸವ ಮತ್ತು ಜಾತ್ರೆಗಳಿಗೆ ಆಗಮಿಸುವ ಭಕ್ತರು ಸ್ಥಳೀಯ ಕೃಷ್ಣಾ ನದಿಯಲ್ಲಿ ಪವಿತ್ರ ಸ್ನಾನ ಮಾಡಿ, ಅಲ್ಲಿಂದ ದೇವಸ್ಥಾನದವರೆಗೆ ಮಡಿ ಬಟ್ಟೆಯಲ್ಲಿಯೇ ಬಂದು ದೇವಿಗೆ ಹರಕೆ ಸಲ್ಲಿಸಲು ಉಪವಾಸ ವ್ರತ ಮಾಡುವುದು

ಇಲ್ಲಿಯ ವಾಡಿಕೆ. ಕೃಷ್ಣಾ ನದಿ ನೀರಿನ ಪಾವಿತ್ರತೆ ಅಪಾರವಾದದು. ನದಿಯಲ್ಲಿ ಸ್ನಾನ ಮಾಡುವುದೇ ಒಂದು ಪುಣ್ಯ ಎಂದು ಭಕ್ತರು ನಂಬಿಕೊಂಡಿರುವರು.

ದೇವಸ್ಥಾನದ ಜೀರ್ಣೋದ್ಧಾರ :

ಗ್ರಾಮದ ಹಿರಿಯರೇ ದೇವಾಲಯದ ಜೀರ್ಣೋದ್ಧಾರಗಳಿಗೆ ಶ್ರಮಿಸಿದ್ದಾರೆ. ದೇವಿಯ ಅಪ್ಪಟ ಆರಾಧ್ಯ ಭಕ್ತ ಶಿವರಾಮ ಪಡೋಲಕರ (ದೇವರಸಿ ಅಜ್ಜಾ) ಎಂಬುವರು ದೇವಸ್ಥಾನದ ಬೆಳವಣಿಗೆಗೆ ಬಹಳ ಹಿಂದೆ ಕೆಲಸ ಮಾಡಿದ ಇತಿಹಾಸವಿದೆ. ಅವರ ಕಾಲದಲ್ಲಿಯೇ ಗ್ರಾಮದ ಇನ್ನೂಳಿದ ಹಿರಿಯರೊಂದಿಗೆ ಸೇರಿ ದೇವಸ್ಥಾನದ ನಗಾರಿಖಾನೆ, ಮಂಟಪ, ದೇವಿಯ ಶಿಖರ ಕಟ್ಟಿಸಿದಾಗಿ ತಿಳಿದು ಬರುತ್ತದೆ. ಇವೆಲ್ಲ ೧೯೩೩ರಲ್ಲಿ ನಿರ್ಮಿತವಾಗಿವೆ. ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿಯ ಪೌಳಿಯೊಂದರಲ್ಲಿ ದೇವರಸಿ ಅಜ್ಜನ ಮೂರ್ತಿಯಿಟ್ಟು ಪೂಜಿಸಲಾಗುತ್ತದೆ. ೧೯೮೮ ರಲ್ಲಿ ದೇವಸ್ಥಾನದ ಟ್ರಸ್ಟ್ ಸಮಿತಿ ರಚನೆಯಾಗಿ ದೇಗುಲದ ಅಭಿವೃದ್ಧಿ ಕೆಲಸಗಳು ನಿರಂತರ ನಡೆಯುತ್ತಿವೆ. ಇಂದು ಟ್ರಸ್ಟ್ ಅಧ್ಯಕ್ಷ ಜಿತೇಂದ್ರ ಜಾಧವ ಅವರ ನೇತೃತ್ವದಲ್ಲಿ ಹಲವು ಯೋಜನೆಗಳು ಜಾರಿಗೆ ಬರುತ್ತಿವೆ. ಕೆಲವು ವರ್ಷಗಳಿಂದ ರಾಜ್ಯ ಸರ್ಕಾರ ಸಹ ಕೋಟಿಗಟ್ಟಲೆ ಅನುದಾನ ನೀಡಿರುವುದು. ಯಾತ್ರಿ ನಿವಾಸ, ಕೀಲ ಕಟ್ಟೆ ಕಾಮಗಾರಿಗಳು ಪೂರ್ಣಗೊಂಡಿವೆ. ಇನ್ನೂ ಮೂಲಭೂತ ಸೌಕರ್ಯಗಳನ್ನು ಪೂರೈಸುವ ಹಲವಾರು ಕಾಮಗಾರಿಗಳು ಆಗಬೇಕಾಗಿರುವುದು ಅವಶ್ಯಕ.

ಮಾಯವ್ವಳ ನಿಷಿದ್ಧಗಳು :

ಗ್ರಾಮ ದೇವತೆಗಳು ಇಡೀ ಗ್ರಾಮಕ್ಕೆ ಸಂರಕ್ಷಕ ಅಧಿದೇವತೆಯೇ ಆಗಿರುತ್ತವೆ. ಮಾನವ ತನ್ನ ರಕ್ಷಣೆಗಾಗಿ ದೇವತೆಗಳನ್ನು ನಿರ್ಮಿಸಿಕೊಂಡಿದ್ದು, ಅವುಗಳಲ್ಲಿ ಸಚೇತನ ಶಕ್ತಿಯನ್ನು ತುಂಬಿದೆ ಎಂದುಕೊಂಡು, ಅನಾದಿಕಾಲದಿಂದಲೂ ತುಂಬಾ ಭಯ-ಭಕ್ತಿಯಿಂದ ನಂಬಿ ಪೂಜಿಸಿಕೊಂಡು ಬಂದಿದ್ದಾರೆ. ಆ ಮೂಲಕ ನಂಬಿಕೆ ಹುಟ್ಟುಹಾಕಿ ಅದರ ಆಧಾರದ ಮೇಲೆ ಆಚಾರ-ವಿಚಾರ ರೂಢಿ-ಸಂಪ್ರದಾಯಗಳ ಗೋಪುರ ಕಟ್ಟಿ ಅಂದಿನಿಂದ ಇಂದಿನವರೆಗೂ ಪ್ರಕೃತಿಯ ನಡುವೆ ಬದುಕಲು ಆರಂಭಿಸಿದ್ದಾನೆ. ಹೀಗಾಗಿ ಗ್ರಾಮಸ್ಥರು ಎಂದೂ ದೇವತೆಯ ಆಚಾರ-ವಿಚಾರಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ. ಒಂದು ವೇಳೆ ವಿರುದ್ಧವಾಗಿ ನಡೆದುಕೊಂಡರೆ ದೇವತೆಯ ಶಾಪಕ್ಕೆ ಗುರಿಯಾಗುತ್ತೇವೆ ಎಂಬ ಬಲವಾದ ನಂಬಿಕೆಯ ಭಯ ಅವರದ್ದಾಗಿರುತ್ತದೆ. ದೇವತೆ ಸಿಟ್ಟಾದರೆ ರೋಗ-ರುಜಿನಿಗಳು ಉಂಟಾಗುತ್ತವೆ ಆ ಮೂಲಕ ಸಾಮಾಜಿಕ ಜೀವನವೇ ಅಲ್ಲೋಲ-ಕಲ್ಲೋಲವಾಗುತ್ತದೆಂಬ ಭಯ ಅವರದ್ದಾಗಿರುತ್ತದೆ. ಹೀಗಾಗಿ ಯಾರು ದೇವತೆಗಳ ನಿಯಮಗಳನ್ನು ಮೀರುವ ದುಸ್ಸಾಹಸಕ್ಕೆ ಹೋಗುವುದಿಲ್ಲ. ಹೀಗೆ ಒಂದು ದೇವತೆಯ ನಡೆ-ನುಡಿಗಳನ್ನು ಮೀರದ ನಿಯಮಾವಳಿಗಳನ್ನೇ 'ನಿಷಿದ್ಧ'ಗಳೆಂದು ಕರೆಯುತ್ತಾರೆ. ಈ ನಿಷಿದ್ಧಗಳು ಗ್ರಾಮದಿಂದ-ಗ್ರಾಮಕ್ಕೆ ಮತ್ತು ದೇವತೆಯಿಂದ-ದೇವತೆಗಳಿಗೆ ಬೇರೆ-ಬೇರೆಯಾಗಿರುತ್ತವೆ. ಅದರಂತೆ ಮಾಯಕ್ಕ ನಿಷಿದ್ಧಗಳು ವಿಶೇಷವಾಗಿ ಕಂಡು ಬರುತ್ತವೆ.

೧) ಮಾಯವ್ವಳನ್ನು ಪೂಜೆ ಮಾಡುವ ಪೂಜಾರಿಯು ಬ್ರಹ್ಮಚಾರಿಯಾಗಿರಬಾರದು. ಮದುವೆಯಾದ ಪುರುಷ ಪೂಜಾರಿ ಮಾತ್ರ ದೇವಿಯನ್ನು ಪೂಜೆ ಮಾಡುವ ಅರ್ಹತೆಯನ್ನು ಪಡೆದುಕೊಂಡಿರುತ್ತಾನೆ. ಮಹಿಳೆಯರಿಗೆ ದೇವಿಯ ಪೂಜೆ ಮಾಡುವುದು ನಿಷಿದ್ಧ.

೨) ದೇವಿಗೆ ಹುಗ್ಗಿ, ಹೋಳಿಗೆ, ಹಾಲು ಮುಂತಾದ ಸಸ್ಯಾಹಾರ ಪದಾರ್ಥಗಳನ್ನು ಮಾತ್ರ ನೈವೇದ್ಯವಾಗಿ ಅರ್ಪಿಸಬೇಕು. ಮಾಂಸಾಹಾರದ ನೈವೇದ್ಯವನ್ನು ಕಟ್ಟು-ನಿಟ್ಟಾಗಿ ನಿಷಿದ್ಧಗೊಳಿಸಲಾಗಿದೆ. ದೇವಿಗೆ ಪ್ರಾಣಿಬಲಿಯನ್ನು ಕೊಡುವುದಿಲ್ಲ. ಪೂಜಾರಿಗಳು ಶುದ್ಧ ಶಾಖಾಹಾರಿಗಳು. ಅವರಿಗೆ ಮಾಂಸಾಹಾರ ನಿಷಿದ್ಧ.

೩) ದೇವಿಯ ಕುದುರೆಯನ್ನು ಬೇರೆ ಯಾರೂ ಬಳಸುವಂತಿಲ್ಲ. ಪೂಜಾರಿಗಳು ಕುಳಿತ ಕೊಳ್ಳಲು ಕುದುರೆಯನ್ನು ಬಳಸುವಂತಿಲ್ಲ. ಪೂಜಾರಿಗಳು ಕುಳಿತುಕೊಳ್ಳಲು ಮಾತ್ರ ಕಟ್ಲೆತ್ತುಗಳನ್ನು ಉಪಯೋಗಿಸಬಹುದು. ಇವುಗಳನ್ನು ವ್ಯವಸಾಯಕ್ಕೆ ಬಳಸುವಂತಿಲ್ಲ.

೪) ದೇವಿಯ ಜಾತ್ರೆ-ಉತ್ಸವಗಳಲ್ಲಿ ಅಲಗ ಹಾಯುವ ಈರಗಾರರು ಮದುವೆಯಾಗಿರಬೇಕು.

೫) ದೇವಿಯ ಜಾತ್ರೆ-ಉತ್ಸವ ಜರಗುವ ಸಮಯದಲ್ಲಿ, ದೇವಿಯ ಪಲ್ಲಕ್ಕಿಗೆ ವಿರುದ್ಧವಾಗಿ ಯಾವುದೇ ಮೆರವಣಿಗೆಗಳು ಬರುವ ಹಾಗಿಲ್ಲ.

೬) ದೇವಿಯ ಭಕ್ತರು ಮಲಗಲು ಗಾದಿಯನ್ನು ಉಪಯೋಗಿಸುವ ಹಾಗಿಲ್ಲ.

೭) ದೇವಿಯ ದೇವಸ್ಥಾನದ ಆವರಣದಲ್ಲಿ ಸಂಸಾರ ಮಾಡುವಂತಿಲ್ಲ.

೮) ದೇವಿಯ ಅಲಂಕಾರಕ್ಕಾಗಿ ಬಳಸಿದ ಒಡವೆಗಳ ಮಾದರಿಯಲ್ಲಿಯೇ ಒಡೆವೆಗಳನ್ನು ಮಾಡಿಸಿಕೊಂಡು ಭಕ್ತ ಸ್ತ್ರೀಯರು ಬಳಸುವಂತಿಲ್ಲ.

೯) ದೇವಿಯ ಗೂಳಿಯನ್ನು ಯಾರು ಕಟ್ಟಿ ಹಾಕುವಂತಿಲ್ಲ ಮತ್ತು ಹಿಂಸಿಸುವಂತಿಲ್ಲ. ಅವುಗಳ ಓಡಾಟಕ್ಕೆ ಯಾರು ನಿರ್ಭಂದಿಸುವಂತಿಲ್ಲ.

೧೦)ದೇವಿಯ ಗುಡಿ ಹಾಗೂ ನಗಾರಿಖಾನೆ ಎತ್ತರಕ್ಕೆ ಮೀರಿ ಅಂದರೆ ಎರಡು ಅಥವಾ ಮೂರು ಅಂತಸ್ತಿನ ಮನೆಗಳನ್ನು ಭಕ್ತರು ಕಟ್ಟುವ ಹಾಗಿಲ್ಲ.

೧೧)ದೇವಿಯ ಭಕ್ತರಲ್ಲಿಯ ಕೆಲವರು ಕಾಲಲ್ಲಿ ಚಪ್ಪಲಿ ಧರಿಸುವುದಿಲ್ಲ ಮತ್ತು ಕೆಲವರು ಕಪ್ಪು ಬಟ್ಟೆಯನ್ನು ತೊಟ್ಟುಕೊಳ್ಳುವುದಿಲ್ಲ.

೧೨)ದೇವಿಯು ಭಕ್ತರ ಮೈಮೇಲೆ ಬಂದು ಕುಣಿಯುವುದನ್ನು ಯಾಥು ಅಣಕಿಸುವಂತಿಲ್ಲ.

೧೩) ದೇವಿಯ ಐತಿಹ್ಯಗಳಾದ ಹಾಲುಹಳ್ಳ, ಬಂಗಾರದ ಗಿಡ, ಕೀಲಕಟ್ಟೆ ಮುಂತಾದವುಗಳನ್ನು ಯಾರು ಹಾಳು ಮಾಡುವಂತಿಲ್ಲ.

೧೪)ದೇವಿಯ ಹಬ್ಬ-ಹರಿದಿನ ಜಾತ್ರೆ-ಉತ್ಸವಗಳಲ್ಲಿ ಆಚರಿಸಿಕೊಂಡು ಬಂದ ಪಾರಂಪರಿಕವಾದ ನಡೆದು ಬಂದ ಪದ್ಧತಿಗಳನ್ನು ಯಾರು, ಯಾವ ಕಾಲಕ್ಕೂ ಬದಲಿಸುವಂತಿಲ್ಲ.

೧೫)ರಾತ್ರಿ ದೇವಿಯ ಗರ್ಭಗೃಹವನ್ನು ಒಂದು ಸಾರಿ ಮುಚ್ಚಿದ ಮೇಲೆ ಮತ್ತಾವ ಕಾರಣಕ್ಕೂ ರಾತ್ರಿ ಬಾಗಿಲನ್ನು ತೆಗೆಯುವುದಿಲ್ಲ. ಮರುದಿನ ಮುಂಜಾನೆಯೇ ಬಾಗಿಲನ್ನು ತೆರೆಯುವುದು.

ಹೀಗೆ ಇನ್ನೂ ಹಲವಾರು ನಿಷಿದ್ಧಗಳು ಭಕ್ತ ವರ್ಗದಲ್ಲಿ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ತಲೆ–ತಲಾಂತರದಿಂದ ಈ ನಿಷಿದ್ಧಗಳು ನಡೆದುಕೊಂಡು ಬರುತ್ತಿದ್ದು ಇಂದಿಗೂ ತಮ್ಮ ಅಸ್ತಿತ್ವವನ್ನು ಸಾರುತ್ತವೆ. ಜನಸಾಮಾನ್ಯರ ಬದುಕಿನಲ್ಲಿ ಈ ನಿಷಿದ್ಧಗಳು ಹಾಸುಹೊಕ್ಕಾಗಿದ್ದು, ಕೆಲವುಗಳು ಬಹಿರಂಗಗೊಂಡರೆ ಇನ್ನೂ ಕೆಲವುಗಳು ಭಕ್ತರ ಅಂತರಾಳದಲ್ಲಿಯೇ ಆಚರಣೆಯಲ್ಲಿವೆ. ಭಕ್ತರು ಪಾಲಿಸುವ ನಿಷಿದ್ಧಗಳ ಹಿನ್ನೆಲೆಯಲ್ಲಿ ದೇವಿಯ ಪ್ರಭಾವವನ್ನು ಗುರುತಿಸಬಹುದಾಗಿದೆ.

ಜನಪದ ಸಾಹಿತ್ಯದಲ್ಲಿ ಮಾಯವ್ವಳ ಚರಿತ್ರೆ :

ಹಾಲುಮತ ದೇವರುಗಳನ್ನು ವೈದಿಕ ದೇವತೆಗಳು, ಪೌರಾಣಿಕ ದೇವತೆಗಳು, ಜನಪದ ದೇವತೆಗಳು ಮತ್ತು ಐತಿಹಾಸಿಕ ದೇವತೆಗಳು ಮುಂತಾದವುಗಳಾಗಿ ಕಾಲಮಾನದ ಹಿನ್ನೆಲೆ ಆಧರಿಸಿ ವರ್ಗೀಕರಿಸಬಹುದು. ಆದರೆ ಈ ಬಗೆಯ ದೇವರುಗಳಲ್ಲಿಯ ಎಲ್ಲರ ಬಗ್ಗೆ ಸರಿಯಾದ ಚಾರಿತ್ರಿಕ ವಿವರಗಳಾಗಲೀ ಐತಿಹಾಸಿಕ ಮಾಹಿತಿಗಳಾಗಲೀ ದೊರೆಯುವುದಿಲ್ಲವೆಂಬುದು ಕಟು ಸತ್ಯ. ಜನಪದ ದೇವತೆಗಳು ಬಹು ಜನರಿಂದ ಆರಾಧಿಸಲ್ಪಟ್ಟಾಗ, ಕಾಲಾನಂತರದಲ್ಲಿ ಕೆಲವರು ವಿಶೇಷ ಆಸಕ್ತಿ ವಹಿಸಿ ಈ ದೇವತೆಗಳನ್ನು ವೈದಿಕೀಕರಣಗೊಳಿಸಿ ಚಿತ್ರಿಸಿದ್ದಾರೆ. ಈ ದೇವತೆಗಳನ್ನು ಪುರಾಣ ದೇವತೆಗಳೊಂದಿಗೆ ಸಮೀಕರಿಸಿ ಒಂದು ಕಥೆಯನ್ನು ಹೊಸೆದು ಅದಕ್ಕೆ ಪೌರಾಣಿಕ ಚೌಕಟ್ಟನ್ನು ಸೃಷ್ಟಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆಗ ಮೂಲ ಪರಂಪರೆಯಲ್ಲಿನ ಕೆಲವುಗಳು ಮಾರ್ಪಾಡುಗಳಾಗುವುದರ ಜೊತೆಗೆ ಹೊಸ ವಿಷಯಗಳು ಸೇರಿಸಿಕೊಂಡಿವೆ.

ಕುರುಬರ ಸಂಸ್ಕೃತಿ ಪ್ರತೀಕವಾದ ಹಾಲುಮತ ಪುರಾಣಗಳಲ್ಲಿ ಮಾಯವ್ವಳ ಕಥೆ ಬರುತ್ತದೆ. ಮೌಖಿಕ ಪರಂಪರೆಗಳಲ್ಲಿ ಒಂದಾದ ಡೊಳ್ಳಿನ ಹಾಡುಗಳ ರೂಪದಲ್ಲಿದ್ದ ಇದು ಲಿಖಿತರೂಪ ಪಡೆಯುವಾಗ ಅನೇಕ ಬದಲಾವಣೆಗೊಳಗಾಗಿದ್ದು ನಿಸ್ಸಂದೇಹ. ಸಾಮಾನ್ಯವಾಗಿ ಅಭಿಮಾನದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಪುರಾಣಗಳು ದೈವಗಳನ್ನು ವೈಭವೀಕರಿಸುತ್ತವೆ. ಹಾಲುಮತ ಪುರಾಣಗಳಿಂದ ಹಾಗೂ ಡೊಳ್ಳಿನ ಹಾಡುಗಳಿಂದ ಮಾಯವ್ವ ಪೌರಾಣಿಕ ದೇವತೆಯೆಂದು ಜನಮನದಲ್ಲಿ ಗಟ್ಟಿಗೊಳಿಸುವ ಕಾರ್ಯ ಯಶಸ್ವಿಯಾಗಿಬಿಟ್ಟಿದೆ. ಕುರುಬ ಜನಾಂಗದ ಭಕ್ತರೆಲ್ಲರೂ ಮಾಯವ್ವ ಪೌರಾಣಿಕ ದೇವರು, ದೇವರ ಅವತಾರ ಎಂಬುದಾಗಿ ಇಂದು ದೃಢವಾಗಿ ನಂಬಿದ್ದಾರೆ.

"ಜನಮನದಲ್ಲಿ ಬೇರು ಬಿಟ್ಟಿರುವ ಈ ಬಗೆಯ ನಂಬುಗೆಯ ಹಿನ್ನೆಲೆಯಲ್ಲಿ, ತಮ್ಮ ದೇವರನ್ನು ಶ್ರೇಷ್ಠನನ್ನಾಗಿಸುವ, ಸರ್ವಶ್ರೇಷ್ಠನನ್ನಾಗಿಸುವ ಮನೋಧರ್ಮವೇ ಮೂಲಕಾರಣವಾಗಿರುತ್ತದೆ ಎಂಬುದನ್ನು ಈಗ ಚಿಂತನಶೀಲ ಸಂಶೋಧಕರು ಕಂಡು ಹಿಡಿದಿದ್ದಾರೆ. ಅಂತೆಯೇ ಸಂಬಂಧಿಸಿದ ಕಥಾನಕದಲ್ಲಿ ಎಷ್ಟೇ ವಿಸಂಗತಿಗಳುಂಟಾದರೂ ಎಷ್ಟೇ ವಿರೋಧಾಭಾಸಗಳು ತೋರಿದರೂ ತಮ್ಮ ದೇವರು ಅತೀ ಪ್ರಾಚೀನ ಕಾಲದ ಪೌರಾಣಿಕ ದೇವರುಗಳೊಂದಿಗೆ ವ್ಯವಹರಿಸುವಂತೆ ಸಂಬಂಧ ಜೋಡಿಸುವುದು, ಸಮೀಕರಿಸುವುದು ಇತ್ಯಾದಿಗಳು ಇಂಥ ಪುರಾಣಗಳಲ್ಲಿ ವ್ಯವಸ್ಥಿತವಾಗಿ ಸಾಗಿರುತ್ತದೆ. ಹಾಲುಮತ ಪುರಾಣಗಳಲ್ಲಿಯೂ ಈ ಪ್ರವೃತ್ತಿ ಕೆಲಸ ಮಾಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ".[೫೫]

ರಸ್ತಾಪೂರ ಭೀಮಕವಿಯ 'ಹಾಲುಮತ ಪುರಾಣ', ಡಾ. ವೀರಣ್ಣ ದಂಡೆ ಸಂಪಾದನೆಯ 'ಜನಪದ ಹಾಲುಮತ ಮಹಾಕಾವ್ಯ' ಮತ್ತು ಇತರೆ ಸಾಹಿತ್ಯಗಳಲ್ಲಿ ಚಿಂಚಲಿ ಮಾಯವ್ವಳ ಕುರಿತು ಎರಡು ಕಥೆಗಳ ಪ್ರಸ್ತಾಪವಿದ್ದು ಅವುಗಳ ಕಥಾಸಾರ ಹೀಗಿದೆ. ರಸ್ತಾಪೂರ ಭೀಮಕವಿ ಅಭಿಪ್ರಾಯದಂತೆ ಮಾಯವ್ವಾ ದೇವಾಂಗನೆಯ ಮಗಳು. ಒಮ್ಮೆ ಐವರು ದೇವಕನ್ಯೆಯರು ಭೂಲೋಕಕ್ಕೆ ಬಂದಾಗ ಒಂದು ವಟವೃಕ್ಷದ ಕೆಳಗೆ ವಿಶ್ರಮಿಸುತ್ತಿದ್ದರು. ಆಗ "ಶಿವನು ಕೊಲ್ಲಿಪಾಕಿಯಿಂದ ಬರುತ್ತಿರಲು ಮಧ್ಯಮಾರ್ಗದಲ್ಲಿ ವಟವೃಕ್ಷ ಕಂಡು ಅದರ ಕೆಳಗೆ ವಾಸಿಸುವ ಅಂಗನೆಯರನ್ನು ಕಂಡು ಅವರು ಗರ್ಭಧರಿಸಲಿ ಎಂದು ವಟವೃಕ್ಷಕ್ಕೆ ವರವನ್ನು ಕೊಟ್ಟ ಶಂಕರನು ತಕ್ಷಣದಲ್ಲಿ ಮುಂದಕ್ಕೆ ಹೋದನು. ದೇವಂಗನೆಯರು ಇತ್ತ ನೆರಳಲ್ಲಿ ವಿಶ್ರಮಿಸುತ್ತಿರಲು ಶಿವನ ಹೇಳಿಕೆಯಂತೆ ಅಬಲೆಯರು ನವಮಾಸ ಕಳೆಯಲು ಯುವತಿಯರು ತಮ್ಮ ತಮ್ಮೊಳಗೆ ಚಿಂತಿಸಿದರು. ಸುರರು ಇದನ್ನು ಕಂಡು ನಮ್ಮನ್ನು ದಂಡಿಸುವರೆಂದು ಪರಿಪರಿಯೊಳು ಚಿಂತಿಸಿ ಚಳ್ಳುಗರಿಯಿಂದ ಹೊಟ್ಟೆಯನ್ನು ಚರಚರನೆ ಸೀಳಿ"[೫೧]ದರು. ಗರ್ಭ ಭೇದಿಸಿಕೊಂಡು ತಮ್ಮ ಐದು ಕೂಸುಗಳನ್ನು ತೆಪ್ಪದ ಮೇಲಿಟ್ಟು ನದಿಯಲ್ಲಿ ತೇಲಿ ಬಿಟ್ಟು, ತಮ್ಮ ಮೂಲ ಸ್ಥಳಕ್ಕೆ ಹಿಂತಿರುಗಿದರು.

"ಮೇಷಮಂಡಲದ ಕುರುಬೇರಿ ಎಂಬಲ್ಲಿ ಚಾಮರಾಯ (ದಿಬ್ಬರಾಯ) ಎಂಬ ಕುರುಬ ಮುಂದಾಳು ಸಾವಿರಾರು ಕುರಿಗಳನ್ನು ಸಾಕಿಕೊಂಡಿದ್ದನು. ಈತನಿಗೆ ಶಾಂಭವಿ ಎಂಬ ಮಡದಿಯಿದ್ದಳು. ಚಾಮರಾಯನು ಕುರಿಗಳಿಗಾಗಿ ಐದು ಪ್ರತ್ಯೇಕ ಹಟ್ಟಿಗಳನ್ನು ಕಟ್ಟಿಸಿದ್ದನು. ಭರಮದೇವನ ಚಂದ್ರಗಿರಿಯ ಅರಮನೆಗೆ ಈತನೇ ಪ್ರತಿನಿತ್ಯ ಹಾಲು ಪೂರೈಸುತ್ತಿದ್ದನು."[೫೨] ಒಂದು ದಿನ ನದಿ ದಡದಲ್ಲಿ ಹಟ್ಟಿ ಚಾಮರಾಯ ಕುರಿಗಳನ್ನು ಕಾಯುತ್ತಿದ್ದ. ಅದೇ ವೇಳೆಗೆ ನದಿ ದಡಕ್ಕೆ ತೆಪ್ಪವು ಬಂದು ತಲುಪಿತು. ತೆಪ್ಪದಲ್ಲಿದ್ದ ಐದು ಕೂಸುಗಳನ್ನು ಅಂಜದೆ ತೆಗೆದುಕೊಂಡು ಮನೆಗೆ ಬಂದು ಹೆಂಡತಿಯಾದ ಸದಮಲಜ್ಞಾನಿ ಶಾಂಭವಿಗೆ ನೀಡಿದನು. ಮುಪ್ಪಾವಸ್ಥೆಯಲ್ಲಿ ಆ ದೇವರೇ ತನಗೆ ಮಕ್ಕಳನ್ನು ಕರುಣಿಸಿದನೆಂದು ತಿಳಿದುಕೊಂಡ ಶಾಂಭವಿ ಸುತ್ತಲಿನ ಸ್ತ್ರೀಯರನ್ನು ಕರೆದು ತೊಟ್ಟಿಲದೊಳಿಟ್ಟು ಅವುಗಳಿಗೆ ಲಕ್ಕಮ್ಮ, ಮಾಯಮ್ಮ, ಮಂಕಮ್ಮ, ಮಾಳಾಕಮ್ಮ ಮತ್ತು ಅಕ್ಕಮ್ಮ ಎಂದು ಹೆಸರಿಟ್ಟು ಸಲುಹಿದರು. ಇವರು ಬೆಳೆದು ದೊಡ್ಡವರಾಗಿ ಒಂದು ದಿನ ಕುರಿಕಾಯುತ್ತಾ ಹಾಲಹವೇಲಿ ಹಳ್ಳಕ್ಕೆ ಬಂದರು. ಆಗ ಗಿಡದ ಮೇಲೆ ನೇತಾಡುವ ತೊಟ್ಟಿಲದಲ್ಲಿರುವ ಶಿಶು ಪರಮ ಪ್ರೀತಿಯಿಂದ ಚೀತ್ಕಾರದ ಧ್ವನಿ ಮಾಡಲು, ಆಗ ಅವರೆಲ್ಲರು ಶಿಶುವನ್ನು ಕಂಡು ನನಗೆ-ತನಗೆ ಬೇಕೆಂದು ವಾದ ಮಾಡಲಾರಂಭಿಸಿದರು. ಆಗ ಅಕ್ಕಮ್ಮ ಹೇಳಿದಂತೆ ಎಲ್ಲರೂ ಮರದ ಕೆಳಗೆ ಉಡಿಯೊಡ್ಡಿ ನಿಲ್ಲುವುದು, ಯಾರ ಉಡಿಗೆ ಬೀಳುವುದು ಮಗು ಅವರಿಗೆ ಸೇರಬೇಕೆಂಬ ಒಪ್ಪಂದವಾಯಿತು. ಮಗು ಅಕ್ಕಮ್ಮನ ಉಡಿಯಲ್ಲಿ ಬಿತ್ತು. ಅಕ್ಕಮ್ಮ ಶಿವಸಿದ್ಧಬೀರನೆಂದು ನಾಮಕರಣ ಮಾಡಿ ಮಗುವನ್ನು ಪೋಷಿಸಿದಳು.

ರಸ್ತಾಪೂರ ಭೀಮಕವಿಯು ಹಾಲ್ಮತೋತ್ತೇಜಕ ಪುರಾಣದಲ್ಲಿ ಹೇಳುವಂತೆ ಬೀರದೇವನನ್ನು ಸಾಕಿದವಳು ಅಕ್ಕಮ್ಮ. ಆದರೆ ಇದಕ್ಕೆ ಭಿನ್ನವಾದ ಅಭಿಪ್ರಾಯಗಳು ಜನಪದ ಹಾಲುಮತ ಮಹಾಕಾವ್ಯದಲ್ಲಿ ಹಾಗೂ ಜನಪದರು ಹೇಳುವ ಕಥೆ, ನಂಬಿಕೆಗಳಲ್ಲಿ ಮತ್ತು ಡೊಳ್ಳಿನ ಹಾಡುಗಳಿಂದ ವ್ಯಕ್ತವಾಗುವಂತೆ, 'ಅಕ್ಕ'ನಾಗಿ ಮಾಯವ್ವನೇ ಭೀರದೇವನನ್ನು ಸಾಕಿದಳೆಂದು ತಿಳಿದು ಬರುತ್ತದೆ. ಆದ್ದರಿಂದ ಇದೇ

ಅಭಿಪ್ರಾಯವನ್ನು ನಾವು ಸ್ವೀಕರಿಸಬೇಕಾಗುತ್ತದೆ. ಬಹುಶಃ ಈ ಅಕ್ಕಮ್ಮನೇ ಮಾಯವ್ವನ ಗುಡಿಯಲ್ಲಿರುವ ಹಿರೇದೇವಿಯಾಗಿದ್ದರೂ ಆಗಿರಬಹುದು.

ಮರ್ತ್ಯಕ್ಕೆ ಮಾಯವಾಗಿ ಬಂದ ಮಾಯವ್ವಾ :

ಇನ್ನೊಂದು ಕಥೆಯ ಪ್ರಕಾರ ದೇವಗಿರಿಯ ಅರಸ ದೇವೆಂದ್ರರಾಯ. ಮಡದಿ ಸುಭದ್ರಿ. ಅವರಿಗೆ ಲಕ್ಕವ್ವ, ಬನದವ್ವ, ಕಾಳವ್ವ ಮೊದಲಾದ ಆರು ಮಕ್ಕಳ ಜನನದ ನಂತರ ಏಳನೆಯ ಹೆಣ್ಣುಮಗುವಾಗಿ ಮಾಯವ್ವಾ ಸ್ವರ್ಗದಲ್ಲಿ ಜನಿಸುತ್ತಾಳೆ. ಮಗು ಹುಟ್ಟಿದ ಗಳಿಗೆ ಸರಿಯಿಲ್ಲವೆಂದು ಜೋಯಿಸರು ಹೇಳಿದಾಗ ದೇವೇಂದ್ರರಾಯ ಮಗುವನ್ನು ಬಂಗಾರದ ಪೆಟ್ಟಿಗೆಯಲ್ಲಿ ಹಾಕಿ ಭೂಮಿಯ ಮೇಲಿರುವ ನದಿಯಲ್ಲಿ ತೆಪ್ಪ ಮಾಡಿ ತೇಲಿ ಬಿಟ್ಟನು. ನದಿ ದಡದಲ್ಲಿ ತಪಸ್ಸಿಗೆ ಕುಳಿತ ಋಷಿಗೆ ಪೆಟ್ಟಿಗೆ ದೊರೆಯಿತು. ಪೆಟ್ಟಿಗೆ ತೆರೆದು ನೋಡಿದರೆ ಒಳಗೆ ಚಂದ್ರನಂತೆ ಹೊಳೆಯುವ ಹೆಣ್ಣುಮಗು. ಇದೇ ಸಮಯಕ್ಕೆ ದಿಬ್ಬಿ ಪಟ್ಟಣದ ದಿಬ್ಬರಾಯನ ಏಳು ಜನ ಹೆಣ್ಣುಮಕ್ಕಳು ಕುರಿ ಕಾಯುತ್ತ ಅಲ್ಲಿಗೆ ಬಂದರು. ಅವರನ್ನು ಕರೆದ ಋಷಿ 'ಪೆಟ್ಟಿಗೆ ನಮಗಿರಲಿ, ಕೂಸು ನಿಮಗಿರಲಿ' ಎಂದು ಮಗುವನ್ನು ಅವರ ಉಡಿಗೆ ಹಾಕುತ್ತಾನೆ. ಮಗುವಿನೊಂದಿಗೆ ಕುರಿಗಳನ್ನು ಹೊಡೆದುಕೊಂಡು ಸಾಯಂಕಾಲ ದೊಡ್ಡಿಗೆ ಹೋಗುತ್ತಾರೆ. ಬೆಳಗಾಗುವದರಲ್ಲಿ ಇಡೀ ಕುರಿಹಿಂಡಿನ ಲಕ್ಷಣವೇ ಬದಲಾಗುತ್ತದೆ. ಇದಕ್ಕೆಲ್ಲ ಕಾರಣ ತಮಗೆ ದೊರೆತ ಮಗುವೆಂಬ ಭಾವನೆಯನ್ನು ದಿಬ್ಬಿರಾಯನ ಮಕ್ಕಳು ವ್ಯಕ್ತಮಾಡುತ್ತಾರೆ. ಆಗ ದಿಬ್ಬರಾಯ ತನ್ನ ಹೆಂಡತಿ ಶಾಂಬಾಯಿಯನ್ನು ಕರೆದು ಮಗುವನ್ನು ಜೋಪಾನ ಮಾಡುವ ಜವಾಬ್ದಾರಿಯನ್ನು ಅವಳಿಗೆ ವಹಿಸಿ ಉಡಿಯಲ್ಲಿ ಹಾಕುತ್ತಾನೆ. ಶಾಂಬಾಯಿ ಮಗುವಿಗೆ ತಾಯಿಯಾಗಿ ಸಂಭ್ರಮದಿಂದ ತೊಟ್ಟಿಲು ಕಟ್ಟಿ ಹೆಸರಿಡುವಳು.

ಮಹಾಲಕ್ಷ್ಮೀನಂತ ಕರದಾರೆ ಮಾದೇವಿನಂತ ಕರದಾರ
ಮಾದೇವಿನಂತ ಕರದಾರೆ ಕೈಲಾಸದಿಂದ ಬಂದಾರ
ಕೈಲಾಸದಿಂದ ಬಂದಾಳೆ ಮರ್ತ್ಯಕ ಮಾಯನಾದಾಳ
ಮರ್ತ್ಯಕ ಮಾಯನಾದಾಳೆ ಮಾಯವ್ವನಂತ ಕರದಾರ

ಹೀಗೆ ಮರ್ತ್ಯಕ್ಕೆ ಮಾಯವಾಗಿ ಬಂದುದರಿಂದ ಮಾಯವ್ವನೆಂಬ ಹೆಸರನ್ನು ಮಗುವಿಗೆ ಇಡುತ್ತಾರೆ. ದಿನದಿನಕ್ಕೂ ಕುರಿಗಳ ಲಕ್ಷಣ ಬದಲಾಗಿ ದಿಬ್ಬರಾಯನ ಏಳು ಹಿಂಡು ಕುರಿಗಳು ಫಲ ಕೊಡುತ್ತವೆ. ಇದರಿಂದ ಆತ ಇನ್ನಷ್ಟು ಶ್ರೀಮಂತನಾಗಿ ಇದಕ್ಕೆಲ್ಲ ಮಾಯವ್ವನೇ ಕಾರಣವೆಂಬ ಭಾವನೆ ಮನೆಯವರಲ್ಲಿ ಬರುತ್ತದೆ. ಮಾಯವ್ವಾ ದಿನದಿನಕ್ಕೆ ಬೆಳೆದು ದೊಡ್ಡವಳಾದಳು. ಏಳು ಹಿಂಡು ಕುರಿಗಳನ್ನು ತಾನೇ ಕಾಯುವುದಾಗಿ ಹಟ ಹಿಡಿದಳು. ದಿಬ್ಬರಾಯ ಒಪ್ಪಿಗೆ ನೀಡಿದಾಗ, ದುಂಡುಳ ಬಡಿಗೆ ಕೈಯಲ್ಲಿ ಹಿಡಿದು, ಕುರಿ ಹಿಂಡುಗಳನ್ನು ಕಾಡರುದ್ಧರಭೂಮಿ ಎನಿಸಿಕೊಂಡ ಕೊದಲಿಗಿ ನಂದನ ಬನಕ್ಕೆ ಹೊಡೆದಳು.

ಹೀಗೆ ಮಾಯವ್ವಾ ಕುರಿಕಾಯುತ್ತಾ ಇರಬೇಕಾದರೆ, ಆಕೆಯ ಆರು ಜನ ಅಕ್ಕಂದಿರು ಸ್ವರ್ಗದಿಂದ ಇಳಿದು ಬಂದು ಮಾಯವ್ವನನ್ನು ದಿನಾಲು ಹುಡುಕುತ್ತ ಒಂದು ದಿನ ಕಾಡರುದ್ಧರಭೂಮಿಗೆ ಬಂದರು. ಅಲ್ಲಿ ಹುಡುಕಾಡುತ್ತಿರುವಾಗ ಒಂದು ಹೆಜ್ಜೆ ಭಂಡಾರದ್ದು, ಇನ್ನೊಂದು ಹೆಜ್ಜೆ ಕುಂಕುಮದ್ದು ಇರುವುದನ್ನು

ಗಮನಿಸಿದ ಹಿರಿಯವಳಾದ ಅಕ್ಕವ್ವ, ಈ ಹೆಜ್ಜೆಗಳು ತನ್ನ ತಂಗಿ ಮಾಯವ್ವಳದೆಂದು ಗುರುತಿಸಿದಳು. ಮಾಯವ್ವನನ್ನು ಹಿಡಿದು 'ನೀನು ನನ್ನ ತಂಗಿ' ಎಂದಳು. ಇಬ್ಬರೂ ಮಾತನಾಡುತ್ತಿರುವಾಗ ಸ್ವರ್ಗಕ್ಕೆ ಹಿಂತಿರುಗುವ ವೇಳೆಯಾದ್ದರಿಂದ ಅಕ್ಕವ್ವಳನ್ನು ಬಿಟ್ಟು ಎಲ್ಲಾ ಐವರೂ ತಮ್ಮ ಸ್ಥಳಕ್ಕೆ ಹಿಂತಿರುಗಿ ಹೋದರು. ಅಕ್ಕವ್ವ ಮಾಯವ್ವಾನ ಜೊತೆ ಇಲ್ಲಿಯೇ ಉಳಿದುಕೊಂಡಳು.

ಅಕ್ಕವ್ವಳನ್ನು ಮನೆಗೆ ಕರೆದುಕೊಂಡ ಬಂದ ಮಾಯವ್ವ ತಂದೆಗೆ, ತಾನು ಯಾರ ಮಗಳೆಂದು ಪ್ರಶ್ನಿಸಿದಳು. ಇಕ್ಕಟ್ಟಿಗೆ ಸಿಲುಕಿಕೊಂಡ ದಿಬ್ಬರಾಯ ನಿಜ ಸಂಗತಿಯನ್ನು ಹೇಳಿದನು. ವಿಷಯ ತಿಳಿದುಕೊಂಡ ಮಾಯವ್ವಳಿಗೆ ಅಕ್ಕವ್ವ ತನ್ನ ಅಕ್ಕನೆಂಬುದು ಖಾತ್ರಿಯಾಗಿ ಅವಳ ಜೊತೆಯಲ್ಲಿ ಸ್ವತಂತ್ರವಾಗಿರಲು ಬಯಸಿದರು. ಆಗ ದಿಬ್ಬರಾಯ ಕೊಟ್ಟ ೩೫ ಕುರಿಗಳನ್ನು ಹೊಡೆದು ಕೊಂಡು ಅಕ್ಕ-ತಂಗಿ ಇಬ್ಬರೂ ಚಂದನಗಿರಿ (ಚಿಂಚಲಿ)ಗೆ ಬಂದು, ಮೆಟ್ಟು (ವಸತಿ) ಹಾಕಿದರು. ಒಂದು ದಿನ ಅವರಿಬ್ಬರೂ ಕೂದಲಿಗೆ ನಂದನವನ (ನಂದಿಕುರುಳಿ)ದಲ್ಲಿ ಕುರಿ ಕಾಯುತ್ತಿದ್ದಾಗ ಕೂಸು ಅಳುವ ಧ್ವನಿ ಕೇಳಿ ಅದನ್ನು ಹುಡುಕಿದಾಗ, ಕಂಚಿನಾಲದ ಮರವೊಂದರ ಮೇಲೆ ತೊಟ್ಟಿಲೊಂದು ನೇತಾಡುತ್ತಿತ್ತು. ಅಕ್ಕವ್ವ ತೊಟ್ಟಿಲು ಬಿಚ್ಚಲು ಪ್ರಯತ್ನಿಸಿದಾಗ ಇರುವೆ ಅವಳನ್ನು ಮುತ್ತಿ ದೂರ ಸರಿಸುತ್ತವೆ. ಆಗ ಮಾಯವ್ವ ಬಂದು ಇರುವೆಗೆ 'ಚಾಜ' ಕೊಟ್ಟ ಗಿಡ ಹತ್ತಿದಳು. ಮಧ್ಯೆ ಬಂದ ಸರ್ಪ, ಗಿಳಿ, ಜೇನು ನೊಣಗಳಿಗೆಲ್ಲ ವರಗಳನ್ನು ಕೊಟ್ಟು ಕೂಸಿನ ತೊಟ್ಟಿಲು ಬಿಚ್ಚುವಳು. ಕೂಸನ್ನು ಪಡೆಯುವುದಕ್ಕಾಗಿ ಅಕ್ಕ-ತಂಗಿಯರಲ್ಲಿ ವಾದ ನಡೆಯಿತು. ಆಗ ಅಲ್ಲಿಗೆ ಬಂದ ಎಳ್ಳಿಗುಂಪಿ ರಾಯಣ್ಣ 'ಕೂಸಿನ ತೊಟ್ಟಿಲು ಸುತ್ತು ಐದು ಸಲ ಸುತ್ತಿದಾಗ ಯಾರ ಎದೆಬದಿ ಚಿಗಿಯುತ್ತವೆಯೋ ಕೂಸು ಅವರದು' ಎಂಬ ಷರತ್ತು ಹಾಕಿದನು.

ಷರತ್ತಿನಲ್ಲಿ ಅಕ್ಕವ್ವ ಸೋತು, ಮಾಯವ್ವಾ ಗೆಲ್ಲುತ್ತಾಳೆ. ಮಾಯವ್ವನ ಎದೆಬದೆಗೆ ಚಿಗಿತು, ಬಾಣಂತಿ ರೂಪ ಬಂತು. ಎಳ್ಳಿಗುಂಪಿ ರಾಯಣ್ಣ ಕೂಸು ಬೀರಣ್ಣನನ್ನು ಮಾಯವ್ವನ ಉಡಿಗೆ ಹಾಕಿದ. 'ಜನಕ ತಮ್ಮನ ಮಾಡಿ, ಮನಕ ಮಗನ ಮಾಡಿ' ಬೀರಣ್ಣನನ್ನು ಸಲುಹಿದಳು.

ಸಿಕ್ಕ ಸಿಂಗೋಡಿ ತಮ್ಮನ ಲಿಂಗ ಬೀರಣ್ಣ ದೇವರ
ಸಿಕ್ಕ ಸಿಂಗೋಡಿ ಬೀರಣ್ಣ ದೇವರು ನನ್ನ ತಮ್ಮನಂದಾಳ

ಬಾಲಬೀರಣ್ಣ ಮಾಯವ್ವನ ಉಡಿಯಲ್ಲಿಯೇ ಬೆಳೆದನು. ತಮ್ಮ ಬೀರಣ್ಣ ಚಿಣಿ-ದಾಂಡು ಬೇಡಿದಾಗ ಉಡಿಯಲ್ಲಿ ಹೊನ್ನು ಕಟ್ಟಿಕೊಂಡು ಬಡಿಗೇರ ಮನೆಗೆ ಹೋಗಿ ಮಾಡಿಸಿ ತಂದು ಕೊಟ್ಟಳು. ಚೆಂಡಾಟದಲ್ಲಿ ಬೀರಣ್ಣ ಚೆಂಡು ಹೊಡೆದು ಸಾಹುಕಾರನ ಮಗ ಸಾವಿಗೆ ಕಾರಣನಾದಾಗ, ತಮ್ಮನನ್ನು ರಕ್ಷಿಸಲು ಚಂದನಗಿರಿ ಬಿಟ್ಟು ಬೆಳ್ಳಿಗಿರಿಗೆ ಹೋದಳು. ಬೀರಪ್ಪ ಯೌವನಿಗನಾದಾಗ ಸೋದರ ಮಾವನ ಮಗಳಾದ ಕನ್ನಿಕಾಮವ್ವೆಯನ್ನು ಗೆದ್ದು ತರಲು ಸಹಾಯ ಮಾಡಿದಳು. ತಮ್ಮನ ಮದುವೆಯ ನಂತರ ನಾಡ ಸಾಧುಣಿಗಾಗಿ ಅವನೊಂದಿಗೆ ಮುಂಗಿಪಟ್ಟಣ, ಕಾಯಿಕೊಂಕಣನಾಡು ಸುತ್ತಿದಳು. ಅಕ್ಕನ ಮಾನಹಾನಿಗೆ ಕೈ ಹಾಕಿದ ಬಾಗೆಯ ಬಂಕನಾಥನನ್ನು ಬೀರಣ್ಣ ಸಂಹರಿಸಿದನು. ಕೀಲ-ಕಟ್ಟ ರಾಕ್ಷಸರನ್ನು ಸಂಹಾರ ಮಾಡಿದ ಮಾಯವ್ವಾ ಖಾಯಂ ಆಗಿ ಚಿಂಚಲಿಯಲ್ಲಿಯೇ ನೆಲೆಸಿದಳು. ತಮ್ಮ ಬೀರಪ್ಪ ಬೆಳ್ಳಗಿರಿಗೆ ಹೋದ. ಹೀಗೆ ವಿವರಿಸುತ್ತಾ

ಹೋಗುವ 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿರುವ ಒಟ್ಟು ಹದಿನಾಲ್ಕು ಅಧ್ಯಾಯಗಳಲ್ಲಿ, ಮೂರು ಅಧ್ಯಾಯಗಳು ಮಾಯವ್ವಳ ಕಥೆಯನ್ನು ಹೇಳುತ್ತವೆ.

ಯಾವುದೇ ಅಲೌಕಿಕವಾದ ಅಂಶಗಳನ್ನು ಈಕೆಯ ವ್ಯಕ್ತಿತ್ವದಲ್ಲಿ ಬೆರೆಸದೆ ಅವಳನ್ನು ಚಾರಿತ್ರಿಕವಾಗಿ ಬಣ್ಣಿಸಿರುವ ಕಾರಣ ಈ ಕಾವ್ಯ ಅವಳಿಗೆ ನಿಜವಾದ ನ್ಯಾಯ ಒದಗಿಸಿದೆ. ಮಾಯವ್ವಾ ಬೀರಪ್ಪನಿಗಾಗಿ ತನ್ನ ಬದುಕನ್ನೇ ಮೀಸಲಿಟ್ಟ ತ್ಯಾಗಮಯಿ. ತಮ್ಮನ ಮದುವೆ ಮಾಡಿ ತಾನು ಮಾತ್ರ ಮದುವೆಯಾಗದೇ ಹಾಗೆಯೇ ಉಳಿಯುತ್ತಾಳೆ. ಬಾಗೆನಾಡಿನ ಸಂರಕ್ಷಳಾಗಿ, ಸಮಸ್ತ ಲೋಕ ತಾಯಿಯಾಗಿ ಪೂಜಿತವಾದವಳು ಮಾಯವ್ವಾ.

ಮಾಯವ್ವಳ ತವರು ಮನೆ :

ಡೊಳ್ಳಿನ ಹಾಡುಗಳಲ್ಲಿ, ಪುರಾಣ ಮತ್ತು ಮಹಾಕಾವ್ಯಗಳಲ್ಲಿ ಮಾಯವ್ವ ಸ್ವರ್ಗದಿಂದ ಬಂದವಳೆಂದು ಅವಳನ್ನು ಅಲೌಕಿಕವಾಗಿ ಚಿತ್ರಿಸುತ್ತವೆ. ಆದರೆ ಚಾರಿತ್ರಿಕವಾಗಿ ಅವಳ ಸಾಧನಾ ಕ್ಷೇತ್ರವನ್ನು ವಿಕ್ಷೀಸಿದಾಗ ಅವಳು ಲೌಕಿಕ ವ್ಯಕ್ತಿಯಾಗಿ ಕಾಣುತ್ತಾಳೆ. ಮಾಯವ್ವ ಬಾಗೆನಾಡಿನವಳೆಂದು ಜನಪದ ಹಾಲುಮತ ಮಹಾಕಾವ್ಯ ಹೇಳಿದರೆ, ಡೊಳ್ಳಿನ ಹಾಡುಗಳಲ್ಲಿ ಅವಳು ಕೊಂಕಣದವಳೆಂದು ತಿಳಿದು ಬರುತ್ತದೆ. ಮಾಯವ್ವಾ ಮಹಾರಾಷ್ಟ್ರದ ಮಾನದೇಶ(ಕೊಂಕಣ)ದಿಂದ ಬಂದು ಚಿಂಚಲಿಯಲ್ಲಿ ನೆಲೆಸಿದವಳೆಂದು ಕೊಂಕಣಿಗರ ಭಾವನೆ. ಅವರ ದೃಷ್ಟಿಯಲ್ಲಿ ಕೊಂಕಣವೇ ಮಾಯವ್ವನ ತವರು ಮನೆ. ಮಾಯಕ್ಕಾ ಚಿಂಚಲಿಗೆ ಬಂದು ನೆಲೆಸಿದ ನಂತರ ಅದು ಮಾಯಕ್ಕನ ಚಿಂಚಲಿ ಎಂದು ಪ್ರಸಿದ್ಧಿಯನ್ನು ಪಡೆಯಿತು. ಕೊಂಕಣಿಗರ ನೈವೇದ್ಯ ಬಂದ ನಂತರವೇ ಮಾಯವ್ವಳ ಜಾತ್ರೆ ಆರಂಭವಾಗುತ್ತದೆ. ಕೊಂಕಣ ನಾಡಿನ ನಗರ ಕೊಲ್ಹಾಪೂರ. ಅಲ್ಲಿಯ ಮಹಾಲಕ್ಷ್ಮೀಯೇ ಇಲ್ಲಿ ಮಾಯವ್ವ ಆಗಿರಬಹುದೇ? ಎನ್ನುವುದು ಚಿಂತನೀಯ. ನಿತ್ಯ ಪೂಜೆಯ ವೇಳೆ ಕೊಲ್ಹಾಪೂರದ ಮಹಾಲಕ್ಷ್ಮೀಯ ಹಣೆಯ ಮೇಲೆ ಭಂಡಾರ ಲೇಪಿಸಿ ಪೂಜೆ ಮಾಡುವುದರ ಹಿಂದಿನ ಅಂಶವನ್ನು ಅಧ್ಯಯನಿಸುವುದು ಅವಶ್ಯ.

ಕೊಲ್ಹಾಪೂರ ಭಾರತದ ಪ್ರಾಚೀನ ಶಕ್ತಿ ಪೀಠಗಳಲ್ಲೊಂದು. ೧೦ ನೇ ಶತಮಾನದಿಂದಲೂ ಬಾಗೆನಾಡು (ರಾಯಬಾಗ) ಕೊಲ್ಲಾಪೂರ ಸಂಸ್ಥಾನಿಕರ ಒಡೆತನಕ್ಕೆ ಒಳಪಟ್ಟಿತ್ತು. ಶಿಲಾಹಾರರ ಆಳ್ವಿಕೆಯಲ್ಲಿ ಕೊಲ್ಹಾಪೂರ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಕೊಲ್ಹಾಪೂರದ ಅರಸರು ರಾಯಬಾಗಕ್ಕೆ ಮೇಲಿಂದ ಮೇಲೆ ಬರುತ್ತಿದ್ದರು. ಇಲ್ಲಿನ ಕಾಡುಗಳಲ್ಲಿ ಅವರು ಬೇಟೆಯಾಡುವ ಹವ್ಯಾಸವನ್ನು ಹೊಂದಿದ ಬಗ್ಗೆ ಕೆಲವರು ತಿಳಿಸುತ್ತಾರೆ. ಇವರ ಆಡಳಿತಾವಧಿಯಲ್ಲಿಯೇ ಚಿಂಚಲಿಯನ್ನು ಜೈನ ಬಸದಿಯೊಂದಕ್ಕೆ ದತ್ತಿ ನೀಡಲಾಗಿತ್ತು. ಮಾಯವ್ವನ ಐತಿಹ್ಯಗಳು ಕೊಲ್ಹಾಪೂರದ ಮಹಾಲಕ್ಷ್ಮೀಯ ಐತಿಹ್ಯಗಳನ್ನು ಹೋಲುತ್ತವೆ. "ಗುಡ್ಡದ ತಾಯಿ ಕೊಲ್ಹಾಪೂರದ ಟೆಂಬಲಾಯಿಗೂ ಸಾಮ್ಯವಿದೆ. ಮರಾಠಿಯಲ್ಲಿ 'ಟೆಂಬುಳ' ಎಂದರೆ ಎತ್ತರದ ಸ್ಥಳ. ಟೆಂಬಲಾಯಿ ಮುನಿದು ಲಕ್ಷ್ಮೀಯ ಕಡೆಗೆ ಬೆನ್ನು ಮಾಡಿರುವಳಂತೆ. ಇಲ್ಲಿಯೂ ದೇವಿಯ ಬೆನ್ನು ಪೂಜೆ ಇದೆ, ಢೇರೆಯವರು ಮಾಯವ್ವನನ್ನು ಗಮನಿಸಿದ್ದರೆ ಮತ್ತಷ್ಟು ವಿವರಗಳು ಸಿಗಬಹುದಿತ್ತು. ಒಂದೊಂದು ಶಕ್ತಿ ಸ್ಥಳಗಳಲ್ಲಿ ಒಂದು ದೇವತೆಯೊಂದಿಗೆ ಮತ್ತೊಂದು ಸಹಚರ ದೇವತೆಯಿರುವುದು ಕಂಡುಬರುತ್ತದೆ. ಮಹಾಕಾಳಿಯು ಮಹಾಲಕ್ಷ್ಮೀಯ ಸಖಿಯೆಂದು ಹೇಳುವಂತೆ ಮಾಯವ್ವನ ಸಖಿ ಹಿರೇದೇವಿ."[೫೮]

ಜನಪದ ದೈವಗಳು ವೈದೀಕರಣಕ್ಕೆ ಒಳಗಾದಂತೆ ಕೆಲವು ಶಿಷ್ಟದೈವಗಳು ಮತ್ತು ದೇವಸ್ಥಾನಗಳು ಜನಪದೀಯತೆಗೆ ಶರಣಾಗಿವೆ ಇದಕ್ಕೆ ಉದಾಹರಣೆ ಸವದತ್ತಿ ಯಲ್ಲಮ್ಮ ಮತ್ತು ಚಿಂಚಲಿ ಮಾಯವ್ವಾ ಮಾಯವ್ವಾ ಅಪ್ಪಟ ಜನಪದ ದೇವತೆ ಅದರಲ್ಲಿಯೂ ಈ ನೆಲದ ದೈವ. ಮಹಾಲಕ್ಷ್ಮೀ, ಮಹಾಕಾಳಿ ಕೂಡ ಒಂದು ಕಾಲದ ಜನಪದ ದೈವಗಳೇ. ಕಾಲಕ್ರಮೇಣ ಶಿಷ್ಟರೂಪ ಪಡೆದುಕೊಂಡಿರಬಹುದು. ಆರಂಭದ ಮಾತೃಮೂಲದ ಉಗ್ರಸ್ವರೂಪದ ದೈವಗಳು ಶಿಷ್ಟತೆಯನ್ನು ಪಡೆದಾಗ ಸಾಮ್ಯಸ್ವರೂಪ ಪಡೆಯುವವು. ಲಕ್ಷ್ಮೀ ಜನಿಸಿದ್ದು ಕ್ಷೀರಸಾಗರದಲ್ಲಿ. ಕ್ಷೀರಸಾಗರರು ಅಂದರೆ ಗೊಲ್ಲರು ಅಥವಾ ಹಾಲುಮತದವರು. ಅವರಲ್ಲಿ ಜನ್ಮ ಜನ್ಮ ತಳೆದ ಜನಪದ ದೇವತೆಯೇ ಲಗಮವ್ವ

ಸೌಕರ್ಯಗಳು :

ಜಾತ್ರೆಗೆ ಬರುವ ಭಕ್ತರ ಹಿತದೃಷ್ಟಿಯಿಂದ ದೇವಸ್ಥಾನ ಟ್ರಸ್ಟ್ ಕಮೀಟಿ ಹಾಗೂ ಪಟ್ಟಣ ಪಂಚಾಯತಿಯವರು ಮೂಲ ಸೌಲಭ್ಯಗಳನ್ನು ಸಾಧ್ಯವಾದಷ್ಟು ಕಲ್ಪಿಸಲು ಶ್ರಮಿಸುತ್ತಿದ್ದಾರೆ. ಕೃಷ್ಣಾ ನದಿ ನೀರು ಸೇರಿದಂತೆ ಕ್ಷೇತ್ರದಲ್ಲಿನ ಕೊಳುವೆ ಭಾವಿಗಳಿಂದ ಭಕ್ತರಿಗೆ ನಿರಂತರ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಯಲಗಳ ವ್ಯವಸ್ಥೆಯನ್ನು ಮಾಡಿರುವರು. ಪೊಲೀಸ್ ಇಲಾಖೆ ಮತ್ತು ಗೃಹ ರಕ್ಷಕ ದಳದವರು ಜಾತ್ರೆ-ಉತ್ಸವಗಳಲ್ಲಿ ಕ್ಷೇತ್ರದ ಆವರಣದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಟ್ರಾಫಿಕ್ ಸಮಸ್ಯೆಯಾಗದಂತೆ ವಾಹನಗಳನ್ನು ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆಗೊಳಿಸುತ್ತಿರುವರು. ಕ್ಷೇತ್ರದ ಪರಿಸರದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿರುವರು.

ಧರ್ಮಶಾಲೆ ಅನ್ನದಾಸೋಹ ಮತ್ತು ಭಕ್ತರ ಕಾಣಿಕೆ :

ದೇವಿಯ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ವಸತಿ ಕಲ್ಪಿಸುವ ದೃಷ್ಟಿಯಿಂದ ಮೂರು ಅಂತಸ್ತಿನ ಕಟ್ಟಡವುಳ್ಳ ಧರ್ಮಶಾಲೆಯನ್ನು ನಿರ್ಮಿಸಲಾಗಿದೆ. ಕಟ್ಟಡವು ಸುಸಜ್ಜಿತವಾದ ೧೧೦ ಕೊಠಡಿಗಳನ್ನು ಹೊಂದಿದ್ದು ತಕ್ಕ ಮಟ್ಟಿಗೆ ಭಕ್ತರ ವಸತಿ ವ್ಯವಸ್ಥೆಯನ್ನು ಪೂರೈಸುತ್ತಿರುವುದು. ಜಾತ್ರೆಗೆ ಬರುವ ಭಕ್ತರ ಸಂಖ್ಯೆಯನ್ನು ಪರಿಗಣಿಸಿದರೆ ಇರುವ ಸೌಲಭ್ಯ ಸಾಲದು. ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಮಹಾಪ್ರಸಾದ ಇದ್ದು, ಪ್ರತಿದಿನ ನಿರಂತರವಾಗಿ ಅನ್ನ ದಾಸೋಹ ನಡೆಯುತ್ತದೆ. ದೇವಿ ದರ್ಶನಕ್ಕೆ ಬರುವ ಭಕ್ತರು, ಮುತ್ತು, ಹವಳಗಳನ್ನು ಹಾರಿಸುತ್ತಾರೆ. ಬಂಗಾರ, ಬೆಳ್ಳಿ, ನಗದು ಹಣ, ವಸ್ತು, ದವಸ ಧಾನ್ಯಗಳನ್ನು ಕಾಣಿಕೆ ನೀಡಿ ರಸೀದಿಯನ್ನು ಪಡೆದುಕೊಳ್ಳುತ್ತಾರೆ.

ಹೀಗೆ ಮಾಯವ್ವ ಉತ್ತರ ಕರ್ನಾಟಕದ ಮತ್ತು ದಕ್ಷಿಣ ಮಹಾರಾಷ್ಟ್ರದ ಬಹುದೊಡ್ಡ ಶಕ್ತಿ ದೇವತೆಯಾಗಿ ಪೂಜೆಗೊಳ್ಳುತ್ತಲಿದ್ದಾಳೆ. ಕರ್ನಾಟಕ ಮಾತ್ರವಲ್ಲದೇ ಇಡೀ ಭಾರತದ ಶಕ್ತಿ ದೇವತೆಗಳಲ್ಲಿ ಅವಳಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಈ ದೇವಿಯ ಪುರಾಣ ಕಥೆ, ನಂಬಿಕೆ, ಆರಾಧನೆಗಳನ್ನು ಗಮನಿಸಿದರೆ ಶೈವ ಪರಂಪರೆಯ ಜೊತೆಗೆ ಇರುವ ಸಂಬಂಧ ವಿಧಿತವಾಗುತ್ತದೆ. ಅದರಂತೆ ಸಿದ್ಧ, ನಾಥ, ಬೈರವ ಸಂಪ್ರದಾಯಗಳ ಸಂಬಂಧವು ಕೂಡ ಇದರೊಂದಿಗೆ ಜೋಡಣೆ ಪಡೆದಿವೆ. ಸ್ತ್ರೀ ಹೋರಾಟ, ಮಹಿಳೆಯ ಧರ್ಮ, ಶಕ್ತಿ ಶೌರ್ಯಗಳನ್ನು ಕೂಡ ಮಾಯವ್ವನ ಕಥೆಗಳು ಧ್ವನಿಸುತ್ತವೆ.

೩.೨.೨.೨ ಬೆಕ್ಕೇರಿ ಲಕ್ಕವ್ವ :

ಬಾಗೆನಾಡಿನ ಪ್ರಮುಖ ಸ್ತ್ರೀ ದೈವಗಳು ಎರಡು. ಒಬ್ಬಳು ಚಿಂಚಲಿಯ ಮಾಯವ್ವಾ ಮತ್ತೊಬ್ಬಳು ಬೆಕ್ಕೇರಿ ಲಕ್ಕವ್ವ. ಬೆಕ್ಕೇರಿ ಮತ್ತು ಚಿಂಚಲಿ ಪರಸ್ಪರ ಹೊಂದಿಕೊಂಡ ಗ್ರಾಮಗಳು. ಮಾಯವ್ವನ ಜಾತ್ರೆಗೆ ಬರುವ ಭಕ್ತಾಧಿಗಳು ಇಬ್ಬರಿಗೂ ಜಯಘೋಷ ಮಾಡುವರು. ಚಿಂಚಲಿ ಮಾಯವ್ವ, ಹಾಲುಹಳ್ಳದ ಮಾಯವ್ವನೆಂದು ಪ್ರಸಿದ್ಧಿ ಪಡೆದರೆ, ಲಕ್ಕವ್ವ ಬೆಕ್ಕೇರಿಯ ಅಧಿದೇವತೆಯಾಗಿ ಖ್ಯಾತಿಗಳಿಸಿರುವಳು. ಬಾಗೆನಾಡಿನ ಜನ ಇವರಿಬ್ಬರು ಸಹೋದರಿಯರೆಂದು ಭಾವಿಸಿರುವರು. ಇವರಲ್ಲಿ ಲಕ್ಕವ್ವ ಅಕ್ಕ, ಮಾಯವ್ವ ತಂಗಿ. ಇಬ್ಬರೂ ಕುರಿಗಾಹಿಗಳು. ಲಕ್ಕಮ್ಮನನ್ನು ಅಕ್ಕಮ್ಮನೆಂದು ಸ್ಥಳೀಯ ಪುರಾಣಗಳು ಕರೆದಿವೆ. ಅಕ್ಕವ್ವ ಮತ್ತು ಮಾಯವ್ವ ಬೀರದೇವರ ಮಾತೃತ್ವಕ್ಕಾಗಿ ಎದುರಿಸಿದ ಸವಾಲನ್ನು, ಮಾಯವ್ವನ ಕುರಿತು ಬರೆಯುವಾಗ ಈ ಹಿಂದೆ ಉಲ್ಲೇಖಿಸಲಾಗಿದೆ.

ಬೆಕ್ಕೇರಿ ಲಕ್ಕವ್ವನ ಕುರಿತು ಸ್ಥಳೀಯರು ಹೇಳುವ ಐತಿಹ್ಯ ಇಂತಿದೆ. ಲಕ್ಕವ್ವ ಮತ್ತು ಮಾಯವ್ವಾ ಪರಸ್ಪರ ಕೂಡಿ ಚಿಂಚಲಿಯಲ್ಲಿಯೇ ವಾಸಿಸುತ್ತಿರುವಾಗ ಅವರಿಬ್ಬರಲ್ಲಿ ಒಂದು ಸಣ್ಣ ವಿಷಯದ ಕುರಿತು ಮನಸ್ತಾಪ ಉಂಟಾಗುವುದು. ಲಕ್ಕವ್ವ ಒಂದು ಬೆಕ್ಕು ಸಾಕಿದ್ದಳು. ಆ ಬೆಕ್ಕಿಗೆ ಹಾಲು ಕೊಡಲು ಮಾಯವ್ವ ನಿರಾಕರಿಸಿದಾಗ ಬೇಸರಗೊಂಡ ಲಕ್ಕವ್ವ ತನ್ನ ಬೆಕ್ಕಿನೊಂದಿಗೆ ದಕ್ಷಿಣ ದಿಕ್ಕಿನತ್ತ ನಡೆದಳು. ಹೊತ್ತು ಮುಳುಗಿ ಕತ್ತಾಲಾದಾಗ ಒಂದು ಸ್ಥಳದಲ್ಲಿ ತಂಗಿದಳು. ಆ ಸ್ಥಳವೇ ಬೆಕ್ಕೇರಿ ಎಂಬ ಹೆಸರು ಪಡೆಯಿತು. ಲಕ್ಕವ್ವ ಅಲ್ಲಿಯೇ ನೆಲೆಸಿದಳು. ಜಾತ್ರೆಯ ಸಂದರ್ಭದಲ್ಲಿ ಮಾಯವ್ವನ ಶಿವಸ್ಥಾನ (ಓಲಗ) ಲಕ್ಕವ್ವನಲ್ಲಿಗೆ ಬರುವುದು. ಆದರೆ ಮಾಯವ್ವನ ಜಾತ್ರೆಯ ಸಂದರ್ಭದಲ್ಲಿ ಲಕ್ಕವ್ವನ ಓಲಗ ಚಿಂಚಲಿಗೆ ಹೋಗುವುದಿಲ್ಲ. ಏಕೆಂದರೆ ಲಕ್ಕವ್ವ ಮಾಯವ್ವಳಿಗಿಂತ ಹಿರಿಯವಳು. ಕಿರಿಯವಳು ಹಿರಿಯವಳಲ್ಲಿಗೆ ಬರಬೇಕೇ ಹೊರತು, ಹಿರಿಯವಳು ಕಿರಿಯವಳಲ್ಲಿಗೆ ಹೋಗುವುದು ಗೌರವವಲ್ಲ. ಚಿಂಚಲಿ ಮತ್ತು ಬೆಕ್ಕೇರಿ ಗಡಿಗ್ರಾಮಗಳಾಗಿದ್ದರೂ ಲಕ್ಕವ್ವನ ಪಲ್ಲಕ್ಕಿ ಚಿಂಚಲಿಯ ಮಾಯವ್ವನಲ್ಲಿಗೆ ಹೋಗುವುದಿಲ್ಲ.

ಬೆಕ್ಕೇರಿ ಗ್ರಾಮನಾಮದ ನಿಷ್ಪತ್ತಿಯ ಕುರಿತು ಜನರು ಕಥಿಸುವ ಬೆಕ್ಕಿನ ಕಥೆ ನಿಜವಾದುದಲ್ಲ. ಬೆಕ್ಕೇರಿ ಎಂಬ ಪದದ ಮೂಲ ರೂಪ, 'ಬಕ್ಕೆರೆ' ಇರಬಹುದು. ಬಕ್ಕೆರೆ ಎಂಬುದು ಸಮಾಸ ಪದ. ಇದು ಕರ್ಮಧಾರೆಯ ಸಮಾಸ. ಬರಿದು+ಕೆರೆ=ಬಕ್ಕೆರೆ. ಇಲ್ಲಿಯ ಕೆರೆ ಪ್ರಾಯಶಃ ಬಯಲು ಕೆರೆ ಆಗಿರಬಹುದು. ಈ ಗ್ರಾಮ ನಾಮಕ್ಕೂ, ಲಕ್ಕವ್ವನಿಗೂ ಯಾವುದೇ ಸಂಬಂಧವಿದ್ದಂತೆ ಕಾಣುವುದಿಲ್ಲ. ಈಗಿರುವ ಬೆಕ್ಕೇರಿಯಿಂದ ೨ ಕಿ. ಮೀ. ದಕ್ಷಿಣದಲ್ಲಿ ಒಂದು ಹಾಳುನೆಲೆ ಇದೆ. ಅದನ್ನು ಸ್ಥಳೀಯರು 'ಪಾಂಡರಿ' (ಪಾಂಡವರ ಕಲ್ಲು) ಎಂದು ಕರೆಯುವರು. ಅದು ಮೂಲ ಬೆಕ್ಕೇರಿಯಾಗಿರಬಹುದು. ಅಲ್ಲಿಯೇ ಸಮೀಪದಲ್ಲಿ ಕೆರೆ ಇರುವಂತಿದೆ. ಈಗಿರುವ ಲಕ್ಕವ್ವ ಮೂಲತಃ ಅಲ್ಲಿಯೇ ನೆಲೆಸಿದ್ದಳು. ಕಾಲಾನಂತರದಲ್ಲಿ ಅವಳ ಆ ಮೂರ್ತಿಯನ್ನು ಇಲ್ಲಿ ಸ್ಥಳಾಂತರಿಸಿ ದೇವಾಲಯವನ್ನು ನಿರ್ಮಿಸಲಾಗಿದೆ. ಇದನ್ನು ಅಲ್ಲಿಯ ಜನ ಒಪ್ಪಿಕೊಳ್ಳುವರು. ಆದರೆ ಯಾವಾಗ ಅಲ್ಲಿಯ ಲಕ್ಕವ್ವನನ್ನು ಇಲ್ಲಿ ತಂದು ಪ್ರತಿಷ್ಠಾಪಿಸಲಾಯಿತೆಂದು ತಿಳಿಯದು.

ಬೆಕ್ಕೇರಿಯಲ್ಲಿರುವ ಲಕ್ಕವ್ವನ ದೇವಾಲಯ ಪ್ರಾಚೀನವಾದುದಲ್ಲ. ಆದರೆ ಆ ದೇವಾಲಯದ ಸುತ್ತ ಪ್ರಾಚೀನ ಅವಶೇಷಗಳನ್ನು ಕಾಣಬಹುದು. ಲಕ್ಕವ್ವನೆಂದು ಭಾವಿಸಲಾಗುವ ಒಂದು ಎತ್ತರದ ಗುಂಡುಕಲ್ಲು ಗರ್ಭಗುಡಿಯಲ್ಲಿದೆ. ಆ ಕಲ್ಲಿಗೆ ಕಣ್ಣುಬಟ್ಟು ಹಚ್ಚಿ, ಸೀರೆ ಉಡಿಸಿ ಪೂಜೆ ಮಾಡುವರು. ಗರ್ಭಗುಡಿಯ

ಮುಂದೆ ಸಣ್ಣದಾದ ನವರಂಗವಿದೆ. ಈ ದೇವಾಲಯದ ೬೦-೭೦ ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ದೇವಾಲಯದ ಎದುರಗಡೆ ದೊಡ್ಡದಾದ ಹುಣಸೆಮರವಿದ್ದು ಅದಕ್ಕೆ ಕಟ್ಟೆ ಕಟ್ಟಲಾಗಿದೆ. ಆ ಕಟ್ಟೆಯ ಗೋಡೆಗೆ ಹೊಂದಿಕೊಂಡಂತೆ ದೇವತೆಗೆ ಅಭಿಮುಖವಾಗಿ ಹಲವು ಪ್ರಾಚೀನ ಶಿಲ್ಪಗಳಿವೆ. ಲಕ್ಕವ್ವನ ಮುಖ ಪೂರ್ವದೆಡೆಗಿದ್ದು ಬೆನ್ನು ಪಶ್ಚಿಮದೆಡೆಗಿದೆ. ಮಾಯವ್ವನ ಮುಖ ಪಶ್ಚಿಮದ ಕಡೆಗಿದ್ದು ಪೂರ್ವದಲ್ಲಿರುವ ಬೆನ್ನನ್ನು ಪೂಜಿಸಲಾಗುತ್ತದೆ. ಮಾಯವ್ವನದು ಬೆನ್ನು ಪೂಜೆ, ಲಕ್ಕವ್ವನದು ಮುಖ ಪೂಜೆ. ಲಕ್ಕವ್ವನಿಗೆ ಎದುರಾಗಿ ಆ ಹುಣಸೆ ಮರದ ಕೆಳಗೆ ಒಂದು ಮಾಸ್ತಿಕಲ್ಲಿದೆ. ಅದು 'ಒಕ್ಕೈಮಾಸ್ತಿ. ಇದು ಆ ಕಟ್ಟೆಯ ಬಲಭಾಗದಲ್ಲಿದ್ದರೆ ಎಡಭಾಗದಲ್ಲಿ ದೊಡ್ಡದಾದ ಒಂದು ಬಂಡೆಗಲ್ಲಿದೆ. ಅದೇನೆಂಬುದು ಗೊತ್ತಾಗುವುದಿಲ್ಲ. ಇವೆರಡರ ನಡುವೆ ಒಂದು ಭೈರವ ಶಿಲ್ಪವಿದೆ. ಒಂದೆರಡು ನಾಗ ಶಿಲ್ಪಗಳಿವೆ. ಜೊತೆಗೆ ಭಗ್ನಗೊಂಡ ಕೆಲವು ಶಿಲ್ಪಗಳನ್ನು ಜೋಡಿಸಿ ಇಡಲಾಗಿದೆ. ಈ ಅವಶೇಷಗಳೆಲ್ಲ ಮೂಲನೆಲೆಯಿಂದ ಎತ್ತಿ ತಂದವುಗಳಾಗಿರಬಹುದು. ಇವುಗಳನ್ನು ಗಮನಿಸಿದಾಗ ಲಕ್ಕವ್ವ ಬೆಕ್ಕೇರಿಯ ಪ್ರಾಚೀನ ದೇವತೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಆಕೆಯ ಪ್ರಾಚೀನತೆಯನ್ನು ತಿಳಿಸುವ ಯಾವ ಆಧಾರಗಳು ಸಿಗುವುದಿಲ್ಲ.

ಬಾಗೆನಾಡಿನ ಜನ ಲಕ್ಕವ್ವನನ್ನು ಲಗಮವ್ವನೆಂದು ಕರೆಯುವರು. ಅವಳಿಗೆ ಅಂಬಲಿ ನೈವೇದ್ಯ ಅರ್ಪಿಸುವರು. ವರ್ಷಕ್ಕೊಮ್ಮೆ ಜಾತ್ರೆ ನೇರವೇರುತ್ತದೆ. ಲಕ್ಕವ್ವ ಅಥವಾ ಲಗಮವ್ವನ ಗುಡಿ ಚಿಕ್ಕದಾಗಿದ್ದರೂ ಪ್ರಾಂಗಣ ತುಂಬಾ ವಿಶಾಲವಾದುದು. ಇದು ಸುಮಾರು ಒಂದುವರೆ ಎಕರೆ ಇರುತ್ತದೆ. ಈಗ ಇದರ ಸುತ್ತ ಪೌಳಿಗಳನ್ನು ನಿರ್ಮಿಸುತ್ತಿದ್ದಾರೆ. ಪೂರ್ವದಿಕ್ಕಿನಲ್ಲಿ ಸುಂದರವಾದ ದ್ವಾರವನ್ನು ನಿರ್ಮಿಸುತ್ತಿರುವರು. ಮಾಯವ್ವನ ಗರ್ಭಗುಡಿಯ ದಕ್ಷಿಣದಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಶಿವಲಿಂಗ ಮತ್ತು ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಲಕ್ಕವ್ವನ ಎದುರಗಡೆ ಇರುವ ಅವಶೇಷಗಳಲ್ಲಿ ಒಂದು ನಂದಿಯೂ ಇದೆ. ಅಂದರೆ ಇದು ಶಿವಪರವಾದ ಹಾಗೂ ಹಾಲುಮತದ ದೇವಸ್ಥಾನ ಎಂಬುದರಲ್ಲಿ ಸಂದೇಹವಿಲ್ಲ. ಈ ಗ್ರಾಮದಲ್ಲಿ ಪ್ರತಿಶತ ೮೦ಕ್ಕೂ ಹೆಚ್ಚು ಹಾಲುಮತದವರಿರುವರು. ಅವರಲ್ಲಿ ಕೆಲವರು ದೇವಿಯನ್ನು ಪೂಜಿಸುವರು. ಇಲ್ಲಿಯ ಮತ್ತೊಂದು ವಿಶೇಷವೆಂದರೆ, ಲಕ್ಕವ್ವನ ಉತ್ಸವದಲ್ಲಿ ದಿವಟಿಗೆ ಹಿಡಿಯುವ, ನಗಾರಿ ಬಾರಿಸುವ, ಪೂಜಿಸುವ ಮನೆತನದವರಿಗೆ ಜಮೀನುಗಳನ್ನು ನೀಡಲಾಗಿದೆ. ಈ ಅಂಶಗಳನ್ನು ಗಮನಿಸಿದರೆ, ಈ ದೇವಸ್ಥಾನ ಪುರಾತನ ಎಂಬುದರಲ್ಲಿ ಸಂದೇಹವಿಲ್ಲ.

ಲಕ್ಕವ್ವ ಎಂಬ ಪದ ಲಕ್ಷ್ಮೀ ಪದದ ತದ್ಭವ. ಲಕ್ಕವ್ವ ಪದದ ಗ್ರಾಮ್ಯ ರೂಪವೇ ಲಗಮವ್ವ. ಲಕ್ಷ್ಮೀ ಸಂಪತ್ತಿನ ಅಧಿದೇವತೆ. ಕೊಲ್ಹಾಪೂರದಲ್ಲಿ ಲಕ್ಷ್ಮೀಯ ಭವ್ಯ ದೇವಾಲಯವಿರುವುದು ಎಲ್ಲರಿಗೂ ಗೊತ್ತು. ಆದರೆ ಅಲ್ಲಿ ಲಕ್ಷ್ಮೀ ಅರ್ಚನೆಗೆ ಮುಖ್ಯವಾಗಿ ಕುಂಕುಮವನ್ನು ಬಳಸಲಾಗುತ್ತದೆ. ಇಲ್ಲಿ ಬಂಡಾರದಿಂದ ಲಗಮವ್ವನನ್ನು ಅರ್ಚಿಸಲಾಗುತ್ತದೆ. ಭಂಡಾರ ಸಂಸ್ಕೃತಿ ಹಾಲುಮತದ ಅನನ್ಯತೆ. ಪ್ರಸಾದದಲ್ಲಿಯೂ ಈ ಸರಳತೆಯನ್ನು ಕಾಣುತ್ತೇವೆ. ಹಾಲುಮತ ದೈವಗಳ ಪ್ರಸಾದ ಹಾಲು, ಅಂಬಲಿ, ಕಿಚಡಿಗಳಿಗೆ ಸಿಮೀತಗೊಂಡಿರುತ್ತದೆ. ಎಲ್ಲಿಯೋ ಕೆಲವೆಡೆಗಳಲ್ಲಿ ಮಾತ್ರ ಬಲಿಕೊಡುವ ಸಂಪ್ರದಾಯವಿದೆ. ಮಾಯವ್ವನ ದೇವಸ್ಥಾನ ಚಿಂಚಲಿಯಲ್ಲಿ ಮಾತ್ರ ಕಾಣುತ್ತಿದ್ದರೆ, ಲಕ್ಕವ್ವನ ದೇವಸ್ಥಾನಗಳು ಬಾಗೆನಾಡಿನ ತುಂಬೆಲ್ಲಾ ಹರಡಿಕೊಂಡಿವೆ. ಸೌಸುದ್ದಿಯಲ್ಲಿ, ಬೆಕ್ಕೇರಿಯಲ್ಲಿರುವಷ್ಟೇ ದೊಡ್ಡ ದೇವಸ್ಥಾನವಿದೆ. ಗುಡ್ಡದ ಬ್ಯಾಕೂಡದಲ್ಲಿಯೂ

ಲಕ್ಕವ್ವನ ಗುಡಿಯಿದೆ. ಕಂಕಣವಾಡಿ ಹಾಲಸಿದ್ಧನ ದೇವಸ್ಥಾನದ ಪಕ್ಕದಲ್ಲಿಯೇ ಲಕ್ಕವ್ವನ ಆವಾಸ ಸ್ಥಾನವಿದೆ. ಸಾಮಾನ್ಯವಾಗಿ ಉತ್ತರ ಕರ್ನಾಟಕದ ಎಲ್ಲ ಗ್ರಾಮಗಳ ಗಡಿಯಲ್ಲಿಯೂ ಸಿಮೇ ಲಕ್ಕವ್ವನ ಪುಟ್ಟ ದೇವಾಲಯಗಳಿವೆ. ಕೆಲವೆಡೆ ಕೈಸಾಲೆಯಂತ ಗೂಡ ದೇವಾಲಯಗಳಿಲ್ಲದಿದ್ದರೂ, ಒಂದು ಕಲ್ಲನ್ನಿಟ್ಟು ಪೂಜಿಸುವರು. ಈ ಲಕ್ಕವ್ವ ಅಥವಾ ಲಗಮವ್ವ ಸಿಮೇ ಲಕ್ಕವ್ವನಿಗಿಂತ ಭಿನ್ನವಾದವಳು.

ಹಾಲುಮತದವರು ಕುರಿಗಳನ್ನು ಲಕ್ಷ್ಮೀಯ ರೂಪದಲ್ಲಿ ಆರಾಧಿಸುವರು. ಅವು ಅವರ ಸಂಪತ್ತು. ಇದುವೇ ಪಶುಧನ. ಈ ಪಶುಧನವನ್ನು ಲಕ್ಷ್ಮೀಯ ರೂಪದಲ್ಲಿ ಆರಾಧಿಸುವ ಪರಂಪರೆ ಹಾಲುಮತದಲ್ಲಿದೆ. ದೀಪಾವಳಿಯಂದು (ಹಟ್ಟಿಹಬ್ಬ) ಕುರಿಗಳನ್ನು ಪೂಜಿಸುವ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ಹಟ್ಟಿಹಬ್ಬದಂದು ಹಟ್ಟಿ ಅಥವಾ ದೊಡ್ಡಿಯ ಪೂಜೆ ಆಚರಣೆಯ ಒಂದು ಭಾಗವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಕ್ಕೇರಿಯ ಲಕ್ಕವ್ವನನ್ನು ಅಧ್ಯಯನ ಮಾಡುವುದು ಯೋಗ್ಯವೆನಿಸುತ್ತದೆ. ಅದೇನಿದ್ದರೂ ಲಕ್ಕವ್ವ ಬಾಗೆನಾಡಿನ ಅಧಿದೇವತೆ ಎಂಬುದು ನಿಸ್ಸಂದೇಹ. ಅವಳ ಅಮೂರ್ತರೂಪವೇ ಇಲ್ಲಿಯ ಹಾಲುಮತ ಸಂಸ್ಕೃತಿಯನ್ನು ಸಾಕ್ಷೀಕರಿಸುತ್ತದೆ. ಉಳಿದೆಲ್ಲ ದೇವತೆಗಳನ್ನು ಸುತ್ತಿಕೊಂಡಿರುವಂತೆ ಹಲವು ಮಿಥ(ಜನಪದ ನಂಬಿಕೆ)ಗಳು ಲಕ್ಕವ್ವನನ್ನು ಮುತ್ತಿಕೊಂಡಿದ್ದರೂ, ಅವುಗಳನ್ನು ಒಡೆದು ತತ್ಯೆ(ಸತ್ಯ)ವನ್ನು ಗ್ರಹಿಸುವ ಶೋಧಗಳು ನಡೆಯ ಬೇಕಿದೆ.

ಟಿಪ್ಪಣಿಗಳು :

೧) ಆರ್. ಗೋಪಾಲ್ (ಸಂ), **ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೨೦೧೦, ಪುಟ-೧೫

೨) ಆರ್. ಮುನಿಸ್ವಾಮಿ (ಸಂ), **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ವಿಜಾಪುರ.ಜಿಲ್ಲೆ**, ಕರ್ನಾಟಕ ರಾಜ್ಯ ಸರಕಾರ ಬೆಂಗಳೂರು, ೧೯೯೯. ಪುಟ-೫೯

೩) ಬಸವರಾಜ ಯಲಶೆಟ್ಟಿ, **ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು** (ಅಪ್ರಕಟಿತ ಎಂ. ಫಿಲ್. ಸಂಪ್ರಬಂಧ) ೨೦೧೧, ಪುಟ-೫೮

೪) ಲಿಂಗದಳ್ಳಿ ಹಾಲಪ್ಪ, **ದಳವಾಯಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೧, ಪುಟ-೪

೫) ಸಿದ್ದಲಿಂಗಯ್ಯ, **ಗ್ರಾಮದೇವತೆಗಳು**, ಪ್ರಕಾಶನ ಅಂಕಿತ ಪುಸ್ತಕ, ಬೆಂಗಳೂರು, ೨೦೦೯, ಪುಟ-೦೧

೬) ಲಿಂಗದಳ್ಳಿ ಹಾಲಪ್ಪ, **ಬೀರದೇವರು**, ವಿದ್ಯಾನಿಧಿ ಪ್ರಕಾಶನ, ಗದಗ. ೨೦೧೩, ಪುಟ-೧೭

೭) ಲಿಂಗದಳ್ಳಿ ಹಾಲಪ್ಪ, **ದಳವಾಯಿ**, **ಪೂರ್ವೋಕ್ತ**, ಪುಟ-೨೫

೮) ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು ಒಂದು ಅಧ್ಯಯನ**. ಶೈಲಚಂದ್ರ ಪ್ರಕಾಶನ, ವಿಜಾಪೂರ, ೨೦೦೬, ಪುಟ-೬೦

೯) ಎಂ. ಎಂ. ಕಲಬುರ್ಗಿ (ಸಂ), **ಬಸವಣ್ಣನವರ ವಚನ ಸಂಪುಟ-೧**. ಕನ್ನಡ ಪುಸ್ತಕ ಪ್ರಾಧಿಕಾರ, ಪುಟ-೧೩೮

೧೦) ಲಿಂಗದಳ್ಳಿ ಹಾಲಪ್ಪ, **ಬಳ್ಳಾರಿ ಪರಿಸರದ ಹಾಲುಮತ ದೈವಗಳು**, ಪ್ರಕಾಶನ, ಹಾಲುಮತ ಸಂಸ್ಕೃತಿಕ ಸಂಶೋಧನೆ ಪ್ರತಿಷ್ಠಾನ ಹೊಸಪೇಟೆ. ೨೦೧೫, ಪುಟ-೫೨

೧೧) **ಪೂರ್ವೋಕ್ತ**, ಪುಟ-೫೨

೧೨) ವಿ. ಎಸ್. ಮಾಳಿ, **ಹಾಲುಕೆನೆ**. (ಲೇ) **ಬಾಗೆನಾಡಿನ ಅಲಕನೂರಿನ ಕರೆಸಿದ್ಧೇಶ್ವರ**, ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ, ೨೦೦೨, ಪುಟ-೧೦೬

೧೩) ಕೆ. ವ್ಹಿ. ಬೀಳಗಿ, **ಹಾಲುಮತ ಪುರಾಣ ದರ್ಶನ**, ಪ್ರಕಾಶನ ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ ಹಾರೂಗೇರಿ, ೨೦೧೬, ಪುಟ-೩೫೦

೧೪) **ಪೂರ್ವೋಕ್ತ**, ಪುಟ-೩೪೨

೧೫) **ಪೂರ್ವೋಕ್ತ**, ಪುಟ-೩೪೪

೧೬) **ಪೂರ್ವೋಕ್ತ**, ಪುಟ-೩೪೪

೧೭) ವಿ. ಎಸ್. ಮಾಳಿ **ಹಾಲುಕೆನೆ**. (ಲೇ) **ಬಾಗೆನಾಡಿನ ಅಲಕನೂರಿನ ಕರೆಸಿದ್ಧೇಶ್ವರ**, ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ, ೨೦೦೨, ಪುಟ-೧೦೬

೧೮) **ಪೂರ್ವೋಕ್ತ**, ಪುಟ-೧೦೭

೧೯) ಅಣ್ಣಪ್ಪ ವಾ. ಮುತ್ತೂರ, **ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ಧೇಶ್ವರ ಪುರಾಣ**, ಪ್ರಕಾಶನ ವಿಧ್ಯಾನಿಧಿ ಪ್ರಕಾಶನ ಗದಗ, ೨೦೧೧, ಪುಟ-೧೨೪

೨೦) ವೀರಣ್ಣ ದಂಡೆ (ಸಂ), **ಜನಪದ ಹಾಲುಮತ ಮಹಾಕಾವ್ಯ**. ಸಾಗರ್ ಪ್ರಕಾಶನ ಬೆಂಗಳೂರು, ೨೦೧೩, ಪುಟ-೩೮೫

೨೧) ವಕ್ತೃ, **ವಿಶ್ವನಾಥ ಕರೆಪ್ಪ ಬೀಳಗಿ**, ಮುಗಳಖೋಡ

೨೨) ಕೆ. ವ್ಹಿ. ಬೀಳಗಿ, **ಹಾಲುಮತ ಪುರಾಣ ದರ್ಶನ,** ಪ್ರಕಾಶನ ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ ಹಾರೂಗೇರಿ, ೨೦೧೬, ಪುಟ-೩೪೯

೨೩) ವಿ. ಎಸ್. ಮಾಳಿ, **ಹಾಲುಕೆನೆ. (ಲೇ) ಬಾಗೆನಾಡಿನ ಅಲಕನೂರಿನ ಕರೆಸಿದ್ಧೇಶ್ವರ,** ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ, ೨೦೦೨, ಪುಟ-೧೦೮

೨೪) **ಪೂರ್ವೋಕ್ತ,** ಪುಟ-೧೦೯

೨೫) **ಪೂರ್ವೋಕ್ತ,** ಪುಟ-೧೧೦

೨೬) ವಕ್ತೃ : **ಸಿದ್ರಾಮಪ್ಪ ಯಲ್ಲಪ್ಪ ಲಾಳಿ.** ಯಲ್ಪಾರಟ್ಟಿ

೨೭) ವಕ್ತೃ : **ಭೀಮರಾವ ಲಗಮಣ್ಣ ಘಂಟಿ.** ಹಿಡಕಲ್ಲ

೨೮) ರಾಜಶ್ರೀ ಪಾಟೀಲ **ಶ್ರೀ ಹಾಲುಮತ ಗುರು ಸರೂರು ಶಾಂತಮುತ್ತಯ್ಯ** ಪ್ರಕಾಶನ ವಿಕಾಸ ಪ್ರಕಾಶನ ಎಂ. ಪಿ. ಪ್ರಕಾಶ ನಗರ ಹೊಸಪೇಟೆ ೨೦೧೧ ಪುಟ-೧೭

೨೯) ವಕ್ತೃ : **ವಿಶ್ವನಾಥ ಕರೆಪ್ಪ ಬೀಳಗಿ.** ಮುಗಳಖೋಡ

೩೦) ಯ. ರು. ಪಾಟೀಲ **(ಲೇ) ಜಿಲ್ಲೆಯ ಇತಿಹಾಸ, ಪರಂಪರೆ ಹಾಗು ಆಡಳಿತ,** ಸಂ. ಡಾ. ಬಸವರಾಜ ಜಗಜಂಪಿ **ಬೆಳಗಾವಿ ಭಾಗ್ಯ** ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಬೆಳಗಾವಿ, ೨೦೧೦, ಪುಟ-೨೬

೩೧) ಶ್ರೀನಿವಾಸ ರಿತ್ತಿ ಮತ್ತು ಅನಂತ ಬಿ. ಕರವೀರಕರ (ಸಂ), **ಕೊಲ್ಹಾಪೂರ ಜಿಲ್ಲೆಯ ಶಾಸನಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೦, ಪುಟ-XXV

೩೨) ಜಿ. ಎನ್. ಉಪಾಧ್ಯ ಮತ್ತು ದೇವರಕೊಂಡಾರೆಡ್ಡಿ (ಸಂ) **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬ ಮಹಾರಾಷ್ಟ್ರದ ಕನ್ನಡ ಶಾಸನಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೧, ಪುಟ-೬೦

೩೩) ಟಿ. ಎಸ್. ವಂಟಗೂಡಿ, **ರಾಯಬಾಗ ತಾಲೂಕಿನ ಹಾಲುಮತ ದೈವಗಳು,** ಪ್ರಕಾಶನ ವಿದ್ಯಾ ಪ್ರಕಾಶನ ಹಿಡಕಲ್ಲ, ೨೦೧೦, ಪುಟ-೨೧

೩೪) ವಕ್ತೃ : **ಪದ್ಮಣ್ಣ ಹಾಲಪ್ಪ ಪೂಜೇರಿ.** ಕಂಕಣವಾಡಿ

೩೫) ವಿ. ಎಸ್. ಮಾಳಿ (ಲೇ) **ಕಂಕಣವಾಡಿ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೩.** ಪ್ರಕಾಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೧, ಪುಟ-೧೬೨

೩೬) **ಪೂರ್ವೋಕ್ತ,** ಪುಟ-೧೬೦

೩೭) **ಪೂರ್ವೋಕ್ತ,** ಪುಟ-೧೬೦

೩೮) ಮ. ಸು. ಕೃಷ್ಣಮೂರ್ತಿ, **ಸಿದ್ಧ ಸಾಹಿತ್ಯ,** ಪ್ರಕಾಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦. ಪುಟ-೨

೩೯) **ಪೂರ್ವೋಕ್ತ,** ಪುಟ- ೮

೪೦) **ಪೂರ್ವೋಕ್ತ,** ಪುಟ- ೧೫೫

೪೧) ಬಸವರಾಜ ಸಬರದ, **ಜನಪದ ದೈವಗಳು,** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೯, ಪುಟ-೬

೪೨) ವಿಷ್ಣು ಎಂ ಶಿಂದೆ, **ಮಹಾಶಕ್ತಿ ಚಿಂಚಲಿ ಮಾಯಕ್ಕ ದೇವಿ,** ಪ್ರಕಾಶಕರು, ಶ್ರೀ ಮಾಯಕ್ಕಾದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ ಚಿಂಚಲಿ, ೨೦೦೦, ಪುಟ-೪

೪೩) ಮಹಾದೇವ ಕಣವಿ (ಲೇ) **ಡೊಳ್ಳಿನ ಹಾಡುಗಳ ವೈವಿಧ್ಯ,** ಡಾ. ಶ್ರೀರಾಮ ಇಟ್ಟಣ್ಣವರ (ಸಂ) **ಹಾಲುಕೆನೆ,** ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ; ೨೦೦೨, ಪುಟ-೨೩೭

೪೪) ಸಿದ್ದಣ್ಣ ಎಫ್. ಜಕಬಾಳ (ಲೇ) **ಚಿಂಚಲಿ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೩** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧. ಪುಟ-೬೬

೪೫) ವಿ. ಎಸ್. ಮಾಳಿ (ಲೇ) **ಶಕ್ತಿದೇವತೆ ಚಿಂಚಲಿ ಮಾಯವ್ವಾ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ಮಹಿಳಾ ಸಾಧಕರು,** ಪ್ರಕಾಶಕರು, ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ ವೀರಗೋಟ (ತಿಂಥಿಣಿ ಬ್ರಿಡ್ಜ್), ೨೦೧೫, ಪುಟ-೪೬

೪೬) ವಿಷ್ಣು ಎಂ ಶಿಂದೆ, **ಮಹಾಶಕ್ತಿ ಚಿಂಚಲಿ ಮಾಯಕ್ಕ ದೇವಿ,** ಪ್ರಕಾಶಕರು, ಶ್ರೀ ಮಾಯಕ್ಕಾದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ ಚಿಂಚಲಿ, ೨೦೦೦, ಪುಟ-೧೫

೪೭) ವಿ. ಎಸ್. ಮಾಳಿ (ಲೇ), **ಶಕ್ತಿದೇವತೆ ಚಿಂಚಲಿ ಮಾಯವ್ವಾ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ಮಹಿಳಾ ಸಾಧಕರು,** ಪ್ರಕಾಶಕರು, ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ ವೀರಗೋಟ (ತಿಂಥಿಣಿ ಬ್ರಿಡ್ಜ್), ೨೦೧೫, ಪುಟ-೪೮

೪೮) **ಪೂರ್ವೋಕ್ತ,** ಪುಟ-೫೧

೪೯) **ಪೂರ್ವೋಕ್ತ,** ಪುಟ-೪೯

೫೦) **ಪೂರ್ವೋಕ್ತ,** ಪುಟ-೫೨

೫೧) ಎಂ. ಎಂ. ಕಲಬುರ್ಗಿ (ಲೇ) **ಭೈರವ, ಜುಂಜಪ್ಪ, ಮೈಲಾರ ಮಾರ್ಗ-೪** ಸ್ವಪ್ನ ಬುಕ್ ಹೌಸ್ ಬೆಂಗಳೂರು ೨೦೦೪, ಪುಟ-೩೯೦

೫೨) ಶಂಕರ ಶಿ. ಕುಂಬಾರ, **ಹಾಲುಮತದ ಸ್ತ್ರೀಯರು,** ಪ್ರಕಾಶನ, ವಿಜೇತ್ ಪ್ರಕಾಶನ ಗದಗ, ೨೦೦೯, ಪುಟ-೪

೫೩) **ಪೂರ್ವೋಕ್ತ,** ಪುಟ-೪೭

೫೪) ವಿ. ಎಸ್. ಮಾಳಿ (ಲೇ), **ಶಕ್ತಿದೇವತೆ ಚಿಂಚಲಿ ಮಾಯವ್ವಾ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ಮಹಿಳಾ ಸಾಧಕರು,** ಪ್ರಕಾಶಕರು, ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ ವೀರಗೋಟ (ತಿಂಥಿಣಿ ಬ್ರಿಡ್ಜ್), ೨೦೧೫, ಪುಟ-೪೯

೫೫) ಜ್ಯೋತಿ ಹೊಸೂರ (ಲೇ), **ಹುಲಜಂತಿ ಮಾಳಿಂಗರಾಯ: ಚಾರಿತ್ರಿಕ ಅಂಶಗಳು,** ಡಾ. ಶ್ರೀರಾಮ ಇಟ್ಟಣ್ಣವರ (ಸಂ) **ಹಾಲುಕೆನೆ.** ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ, ೨೦೦೨, ಪುಟ-೯೮

೫೬) ಬಿ. ಎಚ್. ಮಾರದ (ಅನುವಾದಕರು) **ಹಾಲ್ಮತೋತ್ತೇಜಕ ಪುರಾಣ.** ಪ್ರಕಾಶಕರು, ಕವಿ ಚಕ್ರವರ್ತಿ ರನ್ನ ಪ್ರಕಾಶನ, ಮಹಾಲಿಂಗಪುರ, ೨೦೦೧, ಪುಟ-೩೭

೫೭) ಚಂದ್ರಕಾಂತ ಬಿಜ್ಜರಗಿ, **ಬೀರದೇವರ ಅವತಾರಗಳು,** ಶೈಲಚಂದ್ರ ಪ್ರಕಾಶನ ವಿಜಾಪುರ, ೨೦೧೧, ಪುಟ-೧೭

೫೮) ವಿ. ಎಸ್. ಮಾಳಿ (ಲೇ), **ಶಕ್ತಿದೇವತೆ ಚಿಂಚಲಿ ಮಾಯವ್ವಾ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ಮಹಿಳಾ ಸಾಧಕರು,** ಪ್ರಕಾಶಕರು, ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ ವೀರಗೋಟ (ತಿಂಥಿಣಿ ಬ್ರಿಡ್ಜ್), ೨೦೧೫, ಪುಟ-೫೮

ಅಧ್ಯಾಯ : ನಾಲ್ಕು

ಹಾಲುಮತದ ಆರಾಧನಾ ಕಲೆಗಳು, ಆಚರಣೆಗಳು, ನಂಬಿಕೆ-ಸಂಪ್ರದಾಯಗಳು

೪.೧ ಆರಾಧನಾ ಕಲೆಗಳು

ರಾಯಬಾಗ ಪರಿಸರ ಪ್ರಸಿದ್ಧ ಧಾರ್ಮಿಕ ಕೇಂದ್ರ. ಶೈವ-ವೈಷ್ಣವ-ಜೈನ ಮತಗಳ ಸಂಗಮ. ಈ ಪರಿಸರ ಈಗ ಹಚ್ಚ ಹಸಿರಿನ ಬೀಡು. ಇಲ್ಲಿ ಎಂಟು ತಿಂಗಳು ಘಟಪ್ರಭಾ ಎಡದಂಡೆ ಕಾಲುವೆ ನೀರು ಹರಿಯುತ್ತದೆ. ಸದ್ಯ ಪಶುಪಾಲನೆಗಿಂತ ಕೃಷಿ ಹೆಚ್ಚು ಸಮೃದ್ಧಿ ಪಡೆದಿದೆ. ಇಲ್ಲಿಯ ಜನರು ಸುಖಿಗಳು. ಮಳೆಯಾಗದಿದ್ದರೂ ಅವರಿಗೆ ಬರಗಾಲದ ಭೀತಿಯಿಲ್ಲ. ಹೀಗಾಗಿ ಇಲ್ಲಿ ಜರುಗುವ ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಮದುವೆ-ಮುಂಜಿಗಳು ಸಂಭ್ರಮ-ಸಂತೋಷದಿಂದ ಕೂಡಿರುತ್ತವೆ. ಬೇರೆಡೆಗಳಲ್ಲಿ ಕಾಣದ ಉತ್ಸಾಹವನ್ನು ಇಲ್ಲಿಯ ಜನರಲ್ಲಿ ಕಾಣುತ್ತೇವೆ.

ರಾಯಬಾಗ ಪರಿಸರವು ಹಾಲುಮತ ಸಂಸ್ಕೃತಿಯ ಹಲವು ನೆಲೆಗಳನ್ನು ಹೊಂದಿದೆ. ಹಾಲುಮತದ ಆಚರಣೆ-ಸಂಪ್ರದಾಯ ಮತ್ತು ಪರಂಪರಾಗತ ಕಲೆಗಳ ಅಧ್ಯಯನ ಕುತೂಹಲಮಯ. ಆರಾಧನೆ, ಆಚರಣೆ, ಕಲೆ, ವೃತ್ತಿ ಹೀಗೆ ಹಲವು ನೆಲೆಗಳಲ್ಲಿ ಹುಟ್ಟಿಕೊಂಡ ಜನಪದ ಕಲೆಗಳು ಸಂಸ್ಕೃತಿ ಅಧ್ಯಯನದ ಪ್ರಮುಖ ಆಕರಗಳು. ಅವು ಮುಖ್ಯವಾಗಿ ಜನಪದರ ವೈಯಕ್ತಿಕ ಹಾಗೂ ಸಾಂಸ್ಕೃತಿಕ ಸಂವೇದನೆಗಳ ಅಭಿವ್ಯಕ್ತಿ ಮಾಧ್ಯಮಗಳು. ಆ ಮಾಧ್ಯಮಗಳ ಹಿನ್ನೆಲೆ ಯಾವುದೇ ಇರಲಿ ಅದನ್ನು ಮೀರಿ ಸಾಮಾಜೀಕರಣಗೊಳ್ಳುವುದು ಈ ಕಲೆಗಳ ವೈಶಿಷ್ಟ್ಯ.

ರಾಯಬಾಗ ಪರಿಸರವು ಹಾಲುಮತದ ಬೀಡು. ಇಲ್ಲಿ ಹಾಲುಮತ ಸಮುದಾಯ ಉದ್ದಗಲಕ್ಕೂ ಹರಡಿದೆ. ಈ ನಾಡಿನ ತುಂಬೆಲ್ಲ ಅವರ ದೈವಗಳು. ಆ ದೈವಗಳ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲೆಗಳು ಮೊದಲ ಸ್ಥಾನ ಪಡೆಯುತ್ತವೆ. ಇಲ್ಲಿಯ ಹಾಲುಮತಸ್ಥರು ಸ್ವಲ್ಪ ಮಟ್ಟಿಗೆ ಸಿರಿವಂತರು, ಈಗ ಸದ್ಯ ದನ-ಕರು ಮತ್ತು ಆಡು-ಕುರಿ ಸಾಕಾಣಿಕೆಯಂತ ಸಾಂಪ್ರದಾಯಿಕ ವೃತ್ತಿಗಳಿಂದ ಸ್ಥಿತ್ಯಂತರಗೊಂಡು ಕೃಷಿಯತ್ತ ವಾಲಿದ್ದಾರೆ. ಆದರೂ ಸಾಂಪ್ರದಾಯಿಕವಾಗಿ ಬಂದ ದೈವಗಳು, ಆರಾಧನೆಯ ಅಂಗವಾದ ಆಚರಣೆಗಳು ಮತ್ತು ಕಲೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಈ ಕಾರಣದಿಂದಲೇ ಈ ಪರಿಸರದಲ್ಲಿ ಹಾಲುಮತ ಸಂಸ್ಕೃತಿಯ ಹಿನ್ನೆಲೆಯ ಹಲವು ಕಲೆಗಳು ಇಂದಿಗೂ ಪ್ರಚಲಿತದಲ್ಲಿವೆ. ಡೊಳ್ಳಿನಹಾಡು ಹಾಡುವವರು, ಡೊಳ್ಳು ಬಾರಿಸುವವರು, ದಟ್ಟಿಕುಣಿತ ಕುಣಿಯುವವರು ಹಳ್ಳಿ-ಹಳ್ಳಿಗಳಲ್ಲಿಯೂ ಇದ್ದಾರೆ. ಇವೇ ಈ ನಾಡಿನ ಪ್ರಮುಖ ಜನಪದ ಕಲೆಗಳು. ಈಗ ಈ ಕಲೆಗಳು ಹಾಲುಮತ ಜನಾಂಗದವರಿಗಷ್ಟೇ ಸೀಮಿತವಾಗಿರದೆ ಅವರ ದಟ್ಟ ಪ್ರಭಾವದಿಂದಾಗಿ ಇತರ ಸಮುದಾಯಗಳಲ್ಲಿ ವ್ಯಾಪಿಸಿರುವುದು ಗಮನಾರ್ಹ ಸಂಗತಿ.

ಈ ಪ್ರದೇಶದಲ್ಲಿ ವರ್ಷದುದ್ದಕ್ಕೂ ಉತ್ಸವಗಳು. ದಿನನಿತ್ಯ ಮಂಗಲವಾದ್ಯ ನಿನಾದ ಕಂಡು ಬರುತ್ತದೆ. ಹೀಗಾಗಿ ಹಲವು ಜನಪದ ಕಲೆಗಳು ಇನ್ನೂ ಜೀವಂತವಾಗಿವೆ. ಕಲೆಗಳಿಗೂ ಸಮೃದ್ಧಿಗೂ ಬಿಡಿಸಲಾಗದ ನಂಟು. ಮದುವೆ-ಮುಂಜಿ-ಪ್ರಸ್ತ-ಸೀಮಂತ ಇತ್ಯಾದಿ ಶುಭ ಪ್ರಸಂಗಗಳಲ್ಲಿ ಸಂಪ್ರದಾಯದ

ಹಾಡು ಹಾಡುವರು. ಹಬ್ಬ-ಹರಿದಿನಗಳಲ್ಲಿ ಆರಾಧನೆ ಮತ್ತು ಮನರಂಜನೆಗಾಗಿ ವಿವಿಧ ಜನಪದ ಕಾರ್ಯಕ್ರಮಗಳನ್ನು ಸಂಘಟಿಸುವರು. ಜಾತ್ರೆ-ಉತ್ಸವಗಳಲ್ಲಿ ಕಲಾಮೇಳಗಳು ಜರುಗುತ್ತವೆ.

"ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಅಥವಾ ಪಂಥ ಪ್ರಚಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮ, ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ."[೧] ಹೀಗೆ ಈ ನಾಡಿನಲ್ಲಿ ಪ್ರದರ್ಶಿತಗೊಳ್ಳುವ ಪ್ರಮುಖ ಜನಪದ ಕಲೆಗಳು ಸಾರ್ವಜನಿಕ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಈ ರೀತಿಯಾಗಿ ರಾಯಬಾಗ ಪರಿಸರದಲ್ಲಿ ಪ್ರದರ್ಶಿತಗೊಳ್ಳುವ ಪ್ರಮುಖ ಹಾಲುಮತದ ಜನಪದಿಯ ಆರಾಧನಾ ಕಲೆಗಳನ್ನು ಸ್ಥೂಲವಾಗಿ ಐದು ವಿಭಾಗಗಳಲ್ಲಿ ವಿಂಗಡಿಸಬಹುದು.

೪.೧.೧ ಡೊಳ್ಳು ಕುಣಿತ (ಡೊಳ್ಳು ಬಾರಿಸುವುದು) :

ಹಾಲುಮತ ದೇವತೆಗಳ ಪ್ರಮುಖ ಆರಾಧನಾ ವಾದ್ಯ ಡೊಳ್ಳು. ಈ ಪರಿಸರದ ತುಂಬೆಲ್ಲಾ ವ್ಯಾಪಿಸಿರುವ ಹಾಲುಮತ ದೈವಗಳ ಆರಾಧನೆಗೆ ಡೊಳ್ಳು ನಿನಾದ ಬೇಕೇ ಬೇಕು. ಹಬ್ಬ-ಹುಣ್ಣಿಮೆ, ಜಾತ್ರೆ, ಉತ್ಸವಗಳಲ್ಲಿ ಡೊಳ್ಳಿನ ಮೇಳಗಳ ಸ್ಪರ್ಧೆ ಖಚಿತ. ಸಾವಿರಕ್ಕೂ ಹೆಚ್ಚು ಡೊಳ್ಳುವಾದಕರು, ನೂರಕ್ಕೂ ಹೆಚ್ಚು ಹಾಡುಗಾರರು ಈ ನಾಡಿನಲ್ಲಿರುವುದು ಸೋಜಿಗ. ಯಲ್ಪಾರಟ್ಟಿ, ಹಾರೂಗೇರಿ, ಕಂಕಣವಾಡಿ, ರಾಯಬಾಗ, ಬೆಕ್ಕೇರಿ, ಚಿಂಚಲಿ, ದಿಗ್ಗೇವಾಡಿ, ಖೇಮಲಾಪುರ, ಪರಮಾನಂದವಾಡಿ, ಮುಗಳಖೋಡ, ಹಿಡಕಲ್ಲ ಮುಂತಾದ ಗ್ರಾಮಗಳಲ್ಲಿ ನಡೆಯುವ ಜಾತ್ರೆಗಳು ಡೊಳ್ಳಿನ ನಿನಾದಗಳಿಂದಲೇ ಆರಂಭಗೊಳ್ಳಬೇಕು.

ಡೊಳ್ಳು ವಾದ್ಯ ಉಗಮ ಹೇಗಾಯಿತು? ಅದು ಕುರುಬ ಸಮುದಾಯಕ್ಕೆ ಹೇಗೆ ಬಂತು? ಅದರ ಹಿಂದಿನ ಉದ್ದೇಶ ಮತ್ತು ಮಹತ್ವವೇನು? ಅನ್ನುವುದನ್ನು ಕುರಿತು ಕುರುಬ ಸಮುದಾಯದಲ್ಲಿ ಅನೇಕ ಸಾಂಸ್ಕೃತಿಕ ಕಥೆಗಳಿವೆ.

ಕಥನ ಒಂದು : ಡೊಳ್ಳಾಸುರನ ಹೊಟ್ಟೆಯನ್ನು ಸೀಳಿ ಶಿವ ಡೊಳ್ಳು ತಯಾರಿಸಿದನೆಂಬ ಪೌರಾಣಿಕವಾದ ರೋಚಕ ಕಥೆಯಿದೆ. ಡೊಳ್ಳಾಸುರನೆಂಬ ರಾಕ್ಷಸನು ತಾನೊಬ್ಬನೇ ಈ ಲೋಕದಲ್ಲಿರಬೇಕೆಂಬ ಆಸೆ. ಈ ಕಾರಣಕ್ಕೆ ಶಿವನನ್ನು ಮೆಚ್ಚಿಸಿಕೊಳ್ಳುವುದಕ್ಕೆ ಘೋರವಾದ ಮತ್ತು ಸುಧೀರ್ಘ ತಪಸ್ಸನ್ನು ಮಾಡಿದ. ಆತನ ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷವಾಗಿ, ನಿನಗೆ ಯಾವ ವರ ಬೇಕು? ಕೇಳು ಈಡೇರಿಸುವುದಾಗಿ ಹೇಳಿದ. ಆಗ "ಡೊಳ್ಳಾಸುರನು ಒಂದು ದಿನದ ಮಟ್ಟಿಗೆ ತನ್ನ ಹೊಟ್ಟೆಯಲ್ಲಿ ವಾಸಿಸಬೇಕೆಂದು ಬೇಡಿಕೊಂಡ. ಆ ಮೇರೆಗೆ ಶಿವನು ಡೊಳ್ಳಾಸುರನ ಹೊಟ್ಟೆ ಹೊಕ್ಕ. ಆದರೆ ಒಂದು ದಿನದ ನಂತರ ಡೊಳ್ಳಾಸುರನು ಶಿವನನ್ನು ಹೊರಗೆ ಬಿಡಲು ಒಪ್ಪಲಿಲ್ಲ. ಶಿವನ ಗೈರು ಹಾಜರಿಯಿಂದಾಗಿ ಲೋಕದ ಎಲ್ಲ ವ್ಯವಹಾರಗಳು ನಿಂತು ಬಿಟ್ಟವು. ದೇವ-ದೇವತೆಗಳು ಚಿಂತೆಗೀಡಾಗಿ, ಶಿವನನ್ನು ಡೊಳ್ಳಾಸುರನ ಹೊಟ್ಟೆಯಿಂದ ಹೊರಗೆ ಬರಲು ವಿನಂತಿಸಿಕೊಂಡಾಗ, ಶಿವನು ಡೊಳ್ಳಾಸುರನ ಹೊಟ್ಟೆಯನ್ನು ಹರಿದು ಹೊರಗೆ ಬಂದನು. ಡೊಳ್ಳಾಸುರನ ಹೊಟ್ಟೆಯ ಚರ್ಮದಿಂದ ಡೊಳ್ಳು ಮಾಡಿ, ಎಲುಬಿನಿಂದ ಬಾರಿಸುವ ಗುಣಿ ಮಾಡಿ, ಕರುಳುಗಳಿಂದ ಡೊಳ್ಳು

ಬಿಗಿಯುವ ಹಗ್ಗ ಮಾಡಿ. ಬಿಗಿದು ಡೊಳ್ಳು ಮಾಡಿ. ಅಲ್ಲಿಯೇ ಇದ್ದ ಕುರುಬನಿಗೆ ಕೊಟ್ಟು, 'ನಿಮ್ಮ ಮನೆಯ ದೇವರು ಬೀರಪ್ಪ ಎಂದು ಪೂಜಿಸಿರಿ' ಎಂದು ಶಿವನು ಹೇಳಿದನಂತೆ."[೨]

ಕಥನ ಎರಡು : ಹೆಚ್ಚು-ಕಡಿಮೆ ಮೇಲಿನ ಕಥೆಗೆ ಸಾಮ್ಯತೆ ಹೊಂದಿರುವ ಇನ್ನೊಂದು ಕಥೆಯಿದ್ದು. ಇಲ್ಲಿ ಶಿವನು, ಪಾರ್ವತಿಯ ಅಪ್ಪಣೆ ಪಡೆದುಕೊಂಡು, ಪಂಚರಾತ್ರಿಗಳು ಕೂಡಿದಾಗ ನನ್ನನ್ನು ಹೊರಗಡೆ ಬಿಡಬೇಕು ಅನ್ನುವ ಕರಾರಿನೊಂದಿಗೆ ಡೊಳ್ಳಾಸುರನ ದೇಹವನ್ನು ಪ್ರವೇಶಿಸಿದ್ದ. ಕೆಲ ದಿನಗಳ ನಂತರ ಪಂಚರಾತ್ರಿಗಳು ಕೂಡಿದಾಗ ಕರಾರಿನಂತೆ ಡೊಳ್ಳಾಸುರನು ಶಿವನನ್ನು ಹೊರಗಡೆ ಬಿಡಲಿಲ್ಲ. ಪಂಚರಾತ್ರಿಗಳು ಒಂದುಗೂಡಿದ ನಂತರವು ಶಿವನು ಕಾಣಿಸದಿರುವುದಕ್ಕೆ ಪಾರ್ವತಿ ಆತಂಕಗೊಂಡಳು. ಕರಾರು ಮುಗಿದರೂ ತನ್ನನ್ನು ಹೊರೆಗೆ ಬಿಡದಿದ್ದಾಗ, ಶಿವನು ಡೊಳ್ಳಾಸುರನ ಹೊಟ್ಟೆಯಲ್ಲಿ ಬೆಳೆಯಲಾರಂಭಿಸಿದನು. ಕೊನೆಗೊಂದು ದಿವಸ ಡೊಳ್ಳಾಸುರನ ಹೊಟ್ಟೆ ಸೀಳಿಕೊಂಡು ಶಿವ ಹೊರಗೆ ಬರುತ್ತಾನೆ. ರಾಕ್ಷಸನ ದೇಹದಿಂದಲೇ ಡೊಳ್ಳನ್ನು ಮಾಡಿದ ಶಿವ, ತಾನು ಡೊಳ್ಳಾಸುರನ ಹೊಟ್ಟೆಯಿಂದ ಹೊರಗಡೆ ಬಂದಿರುವುದು ಪಾರ್ವತಿಗೆ ಗೊತ್ತಾಗಲಿ ಎಂದು ಆ ಡೊಳ್ಳನ್ನೇ ಹೆಗಲಿಗೇರಿಸಿಕೊಂಡು ಹಾರ್‍ಯಾಡಿ ಡೊಳ್ಳು ಬಡಿದನು. ಆಗ

ಸ್ವಾಮಿ ನಮ್ಮಯ ದೇವರ ಬಂದಾರ ಬನ್ನೀರೆ
ದೇವಿ ನಮ್ಮಯ ದೇವರ ಬಂದಾರ ಬನ್ನೀರೆ

ಎಂದು ಶಿವನ ಭಕ್ತರು ಹರ್ಷಚಿತ್ತರಾಗಿ ಹಾಡಿ ಪಾರ್ವತಿಯನ್ನು ಶಿವನಿರುವಲ್ಲಿಗೆ ಕರೆತಂದರು. ಆ ಸಮಯದಲ್ಲಿ ಆಹ್ವಾನಿಸಿದ ವಿಧಾನವನ್ನೇ ಇವತ್ತು ಡೊಳ್ಳಿನ ಹಾಡುಗಳ ಪಲ್ಲವಿಯಲ್ಲಿ ಡೊಳ್ಳಿನ ಹಾಡುಗಾರರು ಬಳಸುತ್ತಿರುವರು.

ಕಥನ ಮೂರು : "ಶಿವ ಒಂದು ದಿನ ಪಾರ್ವತಿಯ ಕಣ್ಣು ತಪ್ಪಿಸಿ, ಕೈಲಾಸವನ್ನು ತೊರೆದು ಸಿದ್ದಗಿರಿಯಲ್ಲಿ ತಪಸ್ಸು ಮಾಡಲು ಆರಂಭಿಸಿದ. ತಪಸ್ಸಿಗೆ ವಿಘ್ನವುಂಟಾಗದಿರಲೆಂದು ಚಾರವಾದಕನೆಂಬ ದೈತ್ಯನನ್ನು ಕಾವಲಿಟ್ಟುಕೊಂಡ. ಶಿವ ತಪಸ್ಸು ಮಾಡುತ್ತಿರುವುದು ನಾರದನಿಂದ ಅಕಸ್ಮಾತಾಗಿ ಪಾರ್ವತಿಗೆ ತಿಳಿಯುತ್ತದೆ. ಪಾರ್ವತಿ ನಂದಿಯನ್ನೇರಿ ಶಿವನಲ್ಲಿಗೆ ಬರುತ್ತಾಳೆ. ಚಾರವಾದಕ ಶಿವನ ದರ್ಶನಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಆಗ ಪಾರ್ವತಿ ಕೋಪಗೊಳ್ಳುತ್ತಾಳೆ. ಪಾರ್ವತಿ ವಾಹನವಾದ ನಂದಿಗೂ ಚಾರವಾದಕನಿಗೂ ಘೋರಯುದ್ಧ ನಡೆಯುತ್ತದೆ. ಕೋಪಿತನಾದ ನಂದಿ ತನ್ನ ಕೊಂಬಿನಿಂದ ದೈತ್ಯನನ್ನು ತಿವಿದು ತಿವಿದು ಗಾಯಗೊಳಿಸುತ್ತಾನೆ. ಗಾಯಗೊಂಡ ದೈತ್ಯ ಸಾವಿನ ಸ್ಥಿತಿಯಲ್ಲಿ ಕಿರುಚಿಕೊಳ್ಳುತ್ತಾನೆ. ಈ ಧ್ವನಿಯ ಆರ್ಥನಾದ ಶಿವನಿಗೂ ಮುಟ್ಟುತ್ತದೆ. ತಕ್ಷಣ ಹೊರಗಡೆ ಬರುತ್ತಾನೆ. ಚಾರವಾದಕನಿಗೆ ಶಿವ-ಪಾರ್ವತಿಯರ ಸಂಬಂಧದ ವಾಸ್ತವ ತಿಳಿಯುತ್ತದೆ. ತಪ್ಪಿನ ಅರಿವಾಗುತ್ತದೆ. ತನ್ನನ್ನು ಕ್ಷಮಿಸಿ ಶಾಶ್ವತವಾಗಿ ಭೂಲೋಕದಲ್ಲಿ ಉಳಿಸುವಂತೆ ಶಿವನಲ್ಲಿ ಅಂಗಲಾಚುತ್ತಾನೆ. ಈತನ ಬೇಡಿಕೆಗೆ ಮನಸೋತ ಶಿವ ಚಾರಕನನ್ನು ಅಮರನನ್ನಾಗಿಸುವುದಕ್ಕೆ ಡೊಳ್ಳನ್ನು ಸೃಷ್ಟಿಸಿದನು."[೩]

"ಚರ್ಮವ ತಗೆದು ಆಸ್ತಿಯ ಬಿಗಿದು
ನರದ ಹಗ್ಗವನು ಮಾಡಿದನು

ಪೂರ್ಣವಾಗಿ ನಾದ ಏರಲು ಬ್ರಹ್ಮಕ್ಕೆ

ಹಿರಿಡೊಳ್ಳು ಎಂಬ ಹೆಸರಿಟ್ಟನು"[೪]

ಅಂದಿನಿಂದ ಡೊಳ್ಳು ಕುರುಬರ ವಾದ್ಯವಾಗಿ ಪೂಜೆಗೊಳ್ಳುತ್ತಿದೆ.

ಕಥನ ನಾಲ್ಕು : ಡೊಳ್ಳಿನ ಉಗಮದ ಬಗ್ಗೆ ಆಂಧ್ರ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ ಜನಪ್ರಿಯ ಕಥೆ. "ಪ್ರಾಚೀನ ಕಾಲದಲ್ಲಿ ಹದಿನಾರು ಜನ ರಾಕ್ಷಸರು ಒಂದೆಡೆ ನೆಲೆಸಿದ್ದರು. ಇವರ ಮುಖಂಡ ತ್ರಿಪುರಾಂತಕ ಪರ್ವತದಲ್ಲಿದ್ದ. ಆತ ಬ್ರಹ್ಮ, ಶಿವ, ವಿಷ್ಣು ಮುಂತಾದ ಸೃಷ್ಟಿಕೃರ್ತ ದೇವತೆಗಳ ಪರಮಭಕ್ತ. ಮೂವತ್ತೆರಡು ಆಯುಧಗಳಿಂದ ಕೊಂದರೂ ನಾಶವಾಗದಂತೆ, ರಾಕ್ಷಸನ ಹನಿರಕ್ತ ನೆಲಕ್ಕೆ ಬಿದ್ದರೆ ಎಲ್ಲಾ ಸೈನ್ಯ ಪುನಃ ಜನ್ಮ ತಾಳುವಂತೆ, ಏಳು ನಿಮಿಷದಲ್ಲಿ ಮರಳಿ ಜನ್ಮಧರಿಸುವಂತೆ ಬ್ರಹ್ಮ, ಶಿವ, ವಿಷ್ಣು ದೇವತೆಗಳಿಂದ ವರ ಪಡೆದಿದ್ದ. ತಾನು ಈ ವರವನ್ನು ಪಡೆದಿದ್ದೇನೆ ಎನ್ನುವ ಅಹಂನಿಂದ ರಾಕ್ಷಸ, ದೇವತೆಗಳಿಗೆ ಹಿಂಸೆ ಕೊಡುತ್ತಿದ್ದ. ಋಷಿಗಳ ಯಜ್ಞ-ಯಾಗಗಳನ್ನು ಹಾಳು ಮಾಡುತ್ತಿದ್ದ. ಇವರೆಲ್ಲರು ಒಟ್ಟಿಗೆ ಸೇರಿ ವಿಶ್ವಕರ್ಮನಿಗೆ ಮೊರೆ ಹೋದರು. ರಾಕ್ಷಸನಿಂದ ತಮ್ಮನ್ನು ರಕ್ಷಿಸಲು ಪ್ರಾರ್ಥಿಸಿದರು. ವಿಶ್ವಕರ್ಮ ರಾಕ್ಷಸನ ವಿರುದ್ಧ ದಾಳಿ ನಡೆಸಿದರು. ಅವನಿಂದ ಒಂದು ತೊಟ್ಟು ರಕ್ತ ನೆಲಕ್ಕೆ ಬೀಳದಂತೆ ಕಾಳಿಕಾದೇವಿ ತನ್ನ ನಾಲಿಗೆಯನ್ನು ಚಾಚಿ ಬಿದ್ದ ರಕ್ತವನ್ನು ನೆಕ್ಕಿದಳು. ಆಗ ಆ ರಾಕ್ಷಸ ಸಂಹಾರನಾದ. ವಿಶ್ವಕರ್ಮ ದೇಹದ ಅಂಗಾಂಗಗಳಿಂದ ಡೊಳ್ಳನ್ನು ನಿರ್ಮಿಸಿ, ದೇವತೆಗಳಿಗೆ ಕಾಣಿಕೆಯಾಗಿ ಕೊಟ್ಟ."[೫]

ಡೊಳ್ಳು, ಹಾಲುಮತ ಸಮುದಾಯದಲ್ಲಿ ಜಾಗೃತಿ, ಸಂರಕ್ಷಣೆ ಮತ್ತು ಅಭಿವೃದ್ಧಿಯ ಸಂಕೇತವಾಗಿರುವಂತೆ ಕಂಡು ಬರುತ್ತದೆ. ಇಲ್ಲಿ ಮನುಷ್ಯತ್ವದ ಗುಣಗಳಿಗೆ ವಿರುದ್ಧವಾಗಿರುವ ವ್ಯಕ್ತಿಗಳನ್ನು ಸಂಹಾರ ಮಾಡುವ ಪರಿಕಲ್ಪನೆಯ ಹಿನ್ನೆಲೆಯಲ್ಲಿ, ರಾಕ್ಷಸರನ್ನು ಸಂಹಾರ ಮಾಡುವುದು ಕಂಡು ಬರುತ್ತದೆ. ಜೊತೆಗೆ ಇಲ್ಲಿ ಹಿಂಸೆಯನ್ನು ಹೊಡೆದು ಹಾಕಿ ಅಹಿಂಸೆಯನ್ನು ಪ್ರತಿಪಾದಿಸುವ ಧೋರಣೆ ವ್ಯಕ್ತವಾಗುತ್ತದೆ. ಅಲ್ಲದೆ ಡೊಳ್ಳು ವಾದ್ಯ ನರಬಲಿಯನ್ನು ಸಂಕೇತಿಸುತ್ತದೆ. ಇದು ಬಹುಶಃ ಪಶುಪಾಲಕರಲ್ಲಿ 'ನರಬಲಿ' ಆಚರಣೆಯಲ್ಲಿತ್ತೆಂಬ ಸಂದೇಹವನ್ನು ಉಂಟು ಮಾಡುತ್ತದೆ. ಡೊಳ್ಳು ತುಂಬಾ ಪ್ರಾಚೀನವಾದ ವಾದ್ಯ. ಕೇವಲ ಕಟ್ಟಿಗೆ ಮತ್ತು ಪ್ರಾಣಿಗಳ ಚರ್ಮದಿಂದ ನಿರ್ಮಿತವಾಗಿದ್ದು, ಕಬ್ಬಿಣದ ಬಳಕೆಯಾಗಿಲ್ಲ. ಹೀಗಾಗಿ ಇದು ತಂತಿ-ಕಬ್ಬಿಣದ ವಾದ್ಯಗಳಿಗಿಂತಲೂ ಪುರಾತನತೆಯನ್ನು ಹೊಂದಿದ ವಾದ್ಯವಾಗಿದೆ. ಡೊಳ್ಳು ವಾದ್ಯದ ಸೃಷ್ಟಿಯ ಮೇಲೆ ಹಲವು ಧರ್ಮಗಳ ಅಂದರೆ ಶೈವ-ವೈಷ್ಣವಗಳ ಪ್ರಭಾವವಾದಂತೆ ತೋರುತ್ತದೆ.

ಕುರುಬರು ಬೀರಪ್ಪ ದೇವರ ಪೂಜೆ, ಉತ್ಸವ, ಆರಾಧನೆ ಮತ್ತು ಶುಭ ಪ್ರಸಂಗಗಳಲ್ಲಿ ಡೊಳ್ಳು ಬಡಿಯುತ್ತಾ ಹಾಡುವುದು, ಕುಣಿಯುವುದು, ಪರಂಪರಾಗತ ಕಲೆ. ಅವರಿಗೆ ಡೊಳ್ಳು ಕೇವಲ ಒಂದು ವಾದ್ಯವಲ್ಲ. ದೈವವೇ ಆಗಿರುವುದು. ಹೀಗಾಗಿ "ಅದು ಅವರ ಆರಾಧ್ಯ ದೇವತೆಯ ಹಸ್ತದಲ್ಲಿ ರಾರಾಜಿಸಿತು. ಪಶುಪಾಲಕರು ತಮ್ಮ ದೈಗಳನ್ನು ಸಂತೃಪ್ತ ಪಡಿಸಲು, ನೃತ್ಯಕ್ಕೆ ಉತ್ತೇಜಿಸಲು ಡೊಳ್ಳನ್ನು ಬಳಕೆಗೆ ತಂದರು."[೬] ತಮ್ಮ ದೇವತೆಗಳ ಆರಾಧನೆಯನ್ನು ಮೊತ್ತಮೊದಲು ಡೊಳ್ಳಿನ ಪೂಜೆಯೊಂದಿಗೆ ಆರಂಭಿಸುವರು. ನಂತರದಲ್ಲಿ ಡೊಳ್ಳು ಬಾರಿಸುವುದು ಮತ್ತು ಹಾಡುಗಳಿಂದ ಕೊನೆಗೊಳಿಸುವರು.

ಡೊಳ್ಳು ಹಾಲುಮತದವರ ಪ್ರಮುಖವಾದ ವಾದ್ಯ. ಹಾಲುಮತ ಸಮುದಾಯದ ಪ್ರತಿ ಮನೆಯಲ್ಲಿಯೂ ಒಬ್ಬ ಡೊಳ್ಳು ಬಾರಿಸುವವನಿರುತ್ತಿದ್ದ. ಅಂದು ಪಶುಪಾಲನೆಯಲ್ಲಿ ತೊಡಗಿದ ಪಶುಪಾಲಕರ (ಕುರಿಗಾಹಿಗಳ) ವೃತ್ತಿಗೆ ಡೊಳ್ಳು ಅವಶ್ಯಕವಾಗಿತ್ತು. ಪ್ರತಿ ಕುರಿಗಳ ಹಿಂಡಿಗೆ ಕನಿಷ್ಟ ಒಂದಾದರೂ ಡೊಳ್ಳು ಕಡ್ಡಾಯವಾಗಿ ಇರುತ್ತಿತ್ತು. ಇದು ಒಂದು ಕುರಿ ಹಿಂಡಿನ ಇರುವಿಕೆಯನ್ನು ಡೊಳ್ಳಿನ ಭಯಂಕರ ಶಬ್ದದ ಮೂಲಕ ಇನ್ನೊಂದು ಹಿಂಡಿಗೆ ತಿಳಿಸುವ ಒಂದು ಸಂಪರ್ಕ/ಸಂವಹನ ಸಾಧನವಾಗಿತ್ತು. ಸಾಮಾನ್ಯವಾಗಿ ರಾತ್ರಿ ಹೊತ್ತಿಗೆ ಆಯಾ ಪ್ರದೇಶದಲ್ಲಿದ್ದ ಕುರಿಗಾಹಿಗಳು ಒಂದೆಡೆ ಬಂದು ಸೇರುತ್ತಿದ್ದರು. ಆ ಮೇಲೆ ಹಿಂಡುಗಳಲ್ಲಿರುವ ಡೊಳ್ಳು ಬಾರಿಸುವವರೆಲ್ಲ ಒಂದೆಡೆ ಕೂಡಿಕೊಂಡು ರಾತ್ರಿ ಮತ್ತು ಮುಂಜಾನೆ ನಸುಕಿನಲ್ಲಿ ದೊಡ್ಡ ಶಬ್ದ ಹೊಮ್ಮಿಸಿ ಡೊಳ್ಳು ಬಾರಿಸುತ್ತಿದ್ದರು. ಈ ಡೊಳ್ಳು ಬಾರಿಸುವುದರ ಹಿಂದೆ ಹಲವಾರು ಅರ್ಥಗಳಿದ್ದವು. ಒಂದು– ಒಂದು ಗುಂಪು ಡೊಳ್ಳು ಬಾರಿಸುವ ಮೂಲಕ ದೂರದ ಇನ್ನೊಂದು ಪ್ರದೇಶದಲ್ಲಿರುವ ಗುಂಪಿನ ತಮ್ಮ ಸಹಚರರಿಗೆ ತಮ್ಮ ಇರುವಿಕೆಯ ಸಂದೇಶವನ್ನು ಸಾರುವುದಾಗಿತ್ತು. ಇನ್ನೊಂದು– ರಾತ್ರಿ ಮತ್ತು ಮುಂಜಾನೆಯ ಸಮಯದಲ್ಲಿ ಕುರಿಗಳನ್ನು ಬೇಟೆಯಾಡಲಿಕ್ಕೆ ಬರುವ ಕ್ರೂರ ಪ್ರಾಣಿಗಳಿಂದ ತಮ್ಮ ಕುರಿ ಹಿಂಡುಗಳನ್ನು ರಕ್ಷಿಸುವ ತಂತ್ರಗಾರಿಕೆಯೂ ಇದಾಗಿದ್ದಿರಬಹುದು. "ದಟ್ಟಾರಣ್ಯದಲ್ಲಿ ಅಥವಾ ಅಟ್ಟಾರಣ್ಯದಲ್ಲಿ ತಿರುಗಾಡುವ ಕುರುಬರಿಗೆ ನಾಯಿ ಕುದುರೆಗಳು ಸಂದೇಶ ಹಾಗೂ ಸಂರಕ್ಷಣಾ ವಾಹಕಗಳಾಗುವುದರ ಜೊತೆಗೆ ಡೊಳ್ಳು ಕೂಡ ಅಂಥ ಸಂರಕ್ಷಣಾ ವಾಹಕವಾಗಿದ್ದನ್ನು ಗಮನಿಸಬಹುದು."[2]

ಡೊಳ್ಳು ಬಾರಿಸುವ ವ್ಯಕ್ತಿ ಹೆಚ್ಚು–ಕಡಿಮೆ ರಾತ್ರಿ ಮತ್ತು ನಸುಕಿನಲ್ಲಿ ಕುರಿಹಿಂಡನ್ನು ಕಾಯುವ ಕಾವಲುಗಾರನಾಗಿ ಕಾರ್ಯನಿರ್ವಹಿಸುತ್ತಿದ್ದ. ಡೊಳ್ಳು ಬಾರಿಸುವ ಶೈಲಿಯೂ, ಸಂದೇಶವನ್ನು ಸಾರುವ ಒಂದು ಪರಿಭಾಷೆಯಾಗಿತ್ತು. ಉದಾಹರಣೆ, ಡಂ. ಡಂ. ಡಂ. . . . . . ಎಂದು ಸರಳವಾಗಿ ಡೊಳ್ಳು ಬಾರಿಸುವ ಮೂಲಕ ತಮ್ಮ ಅಸ್ತಿತ್ವ ಮತ್ತು ಕುರಿಗಳ ರಕ್ಷಣೆಯನ್ನು ಸೂಚಿಸುತ್ತಿತ್ತು. ಅದೇ ಒಂದು ಡೊಳ್ಳು ಶಬ್ದ ಡಂ. ಡಂಡಂಡಂ. ಡಂ. ಡಂ.ಡಂ.ಡಂ. . . . . . . (ಸಿಡಿ ಕಡಿಯುವುದು) ಈ ರೀತಿಯಾಗಿ ಹೊರಹೊಮ್ಮುವ ಶಬ್ದಗಳು, ಆ ಕುರಿಗಾಹಿಗಳ ಗುಂಪು ಅನಾಹುತ/ಅಪಾಯಕ್ಕೆ ಸಿಲುಕಿರುವುದನ್ನು ಸೂಚಿಸುವ ಸಂದೇಶವಾಗಿರುತ್ತದೆ. ಉದಾಹರಣೆಗೆ ಶತ್ರುಗಳು ದಾಳಿಗೆ ಬರುವ ವಿಚಾರ ತಿಳಿದ ಕಾವಲುಗಾರ ಕಹಳೆ ಉದಿದಂತೆ, ತುರ್ತು ಚಿಕಿತ್ಸೆಗೆ ಒಳಗಾಗಿರುವ ರೋಗಿಯನ್ನು ಒಯ್ಯುತ್ತಿರುವ ಅಂಬುಲೆನ್ಸ್, ಬೆಂಕಿ ನಂದಿಸಲು ಹೊರಟಿರುವ ಅಗ್ನಿಶಾಮಕ ದಳದ ವಾಹನ ಹೊರಡಿಸುವ ಶಬ್ದಗಳನ್ನು ಇಲ್ಲಿ ಉಲ್ಲೇಖಿಸಬಹುದು. ಈಗಲೂ ಸಹ ನಾವು ಕಾಡಿನಿಂದ ನಾಡಿಗೆ ಬಂದ ಪ್ರಾಣಿಗಳನ್ನು ಹೆದರಿಸಿ ಕಾಡಿಗಟ್ಟಲು ಶಬ್ದ ಮಾಡುತ್ತೇವೆ ಇಲ್ಲವೆ ಮದ್ದುಗುಂಡು ಹಾರಿಸುತ್ತೇವೆ. ಅಶಾಂತಿಗೊಳಗಾದ ಗುಂಪನ್ನು ಚದುರಿಸಲು ಇಂದು ಕೂಡ ಪೋಲಿಸರು ಗಾಳಿಯಲ್ಲಿ ಗುಂಡು ಹಾರಿಸಿ ಶಬ್ದ ಮಾಡಿ ಜನತೆಯನ್ನು ಹೆದರಿಸುತ್ತಿರುವುದನ್ನು ಕಾಣುತ್ತೇವೆ.

ಡೊಳ್ಳು ಬಾರಿಸುವುದು ಶಕ್ತಿ ಸಾಮರ್ಥ್ಯ ಪ್ರದರ್ಶನ ಕಲೆಯೂ ಆಗಿತ್ತು. ಇದೇ ಮುಂದೆ ಪ್ರಗತಿ ಹೊಂದಿ ಡೊಳ್ಳು ಬಡಿಯುವವರಲ್ಲಿದ್ದ ಸಂಗೀತಗಾರ ಎಚ್ಚರಗೊಂಡು ಡೊಳ್ಳು ಬಾರಿಸುವವನಾದ. ಅದೇ ಡೊಳ್ಳು ಮುಂದಿನ ದಿನಗಳಲ್ಲಿ ಸಂಗೀತದ ಒಂದು ಪರಿಕರವಾಯಿತು. ಈ ಡೊಳ್ಳು ಚಿಕ್ಕ ಆಕಾರವನ್ನು ಪಡೆದು

ಕೊಂಡು 'ಡಮರುಗ'ವಾಗಿ ಶಿವನ ಕೈಯನ್ನು ಅಲಂಕರಿಸಿರುವುದನ್ನು ನಾವು ಕಾಣುತ್ತೇವೆ. ಡೊಳ್ಳನ್ನು ಬಾರಿಸುತ್ತ ಹಾಡುವುದನ್ನು ರೂಢಿಸಿಕೊಂಡಾಗ ಡೊಳ್ಳಿನ ಹಾಡುಗಳು ಅಸ್ತಿತ್ವ ಪಡೆದುಕೊಂಡವು.

ಬಾಗೆನಾಡಿನ ಪರಿಸರದಲ್ಲಿರುವ ಡೊಳ್ಳಿನ ಓಲಗ(ಮೇಳ)ಗಳು ನಾಡಿನೆಲ್ಲೆಡೆ ಪ್ರಸಿದ್ಧಿಯನ್ನು ಪಡೆದುಕೊಂಡಿವೆ. ಪ್ರತಿಯೊಂದು ಹಳ್ಳಿಯಲ್ಲಿ ಕನಿಷ್ಠ ಎರಡು–ಮೂರು ಡೊಳ್ಳಿನ ಹಾಡಿನ ಮೇಳಗಳಿವೆ. ಅಲಕನೂರ, ಹಾರೂಗೇರಿ, ಹಿಡಕಲ್ಲ, ಮುಗಳಖೋಡ, ಯಲ್ಪಾರಟ್ಟಿ, ಚಿಂಚಲಿ, ಕಂಕಣವಾಡಿ, ಸೌಸುದ್ಧಿ ಮುಂತಾದ ಗ್ರಾಮಗಳಲ್ಲಿ ನಾಲ್ಕೈದು ವಾಲಗದ ಮೇಳಗಳಿವೆ. "ಕನ್ನಡ ನಾಡಿನ ಬಹುಮುಖ್ಯ ಚರ್ಮವಾದ್ಯವಾದ ಈ ಡೊಳ್ಳು ಅಷ್ಟೇ ಬೃಹತ್ ವಾದ್ಯ ಕೂಡ. ಡೊಳ್ಳನ್ನು ಹೆಬ್ಬೇವು, ಹೊನ್ನೆಮರಗಳಿಂದ ತಯಾರಿಸುತ್ತಾರೆ. ಸುಮಾರು ಎರಡೂವರೆ ಅಡಿ ಉದ್ದದ ಮರದ ತುಂಡನ್ನು ಕತ್ತಿರಿಸಿ ಅದರ ಒಳಭಾಗವನ್ನು ಪೂರ್ತಿಯಾಗಿ ಟೊಳ್ಳು ಮಾಡಲಾಗುತ್ತದೆ. ಬಲಭಾಗಕ್ಕೆ ಹೋತದ ಚರ್ಮ ಮತ್ತು ಎಡಭಾಗಕ್ಕೆ ಆಡಿನ ಚರ್ಮವನ್ನು ಹೊಂದಿಸಲಾಗುತ್ತದೆ. ಸೆಣಬಿನ ಹಗ್ಗದಿಂದ ಹೊರಮೈಯನ್ನು ಬಿಗಿಯಲಾಗುತ್ತದೆ."[೮] ಡೊಳ್ಳಿಗೆ ಬಿಗಿದ ಬಲಭಾಗದ ಚರ್ಮಕ್ಕೆ ಬಾಳೆಯ ಸೊಪ್ಪಿನಿಂದ ತಯಾರಿಸಿದ ಜಿಗುಟಾದ ಮೇಣವನ್ನು, ಇಲ್ಲವೆ ಔಡಲ ಬೀಜದಿಂದ ತಯಾರಿಸಿದ ಎಣ್ಣೆಯ ಗಸಿಯನ್ನು ಲೇಪಿಸುತ್ತಾರೆ. ಇದನ್ನು ಲೇಪಿಸುವುದರಿಂದ ಗುಣಿಯ ಹೊಡೆತ ಚರ್ಮಕ್ಕೆ ಬೀಳುವುದಿಲ್ಲ ಹಾಗೂ ಮಂದ್ರವಾದ ನಾದ ಹೊರಹೊಮ್ಮುತ್ತದೆ. ಈ ನಾದ ಡೊಳ್ಳು ನಾದದ ಪ್ರಮುಖ ಅಸ್ಮಿತೆಯು ಹೌದು. ಹುಲಜಂತಿ ಮಾಳಿಂಗರಾಯ ಮತ್ತು ಪಟ್ಟಣಕಡೋಲಿ ಇಟ್ಟಪ್ಪರಾಯ ಜಾತ್ರೆಗಳಲ್ಲಿ ಡೊಳ್ಳುಗಳ ಮಾರಾಟವಾಗುತ್ತವೆ.

ಡೊಳ್ಳು ಬಾರಿಸುವವರ ಸಂಖ್ಯೆ ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲ. ಕನಿಷ್ಠ ಪಕ್ಷ ಇಬ್ಬರಾದರು ಇರಬೇಕು. ಇದು ಇಬ್ಬರಿಂದ ೧೦೦–೨೦೦ರ ವರೆಗೆ ವಿಸ್ತರಿಸುತ್ತದೆ. ಕೆಲವು ಸಮಯ ಇದು ಇನ್ನೂ ಹೆಚ್ಚಾಗಬಹುದು. ಚಿಂಚಲಿ ಮಾಯವ್ವ, ಅಲಕನೂರಿನ ಕರೇಸಿದ್ಧ, ಯಲ್ಪಾರಟ್ಟಿ ಅರಣ್ಯಸಿದ್ಧ, ಕಂಕಣವಾಡಿ ಹಾಲಸಿದ್ಧರ ಜಾತ್ರೆಗಳಲ್ಲಿ ಏಕಕಾಲಕ್ಕೆ ಒಂದೇ ವೇದಿಕೆಯಲ್ಲಿ ೨೦೦ಕ್ಕೂ ಹೆಚ್ಚು ವಾಲಗದವರು ಡೊಳ್ಳು ಬಾರಿಸುವುದನ್ನು ಕಾಣುತ್ತೇವೆ. ಡೊಳ್ಳು ಬಾರಿಸುವವರು ಡೊಳ್ಳನ್ನು ಹಗ್ಗದಿಂದ ನಡುವಿಗೆ (ಸೊಂಟಕ್ಕೆ) ಬಿಗಿದುಕೊಳ್ಳುವರು, ಇನ್ನೂ ಕೆಲವರು ಕಂಬಳಿಯನ್ನು ಸುತ್ತಿಕೊಂಡು ಕೊರಳಿಗೆ ಹಾಕಿಕೊಂಡು ಬಾರಿಸುವರು. ಡೊಳ್ಳಿನ ಬಲಭಾಗವನ್ನು ಗುಣಿಯಿಂದ ಬಾರಿಸಿದರೆ, ಎಡಭಾಗವನ್ನು ಅಂಗೈಯಿಂದ ನೇರವಾಗಿ ಬಾರಿಸುತ್ತಾರೆ. ಡೊಳ್ಳು ಬಾರಿಸುತ್ತಾ ಕುಣಿಯುವ ಕಲೆ ಡೊಳ್ಳು ಕುಣಿತ. ಡೊಳ್ಳಿನ ಬಡಿತ ಗುಣಿ ಲೆಕ್ಕದಲ್ಲಿ ಇರುತ್ತದೆ. ಒಂದು ಕೋಲುಪಟ್ಟಿ ಇನ್ನೊಂದು ಕೈಪಟ್ಟಿ ಸೇರಿದರೆ ಒಂದು ಗುಣಿ. ಡೊಳ್ಳು ಕುಣಿತದಲ್ಲಿ ಕೆಲವು ಮಜಲುಗಳಿರುತ್ತವೆ.

ಜನಪದ ಕಲೆಗಳು ದೈವಗಳ ಆಚರಣೆಯ ಸ್ವರೂಪದಿಂದ ಜನ್ಮತಾಳಿದವುಗಳು. ಹಾಗಾಗಿ ಇವುಗಳ ಮೂಲಭೂತ ಉದ್ದೇಶ ಮನರಂಜನೆಯಾಗಿರದೆ, ಪ್ರಥಮ ಆದ್ಯತೆ ದೈವಗಳ ಆಚರಣೆಯಾಗಿರುತ್ತದೆ. ಆದರೆ ಡೊಳ್ಳು ಕಲೆ ಹಾಗಲ್ಲ. ಇವರೆಡನ್ನೂ ಕರಗತ ಮಾಡಿಕೊಂಡ ಕಲೆ. ಹೀಗಾಗಿ ಡೊಳ್ಳು, ದೈವಾರಾಧನೆ ಮತ್ತು ಜನಸಮುದಾಯದ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಲ್ಪಡುತ್ತದೆ. ಇತ್ತೀಚಿನವರೆಗೆ ಡೊಳ್ಳು ಬಾರಿಸುವ ಕಲೆ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಆದರೆ ೧೦–೧೫ ವರ್ಷಗಳಲ್ಲಿ ಮಹಿಳೆಯರು ಈ ಕಲೆಯಲ್ಲಿ ಪಾಲ್ಗೊಂಡಿದ್ದಾರೆ. ಈ ಮೊದಲು ಮಹಿಳೆಯರು ಡೊಳ್ಳನ್ನು ಮುಟ್ಟುತ್ತಿರಲಿಲ್ಲ. ಮುಟ್ಟಿದರೆ ಡೊಳ್ಳು

ಹರಿಯುತ್ತದೆ, ಬೀರಪ್ಪ ಕೋಪಗೊಳ್ಳುತ್ತಾನೆ, ಮನೆತನಕ್ಕೆ ಕೆಡಕಾಗುತ್ತದೆ ಮುಂತಾದ ನಂಬಿಕೆಗಳಿಂದ ಅವರಿಗೆ ನಿಷೇಧವನ್ನು ಹೇರಲಾಗಿತ್ತು. ಆದರೆ ಇವತ್ತು ಆ ನಂಬಿಕೆಗಳನ್ನು ಮಿಥ್ಯಗಳೆಂದು ಹೊಡೆದು ಹಾಕಿದ ಮಹಿಳೆಯರು, ಪುರುಷರಂತೆ ಡೊಳ್ಳು ಬಾರಿಸುವ ಕಲೆಯನ್ನು ಪ್ರದರ್ಶಿಸುತ್ತಿರುವರು. ಸಾಮಾನ್ಯವಾಗಿ ಡೊಳ್ಳು ಬಾರಿಸುವವರು ವರ್ತುಲಾಕಾರದಲ್ಲಿದ್ದು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಡೊಳ್ಳು ಬಾರಿಸುವಲ್ಲಿ ನೃತ್ಯಾಭಿವ್ಯಕ್ತಿಯನ್ನು ಕಾಣುತ್ತೇವೆ.

ಡೊಳ್ಳು ಬಾರಿಸುವುದು ಅಥವಾ ಓಲಗ ಉದ್ದೇಶ ಸುತ್ತ-ಮುತ್ತಲಿನ ಎಲ್ಲರನ್ನು ಒಂದೆಡೆ ಸೇರಿಸುವ ತಂತ್ರಗಾರಿಕೆಯಾಗಿ, ಆರಂಭಗೊಂಡಿರುವ ಸಾಧ್ಯತೆ ಇದೆ. ಜೊತೆಗೆ ದೇವರ ಆರಾಧನೆಯನ್ನು ಮತ್ತು ಜನರು ಒಂದು ಗೂಡಿದ ಸುದ್ದಿಯನ್ನು ದೂರದ ಸ್ಥಳಕ್ಕೆ ರವಾನಿಸುವ ಸಂದೇಶವು ಆಗಿರಬಹುದು. ವಾಲಗದವರು ದೇವರನ್ನು 'ಒಡೆಯ'ನೆಂದು ತಮ್ಮನ್ನು 'ಆಳುಮಕ್ಕಳು' ಎಂದು ಕರೆದುಕೊಳ್ಳುತ್ತಾರೆ.

೪.೧.೨ ಡೊಳ್ಳಿನ ಹಾಡು :

ಹಾಲುಮತ ಸಮುದಾಯದಲ್ಲಿ ಬಹುಮುಖ್ಯವಾಗಿ ಕಂಡು ಬರುವ ಮೌಖಿಕ ಅಭಿವ್ಯಕ್ತಿ ಎಂದರೆ ಡೊಳ್ಳಿನ ಹಾಡುಗಳು. ಇವುಗಳೇ ಹಾಲುಮತ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಧಾನ ಆಕರಗಳಾಗಿವೆ. ಹಾಗೆಂದ ಮಾತ್ರಕ್ಕೆ ಈ ಹಾಡುಗಳು ಕೇವಲ ಹಾಲುಮತ ಸಂಸ್ಕೃತಿಗೆ ಮಾತ್ರ ಸೀಮಿತವಾಗಿಲ್ಲ. ಸಮಾಜದ ಎಲ್ಲ ಆಚಾರ-ವಿಚಾರ, ನೀತಿ-ನಿಯಮ, ತತ್ವ-ಸಿದ್ಧಾಂತ, ನ್ಯಾಯ-ಅನ್ಯಾಯ ಮುಂತಾದವುಗಳನ್ನು ಒಳಗೊಂಡಿದೆ. ಇವು ಯಾವುದೇ ಒಂದು ವ್ಯವಸ್ಥೆಗೆ ಒಳಗಾಗಿಲ್ಲ ಮತ್ತು ಒಂದೇ ಕಾಲಕ್ಕೆ ಸಿಕ್ಕಿಹಾಕಿ ಕೊಂಡಿಲ್ಲ. ಕೇವಲ ಪುರಾಣಗಳಿಂದ ಕೂಡಿಲ್ಲ, ಚರಿತ್ರೆ, ವರ್ತಮಾನವನ್ನು ಒಳಗೊಂಡಂತೆ ಎಲ್ಲವುಗಳನ್ನು ಒಳಗೊಂಡಿವೆ. "ಹಾಗಾಗಿ ಇಲ್ಲಿ ಕಾಣಿಸಿಕೊಳ್ಳುವ ಕಥನದ ವಸ್ತುವೈವಿಧ್ಯತೆ ಕೇಳುಗನನ್ನು, ಓದುಗನನ್ನು ಮತ್ತೆ ಮತ್ತೆ ಕೇಳಿಸಿಕೊಳ್ಳುವಂತೆ, ಓದುವಂತೆ ಉದ್ದೀಪಿಸುತ್ತದೆ. ಜಾನಪದಕ್ಕೆ ಈ ಕ್ರಿಯೆ ಮಹತ್ವವಾದದ್ದು. ಇದು ಡೊಳ್ಳಿನ ಹಾಡುಗಳಿಗೆ ಇರುವ ವಿಶಿಷ್ಟ ಚಹರೆಯೂ ಹೌದು, ಜೀವಂತಿಕೆಯೂ ಹೌದು. ಹಾಗಾಗಿ ಈ ಹಾಡುಗಳನ್ನು ಗತ-ಆಧುನಿಕ ಕಾಲದ ಸ್ಮೃತಿ ಸಂಚಯವೆಂದೆ ಕರೆಯಬಹುದು. ಇವುಗಳ ವಸ್ತು ನಿರೂಪಣ ಶೈಲಿ ಕನ್ನಡ ಜಾನಪದ ಪರಂಪರೆಯಲ್ಲೇ ವಿಶಿಷ್ಟವಾದುದು. ಕಥಾವಸ್ತುವಿಗೆ ಜೀವತುಂಬಿ ಅದೊಂದು ಜನಾಂಗಿಕ ಮಹಾಕಾವ್ಯವಾಗಿ ರೂಪಿತವಾಗಿದೆ. ಇವುಗಳ ಅಂತರಂಗದಲ್ಲಿ ಸಾಂಸ್ಕೃತಿಕ, ಆರ್ಥಿಕ, ವೃತ್ತಿ ಮತ್ತು ಧಾರ್ಮಿಕ, ಸಂಘರ್ಷ, ಪುರಾಣ, ಚರಿತ್ರೆ, ನೀತಿ, ಸಾಮಾಜಿಕ ಕಳಕಳಿ, ತರ್ಕ, ಅನುಭವ-ಅನುಭಾವ ಮುಂತಾದ ವೈಖರಿಗಳ ಸಂಗಮವಿದೆ. ಇಂತಹ ಹಾಡುಗಳನ್ನು ಕೇವಲ ಹಾಡುಗಳಾಗಿ ನೋಡುವ ಹಳೆಯ ಸಂಪ್ರದಾಯಿಕ ಕ್ರಮದಿಂದ ದೂರ ಸರಿದು ಅದರಲ್ಲಿ ಅಡಕವಾಗಿರುವ ವಸ್ತುವಿಶಿಷ್ಟತೆಯನ್ನು ಸಮುದಾಯ ಮತ್ತು ಸಮುದಾಯೇತರ ಕಥನಗಳಲ್ಲಿ ಸಿಗುವ ಕಥನಗಳೊಂದಿಗೆ ಅಂತರ್‌ಶಿಸ್ತೀಯವಾಗಿ, ಅದನ್ನೊಂದು ಚಾರಿತ್ರಿಕ ಸಂದರ್ಭದ ಭಾಗವಾಗಿ ನೊಡುವ ದೃಷ್ಟಿಕೋನ ಆರಂಭವಾಗಬೇಕು."[7]

"ಕಾವ್ಯಕಲೆಯ ಅತ್ಯಂತ ಪ್ರಾಚೀನ ರೂಪಗಳಲ್ಲಿ ಡೊಳ್ಳಿನ ಹಾಡು ಒಂದು. ಈ ಹಾಡುಗಳನ್ನು ಗ್ರಾಂಥಿಕ ರೂಪದಲ್ಲಿ 'ಡೊಳ್ಳಿನ ಹಾಡು'ಗಳೆಂದು ಕರೆದರೆ ಸೈದ್ಧಾಂತಿಕ ಪರಿಭಾಷೆಯಲ್ಲಿ 'ಮಹಾಕಾವ್ಯ'ವೆಂದು

ಗ್ರಹಿಸಲಾಗುತ್ತದೆ. ಇವುಗಳನ್ನು ಗದ್ಯ–ಪದ್ಯ ರೂಪದ ದೀರ್ಘವಾದ ಕಥನಗಳೆಂದು ಕರೆಯಬಹುದು. ಇಲ್ಲಿ ಕಥೆಗಿಂತ ಹೆಚ್ಚಾಗಿ ವಸ್ತು ಇರುತ್ತದೆ. ಆ ವಸ್ತುವೇ ಹಾಡುಗಳ ರೂಪದಲ್ಲಿ ಅನಾವರಣವಾಗುತ್ತಿರುತ್ತದೆ. ಈ ಹಾಡುಗಳಲ್ಲಿ ಪ್ರಧಾನವಾಗಿ ಕಂಡುಬರುವ ವಸ್ತುವೆಂದರೆ ಸಾಂಸ್ಕೃತಿಕ ವೀರರ ಜೀವನ ಚರಿತ್ರೆ. ಇವುಗಳ ಜೀವಂತಿಕೆ ಇರುವುದೇ ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಅನಾವರಣ ಮಾಡುವಲ್ಲಿ. ಈ ವೀರರ ಚರಿತ್ರೆಯನ್ನು ಜೀವಂತಗೊಳಿಸುವುದಕ್ಕಾಗಿಯೇ ಈ ಹಾಡುಗಳು ಸೃಷ್ಟಿಯಾದವು."[೧೦]

ಡೊಳ್ಳಿನ ಹಾಡುಗಳನ್ನು ದೇವತೆಗಳ–ದೇವಾಲಯಗಳ ಆವರಣದಲ್ಲಿ ಹಾಡುವುದು ಪಾರಂಪರಿಕ ಸಂಪ್ರದಾಯ. ಹಾಲುಮತಸ್ಥರು ತಮ್ಮ ಆರಾಧ್ಯ ದೇವತೆಗಳ ವಾರಗಳಂದು ಅಂದರೆ ರವಿವಾರ, ಗುರವಾರಗಳಂದು ಹಾಗೂ ಹುಣ್ಣಿಮೆ, ಅಮವಾಸ್ಯೆಗಳಂದು ಹಾಡುವರು. ಅಲ್ಲದೆ ತಮ್ಮ ಬಿಡುವಿನಲ್ಲಿ, ಕಾಯಕದಲ್ಲಿ, ಹೊಲ–ಗದ್ದೆಗಳಲ್ಲಿ, ಕುರಿಗಳನ್ನು ಮೇಯಿಸುವಾಗ ಹಾಡುವರು. ಪುರುಷ ಮತ್ತು ಮಹಿಳೆಯರು ಇತ್ತೀಚಿಗೆ ಕಲಾ ಮೇಳಗಳಲ್ಲಿಯೂ ಡೊಳ್ಳಿನ ಹಾಡುಗಳನ್ನು ಹಾಡುವರು. ತಮ್ಮ ತೃಪ್ತಿಯ ಜೊತೆಗೆ ದೇವತೆಗಳನ್ನು ತೃಪ್ತಿಗೊಳಿಸುವುದಕ್ಕಾಗಿ ತಾವು ಹಾಡುತ್ತಿದ್ದೇವೆ ಎನ್ನುವ ಭಾವನೆ ಹಾಡುಗಾರರದು. ಹಾಡುಗಾರರು ತಮ್ಮ ದೇವತೆಯನ್ನು 'ಒಡೆಯ'ನೆಂದು, ತಮ್ಮನ್ನು ಆತನ ಸೇವಕರೆಂದು ಅಂದರೆ ಆಳುಮಕ್ಕಳೆಂದು ತಿಳಿದುಕೊಳ್ಳುವರು. ಹೀಗಾಗಿ ಡೊಳ್ಳಿನ ಹಾಡುಗಳನ್ನು ಒಡೆಯ ಮತ್ತು ಆಳುಮಕ್ಕಳ ಸಂವಾದವೆಂದು ಕರೆಯಬಹುದು.

ಡೊಳ್ಳಿನ ಹಾಡುಗಳನ್ನು ಹಾಡುವವರು ದೇವರ ಎದುರಿಗೆ ನಿಂತು ಅಥವಾ ಕುಳಿತು ಹಾಡುವುದು ಸಂಪ್ರದಾಯ. ಅವರೆಂದು ದೇವರಿಗೆ ಬೆನ್ನು ಮಾಡಿ ಕುಳಿತು ಕೊಳ್ಳುವುದಿಲ್ಲ ಮತ್ತು ಹಾಡುವುದಿಲ್ಲ. ಅದು ಅಪರಾಧವೆಂದು ಅವರ ನಂಬಿಕೆ. ದೇವಾಲಯದ ಆವರಣವನ್ನು ಬಿಟ್ಟು ಹೊರಗಡೆ ಹಾಡುವುದಾದರೆ ಉತ್ತರ ಅಥವಾ ಪೂರ್ವ ದಿಕ್ಕಿಗೆ ಅಭಿಮುಖವಾಗಿ ಕುಳಿತು ಅಥವಾ ನಿಂತು ಹಾಡುವರು. ಇತ್ತೀಚಿಗೆ ಡೊಳ್ಳು ಹಾಡುಗಾರರು ಕುಳಿತು ಹಾಡುವುದಕ್ಕಿಂತ ಹೆಚ್ಚಾಗಿ ನಿಂತುಕೊಂಡು ಹಾಡುವ ವಿಧಾನವನ್ನೇ ಅನುಸರಿಸುತ್ತಿದ್ದಾರೆ. ಹಾಡುಗಳಿಗೆ ತಕ್ಕಂತೆ ಆಂಗಿಕ ಅಭಿನಯ ವ್ಯಕ್ತಪಡಿಸಬೇಕಾಗಿರುವುದರಿಂದ ಹಾಡುಗಾರರು ಡೊಳ್ಳನ್ನು ಕೂಡ ಬಾರಿಸುವುದಿಲ್ಲ. ಹಾಡುಗಾರಿಕೆಯಲ್ಲಿ ಡೊಳ್ಳು, ದಿಮ್ಮು, ತಾಳ, ಡಗ್ಗ ಮುಂತಾದ ವಾದ್ಯಗಳು ಬಳಕೆಯಾಗುತ್ತವೆ. ಡೊಳ್ಳನ್ನು ಹಾಸಿದ ಕಂಬಳಿಯ ಮೇಲಿಟ್ಟು ಕುಳಿತುಕೊಂಡು ಅಥವಾ ಕೊರಳಲ್ಲಿ ಹಾಕಿಕೊಂಡು ನಿಂತು ಬಾರಿಸುವುದರ ಮುಖಾಂತರ ಹಾಡನ್ನು ಹಾಡುವುದಕ್ಕೆ ಆರಂಭಿಸುವರು. ಹಾಡುಗಾರಿಕೆ ಮುಮ್ಮೇಳ ಮತ್ತು ಹಿಮ್ಮೇಳಗಳ ಸಂಯುಕ್ತ ವಿಧಾನದಲ್ಲಿ ನಡೆಯುತ್ತದೆ. ಮುಮ್ಮೇಳದಲ್ಲಿ ಇಬ್ಬರಿದ್ದರೆ, ಹಿಮ್ಮೇಳದಲ್ಲಿ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚು ಜನರಿರುತ್ತಾರೆ. ಮುಮ್ಮೇಳದಲ್ಲಿದ್ದವರು ಕುಳಿತು ಅಥವಾ ನಿಂತು ಹಾಡನ್ನು ಹಾಡುತ್ತಾರೆ. ಹಿಮ್ಮೇಳದಲ್ಲಿ ಕುಳಿತವರಲ್ಲಿ ಒಬ್ಬಾತ ಡೊಳ್ಳಿನ ದಿಮ್ಮು ಹಾಕುತ್ತಾನೆ. ಡೊಳ್ಳು ವಾದ್ಯದ ದಿಮ್ಮು, ಹಾಡುಗಾರರಲ್ಲಿ ಲಯ ಮತ್ತು ಹುಮ್ಮಸ್ಸನ್ನು ತುಂಬಿ ಅವರನ್ನು ಹಾಡುವುದಕ್ಕೆ ಪ್ರೇರೆಪಿಸುತ್ತದೆ. ಈ ಹಾಡುಗಳು ಮುಖ್ಯ ಗುಣಲಕ್ಷಣವೆಂದರೆ ನ್ಯಾಯ ನೀತಿ ತತ್ವಗಳನ್ನು ಹೇಳುವುದು.

ಡೊಳ್ಳಿನ ಹಾಡುಗಳಲ್ಲಿ ಪ್ರಮುಖವಾಗಿ 'ಮಾರ್ಗದ ಹಾಡು' ಮತ್ತು 'ಖ್ಯಾಲಿ ಹಾಡು' ಎಂದು ಎರಡು ಪ್ರಕಾರಗಳಿವೆ. ಸಾಂಸ್ಕೃತಿಕ ವೀರರ ಹಾಡುಗಳನ್ನು ಮಾರ್ಗದ ಹಾಡುಗಳೆಂದು, ಸಾಂಸ್ಕೃತಿಕ

ವೀರರಲ್ಲದವರ ಹಾಡುಗಳನ್ನು ಖ್ಯಾಲಿ ಹಾಡುಗಳೆಂದು ಕರೆಯುವರು. ಮಾರ್ಗದ ಹಾಡುಗಳು ಸರಳ ಸುಂದರವಾಗಿದ್ದು, ಆಡುಮಾತಿನ ಅಪ್ಪಟ ಜನಪದ ಶೈಲಿಯಲ್ಲಿರುತ್ತವೆ. ಖ್ಯಾಲಿ ಹಾಡುಗಳು ಸರಳವಾಗಿರದೇ ಭಿನ್ನ ಭಿನ್ನವಾದ ಕಠಿಣ ಶೈಲಿಗಳನ್ನು ಹೊಂದಿರುತ್ತವೆ. ಡೊಳ್ಳಿನ ಹಾಡುಗಳಲ್ಲಿ ಎರಡು ಧಾರೆಗಳು. ಒಂದು ಮೌಖಿಕ ಪರಂಪರೆಯಿಂದ ಬೆಳೆದು ಬಂದರೆ, ಇನ್ನೊಂದು ರಚನೆಕಾರರಿಂದ ರಚಿಸಲ್ಪಟ್ಟು ಹಾಡುವಂತದ್ದು. ಈ ಎರಡು ಧಾರೆಗಳು ಮೌಖಿಕ ನೆಲೆಯಲ್ಲಿ ಸಮಾನವಾಗಿ ಬೆಳೆದು ಬರುತ್ತಿದ್ದು, ಪೌರಾಣಿಕ ಹಿನ್ನೆಲೆಯನ್ನು ಹೊಂದಿವೆ. ಅಲ್ಲದೆ ಈ ಹಾಡುಗಳು 'ವಾದ' ಮತ್ತು 'ಪ್ರತಿವಾದ'ದ ರೂಪದಲ್ಲಿ ಪ್ರದರ್ಶನಗೊಳ್ಳುತ್ತವೆ. ಎರಡು ತಂಡಗಳ ನಡುವೆ ನಡೆಯುವ ಸಂವಾದದಂತೆ ಈ ಹಾಡುಗಳು ಅಭಿವ್ಯಕ್ತಿಗೊಳ್ಳುತ್ತವೆ.

ರಾಯಬಾಗ ಪರಿಸರದ ಹಾಲುಮತ ಸಮುದಾಯದ ದೇವತೆಗಳ ಆರಾಧನೆಯ ಅಂಗವಾಗಿ ಬೇರೂರಿಕೊಂಡಿರುವ ಜನಪದೀಯ ಕಲೆ ಡೊಳ್ಳಿನ ಹಾಡು. ಡೊಳ್ಳಿನ ಹಾಡುಗಳನ್ನು ಹಾಡುವುದಕ್ಕೆ ಹಾಡಿಕೆ ಎನ್ನುವರು. ಬಾನೆನಾಡಿನ ಪರಿಸರದಲ್ಲಿ ಜನಪದ ಕಲೆಗಳು ಅಧಿಕವಾಗಿರುವಂತೆ, ಅವುಗಳನ್ನು ಪ್ರದರ್ಶಿಸುವ ಕಲಾವಿದರ ಸಂಖ್ಯೆಯೂ ಅತ್ಯಧಿಕವಾಗಿದ್ದು, ಇವುಗಳಲ್ಲಿ ಡೊಳ್ಳಿನ ಹಾಡುಗಾರರದು ಸಿಂಹಪಾಲೆಂದು ಕಂಡು ಬರುತ್ತದೆ. ಪ್ರತಿಯೊಂದು ಡೊಳ್ಳಿನ ಹಾಡುಗಳ ಮೇಳದಲ್ಲಿ ೫, ೭, ೯, ೧೧ ಹಾಡುಗಾರರಿದ್ದು ಇದನ್ನು 'ವಾಲಗ' ಎಂದು ಕರೆಯುವರು. ಓಲಗ ಪದದ ಗ್ರಾಮ್ಯರೂಪವೇ 'ವಾಲಗ'. ಹಾಡುಗಾರರ ದೃಷ್ಟಿಯಲ್ಲಿ ಇದು ಬೀರದೇವರ ಒಡ್ಡೋಲಗ. ಅವರು ಅಮೋಘಸಿದ್ಧ, ಮಾಳಿಂಗರಾಯ, ಬೀರಸಿದ್ಧ ಮುಂತಾದ ಹಾಲುಮತ ಮಾರ್ಗ ಹಾಗೂ ಅನುಭವ ಪದಗಳನ್ನು ಹಾಡುವರು. ಇಂತಹ ವಾಲಗಗಳಲ್ಲಿ ಒಂದೇ ಡೊಳ್ಳು ಇರುತ್ತದೆ. ಮುಮ್ಮೇಳದವರು ನಿಂತು, ಹಿಮ್ಮೇಳದವರು ಕುಳಿತು ಹಾಡುವರು.

ಬಾಗೆನಾಡೆಂದು ಪ್ರಸಿದ್ಧವಾಗಿರುವ ರಾಯಬಾಗ ಪರಿಸರದ ಎಲ್ಲ ಊರಿಗಳಲ್ಲಿ ಡೊಳ್ಳಿನ ಹಾಡುಗಳ ಸಂಘಗಳಿರುವುದು ಸಾಮಾನ್ಯ. ಬಾಗೆನಾಡು ಎಂದಾಕ್ಷಣ ಡೊಳ್ಳಿನ ಮೇಳಗಳೇ ಕಣ್ಣುಮುಂದೆ ಸುಳಿಯುತ್ತವೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದಕ್ಕಿಂತ ಹೆಚ್ಚು ಡೊಳ್ಳಿನ ಮೇಳಗಳಿವೆ. ಅಲಕನೂರ, ಯಲ್ಪಾರಟ್ಟಿ, ರಾಯಬಾಗ, ಹಾರೂಗೇರಿ, ಹಿಡಕಲ್ಲ, ಮುಗಳಖೋಡ, ಕಂಕಣವಾಡಿ, ಚಿಂಚಲಿ, ಸವಸುದ್ದಿ ಮುಂತಾದ ಊರುಗಳಲ್ಲಿ ನಾಲ್ಕೈದು ಡೊಳ್ಳಿನ ಗಾಯನದ ಮೇಳಗಳಿವೆ. ಸದ್ಯ ಈ ಪರಿಸರದಲ್ಲಿ ೬೭ಕ್ಕೂ ಹೆಚ್ಚು ಡೊಳ್ಳಿನ ಹಾಡುಗಳ ಸಂಘಗಳಿವೆ.

ಈಗಿನ ಆಧುನಿಕತೆಯ ಸಂದರ್ಭದಲ್ಲಿ ಡೊಳ್ಳಿನ ಹಾಡುಗಳು ಅವಸಾನದ ಹಂತವನ್ನು ತಲಪುತ್ತಿವೆ. ಆಧುನಿಕ ಸಂವಹನ ಮಾಧ್ಯಮಗಳ ಪ್ರಾಮುಖ್ಯತೆಯಿಂದಾಗಿ ಜನಪದ ಕಲೆಗಳೆಲ್ಲ ಕಣ್ಮರೆಯಾಗುತ್ತಿವೆ. ಕಲಾವಿದರು ಕೂಡ ಇದಕ್ಕೆ ಹೊರತಾಗಿಲ್ಲ. ಜನಪದಿಯ ಹಿನ್ನೆಲೆಯ ಕಲೆಗಳನ್ನು ಹಿರಿಯ ಕಲಾವಿದರಿಂದ, ಇಂದಿನ ಮಕ್ಕಳು ಕಲಿಯುವುದಕ್ಕೆ ಆಸಕ್ತಿ ತೋರುತ್ತಿಲ್ಲ. ಆಧುನಿಕ ಶೈಲಿ ಹಾಡುಗಳಂತೆ, ಡೊಳ್ಳಿನ ಹಾಡುಗಳು ಸಾಕಷ್ಟು ಪ್ರಮಾಣದಲ್ಲಿ ಕಿರಿಯ ಕಲಾವಿದರಿಗೆ ರವಾನೆ ಆಗುತ್ತಿಲ್ಲ. ಸಿನಿಮಯ ಶೈಲಿಯ ಹಾಡುಗಳೇ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿವೆ. ಇದೇ ಪರಂಪರೆ ಇನ್ನೂ ಕೆಲವು ವರ್ಷಗಳವರೆಗೆ ಹೀಗೆಯೇ ಮುಂದುವರೆದರೆ ಪಾರಂಪರಿಕವಾಗಿ ಬಂದಿರುವ ಡೊಳ್ಳಿನ ಹಾಡುಗಳು ಕಣ್ಮರೆಯಾಗುವುದರಲ್ಲಿ ಅನುಮಾನವೇ ಇಲ್ಲ. ನಿಜವಾದ ಜನಪದ ಕಲೆಗಳು ಮತ್ತು ಸಂಸ್ಕೃತಿಗಳು ಆಧುನಿಕತೆಯ ಜೊತೆ ಎಂದೂ

ಪೈಪೋಟಿ ಮಾಡಲಾರವು. ಜನಪದ ಕಲೆಗಳು ಅಳಿವಿನ ಅಂಚಿಗೆ ಬಂದು ನಿಲ್ಲಲು ಆಧುನಿಕತೆಯೊಂದೇ ಕಾರಣವಲ್ಲ. ಇಂದು ಗ್ರಾಮ ಸಂಸ್ಕೃತಿ ಮತ್ತು ಸಮುದಾಯ ಸಂಸ್ಕೃತಿಯ ಸೃಜನಶೀಲತೆ ಮಾಯವಾಗುತ್ತಿದೆ ಎನ್ನುವ ಆತಂಕ ಉಂಟಾಗುತ್ತಿದೆ. ಜನತೆ ಗ್ರಾಮ ಸಂಸ್ಕೃತಿಯನ್ನು ಮೋಜಿನ ಸಂಸ್ಕೃತಿಯಾಗಿ ಸ್ವೀಕರಿಸಿ ಆಂನದಿಸುತ್ತಿದ್ದಾರಯೇ ವಿನಹಃ ಅಭಿವೃದ್ಧಿಗಾಗಿ ಅಲ್ಲ. ಜನಪದ ಕಲೆಗಳು ಶ್ರೀಮಂತರ ಸುಖ-ಸಂತೋಷಕ್ಕಾಗಿ ಮಂದಿರ, ಹೊಟೇಲಗಳಲ್ಲಿ ಪ್ರದರ್ಶಿತಗೊಳ್ಳುತ್ತವೆ. ಕಲೆಗಳ ಹಿಂದಿನ ನಿಜವಾದ ತಾತ್ವಿಕತೆಯನ್ನು ಯಾರು ಗುರುತಿಸುತ್ತಿಲ್ಲ. ಇವತ್ತಿನ ಸಮೂಹ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುವ ಡೊಳ್ಳಿನ ಹಾಡುಗಳನ್ನು ಪರಾಮರ್ಶಿಸಿದರೆ, ಅವುಗಳಲ್ಲಿ ಪಾರಂಪರಿಕ ಸಾಂಸ್ಕೃತಿಕ ಅನನ್ಯತೆ ಕಾಣದೇ ಇರುವುದು ವಿಷಾದದ ಸಂಗತಿ. ಜೊತೆಗೆ ಈ ಹಾಡುಗಳು ಬೌದ್ಧಿಕ, ತಾರ್ಕಿಕ ಹಾದಿಯನ್ನು ಉಲ್ಲಂಘಿಸಿ ರೋಗಗ್ರಸ್ಥ ರೂಪವನ್ನು ಪಡೆದು ಕೊಳ್ಳುತ್ತಿವೆ. ಅಂದರೆ ಮನೋವೈಫಲ್ಯದ ರೂಪವನ್ನು ತಾಳುತ್ತಿವೆ. ಆದ್ದರಿಂದ ಇಂದು ಕವಲು ದಾರಿಯಲ್ಲಿರುವ ಡೊಳ್ಳಿನ ಹಾಡುಗಾರಿಕೆಯನ್ನು ಆರೋಗ್ಯಕರವಾದ ನೆಲೆಯಲ್ಲಿ ಉಳಿಸಿಕೊಳ್ಳುವ ಬಗ್ಗೆ ಅಲೋಚನೆಗಳನ್ನು ಮಾಡಬೇಕಾಗಿದೆ.

೪.೧.೩ ದಟ್ಟಿ ಕುಣಿತ :

ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯನ್ನೊಳಗೊಂಡಂತೆ ರಾಯಬಾಗ ಪರಿಸರದಲ್ಲಿ ಆಚರಣೆಯಲ್ಲಿರುವ ಹಾಲುಮತ ಸಮುದಾಯದ ಇನ್ನೊಂದು ಪ್ರಮುಖ ಮತ್ತು ಜನಪ್ರಿಯವಾದ ಕಲೆ ದಟ್ಟಿಕುಣಿತ. ಇದು ಈ ಜಿಲ್ಲೆಯ ವಿಶಿಷ್ಟ ಜನಪದ ಕಲೆ. ದಟ್ಟಿ ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. ಸೊಂಟಕ್ಕೆ ಸುತ್ತಿಕೊಳ್ಳುವ ಅಥವಾ ಕಟ್ಟಿಕೊಳ್ಳುವ ವಸ್ತ್ರ, ನಡುಪಟ್ಟಿ, ಅನೇಕ ಮಡಿಕೆಗಳಿರುವಂತೆ ಬಟ್ಟೆಯನ್ನು ಸೇರಿಸಿ ಹೊಲಿದ ಹೊದಿಕೆ/ಕವುದಿ, ಶೌರ್ಯ, ಪರಾಕ್ರಮ ಮುಂತಾದ ಅರ್ಥಗಳಿದ್ದರು ಕೂಡ ಇಲ್ಲಿ ಮಾತ್ರ ಇದರ ಅರ್ಥ, ವಿವಿಧ ಬಣ್ಣದ ಪಟ್ಟಿಕೆಗಳಿಂದ ಅಲಂಕೃತವಾದ ಮತ್ತು ಅನೇಕ ಮಡಿಕೆಗಳಿಂದ ತಯಾರಿಸಿದ ನಡುಪಟ್ಟಿಯಾಗಿದೆ. ಇನ್ನೊಂದು ಅರ್ಥದಲ್ಲಿ ದಟ್ಟಿ ಎಂದರೆ ಪಾರ್ವತಿ ಉಡುಪು. ಹೀಗಾಗಿ ಪಾರ್ವತಿಯ ರೂಪದಲ್ಲಿ ದಟ್ಟಿ ಕಟ್ಟಿ ಕುಣಿಯುತ್ತಾರೆ.

ದಟ್ಟಿ ಕುಣಿತಕ್ಕೆ ಮೌಖಿಕ ಪರಂಪರೆಯಲ್ಲಿ ಕಥೆಯಿದೆ. ದೇವಿ ಪುರಾಣದಲ್ಲಿ, ದೇವಿ (ಪಾರ್ವತಿ) ಆದಿಶಕ್ತಿಯ ಅವತಾರವನ್ನು ತಾಳಿ ರಾಕ್ಷಸರನ್ನು ಸಂಹಾರ ಮಾಡಿದಳು. ದೇವಿ ರಾಕ್ಷಸರನ್ನು ಸಂಹರಿಸಿದ ತರುವಾಯವೂ ವೀರಾವೇಶ ತೊಟ್ಟು ಕುಣಿದಾಡತೊಡಗಿದಳು. ಮತ್ತೆ ರಾಕ್ಷಸರ ಸಂಹಾರಕ್ಕೆ ಹುಡುಲಾರಂಭಿಸಿದಳು, ಆಗ ಆಕೆಯನ್ನು ಶಾಂತಗೊಳಿಸುವುದಕ್ಕಾಗಿ ಭಕ್ತರು ಆಕೆಯಂತೆಯೇ ವೇಷ ತೊಟ್ಟು ಕುಣಿದರು. ಅವರ ಕುಣಿತ ಕಂಡು ದೇವಿ ಉಗ್ರರೂಪ ಬಿಟ್ಟು ಶಾಂತರೂಪ ತಾಳಿದಳು. ಈ ಹಿನ್ನೆಲೆಯಲ್ಲಿ ದಟ್ಟಿಕುಣಿತ ಕಲೆ ಪರಂಪರಾಗತವಾಗಿ ಆಚರಣೆಯಲ್ಲಿರುವುದು ಕಂಡು ಬರುತ್ತದೆ.

ದಟ್ಟಿ ಕುಣಿತ ಡೊಳ್ಳು ಕುಣಿತದ ಒಂದು ವಿಶೇಷ ಪ್ರಕಾರವಾಗಿದೆ. ಇಲ್ಲಿ ಕಲಾವಿದರು, ಬಣ್ಣ-ಬಣ್ಣದ ವಿಶೇಷ ಪೋಷಾಕು ಧರಿಸಿ, ಎರಡು ಕೈಯಲ್ಲಿ ಕರವಸ್ತ್ರದಂತಿರುವ ಕೆಂಪು ಬಟ್ಟೆಯನ್ನು ಹಿಡಿದುಕೊಳ್ಳುವರು. ವಸ್ತ್ರಗಳನ್ನು ತಂಡದ ಹಿರಿಯ ಕುಣಿಯುವವರಿಗೆ ಕೊಟ್ಟು ಪ್ರತಿಯೊಬ್ಬರ ಹಣೆಗೆ ಭಂಡಾರ ಹಚ್ಚುತ್ತಾನೆ. ಕಲಾವಿದರು ಹಿರಿಯನಿಗೆ ವಂದಿಸುವರು. ಕೈಪಟ್ಟು, ತಾಳ, ಸನಾದಿ, ಕೊಳಲು

ವಾದಕರಿಗೆ ಕುಣಿತದವರಂತೆ ವೇಷಭೂಷಣವಿದ್ದು, ಕರವಸ್ತ್ರ ಮಾತ್ರ ಇರುವುದಿಲ್ಲ. ಪ್ರದರ್ಶನಕ್ಕೆ ಹೊರಡುವ ಮೊದಲು ಒಂದು ಸಲ ಆದಿಗತ್ತನ್ನು ಬಾರಿಸುವರು. ಆ ನಂತರದಲ್ಲಿ ಕೈಪಟ್ಟು ಹಾಗೂ ತಾಳಗಳ ಲೆಕ್ಕಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ಕುಣಿಯುವರು. ದಟ್ಟಿ ಕುಣಿತದಲ್ಲಿ ಹೆಜ್ಜೆಗಳ ಲೆಕ್ಕ ಬಹುಮುಖ್ಯ.

ದಟ್ಟಿ ಕುಣಿತವನ್ನು ಕಲಿಯಲು ಇಚ್ಚಿಸುವ ಯುವಕ ಮೊದಲು ತನ್ನ ಅಭಿಪ್ರಾಯವನ್ನು ಮನೆಯವರಿಗೆ ಹೇಳಿ, ಆನಂತರ ಅವರ ಮೂಲಕ ಊರ ಹಿರಿಯರಿಗೆ ತಿಳಿಸಬೇಕು. ಶನಿವಾರವನ್ನು ಹೊರತು ಪಡಿಸಿ ಉಳಿದ ದಿನಗಳಲ್ಲಿ ಅವನು ಒಂದು ಟೆಂಗಿನಕಾಯಿ, ಐದು ಕಾರಿಕ ಅಥವಾ ಉತ್ತತ್ತಿ, ಭಂಡಾರದೊಂದಿಗೆ ದೇವಸ್ಥಾನಕ್ಕೆ ಬರಬೇಕು. ಆಗ ಊರ ಹಿರಿಯರು ಯುವಕನನ್ನು ದೇವಸ್ಥಾನದ ಪೂಜಾರಿಗೆ/ಹಿರಿಯರಿಗೆ ಮತ್ತು ದಟ್ಟಿ ಕುಣಿತದ ಕಲಾ ಗುಂಪಿಗೆ ಪರಿಚಯಿಸುವರು. ಟೆಂಗಿನಕಾಯಿ ಒಡೆದು, ಕೊಬ್ಬರಿ ಕಾರಿಕ ಹಂಚಿ ದೇವರಿಗೆ ನಮಸ್ಕರಿಸಿ ಗುರುವಿಗೆ ಒಂದಿಸುವ ಮೂಲಕ ಆತನ ಕಲಿಕೆ ಪ್ರಕ್ರಿಯೆ ಆರಂಭವಾಗುತ್ತದೆ. ಅಂದು ಆತ ಐದು ಹೆಜ್ಜೆ, ತಾಳಿನೊಂದಿಗೆ ಕುಣಿಯುವ ಮೂಲಕ ತನ್ನ ಕಲಿಕೆಯನ್ನು ಆರಂಭಿಸಿ, ಸುಮಾರು ೪-೫ ತಿಂಗಳುಗಳ ಸಾಧನೆಯ ಮೂಲಕ ಪರಿಣಿತಿಯನ್ನು ಸಾಧಿಸಿದಾಗ ಕುಣಿತದ ಗುಂಪಿಗೆ ಸೇರ್ಪಡೆಯಾಗುತ್ತಾನೆ.

ದಟ್ಟಿ ಕುಣಿತದಲ್ಲಿ ೮ ರಿಂದ ೨೦ ಜನರವರೆಗೆ ಸಮಸಂಖ್ಯೆಯ ಕಲಾವಿದರಿರುತ್ತಾರೆ. ಡೊಳ್ಳಿನ ಕೈಪಟ್ಟು, ತಾಳ, ಗುಮಿಕೆಗಳೊಂದಿಗೆ ಶ್ರುತಿ, ಸನಾದಿಗಳು ಇರುತ್ತವೆ. "ಹಿಮ್ಮೇಳ ನುಡಿಸುತ್ತಿದ್ದಂತೆ ಕುಣಿತ ಆರಂಭವಾಗುತ್ತದೆ. ೪-೫ ಜನ ಕಲಾವಿದರಿದ್ದಾಗ ಕೈಯಳತೆಯ ಅಂತರದಲ್ಲಿ ಸಾಲಾಗಿ ನಿಂತು ಕುಣಿಯುವರಾದರೆ, ಹೆಚ್ಚಿನ ಸಂಖ್ಯೆಯಲ್ಲಿ ಕಲಾವಿದರಿದ್ದಾಗ ಎದುರು ಸಾಲು ರಚಿಸಿಕೊಳ್ಳುತ್ತಾರೆ. ಎಡಕ್ಕೆ ಎರಡು ಹೆಜ್ಜೆ, ಬಲಕ್ಕೆ ಎರಡು ಹೆಜ್ಜೆ, ಮುಂದಕ್ಕೆ ಮೂರು ಹೆಜ್ಜೆ ಹಾಗೂ ಜಿಗಿತಗಳು ಮತ್ತು ಸಾಲುಕಟ್ಟಿ ಕುಣಿತ, ಅಡ್ಡಕುಣಿತ, ದುಂಡುಕುಣಿತ ಮೊದಲಾದ ಕುಣಿತ ವೈವಿಧ್ಯಗಳನ್ನು ತೋರ್ಪಡಿಸುತ್ತಾರೆ. ದಟ್ಟಿಕುಣಿತ ಜಿಗಿತದಲ್ಲಿ ಅಂತರ ಜಿಗಿತ, ಖಡ್ಗದ ಮೇಲೆ ಜಿಗಿತ, ಬಂಡಿಗಾಲಿನ ಜಿಗಿತ ಮುಂತಾದ ಜಿಗಿತಗಳು ವೈವಿಧ್ಯಮಯ. ಹತ್ತು-ಹನ್ನೆರಡು ಜನರನ್ನು ಮಲಗಿಸಿ ಮಧ್ಯದಲ್ಲಿ ಲಾಗ ಹಾಕುವ ಕಸರತ್ತು ನೋಡುವಂತದ್ದು. ಹಿಂಗಾಣಿ ಮುಂಗಾಣಿ ಲಾಗಹಾಕುವರು."[೧೧]

ಈ ಪರಿಸರದಲ್ಲಿನ ದಟ್ಟಿ ಕುಣಿತ ಹೆಚ್ಚು ಆಕರ್ಷಣೀಯ. "ದಟ್ಟಿ ಕುಣಿತದಲ್ಲಿ ತಲೆಯ ಮೇಲೆ ಸಮೆ (ಉದ್ದವಾದ ದೀಪ) ಹೊತ್ತು ಕೆಲವು ತಂಡದವರು ಸಾಲಾಗಿ ನರ್ತಿಸುತ್ತಾರೆ. ಆದಿಗತ್ತು, ಬಯಲುಗತ್ತುಗಳಲ್ಲಿ ಈ ನರ್ತನ ನಡೆಯುತ್ತದೆ. ಈಗ ಇಪ್ಪತ್ತು ವರ್ಷಗಳಲ್ಲಿ ಈ ದೀಪ ನೃತ್ಯವು ದಟ್ಟಿ ನೃತ್ಯದಷ್ಟೇ ಆಕರ್ಷಕ ಕಲೆಯಾಗಿ ಬೆಳೆಯುತ್ತಿದೆ. ಒಟ್ಟಾರೆ ಮುಂಬರುವ ದಿನಗಳಲ್ಲಿ ಈ ದಟ್ಟಿ ಕುಣಿತ ಪ್ರಸಿದ್ಧ ಜನಪದ ಕಲೆಯಾಗಿ ಮುಂದುವರೆಯುವ ಭರವಸೆಯುಂಟು. ದೀಪನೃತ್ಯವು ದಟ್ಟಿನೃತ್ಯದ ಒಂದಂಗವಾಗಿರುವುದು ಖಚಿತವಾಗಿದೆ. ದಟ್ಟಿ ಕುಣಿತದ ಮುಕ್ತಾಯ ಅಥವಾ ಮಂಗಲದ ವೇಳೆಯಲ್ಲಿ ದಟ್ಟಿ ವೇಷ-ಭೂಷಣಗಳಿದ್ದು ಬರಿದಲೆಯ ಮೇಲೆ ಉರಿಯುತ್ತಿರುವ ಸಮೆಯನ್ನು ಇಟ್ಟುಕೊಂಡು ಕುಣಿತ ಮಾಡುತ್ತಾರೆ."[೧೨] ಆರಂಭದಲ್ಲಿ ದಟ್ಟಿ ಕುಣಿತವನ್ನು ಮಳೆ ಕರೆಯಿಸುವ ಕುಣಿತ(ಆಟ)ವೆಂದು ಪರಿಗಣಿಸಲಾಗಿತ್ತು. ಆದರೆ ಈಗ ದೇವತೆಗಳ ಜಾತ್ರೆ, ಉತ್ಸವ, ಹಬ್ಬ-ಹರಿದಿನ, ಪೂಜಾ ಸಮಾರಂಭ,

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ದಟ್ಟಿ ಕುಣಿತವನ್ನು ಪ್ರದರ್ಶಿಸಲಾಗುತ್ತಿದೆ.' ಇತ್ತೀಚಿಗೆ ಶಾಲೆ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ವಿವಿಧ ಪೋಷಾಕುಗಳನ್ನು ತೊಟ್ಟು ಸಮೂಹ ನೃತ್ಯ ಮಾಡುತ್ತಿದ್ದು, ಇದು ದಟ್ಟಿ ಕುಣಿತವನ್ನು ನೆನಪಿಸುವಂತಿದೆ.

ಅಲಕನೂರಿನ ಶ್ರೀ ಕರೇಸಿದ್ಧೇಶ್ವರ ದಟ್ಟಿ ಕುಣಿತ ಸಂಘ, ನಿಲಜಯ ಶ್ರೀ ವಿಠ್ಠಲಬೀರದೇವ ದಟ್ಟಿ ಕುಣಿತ ಸಂಘ, ಯಲ್ಪಾರಟ್ಟಿಯ ಶ್ರೀ ಅಮೋಘಸಿದ್ಧೇಶ್ವರ ದಟ್ಟಿ ಕುಣಿತ ಸಂಘ, ಹಾರೂಗೇರಿಯ ಶ್ರೀ ಕರೇಶಿದ್ಧೇಶ್ವರ ದಟ್ಟಿ ಕುಣಿತ ಸಂಘಗಳು ಸದ್ಯ ಈ ಪರಿಸರದಲ್ಲಿರುವ ಪ್ರಮುಖ ದಟ್ಟಿ ಕುಣಿತದ ಸಂಘಗಳಾಗಿವೆ.

೪.೧.೪ ಕೈ ಪಟ್ಟು ವಾದನ :

ಇದು ಕೇವಲ ವಾದ್ಯಗಳ ಮೇಳವಾಗಿದೆ. ಈ ಕಲೆಯನ್ನು ಪ್ರದರ್ಶಿಸುವಾಗ ದಿಮ್ಮ (ಸಣ್ಣ ಡೊಳ್ಳು) ಪ್ರಮುಖ ವಾದ್ಯ. ತರಬೇತಿ ಹೊಂದಿದ ನುರಿತ ಡೊಳ್ಳುವಾದಕನೊಬ್ಬ ತಾ ಗಿಡ ಗಿಡ ತಾ, ತಾ ಗಿಡ ಗಿಡ ತಾ ಎಂದು ದಿಮ್ಮನ್ನು ಲಯಬದ್ಧವಾಗಿ ನುಡಿಸುತ್ತಾನೆ. ದಿಮ್ಮಿನ ಗತ್ತಿನೊಂದಿಗೆ ಇತರ ವಾದ್ಯಕಾರರು ನುಡಿಸುವರು. ಸುತಿ-ಸನಾದಿಗಳನ್ನು ನುಡಿಸುವರು.

ಡೊಳ್ಳು ಬಾರಿಸುತ್ತಾ ಮೇಳದೊಂದಿಗೆ ಹಾಡುವುದು ಡೊಳ್ಳಿನ ಹಾಡು. ಆದರೆ ಹಾಡು ಹಾಡದೇ ಶಹನಾಯಿಯೊಂದಿಗೆ ಡೊಳ್ಳು, ದಿಮ್ಮ, ತಾಳ, ಹಲಗೆಗಳನ್ನು ಬಾರಿಸುವುದು ಡೊಳ್ಳಿನ ಕೈಪಟ್ಟು, ಇಲ್ಲಿ ಹಾಡು ಇರುವುದಿಲ್ಲ. ಅದು ಕೇವಲ ವಾದ್ಯಮೇಳ. ಈ ವಾದ್ಯಗಳನ್ನು ಓಲಗದ ರೂಪದಲ್ಲಿಯೇ ನುಡಿಸುವರು. ಇಲ್ಲಿಯೂ ಡೊಳ್ಳು ಮುಖ್ಯ ವಾದ್ಯ. ಆದರೆ ತಾಳಕ್ಕೆ ತಕ್ಕಂತೆ ಎಲ್ಲ ವಾದ್ಯಗಳು ನುಡಿಯುತ್ತವೆ.

ಅಲಕನೂರಿನ ಶ್ರೀ ಕರೇಸಿದ್ಧೇಶ್ವರ ಕೈಪಟ್ಟು ಬಾರಿಸುವ ಸಂಘ, ಹಾರೂಗೇರಿಯ ಶ್ರೀ ಕರೇಸಿದ್ಧೇಶ್ವರ ಕೈಪಟ್ಟು ಬಾರಿಸುವ ಸಂಘ, ಕಂಕಣವಾಡಿಯ ಹಾಲಸಿದ್ಧೇಶ್ವರ ಕೈಪಟ್ಟು ಬಾರಿಸುವ ಸಂಘ, ಹಂದಿಗುಂದದ ಶ್ರೀ ಹಾಲಸಿದ್ಧೇಶ್ವರ ಕೈಪಟ್ಟು ಬಾರಿಸುವ ಸಂಘಗಳು ಈ ಪರಿಸರದ ಪ್ರಮುಖ ಕೈಪಟ್ಟು ಬಾರಿಸುವ ಸಂಘಗಳಾಗಿವೆ.

೪.೧.೫ ಅಲಗ ಹಾಯುವುದು :

ಜನಪದರು ಆಚರಿಸಿಕೊಂಡು ಬಂದ ವಿಶಿಷ್ಟವಾದ ಆರಾಧನಾ ಕಲೆಗಳಲ್ಲಿ ಅಲಗ ಹಾಯುವ ಕಲೆಯು ಒಂದು. ಈ ರೀತಿಯ ಆರಾಧನೆ ಕಲೆಯು ಕೇವಲ ಹಾಲುಮತ ಸಮುದಾಯಗಳ ದೇವತೆಗಳಿಗೆ ಮಾತ್ರ ಸೀಮಿತವಾಗಿರುವು ಇನ್ನೊಂದು ವಿಶೇಷ. ಕಾರ ಹುಣ್ಣಿಮೆ, ದೀಪಾವಳಿ, ಮಹಾನವಮಿ ಹಾಗೂ ಕಿಲ-ಕಟ್ಟ ಜಾತ್ರೆಗಳಂದು ಮಾಯಕ್ಕಾ ದೇವಿಯ ಪಲ್ಲಕ್ಕಿ ಮುಂದೆ ಈರಗಾರರು ಅಲಗನ್ನು ಹಾಯುತ್ತಾರೆ. ಅಲಕನೂರಿನ ಕರೇಸಿದ್ಧೇಶ್ವರ, ಕಂಕಣವಾಡಿ ಹಾಲಸಿದ್ಧೇಶ್ವರ, ಹಿಡಕಲ್ಲದ ಹಾಲಸಿದ್ಧೇಶ್ವರ ಮತ್ತು ಬೀರಪ್ಪನ ಜಾತ್ರೆಗಳಲ್ಲಿ ಆರಾಧನೆಯ ಅಂಗವಾಗಿ ಜಾತ್ರೆಯ ಸಂದರ್ಭದಲ್ಲಿ ಅಲಗ ಹಾಯುವುದು ಸಂಪ್ರದಾಯ.

ಮದುವೆಯಾದ ಈರಗಾರರು ಮತ್ತು ಪೂಜಾರಿಗಳು ಮಾತ್ರ ಅಲಗ ಹಾಯಬೇಕೆಂಬ ನಿಯಮವಿದೆ. ಇಂಥ ಸೇವೆಯನ್ನು ಮಾಡುವವರು ಕಟ್ಟುನಿಟ್ಟಿನ ವಿಧಿ-ವಿಧಾನಗಳನ್ನು ಪಾಲಿಸಬೇಕಾಗುತ್ತದೆ.

ಅಲಗ ಹಾಯುವವರು ವಾಲಗದ ಡೊಳ್ಳಿನ ವಿಶೇಷ ಗತ್ತಿಗೆ ಹೆಜ್ಜೆ ಹಾಕುತ್ತ ಹರಿತವಾದ ಖಡ್ಗವನ್ನು ಕೈಯಲ್ಲಿ ಹಿಡಿದು ಅದನ್ನ ನೆಲಕ್ಕೆ ಹಚ್ಚಿ ಭೂತಾಯಿಗೆ ನಮಿಸುವರು. ನಂತರ ಖಡ್ಗ ಎತ್ತಿ ನಾಲ್ಕು ದಿಕ್ಕುಗಳಲ್ಲಿರುವ ದೇವತೆಗಳಿಗೆ ನಮಿಸುವರು. ಅಲಗ ಹಾಯುವವರು ಡೊಳ್ಳಿನ ತೀವ್ರತೆಗೆ ತಕ್ಕಂತೆ ಕುಣಿದಾಡುತ್ತ, ಕೂಗಾಡುತ್ತ, ವೀರಾವೇಷದಿಂದ ಆಕಡೆ–ಈಕಡೆ ನೆಗೆಯುತ್ತಾ ಹರಿತವಾದ ಖಡ್ಗದಿಂದ ಹೊಟ್ಟೆಗೆ ಈರಿದುಕೊಳ್ಳುವ ಆ ದೃಶ್ಯ ಭಯಾನಕವಾಗಿರುತ್ತದೆ. "ಈರಗಾರರು ಕೆಂಪು ತುಂಡು ಬಟ್ಟೆಯನ್ನು ಧರಿಸಿ ಶಿವನನ್ನು ಒಲಿಸಿಕೊಳ್ಳುವುದಕ್ಕೆ ಹೊಟ್ಟೆಗೆ ಅಲಗು ಹಾಕಿಕೊಳ್ಳುವ ಆಚರಣೆಯನ್ನು ಮಾಡುತ್ತಾರೆ. ಈ ಆಚರಣೆ ಬೀರದೇವರ ತೋಪುಜಾತ್ರೆಗಳಲ್ಲಿ ಮತ್ತು ಬೀರದೇವರ ಪಲ್ಲಕ್ಕಿ ಉತ್ಸವಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಆಚರಣೆ ಶಿವನನ್ನು ತಮ್ಮತ್ತಿರ ಕರೆದುಕೊಳ್ಳುವ ವೈಧಾನಿಕತೆಗಾಗಿ ಈ ಸಮುದಾಯದಲ್ಲಿ ಬಳಕೆಯಲ್ಲಿದೆ."[೧೬] ಕೆಲವು ಸಲ ಅಲಗ ಹಾಯುವ ವ್ಯಕ್ತಿಗಳು ವೀರಾವೇಶದಲ್ಲಿ ನುಡಿ (ಹೇಳಿಕೆ)ಗಳನ್ನು ಹೇಳುತ್ತಾರೆ. ಅವರ ನುಡಿಗಳು ಮೇಲೆ ಭಕ್ತರಿಗೆ ಅಪಾರವಾದ ನಂಬಿಕೆ.

ಎಲ್ಲ ಗಾಯಗಳಿಗೆ ಭಂಡಾರ ದಿವ್ಯೌಷದ ಎಂಬುದನ್ನು ಮೊದಲು ಕಂಡು ಹಿಡಿದವರು ಹಾಲುಮತದವರು. ಪ್ರಜ್ಞಾವಂತರು ಇದನ್ನು ಜನ ಸಾಮಾನ್ಯರಿಗೆ ತಿಳಿಸುವುದಕ್ಕಾಗಿ ದೇವತೆಗಳ ಜಾತ್ರೆಯ ಸಂದರ್ಭದಲ್ಲಿ ಅಲಗ ಹಾಯುವ ಪ್ರಾತ್ಯಕ್ಷಿಕೆಯನ್ನು ಯೋಜಿಸಿದರು. ಉತ್ಸವ ಜಾತ್ರೆಗಳ ಸಂದರ್ಭದಲ್ಲಿ ನೇರದ ಜನರ ಮುಂದೆ ವೀರರು ಅಥವಾ ಈರಗಾರರು ಕತ್ತಿಯನ್ನು ತಮ್ಮ ಹೊಟ್ಟೆಗೆ ಹೊಡೆದುಕೊಳ್ಳುವರು. ಮಾನವ ದೇಹದ ಪ್ರಮುಖ ಅಂಗವಾದ ಹೊಟ್ಟೆಗೆ ಆಗುವ ಘಾಯವನ್ನು ವಾಸಿಗೊಳಿಸುವುದಕ್ಕಾಗಿ ಔಷಧಿಯ ಗುಣದ ಭಂಡಾರವನ್ನು ಅದಕ್ಕೆ ಎರಚುವರು ಮತ್ತು ಲೇಪಿಸುವರು. ಹೀಗೆ ಪ್ರಾತ್ಯಕ್ಷಿಕೆಯ ಮೂಲಕ ಎಂತಹ ಘಾಯವನ್ನು ವಾಸಿಮಾಡುತ್ತದೆ ಎಂಬುದನ್ನು ತೋರ್ಪಡಿಸಲು ಈ ಅಲಗ ಹಾಯುವ ಪದ್ಧತಿ ಆಚರಣೆಯಲ್ಲಿ ಬಂದಿರಬೇಕು. ಇದಲ್ಲದೆ ಇನ್ನೂ ಅನೇಕ ಪದ್ಧತಿಗಳು ಹಾಲುಮತ ಸಮುದಾಯದಲ್ಲಿ ಅಸ್ತಿತ್ವದಲ್ಲಿದ್ದು ಅವುಗಳನ್ನು ವೈಜ್ಞಾನಿಕವಾಗಿ ಅಧ್ಯಯನಿಸಿ ವಿಶ್ಲೇಷಣೆಗೆ ಒಳಪಡಿಸಿದಾಗ ಮಾತ್ರ ಅವುಗಳ ಆಚರಣೆಯ ಹಿಂದಿರುವ ವೈಜ್ಞಾನಿಕ ಸತ್ಯಗಳನ್ನು ಬೆಳಕಿಗೆ ತರಬಹುದು. ಈ ನಿಟ್ಟಿನಲ್ಲಿ ಇನ್ನೂ ಅಧ್ಯಯನಗಳಾಗಬೇಕಾದದ್ದು ಅವಶ್ಯಕ.

ಅಲಕನೂರಿನ ಮಾಯಪ್ಪ ಶಿವಪ್ಪ ಪೂಜೇರಿ, ಸದಾಶಿವ ಶಿವಪ್ಪ ಪೂಜೇರಿ, ಹಾರೂಗೇರಿಯ ಕರೆಪ್ಪ ಶಿವರಾಯಿ ಪೂಜೇರಿ, ಕುಡಚಿಯ ಸುಭಾಶ ಲಕ್ಷ್ಮಣ ವಂಟಮೂರೆ, ಶಿರಗೂರದ ಮಲ್ಲಪ್ಪ ಬಾಳಪ್ಪ ಪೂಜೇರಿ, ಬೀರಪ್ಪ ಪೂಜೇರಿ, ಬ್ಯಾಕೂಡದ ಲಕ್ಷ್ಮಣ ಯಲ್ಲಪ್ಪ ಪೂಜೇರಿ, ಯಮನಪ್ಪ ಹಾಲಪ್ಪ ಬರಡಗಿ ಮುಂತಾದವರು ಈ ಪರಿಸರದ ಅಲಗ ಹಾಯುವವರಾಗಿದ್ದು ಹಾಲುಮತ ದೈವಗಳ ಜಾತ್ರೆಗಳಲ್ಲಿ ಸದ್ಯ ಅಲಗ ಹಾಯುವರು.

೪.೨ ಆಚರಣೆಗಳು

೪.೨.೧ ಸಾಮಾಜಿಕ ಆಚರಣೆಗಳು :

೪.೨.೧.೧ ವಿವಾಹ :

ಹಾಲುಮತ ಸಮುದಾಯದಲ್ಲಿ ಜರಗುವ ಮದುವೆಗಳು ವಿಶೇಷವಾಗಿರುತ್ತವೆ. ಹಾಲುಮತದಲ್ಲಿ ಪ್ರಮುಖವಾಗಿ ಎರಡು ಕಂಕಣಗಳು ಒಂದು ಹತ್ತಿ ಕಂಕಣ, ಇನ್ನೊಂದು ಉಣ್ಣೆ ಕಂಕಣ. ಹತ್ತಿ ಕಂಕಣದವರು ಉಚ್ಚ ವರ್ಗದವರೆಂದು, ಉಣ್ಣೆ ಕಂಕಣದವರು ತಮಗಿಂತಲೂ ಹಿಂದುಳಿದವರೆಂಬ ಭಾವನೆ ಬೆಳೆದು ಕೊಂಡಿದೆ. ಎರಡು ಕಂಕಣದವರಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಹೀಗಾಗಿ ವಧು-ವರರು ಒಂದೇ ಕಂಕಣದವರಾಗಿರಬೇಕು. ಆದರೆ ಇತ್ತೀಚಿಗೆ ಈ ಭೇದಗಳು ಕಾಣಿಸದೆ ಅವರಿಬ್ಬರ ಮಧ್ಯೆ ಮದುವೆಗಳು ನಡೆಯುತ್ತಿವೆ. ವಧು-ವರರಲ್ಲಿ ಬೆಡಗುಗಳು ಬೇರೆ-ಬೇರೆಯಾಗಿರಬೇಕು. ಅವರು ಒಂದೇ ಬೆಡಗಿಗೆ ಸೇರಿದವರಾಗಿರಬಾರದು. ಒಂದೇ ಬೆಡಗಿನವರು ಅಣ್ಣ-ತಮ್ಮಂದಿರಾಗುತ್ತಾರೆ. ಹೀಗಾಗಿ ಅವರಲ್ಲಿ ಮದುವೆ ನಿಷಿದ್ಧ. ಮದುಮಕ್ಕಳ ಆರತಕ್ಷತೆಗಳು ದೇವರ ಸತ್ತಿಗೆ ನೆರಳಲ್ಲಿಯೇ ನಡೆಯಬೇಕು. ಅಂದರೆ ಮದುವೆಯ ಒಂದು ದಿನ ಮುಂಚೆ ದೇವತೆಯ ಶಿವಸ್ಥಾನ ಮದುವೆ ಮನೆಗೆ ಬರುವುದು ವಾಡಿಕೆ. ಅಂದು ರಾತ್ರಿ ದೇವಕಾರ್ಯ ನೇರವೆರುವುದು. ರಾತ್ರಿಯೆಲ್ಲ ಡೊಳ್ಳಿನ ಮೇಳದವರು ಹಾಡಿಕೆ ಮಾಡುವರು.

ಅಂದು ಮದುವೆಗಳು ಸಾಮಾನ್ಯವಾಗಿ ಮೂರು ದಿನಗಳವರೆಗೆ ನಡೆಯುತ್ತಿದ್ದವು. ಮದುವೆಯಲ್ಲಿ ಗುಗ್ಗಳ, ಹೊಂಗಾಡ, ಗೊಂದಲ ಆಚರಿಸುವುದು ಸಾಮಾನ್ಯವಾಗಿದ್ದು ದುಂದುವೆಚ್ಚದಿಂದ ಕೂಡಿದ್ದವು. ಕೆಲಸದ ಒತ್ತಡದಿಂದಾಗಿ ಮದುವೆಗಳು ನಂತರದಲ್ಲಿ ಒಂದು ದಿನಕ್ಕೆ ಸೀಮಿತಗೊಂಡಾಗ ಆಚರಣೆ-ಸಂಪ್ರದಾಯಗಳು ಮಾಯವಾದವು, ಆದರೆ ದುಂದುವೆಚ್ಚಕ್ಕೆ ಕಡಿವಾಣ ಬೀಳುತ್ತಿಲ್ಲ. ದುಂದುವೆಚ್ಚದ ಮದುವೆಗಳು ಪ್ರತಿಷ್ಠೆಯ ಸಂಕೇತಗಳಾಗಿವೆ. ಇತ್ತೀಚಿಗೆ 'ಯಾದಿಮೆ ಶ್ಯಾದಿ'ಗಳು ಪ್ರಾಮುಖ್ಯತೆಯನ್ನು ಪಡೆದು ಕೊಳ್ಳುತ್ತಿವೆ. ಸುಶಿಕ್ಷಿತರು ಸರಳ ಮದುವೆಯತ್ತ ಚಿತ್ತ ಹರಿಸಿ 'ನೊಂದಣಿ ಮದುವೆ' (ರಜಿಸ್ಟರ ಮ್ಯಾರೇಜ) ಮಾಡಿಕೊಳ್ಳುವುದರ ಮೂಲಕ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ.

ಸುಮಾರು ಮೂವತ್ತು-ನಲವತ್ತು ವರ್ಷಗಳ ಹಿಂದೆ ಈ ಸಮುದಾಯದಲ್ಲಿ ಬಾಲ್ಯ ವಿವಾಹಗಳು ಸಾಮಾನ್ಯವಾಗಿದ್ದವು. ಕೆಲವು ಸಲ ತೊಟ್ಟಿಲಕ್ಕೆ ಬಾಸಿಂಗ ಕಟ್ಟಿ ಮದುವೆ ಮಾಡಿದ ಉದಾಹರಣೆಗಳನ್ನು ಮರೆಯುವಂತಿಲ್ಲ. ಆದರೆ ಇತ್ತೀಚಿಗೆ ಅವುಗಳ ಪ್ರಮಾಣ ಇಳಿಮುಖಗೊಂಡಿದೆ. ವರದಕ್ಷಿಣೆಯ ಪೀಡಗು ಇನ್ನೂ ಮಾಯವಾಗಿಲ್ಲ. ತನ್ನ ಛಾಯೆಯನ್ನು ದಟ್ಟವಾಗಿಸಿಕೊಂಡು ಅಸ್ತಿತ್ವದಲ್ಲಿದೆ.

೪.೨.೧.೨ ಗೋತ್ರಗಳು ಮತ್ತು ಬೆಡಗುಗಳು :

ಗೋತ್ರಗಳು : ಕಾಡು ಮಾನವನು ಪಶುಪಾಲನೆಯ ಅವಸ್ಥೆಯಲ್ಲಿದ್ದಾಗ ಗುಂಪು-ಗುಂಪಾಗಿ ವಾಸಿಸುತ್ತಿದ್ದ. ಈ ಅವಸ್ಥೆಯಲ್ಲಿದ್ದ ಅವರ ಒಂದೊಂದು ಗುಂಪನ್ನು ಗುರುತಿಸಲು ಒಂದು ಹೆಸರಿನ ಅನಿವಾರ್ಯತೆ ಉಂಟಾಗಿ ಒಂದು ಗುಂಪಿನ ಯಜಮಾನನ ಹೆಸರು ಗೋತ್ರದ ಸಂಕೇತವಾಯಿತು. ನಂತರದಲ್ಲಿ "ದನ-ಕುರಿಗಳ ದೊಡ್ಡಿಗಳು ಯಾರ ಒಡೆತನದಲ್ಲಿವೆ ಎಂಬುದನ್ನು ಗುರುತಿಸಲು ಗೋತ್ರ

(ಗೋ+ತ್ರಯ (ಬೇಲಿ)ಗಳ ಜನ್ಮಕ್ಕೆ ಕಾರಣವಾಯಿತು. ಇವುಗಳನ್ನೇ ಕುಲ, ಗೋತ್ರ, ವಂಶ, ಪಂಗಡ, ಗುಂಪು ಹಾಗೂ ಬೆಡಗುಗಳ ರೂಪದಲ್ಲಿ ಇಂದು ನಮ್ಮನಿಮ್ಮಗಳ ಮುಂದೆ ಇವೆ. ಆಯಾ ಜಾತಿಯ ಕುಲ-ಗೋತ್ರ-ವಂಶ-ಬೆಡಗುಗಳ ಸಂಖ್ಯೆಗಳನ್ನು ಅನುಸರಿಸಿ ಆಯಾ ಜಾತಿಗಳ ಪ್ರಾಚೀನತೆ ಕಂಡು ಹಿಡಿಯಲು ಅಳತೆಗೋಲಾಗಿದೆ. ಯಾವ ಜಾತಿಯಲ್ಲಿ ಕುಲ, ಗೋತ್ರ, ವಂಶ, ಬೆಡಗುಗಳಿಲ್ಲವೋ ಅಂಥ ಜಾತಿಯ ಹಿನ್ನೆಲೆಯನ್ನು ಅಭ್ಯಸಿಸುವುದರಿಂದ ಯಾವುದೇ ಫಲಸಿಗಲಾರದೆಂದು ಕೆಲವು ವಿದ್ವಾಂಸರ ಅಭಿಪ್ರಾಯ."[೧೪]

'ಗೋತ್ರ' ಎಂಬ ಪದ ದನಕರುಗಳ ಮಂದೆ, ಗೋಸಮೂಹ, ಕುಲ, ವಂಶ, ನಾಮಧೇಯ ಮುಂತಾದ ಅರ್ಥವನ್ನು ಕೊಡುತ್ತದೆ. ಇದಲ್ಲದೆ 'ಗೋತ್ರ'ವೆಂಬ ಶಬ್ದದಲ್ಲಿ 'ಗೋ' ಎಂದರೆ ಹಸು (ಆಕಳು) ಹಾಗೂ 'ತ್ರ' ಎಂದರೆ ಪಾಲಕ ಇಲ್ಲವೆ ರಕ್ಷಕ ಎಂಬೆರಡು ಪೂರಕ ಅರ್ಥಗಳಿಂದ ಕೂಡಿದ ಪದಗಳಿರುತ್ತವೆ. 'ಗೋತ್ರ'ವೆಂದರೆ ಗೋವುಗಳ ಪಾಲಕ ಎಂಬರ್ಥವನ್ನು ನೀಡುತ್ತದೆ. ಗೋತ್ರವೆಂಬ ಪದಕ್ಕೆ ಎಷ್ಟೇ ಅರ್ಥಗಳಿದ್ದರು ಕೂಡ, ಸಾಮಾನ್ಯವಾಗಿ ಪ್ರಾಚೀನ ಪುರುಷರ ಹೆಸರನ್ನು ಸೂಚಿಸುವುದೇ ಗೋತ್ರವೆಂದು ನಂಬಲಾಗಿದೆ. ಇಲ್ಲಿ ಪ್ರಾಚೀನ ಪುರುಷರೆಂದರೆ ಋಷಿಮುನಿಗಳೇ ಹೊರತು ಮತ್ತಾರಲ್ಲ. ಆದ್ದರಿಂದ ಗೋತ್ರಗಳು ಪ್ರಾಚೀನ ಋಷಿಮುನಿಗಳಿಂದ ಪ್ರಾರಂಭಗೊಂಡವೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಮಾತಿಗೆ ಪುಷ್ಟಿ ನೀಡಲು ಬ್ರಾಹ್ಮಣ ಸಮುದಾಯದ ಗೋತ್ರಗಳನ್ನು ಉದಾಹರಿಸಬಹುದು.

ಗೋತ್ರ ಹುಟ್ಟಲು ಹಲವಾರು ಕಾರಣಗಳು. ಮನುಷ್ಯ ಕಾಡು ಸ್ಥಿತಿಯಲ್ಲಿದ್ದಾಗ ನಗ್ನ ರೂಪದಲ್ಲಿದ್ದು ಗುಂಪು-ಗುಂಪಾಗಿ ವಾಸಿಸುತ್ತಿದ್ದ. ಆತನಿಗೆ ಧರ್ಮದ ಕಲ್ಪನೆ ಇರಲಿಲ್ಲ. ಹಸಿದಾಗ ಬೇಟೆಯಾಡಿ, ಖುಷಿಯಾದಾಗ ಯಾವುದೋ ಒಂದು ಹೆಣ್ಣಿನೊಂದಿಗೆ ಲೈಂಗಿಕ ತೃಪ್ತಿ ಹೊಂದುತ್ತಿದ್ದನು. ಕಾಲಕಳೆದಂತೆ ಅನಾಗರಿಕ ಜೀವನವನ್ನು ಬಿಟ್ಟು ನಾಗರಿಕ ಜೀವನವನಕ್ಕೆ ಕಾಲಿಟ್ಟು ಧರ್ಮಾಧರ್ಮದ ಕಲ್ಪನೆಯನ್ನು ಬೆಳೆಸಿಕೊಂಡನು. "ಯಾವುದೋ ಒಂದು ಹೆಣ್ಣಿನೊಂದಿಗೆ ಗಂಡು ಅಥವಾ ಯಾವುದೋ ಒಂದು ಗಂಡಿನೊಂದಿಗೆ ಹೆಣ್ಣು ಲೈಂಗಿಕ ತೃಪ್ತಿ ಹೊಂದುವುದು ಅಧರ್ಮವಾಗಿ ಕಂಡುಬಂದಿತು. ಸೋದರ ಸಂಬಂಧಿಗಳಲ್ಲಿ ಶರೀರ ಸಂಬಂಧವನ್ನು ಬೆಳೆಸುವುದು ಧರ್ಮಬಾಹಿರವಾಯಿತು. ಇಂತಹ ಪ್ರಸಂಗಗಳಲ್ಲಿ ಅನ್ಯರನ್ನು ಹುಡುಕುವುದು ಕಷ್ಟದ್ದಾಯಿತು. ಪ್ರಾಚೀನ ಮಾನವನ ಸಂತತಿಯು ಅತಿಯಾಗಿ ಬೆಳೆದದ್ದರಿಂದ ಅನ್ಯರಾರು ತನ್ನವರಾರೆಂಬುದು ತಿಳಿಯದಾಯಿತು. ಅದಕ್ಕಾಗಿ ಅವರವರ ಸಂತತಿಯನ್ನು ಅವರವರದೇ ಆದ ವಿಶಿಷ್ಟ ಚಿಹ್ನೆಯ ಕೆಳಗೆ ನಡೆಸಿಕೊಂಡು ಬರುವುದು ಅನಿವಾರ್ಯವಾಯಿತು. ಹೀಗಾಗಿ ಗೋತ್ರಗಳು ಹುಟ್ಟಿಕೊಂಡವು. ಆಮೇಲೆ ಸೋದರ ಸಂಬಂಧಿಗಳಲ್ಲಿ ಶರೀರ ಸಂಬಂಧವಾಗುವುದನ್ನು ತಡೆಯಲು ಉತ್ತಮ ಅವಕಾಶವಾಯಿತು."[೧೫] ಕುರುಬ ಸಮುದಾಯದಲ್ಲಿ ಹನ್ನೊಂದು ಜನ ಪ್ರಾಚೀನ ಪುರುಷರಿದ್ದು, ಅವರ ಹೆಸರಿನಲ್ಲಿ ಗೋತ್ರಗಳು ಅಸ್ತಿತ್ವದಲ್ಲಿವೆ. ಇವರೆಲ್ಲರೂ ಕೌರಬ ಸಂತತಿಯವರು. ಕೌರಬನನ್ನು ಆದಿಕುರುಬನೆಂದು ಗುರುತಿಸಲಾಗುತ್ತದೆ. ಸದ್ಯ ಕುರುಬರಲ್ಲಿ ಅಸ್ತಿತ್ವದಲ್ಲಿದ್ದ ಗೋತ್ರಗಳು ಹನ್ನೊಂದು. ಅವುಗಳೆಂದರೆ, ೧. ಕೌಂಡಿಲು ಗೋತ್ರ, ೨. ಪೃಥುಕ ಗೋತ್ರ, ೩. ಶೃಣಿ ಗೋತ್ರ, ೪. ಮಹಾಬಲ ಗೋತ್ರ, ೫. ಗಣಕ ಗೋತ್ರ, ೬. ವಿಭ್ರಾಜಿತ ಗೋತ್ರ, ೭. ಕುಶಲ ಗೋತ್ರ, ೮. ಪ್ರಭಾವ ಗೋತ್ರ, ೯. ಕರುಣ ಗೋತ್ರ, ೧೦. ಪ್ರಬಲ ಗೋತ್ರ ಅಥವಾ ಸುವರ್ಣ ಗೋತ್ರ, ೧೧. ವಿಭಾಗ ಗೋತ್ರ.

ಬೆಡಗುಗಳು : ಹಾಲುಮತ ಸಮುದಾಯವು ಬೆಳೆಯುತ್ತ ಹೋದಂತೆ ಕೌರಬನ ಹನ್ನೊಂದು ಗೋತ್ರಗಳು, ನಲವತ್ತು ಗೋತ್ರಗಳಾದವು. ನಂತರದಲ್ಲಿ ಅವುಗಳ ಪ್ರಮಾಣ ಇನ್ನೂ ಹೆಚ್ಚಾಗುತ್ತ ಹೋದಂತೆ ಅವುಗಳನ್ನು ಗುರುತಿಸುವುದು ಕಷ್ಟವಾಗಿ ಗೊಂದಲಗಳುಂಟಾದವು. ಒಂದೇ ವಂಶಸ್ಥರಲ್ಲಿ ಒಬ್ಬರನ್ನೊಬ್ಬರು ಗುರುತಿಸುವುದು ಕಷ್ಟವಾಯಿತು. ಆದ್ದರಿಂದ ಹೊಸ ಗೋತ್ರಗಳನ್ನು ಸೃಷ್ಟಿಸುವ ವಿಚಾರಗಳು ನಡೆದವು. ಅದಕ್ಕಾಗಿ ವೈಚಾರಿಕ ಕಮ್ಮಟಗಳೂ ಏರ್ಪಟ್ಟವು. ಈ ಎಲ್ಲ ಕಮ್ಮಟಗಳಲ್ಲಿ ಹೊಸ-ಹೊಸ ಗೋತ್ರಗಳನ್ನು ಪ್ರಾರಂಭಿಸಲು ಸಮ್ಮತಿ ಸೂಚಿಸಿ ಸರ್ವಾನುಮತದ ನಿರ್ಣಯಗಳು ಸ್ವೀಕರಿಸಲ್ಪಟ್ಟವು. ಈ ರೀತಿಯಾಗಿ ಉದಯವಾದ ವಂಶಗಳಿಗೆ ಗೋತ್ರಗಳೆಂದು ಕರೆಯದೆ ಬೆಡಗುಗಳೆಂದು ಕರೆದರು. ಬೆಡಗುಗಳೆಂದರೆ ಬೆಡಗಿನ ವಂಶಗಳೆಂದು ಅರ್ಥ. ಬೆಡಗುಗಳ ಹೆಸರುಗಳು ಜನಸಮುದಾಯದ ತೀರಾ ಸಾಮಾನ್ಯವಾದ ಪದಗಳಾಗಿವೆ. ಅವುಗಳು ಮರ, ಗಿಡ, ಪ್ರಾಣಿ ಮುಂತಾದವುಗಳ ಹೆಸರನ್ನು ಒಳಗೊಂಡಿದ್ದು ಉಚ್ಚರಿಸಲು ಯಾವುದೇ ಕ್ಲಿಷ್ಟತೆ ಕಂಡು ಬರುವುದಿಲ್ಲ.

ಒಂದು ಬೆಡಗಿನವರು, ಒಂದೇ ವಂಶಸ್ಥರಾಗಿದ್ದು ಸೋದರ ಸಂಬಂಧಿಗಳಾಗಿರುತ್ತಾರೆ. ಒಂದೇ ಬೆಡಗಿನವರಲ್ಲಿ ಶರೀರ ಸಂಬಂಧಗಳು ಅಂದರೆ ವೈವಾಹಿಕ ಸಂಬಂಧಗಳು ಆಗುವುದಿಲ್ಲ. ರಕ್ತ ಸಂಬಂಧಗಳು ಬೆಳೆಯಬೇಕಾದರೆ ಬೆಡಗುಗಳು ಬೇರೆ-ಬೇರೆಯಾಗಿರಬೇಕೆಂಬ ಕಟ್ಟುನಿಟ್ಟಾದ ನಿಯಮವಿದೆ. ಹೀಗಾಗಿ ಮದುವೆ ಪೂರ್ವದಲ್ಲಿ ಬೆಡಗುಗಳ ಪರಿಶೀಲನೆ ಮಾಡುತ್ತಾರೆ. ಈ ಬೆಡಗುಗಳ ಶಬ್ದಗಳಲ್ಲಿ ವೈಶಿಷ್ಟ್ಯತೆಯಿದೆ. ಉದಾಹರಣೆಗೆ, ಗೌಡನವರ, ಪಟ್ಟದವರ, ಆನೆನ್ನವರ, ಆಡಿನವರ, ತೋಪಿನವರ, ಬಂಡಾರಿ, ಹಂಡಗುರಿ, ಹೊನ್ನುಂಗರ, ಹೂಬಿಸಿಲ, ಹೊನ್ನಹಾಲಿನವರ, ಹೊನ್ನಬಂಡೆನವರ ಮುಂತಾದವು. ಇವುಗಳಿಗೆ ಸ್ವಂತಿಕೆಯಿದ್ದು ತಮ್ಮದೇ ಆದ ಅರ್ಥವ್ಯಾಪ್ತಿಯನ್ನು ಹೊಂದಿವೆ. ಹಾಲುಮತ ಸಮುದಾಯದವರಲ್ಲಿ ವಿವಿಧ ಪಂಗಡಗಳಿದ್ದು, ವೈವಾಹಿಕ ಸಂಬಂಧಗಳು ಒಂದೇ ಕಂಕಣದವರಲ್ಲಿ ಏರ್ಪಡುತ್ತವೆ ಆದರೆ ಅವರ ಬೆಡಗುಗಳು ಮಾತ್ರ ಬೇರೆ-ಬೇರೆಯಾಗಿರಬೇಕೆಂಬ ನಿಮಯವಿದೆ. ಹೀಗಾಗಿ ಹಾಲುಮತ ಸಮುದಾಯದಲ್ಲಿ ಬೆಡಗುಗಳು ವಿಶೇಷತೆಯನ್ನು ಪಡೆದುಕೊಂಡಿವೆ.

೪.೨.೧.೩. ಈರಮಕ (ವೀರಮುಖ) :

ಈರಮುಕ ಎನ್ನುವುದು 'ವೀರಮುಖ'ದ ಅಪಭ್ರಂಶ. ದ್ರಾಕ್ಷಾಯಿಣಿಯ ಪ್ರಾಣಾಹುತಿಗೆ ಕಾರಣನಾದ ದಕ್ಷಬ್ರಹ್ಮನ ಸಂಹಾರಕ್ಕಾಗಿ ಶಿವನಿಂದ ಜನಿಸಿದ ವೀರನೇ ವೀರಭದ್ರ. ವೀರಭದ್ರ ಕ್ರೋಧಾವೇಶದಿಂದ ದಕ್ಷಬ್ರಹ್ಮನನ್ನು ಸಂಹರಿಸಿದ. ಆದರೂ ವೀರಭದ್ರನ ಕ್ರೋಧ ಅಳಿಯಲಿಲ್ಲ. ಕ್ರೋಧದ ಶಮನಾರ್ಥವಾಗಿ ಅವನ ಮುಂದೆ ತೆಂಗಿನಕಾಯಿಗಳನ್ನು ಒಡೆಯಲಾಯಿತು. ಟಗರ ಮತ್ತು ಹೋತ ಮರಿಗಳನ್ನು ಹರಿಯಲಾಯಿತು. ಕ್ರಮೇಣ ಅವನ ಕ್ರೋಧ ಶಮನವಾಯಿತು.. ವೀರಭದ್ರನ ಅಂಶಜರಾದ (ಶೈವ ಅನುಯಾಯಿಗಳಾದ) ಕುರುಬರಲ್ಲಿಯ ಕೆಲವು ಪಂಗಡದವರು ತಮ್ಮ ಮಕ್ಕಳ ಮದುವೆಗೆ ಮುನ್ನ ಈ ಸಂಪ್ರದಾಯವನ್ನು ಆಚರಿಸುತ್ತಾರೆ.

ಅಕ್ಷತಾರೋಪಣ ಕಾರ್ಯಕ್ರಮಕ್ಕಿಂತ ಒಂದು ದಿನ ಮೊದಲು ಸಂಜೆ ಹೊತ್ತು, ಮನೆ ದೇವರನ್ನು ಮತ್ತು ವೀರಮುಖವನ್ನು ದೇವಸ್ಥಾನದಿಂದ ತಂದು ಜಗಲಿಯ ಮೇಲಿಟ್ಟು ಪೂಜಿಸುವರು.

ವೀರಮುಖವಾಡವು ಕಟ್ಟಿಗೆಯ ಹಲಗೆಯಿಂದ ಮಾಡಿದ್ದು ನೋಡಲು ಭಯಂಕರ ರೂಪದ್ದಾಗಿರುತ್ತದೆ. ದೊಡ್ಡ-ದೊಡ್ಡ ಕಣ್ಣುಗಳು, ಕೋರೆ ಹಲ್ಲಿನೊಂದಿಗೆ ಮಧ್ಯದಲ್ಲಿರುವ ಉದ್ದದ ಹಲ್ಲುಗಳು, ಉಬ್ಬಿಕೊಂಡಿರುವ ಹುಬ್ಬಗಳು, ಬಾಯಿಂದ ಹೊರಗೆ ಜೋತು ಬಿದ್ದ ನಾಲಿಗೆ, ಕೆಂಪಾದ ಮುಖ, ಕಪ್ಪು ಬಣ್ಣದ ದಟ್ಟ ಕೂದಲುಗಳಿಂದ ಮುಖವಾಡ ಕೂಡಿರುತ್ತದೆ.

ಮರುದಿನ ಜಗಲಿಯ ಮೇಲಿರುವ ವೀರಭದ್ರ ಮುಖವಾಡವನ್ನು ವಿಧಿವತ್ತಾಗಿ ಪೂಜಿಸಿ ಅದನ್ನು ಸದೃಢವಾದ ಯುವಕನ ಮುಖಕ್ಕೆ ಕಟ್ಟುವರು. ಅವನ ಕೈಯಲ್ಲೊಂದು ಹರಿತವಾದ ಆಯುಧ (ಕೊಡುಗೋಲ)ವನ್ನು ಕೊಟ್ಟು ಮದುವೆಯ ಹಂದರದ ಮಧ್ಯದಲ್ಲಿ ನಿಲ್ಲಿಸುವರು. ಅವನ ನಡುವಿಗೆ ಹಗ್ಗವೊಂದನ್ನು ಕಟ್ಟಿ ಇಬ್ಬರೂ ಜಗ್ಗಿ ಹಿಡಿಕೊಂಡಿರುತ್ತಾರೆ. ಅವನ ಮುಂದೆ ತೆಂಗಿನಕಾಯಿಯನ್ನು ಒಡೆಯುವರು. ನಂತರ ಬಲಿಕೊಡುವ ಹೋತದ ಮರಿಯನ್ನು ತಂದು ವಿಧಿವತ್ತಾಗಿ ಪೂಜಿಸಿ ಅವನ ಮುಂದೆ ಅಡ್ಡಲಾಗಿ ಇಬ್ಬರು ಹಿಡಿದುಕೊಳ್ಳುವರು. ವೀರಭದ್ರನ ಮುಖವಾಡ ಧರಿಸಿದ ವ್ಯಕ್ತಿ ಒಂದೇ ಏಟಿಗೆ ಅದನ್ನು ತುಂಡರಿಸಿ(ಹರಿದು) ಎಡ-ಬಲಗಳಲ್ಲಿ ಬಿಸಾಡುವನು. ವೀರಭದ್ರ ವೀರಾವೇಶದಿಂದ ಹೂಂಕರಿಸುತ್ತಿರುವಾಗ ಅವನ ಮುಂದಿದ್ದ ತೆಂಗಿನಕಾಯಿಗಳ ಚೂರನ್ನು ಪಡೆದು ಕೊಳ್ಳಲು ಕೆಲವು ಯುವಕರು ತಮ್ಮ ಕೋಲಿನಿಂದ ಪ್ರಯತ್ನಿಸುವರು. ಅದನ್ನು ತಡೆಯುವುದಕ್ಕಾಗಿ ವೀರಭದ್ರನು ಅವರ ಮೇಲೆ ಆಕ್ರಮಣ ಮಾಡುವನು.

ಈ ಆಟವನ್ನು ಆಡುತ್ತ ಅವರೆಲ್ಲರೂ ಊರ ಹೊರಗಿನ ಪ್ರದೇಶಕ್ಕೆ ಹೋಗುವರು ಅಲ್ಲಿ ವೀರಭದ್ರನ ಅವತಾರ ಕ್ರಮೇಣ ಉಪಶಮನವಾಗುವುದು. ನಂತರ ಶುಚಿಯಾದ ಸ್ಥಳದಲ್ಲಿ ಕಂಬಳಿ ಹಾಸಿ ಅದರ ಮೇಲೆ ಮುಖವಾಡವನ್ನು ಬಿಚ್ಚಿಟ್ಟು ತುಂಬಿದ ಕಲಶದ ಜೊತೆಗೆ ಪೂಜಿಸಿ ವಾಲಗದವರೊಂದಿಗೆ ಮದುವೆ ಮನೆಗೆ ಹಿಂತಿರುಗಿ ಬರುತ್ತಾರೆ. ಈ ರೀತಿಯಾಗಿರುವ ಈರ(ವೀರ)ಮುಖವನ್ನು ಇಂದು ಹಳೆಯ ಸಂಪ್ರದಾಯಸ್ಥ ಹಾಲುಮತದ ಮನೆತನದವರು ತಮ್ಮ ಮಕ್ಕಳ ಮದುವೆಯ ಸಮಯದಲ್ಲಿ ಮಾತ್ರ ಆಚರಿಸುತ್ತಿರುವರು. ಈ ಪದ್ಧತಿಯು ಹಾರೂಗೇರಿಯ ಜಂಬಗಿ, ಪೂಜಾರಿ, ಹಾಡಕಾರ ಮೊದಲಾದ ಮನೆತನಗಳಲ್ಲಿ ಆಚರಣೆಯಲ್ಲಿದೆ. ಆದರೂ ಇಂದು ಈ ಪದ್ಧತಿಯು ಬಹಳಷ್ಟು ಪ್ರಮಾಣದಲ್ಲಿ ಕಣ್ಮರೆಯಾಗುತ್ತಿದೆ.

೪.೨.೧.೪ ಗುಗ್ಗಳ :

ಸಂಪ್ರದಾಯಸ್ಥ ಹಾಲುಮತದವರ ಮದುವೆಗೆ ಮುಂಚೆ ನಡೆಯುವ ಆಚರಣೆಗಳಲ್ಲಿ ಗುಗ್ಗಳವು ಒಂದು. ಕೆಲವರು ಮದುವೆಗೆ ಮುನ್ನ ಗುಗ್ಗಳ ತೆಗೆಯುವ ಸಂಪ್ರದಾಯವನ್ನು ಕಡ್ಡಾಯವಾಗಿ ಆಚರಿಸುತ್ತಾರೆ, ಇಲ್ಲದಿದ್ದಲ್ಲಿ ಕೆಡಕು ಸಂಭವಿಸುತ್ತದೆ ಎಂಬದು ಅವರ ಭಾವನೆ. ಈ ಆಚರಣೆ ಮದುವೆಯ ಸಮಯದಲ್ಲಿ ಸಾಧ್ಯವಾಗದಿದ್ದಲ್ಲಿ ಯಾವುದಾದರೂ ಒಂದು ಶುಭದಿನದಂದು ದೇವಾಲಯ-ಮಠಗಳಲ್ಲಿ ಆಚರಿಸುವರು. ಅರ್ಧ ಒಡೆದ ಮಣ್ಣಿನ ಬಿಂದಿಗೆಗಳಲ್ಲಿ ಜೇಡಿಮಣ್ಣು, ಸದಕಿನ ಹೊಟ್ಟುಗಳನ್ನು ಗಟ್ಟಿಯಾಗಿ ತುಂಬಿ ಮಧ್ಯದಲ್ಲಿ ಒಂದು ಕಟ್ಟಿಗೆ ನಿಲ್ಲಿಸಿ ಅದಕ್ಕೆ ಎಣ್ಣೆಯಲ್ಲಿ ಅದ್ದಿದ ಬಟ್ಟೆಯನ್ನು ಸುತ್ತಿ ದಿವಟಿಗೆಯಾಕಾರ ಮಾಡುವರು. ಮಡಕೆಯ ಸುತ್ತ ಬಿದಿರಿನ ಚೌಕಟ್ಟು ಕಟ್ಟಿ ನಾಲ್ಕೂ ಭಾಗಕ್ಕೆ ನಿಶಾನೆಗಳನ್ನು ಕಟ್ಟುವರು. ನಿಶಾನೆಗಳಿಗೆ ಬಣ್ಣ-

ಬಣ್ಣದ ಹಾಳೆಗಳನ್ನು ಅಂಟಿಸಿ ಮೇಲೆ ನಿಂಬೆ ಹಣ್ಣುಗಳನ್ನು ಸಿಕ್ಕಿಸಿ ಸುಣ್ಣ-ಬಣ್ಣಗಳನ್ನು ಹಚ್ಚಿ ಅಲಕಂರಿಸುವರು.

ನಾಲ್ಕು ಜನ ಪುರುಷರು ಸ್ನಾನ ಮಾಡಿ ವದ್ದೆ ಮಡಿಬಟ್ಟೆವುಟ್ಟು ಕೈಯಲ್ಲಿ ಗುಗ್ಗಳದ ಬಿಂದಿಗೆಗಳನ್ನು ಎತ್ತುಕೊಂಡಾಗ ಅವುಗಳಿಗೆ ವಿದ್ಯುಕ್ತವಾಗಿ ಪೂಜೆ ಸಲ್ಲಿಸಿ ಮಡಿಕೆಗಳಲ್ಲಿನ ದಿವಟಿಗೆಗಳಿಗೆ ಅಗ್ನಿ ಹೊತ್ತಿಸುವರು. ಗುಗ್ಗಳದ ಜೊತೆ-ಜೊತೆಯಾಗಿ ಮದುಮಕ್ಕಳು, ಅಗಸರು ಹಾಸುವ ಮಡಿಬಟ್ಟೆಗಳ ಮೇಲೆ ನಡೆಯುವರು. ಅವರ ಮುಂದೆ ಕರಡಿ ಬಾರಿಸುವ, ಸನಾದಿ ಊದುವ ಮೊದಲಾದ ವಾದ್ಯಗಾರರು ಬಂಧು-ಬಾಂಧವರು ಸಂಭ್ರಮದ ಮೆರವಣಿಗೆಯನ್ನು ನಿರ್ಮಿಸುವರು. ಮುಂದೆ ಹೋಗುವಾಗ ಗುಗ್ಗಳದ ಮಡಿಕೆಗಳನ್ನು ಮದುಮಕ್ಕಳ ತೆಲೆಯ ಮೇಲೂ ಹೋರಿಸುತ್ತಾರೆ.

ಊರಿನ ಪ್ರಮುಖ ಸ್ಥಳಗಳಲ್ಲಿ ಗುಗ್ಗಳ ಹೊತ್ತವರು ಚೌಕಾಕಾರದಲ್ಲಿ ಗುಗ್ಗಳವನ್ನು ಮುಂಗೈಗಳಲ್ಲಿ ಹಿಡಿದುಕೊಂಡು ವೀರ ಭಂಗಿಯಲ್ಲಿ ಕುಳಿತುಕೊಳ್ಳುವರು. ಆಗ ವೀರಭದ್ರನ ಕಂಚಿನ ಮೂರ್ತಿಯನ್ನು ಎದೆಯ ಮೇಲೆ ಧರಿಸಿಕೊಂಡ ಪಂಚಾಳರು, ಉರಿಯುತ್ತಿರುವ ಗುಗ್ಗಳದ ಬೆಂಕಿಯಲ್ಲಿ ಕೈಹಾಕಿ ಒಡಬುಗಳನ್ನು ನುಡಿಯುವರು. ಪುರುವಂತ(ಪಂಚಾಳ)ರು ತಲೆಗೆ ಕಾವಿ ರೇಷ್ಮೆ ರುಮಾಲು, ಎದೆಗೆ ನರಸಿಂಹನ ಮುಖ, ರುಂಡಮಾಲೆಗಳನ್ನು ಧರಿಸಿ, ಕೈಗೆ ರುದ್ರಾಕ್ಷಿ, ಹಣೆಗೆ ವಿಭೂತಿ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ತುದಿಗೆ ಲಿಂಬೆ ಹಣ್ಣನ್ನು ಚುಚ್ಚಿದ ಶಸ್ತ್ರಗಳನ್ನು ಹಿಡಿದುಕೊಂಡು 'ಅಹಹಾ ವೀರ, ಅಹಹಾರೆ ವೀರಭದ್ರ' ಎಂದು ವೀರಭದ್ರನ ಮತ್ತು ಶಿವನ ಕುರಿತಾದ ಒಡಬುಗಳನ್ನು ಉಗ್ಗಡಿಸುವರು, ಆಗ ಭಕ್ತರು 'ಖಡೇ ಖಡೇ' ಎಂದು ಅವರನ್ನು ಪ್ರೇರೆಪಿಸುವರು. ಕೆಲವು ಸಲ ಒಡಪುಗಾರರ ಮೈಯಲ್ಲಿ ವೀರಭದ್ರನ ಅವತಾರ ಪ್ರವೇಶಿವಾಗುವುದು. ಈ ರೀತಿಯಾಗಿ ಅಲ್ಲಲ್ಲಿ ನಿಲ್ಲುತ್ತ ಒಡಬುಗಳನ್ನು ಉಗ್ಗಡಿಸುತ್ತ ನೆಲದ ಮೇಲೆ ಹಾಸಿದ ಮಡಿಬಟ್ಟೆಗಳ ಮೇಲೆ ನಡೆಯುತ್ತ ಅಗಸಿ ಬಾಗಿಲನ್ನು ದಾಟಿ ಊರ ಹೊರಗೆ ಬರುವರು.

ವಿಶಾಲವಾದ ಬಯಲಿನಲ್ಲಿ ಕಂಬಳಿಯನ್ನು ಹಾಸಿ ಅದರ ಮೇಲೆ ವೀರಭದ್ರನ ಕಂಚಿನ ಮೂರ್ತಿ ಧರಿಸಿದವನನ್ನು ಕೂಡಿಸುವರು. ಅವನಿಗೆ ಮತ್ತು ಗುಗ್ಗಳದ ಮಡಿಕೆಗಳಿಗೆ ವಿಧಿವತ್ತಾಗಿ ಪೂಜೆ ಸಲ್ಲಿಸಿ ಮಡಿಕೆಗಳಲ್ಲಿದ್ದ ಬೆಂಕಿಯನ್ನು ಚೆಲ್ಲುವರು. ಬೆಂಕಿಯ ಮೇಲೆ ಮಂತ್ರೋಚ್ಚಾರಣೆ ಮಾಡುತ್ತ ನೀರು ಸಿಂಪಡಿಸಿ ಗುಗ್ಗಳದ ಬೆಂಕಿಯನ್ನು ನಂದಿಸುತ್ತಾರೆ. ಈ ಆಚರಣೆ ಕೂಡ ವಿರಭದ್ರನನ್ನು ನೆನೆಪಿಸುವ ಹಾಗೂ ಅವನನ್ನು ಸಂತೃಪ್ತಿ ಪಡಿಸುವ ಆಚರಣೆಯೇ ಆಗಿದೆ. ಈ ಪದ್ಧತಿಯು ಹಾರೂಗೇರಿಯ ಬೀಳಗಿ ಮನೆತನದಲ್ಲಿ ಅಸ್ತಿತ್ವದಲ್ಲಿರುವುದು. ಇತ್ತೀಚಿಗೆ ಈ ಆಚರಣೆಯು ನೈಪಥ್ಯಕ್ಕೆ ಸರಿಯುತ್ತಿದೆ. ಈ ಆಚರಣೆಯನ್ನು ಮಾಡುವುದು ಕಷ್ಟಕರವಾಗಿದ್ದು, ಆಚರಣೆ ಮಾಡಲು ಸಾಧ್ಯವಾಗದ್ದಿದ್ದವರು ದೇವರಿಗೆ ಕಾಣಿಕೆ ರೂಪದಲ್ಲಿ ಹಣವನ್ನು ಕೊಟ್ಟು ಕಡ್ಡಾಯ ಆಚರಣೆಯಿಂದ ನುಣುಚಿಕೊಳ್ಳುತ್ತಿರುವುದು ಕಂಡು ಬರುತ್ತಿರುವುದು.

೪.೨.೧.೫ ಹೊಂಗೊಡ :

ಹಾಲುಮತದ ಕೆಲವು ಮನೆತನಗಳಲ್ಲಿ ಹಿರಿಯರು ತಮ್ಮ ಮಕ್ಕಳ ಮದುವೆಗೆ ಮುನ್ನ ಹೊಂಗಾಡ (ಹೊನ್ನಿನ ಕೊಡ>ಹೊಂಗೊಡ>ಹೊಂಗಾಡ) ಸಂಪ್ರದಾಯವನ್ನು ಆಚರಿಸುವರು. ಇದು ಮೂಲತಃ

ಹಿರಿಯರಿಗೆ ಸಂಬಂಧಿಸಿದ ಹಬ್ಬವಾಗಿದ್ದು, ಮದುವೆ ಮುನ್ನ ಮಣ್ಣಿನ ಕೊಡಗಳನ್ನು ಪೂಜಿಸಿ ನದಿ-ಹೊಳೆಗಳಿಂದ ನೀರು ತರುವ ವಿಶೇಷ ಆಚರಣೆಯಾಗಿದೆ.

ಹೊಂಗೊಡದ ಆಚರಣೆಗಾಗಿ ಏಳು ಅಥವಾ ಒಂಭತ್ತು ಜನ ಮುತ್ತೈದೆಯರನ್ನು ಆಮಂತ್ರಿಸಲಾಗುತ್ತದೆ. ಇವರಿಗೆ ಕೆಲವು ನಿಬಂಧನೆಗಳಿವೆ. ಇವರು ಮದುವೆ ಮಾಡಿಕೊಂಡವರಾಗಿರಬೇಕು. ಉಡಿಕೆ ಮಾಡಿಕೊಂಡವರಾಗಿರಬಾರದು, ಗಂಡ ತೀರಿಕೊಂಡಿರಬಾರದು. ಮಕ್ಕಳಾಗಿರಬೇಕು. ಮಾಸ ಮುಕ್ಕಾಗಿರಬಾರದು ಅಂದರೆ ಹುಟ್ಟಿದ ಮಕ್ಕಳು ಮರಣ ಹೊಂದಿರಬಾರದು. ಹೊಟ್ಟೆ ಬಿದ್ದಿರಬಾರದು (ಗರ್ಭಪಾತ). ದೇಹ ಊನ (ಅಂಗಭಿನ್ನತೆ) ಗೊಂಡಿರಬಾರದು. ಅಂದರೆ ಹಲ್ಲು ಬಿದ್ದಿರಬಾರದು, ಕೈಕಾಲುಗಳಿಗೆ ಗಂಟುಗಳಾಗಿರಬಾರದು ಮತ್ತು ಮುರಿದಿರಬಾರದು, ದೇಹದ ಯಾವುದೇ ಭಾಗ ಚಿಕಿತ್ಸೆ(ಆಪ್‌ರೇಶನ್)ಗೆ ಒಳಗಾಗಿ ಹೊಲಿಗೆ ಬಿದ್ದಿರಬಾರದು. ಈ ಸಮಯದಲ್ಲಿ ಮುಟ್ಟುಗಬಾರದು. ಇವು ಹೊಂಗಾಡ ಆಚರಿಸುವ ಮುತ್ತೈದೆಯರ ಅನರ್ಹತೆಗಳು.

ಮುತ್ತೈದೆಯರನ್ನು ಹೊರತು ಪಡಿಸಿ ಒಬ್ಬಳು ಹೆಬ್ಬಟ್ಟಿ (ಹೆಬ್ಬಿ) ಇರುವಳು. ಇವಳಿಗೆ ಮದುವೆಯಾಗಿ ಮಕ್ಕಳಾಗಿರುತ್ತವೆ ಆದರೆ ಗಂಡು ತೀರಿಕೊಂಡಿರುತ್ತಾನೆ. ಇನ್ನೊಬ್ಬ ಕೊಳಲ ಭರಮನೆಂಭ ಪುರುಷನಿರುತ್ತಾನೆ. ಇವನು ಮದುವೆ ಮಾಡಿಕೊಂಡವನಾಗಿದ್ದು ಮಕ್ಕಳಾಗಿರಬೇಕು. ಈತನ ಶರೀರವೂ ಊನ ಗೊಂಡಿರಬಾರದು. ಈತ ಹೊಂಗೊಡ ಕಾರ್ಯಕ್ರಮದಲ್ಲಿ ಕೊಳಲಿನ ಸಂಗೀತಗಾರನಾಗಿ ಕಾರ್ಯನಿರ್ವಹಿಸುತ್ತಾನೆ.

ಇವರೆಲ್ಲರನ್ನೂ ಮದುವೆ ದಿನಕ್ಕಿಂತ ಎರಡು ದಿನ ಮುಂಚೆ ಆಹ್ವಾನಿಸುವರು. ಅಂದು ಅವರನ್ನು ಸ್ನಾನ ಮಾಡಿಸಿ, ಗೌರವಿಸಿ, ಉಡಿ ತುಂಬಿ, ಮೃಷ್ಟಾನ್ನ ಭೋಜನ ಮಾಡಿಸುವರು. ಅವರಿಗೆ ಉಳಿದುಕೊಳ್ಳಲು ಒಂದು ಪ್ರತ್ಯೇಕ ಕೋಣೆಯೊಂದನ್ನು ಒದಗಿಸುವರು. ಅವರು ಅಲ್ಲಿಯೇ ಇದ್ದು ಮದುವೆಯ ದಿನದವರೆಗೆ ನಿರಂಕಾರ ಉಪವಾಸ ವೃತವನ್ನು ಆಚರಿಸುತ್ತಾರೆ. ಅಂದರೆ ಬಾಯಲ್ಲಿ ಒಂದು ಹನಿ ನೀರನ್ನು ಹಾಕುವುದಿಲ್ಲ. ಕಾಲಲ್ಲಿ ಚಪ್ಪಲಿ ಧರಿಸುವುದಿಲ್ಲ.

ಮದುವೆಯ ದಿನ ಅಥವಾ ಒಂದು ದಿನ ಮೊದಲು (ಮೂರು ದಿನದ ಮದುವೆಯಾಗಿದ್ದಲ್ಲಿ) ನಸುಕಿನಲ್ಲಿ ಹೊಂಗಾಡ ಆಚರಣೆಗಾಗಿ ಹೊಸದಾಗಿ ಖರೀದಿಸಿದ ಮಣ್ಣಿನ ಕೊಡಗಳನ್ನು ಪೂಜಿಸುವರು. ಮನೆಯವರು ಬಂಧು-ಬಾಂಧವರೊಡಗೂಡಿ ಮುತ್ತೈದೆಯರು, ಕೊಳಲುಭರಮ, ಹೆಬ್ಬಿ ಸಹಿತವಾಗಿ ಊದುತ್ತ-ಬಾರಿಸುತ್ತ ಊರ ಹೊರಗಿನ ಬಾವಿ-ಹೊಳೆಗೆ ಬರುವರು. ಅಲ್ಲಿ ಗಂಗಾ ಭಾಗೀರಥಿಯ ಪೂಜೆ ಮಾಡಿ, ಉಡಿತುಂಬಿ, ಬಾಗಿನ ಅರ್ಪಿಸುವರು. ನಂತರ ಮುತ್ತೈದೆಯರನ್ನು ಸಾಲಾಗಿ ಕೂಡ್ರಿಸಿ ಹುಟ್ಟಿನಿಂದ ಅವರ ತಲೆಯ ಮೇಲೆ ನೀರನ್ನು ಸುರಿದು ಶುದ್ಧಿಕರಿಸುವರು, ತರುವಾಯ ಹೊನ್ನ ಕೊಡಗಳಲ್ಲಿ ನೀರು ತುಂಬಿ ಮುತ್ತೈದೆಯರ ತಲೆಯ ಮೇಲೆ ಹೊರಿಸುವರು.

ಮುಂದೆ-ಮುಂದೆ ಊದುವರು-ಬಾರಿಸುವರು, ಅವರ ಹಿಂದೆ ಕೊಳಲಭರಮ, ಹೆಬ್ಬ ನಂತರದಲ್ಲಿ ಮುತ್ತೈದೆಯರು ನಡೆಯುತ್ತ ಮದುವೆ ಮನೆಗೆ ಬರುವರು. ಇವರಿಗೆ ಮೈಲಿಗೆಯಾಗಬಾರದು, ನಾಯಿ

ಬೆಕ್ಕುಗಳು ಅಡ್ಡ ಬರಬಾರದೆಂದು ಸುತ್ತಲೂ ಹಗ್ಗದ ಸರಪಳಿಯಿಂದ ರಕ್ಷಣಾ ಕೋಟೆಯನ್ನು ನಿರ್ಮಿಸುವರು. ಹೀಗೆ ಸಡಗರ-ಸಂಭ್ರಮದಿಂದ ಊರ ಅಗಸಿ ಬಾಗಿಲಿನಿಂದ ಹಾಯ್ದು ಮದುವೆ ಮನೆಗೆ ಬಂದು ತಲಪುವರು. ಆಗ ಮುತ್ತೈದೆಯರ ತಲೆಯ ಮೇಲಿದ್ದ ಕೊಡಗಳನ್ನು ಕೆಳಗಿಳಿಸಿ ಅದೇ ನೀರಿನಿಂದ ಮದುವೆ ಅಡುಗೆ ಪ್ರಾರಂಭಿಸುವರು. ಈ ಆಚರಣೆಯ ಸಮಯದಲ್ಲಿ ಯಾವ ಅನಿಷ್ಟ, ಅವಘಡ, ಲೋಪಗಳು ಸಂಭವಿಸಬಾರದು. ಸಂಭವಿಸಿದಲ್ಲಿ ಆಚರಣೆ ಮಾಡುವವರಿಗೆ ಮುಂದೆ ಕೆಡಕಾಗುತ್ತದೆಂಬ ಭಾವನೆ. ಇಂದು ಬಹಳಷ್ಟು ಜನರಿಗೆ ಈ ವಿಧಿವಿಧಾನಗಳನ್ನು ದೋಷರಹಿತವಾಗಿ ಆಚರಿಸಲಿಕ್ಕಾಗದೇ ಹೊಂಗಾಡ ಆಚರಣೆಯನ್ನೇ ಕಡಿಮೆ ಮಾಡುತ್ತಿದ್ದಾರೆ. ಈ ಆಚರಣೆಯು ಹಾರೂಗೇರಿಯ ಬೀಳಗಿ ಮತ್ತು ಮೊರಬ ಮನೆತನಗಳಲ್ಲಿ ಪ್ರಚಲಿತದಲ್ಲಿದೆ.

೪.೨.೧.೬ ಹಾಲಗಂಬ :

ಮದುವೆಯ ಮಂಟದಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ಹಾಲಗಂಬ ತರುವುದು ಒಂದು ಆಚರಣೆ. ಈ ಆಚರಣೆಯನ್ನು ಮದುವೆ ಗಂಡಿನ ಸೋದರಮಾವ ನೇರವೇರಿಸಬೇಕೆಂಬ ನಿಯಮವಿದೆ. ಅಕ್ಷತೆಯ ದಿನದಂದು ಸೋದರಮಾವ ಗ್ರಾಮದ ದೇವಾಲಯದಿಂದ ಅಥವಾ ಲಭ್ಯವಿರುವ ಸ್ಥಳದಿಂದ ಅತ್ತಿ, ಆಲ, ಬನ್ನಿ ಮುಂತಾದ ಗಿಡದ ಟೊಂಗೆಗಳನ್ನು ತರಲು ಬಾಜಾ ಭಂಜತ್ರಿಗಳೊಂದಿಗೆ ತೆರಳುವನು. ಗಿಡಗಳಿಗೆ ವಿಧಿವತ್ತಾಗಿ ಪೂಜೆ ಸಲ್ಲಿಸಿ, ಅಕ್ಷತೆ ಹಾಕಿ ನಂತರ ಟೊಂಗೆಗಳನ್ನು ಕತ್ತರಿಸಿ ಅವುಗಳನ್ನು ಹೆಗಲ ಮೇಲೆ ಹೊತ್ತು ಕೊಂಡು ಬಾಜಾ ಭಂಜತ್ರಿಯೊಂದಿಗೆ ಮದುವೆ ಹಂದರಕ್ಕೆ ತಂದು ಕಂಬವೊಂದಕ್ಕೆ ಕಟ್ಟುವನು. ಮದುವೆ ಮನೆಯವರು ಹಾಲಗಂಭ ತಂದವರಿಗೆ ಉಡುಗೊರೆ ಕೊಡುವರು. ಈ ರೀತಿಯಾಗಿ ತಂದು ಕಟ್ಟಿದ ಮರದ ಟೊಂಗೆಗಳು ಒಂದೊಂದು ಹಾರೈಕೆಯನ್ನು ನಿರೂಪಿಸುತ್ತವೆ.

ಅತ್ತಿ ಗಿಡವು ಹಾಲಿನಂತ ರಸವನ್ನು ಬಿಡುವುದು, ಅದರಂತೆ ಮದು ಮಕ್ಕಳ ಜೀವನವು ಅತ್ತಿ ಮರದ ಹಾಲಿನಂತೆ ರಸಮಯವಾಗಲೆಂಬ ಶುಭ ಹಾರೈಕೆಯನ್ನು ಸೂಚಿಸುತ್ತದೆ. ಬನ್ನಿ ಮರವು ಲಕ್ಷ್ಮೀ ದೇವಿಯ ವಾಸಸ್ಥಾನವಾಗಿರುವುದರಿಂದ, ಮದು ಮಕ್ಕಳ ಜೀವನ ಸಂಪದ್ಭರಿತವಾಗಲೆಂಬ ಆಶಯವನ್ನು ಸಂಕೇತಿಸುತ್ತದೆ. ಅತ್ತಿಯ ಮರ ಹೆಮ್ಮರವಾಗಿ ಬೆಳೆಯುವುದರಿಂದ ಮದು ಮಕ್ಕಳ ವಂಶ ಬೃಹದ್ಧಾಕಾರವಾಗಿ ಬೆಳೆಯಲೆಂಬ ಆಶಯವನ್ನು ಸೂಚಿಸುತ್ತದೆ. ಇದು ಮಾತೃತ್ವದ ಪ್ರತೀಕವಾಗಿ ಆಚರಿಸಲ್ಪಡುತ್ತಿದೆ. ಈ ಆಚರಣೆಯ ಹಿಂದಿನ ಸತ್ಯದ ಅರಿವಿರದವರು ಇದನ್ನು ಆಚರಿಸುತ್ತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಮದುವೆಗಳಲ್ಲಿ ಹಾಲಗಂಭ ತರುವ ಆಚರಣೆ ಮಹತ್ವವನ್ನು ಕಳೆದುಕೊಂಡಿದೆ.

೪.೨.೧.೭ ಕೂಡಿಕೆ-ಉಡಿಕೆ

ಹಾಲುಮತ ಸಮುದಾಯದಲ್ಲಿ ಮರುಮದುವೆಗೆ ಅವಕಾಶವಿದೆ. ಗಂಡ ಹದಿವಯಸ್ಸಿನಲ್ಲಿದ್ದಾಗ ಹೆಂಡತಿ ಮರಣ ಹೊಂದಿದರೆ ಆತ (ವಿಧುರ) ಇನ್ನೊಬ್ಬಳನ್ನು ಮದುವೆಯಾಗಬಹುದು. ಅದೇ ರೀತಿ ಮದುವೆಯಾದ ಹೆಣ್ಣುಮಗಳು ಹದಿವಯಸ್ಸಿನಲ್ಲಿರುವಾಗ ಗಂಡ ಮರಣ ಹೊಂದಿದರೆ ಅವಳು (ವಿಧವೆ) ಇನ್ನೊಬ್ಬನನ್ನು ಮದುವೆಯಾಗಬಹುದು. ಇನ್ನೂ ಕೆಲವು ಸಂಧರ್ಭಗಳಲ್ಲಿ ಗಂಡ-ಹೆಂಡತಿಯ ಮಧ್ಯೆ ಜಗಳ-

ಭಿನ್ನಾಭಿಪ್ರಯದಿಂದಾಗಿ ವಿಚ್ಛೇಧಿತಗೊಂಡಾಗಲೂ ಅವರು ಮರು ಮದುವೆಯಾಗಬಹುದು. ಇದಕ್ಕೆ ಸಮಾಜದ ಮನ್ನಣೆ ಇದೆ. ಇಂಥ ಮದುವೆಗಳಿಗೆ 'ಕೂಡಿಕೆ' ಇಲ್ಲವೆ 'ಉಡಕಿ' ಎನ್ನುವರು. ಉಡಿಕೆ-ಕೂಡಿಕೆಗಳನ್ನು ಸಂಕ್ಷಿಪ್ತವಾಗಿ ಮಾಡುತ್ತಾರೆ. ಮದುವೆಯಂತೆ ಹಂದರ-ಮಂಟಪ ಹಾಕುವುದಿಲ್ಲ ಭಾಜಾ-ಭಜಂತ್ರಿಗಳನ್ನು ಭಾರಿಸುವುದಿಲ್ಲ. ಸಮಾಜದ ಮುಖಂಡರು ಮತ್ತು ಉಡಿಕೆ ಮಾಡಿಕೊಳ್ಳುವವರಿಗೆ ಸಂಬಂಧಪಟ್ಟ ಕೆಲವೇ ಜನರು ಮಾತ್ರ ಸೇರಿಕೊಂಡು ಇದನ್ನು ಮಾಡುತ್ತಾರೆ. ಉಡಿಕೆ ಮಾಡಿಕೊಳ್ಳುವವರ ಬಟ್ಟೆಗಳಿಗೆ ಗಂಟು ಹಾಕಿ ಪರಸ್ಪರ ಹೂಮಾಲೆಗಳನ್ನು ಬದಲಾಯಿಸಿ ಕೊಂಡರೆ ಉಡಿಕೆ ಕಾರ್ಯಕ್ರಮ ಮುಗಿಯಿತು. ಉಡಿಕೆಯಲ್ಲಿ ಕಡಬು ಮಾಡುತ್ತಾರೆ, ಹೋಳಿಗೆ ಮಾಡುವುದಿಲ್ಲ. ಉಡಿಕೆ ಮಾಡುವುದಕ್ಕೆ ಶುಭ ಮುಹೂರ್ತ ಬೇಕಾಗಿಲ್ಲ. ಹಗಲಿ ಅಥವಾ ರಾತ್ರಿ ಮಾಡಬಹುದು.

ಆದರೆ ಈ ರೀತಿಯಾಗಿ ಉಡಿಕಿಯಾದ ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಮುತ್ತೈದೆಯ ಭಾಗ್ಯ ಸಿಗುವುದಿಲ್ಲ. ಶುಭ ಕಾರ್ಯಗಳಿಗೆ ಇವರನ್ನು ಆಹ್ವಾನಿಸುವುದಿಲ್ಲ. ಕಂಕಣವಾಡಿಯ ಹಾಲಸಿದ್ಧನಾಥ ದೇವತೆಯ ಪೂಜೆಯ ಹಕ್ಕು ಉಡಿಕೆಯ ಮಕ್ಕಳಿಗೆ ಇರುವುದಿಲ್ಲ. ಅವರು ಪಲ್ಲಕ್ಕಿ ಹೊರುವಂತಿಲ್ಲ ಮತ್ತು ಗದ್ದುಗೆ ಏರುವಂತಿಲ್ಲ. ಇಂದಿನ ಆಧುನಿಕ ಕಾಲದಲ್ಲಿ ಧಾರ್ಮಿಕ ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಉಡಿಕೆ ಮಾಡಿಕೊಂಡವರಿಗೆ ಮತ್ತು ಅವರ ಮಕ್ಕಳಿಗೆ ಅವಕಾಶಗಳು ಕಡಿಮೆ ಇವೆ. ಆದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಅವರಿಗೆ ಸಮಾನವಾದ ಅವಕಾಶಗಳನ್ನು ಸಮಾಜ ನೀಡಿದೆ ಎಂಬುದು ಗಮನೀಯ.

೪.೨.೨ ಧಾರ್ಮಿಕ ಆಚರಣೆಗಳು

೪.೨.೨.೧ ಭಂಡಾರ ಹಿಡಿಯುವುದು (ಬೊಟ್ಟು ಕೊಡುವುದು)

ಗ್ರಾಮದ ಪ್ರಮುಖ ದೇವತೆಗಳ ಜಾತ್ರೆ-ಉತ್ಸವಗಳ ಸಂದರ್ಭಗಳಲ್ಲಿ ಪಕ್ಕದ ಊರಿನ ಅಥವಾ ಬೇರೆ ಊರಿನ ವಾಲಗಗಳನ್ನು ಆಹ್ವಾನಿಸುವುದು ವಾಡಿಕೆ. ಇದಕ್ಕೆ 'ಬೊಟ್ಟು ಕೊಡುವುದು' ಎನ್ನುತ್ತಾರೆ. ಈ ರೀತಿಯ ಆಮಂತ್ರಣವನ್ನು ಸ್ವೀಕರಿಸುವುದಕ್ಕೆ 'ಭಂಡಾರ ಹಿಡಿಯುವುದು' ಎಂದು ಕರೆಯುತ್ತಾರೆ. ಅಂದರೆ ವಾಲಗಗಳನ್ನು ಆಮಂತ್ರಿಸುವ ಗ್ರಾಮದವರು ಅಥವಾ ಮುಖಂಡನು, ಆಹ್ವಾನಿತ ಮೇಳದ ನಾಯಕನಿಗೆ ಅಥವಾ ಸಹಚರ ಕಲಾವಿದನಿಗೆ, ಕಲೆ ಪ್ರದರ್ಶನಕ್ಕೆ ಬರಬೇಕೆಂದು ಕೇಳಿಕೊಂಡು ಅವರ ಕೈಗೆ ಭಂಡಾರವನ್ನು ಕೊಡುತ್ತಾರೆ. ಇದರಲ್ಲಿ ಎಲೆ, ಅಡಿಕೆ, ಕಾಯಿ, ಭಂಡಾರ ಇರುತ್ತದೆ. ಇದನ್ನೇ ಭಟ್ಟ ಕೊಡುವುದು ಏನ್ನುತ್ತಾರೆ. ಭಂಡಾರವನ್ನು ಹಿಡಿಯುವುದೆಂದರೆ ದೈವ ಪ್ರಮಾಣಕ್ಕೆ ಸಮಾನ. ಅವರು ತಪ್ಪದೇ ಕಾರ್ಯಕ್ರಮಕ್ಕೆ ಹೋಗುತ್ತಾರೆ.

ಬೊಟ್ಟ ಕೊಡುವವರು ಆಯಾ ಗ್ರಾಮದ ಹಾಲುಮತ ದೈವದ ದೇವಸ್ಥಾನಗಳಿಗೆ ಹೋಗಿ ಅಲ್ಲಿಯ ವಾಲಗಗಳನ್ನು ಆಮಂತ್ರಿಸುವುದು ಗಮನೀಯವಾದದ್ದು. ಅಂದರೆ ಭಟ್ಟ ಕೊಡುವ ಹಾಗೂ ಭಂಡಾರ ಹಿಡಿಯುವ ಎರಡು ಕಾರ್ಯಗಳು ಹಾಲುಮತ ದೈವಗಳ ಸನ್ನಿಧಿಯಲ್ಲಿಯೇ ನಡೆಯುವವು. ಆಲ್ಲಿ ವಾಲಗದವರನ್ನು ಆಮಂತ್ರಿಸುವುದೆಂದರೆ ಆ ದೈವವನ್ನೇ ಆಮಂತ್ರಿಸಿದ ಭಾವನೆ.

ಹಾಲುಮತ ಸಮುದಾಯದ ಆರಾಧನಾ ಕಲೆಗಳೆಲ್ಲ ದೈವಿ ಹಿನ್ನೆಲೆಯಲ್ಲಿ ಬೆಳೆದು ಬಂದಿದ್ದು, ಅವುಗಳ ಪ್ರದರ್ಶನ ಕೂಡ ದೈವಾರಾಧನೆಯ ಒಂದು ಭಾಗವಾಗಿದೆ. ಇಂಥ ದೇವತಾ ಆರಾಧನೆಯ ಕಾರ್ಯಗಳಲ್ಲಿ ಭಾಗಿಗಳಾಗುವುದರಿಂದ, ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಇವರಲ್ಲಿ ಇರುತ್ತದೆ. ಇವರನ್ನು ದೇವರ 'ಆಳುಮಕ್ಕಳು' ಎಂದು ಗುರುತಿಸಿ, ಆಹ್ವಾನಿತ ಗ್ರಾಮಸ್ಥರು ಗೌರವಾದರಗಳೊಂದಿಗೆ ಆತಿಥ್ಯ ನೀಡುತ್ತಾರೆ. ಮೊದಲು ವಾಲಗದವರಿಗೆ ಊಟ-ಉಪಚಾರ ಮಾಡಿದರೆ ಸಾಕಾಗಿತ್ತಿತ್ತು. ಇತ್ತೀಚಿಗೆ ಸಾಂಪ್ರದಾಯಿಕ ಆತಿಥ್ಯದೊಂದಿಗೆ ಒಂದಿಷ್ಟು ಸಂಭಾವನೆ ಕೊಡುವ ಪದ್ಧತಿ ಆರಂಭವಾಗಿದೆ. ಇದಕ್ಕೆ ಹಲವಾರು ಕಾರಣಗಳಿದ್ದಿರಬಹುದು. ಬೇರೆ ಊರುಗಳಲ್ಲಿನ ಮನೆಗಳಿಗೆ ಹೋದಾಗ ಅವರ ಜೊತೆ ಹೊಂದಾಣಿಕೆ ಮಾಡುವುದು ಕಷ್ಟವಾಗಿರಬೇಕು ಅಥವಾ ಅವರು ಬಡಿಸುವ ಆಹಾರ ಕ್ರಮಕ್ಕೆ ಹೊಂದಿಕೊಳ್ಳಲಾಗದಿರುವುದು ಅಥವಾ ತಾವು ಮಾಡುವ ಸೇವೆಗೆ ಗೌರವ ಧನವನ್ನೇ ಪಡೆಯಬೇಕೆಂಬ ಮುಂತಾದ ಕಾರಣಗಳಿರಬಹುದು.

೪.೨.೨.೨ ಶಿವಸ್ಥಾನ :

ಹಾಲುಮತ ದೇವತೆಗಳ ಆರಾಧನೆಯ ಮುಖ್ಯ ಪರಿಕರಗಳಾಗಿರುವ ಡೊಳ್ಳು, ತಾಳ, ಸತ್ತಿಗೆ, ನಿಶಾನೆ, ದೇವರ ಬೆಳ್ಳಿಯ ಬೆತ್ತ, ಭಂಡಾರದ ಚೀಲ ಮತ್ತು ಪೂಜಾರಿಯ ಹೆಗಲನ್ನೇರಿರುವ ಕಂಬಳಿ ಇವೆಲ್ಲವುಗಳನ್ನು ಒಳಗೊಂಡಿರುವ ಮೇಳಕ್ಕೆ 'ಶಿವಸ್ಥಾನ'ವೆನ್ನುವರು. ಭಕ್ತ ವರ್ಗದಲ್ಲಿ ಈ ಎಲ್ಲ ವಸ್ತುಗಳು ಶಿವನಿಂದ ನಿರ್ಮಿತವಾದವುಗಳೆಂಬ ಭಾವನೆ ಮತ್ತು ಇವುಗಳಲ್ಲಿ ಶಿವನೇ ನೆಲೆಸಿರುವುದಾಗಿ ನಂಬಿಕೆ. ಶಿವನು ವಾಸವಾಗಿರುವ ವಸ್ತುಗಳ ಸಮೂಹವೇ ಶಿವಸ್ಥಾನ. ದೇವರ ಜಾತ್ರೆ, ಉತ್ಸವಗಳಲ್ಲಿ ಶಿವಸ್ಥಾನವು ಪಲ್ಲಕ್ಕಿಯ ಮುಂದೆ ಇದ್ದು ಪ್ರಮುಖ ಪಾತ್ರ ನಿರ್ವಹಿಸುವುದು, ಇವುಗಳಿಂದಾಗಿಯೇ ಜಾತ್ರೆ, ಉತ್ಸವಗಳು ವಿಜೃಂಭಿಣೆಯಾಗಿ ಕಾಣುವುದು. ದೇವಕಾರ್ಯ, ಮದುವೆ, ವಾಸ್ತುಶಾಂತಿ ಮುಂತಾದ ಸಂದರ್ಭಗಳಲ್ಲಿ ಭಕ್ತರು ತಮ್ಮ ಮನೆಗಳಿಗೆ ಶಿವಸ್ಥಾನವನ್ನೇ ಒಯ್ಯುವರು.

ಭರತ ಖಂಡದಲ್ಲಿ ಪ್ರಾರಂಭದಿಂದಲೂ ಮೂರು ಪ್ರಮುಖ ಸಂಪ್ರದಾಯಗಳು ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಶಿವನನ್ನು ಆರಾಧಿಸುವ ಶೈವ ಸಂಪ್ರದಾಯ, ವಿಷ್ಣುವನನ್ನು ಆರಾಧಿಸುವ ವೈಷ್ಣವ ಸಂಪ್ರದಾಯ ಮತ್ತು ಆದಿಶಕ್ತಿಯನ್ನು ಆರಾಧಿಸುವ ಶಾಕ್ತ ಸಂಪ್ರದಾಯ. ಹಾಲುಮತದವರಿಗೆ ಶಿವನೇ ಮೂಲ ದೇವತೆ. ಹೀಗಾಗಿ ಹಾಲುಮತದವರೆಲ್ಲ ಶೈವರು. ಇದರ ಪ್ರತಿಬಿಂಬವೆಂಬತೆ ಹಾಲುಮತದ ದೈವಗಳಾದ ಬೀರಪ್ಪ, ಕರೇಸಿದ್ಧ, ಹಾಲಸಿದ್ಧ, ಅರಣ್ಯಸಿದ್ಧ, ಮಾಳಿಂಗರಾಯ, ಮಾಯವ್ವ, ಲಕ್ಕವ್ವ ಮುಂತಾದ ಎಲ್ಲ ದೇವತೆಗಳ ಕೊರಳಲ್ಲಿ ಶಿವನ ಪ್ರತಿರೂಪವಾದ ಲಿಂಗ (ಗುಂಡಗಡಗಿ) ಧಾರಣೆ ಮಾಡಿರುವುದನ್ನು ಕಾಣುತ್ತೇವೆ. ಹೀಗಾಗಿ ಹಾಲುಮತದ ಕೆಲವರು ಭಂಡಾರದ ಜೊತೆಗೆ ಶೈವ ಸಂಪ್ರದಾಯದ ವಿಭೂತಿಯನ್ನು ಲೇಪಿಸಿಕೊಳ್ಳುವುದರ ಜೊತೆಗೆ ಲಿಂಗ ಧರಿಸುವುದು ಸಾಮಾನ್ಯ. ಇವರು ತಮ್ಮ ಡೊಳ್ಳಿನ ಹಾಡುಗಳನ್ನು ಹೇಳುವ ಪ್ರಾರಂಭದಲ್ಲಿ ಶಿವಸ್ತುತಿಯನ್ನು ಮಾಡುವರು.

ಶಿವ ಶಿವ ನಮ್ಮ ಸಿದ್ಧಾಗ ಶರಣೆನ್ನುವಿನೋ

ಗುರುವ ರೇವಣ ಸಿದ್ಧಾಗ ಶರಣೆನ್ನುವಿನೋ

ಈ ರೀತಿಯಾಗಿ ಶಿವಸ್ತುತಿಯನ್ನು ಮಾಡಿದ ನಂತರವೇ ಡೊಳ್ಳಿನ ಹಾಡುಗಳನ್ನು ಹಾಡುವರು. ಈ ಹಾಡುಗಳಲ್ಲಿಯೂ ಶಿವನಿಗೆ ಹಲವು ಹೆಸರುಗಳಿದ್ದರು ಕೂಡ ಶಿವ ಒಬ್ಬವನೇ ಎನ್ನುವುದನ್ನು ಹಾಡುವರು.

ಏಸೊಂದ ಪರಿಯಲಿ ಕರದರ

ಶಾಸ್ತ್ರದಲ್ಲಿ ಶಿವ ಒಬ್ಬವನೋ

ಹಾಲುಮತ ದೇವತೆಗಳ ಗುಡಿಗಳಲ್ಲಿ ಪೂಜೆ ಮಾಡುವಾಗ ಪೂಜಾರಿಯು ಯಾವಾಗಲೂ ಹರಹರ... ಹರಹರ... ಎಂದು ಉಚ್ಚರಿಸುತ್ತ ಪೂಜೆ ಮಾಡುವನು. ಈ ಎಲ್ಲ ಸಂಗತಿಗಳನ್ನು ಅವಲೋಕಿಸಿದಾಗ ಹಾಲುಮತದ ಕುರುಬರಿಗೆ ಶಿವನೇ ಮೂಲವೆಂಬುದು ಕಂಡು ಬರುತ್ತದೆ. ಹೀಗಾಗಿ ಇಲ್ಲಿ ಎಲ್ಲವೂ ಶಿವಮಯ.

೪.೨.೨.೩ ಆಳುಮಕ್ಕಳ ಊಟ :

ದೈವಗಳ ಪೂಜೆ, ಹಬ್ಬ, ಹರಿದಿನ, ಜಾತ್ರೆ, ಉತ್ಸವ ಮುಂತಾದ ದೈವಿ ಸಂಬಂಧಿ ಕಾರ್ಯಗಳಲ್ಲಿ ನಿರತರಾದ ಪೂಜಾರಿಗಳನ್ನು ಒಳಗೊಂಡಂತೆ ದೈವಗಳ ಸೇವೆ ಮಾಡುವವರನ್ನು 'ದೇವರ ಆಳುಮಕ್ಕಳು' ಎಂದು ಕರೆಯುತ್ತಾರೆ. ಭಕ್ತರು, ದೇವರ ಕಾಯಕದಲ್ಲಿ ನಿರತರಾದ ಪೂಜಾರಿ ಮತ್ತು ಆಳುಮಕ್ಕಳನ್ನು ದೇವರ ಪ್ರತಿರೂಪವೆಂದು ಭಾವಿಸುತ್ತಾರೆ. ತಾವು ಮಾಡಿದ ನೈವೇದ್ಯವನ್ನು ಮೊದಲು ದೇವರಿಗೆ ಅರ್ಪಿಸಿ ನಂತರ ಆಳುಮಕ್ಕಳಿಗೂ ಉಣ್ಣಿಸಿದ ನಂತರವೇ ಅವರು ಪ್ರಸಾದವನ್ನು ಸ್ವೀಕರಿಸುತ್ತಾರೆ. ದೈವದ ನಂತರದ ಪ್ರಾಮುಖ್ಯತೆಯನ್ನು ಈ ಆಳುಮಕ್ಕಳಿಗೆ ಸಲ್ಲುತ್ತದೆ. ಆಯಾ ದೈವಗಳ ವಾರ, ಜಾತ್ರೆ, ಉತ್ಸವ ಹಾಗೂ ಹಬ್ಬಗಳಂದು ದೇವಸ್ಥಾನದಲ್ಲಿಯೇ ಅಥವಾ ತಮ್ಮ ಮನೆಗಳಲ್ಲಿಯೇ ಅಡಿಗೆ ಮಾಡಿ ಈ ದೇವರ ಮಕ್ಕಳಿಗೆ ಉಣ್ಣಿಸುವ ಪರಿಪಾಠವಿದೆ.

ಪೂಜಾರಿಗಳು ಮತ್ತು ಆಳುಮಕ್ಕಳು ಸೇರಿಕೊಂಡು ದೇವರ ಪಲ್ಲಕ್ಕಿಯನ್ನು ಭಕ್ತರಿರುವ ವಿವಿಧ ಊರುಗಳಿಗೆ ಹೊತ್ತು ಕೊಂಡು ಹೋಗುವ ಸಂಪ್ರದಾಯ ಬೀರಪ್ಪನ (ಕರೇಸಿದ್ಧ) ಆರಾಧನೆಯಲ್ಲಿದೆ. ಕೋಣಗನೂರಿನ ಕರೇಸಿದ್ಧನ ಪಲ್ಲಕ್ಕಿಯೊಂದಿಗೆ ಪೂಜಾರಿ ಮತ್ತು ಆಳುಮಕ್ಕಳು ರಾಯಬಾಗ ಪರಿಸರದಲ್ಲಿರುವ ಭಕ್ತರ ಮನೆಗೆ ಸಂಚರಿಸುವುದನ್ನು ಕಾಣುತ್ತೇವೆ. ಇವರು ತಿಂಗಳು ಗಟ್ಟಲೆ ಈ ಪ್ರದೇಶದಲ್ಲಿ ಸಂಚರಿ ಭಕ್ತರ ಮನೆ-ಮನೆಗೆ ಹೋಗಿ ಆತಿಥ್ಯವನ್ನು ಸ್ವೀಕರಿಸುತ್ತಾರೆ ಮತ್ತು ಆತಿಥ್ಯ ನೀಡಿದ ಭಕ್ತರಿಗೆ ಹಾರೈಕೆಯನ್ನು ಹಾಡುಗಳ ರೂಪದಲ್ಲಿ ನೀಡುತ್ತಾರೆ.

"ಆಳುಮಕ್ಕಳು ಉಂಡ ಮನ್ಯಾಗ ಹಾಲ ಕಾವಲಿ ಹರಿಯಲಿ

ಅಪ್ಪ ಪೂಜಾರಿ ಉಂಡ ಮನ್ಯಾಗ ತುಪ್ಪದ ಕಾವಲಿ ಹರಿಯಲಿ"[೧೬]

೪.೨.೨.೪ ಕರೀ ಕಟ್ಟುವುದು :

ಹಾಲುಮತ ದೈಗಳ ಜಾತ್ರೆಯು ಸಾಮಾನ್ಯವಾಗಿ ಮೂರು ದಿನಗಳವರೆಗೆ ನಡೆಯುತ್ತವೆ. ಮೊದಲ ದಿನ ಕರೀ ಕಟ್ಟುವುದು, ಎರಡನೇ ದಿನ ನೈವೇದ್ಯ (ಬೋನ ಹಿಡಿಯುವುದು), ಮೂರನೇ ದಿನ ನಿವಾಳಿಕೆ ಅಥವಾ ಕರೀ ಹರಿಯುವುದು ವಾಡಿಕೆ. ಆದಿಯಲ್ಲಿ ಕುರುಬರಲ್ಲಿ ಕಂಬಳಿಯೊಂದನ್ನು ಬಿಟ್ಟು ಬೇರೆ ವಸ್ತ್ರಗಳೇ ಇರುತ್ತಿರಲಿಲ್ಲ. ಕಂಬಳಿ ಮಾತ್ರ ಸದಾಕಾಲ ಪ್ರತಿಯೊಬ್ಬರ ಹೆಗಲ ಮೇಲೆ ಇರುತ್ತಿತ್ತು. ದೇವತೆಗಳ ಜಾತ್ರೆಗಾಗಿ ಅವರೆಲ್ಲ ದೇವಸ್ಥಾನದ ಪ್ರಾಂಗಣದಲ್ಲಿ ಒಂದುಗೂಡಿದಾಗ ನೆರಳಾಗಲಿ, ಆಶ್ರಯವಾಗಲಿ ಇರುತ್ತಿರಲಿಲ್ಲ. ಆ ದೇವಾಲಯಗಳೆಲ್ಲವೂ ಗಾತ್ರದಲ್ಲಿ ಚಿಕ್ಕದಾದವುಗಳಾಗಿದ್ದವು. ತಾತ್ಕಾಲಿಕವಾಗಿ ಹಂದರ ಹಾಕುವ ವ್ಯವಧಾನ(ಸಮಯ)ವು ಅವರಲ್ಲಿ ಇರುತ್ತಿರಲಿಲ್ಲ. ಹೀಗಾಗಿ ಅಲ್ಲಿ ನೆರೆದಂತ ಎಂಟತ್ತು ಜನ ಜಾಣರು ತಮ್ಮಲ್ಲಿರುವ ಎಂಟತ್ತು ಕಂಬಳಿಗಳ ಕರಿಗಳನ್ನು ಒಂದಕ್ಕೊಂದು ಬಿಗಿಯಾಗಿ ಕಟ್ಟಿ ಅದನ್ನೊಂದು ದೊಡ್ಡ ವಸ್ತ್ರವನ್ನಾಗಿ ಮಾಡಿ ತಮ್ಮ ಕುರಿಕಾಯುವ ಕೋಲುಗಳನ್ನೇ ಅದಕ್ಕೆ ಸಿಕ್ಕಿಸಿ ಮೇಲೆಬ್ಬಿಸಿ ನಿಲ್ಲಿಸಿ ಜಾತ್ರೆಗೆ ಬೇಕಾದ ಆಶ್ರಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದರು. ಇದುವೇ ಕರೀ ಕಟ್ಟುವುದು. ಇದು ಜಾತ್ರೆಗೆ ಆಗಮಿಸುವ ಭಕ್ತರಿಗೆ ನೆರಳು, ಅಡುಗೆ ಮತ್ತು ಊಟಕ್ಕೆ ಆಶ್ರಯವನ್ನೊದಗಿಸುತ್ತಿತ್ತು. ಜಾತ್ರೆಯ ಕೊನೆಯ ದಿನ ಸಂಜೆಗೆ ತಮ್ಮ-ತಮ್ಮ ಮನೆ-ಊರುಗಳಿಗೆ ತೆರಳುವಾಗ ಅವರು ಕರೀ ಕಟ್ಟಿದ್ದ ತಮ್ಮ-ತಮ್ಮ ಕಂಬಳಿಗಳನ್ನು ಬಿಚ್ಚಿಕೊಂಡು ಹೋಗುತ್ತಿದ್ದರು. ಇದು ಕರೀ ಹರಿಯುವುದಾಗಿತ್ತು.

ಆದರೆ ಕಾಲಾನಂತರದಲ್ಲಿ ಜಾತ್ರೆಗಾಗಿ ಹಂದರ-ಮಂಟಪಗಳನ್ನು ಹಾಕುವುದು ರೂಢಿಯಲ್ಲಿ ಬಂತು. ಕಂಬಳಿಯ ಕರೀಯನ್ನು ಕಟ್ಟಿ ಜಾತ್ರೆ ಮಾಡುವುದು ತೆರೆಮರೆಗೆ ಸರಿಯಿತು. ಆದರೂ ಇಂದಿಗೂ ಅದು ಗತಕಾಲದ ಅಸ್ತಿತ್ವವನ್ನು ಅರುಹುತ್ತದೆ. ದೇವತೆಯ ಜಾತ್ರೆಗೆ ಕರೀಕಟ್ಟಿದಾಗ ಊರ ಜನರು ಬೇರೆ ಊರುಗಳಿಗೆ ಹೋಗುವಂತಿಲ್ಲ ತಮ್ಮ ಊರಿನ ಗಡಿಯನ್ನು ದಾಟುವಂತಿಲ್ಲ. ಯಾವುದೇ ಚಕ್ರಗಳು ಚಲಿಸುವಂತಿಲ್ಲ, ಬೀಸು ಕಲ್ಲನ್ನು ಒಳಗೊಂಡಂತೆ ಯಾವುದೇ ವಾಹನಗಳ ಗಾಲಿಗಳು ಕೂಡ ತಿರುಗು (ಚಲಿಸು)ವಂತಿಲ್ಲ. ಒಲೆಗಳು ಊರಿಯು (ಅಡಿಗೆ ಮಾಡು)ವಂತಿಲ್ಲ. ಕಾರಣವಿಷ್ಟೇ ಊರಿನ ಎಲ್ಲರೂ ತಮ್ಮ ಕೆಲಸ ಕಾರ್ಯಗಳನ್ನು ಜಾತ್ರೆ ಸಮಯದಲ್ಲಿ ಬದಿಗಿಟ್ಟು ಸಂಪೂರ್ಣವಾಗಿ ದೇವತಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿ ಎಂಬುದಾಗಿದೆ. ಬೇರೆ ಊರುಗಳಿಂದ ಜಾತ್ರೆಗೆ ಆಗಮಿಸಿದ ಭಕ್ತರು ಕರೀ ಹರಿದ ನಂತರವೇ ತಮ್ಮ ಊರುಗಳಿಗೆ ತೆರಳಬೇಕೆಂಬ ಪದ್ಧತಿ ಇರುವುದು.

"ಕರಿಕಟ್ಟುವುದೆಂದರೆ ದೇವರ ಜಗಲಿಯ ಮೇಲೆ ಕರಿದ ಪದಾರ್ಥಗಳಾದ ಕರಚಿಕಾಯಿ, ತರಗ, ಹಪ್ಪಳ ಮುಂತಾದ ಆಹಾರ ಪದಾರ್ಥಗಳನ್ನು ದೇವರ ಜಗಲಿಯ ಮೇಲೆ ಕಟ್ಟುವುದಾಗಿದೆ"[೧೭] ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರನ ಜಾತ್ರೆಯಲ್ಲಿ ಊರಿನ ಎಲ್ಲ ಜಾತಿಯ ಜನರು ಈ ಕಟ್ಟುನಿಟ್ಟಾದ ನಿಯಮವನ್ನು ಪಾಲಿಸುವುದು ವಿಶೇಷವೆಂದು ಕಂಡು ಬರುತ್ತದೆ. ಜಾತ್ರೆಯ ಕೊನೆಯ ದಿನ ಮುಂಜಾನೆ ವಿವಿಧ ಊರುಗಳಿಂದ ಆಗಮಿಸಿದ ವಾಲಗದವರು ಡೊಳ್ಳು ಬಾರಿಸುತ್ತಿರುವಾಗ ಅರಣ್ಯಸಿದ್ಧನ ಪಲ್ಲಕ್ಕಿ ಗುಡಿಯನ್ನು ಪ್ರದಕ್ಷಿಣೆ ಹಾಕುವುದು. ಆಗ ಭಕ್ತರು ಖಾರಿಕ, ಕೊಬ್ಬರಿ, ಬಾಳೆಹಣ್ಣು, ಭಂಡಾರಗಳನ್ನು ಪಲ್ಲಕ್ಕಿ ಮತ್ತು ದೇವಾಲಯದ ಮೇಲೆ ಹಾರಿಸುವ ಮೂಲಕ ಜಾತ್ರೆಯ ಕರೀ ಹರಿಯುತ್ತಾರೆ. ಕಂಕಣವಾಡಿಯ

ಹಾಲಸಿದ್ಧನಾಥ ಜಾತ್ರೆಯೂ ದೇವಸ್ಥಾನ ಬಾಗಿಲಿಗೆ ತಳಿರು-ತೋರಣಗಳನ್ನು ಕಟ್ಟುವ ಮೂಲಕ ಕರೀ ಕಟ್ಟುವುದು ಮತ್ತು ಜಾತ್ರೆಯ ಕೊನೆಯ ದಿನ ಇಟ್ಟಪ್ಪ ದೇವಾಲಯದಿಂದ ಹಾಲಸಿದ್ಧನ ಪಲ್ಲಕ್ಕಿ ಮೂಲ ದೇವಸ್ಥಾನಕ್ಕೆ ಆಗಮಿಸಿದಾಗ ಊರ ದೇಸಾಯಿಯವರು ಮಹಾದ್ವಾರದ ಗೋಡೆಗೆ ತೆಂಗಿನಕಾಯಿ ಒಡೆದು ಜಾತ್ರೆಯ ಕರೀ ಹರಿಯುವರು.

೪.೨.೨.೫ ಚಾಂಗಬೊಲೋ :

ಹಾಲುಮತದ ಪ್ರಮುಖ ದೇವತೆಗಳ ಜಾತ್ರೆಗಳಿಗೆ ವಿವಿಧ ಊರುಗಳಿಂದ ಭಕ್ತರು ಆಗಮಿಸುತ್ತಿದ್ದರು. "ಜಾತ್ರೆಗಳಿಗೆ ಹೋಗುವಾಗ ಜನರು ವೇಳೆ ಕಳೆಯಲು ಒಮ್ಮೊಮ್ಮೆ ಅಲ್ಲಸಲ್ಲದ ಶಬ್ದಗಳನ್ನು ಬಳಸುತ್ತಿದ್ದರು. ಅಸಹ್ಯಕರವಾದ ಸಂಗತಿಗಳ ಬಗ್ಗೆ ಮಾತನಾಡುತ್ತಿದ್ದರು. ಅಂತಹ ಪ್ರಸಂಗಗಳಲ್ಲಿ ತಿಳುವಳಿಕೆಯುಳ್ಳ ಕೆಲವು ಹಿರಿಯರು ಹೀಗೆ ಹೇಳುತ್ತಿದ್ದರು. ತಸ ವಾಯಿಟ ಬೊಲೊ ನಕೋರೆ-ಚಾಂಗ್ಲಾ ಬೊಲೊ ಎಂದು. ಚಾಂಗ್ಲಾ ಬೊಲೋ ಎನ್ನುವ ಪದದ ಅಪಭ್ರಂಶವೇ ಚಾಂಗಬಲೋ ಎಂದಾಗಿದೆ. ದೇವಸ್ಥಾನಗಳಿಗೆ ಜಾತ್ರೆಗೆ ಹೋಗುವಾಗ ಕೆಟ್ಟಮಾತುಗಳನ್ನಾಡಬಾರದು. ಒಳ್ಳೇ ಮಾತುಗಳನ್ನೇ ಆಡಬೇಕು ಎಂಬುದು ಈ ಚಾಂಗಬೊಲೋ ಪದದ ಒಳಗೆ ಅಡಗಿದ ಅರ್ಥ."[೧೮] ಈ ಹಿನ್ನೆಲೆಯಲ್ಲಿ ಜಾತ್ರೆಗೆ ತೆರಳುವ ಭಕ್ತರು ದೇವರ ಹೆಸರಿನ ಮುಂದೆ ಚಾಂಗಬೊಲೊ ಎಂದು ಉಗ್ಗಡಿಸುವರು.

'ಹಾಲೂ ಹಣ್ಣೂ ನೀಡುವಂಥಾ
ಭಾಗ್ಗೇವ ಕೊಡೊ ಹೊನ್ನಸಿದ್ಧಾ
ಕ್ವಾಣೂರು ಕರಿಸಿದ್ಧಾ
ಹಾಲ್ವೊಳಿ ಮಾಯವ್ವಾ,
ಕಡೋಲಿ ಇಟ್ಟಪ್ಪಾ ...... ಚಾಂಗ ಭಲೋ'

೪.೨.೨.೬ ಹಗಲು ದೀವಟಿಗೆ ಸೇವೆ :

ಜಾತ್ರೆ ಉತ್ಸವಗಳಿಗೆ ತೆರಳುವ ಭಕ್ತರು ತಮ್ಮ ಮನೆಗಳಿಂದ ಹಗಲಿನಲ್ಲಿಯೇ ದೀವಟಿಗೆಗಳನ್ನು ಹೊತ್ತಿಸಿಕೊಂಡು ನಂದದಂತೆ (ಆರದಂತೆ) ದೇವಸ್ಥಾನದವರೆಗೆ ನಡೆಯುತ್ತಾ ಬಂದು ಸೇವೆ ಸಲ್ಲಿಸುವ ಹರಕೆಯ ಪದ್ಧತಿಯೇ ಹಗಲು ದಿವಟಿಗೆ ಸೇವೆ. ಇಂದು ಈ ಆಚರಣೆ ನಮಗೆ ಕಂದಾಚಾರವಾಗಿ ಕಂಡು ಬಂದರೂ ಕೂಡ ಈ ಆಚರಣೆಯ ಹಿಂದೆ ವೈಜ್ಞಾನಿಕ ಸತ್ಯ ಅಡಗಿರುವುದು ಕಂಡು ಬರುತ್ತದೆ. ಅದೇನೆಂದರೆ, "ಹಿಂದಿನ ಕಾಲದಲ್ಲಿ ಜನರು ಕೇವಲ ಊರುಗಳಲ್ಲಿ ವಾಸಿಸುತ್ತಿದ್ದರು. ಅದರೆ ಅವರ ದೇವಸ್ಥಾನಗಳು ಊರಿನಿಂದ ದೂರದ ಬೆಟ್ಟ-ಗುಡ್ಡಗಳಲ್ಲಿ ಇರುತ್ತಿದ್ದವು. ಅಲ್ಲಿಯವರೆಗೆ ಪ್ರಯಾಣಿಸುವ ದಾರಿ ಬಹಳ ದುರ್ಗಮ ಅರಣ್ಯ ಪ್ರದೇಶವಾಗಿರುತ್ತಿತ್ತು. ಹೀಗಾಗಿ ಅವರು ಪ್ರಯಾಣಿಸುವ ಮಾರ್ಗ ಮಧ್ಯದ ಅಡವಿಗಳಲ್ಲಿ ಕ್ರೂರ ಪ್ರಾಣಿಗಳು ಅವರ ಮೇಲೆ ದಾಳಿಮಾಡುವ ಸಂಭವ ಹೆಚ್ಚಾಗಿರುತ್ತಿತ್ತು. ಇಂತಹ ಸಮಸ್ಯೆಗಳನ್ನು ಅರಿತ ಕುಲದೈವದ ಪ್ರಮುಖರು ಭಕ್ತ ವೃಂದದಲ್ಲಿಯ ಆರ್ಥಿಕವಾಗಿ, ದೈಹಿಕವಾಗಿ ಸಬಲರಿರುವ ವ್ಯಕ್ತಿಗಳಿಗೆ ಹಗಲಿನಲ್ಲಿಯೂ ದಿವಟಿಗೆಗಳನ್ನು ಹಚ್ಚಿಕೊಂಡು ಸಮೂಹದ ಮುಂದೆ ನಡೆಯುತ್ತ ಅವರನ್ನು ರಕ್ಷಿಸುತ್ತ ಬರುವ ಜವಾಬ್ದಾರಿಯನ್ನು ಅವರಿಗೆ ನೀಡಿದ್ದರು."[೧೯]

ಎಷ್ಟೇ ಭಯಂಕರವಾದ ಕ್ರೂರ ಪ್ರಾಣಿಯೂ ಕೂಡ ಬೆಂಕಿಗೆ ಹೆದರುತ್ತದೆ. ಹೀಗಾಗಿ ಕೈಯಲ್ಲಿ ದಿವಟಿಗೆ ಹಿಡಿದು ಮುನ್ನಡೆಯುವ ವ್ಯಕ್ತಿ ತನ್ನ ಹಿಂದಿನ ಗುಂಪಿಗೆ ಸಂರಕ್ಷಕನಾಗಿರುವನು. ಇವನ ಕೈಯಲ್ಲಿರುವ ದಿವಟಿಗೆಯಿಂದಾಗಿ ಇವನ ಮತ್ತು ಇವನ ಗುಂಪಿನ ಮೇಲೆ ಯಾವುದೇ ಕ್ರೂರ ಪ್ರಾಣಿಗಳು ದಾಳಿ ಮಾಡುತ್ತಿರಲಿಲ್ಲ. ಹೀಗಾಗಿ ಹಾಲುಮತದ ಉತ್ಸವಗಳು ನಿರ್ವಿಘ್ನವಾಗಿ ವಿಜೃಂಭಣೆಯಿಂದ ನಡೆಯುತ್ತಿದ್ದವು. ಈ ದಿವಟಿಗೆ ಸೇವೆಯ ಆರಂಭ ಪೂರ್ವದಲ್ಲಿ ಅದೆಷ್ಟೋ ಸಲ ಜಾತ್ರೆ, ಉತ್ಸವಗಳಿಗೆ ತೆರಳುವ ಭಕ್ತರ ಮೇಲೆ ಕ್ರೂರ ಪ್ರಾಣಿಗಳ ದಾಳಿಯಾಗಿ ಅನಾಹುತ ಸಂಭವಿಸಿದ್ದವು. ಇಂತಹ ದಾಳಿಗಳನ್ನು ತಡೆಗಟ್ಟುವ ಮುಂದಾಲೋಚನೆಯ ಕ್ರಮವಾಗಿ ಹಗಲು ದಿವಟಿಗೆಯ ಸೇವೆ ಆರಂಭಗೊಂಡಿತು. ಉದಾಹರಣೆ ಕಾಡು ಕಳ್ಳಿಗಳ ಮಧ್ಯೆ ನೆಲೆಗೊಂಡ ಯಲ್ಲಾರಟ್ಟಿಯ ಅರಣ್ಯಸಿದ್ಧನ ಜಾತ್ರೆ ನಿರ್ವಿಘ್ನವಾಗಿ ಜರುಗಲು ಅಂದು ಹಗಲು ದಿವಟಿಗೆಯ ಸೇವೆ ಅತೀ ಅವಶ್ಯಕವಾಗಿತ್ತು. ಈ ದಿವಟಿಗೆಗಳೂ ಮಾರ್ಗ ಮಧ್ಯದಲ್ಲಿ ನಂದಬಾರದು. ಒಂದು ವೇಳೆ ನಂದಿದರೆ ಅದು ಅಪಶಕುನ. ಏಕೆಂದರೆ ಆ ಸಮಯದಲ್ಲಿ ಕ್ರೂರ ಮಗೃಗಳೂ ದಾಳಿ ಮಾಡಿ ಅನಾಹುತಗಳು ಸಂಭವಿಸಿದರೆ, ಪ್ರಾಣಾಪಾಯವಾದರೆ ಉತ್ಸವವು ಶೋಕಸಾಗರವಾಗುತ್ತಿತ್ತು. ಹೀಗಾಗಿ ದಿವಟಿಗೆ ನಂದದೆ ಇರುವಂತೆ ನೋಡಿಕೊಳ್ಳುವುದು ದಿವಟಿಗೆ ಹಿಡಿದ ನಾಯಕನ ಜವಾಬ್ದಾರಿಯಾಗಿತ್ತು. ಅಂದು ಹೀಗೆ ವಹಿಸಿಕೊಂಡ ಈ ಜವಾಬ್ದಾರಿ ತಲೆ-ತಲಾಂತರದಿಂದ ಮುಂದುವರೆದುಕೊಂಡು ಇಂದಿಗೂ ಕೂಡ ಆಚರಣೆಯಲ್ಲಿದೆ.

ಈ ರೀತಿಯ ಸೇವೆ ಮಾಡುವವರಿಗೆ ದೇವಸ್ಥಾನದ ವತಿಯಿಂದ ಭೂಮಿಯನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು. ಅಂತಹ ಭೂಯಿಯನ್ನು ಪಡೆದುಕೊಂಡ ವ್ಯಕ್ತಿಗಳನ್ನು ಪ್ರತಿ ದೇವಸ್ಥಾನದಲ್ಲಿಯೂ ಕಾಣಬಹುದು. ಉದಾಹರಣೆ ಬೆಕ್ಕೇರಿ ಲಕ್ಕವ್ವನ ದೇವಸ್ಥಾನದ ದಿವಟಿಗೆ ಸೇವೆ ಮಾಡುವವರಿಗೆ ದೇವಸ್ಥಾನದ ವತಿಯಿಂದ ಭೂಮಿಯನ್ನು ನೀಡಲಾಗಿದೆ. ದಿವಟಿಗೆ ಸೇವೆಯ ಮುಖ್ಯ ಉದ್ದೇಶ ಬೆಳಕನ್ನು ನೀಡುವುದಲ್ಲ. ದುರ್ಗಮ ಪ್ರದೇಶದಲ್ಲಿ ಸಾಗುವ ಭಕ್ತರಿಗೆ ಬೆಂಕಿಯನ್ನು ಮುಂದಿಟ್ಟುಕೊಂಡು ಕ್ರೂರ ಪ್ರಾಣಿಗಳಿಂದ ಜೀವ ರಕ್ಷಿಸುವ ತಂತ್ರಗಾರಿಕೆಯ ಭಾಗವಾಗಿತ್ತು. ಆದರೆ ಈ ಹಿನ್ನೆಲೆಯ ಅರಿವಿರದ ಕೆಲವು ಭಕ್ತರು ದಿವಟಿಗೆ ಸೇವೆಯನ್ನು, ಗ್ಯಾಸ (ಲ್ಯಾಟ್ರಿನ್) ಸೇವೆಯಾಗಿ ಪರಿವರ್ತಿಸಿದ್ದಾರೆ. ಹೀಗಾಗಿ ಸದ್ಯ ಈ ಆಚರಣೆಯೂ ಮೂಲ ಆಚರಣೆಯ ಆರಂಭಕ್ಕೆ ಪೂರಕವಾದುದಲ್ಲವೆಂದು ತರ್ಕಿಸಬಹುದು.

೪.೨.೨.೭ ದಿಡ ನಮಸ್ಕಾರ (ದಂಡವತ) :

ಹಾಲುಮತ ದೈವಗಳ ಆರಾಧನೆಯ ಅಂಗವಾಗಿ ಕಂಡು ಬರುವ ಸೇವಾ ಪದ್ಧತಿಗಳಲ್ಲಿ ದಿಡನಮಸ್ಕಾರ ಅಥವಾ ದಂಡವತ ಹಾಕುವುದು ಕೂಡ ಒಂದು. ದಿಡನಮಸ್ಕಾರ ಹಾಕುವ ಪದ್ಧತಿಯನ್ನು ಒಂದು ಕಂದಾಚಾರವೆಂದು ಪರಿಗಣಿಸಲಾಗಿದೆ. ಆದರೆ ಈ ಪದ್ಧತಿಯ ಆಚರಣೆಯ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಕೆದಕಿದಾಗ, ಇದಕ್ಕೂ ಕೂಡ ಒಂದು ವೈಜ್ಞಾನಿಕ ಸತ್ಯಾಂಶವಿರುವುದು ಕಂಡು ಬರುತ್ತದೆ. ಅದೇನೆಂದರೆ ಪ್ರಾಚೀನ ಕಾಲದಲ್ಲಿ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದವರಿಗೆ ಇದೊಂದು ಔಷಧಿರಹಿತ ಚಿಕಿತ್ಸೆಯಾಗಿತ್ತು. ಹೇಗೆಂದರೆ ದೈಹಿಕ ಅಥವಾ ಮಾನಸಿಕ ಸಂಕಷ್ಟಗಳಿಗೆ ಸಿಲುಕಿದ ವ್ಯಕ್ತಿಗೆ ದೇವತೆಯ ಹೆಸರಿನಲ್ಲಿ ದೈಹಿಕ ಶ್ರಮವನ್ನು ಮಾಡಿಸುವುದೇ ಇದರ ಹಿಂದಿನ ಉದ್ದೇಶವಾಗಿತ್ತು.

ಯೋಗವಿಜ್ಞಾನವು ಕೂಡ ಪ್ರತಿನಿತ್ಯ ದೈಹಿಕ ಶ್ರಮವಹಿಸುವಂತೆ ಸಲಹೆ ನೀಡುತ್ತದೆ. ಉದಾಹರಣೆಗೆ ಸೂರ್ಯನಮಸ್ಕಾರ, ಶಿರಸಾಷ್ಟಾಂಗ ನಮಸ್ಕಾರ ಮುಂತಾದವು. ದೈಹಿಕ ಮತ್ತು ಮಾನಸಿಕ ಅನಾರೋಗ್ಯದಿಂದ ಬಳಲುತ್ತಿದ್ದವರಿಗೆ ದೇವರ ಹೆಸರಿನಲ್ಲಿ ಈ ಸೇವೆಯನ್ನು ಮಾಡುವ ಮೂಲಕ ಅವರು ಆರೋಗ್ಯಪೂರ್ಣರಾಗುತ್ತಿದ್ದರು. ಈ ಸೇವೆಯನ್ನು ಮಾಡುವ ಸಂದರ್ಭದಲ್ಲಿ ಅವರಿಗೆ ತಮ್ಮ ಶ್ರಮದ ಬಗ್ಗೆ ಅರಿವಿರದೇ ಅವರು ದೇವತೆಯನ್ನು ತೃಪ್ತಿಪಡಿಸುವ ಮೂಲಕ ಅವನ ಕೃಪಾಶೀರ್ವಾದದಿಂದ ತಾನು ಗುಣಮುಖನಾಗುತ್ತೆನೆಂಬ ಭಾವನೆ ಇರುತ್ತಿತ್ತು. ಆದರೆ ಪ್ರತಿನಿತ್ಯ ದೇವರ ಹೆಸರಿನಲ್ಲಿ ಮಾಡುವ ಈ ದೈಹಿಕ ಶ್ರಮದಿಂದ ಎಲ್ಲ ದೈಹಿಕ ಮತ್ತು ಮಾನಸಿಕ ನ್ಯೂನ್ಯತೆಗಳು ನಿವಾರಣೆಯಾಗುತ್ತಿದ್ದವು.

ದಂಡವತ ಹಾಕುವವರು ತಮ್ಮ ಮನೆಯಿಂದ ದೇವಸ್ಥಾನದವರೆಗೆ, ಇನ್ನೂ ಕೆಲವರು ದೇವಸ್ಥಾನದ ಸಮೀಪದಲ್ಲಿರುವ ಯಾವುದಾದರೂ ಜಲ ಮೂಲದಿಂದ ಅಂದರೆ, ಕೆರೆ, ಬಾವಿ, ಹಳ್ಳ-ಕೊಳ್ಳ, ನದಿಗಳಿಂದ ದೇವಸ್ಥಾನದವರೆಗೆ ದಿಡನಮಸ್ಕಾರ ಹಾಕುತ್ತಾರೆ. ದಿಡನಮಸ್ಕಾರ ಹಾಕುವ ಪೂರ್ವದಲ್ಲಿ ಅವರು ಸ್ನಾನ ಮಾಡಿ ಶುಚಿಯಾಗಿ ಒದ್ದೆ (ಮಡಿ) ಬಟ್ಟೆಯಲ್ಲಿಯೇ ದೇವಸ್ಥಾನದವರೆಗೆ ದಿಡನಮಸ್ಕಾರ ಹಾಕುವರು. ದಿಡನಮಸ್ಕಾರವೆಂದರೆ 'ಶರೀರವನ್ನು ಭೂಮಿಗೆ ಸಮಾಂತರವಾಗಿ (ದೇವರ ಗುಡಿಯತ್ತ) ಸಾಷ್ಟಾಂಗ ನಮಸ್ಕಾರ ಮಾಡಿ, ಕೈಯಲ್ಲಿರುವ ಚಿಕ್ಕ ಕೋಲಿನಿಂದ ನೆಲದ ಮೇಲೆ ಒಂದು ಗೆರೆಯನ್ನು ಎಳೆಯುವರು, ನಂತರ ಮೇಲೆದ್ದು ಪುನಃ ತಾವೆಳೆದ ಗೆರೆಯ ಮೇಲೆ ನಿಂತು ಪುನಃ ಅದೇ ರೀತಿ ನಮಸ್ಕಾರ ಮಾಡುತ್ತ ದೇವರ ಗುಡಿಯ ತನಕ ಮುಟ್ಟುವುದೇ ದಿಡನಮಸ್ಕಾರ'. ದಿಡನಮಸ್ಕಾರ ಮಾಡುವಾಗ ದೇಹದ ಅಂಗಾಂಗಳೆಲ್ಲ ಚಟುವಟಿಕೆಗೊಳ್ಳುವವು. ಆ ಮೂಲಕ ಶರೀರದ ಎಲ್ಲ ನರನಾಡಿಗಳಲ್ಲಿ ರಕ್ತ ಸಂಚಲನೆ ಸುಗಮವಾಗುತ್ತಿತ್ತು ಮತ್ತು ಒದ್ದೆ ಮೈಯಲ್ಲಿ ನಮಸ್ಕಾರ ಮಾಡುವಾಗ ಭೂಮಿಯ ಮಣ್ಣು ಅವರ ಶರೀರಕ್ಕೆ ಅಂಟಿಕೊಂಡು ಮಣ್ಣಿನಲ್ಲಿರುವ ಲವಣಾಂಶಗಳಿಂದ ಚಿಕ್ಕ-ಪುಟ್ಟ ಚರ್ಮ ಸಂಬಂಧಿ ಕಾಯಿಲೆಗಳು ಗುಣಮುಖವಾಗುತ್ತಿದ್ದವು. ಆರಂಭದ ದಿಡನಮಸ್ಕಾರವು ಆಧುನಿಕ ಮಡ್‌ಬಾತ್‌ವಾಗಿ ಪರಿವರ್ತನೆಗೊಂಡಿರುವುದನ್ನು ಉಲ್ಲೇಖಿಸಬಹುದು.

ದಿಡನಮಸ್ಕಾರ ಮಾಡುವಾಗ ಪ್ರತಿ ಒಂದು ನಮಸ್ಕಾರಕ್ಕೊಮ್ಮೆ ಕಣ್ಣಿಗೆ ತಂಬಿಗೆಯಲ್ಲಿರುವ ನೀರಿನಲ್ಲಿ ಅದ್ದಿದ ನಿಂಬೆಹಣ್ಣನ್ನು ಎರಡು ಕಣ್ಣಿಗೆ ಹಚ್ಚುತ್ತಾರೆ. ಇದು ದೃಷ್ಟಿದೋಷವನ್ನು ನಿವಾರಿಸುತ್ತದೆ. ಇದೆಲ್ಲವನ್ನು ಗಮನಿಸಿದಾಗ ಒಬ್ಬ ವ್ಯಕ್ತಿಗೆ ಇರುವ ದೈಹಿಕ ಅಥವಾ ಮಾನಸಿಕ ಅನಾರೋಗ್ಯ ಗುಣಮುಖವಾಗಲು ಬೇಕಾಗುವ ಚಿಕಿತ್ಸೆಯನ್ನು ಈ ಪದ್ಧತಿಯ ಮೂಲಕ ಗುಣಪಡಿಸುವ ಉದ್ದೇಶವಿತ್ತೆಂಬುದು ಕಂಡು ಬರುತ್ತದೆ. ಈ ರೀತಿಯ ದಿಡನಮಸ್ಕಾರವನ್ನು ದೇವರ ವಾರ, ಅಮವಾಸ್ಯೆ, ಹುಣ್ಣಿಮೆ, ಉತ್ಸವ, ಜಾತ್ರೆಗಳಂದು ಹರಕೆ ಹೊತ್ತವರು ಹಾಕುತ್ತಾರೆ. ಇದನ್ನು ಕೆಲವರು ಒಂದೇ ಸಲ ಹಾಕುವರು. ಇನ್ನೂ ಕೆಲವರು ಮೂರು ಅಥವಾ ಐದು ವಾರ, ಅಮವಾಸ್ಯೆ, ಹುಣ್ಣಿಮೆ, ಜಾತ್ರೆಗಳಂದು ಅಥವಾ ಅವರವರ ಇಷ್ಟಾರ್ಥಗಳು ಸಿದ್ಧಿಸುವವರೆಗೆ ಹಾಕುವರು. ಇದು ದಿಡನಮಸ್ಕಾರ ಹಾಕುವುದರ ಹಿಂದೆ ಇರುವ ನೈಜ ಉದ್ದೇಶ ಇರಬಹುದು. ಆದರೆ ಇಂದು ಅದು ಅವರವರ ವೈಯಕ್ತಿಕ ಆಸೆ-ದುರಾಸೆಗಳ ಈಡೇರಿಕೆಗಾಗಿ ಆಚರಣೆಯಲ್ಲಿದೆ. ಉದಾಹರಣೆಗೆ ನಾನು ಭೂಮಿ ಸಂಪಾದನೆ ಮಾಡಿದರೆ, ಸರ್ಕಾರಿ ಸೇವೆಗೆ ಆಯ್ಕೆಯಾದರೆ,

ಚುನಾವಣೆಯಲ್ಲಿ ಗೆದ್ದರೆ ಇತ್ಯಾಗಿ. ಇತ್ತೀಚಿಗೆ ಶಾಸಕರೊಬ್ಬರು ಚುನಾವಣೆಯಲ್ಲಿ ಆಯ್ಕೆಯಾದಾಗ ಕೆಲವು ಅಭಿಮಾನಿಗಳು ದೇವರಿಗೆ ದಿಡನಮಸ್ಕಾರ ಹಾಕಿದನ್ನು ಉದಾಹರಿಸಬಹುದು.

೪.೨.೨.೮ ಉರುಳು ಸೇವೆ :

ದಂಡವತ ನಮಸ್ಕಾರದಂತೆ ಇರುವ ಇನ್ನೊಂದು ದೈಹಿಕ ಸೇವೆ ಉರುಳುಸೇವೆ. ದಂಡವತ ನಮಸ್ಕಾರದ ಸೇವೆಗಿಂತಲೂ ಹೆಚ್ಚು ಕಷ್ಟದಾಯಕ ಆದರೆ ಶರೀರಕ್ಕೆ ಹೆಚ್ಚು ಪರಿಣಾಮಕಾರಿಯಾದ ಸೇವೆಯಾಗಿದೆ. ಇದನ್ನು ದೇವಸ್ಥಾನದ ಪ್ರಾಂಗಣ ಅಥವಾ ಪೌಳಿಯಲ್ಲಿ ಮಾಡುವರು. ಇದು ಹೆಚ್ಚು-ಕಡಿಮೆ ದಿಡನಮಸ್ಕಾರದ ಲಕ್ಷಣಗಳನ್ನು ಹೊಂದಿದೆ. ದಿಡನಮಸ್ಕಾರ ಅಥವಾ ಉರುಳಸೇವೆಗಳೆಲ್ಲವನ್ನು ಬೆಳಗಿನ ಬ್ರಾಹ್ಮಿ ಸಮಯದಲ್ಲಿಯೇ ಮಾಡುವರು. ಅದಕ್ಕೆ ಕಾರಣ ಆ ಸಮಯದಲ್ಲಿ ಪರಿಶುದ್ಧವಾದ ಆಮ್ಲಜನಕ (ಓಜೋಸ್) ಹೇರಳವಾಗಿ ದೊರೆಯುತ್ತದೆ.

೪.೨.೨.೯ ಗುಡಿಯ ಮೇಲಿಂದ ಚಿಕ್ಕ ಮಕ್ಕಳನ್ನು ಹಾರಿಸುವುದು :

ಮಕ್ಕಳಾಗದ ಭಕ್ತರು ಮಕ್ಕಳನ್ನು ಕರುಣಿಸುವಂತೆ ದೇವರಲ್ಲಿ ಹರಕೆ ಹೊತ್ತುಕೊಂಡಿರುತ್ತಾರೆ. ದೇವರು ಅಂತವರಿಗೆ ಮಕ್ಕಳ ಭಾಗ್ಯವನ್ನು ಕರುಣಿಸಿದಾಗ ಅಂತ ಮಕ್ಕಳನ್ನು ಅವರು ದೇವಸ್ಥಾನ ಮೇಲಿಂದ ಹಾರಿಸುವ ಮೂಲಕ ತಮ್ಮ ಹರಕೆಯನ್ನು ತೀರಿಸುತ್ತಾರೆ. ಈ ರೀತಿಯಾಗಿ ಮಕ್ಕಳನ್ನು ದೇವಸ್ಥಾನದ ಮೇಲಿಂದ ಹಾರಿಸುವ ಆಚರಣೆಯ ಹಿಂದೆ ಬಹುಶಃ ಚಿಕ್ಕ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಪ್ರಯತ್ನವಾಗಿರಬಹುದು. ದೇವರ ಆಶಿರ್ವಾದದಿಂದ ತಮ್ಮ ಮಕ್ಕಳು ರೋಗ-ರುಜಿನಗಳಿಗೆ ಬಲಿಯಾಗದೆ ಆರೋಗ್ಯವಂತರಾಗಿ ಬೆಳೆಯಲಿ ಎಂಬ ಭಾವನೆಯ ಹಿನ್ನೆಲೆಯೂ ಇರಬಹುದು. ದೇವರ ವಾರ, ಜಾತ್ರೆ, ಉತ್ಸವಗಳ ಸಮಯದಲ್ಲಿ ಈ ಪದ್ಧತಿಯನ್ನು ಆಚರಿಸಲಾಗುತ್ತದೆ. ದಂಪತಿಗಳು ತಮ್ಮ ಮಗುವನ್ನು ದೇವಸ್ಥಾನದ ಮೇಲಿಂದ ಹಾರಿಸುವುದಕ್ಕಾಗಿ ಮಗುವನ್ನು ಪೂಜಾರಿ ಕೈಗೆ ನೀಡುತ್ತಾರೆ. ದೇವಸ್ಥಾನದ ಗರ್ಭಗುಡಿ ಅಥವಾ ಮಂಟಪದ ಮೇಲೆ ಕುಳಿತುಕೊಂಡ ಪೂಜಾರಿ ತನ್ನ ಕೈಗೆ ನೀಡಿದ ಮಗುವಿನ ಹಣೆಗೆ ದೇವರ ಪ್ರಸಾದವಾದ ಭಂಡಾರವನ್ನು ಹಚ್ಚಿ ದೇವರ ನಾಮಸ್ಮರಣೆ ಮತ್ತು ಜೈಕಾರದೊಂದಿಗೆ ಮಗುವನ್ನು ಹಾರಿಸುವನು. ಕಂಬಳಿಯ ನಾಲ್ಕು ಅಂಚುಗಳನ್ನು ತಮ್ಮ ಕೈಗಳಲ್ಲಿ ಹಿಡಿದುಕೊಂಡು ಕೆಳಗೆ ನಿಂತಿರುವ ನಾಲ್ಕು ಜನರು, ಮೇಲಿಂದ ಪೂಜಾರಿ ಹಾರಿಸಿದ ಮಗುವನ್ನು ಹಿಡಿದುಕೊಳ್ಳುವರು. ಈ ರೀತಿಯಾಗಿ ಮಗುವನ್ನು ಒಂದು, ಎರಡು ಅಥವಾ ಐದು ಬಾರಿ ಹಾರಿಸುವ ಪದ್ಧತಿ ಅಸ್ತಿತ್ವದಲ್ಲಿರುವುದು. ಹೀಗೆ ಮಾಡುವುದರಿಂದ ಮಕ್ಕಳ ಭವಿಷ್ಯ ಉಜ್ವಲವಾಗುವುದೆಂಬ ಭಾವನೆ ಪಾಲಕರಲ್ಲಿದೆ.

ಸಾಮಾನ್ಯವಾಗಿ ಹಾಲುಮತ ಸಮುದಾಯದಲ್ಲಿ ಹುಟ್ಟಿದ ಎಲ್ಲ ಮಕ್ಕಳನ್ನು ದೇವಸ್ಥಾನದ ಮೇಲಿಂದ ಈ ರೀತಿಯಾಗಿ ಹಾರಿಸುವ ಪದ್ಧತಿ ಆಚರಣೆಯಲ್ಲಿತ್ತು. ಆದರೆ ಇತ್ತೀಚಿಗೆ ಈ ಪದ್ಧತಿಯು ಕಣ್ಮರೆಯಾಗುತ್ತಿದ್ದು, ಹರಕೆ ಹೊತ್ತವರು ಮಾತ್ರ ತಮ್ಮ ಮಕ್ಕಳನ್ನು ದೇವಸ್ಥಾನದಿಂದ ಹಾರಿಸುವುದು ಕಂಡು ಬರುತ್ತದೆ. ರಾಯಬಾಗ ಪರಿಸರದಲ್ಲಿರುವ ಹಾಲುಮತ ಎಲ್ಲ ದೇವಸ್ಥಾನಗಳಲ್ಲಿ ಈ ಪದ್ಧತಿ ಜಾರಿಯಲ್ಲಿರುವುದು. ಈ ಪದ್ಧತಿಯ ಹಿಂದಿನ ವೈಜ್ಞಾನಿಕ ಸತ್ಯವನ್ನು ಪತ್ತೆ ಹಚ್ಚುವುದು ಅವಶ್ಯಕ.

೪.೨.೨.೧೦ ಮೇಲಗಂಬಗಳ (ಎತ್ತರದ ದೀಪಸ್ಥಂಬ) ನಿರ್ಮಾಣ :

ಹಾಲುಮತ ದೇವಸ್ಥಾನಗಳನ್ನು ಒಳಗೊಂಡಂತೆ ಎಲ್ಲ ದೇವಸ್ಥಾನಗಳ ಮುಂದೆ ಎತ್ತರವಾದ ದೀಪಸ್ಥಂಬಗಳನ್ನು ಕಲ್ಲಿನಲ್ಲಿ ನಿರ್ಮಿಸಿರುವುದು ಕಂಡು ಬರುತ್ತದೆ. ಇದು ದೇವಸ್ಥಾನದ ಒಂದು ಭಾಗವೆಂದೇ ಪರಿಗಣಿಸಲ್ಪಟ್ಟಿರುತ್ತದೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತರು ದೇವತೆಗೆ ಸಲ್ಲಿಸುವ ಗೌರವ ಭಕ್ತಿಯನ್ನು ಈ ಸ್ಥಂಬಕ್ಕೂ ನೀಡುವರು ಮತ್ತು ಎಣ್ಣೆ ಹಾಕಿ ದೀಪ ಹಚ್ಚುವರು. ಸ್ಥಂಬದ ಮಗ್ಗುಲಲ್ಲಿರುವ ಕುಂಡದಲ್ಲಿ ಕೆಲವರು ಕರ್ಪೂರ ಅರ್ಪಿಸುವರು. ಭಕ್ತರು ಗರ್ಭಗುಡಿಯಲ್ಲಿರುವ ದೇವರ ಮುಂದೆ ದೀಪ ಹಚ್ಚಿದ ನಂತರ ದೇವಸ್ಥಾನದ ಮುಂದಿರುವ ದೀಪಸ್ಥಂಬದ ಮೇಲೆ ತಾವೇ ಹತ್ತಿ ಎಣ್ಣೆ ಹಾಕಿ ದೀಪ ಹಚ್ಚುತ್ತಿದ್ದರು ಮತ್ತು ಉಳಿದ ಎಣ್ಣೆಯನ್ನು ಪೂಜಾರಿಯ ಕೈಗೆ ನೀಡಿ, ದೀಪ ಆರದಂತೆ ಮೇಲಿಂದ ಮೇಲೆ ಎಣ್ಣೆ ಹಾಕುವಂತೆ ತಿಳಿಸುತ್ತಿದ್ದರು. ಈ ಆಚರಣೆಯ ವೈಜ್ಞಾನಿಕ ಹಿನ್ನೆಲೆಯನ್ನು ಅಧ್ಯಯಿನಿಸುವುದು ಅವಶ್ಯಕ.

ದೇವಸ್ಥಾನಗಳು ಬೆಟ್ಟ-ಗುಡ್ಡಗಳ ಮಧ್ಯದಲ್ಲಿದ್ದಾಗ ಭಕ್ತರಿಗೆ ಅವುಗಳನ್ನು ಗುರುತಿಸಲು ಈ ದೀಪಸ್ಥಂಬಗಳು ನೇರವಾಗುತ್ತಿದ್ದವು. ಈ ಉರಿಯುವ ದೀಪದ ಮೂಲಕ ರಾತ್ರಿ ಸಮಯದಲ್ಲಿ ದೇವಸ್ಥಾನದೆಡೆಗೆ ಸಾಗಲು ಅನುಕೂಲವಾಗುತ್ತಿತ್ತು ಹಾಗೂ ತಾವಿರುವ ಸ್ಥಳದಿಂದ ದೇವಸ್ಥಾನ ಅಂತರವನ್ನು ಗ್ರಹಿಸಲು ಅದು ದಾರದೀಪವಾದಂತಿದ್ದವು. ದೇವತೆಗಳ ಉತ್ಸವ ಮತ್ತು ಜಾತ್ರೆಗಳೆಲ್ಲವೂ ಈ ದೀಪಸ್ಥಂಬಗಳ ದೀಪಗಳ ಬೆಳಕಿನಲ್ಲಿಯೇ ನಡೆಯುತ್ತಿದ್ದವು. ಈ ದೀಪಗಳೇ ಅಂದಿನ ಬೆಳಕಿನ ಮೂಲಗಳಾಗಿದ್ದವು. ಅಂಧಕಾರ ಅಪರಾಧಗಳ ಕೇಂದ್ರ. ಹೀಗಾಗಿ ರಾತ್ರಿ ಸಮಯದಲ್ಲಿ ನಡೆಯುವ ಉತ್ಸವ-ಜಾತ್ರೆಗಳ ಸಂದರ್ಭದಲ್ಲಿ ಸಂಭವಿಸುವ ಅಪರಾಧ ಕೃತ್ಯಗಳು ಅನೇರವಾಗಿ ತಡೆಯುವುದಕ್ಕಾಗಿ ಈ ದೀಪಗಳನ್ನು ಉಜ್ವಲವಾಗಿ ಬೆಳಗಿಸಲಾಗುತ್ತಿತ್ತು. ವಿದ್ಯುಚ್ಛಕ್ತಿ ಇಲ್ಲದ ಅಂದಿನ ದಿನಗಳಲ್ಲಿ ಈ ಬೆಳಕೇ ಮಹತ್ವ ಪಡೆದುಕೊಂಡಿತ್ತು. ಮೊಬೈಲ್ ಟವರಗಳಲ್ಲಿ, ವಿಮಾನ ನಿಲ್ದಾಣಗಳ ಕೇಂದ್ರಗಳಲ್ಲಿ. ಸಮುದ್ರ ಯಾನದ ಮಾರ್ಗದಲ್ಲಿ ಇಂದಿಗೂ ದೀಪ ಉರಿಸುವ ತಂತ್ರಜ್ಞಾನವನ್ನು ಬಳಸಿಕೊಳ್ಳಗಾಗುತ್ತಿದೆ. ಅಂದಿನ ದೀಪ ಇಂದಿನ ವಿದ್ಯುತ್‌ಶಕ್ತಿ ಬಲ್ಬ. ಅಂದು ದೇವಸ್ಥಾನಗಳ ಮುಂದಿರುವ ಅತೀ ಎತ್ತರದ ದೀಪಸ್ಥಂಬಗಳ ಸ್ಥಾನವನ್ನು ಇಂದು ಗ್ರಾಮ-ಪಟ್ಟಣಗಳ ವೃತ್ತಗಳಲ್ಲಿರುವ ಲೈಟ್ ಕಂಬ ಮತ್ತು ಮರಕ್ಯೂರಿ ಬಲ್ಬಗಳು ಪ್ರತಿನಿಧಿಸುತ್ತದೆ. ಅಲಕನೂರಿನ ಕರೇಸಿದ್ಧೇಶ್ವರ ದೇವಸ್ಥಾನದ ಮುಂದೆ ಪೂರ್ವಕ್ಕಿನಲ್ಲಿ ೧೦೦ ಮೀಟರ ಅಂತರದಲ್ಲಿ ಸುಮಾರು ೧೧೦ ಅಡಿಗಳಿಗಿಂತಲೂ ಎತ್ತರದಲ್ಲಿ ದೀಪಸ್ಥಂಬವನ್ನು ನಿರ್ಮಿಸುತ್ತಿದ್ದಾರೆ. ಕಳೆದ ಎರಡು-ಮೂರು ವರ್ಷಗಳಿಂದ ನಿರ್ಮಾಣ ಕಾರ್ಯ ಮುಂದುವರೆದಿದ್ದು, ಈ ಭಾಗದಲ್ಲಿಯೇ ರಚನೆಯಾಗುತ್ತಿರುವ ಅತೀ ಎತ್ತರದ ದೀಪಸ್ಥಂಬ ಇದಾಗಿದೆ.

ನೂರಾರು ಅಡಿ ಎತ್ತರದ ದೀಪಸ್ಥಂಬಗಳನ್ನು ಹತ್ತಿಕೊಂಡು ತುದಿಯಲ್ಲಿರುವ ಕುಂಡದಲ್ಲಿ ಎಣ್ಣೆ ಹಾಕಿ ದೀಪ ಹಚ್ಚಲು ಅಂದಿನ ಯುವಕರು ಪೈಪೋಟಿ ಮಾಡುತ್ತಿದ್ದರು. ಹಲವಾರು ಬಾರಿ ದೀಪಸ್ಥಂಬ ಏರುವುದು ಅವರ ಶಕ್ತಿ ಪ್ರದರ್ಶನದ ಭಾಗವಾಗಿತ್ತು. ಹತ್ತಾರುಸಲ ತಾವು ದೀಪಸ್ಥಂಬ ಹತ್ತಿರುವುದನ್ನು ಇನ್ನಿತರರ ಮುಂದೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಹೀಗಾಗಿ ದೀಪಸ್ಥಂಬಗಳು ಯುವಕರ ಶಕ್ತಿ-ಸಾಮರ್ಥ್ಯಗಳನ್ನು ಅಳೆಯುವ ಸಾಧನಗಳಾಗಿದ್ದವೆಂದು ತೋರುತ್ತವೆ. ಊರ ಮಧ್ಯದಲ್ಲಿರುವ ದೇವಸ್ಥಾನಗಳ ಮುಂದಿರುವ ದೀಪಸ್ಥಂಬಗಳು ಇಡೀ ಊರಿಗೆ ಬೆಳಕಾಗಿದ್ದವು.

೪.೨.೨.೧೧ ಭಂಡಾರಖಾನೆ ನಿರ್ಮಾಣ :

ಹಾಲುಮತ ದೇವತೆಗಳ ಆವರಣದಲ್ಲಿ ಕಂಡು ಬರುವ ಒಂದು ಪ್ರಮುಖ ಭಾಗ ಭಂಡಾರಖಾನೆ. ಭಂಡಾರಖಾನೆ ಇರುವುದು ಕುರುಬರ ದೇವಾಲಯದ ವಿಶೇಷತೆ. ಭಂಡಾರಖಾನೆ ಅನ್ನುವ ಪದಕ್ಕೆ ವಿವಿಧ ಅರ್ಥಗಳಿವೆ. ಭಂಡಾರ ಎಂದರೆ ಬೊಕ್ಕಸ, ಖಜಾನೆ, ಕೋಶ, ಬ್ಯಾಂಕ, ಪ್ರಸಾದ ರೂಪದಲ್ಲಿ ಕೊಡುವ ಅರಿಷಿಣದ ಪುಡಿ ಎಂಬ ಅರ್ಥವನ್ನು ನೀಡುತ್ತದೆ. ಇನ್ನೊಂದು ಅರ್ಥ ಹಾಲುಮತ ದೇವತೆಗಳನ್ನು ಪೂಜಿಸುವ ಮುಖ್ಯ ಸಾಮಾನುಗಳಾದ ಡೊಳ್ಳು, ತಾಳ, ಸತ್ತಿಗೆ, ನಿಶಾನೆ, ಕಂಬಳಿ ಜೊತೆಗೆ ಅಂಗಾರವಾದ ಭಂಡಾರ ಮುಂತಾದವುಗಳನ್ನು ಇಡುವ ಸ್ಥಳವಾಗಿರುತ್ತದೆ.

೪.೩ ನಂಬಿಕೆ-ಸಂಪ್ರದಾಯಗಳು

೪.೩.೧ ದೇವರ ಕೌಲ :

ಹಾಲುಮತ ಸಮುದಾಯದ ಹಿರಿಯರನ್ನೊಳಗೊಂಡಂತೆ ಸಾಮಾನ್ಯರು ಸಹಿತ ತಮ್ಮೆಲ್ಲ ಕೆಲಸ-ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ದೇವರ ಕೌಲನ್ನು ಕೇಳುವುದು ವಿಶೇಷ. ಅದು ದೇವರವಾಣಿ ಎಂದೆಂದಿಗೂ ಹುಸಿಯಾಗುವುದಿಲ್ಲವೆಂಬ ಅಪಾರವಾದ ಮತ್ತು ದೃಢವಾದ ನಂಬಿಕೆ. "ತೋಟದಲ್ಲಿ ಬೆಳೆ ಮಾಡುವುದು, ಕಾಯಿಲೆಗಳಿಗಾಗಿ ಡಾಕ್ಟರ ಸಂಪರ್ಕಿಸುವುದು, ಔಷದಿ ತೆಗೆದು ಕೊಳ್ಳುವುದು, ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಬೇರೆ ಊರುಗಳಿಗೆ ಮತ್ತು ಕಾಲೇಜುಗಳಿಗೆ ದಾಖಲಾತಿ ಮಾಡುವುದು ಹೀಗೆ ಎಲ್ಲ ವಿಷಯಗಳ ಬಗ್ಗೆ ಕೌಲನ್ನು ಕೇಳುವರು. ಕುರಿಕಾಯುವ ಕುರುಬರಂತೂ ಮಳೆಗಾಲದಲ್ಲಿ ಕುರಿಗಳನ್ನು ಮೇಯಿಸಲಿಕ್ಕೆ ಯಾವ ಪ್ರದೇಶಗಳಿಗೆ ತೆರಳಬೇಕೆಂಬುದನ್ನು ಕೌಲ ಕೇಳಿಯೇ ನಿರ್ಧರಿಸುತ್ತಾರೆ."[೨೦] ಕೌಲ ಕೇಳುವ ಪದ್ಧತಿಯು ಮೇಲ್ನೋಟಕ್ಕೆ ಅಂದಶ್ರದ್ಧೆ ಮತ್ತು ಅಜ್ಞಾನದಂತೆ ಕಂಡು ಬರುತ್ತದೆ. ಆದರೆ ಇದು ಅವರಿಗೆ ದೈವವಾಣಿ.

ರಾಯಬಾಗ ಪರಿಸರದ ಹಾಲುಮತದವರು ಅಲಕನೂರಿನ ಕರೇಸಿದ್ಧೇಶ್ವರನ ಕೌಲನ್ನು ಕೇಳುತ್ತಾರೆ. ಪ್ರತಿ ದಿನ ಮುಂಜಾನೆ ಮತ್ತು ಸಾಯಂಕಾಲ ಪೂಜೆಯಾದ ನಂತರ ಕನಿಷ್ಠ ೨೦-೩೦ ಜನ ಕೌಲನ್ನು ಕೇಳಲು ಬರುತ್ತಾರೆ. ವಿಶೇಷವೆಂದರೆ ಹಾಲುಮತದವರಲ್ಲದ ಇತರ ಸಮುದಾಯದವರು ಕೌಲನ್ನು ಕೇಳಲಿಕ್ಕೆ ಇಲ್ಲಿಗೆ ಬರುತ್ತಾರೆ. ಕರೇಸಿದ್ಧನಿಗೆ ಪೂಜೆಯ ಸಮಯದಲ್ಲಿ ಮೈತುಂಬ ಕತ್ತಿರಿಸಿದ ಪತ್ರಿಯನ್ನು ಅಂಟಿಸುತ್ತಾರೆ. ಪೂಜೆಯ ನಂತರ ಭಕ್ತರು ಸುಕನಾಸಿಯಲ್ಲಿ ಕುಳಿತು ಕೌಲನ್ನು ಕೇಳುವರು, ಕಂಟಿಕಾರ ಗರ್ಭಗುಡಿಯಲ್ಲಿ ಕುಳಿತು ಕೌಲಿನ ಫಲಾಪಲಗಳನ್ನು ಹೇಳುವನು. ಪತ್ರಿಯು ದೇವರ ಬಲದಿಂದ ಕೆಳಗುರುಳಿದರೆ ಶುಭವೆಂದು, ಎಡದಿಂದ ಉರುಳಿದರೆ ಅಶುಭವೆಂದು ಅರ್ಥಯಿಸುವರು.

ಕೆಲವು ದೇವತೆಗಳಿಗೆ ಅಡಕೆ ಕೌಲನ್ನು ಹಚ್ಚುವರು. ಉದಾಹರಣೆ ಹಾರೂಗೇರಿ ಕರೇಸಿದ್ಧ. ಪೂಜಾರಿಗಳು ಅಡಿಕೆಯನ್ನು ತೇದು (ತೈದು) ದೇವರ ಎರಡು ಅಂಗೈಗಳಿಗೆ ಅಂಟಿಸುತ್ತಾರೆ. ಭಕ್ತರು ತಮ್ಮ ಮನಸ್ಸಿನಲ್ಲಿ ಕೇಳಬೇಕಾಗಿದ್ದ ವಿಷಯಗಳನ್ನು ದೇವರ ನಾಮಸ್ಮರಣೆಯೊಂದಿಗೆ ಬೇಡಿಕೊಂಡು ಕೈಮುಗಿದು ಕುಳಿತುಕೊಳ್ಳುವರು. ದೇವರ ಬಲಗೈ ಅಡಿಕೆ ಜಾರಿ ಬಿದ್ದರೆ ಶುಭ (ಬಲ)ವೆಂದು, ಎಡಗೈ ಅಡಿಕೆ ಜಾರಿ ಬಿದ್ದರೆ

ಅಶುಭ (ಎಡ)ವೆಂದು ತಿಳಿದುಕೊಳ್ಳುವರು. ಎಡ, ಬಲ ಯಾವ ಕೌಲ ಬಹಳ ಹೊತ್ತಿನವರೆಗೆ ಆಗದಿದ್ದರೆ ಅದು ತುಂಬಿದ ಕೌಲ. ಅದನ್ನು ಇನ್ನೊಮ್ಮೆ ವಿಚಾರಸಬೇಕಂತೆ. ಕೌಲು ಬಲವಾಗಿದ್ದಲ್ಲಿ ಬೇಡಿಕೊಂಡ ಕೆಲಸವನ್ನು ಮಾಡಬೇಕೆಂದು, ಎಡವಾಗಿದ್ದಲ್ಲಿ ಮಾಡಬಾರದೆಂದು ತಿಳಿದುಕೊಳ್ಳುವರು. ಕೌಲು ತುಂಬಿಕೊಂಡಾಗ ಭಕ್ತರ ಇಚ್ಛೆಯಂತೆ ದೇವರು ಕೌಲ ಕೊಡಲು ಪೂಜೇರಿ 'ವಜ್ಜ' ಕೇಳುವನು. ಕೆಲವು ಸಲ ದೇವರು ವಜ್ಜ ಪಡೆದು ಕೊಂಡು ಕೌಲ ಕೊಡುವುದುಂಟು.

ಭಕ್ತರು ಕೌಲ ಕೇಳಿ ಕೆಲಸ ಮಾಡಿದಾಗ "ಸಕಾರಾತ್ಮಕ ಫಲ ದೊರೆತಾಗ, ಬಹಿರಂಗವಾಗಿ ಹೇಳಿಕೊಳ್ಳುತ್ತ ಹರಕೆ ಮುಟ್ಟಿಸುತ್ತಿದ್ದರು. ಫಲ ನಕಾರಾತ್ಮಕವಾದಾಗ, 'ನಮ್ಮ ಹಣೆಬರಹ' ಎಂದು ಏನೂ ಹೇಳದೆ ಸುಮ್ಮನಿದ್ದು ಬಿಡುತ್ತಿದ್ದರು. ಹೀಗಾಗಿ ಸಕಾರಾತ್ಮಕ ಕೌಲವು ನಕಾರಾತ್ಮಕ ಕೌಲಗಿಂತ ಹೆಚ್ಚು ಪ್ರಚಾರ ಗಿಟ್ಟಿಸಿ, ಕೌಲಗಳ ಮೇಲಿನ ನಂಬಿಕೆಗಳು ಇನ್ನಷ್ಟು ಗಟ್ಟಿಯಾಗುತ್ತಿದ್ದವು."[೨೧] ಆದ್ದರಿಂದ ಇಂದು ಕೂಡ ದೇವರ ಕೌಲುಗಳು ಜನಮಾಸದಲ್ಲಿ ನಂಬಿಕೆಗಳನ್ನು ಹೊಂದಿವೆ.

೪.೩.೨ ಭಂಡಾರ ಸೇವೆ :

"ತಿಳಿಬೇಕ ಬಾಳಾ ಇದು ದೊಡ್ಡ ದೇವರ
ಎಲ್ಲದಕ್ಕಿಂತ ಹೆಚ್ಚಿಂದಪ್ಪೋ ನಮ್ಮ ಭಂಡಾರ"

ಹಾಲುಮತದ ಪ್ರತಿಯೊಬ್ಬ ಭಕ್ತನು ವಾರ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ದೇವಸ್ಥಾನಕ್ಕೆ ಬಂದಾಗ, ದೇವರ ದರ್ಶನ ಪಡೆದುಕೊಂಡ ಮೇಲೆ ಹಣೆಗೆ ಭಂಡಾರವನ್ನು ಲೇಪಿಸಿಕೊಳ್ಳಬೇಕೆಂಬ ಅಘೋಷಿತ ನಿಯಮವಿದೆ. ಭಕ್ತರು ತಮ್ಮ ಶಕ್ತ್ಯಾನುಸಾರ ಭಂಡಾರವನ್ನು ಪಡೆದು(ಖರೀದಿ ಮಾಡಿ)ಕೊಂಡು ದೇವರ ಪಾದಕ್ಕೆ ಅರ್ಪಿಸುವ ಸಂಪ್ರದಾಯವಿದೆ. ಕೆಲವರು ಅದನ್ನು ಒಬ್ಬರಿಗೊಬ್ಬರು ಹಣೆಗೆ ಲೇಪಿಸಿಕೊಳ್ಳುವರು. ಉಳಿದ ಭಂಡಾರವನ್ನು ದೇವರ ಗುಡಿಯನ್ನು ಸುತ್ತ ಹಾಕುತ್ತ ನಾಲ್ಕು ದಿಕ್ಕಿನತ್ತ ಎರಚುವರು. ಜಾತ್ರೆ ಉತ್ಸವಗಳ ಸಮಯದಲ್ಲಿ ಭಂಡಾರವನ್ನು ದೇವರ ಪಲ್ಲಕ್ಕಿಯತ್ತ ಎರಚುತ್ತ ದೈವಿಭಕ್ತಿಯ ಹಿನ್ನೆಲೆಯಲ್ಲಿ ಭಂಡಾರ ಸ್ನಾನವನ್ನೇ ಮಾಡುವರು. ಹೀಗೆ ಮಾಡುವಾಗ ಅವರ ಶರೀರ ಸಂಪೂರ್ಣವಾಗಿ ಭಂಡಾರಮಯವಾಗುವುದು, ಅಲ್ಲದೆ ಉಸಿರಾಟ ಕ್ರಿಯೆಯಲ್ಲಿಯೂ ಭಂಡಾರ ಬೆರೆತು ದೇಹವನ್ನು ಸೇರುವುದು. ಹೀಗೆ ಭಂಡಾರ ದೇಹದ ಒಳ ಮತ್ತು ಹೊರಗೆ ಲೇಪಿಸಿದಾಗ ದೇಹಕ್ಕೆ ರೋಗ ತರುವ ಅದೆಷ್ಟೋ ಬ್ಯಾಕ್ಟಿರಿಯಾಗಳು ನಾಶವಾಗುತ್ತವೆ ಮತ್ತು ದೇಹ ರೋಗ ನಿರೋಧಕ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಜೊತೆಗೆ ದೇಹ ಕಾಂತಿಯುತ (ಸ್ಮಾರ್ಟ)ವಾಗುತ್ತದೆ ಎಂಬುದು ಆಯುರ್ವೇದದ ಸಿದ್ಧಾಂತ.

ಆದರೆ ಈ ಎಲ್ಲ ಹಿನ್ನೆಲೆಗಳ ಅರಿವಿಲ್ಲದ ಇಂದಿನ ಯುವ ಜನಾಂಗ ಭಂಡಾರವನ್ನು ಹಣೆಗೆ ಸಂಪೂರ್ಣವಾಗಿ ಹಚ್ಚಿಕೊಳ್ಳುತ್ತಿಲ್ಲ ಎಂಬುದು ಹಿರಿಯರ ಆತಂಕ. ದೇವಸ್ಥಾನಕ್ಕೆ ಬಂದ ಭಕ್ತರಿಗೆ ಅಲ್ಲಿರುವ ಪೂಜಾರಿ ಹಣೆ ತುಂಬಾ ಭಂಡಾರ ಹಚ್ಚುವುದು ಹಾಲುಮತದ ಒಂದು ಸಂಪ್ರದಾಯ. ಆದರೆ ದೇವಸ್ಥಾನಕ್ಕೆ ಬರುವ ಭಕ್ತರು ಪೂಜಾರಿಯಿಂದ ಭಂಡಾರವನ್ನು ಲೇಪಿಸಿಕೊಳ್ಳದೇ ಆತನ ಕೈಯಿಂದ ತಾವೇ ಚಿಟಿಕೆ ಭಂಡಾರವನ್ನು ಪಡೆದು ಅಲಂಕಾರಿಕವಾಗಿ, ಇನ್ನೂ ಕೆಲವರು ನೆಪಮಾತ್ರಕ್ಕೆ ಹಚ್ಚಿಕೊಳ್ಳುವರು. ಇದಕ್ಕೆ ಕಾರಣ

ಭಂಡಾರ ಹಚ್ಚಿಕೊಳ್ಳುವುದು ಹಿಂದುಳಿದ ವರ್ಗಗಳ ಲಕ್ಷಣವೆಂಬ ಕೀಳರಿಮೆಯ ಭಾವನೆ ಅವರಲ್ಲಿರುವುದು. ಆದರೆ ತಾನು ಚುನಾವಣೆಯಲ್ಲಿ ಗೆದ್ದರೆ ಅಥವಾ ತಾನು ಬಯಸಿದ ಇಷ್ಟಾರ್ಥ ಸಿದ್ಧಿಸಿದರೆ ಕ್ವಿಂಟಲ್ ಗಟ್ಟಲೆ ಭಂಡಾರವನ್ನು ದಾನ ಮಾಡುತ್ತೇವೆಂದು ಹರಕೆ ಹೊತ್ತುಕೊಳ್ಳುತ್ತಾರೆ. ನಿಜವಾಗಿಯೂ ಭಂಡಾರ ದಾನ ಮಾಡಿ ಅದನ್ನು ಎಲ್ಲರಿಗೂ ವಿತರಿಸಿ ತಾನು ಭಂಡಾರದಲ್ಲಿ ಮಿಂದು ಪುನೀತರಾಗಬೇಕೆಂಬ ಕಲ್ಪನೆ ಅವರಿಗಿಲ್ಲ. ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡುವುದಾದರೆ ಪ್ರತಿಯೊಬ್ಬರು ವರ್ಷದಲ್ಲಿ ಒಂದೆರಡು ಸಲ ಭಂಡಾರ ಸ್ನಾನ ಮಾಡುವ ಮೂಲಕ ಶರೀರದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಅವಶ್ಯಕವೆಂದು ಪೂಜಾರಿಗಳು ಹೇಳುತ್ತಾರೆ.

ಕುರುಬರು ಈ ಭಂಡಾರವನ್ನು ತಮ್ಮ ದನ-ಕರುಗಳಿಗೆ, ಕುರಿ-ಮೇಕೆಗಳಿಗೆ, ದವಸ-ಧಾನ್ಯಗಳಿಗೆ ಲೇಪಿಸುವರು (ಎರಚುವರು). ಕುರಿ ಬೇದರಿಸುವ ಉತ್ಸವ ಸಂದರ್ಭದಲ್ಲಿ, ಕುರಿ ಉಣ್ಣೆ ಕತ್ತರಿಸಿದ ನಂತರ ಅವುಗಳ ಮೇಲೆ ಎರಚುತ್ತಾರೆ. ಈ ಮೂಲಕ ಅವುಗಳಲ್ಲಿ ರೋಗ ನಿರೋಧಕ ಶಕ್ತಿಯನ್ನು ತುಂಬುವುದೇ ಆಗಿದೆ ಅಲ್ಲದೆ ಧವಸ-ಧಾನ್ಯಗಳು ಕೆಡದಂತೆ ಕಾಪಾಡುವ ಕ್ರಮವು ಆಗಿದೆ. ಕುರಿಗಾರರು ಕುರಿ ಮೇಯಿಸುವ ಸಂದರ್ಭದಲ್ಲಿ ತಮ್ಮ ಹತ್ತಿರ ಯಾವಾಗಲೂ ತಮ್ಮ ಕುಲದೈವದ ಭಂಡಾರವನ್ನು ಇಟ್ಟುಕೊಂಡಿರುತ್ತಾರೆ. ಅಡವಿಯಲ್ಲಿ ಅವರು ಯಾವುದಾದರೂ ಅನಾರೋಗ್ಯದ ಸಮಸ್ಯೆಯನ್ನು ಎದುರಿಸಿದಾಗ ಅದನ್ನು ನೀರಿನೊಂದಿಗೆ ಸೇವಿಸುತ್ತಾರೆ. ಘಾಯಗಳಿಗೆ ಅದನ್ನೇ ಲೇಪಿಸುತ್ತಾರೆ.

೪.೩.೩ ಕಂಬಳಿ (ಮಡಿ ಗದ್ದುಗೆ) :

ಶಿವನು ಹಿಮಾಲಯದ ಗಿರಿಶಿಖರಗಳ ಮಧ್ಯದಲ್ಲಿರುವ ಆಹ್ಲಾದಕರ, ನಿರ್ಜನ, ನಿಶಬ್ದ, ಪ್ರಶಾಂತ ವಾತಾವರಣದಲ್ಲಿ ಕುಳಿತುಕೊಳ್ಳಬಯಸಿದನು. ಪರ್ವತರಾಜ ಆಯ್ಕೆಮಾಡಿದ ಪ್ರದೇಶದ ಮಧ್ಯದಲ್ಲಿದ್ದ ಶಿಲಾ ವೇದಿಕೆ ಮೇಲೆ ಶಿವನು ಆಸೀನನಾದನು. ಎಡಭಾಗದಲ್ಲಿ ಪಾರ್ವತಿಯು ಮಂಡಿಸಿದಳು. ನಂದಿ ಸಹಿತ ಎಲ್ಲ ಗಣಂಗಳು, ಋಷಿಮುನಿಗಳು ಶಿವನ ಸುತ್ತ-ಮುತ್ತ ಕುಳಿತುಕೊಂಡರು. ಮುನಿಗಳಾದ ಭೃಗು, ಭಾರದ್ವಜ, ಕೌಂಡಿಣ್ಯ, ವಶಿಷ್ಠ, ಕಶ್ಯಪ, ಕೌರಭಾದಿಗಳೆಲ್ಲರೂ ಈಶನ ನಾಮಸ್ತೋತ್ರ ಮಾಡುತ್ತ ವೇದ ಮಂತ್ರಗಳನ್ನು ಪಠಿಸುತ್ತಿದ್ದರು. ಒಮ್ಮಿಂದೊಮ್ಮೆಲೇ ಶೀತ ಗಾಳಿ ಬೀಸಲಾರಂಭಿಸಿತು. ಶಿವನ ಗಣಂಗಳು, ಋಷಿಮುನಿಗಳು ಚಳಿಯಿಂದ ನಡುಗಲಾರಂಭಿಸಿದರು. ಋಷಿಮುನಿಗಳ ವೇದಮಂತ್ರ ಪಠಣಗಳೆಲ್ಲವೂ ನಿಂತವು. ಎಲ್ಲರೂ ನಡುಗಲಾರಂಭಿಸಿದರು. ಬೆಂಕಿಯ ಕುಂಡವನ್ನು ನಿರ್ಮಿಸಿ ಶೀತದಿಂದ ಪಾರಾಗಲು ಪರ್ವತರಾಜ ಮಾಡಿದ ಪ್ರಯತ್ನವು ವ್ಯರ್ಥವಾಯಿತು.

ಆಗ ಶಿವನು ಸ್ವಲ್ಪಹೊತ್ತು ವಿಚಾರಮಗ್ನನಾಗಿ, ಹಿಮಕಣಗಳು ಮೇಲೆ ಬಿದ್ದರೂ ವದ್ದೆಯಾಗದಂಥ ಮತ್ತು ಶೀತಬಾಧೆ ನಿವಾರಿಸಿ, ಬೆಚ್ಚಗೆ ಬಿಸಿಯುಂಟು ಮಾಡುವ ರೋಮದ ವಸ್ತ್ರಗಳನ್ನು ನಿರ್ಮಿಸಬೇಕೆಂದು ಆಲೋಚಿಸಿ ಈ ಎಲ್ಲವನ್ನು ಪರಿಹರಿಸುವಂತೆ ಬ್ರಹ್ಮನಲ್ಲಿ ಚರ್ಚಿಸಿದರು. ಆಗ ಶಿವನು "ನಯವಾದ ಹಾಗೂ ಉದ್ದವಾದ ರೋಮಗಳುಳ್ಳ, ಸಾಧು ಸ್ವಭಾವದ ಪ್ರಾಣಿಗಳನ್ನು ನಿರ್ಮಿಸಲು ಹೇಳಿದನು. ಬ್ರಹ್ಮದೇವರು ಇದಕ್ಕೆ ಒಪ್ಪಿದವರಾಗಿ ತಮ್ಮ ಲೋಕಕ್ಕೆ ತೆರಳಿದರು. ಗಾಢವಾಗಿ ಅಲೋಚಿಸಿ ಶಿವನು ಹೇಳಿದ ಎಲ್ಲ ಲಕ್ಷಣಗಳನ್ನು ಒಳಗೊಂಡ ಪ್ರಾಣಿಗಳನ್ನು ಅಂದರೆ ಕುರಿಗಳನ್ನು ಮತ್ತು ಟಗರಗಳನ್ನು ಅಸಂಖ್ಯ ಸಂಖ್ಯೆಯಲ್ಲಿ ನಿರ್ಮಿಸಿದನು.

ಇದಾದ ನಂತರ ಶಿವನು ತನ್ನ ಗಣಂಗಳಲ್ಲಿ ಜ್ಞಾನಿಗಳೂ, ಕುಶಲರೂ, ದೃಢಕಾಯರೂ ಆದಂಥ ಕೌರಭ ಋಷಿಗಳಿಗೆ ಈ ಕುರಿಗಳ, ಟಗರುಗಳ, ರೋಮಗಳನ್ನು ಅಂದರೆ ಉಣ್ಣೆಯನ್ನು ಕತ್ತರಿಸಿ ವಸ್ತ್ರಗಳನ್ನು ನಿರ್ಮಿಸಲು ಆದೇಶಿಸಿದನು. ಶಿವನ ಆಜ್ಞೆಯನ್ನು ಶಿರಸಾ ವಹಿಸಿ ಕೌರಭ ಋಷಿಗಳು ಬ್ರಹ್ಮ ನಿರ್ಮಿಸಿದ ಈ ಕುರಿ ಟಗರುಗಳ ಮೃದುವಾದ ತುಪ್ಪಳಗಳನ್ನು ಕತ್ತಿರಿಸಿದನು. ಅದೇ ಉಣ್ಣೆಯಾಯಿತು. ನಂತರ ಬಿದಿರನ್ನು ಕಡಿದು ಬಿಲ್ಲನ್ನು ತಯಾರಿಸಿದನು. ಚೀಗರಿಮೃಗದ ಕರುಳನ್ನು ಆ ಬಿಲ್ಲಿಗೆ ಹೆದೆಯಾಗಿ ಕಟ್ಟಿದರು. ಇಂಥ ಬಿಲ್ಲಿನಿಂದ ಆ ಉಣ್ಣೆಯನ್ನು ಹೊಡೆ ಹೊಡೆದು ಹಿಂಜಿ ಮೆದು ಮಾಡಿಕೊಂಡರು. ಕಟ್ಟಿಗೆಯ ಬಿಂಗರಿಯಿಂದ ತೊಡೆಯ ಮೇಲೆ ಹೊಸೆದು ನೂತರು. ಹೀಗೆ ತಯಾರಾದ ಉಣ್ಣೆಯ ದಾರವನ್ನು ಕಟ್ಟಿಗೆಯ ಫಲಕಕ್ಕೆ ಸುತ್ತಿ ನಂತರ ಬೆಜ ತಯಾರಿಸಿ ಈ ಉಣ್ಣೆಯ ದಾರವನ್ನೇ ಹಾಸೆಳೆಯಾಗಿ ಹೊಕ್ಕೆಳೆಯಾಗಿ ಮಾಡಿ ವಸ್ತ್ರ ತಯಾರಿಸಿದರು. ಇದೇ ಭೂಲೋಕದ ಪ್ರಪ್ರಥಮ ಕಂಬಳಿಯಾಯಿತು."[೨೨] ಕೌರಬ ಋಷಿಗಳು ಪ್ರಯಾಸಪಟ್ಟು ಪ್ರಥಮ ಕಂಬಳಿಯನ್ನು ನಿರ್ಮಾಣ ಮಾಡಿದಾಗ ಅವರಿಗೆ ಅಪಾರ ಆನಂದವಾಯಿತು.

ಕೌರಭ ಋಷಿಗಳು ಕಂಬಳಿಯನ್ನು ಶಿವನಿಗೆ ಅರ್ಪಿಸುತ್ತ, 'ಇದು ಮರ್ತ್ಯಕ್ಕೆ ಬಂದ ಮೊದಲ ಕಂಬಳಿ. ಇದು ನಿಮಗೆ ಅರ್ಪಿತವಾಗಿ ಮೊದಲು ನಿಮ್ಮ ಗದ್ದುಗೆಯಾಗಲಿ' ಎಂದು ಬೇಡಿಕೊಂಡರು. ಶಿವ ಆದರದಿಂದ ಕಂಬಳಿಯನ್ನು ಸ್ವೀಕರಿಸಿ ಅದರ ಗುಣ ಲಕ್ಷಣ, ಅಂದಗಳನ್ನು ಕಂಡು ಸಂತೋಷ ಭರಿತನಾದನು. ಪಾರ್ವತಿ ಸಹಿತ ಎಲ್ಲ ಗಣಂಗಳು ಸಂತೋಷಗೊಂಡರು. ಶೀತ, ಮಳೆ ಗಾಳಿಗಳಿಂದ ರಕ್ಷಣೆ ಪಡೆಯಲು, ಹಾಸಲು ಮತ್ತು ಹೊದ್ದಕೊಳ್ಳಲು ಕಂಬಳಿ ಸಹಾಯಕವಾಯಿತು. ಏಷ್ಟೇ ಹೊಲಸಾ(ಅಶುಚಿಯಾ)ದರು ಅದನ್ನೊಮ್ಮೆ ಜಾಡಿಸಿದರೆ ಅದಕ್ಕೆ ಅಂಟಿಕೊಂಡ ಕೊಳೆಯೆಲ್ಲ ಹೋಗಿ ಹೊಸತನದಿಂದ ಕಂಗೊಳಿಸುತ್ತಿತ್ತು. ಸಕಲ ಮಂಗಳ ಕಾರ್ಯಕ್ಕೂ ಉಪಯೋಗವಾಯಿತು. ಬಹುಪಯೋಗಿ ಕಂಬಳಿಯನ್ನು ಪಡೆದುಕೊಂಡ ಋಷಿಗಳು ಮತ್ತು ಗಣಂಗಳು ಮಹದಾನಂದಪಟ್ಟರು. ಈ ರೀತಿಯಾಗಿ ಕಂಬಳಿ ನಿರ್ಮಿಸಲ್ಪಟ್ಟಿತು.

ಅಂದು ಕೌರಭ ಋಷಿಗಳು ನಿರ್ಮಿಸಿದ ಬಹುಪಯೋಗಿ ಕಂಬಳಿಯನ್ನು ಕುರುಬರು ಉಪಯೋಗಿಸುತ್ತಾ ಬಂದಿರುವರು. ಕಂಬಳಿ ಎಂದರೆ ಕುರುಬರು, ಕುರುಬರು ಎಂದರೆ ಕಂಬಳಿ ಎನ್ನುವಷ್ಟರ ಮಟ್ಟಿಗೆ ಕುರುಬ ಮತ್ತು ಕಂಬಳಿಯ ಮಧ್ಯ ಬಾಂಧವ್ಯ ಬೆಳೆದಿದೆ. ಕುರುಬರ ಎಲ್ಲ ದೇವತೆಗಳಿಗೂ ಕಂಬಳಿಯನ್ನು ಗದ್ದುಗೆಯಾಗಿ ಉಪಯೋಗಿತ್ತಿರುವರು. ಪೂಜಾರಿಗಳು ಹೆಗಲ ಮೇಲೆ ಕಂಬಳಿಯನ್ನು ಹೊದ್ದುಕೊಂಡಾಗ ಮಾತ್ರ ಅವರು ಪರಿಪೂರ್ಣರು. ಹೆಗಲ ಮೇಲೆ ಕಂಬಳಿ, ಬಗಲಲ್ಲಿ ಭಂಡಾರ ಚೀಲ ಇಲ್ಲದ ಪೂಜಾರಿಗಳಿಗೆ ಮಹತ್ವವಿಲ್ಲ. "ಕುರಿ ಉಣ್ಣೆಯ ಜಾಡೆ ಕೂಡ ದೈವದ ಸಂಕೇತ. ಮಂಗಳಕರವಾದುದು. ಅದಕ್ಕೆ ಮೈಲಿಗೆ ಇಲ್ಲ. ಅನುಗಾಲ ಮಡಿ, ಎಲ್ಲ ಜಾತಿ ಜನಾಂಗದವರಿಗೂ, ಗುರು ವಿರಕ್ತರಿಗೂ, ಕಾರ್ಯಕ್ಕೆಲ್ಲ ಅಗತ್ಯ ಅನಿವಾರ್ಯ. ಕುರುಬರು ಕಂಬಳಿ ಬೀಸಿದರೆ ಮಳೆ ಬರುವದೆಂಬುದು ಪೂರ್ವ ಪ್ರತೀತಿ, ಕುರಿಗಾರರ ಹೆಗಲ ಮೇಲೆ ಕಂಬಳಿ ಇರಲೇಬೇಕು."[೨೩] "ಕಂಬಳಿ ಜೀವಂತ ಪೀಠ. ಹುಲಿ, ಜಿಂಕೆ ಚರ್ಮಗಳ ಪೀಠ ಸತ್ತ ಪೀಠ. ಸತ್ಯಸಂದ ಶಾಂತಿ ಪ್ರಾಣಿಯಾದ ಕುರಿಯು ಜೀವಂತ ಇರುವಾಗಲೇ ಅದರಿಂದ ಉಣ್ಣೆ ಪಡೆದು ಕಂಬಳಿ ತಯಾರಿಸುವುದರಿಂದ ಇದು ಜೀವಂತ ಪೀಠವಾಗುವುದು. ಹಿಂಸಾ ಪ್ರಾಣಿಯಾದ ಹುಲಿಯ ಮರಣದ ನಂತರ ಅದರ ಚರ್ಮ ಸುಲಿಯುವುದರಿಂದ ಅದು ಸತ್ತ ಪೀಠವಾಗುವುದು. ಹಾಗಂತಲೇ ಕಂಬಳಿ

ಪೀಠಕ್ಕೆ ಮಹತ್ವವಿರುವುದು"[೨೪] ಇಂದು ಹಬ್ಬ-ಹರಿದಿನಗಳಲ್ಲಿ, ಮದುವೆ-ಮುಂಜಿವಿಗಳಲ್ಲಿ, ಪೂಜಾ ಸಮಾರಂಭಗಳಲ್ಲಿ, ಮಂಗಲ ಕಾರ್ಯಗಳಲ್ಲಿ ಕಂಬಳಿ ಅತ್ಯಾವಶ್ಯಕವಾಗಿದೆ. ಇದು ಜೀವಂತ ಮಡಿ ಗದ್ದುಗೆಯಾಗಿ ಬಳಸಲ್ಪಡುತ್ತಿದೆ.

೪.೩.೪ ಕಂಬಳಿ ಬೀಸಿದರೆ ಮಳೆ :

ಭಾರತದ ಪ್ರಮುಖ ಉದ್ಯೋಗ ಕೃಷಿ. ಇಲ್ಲಿ ಮಳೆಯಾಧಾರಿತ ಕೃಷಿ ಪ್ರಮಾಣವೇ ಹೆಚ್ಚು. ಮಳೆಯಾದರೆ ಮಾತ್ರ ಬೆಳೆ ಎನ್ನುವ ಪರಿಸ್ಥಿತಿ. ಹೀಗಾಗಿ ರೈತರೆಲ್ಲ ಮಳೆಯ ಮೇಲೆ ತಮ್ಮ ಉಳುಮೆಯನ್ನು ನಿರ್ಧರಿಸುತ್ತಾರೆ. ಒಟ್ಟು ಮಳೆಗಳು ಹದಿನೇಳು. ಆರಂಭದ ಹನ್ನೊಂದು ಮಳೆಗಳು ಮುಂಗಾರಿ ಮಳೆಗಳು, ನಂತರದ ಆರು ಮಳೆಗಳು ಹಿಂಗಾರಿ ಮಳೆಗಳು. ಸಾಮಾನ್ಯವಾಗಿ ಮಳೆಗಳು ಯುಗಾದಿಯ ನಂತರವೇ ಆರಂಭವಾಗುತ್ತವೆ. ಹೋಳಿ ಹುಣ್ಣಿಮೆಯ ದಿನ ಕಾಮಣ್ಣನನ್ನು ಸುಡುವರು. ಅಂದು ಕಾಮಣ್ಣನ ಬೂದಿಯನ್ನು ತೋಲಿ(ನಂದಿ)ಸಲು ಸ್ವಲ್ಪವಾದರೂ ಮಳೆಯಾಗುತ್ತದೆ ಎಂಬ ನಂಬಿಕೆ ಗ್ರಾಮೀಣ ಜನರಲ್ಲಿರುವುದು.

"ಪಂಚಾಂಗವನ್ನು ಜನಪದ ಶಾಸ್ತ್ರವೆಂದು ಹೇಳುತ್ತಾರೆ. ವಾರ, ತಿಥಿ, ನಕ್ಷತ್ರ, ಯೋಗ, ಕರಣ ಇವು ಪಂಚಾಂಗದ ಅಂಗಗಳು. ನಕ್ಷತ್ರಗಳು ಪಂಚಾಂಗದ ಒಂದು ಅವಿಭಾಜ್ಯ ಅಂಗ. ಈ ನಕ್ಷತ್ರಗಳ ಸ್ವಭಾವ ಗುಣಾವಗುಣಗಳನ್ನು ಹಾಗೂ ಮಳೆಗಳ ಗುಣಸ್ವಭಾಗವಳನ್ನು ತಮ್ಮ ಅನುಭವದಿಂದ ಬಲ್ಲ ಕುರಿಗಾರರು ಅವುಗಳಿಗೆ ಒಂದೊಂದು ನಕ್ಷತ್ರಗಳ ಹೆಸರನ್ನು ಕೊಟ್ಟು, ಪ್ರತಿ ಮಳೆಯ ಪ್ರಮಾಣವನ್ನು ಗುರುತಿಸಿ ಅವುಗಳಿಗೆ ಒಂದೊಂದು ವಾಹನಗಳನ್ನು ಗುರುತಿಸಿ ಅವುಗಳ ಆರಂಭ ಮತ್ತು ಮುಕ್ತಾಯದ ಚರಣಗಳನ್ನು ವ್ಯವಸ್ಥಿತ ರೂಪದಲ್ಲಿ ಕೊಡಲು ಮೊದಲು ಪ್ರಯತ್ನಿಸಿದವರು ಕುರಿಗಾರರೆಂದು ಹೇಳಬೇಕಾಗುತ್ತದೆ."[೨೫]

ಕುರಿಗಾರರು ಕುರಿಗಳ ಚಲನ-ವಲನಗಳನ್ನು ಆಧರಿಸಿ ಮಳೆಬರುವುದು ಮತ್ತು ಬಾರದಿರುವುದನ್ನು ನಿಖರವಾಗಿ ಹೇಳುತ್ತಾರೆ. ಮೇಯಿಸಲು ಬಿಟ್ಟ ಕುರಿಗಳಿಗೆ ಮಳೆ ಬರುವ ಸೂಚನೆ ಮೊದಲು ಗೊತ್ತಾಗುತ್ತದೆ. ಮಳೆ ಸೂಚನೆ ಗೊತ್ತಾಗುತ್ತಿದ್ದಂತೆ ಅವುಗಳ ಮೇಯ್ಯುವುದನ್ನು ಬಿಟ್ಟು ಗುಂಪು-ಗುಂಪಾಗಿ ನಿಲ್ಲುತ್ತವೆ. ಆಗ ಕುರಿಗಾರನು ಆಕಾಶದಲ್ಲಿರುವ ಮೋಡ ಹಾಗೂ ಬೀಸುವ ಗಾಳಿಯ ಚಲನ-ವಲನಗಳನ್ನು ಆಧರಿಸಿ ಮಳೆಯ ಮೂನ್ಸುಚನೆಯನ್ನು ಅರಿತು ಕುರಿಗಳನ್ನು ದಿಬ್ಬದ ಕಡೆಗೆ ಹೊಡೆದುಕೊಂಡು ಹೋಗುತ್ತಾನೆ. ಅಲ್ಲಿಯೂ ಕುರಿಗಳು ಮೇಯ್ಯುವುದನ್ನು ಬಿಟ್ಟು ಗುಂಪು-ಗುಂಪಾಗಿ ನಿಂತುಕೊಂಡಾಗ, ಅವುಗಳನ್ನು ಚದುರಿಸಲು ತನ್ನ ಹೆಗಲ ಮೇಲಿರುವ ಕರಿ ಕಂಬಳಿಯನ್ನು, ಕರಿ ಮುಂದು ಮಾಡಿ ಕುರಿಗಳಿಗೆ ತಾಗು(ತಟ್ಟು)ವಂತೆ ಐದಾರು ಬಾರಿ ಬೀಸುತ್ತಾನೆ. ಕಂಬಳಿಯ ಕರಿಗಳು ತಾಗಿದರು ಕೂಡ ಗುಂಪು-ಗುಂಪಾಗಿರುವ ಕುರಿಗಳು ಚದುರದಿದ್ದರೆ ಮಳೆ ಬರುವುದು ಖಚಿತವೆಂದು ಕುರಿಗಾರನು ತಿಳಿದುಕೊಳ್ಳುತ್ತಾನೆ. ಆಗ ಕುರಿಗಾರನು ತೋಟ-ಪಟ್ಟಿಗಳಲ್ಲಿ ಕೆಲಸಗಳಲ್ಲಿ ನಿರತರಾದ ರೈತರಿಗೆ ಮಳೆ ಬರುವ ವಿಚಾರವನ್ನು ತಿಳಿಯಪಡಿಸುವುದಕ್ಕಾಗಿ ಎತ್ತರದ ಸ್ಥಳಕ್ಕೆ ಹೋಗಿ ಹೆಗಲ ಮೇಲಿರುವ ಕರಿ ಕಂಬಳಿಯನ್ನು, ತನ್ನ ತಲೆಯ ಮೇಲಿಂದ ಜೋರಾಗಿ ಬೀಸುತ್ತ ಕೂಗುವನು. ಇದನ್ನು ನೋಡಿದ ರೈತರು 'ಕುರಿಗಾರನು ಕಂಬಳಿ ಬೀಸಿದರೆ ಮಳೆಯಾಗುವುದು ನಿಶ್ಚಿತ'ವೆಂದು ಭಾವಿಸುತ್ತಿದ್ದರು. ಹೀಗೆ ಆತ ಕರಿ ಕಂಬಳಿಯನ್ನು ಎತ್ತರದ ಸ್ಥಳದಿಂದ ಬೀಸಿ ಕೆಳಗಿನ ಪ್ರದೇಶಕ್ಕೆ

ಬರುವಷ್ಟರಲ್ಲಿಯೇ ಮಳೆ ಸುರಿಯಲಾರಂಭಿಸುತ್ತಿತ್ತು. ಆ ಕಾರಣದಿಂದಾಗಿ ಇಂದಿಗೂ ಕುರುಬ ಕಂಬಳಿ ಬೀಸಿದರೆ ಮಳೆಯಾಗುತ್ತದೆ ಎಂಬ ನಂಬಿಕೆ ಜನಸಾಮಾನ್ಯರಲ್ಲಿದೆ.

೪.೩.೫ ಕುರುಬರ ಬೋನಿಗೆ :

ಕುರುಬರು ಈ ನಾಡಿನ ಅತ್ಯಂತ ಪ್ರಾಚೀನ ನಿವಾಸಿಗಳು ಎಂಬುದರಲ್ಲಿ ಎರಡು ಮಾತಿಲ್ಲ. ಪಶುಪಾಲಕರಾದ ಇವರು ಅಡವಿ ವಾಸಿಗಳು. ಇವರು ಮೋಸ, ವಂಚನೆ, ಕಪಟಗಳನ್ನು ಅರಿಯದ ಮುಗ್ಧರು, ಸ್ವಾರ್ಥ ಬಯಸದ ನಿಸ್ವಾರ್ಥಿಗಳು, ಹಾಲಿನಂಥ ಮನಸ್ಸಿನ ಪ್ರಾಮಾಣಿಕರು ಎಂದೆಲ್ಲ ಅವರ ವ್ಯಕ್ತಿತ್ವವನ್ನು ಜನರು ಗುರುತಿಸುವರು. ಅಲ್ಲದೇ ಇವರು ಪ್ರಕೃತಿಯ ಮೊದಲಿಗರು ಎನ್ನುವ ಕಾರಣಕ್ಕೆ ಕುರುಬರನ್ನು ಪ್ರಮುಖರೆಂದು ಭಾವಿಸುವರು. ಆದ್ದರಿಂದ ಜನರು ಯಾವುದಾದರೂ ಹೊಸ ಉದ್ಯೋಗ, ವ್ಯವಹಾರ ಪ್ರಾರಂಭಿಸುವಾಗ ಕುರುಬರಿಂದ ಆರಂಭಿಸುವರು. ಇದನ್ನೇ ಕುರುಬರ ಬೋನಿಗೆ ಎನ್ನುವರು. ತಮ್ಮ ಲಾಭಕ್ಕಾಗಿ ಮುಗ್ಧ ಕುರುಬರನ್ನು ಬಳಸಿಕೊಳ್ಳುವ ಮೇಲ್ವರ್ಗವು ಕೆಲವು ಸಂದರ್ಭಗಳಲ್ಲಿ ಅವರನ್ನು ಗೌರವಿಸದೆ ಅಸ್ಪೃಶ್ಯರಂತೆ ಕಾಣುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಕುರಬರಲ್ಲಿಯ ಕೆಲವರು ಸಮಾಜದಲ್ಲಿ ಪ್ರಾಮುಖ್ಯತೆಯನ್ನು ಪಡೆದು ಕೊಂಡಿರುವರು, ಆದರೆ ಅವರ ಸಂಖ್ಯೆ ಕಡಿಮೆ. ಇನ್ನೂ ಹೆಚ್ಚಿನವರು ಸಮಾಜದ ಮುಖ್ಯವಾಹಿನಿ ಬಂದಿಲ್ಲವೆಂದೇ ಹೇಳಬಹುದು.

೪.೩.೬ ಹೇಳಿಕೆಗಳು :

ಕುರಿಗಾರರು ನಿಸರ್ಗ ಜೀವಿಗಳು. ಭೂಮಿ-ಆಕಾಶಗಳನ್ನೇ ಹಾಸಿ-ಹೊದ್ದು ಮಲಗಿ ಕೊಂಡವರು. ನೀರು, ಬೆಂಕಿ, ವಾಯು, ಭೂಮಿ, ಆಕಾಶಗಳ ರಹಸ್ಯವನ್ನು ತಮ್ಮ ಅನುಭವ ಆಳದಿಂದ ಕಂಡುಕೊಳ್ಳಲು ಪ್ರಯತ್ನಿಸಿದವರು. ಹತ್ತಾರು ತಲೆಮಾರುಗಳ ಪ್ರಯತ್ನದಿಂದಾಗಿ 'ಕುರುಬರ ರಟ್ಟಮತಶಾಸ್ತ್ರ' ಗ್ರಂಥ ರಚನೆಯಾಯಿತು. ಈ ಗ್ರಂಥದಲ್ಲಿರುವ ಹೇಳಿಕೆಗಳು ಭವಿಷ್ಯವಾಣಿಗಳಾಗಿದ್ದರಿಂದ ಇದನ್ನು ಕಾಲಜ್ಞಾನವನ್ನು ಹೇಳುವ ಮೂಲ ಗ್ರಂಥವೆಂದು ಅರ್ಥೈಯಿಸಲಾಗಿದೆ. ಕುರಿಗಾರರು ಭವಿಷ್ಯವಾಣಿಗಳನ್ನು ನುಡಿದ ಮೊದಲ ಕಾಲಜ್ಞಾನಿಗಳು. ರಾಶಿ ನಕ್ಷತ್ರಗಳ ಗುರುತಿಸುವಿಕೆ, ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಮಳೆಗಳು ಎಷ್ಟೇಷ್ಟು ಪ್ರಮಾಣದಲ್ಲಿ ಆಗುತ್ತದೆ, ಋತುಮಾನಕ್ಕೆ ತಕ್ಕಂತೆ ಯಾವ ಯಾವ ಗಾಳಿಗಳು ಯಾವ ಯಾವ ದಿಕ್ಕಿನಿಂದ ಬೀಸುತ್ತವೆ, ಅಮವಾಸ್ಯೆ ಹುಣ್ಣಿಮೆಗಳ ಆಗಮನ ಹೀಗೆ ಹಲವಾರು ವಿಷಯಗಳ ಕುರಿತಾದ ಕುರಿಗಾರರ ಹೇಳಿಕೆಗಳನ್ನು ತರ್ಕದಿಂದ ನೋಡಿದಾಗ ಸಾಮಾನ್ಯ ಅನುಭವಿ ಕುರಿಗಾರನು ಕೂಡ ಕಾಲಜ್ಞಾನಿಯಂತೆ ತೋರುತ್ತಾನೆ.

"ದೇಶದ ನಾಗರಿಕತೆ ಪ್ರಾರಂಭವಾದುದು ಪಶುಪಾಲನೆಯಿಂದ. ಈ ಪಶುಪಾಲಕರೆ ಈ ರೂಢಿ (ಆಚರಣೆಯ ವಿಧಾನಗಳು) ಎಂಬುದಕ್ಕೆ ಮೂಲವಾಗಿರಬಹುದು. ಅವರ ಪ್ರತಿಫಲದಿಂದ ಮೂಡಿ ಬಂದ ಈ ರೂಢಿಗಳೆ ಇಂದಿನ ಭವ್ಯ ಸಂಸ್ಕೃತಿಯಾಗಿ ಆಧಾರ ಸ್ತಂಭಗಳಾಗಿ ನಿಂತಿವೆ. ಕೆಲವು ಸಲ ಈ ರೂಢಿಗಳೇ ಹೇಳಿಕೆಗಳಾಗಿ; ಹೇಳಿಕೆಗಳೇ ಕಾರಣಿಕಗಳಾಗಿ; ಈ ಕಾರಣೀಕಗಳೆ ಕಾಲಜ್ಞಾನದ ಮಾತುಗಳಾಗಿ ಹೊರಹೊಮ್ಮಿರಲೂಬಹುದು."[೨೬] ನಿಸರ್ಗದ ಪ್ರತಿಯೊಂದು ಕ್ರಿಯೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸುವ

ಕುರಿಗಾರರು ನಾಗರಿಕತೆಯ ವಿಕಸನಕ್ಕೆ ಕಾರಣಕರ್ತರಾದವರು. ಹೀಗಾಗಿ ಪಂಚಮಹಾಭೂತಗಳ ರಹಸ್ಯವನ್ನು ಸುಲಭವಾಗಿ ಗುರುತಿಸುವಲ್ಲಿ ಇವರು ಯಶಸ್ವಿಯಾಗಿರುವರು. ಶತ-ಶತಮಾನಗಳಿಂದ ತಾವು ಪಡೆದ ಅನುಭವಗಳನ್ನು ಒರೆಗೆ ಹಚ್ಚಿ ನಿಖರವಾಗಿ ಹೇಳಿಕೆಗಳನ್ನು ಹೇಳುತ್ತ ಬಂದವರು ಕುರಿಗಾರರು. ಆದ್ದರಿಂದ ಕುರಿಗಾರರು ಹೇಳುವ ಹೇಳಿಕೆಗಳು ನಿಜವಾಗುತ್ತವೆ ಎಂಬ ಬಲವಾದ ನಂಬಿಕೆ ಜನರಲ್ಲಿ ಮನೆಮಾಡಿಕೊಂಡಿದೆ.

ಕುರುಬ ಕುರಿಕಾಯುತ್ತ ತನ್ನ ಅನುಭವ ಜನ್ಯದಿಂದ ಹೇಳುತ್ತಿದ್ದ ಹೇಳಿಕೆಗಳು ಇಂದು ಶಿಷ್ಟ ರೂಪವನ್ನು ತಾಳಿಕೊಂಡಿವೆ. ದೇವತೆಗಳ ಪೂಜಾರಿಗಳು ಕಠಿಣ ವ್ರತಾಚರಣೆಗಳನ್ನು ಪಾಲಿಸುವ ಬ್ರಹ್ಮಚಾರಿಗಳು, ದೇವತೆಗಳ ಉತ್ಸವ-ಜಾತ್ರೆಗಳ ಸಮಯದಲ್ಲಿ ಸೇರುವ ಜನರಿಗೆ ತಾನು ಕಂಡುಕೊಂಡ ಸತ್ಯವನ್ನು ಬಿತ್ತರಿಸಿತ್ತಿದ್ದು ಇವುಗಳೇ ಹೇಳಿಕೆಗಳಾಗಿವೆ. ಹೇಳಿಕೆಗಳನ್ನು ಹೇಳುವಾಗ "ಪೂಜಾರಿಯ ಮೈಯಲ್ಲಿ ದೇವರ ಪ್ರವೇಶವಾಗುತ್ತದೆ. ಇಲ್ಲವೇ ಪೂಜಾರಿಯೇ ದೈವೀಶಕ್ತಿಯಲ್ಲಿ ತಾದಾತ್ಮ್ಯ ಹೊಂದುತ್ತಾನೆ. ಹೀಗೆ ತಾದಾತ್ಮ್ಯ ಹೊಂದಲು ಪರಿಸರವು ಕಾರಣವಾಗುತ್ತದೆ. ಒಂದೇ ಸವನೆ ಡೊಳ್ಳಿನ ಬಡಿತ ಪ್ರಾರಂಭವಾಗುತ್ತದೆ. ಡೊಳ್ಳು ಬಡಿಯುವುದರಿಂದ ಹೊರಹೊಮ್ಮುವ ನಾದ ಆತನನ್ನು ಉನ್ಮಾದಗೊಳ್ಳುವಂತೆ ಪ್ರೇರಣೆ ನೀಡುತ್ತದೆ. ಅಲ್ಲಿ ದೈವೀ ಆವರಣ ಉಂಟಾಗುತ್ತದೆ. ಆಗ ಪೂಜಾರಿ ದೈವಿಕನಾಗಿ ನೆಲದ ಮೇಲಿದ್ದರೂ ಆತನ ಭಾವ ಭಗವಂತನಲ್ಲಿ ಲೀನವಾಗಿ ದೈವೀ ಸ್ಫೂರ್ತಿಗೆ ಒಳಗಾಗುತ್ತಾನೆ. ಅವು ತನಗಾದ ನೈಸರ್ಗಿಕ ಅಧ್ಯಯನದ ಫಲವನ್ನು ಬೆಡಗಿನ ಮಾತಿನಲ್ಲಿ ಒಂದು ರೀತಿಯ ಒಗಟಿನೊಂದಿಗೆ ಉಚ್ಚರಿಸುತ್ತಾನೆ. ಅವು 'ದೇವರ ಹೇಳಿಕೆ'ಗಳು ಎಂಬುದಾಗಿ ಕರೆಸಿಕೊಳ್ಳುತ್ತವೆ."[೨೭] ಇವು ಬಾವಿ ಭವಿಷ್ಯವನ್ನು ನಿರೂಪಿಸುತ್ತವೆ ಎಂಬ ನಂಬಿಕೆ ಜನರಲ್ಲಿದೆ. ಆ ಕಾರಣಕ್ಕಾಗಿ ಉತ್ಸವ-ಜಾತ್ರೆಗಳಿಗೆ ಆಗಮಿಸಿದ ಭಕ್ತರು ಈ ಹೇಳಿಕೆಗಳನ್ನು ದೇವರ ಹೇಳಿಕೆಗಳೆಂದು ಪರಿಭಾವಿಸುವರು. ಹೀಗಾಗಿ ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ಅಲಕನೂರಿನ ಕರೇಸಿದ್ಧ, ಯಲ್ಲಾರಟ್ಟಿಯ ಅರಣ್ಯಸಿದ್ಧ, ಕಂಕಣವಾಡಿಯ ಮತ್ತು ಹಿಡಕಲ್ಲ ಹಾಲಸಿದ್ಧರ ಜಾತ್ರೆಗಳಲ್ಲಿ ಹೇಳಿಕೆಗಳಾಗುತ್ತವೆ.

೪.೩.೭ ಕುರಿ ಬೆದರಿಸುವುದು :

ಕುರುಬರ ಪಾಲಿಗೆ 'ಕುರಿ' ಎಂದರೆ ಸಾಕ್ಷಾತ್ ಲಕ್ಷ್ಮೀ ಸ್ವರೂಪ. ಅವು ಅವರ ಪಾಲಿನ 'ಬದುಕು' (ಜೀವನ) ಅವುಗಳೆಂದರೆ ಅವರಿಗೆ ಸರ್ವಸ್ವ, ಅವುಗಳಿಲ್ಲದ ಬದುಕನ್ನು ಕಲ್ಪಿಸಿಕೊಳ್ಳಲಾರರು. ಆದ್ದರಿಂದ ದೀಪಾವಳಿಯ ಪಾಡ್ಯೆದಂದು ಅತೀ ಸಂಭ್ರಮದಿಂದ ಶ್ರದ್ಧಾ ಭಕ್ತಿಯಿಂದ ಗೌರವಪೂರ್ವಕವಾಗಿ ಕುರಿಗಳನ್ನು ಪೂಜಿಸುವರು. ಅವುಗಳನ್ನು ಹರ್ಷೋಲ್ಲಾಸಗೊಳಿಸುವುದಕ್ಕಾಗಿ ಕೃತಕ ಶಬ್ದಗಳನ್ನು ಮಾಡಿ ಅವುಗಳನ್ನು ಬೇದರಿಸಿ ಅವುಗಳ ಚೆನ್ನಾಟವನ್ನು ಕಣ್ತುಂಬಿಕೊಳ್ಳುವುದೇ ಕುರಿ ಬೆದರಿಸುವುದು. ಅಂದು "ಕುರುಬರು ತಮ್ಮ ಕುರಿದೊಡ್ಡಿಗಳನ್ನು ಸ್ವಚ್ಛಗೊಳಿಸಿ, ಸಾರಿಸಿ, ಹೆಂಡಿ ಪಾಂಡ್ರವ್ವರನ್ನು ಕೂಡ್ರಿಸಿ ಪೂಜಿಸುವರು. ದೊಡ್ಡಿಯ ಮಧ್ಯದಲ್ಲಿಯೇ ಒಂದು ಚಿಕ್ಕದಾದ ಹಂದರವನ್ನು ಹಾಕಿ ಕಂಬಕ್ಕೆ ಬಾಳೆದಿಂಡು, ಗರಿ-ಗರಿ ಕಬ್ಬು, ಜೋಳದ ದಂಟು, ಮಾವಿನ ತೋರಣಗಳನ್ನು ಕಟ್ಟಿ ಸಿಂಗರಿಸುವರು."[೨೮] ಕುರಿ ಟಗರುಗಳನ್ನು ತೊಳೆದು ಅವುಗಳ ಕೋಡುಗಳಿಗೆ ಕೆಂಪು, ಹಸಿರು ಮೊದಲಾದ ಬಣ್ಣಗಳನ್ನು ಹಚ್ಚಿ ಅವುಗಳ ಕೊರಳಿಗೆ ಚಂಡು ಹೂವಿನ

ಹಾರಗಳನ್ನು ಹಾಕುವರು. ವಿಶೇಷವಾಗಿ ಟಗರುಗಳನ್ನು ಅಲಂಕರಿಸುತ್ತಾರೆ. ದೊಡ್ಡಿಯ ಬಾಗಿಲು ಮತ್ತು ಅಂಗಳವನ್ನು ಜೋಳದ ಎಲೆಗಳು, ಅವರೆ ತೊಪ್ಪಲು, ಹೂವು, ಹೊನ್ನಾವರಿ ಮತ್ತು ಚೆಂಡು ಹೂಗುಗಳಿಂದ ಅಲಂಕರಿಸುತ್ತಾರೆ. ಕುರಿದೊಡ್ಡಿಯಲ್ಲಿಯೇ ಕುಳ್ಳುಗಳ ಬೆಂಕಿ ಮಾಡಿ ಹಾಲು ಉಕ್ಕಿಸುವರು. ಅಲ್ಲಿಯೇ ಅಡುಗೆ ಮಾಡುವರು ಇಲ್ಲವೇ ಮನೆಯಲ್ಲಿ ಅಡುಗೆಮಾಡಿ ನೈವೇದ್ಯ ತಯಾರಿಸುವರು. ನಂತರ ಹೆಣ್ಣುಮಕ್ಕಳು ಕುರಿಗಳಿಗೆ ಆರುತಿ ಮಾಡಿ ನೈವೇದ್ಯವನ್ನು ಅರ್ಪಿಸುವರು. ನಂತರ ದೊಡ್ಡಿಯ ಬಾಗಿಲನ್ನು ತೆಗೆದು ಗಂಡು ಮಕ್ಕಳು ಕಂಚಿನ ತಾಟು (ಗಂಗಾಳ)ಗಳನ್ನು ಹಿಡಿದು ಕುರಿಗಳ ಹಿಂಡಿನ ಮಧ್ಯದಲ್ಲಿ ನಿಂತು ಜೋರಾಗಿ ಬಾರಿಸುವರು. ಅವುಗಳ ಶಬ್ದಕ್ಕೆ ಕುರಿಗಳು ಬೆದರಿ ಠಣ್ಣ–ಠಣ್ಣನೇ ಜಿಗಿದು ಚದರುತ್ತವೆ. ಕುರಿಗಳ ಜೊತೆಗೆ ಮಕ್ಕಳು ಜಿಗಿ–ಜಿಗಿದು ಹರ್ಷಗೊಳ್ಳುತ್ತಾರೆ. ಈ ದೃಶ್ಯ ನೋಡಲು ಸುಂದರವು ಆಕರ್ಷಕವು ಆಗಿರುತ್ತದೆ. ಪಶುಪಾಲಕರಾದ ಕುರುಬರು ಆದಿ ಕಾಲದಿಂದಲೂ ಈ ಪದ್ಧತಿಯನ್ನು ಆಚರಿಸುತ್ತಿರುವುದು ಅವರ ಅಸ್ಮಿತೆಯನ್ನು ಸಾರುತ್ತದೆ.

೪.೩.೮ ಹಟ್ಟಿ ಹಬ್ಬ :

ಆದಿ ಮಾನವನು ಆಹಾರಕ್ಕಾಗಿ ಅಲೆದಾಡದೆ ಗುಡ್ಡ ಗಾಡುಗಳ ಸುರಕ್ಷಿತ ಪ್ರದೇಶದಲ್ಲಿ ಹುಲ್ಲು ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡಲು ಆರಂಭಿಸಿದ. ಹೀಗೆ ಒಂದು ಗುಂಪು ಒಂದೆಡೆ ನೆಲೆ ನಿಂತಾಗ ಹುಟ್ಟಿಕೊಂಡ ವಾಸಸ್ಥಳಗಳೇ ಹಟ್ಟಿಗಳು. ಶಂ. ಬಾ. ಜೋಶಿ ಯವರು ಹೇಳುವಂತೆ 'ಹಟ್ಟಿ' ಎಂಬ ಪದ ಪಶುಪಾಲಕರ ವಾಸ್ತವ್ಯವನ್ನು ಸೂಚಿಸುವಂತದ್ದು. ಹಟ್ಟಿಗಳಲ್ಲಿ ವಾಸಿಸುವವರು ಹಟ್ಟಿಕಾರರು ಅಂದರೆ ಪಶುಪಾಲಕರು. ಪಶುಪಾಲಕರು ಪ್ರಕೃತಿಯ ಆರಾಧಕರು. ಪ್ರಕೃತಿಯಲ್ಲಿರುವ ನೆಲ–ಜಲ, ಪಶು–ಪಕ್ಷಿ, ಮಳೆ–ಬೆಳೆ, ಪ್ರಾಣಿ ಸಂಕುಲ ಎಲ್ಲವೂ ಅವರ ಪಾಲಿಗೆ ದೇವರೇ. ಇವರು ಹಬ್ಬ ಹರಿದಿನಗಳಲ್ಲಿ ಪ್ರಕೃತಿಯನ್ನು ಪೂಜಿಸುವರು. ಅಂತೆಯೇ ಹಟ್ಟಿಕಾರರು ಪ್ರತಿ ವರ್ಷ 'ಹಟ್ಟಿ ಹಬ್ಬ' ಆಚರಿಸುವರು.

ಹಟ್ಟಿ ಹಬ್ಬದಂದು ತಮ್ಮ ದಡ್ಡಿಯಲ್ಲಿರುವ ಕುರಿ–ಮೇಕೆ, ದನ–ಕರುಗಳನ್ನು ಶುಚಿಗೊಳಿಸಿ ಶೃಂಗಾರ ಮಾಡಿ ಪೂಜಿಸುವರು. ಊರ ತುಂಬೆಲ್ಲಾ ಸಿಂಗಾರ ಮಾಡಿದ ಎತ್ತುಗಳ ಮೆರವಣಿಗೆ ಮಾಡುವರು. ತೀರಿ ಹೋದ ಮನೆಯ ಹಿರಿಯರನ್ನು ಪೂಜಿಸುವರು ಹೀಗೆ ಹಲವಾರು ಬಗೆಯ ಸಂಪ್ರದಾಯ, ಆಚರಣೆಗಳನ್ನು ಆಚರಿಸುವ ವಿಶಿಷ್ಟವಾದ ಹಬ್ಬವೇ ಹಟ್ಟಿಹಬ್ಬ. ಈ ಹಬ್ಬವು ಅಶ್ವಿನಿ ಮತ್ತು ಕಾರ್ತಿಕ ಮಾಸಗಳೆರಡರ ಮಧ್ಯದಲ್ಲಿ ಆಚರಿಸಲ್ಪಡುತ್ತದೆ. ಆಗ ತೋಟ–ಪಟ್ಟಿಗಳಲ್ಲಿ ಬೆಳೆಗಳೆಲ್ಲ ಹುಲುಸಾಗಿ ಬೆಳೆದು ನಿಂತು ರೈತನಿಗೆ ಸಂತೋಷವನ್ನುಂಟು ಮಾಡುವ ಕಾಲ. ಈ ಹಬ್ಬವನ್ನು ಒಂದು ದಿನ ಮಾತ್ರ ಆಚರಿಸುವುದಿಲ್ಲ. ನರಕ ಚತುರ್ದಶಿ, ಲಕ್ಷ್ಮೀ ಪೂಜೆ, ಭರಮದೇವನ ಪೂಜೆ ಎಂದೆಲ್ಲಾ ಒಂದೊಂದು ಹಬ್ಬವನ್ನು ಒಂದೊಂದು ದಿನ ಹಬ್ಬವನ್ನು ಆಚರಿಸುತ್ತಾರೆ. 'ಭರಮದೇವ'ನು ಹಟ್ಟಿಯ ಪಾಲಕ. ಅವನನ್ನು 'ಹಟ್ಟಿ ಹಬ್ಬ'ದಲ್ಲಿ ಪೂಜಿಸುವುದು ವಿಶೇಷ. ಈ ಹಬ್ಬವನ್ನಾಚರಿಸುವುದರಿಂದ ಪಶು ಸಂಪತ್ತು, ಧನ ಸಂಪತ್ತು ಹೆಚ್ಚಾಗುತ್ತದೆ ಎಂಬುದು ಹಟ್ಟಿಕಾರರ ದೃಢವಾದ ನಂಬಿಕೆಯಾಗಿದೆ. ಆ ಕಾರಣಕ್ಕಾಗಿ ಇಂದಿಗೂ ಕುರುಬರು ಈ ಹಬ್ಬವನ್ನು ತಪ್ಪದೇ ಆಚರಿಸುತ್ತಾರೆ.

ಹಾಲುಮತದ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪರಂಪರಾಗತ ಕಲೆಗಳಾದ ಡೊಳ್ಳು ಬಾರಿಸುವುದು, ಡೊಳ್ಳು ಕುಣಿತ, ಡೊಳ್ಳಿನ ಹಾಡು, ಕೈಪಟ್ಟು ಬಾರಿಸುವುದು, ದಟ್ಟಿ ಕುಣಿತ ಮುಂತಾದವುಗಳು ಇಂದು ಜಾಗತೀಕರಣದ ಹೊಸ್ತಿಲಲ್ಲಿ ನಶಿಸುತ್ತಿವೆ. ಕಲೆ ಮತ್ತು ಕಲಾವಿದರ ಉಳಿವಿಗಾಗಿ ಸರಕಾರಗಳು ಮುತುವರ್ಜಿ ವಹಿಸದೆ ಇರುವುದು ಕಳವಳಕಾರಿ ಸಂಗತಿಯಾಗಿದೆ. ಹಾಲುಮತ ದೇವತೆಯ ಆರಾಧನೆಯ ಹಿನ್ನೆಲೆಯಲ್ಲಿ ಆರಂಭಗೊಂಡಿರುವ ಕಲೆಗಳನ್ನು ಕಾಪಾಡಿಕೊಂಡು ಹೋಗುವ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಇವುಗಳ ಉಳಿವಿಗಾಗಿ ರಾಜಕೀಯ ಮತ್ತು ಸಾಮಾಜಿಕ ಮುಖಂಡರು ತಮ್ಮ ಸೇವೆಯನ್ನು ಮುಡುಪಾಗಿಡುವುದು ಅವಶ್ಯಕವಾಗಿದೆ. ರಾಜಕೀಯ ನಾಯಕರ ಇಚ್ಛಾಶಕ್ತಿಯ ಕೊರತೆಯಿಂದಾಗಿ ಹಾಲುಮತದ ಜನಪದ ಕಲೆಗಳು ಮತ್ತು ಕಲಾವಿದರು ಸೊರಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ, 'ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ'ಯನ್ನು ಸ್ಥಾಪಿಸಿದಂತೆ 'ಹಾಲುಮತ ಕಲೆಗಳ ಸಂರಕ್ಷಣಾ ಅಕಾಡೆಮಿ'ಯನ್ನು, ಪ್ರತ್ಯೇಕವಾಗಿ ಸ್ಥಾಪಿಸಬೇಕು. ಹಾಲುಮತದ ಕುಲದೈವವಾದ ಬೀರಪ್ಪನ ಆಡಂಬೋಲಾದ ರಾಯಬಾಗ ಪರಿಸರದಲ್ಲಿಯೇ ಈ ಅಕಾಡೆಮಿಯನ್ನು ಸ್ಥಾಪಿಸಿ ಆರಾಧನೆಯ ಕಲೆಗಳನ್ನು ಮತ್ತು ಕಲಾವಿದರನ್ನು ಪ್ರೋತ್ಸಾಹಿಸಬೇಕಿರುವುದು ಅವಶ್ಯಕವಾಗಿದೆ.

ಈ ಮೇಲಿನ ಎಲ್ಲವುಗಳನ್ನು ಅಧ್ಯಯನಕ್ಕೆ ಬಳಸಿಕೊಂಡು ಮಾಹಿತಿಗಳನ್ನು ಸಂಕಲಿಸುವುದು ಅಧ್ಯಯನದ ಒಂದು ವಿಧವಾದರೆ, ಈ ನಾಡಿನ ಸಾಂಸ್ಕೃತಿಕ ನೆಲೆಗಳು ಮತ್ತು ಕಲಾವಿದರ ಕೊಡುಗೆಗಳನ್ನು ಅವಲೋಕಿಸುವುದು ಇನ್ನೊಂದು ವಿಧ. ಈ ಎರಡು ಕ್ರಮಗಳನ್ನು ಇಲ್ಲಿ ಅನುಸರಿಸಲಾಗಿದೆ. ಒಂದು ಅರ್ಥದಲ್ಲಿ ಇದು ರಾಯಬಾಗ ಪರಿಸರದ ಹಾಲುಮತ ಸಮುದಾಯದ ಸಮಗ್ರ ಚರಿತ್ರೆಯ ಸಂಪುಟ.

ಟಿಪ್ಪಣಿಗಳು :

೧) ಹಿ. ಚಿ. ಬೋರಲಿಂಗಯ್ಯ (ಸಂ), **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಕಾಶಕರು, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ೧೯೯೬, ಪುಟ-೯೦

೨) ಬಾಲಕೃಷ್ಣ ಜಂಬಗಿ, **ನಮ್ಮೂರ ಜಾನಪದ**, ಆದಿ ಗಂಗಾ ಪ್ರಕಾಶನ, ಕಾಲೇಜು ರಸ್ತೆ ಹಾರೂಗೇರಿ, ೨೦೧೩, ಪುಟ-೨೦೨

೩) ಚಂದ್ರಪ್ಪ ಸೊಬಟಿ, **ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ**. ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೩, ಪುಟ-೩೧

೪) ಹಾಲೇಶ್ ಎಂ. ಮೇಟಿ, **ಡೊಳ್ಳಿನ ಹಾಡುಗಳು**, ಎಂ.ಎಂ. ಕರಡಿ ಬುಕ್ ಸೆಲ್ಲರ್, ಹುಬ್ಬಳ್ಳಿ, ೧೯೫೯. ಪುಟ-೨೮

೫) ಚಂದ್ರಪ್ಪ ಸೊಬಟಿ, **ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೩, ಪುಟ-೩೨

೬) ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು**, ಶೈಲಚಂದ್ರ ಪ್ರಕಾಶನ; ವಿಜಾಪೂರ, ೨೦೧೧, ಪುಟ-೬೦

೭) ವೀರೇಶ ಬಡಿಗೇರ, (ಲೇ) **ಡೊಳ್ಳು ಕುಣಿತ** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೪**, ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪುಟ-೨೨

೮) ಹಿ. ಚಿ. ಬೋರಲಿಂಗಯ್ಯ (ಸಂ) : **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಕಾಶಕರು, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೧೯೯೬, ಪುಟ-೧೦೭

೯) ಚಂದ್ರಪ್ಪ ಸೊಬಟಿ, **ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೩, ಪುಟ-೫೮

೧೦) **ಪೂರ್ವೋಕ್ತ**, ಪುಟ-೬೫

೧೧) ಹಿ. ಚಿ. ಬೋರಲಿಂಗಯ್ಯ (ಸಂ), **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಕಾಶಕರು, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ೧೯೯೬, ಪುಟ-೧೧೦

೧೨) ನಿಂಗಣ್ಣ ಸಣ್ಣಕ್ಕಿ (ಲೇ), **ದಟ್ಟಿಕುಣಿತ : ಕಲೆ ಮತ್ತು ಪ್ರದರ್ಶನ**, ಡಾ. ಶ್ರೀರಾಮ ಇಟ್ಟಣ್ಣವರ (ಸಂ) **ಹಾಲುಕೆನೆ**. ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ, ೨೦೦೨, ಪುಟ-೨೬೧

೧೩) ಚಂದ್ರಪ್ಪ ಸೊಬಟಿ, **ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೩, ಪುಟ-೬೧

೧೪) ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು**, ಶೈಲಚಂದ್ರ ಪ್ರಕಾಶನ, ವಿಜಾಪೂರ, ೨೦೧೧, ಪುಟ-೧೫೨

೧೫) ಬೋನಾ ಬಸವರಾಜ, (ಲೇ) **ಕುರುಬರ ಗೋತ್ರಗಳು ಹಾಗೂ ಬೆಡಗುಗಳು**, ಡಾ. ಶ್ರೀರಾಮ ಇಟ್ಟಣ್ಣವರ (ಸಂ) **ಹಾಲುಕೆನೆ**, ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪೂರ, ೨೦೦೨, ಪುಟ-೧೩೫

೧೬) ವಕ್ತೃ **ಕರೆಪ್ಪ ಶಿವರಾಯಿ ಪೂಜೇರಿ**, ಹಾರೂಗೇರಿ

೧೭) ಟಿ. ಎಸ್. ವಂಟಗೂಡಿ **ರಾಯಬಾಗ ತಾಲೂಕಿನ ಹಾಲುಮತ ದೈವಗಳು**, ಪ್ರಕಾಶನ ವಿದ್ಯಾ ಪ್ರಕಾಶನ ಹಿಡಕಲ್ಲ ೨೦೧೦, ಪುಟ-೮೨

೧೮) ಕೆ. ವಿ. ಬೀಳಗಿ **ಹಾಲುಮತ ಪುರಾಣ ದರ್ಶನ**, ಪ್ರಕಾಶನ, ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ ಹಾರೂಗೇರಿ, ೨೦೧೬, ಪುಟ-೨೧

೧೯) **ವಕ್ತೃ ದೇವಪ್ಪ ಹೊನ್ನಪ್ಪ ಯಲ್ಲಟ್ಟಿ**, ಅಲಕನೂರ

೨೦) **ವಕ್ತೃ ಮುದಕ್ಕಪ್ಪ ಕರೆಪ್ಪ ಪೂಜೇರಿ**, ಹಾರೂಗೇರಿ

೨೧) ಬಾಲಕೃಷ್ಣ ಜಂಬಗಿ, **ನಮ್ಮೂರ ಜಾನಪದ**, ಆದಿ ಗಂಗಾ ಪ್ರಕಾಶನ, ಕಾಲೇಜು ರಸ್ತೆ ಹಾರೂಗೇರಿ, ೨೦೧೩, ಪುಟ-೩೦೫

೨೨) ಕೆ. ವಿ. ಬೀಳಗಿ, **ಹಾಲುಮತ ಪುರಾಣ ದರ್ಶನ**, ಪ್ರಕಾಶನ, ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ ಹಾರೂಗೇರಿ, ೨೦೧೬, ಪುಟ-೨೮

೨೩) ಮಹಾಲಿಂಗ ಮಂಗಿ, (ಲೇ) **ದಟ್ಟಿ ಕುಣಿತ** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೪**, ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೩, ಪುಟ-೪೧

೨೪) ಟಿ. ಎಸ್. ವಂಟಗೂಡಿ, **ರಾಯಬಾಗ ತಾಲೂಕಿನ ಹಾಲುಮತ ದೈವಗಳು**, ಪ್ರಕಾಶನ ವಿದ್ಯಾ ಪ್ರಕಾಶನ ಹಿಡಕಲ್ಲ, ೨೦೧೦, ಪುಟ-೭೬

೨೫) ಎಸ್. ಎಫ್. ಜಕಬಾಳ, **ಕುರಿಗಾರರ ಕಾಲಜ್ಞಾನ**, ಡಾ. ಎಫ್. ಟಿ. ಹಳ್ಳಿಕೇರಿ **ಹಾಲುಮತ ಅಧ್ಯಯನ ೧**, ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦, ಪುಟ-೧೧೫

೨೬) **ಪೂರ್ವೋಕ್ತ** ಪುಟ-೧೦೮

೨೭) ಎಂ. ಎಂ. ಪಟ್ಟಣಶೆಟ್ಟಿ (ಲೇ) **ಒಡೆಯರ ಹೇಳಿಕೆಗಳು**, ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಕುರುಬರ ಗುರು ಒಡೆಯರು**, ಪ್ರಕಾಶಕರು, ವಿಕಾಸ ಪ್ರಕಾಶನ ಹೊಸಪೇಟೆ, ೨೦೦೭, ಪುಟ-೮೭

೨೮) **ವಕ್ತೃ : ಮಾರುತಿ ಪುಂಡಲೀಕ ಹಳಿಂಗಳಿ**, ಮುಗಳಖೋಡ.

ಹಾಲುಮತ ಒಳಪಂಗಡಗಳು ಮತ್ತು ಸಾಧಕರು

೫.೧ ಒಳಪಂಗಡಗಳು

ಕರ್ನಾಟಕದ ಪ್ರಮುಖ ಜನಸಮುದಾಯಗಳಲ್ಲಿ ಕುರುಬ ಸಮುದಾಯವೂ ಒಂದು. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಪರಿಸರದಲ್ಲಿರುವ ಕುರುಬರು ಇಲ್ಲಿಯ ನೆಲಮೂಲ ಸಂಸ್ಕೃತಿಯವರು. ಈ ಕಾರಣದಿಂದಾಗಿ ಇವರು ಇಲ್ಲಿಯ ಬಹುಸಂಖ್ಯಾತರು ಮತ್ತು ಪ್ರಾಬಲ್ಯವನ್ನು ಹೊಂದಿದವರಾಗಿದ್ದಾರೆ. ಪ್ರತಿ ಸಂಸ್ಕೃತಿಗೂ ಜೀವ ಚೈತನ್ಯವಿದೆ, ಜ್ಞಾನವಿದೆ, ವಿವೇಕವಿದೆ. ಮೌಲ್ಯಗಳಿವೆ. ಇವರ ಸಂಸ್ಕೃತಿಯೂ ಜಾತಿ, ಧರ್ಮ, ವಿವಿಧ ಪಂಗಡ, ಆಹಾರ ಪದ್ಧತಿ, ನಂಬಿಕೆ–ಆಚರಣೆ, ಸಂಪ್ರದಾಯಗಳ ಮೂಲಕ ಜೀವಂತವಾಗಿವೆ. ಇವೆಲ್ಲವುಗಳನ್ನು ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಅಧ್ಯಯನಿಸುವುದು ಅವಶ್ಯಕ. ಇಲ್ಲಿರುವ ಹಾಲುಮತ ಜನಸಮುದಾಯದ ಅಧ್ಯಯನದ ದೃಷ್ಟಿಯಿಂದ ಸಂಪೂರ್ಣ ನಿರ್ಲಕ್ಷಿತ ಕ್ಷೇತ್ರವಾಗಿದೆ. ಈ ಸಮುದಾಯದಲ್ಲಿರುವ ವಿವಿಧ ಪಂಗಡಗಳ ಅಧ್ಯಯನ ನಡೆದಲ್ಲಿ ಹಾಲುಮತಸ್ಥರಲ್ಲಿ ಕಂಡು ಬರುವ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ, ಒಡೆಯರು, ಈರಗಾರರು ಇನ್ನೂ ಮೊದಲಾದ ಪಂಗಡದವರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಒಂದು ಸಮುದಾಯದ ಅಭಿವೃದ್ಧಿಗೆ ಇಂಥ ಅಧ್ಯಯನದ ವರದಿಗಳು ಮಾರ್ಗದಶಿಗಳಾಗಬಹುದು. ಹೀಗಾಗಿ ಈ ಅಧ್ಯಯನದ ಮುಖ್ಯ ಉದ್ದೇಶ ರಾಯಬಾಗ ಪರಿಸರದ ಹಾಲುಮತ ಸಮುದಾಯ ಚರಿತ್ರೆಯನ್ನು ಸಮಷ್ಠಿ ನೆಲೆಯಲ್ಲಿ ಅರ್ಥೈಸಿಕೊಳ್ಳುವುದು ಅಥವಾ ಕಟ್ಟಿಕೊಳ್ಳುವುದಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯೇ ಸಂಕೀರ್ಣವಾದದ್ದು. ಸಮುದಾಯಗಳು ಪಂಗಡಗಳು, ಒಳಪಂಗಡಗಳು, ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವುದು ಕಂಡು ಬರುತ್ತದೆ. ಆರಂಭದಲ್ಲಿ ಒಂದೇ ಆಗಿದ್ದ ಕುರುಬ ಜನಾಂಗವೂ ಕಾಲಾನಂತರದಲ್ಲಿ ಹಲವಾರು ಉಪ ಪಂಗಡಗಳಾಗಿ ವಿಭಜನೆಗೊಂಡಂತೆ ಕಂಡುಬರುತ್ತದೆ. ಈ ರೀತಿಯ ವಿಂಗಡನೆಗೆ ಅವರು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು, ಉದ್ಯೋಗದಲ್ಲಾದ ಬದಲಾವಣೆ, ಆಯಾ ಪ್ರದೇಶದಲ್ಲಿ ರೂಪಿಸಿಕೊಂಡ ಆಚಾರ ವಿಚಾರಗಳಲ್ಲಿಯ ಭಿನ್ನತೆಯೂ ಕಾರಣವಾಗಿರಬಹುದೆಂದು ತರ್ಕಿಸಲಾಗಿದೆ.

ಒಂದು ಸಮುದಾಯದಲ್ಲಿರುವ ಪಂಗಡಗಳು ಆ ಸಮುದಾಯದ ಸಾಂಸ್ಕೃತಿಕ ಅಸ್ಮಿತೆಗಳು. ಅವು ಸಮಾಜದ ಕಾಲವಾಹಿನಿಯಲ್ಲಿ ಹಲವಾರು ಕಾರಣಗಳಿಂದ ಬಿಡಿ–ಬಿಡಿ ಘಟಕಗಳಾಗಿ ರೂಪತಾಳಿರುತ್ತವೆ. ಆ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸುವಾಗ ಆ ಎಲ್ಲಾ ಪಂಗಡಗಳ ಸಾಂಸ್ಕೃತಿಕ ಕಥನಗಳನ್ನು ಒಟ್ಟಿಗೆ ಸೇರಿಸಿ ಅರ್ಥೈಸಿಕೊಳ್ಳುವುದು ಅವಶ್ಯಕ. ಆಗ ಮಾತ್ರ ಒಂದು ಜನಸಮುದಾಯದ ಸಮಷ್ಠಿ ಚರಿತ್ರೆಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುವುದು. ಈ ಕಾರಣಕ್ಕಾಗಿ ಕುರುಬ ಸಮುದಾಯದ ಸಾಮಾಜಿಕ ಸಂರಚನೆಯನ್ನು ವಿವರಿಸುವುದು ಮುಖ್ಯವಾಗಿದೆ.

೫.೧.೧ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ

ಕರ್ನಾಟಕ ಕುರುಬರಲ್ಲಿ ಕಂಡು ಬರುವ ಪ್ರಮುಖ ಎರಡು ಒಳಪಂಗಡಗಳೆಂದರೆ, ಒಂದು ಹತ್ತಿ ಕಂಕಣ, ಇನ್ನೊಂದು ಉಣ್ಣೆ ಕಂಕಣ. 'ಕಂಕಣ' ಎನ್ನುವ ಪದ ಇಲ್ಲಿ ವಿಶಾಲವಾದ ಅರ್ಥವನ್ನು ಪಡೆದುಕೊಂಡಿದ್ದು, 'ಕುಲ', 'ಪಂಗಡ', ಮತ್ತು 'ಮನೆತನ' ಎಂದು ಅರ್ಥಯಿಸಲ್ಪಟ್ಟಿದೆ. "'ಕಂಕಣ' ಅನ್ನುವುದು ಅವರ ಕುಲವನ್ನು ಗುರುತಿಸಿಕೊಳ್ಳುವುದಕ್ಕೆ ಬಳಕೆಯಾದ ಸಾಂಕೇತಿಕ ವಸ್ತು. ಹತ್ತಿ ಕಂಕಣದವರು ಹತ್ತಿಯನ್ನು ಸಾಂಕೇತಿಕ ವಸ್ತುವನ್ನಾಗಿ ಮಾಡಿಕೊಂಡರೆ, ಉಣ್ಣೆ ಕಂಕಣದವರು ಉಣ್ಣೆಯನ್ನು ಸಾಂಕೇತಿಕ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಇವು ಅವರವರ 'ಕುಲಚಿಹ್ನೆ'ಯು ಹೌದು. ಒಂದು ಮಾತನ್ನು ಇಲ್ಲಿ ಗಮನಿಸಬೇಕು. ಆರಂಭದಲ್ಲಿ ಕುಲ ಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು ದೈವವಾಗಿರಲಿಲ್ಲ. ಆದರೆ ಬರು-ಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸಬಯಸಿತು. ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರಿಗೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪುಗೊಂಡಿರಬೇಕು ಎನ್ನುವುದು ಅನೇಕ ವಿದ್ವಾಂಸರ ಅಭಿಪ್ರಾಯ."[೧]

ಎರಡು ಕಂಕಣಗಳ ಮಧ್ಯೆದಲ್ಲಿ ವಿಶೇಷವಾದ ಭೇದಭಾವವಿದೆ. ಈ ಭೇದಭಾವ ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಬೀದರ, ಬಳ್ಳಾರಿ, ರಾಯಚೂರ, ಗುಲಬರ್ಗಾಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹರಿಹರ, ದಾವಣಗೆರೆಗಳನ್ನು ಒಳಗೊಂಡಂತೆ ದಕ್ಷಿಣ ಕರ್ನಾಟಕದಲ್ಲಿ ಈ ಪಂಗಡಗಳಲ್ಲಿನ ವ್ಯತ್ಯಾಸಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಕುರುಬ ಸಮುದಾಯದಲ್ಲಿ ಎರಡು ಪಂಗಡಗಳು. "ಕುರುಬರಲ್ಲಿ ಉಣ್ಣೆ ಕಂಕಣ ಮತ್ತು ಹತ್ತಿ ಕಂಕಣ ಕುರುಬರೆಂದು ಎರಡು ಪ್ರಮುಖವಾದ ಪಂಗಡಗಳಿವೆ. ಉಣ್ಣೆ ಕಂಕಣ ಕುರುಬರು ಮದುವೆಯ ಸಂದರ್ಬದಲ್ಲಿ ವಧು ವರರ ಕೈಗಳಿಗೆ ಉಣ್ಣೆಯ ನೋಲಿನಿಂದ ಮಾಡಿದ ಎಳೆಯನ್ನು ಕಟ್ಟುತ್ತಾರೆ. ಹೀಗಾಗಿ ಇವರಿಗೆ ಉಣ್ಣೆ ಕಂಕಣ ಕುರುಬರು ಎಂದು ಹೆಸರಾಯಿತು. ಮದುವೆಯ ವೇಳೆಯಲ್ಲಿ ಮದುಮಕ್ಕಳಿಗೆ ಹತ್ತಿ ನೂಲಿನಿಂದ ಕಂಕಣವನ್ನು ಕಟ್ಟಿದರೆ ಇವರು ಹತ್ತಿ ಕಂಕಣದವರೆಂದು ಹೆಸರು ಪಡೆದುಕೊಂಡಿದ್ದಾರೆ. ಈ ಕಂಕಣ ಭೇದವನ್ನು ಬಿಟ್ಟರೆ ಈ ಎರಡೂ ಪಂಗಡಗಳ ನಡುವೆ ಮತ್ತಾವುದೇ ವ್ಯತ್ಯಾಸವಿಲ್ಲ. ಈ ಎರಡೂ ಪಂಗಡಗಳಲ್ಲಿ ನೀರು ಬಳಕೆ ಅಂದರೆ ಊಟ ಉಪಚಾರಗಳು ಯಾವುದೇ ಭೇದವಿಲ್ಲದೆ ನಡೆಯುತ್ತವೆ. ಆದರೆ ಹೆಣ್ಣು-ಗಂಡಿನ ಕೊಡು-ಕೊಳ್ಳುವಿಕೆಯ ವ್ಯವಹಾರ ಮಾತ್ರ ಕಂಡುಬರುವುದಿಲ್ಲಾ. ಕಾರಣ ಎರಡೂ ಪಂಗಡಗಳಲ್ಲಿ ನಾವೂ ಅಣ್ಣ ತಮ್ಮಂದಿರೆಂಬ ಭಾವನೆ ಮನೆಮಾಡಿದೆ. ಹೀಗೆ ಕುರುಬರಲ್ಲಿ ಉಂಟಾಗಿರುವ ಕಂಕಣ ಭೇದಗಳಿಗೆ ಮೂಲವನ್ನು ಹುಡುಕಿದರೆ ಹಲವಾರೂ ಕಟ್ಟು ಕಥೆಗಳು ಕುರುಬ ಜನಾಂಗಲ್ಲಿಯೂ ಹಾಲುಮತ ಪುರಾಣಗಳಲ್ಲಿಯೂ ದೊರೆಯುತ್ತದೆ."[೨]

ಕಥೆ-೧ : ಕೈಲಾಸದಲ್ಲಿ ಶಿವ ಪಾರ್ವತಿಯರ ಒಡ್ಡೋಲಗದಲ್ಲಿ ಉಪಸ್ಥಿರಿದ್ದಾಗ ಭೃಂಗಿ ತನ್ನ ಮೂರು ಕಾಲುಗಳಿಂದ ನರ್ತನ ಮಾಡಿದ. ಇದನ್ನು ನೋಡಿದ ದೇವತೆಗಳು ಅಪಹಾಸ್ಯದಿಂದ ನಕ್ಕರು. ಆಗ

ಭೃಂಗಿ ಕೋಪಗೊಂಡು 'ನೀವು ಭೂಲೋಕದಲ್ಲಿ ಕುರಿಗಳಾಗಿ ಹುಟ್ಟಿ' ಎಂದು ಶಾಪ ಕೊಟ್ಟನು. ಶಾಪಗ್ರಸ್ತ ದೇವತೆಗಳು ಕುರಿಗಳಾಗಿ ಹುಟ್ಟಿ ಭೂಲೋಕದ ಹುತ್ತವೊಂದರಲ್ಲಿ ಅಡಗಿ ಕುಳಿತರು.

ಕಥೆ-೨ : "ಕಲಿಯುಗಾದಿಯಲ್ಲಿ ಕೊಲ್ಲಾಪುರದಲ್ಲಿ 'ಮಾಯಿ' ಎಂಬ ದೇವತೆಯು ತನ್ನ ಮಹಿಮೆಯಿಂದ ನವಕೋಟಿ ಸಿದ್ಧರನ್ನು ಸೆರೆಯಲ್ಲಿಟ್ಟುಕೊಂಡಿದ್ದನ್ನು ಕೇಳಿ ಉಗ್ರ ಮೂರ್ತಿಗೆ ಅಗ್ರಹವುಂಟಾಗಿ ರೇವಣಸಿದ್ಧನೆಂಬ ಅಭಿದಾನದಿಂದ ಬಂದು ಆ ಕ್ಷುದ್ರ ದೇವತೆಯನ್ನು ನಿಗ್ರಹಿಸಿ ನವಕೋಟಿ ಸಿದ್ಧರನ್ನು ಉದ್ಧರಿಸಿದನು. ಇಷ್ಟು ಜನರನ್ನು ಹೇಗೆ ರಕ್ಷಿಸಬೇಕೆಂದು ಅರಿಯದೆ ಅವರಲ್ಲಿ ಅರ್ಧ ಜನರನ್ನು ತಮ್ಮ (ರೇವಣಸಿದ್ಧರ) ಹೆಸರು ಹೇಳಿಕೊಂಡು ಭಿಕ್ಷೆಯಿಂದ ಜೀವಿಸಿರೆಂದೂ, ಉಳಿದರ್ಧ ಜನರನ್ನು ಕುರಿಗಳನ್ನಾಗಿ ಮಾಡಿ ವಿಮೋಚನೆ ಸಿಗುವವರೆಗೆ ಒಂದು ಹುತ್ತದಲ್ಲಿರಿ ಎಂದು ಹೇಳಿ ಹೋದನು."[೩]

ಮೇಲಿನ ಎರಡು ಕಥೆಗಳಲ್ಲಿ ಬರುವ ಕುರಿ ಅಡಗಿರುವ ಹುತ್ತವು ಕುರುಬರ ಮೂಲ ಪುರುಷನಾದ ಆದಿಗೊಂಡನಿಗೆ ಸೇರಿದ ಹೊಲದಲ್ಲಿತ್ತು. ಆದಿಗೊಂಡನಿಗೆ ಏಳು ಜನ ಮಕ್ಕಳು ಅವರಲ್ಲಿ ಕೊನೆಯವನು ಪದ್ಮಣ್ಣ. ಸೋಮಾರಿಯಾದ ಇತ ಮನೆಯಲ್ಲಿ ಎರಡೊತ್ತು ತಿಂದುಂಡು ಕೆಲಸ ಮಾಡದೆ ತಿರುಗಾಡುತ್ತಿದ್ದ. ಆದ್ದರಿಂದ ಅವನನ್ನು ಉಂಡಾಡು ಪದ್ಮಣ್ಣ ಎಂದು ಕರೆಯುತ್ತಿದ್ದರು. ಇವನ ಸೋಮಾರಿತನವನ್ನು ಸಹಿಸದ ಅಣ್ಣಂದಿರು ಅವನನ್ನು ತಮ್ಮ ಜೊತೆ ಹೊಲದಲ್ಲಿ ಕೆಲಸ ಮಾಡಲು ಕಳುಹಿಸಬೇಕೆಂದೂ, ಇಲ್ಲವಾದರೆ ತಾವೂ ಕೆಲಸಕ್ಕೆ ಹೋಗುವುದಿಲ್ಲವೆಂದು ತಂದೆ-ತಾಯಿ ಮುಂದೆ ಹಟ ಹಿಡಿದು ಕುಳಿತರು. ಆಗ ವಿಧಿಯಿಲ್ಲದೆ ತಂದೆ ಮರುದಿನ ಪದ್ಮಣ್ಣನನ್ನು ಮುದ್ದಿಸಿ ಅಣ್ಣರೊಂದಿಗೆ ಹೊಲಕ್ಕೆ ಕೆಲಸಕ್ಕೆ ಕಳುಹಿಸಿದನು. ವ್ಯವಸಾಯದ ಯಾವ ಕೆಲಸವು ಗೊತ್ತಿಲ್ಲದ ಪದ್ಮಣ್ಣನಿಗೆ ಹೊಲದಲ್ಲಿರುವ ಹುತ್ತವನ್ನು ಅಗೆದು ಸಮಗೊಳಿಸಲು ಹೇಳಿದರು. ಆ ಹುತ್ತದಲ್ಲಿ ದೇವತೆಗಳು ಕುರಿಗಳಾಗಿ ಅಡಗಿ ಕುಳಿತಿರುವ ವಿಷಯ ಯಾರಿಗೂ ಗೊತ್ತಿರಲಿಲ್ಲ. ಪದ್ಮಣ್ಣ ಹುತ್ತವನ್ನು ಅಗೆಯುತ್ತಿರುವಾಗ ಹುತ್ತದ ಬಾಯಿಂದ ಕುರಿಗಳು ಮೇಲೆ ಬಂದವು. ಇವುಗಳನ್ನು ನೋಡಿದ ಪದ್ಮಗೊಂಡ ಭಯಭೀತನಾಗಿ ಅವುಗಳು ಹೊರ ಬರದಂತೆ ತಡೆಯಲು ಪ್ರಯತ್ನಿಸಿದ. ಬೆಂಕಿಯನ್ನು ಹಾಕಿದ, ಕುರಿಗಳು ಸುಟ್ಟಕೊಂಡೆ ಹೊರಬಂದವು. ಇದನ್ನು ಕಂಡು ಹೆದರಿದ ಪದ್ಮಗೊಂಡ ಭಯದಿಂದ ಕಾಡಿನತ್ತ ಓಡಿದ. ಕುರಿಗಳು ಆತನ ಬೆನ್ನ ಹಿಂದೆಯೇ ಓಡಿದವು. ಸುಸ್ತಾಗಿ ಕಾಡಿನಲ್ಲಿ ನಿಂತಾಗ 'ನಮ್ಮನ್ನು ರಕ್ಷಿಸು, ನಮ್ಮನ್ನು ರಕ್ಷಿಸು' ಎನ್ನುವಂತೆ ಅವನನ್ನೇ ನೋಡುತ್ತ ನಿಂತುಕೊಂಡವು. ದಿಕ್ಕುಕಾಣದ ಪದ್ಮಣ್ಣ ಶಿವನನ್ನು ಪ್ರಾರ್ಥಿಸಿದಾಗ, ಶಿವ ಪ್ರತ್ಯೇಕ್ಷನಾಗಿ ನೀನು ಕುರಿಗಳನ್ನು ಕಾಪಾಡುವುದಕ್ಕಾಗಿಯೇ ಭೂಲೋಕದಲ್ಲಿ ಜನ್ಮ ತಾಳಿರುವೆ. ಆದ್ದರಿಂದ ನೀನು ಕುರಿಗಳನ್ನು ಕಾಯುತ್ತ ಸುಖವಾಗಿರೆಂದು ಹೇಳಿ ಕಣ್ಮರೆಯಾದ.

ಶಿವನ ಇಚ್ಛೆಯಂತೆ ಪದ್ಮಣ್ಣ ಕುರಿಗಳನ್ನು ಕಾಯುತ್ತ ಅಡವಿಯಲ್ಲಿ ಅಲೆಮಾರಿಯಾದ. ಅಲ್ಲಿ ಊಟ ಸಿಗದೆ ಏಳು ದಿನಗಳವರೆಗೆ ಉಪವಾಸವಿದ್ದ. ಈ ಕಷ್ಟದ ಪರಿಸ್ಥಿತಿಯನ್ನು ತಿಳಿದುಕೊಂಡ ಶಿವ ಪದ್ಮಣ್ಣನನ್ನು ಪರೀಕ್ಷಿಸಲೆಂದು ಅವನ ಹತ್ತಿರ ಭಿಕ್ಷೆಗೆ ಬಂದನು. ಪದ್ಮಣ್ಣ ತಾನೂ ಉಪವಾಸವಿರುವುದಾಗಿ ತಿಳಿಸಿದ. ಆಗ ಶಿವ ಕುರಿಗಳನ್ನು ಹಿಡಿದು ಅವುಗಳ ಮೊಲೆಯಿಂದ ಹಾಲು ಹಿಂಡಿದ. ಹಾಲನ್ನು ಗಡಿಗೆಯೊಳಗೆ ಹಾಕಿ ಗಿಣ್ಣವನ್ನು ಮಾಡಿ ಇಬ್ಬರು ಸೇರಿ ಊಟ ಮಾಡಿದರು. ಇನ್ನೂ ಮುಂದೆ ಬೆಂಕಿ ಇದ್ದಲ್ಲಿ ಅಡಿಗೆ ಮಾಡಿಕೊಂಡು ಊಟ

ಮಾಡೆಂದು ಶಿವ ಹರಿಸಿ ಮಾಯವಾದ. ಪದ್ಮಣ್ಣ ಕುರಿಕಾಯುತ್ತ ಅಡವಿಯಲ್ಲೇ ಅಲೆದಾಡುತ್ತಿದ್ದ. ಒಂದು ದಿನ ಅವನಿಗೆ ಬೆಂಕಿ ಬೇಕಾಯಿತು. ಬೆಟ್ಟವನ್ನು ಹತ್ತಿ ಸುತ್ತ-ಮುತ್ತ ದೃಷ್ಟಿ ಹಾಯಿಸಿದ. ದೂರದಲ್ಲಿ ಹೊಗೆ ಕಾಣಿಸಿತು. ಬೆಂಕಿ ಅರಸಿ ಅಲ್ಲಿಗೆ ಹೋದಾಗ ಗುಹೆ ಕಂಡಿತು. ಕುತೂಹಲದಿಂದ ಒಳಗೆ ಇಣುಕಿದ ಅದು ರಾಕ್ಷಸಿಯ ಗುಹೆಯಾಗಿದ್ದು "ಒಳಗಡೆ ಸುಂದರ ಕನ್ಯೆ ಕಾಣಿಸಿದಳು. ಆಕೆ ರಾಕ್ಷಸಿಯಿಂದ ಅಪಹರಿಸಲ್ಪಟ್ಟ ಕನ್ಯೆ ಆಗಿದ್ದಳು. ಪದ್ಮಣ್ಣನ್ನನು ನೋಡಿದ ಕನ್ಯೆ ರಾಕ್ಷಸಿಯ ಬಂಧನದಿಂದ ಮುಕ್ತರನ್ನಾಗಿ ಮಾಡಿ ವಿವಾಹವಾಗುವಂತೆ ಬೇಡಿಕೊಂಡಳು. ಕೆಲವು ದಿನಗಳ ಕಾಲ ಅಲ್ಲಿಯೆ ತಂಗಿದ್ದ ಪದ್ಮಣ್ಣ ಕನ್ಯೆಯ ಸಹಾಯ ಪಡೆದು ರಾಕ್ಷಸಿಯನ್ನು ಸಂಹಾರ ಮಾಡಿದ. ತನ್ನ ಕುಲದೇವರಾದ ಬೀರೇಶನನ್ನು ನೆನೆದ. ಶಿವ-ಪಾರ್ವತಿಯರು ಪ್ರತ್ಯಕ್ಷರಾದರು. ಇವರಿಬ್ಬರ ಬೇಡಿಕೆಯನ್ನು ಆಲಿಸಿದ ಶಿವ-ಪಾರ್ವತಿಯರು ವಿವಾಹ ಕಾರ್ಯ ಆರಂಭಿಸಿದರು. ಆ ಸಂದರ್ಭದಲ್ಲಿ ಕಂಕಣಕ್ಕೆ ದಾರ ಸಿಗಲಿಲ್ಲ. ಕುರಿ ಉಣ್ಣೆಯನ್ನು ತಂದು ದಾರವನ್ನು ಮಾಡಿ ಪಾರ್ವತಿಯ ಕೊರಳಲ್ಲಿದ್ದ ಅರಿಶಿಣವನ್ನು ಹಚ್ಚಿ ಕಂಕಣ ಕಟ್ಟಿದರು. ನಂತರ ಪದ್ಮಣ್ಣನ ವಂಶದವರಿಗೆ 'ಉಣ್ಣೆ ಕಂಕಣ'ದವರೆಂದೂ ಆತನ ಅಣ್ಣಂದಿರು ವಂಶದವರಿಗೆ 'ಹತ್ತಿ ಕಂಕಣ'ದವರೆಂದೂ ನಾಮಕರಣ ಮಾಡಿ ಕಣ್ಮರೆಯಾದರು."[೪]

ಕಥೆ-೩ : "ಆದಿಗೊಂಡನ ಏಳುಜನ ಮಕ್ಕಳಲ್ಲಿ ಕೊನೆಯವ ಪದುಮಣ್ಣ (ಪದ್ಮಣ್ಣ). ಉಂಡಾಡಿಗನಾಗಿ ಕಾಲಕಳೆಯುತ್ತಿದ್ದಾಗ ತಾಯಿ ಮಲಮ್ಮ ಬುದ್ದಿ ಹೇಳಿ ಹೊಲಕ್ಕೆ ಕಳುಹಿಸಿದಳು. ಪದುಮಣ್ಣ ಹೊಲದಲ್ಲಿ ಬೆಳೆದ ಮುತ್ತುಗವನ್ನು ಕಡಿಯುತ್ತಿರುವಾಗ ಕೆಳಗಿನ ಹುತ್ತಿನಿಂದ ಅಗಣಿತ ಕುರಿಗಳು ಹೊರಬಂದವು. ಕುರಿಗಳ ಧ್ವನಿಕೇಳಿ ಶಿವನು ಭೂಲೋಕಕ್ಕೆ ಓಡಿಬಂದು, ಇವುಗಳ ಒಡೆತನವನ್ನು ಪದುಮಣ್ಣನಿಗೆ ಒಪ್ಪಿಸಿದನು. "ಇಷ್ಟೊಂದು ಕುರಿಗಳನ್ನು ಕಾಯಲು ನಾನು ಅಸಮರ್ಥ" ಎನ್ನಲು ಶಿವ ಭೀಕರನಾದ ವೀರ ಬೀರಯ್ಯನನ್ನು ಜೊತೆಗೂಡಿಸಿ ತಾನು ಕೈಲಾಸಕ್ಕೆ ಹಿಂದಿರುಗಿದನು."[೫]

ಬೀರಯ್ಯ ಮತ್ತು ಪದ್ಮಣ್ಣರಿಬ್ಬರೂ ಕುರಿ ಕಾಯುತ್ತ ಅಡವಿಯಲ್ಲಿ ಮುನ್ನಡೆದರು. ಅಡವಿಯಲ್ಲಿದ್ದ ಬಕಾಸುರನು ಕುರಿಗಳನ್ನು ತಿನ್ನಲು ಏರಿ ಬಂದಾಗ ಬೀರಯ್ಯ ಅವನನ್ನು ಸೀಳಿಹಾಕಿದನು. ತಂದೆಯನ್ನು ಕಳೆದುಕೊಂಡ ಬಕಾಸುರನ ಮಗಳು ಬೀರಯ್ಯನ ಮುಂದೆ ಗೋಳಾಡಲು 'ನೀನು ಪದಮಣ್ಣನಿಗೆ ಮಡದಿಯಾಗಿರು' ಎಂದು ಹೇಳಿದನು. "ಬೀರಯ್ಯ ಹೇಳಿಕೆಯಂತೆ ಇಬ್ಬರೂ ದಂಪತಿಗಳಾದರು. ಶಿವನು ಪದುಮಣ್ಣನಿಗೆ ನಿನ್ನ ಹಿರಿಯ ಹೆಂಡತಿ ಲಿಂಗಮ್ಮನ ೧೩ ಮಂದಿ ಮಕ್ಕಳು ಹತ್ತಿ ಕಂಕಣದವರು, ಈ ಚಿಕ್ಕ ಹೆಂಡತಿ ಸಿರಿವಂತೆಯ ೧೩ ಮಂದಿ ಮಕ್ಕಳು ಉಣ್ಣೆ ಕಂಕಣದವರು. ನೀನು ಕುರಿ ಗೌಡನಾಗಿ, ಬೀರಯ್ಯ ಕುಲದೈವವೆಂದು ಭಾವಿಸಿ, ನಿನ್ನ ಗುರು ಸರೂರು ಶಾಂತಮುತ್ತಯ್ಯನಿಗೆ ಒಕ್ಕಲಾಗಿ, ರೇವಣಸಿದ್ಧನಿಗೆ ಮಗನಾಗಿ ಬದುಕು ಎಂದು ಹೇಳಿ ಕೈಲಾಸಕ್ಕೆ ಹೋದನು."[೬]

ಕಥೆ-೪ : ಕುರಿಕಾಯುತ್ತ ಅಡವಿಯಲ್ಲಿ ಅಲೆಯುತ್ತಿದ್ದ ಪದ್ಮಣ್ಣನಿಗೆ ಊಟ ಸಿಗದೆ ಏಳುದಿನ ಉಪವಾಸವಿದ್ದನು. ಆಗ ರೇವಣಸಿದ್ಧನು ಪದ್ಮಣ್ಣನಿರುವಲ್ಲಿಗೆ ಬಂದು ಭಿಕ್ಷೆ ಕೇಳಿದನು. ಆಗ ಪದ್ಮಣ್ಣ ತಾನೇ ಏಳು ದಿನಗಳಿಂದ ಉಪವಾಸವಿರುವುದಾಗಿ ತಿಳಿಸಿದ. ಆಗ ರೇವಣಸಿದ್ಧ ಕುರಿಗಳನ್ನು ಹಿಡಿದು ತಂದು, ಹಾಲು

ಹಿಂಡಿ, ಕಪ್ಪರ(ಗಡಿಗೆ)ದೊಳಗೆ ಅಡಿಗೆ ಮಾಡಿ ಗಿಣ್ಣವನ್ನು ತಯಾರಿಸಿ ಇಬ್ಬರೂ ಊಟ ಮಾಡಿದರು. ಇನ್ನೂ ಮುಂದೆ ಅಗ್ನಿ ಇದ್ದಲ್ಲಿ ಇದೇ ರೀತಿ ಅಡುಗೆ ಮಾಡಿಕೊಂಡು ಊಟ ಮಾಡೆಂದು ಹರಸಿ ಮಾಯವಾದ.

ಪದ್ಮಣ್ಣ ಅಡವಿಯಲ್ಲಿ ಬೆಂಕಿಯನ್ನು ಅರಸುತ್ತ ರಾಕ್ಷಸಿಯ ಮಗಳಿರುವ ಮನೆಗೆ ಬಂದು ಬೆಂಕಿ ಕೇಳಿದನು. ಅವಳು 'ನೀನು ನನಗೆ ಹಾಲು ಕೊಟ್ಟರೆ, ನಾನು ನಿನಗೆ ಬೆಂಕಿ ಕೊಡುತ್ತೇನೆ' ಎಂದಳು. ಪದ್ಮಣ್ಣ ಕುರಿ ಹಾಲು ಹಿಂಡಿ ಗಿಣ್ಣ ತಯಾರಿಸಿ ಅವಳಿಗೂ ಸ್ವಲ್ಪ ಕೊಟ್ಟು, ಆಗ ಅವಳು ರಾಕ್ಷಸಿ ತಾಯಿಯಿಂದ ಬಿಡುಗಡೆ ಮಾಡುವಂತೆ (ಸುಸಂಸ್ಕೃತ) ಬೇಡಿಕೊಂಡಳು. "ಅವಳ ಆಸೆಯಂತೆ ಅವಳ ರಕ್ಕಸಿ (ಅಸಂಸ್ಕೃತ) ತಾಯಿಯನ್ನು ಕೊಂದು ಚನ್ನಮ್ಮಳನ್ನು ಕರೆದುಕೊಂಡು ರೇವಣ್ಣನಲ್ಲಿಗೆ ಬರುತ್ತಾನೆ. ರೇವಣ್ಣ ನೀವಿಬ್ಬರೂ ಯಾರು? ಎಂದು ಕೇಳಿದಾಗ 'ನಾವಿಬ್ಬರೂ ಅಣ್ಣ ತಂಗಿಯರೆಂದು' ಪದ್ಮಗೊಂಡ ಹೇಳುತ್ತಾನೆ. (ಈ ಕಥೆಯು ಬೈಬಲ್ ಮತ್ತು ಖುರಾನಗಳಲ್ಲಿಯೂ ಬರುತ್ತದೆ) 'ಈ ವಿಚಾರವೂ ಸರಿಯಾದುದಲ್ಲ ನೀವಿಬ್ಬರೂ ಸತಿ-ಪತಿಗಳಾಗಿ ಬಾಳಿರಿ, ನಿನಗೆ ಚನ್ನಮ್ಮ ತಕ್ಕ ಸತಿಯಾಗಿದ್ದಾಳೆ'ಂದು ಹೇಳಿ ಕುರಿಯ ಉಣ್ಣೆ ಪಿರಿಕಿ (ತಕಲಿ)ಯಿಂದ ಹುರಿಯ ದಾರ ಹೊಸೆದು ಕಂಕಣ ಕಟ್ಟಿ ಸುರರು ಮತ್ತು ದೇವತೆಗಳೆಲ್ಲರೂ ಸೇರಿ ಮದುವೆ ಮಾಡುತ್ತಾರೆ.(ಈ ಕಥೆಯ ಮೂಲ ಅಣ್ಣ-ತಂಗಿಯರು ಪತಿಪತ್ನಿಯಾಗುತ್ತಿದ್ದ ಕಾಲದ್ದು)."[೭] ನಂತರ ರೇವಣ್ಣಸಿದ್ಧರು ಬೈಲ ಕಮ್ಮಾರನನ್ನು ಕರೆಸಿ ಉಣ್ಣೆ ಕತ್ತಿರಿಸಲು ಕತ್ತರಿಯನ್ನು ತಯಾರಿಸಿ ಕೊಟ್ಟು ಹತ್ತಾರು ಕುರಿ ಮರಿಗಳ ಉಣ್ಣೆ ಕತ್ತರಿಸುವುದನ್ನು ಪದ್ಮಣ್ಣನಿಗೆ ಕಲಿಸುತ್ತಾನೆ. ಚನ್ನಮಳಿಗೆ ಉಣ್ಣೆಯಿಂದ ನೂವುದನ್ನು ಕಲಿಸುತ್ತಾನೆ. ಅವರ ಮೂಲಕ ಚಿಕ್ಕ ಕಂಬಳಿ ಜಾಡಿಯನ್ನು ನೇಯ್ದು ಅದನ್ನು ತಲೆಗೆ ಧರಿಸಿಕೊಳ್ಳುತ್ತಾನೆ. ಹೀಗೆ ಕಂಬಳಿಯ ತಯಾರಿಕೆಯನ್ನು ಕಲಿಸಿ ರೇವಣಸಿದ್ಧ ಮಾಯವಾಗುತ್ತಾನೆ.

ಪದ್ಮಣ್ಣನಿಗೆ ಸಿದ್ದಮ್ಮ ಮತ್ತು ಚೆನ್ನಮ್ಮ ಎಂಬ ಇಬ್ಬರು ಹೆಂಡೆತಿಯರು. "ಸಿದ್ದಮ್ಮನ ಮಕ್ಕಳು ಇಪ್ಪತ್ತೊಂದು ಗಂಡು, ಇಪ್ಪತ್ತೊಂದು ಹೆಣ್ಣು. ಇವರಿಗೆ ಹತ್ತಿಯ ಕಂಕಣ ಧಾರೆಯೆರೆದರು! (ವಿವಾಹ ಮಾಡಿದರು). ರಕ್ಕಸಿಯ ಮಗಳು ಬ್ರಹಸ್ಪತಿಯ ತನುಜೆ ಚೆನ್ನಮ್ಮಗೆ ಇಪ್ಪತ್ತೊಂದು ಗಂಡು ಇಪ್ಪತ್ತೊಂದು ಹೆಣ್ಣು ಉಣ್ಣೆಯ ಕಂಕಣ ಕಟ್ಟಿ ಧಾರೆಯನೆರೆದರು!"[೮]

ಊಂಡಾಡು ಪದ್ಮಣ್ಣನ ಇಬ್ಬರು ಹೆಂಡತಿಯರಿಂದ ಹುಟ್ಟಿದ ಮಕ್ಕಳಲ್ಲಿ ಒಂದು ಹತ್ತಿ ಕಂಕಣ ಮತ್ತೊಂದು ಉಣ್ಣೆ ಕಂಕಣ ಎಂದು ವಿಭಜಿತವಾಗಿದೆ. ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ ಈ ಭಿನ್ನತೆಯೂ ಅವರ ಮದುವೆಯ ಸಮಯದಲ್ಲಿ ಕಟ್ಟಿ ಕೊಳ್ಳುವ ಕಂಕಣದ ಆಧಾರದ ಮೇಲೆ ಆಯಾ ಒಳ ಪಂಗಡಕ್ಕೆ ಹೆಸರು ಬಂದಿರುತ್ತವೆ. ಈ ಎರಡೂ ಪಂಗಡಗಳಲ್ಲಿ ವೈವಾಹಿಕ ಸಂಬಂಧಗಳು ನಿಷಿದ್ಧ. ಕಾರಣ ಮೇಲೂ ಕೀಳು ಎಂಬ ಭಾವನೆ ಮತ್ತು ಕುರುಬ ಸಮುದಾಯಕ್ಕೆ ಸೇರಿದ ಈ ಎರಡು ಒಳ ಪಂಗಡಗಳು ಎಲ್ಲಿಗೆ ಹೋದರು ಅಣ್ಣ ತಮ್ಮಂದಿರಾಗುತ್ತಾರೆ ಹೊರತು ನೆಂಟರಾಗುವುದಿಲ್ಲ ಎಂಬ ವಿಚಾರ.

ಹತ್ತಿ ಕಂಕಣವೆಂದು ಹೆಸರು ಬರುವುದ್ದಕ್ಕೆ ತಗರ ಪವಾಡದ ಒಂದು ಪದ್ಯದಲ್ಲಿ ಈ ರೀತಿಯಾಗಿ ಹೇಳಲಾಗಿದೆ.

"ಕಂದಯ್ಯ ನಿನ್ನ ಹಿರಿಯ ಹೆಂಡತಿ ಲಿಂಗಮ್ಮಗೆ
ಕಂದರು ಹದಿಮೂರು ಮಂದಿ
ಚೆಂದದಿ ಹತ್ತಿ ಕಂಕಣದ ಕುರುಬರೆಂದು
ನಿಂದು ಶಿವನು ನಿರೂಪಿಸಿದ
ನಿನ್ನ ಸಂತತಿಯವರುಗಳೆಲ್ಲರೂ ಚೊಕ್ಕ
ಚಿನ್ನ ಹತ್ತಿಯ ಕಂಕಣದ
ಭಿನ್ನಾನಕಾರರೆನಿಸಿ ಬಾಳುವರು ಚೊಕ್ಕ
ಚಿನ್ನಕ್ಕೆ ಸಮನಾಗಿ ಮಗನೆ (ತಗರ ಪವಾಡ ಸಂಧಿ–೨)

ಅಂದರೆ ಪದ್ಮಗೊಂಡನ ಹಿರಿಯ ಹೆಂಡತಿ ಲಿಂಗಮ್ಮನ ಹೊಟ್ಟೆಯಲ್ಲಿ ಜನಿಸಿದ ೧೩ ಜನ ಗಂಡು ಮಕ್ಕಳು ಹತ್ತಿ ಕಂಕಣದ ಕುರುಬರೆಂದು ಹೆಸರು ಪಡೆದು ಶ್ರೇಷ್ಠತೆಯ ಸೂಚನೆಯಾಗಿ ಕಂಡು ಬರುತ್ತಾರೆ.

ಸಿದ್ಧಮಂಕ ಚರಿತ್ರೆಯ ಪ್ರಕಾರ ಉಂಡಾಡು ಪದ್ಮನಿಗೆ ಇಬ್ಬರು ಮಡದಿಯರು, ಹಿರಿಯಾಕೆ ಚಿಮ್ಮಲಬ್ಬೆ, ಕಿರಿಯಾಕೆ ಜಿಂಕಬ್ಬೆ (ಜಿಂಕಾದೇವಿ). ಜಿಂಕಬ್ಬೆಯ ಮದುವೆಯಲ್ಲಿ ಸುರಗಿ, ಕಂಕಣ, ಭಾಸಿಂಗ, ದಂಡೆ ಹಾಗೂ ಮಂಗಳಸೂತ್ರಗಳೆಂಬ ಪಂಚವಿಧಿಗಳಿಗೆ ಹತ್ತಿ ಎಳೆಗಳನ್ನು ಬಳಸಿದ್ದರಿಂದ, ಈಕೆಯ ಸಂತತಿಯವರೆ ಮುಂದೆ ಹತ್ತಿಕಂಕಣ ಕುರುಬರು ಇಲ್ಲವೆ ಬಿಳಿಯ ಕಂಕಣ ಕುರುಬರು ಅಥವಾ ಹೊಸ ಕುರುಬರು ಎಂದು ಕರೆಯುತ್ತಾರೆ."[೯]

"ಹಾಲುಮತದಲ್ಲಿ ಉಂಟಾದ ಎರಡು ಭಾಗಗಳಲ್ಲಿ ಉಣ್ಣೆ ಕಂಕಣವೇ ಪ್ರಥಮವಾಗಿದೆ. ಕಾರಣ ಪಶುಪಾಲನೆಯ ಹಂತದಲ್ಲಿ ಉಣ್ಣೆ ಬಳಕೆಯಲ್ಲಿತ್ತು. ಕೃಷಿಯು ಬೆಳವಣಿಗೆಗೊಂಡ ಮೇಲೆ ಹತ್ತಿ ಪ್ರಚಲಿತಗೊಂಡಿತು. ಆದರೆ ಪುರಾಣಗಳು ಹತ್ತಿ ನಂತರ ಉಣ್ಣೆ ಕಂಕಣ ಬಂದಿತೆಂದು ಹೇಳುತ್ತವೆ. ಉಣ್ಣೆಯು ಹತ್ತಿಗಿಂತಲೂ ಪ್ರಾಚೀನವಾದುದೆಂದು ದೃಢಪಟ್ಟಿರುವುದರಿಂದ ಉಣ್ಣೆ ಕಂಕಣ ಪ್ರಥಮ ಎಂದು ಹೇಳಬಹುದಾಗಿದೆ."[೧೦]

ಹತ್ತಿ ಕಂಕಣ ಕುರುಬರು ಆರಂಭದಲ್ಲಿ ಪಶುಪಾಲನೆಯಲ್ಲಿ ತೊಡಗಿದ್ದು ನಂತರ ಕೃಷಿಯತ್ತ ವಾಲಿದರು. ಹೀಗಾಗಿ ಕುರಿ ಮೇಯಿಸಲಿಕ್ಕೆ ಅವಶ್ಯಕವಿದ್ದ ಮೊರಡಿ ಪ್ರದೇಶಗಳಲ್ಲಿ ಮತ್ತು ಕೃಷಿಗೆ ಫಲವತ್ತಾದ ಭೂಮಿಗಳಲ್ಲಿ ಇವರು ವಾಸಿಸಲಾರಂಭಿಸಿದರು. ಆದ ಕಾರಣ ಬಯಲು ಪ್ರಧೇಶಗಳಲ್ಲಿ ಇವರು ಕಂಡು ಬರುತ್ತಾರೆ. ಉದಾಹರಣೆಗೆ ಕರ್ನಾಟದಲ್ಲಿ ಬಿಜಾಪೂರ, ಬಾಗಲಕೋಟೆ, ಧಾರವಾಡ, ಗದಗ, ಬಳ್ಳಾರಿ, ಗುಲ್ಬರ್ಗಾ, ಮೈಸೂರು, ಚಿಕ್ಕಮಗಳೂರು ಹಾಗೂ ಬೆಂಗಳೂರು ಜಿಲ್ಲೆಯಲ್ಲಿ. ಹತ್ತಿ ಕಂಕಣ ಕುರುಬರು ಕಂಡು ಬರುತ್ತಾರೆ. ಕೃಷಿಯ ಜೊತೆಯಲ್ಲಿ ಕುರಿ ಸಂಗೋಪನೆ, ಕಂಬಳಿ ನೇಯ್ಗೆ ಮಾಡುವ ಕಸುಬುಗಳಲ್ಲಿ ತೊಡಗಿಕೊಂಡಿರುವರು. ಲಿಂಗಾಯತ ಧರ್ಮದ ಪ್ರಭಾವಕ್ಕೆ ಒಳಗಾದ ಇವರು ಆಹಾರ ಪದ್ಧತಿಯಲ್ಲಿ ಬಹುಪಾಲು ಸಸ್ಯಹಾರಿಗಳಾಗಿದ್ದಾರೆ, ಇನ್ನು ಕೆಲವರು ಮಾತ್ರ ಮಾಂಸಾಹಾರಿಗಳಾಗಿದ್ದಾರೆ.

೧೮೮೪ ರಲ್ಲಿ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಸಂಶೋಧನೆ ಕೈಗೊಂಡ ಜೇಮ್ಸ ಕ್ಯಾಂಬಲ್ ಕೆಲವು ವಿಚಾರಗಳನ್ನು ಹೇಳುತ್ತಾರೆ. ಪ್ರಾಚೀನ ಕಾಲದಿಂದಲೂ ಕುರುಬರು ಉಣ್ಣೆಯ ಕಂಕಣ ಧರಿಸುತ್ತಾ

ಬಂದಿರುವರು. ಹತ್ತಿ ಕಂಕಣದ ಪ್ರವೇಶ ಯಾವಾಗ ಅಸ್ತಿತ್ವಕ್ಕೆ ಬಂತು. ಈ ಪ್ರಶ್ನೆಗೆ ಉತ್ತರ ಹುಡುಕಿದಾಗ ಮಾತ್ರ ಈ ಕಂಕಣ ಬೇಧದ ಕಥೆಯ ಹಿಂದಿನ ನಿಜಾಂಶ ತಿಳಿಯಲು ಸಾಧ್ಯವೆನ್ನುತ್ತಾರೆ. ಇದಕ್ಕಾಗಿ ಹತ್ತಿ ಇತಿಹಾಸದ ಕಡೆಗೆ ಗಮನ ಹರಿಸಿದರೆ ಪ್ರಪಂಚದಲ್ಲಿ ಹತ್ತಿ ಗಿಡದ ಅವಿಷ್ಕಾರ ಕ್ರಿ. ಪೂ. ೧೨೦೦-೧೦೦೦ ರಲ್ಲಿ ಆಗಿರಬಹುದಾದ ಸಾಧ್ಯತೆ ಇದೆ ಎಂದು ವಿಜ್ಞಾನಿಗಳ ಅಭಿಪ್ರಾಯ. ಹತ್ತಿ ಗಿಡಕ್ಕೆ ಆರಂಭದಲ್ಲಿ ಕುರಿಯ ಗಿಡವೆಂದು ಕರೆಯಲಾಗುತ್ತಿತ್ತು. ಇದರಿಂದ ಹತ್ತಿಗಿಂತಲೂ ಮೊದಲು ಕುರಿಯ ತುಪ್ಪಳದಿಂದ ನೇಕಾರಿಕೆ ಇತ್ತು ಎಂಬದು ಸ್ಪಷ್ಟವಾಗಿ ತಿಳಿದು ಬರುತ್ತದೆ.

"'ಉಣ್ಣೆ' ಉಣ್ಣೆ ಕಂಕಣದವರಿಗೆ ಕೇವಲ ಲಾಂಛನ ಮಾತ್ರವಲ್ಲ. ದೈವವೂ ಹೌದು. ಹಾಗಾಗಿ ಉಣ್ಣೆ ಕಂಕಣದವರ ಚರಿತ್ರೆಯನ್ನು ಅರ್ಥೈಸಿ ಕೊಳ್ಳುವಾಗ ಅವರಲ್ಲಿ ಉಣ್ಣೆ ಬಳಕೆ ಆಗುತ್ತಿರುವ ಸ್ವರೂಪವನ್ನು ಮತ್ತು ಅದರ ಬಗ್ಗೆ ಕಟ್ಟಿಕೊಂಡಿರುವ ಕಥನಗಳನ್ನು ಮುಖ್ಯವಾಗಿಟ್ಟುಕೊಳ್ಳಬೇಕು. ಏಕೆಂದರೆ ಈ ಕಂಕಣದವರ ಬಗ್ಗೆ ಲಿಖಿತ ಆಧಾರಗಳು ಸಿಗುವುದು ಕಡಿಮೆ. ಜೊತೆಗೆ ಆಚರಣೆಗಳೇ ಇವರ ಸಾಂಸ್ಕೃತಿಕ ಅಭಿವ್ಯಕ್ತಿ. ಆದ್ದರಿಂದ ಆಚರಣೆಗಳಲ್ಲಿ ವೃತ್ತಿಗಳಲ್ಲಿ ಉಣ್ಣೆಯನ್ನು ಬಳಸುತ್ತಿರುವ ವಿಧಾನಗಳ ಮೂಲಕ ಇವರ ಚರಿತ್ರೆಯನ್ನು ಸೈದ್ಧಾಂತಿಕವಾಗಿ ಕಟ್ಟಿಕೊಳ್ಳಬೇಕಾಗಿದೆ."[೧೧] ಹತ್ತಿ ಕಂಕಣದ ಕುರುಬರು ಕಂಬಳಿ ನೇಕಾರರಲ್ಲ. ಆದರೆ ಉಣ್ಣೆ ಕಂಕಣದ ಕುರುಬರು ಕಂಬಳಿ ನೇಕಾರರಾಗಿದ್ದಾರೆ. ಹತ್ತಿ ಕಂಕಣದವರು ಬೀರೇಶ್ವರ, ಮೈಲಾರಲಿಂಗ, ಕರೇಸಿದ್ಧೇಶ್ವರ, ಯಲ್ಲಮ್ಮ ಮೊದಲಾದ ದೇವರುಗಳಿಗೆ ನಡೆದು ಕೊಳ್ಳುವರು. ಉಣ್ಣೆ ಕಂಕಣದವರಿಗೆ ರೇವಣಸಿದ್ಧೇಶ್ವರ ಪ್ರಧಾನ ದೈವವಾಗಿದ್ದಾನೆ. ಹತ್ತಿ ಕಂಕಣದವರು ಪೂರ್ವದಲ್ಲಿ ಲಿಂಗವಂತರಾಗಿದ್ದರಂತೆ, ಆದರೆ ಮಾಂಸಾಹಾರ ಸೇವಿಸುವುದನ್ನು ಬಿಡಲಿಕ್ಕಾಗದೆ ತಮ್ಮಲ್ಲಿದ್ದ ಲಿಂಗಗಳನ್ನೆಲ್ಲ ತಮ್ಮ-ತಮ್ಮ ಮನೆ ದೇವರುಗಳಿಗೆ ಅರ್ಪಿಸಿ ಅವರು ಯಥಾ ರೀತಿ ತಿನ್ನುಣ್ಣುವುದಕ್ಕೆ ಪ್ರಾರಂಭಿಸಿದರೆಂಬ ಅಭಿಪ್ರಾಯವಿದೆ. ಆದರೆ ಪ್ರಸ್ತುತದಲ್ಲಿ ಗಮನಿಸಿದರೆ ಹೆಚ್ಚಾಗಿ ಶಾಖಾಹಾರಿಗಳಾಗಿದ್ದು ಕಡಿಮೆ ಪ್ರಮಾಣದಲ್ಲಿ ಮಾಂಸಾಹಾರಿಗಳಾಗಿದ್ದಾರೆ.

ಕುರುಬರು ತಮ್ಮ ಪ್ರಮುಖ ದೇವತೆಗಳಾದ ಕ್ವಾಣಗನೂರಿನ ಕರೇಸಿದ್ಧ, ಹುಲಜಂತಿ ಮಾಳಿಂಗರಾಯ, ಕಡೋಲಿಯ ಇಟ್ಟಪ್ಪ, ಅರಕೇರಿ ಅಮೋಘಸಿದ್ಧ, ಚಿಂಚಲಿ ಮಾಯವ್ವ ಮೊದಲಾದ ದೈವಗಳಿಗೆ ಜಾತ್ರೆಗಳಲ್ಲಿ ನೆರೆದ ಭಕ್ತರು 'ಉಣ್ಣೆ'ಯನ್ನು ಹತ್ತಾರು ಕೀಲೊಗಟ್ಟಲೆ ಅರ್ಪಿಸುತ್ತಾರೆ. ಹೀಗೇ ಜಾತ್ರೆಯಲ್ಲಿ ಹಾರಿಸಿದ ಉಣ್ಣೆಯನ್ನು ಭಕ್ತರು ಸಂಗ್ರಹಿಸಿ ಮನೆಗೆ ತೆಗೆದುಕೊಂಡು ಹೋಗಿ ದೈವವೆಂದು ಪೂಜಿಸುವರು. ಇದು ಮೂಲತಃ ಕುರುಬರೆಲ್ಲರೂ ಉಣ್ಣೆ ಸಂಸ್ಕೃತಿಯನ್ನು ಹೊಂದಿದ್ದನ್ನು ಪ್ರತಿಬಿಂಬಿಸುತ್ತದೆ. ಕರೇಸಿದ್ಧ, ಮಾಳಿಂಗರಾಯ, ಇಟ್ಟಪ್ಪ, ಮಾಯವ್ವ ಮುಂತಾದ ದೈವಗಳು ಪ್ರಾಚೀನ ಸಂಸ್ಕೃತಿಕ ವೀರರಾಗಿದ್ದು ಎರಡು ಕಂಕಣದವರು ಕುಲದೈವಗಳನ್ನಾಗಿ ಆರಾಧನೆ ಮಾಡಿಕೊಂಡು ಬಂದಿದ್ದರು. ಈ ಕಾಲಘಟ್ಟದಲ್ಲಿ ಕುಲ ಪಂಗಡಗಳ ವಿಭಜನೆ ಅಷ್ಟೊಂದು ಮಹತ್ವವನ್ನು ಪಡೆದುಕೊಂಡಿರಲಿಲ್ಲ. ರೇವಣಸಿದ್ಧನ ಕಾಲಘಟ್ಟಕ್ಕೆ ಕುಲ ಪಂಗಡಗಳು ಮಹತ್ವ ಪಡೆದುಕೊಂಡವು.

ಭಾರತದ ಹಲವು ಸಮುದಾಯಗಳು ವೃತ್ತಿಯನ್ನು ಕೇಂದ್ರವಾಗಿಟ್ಟುಕೊಂಡು ವಿಭಜನೆ ಹೊಂದಿವೆ. ಈ ರೀತಿ ಬುಡಕಟ್ಟು ಸಮುದಾಯಗಳು ಪಂಗಡ/ಜಾತಿಗಳಾಗಿ ರೂಪಾಂತರ ಗೊಂಡಿರುವುದನ್ನು ಡಾ.

ಮೊಗಳ್ಳಿ ಗಣೇಶ ಅವರು 'ಬುಡಕಟ್ಟು ಸಮುದಾಯಗಳ ತಾತ್ವಿಕ ರೂಪಾಂತರವೆಂದು ಕರೆಯುತ್ತಾರೆ. ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ ಎರಡು ಪಂಗಡಗಳಾಗಿ ವಿಂಗಡನೆಗೊಂಡ ನಂತರ ಹಲವು ಬದಲಾವಣೆಗಳಾದವು. ವೈವಾಹಿಕ ಸಂಬಂಧಗಳಿಗೆ ನಿಷೇಧ ಹಾಕಿಕೊಂಡವೆಂಬುದು ಸಾಮಾನ್ಯವಾಗಿ ಕಂಡು ಬರುತ್ತದೆ. ಆದರೆ ಅಧ್ಯಯನದ ದೃಷ್ಟಿಯಿಂದ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣಗಳೆರಡು ಮುಖ್ಯವಾದವುಗಳು. ಒಂದು ಕಂಕಣ ಮೂಲ ಸಂಸ್ಕೃತಿಗೆ ಆಕರವಾದರೆ ಮತ್ತೊಂದು ಕಂಕಣವು ಸಂಸ್ಕೃತೀಕರಣಗೊಂಡಿರುವ ವಿಧಾನವನ್ನು ತಿಳಿದುಕೊಳ್ಳುವುದಕ್ಕೆ ಹೆಚ್ಚು ಆಕರವಾಗಿದೆ. ಹೀಗಾಗಿ ಈ ಎರಡು ಪಂಗಡಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದಾಗಲೇ ಹಾಲುಮತ ಸಮುದಾಯದ ಸಮಗ್ರ ಚರಿತ್ರೆಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುವುದು. ಇತ್ತೀಚಿಗೆ ಕುರುಬ ಸಮುದಾಯದ ಸುಧಾರಕರು ಮತ್ತು ಚಿಂತಕರು ಈ ಎರಡು ಪಂಗಡಗಳ ಮಧ್ಯದಲ್ಲಿರುವ ಗೊಂದಲಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡಿ ಒಂದೇ ನೆಲೆಯಲ್ಲಿ ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ ಮಾಡುತ್ತಿದ್ದರು ಕೂಡ ನಿರೀಕ್ಷಿಸಿದ ಮಟ್ಟದಲ್ಲಿ ಬೆಳವಣಿಗೆ ಕಂಡು ಬರುತ್ತಿಲ್ಲದಿರುವುದು ವಿಷಾದನೀಯ ಅಂಶ.

ರಾಯಬಾಗ ಪರಿಸರದಲ್ಲಿ ಹತ್ತಿ ಕಂಕಣದವರ ಪ್ರಮಾಣ ಹೆಚ್ಚಾಗಿರುವುದು. ಇವರು ರಾಯಬಾಗ, ಚಿಂಚಲಿ, ಕಂಕಣವಾಡಿ, ಹಾರೂಗೇರಿ, ಹಿಡಕಲ್ಲ, ಮುಗಳಖೋಡ, ಪರಮಾನಂದವಾಡಿ, ಸುಟ್ಟಟ್ಟಿ, ಆಲಕನೂರ, ಬೆಕ್ಕೇರಿ, ನಿಲಜಿ, ಸವಸುದ್ದಿ ಅಳಗವಾಡಿ, ಬೆಂಡವಾಡ ನಾಗರಾಳ ಊರುಗಳಲ್ಲಿ ಕಂಡು ಬರುತ್ತಾರೆ. ಉಣ್ಣೆ ಕಂಕಣದವರು ಈ ಪರಿಸರದಲ್ಲಿ ಅಲ್ಪ ಪ್ರಮಾಣದಲ್ಲಿದ್ದಾರೆ. ಅವರು ಮೊರಬ, ಭಿರಡಿ ಊರುಗಳಲ್ಲಿ ಮಾತ್ರ ಹೆಚ್ಚಾಗಿ ಕಂಡು ಬರುತ್ತಾರೆ. ಎರಡು ಪಂಗಡಗಳ ಮಧ್ಯೆ ವೈವಾಹಿಕ ಸಂಬಂಧವನ್ನು ಬಿಟ್ಟು ಬೇರೆಲ್ಲ ವ್ಯವಹಾರಗಳು ಭಿನ್ನ-ಭೇದವಿಲ್ಲದೆ ನಡೆಯುತ್ತವೆ. ಆದರೆ ವಿವಾಹಗಳು ಮಾತ್ರ ನಿಷೇಧಿತವಾಗಿವೆ. ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಕ್ರಮಗಳಲ್ಲಿ ಯಾವುದೇ ಭಿನ್ನ ಭಾವನೆಗಳಿಲ್ಲದೆ ಬೇರೆಯುತ್ತಾರೆ. ಆರಂಭದಲ್ಲಿ ಇದ್ದ ಎರಡು ಪಂಗಡಗಳ ಮಧ್ಯದ ಕಾಠಿಣ್ಯತೆಯೂ ಸದ್ಯ ಅಷ್ಟಾಗಿ ಕಂಡು ಬರುತ್ತಿಲ್ಲ. ಇತ್ತೀಚಿಗೆ ಆಧುನಿಕತೆಯ ಪ್ರಭಾವ ಮತ್ತು ಶೈಕ್ಷಣಿಕ ಪ್ರಗತಿಯಿಂದಾಗಿ ಈ ಎರಡು ಪಂಗಡದವರ ಮಧ್ಯದಲ್ಲಿ ಅಲ್ಲೊಂದು-ಇಲ್ಲೊಂದು ವಿವಾಹಗಳು ನಡೆಯುತ್ತಿರುವುದು ಶುಭ ಸೂಚನೆಯಾಗಿದೆ. ಇವುಗಳ ಪ್ರಮಾಣ ಮಾತ್ರ ಅತ್ಯಲ್ಪವಾಗಿದೆ. ಕನಕದಾಸ ಮತ್ತು ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಸಂಘಟನೆಗಳು ಈ ಎರಡು ಪಂಗಡಗಳನ್ನು ಒಂದೇ ನೆಲೆಯಲ್ಲಿ ಒಂದುಗೂಡಿಸುವ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಾಲುಮತ ಸಮುದಾಯವನ್ನು 'ಬಲಿಷ್ಟಗೊಳಿಸುವ ಪ್ರಯತ್ನವನ್ನು ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

೫.೧.೨ ಒಡೆಯರರು :

ಪ್ರತಿಯೊಂದು ಸಮುದಾಯವು ತನ್ನ ಸಾಮಾಜಿಕ, ಧಾರ್ಮಿಕ ವಿಧಿ ವಿಧಾನಗಳನ್ನು ನಿರ್ವಹಿಸಿಕೊಂಡು ಹೋಗಲು ಪುರೋಹಿತ ವರ್ಗವನ್ನು ಸೃಷ್ಟಿ ಮಾಡಿಕೊಂಡಿರುವುದು ಕಂಡು ಬರುತ್ತದೆ. ಕುರುಬ ಸಮುದಾಯದವರು ಇದಕ್ಕೆ ಹೊರತಾಗಿಲ್ಲ. ಬ್ರಾಹ್ಮಣರ ಪುರೋಹಿತ ಮತ್ತು ವೀರಶೈವರ ಜಂಗಮ ಪರೋಹಿತಕ್ಕೆ ಪರ್ಯಾಯವಾಗಿ ಕುರುಬರು 'ಒಡೆಯರ' ಎಂಬ ಗುರುವರ್ಗವನ್ನು ಹುಟ್ಟು ಹಾಕಿರುವರು.

"ಪ್ರಾಚೀನ ಕಾಲದಿಂದಲೇ 'ಒಡೆಯರು' ಎಂಬ ವಿಶಿಷ್ಟವಾದ ಗುರುವರ್ಗವನ್ನು ಸ್ಥಾಪಿಸಿಕೊಂಡು, ಅವರ ಮೂಲಕ ತಮ್ಮ ಧಾರ್ಮಿಕ ಆಚರಣೆಗಳನ್ನು ಮತ್ತು ಮದುವೆ-ಮುಂಜಿ, ಜನನ-ಮರಣ ಸಂದರ್ಭದ ವಿಧಿ-ವಿಧಾನಗಳನ್ನು ನೆರವೇರಿಸಿಕೊಂಡು ಬರುತ್ತಲಿದ್ದಾರೆ. ಕುರುಬರಲ್ಲಿ ಒಡೆಯರು ಎಂಬ ಗುರುವರ್ಗವು ತುಂಬ ವಿಶಿಷ್ಟವಾದದ್ದು. ಏಕೆಂದರೆ ಅನ್ಯ ಜನಾಂಗಗಳಲ್ಲಿ ಕುಲಕ್ಕೆ ಕುಲದವರೇ ಆದ ಗುರುವರ್ಗದವರು ಕಂಡು ಬರುವುದಿಲ್ಲ. ಆದರೆ ಕುರುಬರ ಜಾತಿಯೊಳಗಿನ ಒಡೆಯರದು ಒಂದು ಪ್ರತ್ಯೇಕ ಜಾತಿಯಾಗದಿರುವುದು ವಿಶೇಷ. ಈ ಕಾರಣಕ್ಕಾಗಿಯೇ 'ಕುರುಬರ ಜಾತಿಯೊಳಗಿನ ಒಡೆಯರ ಈ ಉಪಜಾತಿ ಭಾರತದಲ್ಲಿಯೇ ಅತ್ಯಂತ ವಿಶಿಷ್ಟವೆನ್ನಬಹುದಾದ ಒಂದು ವ್ಯವಸ್ಥೆಯನ್ನು ಹೊಂದಿದೆ' ಎಂದು ಹಿರಿಯ ಸಂಶೋಧಕರಾದ ಡಾ. ಚಿದಾನಂದಮೂರ್ತಿ ಅವರು ಹೇಳುತ್ತಾರೆ."[೧೨] ಇವರು ರೇವಣಸಿದ್ಧ, ಸಿದ್ಧರಾಮೇಶ್ವರ, ಅಮೋಘಸಿದ್ಧರ ಆರಾಧಕರು, ಲಿಂಗಾಯತ ಜಂಗಮರಂತೆ ಲಿಂಗಧಾರಿಗಳು.

ಒಡೆಯರು ಕುರುಬರಿಗೆ ಗುರು ಸ್ಥಾನದಲ್ಲಿರುವುದರಿಂದ ಇವರ ಸಾಮಾಜಿಕ ಸ್ಥಾನಮಾನಗಳು ಕುರುಬರಿಗಿಂತ ಮೇಲಿನದವುಗಳಾಗಿವೆ. ಕುರುಬರಲ್ಲಿ ಭಿನ್ನವಾಗಿ ಕಂಡುಬಂದರು ಕೂಡ ಇವರು ಪ್ರತ್ಯೇಕ ಜಾತಿಯನ್ನು ಹೊಂದಿರದೇ ಕುರುಬರೇ ಆಗಿರುವುದು ವಿಶೇಷ. ಕುರುಬರು ಇವರ ಮನೆಗೆ ತಮ್ಮ ಹೆಣ್ಣು ಮಕ್ಕಳನ್ನು ಕೊಡುವರು. ಅದೇ ಅವರ (ಗುರು) ಮನೆಯಿಂದ ತಮ್ಮ ಮನೆಗಳಿಗೆ ಹೆಣ್ಣು ಮಕ್ಕಳನ್ನು ತಂದು ಕೊಳ್ಳಲು ಹಿಂದೇಟು ಹಾಕುವರು. ಇದಕ್ಕೆ ಕಾರಣ ಒಡೆಯರ ಜೊತೆ ಸಂಬಂಧ ಬೆಳೆಸಿದಲ್ಲಿ ಕೆಲವು ಕಟ್ಟು ಪಾಡುಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂಬುದಾಗಿದೆ. ಉದಾಹರಣೆ ಮಾಂಸಾಹಾರ ಸೇವನೆಯ ನಿಷೇದ. ಒಡೆಯರು ಶುದ್ಧ ಶಾಕಾಹಾರಿಗಳು, ಕುರುಬರು ಮಾಂಸಾಹಾರಿಗಳು. ಆದರೆ ವೈವಾಹಿಕ ಸಂಬಂಧದ ದೃಷ್ಟಿಯಿಂದ ಇವರೆಲ್ಲ ನೆಂಟರು. ಇಂಥ ವ್ಯವಸ್ಥೆಯಿಂದಾಗಿ ಕುರುಬರ ಗುರು ಒಡೆಯರ ಪರಂಪರೆ ಭಾರತದಲ್ಲಿಯೇ ವಿಶಿಷ್ಟವಾದದ್ದು ಮತ್ತು ಅನನ್ಯವಾದದ್ದು.

ಕುರುಬರ ಗುರು ಪರಂಪರೆ ಹುಟ್ಟಲು ಕಾರಣವೇನು? ಯಾವ ಕಾಲಘಟ್ಟದಲ್ಲಿ ಹುಟ್ಟಿಕೊಂಡಿತು? ಅದಕ್ಕೆ ಕಾರಣವಾದ ಅಂಶಗಳಾವವು? ಎಂಬೆಲ್ಲ ಪ್ರಶ್ನೆಗಳಿಗೆ ದೊರೆಯುವ ಉತ್ತರಗಳು ಕುತೂಹಲಕಾರಿಯಾಗಿವೆ. ಈ ಕುರಿತು ತಾಮ್ರಪಟಗಳು, ಸುರುಳಿ ಪತ್ರಗಳು, ಮತ್ತು 'ತಗರ ಪವಾಡ', 'ಸಿದ್ಧಮಂಕ ಚರಿತೆ', 'ಹಾಲ್ಮತೋತ್ತೇಜಕ ಪುರಾಣ' ಮುಂತಾದ ಕೃತಿಗಳು ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ. ಒಡೆಯರ ವಂಶದ ಮೂಲ ಪುರುಷ ಸರೂರ ಶಾಂತಮುತ್ತಯ್ಯ. ಇವರು ಅಡವಿಯಲ್ಲಿ ಕುರಿಗಳನ್ನು ಕಾಯುತ್ತಿರುವಾಗ ಶ್ರೀ ಗುರು ರೇವಣಸಿದ್ಧರು ದರ್ಶನ ನೀಡಿ ಲಿಂಗದೀಕ್ಷೆಯನ್ನು ಕೊಟ್ಟು 'ಕುರುಬ ಕುಲಕ್ಕೆ ಗುರು'ವಾಗೆಂದು ಹರಿಸಿದರು. ಅವನ ಸಂತತಿಯವರೇ ಒಡೆಯರು. ಇವರಲ್ಲಿ ಪ್ರಸಿದ್ಧಿಯನ್ನು ಪಡೆದವರು ರೇವಣಸಿದ್ಧ ಮತ್ತು ಅಮೋಘಸಿದ್ಧ. ಇಬ್ಬರಿಬ್ಬರ ಗುರು ಪರಂಪರೆಯ ಚಿಹ್ನೆಗಳು ಹೀಗಿವೆ.

"ರೇವಣಸಿದ್ಧ ಪರಂಪರೆ – ಜಾಡಿ, ಶಂಖ, ಗುಂಡಗೊಪ್ಪರಿಗೆ, ಜಾಗಟೆ, ಬೆತ್ತ,
ಹಣೆ ಮೇಲೆ ವಿಭೂತಿ ಧಾರಣೆ.

ಅಮೋಘಸಿದ್ಧ ಪರಂಪರೆ – ಜಾಡಿ, ಭಂಡಾರ ಚೀಲ, ನಾಗಬೆತ್ತ,
ಹಣೆಯ ಮೇಲೆ ಭಂಡಾರ ಧಾರಣೆ."[೧೩]

ರಾಯಬಾಗ ಪರಿಸರದ ಯಲ್ಪಾರಟ್ಟಿ, ಯಬರಟ್ಟಿ, ಸುಟ್ಟಟ್ಟಿ, ಪರಮಾನಂದವಾಡಿ, ಮೊರಬ, ಹಿಡಕಲ್ಲ, ಹಾರೂಗೇರಿ, ಬಸ್ತವಾಡ, ಕಂಕಣವಾಡಿಗಳಲ್ಲಿ ಒಡೆಯರ ಮನೆತನದವರು ಕಂಡು ಬರುತ್ತಾರೆ. ಈ ಪರಿಸರದಲ್ಲಿರುವ ಒಡೆಯರ ಒಟ್ಟು ಮನೆತನಗಳು ಸುಮಾರು ೧೨೦ ಮತ್ತು ಜನಸಂಖ್ಯೆ ೧೨೦೦. ಇವರಲ್ಲಿ ಎರಡು ಗುಂಪುಗಳು. ಒಂದು ಅರಣ್ಯಸಿದ್ಧನ ಒಡೆಯರು, ಇನ್ನೊಂದು ಅಮೋಘಸಿದ್ಧನ ಒಡೆಯರು. ಯಲ್ಪಾರಟ್ಟಿ, ಯಬರಟ್ಟಿ, ಸುಟ್ಟಟ್ಟಿಗಳಲ್ಲಿರುವವರು ಅರಣ್ಯಸಿದ್ಧನ ಒಡೆಯರು. ಯಲ್ಪಾರಟ್ಟಿಯ ಒಡೆಯರರು ಅರಣ್ಯಸಿದ್ಧನ ಪೂಜೆಯ ಹಕ್ಕನ್ನು ಪಡೆದಿರುವರು. ಅರಣ್ಯಸಿದ್ಧನ ಮೂಲವನ್ನು ಹೊನ್ನಚೌಡಲ ಮುತ್ಯಾನಲ್ಲಿ ಕಾಣುತ್ತವೆ. ಇವನ ಬೆಡಗು ನಡಟ್ಟಿ ನಾಗರಾಯ. ಈ ಬೆಡಗಿನ ಒಡೆಯರರು ಯಲ್ಪಾರಟ್ಟಿ ಕಂಡು ಬರುವುದು ವಿಶೇಷ. ಮೂಲತಃ ಯಲ್ಪಾರಟ್ಟಿಯವರಾಗಿದ್ದು ಸದ್ಯ ಯಬರಟ್ಟಿ ಮತ್ತು ಸುಟ್ಟಟ್ಟಿಗಲ್ಲಿ ನೆಲೆಸಿರುವ ಒಡೆಯರರಿಗೆ ಅರಣ್ಯಸಿದ್ಧನ ಪೂಜೆಯ ಹಕ್ಕು ಇಲ್ಲ. ಇನ್ನೂಳಿದ ಊರುಗಳಲ್ಲಿರು ಒಡೆಯರರು ಅಮೋಘಸಿದ್ಧನ ಒಡೆಯರಾಗಿದ್ದಾರೆ. ಒಡೆಯರರು ಶುದ್ಧ ಶಾಕಾಹಾರಿಗಳು. ಕಳೆದ ಎರಡು ದಶಕಗಳಿಂದ ಈ ಪರಿಸರದಲ್ಲಿರುವ ಕುರುಬರ ಮನೆತನಕ್ಕೆ, ಒಡೆಯರು ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಡುತ್ತಿರುವರು. ಈ ಮೊದಲು ಕುರುಬ ಮನೆತನದ ಹೆಣ್ಣು ಮಕ್ಕಳನ್ನು ಮಾತ್ರ ತಮ್ಮ ಮನೆಗಳಿಗೆ ತಂದು ಕೊಳ್ಳುತ್ತಿದ್ದರು.[೧೪]

೫.೧.೩ ಈರಗಾರರು :

ಕುರುಬ ಸಮುದಾಯದ ದೇವತೆಗಳ ಆರಾಧನೆಯ ಭಕ್ತವರ್ಗದಲ್ಲಿ ಈರಗಾರರು ಪ್ರಮುಖರೆನಿಸಿಕೊಂಡಿದ್ದಾರೆ. "ಕುರುಬ ಸಮುದಾಯದ ಧಾರ್ಮಿಕ ಸಾಮ್ರಾಜ್ಯಕ್ಕೆ ಚಕ್ರವರ್ತಿಯಾಗಿ ಬೀರದೇವರನ್ನು ಪ್ರತಿಷ್ಠಾಪಿಸಲಾಗಿದೆ. ಸೇನಾಧಿಪತಿಯಾಗಿ ದಳವಾಯಿ ಇದ್ದರೆ, ಸೈನಿಕರಾಗಿ ಈರಗಾರರನ್ನು ಕಾಣುತ್ತವೆ."[೧೫] ಈರಗಾರ ಎಂಬುದು ವೀರಗಾರ ಎಂಬುದರ ತತ್ಸಮರೂಪವಾಗಿದ್ದು, ಅಪ್ಪಟ ಗ್ರಾಮ್ಯ ಶಬ್ದವಾಗಿದೆ. 'ವೀರ' ಎಂದರೆ ಪರಾಕ್ರಮಶಾಲಿ, ಸಚ್ಚಾರಿತ್ರ್ಯವುಳ್ಳವನು, ಸಂಯಮಶೀಲವುಳ್ಳವನು ಎಂಬ ಅರ್ಥವನ್ನು ನೀಡುತ್ತದೆ. ವೀರ>ಈರ ಎಂಬುದಕ್ಕೆ ರೂಪಾಂತರವಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. 'ವೀರ' ಎಂಬ ಇಂಗ್ಲೀಷನ 'ಹೀರೋ' ಎಂಬ ಪದಕ್ಕೆ ಸಮಾನಾರ್ಥವಾಗಿದೆ. ವ್ಯಕ್ತಿ ವಿಶಿಷ್ಟವಾದ ಪರಾಕ್ರಮ, ಯುದ್ಧ ನೈಪುಣ್ಯತೆ, ಸಾಹಸ ಮತ್ತು ಉತ್ತಮ ಕೆಲಸ ಮಾಡುವ ನಾಯಕ, ಯೋಧ ಎಂಬ ಅರ್ಥಗಳನ್ನು ನೀಡುತ್ತದೆ. ಅಲ್ಲದೆ ಉದಾತ್ತ ಧ್ಯೇಯಗಳಿಗೆ ಹೋರಾಡುವವನನ್ನು 'ಈರಗಾರ'ನೆಂದು ಕರೆಯುವ ವಾಡಿಕೆ ಇದೆ. ಇವರು 'ಅಲಗ ಹಾಯುವುದು' ಎಂಬ ಧಾರ್ಮಿಕ ಆಚರಣೆಯನ್ನು ನೇರವೇರಿಸುವವರಾಗಿದ್ದಾರೆ. 'ಅಲಗ ಹಾಯುವ ಆಚರಣೆ'ಯು ಹಾಲುಮತ ಸಮುದಾಯದ ಜನಪದ ಕಲೆ, ಮನರಂಜನೆ, ಭಕ್ತಿ ಪಾರಮ್ಯದ ಸಂಕೇತವಾಗಿ ಕಂಡು ಬರುತ್ತದೆ.

ವೀರರು>ಈರರು>ಈರಗಾರರು ಎಂದೆಲ್ಲ ಕರೆಯುವ ಇವರು ಭೀರಪ್ಪನ ಆರಾಧಕರು. ಆದರೆ ರಾಯಬಾಗ ಪರಿಸರದ ಚಿಂಚಲಿಯ ಮಾಯವ್ವಳಿಗೆ ಈರಗಾರ ಸೇವಕರಿರುವುದು ವಿಶೇಷ. ಈ ಸಮುದಾಯದವರು ಚಿಂಚಲಿಯಲ್ಲಿ ಮಾತ್ರ ಕಂಡು ಬರುತ್ತಾರೆ. ಹಬ್ಬ-ಹರಿದಿನಗಳಲ್ಲಿ, ಜಾತ್ರೆ-ಉತ್ಸವಗಳಲ್ಲಿ ದೇವತೆಗಳನ್ನು ಸಂತೃಪ್ತಿಗೊಳಿಸುವುದಕ್ಕಾಗಿ ಹರಿತವಾದ ಖಡ್ಗವನ್ನು ತಮ್ಮ ಕೈಗೆ ಸಾಧ್ಯವಾದಷ್ಟು ದೂರದಿಂದ ಎತ್ತಿ ಜೋರಾಗಿ ತಮ್ಮ ಹೊಟ್ಟೆಗೆ ಹೊಡೆದುಕೊಳ್ಳುವರು. ಹೀಗೆ ಹೊಡೆದುಕೊಂಡಾಗ ಹೊಟ್ಟೆಯಿಂದ ರಕ್ತ

ಬರುವುದುಂಟು. ದೇವರ ಮೇಲಿನ ನಂಬಿಕೆ-ನಿಷ್ಠೆ ಕಡಿಮೆಯಾದಾಗ ಈ ರೀತಿಯಾಗಿ ರಕ್ತ ಬರುವುದೆಂಬ ಭಾವನೆ ಅವರಲ್ಲಿರುವುದು. ರಕ್ತ ಬಂದಾಗ ಪೂಜಾರಿಗಳು ಅದಕ್ಕೆ ಭಂಡಾರ ಎರಚುವರು/ಲೇಪಿಸುವರು. ಕೆಲವೊಮ್ಮೆ ಇವರು ಪ್ರಜ್ಞೆತಪ್ಪಿ ಬೀಳುವುದುಂಟು ಆಗ ಪೂಜಾರಿಗಳು ದೇವರ ತೀರ್ಥವನ್ನು ಮುಖಕ್ಕೆ ಸಿಂಪಡಿಸಿ, ಕುಡಿಸಿ ಅವರಿಗೆ ಪ್ರಜ್ಞೆ ಬರುವಂತೆ ಮಾಡುವರು. ಈರಗಾರರು ಮಡಿ ಮೈಲಿಗೆಗಳ ಬಗ್ಗೆ ಹೆಚ್ಚು ಕಾಳಜಿವಹಿಸುವರು. ಈ ಆಚರಣೆಯ ಹಿಂದೆ ಹಿಂಸಾ ಆರಾಧನಾ ಪದ್ಧತಿಯ ಅಡಗಿರುವುದು ಕಂಡು ಬರುತ್ತದೆ. ಈ ರೀತಿಯ ಅಲಗ ಹಾಯುವ ಆಚರಣೆಯು ಅಲಕನೂರಿನ ಕರೇಸಿದ್ಧೇಶ್ವರ, ಹಾರೂಗೇರಿ ಕರೇಸಿದ್ಧೇಶ್ವರ ಮತ್ತು ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ, ಕಂಕಣವಾಡಿಯ ಹಾಲಸಿದ್ಧೇಶ್ವರ, ಹಿಡಕಲ್ಲದ ಹಾಲಸಿದ್ಧೇಶ್ವರ ಮತ್ತು ಬೀರಪ್ಪ, ಚಿಂಚಲಿಯ ಮಾಯಕ್ಕಾ ದೇವಿಯ ಜಾತ್ರೆಗಳಲ್ಲಿ ಕಂಡು ಬರುತ್ತದೆ. ಕಡೋಲಿ ಇಟ್ಟಪ್ಪನ ಜಾತ್ರೆಯಲ್ಲಿ ಫರಂಡೆ ಅಲಗ ಹಾಯುವುದನ್ನು ನೋಡುವುದೇ ಭಾಗ್ಯ. ಕರ್ನಾಟಕ ಮತ್ತು ಮಹಾರಾಷ್ಟ್ರದ ಹಾಲುಮತ ದೇವತೆಗಳ ಜಾತ್ರೆಯಲ್ಲಿಯೇ ಪ್ರಸಿದ್ಧತೆಯನ್ನು ಪಡೆದಿರುವ ಈ ಅಲಗ ಹಾಯುವ ಆಚರಣೆಯಲ್ಲಿ ಪಾಲ್ಗೊಳ್ಳಲು ರಾಯಬಾಗ ಪರಿಸರದಲ್ಲಿನ ಹರಕೆ ಹೊತ್ತ ಭಕ್ತರು ಭಂಡಾರ ಹಾರಿಸುವುದಕ್ಕಾಗಿಯೇ ಕಡೋಲಿ ಜಾತ್ರೆಗೆ ಹೊಗುವದು ವಿಶೇಷ.

೫.೨ ರಾಯಬಾಗ ಪರಿಸರದ ಸಾಧಕರು :

೫.೨.೧ ಸ್ವಾತಂತ್ರ್ಯ ಹೋರಾಟದಲ್ಲಿ ಹಾಲುಮತ ಯೋಧರು :

ರಾಯಬಾಗ ಪರಿಸರಕ್ಕೆ ಸಂಬಂಧಿಸಿದಂತೆ ಬಹು ಮುಖ್ಯವಾಗಿ ಪ್ರಸ್ತಾಪಿಸಲೇ ಬೇಕಾದ ವಿಚಾರವೆಂದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಹಾಲುಮತ ಸಮುದಾಯದವರ ಪಾತ್ರ. ಸ್ವಾತಂತ್ರ್ಯ ಹೋರಾಟದಲ್ಲಿ ಇತರೆ ಸಮುದಾಯಗಳಿಗೆ ಈ ಸಮುದಾಯವನ್ನು ಹೋಲಿಸಿ ನೋಡುವುದಾದರೆ, ಈ ಸಮುದಾಯದಿಂದ ಹೆಚ್ಚು ಜನ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೋಡಗಿಸಿಕೊಂಡಿರುವುದು ಕಂಡು ಬರುತ್ತದೆ. ಇವರ ಪ್ರಮಾಣ ಹೆಚ್ಚಾಗಿ ಕಂಡು ಬರಲು ಕಾರಣವೇನೆಂದರೆ, ಒಂದು ಅವರಿಗೆ ಸ್ವಾತಂತ್ರ್ಯದ ಅರಿವಿತ್ತು. ಇನ್ನೊಂದು ಈ ಪರಿಸರದ ಬಹುಸಂಖ್ಯಾತರು ಅವರಾಗಿದ್ದರು. ಹೀಗಾಗಿ ಈ ಹೋರಾಟದಲ್ಲಿ ಇವರು ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಗುಡ್ಡದ ಬ್ಯಾಕೂಡದ ವಿ. ಎಲ್. ಪಾಟೀಲ ಮತ್ತು ಅವರ ಕಿರಿಯ ಸಹೋದರ ಹುತಾತ್ಮ ಪ್ರತಾಪರಾವಗೌಡ ಸಿದ್ದಗೌಡ ಪಾಟೀಲ ೧೯೪೩ ರಿಂದ ೧೯೪೭ರ ವರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಒಟ್ಟಾಗಿ ಭಾಗಿಯಾಗಿದ್ದು ಅವರ ಚರಿತ್ರೆ ಅಭ್ಯಸನೀಯವಾದದ್ದು. ಇವರು ಹೋರಾಟದಲ್ಲಿ ಯುವಕರನ್ನು ಹುರಿದುಂಬಿಸುವುದಕ್ಕಾಗಿ ಗುಪ್ತ ಸಭೆಗಳನ್ನು ಏರ್ಪಡಿಸುವುದು, ಕರಪತ್ರಗಳನ್ನು ಹಂಚುವುದು, ಚಳುವಳಿಗಾರರಿಗೆ ಆರ್ಥಿಕ ಸಹಾಯ ಮಾಡುವುದು ಹಾಗೂ ಶಸ್ತ್ರಾಸ್ತ್ರಗಳನ್ನು ಪೂರೈಸುವುದರ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇದಕ್ಕೂ ಮೊದಲು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನನ್ನು ತೊಡಗಿಸಿಕೊಂಡರು ಹಿಡಕಲ್ಲ ಗ್ರಾಮದ ಯೋಧರು.

ರಾಯಬಾಗ ಪರಿಸರದ ಒಂದು ಭಾಗವಾದ ಹಿಡಕಲ್ಲ ಗ್ರಾಮವು ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ತನ್ನದೇ ಆದ ಪ್ರಮುಖ ಪಾತ್ರ ನಿರ್ವಹಿಸಿದೆ. "ಸ್ವಾತಂತ್ರ್ಯ ಪೂರ್ವದಲ್ಲಿ ಹಿಡಕಲ್ಲವು (ರಾಯಬಾಗ) ಅಥಣಿ ತಾಲೂಕಿನ ವ್ಯಾಪ್ತಿಯಲ್ಲಿದ್ದು, ತೇರದಾಳ ಅಂಚೆ ಕಛೇರಿಯನ್ನು ಹೊಂದಿತ್ತು. ಅಂದು ಹಿಡಕಲ್ಲದ ರಾಮಪ್ಪ ಮುರಾರೆಪ್ಪ ಕಂಕಣವಾಡಿ, ಲಕ್ಷ್ಮಣ ಅಣ್ಣಪ್ಪ ಡಾಂಗೆ, ಭೀಮರಾಯ ರಾಯಪ್ಪಾ ಕಂಕಣವಾಡಿ, ರೇವಣ್ಣ ಬನಹಟ್ಟಿ ಮುಂತಾದ ಹಾಲುಮತ ಯೋಧರು ನೂರಾರು ಕಾರ್ಯಕರ್ತರು, ಹೋರಾಟದ ಹಾದಿಯನ್ನು ತುಳಿದ ಶಾಲಾ ವಿದ್ಯಾರ್ಥಿಗಳನ್ನು ನೆನಪಿಸಿಕೊಳ್ಳುವುದೇ ಸುದೈವ."[೧೬] ಹೀಗಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ಹಾಲುಮತ ಸ್ವಾತಂತ್ರ್ಯ ಯೋಧರ ಪಾತ್ರ ಅಭ್ಯಸನೀಯವಾಗಿದೆ.

ಈ ಅಧ್ಯಯನವು ಹಾಲುಮತಸ್ಥರೇ ಹೆಚ್ಚಾಗಿ ವಾಸಿಸುವ ಹಿಡಕಲ್ಲ ಗ್ರಾಮವನ್ನು ಒಳಗೊಂಡಂತೆ ರಾಯಬಾಗ ಪರಿಸರದ ಸ್ವಾತಂತ್ರ್ಯ ಹೋರಾಟಗಾರರನ್ನು ಗುರುತಿಸುವ ಹಾಗೂ ಅವರ ಹೋರಾಟದ ಸ್ವರೂಪ ಮತ್ತು ಪರಿಣಾಮಗಳನ್ನು ತೌಲನಿಕವಾಗಿ ವಿವೇಚಿಸುವ ವ್ಯಾಪ್ತಿಗೆ ಸಿಮೀತಗೊಂಡಿದೆ. ಇದು ಒಂದು ಅರ್ಥದಲ್ಲಿ ತೀರಾ ಕಡಿಮೆ ವ್ಯಾಪ್ತಿಯನ್ನು ಹೊಂದಿದಂತೆ ಮೇಲ್ನೋಟಕ್ಕೆ ಕಂಡರೂ, ಅಂದಿನ ರಾಯಬಾಗ ಪರಿಸರದ ಅತ್ಯಂತ ಕ್ರಿಯಾಶೀಲವಾದ ಗ್ರಾಮಗಳು ಗುಡ್ಡದ ಬ್ಯಾಕೂಡ ಮತ್ತು ಹಿಡಕಲ್ ಆಗಿದ್ದವು. ಬ್ಯಾಕೂಡ ಮತ್ತು ಹಿಡಕಲ್‌ದ ಸ್ವಾತಂತ್ರ್ಯ ಹೋರಾಟಗಾರರೆಂದರೆ, ಒಂದರ್ಥದಲ್ಲಿ ಈ ನಾಡಿನ ಸ್ವಾತಂತ್ರ್ಯದ ಹೋರಾಟವೇ ಎಂದರ್ಥ. ಬ್ಯಾಕೂಡ ಮತ್ತು ಹಿಡಕಲ್ ಗ್ರಾಮಗಳನ್ನು ಹೊರತು ಪಡಿಸಿ ಉಳಿದೆಡೆ ಬೆರಳೆಣಿಕೆಯಷ್ಟು ಸ್ವಾತಂತ್ರ್ಯ ಹೋರಾಟಗಾರರು ಮಾತ್ರ ಕಂಡು ಬರುತ್ತಿದ್ದು, ಅವರಿಗೆ ಸ್ಫೂರ್ತಿಯಾಗಿ ನಿಂತವರು, ಬ್ಯಾಕೂಡ ಮತ್ತು ಹಿಡಕಲ್‌ಗಳ ಸ್ವಾತಂತ್ರ್ಯ ಹೋರಾಟಗಾರರು. ಆದ್ದರಿಂದ ಪ್ರಸ್ತುತ ಈ ನಿಬಂಧ ರಾಯಬಾಗ ಪರಿಸರದ ಹಾಲುಮತ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯನ್ನು ಕಟ್ಟಲು ಯೋಜಿಸಿದೆ.

ಬ್ರಿಟಿಷ್ ವಸಾಹತುಶಾಹಿ ಸಾಮ್ರಾಜ್ಯದ ಕಪಿಮುಷ್ಟಿಯಿಂದ ಬಿಡುಗಡೆ ಬಯಸಿ ಶತಮಾನದವರೆಗೆ ನಡೆದ ವೀರೋಚಿತ ರೋಚಕ ಹೋರಾಟವೇ ಭಾರತದ ಸ್ವಾತಂತ್ರ್ಯ ಸಂಗ್ರಾಮ. ಭಾರತ ಮಾತೆಯ ದಾಸ್ಯವಿಮೋಚನೆಯ ಸಂಗ್ರಾಮಕ್ಕಾಗಿ ಸಾವಿರಾರು ಹೋರಾಟಗಾರರು ತಮ್ಮ ತನು-ಮನ-ಧನವನ್ನೇ ತೆತ್ತರು. ಅಲ್ಲದೆ ಜೀವನವನ್ನೇ ಮುಡುಪಾಗಿ ಇರಿಸಿದವರು ಅಪಾರ ಜನ. ಭಾರತೀಯ ಕಾಂಗ್ರೇಸ್ ಪಕ್ಷ ಇಡಿ ಭಾರತದ ಮೇಲೆ ತನ್ನ ಪ್ರಭಾವವನ್ನು ಬೀರಿತ್ತು. ಕಾಂಗ್ರೇಸ್ ನಾಯಕರಾದ ಮಹಾತ್ಮಾ ಗಾಂಧೀಜಿ, ಜವಾಹರಲಾಲ ನೆಹರು, ಸುಭಾಷಚಂದ್ರ ಬೋಸ ಮುಂತಾದ ನಾಯಕರ ಪ್ರಭಾವ ಭಾರತದ ಹಳ್ಳಿ-ಹಳ್ಳಿಗಳಲ್ಲಿ ವ್ಯಾಪಿಸಿತ್ತು.

ಮಹಾತ್ಮಾ ಗಾಂಧೀಜಿಯವರು ಬ್ರಿಟಿಷ್ ಸರ್ಕಾರದ ವಿರುದ್ಧ ಆರಂಭಿಸಿದ ಅಹಿಂಸಾತ್ಮಕ ಹೋರಾಟದ ಕರೆಗಳು ಜನಸಾಮಾನ್ಯರ ನರನಾಡಿಗಳಲ್ಲಿ ನವಚೈತನ್ಯವನ್ನು ತುಂಬಿದವು. ಅವರು ನೀಡಿದ ಸ್ವಾತಂತ್ರ್ಯ ಪರವಾದ ಕರೆಗಳು ಜನಸಾಮಾನ್ಯರ ಮೂಲಕ ಪ್ರತಿಧ್ವನಿಸಿದವು. ಗಾಂಧೀಜಿ ಕರೆಗೆ ಓಗೊಟ್ಟ ಲಕ್ಷಾಂತರ ಭಾರತೀಯ ತರುಣ-ತರುಣಿಯರು ಇದರಲ್ಲಿ ಭಾಗವಹಿಸಿದರು. ಅಂದು ಜನಸಾಮಾನ್ಯರ ಹೃದಯದಲ್ಲಿ ಹತ್ತಿದ ಸ್ವಾತಂತ್ರ್ಯ ಜ್ಯೋತಿಯ ಹಣತೆಯೂ ಅದೆಷ್ಟೋ ಯೋಧರ ರಕ್ತದಲ್ಲೇ ಬೆಳಗಿತು. ಬ್ರಿಟಿಷರ ಮದ್ದು-ಗುಂಡುಗಳಿಗೆ ಎದೆಯೊಡ್ಡಿ ಪ್ರಾಣವನ್ನು ಕಳೆದುಕೊಂಡವರು ಸಾವಿರ-ಸಾವಿರ. ತಮ್ಮ ಕೊರಳಿಗೆ ನೇಣುಕುಣಿಕೆಯನ್ನೇ ಹಾರವಾಗಿಸಿಕೊಂಡವರು ಅನೇಕರು. ಹೋರಾಟದ ಹಾದಿಯಲ್ಲಿ ಪೊಲೀಸರ

ಲಾಠಿ ಏಟಿಗೆ ಮೈಯೊಡ್ಡಿ ಕಷ್ಟ-ನಷ್ಟ ಪಟ್ಟವರು ಲಕ್ಷ ಲಕ್ಷ ಜನ. ಮನೆ-ಮಠಗಳನ್ನು ತೊರೆದು ಭೂಗತರಾಗಿ ಕಾರ್ಯಮಾಡಿ ಸೆರೆಮನೆ ಸೇರಿದವರು ಲಕ್ಷೋಪ-ಲಕ್ಷದಷ್ಟು. ಹಸುಗೂಸುಗಳನ್ನು ತಮ್ಮ ಕಂಕುಳಲ್ಲಿಟ್ಟುಕೊಂಡು ಹೋರಾಟಮಾಡಿದ ವೀರ ಮಹಿಳೆಯರು ಸಾವಿರ-ಸಾವಿರ. ಈ ಎಲ್ಲಾ ಜನರ ತ್ಯಾಗ, ಬಲಿದಾನಗಳ ಪ್ರತಿಫಲವಾಗಿ ದೊರೆತದ್ದೇ ೧೯೪೭ ರ ಸ್ವಾತಂತ್ರ್ಯ. ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ. ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಕೆಲವರು ಸುದೈವದಿಂದ ಬೆಳಕಿಗೆ ಬಂದರು ಮತ್ತು ಪ್ರಸಿದ್ಧರಾದರು. ಆದರೆ ಇನ್ನೂ ಹಲವರು ಎಲೆ ಮರೆಯ ಕಾಯಿಯಂತೆಯೇ ಉಳಿದರು. ಇವರ ಪರಿಚಯ ಇಂದಿನ ಪೀಳಿಗೆಯವರಿಗೆ ಇರಲಿಕ್ಕಿಲ್ಲ. ಈ ಹೋರಾಟಗಾರರ ಬದುಕಿಗೆ ಬೆಳಕು ತುಂಬುವ ಕೆಲಸವನ್ನು ಇಲ್ಲಿ ಮುಂದುವರೆಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ವೀರಗಾಥೆಯನ್ನು ಅವರ ಬಾಯಿಂದಲೇ ನೇರವಾಗಿ ಕೇಳುವುದು ಒಂದು ಸುಯೋಗ. ಅವರ ಹೋರಾಟದ ಹಾದಿಗಳನ್ನು ಕಂಡು ಹಿಡಿಯುವುದರ ಮೂಲಕ ಇತಿಹಾಸದ ಪುಟಗಳಲ್ಲಿ ದಾಖಲಿಸುವುದು ನಮ್ಮ ಕರ್ತವ್ಯ. ಸ್ವಾತಂತ್ರ್ಯ ಹೋರಾಟಗಾರರು ನೇರವಾಗಿ ತಿಳಿಸಿದ ತಮ್ಮ ಹೋರಾಟದ ಅನುಭವಗಳನ್ನು ಒಂದೆಡೆ ಜೋಡಿಸಿ ಬರಹರೂಪದಲ್ಲಿ ಹೊರತರುವ ಸಾಹಸವನ್ನು, ಹಿಂದಿನಿಂದಲೂ ಬಹಳಷ್ಟು ಲೇಖಕರು ಮಾಡುತ್ತ ಬಂದಿದ್ದಾರೆ. ಇಂತಹ ಸ್ವಾತಂತ್ರ್ಯ ಯೋಧರ ದಾಖಲೆಗಳನ್ನು ಸಂಗ್ರಹಿಸುವಾಗ ಅನಿವಾರ್ಯ ಕಾರಣಗಳಿಂದ ಅನೇಕ ಸ್ವಾತಂತ್ರ್ಯ ಯೋಧರ ಮಾಹಿತಿಗಳು ಬಿಟ್ಟು ಹೋಗಿವೆ. ಅಂಥವುಗಳಲ್ಲಿ ಒಂದಾದ, ರಾಯಬಾಗ ಪರಿಸರದ ಸ್ವಾತಂತ್ರ್ಯ ಯೋಧರ ಮಾಹಿತಿಗಳನ್ನು, ಪತ್ತೆ ಹಚ್ಚಿ ಗುರುತಿಸುವ ಆಶಯವೇ ಈ ಗ್ರಂಥದ ಉದ್ದೇಶವಾಗಿದೆ.

ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ರಾಯಬಾಗ ಪರಿಸರದಂತಹ ಜಾಗೃತ ಸ್ಥಳದ ಹಾಗೂ ಕ್ರೀಯಾಶೀಲರಾಗಿ ಹೋರಾಟ ಮಾಡಿದ ಹಾಲುಮತ ಸ್ವಾತಂತ್ರ್ಯ ಸೇನಾನಿಗಳ ಹೆಸರಿಲ್ಲದಿರುವುದು ಅಚ್ಚರಿಯದ ಸಂಗತಿ. ಈ ಹೋರಾಟಗಾರರೆಲ್ಲ ಇಂದು ನಮ್ಮ ಮಧ್ಯೆದಲ್ಲಿ ಇಲ್ಲ. ಅವರು ಬದುಕಿದ್ದಾಗ ಅವರಿಗೆ ತಾವು ಸ್ವಾತಂತ್ರ್ಯ ಸೇನಾನಿಗಳು ಅಂತ ಅನ್ನಿಸಿಕೊಳ್ಳಬೇಕು ಮತ್ತು ಅವರ ಹೋರಾಟದ ಚರಿತ್ರೆಗಳು ಪ್ರಕಟಗೊಳ್ಳಬೇಕು ಅನ್ನುವ ಯಾವುದೇ ಇಚ್ಛೆ ಇಲ್ಲ. ಯಾಕೆಂದರೆ, ಮೂಲತಃ ಕಾಂಗ್ರೇಸ್ಸಿನವರ ತತ್ವವೇ ಅದಾಗಿತ್ತು. ಅವರು ಪ್ರಚಾರ ಪ್ರಿಯರಲ್ಲ. ಅವರೆಲ್ಲಾ ನಿಸ್ವಾರ್ಥ ದೇಶಭಕ್ತರು. ದೇಶಭಕ್ತರ ದೇಶಭಕ್ತಿಯನ್ನು ಸ್ವಾತಂತ್ರ್ಯಕ್ಕಾಗಿ ಮಾಡಿದಂತಹ ಆ ಪರಿಶ್ರಮವನ್ನು ಗುರುತಿಸದೇ ಇರುವುದು ಇತಿಹಾಸಕ್ಕೆ ಬಗೆದ ಅವಮಾನ. ಆ ದಿಸೆಯಲ್ಲಿ ರಾಯಬಾಗ ಪರಿಸರದಲ್ಲಿರುವ ಎಲ್ಲಾ ಹಾಲುಮತ ಸ್ವಾತಂತ್ರ್ಯ ಸೇನಾನಿಗಳ ಅಧ್ಯಯನವನ್ನು ಮಾಡುವುದು ಅಗತ್ಯವೆನಿಸಿದ್ದು ಈ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಭಾರತ ಪರತಂತ್ರದಿಂದ ಬಿಡುಗಡೆಗೊಂಡು ಆರು ದಶಕಗಳು ಸಂದಿವೆ. ನಾಡಿನಲ್ಲೆಡೆ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಬಹಳ ಅದ್ದೂರಿಯಾಗಿಯೇ ಆಚರಿಸಲಾಗಿದೆ. ಈ ಸಂದರ್ಭದಲ್ಲಿ ನಾಡಿನೆಲ್ಲೆಡೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರಾಗ್ರಣಿಗಳ ಸ್ಮೃತಿ ಮತ್ತು ಅನುಭವಗಳನ್ನು ಸಂಗ್ರಹಿಸಿ ಲೇಖಗಳನ್ನು ಮುದ್ರಿಸಿ ಹೊರತರಲಾಗುತ್ತಿದೆ. ಮುಂದಿನ ಪೀಳಿಗೆಯವರಿಗೆ, ತಮ್ಮ ಹಿಂದಿನ ಹಿರಿಯರು ಸ್ವಾತಂತ್ರ್ಯಕ್ಕಾಗಿ ಯಾವ ರೀತಿ

ಹೋರಾಟ ಮಾಡಿದರೆಂಬುದು ಸರಿಯಾಗಿ ತಿಳಿಯಲು ಇತಿಹಾಸ ರಚಿಸಬೇಕು. ಇತಿಹಾಸವನ್ನು ಮರೆತವರು, ಇತಿಹಾಸವನ್ನು ಸೃಷ್ಟಿಸಲಾರರು. ಹಿಂದೆಂದಿಗಿಂತಲೂ ಇಂದು ಸ್ವಾತಂತ್ರ್ಯದ ಮಹತ್ವವನ್ನು ಮನಗಾಣಬೇಕಾಗಿದೆ. ಅಗಸ್ಟ ೧೫ ಕ್ಕೆ ಮಾತ್ರ ಸ್ವಾತಂತ್ರ್ಯ ವಿಚಾರ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ನಮನಗಳು ಸಿಮೀತವಾದದ್ದು ವಿಷಾದನೀಯ. ದೇಶ ಕಟ್ಟಿದ ದೇವರುಗಳಿಗೆ ಈ ನಾಡಿನಲ್ಲಿರುವ ನಾವೆಲ್ಲರು ನಾವು ಬದುಕಿರುವ ತನಕ ಅವರಿಗೆ ಕೃತಜ್ಞರಾಗಿ ಇರಬೇಕಾದದ್ದು ನಮ್ಮೆಲ್ಲರ ಧರ್ಮ. ಅಂತಹ ಯೋಧರನ್ನು ಸ್ಮರಿಸುವ ಒಂದು ಚಿಕ್ಕ ಕೈಂಕರ್ಯ ಇಲ್ಲಿದೆ.

ಡಾ॥ ಸೂರ್ಯನಾಥ ಕಾಮತರು 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಎಂಬ ಹೆಸರಿನಲ್ಲಿ ಮೂರು ಸಂಪುಟಗಳನ್ನು ಹೊರತಂದಿದ್ದು, ಅವುಗಳಲ್ಲಿ ಕರ್ನಾಟಕದ ಸ್ವಾತಂತ್ರ್ಯ ಯೋಧರ ಚರಿತ್ರೆಯನ್ನು ಕಟ್ಟಿಕೊಟ್ಟಿರುವರು. ಸಂಪುಟ ಮೂರರಲ್ಲಿ ರಾಯಬಾಗ ಪರಿಸರದ ಹಿಡಕಲ್ಲ ಗ್ರಾಮದ ಇಮಾಮಸಾಹೇಬ ಹುಸೇನಸಾಹೇಬ ಮುಲ್ಲಾ (ಹಾಲುಮತೇತರ ಯೋಧ) ಅವರ ಹೋರಾಟವನ್ನು ವಿವರಿಸಿದ್ದು ಉಲ್ಲೇಖನೀಯ. ಅದರೆ ಇವರನ್ನು ಹೊರತು ಪಡಿಸಿ ಯಾವುದೇ ಹೋರಾಟಗಾರರ ಉಲ್ಲೇಖ ಕಂಡು ಬರುವುದಿಲ್ಲ. ಇಮಾಮಸಾಹೇಬ ಒಬ್ಬರೇ ಚಳುವಳಿಯಲ್ಲಿ ಭಾಗವಹಿಸಿರಲಿಲ್ಲ. ಅವರು ಹೋರಾಟಗಾರರ ಪಡೆಯ ಒಬ್ಬ ಸದಸ್ಯರಾಗಿದ್ದರು. ಹೀಗಾಗಿ ರಾಯಬಾಗ ಪರಿಸರದ ಸ್ವಾತಂತ್ರ್ಯ ಹೋರಾಟದ ಸಂಪೂರ್ಣ ದಾಖಲೀಕರಣ ಆಗಿಲ್ಲವೆಂದೇ ಹೇಳಬಹುದು.

ಕಾಮತರ ನಂತರ ಬಾಳಾಜಿ ಯಮಾಜಿ ದೇಶಪಾಂಡೆ (ಅಣ್ಣಾ ಗುರೂಜಿ) ಯವರು ತಮ್ಮ 'ಬೆಳಗಾವಿ ಜಿಲ್ಹೆಯಲ್ಲಿಯ ಸ್ವಾತಂತ್ರ್ಯ ಸಮರ' ಸಂಪುಟ ಒಂದು ಮತ್ತು ಎರಡರಲ್ಲಿ ರಾಯಬಾಗ ಪರಿಸರದ ಹಿಡಕಲ್ಲ ಗ್ರಾಮದ ಸ್ವಾತಂತ್ರ್ಯ ಚಳುವಳಿಕಾರರ ಬಗ್ಗೆ ಉಲ್ಲೇಖಿಸಿದ್ದಾರೆ. ೧೯೪೧ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಮತ್ತು ೧೯೪೨ ರ ಚಲೇಜಾವ ಕ್ರಾಂತಿಯಲ್ಲಿ ಭಾಗವಹಿಸಿ ಸೆರೆಮನೆವಾಸ·ಅನುಭವಿಸಿದ ಹಿಡಕಲ್ಲ ಗ್ರಾಮದ ಸ್ವಾತಂತ್ರ್ಯಯೋಧರ ತಂಡದಲ್ಲಿದ್ದ ೧೪ ಜನ ಹೋರಾಟಗಾರರ ಹೆಸರು ಮತ್ತು ಕಾರಾವಾಸವನ್ನು ಅನುಭವಿಸಿದ ಅವಧಿಯನ್ನು ದಾಖಲಿಸಿದ್ದಾರೆ. ಅದರೆ ಅವರು ತಮ್ಮ ಗ್ರಂಥಗಳಲ್ಲಿ ಹಿಡಕಲ್ಲದ ಎಲ್ಲ ಸ್ವಾತಂತ್ರ್ಯ ಹೋರಾಟಗಾರರ ಸವಿವರ ಚಿತ್ರಣವನ್ನು ನೀಡದೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಹೀಗಾಗಿ ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ಅಣ್ಣಾ ಗುರೂಜಿಯವರು ನೀಡಿದ್ದರೂ ಕೂಡ ಆ ವಿವರಣೆ ಕೂಡ ಪರಿಪೂರ್ಣವಾಗಿಲ್ಲ.

ಇನ್ನೂ ಮೂರನೆಯದಾಗಿ, ಡಾ॥ ಸರೋಜಿನಿ ಚವಲಾರರವರು ಬೆಳಗಾವಿಯ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತಮ್ಮ 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು' ಎಂಬ ಕೃತಿಯನ್ನು ರಚಿಸಿದ್ದು ರಾಯಬಾಗ ತಾಲೂಕಿನಲ್ಲಿಯ ಸ್ವಾತಂತ್ರ್ಯ ಹೋರಾಟದ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅಲ್ಲದೆ ತಾಲೂಕಿನ ಏಳು ಜನ ಸ್ವಾತಂತ್ರ್ಯ ಹೋರಾಟಗಾರರ ಸಂಕ್ಷೇಪ್ತ ವಿವರಗಳನ್ನು ನೀಡಿದ್ದಾರೆ. ಅವರ ಕೃತಿಯ ಪುಟ ಸಂಖ್ಯೆ ೩೩೭ ಮತ್ತು ೩೩೮ ರಲ್ಲಿ ಹಿಡಕಲ್ಲ ಗ್ರಾಮದ ವಾಸುದೇವ ಅಲ್ಲಪ್ಪ ನಾಯಕ (ಹಾಲುಮತೇತರ ಯೋಧ) ಅವರ ಹೋರಾಟವನ್ನು ಅತ್ಯಂತ ಸಂಕ್ಷಿಪ್ತವಾಗಿ ವಿವರಣೆ ನೀಡಿದ್ದಾರೆ. ಜೊತೆಗೆ ಜೇಲು ವಾಸ ಅನುಭವಿಸಿದ ೧೪ ಜನ ಹೋರಾಟಗಾರರ ಹೆಸರುಗಳ ಪಟ್ಟಿಯನ್ನು ನೀಡಿದ್ದು, ಇವರ

ವಿವರಣೆ ಕೂಡ ಪರಿಪೂರ್ಣವಾಗಿಲ್ಲ. ಇಷ್ಟು ಉಲ್ಲೇಖಗಳನ್ನು ಬಿಟ್ಟರೆ, ರಾಯಬಾಗ ಪರಿಸರಕ್ಕೆ ಸಂಬಂಧಿಸಿದಂತೆ ಯಾವೊಬ್ಬ ಚರಿತ್ರೆಕಾರರು, ಹಾಲುಮತ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಚರಿತ್ರೆಯನ್ನು ಕಟ್ಟಿಕೊಟ್ಟಿಲ್ಲ. ಹೀಗಾಗಿ ಹೋರಾಟಗಾರರಿಗೆ ಸಂಬಂಧಿಸಿದ ವಿವರಗಳು ಲಿಖಿತ ದಾಖಲೆಗಳಿಗೆ ಒಳಪಡದೇ ಇರುವುದು ವಿಷಾದದ ಸಂಗತಿ. ಅಣ್ಣೂ ಗುರೂಜಿಯವರು ತಮ್ಮ ಕೃತಿಗಳಲ್ಲಿ ರಾಯಬಾಗ ಪರಿಸರದ ಹಿಡಕಲ್ಲ ಗ್ರಾಮದ ಹಾಲುಮತ ಯೋಧರ ಬಗ್ಗೆ ನಮೂದಿಸಿದ್ದು ಮೊದಲ ದಾಖಲೆಯೆಂದು ಒಪ್ಪಿಕೊಳ್ಳಬೇಕು. ಪಾಶ್ಚಾಪೂರದವರಾದ ಇವರು ಹಿಡಕಲ್ಲದ ಜೊತೆ ನಿಕಟ ಸಂಪರ್ಕ ಹೊಂದಿದ್ದರು. ಜೊತೆಗೆ ಅವರು ಹಿಡಕಲ್ಲದ ಹೋರಾಟಗಾರರ, ಹೋರಾಟಕ್ಕೆ ದಿಕ್ಸೂಚಿಯಾಗಿದ್ದರು. ಅವರು ತಮ್ಮ ಕೃತಿಗಳಲ್ಲಿ ಇಲ್ಲಿಯ ಚಟುವಟಿಕೆಗಳನ್ನು ಉಲ್ಲೇಖಿಸಿದ್ದರೂ ಸ್ಪಷ್ಟವಾದ ಚಿತ್ರಣ ನಮಗೆ ದೊರೆಯುವುದಿಲ್ಲ. ಆದ್ದರಿಂದ ಕ್ಷೇತ್ರ ಕಾರ್ಯ ಅಧ್ಯಯನ ಕೈಕೊಂಡು ಅಲ್ಲಿಯ ಕೆಲವು ಉಲ್ಲೇಖಗಳ ಬೆನ್ನು ಹತ್ತಿ ಇತಿಹಾಸವನ್ನು ಬಗೆದು, ಹಲವು ದಾಖಲೆಗಳನ್ನು ಶೋಧಿಸಿ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ಒಂದು ಪ್ರಯತ್ನಯನ್ನು ಇಲ್ಲಿ ಮಾಡಲಾಗಿದೆ.

೫.೨.೧.೧ ಸ್ವಾತಂತ್ರ್ಯ ಯೋಧರಾದ ವಸಂತರಾವ ಪಾಟೀಲ ಮತ್ತು ಪ್ರತಾಪರಾವಗೌಡ ಪಾಟೀಲ

ಕೊಲ್ಹಾಪೂರ ಸಂಸ್ಥಾನದ ವ್ಯಾಪ್ತಿಗೆ ಒಳಪಟ್ಟ ರಾಯಬಾಗ ಪರಿಸರವನ್ನು ಅಂದು ಬ್ಯಾಕೂಡದ ಪ್ರತಿಷ್ಠಿತರಾದ ಸಿದ್ದಗೌಡ ಪಾಟೀಲರು ಆಳುತ್ತಿದ್ದು ಅವರು ಕೂಡ ಒಬ್ಬ ಸ್ವಾತಂತ್ರ್ಯ ಹೋರಾಟಗಾರರೆಂಬುದು ಉಲ್ಲೇಖನಿಯ. ತಮ್ಮ ಭಾಗದಲ್ಲಿ ನಡೆಯುತ್ತಿದ್ದ ಎಲ್ಲ ಸ್ವಾತಂತ್ರ್ಯ ಆಂದೋಲನೆಗಳಿಗೆ, ಗುಪ್ತ ಚಟುವಟಿಕೆಗಳಿಗೆ ಸಿದ್ದಗೌಡರು ಸಂಪೂರ್ಣ ಸಹಕಾರವನ್ನು ನೀಡುತ್ತಿದ್ದರು. ಬ್ರಿಟಿಷ ಸರ್ಕಾರ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಿರ್ಬಂಧವನ್ನು ಹೇರಿತ್ತು. ಆದರೂ ಇವರು ಬ್ರಿಟಿಷ ಸರ್ಕಾರದ ಕಣ್ಣು ತಪ್ಪಿಸಿ ಒಬ್ಬ ಸ್ವಾತಂತ್ರ್ಯ ಯೋಧನಿಂದ ನಾಲ್ಕು ಸಮಾಚಾರ ಪತ್ರಿಕೆಗಳನ್ನು ರಹಸ್ಯವಾಗಿ ತರಿಸಿಕೊಳ್ಳುತ್ತಿದ್ದರು. ದೇಶದ ಸ್ವಾತಂತ್ರ್ಯ ಹೋರಾಟದ ಸ್ಥಿತಿಗತಿಗಳ ಕುರಿತು ಪತ್ರಿಕೆಯಲ್ಲಿ ಪ್ರಕಟವಾದ ರೋಚಕ ಮತ್ತು ವೀರೋಚಿತ ಘಟನೆಗಳನ್ನು ರಾತ್ರಿ ೮ ಗಂಟೆಯ ಸುಮಾರಿಗೆ ಗೌಡರು ಧರ್ಮಪತ್ನಿ ಆನಂದಿಬಾಯಿ ಮತ್ತು ಮಕ್ಕಳಾದ ವಸಂತರಾವ ಮತ್ತು ಪ್ರತಾಪರಾವಗೌಡ ಮುಂದೆ ಓದುತ್ತಿದ್ದರು. ಬ್ರಿಟಿಷ ಸರಕಾರದ ದಮನಕಾರಿ ಕೃತ್ಯಗಳು ಹದಿವಯಸ್ಸಿನ ಗೌಡರ ಮಕ್ಕಳಲ್ಲಿ ಸ್ವಾತಂತ್ರ್ಯ ಜ್ಯೋತಿಯ ಹಣತೆಯನ್ನು ಹಚ್ಚಿತು.

ಬ್ರಿಟಿಷರ ದಾಸ್ಯದಿಂದ ಮುಕ್ತಿ ಹೊಂದಲು ಚಳುವಳಿಗಾರರು ಸ್ವಾತಂತ್ರ್ಯದ ಜನಜಾಗೃತಿ ಮೂಡಿಸುವ ದೃಷ್ಟಿಯಿಂದ ರಹಸ್ಯವಾದ ಗುಹೆಗಳಲ್ಲಿ ಗೌಪ್ಯ ಸಭೆಗಳನ್ನು ನಡೆಸಿ ಚರ್ಚೆಗಳನ್ನು ಮಾಡುತ್ತಿದ್ದರು. ಇಂತಹ ರಹಸ್ಯ ಸಭೆಗಳಲ್ಲಿ ಭಾಗವಹಿಸಲು ಮೊದಲ ಸಲ ಚಿಕ್ಕ ಬಾಲಕರಾದ ವಸಂತರಾವ ಮತ್ತು ಪ್ರತಾಪರಾವ ಸಹೋದರರು ಪ್ರಯತ್ನ ಪಟ್ಟಾಗ ಪ್ರವೇಶ ದೊರೆಯಲಿಲ್ಲ. ಹೀಗೆ ಅಮೂಲ್ಯವಾದ ಭಾಷಣವನ್ನು ಕೇಳಲು ಹವಣಿಸುತ್ತಿದ್ದ ಯುವ ಬಾಲಕರಿಗೆ ಸತತ ನಾಲ್ಕು ಸಲ ಪ್ರಯತ್ನಿಸಿದರೂ ಕೂಡ ಪ್ರವೇಶ ದೊರೆಯಲಿಲ್ಲ. ಆದರೂ ತಮ್ಮ ಆತ್ಮವಿಶ್ವಾಸ ಮತ್ತು ಭರವಸೆಯನ್ನು ಕಳೆದುಕೊಳ್ಳದೇ ಐದನೇ ಬಾರಿಗೆ ಪ್ರಯತ್ನಿಸಿದಾಗ ಸ್ವಾತಂತ್ರ್ಯ ಹೋರಾಟದ ಜನಜಾಗೃತಿ ಸಭೆಯಲ್ಲಿ ಭಾಗವಹಿಸಲು ಅವಕಾಶ ದೊರೆಯಿತು. ಇವರು ಜಯಪ್ರಕಾಶ ನಾರಾಯಣ, ಪಂಜಾಬಿನ ಅರುಣಾ ಅಶಫ್ ಅಲಿ, ಅಚ್ಚುತರಾವ್ ಪಟವರ್ಧನ್,

ನಾನಾ ಪಾಟೀಲ, ಕರ್ಮವೀರ ಬಾಹುರಾವ್ ಪಾಟೀಲ, ಎಂ. ಆರ್. ದೇಸಾಯಿ, ಬಾಳಾಸಾಹೇಬ ಖರ್ಡೇಕರ್, ಮಹಾದೇವರಾವ್ ಬಗಲ್, ಲೀಮ್ ಎ. ಬಂಧು ಇವರೆಲ್ಲರ ಆದರ್ಶ ತತ್ವ ಮತ್ತು ಅಮೋಘ ಭಾಷಣದಿಂದ ಪ್ರಭಾವಿತರಾಗಿದ್ದರು. ಈ ಎಲ್ಲ ಸ್ವಾತಂತ್ರ್ಯ ಹೋರಾಟಗಾರರ ಸಾಮಿಪ್ಯದಲ್ಲಿದ್ದು, ನಿರಂತರ ಸಂಪರ್ಕ ಮತ್ತು ಸಂವಾದದಲ್ಲಿ ತೊಡಗುತ್ತಿದ್ದರು. ಹೀಗಾಗಿ ೧೯೪೩ ರಿಂದ ಈ ಇಬ್ಬರು ಸಹೋದರರು ಸಕ್ರೀಯವಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ತಮ್ಮನ್ನು ಅರ್ಪಿಸಿಕೊಂಡರು.

ಸ್ವಾತಂತ್ರ್ಯ ಹೋರಾಟದ ಆ ದಿನಗಳಲ್ಲಿ ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳುವಳಿ ಹಾಗೂ ಭಾರತ ಬಿಟ್ಟು ತೊಲಗಿ ಆಂದೋಲನಗಳು ಬ್ರಿಟಿಷ ಸರ್ಕಾರದ ನಿದ್ದೆಗೆಡಿಸಿದ್ದವು. ಇದು ಅಂತಿಮ ಹೋರಾಟವಾಗಿದ್ದು ಬ್ರಿಟಿಷರನ್ನು ಹೊರಹಾಕಲೇಬೇಕೆಂದು ಇಡೀ ದೇಶವೇ ನಿರ್ಧರಿಸಿದಂತಿತ್ತು. ರಾಯಬಾಗ ಪರಿಸರದ ಸ್ವಾತಂತ್ರ್ಯ ಹೋರಾಟಗಾರರ ಬೃಹತ್ ಸಮುದಾಯಕ್ಕೆ ಬ್ಯಾಕೂಡದ ವಸಂತರಾವ ಮತ್ತು ಪ್ರತಾಪರಾವ ಪಾಟೀಲ ಸಹೋದರರು ದಿಕ್ಸೂಚಿಯಾಗಿದ್ದರು. ಆ ಸಮಯದಲ್ಲಿ ಉತ್ತರ ಕರ್ನಾಟಕದ ರಾಯಬಾಗ ಮತ್ತು ದಕ್ಷಿಣ ಮಹಾರಾಷ್ಟ್ರದ ಕೊಲ್ಹಾಪೂರ, ಸಾತಾರದವರೆಗೆ ಸ್ವಾತಂತ್ರ್ಯ ಹೋರಾಟದ ಪ್ರಬಲ ನಾಯಕರಾಗಿದ್ದರು. ಈ ಇಬ್ಬರೂ ಸಹೋದರರು ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಿಗೆ ಇನ್ನಷ್ಟು ಶಕ್ತಿ ತುಂಬಲೆಂದು ಶಸ್ತ್ರಾಸ್ತ್ರಗಳನ್ನು ಶೇಖರಿಸುತ್ತಿದ್ದರು. ಈ ಶಸ್ತ್ರಾಸ್ತ್ರಗಳನ್ನು ಗೋವಾ, ಬೆಳಗಾವಿ ಮತ್ತು ಪೂನಾಗಳಿಂದ ತಂದು ಕೊಲ್ಹಾಪುರದ ತಮ್ಮ ನಿವಾಸದಲ್ಲಿ ಗೌಪ್ಯವಾಗಿಡುತ್ತಿದ್ದರು. ಹಿರಿಯ ಸಹೋದರ ವಸಂತರಾವರ ನಿರ್ದೇಶನದಂತೆ ಬಹುಕೌಶಲ್ಯದಿಂದ ಶಸ್ತ್ರಾಸ್ತ್ರಗಳನ್ನು ಹೋರಾಟಗಾರರಿಗೆ ತಲುಪಿಸುವ ಕಾರ್ಯವನ್ನು ಪ್ರತಾಪರಾವ ಮಾಡುತ್ತಿದ್ದರು. ಅದಕ್ಕಾಗಿ ಅವರು ಎತ್ತರ ಮತ್ತು ಸದೃಢ ಕಾಯದ ಕುದುರೆಯನ್ನು ಬಳಸುತ್ತಿದ್ದರು.

ದಕ್ಷಿಣ ಮಹಾರಾಷ್ಟ್ರದ ಕ್ರಾಂತಿಕಾರಿ ಹೋರಾಟಗಾರರಾದ ನಾನಾ ಪಾಟೀಲ, ಕರ್ಮವೀರ ಬಾಹುರಾವ್ ಪಾಟೀಲ, ಬಾಬು ಬಿರನಾಳೆ, ಅಚ್ಚುತರಾವ್ ಪಟವರ್ಧನ್, ನಾಗನಾಥ ಗಾಯಕವಾಡೆ, ಬಾಬುರಾವ ಕೊಕಾಟೆ, ವಸಂತದಾದಾ ಪಾಟೀಲ, ಶ್ರೀಮತಿ ರಾಜುತಾಯಿ ಮುಂತಾದ ನಾಯಕರ ಜೊತೆಗೆ ವಸಂತರಾವ ನಿಕಟ ಸಂಪರ್ಕವನ್ನು ಹೊಂದಿದ್ದರು. ಕೆಲವು ನಾಯಕರು ಭೂಗತರಾಗಿದ್ದುಕೊಂಡು ಗುಪ್ತ ಸಭೆಗಳನ್ನು ಮುಂಬೈ ಮತ್ತು ಇನ್ನಿತರ ಪ್ರಮುಖ ಸ್ಥಳಗಳಲ್ಲಿ ನಡೆಸುತ್ತಿದ್ದರು. ಇಂತಹ ಗುಪ್ತ ಸಭೆಗಳಿಗೆ ಸಾತಾರಾದ ಪ್ರತಿನಿಧಿಯಾಗಿ ವಸಂತರಾವ ಪಾಟೀಲರು ಭಾಗವಹಿಸುತ್ತಿದ್ದರು. ಈ ಸಭೆಯಲ್ಲಿ ಚರ್ಚಿತವಾದ ಸ್ವಾತಂತ್ರ್ಯ ಹೋರಾಟದ ಹೊಸ-ಹೊಸ ತಂತ್ರಗಳನ್ನು, ವಿಧಾನಗಳನ್ನು ಸಹೋದರ ಪ್ರತಾಪಗೌಡ ಎದುರು ಚರ್ಚಿಸುತ್ತಿದ್ದರು. ಈ ಚರ್ಚೆಗಳೇ ಪ್ರತಾಪಗೌಡರಿಗೆ ಸ್ಫೂರ್ತಿಯಾಗಿ, ಮುಂದೆ ತಮ್ಮನ್ನು ಸಂಪೂರ್ಣವಾಗಿ ಹೋರಾಟದಲ್ಲಿ ತೊಡಗಿಸಿಕೊಳ್ಳುವಲ್ಲಿ ಪ್ರೇರೆಪಿಸಿದವು.

ವಸಂತರಾವರು ದಕ್ಷಿಣ ಮಹಾರಾಷ್ಟ್ರದ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮನ್ನು ತೊಡಗಿಸಿಕೊಂಡರೆ, ಕಿರಿಯ ಸಹೋದರ ಪ್ರತಾಪಗೌಡರು ರಾಯಬಾಗ ಪರಿಸರದಲ್ಲಿ ನಾಯಕತ್ವವನ್ನು ಮುಂದುವರೆಸಿದರು. ಪ್ರತಾಪಗೌಡರು ಗ್ರಾಮ-ಗ್ರಾಮಗಳಲ್ಲಿ ಪ್ರಭಾತಪೇರಿ ಮಾಡುವುದು, ಯುವಕರನ್ನು ಸಂಘಟಿಸುವ ಕಾರ್ಯದಲ್ಲಿ ನಿರತರಾದರು. ಇವರ ನಾಯಕತ್ವದಲ್ಲಿಯೇ ಬ್ಯಾಕೂಡ ಗುಡ್ಡದ ಗುಹೆಯೊಂದರಲ್ಲಿ

ಸರಿಸುಮಾರು ೫೦೦ ಕ್ಕೂ ಹೆಚ್ಚು ಯುವಕರಿಗೆ ಅಂಗ ಸಾಧನೆ, ಕುಸ್ತಿ ವರಸೆ, ಲಾಠಿ ತಿರುಗಿಸುವುದು, ಬಂದೂಕು ಚಲಾಯಿಸುವ ತರಬೇತಿಯನ್ನು ಇಂಡಿಯನ್ ನ್ಯಾಷನಲ್ ಆರ್ಮಿಯ ಕರ್ನಲ್ ನಾನಾ ಪಾಟೀಲರು ನೀಡುತ್ತಿದ್ದರು. ಇದಕ್ಕೆ ೧೯೪೫ ರಲ್ಲಿ ಅಜಾದ್ ಹಿಂದ್ ಫೌಜನ ರಕ್ಷಣಾ ಸಮೀತಿಯ ಕಾರ್ಯದರ್ಶಿಯಾಗಿದ್ದ ಆಶಫ್ ಅಲಿ ಸಂಪೂರ್ಣ ಸಹಕಾರ ಮತ್ತು ಬೆಂಬಲವನ್ನು ನೀಡುತ್ತಿದ್ದರು. ಗಡಿಪಾರು ಶಿಕ್ಷೆಗೆ ಗುರಿಯಾದ ಸುಭಾಷಚಂದ್ರ ಭೋಸರು ಮಾರುವೇಷ ಧರಿಸಿಕೊಂಡು ಸಂಚರಿಸುತ್ತಾ ಉತ್ತರ ಕರ್ನಾಟಕದ ಗಡಿಯ ರಾಯಬಾಗ ಮೂಲಕ ಬ್ಯಾಕೂಡ ಗ್ರಾಮಕ್ಕೆ ಬಂದು ಭೇಟ್ಟಿ ನೀಡಿದ್ದರು. ಸುಭಾಷಚಂದ್ರ ಭೋಸರನ್ನು ಸುರಕ್ಷಿತವಾಗಿ ಸಾಂಗ್ಲಿಯವರೆಗೆ ತಲುಪಿಸಲು ಪ್ರತಾಪಗೌಡರಿಗೆ ಅವರ ಚಿಕ್ಕಪ್ಪ ತಿಳಿಸಿದ್ದರು. "ಹೊತ್ತು ಮುಳುಗಿದ ಮೇಲೆ ಎತ್ತಿನ ಗಾಡಿಯಲ್ಲಿ ಸುಭಾಷಚಂದ್ರ ಭೋಸರನ್ನು ಕೂಡ್ರಿಸಿ, ಬ್ರಿಟಿಷ ಪೋಲಿಸರಿಗೆ ಅನುಮಾನ ಬರದಂತೆ 'ಹೆಣ್ಣು ಮಗಳನ್ನು ಗಂಡನ ಮನೆಗೆ ಕಳುಹಿಸಲು ಹೋಗುವಂತೆ' ವೇಷಬದಲಿಸಿ ಸುರಕ್ಷಿತವಾಗಿ ತಲುಪಿದರು. ಬ್ರಿಟಿಷ್ ಅಧಿಕಾರಿ ಜನರಲ್ ಲೇಕ್ ಬ್ಯಾಕೂಡ ಗೌಡರ ವಾಡೆಯಲ್ಲಿ ಸುಭ್ಹಾಚಂದ್ರ ಭೋಸರು ಇರುವ ಬಗ್ಗೆ ಮಾಹಿತಿ ಪಡೆದು ಪರಿಶೀಲಿಸಲು ವಾಡೆಗೆ ಬಂದರು. ಪ್ರತಾಪರಾವರವರು ಜನರಲ್ ಲೇಕ್‌ರಿಗೆ ಆತಿಥ್ಯ ಸ್ವೀಕರಿಸಲು ತಿಳಿಸಿದರು. ಆಗ ಜನರಲ್ ಲೇಕ್ ಪ್ರತಾಪರಾವರವರಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದಂತೆ ತಿಳಿಹೇಳಿದರು. ಆದರೆ ಕ್ರಾಂತಿಕಾರಿ ಪ್ರತಾಪರಾವರು ಅವರ ಮಾತುಗಳನ್ನು ತಿರಸ್ಕರಿಸಿ, ಮುಂದೆ ನಡೆಯುವ ಸ್ವಾತಂತ್ರ್ಯ ಸಂಗ್ರಾಮದ ಚಟುವಟಿಕೆಗಳಲ್ಲಿ ಭಾಗವಹಿಸುವುದಾಗಿ ಹೇಳಿದರು. ಬೃಹತ ಪ್ರಮಾಣದ ಯೋಧರ ಪಡೆಯನ್ನು ಹೊಂದಿದ ಪಾಟೀಲ ಸಹೋದರರ ಬಗ್ಗೆ ಸೂಕ್ಷ್ಮವಾದ ಮಾಹಿತಿ ಪಡೆದು ಜನರಲ್ ಲೇಕ್ ಸಿಟ್ಟಿನಿಂದ ಹೊರಟು ಹೋದರು. ಧ್ವಜ ಹಾರಿಸಬಾರದೆಂಬ ಪ್ರತಿಬಂಧಕ ಆಜ್ಞೆಗಳನ್ನು ಉಲ್ಲಂಘಿಸಿ ಬ್ಯಾಕೂಡದಲ್ಲಿ ಪ್ರತಿದಿನ ಬೆಳಗಿನ ನಸುಬಿಸಿಲಿನಲ್ಲಿ ಆಕಾಶದೆತ್ತರಕ್ಕೆ ತ್ರಿವರ್ಣಧ್ವಜವನ್ನು ಹಾರಿಸಿ "ಭೋಲೋ ಭಾರತ್ ಮಾತಾಕಿ ಜೈ" "ವಂದೇ ಮಾತರಂ" ಎಂಬ ಘೋಷಣೆಗಳನ್ನು ಕೂಗುತ್ತಿದ್ದರು. ಬ್ಯಾಕೂಡದಲ್ಲಿ ಝುಂಡಾದಿನ, ಚರಕಾದಿನ, ಸ್ವಾತಂತ್ರ್ಯ ಹೋರಾಟದಲ್ಲಿ ಬಲಿಯಾದವರ ಹುತಾತ್ಮದಿನ, ಪ್ರಭಾತಪೇರಿ ಮೆರವಣಿಗೆ ಮುಂತಾದ ಕಾಯಿದೆ ಭಂಗ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದರು."[೧೭]

ಒಂದು ಸಲ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಐತವಾಡೆ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಭೂಗತರಾಗಿ ಅಲೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಗಾರರನ್ನು ಬಂಧಿಸಲು ಬ್ರಿಟಿಷ ಪೋಲಿಸರು ಬರುತ್ತಿದ್ದ ಸುದ್ದಿ ವಸಂತರಾವ ಪಾಟೀಲರಿಗೆ ತಿಳಿಯಿತು. ಆಗ ಗೌಡರು ತಮ್ಮ ಸಹಚರರ ಜೊತೆಗೂಡಿ ಊರಿಗೆ ಬರುವ ರಸ್ತೆ ಮಾರ್ಗ ಮಧ್ಯದ ಸೇತುವೆಯನ್ನು ಕಾಡತೋಸುಗಳಿಂದ ಛಿದ್ರಗೊಳಿಸುವ ಮೂಲಕ ಬ್ರಿಟಿಷರ ಪೋಲಿಸ ವ್ಯಾನು ಊರಿಗೆ ಬರುವ ಯೋಜನೆಯನ್ನು ವಿಫಲಗೊಳಿಸಿ ಸ್ವಾತಂತ್ರ್ಯ ಹೋರಾಟಗಾರರನ್ನು ಕಾಪಾಡಿದರು. ಸಾತಾರ ಜಿಲ್ಲೆಯ ಐತವಾಡೆಯಲ್ಲಿದ್ದ ರಾಜುತಾಯಿ ಬಿರನಾಳೆಯವರ ಬಹುಮಹಡಿ ಮನೆಯು ಸ್ವಾತಂತ್ರ್ಯ ಹೋರಾಟಗಾರರ ಕಛೇರಿಯಾಗಿತ್ತು. ಇವರಿಗೆ ಹೋರಾಟಗಾರ ಪಾಟೀಲ ಸಹೋದರರ ಮೇಲೆ ಗೌರವವಿತ್ತು. ಪ್ರತಾಪರಾವ ಪಾಟೀಲರು ಬಂದೂಕು ಹೊಡೆಯುವ ಏಕಮೇವ ವ್ಯಕ್ತಿಯಾಗಿದ್ದರು. ಮಧ್ಯರಾತ್ರಿಯ ಸಮಯದಲ್ಲಿ ಬಂದೂಕಿನ ತಂತ್ರಜ್ಞಾನ ಮತ್ತು ತರಬೇತಿಯನ್ನು ಚಳುವಳಿಗಾರರಿಗೆ ಕಲಿಸಿಕೊಡುವುದರ ಜೊತೆಗೆ ೧೨ ನಂಬರಿನ ಕಾಡತೋಸುಗಳಿಗೆ ಮದ್ದನ್ನು ತುಂಬುತ್ತಿದ್ದರು. ಪ್ರತಾಪರಾವ ಮತ್ತು

ರಾಜುತಾಯಿಯವರು ಬ್ರಿಟಿಷರಲ್ಲಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಅವುಗಳನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುತ್ತಿದ್ದರು.

ಪ್ರತಾಪರಾವರು ಕೆಲವು ಶಸ್ತ್ರಾಸ್ತ್ರಗಳನ್ನು, ಬೆಳಗಾವಿಯ ವಡಗಾಂವದಲ್ಲಿರುವ ತಮ್ಮ ಅಣ್ಣನ ಮನೆಯಲ್ಲಿ ಬಚ್ಚಿಡುತ್ತಿದ್ದರು. ಇದೇ ಸಮಯದಲ್ಲಿ ಇವರಿಗೆ ಕ್ಯಾಪ್ಟನ್ ಸಾವಂತ ಹಾಗೂ ಕಾಕಾಸಾಹೇಬ ಪಾಟೀಲರ ಪರಿಚಯವಾಯಿತು. ಕ್ಯಾಪ್ಟನ್ ಸಾವಂತ ಮಿಲಿಟರಿ ಅಧಿಕಾರಿಗಳಾಗಿದ್ದು ಉತ್ತರ ಭಾರತದತ್ತ ರೈಲು ಮೂಲಕ ಹೊರಡುವ ಪೂರ್ವದಲ್ಲಿ ಒಂದು ಸ್ಟೇನ್ ಗನ್, ಮೂರು-ನಾಲ್ಕು ಪಿಸ್ತೂಲ್ ಮತ್ತು ಕಾಡತೋಸಗಳನ್ನು ಸಕ್ರೀಯ ಹೋರಾಟಕ್ಕೆ ಬೆಂಬಲವಾಗಿ ಪ್ರತಾಪರಾವರಿಗೆ ನೀಡಿದ್ದರು. ವಸಂತರಾವ ಪಾಟೀಲರು ಕೂಡ ಕ್ಯಾಪ್ಟನ್ ಸಾವಂತರಿಂದ ಸಾಕಷ್ಟು ಪ್ರಮಾಣದಲ್ಲಿ ಸಣ್ಣ-ಸಣ್ಣ ಶಸ್ತ್ರಾಸ್ತ್ರಗಳನ್ನು ಪಡೆದು ಬ್ಯಾಕೂಡದ ತಮ್ಮ ಮನೆಯಲ್ಲಿ ಶೇಖರಿಸಿ ಅವಶ್ಯಕ ಸಂದರ್ಭಗಳಲ್ಲಿ ಅವುಗಳನ್ನು ಹೋರಾಟಗಾರರಿಗೆ ಕೊಡುತ್ತಿದ್ದರು.

ಪ್ರತಾಪರಾವ ಪಾಟೀಲರು ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿದ್ದರು. ಈ ಸುದ್ದಿಯನ್ನು ತಿಳಿಸುವುದು ಮತ್ತು ಬಹಳ ದಿನಗಳಿಂದ ಭೇಟ್ಟಿಯಾಗದ ಅಣ್ಣ ವಸಂತರಾವರನ್ನು ನೋಡುವುದಕ್ಕಾಗಿ ಬಾಬುರಾಬ ಕೋಕಾಟೆಯವರೊಂದಿಗೆ ನಿಪ್ಪಾಣಿ ಮಾರ್ಗದ ಮೂಲಕ ಐತವಾಡೆಗೆ ಹೋಗುತ್ತಾರೆ. ಇತ್ತ ಐತವಾಡೆಯಲ್ಲಿನ ಚಳುವಳಿಯ ಸಭೆ ರದ್ದಾಗಿದ್ದರಿಂದ ವಸಂತರಾವರು ಸಹೋದರ ಪ್ರತಾಪರಾವನನ್ನು ಕಾಣುವುದಕ್ಕಾಗಿ ಕಾತುರದಿಂದ ನಿಪ್ಪಾಣಿ ಮೂಲಕ ಕೊಲ್ಹಾಪೂರಕ್ಕೆ ತಲುಪುತ್ತಾರೆ. ಹೀಗೆ ಪಾಟೀಲ ಸಹೋದರರು ಒಬ್ಬರನ್ನೊಬ್ಬರು ಭೇಟ್ಟಿಯಾಗದೇ, ಅಣ್ಣ ಕೊಲ್ಹಾಪೂರಕ್ಕೆ, ತಮ್ಮ ಐತವಾಡೆಗೆ ತಲುಪಿದರು. ಪ್ರತಾಪರಾವ ಮತ್ತು ಬಾಬುರಾವ ಐತವಾಡೆಗೆ ತಲುಪಿದಾಗ ರಾತ್ರಿಯಾಗಿತ್ತು. ಅಲ್ಲಿ ಅಣ್ಣ ವಸಂತರಾವ ಕಾಣಸಿಗದೇ ಪ್ರತಾಪರಾವರಿಗೆ ನಿರಾಸೆಯಾಯಿತು. ಮರಳಿ ಊರಿಗೆ ಹೋಗಬೇಕಾದರೆ ತುಂಬಾ ಕತ್ತಲಾಗಿತ್ತು. ಇದೇ ಸಮಯದಲ್ಲಿ ಬ್ರಿಟಿಷ ಪೋಲಿಸರ ಆಕಸ್ಮಿಕ ದಾಳಿಗಳು ಹೆಚ್ಚಾಗಿದ್ದವು, ಆ ಕಾರಣಕ್ಕಾಗಿ ಅನಿವಾರ್ಯವಾಗಿ ಇಬ್ಬರು ಐತವಾಡೆಯ ರಾಜುತಾಯಿಯವರ ವಾಡೆಯಲ್ಲಿಯೇ ಉಳಿದುಕೊಳ್ಳಲು ನಿರ್ಧರಿಸಿದರು. ಊಟ ಮಾಡಿಕೊಂಡು ಇಬ್ಬರು ವಾಡೆಯಲ್ಲಿಯೇ ಇರುವ ಸ್ವಾತಂತ್ರ್ಯ ಹೋರಾಟಗಾರರ ಕಛೇರಿಯಲ್ಲಿ ನಿದ್ರಿಸಿದರು.

ಐತವಾಡೆಯ ರಾಜುತಾಯಿಯ ವಾಡೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು ತಲೆಮರೆಸಿಕೊಂಡಿದ್ದ ಬಗ್ಗೆ ಬ್ರಿಟಿಷ ಅಧಿಕಾರಿ ಜನರಲ್ ಲೇಕ್‌ರಿಗೆ ಸಂದೇಹವಿತ್ತು. ಹೀಗಾಗಿ ಬಹಳ ದಿನಗಳಿಂದ ವಾಡೆಯ ಮೇಲೆ ದಾಳಿ ಮಾಡಬೇಕೆಂಬ ಹವಣಿಕೆಯಲ್ಲಿದ್ದ. ಆದರೆ ಬ್ರಿಟಿಷ ಪೋಲಿಸರು ನೇರವಾಗಿ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ದಾಳಿ ಮಾಡಲು ಹೆದರುತ್ತಿದ್ದರು. ಆದರೆ ಇಂದು, ಬಹುದಿನಗಳಿಂದ ಹೊಂಚು ಹಾಕಿ ಕಾಯುತ್ತಿದ್ದ ಜನರಲ್ ಲೇಕ್ ಕುತಂತ್ರದಿಂದ ತಮ್ಮ ಆಧೀನದಲ್ಲಿರುವ ಬಂಧಿತ ದರೋಡೆಕೋರರಿಗೆ ಸೆರೆವಾಸದಿಂದ ಬಿಡುಗಡೆಗೊಳಿಸುವುದಾಗಿ ಆಸೆಯೊಡ್ಡಿ ಅವರಿಗೆ ತಮ್ಮ ಶಸ್ತ್ರಾಸ್ತ್ರಗಳನ್ನು ಕೊಟ್ಟು, ಅವರ ಮೂಲಕ ಐತವಾಡೆಯ ಮೇಲೆ ದಾಳಿ ಮಾಡುವ ಯೋಜನೆಯನ್ನು ರೂಪಿಸಿದ. ತಾನೊಂದು ಬಗೆದರೆ, ವಿಧಿಯೊಂದು ಬಗೆಯಿತು ಎಂಬಂತೆ ಸ್ವರಾಜ್ಯದ ಸಂಕಲ್ಪದಲ್ಲಿದ್ದ ಪ್ರತಾಪರಾವ, ಐತವಾಡೆಯ ಕಛೇರಿಯಲ್ಲಿ ರಾತ್ರಿ ತಂಗಿದ್ದ ರಾತ್ರಿಯೇ ಜನರಲ್ ಲೇಕ್ ದಾಳಿಯನ್ನು ಮಾಡಿದ. ಅಂದು ರಾತ್ರಿ ಪೋಲಿಸರು ಮತ್ತು

ದರೋಡೆಕೋರರು ವಾಡೆಗೆ ಬಂದವರೇ ವಾಡೆಯಲ್ಲಿದ್ದ ಬಹುಮಹಡಿ ಕಟ್ಟಡದ ಕೆಳಗಿನ ಅಂತಸ್ತಿನಲ್ಲಿದ್ದ ರಾಜುತಾಯಿಯವರು ಮಲಗುವ ಕೋಣೆಯ ಬಾಗಿಲನ್ನು ಹೊರಗಿನಿಂದ ಚಿಲಕ ಹಾಕಿ ಮೇಲಿನ ಮಹಡಿಗೆ ಬಂದರು. ಒಳಗೆ ಮಲಗಿರುವವರು ಯಾರೆನ್ನುವ ಗೋಜಿಗು ಹೋಗದೇ, ಮಲಗಿರುವವರು ಚಳುವಳಿಗಾರರೆಂದು ತಿಳಿದು ಮನಬಂದಂತೆ ಅವರ ಮೇಲೆ ಗುಂಡಿನ ಮಳೆಗರೆದರು. ಗಾಢನಿದ್ದೆಯಲ್ಲಿದ್ದ ಸ್ವಾತಂತ್ರ್ಯ ಚಳುವಳಿಗಾರ ಪ್ರತಾಪರಾವರಿಗೆ ಈ ಅನೀರಿಕ್ಷಿತ ದಾಳಿಯಿಂದ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬ್ರಿಟಿಷ ಪೋಲಿಸರ ಮತ್ತು ದರೋಡೆಕೋರ ಶಿವಾ ಮಹಾರ ಹಾರಿಸಿದ ಬಂದೂಕಿನ ಗುಂಡುಗಳು ಪ್ರತಾಪರಾವರನ್ನು ಬಲಿತೆಗೆದುಕೊಂಡವು.

ಅಂದು ರಾತ್ರಿ ವಂಸತರಾವರು ಕೊಲ್ಹಾಪೂರಕ್ಕೆ ಹೋಗದೇ ಎಂದಿನಂತೆ ಅಲ್ಲಿಯೇ ಮಲಗಿಕೊಂಡಿದ್ದರೆ, ಬಹುಶಃ ವಂಸತರಾವರಿಗೆ ವಿಧಿ, ಯಾವ ಹಣೆ ಬರಹವನ್ನು ಬರೆಯುತ್ತಿತ್ತು ಎನ್ನುವುದೇ ಯಕ್ಷ ಪ್ರಶ್ನೆ. ಅಣ್ಣನವರ ಮೇಲೆ ಅತೀಯಾದ ಪ್ರೀತಿಯನ್ನು ಹೊಂದಿದ್ದ ಪ್ರತಾಪರಾವರು ಅಣ್ಣ ಮಲಗಿದ್ದ ಜಾಗೆಯಲ್ಲಿ ಮಲಗಿಕೊಂಡು ಅಣ್ಣನ ಸಾವನ್ನು ತಾನೇ ಸ್ವೀಕರಿಸಿ ಹುತಾತ್ಮರಾದರು. ೧೯೨೭ ರಂದು ರಾಯಬಾಗ ಪರಿಸರದ ಬ್ಯಾಕೂಡದಲ್ಲಿ ಜನಿಸಿದ್ದ ಪ್ರತಾಪರಾವ ೧೭-೦೫-೧೯೪೭ ರಂದು ಸಾತಾರ ಜಿಲ್ಲೆಯ ಐತವಾಡೆಯಲ್ಲಿ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಮಡಿದರು.

ವಸಂತರಾವ ಪಾಟೀಲರು ಸ್ವಾತಂತ್ರ್ಯ ಚಳುವಳಿಯಲ್ಲಿ ಭೂಗತರಾಗಿದ್ದುಕೊಂಡೇ ತಮ್ಮ ಕಾರ್ಯಗಳನ್ನು ಎಡಬಿಡದೆ ಮಾಡುತ್ತಿದ್ದರು. ಇವರ ಜೊತೆ ಕರ್ಮವೀರ ಬಾಹುರಾವ ಪಾಟೀಲ ಮತ್ತು ಬಾಬುರಾವ ಬಿರನಾಳೆ ಇರುತ್ತಿದ್ದರು. ೧೯೪೭ರ ಮೇ ೧೭ ರಂದು ಮುಂಜಾನೆ ರೇಡಿಯೋದಲ್ಲಿ 'ಕೊನೆ ಹೋರಾಟ' ಎಂಬ ಆಕಾಶವಾಣಿಯಿಂದ ಸುದ್ದಿಯೊಂದು ಪ್ರಸಾರವಾಯಿತು. "ಸಾತಾರ ಜಿಲ್ಲೆಯ ಐತವಾಡೆಯಲ್ಲಿ ಇಪ್ಪತ್ತು ವರ್ಷದ ಯುವಕ ಪ್ರತಾಪರಾವ ಪಾಟೀಲರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದರು" ಎಂಬ ಸುದ್ದಿಯನ್ನು ಬಿತ್ತರಿಸಿತು. ಈ ಸುದ್ದಿ ಮಹಾರಾಷ್ಟ್ರದ ಹಾತಕಣಗಲಾ ಸಮೀಪದ ಬಾಹುಬಲಿ ಎಂಬಲ್ಲಿದ್ದ ವಸಂತರಾವರಿಗೂ ತಲುಪಿತು. ಒಡಹುಟ್ಟಿದ ತಮ್ಮನ್ನನ್ನು ಕಳೆದುಕೊಂಡ ಸುದ್ದಿ ಕೆಲ ಸಮಯ ವಸಂತರಾವರನ್ನು ಕಂಗೆಡಿಸಿತು. ರೋಷಾವೇಶಗಳಿಂದ ತಲ್ಲಣಿಸಿದರು ದುಃಖ ಮಡುಗಟ್ಟಿತು. ಸ್ವಾತಂತ್ರ್ಯದ ಮಹಾಸಂಗ್ರಾಮದಲ್ಲಿ ಬ್ರಿಟಿಷರ ಕುತಂತ್ರಕ್ಕೆ ಬಲಿಯಾದ, ಕೇವಲ ಇಪ್ಪತ್ತು ವರ್ಷದ ವೀರಯೋಧ ಪ್ರತಾಪಗೌಡನ ಅಂತ್ಯ ಸಂಸ್ಕಾರವನ್ನು ನೆರವೇರಿಸುವಾಗ ಅದು ಕಟ್ಟೆಯೊಡೆದು ಕಣ್ಣಿನಿಂದ ಧಾರಕಾರವಾಗಿ ಅಶ್ರುತರ್ಪಣ ಸುರಿಯುತಿತ್ತು.

'ಬ್ಯಾಕೂಡ ಪಾಟೀಲ'ರನ್ನು ಬ್ರಿಟಿಷ ಪೋಲಿಸರು ಮತ್ತು ದರೋಡೆಕೋರ ಶಿವಾ ಮಹಾರ ಸೇರಿ ಬಲಿತೆಗೆದುಕೊಂಡರೆಂಬ ಸುದ್ದಿ ಕಾಡಗಿಚ್ಚಿನಂತೆ ಸುತ್ತ-ಮುತ್ತಲಿನ ಹಳ್ಳಿಯ ಜನರಿಗೆ ತಲುಪಿತು. 'ಬ್ಯಾಕೂಡ ಪಾಟೀಲ'ರೆಂದರೆ, ಜೀವದ ಗೆಳೆಯ ವಸಂತರಾವ ಪಾಟೀಲರೇ ಗುಂಡಿನೇಟಿಗೆ ಬಲಿಯಾದರೆಂದು, ಬಾಬುರಾವ ಬಿರನಾಳೆ ಪೈಲ್ವಾನರೂ ಭಾವಿಸಿದರು. ಸುದ್ದಿ ತಿಳಿದ ಬಾಬುರಾವರಿಗೆ ಬರಸಿಡಲು ಬಡೆದಂತಾಯಿತು. ವೀರಮರಣವನ್ನು ಹೊಂದಿದ ಜೀವದ ಗೆಳೆಯನ್ನು ಕೊನೆಯಬಾರಿಗೆ ನೋಡಬೇಕೆಂದು ಅವರ ಮನಸ್ಸು ಹಂಬಲಿಸಿತು. ಶೇಟಜಿಯೊಬ್ಬರಿಗೆ ತಮ್ಮನ್ನು ಇಸ್ಲಾಂಪೂರದಿಂದ ಐತವಾಡೆ ಊರಿಗೆ

ಮೋಟರ ಸೈಕಲ್ ಮೂಲಕ ತಲುಪಿಸುವಂತೆ ಕೇಳಿಕೊಂಡರು. ಐತವಾಡೆಗೆ ಮೋಟರ್ ಸೈಕಲ್ ಮೇಲೆ ಹೋಗುತ್ತಿರುವಾಗ ದಾರಿಯಲ್ಲಿ ಭೇಟ್ಟಿಯಾದ ಕೆಲವು ಪರಿಚಯದವರು, 'ರಾತ್ರಿ ಬ್ಯಾಕೂಡ ಪಾಟೀಲರ ಮೇಲೆ ಗೋಲಿಬಾರ ಮಾಡಿ ಕೊಂದ ಶಿವ ಮಹಾರ ಮತ್ತು ಸಂಗಡಿಗರು ಪರಾರಿಯಾಗುತ್ತಿದ್ದಾರೆಂಬ' ವಿಚಾರವನ್ನು ತಿಳಿಸಿದರು. ಶಿವ ಮಹಾರ ಕಲ್ಲಿದ್ದಲು ಸಾಗಿಸುವ ವಾಹನದಲ್ಲಿ ಇಸ್ಲಾಂಪುರದಿಂದ ಸಾಂಗಲಿಗೆ ಹೊರಟಿರುವ ಮಾಹಿತಿಯನ್ನು ಪಡೆದುಕೊಂಡ ಬಾಬುರಾವ, ಬ್ಯಾಕೂಡ ಪಾಟೀಲರ ಶವವನ್ನು ಕಾಣುವ ಮೊದಲು, ತನ್ನ ಸ್ನೇಹಿತನ ಸಾವಿಗೆ ಕಾರಣರಾದವರನ್ನೆಲ್ಲ ಕೊಲ್ಲದೇ ಬಿಡಬಾರದೆಂದು ನಿರ್ಧರಿಸಿದರು.

ಕಲ್ಲಿದ್ದಲು ಸಾಗಿಸುತ್ತಿದ್ದ ವಾಹನದ ಮುಂದಿನ ಭಾಗದಲ್ಲಿ ಕುಳಿತಿದ್ದ ಶಿವ ಮಹಾರನನ್ನು ಕಂಡು ಬಾಬುರಾವ ಮೋಟರ ಸೈಕಲ್ ಹತ್ತಿ ಬೆನ್ನು ಹತ್ತಿದ್ದರು. ಸಾಂಗಲಿ ಸಮೀಪ ಇರುವ ಎತ್ತರದ ಸೇತುವೆಯನ್ನು ದಾಟುವಾಗ ವಾಹನದ ವೇಗ ನಿಧಾನವಾಯಿತು. ಆಗ ಬಾಬುರಾವ ವಾಹನವನ್ನು ಅಡ್ಡಗಟ್ಟಿ, ಶಿವ ಮಹಾರನ್ನು ಕೆಳಗಿಳಿಸಿ ತಮ್ಮ ಪಿಸ್ತೂಲನಿಂದ ಅವನ ಗಂಟಲಿನ ಮೇಲ್ಭಾಗದ ಅಂಗಳಕ್ಕೆ ಮೂರು-ನಾಲ್ಕು ಗುಂಡುಗಳನ್ನು ಹಾರಿಸಿದರು. ತನ್ನ ಜೀವದ ಗೆಳೆಯನ ಹತ್ಯೆ ಮಾಡಿದವನನ್ನು ಕೊಂದು ಐತವಾಡೆಗೆ ಹೋಗಿ ನೋಡಿದರೆ ಸಾವಿನ ಸುದ್ದಿ ಬೇರೆಯಾಗಿತ್ತು. ಬ್ರಿಟಿಷರ ಗೋಲಿಬಾರಿನಲ್ಲಿ ಹುತಾತ್ಮರಾಗಿದ್ದುದು ವಸಂತರಾವ ಅವರಲ್ಲ, ಅವರ ತಮ್ಮ ಪ್ರತಾಪರಾವ ಎಂಬುದು ತಿಳಿಯಿತು. ನಂತರ ಬ್ಯಾಕೂಡ ಗೌಡರು ಐತವಾಡೆಯಲ್ಲಿದ್ದ ಬಗ್ಗೆ ಮಾಹಿತಿಯನ್ನು ನೀಡಿದ ಐದು ಜನರನ್ನು ಬಾಬುರಾವ ಪಿಸ್ತೂಲಿನಿಂದ ಗುಂಡು ಹಾರಿಸಿ ಕೊಂದು ಹಾಕಿದರು. ಸ್ವಾತಂತ್ರ್ಯ ಯೋಧನ ಸಾವಿಗೆ ಕಾರಣರಾದ ಐದು ಜನರ ಸಾವಿಗೆ ಸಂಬಂಧಿಸಿದಂತೆ ಯಾರು ಪೋಲಿಸರಿಗೆ ದೂರು ನೀಡಲಿಲ್ಲ. ಸಹೋದರನ ಅಗಲಿಕೆಯಿಂದ ಬಹುಬೇಗ ಚೇತರಿಸಿಕೊಂಡ ವಸಂತರಾವ ಪಾಟೀಲರು ಮತ್ತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಮುನ್ನುಗ್ಗಿ, ಸ್ವರಾಜ್ಯ ದೊರೆಯುವವರೆಗೂ ತಮ್ಮ ಹೋರಾಟವನ್ನು ಮುಂದುವರೆಸಿದರು.

೫.೨.೧.೨ ಹಿಡಕಲ್‌ದ ಸ್ವಾತಂತ್ರ್ಯ ಯೋಧ ರಾಮಪ್ಪ ಮುರಾರೆಪ್ಪ ಕಂಕಣವಾಡಿ :

ಹಿಡಕಲ್ಲದ ಲಾವಣಿಕಾರ ರಾಣಬಾ ಕದಮ. ಹಿಡಕಲ್ಲದ ಸ್ವಾತಂತ್ರ್ಯ ಚಳುವಳಿಯನ್ನು ಕಣ್ಣಾರೆ ಕಂಡವನು ಮತ್ತು ಹೋರಾಟದ ಚಿತ್ರಣವನ್ನು ತನ್ನ ಲಾವಣಿಗಳಲ್ಲಿ ಸೇರೆಹಿಡಿಯುವ ಮೂಲಕ ಅದನ್ನು ಜನಪದ ಸಾಹಿತ್ಯದಲ್ಲಿ ಸೇರಿಸಿ, ಮನೆ-ಮನೆ, ಮನ-ಮನಗಳಿಗೆ ಮುಟ್ಟಿಸಿದವನು. ಹೀಗಾಗಿ ಲಾವಣಿಗಳಿಂದ ದೊರೆತ ಸುಳಿವು ಮತ್ತು ಚರಿತ್ರೆಕಾರರು ನೀಡಿದ ಹೋರಾಟದ ಹೆಜ್ಜೆಗಳನ್ನು ಬೆನ್ನು ಹತ್ತಿದಾಗ ಕಂಡು ಬಂದ ಹಾಲುಮತ ಸಮುದಾಯದ ಸ್ವಾತಂತ್ರ್ಯ ಯೋಧ ರಾಮಪ್ಪ ಮುರಾರೆಪ್ಪ ಕಂಕಣವಾಡಿ. "ಹಿಡಕಲ್ಲದ ಜನತೆಯ ಮನೋಭೂಮಿಕೆಯಲ್ಲಿ ಕ್ರಾಂತಿಯ ಬೀಜಗಳನ್ನು ಮೊಟ್ಟಮೊದಲ ಬಾರಿಗೆ ಬಿತ್ತಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ."[೧೮]

ಬಾಲ್ಯ ಜೀವನ :

ಹಾಲುಮತದ ದಂಪತಿಗಳಾದ ಮುರಾರೆಪ್ಪ ಮತ್ತು ಅಮ್ಮಾಜೆವ್ವ ಇವರಿಗೆ, ರಾಯಪ್ಪ, ರಾಮಪ್ಪ, ಲಸಮವ್ವ, ಲಸಮಣ್ಣ, ಬಾಳವ್ವ, ಸಿದ್ದಪ್ಪ, ಸುರಮ್ಮ ಎಂಬ ಒಟ್ಟು ಏಳು ಜನ ಮಕ್ಕಳು. ಅವರಲ್ಲಿ ಎರಡನೆಯ ಮಗನಾದ ರಾಮಪ್ಪ ಹಿಡಕಲ್ಲ ಗ್ರಾಮದಲ್ಲಿ ಸುಮಾರು ಕ್ರಿ. ಶ. ೧೮೮೦ರ ದಶಕದಲ್ಲಿ ಜನಿಸಿದರು.

ಮನೆತನದ ಹಿನ್ನಲೆ :

ರಾಮಪ್ಪನವರ ತಂದೆ ಮುರಾರೆಪ್ಪನವರು ಮೂಲತಃ ಕಂಕಣವಾಡಿ ಗ್ರಾಮದವರು. ಸುಮಾರು ಕ್ರಿ. ಶ. ೧೮೦೦ರ ಆಸು-ಪಾಸಿನಲ್ಲಿ ಹಿಡಕಲ್ಲ ಗ್ರಾಮಕ್ಕೆ ವಲಸೆ ಬಂದು ಭೂಮಿ ಖರೀದಿಸಿ ನೆಲೆನಿಂತರು. ಚಿಕ್ಕಂದಿನಲ್ಲಿ ರಾಮಪ್ಪನವರು, ತಂದೆಯ ಜೊತೆ ಊರೂರು ಅಲೆದಾಡಿ ಕುರಿ ಕಾಯುವ ಕೆಲಸದಲ್ಲಿ ನಿರತರಾಗಿದ್ದರಿಂದ ಶಿಕ್ಷಣ ಸೌಲಭ್ಯದಿಂದ ವಂಚಿತರು. ಹರೆಯಕ್ಕೆ ಬಂದಾಗ ಇವರಿಗೆ ಇಟ್ನಾಳ ಗ್ರಾಮದ ಲಕ್ಕವ್ವಳ ಜೊತೆ ಕ್ರಿ. ಶ. ೧೯೦೫ರಲ್ಲಿ ವಿವಾಹವಾಯಿತು. ಈ ದಂಪತಿಗಳಿಗೆ ಭಾಗವ್ವ ಎಂಬ ಹೆಣ್ಣು ಮಗಳ ಜನನವಾಯಿತು. ಆ ನಂತರದಲ್ಲಿ ಲಕ್ಕವ್ವಳಿಂದ ಮಕ್ಕಳನ್ನು ಪಡೆಯಲು ಸಾಧ್ಯವಿಲ್ಲದಿದ್ದಾಗ, ಗ್ರಾಮದ ಸದಲಗಿ (ಹಳಬರ) ಮನೆತನದ ಬೀರಪ್ಪ ಮತ್ತು ಅವನವ್ವ ದಂಪತಿಗಳ ಮಗಳಾದ ಕಲ್ಲವ್ವಳ ಜೊತೆ ಇವರ ಎರಡನೆಯ ವಿವಾಹಯಾಯಿತು. ಕಲ್ಲವ್ವಳಿಂದ ಲಕ್ಕಣ, ಗಿರೆಪ್ಪ, ಗುರುಸಿದ್ದಪ್ಪ ಎಂಬ ಗಂಡು ಮಕ್ಕಳು ಹಾಗೂ ಗಂಗವ್ವ, ನಿಂಬೆವ್ವ, ರತ್ನವ್ವ ಎಂಬ ಹೆಣ್ಣು ಮಕ್ಕಳು ಜನಿಸಿದರು. ಅಂದು ರಾಷ್ಟ್ರ ವ್ಯಾಪಿಯಾಗಿ ನಡೆಯುತ್ತಿರುವ ಸ್ವಾತಂತ್ರ್ಯ ಚಳುವಳಿಯಿಂದ ಆಕರ್ಷಿತರಾದ ರಾಮಪ್ಪ, ಕುರಿ ಕಾಯುವ ಕೆಲಸವನ್ನು ಸಹೋದರರಿಗೆ ಒಪ್ಪಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ :

ಗೋಕಾಕ ತಾಲೂಕಿನ ಕಂಡ್ರಟ್ಟಿ ಗ್ರಾಮದ ಉದ್ದಪ್ಪ ಕೆಂಚಪ್ಪ ಎತ್ತಿನಮನಿಯವರ ಪ್ರೇರಣೆಯಿಂದ, ಇವರು ಬ್ರಿಟಿಷರ ವಿರುದ್ಧ ಪ್ರಥಮಬಾರಿಗೆ ಕ್ರಾಂತಿಯ ಕಹಳೆಯನ್ನೂದಿದರು. ಎತ್ತಿನಮನಿಯವರು ಹಿಡಕಲ್‌ನಲ್ಲಿ ಕಾಂಗ್ರೇಸ್ ಸ್ವಯಂಸೇವಕರ ತಂಡ ಸಂಘಟಿಸಿದರು. "ಇದರಲ್ಲಿ ಇಮಾಮಸಾಬ ಮುಲ್ಲಾ, ವಾಣಿ, ಭೀಮರಾಯಪ್ಪ ರಾಮಪ್ಪ ಕಂಕಣವಾಡಿ, ರಾಮಪ್ಪ ಮುರಿಗೆಪ್ಪ ಕಂಕಣವಾಡಿ, ಇವರೆಲ್ಲ ಪ್ರಮುಖರು."[೧] ರಾಮಪ್ಪ ಸ್ವಾತಂತ್ರ್ಯ ಸಂಗ್ರಾಮದ ಜ್ಯೋತಿಯನ್ನು ಗ್ರಾಮದ ಮನೆ-ಮನೆಗಳಲ್ಲಿ ಹಚ್ಚಿ ಜ್ವಾಲಾಮುಖಿಯಾಗಿ ಹೊರಹೊಮ್ಮಲು ಕಾರಣಿಭೂತರಾದರು. ಆರಂಭದಲ್ಲಿ ಇವರ ಜೊತೆ ಭೀಮಪ್ಪ ಚೆನ್ನಪ್ಪ ಬಡಿಗೇರ (ಮೇಸ್ತ್ರಿ), ರೇವಣ್ಣ ಬನಹಟ್ಟಿ, ವಾಸುದೇವ ನಾಯಿಕ, ಭೀಮರಾಯ ರಾಯಪ್ಪ ಕಂಕಣವಾಡಿ ಕಾರ್ಯಮಾಡಿದ್ದರು.

ಮಹಾತ್ಮ ಗಾಂಧೀಜಿಯವರು ೧೯೩೦ರ ಏಪ್ರಿಲ್‌ನಲ್ಲಿ ದಂಡಿ ಉಪ್ಪಿನ ಸತ್ಯಾಗ್ರಹವನ್ನು ಕೈಕೊಂಡು ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆ ವಿಧಿಸಿದ್ದ ಕಾಯಿದೆಯನ್ನು ಭಂಗ ಮಾಡಿದರು. ಉಪ್ಪಿನ ಸತ್ಯಾಗ್ರಹದಿಂದ ಪ್ರಾರಂಭವಾದ ಚಳುವಳಿಯಲ್ಲಿ ಶಿಂದಿಗಿಡ ಕಡಿಯುವುದು, ಚಂದನ, ತೇಗು, ಆದಿ ಮುಂತಾದ ನಿಷೇಧಿಸಲ್ಪಟ್ಟ ಗಿಡಗಳನ್ನು ಕಡಿದು, ಜಂಗಲ ಸತ್ಯಾಗ್ರಹ ಮಾಡುವುದು, ಹುಲಬನ್ನಿ ಕರ ಕೊಡದೆ ಅಡವಿಯಲ್ಲಿ

ದನಕರುಗಳನ್ನು ಮೇಯಿಸುವುದು ಮುಂತಾದ ಕಾಯದೆ ಭಂಗ ಕಾರ್ಯಕ್ರಮಗಳನ್ನು ಈ ಚಳುವಳಿಯಲ್ಲಿ ಕೈಕೊಳ್ಳಲಾಯಿತು. ಜಿಲ್ಲೆಯ ಮತ್ತು ತಾಲೂಕಿನ ಉಪ್ಪಿನ ಸತ್ಯಾಗ್ರಹದ ಭಾಗವಾಗಿ ಹಮ್ಮಿಕೊಂಡ ಶಿಬಿರಗಳಲ್ಲಿ ರಾಮಪ್ಪನವರು ತಮ್ಮ ಹೆಸರನ್ನು ನೊಂದಾಯಿಸಿದ್ದರು. ಅಣ್ಣುಗುರೂಜಿ ಮತ್ತು ಗುರು ಮಾಸ್ತರ ಜೇರೆ ಯವರ ನೇತೃತ್ವದ ಪಥಕದಲ್ಲಿ ಸಕ್ರೀಯವಾಗಿ ಭಾಗವಹಿಸಿ ಅಥಣಿ, ಬಾಗಿನಾಡುಗಳಲ್ಲಿ ಸಂಚಾರ ಮಾಡಿ ಉಪ್ಪಿನ ಸತ್ಯಾಗ್ರಹದ ಪ್ರಚಾರ ಕೈಗೊಂಡು, ಜನಜಾಗೃತಿ ಮಾಡಿದರು. ಕಾನೂನು ಭಂಗ ಚಳುವಳಿಯ ಅಂಗವಾಗಿ ನಡೆದ ಶಿಂಧಿಗಿಡ ಕಡಿಯುವ ಸತ್ಯಾಗ್ರಹದಲ್ಲಿ ಪಾಲ್ಗೊಂಡ ರಾಮಪ್ಪನವರ ಬಂಧನವಾದ ಬಗ್ಗೆ, ರಾಣಬಾ ಕದಮ್ ತನ್ನ ಲಾವಣಿ ಪದ್ಯದಲ್ಲಿ ಈ ರೀತಿ ಹಾಡಿದ್ದಾನೆ.

ಜೈ ಹಿಂದ ಅಂದ ಕಡದಾರೋ ಸಿಂದಿಬನಾನ !
ಪೋಲೀಸರು ಹಿಡಕೊಂಡ ಹೋಗ್ಯಾರೋ ಕಂಕಣೋಡಿ ರಾಮಣ್ಣಾನ !!

ಗಾಂಧಿ–ಇರ್ವಿನ್ ಒಪ್ಪಂದದಂತೆ ಚಳುವಳಿ ನಿಂತಿತು. ಹೀಗಾಗಿ ಕಾನೂನು ಭಂಗ ಚಳುವಳಿಯಲ್ಲಿ ರಾಜಬಂಧಿಯಾಗಿದ್ದ ಎಲ್ಲಾ ಚಳುವಳಿಗಾರರನ್ನು ಬಿಡುಗಡೆ ಮಾಡಲಾಯಿತು. ಅದರಂತೆ ರಾಮಪ್ಪ ಕೂಡ ಬಂಧಮುಕ್ತರಾದರು. ೧೯೩೭ರಲ್ಲಿ ಕಾಮ್ರೆಡ ಎಂ. ಎಸ್. ರಾಯ್ ಮತ್ತು ಪಂಡಿತ ಜವಾಹರಲಾಲ ನೆಹರು ಪಾಲ್ಗೊಂಡ ಗೋಕಾಕ ಸಭೆಯಲ್ಲಿ ಇವರು ಸ್ವಯಂಸೇವಕರಾಗಿದ್ದರು. ನಿಷ್ಠಾವಂತ ಕಾಂಗ್ರೇಸ್ಸಿಗರಾದ ಇವರು ಗ್ರಾಮದಲ್ಲಿ ಕಾಂಗ್ರೇಸ್ಸನ್ನು ಕಟ್ಟಿದರು. ಜಿಲ್ಲಾ ಮತ್ತು ತಾಲೂಕಾ ಕಾಂಗ್ರೇಸ್ ಮುಂಖಡರ ಜೊತೆ ನೇರವಾದ ಸಂಪರ್ಕ ಹೊಂದಿದ್ದರು. ಅಣ್ಣು ಗುರೂಜಿ, ಚೆನ್ನಪ್ಪ ವಾಲಿ, ವೆಂಕರೆಡ್ಡಿ ಹೂಲಿ, ಗವಿಸಿದ್ದಪ್ಪ ಬೆಳವಡಿ, ಶ್ರೀರಂಗ ಕಾಮತ್, ಶಿವಪ್ಪ ನಿಂಗನೂರ ಮಾಸ್ತರ, ಚೆನ್ನಮಲ್ಲಪ್ಪ ಬಸ್ತವಾಡೆ, ಕಲ್ಲಪ್ಪ ಮಿರ್ಜೆ, ನಸಲಾಪೂರದ ಸಮಾಜೆ, ಬಹದ್ದೂರ ನಿಂಗಪ್ಪ ದಳವಾಯಿ, ಅನಂತ ಕುಲಕರ್ಣಿ, ಶಿವಲಿಂಗಗೌಡ ಪಾಟೀಲ, ರಾಮಣ್ಣಾ ಗಾವಡೆ, ರತ್ನಪ್ಪಣ್ಣ ಕುಂಬಾರ, ಸಿಂಧೂರ ಲಕ್ಷ್ಮಣನ ಇನ್ನೂ ಮುಂತಾದ ಹೋರಾಟಗಾರರ ಜೊತೆ ನಿಕಟ ಸ್ನೇಹ ಸಂಪರ್ಕವನ್ನು ಹೊಂದಿದ್ದರು.

೧೯೩೭ರ ಎಪ್ರಿಲ್ ೧೭ ರಂದು ಅಖಿಲ ಭಾರತ ಗಾಂಧೀ ಸೇವಾ ಸಂಘದ ಸಮ್ಮೇಳನವು ಹುದಲಿಯಲ್ಲಿ ಏರ್ಪಟ್ಟಾಗ ಇವರ ನೇತೃತ್ವದಲ್ಲಿ ಗ್ರಾಮದ ಹೋರಾಟಗಾರರ ತಂಡವು ಭಾಗವಹಿಸಿತ್ತು. ಮಹಾತ್ಮಾ ಗಾಂಧೀಜಿಯವರು ವಿಧಾಯಕ ಕಾರ್ಯಗಳಾದ ಹರಿಜನೋದ್ಧಾರ ಸೇವೆ ಮತ್ತು ಕುಷ್ಠ ರೋಗಿಗಳ ಉಪಚಾರ ಸೇವೆಯಲ್ಲಿ ಹಗಲಿರುಳು ದುಡಿದರು. "ದಕ್ಷಿಣ ಸಂಸ್ಥಾನ ಪ್ರಜಾಹಿತವರ್ಧಕ ಸಭೆಯ ಹನ್ನೊಂದನೆಯ ಅಧಿವೇಶನವು ದಿ॥ ೫ ಮತ್ತು ೬ ಜೂನ್ ೧೯೩೭ರಂದು ಬೆಳಗಾವಿ ಜಿ॥ ಕುಡಚಿಯಲ್ಲಿ ಖ್ಯಾತ ಮುಂಖಡ ವೀರ ನರಿಮನ್‌ರ ಅಧ್ಯಕ್ಷತೆಯಲ್ಲಿ ಆಗಿ, ಹಿತವರ್ಧಕ ಸಭೆಯನ್ನು ವಿಸರ್ಜಿಸಿ ದಕ್ಷಿಣ ಸಂಸ್ಥಾನ ಪ್ರಜಾಪರಿಷತ್ತು ಎಂಬ ಸಂಸ್ಥೆಯನ್ನು ಅಲ್ಲಿ ಸ್ಥಾಪಿಸಲಾಯಿತು."[೨೦] ಈ ಸಭೆಯಲ್ಲಿ ಭಾಗವಹಿಸಿದ ಇವರು ಹೋರಾಟಗಾರರ ತಂಡದ ಜೊತೆ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಿದರು. ೧೯೩೮ರಲ್ಲಿ ಇವರು ಭೀಮಪ್ಪ ಚೆನ್ನಪ್ಪ ಬಡಿಗೇರ, ಇಮಾಮಸಾಹೇಬ ಮುಲ್ಲಾ, ಮತ್ತು ವಾಸುದೇವ ನಾಯಿಕರ ಜೊತೆ ಗ್ರಾಮದ ಚಾವಡಿಯಲ್ಲಿ ಕುಳಿತು ಚಳುವಳಿಯ ಕುರಿತು ಚರ್ಚಿಸುತ್ತಿದ್ದರು. ನಾಲ್ಕು ಜನ ಪೋಲೀಸರ ಸಮೇತ

ಅಲ್ಲಿಗೆ ಬಂದ ಬ್ರಿಟಿಷ ಪೊಲೀಸ ಅಧಿಕಾರಿಯೊಬ್ಬರು ನಾಲ್ವರನ್ನು ಬಂಧಿಸಿ ಕುಡಚಿ ಠಾಣೆಗೆ ಒಯ್ದು, ಬೆಳಗಾವಿ ಜೇಲಿಗೆ ವರ್ಗಾಯಿಸಿದರು. ೬ ತಿಂಗಳ ನಂತರ ಜೇಲಿನಿಂದ ಇವರು ಬಿಡುಗಡೆಗೊಂಡರು.

"೧೯೪೧ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಹಿಡಕಲ್ಲದ ರಾಮಪ್ಪ ಕಂಕಣವಾಡಿ, ಭೀಮಪ್ಪ ಬಡಿಗೇರ, ಇಮಾಮಸಾ ಮುಲ್ಲಾ, ವಾಸುದೇವ ನಾಯಿಕ ಇವರಿಗೆ ಒಪ್ಪಿಗೆ ದೊರೆತಿತ್ತು".[೨೧] ಚಳುವಳಿನಿರತ ಹೋರಾಟಗಾರರನ್ನು ಬ್ರಿಟಿಷ ಸರಕಾರ ಬಂಧಿಸಲು ಯತ್ನಿಸಿದಾಗ ಇವರು ಭೂಗತರಾಗಿ ಕಾರ್ಯಾಚರಣೆ ಮಾಡಿದರು. ೧೯೪೨ರ ಅಗಸ್ಟ ೮ನೇ ದಿನಾಂಕದಂದು ಮುಂಬಯಿಲ್ಲಿ ನಡೆದ ಎ.ಆಯ್.ಸಿ.ಸಿ. ಅಧಿವೇಶನದಲ್ಲಿ ಇವರು ಭಾಗವಹಿಸಿದ್ದರು. ೧೯೪೨ರ ಅಗಸ್ಟ ಮತ್ತು ಸಪ್ಟೆಂಬರ ತಿಂಗಳಲ್ಲಿ, ಅಥಣಿಯ ಅನಂತ ಶಾಮರಾವ ಕುಲಕರ್ಣಿಯವರು ಮಧ್ವರಾಜ ದೇಶಪಾಂಡೆಯವರ ಮನೆಯಲ್ಲಿ ನಡೆಸಿದ ಗುಪ್ತ ಸಭೆಗಳಲ್ಲಿ ಇವರು ಭಾಗವಹಿಸಿ ತಮ್ಮ ಯೊಜನೆಗಳನ್ನು ಪ್ರಕಟಿಸಿದರು. ಗ್ರಾಮದ ತರುಣರ ಪಡೆಯು, ಮಹಾಲಿಂಗಪೂರ ಪೋಸ್ಟ ಆಫೀಸನ್ನು ಸುಟ್ಟು ಹಾಕುವ ಯೋಜನೆಯನ್ನು ರೂಪಿಸಿದಾಗ, ಸೂಕ್ತ ಮಾರ್ಗದರ್ಶನವನ್ನು ಇವರು ನೀಡಿದ್ದರು.

ಇವರು ಕುಡಚಿ-ಜಮಖಂಡಿ ರಸ್ತೆಯ, ಹಾರೂಗೇರಿ ಕ್ರಾಸ್ ಮತ್ತು ಯಬರಟ್ಟಿ ಮಧ್ಯದ ಟೆಲಿಗ್ರಾಫ ತಂತಿಯನ್ನು ಕತ್ತರಿಸುವ ಕಾರ್ಯದಲ್ಲಿ ಭಾಗವಹಿಸಿದ್ದರು. ಇವರ ಮುಂದಾಳತ್ವದಲ್ಲಿಯೇ ತರುಣ ಹೋರಾಟಗಾರರ ತಂಡವು ಯಲ್ಪಾರಟ್ಟಿ ಬಂಗಲೆ ಸುಟ್ಟು ಹಾಕಿತು. ಅಣ್ಣು ಗುರೂಜಿಯವರ ನೇತೃತ್ವದಲ್ಲಿ ನಡೆದ ಸುಲದಾಳ ರೇಲ್ವೆ ಸ್ಟೇಷನ್ ಸುಡುವ ಕಾರ್ಯದಲ್ಲಿ ಮತ್ತು ಸಂಕೇಶ್ವರದ ಅಪ್ಪಣಗೌಡರ ನೇತೃತ್ವದಲ್ಲಿ ರಾಯಬಾಗ ರೇಲ್ವೇ ಸ್ಟೇಷನ ಸುಡುವ ಕಾರ್ಯದಲ್ಲಿಯೂ ಇವರು ಭಾಗಿಗಳಾಗಿದ್ದರು. ಇವರು ೧೯೪೨ರ ಅಕ್ಟೋಬರ ತಿಂಗಳಲ್ಲಿ ಇಮಾಮಸಾಹೇಬ ಮುಲ್ಲಾರ ನೇತೃತ್ವದ ತಂಡ ಅಥಣಿಯ ಪೋಸ್ಟ ಆಫೀಸನ್ನು ಸುಡುವ ಮತ್ತು ಸರ್ಕಾರಿ ಟ್ರೇಜರಿಯನ್ನು ಲೂಟಿ ಮಾಡುವ ಯೊಜನೆ ಹಾಕಿಕೊಂಡಾಗ ಅದಕ್ಕೆ ಬೆನ್ನೆಲುಬಾಗಿದ್ದರು. ಚಳುವಳಿಯ ಯೋಜನೆಗಳ ರೂವಾರಿಯಾಗಿದ್ದು, ಭೂಗತರಾಗಿದ್ದ ಇವರನ್ನು ಬಂಧಿಸಲು ಪೊಲೀಸರು ಶೋಧಿಸಿದರು. ೧೯೪೩ರಲ್ಲಿ ಪೊಲೀಸರು ಇವರನ್ನು ಬಂಧಿಸಿ ವಿಚಾರಣಾಧೀನ ಕೈದಿಯೆಂದು ಬೆಳಗಾವಿ ಕಿಲ್ಲಾ ಜೈಲಿನಲ್ಲಿಟ್ಟರು. ೨-೩ ತಿಂಗಳ ನಂತರ ಇವರನ್ನು ಬಿಡುಗಡೆಗೊಳಿಸಿದರು. ಬಿಡುಗಡೆಯ ನಂತರವು ಸ್ವರಾಜ್ಯ ಪ್ರಾಪ್ತಿಯಾಗುವವರೆಗೂ ಅವರ ಹೋರಾಟ ಅವಿರತವಾಗಿ ಸಾಗಿತ್ತು. ಭಾರತವು ೧೯೪೭ರ ಅಗಸ್ಟ ೧೫ರಂದು ಸ್ವಾತಂತ್ರ್ಯಗೊಂಡಾಗ ಗ್ರಾಮದಲ್ಲಿ ಸಿಹಿ ಹಂಚಿ ಸ್ವಾತಂತ್ರ್ಯೋತ್ಸವನ್ನು ಸಂಭ್ರಮದಿಂದ ಆಚರಿಸಿದರು.

ಸ್ವಾತಂತ್ರ್ಯಾ ನಂತರದ ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳು :

ಹಿಂದುಳಿದ ವರ್ಗಗಳ ಅಭಿವೃದ್ಧಿ, ಶಿಕ್ಷಣದ ಪ್ರಸಾರ ಮತ್ತು ರೈತರ ಶೋಷಣೆಯಲ್ಲಿ ತೊಡಗಿದ ಜಮಿನ್ದಾರರ ವಿರುದ್ಧ ಹೋರಾಟ ರಾಮಪ್ಪನವರ ಮುಖ್ಯ ವಿಚಾರಗಳಾಗಿದ್ದವು. ಇವರು ಬಿ. ಡಿ. ಜತ್ತಿಯವರ ಜೊತೆ ತೀರ ಒಡನಾಟದ ಸಂಬಂಧವನ್ನು ಹೊಂದಿದ್ದರು. ಇದಕ್ಕೆ ಕಾರಣ ನಿಂಗಪ್ಪ ಬಹದ್ದೂರ ದಳವಾಯಿ. ಮಹಾತ್ಮಾ ಗಾಂಧೀಜಿಯ ಹತ್ಯೆಯಾದ ಬಳಿಕ ಬ್ರಾಹ್ಮಣ ಮನೆತನದ ಮೇಲಿನ ಸಂಭವನೀಯ ದಾಳಿಯನ್ನು ತಡೆಗಟ್ಟಿದರು. ಇವರ ಒತ್ತಾಸೆಯಾಗಿ ಗ್ರಾಮದಲ್ಲಿ ಮೊದಲ ಬಾರಿಗೆ ಪ್ರಾಥಮಿಕ ಶಾಲೆಯನ್ನು

ಆರಂಭಿಸಿಲಾಯಿತು. ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧನಸಹಾಯ ನೀಡಿದರು. ೧೯೫೫ರಲ್ಲಿ ತಮ್ಮ ತೋಟದಲ್ಲಿಯೇ ಪ್ರಾಥಮಿಕ ಶಾಲೆಯನ್ನು ಆರಂಭಿಸಿ ಶಾಲೆ ನಿರ್ಮಿಸಲು ೧೧ ಗುಂಟೆ ಜಮೀನವನ್ನು ದಾನವಾಗಿ ಕೊಟ್ಟರು.

ಬೆಳಗಾವಿಯಲ್ಲಿ ಹಾಲುಮತ ಸಮಾಜದ ವಿದ್ಯಾರ್ಥಿಗಳಿಗಾಗಿ ಆರಂಭಗೊಂಡ ವಿಜಯನಗರ ಬೋರ್ಡಿಂಗ್ ಸ್ಥಾಪನೆಗೆ ಕಾರಣಿಭೂತರು. ಹಿರಿಜನ-ಗಿರಿಜನ ವಿದ್ಯಾರ್ಥಿಗಳಿಗೆ ವಿಜಯನಗರ ಬೋರ್ಡಿಂಗ್‌ನಲ್ಲಿ ಪ್ರಥಮ ಬಾರಿಗೆ ಅವಕಾಶ ನೀಡಿಲಾಯಿತು. ಕಡಿಮೆ ಆದಾಯವಿರುವ ವಿದ್ಯಾರ್ಥಿಗಳಿಗೆ ಸರಕಾರದಿಂದ ಶಿಕ್ಷಣ ಶುಲ್ಕದಲ್ಲಿ ವಿನಾಯತಿಗೆ ಒತ್ತಾಯಿಸಿ ಅಂದಿನ ಕರ್ನಾಟಕ ಸರಕಾರದ ಮುಖ್ಯಮಂತ್ರಿ ಎಸ್. ಆರ್. ಕಂಠಿಯವರಿಗೆ ಮನವಿ ಅರ್ಪಣೆ. ಘಟಪ್ರಭಾ ಎಡದಂಡೆ ಕಾಲುವೆ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿದ ಬಡ ಕೂಲಿಕಾರ್ಮಿಕರ ನಾಲ್ಕು ಮಕ್ಕಳಿಗೆ ಶಿಕ್ಷಣ ದಾಸೋಹ. ೧೯೫೮ರಲ್ಲಿ ಮುಗಳಖೋಡದಲ್ಲಿ, ಕರ್ನಾಟಕ ರಾಜ್ಯ ಕುರುಬರ ಸಂಘಟನೆ ಮತ್ತು ಸ್ಥಳೀಯರ ಸಹಾಯದಿಂದ, 'ರಾಜ್ಯ ಮಟ್ಟದ ಸಮಾರಂಭ' ನಡೆದಾಗ ಇವರು ಪ್ರಮುಖ ಪಾತ್ರ ವಹಿಸಿದ್ದರು.

ಇವರು, ಸಂಗನಬಸಪ್ಪ ಮಲ್ಲಪ್ಪ ಜೋಗಿ (ಸಾ। ಬಳಗಾನೂರ ತಾ। ಗದಗ) ಜೊತೆ ಕೂಡಿಕೊಂಡು ಸರಕಾರಕ್ಕೆ ಕುರಿಗಾರರು ಪ್ರತಿವರ್ಷ ಸಲ್ಲಿಸಬೇಕಾದ ಹುಲ್ಲಬನ್ನಿ ತೆರಿಗೆಯನ್ನು ರದ್ದುಗೊಳಿಸಲು ಹೋರಾಟ ಮಾಡಿ ಸಫಲರಾದರು. ಇವರು ದಾವಣಗೆರೆಯಲ್ಲಿ ಕುರಿಗಾರರ ಹಿತರಕ್ಷಣೆಗಾಗಿ ಹೋರಾಟ ಮಾಡಿದರು. ಕರ್ನಾಟಕ ಸರ್ಕಾರದ ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರನ್ನು ಸಂಪರ್ಕಿಸಿ ಕುರಿಗಾರರಿಗೆ ಕುರಿ ಮೇಯಿಸಲು ದಾವಣಗೆರೆ ಹೊರವಲಯದ ಗುಡ್ಡವನ್ನು ಸರಕಾರದಿಂದ ಉಚಿತವಾಗಿ ಕೊಡಿಸಿದರು.

ಗ್ರಾಮದಲ್ಲಿ ಜೈನ ಸಮಾಜದ ಬಾಂಧವರಿಗಾಗಿ ಜೈನ ಬಸದಿಯನ್ನು ಕಟ್ಟಿಸಿದ್ದು ಮತ್ತು ಉಪ್ಪಾರ ಸಮಾಜದ ಚಂದ್ರವ್ವ ತಾಯಿಯ ಗುಡಿಯನ್ನು ಕಟ್ಟಿಸಿದ್ದು ಅವರಲ್ಲಿನ ಸಾಮರಸ್ಯವನ್ನು ಸಾರುತ್ತದೆ. ಬೆಂಡವಾಡದ ಶ್ರೀ ರೇವಣ್ಣಸಿದ್ದೇಶ್ವರ ಮಠದ ಶಿವಯ್ಯ ಸ್ವಾಮಿಯವರನ್ನು ವಿದ್ಯಾಭ್ಯಾಸಕ್ಕಾಗಿ ಶಿವಯೋಗಿ ಮಂದಿರಕ್ಕೆ ಬಿಟ್ಟು ಬಂದರು. ವಿದ್ಯಾಭ್ಯಾಸದ ನಂತರ ೧೧೮ ಮಂಟಪ ಕಟ್ಟಿ, ಸ್ವಾಮಿಗಳ ಪಟ್ಟೋತ್ಸವದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಗ್ರಾಮ ದೇವತೆ ಹನುಮಾನ ದೇವರ ಜಾತ್ರೆಯಲ್ಲಿ ಓಕುಳಿ ಆರಂಭಸಿದರು. ಶ್ರೀ ಕೃಷ್ಣ ಪಾರಿಜಾತವನ್ನು ತಂದು ಗ್ರಾಮದ ಜನತೆಗೆ ಜನಪದ ಕಲೆಯನ್ನು ಉಣಬಡಿಸಿದ ಕೀರ್ತಿ ಇವರದು. ಇವರು ಕುಸ್ತಿ ಪ್ರಿಯರು.

ಕೊನೆಯ ದಿನಗಳು :

ಸ್ವಾತಂತ್ರ್ಯ ನಂತರ ಭಾತರ ಸರ್ಕಾರ ಆರಂಭಿಸಿದ ಸ್ವಾತಂತ್ರ್ಯ ಪಿಂಚಣಿಯನ್ನು ಗ್ರಾಮದ ಇತರರಿಗೆ ದೊರಕಿಸಿ ಕೊಡಲು ಪ್ರಯತ್ನಸಿದರು. ಸ್ವಾಭಿಮಾನಿಯಾದ ಅವರು ಸರ್ಕಾರದಿಂದ ಪಿಂಚಣಿ ಪಡೆಯಲಿಲ್ಲ. ಕ್ರಿ ಶ. ೧೯೭೬ರಲ್ಲಿ ಮರಣ ಹೊಂದಿದರು.

೫.೨.೧.೩ ಇಟನಾಳ/ಹಿಡಕಲ್ಲದ ಸ್ವಾತಂತ್ರ್ಯ ಯೋಧ ಲಕ್ಷ್ಮಣ ಅಣ್ಣಪ್ಪ ಡಾಂಗೆ :

ಜನನ :

ಇಟನಾಳ ಗ್ರಾಮದ ಅಣ್ಣಪ್ಪ ಮತ್ತು ಕಾಶೆವ್ವ ದಂಪತಿಗಳಿಗೆ ಅವಳಿ-ಜವಳಿ ಮಕ್ಕಳು. ಅವರು ರಾಮ ಮತ್ತು ಲಕ್ಷ್ಮಣ. ಇವರು ಇಟನಾಳದಲ್ಲಿ ೦೬-೦೯-೧೯೨೨ರಲ್ಲಿ ಜನಿಸಿದರು. ಅವಳಿಗಳಲ್ಲಿ ಲಕ್ಷ್ಮಣ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟಗಾರರಾಗಿ ಕೆಲಸ ಮಾಡಿದರು.

ಶಿಕ್ಷಣ :

ಇಟನಾಳ ಕುಂದರವಾಡ ಸಂಸ್ಥಾನದಲ್ಲಿದ್ದರಿಂದ ಹರಕು-ಮುರುಕು ಮರಾಠಿ ಶಾಲೆಯನ್ನು ಹೊಂದಿತ್ತು. ಇವರು ಆರಂಭದ ಪ್ರಾಥಮಿಕ ಶಿಕ್ಷಣವನ್ನು ಮರಾಠಿಯಲ್ಲಿಯೇ ಪಡೆದುಕೊಂಡರು. ನಂತರ ೧೯೩೮ರಲ್ಲಿ ಅಥಣಿ ತಾಲೂಕಿನ ಹಿಡಕಲ್ಲ ಗ್ರಾಮದ ಕನ್ನಡ ಪ್ರಾಥಮಿಕ ಶಾಲೆಗೆ ದಾಖಲಾದರು. ಸಂಬಂಧಿಕರಾದ ಕಂಕಣವಾಡಿಯವರ ಮನೆಯಲ್ಲಿದ್ದುಕೊಂಡು ಶಿಕ್ಷಣವನ್ನು ಮುಂದುವರೆಸಿದರು. ಅವರು ಏಳನೆಯ ತರಗತಿಯಲ್ಲಿ ಓದುತ್ತಿದ್ದಾಗ ಚಲೇಜಾವ ಚಳುವಳಿಯಲ್ಲಿ ಭಾಗವಹಿಸಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ :

ಇವರ ಹುಟ್ಟೂರು ಇಟನಾಳವಾದರೂ ಕೂಡ ಸ್ವಾತಂತ್ರ್ಯ ಚಳುವಳಿಯ ಕಾರ್ಯಾಚರಣೆಯ ಕೇಂದ್ರ ಹಿಡಕಲ್ಲವೇ ಆಗಿತ್ತು. ರಾಮಪ್ಪ ಕಂಕಣವಾಡಿ ಮತ್ತು ತರುಣ ಹೋರಾಟಗಾರರಿಂದ, ಗ್ರಾಮದಲ್ಲಿ ಸಂಘಟನೆಗೊಂಡ ಚಳಿವಳಿಕಾರರ ಗುಂಪನ್ನು ಸೇರಿಕೊಂಡರು. ನಂತರದಲ್ಲಿ "ಹಿಡಕಲ್ಲ ಸ್ವಾತಂತ್ರ್ಯ ಹೋರಾಟಗಾರು ಯೋಜಿಸಿದ ಮತ್ತು ಕಾರ್ಯಾಚರಣೆ ಮಾಡಿದ ಎಲ್ಲಾ ಚಳುವಳಿಗಳಲ್ಲಿ ಇವರು ಭಾಗವಹಿಸಿದ್ದರು. ತಂಡದ ಜೊತೆಗೂಡಿ ಅನೇಕ ವಿಧಾಯಕ ಕಾರ್ಯಗಳಲ್ಲಿ ಭಾಗವಹಿಸಿ, ಶಿಕ್ಷೆಯನ್ನು ಕೂಡ ಅವರ ಜೊತೆಯೇ ಅನುಭವಿಸಿದರು."[೨]

೧೯೪೨ರ ಅಗಸ್ಟ ಮತ್ತು ಸಪ್ಟೆಂಬರ ತಿಂಗಳಲ್ಲಿ, ಮಧ್ವರಾಜ ದೇಶಪಾಂಡೆಯವರ ಮನೆಯಲ್ಲಿ ಅಥಣಿಯ ಅನಂತ ಶಾಮರಾವ ಕುಲಕರ್ಣಿಯವರು ನಡೆಸಿದ ಗುಪ್ತ ಸಭೆಗಳಲ್ಲಿ ಇವರು ಭಾಗವಹಿಸಿದ್ದರು. ಮಹಾಲಿಂಗಪೂರ ಪೋಸ್ಟ ಆಫೀಸನ್ನು ಸುಟ್ಟು ಹಾಕುವ, ಕುಡಚಿ-ಜಮಖಂಡಿ ರಸ್ತೆಯ ಹಾರೂಗೇರಿ ಕ್ರಾಸ್ ಮತ್ತು ಯಬರಟ್ಟಿ ಮಧ್ಯದ ಟೆಲಿಗ್ರಾಫ ತಂತಿಯನ್ನು ಕತ್ತರಿಸುವ, ಯಲ್ಪಾರಟ್ಟಿ ಬಂಗಲೆ ಸುಟ್ಟು ಹಾಕುವ ಚಳುವಳಿಗಳಲ್ಲಿ ಇವರು ಭಾಗವಹಿಸಿದ್ದರು. ಸುಲದಾಳ ರೇಲ್ವೇ ಸ್ಟೇಷನ ಸುಡುವ ಕಾರ್ಯ ಮತ್ತು ರಾಯಬಾಗ ರೇಲ್ವೇ ಸ್ಟೇಷನ ಸುಡುವ ಕಾರ್ಯದಲ್ಲಿಯೂ ಇವರು ಭಾಗಿಗಳಾಗಿದ್ದರು.

೧೯೪೨ರ ಅಕ್ಟೋಬರ ತಿಂಗಳ ಚಲೇ ಜಾವ ಚಳುವಳಿಯಲ್ಲಿ ಇಮಾಮಸಾಹೇಬ ಮುಲ್ಲಾರ ನೇತೃತ್ವದ ತಂಡ ಅಥಣಿಯ ಪೋಸ್ಟ ಆಫೀಸನ್ನು ಸುಡುವ ಮತ್ತು ಸರ್ಕಾರಿ ಟ್ರೇಜರಿಯನ್ನು ಲೂಟಿ ಮಾಡುವ ಕಾರ್ಯದಲ್ಲಿ ಇವರು ಭಾಗವಹಿಸಿದ್ದರು. ದುರ್ದೈವವಶಾತ ಚಿಮಣಿ (ಸೀಮೆ) ಎಣ್ಣೆ ದೊರೆಯದ್ದರಿಂದ ಕಛೇರಿ ಸುಡುವ ಕಾರ್ಯ ಕೈಗೂಡಲಿಲ್ಲ. ತಂಡದವರು ಅಕ್ಟೋಬರ ೨ರಂದು ಜಮಂಖಡಿ ಸಂಸ್ಥಾನದ ಸಾವಳಗಿಯಲ್ಲಿ ಗಾಂಧಿ ಜಯಂತಿ ಆಚರಿಸಿದರು. ಮರುದಿನ ಅಥಣಿಗೆ ಆಗಮಿಸಿ ಮಂಗಸೂಳಿಗೆ

ಹೋಗಲು, ಅಥಣಿ ಬಸ್ ಸ್ಟಾಂಡಿನಲ್ಲಿ ಕಾಯುತ್ತಿದ್ದಾಗ ಪೊಲೀಸರು ೩-೧೦-೧೯೪೨ರಂದು ಇವರನ್ನು ಬಂಧಿಸಿದರು. ಇವರ ಕೈಚೀಲ ಶೋಧಿಸಿದಾಗ, ಕಬ್ಬಿಣ ಕೊರೆಯುವ ಎರಡು ಕರಗಸಗಳು, ಅದಕ್ಕೆ ಸಹಾಯಕವಾಗುವ ಇನ್ನೆರಡು ಸ್ಪೇಯರ್ ಬ್ಲೇಡಗಳು, ಒಂದು ಕೈಬಾಚಿ, ಒಂದು ತುದಿಗೆ ಚಿಂದಿ ಬಟ್ಟೆಯಿಂದ ಸುತ್ತಲ್ಪಟ್ಟ ಬಿದರಿನ ಹಿಡಿಕೆಯುಳ್ಳ ೬ ತಗಡಿನ ಜಕಳಿಗಳು, ವಿದ್ರೋಹಾತ್ಮಕ ವಿಷಯದ ಕರಪತ್ರ ದೊರೆತವು. ವಿಚಾರಣೆಯ ನಂತರ ಬೆಳಗಾವಿಯ ಹಿಂಡಲಗಾ ಜೈಲಿಗೆ ವರ್ಗಾಯಿಸಿದರು. ಅಟಲ ಬಿಹಾರಿ ವಾಜಪೇಯಿಯವರೂ ಅದೇ ಜೈಲಿನಲ್ಲಿದ್ದರು, ಆಗ ಅವರ ಜೊತೆ ಸಂಪರ್ಕ ಬೆಳೆಯಿತು.

ಇವರ ಮೇಲೆ, "ಬೆಳಗಾವಿ ಜಿಲ್ಲಾ ಡಿವಿಜನಲ್ ಸೆಷನ ನ್ಯಾಯಾಲಯದಲ್ಲಿ, ಸ್ಪೇಶಲ ಕೇಸ ನಂ ೧/೧೯೪೩ ದಾಖಲಾಯಿತು."[೨೩] ೫-೬ ತಿಂಗಳು ನ್ಯಾಯವಿಚಾರಣೆ ನಡೆದು, ದಿನಾಂಕ ೩೧-೦೩-೧೯೪೩ರ ಆದೇಶದಲ್ಲಿ, ದುರಭಿಪ್ರಾಯದ ಕರಪತ್ರ ಮತ್ತು ಸಾಹಿತ್ಯಗಳನ್ನು ಬೇಕಾಯ್ದೆಶಿರ ಹೊಂದಿದ್ದಕ್ಕಾಗಿ, ಭಾರತೀಯ ರಕ್ಷಣಾತ್ಮಕ ಕಾಯ್ದೆಯ ಕಲಂ ೩೯ರ ಬಿ ಪ್ರಕಾರ ಇವರನ್ನು ಒಳಗೊಂಡಂತೆ ೧೪ ಜನರನ್ನು ವಿಚಾರಣೆಗೆ ಒಳಪಡಿಸಲಾಯಿತು. "ಹಿಡಕಲ್ಲ ಇಮಾಮಸಾಬ ಮುಲ್ಲಾ ಇವರ ಜೊತೆ ಖಟ್ಲೆಯಲ್ಲಿ ಇತರ ಅಪಾದಿತರು : ಬನಹಟ್ಟಿಯ ನಿಂಗಪ್ಪಾ ಅಂಟಿನ, ಹಿಡಕಲದ ಲಕ್ಷ್ಮಣ ಡಾಂಗೆ, ಮೌಲಾಲಿ ಹುಸೇನಸಾಬ ಮುಲ್ಲಾ, ವಾಸುದೇವ ನಾಯಿಕ, ಭೀಮಾ ಕದಮ, ಮಲ್ಲಪ್ಪಾ ಕೊಕಟನೂರ, ಬಸಪ್ರಭು ದಲಾಲ, ಶಂಕರಪ್ಪಾ ನಾವಿ, ಕೃಷ್ಣಾ ಚವ್ಹಾಣ, ಬಸವಗೌಡಾ ನ್ಯಾಮಗೌಡರ."[೨೪] ಈ ಪೈಕಿ ಇಮಾಮಸಾಬ ಮುಲ್ಲಾ, ನಿಂಗಪ್ಪಾ ಅಂಟಿನ ಇವರಿಗೆ ತಲಾ ಮೂರೂವರೆ ವರ್ಷ ಶಿಕ್ಷೆಯಾಯಿತು. ಡಾಂಗೆಯವರಿಗೆ ವಿಧಿಸಲಾದ ಶಿಕ್ಷೆಯನ್ನು ಇಮಾಮಸಾಬ ಮುಲ್ಲಾ ಹೀಗೆ ಹೇಳುತ್ತಾರೆ, "ಲಕ್ಷ್ಮಣ ಡಾಂಗೆ ಎಂಬ ನಮ್ಮ ಊರ ಜೊತೆಗಾರನಿಗೆ ಎರಡೂವರೆ ವರ್ಷ ಶಿಕ್ಷೆ ಆಯಿತು."[೨೫] ಮಹಮ್ಮದ ಹೈದರ್‌ಗೆ ಎರಡೂವರೆ ವರ್ಷ, ಮೌಲಾಲಿ, ನಾಯಿಕ ಇವರಿಗೆ ತಲಾ ಮೂರು ವರ್ಷ ಶಿಕ್ಷೆ ಆಗಿ ಉಳಿದವರು ದೋಷಮುಕ್ತರಾದರು. ಎಪ್ರಿಲ್ ತಿಂಗಳ ೩೦ರಂದು ೬೦ ಜನ ಕೈದಿಗಳ ಗುಂಪಿನೊಂದಿಗೆ ಲಕ್ಷ್ಮಣ ಡಾಂಗೆಯವರನ್ನು ವಿಸಾಪೂರ ಜೈಲಿಗೆ ಕಳಿಹಿಸಲಾಯಿತು. ಜೈಲಿನಲ್ಲಿದ್ದಾಗ ತೀವ್ರ ಅನಾರೋಗ್ಯದಿಂದ ಬಳಲಿದರು. ಅವರನ್ನು ೧೯೪೪ ಡಿಸೆಂಬರ ೧೨ರಂದು ಬಿಡುಗಡೆ ಮಾಡಲಾಯಿತು. ಜೈಲಿನಿಂದ ಮರಳಿದ ನಂತರ ೨-೩ ತಿಂಗಳ ಅಭ್ಯಾಸಮಾಡಿ ಏಳನೆಯ ತರಗತಿಯಲ್ಲಿ ತೇರ್ಗಡೆಯಾದರು.

ಇವರ ಹೋರಾಟದ ಸೇವೆಯನ್ನು ಗುರುತಿಸಿದ ಭಾರತ ಸರ್ಕಾರ, ೧೯೭೨ರ ಅಗಸ್ಟ ೧೫ರಂದು ದಿಲ್ಲಿಯಲ್ಲಿ ರಾಷ್ಟ್ರಪತಿ ವ್ಹಿ. ವ್ಹಿ. ಗಿರಿಯವರ ಅಧ್ಯಕ್ಷತೆಯಲ್ಲಿ ನಡೆದ ಸ್ವಾತಂತ್ರ್ಯ ಯೋಧರ ಸನ್ಮಾನ ಸಮಾರಂಭದಲ್ಲಿ, ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧೀಯವರು ತಾಮ್ರ ಪತ್ರವನ್ನು ನೀಡಿ ಸನ್ಮಾನಿಸಿದರು.

ವೈವಾಹಿಕ ಜೀವನ :

ಸ್ವಾತಂತ್ರ್ಯಾ ನಂತರದಲ್ಲಿ ತಾರವ್ವ (ತಾರಾಬಾಯಿ) ಎನ್ನುವವರ ಜೊತೆ ಇವರ ವಿವಾಹವಾಯಿತು. ಪ್ರಕಾಶ, ಅಣ್ಣಪ್ಪ, ಚಿದಾನಂದ ಎಂಬ ಮೂರು ಗಂಡು ಮಕ್ಕಳು, ಮಾಲಾ, ಅನುಸೂಯಾ ಎಂಬ ಎರಡು ಹೆಣ್ಣು ಮಕ್ಕಳು.

ಸಾಮಾಜಿಕ ಚಟುವಟಿಕೆಗಳು :

೧೯೪೫ರ ಅಗಸ್ಟ್ ೧೫ರಂದು ಬೆಳಗಾವಿಯಲ್ಲಿ ಕೆಲ ಧುರೀಣರೊಂದಿಗೆ, ಅಖಿಲ ಕರ್ನಾಟಕ ಕುರುಬರ ಉಚಿತ ಪ್ರಸಾದ ನಿಲಯವನ್ನು 'ವಿಜಯನಗರ ವಿದ್ಯಾರ್ಥಿ ನಿಲಯ' ವೆಂದು ಸ್ಥಾಪಿಸಿ, ಅದರ ಕಾರ್ಯದರ್ಶಿಯಾಗಿ ನೇಮಕಗೊಂಡು, ಹಳ್ಳಿ-ಹಳ್ಳಿಗೆ ಹೋಗಿ ಕಾಳಿ-ಕಡಿ ಕೂಡಿಸಿ ೧೯೭೦ರ ವರೆಗೆ ನಡೆಸಿಕೊಂಡು ಬಂದರು.

೧೯೫೦ ಎಪ್ರಿಲ ೨೨ರಿಂದ ಒಂದು ವರ್ಷ ಕಾಲ ಗೃಹರಕ್ಷಕರಾಗಿ ಕಾರ್ಯ ನಿರ್ವಹಿಸಿದರು. ೧೯೬೩ರಲ್ಲಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಬೆಳಗಾವಿಗೆ ಹೋಗಿ ಗಾಯಾಳು ಸೈನಿಕರಿಗೆ ರಕ್ತ ದಾನ ಮಾಡಿದರು. ಇದೇ ಸಮಯದಲ್ಲಿ ಪ್ರತಿ ರವಿವಾರ ಒಂದೊಂದು ಗ್ರಾಮಕ್ಕೆ ತೆರಳಿ ಹರಿಜನಕೇರಿಗಳನ್ನು ಸ್ವಚ್ಛ (ಸಫಾಯಿ) ಮಾಡಿ ಬರುತ್ತಿದ್ದರು. ಇದನ್ನು ಕಂಡು ಬೆಳಗಾವಿಯ ಜಯದೇವರಾವ ಕುಲಕರ್ಣಿಯವರು ಒಂದು ಟೆಂಪೋ ಗಾಡಿಯನ್ನು ಇವರಿಗೆ ಉಚಿತವಾಗಿ ನೀಡಿದರು.

ಇವರು ೧೯೬೫ರಿಂದ ೧೯೬೮ರವರೆಗೆ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸೇವಾದಳದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. 'ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಸಂಸ್ಥೆ ಇಟನಾಳ' ಸಂಘ ಸ್ಥಾಪಿಸಿ, ಅದರ ಆಧ್ಯಕ್ಷರಾಗಿ ಸ್ವಾತಂತ್ರ್ಯ ಹೋರಾಟಗಾರ ಆಸರೆಯಾಗಿ ಕಾರ್ಯ ನಿರ್ವಹಿಸಿದರು. ಸ್ವಾತಂತ್ರ್ಯ ಯೋಧರ ನಿವೃತ್ತಿ ವೇತನವನ್ನು ಇವರು ಪಡೆಯುತ್ತಿದ್ದರು. ಸದ್ಯ ಇವರ ಧರ್ಮ ಪತ್ನಿಯವರಿಗೆ ಪೆನಶನ್ ಬರುತ್ತಿದೆ.

ಪ್ರಾಮಾಣಿಕತೆ :

೧೯೬೩ರಲ್ಲಿ ಗೋಕಾಕಕ್ಕೆ ಬಂದಾಗ ಪೇಟೆಯಲ್ಲಿ ಒಂದೂವರೆ ತೊಲೆಯ ಚಿನ್ನದ ಚೈನು ಸಿಕ್ಕಿತು. ಆ ಕುರಿತು ಪತ್ರಿಕೆಯಲ್ಲಿ ಪ್ರಕಟಣೆ ನೀಡಿ ಅದರ ಮಾಲೀಕರಾದ ಕೌಜಲಗಿ ಊರಿನ ಯಲಿಗಾರ ಅವರಿಗೆ ಒಪ್ಪಿಸಿದರು. ಆಗ ಅವರು ಸಂತೋಷಗೊಂಡು ನಿಮಗೇನು ಕೊಡಲಿ ಎಂದು ಕೇಳಿದರು. ಬೋರ್ಡಿಂಗ ವಿದ್ಯಾರ್ಥಿಗಳಿಗೆ ಒಂದು ಚೀಲ ಅಕ್ಕಿ ನೀಡಿರೆಂದು ಕೇಳಿದರು. ಅವರಿಂದ ಒಂದು ಚೀಲ ಅಕ್ಕಿಯನ್ನು ಪಡೆದು ಬೋರ್ಡಿಂಗ್‌ಗೆ ಸಲ್ಲಿಸಿದರು.

ಕೊನೆಯ ದಿನಗಳು : ಇವರು ೧೬- ೧೧-೨೦೦೪ರಂದು ದೈವಾಧೀನರಾದರು.

೫.೨.೨ ಹಾಲುಮತದ ಸಾಹಿತಿಗಳು :

ರಾಯಬಾಗ ಪರಿಸರದ ಹಾಲುಮತ ಸಮುದಾಯಕ್ಕೆ ಸೇರಿದ ಸಾಹಿತಿಗಳ ಸಂಖ್ಯೆ ಬಹಳಷ್ಟು ಕಡಿಮೆಯೆಂದೇ ಹೇಳಬಹುದು. ಇಲ್ಲಿ ಸ್ಥಾಪಿಸಲ್ಪಟ್ಟ ಹಾಲುಮತದ ಶಿಕ್ಷಣ ಸಂಸ್ಥೆಗಳು, ಸುಶಿಕ್ಷಿತರ ಪ್ರಮಾಣ, ಉನ್ನತ ಶಿಕ್ಷಣವನ್ನು ಪಡೆದು ಕೊಂಡವರ ಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಸಾಹಿತ್ಯದಲ್ಲಿ ಕ್ಷೇತ್ರದಲ್ಲಿ ಹಾಲುಮತ ಸಮುದಾಯದವರ ಕೊಡುಗೆ ಗಮನೀಯವಾದುದಲ್ಲ. ಆದರೂ ರಾಜ್ಯ ಮಟ್ಟದಲ್ಲಿ ಗುರುತಿಸಬಹುದಾದ ಸಾಹಿತಿಯನ್ನು ಹೊಂದಿದ್ದು ಇವರ ಹೆಮ್ಮೆಯ ಸಂಗತಿ. ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಕೃಷಿಯನ್ನು ಮಾಡಿದವರು ಜನಪದ ವಿದ್ವಾಂಸರಾದ ಜ್ಯೋತಿ ಹೊಸುರ ರಾಜ್ಯ ಮಟ್ಟದಲ್ಲಿ

ಗುರುತಿಸಲ್ಪಟ್ಟ ಸಾಹಿತಿಗಳು. ಇದರ ಜೊತೆಗೆ ಚಿಕ್ಕ ಮಕ್ಕಳ ಸಾಹಿತ್ಯದಲ್ಲಿ ವಿಶಿಷ್ಟ ಸೇವೆ ಮಾಡಿದವರು ಬೆಕ್ಕೇರಿಯ ಗುರುಸಿದ್ದಪ್ಪಾ ಬಾಣಸಿ. ಇನ್ನೂಳಿದಂತೆ ಜನಪದ ಸಾಹಿತಿಗಳಾದ ಬಿ ಎ ಜಂಬಗಿ, ಕೆ. ವಿ. ಬೀಳಗಿ ಅವರ ಕುರಿತು ಅಧ್ಯಯನ ಮಾಡುವುದು ಅತೀ ಅವಶ್ಯಕವಾಗಿದೆ. ಈ ಎಲ್ಲ ಸಾಹಿತಿಗಳು ಗ್ರಾಮೀಣ ಭಾಗದವರಾಗಿದ್ದು ಶಿಕ್ಷಕರಾಗಿ ಸೇವೆ ಸಲ್ಲಿಸಿ ಶೈಕ್ಷಣಿಕ ರಂಗದಲ್ಲಿ ತಮ್ಮದೇ ವಿಶಿಷ್ಟ ಛಾಪು ಮೂಡಿಸಿದ್ದು ವಿಶೇಷ. ಈ ಎಲ್ಲ ಸಾಹಿತಿಗಳನ್ನು ಪರಿಚಯಿಸುವ ಮತ್ತು ಸಮೀಕ್ಷಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

೪.೨.೨.೧ ಜ್ಯೋತಿ ಹೊಸೂರ :

ಜ್ಯೋತಿ ಹೊಸುರ ಅವರ ಜನ್ಮಭೂಮಿ ಮುಗಳಖೋಡ. ಗ್ರಾಮೀಣ ಪರಿಸರದ ಈ ನೆಲ, ಯೋಗಿ ಯಲ್ಲಾಲಿಂಗರ ಪುಣ್ಯಭೂಮಿಯೂ ಹೌದು. ಗ್ರಾಮದ ನೀರಲಖೋಡಿಯ ಪ್ರತಿಷ್ಠಿತ ಹೊಸುರ ಮನೆತನದ ಶಿವಪ್ಪ ಮತು ಸತ್ಯವ್ವಾ ದಂಪತಿಗಳಿಗೆ ೦೯-೦೯-೧೯೩೭ ರಂದು ಜ್ಯೋತೆಪ್ಪ ಜನಿಸಿದರು. (ಶಾಲಾ ದಾಖಲೆ ೦೧-೦೬-೧೯೪೯). ಕೃಷಿ ಹಿನ್ನೆಲೆಯ ಕುಟುಂಬದಲ್ಲಿ ಜನಿಸಿದ ಜ್ಯೋತೆಪ್ಪ ಚಿಕ್ಕ ವಯಸ್ಸಿನಲ್ಲಿ ದನ ಕಾಯುವ ಕಾಯಕದಲ್ಲಿ ನಿರತನಾದ. ತನ್ನ ಸಹಚರರು ದನ ಕಾಯುವುದನ್ನು ಬಿಟ್ಟು ಶಾಲೆ ಸೇರಿದಾಗ ಒಂಟಿಯಾದ ಜ್ಯೋತೆಪ್ಪ ಶಾಲೆಯತ್ತ ಹೆಜ್ಜೆ ಹಾಕಿದ. ಮುಗಳಖೋಡ ಪ್ರಾಥಮಿಕ ಶಾಲೆಯಲ್ಲಿ ಆರಂಭಿಕ ಅಕ್ಷರಗಳನ್ನು ಕಲಿಸಿದ ಶಿಕ್ಷಕರು ಭೀಮಪ್ಪ ಬಿರಾದಾರ. ನಂತರ ಬೆಳಗಾವಿಯ ರಾಜಾ ಲಖಮನಗೌಡ ಸರದೇಸಾಯಿ ಕಾಲೇಜಿನಲ್ಲಿ ಪಿ. ಯು. ಸಿ. ಶಿಕ್ಷಣವನ್ನು ಪೂರೈಸಿದರು. ಪದವಿ ಹಂತದಲ್ಲಿ ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡು ಸೈಕೋಲಾಜಿ (ಮನಃಶಾಸ್ತ್ರ) ವಿಷಯವನ್ನು ಆಯ್ದುಕೊಂಡರು.

ಶಿಕ್ಷಣವನ್ನು ಪೂರೈಸಿದ ನಂತರ ಹಾರೂಗೇರಿ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸುವ ಯೋಗವನ್ನು ಡಿ. ಬಿ. ಪತ್ತಾರ ಅವರಿಂದ ಪಡೆದುಕೊಂಡರು. ವಿಜ್ಞಾನ ವಿಷಯದ ಬೋಧನೆಯಲ್ಲಿ ಅವರು ಅಸಮಾನ್ಯರು. ಅವರ ಪಾಠ ಬೋಧನೆಯನ್ನು ಕುರಿತು ಮುಗಳಖೋಡದ ಸಿ. ಬಿ. ಕುಲಿಗೋಡ "ಇಲ್ಲಿಯವರೆಗೂ ಹೊಸುರ ಸರ್ ಅವರಂತೆ ವಿಜ್ಞಾನ ವಿಷಯವನ್ನು ಬೊಧನೆ ಮಾಡುವ ಶಿಕ್ಷಕರನ್ನು ನಾನು ಈ ಭಾಗದಲ್ಲಿ ನೋಡಿಲ್ಲ."[೨೬] ಎಂಬ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ಅಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಬಾಹ್ಯ ವಿದ್ಯಾರ್ಥಿಯಾಗಿ ಕನ್ನಡ ಪ್ರಧಾನ ವಿಷಯವನ್ನಾಗಿ ಆಯ್ಕೆಮಾಡಿಕೊಂಡು ಬಿ. ಎ. ಪದವಿಯನ್ನು ಸಂಪಾದಿಸಿಕೊಂಡರು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕನ್ನಡ ಅಧ್ಯಯನ ಪೀಠದಲ್ಲಿ ಎಂ. ಎ. ಅಧ್ಯಯನ ಆರಂಭಸಿದರು. ಅಲ್ಲಿ ನಡೆದ ಭಾಷಣ, ಸಂವಾದ, ಚರ್ಚಾಕೂಟ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬಹುಮುಖ ವ್ಯಕ್ತಿತ್ವವನ್ನು ಪ್ರದರ್ಶಿಸಿ ಪ್ರಾಧ್ಯಾಪಕರ ಪ್ರೀತಿ ವಿಶ್ವಾಸವನ್ನು ಗಳಿಸಿದರು. ಎಂ. ಎ. ಅಂತಿಮ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವಾಗ ಕರ್ನಾಟಕ ಸಂಘದ' ಕಾರ್ಯದರ್ಶಿಯಾಗಿ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು. ಎಂ. ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದರು.

೧೯೭೦ ರಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡ ನಂತರ ಶಿಕ್ಷಣ ಪ್ರಸಾರಕ ಮಂಡಳಿಯ ವತಿಯಿಂದ ನಡೆಯಿತ್ತಿದ್ದ ಪದವಿ-ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ನಂತರದಲ್ಲಿ ಆರಂಭಗೊಂಡ ಪದವಿ ಕಾಲೇಜಿನ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದರು.

ಸೇವಾ ಅವಧಿಯಲ್ಲಿ "ತಮ್ಮ ಘನತೆ ಗೌರವಗಳನ್ನು ಜತನದಿಂದ ಕಾಪಾಡಿಕೊಂಡವರು. ಸ್ವಾಭಿಮಾನದಿಂದ ಬಾಳಿದವರು. ತೂಕದಿಂದ ಬದುಕಿದವರು. ತಮ್ಮ ಘನತೆಗೆ ಕುಂದು ಬರಲಿದೆ, ಸ್ವಾಭಿಮಾನಕ್ಕೆ ಧಕ್ಕೆಯಾಗಲಿದೆ ಎಂದರೆ ಸಹಿಸುತ್ತಿರಲಿಲ್ಲ. ಸ್ವತಂತ್ರವಾಗಿ ಯೋಗ್ಯ ತೀರ್ಮಾನ ಕೈಗೊಳ್ಳಲು ಅಸಾಧ್ಯವಾದಾಗಲೂ, ಆತ್ಮಾಭಿಮಾನ ಅಡವಿಟ್ಟು ಕಾಟಾಚಾರಕ್ಕಾಗಿ ಕಾರ್ಯ ನಿರ್ವಹಿಸಿದವರಲ್ಲ. ಯಾವೊಂದು ಅಪರಾಧಿ ಪ್ರಕರಣಗಳು ಇಲ್ಲದಿದ್ದರೂ ತಮ್ಮ ಯೋಗ್ಯ ನಿರ್ಧಾರಗಳಿಗೆ ಮಾನ್ಯತೆ ಲಭಿಸುವುದಿಲ್ಲವೆನಿಸಿದಾಗ ಒಂದು ಕ್ಷಣವೂ ಆ ಹುದ್ದೆಯಲ್ಲಿ ಮುಂದುವರಿಯಲು ಬಯಸಿದವರಲ್ಲ."[೨] ಇವರು ಪರಿಶ್ರಮದ ಪ್ರತೀಕವಾಗಿದ್ದರು. ಆಲಸಿ, ಮೈಗಳ್ಳರನ್ನು ಕಂಡರೆ ಸಹಿಸುತ್ತಿರಲಿಲ್ಲ. ಅವರು ಕೈಕೊಂಡ ಕೆಲವು ನೇರ ಮತ್ತು ದಿಟ್ಟ ತೀರ್ಮಾನಗಳು ಕೆಲವರ ಅಸಮಾಧಾನಕ್ಕೆ ಕಾರಣವಾಗಿರಬಹುದು. ಆದರೆ ಅವುಗಳು ಸಾತ್ವಿಕ ಮತ್ತು ದೂರಗಾಮಿ ವಿಚಾರಗಳಾಗಿದ್ದವು. 'ಖಂಡಿತವಾದಿ ಲೋಕ ವಿರೋಧಿ' ಎಂಬ ಉಕ್ತಿ ಸರ್ವಥಾ ಇವರಿಗೆ ಅನ್ವಯವಾಗುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಸುಮಾರು ಮೂವತ್ತು ವರ್ಷಗಳವರೆಗೆ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಇವರು ೦೧-೦೧-೯೯೪ಳ ರಂದು ತಾತ್ವಿಕ ಕಾರಣಗಳಿಂದಾಗಿ ಮೂರುವರೆ ವರ್ಷಗಳ ಸೇವಾ ಅವಧಿಗೆ ಮುನ್ನವೇ ನಿವೃತ್ತರಾದರು. ನಿವೃತ್ತಿಯನ್ನು ಹಿಂಪಡೆದು ಸೇವೆಯಲ್ಲಿ ಮುಂದುವರಿಯಬೇಕೆಂಬ ಒತ್ತಾಯ ಬಂದರು ಕೂಡ ತಮ್ಮ ವಿಚಾರದಿಂದ ಹಿಂದೆ ಸರಿಯಲಿಲ್ಲ. ಸ್ವಾಭಿಮಾನದ ಬದುಕು ಅವರನ್ನು ನಿವೃತ್ತಿಯಂಚಿಗೆ ತಂದು ಗೌರವ, ಸಾತ್ವಿಕ ಮತ್ತು ಸಮಾಧಾನದ ಬದುಕಿಗೆ ಪ್ರೇರೇಪಿಸಿತು. ನಿವೃತ್ತಿಯ ನಂತರ ಶಿಕ್ಷಣ ಪ್ರಸಾರಕ ಮಂಡಳಿಯ ಆಡಳಿತಾಧಿಕಾರಿಯಾಗಿ ನೇಮಕಗೊಂಡು ಹಲವು ವರ್ಷ ಸೇವೆ ಸಲ್ಲಿಸಿದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಕನಕ ಅಧ್ಯಯನ ಪೀಠ' ಸ್ಥಾಪನೆಯಾದ ಮೇಲೆ ಅದರ ಸಂಯೋಜಕರಾಗಿ ೦೩-೦೧-೨೦೦೨ ರಂದು ನೇಮಕಗೊಂಡರು. ವಿಶ್ವ ವಿದ್ಯಾಲಯದ ಮಟ್ಟದಲ್ಲಿ ಸೇವೆ ಸಲ್ಲಿಸುವ ಅವಕಾಶ ಜ್ಯೋತಿ ಹೊಸೂರ ಸರ್ ಇವರಿಗೆ ಸಿಗಬೇಕೆಂದು ಆಶಿಸುತ್ತಿದ್ದ ಅಭಿಮಾನಿ ಬಳಗಕ್ಕೆ ಈ ನೇಮಕಾತಿಯಿಂದ ಸಮಾಧಾನವಾಯಿತು. ಬಹುದಿನಗಳ ಕನಸು ನನಸಾಯಿತು. ೦೪-೦೯-೨೦೦೪ರ ವರೆಗೆ ಯಶಸ್ವಿಯಾಗಿ ತಮ್ಮ ಕಾರ್ಯಭಾರವನ್ನು ಮಾಡಿ ನಯವಾಗಿಯೇ ತಮ್ಮ ಹುದ್ದೆಯನ್ನು ತ್ಯಜಿಸಿದರು. ಇನ್ನೂ ಕೆಲವು ಕಾಲ ಈ ಹುದ್ದೆಯಲ್ಲಿ ಮುಂದುವರೆಯಬೇಕೆಂದು ವಿಶ್ವವಿದ್ಯಾಲಯ ಬಯಸಿದಾಗ ಮಾಡಲು ಸಾಕಷ್ಟು ಕೆಲಸವಿಲ್ಲದೆ ಕೈ ತುಂಬ ಸಂಪಾದನೆ ಪಡೆಯುವುದು ಗೌರವವಾದುದಲ್ಲವೆಂದು ಅದರಿಂದ ನಿವೃತ್ತಿಯಾದರು.

ಜ್ಯೋತಿ ಹೊಸೂರ ಅವರದು ವಿಶಿಷ್ಟವಾದ ವ್ಯಕ್ತಿತ್ವ. "ದೇವರನ್ನು ನಂಬದ, ದೈವವನ್ನು ನಚ್ಚದ ಪುರುಷ ಪ್ರಯತ್ನವನ್ನೇ ಸರ್ವಥಾ ಸಾಧನವೆಂದು ಭಾವಿಸುವ ವ್ಯಕ್ತಿ. 'ನಾನು ನಾಸ್ತಿಕನೂ ಅಲ್ಲ, ಆಸ್ತಿಕನೂ ಅಲ್ಲ'ವೆನ್ನುವ ಪ್ರಜ್ಞಾವಂತ. ದಣಿವರಿಯದ ದುಡಿಮೆಯಿಂದ, ಹಂತ-ಹಂತವಾಗಿ ಏರೆತ್ತರ ತಲುಪಿದ ಚೈತನ್ಯ. ಶ್ರಮ ಸಂಸ್ಕೃತಿಯ ವಕ್ತಾರ. ಹಳ್ಳಿಗಳು ಸುಧಾರಿಸಬೇಕು. ಗ್ರಾಮೀಣ ಜನರ ಜೀವನ ಉದ್ಧಾರವಾಗಬೇಕೆಂದು ಕನಸು ಕಾಣುವಾತ. ಗಾಂಧೀಜಿಯವರ ಉದಾರ ಮಾನವತಾವಾದದ ಪ್ರಭಾವದಿಂದ ರೂಪುಗೊಂಡ ಆದರ್ಶ ವ್ಯಕ್ತಿತ್ವ, ಚಿಂತನಶೀಲ, ಪ್ರಖರ ವೈಚಾರಿಕ ನಿಲುವಿನ ಮುನುಷ್ಯ. ವೈಚಾರಿಕ ಪ್ರಜ್ಞೆ, ವೈಜ್ಞಾನಿಕ

ಮನೋಧರ್ಮವನ್ನು ಅಳವಡಿಸಿಕೊಂಡವರು. ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕಾರ್ಯವನ್ನು ಏಕವ್ಯಕ್ತಿ ನೆಲೆಯಲ್ಲಿ ಸಾಧಿಸಿರುವ ಧೀಮಂತ. ಸಂಪಾದನೆ, ಪ್ರಕಟನೆ, ಸಂಘಟನೆ, ಪ್ರಕಾಶನ ಮುಂತಾಗಿ ಓಡಾಡಿಕೊಂಡವರು. ನಿರಂತರ ಪ್ರವಾಹದ ವಿರುದ್ಧ ಸೆಣಸಾಡಿದ ಧೀರೋದಾತ್ತ ಪುರುಷ. ಜನಪದ ನಿಲುವಿನ ಸಮಾಜಪರ ಒಲವಿನ, ದೇಶಿ ಚಿಂತಕ.[೨೮] ಸಾಹಿತ್ಯ ವಲಯದಲ್ಲಿ ವಿಶೇಷ ಮನ್ನಣೆ ಪಡೆದವ ಇವರು ನಿಜವಾಗಿಯೂ ತಾಯಿ ಸರಸ್ವತಿಯ ಮುಂದಿರುವ ಜ್ಯೋತಿ ಎಂದರೆ ತಪ್ಪಾಗಲಿಕ್ಕಿಲ್ಲ. ಇವರದು ಜಾನಪದ ಕ್ಷೇತ್ರವಾದರೂ ಇರತ ಕ್ಷೇತ್ರಗಳಲ್ಲಿಯೂ ಅಪಾರ ಸೇವೆ ಸಲ್ಲಿಸಿರುವರು. ಇವರ ಕಾವ್ಯನಾಮ ಜ್ಯೋತಿ ಹೊಸೂರ.

ಸುಮಾರು ಐವತ್ತು ವರ್ಷಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಇವರು ಜನಪದ ಸಂಗ್ರಹ, ಸಂಪಾದನೆ, ವಿಮರ್ಶೆ, ಸಂಶೋಧನೆ, ಪ್ರಕಾಶನ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು. ರಾಜ್ಯ ಮಟ್ಟದ ಜನಪದ ಸಮ್ಮೇಳನಗಳಲ್ಲಿ, ವಿಶ್ವವಿದ್ಯಾಲಯ ಮಟ್ಟದಲ್ಲಿ ಹಮ್ಮಿಕೊಂಡ ವಿದ್ವತ್‌ಪೂರ್ಣ ಗೋಷ್ಠಿಗಳಲ್ಲಿ, ಪ್ರಥಮ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮುಂತಾದ ಪ್ರತಿಷ್ಠಿತ ಗೋಷ್ಠಿಗಳಲ್ಲಿ ಪ್ರಬುದ್ಧ ಪ್ರಬಂಧಗಳನ್ನು ಮಂಡಿಸಿ ಸಾರಸ್ವತಲೋಕದ ಮನ್ನಣೆ ಪಡೆದಿರುವರು. ಪ್ರಬುದ್ಧ ವೈಚಾರಿಕ ವಾಗ್ಮಿಗಳೆಂದು ಪ್ರಸಿದ್ಧಿ ಪಡೆದವರು. ತರ್ಕಬದ್ಧವಾಗಿ ಮಾತನಾಡುವುದು ಅವರ ಇನ್ನೊಂದು ಶೈಲಿಯಾಗಿದೆ. ಅಖಂಡ ಏಪ್ಪತ್ತು ವರ್ಷಗಳ ಜೀವನಾನುಭವ, 'ಐವತ್ತು ವರ್ಷಗಳ ಸಾಹಿತ್ಯ ಸೇವಾನುಭವಗಳಿಂದಾಗಿ ಹಲವಾರು ಕೃತಿಗಳನ್ನು ರಚಿಸಿ, ಪ್ರಕಟಿಸಿ, ಪ್ರಕಾಶಿಸಿ ಸಾರಸ್ವತ ಲೋಕಕ್ಕೆ ಕಾಣಿಕೆಯಾಗಿ ಕೊಡಮಾಡಿದ್ದಾರೆ.

ಪ್ರೊ. ಜ್ಯೋತಿ ಹೊಸೂರ ಅವರ ಕೃತಿಗಳು

ಜಾನಪದ ಕೃತಿಗಳು

೧) ಬೆರೆಸಿ ಇಟ್ಟೇನ ಬೆಲ್ಲ ನೆನಗಡಲಿ (೧೯೬೯) (ಜನಪದ ತ್ರಿಪದಿ ಸಂಪಾದನೆ)

೨) ಹೆಸರ ಹೇಳ್ತೀನಿ ಒಡಪಕಟ್ಟಿ (೧೯೭೧) (ಜಾನಪದ ಒಡಪುಗಳ ಸಂಪಾದನೆ)

೩) ಡೊಳ್ಳಿನ ಹಾಡುಗಳ ಸಮೀಕ್ಷೆ (೨೦೦೩) (ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಹಿನ್ನೆಲೆ ಮತ್ತು ಸಂಗ್ರಹಗಳ ಹಾಗೂ ಲೇಖನಗಳ ಸಮೀಕ್ಷೆ)

ವಿಮರ್ಶೆ ಮತ್ತು ಸಂಶೋಧನಾ ಕೃತಿಗಳು

೪) ಜಾನಪದ ಉಪಾಸನೆ (೧೯೮೧) (ಸಂಶೋಧನಾತ್ಮಕ- ವಿಮರ್ಶಾತ್ಮಕ ಲೇಖನಗಳ ಸಂಗ್ರಹ)

೫) ಕನಕದಾಸ ಜೀವನ ವಿಚಾರ (೧೯೮೩) (ಸಂಶೋಧನಾತ್ಮಕ ಚರಿತ್ರೆ)

೬) ಜಾತಿಗಾರರ ಜಾತಕ (೧೯೮೫) (ಜನಪದ ವೃತ್ತಿ ಕಲಾವಿದರ ಸಾಂಸ್ಕೃತಿಕ ಅಧ್ಯಯನ)

೭) ಜಾನಪದ ಕುರಿತು (೧೯೮೬) (ಸಂಶೋಧನಾತ್ಮಕ- ವಿಮರ್ಶಾತ್ಮಕ ಲೇಖನಗಳ ಸಂಕಲನ)

೮) ಸತ್ಯಾನ್ವೇಷಕ ಡಾ. ಶಂ. ಬಾ. ಜೋಶಿ (೨೦೦೦) (ಜೀವನ ಮತ್ತು ಕೃತಿಗಳ ಸಮಗ್ರ ಪರಿಚಯ)

೯) ಸೇವಾಭಾವದ ಹೋರಾಟಗಾರ (೨೦೦೨) (ಶ್ರೀ ಜಿ. ಎಸ್. ಹಿಟ್ಟಣಗಿ ಯವರ ಜೀವನ ಸಾಧನೆ)

೧೦) ಸಾತ್ವಿಕ ಸಾಹಿತಿ ಡಾ॥ ಬೆಟಗೇರಿ ಕೃಷ್ಣಶರ್ಮ (೨೦೦೪) (ಜೀವನ ಕಾರ್ಯಗಳ ನಿರೂಪಣೆ)

೧೧) ಭ್ರಮೆಗಳ ಮೇಲೆ ಬೆಳಕು (೨೦೦೫) (ವೈಚಾರಿಕ ಲೇಖನಗಳ ಸಂಕಲನ)

೧೨) ಅಂತಃಸತ್ತ್ವದ ಸಾಧಕ ಕನಕದಾಸ (೨೦೦೬) (ವ್ಯಕ್ತಿತ್ವದ ಚಿತ್ರಣ)

೧೩) ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು (೨೦೦೭) (ಜಾನಪದ ಕ್ಷೇತ್ರಗಳ ಮತ್ತು ಸಾಧಕರ ಪರಿಚಯ)

೧೪) ಸಂಗೊಳ್ಳಿ ರಾಯಣ್ಣ ವ್ಯಕ್ತಿತ್ವ ಚಿತ್ರಣದ ಹಿತಾಸಕ್ತಿಗಳು (೨೦೧೦) (ರಾಯಣ್ಣನ ಚರಿತ್ರೆಕಾರರ ಆಶಯಗಳ ವಿಶ್ಲೇಷಣೆ)

ಸಂಪಾದನಾ ಗ್ರಂಥಗಳು

೧೫) ಸ್ನೇಹ ಸಂಪದ (೧೯೯೬) ಕವಿ ಬಿ. ಎ. ಸನದಿಯವರ ಅಭಿನಂದನಾ ಸಂಪುಟ

೧೬) ಶಂಕರಾಭಿನಂದನ (೧೯೯೯) ಶ್ರೀ ಎಸ್. ಬಿ. ಪಾಟೀಲರ ಸಂಭಾವನ ಗ್ರಂಥ

೧೭) ಶಿವಶರಣ ಕ್ರಾಂತಿಕಾರಿ ಮೌಲಿಕ ವಚನಗಳು (೨೦೦೨) ವಿಷಯಾಧಾರಿತವಾಗಿ ವಿಭಾಗಿಸಿ ಆಯ್ದ ವಚನಗಳ ಸಂಪಾದನೆ

೧೮) ದತ್ತಗೌರವ (೨೦೦೪) ಡಿ. ಬಿ. ಪತ್ತಾರ ಸಂಭಾವನಾ ಗ್ರಂಥ

ಇತರರೊಂದಿಗೆ ಸಂಪಾದನೆ

೧) ಹೀಚು ಹಣ್ಣು (೧೯೭೯) (ಕಥಾ ಸಮಕಲನ)

೨) ಬೆಳುವಲ (೧೯೮೨) (ಡಾ. ಬೇಟಗೇರಿ ಕೃಷ್ಣಶರ್ಮ ಅಭಿನಂದನ ಗ್ರಂಥ)

೩) ಕವಿಭೂಷಣ (೧೯೮೨) (ಡಾ. ಬೇಟಗೇರಿ ಸತ್ಕಾರ ಸಂಸ್ಮರಣ ಸಂಚಿಕೆ)

೪) ಪ್ರಜ್ಞಾಪ್ರಕಾಶ (೧೯೮೫) (ಸಂಸ್ಮರಣ ಸಂಚಿಕೆ)

ಪುಸ್ತಕ ಪ್ರಕಾಶನ

೧) 'ಜಾನಪದ ಮಂಟಪ' ಹೆಸರಿನಲ್ಲಿ ಸ್ವರಚಿತ ಏಳು ಮತ್ತು ಇತರರ ಐದು ಒಟ್ಟು ಹನ್ನೆರಡು ಜಾನಪದ ಗ್ರಂಥಗಳ ಪ್ರಕಟಣೆ.

೨) 'ಕಾಲಗತಿ ಪ್ರಕಾಶನ ರಾಯಬಾಗ' ಸ್ವರಚಿತ ಹನ್ನೊಂದು ಮತ್ತು ಇತರರ ಹನ್ನೊಂದು ಒಟ್ಟು ಇಪ್ಪತ್ತೆರಡು ಗ್ರಂಥಗಳ ಪ್ರಕಟಣೆ.

ಪಡೆದುಕೊಂಡ ಪ್ರಶಸ್ತಿಗಳು

೧) **ಜಾನಪದ ತಜ್ಞ ಪ್ರಶಸ್ತಿ :**

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೯ ನೇ ವರ್ಷದ

'ಜಾನಪದ ಪ್ರಶಸ್ತಿ' ದಿ. ೨೯-೦೧-೧೯೯೦ ಸ್ವೀಕಾರ.

೨) **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ :**

ಜಾನಪದ ಮತ್ತು ಯಕ್ಷಗಾನ ವಿಭಾಗದಿಂದ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಮುಖ್ಯ ಮಂತ್ರಿಗಳಿಂದ ದಿ. ೦೧-೧೧-೨೦೦೨ ರಂದು ಸ್ವೀಕಾರ.

೩) **ಪ್ರತಿಭಾ ಪುರಸ್ಕಾರ :**

ಬೆಳಗಾವಿಯ ಶ್ರೀ ನಾಗನೂರ ಮಹಾಸ್ವಾಮಿಗಳ ಶ್ರೀ ರುದ್ರಾಕ್ಷಿಮಠದಿಂದ 'ಪ್ರತಿಭಾ ಪುರಸ್ಕಾರ ಪ್ರಶಸ್ತಿ'ಯನ್ನು ದಿ. ೦೮-೧೨-೨೦೦೨ ರಂದು ಸ್ವೀಕಾರ.

೪) **ಸಿರಿಗನ್ನಡ ಪ್ರಶಸ್ತಿ :**

ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನದ ೨೦೦೪ನೇ 'ಸಿರಿಗನ್ನಡ ಪ್ರಶಸ್ತಿ'ಯನ್ನು ದಿ. ೨೦-೦೨-೨೦೦೫ ರಂದು ಸ್ವೀಕಾರ.

ಗೌರವದ ಸ್ಥಾನಮಾನಗಳು :

೧) ಹಾರೂಗೇರಿಯಲ್ಲಿ ದಿ. ೧೩-೦೪-೨೦೦೧ ರಂದು ಜರುಗಿದ ರಾಯಬಾಗ ತಾಲೂಕಾ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ.

೨) ಗದಗದಲ್ಲಿ ದಿ. ೩ ಮತ್ತು ೪ ನೇ ಮಾರ್ಚ ೨೦೦೮ ರಂದು ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಗದಗ ಜಿಲ್ಲಾ ಕುರುಬರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ 'ಪ್ರಥಮ ಹಾಲುಮತ ಸಂಸ್ಕೃತಿ ಸಮ್ಮೇಳನ'ದ ಸರ್ವಾಧ್ಯಕ್ಷತೆ.

ಗೌರವ ಸದಸ್ಯತ್ವಗಳು :

೧) ಕರ್ನಾಟಕ ಸರ್ಕಾರದಿಂದ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು' ಸದಸ್ಯರೆಂದು ನಾಮಕರಣ. ೧೯೯೨ ರಿಂದ ೧೯೯೫ ಸೇವಾ ಅವಧಿ.

೨) ಧಾರವಾಡ ಆಕಾಶವಾಣಿ ಕೇಂದ್ರಕ್ಕೆ 'ಜಾನಪದ ಕಲಾವಿದರ ಧ್ವನಿಪರಿಕ್ಷಾ ಸಮಿತಿಯ ಸದಸ್ಯ'ರೆಂದು ನಾಮಕರಣ. ೧೯೯೧-೧೯೯೩ ಮತ್ತು ೨೦೦೯-೨೦೧೧ ಸೇವಾ ಅವಧಿ.

೩) ಕರ್ನಾಟಕ ರಾಜ್ಯಪಾಲರಿಂದ 'ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ' ಸಿನೆಟ್ ಸದಸ್ಯರೆಂದು ನಾಮಕರಣ. ೧೯೯೬-೧೯೯೯ ಸೇವಾ ಅವಧಿ.

೪) ಕರ್ನಾಟಕ ಸರ್ಕಾರದಿಂದ 'ದೇವರಾಜ ಅರಸು ಸಂಶೋಧನಾ ಸಂಸ್ಥೆ ಬೆಂಗಳೂರು' ಸಲಹಾ ಮಂಡಳಿ ಸದಸ್ಯರೆಂದು ನಾಮಕರಣ. ೧೯೯೭ ರಿಂದ ೨೦೦೫ ಸೇವಾ ಅವಧಿ.

೫) ಕರ್ನಾಟಕ ಸರ್ಕಾರದಿಂದ 'ರಾಜ್ಯ ಗ್ರಂಥಾಲಯ ಇಲಾಖೆ'ಯ ಗ್ರಂಥಾಲಯಗಳ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಸದಸ್ಯರಾಗಿ ನೇಮಕ. ೨೦೦೧-೨೦೦೫ ಸೇವಾ ಅವಧಿ.

೬) ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 'ಕನಕದಾಸರ ಕಾಗಿನೆಲೆ ಅಭಿವೃದ್ಧಿ ಟ್ರಸ್ಟ'ನ ಸದಸ್ಯರಾಗಿ ೨೦೦೨ ರಂದು ನೇಮಕ

೭) ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಿಂದ ಡಾ. ಶಂ. ಬಾ. ಜೋಶಿ ಅಧ್ಯಯನ ಪೀಠದ ಸಲಹಾ ಸಮಿತಿ ಸದಸ್ಯರಾಗಿ ೨೦೦೨ ರಂದು ನೇಮಕ.

೮) ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ರಚನೆಗಾಗಿ, ರಚಿಸಲಾದ ಸಮಿತಿ ಸದಸ್ಯರಾಗಿ ನೇಮಕ ಮತ್ತು ೨೦೦೫ ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಕೆ.

ಹೀಗೆ ಹತ್ತು-ಹಲವಾರು ಕಾರ್ಯ ಸಾಧನೆಯ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದವರು ಜ್ಯೋತಿ ಹೊಸೂರ. ಅವರ ಹೆಸರಿನಲ್ಲೇ ಜ್ಯೋತಿ ಇರುವುದು ಇನ್ನೊಂದು ವಿಶೇಷ. ಜ್ಯೋತಿ ಅಂದರೆ ಜ್ಞಾನ, ಬೆಳಕು, ಪ್ರಕಾಶ ಯಶಸ್ಸು, ಪ್ರಸಿದ್ಧಿ ಮೊದಲಾದ ಅರ್ಥಗಳ ಪ್ರತಿರೂಪ. ಇಂತಹ ಬಹುಮುಖ ವ್ಯಕ್ತಿತ್ವದ ವಿವಿಧ ಮಗ್ಗಲುಗಳನ್ನು ಪರಿಚಯಿಸುವ ಪುಟ್ಟ ಪ್ರಯತ್ನವಿದು.

೫.೨.೨.೨ ಗುರುಸಿದ್ದಪ್ಪಾ ಸಿದ್ದಲಿಂಗಪ್ಪಾ ಬಾಣಸಿ :

ಗುರುಸಿದ್ದಪ್ಪ ಸಿದ್ದಲಿಂಗಪ್ಪಾ ಬಾಣಸಿಯವರು ಚಿಕ್ಕ ಮಕ್ಕಳ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡಿದ್ದು ಶಿಕ್ಷಕರಾಗಿ ಶೈಕ್ಷಣಿಕ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದವರು. ತಂದೆ ಸಿದ್ದಲಿಂಗಪ್ಪಾ, ತಾಯಿ ಕಲ್ಲವ್ವಾ ಈ ದಂಪತಿಗಳ ಉದರದಲ್ಲಿ ದಿನಾಂಕ ೦೪-೦೧-೧೯೩೪ ರಂದು ಬೆಕ್ಕೇರಿ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಂಡ ಇವರು ೧೯೫೦ ರಲ್ಲಿ ಮುಲ್ಕಿ ಪರೀಕ್ಷೆಯನ್ನು ಪಾಸಾದರು. ೦೮-೦೪-೧೯೫೨ ರಲ್ಲಿ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಸೇವೆ ಆರಂಭಿಸಿದರು. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರಿಂದ ಚಿಕ್ಕ ಮಕ್ಕಳ ಜೊತೆ ಅವರ ಒಡನಾಟ ಅನಿವಾರ್ಯವಾಗಿತ್ತು. ಹೀಗಾಗಿ ಮಕ್ಕಳ ಕುರಿತಾದ ಸಾಹಿತ್ಯಕ್ಕೆ ಅವರನ್ನು ಪ್ರೇರೆಪಿಸಿತು. ಸರಳ ಮತ್ತು ಸಾತ್ವಿಕ ಸ್ವಭಾವದ ಇವರು ಸುಮಾರು ೪೦ ವರ್ಷಗಳವರೆಗೆ ಶಿಕ್ಷಕರಾಗಿ ಸುಧೀರ್ಘ ಸೇವೆಯನ್ನು ಮಾಡಿ ೩೦-೦೪-೧೯೯೨ ರಂದು ನಿವೃತ್ತಿ ಹೊಂದಿರುವರು.

ಸುಮಾರು ನಲವತ್ತು ವರ್ಷಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಇವರು ಚಿಕ್ಕ ಮಕ್ಕಳ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ವಿಶೇಷ. ವಿಭಾಗ ಮತ್ತು ಜಿಲ್ಲಾ ಮಟ್ಟದ ಚಿಕ್ಕ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಮತ್ತು ಇತರ ಸಾಹಿತ್ಯ ಸಮ್ಮೇಳನದಲ್ಲಿ ಮುಂತಾದ ಪ್ರತಿಷ್ಠಿತ ಗೋಷ್ಠಿಗಳಲ್ಲಿ ಕಾವ್ಯ ಮತ್ತು ಪ್ರಬಂಧಗಳನ್ನು ಮಂಡಿಸಿ ಸಾರಸ್ವತಲೋಕದ ಮನ್ನಣೆ ಪಡೆದಿರುವರು. ಸರಳ ಮತ್ತು ವಿನಯತೆಯನ್ನು ಮೈಗೂಡಿಸಿಕೊಂಡವರು. ಅಖಂಡ ಎಂಭತ್ತು ವರ್ಷಗಳ ಜೀವನಾನುಭವ, ಐವತ್ತು ವರ್ಷಗಳ ಸಾಹಿತ್ಯ ಸೇವಾನುಭವಗಳಿಂದಾಗಿ ಹಲವಾರು ಕೃತಿಗಳನ್ನು ರಚಿಸಿ, ಪ್ರಕಾಶಿಸಿ ಸಾರಸ್ವತ ಲೋಕಕ್ಕೆ ಕಾಣಿಕೆಯಾಗಿ ಕೊಡಮಾಡಿದ್ದಾರೆ.

ಸಾಹಿತ್ಯ ಸೇವೆ (ಪ್ರಕಟಿತ ಕೃತಿಗಳು)

೧) ಇವರ ಪ್ರಥಮ ಲೇಖನ **'ಸ್ವಾಮಿ ಬಾಹುಬಲಿ'**. ಇದು ಶ್ರೀ ಬುಜೇಂದ್ರ ಮಹೀಶವಾಡಿ (ಲಿಂಗರಾಜ ಕಾಲೇಜು ಬೆಳಗಾವಿ) ಅವರು ಸಂಪಾದಿಸಿದ 'ಗೊಮ್ಮಟ ಸ್ಮೃತಿ' ಎಂಬ ಪುಸ್ತಕದಲ್ಲಿ ಪ್ರಕಟವಾಗಿದೆ.

೨) **'ನವಿಲುಗರಿ'** (ಮಕ್ಕಳ ಕವನ ಸಂಕಲನ) ಪ್ರಕಾಶನ, ಮಕ್ಕಳ ಸಾಹಿತ್ಯ ವೇದಿಕೆ ಬೆಕ್ಕೇರಿ ಇವರಿಂದ ೨೦೦೪ ರಲ್ಲಿ ಪ್ರಕಟವಾಗಿದೆ.

೩) **'ಕಾಡಿನ ಹಕ್ಕಿ'** (ಮಕ್ಕಳ ಕವನ ಸಂಕಲನ) ಪ್ರಕಾಶನ, ಮಕ್ಕಳ ಸಾಹಿತ್ಯ ವೇದಿಕೆ ಬೆಕ್ಕೇರಿ ಇವರಿಂದ ೨೦೦೫ ರಲ್ಲಿ ಪ್ರಕಟವಾಗಿದೆ.

೪) **'ಹೊನ್ನ ಗರಿಗಳು'** (ಮಕ್ಕಳಿಗಾಗಿ ಮೇರು ವ್ಯಕ್ತಿಗಳ ಜೀವನ ಚರಿತ್ರೆಯ ವಿಹಂಗಮ ನೋಟ) ಪ್ರಕಾಶನ, ಮಕ್ಕಳ ಸಾಹಿತ್ಯ ವೇದಿಕೆ ಬೆಕ್ಕೇರಿ ಇವರಿಂದ ೨೦೦೬ ರಲ್ಲಿ ಪ್ರಕಟವಾಗಿದೆ.

೫) **'ಕಥಾ ಕಣಜ'** (ಕರ್ನಾಟಕ ರಾಜ್ಯ ಪ್ರಾತಿನಿಧಿಕ ಕಥಾ ಸಂಕಲನ) ಪ್ರಕಾಶನ, ಮಕ್ಕಳ ಸಾಹಿತ್ಯ ವೇದಿಕೆ ಬೆಕ್ಕೇರಿ ಇವರಿಂದ ೨೦೧೨ರಲ್ಲಿ ಪ್ರಕಟವಾಗಿದೆ.

೬) **'ಕಾವ್ಯ ವಲ್ಲರಿ'** (ಕರ್ನಾಟಕ ರಾಜ್ಯ ಪ್ರಾತಿನಿಧಿಕ ಕವನ ಸಂಕಲನ) ಪ್ರಕಾಶನ, ಮಕ್ಕಳ ಸಾಹಿತ್ಯ ವೇದಿಕೆ ಬೆಕ್ಕೇರಿ ಇವರಿಂದ ೨೦೧೨ ರಲ್ಲಿ ಪ್ರಕಟವಾಗಿದೆ.

ಪಡೆದು ಕೊಂಡ ಪ್ರಶಸ್ತಿಗಳು :

೧) **'ನವಿಲು ಗರಿ'** ಕೃತಿಗೆ ಕರ್ನಾಟಕ ಸರ್ಕಾರದ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರಿಂದ **'ಕನ್ನಡ ಪುಸ್ತಕ ಸೊಬಗು'** ಪ್ರಶಸ್ತಿ ಫಲಕ ಮತ್ತು ೫೦೦೦/- ರೂ. ಗಳ ನಗದು ಬಹುಮಾನ ದಿ : ೧೫-೧೨-೨೦೦೫ ರಂದು ಗುಬ್ಬಿ ವಿರಣ್ಣ ಕಲಾ ಕ್ಷೇತ್ರ ತುಮಕೂರದಲ್ಲಿ ನೀಡಿ ಗೌರವಿಸಲಾಯಿತು.

೨) ಮಕ್ಕಳ ಸಾಹಿತ್ಯ ವೇದಿಕೆ ಜಿಲ್ಲಾ ಘಟಕ ಬೆಳಗಾವಿ (ಅಥಣಿ) ಇವರು ೨೦೦೬ ರಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

೩) ಎಸ್. ಟಿ. ಎಲ್. ಸಮಾಜ ಸೇವಾ ಸಂಸ್ಥೆ (ರಿ) ಪ್ರತಿಷ್ಠಾನವು, ರಾಜ್ಯ ಮಟ್ಟದ **'ಗುರು ತಿಲಕ'** ಪ್ರಶಸ್ತಿಯನ್ನು ಯಲಬುರ್ಗಾ ಜಿಲ್ಲೆಯ ಕೊಪ್ಪಳದಲ್ಲಿ ದಿನಾಂಕ : ೦೫-೦೮-೨೦೦೮ ರಂದು ನೀಡಿ ಗೌರವಿಸಲಾಯಿತು.

೪) ಸೃಷ್ಠಿ ಶಕ್ತಿ ಸಂಸ್ಥೆ (ರಿ) ಬೆಂಗಳೂರು ಇವರು ದಿನಾಂಕ : ೩೧-೧೨-೨೦೧೧ ರಂದು ರವೀಂದ್ರ ಕಲಾ ಕ್ಷೇತ್ರ ಬೆಂಗಳೂರು ರಲ್ಲಿ 'ಚಿಕ್ಕ ಮಕ್ಕಳ ಸಾಹಿತಿ' ಪ್ರಶಸ್ತಿ ಪತ್ರ ನೀಡಿ ಸತ್ಕರಿಸಲಾಯಿತು.

೫) ಸ್ವಾತಂತ್ರ ಸೇನಾನಿ ಶ್ರೀ ವಸಂತರಾವ ಪಾಟೀಲ ಅವರ ಹುಟ್ಟು-ಹಬ್ಬದ ನಿಮಿತ್ಯ 'ರಾಷ್ಟ್ರದ ಪ್ರಶಸ್ತಿ'ಯನ್ನು ದಿನಾಂಕ : ೩೧-೦೭-೨೦೧೬ ರಂದು ರಾಯಬಾಗದಲ್ಲಿ ನೀಡಿ ಸನ್ಮಾನಿಸಲಾಯಿತು.

ಪುಸ್ತಕ ಪ್ರಕಾಶನ

೧) 'ಮಕ್ಕಳ ಸಾಹಿತ್ಯ ವೇದಿಕೆ' ಬೆಕ್ಕೇರಿ, ಹೆಸರಿನಲ್ಲಿ ಸ್ವರಚಿತ ಆರು ಮಕ್ಕಳ ಸಾಹಿತ್ಯ ಕೃತಿಗಳ ಪ್ರಕಟಣೆ.

೫.೨.೨.೩ ಬಾಲಕೃಷ್ಣ ಆದಪ್ಪ ಜಂಬಗಿ :

ಹಾರೂಗೇರಿ ಗ್ರಾಮದ ಜಂಬಗಿ ಮನೆತನದ ಆದಪ್ಪ ಮತ್ತು ಗಂಗವ್ವ ದಂಪತಿಗಳ ಮಗನಾಗಿ ೧೨-೦೨-೧೯೪೩ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಹಾರೂಗೇರಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು ಹಾರೂಗೇರಿ ವಿದ್ಯಾಲಯ ಹಾರೂಗೇರಿಯಲ್ಲಿ ಪಡೆದು ಕೊಂಡರು. ಕಾಲೇಜು ಶಿಕ್ಷಣವನ್ನು ನಿಪ್ಪಾಣಿಯ ಕಲಾ ಮತ್ತು ವಿಜ್ಞಾನ ಪ-ಪೂ ಮಹಾವಿದ್ಯಾಲಯದಲ್ಲಿ ಮತ್ತು ಪದವಿ ಶಿಕ್ಷಣವನ್ನು

ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಮತ್ತು ಸ್ನಾತ್ತಕೋತ್ತರ ಪದವಿಯನ್ನು ಅರ್ಥಶಾಸ್ತ್ರ ವಿಷಯದಲ್ಲಿ ಶಿವಾಜಿ ವಿಶ್ವವಿದ್ಯಾಲಯ ಕೊಲ್ಹಾಪೂರದಿಂದ ಪಡೆದು ಕೊಂಡರು. ಶಿಕ್ಷಣ ಪ್ರಸಾರಕ ಮಂಡಳಿ ರಾಯಬಾಗದ ಅಂಗ ಸಂಸ್ಥೆಯ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು ನಂತರ ಪ್ರಾಚಾರ್ಯರಾಗಿ ನಿವೃತ್ತಿಯಾದರು. ಸುಮಾರು ೩೫ ವರ್ಷಗಳ ಸುಧೀರ್ಘ ಸೇವೆಯನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸಿರುವರು.

ಸಾಹಿತ್ಯ ಸೇವೆ (ಪ್ರಕಟಿತ ಕೃತಿಗಳು)

ನಮ್ಮೂರ ಜಾನಪದ

ಸ್ವಾತಂತ್ರ್ಯ ಪೂರ್ವದ ನೆಲಮೂಲ ಸಂಸ್ಕೃತಿಯನ್ನು ಈ ಕೃತಿಯಲ್ಲಿ ಕಟ್ಟಿ ಕೊಡುವ ಪ್ರಯತ್ನವನ್ನು ಬಿ. ಎ. ಜಂಬಗಿಯವರು ಮಾಡಿರುವರು. ಈ ಗ್ರಂಥದಲ್ಲಿರುವ ವಿಷಯಗಳೆಲ್ಲವನ್ನು ಓದಿದಾಗ ವ್ಯಕ್ತಿಯೊಬ್ಬನಿಗೆ ತಾನು ಹುಟ್ಟಿ ಬೆಳೆದ ನೆಲದ ಸಂಸ್ಕೃತಿಯನ್ನು ಮೇಲುಕ ಹಾಕಿದ ಅನುಭವವಾಗುತ್ತದೆ. ಬಹುಶಃ ಇಲ್ಲಿ ಬರುವ ವಿಷಯ ಮತ್ತು ವರ್ಣನೆಗಳೆಲ್ಲ ಗ್ರಾಮೀಣ ಪರಿಸರದಲ್ಲಿನ ಬದುಕಿನ ಭಾಗಗಳಾಗಿಯೆಂದು ಭಾಸವಾಗುತ್ತದೆ. ಈ ಕೃತಿಯನ್ನು 'ಆದಿ ಗಂಗಾ ಪ್ರಕಾಶನ ಹಾರೂಗೇರಿ' ಮೂಲಕ ೨೦೧೩ ರಲ್ಲಿ ಪ್ರಕಟಿಸಲಾಗಿದೆ.

'ಗೆಜ್ಜೆ ನುಡುದಾವ' ಕವನ ಸಂಕಲನ

ಬಿ. ಎ. ಜಂಬಗಿಯವರು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಾರೂಗೇರಿ ಗ್ರಾಮವನ್ನು ಕೇಂದ್ರವಾಗಿಟ್ಟು ಕೊಂಡು ಪ್ರಚಲಿತದಲ್ಲಿದ್ದ ಜನಪದ ತ್ರಿಪದಿಗಳನ್ನು ಈ ಕವನ ಸಂಕಲನದ ಮೂಲಕ ಸಂಗ್ರಹಿಸಿ ಪ್ರಕಟಿಸಿರುವರು. ಇದನ್ನು 'ಆದಿ–ಗಂಗಾ ಪ್ರಕಾಶನ ಹಾರೂಗೇರಿ'ಯ ಮೂಲಕ ಮೊದಲ ಮುದ್ರಣವನ್ನು ೧೯೮೧ ರಲ್ಲಿ, ದ್ವಿತೀಯ ಆವೃತಿಯನ್ನು ೨೦೧೪ ರಲ್ಲಿ ಪ್ರಕಟಿಸಲಾಗಿದೆ. ದುಡಿತದ ವಿವಿಧ ಪ್ರಸಂಗಗಳಲ್ಲಿ, ಬೇಸರ ಕಳೆಯಲು ಹಾಡುವ ಈ ತ್ರಿಪದಿಗಳು ಒಂದೇ ರೀತಿಯಲ್ಲಿದ್ದರೂ ಆಯಾ ಸಮಯಕ್ಕೆ ತಕ್ಕಂತೆ ವಿವಿಧ ದಾಟಿಗಳಲ್ಲಿ ಹಾಡಲು ಬರುವಂಥವುಗಳಾಗಿವೆ.

'ಹ್ಯಾಂಗ ಮರೀಲಿ' ಜನಪದ ತ್ರಿಪದಿ ಸಂಗ್ರಹ

ಇದು ಬಾಳಕೃಷ್ಣ ಜಂಬಗಿಯವರ ಕವನ ಸಂಕಲನವಾಗಿದೆ. ಪ್ರಕಾಶಕರು 'ಸಪ್ತಸ್ವರ ಸಂಗೀತ ಸಾಹಿತ್ಯ ಪ್ರತಿಷ್ಠಾನ ಗೋಕಾಕ' ಅವರು ಮುದ್ರಣ ಮಾಡಿ ೨೦೧೫ರಲ್ಲಿ ಪ್ರಕಟಿಸಿರುವರು.

ಪಡೆದುಕೊಂಡ ಪ್ರಶಸ್ತಿಗಳು :

೧) **ಸಮತಾಸಾರಥಿ ಅಂಬೇಡ್ಕರ ಪ್ರಶಸ್ತಿ** ಕಲಾನಿಕೇತನ ಬೆಂಗಳೂರು

೨) **ಸಿದ್ಧಗಿರಿ ಪ್ರಶಸ್ತಿ** ಡಾ॥ ರಾಮಮನೋಹರ ಲೋಹಿಯಾ ಸಂಸ್ಥೆ ಹಾರೂಗೇರಿ

೩) **ರಾಜ್ಯ ಮಟ್ಟದ ಪ್ರಶಸ್ತಿ** ಆಜೂರ ಪುಸ್ತಕ ಪ್ರತಿಷ್ಠಾನ

೪) **'ನಮ್ಮೂರ ಜಾನಪದ'** ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಂದ **ದತ್ತಿ ಪ್ರಶಸ್ತಿ**

೫) **'ವಿದ್ಯಾಗಂಗಾ ಸಾಹಿತ್ಯ ಪ್ರಶಸ್ತಿ'** ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ ಹಾರೂಗೇರಿ

ಗೌರವದ ಸ್ಥಾನಮಾನಗಳು :

೧) ೧೯೮೬ ರಲ್ಲಿ ಸಾಂಸ್ಕೃತಿಕ ಸಂಘ ತಾಲೂಕಾ ಘಟಕ ರಾಯಬಾಗ. ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ.

೨) ೧೯೮೯ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕಾ ಘಟಕ ರಾಯಬಾಗ. ಅಧ್ಯಕ್ಷರಾಗಿ ಸೇವೆ.

೩) ಹಾರೂಗೇರಿ ತಾಲೂಕಾ ಹೋರಾಟ ಸಮಿತಿ ಉಪಾಧ್ಯಕ್ಷರಾಗಿ ಸೇವೆ.

೪) ಹಾರೂಗೇರಿಯ ಮೂಲಭೂತ ಸೌಕರ್ಯಗಳ ಕಾರ್ಯಚರಣೆ ಸಮಿತಿ ಕಾರ್ಯದರ್ಶಿಯಾಗಿ ಸೇವೆ.

೫) 'ಆಧಾರ' ಹಿರಿಯ ನಾಗರಿಕ ಕಲ್ಯಾಣ ಸಂಸ್ಥೆ. ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ.

೬) 'ರಾಯಣ್ಣ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಪ್ರತಿಷ್ಠಾನ' ಸಂಸ್ಥಾಪದ ಅಧ್ಯಕ್ಷರಾಗಿ ಸೇವೆ.

೭) ರಾಯಬಾಗ ತಾಲೂಕಾ ಸಾಹಿತ್ಯ ಪರಿಷತ್ತಿನ ೪ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ.

೫.೨.೨.೪ ಕರೆಪ್ಪ ವಿಠ್ಠಪ್ಪ ಬೀಳಗಿ :

ರಾಯಬಾಗ ಪರಿಸರದ ಪ್ರಮುಖ ಊರುಗಳಲ್ಲಿ ಹಾರೂಗೇರಿಯೂ ಒಂದು. ಅಪ್ಪಟ ಗ್ರಾಮೀಣ ಪರಿಸರದ ಹಿನ್ನೆಲೆಯನ್ನು ಹೊಂದಿರುವ ಈ ಊರು ಗುರು ಚೆನ್ನವೃಷಭೇಂದ್ರ (ದೇವರಕೊಂಡ ಅಜ್ಜ)ರ ಆಡಂಬೊಲ. ಅಜ್ಜನ ಲೀಲಾಮಠ ಪ್ರತಿ ವರ್ಷ ಮಹಾನವಮಿ ಸಮಯದಲ್ಲಿ ೭ ದಿನಗಳವರೆಗೆ ವೇದಾಂತ ಪರಿಷತ್ತನ್ನು ಏರ್ಪಡಿಸಿ ಆಧ್ಯಾತ್ಮಿಕ ಜ್ಞಾನ ದಾಸೋಹವನ್ನು ಉಣಬಡಿಸುತ್ತಿರುವುದು ವಿಶೇಷ. ಊರಿನ ಸಾಮಾನ್ಯ ಮನೆತನಗಳಲ್ಲಿ ಒಂದಾದ ಬೀಳಗಿ ಮನೆತನದಲ್ಲಿ ಕರೆಪ್ಪ ಬೀಳಗಿ ೦೧-೦೭-೧೯೪೩ ರಂದು ಜನಿಸಿದರು. ತಂದೆ ವಿಠ್ಠಪ್ಪ ೬ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆದುಕೊಂಡ ಸುಶಿಕ್ಷಿತ. ತಾಯಿ ಗಂಗವ್ವ ಬುದ್ಧಿಯಲ್ಲಿ ಚುರುಕಮತಿಯಾದರೂ ಶಿಕ್ಷಣ ವಂಚಿತಳು. ವಿಠ್ಠಪ್ಪ ಮತ್ತು ಗಂಗವ್ವ ದಂಪತಿಗಳಿಗೆ ಮದುವೆಯಾಗಿ ಹಲವು ವರ್ಷಗಳವರೆಗೆ ಮಕ್ಕಳಾಗಲಿಲ್ಲ. ತಾಯಿ ಗಂಗವ್ವ ಕಂಡ-ಕಂಡ ದೇವರಗಳಲ್ಲಿ ಹರಕೆ ಹೊತ್ತು ಕೊನೆಗೆ ಕರೇಸಿದ್ಧನ ವರದಿಂದ ೧೨ನೇ ವರ್ಷಕ್ಕೆ ಗಂಡು ಮಗುವನ್ನು ಪಡೆದು ಕರೆಪ್ಪನೆಂದು ನಾಮಕರಣ ಮಾಡಿದಳು.

ಅವಿಭಕ್ತ ಕುಟುಂಬದಲ್ಲಿ ಬೆಳೆದ ಕರೆಪ್ಪ ಬಾಲ್ಯದಲ್ಲಿ ದನ-ಕರುಗಳನ್ನು ಕಾಯುವ ಕಾಯಕದಲ್ಲಿ ತೊಡಗಿದರು. ಮಗ ೭ ವರ್ಷದವನಾದಾಗ ಗಂಗವ್ವ ಮಗನನ್ನು ವಿದ್ಯಾವಂತನ್ನಾಗಿ ಮಾಡಬೇಕೆಂಬ ಹಂಬಲದಿಂದ ಊರ ದೇವರ ಗುಡಿಯಲ್ಲಿ ನಡೆಯುತ್ತಿದ್ದ ಪ್ರಾಥಮಿಕ ಶಾಲೆಗೆ ಸೇರಿಸಿದಳು. ನಂತರ ಗ್ರಾಮದಲ್ಲಿಯೇ ಇದ್ದ ಹಾರೂಗೇರಿ ವಿದ್ಯಾಲಯ ಹಾರೂಗೇರಿ ಪ್ರೌಢಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಪಡೆದುಕೊಂಡರು. ಕಾಲೇಜು ಶಿಕ್ಷಣವನ್ನು ನಿಪ್ಪಾಣಿಯ ಕಲಾ ಮತ್ತು ವಿಜ್ಞಾನ ಪ-ಪೂ ಮಹಾವಿದ್ಯಾಲಯದಲ್ಲಿ ಮತ್ತು ಪದವಿ ಶಿಕ್ಷಣವನ್ನು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಪಡೆದುಕೊಂಡರು.

೧೯೬೫ ರಿಂದ ೧೯೬೮ರ ವರೆಗೆ ಗೋಕಾಕ ತಾಲೂಕಿನ ಯಾದವಾಡದ ಜಿ. ಎನ್. ಎನ್. ಪ್ರೌಢಶಾಲೆಯಲ್ಲಿ ಸಹ ಶಿಕ್ಷಕರಾಗಿ ಮತ್ತು ೧೯೬೮ ರಿಂದ ೧೯೭೦ರ ವರೆಗೆ ಹಾರೂಗೇರಿ ವಿದ್ಯಾಲಯ ಹಾರೂಗೇರಿಯಲ್ಲಿ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ೧೯೭೦-೭೧ ರಲ್ಲಿ ಬೆಳಗಾವಿಯ ಸರ್ಕಾರಿ ಬಿ. ಎಡ್.

ಕಾಲೇಜಿನಲ್ಲಿ ಬಿ. ಎಡ್. ಪದವಿ ಪಡೆದುಕೊಂಡು ೧೯೭೧ ರಿಂದ ೧೯೭೮ರ ವರೆಗೆ ರಾಯಚೂರಿನ ಟ್ಯಾಗೋರ ಮೆಮೋರಿಯಲ್ ಹೈಸ್ಕೂಲದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಸಿದರು. ಈ ಅವಧಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ೧೯೭೮ ರಿಂದ ನಿವೃತ್ತಿಯವರೆಗೆ ಅಂದರೆ ೨೦೦೨ರ ವರೆಗೆ ಮುಗಳಖೋಡದ ಬಿ. ಎಸ್. ಕೆ. ಸಂಯುಕ್ತ ಪ-ಪೂ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ಹಾರೂಗೇರಿಯ ಶ್ರೀ ಚೆನ್ನವೃಷಬೇಂದ್ರ ಪ-ಪೂ ಕಾಲೇಜು ಆರಂಭಗೊಂಡ ಹೊಸತರಲ್ಲಿ ಇತಿಹಾಸ ವಿಷಯದ ಗೌರವ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

ಹಾರೂಗೇರಿಯಲ್ಲಿ ಶ್ರೀ ಬಿ. ಬಿ. ಕರ್ಣವಾಡಿ ಅವರಿಂದ ಆರಂಭಗೊಂಡ ಜನತಾ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯದಶಿಯಾಗಿ ಸೇವೆ ಸಲ್ಲಿಸಿ ನಂತರದಲ್ಲಿ ಶ್ರೀ ಕರೇಸಿದ್ಧೇಶ್ವರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ ಸುಮಾರು ೧೦ ವರ್ಷಗಳ ಸೇವೆ ಮಾಡಿದರು. ಅಲ್ಲದೆ ಹಿಡಕಲ್ಲದ ಶ್ರೀ ಕನಕದಾಸ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆಯ ಅಭಿವೃದ್ಧಿಗೆ ಮಾರ್ಗದರ್ಶಕರಾಗಿದ್ದರು. ೨೦೦೬ರಲ್ಲಿ ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಜೀವಿತದ ಕೊನೆಯವರೆಗೆ ಸೇವೆ ಸಲ್ಲಿಸಿದರು. ಇವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸಿದವರು. ಶಿಕ್ಷಕ ವೃತ್ತಿಗೆ ಮಾತ್ರ ಸೀಮಿತಗೊಳ್ಳದ ಇವರು ಶಿಕ್ಷಣ ಸಂಸ್ಥೆಗಳನ್ನು ಕಟ್ಟುವಲ್ಲಿ ತೋರಿದ ಶ್ರದ್ಧೆ ನಿಜವಾಗಿಯೂ ಅನ್ಯಾದೃಶವಾದುದು. ರಾಯಬಾಗದ ಪೂರ್ವ ಪರಿಸರದ ಶಿಕ್ಷಣ ಕ್ಷೇತ್ರದಲ್ಲಿ ಅವರು ಶ್ರಮಿಸಿದ ವಿಧಾಯಕ ಹೆಜ್ಜೆಗಳು ಇಂದಿಗೂ ಅವರ ಹೆಸರನ್ನು ನೆನಪಿಸುತ್ತವೆ. ಸುಮಾರು ೫೦ ವರ್ಷಗಳ ವರೆಗೆ ಶಿಕ್ಷಕರಾಗಿ, ಸಂಸ್ಥಾಪಕರಾಗಿ ಸೇವೆ ಸಲ್ಲಿಸಿದ್ದು ನಿಜವಾಗಿಯೂ ಸ್ತುತ್ಯಾರ್ಹ. ಬೆನ್ನಿಗೆ ಕಟ್ಟಿಕೊಂಡ ಆದರ್ಶಗಳು ಅವರಿಗೆ ಸುಖಕ್ಕಿಂತ ಹೆಚ್ಚಾಗಿ ಕಷ್ಟವನ್ನೇ ತಂದುಕೊಟ್ಟದ್ದು ವಿಪರ್ಯಾಸ.

"ಕೆ. ವಿ. ಬೀಳಗಿ ಅಧ್ಯಾಪಕರಾಗಿ ಬಾಗೆನಾಡಿಗೆಲ್ಲ ಪರಿಚಿತರು. ಆದರ್ಶಕ್ಕೆ ಹೆಸರಾದವರು. ತಮಗೆ ಸರಿಕಂಡದ್ದನ್ನು ಮಾಡದೇ ಬಿಡುವವರಲ್ಲ. ಯಾವುದೇ ನಿರ್ಣಯ ತೆಗೆದುಕೊಳ್ಳುವಲ್ಲಿ ಅವರು ಒಂಟಿ ಸಲಗ. ತಮ್ಮ ಬದುಕಿಗೆ ತಾವೇ ಒಂದು ಸಿದ್ಧಾಂತವನ್ನು ರೂಪಿಸಿಕೊಂಡವರು. ಒಳ-ಹೊರಗುಗಳಿಲ್ಲದ ನಿಷ್ಠುರವಾದಿ. ಆಧುನಿಕತೆಯ ಗಾಳಿಯಲ್ಲಿಯೂ ಕಿಂಚಿತ್ತೂ ಬದಲಾದವರಲ್ಲ. ಮೋಸ-ವಂಚನೆ-ಹುಸಿ-ಅಪ್ರಾಮಾಣಿಕತೆಗೆ ವೀರಭದ್ರ; ನಿಷ್ಕಪಟದ ಸರಳ ಸ್ವಭಾವದ ಜನಸಾಮಾನ್ಯರ ಸಹೋದರ. ಸ್ವಭಾವಕ್ಕೆ ತಕ್ಕಂತೆಯೇ ಉಡಿಗೆ-ನಡಿಗೆ. ಮುಗಳಖೋಡದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾಗಿಯೂ ಪ್ಯಾಂಟು ಹಾಕಲಿಲ್ಲ. ಶುಭ್ರ ದೋತರ, ಖಾದಿ ಅಂಗಿ, ತಲೆಯ ಮೇಲೆ ಬಿಳಿ ರುಮಾಲು. ರೈತನಂತೆ ಕಾಣುತ್ತಿದ್ದ ಅವರು ಆಂಗ್ಲರನ್ನು ನಾಚಿಸುವಂತೆ ಇಂಗ್ಲೀಷ ಮಾತನಾಡುತ್ತಿದ್ದರು. ಅವರು ವಿದ್ವತ್ತಿನ ಸರಳ ರೂಪದಂತಿದ್ದರು. ಆದರೆ ಯಾರೂ ಕೆಣಕುವ ಹಾಗಿಲ್ಲ. ರಾಜಿ ಮಾಡಿಕೊಂಡು ಬದುಕುವ ಸ್ವಭಾವವೇ ಅವರದಲ್ಲ. ಅವರೊಳಗೊಬ್ಬ ಕಥೆಗಾರನಿದ್ದುದು ಅವರು ಬದುಕಿರುವವರೆಗೂ ನಮಗೆ ತಿಳಿಯದಿರುವುದೇ ಸೋಜಿಗ."[೨೯]

ಸಾಹಿತ್ಯ ಸೇವೆ (ಪ್ರಕಟಿತ ಕೃತಿ) 'ಹಾಲುಮತ ಪುರಾಣ ದರ್ಶನ' :

ಲೇಖಕರು ಅಲಕನೂರಿನ ಕರೇಸಿದ್ಧೇಶ್ವರನ ಪರಮ ಭಕ್ತರು ಮತ್ತು ಹಾಲುಮತದ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಹಲವಾರು ಗ್ರಂಥಗಳನ್ನು ಅಧ್ಯಯನಿಸಿದವರು. ಅಂತೆಯೇ ಹಾಲುಮತದ ಬಗ್ಗೆ ಗ್ರಂಥವೊಂದನ್ನು ರಚಿಸುವ ಮೂಲಕ ಹಾಲುಮತದ ಸ್ಥಳೀಯ ಚರಿತ್ರೆಯನ್ನು ಇಲ್ಲಿಯ ಜನರಿಗೆ ಉಣಬಡಿಸಬೇಕೆಂಬ ಇಚ್ಛೆಯ ಫಲವೇ ಈ ಕೃತಿ. ಹಾರೂಗೇರಿಯ ಶ್ರೀ ಮಹಾತ್ಮ ವಿದ್ಯಾವರ್ಧಕ ಸಂಘವು ೨೦೧೬ ರಲ್ಲಿ ಈ ಗ್ರಂಥವನ್ನು ಮುದ್ರಣ ಮಾಡಿ ಪ್ರಕಾಶನ ಮಾಡಿದೆ. ಇದು ಲೇಖಕರು ಸುದೀರ್ಘ ಇಪತ್ತು ವರ್ಷಗಳ ಕಾಲ ಅಧ್ಯಯನ ಮಾಡಿ ಬರೆದ ಹಾಲುಮತ ಪರಂಪರೆಗೆ ಸಂಬಂಧಿಸಿದ ಗ್ರಂಥವಾಗಿದೆ. ಇದು ತೋಂಡಿ ಸಂಪ್ರದಾಯದ ಹೇಳಿಕೆಗಳು, ರಸ್ತಾಪೂರ ಭೀಮಕವಿಯ 'ಹಾಲ್ಮತೋತ್ತೇಜಕ ಪುರಾಣ' ಮತ್ತು ಪ್ರಚಲಿತ ಇನ್ನಿತರ ಹಾಲುಮತ ಪುರಾಣಗಳನ್ನು ಆಧರಿಸಿ ರೂಪಗೊಂಡಿದೆ. ಇಲ್ಲಿ ಹಾಲುಮತದ ಮೂಲವನ್ನು ತಿಳಿಸಲಾಗಿದೆ. ಹಾಲುಮತದ ದೇವತೆಯಾದ ಬೀರಪ್ಪನ ಜನನ ಮತ್ತು ಆತನ ಪವಾಡಗಳು, ಬಾಗೆನಾಡಿನ ಬಣ್ಣದ ಮಾಯವ್ವ ಹಲವಾರು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಸಮಾಜದ ಕೆಳಸ್ತರಗಳಲ್ಲಿ ಒಂದಾದ ಕುರುಬ ಜನಾಂಗದ ದೈವಿ ಸಂಸ್ಕೃತಿಯನ್ನು ಇಲ್ಲಿಯ ಸ್ಥಳೀಯ ಪರಿಸರದ ಹಿನ್ನೆಲೆಯಲ್ಲಿ ಸಂಶೋಧಿಸಿ ಅನುಸಂಧಾನ ಮಾಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಪಡೆದುಕೊಂಡ ಪ್ರಶಸ್ತಿಗಳು :

೧) 'ಆಜೂರ ಪ್ರತಿಷ್ಠಾನ ಹಾರೂಗೇರಿ' ಯವರು 'ಹಾಲುಮತದ ಪುರಾಣ ದರ್ಶನ' ಕೃತಿಗೆ, ೨೦೧೬-೧೭ನೇ ಸಾಲಿನ **'ಜಿಲ್ಲಾ ಮಟ್ಟದ ಅತ್ಯುತ್ತಮ ಪುಸ್ತಕ'**ವೆಂದು ಪ್ರಶಸ್ತಿ ನೀಡಿರುವರು.

೫.೨.೨.೫ ಜಗನ್ನಾಥ ರಾಮಚಂದ್ರ ಗೇನಣ್ಣವರ :

ಇವರು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಭಿರಡಿ ಗ್ರಾಮದವರು. ತಂದೆ ರಾಮಚಂದ್ರ, ತಾಯಿ ಮಾಯವ್ವಾ, ಈ ದಂಪತಿಗಳಿಗೆ ದಿನಾಂಕ : ೦೧-೦೬-೧೯೭೮ ರಂದು ಭಿರಡಿ ಗ್ರಾಮದಲ್ಲಿ ಜಗನ್ನಾಥ ಜನಿಸಿದರು. ಮೂಲತಃ ಇವರ ಮನೆತನದ ಅಡ್ಡ ಹೆಸರು ಗೇನಾನೆ ಎಂದಿದ್ದು ಶಾಲಾ ದಾಖಲಾತಿ ಸಮಯದಲ್ಲಿ ಅದು ಗೇನಣ್ಣವರ ಎಂದಾಗಿರುವುದು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಭಿರಡಿ ಗ್ರಾಮದಲ್ಲಿ, ಪದವಿ-ಪೂರ್ವ ಹಾಗೂ ಪದವಿ ಶಿಕ್ಷಣವನ್ನು ರಾಯಬಾಗದ ಎಸ್. ಪಿ. ಮಂಡಳದ ಮಹಾವಿದ್ಯಾಲಯಗಳಿಂದ ಪಡೆದು ಕೊಂಡರು. ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ ಪದವಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಡೆದು ಕೊಂಡಿದ್ದಾರೆ. ಇದೇ ವಿಶ್ವವಿದ್ಯಾಲಯದಿಂದ ಡಿಪ್ಲೋಮಾ ಇನ್ ಪ್ರಾಚ್ಯಲೇಖನ, ಡಿಪ್ಲೋಮಾ ಇನ್ ಕನಕಸ್ಪಡಿ ಮತ್ತು ಬಿ.ಎಲ್.ಐ.ಎಸ್.ಸಿ. ಪದವಿ ಪಡೆದಿರುವರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾವೇರಿಯಲ್ಲಿ ೬ ವರ್ಷಗಳವರೆಗೆ ಅತಿಥಿ ಉಪನ್ಯಾಸಕರಾಗಿ ಹಾಗೂ ರಾಯಬಾಗ ತಾಲೂಕಿನ ಚುಟುಕು ಸಾಹಿತ್ಯ ಪರಿಷತ್‌ನ ಪ್ರಧಾನ ಕಾರ್ಯದರ್ಶಿಯಾಗಿ, ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಪರಿಷತ್‌ಗೆ ಎರಡು ಬಾರಿ ಆಯ್ಕೆಯಾಗಿ ಸೇವೆ ಸಲ್ಲಿಸಿರುವರು. ನಾಡಿನ

ಹಲವಾರು ಹೆಸರಾಂತ ಪತ್ರಿಕೆಗಳಾದ ಕೆಗ್ಗೂಡಿನ ಬುಗ್ಗಿ, ವಿವೇಕವಾಣಿ, ಸಂಕ್ರಮಣ, ರಾಯಬಾಗ ಟೈಮ್ಸ್, ಶರಣ ಚೇತನ, ಆಜಾದ ಯುವ ವೇದಿಕೆ (ಗಿಲಬರ್ಗ)ಗಳಲ್ಲಿ ಇವರ ಲೇಖನ, ಕವನ, ಚುಟುಕುಗಳು ಪ್ರಕಟವಾಗಿವೆ. 'ಕರ್ನಾಟಕ ಮಲ್ಲ' ದಿನ ಪತ್ರಿಕೆ, 'ಶರಣ ಚೇತನ' ಮಾಸ ಪತ್ರಿಕೆಯ ವರದಿಗಾರರಾಗಿ ಸೇವೆ ಸಲ್ಲಿಸಿರುವರು. ಧಾರವಾಡ ಆಕಾಶವಾಣಿಯಿಂದ ಕಥೆ, ಕವನ, ಹಾಗೂ ಭಜನೆಗಳು ಬಿತ್ತರಗೊಂಡಿವೆ. 'ಈ' ಟಿ.ವಿ.ಯ 'ಜನಪದ ಅಳಿವು ಉಳಿವು' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಂಗಳೂರು, ಹಂಪಿ ವಿಶ್ವವಿದ್ಯಾಲಯಗಳಿಂದ ಲೇಖನಗಳು ಪ್ರಕಟಗೊಂಡಿವೆ. ಹಲವಾರು ರಾಜ್ಯ ಹಾಗೂ ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ತಮ್ಮ ಪ್ರಬಂಧಗಳನ್ನು ಮಂಡಿಸುವ ಮೂಲಕ ಹಲವು ಜನ ವಿದ್ವಾಂಸರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸದ್ಯ ಹಾವೇರಿಯಲ್ಲಿ ನೆಲೆಸಿರುವ ಇವರು ಸಾಹಿತ್ಯದಂತೆಯೇ ಸಂಗೀತದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಇವರು ಒಬ್ಬ ಉತ್ತಮ ತಬಲಾ ವಾದಕ ಹಾಗೂ ಗಾಯಕರೂ ಆಗಿದ್ದಾರೆ.

'ಕನಕ ಸಾಹಿತ್ಯದ ಸಾಂಸ್ಕೃತಿಕ ಒಳನೋಟ : ಒಂದು ಅಧ್ಯಯನ' ಎಂಬ ವಿಷಯದ ಕುರಿತು ಪಿಎಚ್. ಡಿ. ಮಾಡಿದ ಇವರು ಕನಕದಾಸರ ಸಾಹಿತ್ಯ ಮತ್ತು ಐತಿಹ್ಯಗಳ ಕುರಿತು ವಿಶೇಷ ಕ್ಷೇತ್ರಕಾರ್ಯ ಮಾಡುವ ಮೂಲಕ ಸಂಶೋಧನಾ ವಲಯದಲ್ಲಿ ವಿಶಿಷ್ಟ ಸಾಧನೆಯನ್ನು ಮಾಡಿರುವರು. ಸದ್ಯ ಇವರು ಹಾವೇರಿ ಜಿಲ್ಲೆಯ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಂಶೋಧಕರಾಗಿ ಹಾಗೂ ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಸೇವೆಗೈಯುತ್ತಿದ್ದಾರೆ. ಇವರು ಕನಕದಾಸರ ಕುರಿತಾಗಿ ೩ ಕೃತಿಗಳನ್ನು ಬರೆದಿದ್ದು, ೬ ಸಂಪಾದನಾ ಕೃತಿಗಳನ್ನು ಹೊರತಂದಿದ್ದಾರೆ. ಕನ್ನಡದಲ್ಲಿ ರಚನೆಯಾದ ಇವರ ಕೃತಿಗಳು ಇಂಗ್ಲೀಷ, ತೆಲಗು ಹಾಗೂ ಮರಾಠಿ ಭಾಷೆಗಳಿಗೆ ಅನುವಾದಗೊಂಡಿವೆ. ಒಂದು ಕವನ ಪಂಜಾಬಿ ಭಾಷೆಗೆ ಭಾಷಾಂತರಗೊಂಡಿದೆ.

ಸಾಹಿತ್ಯ ಸೇವೆ (ಪ್ರಕಟಿತ ಕೃತಿಗಳು)

೧) ಸಂಪಾದನಾ ಕೃತಿ **'ಕೀರ್ತನ ಕೌಸ್ತುಭ'**. ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ, ೨೦೦೭-೦೮ (ಮರಾಠಿ ಭಾಷೆಗೆ ಅನುವಾದ)

೨) ಸಂಪಾದನಾ ಕೃತಿ **'ಕನಕವಾಣಿ'**. ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ, ೨೦೦೭-೦೮

೩) ಸಂಪಾದನಾ ಕೃತಿ **'ಕನಕ ಸಾಹಿತ್ಯ ದರ್ಶನ'**. ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ, ೨೦೦೮-೦೯

೪) ಲೇಖನ **'ಸಂತ ಕನಕದಾಸರ ಜೀವನ ಸಂದೇಶ'** ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ, ೨೦೦೮. ಆರು ಬಾರಿ ಮರು ಮುದ್ರಣಗೊಂಡಿದೆ. (ತೆಲಗು ಭಾಷೆಗೆ ಅನುವಾದ)

೫) ಲೇಖಕ **'ಕನಕದಾಸರ ಪಾರಂಪರಿಕ ಸ್ಥಳಗಳು'** ಸಂಶೋಧನಾ ಕೃತಿ. ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ. (ತೆಲಗು, ಆಂಗ್ಲ ಭಾಷೆಗಳಿಗೆ ಅನುವಾದ)

೬) ಸಂಪಾದನೆ **'ಕನಕದಾಸರ ಸಾಹಿತ್ಯ ದರ್ಶನ'** ಸಂಪುಟ-೨. **'ಆತ್ಮ ಯಾವ ಕುಲ'** ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ ೨೦೦೯-೧೦

೭) **'ಕನಕದಾಸರ ಸಾಹಿತ್ಯ ದರ್ಶನ ಸಂಪುಟ-೩. 'ತಲ್ಲಿಸಣದಿರು'** ಪ್ರಕಾಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ, ೨೦೧೫

೮) **'ಅವಶ್ಯಕತೆಯಿಲ್ಲ'** ಕವನ (ಪಂಜಾಬಿ ಭಾಷೆಗೆ ಅನುವಾದ)

ಪ್ರಕಟಣೆ ಹಂತದಲ್ಲಿರುವ ಕೃತಿಗಳು :

೧) **'ರಕ್ತಾಂಜಲಿ'** ಕವನ ಸಂಕಲನ

೨) **'ಸಾಲು ಗೋರಿಗಳು'** ಕಥಾ ಸಂಕಲನ

೩) **'ಕನಕದಾಸರು ಮತ್ತು ಶಿಶುನಾಳ ಷರೀಫ'** ತುಲನಾತ್ಮಕ ಅಧ್ಯಯನ

ಪಡೆದುಕೊಂಡ ಪ್ರಶಸ್ತಿಗಳು :

೧) **'ಕನಕ ಪ್ರಭ ಪ್ರಶಸ್ತಿ'** ಭೂತಾಳಸಿದ್ಧೇಶ್ವರ ಕಮೀಟಿ ಹಾರೂಗೇರಿ ನೀಡಿ ಗೌರವಿಸಿರುವರು.

೨) **'ಜನಪದ ಶ್ರೀ ಪ್ರಶಸ್ತಿ'** ಜನಕಲ್ಯಾಣ ಪ್ರತಿಷ್ಠಾನ ಹುಕ್ಕೇರಿ ಯವರು ನೀಡಿರುವರು.

೩) **'ಕನಕ ಯುವ ಪುರಸ್ಕಾರ ಪ್ರಶಸ್ತಿ'** ಕರ್ನಾಟಕ ಸರ್ಕಾರದ ವತಿಯಿಂದ ನೀಡಿ ಗೌರವಿಸಲಾಗಿದೆ.

೫.೨.೨.೬ ತುಕಾರಾಮ ಶಂಕರ ವಂಟಗೂಡಿ :

ರಾಯಬಾಗ ತಾಲೂಕಾ ಸ್ಥಳದಿಂದ ಸುಮಾರು ೨೦ ಕಿ. ಮೀ. ಅಂತರದಲ್ಲಿರುವ ಹಿಡಕಲ್ಲ ಹಲವು ವಿಶೇಷಗಳ ಸಂಗಮ. ತಾಲೂಕಿನಲ್ಲಿಯೇ ಮೊಟ್ಟ ಮೊದಲ ಪ್ರಾಥಮಿಕ ಶಾಲೆ ೧೯೧೪ ರಲ್ಲಿ ಆರಂಭಗೊಂಡದ್ದು ಇಲ್ಲಿಯೇ. ಇದು ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಜಾಗೃತ ಮತ್ತು ಕ್ರೀಯಾಶೀಲ ಸ್ಥಳವೆಂದು ಗುರುತಿಸಲ್ಪಟ್ಟಿದೆ. ಅಲ್ಲದೆ ಕೊಲ್ಲಾಪೂರ ಸಂಸ್ಥಾನದ ನೇರ ಆಡಳಿತಕ್ಕೆ ಒಳಪಟ್ಟ ಅವಧಿಯಲ್ಲಿ ಖ್ಯಾತ ಪೈಲವಾನರಾದ ಅಪ್ಪಾಜಪ್ಪ ಮತ್ತು ದೇವಪ್ಪ ಬೆಳಗಲಿ ಅವರಿಂದ ಪ್ರಸಿದ್ಧಿತಿಯನ್ನು ಪಡೆದಿತ್ತು. ಸತ್ಯಶೀಲ ಆಟದ ಕಲಾವಿದ ಕಲ್ಲಪ್ಪ, ಭಾಗವತದ ನಟ ಭೀಮಪ್ಪ, ಪಾರಿಜಾತ ಕಲಾವಿದೆ ಮಾಲಾ ಪಾರ್ಥನಹಳ್ಳಿ ಅವರನ್ನು ಹೊಂದಿರುವ ಅಪ್ಪಟ ಜನಪದಿಯ ಸೊಗಡಿನ ಊರು.

ಗ್ರಾಮದ ಹಾಲಮತ ಸಮುದಾಯದ ವಂಟಗೂಡಿ ಮನೆತನದ ಶಂಕರ ಮತ್ತು ಸಾವಿತ್ರಿ ದಂಪತಿಗಳ ಮಗನಾಗಿ ತುಕಾರಾಮ ದಿ. ೦೧-೦೬-೧೯೭೩ ರಂದು ಹಿಡಕಲ್ಲದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಹಿಡಕಲ್ಲದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢಶಿಕ್ಷಣವನ್ನು ಶ್ರೀ ವಸಂತರಾವ ಪಾಟೀಲ ಸಂಯುಕ್ತ ಪದವಿ-ಪೂರ್ವ ಕಾಲೇಜಿನಲ್ಲಿ, ಪಿ. ಯು. ಸಿ ಮತ್ತು ಪದವಿ ಶಿಕ್ಷಣವನ್ನು ಹಾರೂಗೇರಿಯ ಶ್ರೀ ಚನ್ನವೃಷಬೇಂದ್ರ ಕಾಲೇಜಿನಲ್ಲಿ ಪಡೆದುಕೊಂಡಿರುವರು. ಕನ್ನಡ ವಿಷಯದಲ್ಲಿ ಎಂ. ಎ. ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಡೆದುಕೊಂಡಿರುವರು. ಎಂ. ಫಿಲ್ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಡೆದುಕೊಂಡಿರುವರು. ಇವರು ಇತ್ತೀಚಿಗೆ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಉತ್ಸಾಹಿ ಸಾಹಿತಿಗಳು. ಹಾರೂಗೇರಿಯ ಶ್ರೀ ಕರೇಸಿದ್ಧೇಶ್ವರ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವೆಯನ್ನು ಆರಂಭಿಸಿದ ಇವರು ಸದ್ಯ ಶ್ರೀ ಸಿದ್ಧೇಶ್ವರ ಕಲಾ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕ ಮತ್ತು ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿರುವರು.

ಸಾಹಿತ್ಯ ಸೇವೆ (ಪ್ರಕಟಿತ ಕೃತಿ) 'ರಾಯಬಾಗ ತಾಲೂಕಿನ ಹಾಲುಮತದ ದೈವಗಳು' :

ಪ್ರಸ್ತುತ ಗ್ರಂಥವು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ ಎಂ. ಫಿಲ್‌ನ ಸಂಶೋಧನಾ ಪ್ರಬಂಧವಾಗಿದೆ. ಇದನ್ನು ಹಿಡಕಲ್ಲದ ವಿದ್ಯಾ ಪ್ರಕಾಶನದ ಮೂಲಕ ಮುದ್ರಿಸಿ ಪ್ರಕಟಿಸಲಾಗಿದೆ. ವಂಟಗೂಡಿಯವರು ಗ್ರಂಥದಲ್ಲಿ ತಾಲೂಕಿನ ಪ್ರಮುಖ ದೇವತೆಗಳನ್ನು ವಿವರಣಾತ್ಮಕವಾಗಿ ಚಿತ್ರಿಸಿದ್ದು ಈ ಗ್ರಂಥದ ಹೃದಯ ಭಾಗವಾಗಿದೆ. ಜೊತೆಗೆ ಹಾಲುಮತದ ಹುಟ್ಟು ಮತ್ತು ಬೆಳವಣಿಗೆಯನ್ನು ವಿವರಿಸಿದ್ದಾರೆ. ಇದಲ್ಲದೆ ಹಾಲುಮತ ದೈವಗಳ ಪೂಜೆ, ಜಾತ್ರೆ, ಉತ್ಸವ, ಆಚರಣೆ ಮುಂತಾದ ವಿಷಯಗಳನ್ನು ಲೇಖಕರು ವಿವರಿಸಿದ್ದಾರೆ.

ಕವನ ಸಂಕಲನಗಳು : ಕನ್ನಡದಿಂಚರ. ಪ್ರಭುಕಿರಣ

'ಕನ್ನಡದಿಂಚರ' ಮತ್ತು 'ಪ್ರಭುಕಿರಣಗಳು' ವಂಟಗೂಡಿಯವರ ಸಂಪಾದಿತ ಕವನ ಸಂಕಲನಗಳಾಗಿವೆ.

ಪಡೆದುಕೊಂಡ ಪ್ರಶಸ್ತಿಗಳು :

೧) **'ಆಜೂರ ಪುಸ್ತಕ ಪ್ರತಿಷ್ಠಾನ ಪ್ರಶಸ್ತಿ'** ಹಾರೂಗೇರಿಯವರು ಕನ್ನಡದಿಂಚರ ಕವಲ ಸಂಕಲನಕ್ಕೆ ಪ್ರಶಸ್ತಿಯನ್ನು ನೀಡಿರುವರು.

೨) **'ರಾಷ್ಟ್ರಕೂಟ ಸಾಹಿತ್ಯ ಪ್ರಶಸ್ತಿ'** ಬೆಳಗಾವಿಯ ಸಾಹಿತ್ಯ ಸಂಘಟನೆಯವರು ನೀಡಿರುವರು.

೩) **'ಬಸವ ಚೇತನ ಪ್ರಶಸ್ತಿ'** ಮುನ್ಯಾಳ ಮಠದ ಶ್ರೀಗಳು ನೀಡಿ ಗೌರವಿಸಿರುವರು.

೪) **'ಶಿಕ್ಷಣ ರತ್ನ ಪ್ರಶಸ್ತಿ'** ಘಟಪ್ರಭಾ ಸಾಹಿತ್ಯ ಸಂಘಟನೆಯವರು ನೀಡಿರುವರು.

ಟಿಪ್ಪಣಿಗಳು :

೧) ಚಂದ್ರಪ್ಪ ಸೊಬಟಿ, (ಲೇ) **ಉಣ್ಣೆ ಕಂಕಣದ ಕುರುಬರು,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೨,** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦, ಪುಟ-೬೬

೨) ಬಾಳಪ್ಪ ಎ. ಬಿ. (ಲೇ) **ಹತ್ತಿ ಕಂಕಣ ಕುರುಬರು.** ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೨.** ಪ್ರಕಾಶನ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦, ಪುಟ-೫೫

೩) ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು,** ಪ್ರಕಾಶನ, ಶೈಲಚಂದ್ರ ಪ್ರಕಾಶನ ವಿಜಯಪುರ, ೨೦೧೧. ಪುಟ-೧೮೧

೪) ಚಂದ್ರಪ್ಪ ಸೊಬಟಿ, (ಲೇ) **ಉಣ್ಣೆ ಕಂಕಣದ ಕುರುಬರು,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೨,** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦. ಪುಟ-೬೮

೫) ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು,** ಪ್ರಕಾಶನ, ಶೈಲಚಂದ್ರ ಪ್ರಕಾಶನ ವಿಜಯಪುರ, ೨೦೧೧. ಪುಟ-೧೮೨

೬) **ಪೂರ್ವೋಕ್ತ,** ಪುಟ-೧೮೩

೭) **ಪೂರ್ವೋಕ್ತ,** ಪುಟ-೧೮೪

೮) **ಪೂರ್ವೋಕ್ತ,** ಪುಟ-೧೮೪

೯) ಬಾಳಪ್ಪ ಎ. ಬಿ. (ಲೇ) **ಹತ್ತಿ ಕಂಕಣ ಕುರುಬರು.** ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೨.** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦. ಪುಟ-೫೬

೧೦) ಚಂದ್ರಪ್ಪ ಸೊಬಟಿ, (ಲೇ) **ಉಣ್ಣೆ ಕಂಕಣದ ಕುರುಬರು** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೨,** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦. ಪುಟ-೬೬

೧೧) ಉಮೇಶ ಗುರಿಕಾರ **ಹೈದರಾಬಾದ ಕರ್ನಾಟಕದ ಕುರುಬರ ಚಾರಿತ್ರಿಕ ಅಧ್ಯಯನ (ಕೊಪ್ಪಳ ಜಿಲ್ಲೆಯನ್ನು ಅನುಲಕ್ಷಿಸಿ),** ಅಪ್ರಕಟಿತ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦. ಪುಟ-೪೧

೧೨) ಬಿ. ಜಿ. ಬಿರಾದಾರ (ಲೇ) **ಕುರುಬರ ಗುರು ಪರಂಪರೆ,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ ೧,** ಪ್ರಕಾಶನ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦ ಪುಟ-೧೦೦

೧೩) ಶ್ರೀರಾಮ ಇಟ್ಟಣ್ಣವರ, (ಲೇ) **ಒಡೆಯರ ಶಾಖೆಯ ಮಹಾಪುರುಷರು,** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಕುರುಬರ ಗುರು ಒಡೆಯರು,** ಪ್ರಕಾಶಕರು ವಿಕಾಸ ಪ್ರಕಾಶನ ಹೊಸಪೇಟೆ, ೨೦೦೭. ಪುಟ-೫೦

೧೪) ವಕ್ತೃ, **ಮಾಳಸಿದ್ಧ ದುಂಡಪ್ಪ ಒಡೆಯರ** ಹಿಡಕಲ್ಲ ಮತ್ತು **ಚಾಮರಾಜ ಕುಶಾಲ ಒಡೆಯರ** ಯಲ್ಪಾರಟ್ಟಿ

೧೫) ಬಾಳಪ್ಪ ಎ. ಬಿ. (ಲೇ) **ಹತ್ತಿ ಕಂಕಣ ಕುರುಬರು.** ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ವ್ಯಾಸಂಗ-೨.** ಪ್ರಕಾಶನ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦. ಪುಟ-೩೨

೧೬) ವಕ್ತೃ, **ಮಧ್ವರಾಜ ಬಾಳಕೃಷ್ಣ ದೇಶಪಾಂಡೆ.** ಹಿಡಕಲ್ಲ

೧೭) ಸಂತೋಷ ಕೃ. ಮಾನೆ (ಲೇ) **ಬ್ಯಾಕೂಡ ಪಾಟೀಲ ಸಹೋದರರ ಚಳುವಳಿಗೆ ತತ್ತರಿಸಿದ ಬ್ರಿಟಿಷರು.** ಸುರೇಶ ಚೌಗುಲೆ (ಸಂ) **ಅಬಾಜಿ ನೆನಪಿನ ಬುತ್ತಿ,** ಪ್ರಕಾಶನ ಅಖಿಲ ಭಾರತ ಜನಮಾನ್ಯ ದಿ. ವ್ಹಿ. ಎಲ್. ಪಾಟೀಲ ಫೌಂಡೇಶನ್, ರಾಯಬಾಗ, ೨೦೧೪. ಪುಟ-೨೫

೧೮) ವಕ್ತೃ, **ರಾವಸಾಬ ಸಿದ್ದಪ್ಪ ಮುರಗೋಜಿ.** ಹಿಡಕಲ್ಲ

೧೯) ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಪ್ರಥಮ ಸಂಪುಟ**. ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿಕ ನಿರ್ದೇಶನಾಲಯ ಬೆಂಗಳೂರು. ೧೯೯೮. ಪುಟ-೧೦೩೨.

೨೦) **ಪೂರ್ವೋಕ್ತ**, ಪುಟ-೯೩೭.

೨೧) ಸರೋಜಿನಿ ಚವಲಾರ, **ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು**, ಪ್ರಕಾಶಕರು, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಮೂರು ಸಾವಿರ ಮಠ ಹುಬ್ಬಳ್ಳಿ, ೧೯೮೮. ಪುಟ-vi.

೨೨) **ವಕ್ತೃ ರಾಮಣ್ಣ ಗುರುಸಿದ್ದಪ್ಪ ಕಂಕಣವಾಡಿ**. ಹಿಡಕಲ್ಲ

೨೩) ಬೆಳಗಾವಿ ಜಿಲ್ಲಾ ಡಿವಿಜನಲ್ ಸೆಷನ್ ನ್ಯಾಯಾಲಯದ ಸ್ಪೆಶಲ್ ಕೇಸ ನಂ ೧/೧೯೪೩ ರ ತೀರ್ಪಿನ ಪ್ರತಿ.

೨೪) ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಪ್ರಥಮ ಸಂಪುಟ**. ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿಕ ನಿರ್ದೇಶನಾಲಯ ಬೆಂಗಳೂರು. ೧೯೯೮. ಪುಟ-೧೧೭೫

೨೫) **ಪೂರ್ವೋಕ್ತ**, ಪುಟ-೫೦೮.

೨೬) **ವಕ್ತೃ ಚಂದ್ರು ಭೀಮಪ್ಪ ಕುಲಿಗೋಡ**. ಮುಗಳಖೋಡ

೨೭) ಅಶೋಕ ನರೋಡೆ, **ಗತಿಶೀಲ ಸಾಂಸ್ಕೃತಿಕ ಚಿಂತಕ**, ಚೈತನ್ಯ ಬಳಗ ಪ್ರಕಾಶನ ಮೂಡಲಗಿ, ೨೦೧೦. ಪುಟ-೨೫

೨೮) ಅಶೋಕ ನರೊಡೆ, (ಲೇ) **ಜ್ಯೋತಿ ಹೊಸೂರ : ಸಾಹಿತ್ಯ ಸಾಧನೆ**, ಡಾ. ಎಫ್. ಟಿ. ಹಳ್ಳಿಕೇರಿ (ಸಂ) **'ಹಾಲುಮತ ವ್ಯಾಸಂಗ ೧'** ಪ್ರಕಾಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯ ಪುಟ-೨೭೭

೨೯) ವಿ. ಎಸ್. ಮಾಳಿ (ಲೇ) **ನುಡಿ ಬಂಢಾರ**. ಕೆ. ವಿ. ಬೀಳಗಿ ಹಾಲುಮತ ಪುರಾಣ ದರ್ಶನ, ಪ್ರಕಾಶಕರು ಶ್ರೀ ಮಹಾತ್ಮ ವಿದ್ಯಾವರ್ಧಕ ಸಂಘ ಹಾರುಗೇರಿ, ೨೦೧೬. ಪುಟ-iii

ಅಧ್ಯಾಯ : ಆರು

ರಾಯಬಾಗ ಪರಿಸರದ ಹಾಲುಮತ ಸಮುದಾಯದ ಸ್ಥಿತ್ಯಂತರಗಳು

ಕರ್ನಾಟಕದ ಭೂಪರಿಸರನ್ನು ಸ್ಥೂಲವಾಗಿ ಕರಾವಳಿ, ಮಲೆನಾಡು, ಬಯಲುನಾಡೆಂದು ಮೂರು ವಿಧಗಳಾಗಿ ವಿಂಗಡಿಸಲಾಗುವುದು. ಹೀಗಾಗಿ ಪರಿಸರಕ್ಕೆ ತಕ್ಕಂತೆ ಜನ ಸಮುದಾಯಗಳು ಕೂಡ ವಿಭಿನ್ನ ಸಾಂಸ್ಕೃತಿಕ ಸ್ವರೂಪ ಪಡೆಯುತ್ತವೆ. ದೈವ-ಧರ್ಮ-ಆಡಳಿತ ಮುಂತಾದ ಕ್ಷೇತ್ರಗಳು ಅನನ್ಯತೆ ಸಾಧಿಸುತ್ತವೆ. ಇತ್ತೀಚಿಗೆ ಅನೇಕ ಸಮುದಾಯಗಳು ಸ್ಥಿತ್ಯಂತರಗೊಳ್ಳುತ್ತಿವೆ. ಜಾಗತೀಕರಣದ ಸಂದರ್ಭದಲ್ಲಿ ಜನಸಮುದಾಯಗಳ ಮೂಲಸ್ವರೂಪಗಳು ಮೊದಲಿನಕ್ಕಿಂತ ಹೆಚ್ಚು ವೇಗದಿಂದ ಬದಲಾಗುತ್ತ ನಡೆದಿವೆ. ಈ ಸ್ಥಿತ್ಯಂತರಗಳನ್ನು ಅಧ್ಯಯನಿಸುವ ಅಗತ್ಯವಿದೆ. ಭಾರತಕ್ಕೆ ಬ್ರಿಟಿಷರ ಆಗಮನದ ಬಳಿಕ ಜನಸಮುದಾಯಗಳ ದಾಖಲಾತಿ ಪ್ರಯತ್ನಗಳು ನಡೆದವು. ಆದರೆ ಈ ಕಾರ್ಯ ರಾಜಕೀಯ ಉದೇಶವನ್ನೊಳಗೊಂಡಿತ್ತು. ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಬದಲಾದ ಮತ್ತು ಬದಲಾಗುತ್ತಿರುವ ಜನಸಮುದಾಯಗಳ ಕುರಿತು ನಿರ್ದಿಷ್ಟವಾಗಿ ದಾಖಲಿಸುವ ಕಾರ್ಯ ಅಸಾಧ್ಯವೇ ಸರಿ. ಆದರೂ ರಾಯಬಾಗ ತಾಲೂಕಿನ ಹಾಲುಮತ ಸಮುದಾಯದ ಸ್ಥಿತ್ಯಂತರಗಳ ದಾಖಲೆಗೆ ಈ ಅಧ್ಯಾಯವನ್ನು ಮಿಸಲಾಗಿಡಲಾಗಿದೆ.

ಈ ಅಧ್ಯಾಯದಲ್ಲಿ ಪ್ರಮುಖವಾಗಿ ಸ್ವಾತಂತ್ರ್ಯೋತ್ತರ ರಾಯಬಾಗ ಪರಿಸರದ ಹಾಲುಮತ ಜನಸಮುದಾಯದಲ್ಲಿ ಕಂಡು ಬರುವ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಧಾರ್ಮಿಕ ಬದಲಾವಣೆಗಳನ್ನು ದಾಖಲು ಮಾಡಲು ಪ್ರಯತ್ನಿಸಲಾಗಿದೆ. ಈಗಾಗಲೇ ರಾಜ್ಯವಾರು, ಜಿಲ್ಲಾವಾರು ಗೆಜೆಟಿಯರ್, ಹಿಂದುಳಿದ ವರ್ಗಗಳ ಆಯೋಗದ ವರದಿಗಳು ಹಾಗೂ ದಾಖಲಾತಿಗಳ ಆಧಾರಗಳನ್ನು ಅಧ್ಯಯನ ಮಾಡಿ ಸಮಕಾಲೀನ ಸಮಾಜದ ಸಂಚಲನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಹಾಲುಮತ ಜನಾಂಗದ ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ, ಸ್ಥಿತಿಗತಿ ಕುರಿತಂತೆ ರಾಜ್ಯ ಮತ್ತು ತಾಲ್ಲೂಕಾ ಮಟ್ಟದಲ್ಲಿ ಸಮಗ್ರ ಸಮೀಕ್ಷೆ ನಡೆಸಿ ವರದಿ ಪ್ರಕಟಿಸಬೇಕಿದೆ. ಅವಲೋಕನ ಆಧರಿಸಿ ಹೇಳುವದಾದರೆ ಬಹುಸಂಖ್ಯಾತರು ಬಡವರು, ಬಡತನ ರೇಖೆಯ ಕೆಳಗಿನ ವರ್ಗಕ್ಕೆ ಸೇರಿದವರು. ಶ್ರೀಮಂತರ ಸಂಖ್ಯೆ ಬೆರಳೆಣಿಕೆಯಷ್ಟು, ಕಳೆದ ೪೦ ವರ್ಷಗಳಲ್ಲಿ ಮಧ್ಯಮ ವರ್ಗವು ಹುಟ್ಟಿಕೊಳ್ಳುತ್ತಿದೆ. ಅಂದರೆ ಪ್ರಸ್ತುತದಲ್ಲಿ ಹಾಲುಮತ ಜನಾಂಗದ ಆರ್ಥಿಕ ಸ್ಥಿತಿಗತಿಗಳ ಅವಲೋಕನ ಹಾಗೂ ಸಂಚಲನಗಳನ್ನು ಸೂಕ್ಷ್ಮವಾಗಿ ಗಮನಿಸುವ ಪ್ರಯತ್ನವಿದು.

ಕುರುಬ ಸಮುದಾಯದಲ್ಲಿನ ಕೆಲವು ಮನೆತನಗಳು ಇಂದಿಗೂ ಅಲೆಮಾರಿ ಸ್ಥಿತಿಯಲ್ಲಿವೆ. ಆದ್ದರಿಂದ ಅವರ ಸಾಮಾಜಿಕ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ವಸತಿ ಅತ್ಯಂತ ಕೆಳಮಟ್ಟದ್ದಾಗಿವೆ. ಇವರಲ್ಲಿ ಬಹುಸಂಖ್ಯಾತರು ಒಣಭೂಮಿ ಬೇಸಾಯಗಾರರು. ಹೀಗಾಗಿ ಇವರ ಆರ್ಥಿಕ ಸ್ಥಿತಿ ಬಹಳ ನಾಜೂಕಿನದ್ದಾಗಿದೆ. ಮಳೆಯಾಧಾರಿತವಾಗಿರುವ ವ್ಯವಸಾಯ ಇವರನ್ನು ಬಡತನದಿಂದ ಹೊರ ಬರಲು ಬಿಡುತ್ತಿಲ್ಲ. ಇವರು ಪಶುಪಾಲನೆ ಹಾಗೂ ವ್ಯವಸಾಯ ಎರಡನ್ನೂ ಅವಲಂಬಿಸಿರುವುದರಿಂದ ಸಾಮಾನ್ಯವಾಗಿ ಮೊರಡಿ ಪ್ರದೇಶದಲ್ಲಿ ವಾಸಿಸುವುದೇ ಹೆಚ್ಚು. ಬಡವರು ನಗರ ಪ್ರದೇಶಗಳಲ್ಲಿ ಕೂಲಿಕಾರರಾಗಿದ್ದಾರೆ:

ಆಗುತ್ತಿದ್ದಾರೆ. ಸರ್ಕಾರಿ ಮತ್ತು ಖಾಸಗಿ ಸಂಘಟಿತ ವಲಯಗಳಲ್ಲಿ ಇವರ ಉದ್ಯೋಗ ಪ್ರಮಾಣ ಬಹಳ ಕಡಿಮೆಯಿದೆ. ಒಣಭೂಮಿ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುವ ಕುರುಬರು ಪ್ರಸ್ತುತ ಲಭ್ಯವಿರುವ ಸಂಘ-ಸಂಸ್ಥೆಗಳ ಸೌಲಭ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸುತ್ತಿಲ್ಲ. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಲ್ಲಿ ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಪಡೆದು ಕೃಷಿ ಅಭಿವೃದ್ಧಿ, ಹೈನುಗಾರಿಕೆ, ಅಂತರ್ಜಲ ಬಳಕೆ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳಬೇಕಾಗಿರುವುದು. ನೀರಾವರಿ ಪ್ರದೇಶದಲ್ಲಿರುವ ಕುರುಬರು ಆಧುನಿಕ ವಿಚಾರಗಳನ್ನು ಹೊಂದಿದ್ದು, ಕೃಷಿ, ಶಿಕ್ಷಣ, ಉದ್ಯೋಗ, ಆರ್ಥಿಕ ರಂಗಗಳಲ್ಲಿ ಮುನ್ನಡೆಯನ್ನು ಸಾಧಿಸಿರುವರು. ಆದರೆ ಇವರ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು.

ಕುರುಬ ಜನಾಂಗವು ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಹೊಂದಿದೆ. ಪುರುಷರು ಮಹಿಳೆಯರ ಮೇಲೆ ಬಿಗಿ ಹಿಡಿತ ಸಾಧಿಸಿದ್ದಾರೆ. ಪರಿಣಾಮವಾಗಿ ಗ್ರಾಮೀಣ ಭಾಗದ ಕುರುಬ ಮಹಿಳೆಯರು, ಇತರ ಹಿಂದುಳಿದ ಸಾಮಾಜಿಕ ವರ್ಗಗಳ ಮಹಿಳೆಯರಂತೆ ಎಲ್ಲಾ ದೃಷ್ಟಿಯಿಂದಲೂ ಪುರುಷರಿಗೆ ಹೋಲಿಸಿದಾಗ ಬಹಳ ಹಿಂದುಳಿದ್ದಿದ್ದಾರೆ. ಲಿಂಗ ತಾರತಮ್ಯಗಳು ಮತ್ತು ಮಹಿಳೆ ವಿರುದ್ಧದ ಪುರುಷ ಪೂರ್ವಾಗ್ರಹಗಳು ಕುರುಬ ಜನಾಂಗದಲ್ಲಿ ವ್ಯಾಪಕವಾಗಿವೆ. ಆದುದರಿಂದ ಕುರುಬ ಜನಾಂಗದ ಸಾರ್ವತ್ರಿಕ ಅಭಿವೃದ್ಧಿ ದೃಷ್ಟಿಯಿಂದ ಮಹಿಳೆಯರ ಶಿಕ್ಷಣಕ್ಕೆ ಆದ್ಯತೆ ನೀಡಬೇಕಾದಾಗ ಅನಿವಾರ್ಯತೆ ಎದ್ದು ಕಾಣುತ್ತದೆ.

ಹಾಲುಮತ ಜನಾಂಗದ ಶೈಕ್ಷಣಿಕ ಮತ್ತು ಉದ್ಯೋಗ ಸಮಸ್ಯೆಗಳನ್ನು ಅಭ್ಯಸಿಸಲು ವಿಶ್ವಾಸಾರ್ಹವಾದ ಅಂಕಿ ಅಂಶಗಳ ಕೊರತೆ ಇದೆ. ಉನ್ನತ ಶಿಕ್ಷಣದಲ್ಲಿ ಕುರುಬ ಜನಾಂಗದ ಪ್ರಾತಿನಿಧ್ಯ ನಗಣ್ಯವಾಗಿದೆ. ಎಂಜಿನಿಯರಿಂಗ್, ವೈದ್ಯಕೀಯ, ಆಡಳಿತ ವ್ಯವಹಾರ ಮುಂತಾದ ವೃತ್ತಿಪರ ಕೋರ್ಸಗಳಲ್ಲಿ ಕಳೆದ ಒಂದು ದಶಕದಿಂದ ಕುರುಬ ಜನಾಂಗದ ವಿದ್ಯಾರ್ಥಿಗಳ ಪ್ರವೇಶ ಕ್ರಮೇಣ ಹೆಚ್ಚುತ್ತಿದೆ. ಆದರೆ ಇದು ಗಣನೀಯ ಸಂಖ್ಯೆಯಲ್ಲಿಲ್ಲ. ಉನ್ನತ ಶಿಕ್ಷಣ ಪಡೆಯುತ್ತಿರುವ ಗ್ರಾಮೀಣ ಭಾಗದ ಯುವ ಪೀಳಿಗೆ ಪೈಕಿ ಬಹಳಷ್ಟು ಮಂದಿ ನಿರುದ್ಯೋಗಿಗಳಾಗುತ್ತಿದ್ದಾರೆ. ಈ ಯುವಕ-ಯುವತಿಯರಿಗೆ ನೈತಿಕ ಸ್ಥೈರ್ಯ, ಮಾರ್ಗದರ್ಶನ, ಆರ್ಥಿಕ ಬೆಂಬಲದ ಕೊರತೆಯಿದೆ.

ಈ ಎಲ್ಲವೂ ಬಡತನ, ಅನಕ್ಷರತೆ, ವಲಸೆ ಸಂಬಂಧಿ ಜನಜೀವನದಿಂದ ಮೂಡಿ ಬಂದವುಗಳೇ. ಈ ಎಲ್ಲಾ ಸಮಸ್ಯೆಗಳಿಗೆ ಎರಡು ಹಂತಗಳಲ್ಲಿ ಏಕಕಾಲದಲ್ಲಿ ಪರಿಹಾರ ಕ್ರಮಗಳನ್ನು ಜಾರಿಗೊಳಿಸಬೇಕು. ಮೊದಲನೇಯ ಹಂತವೆಂದರೆ, ಬಡತನದ ವಿರುದ್ಧದ ಹೋರಾಟ. ಎರಡನೇಯ ಹಂತವೆಂದರೆ, ಇಡಿ ಜನಾಂಗವನ್ನು ರಾಜ್ಯ ಮತ್ತು ರಾಷ್ಟ್ರದ್ಯಂತ ಚಲನಶೀಲಗೊಳಿಸುವುದು. ಈಗ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಸಂಘಟಿಸುವ ಮೂಲಕ ಜನಾಂಗದ ಉನ್ನತೀಕರಣದ ಕಾರ್ಯ ಆಗಬೇಕಾಗಿರುವುದು.

ರಾಜ್ಯ ಮಟ್ಟದ ಸಮಾಜಗಳಲ್ಲಿ ಎರಡನೇಯ ಅತಿದೊಡ್ಡ ಜನಾಂಗ ಕುರುಬರು. ಎಲ್ಲ ಹಿಂದುಳಿದ ವರ್ಗಗಳ ಹಿರಿಯಣ್ಣನಂತಿರುವ ಈ ಹಾಲುಮತಸ್ಥರನ್ನು ಮುಖ್ಯವಾಹಿನಿಗೆ ತರುವ ಬಹುದೊಡ್ಡ ಹೊಣೆ ಈ ಸಮಾಜದ ಮೇಲಿದೆ. ಆ ಕೆಲಸವನ್ನು ಸಮರ್ಥವಾಗಿ ಮಾಡಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕವಾಗಿ ಒಂದೇ ರೀತಿ ಇರುವ ಜನಾಂಗಗಳಿವೆ. ಸಾಂಸ್ಕೃತಿಕವಾಗಿ ಒಂದೇ ರೀತಿ ಇವೆ. ಆದ್ದರಿಂದ

ಅತಿದೊಡ್ಡ ಕೋಮು ಆದ ಕುರುಬ ಜನಾಂಗ ಎಲ್ಲರನ್ನು ಒಟ್ಟಿಗೆ ಕರೆದೊಯ್ದು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಯಾಗಿ, ಮುಂದುವರೆದ ಕೋಮುಗಳ ಜೊತೆ ಸ್ಪರ್ಧೆ ಮಾಡಬೇಕಾಗಿದೆ.

ಎಲ್ಲಾ ಕುರುಬ ಪಂಗಡಗಳು ಮತ್ತು ಉಪ ಪಂಗಡಗಳು ತಮ್ಮತಮ್ಮೊಳಗಿನ ಬೇಧಭಾವಗಳನ್ನು ಮರೆತು ಪರಸ್ಪರ ಸಹಕಾರ ಭಾವದಿಂದ ರಕ್ತಸಂಬಂಧದ ಮೂಲಕ ಏಕೀಭವಿಸಬೇಕು.? ಇದು ಸಾಧ್ಯವಾಗಬೇಕಾದರೆ ವಿವಿಧ ಹಂತಗಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಹಂತಗಳಲ್ಲಿರುವವರು ಪರಸ್ಪರ ಪ್ರತಿಕ್ರಿಯಿಸಬೇಕು. ಈ ಎಲ್ಲರೂ ಸೇರಿ ತಮ್ಮ ಪರವಾದ ಅಭಿವೃದ್ಧಿ ರಾಜಕಾರಣ ಮಾಡಬೇಕು. ಈ ಕಾರ್ಯವು ಇಡಿ ಕುರುಬ ಜನಾಂಗಕ್ಕೆ ಶೈಕ್ಷಣಿಕ, ಉದ್ಯೋಗ, ವಸತಿ ಮತ್ತು ಮೂಲಭೂತ ಸೇವಾಸೌಕರ್ಯಗಳ ವಿಷಯದಲ್ಲಿ ಪರಿಶಿಷ್ಟ ಪಂಗಡದತಂಹ, ಮೀಸಲು ದರ್ಜೆ ಪಾಲು ಪಡೆಯುವಂತಾಗಬೇಕು. ಅನೇಕ ಮಾನವಾಭಿವೃದ್ಧಿ ಮಾನದಂಡಗಳ ಪ್ರಕಾರ ಅತ್ಯಂತ ಹಿಂದುಳಿದಿರುವ, ಸಂಖ್ಯಾ ದೃಷ್ಟಿಯಿಂದ ಅಪಾರವಾಗಿರುವ ಕುರುಬ ಜನಾಂಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಿದಂತಾಗಬೇಕಾಗಿದೆ.

ಮತ-ಧರ್ಮಗಳನ್ನು ವಿಜ್ಞಾನಕ್ಕೆ ಅತೀತವಾದವು ಎಂದು ಒಪ್ಪಿಕೊಳ್ಳಬೇಕೇ ಅಥವಾ ಅವುಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕೇ ಎಂಬ ಪ್ರಶ್ನೆ ಹಳೆಯದು. ಇದಕ್ಕೆ ಉತ್ತರ ಕಂಡುಕೊಳ್ಳುವುದು ಅಷ್ಟೇನೂ ಸುಭವಲ್ಲ. ಆದರೆ ಧರ್ಮಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದರಿಂದ ಅವುಗಳನ್ನು ಹೆಚ್ಚು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಅವಕ್ಕೂ ಸಾಮಾಜಿಕ ಸ್ತರೀಕರಣಕ್ಕೂ ಇರುವ ಸಂಬಂಧವನ್ನೂ ವಿವಿಧ ವಿಚಾರಗಳ ಗ್ರಹಿಕೆಯಲ್ಲಿ ಮನುಷ್ಯನ ಮೇಲೆ ಬೀರುವ ಪರಿಣಾಮವನ್ನು ಪರೀಕ್ಷಿಸಬಹುದು. ಒಂದು ಧಾರ್ಮಿಕ ಆಚರಣೆ ಹಿಂದಿನ ತರ್ಕ ಅಥವಾ ತರ್ಕರಾಹಿತ್ಯದ ಅಧ್ಯಯನವೇ ಮನುಷ್ಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಹೆಚ್ಚು ಸಹಾಯ ಮಾಡುತ್ತದೆ.

ಸ್ವಾತಂತ್ರ್ಯಾ ನಂತರ ಭಾರತದ ಸಮಾಜ ಬಹಳಷ್ಟು ಬದಲಾವಣೆಗೆ ಒಳಗಾಯಿತು. ಈ ಬದಲಾವಣೆಯಲ್ಲಿ ಇಡೀ ರಾಯಬಾಗ ಪರಿಸರದಲ್ಲಿರುವ ಹಾಲುಮತ ಸಮುದಾಯದಲ್ಲಿ ಉಂಟಾದ ಸಂಚಲನಗಳನ್ನು ದಾಖಲಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಅವು ಪ್ರಮುಖವಾಗಿ ಒಂದು ಸಮಾಜದ ಬದಲಾವಣೆ ಆಗಬೇಕು ಎನ್ನುವುದಾದರೆ, ಎಲ್ಲ ರೀತಿಯಲ್ಲೂ ಬದಲಾವಣೆಯಾಗಿರುತ್ತದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ, ಹೀಗೆ ಎಲ್ಲ ರೀತಿಯಿಂದಲೂ ಬದಲಾವಣೆಗೆ ಒಳಪಟ್ಟಿರುತ್ತದೆ. ಆದರೆ ಈ ಎಲ್ಲ ಬದಲಾವಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ದಾಖಲಿಸುವುದು ಕಷ್ಟದ ಕೆಲಸ. ಅದಕ್ಕಾಗಿ ಇದನ್ನು ಸ್ಥೂಲವಾಗಿ ೫ ಘಟ್ಟಗಳಲ್ಲಿ ವರ್ಗೀಕರಿಸಿಕೊಂಡಿದ್ದೇವೆ. ೧) ರಾಜಕೀಯ ೨) ಸಾಮಾಜಿಕ ೩) ಶೈಕ್ಷಣಿಕ ೪) ಧಾರ್ಮಿಕ ಮತ್ತು ಸಾಂಸ್ಕೃತಿಕ ೫) ಸಹಕಾರಿ ಮತ್ತು ಆರ್ಥಿಕ. ಇಲ್ಲಿ ನಾವು ಐದು ವಲಯಗಳಲ್ಲಿ ಸ್ಥಿತ್ಯಂತರಗಳನ್ನು ಅಧ್ಯಯನಿಸಿದರೂ ಕೂಡ ಸಮಾಜದ ಎಲ್ಲ ರೀತಿಯ ಸಂಚಲನಗಳು ಇಲ್ಲಿ ಪ್ರತಿಧ್ವನಿಸುತ್ತವೆ ಅಥವಾ ಒಂದರಲ್ಲಿ ಒಂದು ಅಳವಡಿಕೆಯಾಗಿರುತ್ತವೆ. ಆದ್ದರಿಂದ ಅವುಗಳನ್ನು ಪ್ರತ್ಯೇಕವಾಗಿ ವಿಭಾಗಿಸದೇ ನಾವು ಸ್ಥೂಲವಾದ ಚಿತ್ರವನ್ನು ಕೊಡುವುದು ಇದರ ಆಶಯವಾಗಿದೆ.

೧. ರಾಜಕೀಯ :

ಸ್ವಾತಂತ್ರ್ಯ ಪೂರ್ವದಲ್ಲಿ ಕೊಲ್ಹಾಪೂರ ಸಂಸ್ಥಾನಕ್ಕೆ ಒಳಪಟ್ಟಂತಹ ಈ ಪರಿಸರದ ಬಹುಭಾಗವನ್ನು ಕೊಲ್ಹಾಪೂರ ರಾಜರ ಪ್ರತಿನಿಧಿಗಳಾಗಿ ವಿ. ಎಲ್. ಪಾಟೀಲರ ಮನೆತನ, ಇಡೀ ಈ ಪ್ರದೇಶದ ಮೇಲೆ ತನ್ನ ಬಿಗಿಯಾದ ಹಿಡಿತವನ್ನು ಸಾಧಿಸಿತ್ತು. ವಿ. ಎಲ್. ಪಾಟೀಲರ ತಂದೆ ಸಿದ್ಧಗೌಡ ಪಾಟೀಲರು ಬ್ಯಾಕೂಡ ಗ್ರಾಮದ ಗೌಡರಾಗಿದ್ದು ಕೊಲ್ಹಾಪೂರದ ಛತ್ರಪತಿ ಶಾಹೂ ಮಹಾರಾಜರ ನಿಕಟವರ್ತಿಗಳಾಗಿದ್ದರು.

ಕೊಲ್ಹಾಪೂರದ ಮಹಾರಾಜರು ಮಳೆಗಾಲದ ಸಮಯದಲ್ಲಿ ಬೇಟೆಯಾಡಲು ಬಾಗೆನಾಡಿಗೆ ಆಗಮಿಸುತ್ತಿದ್ದರು. ಅಂದು ಈ ಪರಿಸರವೆಲ್ಲ ಕಾಡಿನಿಂದ ಆವೃತವಾದ ಪ್ರದೇಶವಾಗಿದ್ದು ಕಾಡು ಮೃಗಗಳ ಬೀಡಾಗಿತ್ತು. ಕಾಡಿನ ಹಿನ್ನೆಲೆಯನ್ನು ಹೊಂದಿದ ಇಲ್ಲಿಯ ಪಶುಪಾಲಕರಾದ ಕುರುಬರು ಧೈರ್ಯವಂತರು ಮತ್ತು ಸಾಹಸಿಗಳು. ಹೀಗಾಗಿ ಈ ಸಮುದಾಯದ ಕೆಲವು ಬಂಟರು ಮಹಾರಾಜರಿಗೆ ಬೇಟೆಯಲ್ಲಿ ಜೊತೆಯಾಗಿರುತ್ತಿದ್ದರು. ಇದು ಮಹಾರಾಜರ ಜೊತೆ ನಿಕಟ ಸಂಪರ್ಕ ಹೊಂದಲು ಮತ್ತು ರಾಜಕೀಯ ಅರಿವು ಮೂಡಲು ಕಾರಣವಾಯಿತು. ಇದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ವ್ಯಕ್ತಗೊಂಡಿತು.

ಇಲ್ಲಿಯ ಹಾಲುಮತ ಸಮುದಾಯದ ಬಹಳಷ್ಟು ವ್ಯಕ್ತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಅಂದರೆ ಅವರಲ್ಲಿ ರಾಜಕೀಯ ಪ್ರಜ್ಞೆ ಆಗಲೇ ಜಾಗೃತವಾಗಿತ್ತು. ಅವರಿಗೆ ಸ್ವಾತಂತ್ರ್ಯದ ಪರಿಕಲ್ಪನೆಯ ಅರಿವು ಮೂಡಿತ್ತು. ೧೯೪೬ರಲ್ಲಿ ಜವಹರಲಾಲ ನೆಹರು ಪ್ರಾಂತೀಯ ಸರ್ಕಾರವನ್ನು ರಚಿಸಿದಾಗ ಈ ಭಾಗದ ಪ್ರಾತಿನಿಧ್ಯವನ್ನು ವಿ. ಎಲ್. ಪಾಟೀಲ ವಹಿಸಿಕೊಂಡಿದ್ದರು. ತದನಂತರದಲ್ಲಿ ಅಂದರೆ ೧೯೪೭ರಲ್ಲಿ ಸ್ವಾತಂತ್ರ್ಯ ದೊರೆಯಿತು. ಸ್ವಾತಂತ್ರ್ಯ ದೊರೆತ ಮೇಲೆ ಮೊಟ್ಟ ಮೊದಲಿಗೆ ಸಾರ್ವತ್ರಿಕ ಚುನಾವಣೆಗಳು ೧೯೫೨ರಲ್ಲಿ ನಡೆದವು. ಅಂದು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆ ಸೇರಿದಂತೆ ಧಾರವಾಡ, ಕಾರವಾರ ಮತ್ತು ವಿಜಯಪುರ ಜಿಲ್ಲೆಗಳು ಮುಂಬಯಿ ಪ್ರಾಂತಕ್ಕೆ ಸೇರಿದ್ದವು. ಸ್ವಾತಂತ್ರ್ಯಾ ನಂತರದಲ್ಲಿ ಕಾಂಗ್ರೇಸ್ ಪಕ್ಷದ ಅಭ್ಯರ್ಥಿಯನ್ನು ಬಿಟ್ಟರೆ ಇನ್ನಾವುದೇ ಪಕ್ಷದ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆಲ್ಲಲ್ಲು ಸಾಧ್ಯವಿಲ್ಲವೆನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು.

೧೯೫೨ ರಲ್ಲಿ ಭಾರತದಾದ್ಯಂತವಾಗಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮುಂಬೈ ಪ್ರಾಂತ್ಯದ ವಿಧಾನ ಸಭೆಗೆ ರಾಯಬಾಗ ವಿಧಾನ ಸಭಾ ಮತಕ್ಷೇತ್ರದಿಂದ ಹುಂಜ ಚಿಹ್ನೆಯಿಂದ ಸ್ವತಂತ್ರವಾಗಿ ಸ್ಪರ್ಧಿಸಿ, ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ ಆಯ್ಕೆಯಾದವರು ಹಾಲುಮತ ಸಮುದಾಯದ ವಿ. ಎಲ್. ಪಾಟೀಲ. ಇವರು ಹಾಲುಮತಕ್ಕೆ ಸೇರಿದವರಾಗಿದರೂ ಕೂಡ ಜಾತ್ಯಾತೀತ ಮನೋಭಾವನೆಯನ್ನು ಹೊಂದಿದವರಾಗಿದ್ದರು. ಇವರ ಅಂದಿನ ಜಯ ರಾಜಕೀಯ ವಲಯದಲ್ಲಿ ಚರ್ಚೆಯ ಒಂದು ವಿಶೇಷ ವಿಷಯವಾಗಿತ್ತು. ಮೊದಲ ಚುನಾವಣೆಯಲ್ಲಿಯೇ ಜಯ ಸಾಧಿಸಿದ ಅವರಿಗೆ ಆಗಿನ್ನೂ ೩೦ ವರ್ಷ.

ಡಾ. ಬಾಬಾಸಾಹೇಬ ಅಂಬೇಡ್ಕರರು ೧೯೫೨ರ ಲೋಕಸಭಾ ಚುನಾವಣೆಯಲ್ಲಿ ಸೋಲುಂಡರು. ಆಗ ಅವರ ರಾಜಕೀಯ ಜೀವನ ಡೋಲಾಯಮಾನ ಸ್ಥಿತಿಯಲ್ಲಿತ್ತು. ಮುತ್ಸದ್ದಿ ರಾಜಕಾರಣಿಗಳಾದ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಲು ಅವರಿವರು ನೆರವಿಗೆ ಬಂದರಾದರೂ ಕೂಡ ಅವರ ಆಯ್ಕೆಗೆ ಇನ್ನೂ ೨೨

ವಿಧಾನ ಸಭೆ ಸದಸ್ಯರ ಮತಗಳ ಕೊರತೆಯಾಯಿತು. ಆಗ ವಿ. ಎಲ್. ಪಾಟೀಲರು ಆಗತ್ಯ ಮತಗಳ ಕ್ರೋಢೀಕರಣ ಮಾಡಿ ಅಂಬೇಡ್ಕರರನ್ನು ರಾಜ್ಯಸಭೆಗೆ ಆಯ್ಕೆ ಮಾಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು. ಅಂದಿನ ಪ್ರಧಾನ ಮಂತ್ರಿಗಳಾದ ಜವಾಹರಲಾಲ ನೆಹರು ಕೂಡ ಗೌಡರ ರಾಜಕೀಯಕ್ಕೆ ಬೆರಗಾಗಿದ್ದರು.

೧೯೫೭ ರಲ್ಲಿ ರಾಜ್ಯಗಳ ಪುನರ ವಿಂಗಡನೆಯ ನಂತರ ನಡೆದ ಚುನಾವಣೆಯಲ್ಲಿ, ರಾಯಬಾಗ ಮತಕ್ಷೇತ್ರ ಮೈಸೂರು ರಾಜ್ಯಕ್ಕೆ ಸೇರಿಕೊಂಡಿತು. ಆಗ ಮತ್ತೆ ವಿ. ಎಲ್. ಪಾಟೀಲರು ರಾಯಬಾಗ ಮತಕ್ಷೇತ್ರದಿಂದ ಹುಂಜ ಚಿಹ್ನೆಯ ಅಡಿಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಕಾಂಗ್ರೆಸ್ಸ ಅಭ್ಯರ್ಥಿಯನ್ನು ಸೋಲಿಸಿ ಜಯ ಸಾಧಿಸಿದರು. ಇದು ಅಂದಿನ ಪ್ರಧಾನ ಮಂತ್ರಿಯಾದ ಜವಾಹರಲಾಲರಲ್ಲಿ ದಿಗ್ಭ್ರಮೆಯನ್ನುಂಟು ಮಾಡಿತು. ರಾಜ್ಯ ಕಾಂಗ್ರೇಸ್ ನಾಯಕರಿಗೆ ಅವರನ್ನು ಕಾಂಗ್ರೇಸ್ ಪಕ್ಷಕ್ಕೆ ಕರೆತರುವಂತೆ ಸೂಚಿಸಿದರು. ಮುಂದಿನ ಕೆಲವು ದಿನಗಳಲ್ಲಿ ಇವರ ಜನಪ್ರಿಯತೆಯನ್ನು ಕಂಡ ರಾಮಕೃಷ್ಣ ಹೆಗಡೆ ಮತ್ತು ಎಸ್. ನಿಜಲಿಂಗಪ್ಪನವರು ವಿ. ಎಲ್. ಪಾಟೀಲರನ್ನು ಕಾಂಗ್ರೇಸ್‌ಗೆ ಸೇರ್ಪಡೆ ಮಾಡಿಕೊಂಡರು.

"ಸ್ವತಃ ಜವಾಹರಲಾಲ ನೆಹರು ಇವರ ರಾಜಕೀಯ ಪಟ್ಟುಗಳಿಗೆ ಬೆರಗಾಗಿದ್ದರು."[7] ೧೯೬೨ ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ವಿ. ಎಲ್. ಪಾಟೀಲರು ಕಾಂಗ್ರೇಸ್ ಪಕ್ಷದ ಅಭ್ಯರ್ಥಿಯಾಗಿ ಚಿಕ್ಕೋಡಿ ಮತಕ್ಷೇತ್ರದಿಂದ ಸ್ಪರ್ಧಿಸಿ ಜಯ ಪಡೆದುಕೊಂಡರು. ಪಾಟೀಲರು ಹಿಡಿದ ಹಟ ಬಿಡದ ಛಲದಂಕಮಲ್ಲರು. ಲೋಕಸಭಾ ಸದಸ್ಯರಾದ ಕೆಲವೇ ದಿನಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೇಸ್‌ನ ಪ್ರಭಾವವನ್ನು ಹೆಚ್ಚಿಸಿ ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಅಲ್ಲದೆ ಜಿಲ್ಲೆಯಲ್ಲಿ ಕಾಂಗ್ರೇಸ್ ಪಕ್ಷವನ್ನು ಸಂಘಟಿಸಿದರು. ಪಕ್ಷದಲ್ಲಿ ಹಲವರನ್ನು ಸೇರಿಸಿ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನವನ್ನು ಪಡೆದರು. ಗೌಡರು ಲೋಕಸಭೆಗೆ ಆಯ್ಕೆಯಾದಾಗ ಹಾಲುಮತ ಸಮುದಾಯದ ಪ್ರಭಾವಿ ನಾಯಕರಾಗಿ ರೂಪಗೊಂಡರು.

೧೯೬೭ ರಲ್ಲಿ ಮೈಸೂರು ರಾಜ್ಯದ ವಿಧಾನ ಸಭೆಗೆ ಸಾರ್ವತ್ರಿಕ ಚುನಾವಣೆಗಳು ಜರುಗಿದಾಗ ವಿ. ಎಲ್. ಪಾಟೀಲರು ಕಾಂಗ್ರೇಸ್ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದು ಮತ್ತೇ ಜಯ ಪಡೆದರು. ಈ ಚುನಾವಣೆಯಲ್ಲಿ ಕಾಂಗೇಸ್ ಪಕ್ಷ ಬಹುಮತವನ್ನು ಹೊಂದುವ ಮೂಲಕ ಸರ್ಕಾರದ ರಚನೆಗೆ ಮುಂದಾಯಿತು. ಆರಂಭದಲ್ಲಿ ಎಸ್. ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದರು. ನಂತರ ವೀರೇಂದ್ರ ಪಾಟೀಲರು ೨೯-೦೫-೧೯೬೮ ರಿಂದ ೨೭-೦೩-೧೯೭೧ರ ವರೆಗೆ ಮೈಸೂರ ರಾಜ್ಯದ ಮುಖ್ಯ ಮಂತ್ರಿಗಳಾದರು. ಆಗ ಅವರ ಸಚಿವ ಸಂಪುಟದಲ್ಲಿ ವಿ. ಎಲ್. ಪಾಟೀಲರು ಸಮಾಜ ಕಲ್ಯಾಣ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದರು.

೧೯೭೨ ರಲ್ಲಿ ಕರ್ನಾಟಕ ರಾಜ್ಯದ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆಗಳು ಜರುಗಿದವು. ಆಗ ವಿ. ಎಲ್. ಪಾಟೀಲರು ರಾಯಬಾಗ ಮತಕ್ಷೇತ್ರದಿಂದ ಮತ್ತೆ ಕಾಂಗ್ರೇಸ್ ಪಕ್ಷದ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದು ಜಯ ಪಡೆದುಕೊಂಡರು. ಚುನಾವಣೆಯಲ್ಲಿ ಬಹುಮತವನ್ನು ಪಡೆದುಕೊಂಡ ಕಾಂಗ್ರೇಸ್ ರಾಜ್ಯದಲ್ಲಿ ಸರ್ಕಾರವನ್ನು ರಚಿಸಿತು. ಡಿ. ದೇವರಾಜು ಅರಸರು ೧೯೭೨ ಮಾರ್ಚ ೨೮ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದರು. ಅರಸರು, ಪಾಟೀಲರನ್ನು ಆರಂಭದಲ್ಲಿ ಮಂತ್ರಿ ಮಂಡಲದಲ್ಲಿ

ಸೇರಿಸಿಕೊಳ್ಳದೇ ಉದ್ದೇಶ ಪೂರ್ವಕವಾಗಿಯೇ ದೂರವಿಟ್ಟರು. ಅವರನ್ನು ಮಂತ್ರಿ ಮಂಡಲದಲ್ಲಿ ಸೇರಿಸಿಕೊಳ್ಳುವಂತೆ ಪ್ರಬಲ ಒತ್ತಡ ಬಂದಾಗ, ಅಧಿಕಾರದ ಒಂದು ವರ್ಷವಿರುವಾಗ ಅಂದರೆ ೧೯೭೬ ರಲ್ಲಿ ತೋಟಗಾರಿಕಾ ಖಾತೆಯನ್ನು ನೀಡಿ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳಲಾಯಿತು. ಈ ಖಾತೆಯು ಗೌಡರ ತಮ್ಮ ಘನತೆಗೆ ತಕ್ಕದುದಾಗಿರಲಿಲ್ಲವೆಂದು ಭಾವಿಸಿದ್ದರು. ಅವರನ್ನು ಅಪಮಾನಿಸಲೆಂದೇ ಪ್ರಮುಖವಲ್ಲದ ಖಾತೆಯನ್ನು ನೀಡಲಾಗಿತ್ತು. ಇದರಿಂದ ಬೇಸರಗೊಂಡ ಅವರು ಕ್ಯಾಬಿನೆಟ ಸಭೆಗಳಿಗೆ ಹೋಗುತ್ತಿರಲಿಲ್ಲ. ಅರಸು ಅವರ ಜೊತೆಗಿನ ವಿರಸ ಉಲ್ಬಣಗೊಳ್ಳುತ್ತಲೇ ಹೋಯಿತು. ಈ ಮುಸುಕಿನ ಗುದ್ದಾಟಕ್ಕೆ ತೆರೆಎಳೆಯಲು ಬಯಸಿದ ಗೌಡರ ೧೯೭೭ ರಲ್ಲಿ ರಾಜಿನಾಮೆ ನೀಡುವ ಮೂಲಕ ಕಾಂಗ್ರೆಸ್‌ನಿಂದ ಹೊರಬಂದರು.

ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪ ಮತ್ತು ಅಂದಿನ ಪ್ರಧಾನ ಮಂತ್ರಿಯಾಗಿದ್ದ ಇಂದಿರಾ ಗಾಂಧಿಯವರ ಮಧ್ಯೆ ನೀಲಂ ಸಂಜೀವರೆಡ್ಡಿಯವರನ್ನು ರಾಷ್ಟ್ರಪತಿ ಚುನಾವಣೆಗೆ ಆಯ್ಕೆ ಮಾಡುವ ನಿಟ್ಟಿನಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಕಾಂಗ್ರೆಸ್, ೧೯೬೯ ರಲ್ಲಿ ಇಂದಿರಾ ಕಾಂಗ್ರೆಸ್(ಆಯ್) ಮತ್ತು ರೆಡ್ಡಿ ಕಾಂಗ್ರೆಸ್ (ಸಂಸ್ಥಾ/ಎಸ್)ಗಳೆಂದು ಇಬ್ಭಾಗವಾಯಿತು. ದೇವರಾಜು ಅರಸು ಇಂದಿರಾ ಕಾಂಗ್ರೆಸ್‌ನನ್ನು ಬೆಂಬಲಿಸಿದರು. ಇಂದಿರಾ ಕಾಂಗ್ರೆಸ್‌ನ ರಾಜ್ಯ ನಾಯಕರಾದ ಅರಸು ಅವರಿಂದ ದೂರವಾದ ಪಾಟೀಲರು ೧೯೭೭ ರಲ್ಲಿ ರೆಡ್ಡಿ ಕಾಂಗ್ರೆಸ್ ಸೇರ್ಪಡೆಯಾದರು. ಈ ಪಕ್ಷಾಂತರ ಘಟನೆ ಇಬ್ಬರ ಮಧ್ಯೆದಲ್ಲಿ ಹೊತ್ತಿ ಉರಿಯುತ್ತಿದ್ದ ದ್ವೇಷದ ಜ್ವಾಲೆಗೆ ತುಪ್ಪ ಸುರಿದಂತಾಯಿತು. ಪಾಟೀಲರನ್ನು ಹೇಗಾದರೂ ಮಾಡಿ ಸೆದೆಬಡಿಯಬೇಕೆಂಬ ಒಂದೇ ವಿಚಾರಕ್ಕಾಗಿ ರಾಯಬಾಗ ಕ್ಷೇತ್ರವನ್ನು ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರವನ್ನಾಗಿ ರೂಪಿಸಲಾಯಿತು. ಈ ಹುನ್ನಾರದ ಹಿಂದೆ ಕೇಂದ್ರ ಸಚಿವ ಬಿ. ಶಂಕರಾನಂದ ಮತ್ತು ದೇವರಾಜ ಅರಸು ಅವರಿರುವುದಾಗಿ ಇಂದಿಗೂ ಚುನಾವಣಾ ಸಮಯದಲ್ಲಿ ಜನಸಾಮಾನ್ಯರು ಮಾತನಾಡುತ್ತಾರೆ.

೧೯೭೮ ರಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ರಾಯಬಾಗ ವಿಧಾನ ಸಭಾ ಮತಕ್ಷೇತ್ರವು ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾಗಿ ಮಾರ್ಪಟ್ಟದ್ದರಿಂದಾಗಿ ವಿ. ಎಲ್. ಪಾಟೀಲರು ರೆಡ್ಡಿ ಕಾಂಗ್ರೆಸ್‌ದಿಂದ ಅರಬಾಂವಿ ಕ್ಷೇತ್ರದಿಂದ ಸ್ಪರ್ಧಿಸಿ, ಇಂದಿರಾ ಕಾಂಗೆಸ್‌ನ ವಿ. ಎಸ್. ಕೌಜಲಗಿಯವರನ್ನು ಎದುರಿಸಿದರು. ಪ್ರತಿಕೂಲ ಪರಿಸ್ಥಿತಿಯಿಂದಾಗಿ ಮತ್ತು ರಾಜಕೀಯ ಕುತಂತ್ರದಿಂದಾಗಿ ಪಾಟೀಲರು ಚುನಾವಣೆಯಲ್ಲಿ ಸೋಲನ್ನುಭವಿಸಿದರು. ಇಲ್ಲಿಯವರೆಗೆ ಸ್ಪರ್ಧಿಸಿದ ಎಲ್ಲ ಚುನಾವಣೆಗಳಲ್ಲಿ ಜಯವನ್ನೇ ಪಡೆದುಕೊಂಡ ಸಾಗುತ್ತಿದ್ದ ಗೌಡರಿಗೆ ಈ ಸೋಲು 'ಕಪ್ಪು ಚುಕ್ಕೆ' ಎಂದೇ ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗುತ್ತದೆ. ೧೯೮೩ರ ಸಮಯದಲ್ಲಿ ವಿ. ಎಲ್. ಪಾಟೀಲರು ರೆಡ್ಡಿ ಕಾಂಗ್ರೆಸ್ ಪಕ್ಷದಿಂದ ಜನತಾ ಪಕ್ಷಕ್ಕೆ ಬಂದರು.

೧೯೮೩ ರಲ್ಲಿ ಕರ್ನಾಟಕ ರಾಜ್ಯದ ವಿಧಾನ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ವಿ. ಎಲ್. ಪಾಟೀಲರು ಜನತಾ ಪಕ್ಷದಿಂದ ಕಾಗವಾಡ ಮತಕ್ಷೇತ್ರದಿಂದ ಚುನಾವಣಾ ಕಣಕ್ಕೆ ಇಳಿಯಬೇಕಾಯಿತು. ಈ ಚುನಾವಣೆಯಲ್ಲಿ ಗೌಡರು ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ, ಜಯ ಪಡೆದು ಆಯ್ಕೆಯಾದರು. ರಾಜ್ಯದಲ್ಲಿ ಜನತಾ ಪಕ್ಷ ಬಹುಮತವನ್ನು ಪಡೆದುಕೊಂಡು ಸರ್ಕಾರ ರಚಿಸುವ ಹಕ್ಕನ್ನು ಪಡೆಯಿತು. ರಾಮಕೃಷ್ಣ ಹೆಗಡೆಯವರು ೧೦-೦೧-೧೯೮೩ ರಿಂದ ೨೧-೦೧-೧೯೮೫ರ ವರೆಗೆ ಕರ್ನಾಟಕ ರಾಜ್ಯದ

ಮುಖ್ಯಮಂತ್ರಿಗಳಾದರು. ಆಗ ಅವರ ಸಚಿವ ಸಂಪುಟದಲ್ಲಿ ವಿ. ಎಲ್. ಪಾಟೀಲರು ಉದ್ದಿಮೆ ಮತ್ತು ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದರು.

೧೯೮೫ ರಲ್ಲಿ ಕರ್ನಾಟಕ ರಾಜ್ಯದ ವಿಧಾನ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ವಿ. ಎಲ್. ಪಾಟೀಲರು ಜನತಾ ಪಕ್ಷದಿಂದ ಮತ್ತೊಮ್ಮೆ ಕಾಗವಾಡ ಮತಕ್ಷೇತ್ರದಿಂದ ಸ್ಪರ್ಧಿಸಿ ಚುನಾವಣೆಯಲ್ಲಿ ಆಯ್ಕೆಯಾದರು. ರಾಜ್ಯದಲ್ಲಿ ಎರಡನೇ ಬಾರಿಗೆ ಜನತಾ ಪಕ್ಷ ಬಹುಮತವನ್ನು ಪಡೆದುಕೊಂಡು ಸರ್ಕಾರ ರಚಿಸಿತು. ರಾಮಕೃಷ್ಣ ಹೆಗಡೆಯವರು ೦೮-೦೧-೧೯೮೫ ರಿಂದ ೧೧-೦೮-೧೯೮೮ರ ವರೆಗೆ ಎರಡನೇ ಬಾರಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದರು. ಆಗ ವಿ. ಎಲ್. ಪಾಟೀಲರು ಹೆಗಡೆಯವರ ಅಲ್ಪಮತದ ಸರ್ಕಾರದಲ್ಲಿ ಕಂದಾಯ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದರು. ಇದೇ ಸಮಯದಲ್ಲಿ ಅಲ್ಪಮತದ ಜನತಾ ಪಕ್ಷವನ್ನು ಆಡಳಿತದಿಂದ ಉರುಳಿಸಲು ಕಾಂಗ್ರೇಸ್ ಸರ್ಕಾರ ಹೊಂಚುಹಾಕಿತು. ಅದು ತನ್ನ ಕಾರ್ಯಸಾಧನೆಗೆ ಆಯ್ಕೆಮಾಡಿಕೊಂಡದ್ದು ವಿ. ಎಲ್. ಪಾಟೀಲರನ್ನು. ೪೦ ಶಾಸಕರನ್ನು ಕರೆದುಕೊಂಡು ಬಂದರೆ ನಾವು ನಿಮಗೆ ಬೆಂಬಲವನ್ನು ನೀಡುವ ಮೂಲಕ ನಿಮ್ಮನ್ನೇ ಮುಖ್ಯ ಮಂತ್ರಿಯನ್ನಾಗಿ ಮಾಡುತ್ತವೆಂದರು. ಇಂದಿರಾ ಗಾಂಧಿಯವರ ಪರವಾಗಿ ಬೂಟಾಸಿಂಗ್ ಈ ಮಾತುಕತೆ ನಡೆಸಿದ್ದರು. ಆಗ ಪಾಟೀಲರು ಜನತಾ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷಕ್ಕೆ ದ್ರೋಹ ಬಗೆಯಲಾರೆ ಮತ್ತು ಹೆಗಡೆ ಬೆನ್ನಿಗೆ ಇರಿಯಲಾರೆ ಎನ್ನುವ ಒಂದೇ ಸಾಲಿನ ಉತ್ತರದ ಮೂಲಕ ಕಾಂಗ್ರೇಸ್‌ನ ಸಂಚನ್ನು ವಿಫಲಗೊಳಿಸಿದರು.

೧೯೮೯ ರಲ್ಲಿ ಜರುಗಿದ ವಿಧಾನ ಸಭೆಯ ಚುನಾವಣೆಯಲ್ಲಿ ಪಾಟೀಲರು ಅಥಣಿ ಪೂರ್ವ ಮತಕ್ಷೇತ್ರದಿಂದ ಸ್ಪರ್ಧಿಸುವುದಕ್ಕಾಗಿ ಕಾಂಗ್ರೇಸ್ ಮತ್ತು ಜನತಾ ಪಕ್ಷ ಬಾಗಿಲನ್ನು ತಟ್ಟಿದರು ಕೂಡ ಟಿಕೇಟ ಪಡೆಯುವಲ್ಲಿ ವಿಫಲರಾದರು. ಕೊನೆಗೆ ಸ್ವಂತ್ರತವಾಗಿ ಸ್ಪರ್ಧಿಸಿದರು ಸೋಲನ್ನನುಭಸ ಬೇಕಾಯಿತು.

೧೯೮೯ ರ ವಿಧಾನ ಸಭೆ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆಯವರು, ವಿ. ಎಲ್. ಪಾಟೀಲರಿಗೆ ಕಾಗವಾಡ ಮತಕ್ಷೇತ್ರದಿಂದ ಸ್ಪರ್ಧಿಸಲು ಟಿಕೇಟನ್ನು ನಿರಾಕರಿಸಿದರು. ಇದೇ ಕಾರಣಕ್ಕಾಗಿ ಅವರಿಬ್ಬರಲ್ಲಿ ವೈಷಮ್ಯ ಬೆಳೆಯುತ್ತ ಹೋಯಿತು. ಹೆಗಡೆಯವರಲ್ಲಿ ತಾವಿಟ್ಟ ವಿಶ್ವಾಸಕ್ಕೆ ಪೆಟ್ಟು ಬಿದ್ದಾಗ ಪಾಟೀಲರು ಅವರ ವಿರುದ್ಧ ಹೂಂಕರಿಸಿದರು. ಹೀಗಾಗಿ ವಿ. ಎಲ್. ಪಾಟೀಲರು ಮತ್ತೆ ಕಾಂಗ್ರೇಸ್ (ಆಯ್) ಪಕ್ಷವನ್ನು ಸೇರಿದರು. ಹೆಗಡೆಯವರು ೧೯೯೧ರ ಬಾಗಲಕೋಟ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದಾಗ ಕಾಂಗ್ರೇಸ್ ಪಕ್ಷದ ಪರವಾಗಿ ಪ್ರಚಾರ ಮಾಡುವ ಮೂಲಕ ಹಿಂದುಳಿದ ವರ್ಗಗಳ ಮತಗಳನ್ನು ಕ್ರೋಢಿಕರಿಸಿ ಹೆಗಡೆಯವರ ಸೋಲಿಗೆ ಪರೋಕ್ಷವಾಗಿ ಕಾರಣಿಭೂತರಾಗುವ ಮೂಲಕ ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸಿದರು. ಜನತಾ ಪಕ್ಷದ ಪ್ರಮುಖ ನಾಯಕರಾದ ಹೆಗಡೆಯವರನ್ನು ಸೋಲಿಸಿ ಮೂಲಕ ಪಾಟೀಲರು ಜನತಾ ಪಕ್ಷದಿಂದ ಸಂಪೂರ್ಣವಾಗಿ ದೂರುಳಿಯುವಂತಾಯಿತು. ೧೯೯೪ ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪಾಟೀಲರು ಮತ್ತೇ ಅಥಣಿ ಪೂರ್ವ ಮತಕ್ಷೇತ್ರದಿಂದ ಸ್ವತಂತ್ರವಾಗಿ ಸ್ಪರ್ಧಿಸಿ ಸೋಲನ್ನನುಭವಿಸಿದರು.

ಮೈಸೂರು ರಾಜ್ಯ ಪುನರ್ ರಚನೆಯಿಂದ ಹಿಡಿದು ೯೦ರ ದಶಕದವರೆಗೂ, ವಿ. ಎಲ್. ಪಾಟೀಲರು ಕರ್ನಾಟಕ ರಾಜ್ಯದ ರಾಜಕಾರಣದ ಏರಿಳಿತಗಳ ಕೇಂದ್ರಬಿಂದುವಾಗಿದ್ದರು. ಜಿಲ್ಲೆಯ ರಾಜಕಾರಣದಲ್ಲಿ ಪ್ರಭುತ್ವವನ್ನು ಸಾಧಿಸಿದ್ದ ಪಾಟೀಲರು, ಬಿ. ಶಂಕರಾನಂದರಿಂದ ಮೊದಲಗೊಂಡು ರಾಜ್ಯ-ರಾಷ್ಟ್ರ ಮಟ್ಟದ ನಾಯಕರನ್ನು ರೂಪಿಸಲು ಕಾರಣರಾದರು. "ರಾಜಕಾರಣದಲ್ಲಿ ಪಳಗಿದ ಒಂದು ದೊಡ್ಡ ದಂಡೇ ಇವರ ಕೈಯಲ್ಲಿತ್ತು. ಬೆಳಗಾವಿ ಜಿಲ್ಲೆಯ ರಾಜಕಾರಣದಲ್ಲಿ ಇವರು ಗಳಿಸಿದ್ದಷ್ಟು ಜನಪ್ರಿಯತೆಯನ್ನು, ಸಾಧಿಸಿದ ಸಾಧನೆಯ ಎತ್ತರವನ್ನು ಇಲ್ಲಿಯವರೆಗೂ ಯಾರೂ ಮಾಡಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಸಮಾಜದ ಎಲ್ಲ ವರ್ಗದವರೂ ಇವರ ನಾಯಕತ್ವವನ್ನು ಒಪ್ಪಿಕೊಂಡಿದ್ದರು. ಇವರದು ಜಾತ್ಯಾತೀತ ರಾಜಕಾರಣ. ಹೀಗಾಗಿ ಅಜಾಶತ್ರು ಎನಿಸಿಕೊಂಡಿದ್ದರು. ಅಷ್ಟೇ ಅಲ್ಲ ನುಡಿದಂತೆ ನಡೆಯುವ ಸರಳ ಮತ್ತು ಸಜ್ಜನಿಕೆಗೆ ಹೆಸರಾದವರು."[೨] ಇವರನ್ನು ಶೀಲವಂತ ರಾಜಕಾರಣಿಯೆಂದೇ ಗುರುತಿಸಲಾಗುತ್ತದೆ. ಉದಾರಿ ಮತ್ತು ಸಹೃದಯಿಗಳಾದ ಇವರು ನೇರ ನುಡಿಯ ದಿಟ್ಟ ನಾಯಕರು. ತಮ್ಮನ್ನು ನಂಬಿದವರು ಕಷ್ಟದಲ್ಲಿದ್ದಾಗ ಹಿಂದೆ ಮುಂದೆ ನೋಡದೇ ಕೈಬಿಚ್ಚಿ ಸಹಾಯ ಮಾಡುವ ಮನೋಭಾವದವರು. "ಸುಮಾರು ೪೦ ವರ್ಷಗಳ ರಾಜಕೀಯ ಜೀವನದಲ್ಲಿ ವೈಯಕ್ತಿಕವಾಗಿ ಯಾವ ಭ್ರಷ್ಟಾಚಾರ ಅರೋಪಗಳಿಗೆ ಸಿಲುಕದ ಸ್ವಚ್ಛ ರಾಜಕಾರಣಿ. ಜನರಿಂದ ದೊರೆತ ಪ್ರೀತಿ, ಗೌರವಗಳನ್ನು ಅಥವಾ ಸರ್ಕಾರದಲ್ಲಿ ದೊರೆತ ಅಧಿಕಾರವನ್ನು ಎಂದೂ ಹಣವಾಗಿ ಪರಿವರ್ತಿಸಿಕೊಂಡವರಲ್ಲ. ರಾಜಕೀಯ ಏರಿಳಿತದಲ್ಲಿ ಬಯಸಿದ್ದರೆ ಹೆಗಡೆಯವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ತಾವೇ ಮುಖ್ಯಮಂತ್ರಿಗಳಾಗಬಹುದಿತ್ತು. ನಂಬಿದವರ ಬೆನ್ನಿಗೆ ಚೂರಿ ಹಾಕುವ ಜಯಮಾನ ಅವರದಾಗಿರಲಿಲ್ಲ."[೩]

ಪಾಟೀಲರು ೧೯೭೮ರ ವರೆಗೆ ರಾಜಕೀಯವಾಗಿ ತೀರ ಬಲಿಷ್ಠರಾಗಿದ್ದರು. ೧೯೭೮ ರ ವಿಧಾನಸಭಾ ಚುನಾವಣೆಯ ಸೋಲು ಅವರಿಗೆ ಹಿನ್ನಡೆಯನ್ನುಂಟು ಮಾಡಿತು. ಬಹುಶಃ ರಾಯಬಾಗ ಮೀಸಲು ಕ್ಷೇತ್ರವಾದ ನಂತರ ಕ್ಷೇತ್ರ ಅಲೆಮಾರಿತನ ಅವರ ಸೋಲಿಗೆ ಒಂದು ಕಾರಣವೆಂದು ವಿಶ್ಲೇಷಿಸಲಾಗುತ್ತದೆ. ಆದರೂ ಆ ನಂತರದ ಕಾಗವಾಡ ವಿಧಾನಸಭಾ ಚುನಾವಣೆಗಳಲ್ಲಿ ಅವರ ಸಾಧಿಸಿದ ಪ್ರಚಂಡ ಜಯಭೇರಿ, ಅವರು ಜಿಲ್ಲೆಯ ಪ್ರಶ್ನಾತೀತ ನಾಯಕರೆಂದು ಸಾಬೀತು ಪಡಿಸಿತು. ಇವರು ಒಟ್ಟು ಆರು ಬಾರಿ ಶಾಸಕರಾಗಿ, ಒಂದು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

ವಿ. ಎಲ್. ಪಾಟೀಲರು ಕಾಂಗ್ರೆಸ್ ಪಕ್ಷದ ರಾಜಕೀಯದಲ್ಲಿಯೇ ಮುಂದುವರೆದಿದ್ದರೆ, ಅವರ ಜೀವಿತಾವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಅಥವಾ ಕೇಂದ್ರದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಪ್ರಭಾವಿ ನಾಯಕರಾಗಿ ಹೆಸರು ಮಾಡಬಹುದಿತ್ತು. ಆದರೆ ಅವರು ಕಾಂಗ್ರೆಸ್ಸಿನಿಂದ ದೂರವಾದರು. ಹೀಗಾಗಿ ರಾಯಬಾಗ ಪರಿಸರವನ್ನೊಳಗೊಂಡಂತೆ ಇರುವ ಚಿಕ್ಕೋಡಿ ಲೋಕಸಭಾ ಸಂಸದರಾಗಿ ಬಿ. ಶಂಕರಾನಂದ ೩೫ ವರ್ಷಗಳವರೆಗೆ ಅಂದರೆ ೭ ಬಾರಿ ಸಂಸದರಾಗಿ ಆಯ್ಕೆಯಾಗಿ ಸುಮಾರು ೩೦ ವರ್ಷಗಳವರೆಗೆ ಕೇಂದ್ರ ಸಚಿವರಾಗಿ ಕಾರ್ಯ ನಿರ್ವಹಿಸಿದರು.

ರಾಯಬಾಗ ಪರಿಸರದ ರಾಜಕೀಯ ರಂಗವನ್ನು ಬೆಳಗಿದ ಧ್ರುವತಾರೆಗಳು ಎರಡು. ಒಬ್ಬರು ವಿ. ಎಲ್. ಪಾಟೀಲ ಮತ್ತು ಇನ್ನೊಬ್ಬರು ಪಾಟೀಲರ ಗರಡಿಯಲ್ಲಿಯೇ ತರಬೇತಿಯನ್ನು ಹೊಂದಿ ಮುಂದೆ

ಹೆಮ್ಮರವಾಗಿ ಬೆಳೆದ ಎಸ್. ಆರ್. ಬಾನೆ (ಸಕಾರ). ಆರಂಭದಲ್ಲಿ ಒಂದೇ ವಿಚಾರಧಾರೆಯಲ್ಲಿದ್ದ ಅವರು ಮುಂದೆ ಕಾರಣಾಂತರಗಳಿಂದ ಬೇರ್ಪಡೆಗೊಂಡು ಬೇರೆ-ಬೇರೆ ವಿಚಾರಧಾರೆಗಳಲ್ಲಿ ಸಾಗಿ, ಉತ್ತರಧ್ರುವ ಮತ್ತು ದಕ್ಷಿಣಧ್ರುವದಂತಾದರು. ಮುಂದೆ ರಾಜಕೀಯವಾಗಿ ಈ ನಾಯಕರು ಒಂದು ಗೂಡಲೇ ಇಲ್ಲ.

ನಿಜವಾಗಿಯೂ ರಾಜ್ಯ ಕಂಡ ಸಮರ್ಥ ರಾಜಕೀಯ ನಾಯಕರಲ್ಲಿ ವಿ. ಎಲ್. ಪಾಟೀಲರು ಒಬ್ಬರು. ಒಂದು ದೃಷ್ಟಿಯಲ್ಲಿ ಇವರನ್ನು ವಿಫಲ ನಾಯಕರೆಂದರೆ ತಪ್ಪಾಗಲಿಕ್ಕಿಲ್ಲ. ಕಾಂಗ್ರೇಸ್ ಪಕ್ಷದಲ್ಲಿ ಕೊನೆಯವರೆಗೂ ಮುಂದುವರೆದಿದ್ದರೆ ಭವಿಷ್ಯದಲ್ಲಿ ಪ್ರಶ್ನಾತೀತ ನಾಯಕರಾಗಿ ಬೆಳೆಯುವುದರಲ್ಲಿ ಸಂಶಯವೇ ಇರಲಿಲ್ಲ. ಕಾಂಗ್ರೇಸ್‌ನಿಂದ ಜನತಾ ಪರಿವಾರಕ್ಕೆ ಬಂದರು. ಹೆಗಡೆಯವರ ಜೊತೆಗಿನ ಮನಸ್ತಾಪದಿಂದ ಜನತಾ ಪರಿವಾರದಿಂದಲೂ ಹೊರಬಂದರು. ಇದು ಅವರ ರಾಜಕೀಯ ಹಾದಿಯನ್ನೇ ಬದಲಿಸಿತು. ಬಹುಶಃ ಅವರು ಜನತಾ ಪರಿವಾರದಲ್ಲಿಯೇ ಮುಂದುವರೆದಿದ್ದರೆ, ಎಸ್. ಆರ್. ಬೊಮ್ಮಾಯಿ, ಹೆಚ್. ಡಿ. ದೇವೇಗೌಡ, ಜೆ. ಎಚ್. ಪಟೇಲರ ಸಮಕಾಲೀನರಾದ ಇವರು ಕೂಡ ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೇರುವ ಅರ್ಹತೆಯನ್ನು ಹೊಂದಿದವರಾಗಿದ್ದರು. ಮುಖ್ಯ ಮಂತ್ರಿ ಸ್ಥಾನಕ್ಕೇರುವ ಎಲ್ಲಾ ನಾಯಕತ್ವದ ಗುಣ ಮತ್ತು ಅರ್ಹತೆಗಳನ್ನು ಹೊಂದಿಯೂ ಆ ಸ್ಥಾನದಿಂದ ವಂಚಿತರಾದದ್ದು ದುರ್ದೈವವೇ ಸರಿ.

ರಾಮಕೃಷ್ಣ ಹೆಗಡೆಯವರ ಜೊತೆಗಿನ ಭಿನ್ನಾಭಿಪ್ರಾಯದ 'ಬಗ್ಗೆ ಬಹಳಷ್ಟು ಸಲ ಖೇದ ಪಟ್ಟುಕೊಂಡ ಪಾಟೀಲರು, ಹೆಗಡೆಯವರಷ್ಟೇ ರಾಜಕೀಯದಲ್ಲಿ ಮೌಲ್ಯಾಧಾರಿತ ರಾಜಕಾರಣವನ್ನು ಮಾಡಿದವರು. ಹೆಗಡೆಯವರನ್ನು ವಿರೋಧಿಸಿದ್ದು ಬಹುಶಃ ವಿ. ಎಲ್. ಪಾಟೀಲರ ರಾಜಕೀಯ ಬದುಕಿನ ತಪ್ಪು ನಿರ್ಧಾರವಾಗಿ ಪರಿಣಮಿಸಿತು. ಹೆಗಡೆಯವರು ಬಾಗಲಕೋಟೆ ಲೋಕಸಭಾ ಮತಕ್ಷೇತ್ರದಿಂದ ಸ್ಪರ್ಧಿಸಿದಾಗ ಸುಮಾರು ೨೦ ದಿನಗಳವರೆಗೂ ಆ ಮತಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿ ಅವರನ್ನು ಸೋಲಿಸುವಲ್ಲಿ ಯಶಸ್ವಿಯಾದರು. ಈ ಚುನಾವಣೆಯಲ್ಲಿ ಹೆಗಡೆಯವರು ಸೋತರು ಆದರೆ ವಿ. ಎಲ್. ಪಾಟೀಲರು ಅವರನ್ನು ಸೋಲಿಸುವ ಮೂಲಕ ಜನತಾ ಪಕ್ಷದಿಂದ ಸಂಪೂರ್ಣವಾಗಿ ದೂರ ಸರಿದಂತಾಯಿತು. ಇದು ಮುಂದೆ ಅವರನ್ನು ಅತಂತ್ರ ಸ್ಥಿತಿಗೆ ತಲಪುವಂತೆ ಮಾಡಿತು. ಮಾತೃ ಪಕ್ಷವಾದ ಕಾಂಗ್ರೇಸ್‌ಗೂ ಹೋಗಲು ಮನಸ್ಸಿಲ್ಲ, ಜೊತೆಗೆ ಜನತಾ ಪಕ್ಷದ ನಾಯಕರನ್ನು ಎದುರು ಹಾಕಿಕೊಂಡು ಆ ಪಕ್ಷದ ಬಾಗಿಲನ್ನೂ ಮುಚ್ಚಿಕೊಂಡರು. ಈ ಘಟನೆಗಳು ಅವರ ರಾಜಕೀಯ ಜೀವನಕ್ಕೆ ಹಿನ್ನೆಡೆಯಾಗಿ ಪರಿಣಮಿಸಿದವು. ಅವರ ಜೀವಿತದ ಉದ್ದಕ್ಕೂ ಈ ದುರಂತದಿಂದ ಹೊರ ಬರುವುದು ಅವರಿಗೆ ಸಾಧ್ಯವಾಗಲೇ ಇಲ್ಲ ಎನ್ನುವುದು ಒಂದು ವಿಚಾರವಾದರೆ, ಅವರ ಹಿಂಬಾಲಕರ ಅಭಿಪ್ರಾಯದಂತೆ ಇತ್ತೀಚಿನ ರಾಜಕಾರಣ ತುಂಬಾ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಜಾತಿಯತೆಯಿಂದ ಕೂಡಿದ್ದು ಇದರಲ್ಲಿ ಮುಂದುವರೆಯಲು ಮನಸ್ಸಾಗುತ್ತಿಲ್ಲ, ಇರುವ ಕೆಟ್ಟ ವ್ಯವಸ್ಥೆಯಲ್ಲಿ ಹೊಂದಾಣಿಕೆ ಮಾಡಿಕೊಂಡು, ಸ್ವಾಭಿಮಾನ ಬದಿಗಿಟ್ಟು ರಾಜಕಾರಣ ಮಾಡುವುದು ಅವರಿಂದ ಸಾಧ್ಯವಾಗಲಿಲ್ಲ. ತಮ್ಮ ಇಳಿವಯಸ್ಸಿನಲ್ಲಿ ರಾಜಕೀಯ ರಂಗದಿಂದ ಹಿಂದೆ ಸರಿದು ತಮ್ಮನ್ನು ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಅರ್ಪಿಸಿಕೊಂಡರು.

ಒಂದು ಸಲ ವಿ. ಎಲ್. ಪಾಟೀಲರು ತಮ್ಮ ಭಾಷಣದಲ್ಲಿ ತಮ್ಮ ಮತ್ತು ಬಿಜೆಪಿಯೊಂದಿಗಿನ ಸಂಬಂಧವನ್ನು ಬಿಚ್ಚಿಟ್ಟರು. ಜ್ಯೋತಿಷ್ಯಗಾರನೊಬ್ಬ ಗೌಡರಲ್ಲಿ ಬಂದು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಲು

ಸೂಚಿಸಿ ಅದರಿಂದ ಅವರ ರಾಜಕೀಯ ಜೀವನ ಉಜ್ವಲವಾಗುವುದಾಗಿ ಭವಿಷ್ಯ ನುಡಿದಿದ್ದ. ಆಗಿನ್ನೂ ಕೇಂದ್ರ ಮತ್ತು ರಾಜ್ಯದ ರಾಜಕೀಯದಲ್ಲಿ ಬಿಜೆಪಿಗೆ ಅಷ್ಟು ಪ್ರಾಮುಖ್ಯತೆ ಇರಲಿಲ್ಲ. ಒಂದು ವೇಳೆ ತಾನು ಅಂದು ಬಿಜೆಪಿ ಪ್ರವೇಶಿಸಿ ಪಕ್ಷದಲ್ಲಿ ಮುಂದುವರೆದಿದ್ದರೇ ಇಂದು ರಾಜ್ಯದ ನಾಯಕರಿಗಿಂತಲೂ ಪ್ರಭಾವಿ ನಾಯಕರಾಗಿ ಹೊರಹೊಮ್ಮುವುದರಲ್ಲಿ ಸಂಶಯವೇ ಇರುತ್ತಿರಲಿಲ್ಲ. ಮುಖ್ಯ ಮಂತ್ರಿ ಸ್ಥಾನವನ್ನು ವಹಿಸಿಕೊಳ್ಳುವುದರ ಜೊತೆಗೆ ಯಡಿಯೂರಪ್ಪನವರ ಸ್ಥಾನದಲ್ಲಿ ನಾನೀರುತ್ತಿದೆ ಎಂಬುದಾಗಿ ಭಾಷಣದಲ್ಲಿ ಹೇಳಿದರು. ಇದರಿಂದ ಗೌಡರಿಗೆ ಬಿಜೆಪಿಯ ಕಡೆಗೆ ಒಲವಿತ್ತು ಎನ್ನುವುದು ತಿಳಿದುಬರುತ್ತದೆ.

ವಿ. ಎಲ್. ಪಾಟೀಲರಿಗೆ, ಪ್ರತಾಪರಾವ, ವಿವೇಕರಾವ, ಅಮರಸಿಂಹ ಮತ್ತು ಪ್ರತಿಭಾ ಎಂಬ ನಾಲ್ಕು ಜನ ಮಕ್ಕಳು. ತಂದೆಯಂತೆ ಇವರೆಲ್ಲರೂ ಕೂಡ ತಮ್ಮನ್ನು ಸಾಮಾಜಿಕ ಸೇವೆಗಾಗಿ ಸಮರ್ಪಿಸಿಕೊಂಡವರು.

ವಿ. ಎಲ್. ಪಾಟೀಲರ ಅಭಿವೃದ್ಧಿ ಕಾರ್ಯಗಳಿಂದ ಪ್ರಭಾವಿತರಾದ ಕೆಲವರು ಅವರ ಅನುಯಾಯಿಗಳಾದರು. ಜೊತೆಗೆ ಇನ್ನೂ ಕೆಲವರು ಪಾಟೀಲರ ಪ್ರಭಾವಕ್ಕೊಳಪಟ್ಟು ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಕ್ರೇತ್ರಗಳಲ್ಲಿ ಆಸಕ್ತಿ ವಹಿಸಿದರು. ಪಾಟೀಲರು ಅವರನ್ನು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸುವ ಕೆಲಸವನ್ನು ಮಾಡಿದರು. ಇದರಿಂದಾಗಿ "ಈ ಪರಿಸರದಲ್ಲಿ ಹಾಲುಮತ ಸಮುದಾಯದವರು ಪ್ರಾಬಲ್ಯವನ್ನು ಹೊಂದಿದ್ದಾರೆ. ಹಾಲುಮತ ಸಮುದಾಯದವರು ರಾಯಬಾಗ ಕ್ಷೇತ್ರದಲ್ಲಿ ನಡೆಯುವ ಚುನಾವಣೆಯಲ್ಲಿ ಯಾರನ್ನು ಬೆಂಬಲಿಸುತ್ತಾರೋ, ಅವರು ಗೆಲುವನ್ನು ಪಡೆಯುತ್ತಾರೆ. ಹೀಗಾಗಿ ಬಾಗೆ ಪರಿಸರದ ಹಾಲುಮತದವರು ರಾಜಕೀಯವಾಗಿ ನಿರ್ಣಾಯಕ ಪಾತ್ರ ವಹಿಸುವಷ್ಟು ವರ್ಚಸ್ಸು ಹೊಂದಿದ್ದಾರೆ."[9]

ವಿ. ಎಲ್. ಪಾಟೀಲರದು ಜಾತ್ಯಾತೀತ ಮನೋಭಾವ ರಾಯಬಾಗ ಪರಿಸರದ ಗ್ರಾಮಗಳಲ್ಲಿರುವ ಹಲವಾರು ಚಿಕ್ಕ-ಪುಟ್ಟ ನಾಯಕರನ್ನು ಜಾತಿ, ಮತ, ಪಂಥಗಳನ್ನು ಪರಿಗಣಿಸದೆ ಅವರ ಸಾಮರ್ಥ್ಯವನ್ನಾಧರಿಸಿ ಅವರನ್ನು ನಾಯಕರನ್ನಾಗಿಸಿದರು. ಆದರೆ ಒಂದಂತು ನಿಜ. ಇವರ ಮೊಗಸಾಲೆಯಲ್ಲಿ ಪಳಗಿದ ನಾಯಕರಲ್ಲಿ ಹೆಚ್ಚಿನವರು ಹಾಲುಮತ ಸಮುದಾಯದವರು. ಉದಾಹರಣೆಗೆ ಎಸ್. ಆರ್. ಬಾನೆ (ಸರ್ಕಾರ), ಜ್ಯೋತಿರಾವ ಬಂತಿ, ಮಲ್ಲಪ್ಪ ಚೌಗಲಾ, ಮಾರುತಿ ಗೋಕಾಕ, ಅಣ್ಣಪ್ಪ ಘಂಟಿ ಮೊದಲಾದವರೆಲ್ಲರೂ ಹಾಲುಮತದವರು. ಈ ಅಂಶದ ಹಿನ್ನೆಲೆಯಲ್ಲಿ ತರ್ಕಿಸಿದಾಗ ವಿ. ಎಲ್. ಪಾಟೀಲರ ಮನಸ್ಸಿನ ಯಾವುದೋ ಮೂಲೆಯಲ್ಲಿ ಹಾಲುಮತ ಸಮುದಾಯದ ಬಗ್ಗೆ ಕಳಕಳಿ ಇದ್ದಿರಬೇಕೆನ್ನಿಸುತ್ತದೆ. ಉದಾಹರಣೆಗೆ ಜ್ಯೋತಿರಾವ ಬಂತಿಯವರು ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಅಧಿಕಾರ ಪಡೆದುಕೊಂಡರು.

ಇದೇ ಸಮಯದಲ್ಲಿ ವಿ. ಎಲ್. ಪಾಟೀಲರ ಮಗನಾದ ವಿವೇಕರಾವ ಪಾಟೀಲರು ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ (ಡಿ.ಸಿ.ಸಿ.) ಬ್ಯಾಂಕನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ರಾಮಕೃಷ್ಣ ಹೆಗಡೆಯವರ ಅಧಿಕಾರ ವಿಕೇಂದ್ರಿಕರಣ ಸಿದ್ಧಾಂತದ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತಗಳು ಅಸ್ತಿತ್ವಕ್ಕೆ ಬಂದಾಗ ಇನ್ನೊರ್ವ ಪುತ್ರರಾದ ಅಮರಸಿಂಹ ಪಾಟೀಲರು ರಾಯಬಾಗ ತಾಲೂಕಿನ ಬೆಂಡವಾಡ ಮತಕ್ಷೇತ್ರದಿಂದ ಆಯ್ಕೆಯಾಗಿ

ಪ್ರಥಮ ಬಾರಿಗೆ ಅಸ್ತಿತ್ವಕ್ಕೆ ಬಂದ ಬೆಳಗಾವಿ ಜಿಲ್ಲಾ ಪಂಚಾಯತಿಗೆ ಪ್ರಥಮ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಮೂಲಕ ಜಿಲ್ಲೆಯ ನಾಯಕರಾದರು. ನಂತರದ ದಿನಗಳಲ್ಲಿ ಅವರು ಬೆಳಗಾವಿ ಲೋಕ ಸಭಾ ಮತಕ್ಷೇತ್ರದ ಕಾಂಗ್ರೇಸ್ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾದರು. ಇನ್ನೊರ್ವ ಮಗನಾದ ಪ್ರತಾಪರಾವ ರಾಯಬಾಗ ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರಾಗಿ ಸಹಕಾರಿ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ವಿವೇಕರಾವ ಪಾಟೀಲರು ೨೦೧೬ರಲ್ಲಿ ನಡೆದ ಕರ್ನಾಟಕ ಸರ್ಕಾರದ ವಿಧಾನ ಪರಿಷತ್ ಚುನಾವಣೆಗೆ ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಡಳಿತಾರೂಡ ಕಾಂಗ್ರೇಸ್ ಅರ್ಭ್ಯರ್ಥಿಯನ್ನು ಸೋಲಿಸಿ ಅತೀ ಹೆಚ್ಚು ಮತಗಳ ಅಂತರದಿಂದ ಆಯ್ಕೆಯಾಗಿರುವುದನ್ನು ಗಮನಿಸಿದರೆ, ವಿ. ಎಲ್. ಪಾಟೀಲರ ನಂತರವೂ ಜಿಲ್ಲೆಯ ರಾಜಕಾರಣದಲ್ಲಿ ಹಾಲುಮತ ಸಮುದಾಯದ ನಾಯಕರು ಇನ್ನೂ ಪ್ರಾಬಲ್ಯ ಹೊಂದಿರುವುದು ಕಂಡು ಬರುತ್ತದೆ.

ರಾಯಬಾಗ ತಾಲೂಕಿನ ರಾಜಕೀಯವೆಂದರೆ ಅದು ಹೆಚ್ಚು ಕಡಿಮೆ ಹಾಲುಮತ ಸಮುದಾಯದ ರಾಜಕೀಯವೆಂದು ಗುರುತಿಸಲಾಗುತ್ತದೆ. ವಿ. ಎಲ್. ಪಾಟೀಲ ಮತ್ತು ಎಸ್. ಆರ್. ಬಾನೆ ಅವರ ನಂತರದ ಎರಡನೇ ಹಂತದ ಸಾಕಷ್ಟು ರಾಜಕೀಯ ನಾಯಕರನ್ನು ವಿವಿಧ ಊರುಗಳಲ್ಲಿ ಕಂಡು ಬರುತ್ತಾರೆ. ಈ ನಾಯಕರನ್ನು ಪರಾಮರ್ಶಿಸದಿದ್ದಲ್ಲಿ ಈ ಪರಿಸರದ ರಾಜಕೀಯ ಸಂಚಲವನ್ನು ಪೂರ್ಣ ಪ್ರಮಾಣದಲ್ಲಿ ಅರ್ಥೈಯಿಸುವುದು ಸಾಧ್ಯವಾಗುವುದಿಲ್ಲ. ರಾಯಬಾಗ ಪರಿಸರದ ಹಾಲುಮತ ಬಾಹುಳ್ಯದ ರಾಜಕೀಯ ಕೇಂದ್ರಗಳೆಂದರೆ ರಾಯಬಾಗ, ಹಾರೂಗೇರಿ, ಮುಗಳಖೋಡ, ಹಿಡಕಲ್ಲ, ಅಲಕನೂರ, ಅಳಗವಾಡಿ ಗ್ರಾಮಗಳು.

ರಾಜ್ಯ ಮಟ್ಟದಲ್ಲಿ ಗುರುತಿಸಬಹುದಾದ ಕುರುಬರ ಪ್ರಾಬಲ್ಯವಿರುವ ರಾಯಬಾಗ ಪರಿಸರದ ರಾಜಕೀಯ ಶಕ್ತಿಯ ಕೇಂದ್ರಗಳು ಎರಡು. ಒಂದು ವಿ. ಎಲ್. ಪಾಟೀಲರ ತವರು ನೆಲವಾದ ಗುಡ್ಡದ ಬ್ಯಾಕೂಡ. ಇನ್ನೊಂದು ಸಿದ್ದಲಿಂಗ ರಾಮಾ ಬಾನೆ (ಸರ್ಕಾರ) ಹುಟ್ಟೂರಾದ ಮೊರಬ. ಇತ್ತೀಚೀಗೆ ಸೇರ್ಪಡೆಯಾದ ಇನ್ನೊಂದು ಕೇಂದ್ರ ವಿವೇಕರಾವ ಪಾಟೀಲರ ಆಡಳಿತ ಕೇಂದ್ರವಾದ ರಾಯಬಾಗದ ರೈಲ್ವೇ ಸ್ಟೇಶನದ ಕರಡಿಗುಡ್ಡ (ಕಡ್ಡಿಗುಡ್ಡ).

ರಾಯಬಾಗದ ಪಟ್ಟಣ ಪಂಚಾಯತಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ನಡೆದ ಚುನಾವಣೆಗಳಲ್ಲಿ ವಿವೇಕರಾವ ಪಾಟೀಲರ ನೇತೃತ್ವದ ಪೆನಲ್ ಜಯ ಪಡೆದು ಆಡಳಿತ ನಿರ್ವಹಣೆಯನ್ನು ಮಾಡುತ್ತ ಬಂದಿರುವುದು. ೨೦೧೩ರ ರಾಜ್ಯ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಪ್ರದೀಪ ಮಾಳಗಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಅಲ್ಪ ಮತಗಳಿಂದ ವೀರೋಚಿತ ಸೋಲನ್ನನುಭವಿಸಿದರು. ಇವರು ಇಷ್ಟು ಪ್ರಮಾಣದಲ್ಲಿ ಮತ ಪಡೆಯುವುದರ ಹಿಂದಿನ ಶಕ್ತಿಯಾಗಿದ್ದ ವಿವೇಕರಾವ ಪಾಟೀಲರ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ೨೦೧೧ ಮತ್ತು ೨೦೧೬ರಲ್ಲಿ ನಡೆದ ರಾಯಬಾಗ ತಾಲೂಕ ಪಂಚಾಯತಿ ಚುನಾವಣೆಗಳಲ್ಲಿ ಇವರು ನಿರ್ವಹಿಸಿದ ಪಾತ್ರ ವಿಶಿಷ್ಟವಾದದ್ದು. ಈ ಅವಧಿಗಳಲ್ಲಿ ಇವರು ಸೂಚಿಸಿದ ಅಭ್ಯರ್ಥಿಗಳು ಅಧ್ಯಕ್ಷರುಗಳಾಗಿ ಆಯ್ಕೆಯಾದದ್ದನ್ನು ವಿಶೇಷವೆಂದು ಪರಿಭಾವಿಸಬೇಕಾಗುತ್ತದೆ. ೨೦೧೧ ಮತ್ತು ೨೦೧೬ ರಲ್ಲಿ ನಡೆದ ಬೆಳಗಾವಿ ಜಿಲ್ಲಾ ಪಂಚಾಯತಿಯ ರಾಯಬಾಗ ಗ್ರಾಮೀಣ ಮತಕ್ಷೇತ್ರದಿಂದ ಅವರ

ಮಗ ಪ್ರಣಯ ಪಾಟೀಲರ ಆಯ್ಕೆಯಾಗಿರುವರು. ಈ ಬೆಳವಣಿಗೆಗಳು ಒಟ್ಟಾರೆಯಾಗಿ ವಿವೇಕರಾವ ಪಾಟೀಲರು ಸದ್ಯ ರಾಯಬಾಗ ಪರಿಸರದ ಮೇಲೆ ಸಾಧಿಸಿದ ಬಿಗಿ ಹಿಡಿತವನ್ನು ಸಾಕ್ಷೀಕರಿಸುತ್ತದೆ.

೨೦೧೬ರ ರಾಯಬಾಗ ತಾಲೂಕಾ ಪಂಚಾಯತಿ ಚುನಾವಣೆಯಲ್ಲಿ ರಾಯಬಾಗ ಗ್ರಾಮೀಣ ಮತಕ್ಷೇತ್ರದಿಂದ ಸತ್ತೆವ್ವಾ ಸಿದ್ದಪ್ಪ ಪೂಜೇರಿ, ಖಣದಾಳ ಮತಕ್ಷೇತ್ರದಿಂದ ಮಾಯಪ್ಪಾ ಶಿದ್ರಾಮ ಕರಿಹೋಳಿ, ಬೆಕ್ಕೇರಿ ಮತಕ್ಷೇತ್ರದಿಂದ ಅಶೋಕ ಭೀಮಪ್ಪ ಬಾಣಸಿ, ಇಟನಾಳ ಮತಕ್ಷೇತ್ರದಿಂದ ಮಹಾದೇವ ಸಿದ್ದಪ್ಪ ಮಾರಾಪೂರ, ನಿಲಜಿ ಮತಕ್ಷೇತ್ರದಿಂದ ಪೂರ್ಣಿಮಾ ಪರಶುರಾಮ 'ಕೋಳೆಕರ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿರುವರು. ಇವರೆಲ್ಲ ಹಾಲುಮತ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಜಿಲ್ಲಾ ಮಟ್ಟದಲ್ಲಿ ಗುರುತಿಸಬಹುದಾದ ಕುರುಬರ ಪ್ರಾಬಲ್ಯವಿರುವ ನೆಲ ಹಾರೂಗೇರಿ. ಭೌಗೋಳಿಕವಾಗಿ ಈ ತಾಲೂಕಿನ ಮೂರನೇ ಅತೀ ದೊಡ್ಡ ಊರಾಗಿದ್ದು, ಇಂದು ಪುರಸಭೆಯಾಗಿ ಮೇಲ್ದರ್ಜೆಗೇರಿದೆ. ಆರಂಭದಲ್ಲಿ ರಾಮಕೃಷ್ಣ ಹೆಗಡೆಯವರ ಕಾಲಾವಧಿಯಿಂದ ಅಂದರೆ ೧೯೮೭ ರಿಂದ ಆಡಳಿತ ವಿಕೇಂದ್ರೀಕರಣ ತತ್ವದಡಿಯಲ್ಲಿ ಅಸ್ತಿತ್ವಕ್ಕೆ ಬಂದ ಮಂಡಲ ಪಂಚಾಯತಿ ಇತ್ತು. ನಂತರ ಗ್ರಾಮ ಪಂಚಾಯತಿಯಾಯಿತು. ಆರಂಭದಲ್ಲಿ ಕಡಿಮೆ ಸದಸ್ಯರನ್ನು ಹೊಂದಿದ್ದು ನಂತರದಲ್ಲಿ ಅವರ ಸಂಖ್ಯೆ ೭೭ಕ್ಕೆ ಹೆಚ್ಚುವುದರ ಮೂಲಕ ರಾಜ್ಯದ ಅತೀ ದೊಡ್ಡ ಗ್ರಾಮ ಪಂಚಾಯತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆರಂಭದಲ್ಲಿ ಅಸ್ತಿತ್ವದಲ್ಲಿದ್ದ ಮಂಡಲ ಪಂಚಾಯತಿಗೆ, ಮಂಡಲ ಪ್ರಧಾನರಾಗಿ ಮಲ್ಲಪ್ಪ ಭೀಮಪ್ಪ ಚೌಗಲಾ ೧೯೬೮ ರಿಂದ ೧೯೭೭ರ ವರೆಗೆ ಕಾರ್ಯನಿರ್ವಹಿಸಿರುವರು. ಇವರ ತರುವಾಯ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಹಣಮಂತ ಶಂಕರೆಪ್ಪಾ ಚೌಗಲಾ ೧೯೮೧ ರಿಂದ ೦೪-೧೦-೧೯೯೨ರ ವರೆಗೆ, ಸತ್ಯೆಪ್ಪಾ ರಾಯಪ್ಪ ಬಂತಿ ೦೧-೦೪-೨೦೦೦ ರಿಂದ ೦೯-೦೯-೨೦೦೨ರ ವರೆಗೆ, ನಿಂಗಪ್ಪ ಸಿದ್ದಪ್ಪ ಚೌಗಲಾ ೨೯-೧೧-೨೦೦೨ ರಿಂದ ೩೧-೦೨-೨೦೦೫ರ ವರೆಗೆ, ಮಾಯವ್ವಾ ಭೀಮಪ್ಪ ಸವದತ್ತಿ ೦೧-೦೪-೨೦೧೦ ರಿಂದ ೨೬-೧೧-೨೦೧೨ರ ವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರೆಲ್ಲರು ಕುರುಬ ಸಮುದಾಯದವರು. ಮೀಸಲಾತಿಯ ಸಂದರ್ಭಗಳನ್ನು ಹೊರತು ಪಡಿಸಿ ಉಳಿದೆಲ್ಲ ಅವಧಿಯ ಅಧಿಕಾರವನ್ನು ಕುರುಬರೇ ನಿರ್ವಹಿಸಿದ್ದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

೧೯೯೫ ರಲ್ಲಿ ನಡೆದ ಬೆಳಗಾವಿ ಜಿಲ್ಲಾ ಪಂಚಾಯತಿಗೆ ಹಾರೂಗೇರಿ-ಹಿಡಕಲ್ಲ ಮತಕೇತ್ರದಿಂದ ಜೊತೆಪ್ಪಾ ರಾಯಪ್ಪಾ ಬಂತಿ ಆಯ್ಕೆಯಾದರು. ನಂತರದಲ್ಲಿ ಇವರು ರಾಜ್ಯ ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷರಾದರು. ರಾಯಬಾಗ ತಾಲೂಕಾ ಪಂಚಾಯತಿ ಅಧ್ಯಕ್ಷರಾಗಿ ಶ್ರೀಮತಿ ಕಸ್ತೂರಿ ಬಸವರಾಜ ಮುಗಳಿಹಾಳ ಹಾಗೂ ಶ್ರೀಮತಿ ಲಕ್ಕವ್ವ ಸಿದ್ದಪ್ಪ ಹಾಡಕಾರ ಆಯ್ಕೆಯಾಗಿದ್ದರು. ಅಶೋಕ ಭೀಮಪ್ಪ ಪಡೆದಾರ ೩೦ ತಿಂಗಳ ಅವಧಿಗೆ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಸದ್ಯ ಬೆಳಗಾವಿ ಜಿಲ್ಲಾ ಗ್ರಾಮೀಣ ಕಿಸಾನ ಮತ್ತು ಕೃಷಿ ಕಾರ್ಮಿಕ ವಿಭಾಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವರು. ಇವರ ತಾಯಿ ಮಾಯವ್ವ ಭೀಮಪ್ಪ ಪಡೇದಾರ ಕುಡಚಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಆಯ್ಕೆಯಾಗಿದ್ದರು. ಪರಶುರಾಮ ಯಂಕಪ್ಪ ಧರ್ಮಟ್ಟಿ ಯವರು ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದರು. ಹಾರೂಗೇರಿ ಗ್ರಾಮ ಪಂಚಾಯತಿಯು ೨೦೧೫ ರಲ್ಲಿ ಪುರಸಭೆಯಾಗಿ

ಮೇಲ್ದರ್ಜೆಗೇರಿ ೨೦೧೬ ರಲ್ಲಿ ಚುನಾವಣೆ ನಡೆಯಿತು. ಹಾಲುಮತಸ್ಥರಾದ ವತ್ಸಲಾ ನಿಂಗಪ್ಪ ಚೌಗಲಾ, ಸವಿತಾ ಭ. ಬಂತಿ, ನಿರ್ಮಲಾ ಪ್ರಕಾಶ ಕುರಿ, ಸಂತೋಷ ಶಿ. ಸಿಂಗಾಡಿ, ವಸಂತ ಭ. ಲಾಳಿ, ಜ್ಞಾನೇಶ್ವರ ಶಂ. ಧರ್ಮಟ್ಟಿ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿರುವರು. ಒಟ್ಟು ೨೩ ಸದಸ್ಯರಲ್ಲಿ ೬ ಜನರು ಹಾಲುಮತ ಸಮುದಾಯದಿಂದ ಆಯ್ಕೆಯಾಗಿರುವರು.

ಕುರುಬ ಗೌಡರನ್ನು ಹೊಂದಿರುವ ಗ್ರಾಮ ಹಿಡಕಲ್ಲ. ಈ ಗ್ರಾಮದ ಬಹುಸಂಖ್ಯಾತರು ಕುರುಬರು. ಊರಿನ ಗೌಡರ ಜೊತೆ ರಕ್ತ ಸಂಬಂದವನ್ನು ಹೊಂದಿದ್ದ ವಿ. ಎಲ್. ಪಾಟೀಲರು ಪ್ರಾಥಮಿಕ ಶಿಕ್ಷಣವನ್ನು ಇಲ್ಲಿಯೇ ಪಡೆದುಕೊಂಡರು. ಹೀಗಾಗಿ ಪಾಟೀಲರ ರಾಜಕೀಯ ನಂಟನ್ನು ಆರಂಭದಿಂದಲು ಹೊಂದಿರುವ ಹೆಗ್ಗಳಿಕೆ ಈ ಊರಿನದ್ದಾಗಿದೆ. ಇಂದಿಗೂ ಕೂಡ ಇಲ್ಲಿಯ ಎಲ್ಲ ರಾಜಕೀಯ ನಿರ್ಧಾರಗಳಿಗೆ ಪಾಟೀಲ ಮನೆತನದ ನಾಯಕರಿಂದಲೇ ಅಂಕಿತ ಬೀಳುವುದು ಸಾಮಾನ್ಯದ ಸಂಗತಿ. ಹಾಲುಮತಸ್ಥರಲ್ಲದ ಜೈನ, ಉಪ್ಪಾರ, ಲಿಂಗಾಯತ ಸಮುದಾಯದ ನಾಯಕರು ಕೂಡ ವಿ. ಎಲ್. ಪಾಟೀಲರ ಅನುಯಾಯಿಗಳಾಗಿರುವುದು ಇಲ್ಲಿಯ ವಿಶೇಷ.

ಸಿದಗೌಡ ಅಪ್ಪಾಗೌಡ ಪಾಟೀಲರು ಗ್ರಾಮದ ಹಿರಿಯ ಗೌಡರು. ಇವರ ಪುತ್ರ ವಸಂತರಾವ ಪಾಟೀಲ. ಇವರನ್ನು ವಿ. ಎಲ್. ಪಾಟೀಲರು ೧೮ನೇ ವಯಸ್ಸಿನಲ್ಲಿರುವಾಗ ರಾಯಬಾಗ ಸಕ್ಕರೆ ಕಾರ್ಖಾನೆಗೆ ನಿರ್ದೇಶಕರನ್ನಾಗಿ ಮಾಡಿದರು. ಇವರು ಪಿ. ಎಲ್. ಡಿ ಬ್ಯಾಂಕ ರಾಯಬಾಗದ ಉಪಾಧ್ಯಕ್ಷರಾಗಿ ಹತ್ತು ವರ್ಷಗಳ ಕಾರ್ಯನಿರ್ವಹಿಸಿದರು. ಕೋ-ಆಪ್‌ರೇಟಿವ್ಹ್ ಪ್ರಿಂಟಿಂಗ್ ಪ್ರೆಸ್‌ನ ಅಧ್ಯಕ್ಷರಾಗಿ, ಬೆಳಗಾವಿಯ ಡಿ. ಸಿ. ಸಿ. ಬ್ಯಾಂಕನ ಅಡ್ವಯಿಝರಿ ಕಮೀಟಿಯ ಸದಸ್ಯರಾಗಿ, ಬೆಳಗಾವಿ ಜಿಲ್ಲಾ ಕಾಂಗ್ರೇಸ್ ಕಮೀಟಿಗೆ ೨ ವರ್ಷಗಳವರೆಗೆ ಸೆಕ್ರೆಟರಿಯಾಗಿ ಸೇವೆ ಸಲ್ಲಿಸಿರುವರು. ಇವರು ವಿ. ಎಲ್. ಪಾಟೀಲರ ಜೊತೆ ನೇರ ಒಡನಾಟ ಹೊಂದಿದ್ದು ಅವರ ಎಲ್ಲ ಕೆಲಸ ಕಾರ್ಯಗಳಲ್ಲಿ ಸಹಾಯಕರಾಗಿ ಭಾಗವಹಿಸುತ್ತಿದ್ದರು. ಅವರಲ್ಲಿದ್ದ ಸತತ ಪರಿಶ್ರಮದ ಗುಣಲಕ್ಷಣ ಇವರ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತು. ಪ್ರಥಮ ಬಾರಿಗೆ ಅಸ್ತಿತ್ವಕ್ಕೆ ಬಂದ ಬೆಳಗಾವಿ ಜಿಲ್ಲಾ ಪಂಚಾಯತಿಯ ಹಾರೂಗೇರಿ-ಹಿಡಕಲ್ಲ ಮತಕ್ಷೇತ್ರಕ್ಕೆ ವಸಂತರಾವ ಸಿದಗೌಡ ಪಾಟೀಲರು ಆಯ್ಕೆಯಾಗಿದ್ದರು.

ಹಿಡಕಲ್ಲ ಗ್ರಾಮ ಪಂಚಾಯತಿಯ ಆಡಳಿತದಲ್ಲಿ ಹಾಲುಮತಸ್ಥರ ಪ್ರಾಬಲ್ಯವಿರುವುದು ಕಂಡು ಬರುತ್ತದೆ. ಶೇಖರ ಸಿದ್ರಾಮ ಗಲಗಲಿ ಗ್ರಾಮದ ಮಂಡಳ ಪ್ರಧಾನರಾಗಿ ಕಾರ್ಯನಿರ್ವಹಿಸಿದ್ದರು. ಭೀಮಪ್ಪ ಅಪ್ಪಣ್ಣ ಬನಹಟ್ಟಿ, ಲಕ್ಷ್ಮೀಬಾಯಿ ಹಣಮಂತ ಕುಳ್ಳೋಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವರು. ಬಾಬುರಾವ ಲಕ್ಷ್ಮಣರಾವ ಪಾಟೀಲ ಮತ್ತು ಅರುಣಾ ಅಮರ ಪಾಟೀಲ ಮತ್ತು ಆರತಿ ಅಪ್ಪಾಸಾಬ ಬಂಡಗಾರ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ರಾಯಬಾಗ ತಾಲೂಕ ಪಂಚಾಯತಿಗೆ ಸಿದಗೌಡ ಬಾಬುರಾವ ಪಾಟೀಲ ಆಯ್ಕೆಯಾಗಿದ್ದರು. ೨೦೧೬ ರಲ್ಲಿ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಸುವರ್ಣ ರಾಮಚಂದ್ರ ಬೆಳಗಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಸದ್ಯ ಕಾರ್ಯ ನಿರ್ವಹಿಸುತ್ತಿರುವರು. ೨೦೧೭ ರಲ್ಲಿ ನಡೆದ ಕುಡಚಿ ಕೃಷಿ ಮಾರುಕಟ್ಟೆ ಸಮಿತಿಗೆ ರಾಮಣ್ಣ ಗುರುಸಿದ್ದಪ್ಪ ಕಂಕಣವಾಡಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿರುವರು.

ರಾಯಬಾಗ ತಾಲೂಕಿನ ಭೌಗೋಳಿಕ ವಿಸ್ತರ್ಣದಲ್ಲಿ ಎರಡನೇ ದೊಡ್ಡ ಕ್ಷೇತ್ರ ಮುಗಳಖೋಡ. ಇಲ್ಲಿಯ ಪ್ರಮುಖ ಸಮುದಾಯಗಳೆಂದರೆ ಕುರುಬ, ಲಿಂಗಾಯತ, ದಲಿತ ಮತ್ತು ಜೈನ. ಬಹುಸಂಖ್ಯಾತರಾದ ಕುರುಬರು ರಾಜಕೀಯವಾಗಿ ಬಲಿಷ್ಠರು. ೫೬ ಸದಸ್ಯರನ್ನು ಹೊಂದಿದ ಮುಗಳಖೋಡ ಗ್ರಾಮ ಪಂಚಾಯತಿಯು ರಾಜ್ಯದ ಎರಡನೇ ದೊಡ್ಡ ಪಂಚಾಯತಿಯಾಗಿತ್ತು. ಸದ್ಯ ಅದು ೨೩ ಸದಸ್ಯರ ಪುರಸಭೆಯಾಗಿ ಮೇಲ್ದರ್ಜೆಗೇರಿದೆ. ಆರಂಭದಲ್ಲಿ ಈ ಗ್ರಾಮ ಪಂಚಾಯತಿಯು ಮುಗಳಖೋಡ ಮತ್ತು ಪಾಲಬಾಂವಿ ಗ್ರಾಮಗಳನ್ನು ಒಳಗೊಂಡಿತ್ತು. ಮಂಡಲ ಪಂಚಾಯತಿ ಆರಂಭವಾದ ಸಂದರ್ಭದಲ್ಲಿ ಅದರ ಮುಖಂಡತ್ವವನ್ನು ವಹಿಸಿದರು ಶಿವಪ್ಪ ಜೋತ್ಯೆಪ್ಪ ಗೋಕಾಕ ಉರ್ಫ ಪೈಲವಾನ. ಪ್ರಸಿದ್ಧ ಪೈಲವಾನದರಾದ ಇವರು ಕೊಲ್ಲಾಪೂರದ ಗರಡಿ ಮನೆಗಳಲ್ಲಿ ತರಬೇತಿಯನ್ನು ಪಡೆದು ಕೊಂಡು ಹೆಸರಾಂತ ಕುಸ್ತಿಪಟುಗಳನ್ನು ಸೋಲಿಸಿದ ಕೀರ್ತಿಗೆ ಭಾಜನರಾಗಿದ್ದರು. ಜೊತೆಗೆ ರಾಜಕೀಯ ಮುಖಂಡರು ಹೌದು. ಸುಮಾರು ೨೦ ವರ್ಷಗಳವರೆಗೆ ಇವರ ನಿಯಂತ್ರಣದಲ್ಲಿಯೇ ಇದ್ದ ಗ್ರಾಮಕ್ಕೆ ಇವರು ಸೂಚಿಸಿದವರೇ ಅಧ್ಯಕ್ಷರಾಗುತ್ತಿದ್ದರೆಂಬುದು ಗಮನಿಸಬೇಕಾದ ಅಂಶ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಆರಂಭದಿಂದಲೂ ಅಧ್ಯಕ್ಷರಾಗಿ ತಮ್ಮ ಜೀವಿತಾವಧಿಯ ಕೊನೆಯ ದಿನದ ವರೆಗೂ ಅವರೇ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

೧೯೮೬ ರಲ್ಲಿ ನಡೆದ ಗ್ರಾಮ ಪಂಚಾಯತಿಗೆ ಮಾರುತಿ ಶಿವಪ್ಪ ಗೋಕಾಕ ಆಯ್ಕೆಯಾಗಿ ನಂತರ ಅಧ್ಯಕ್ಷರಾದರು. ಇವರು ಎ. ಪಿ. ಎಂ. ಸಿ. ಕುಡಚಿಗೆ ಸದಸ್ಯರಾಗಿಯೂ ಆಯ್ಕೆಯಾಗಿದ್ದರು. ರಾಯಬಾಗ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ಹತ್ತು ವರ್ಷಗಳವರೆಗೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವರು. ಸದ್ಯ ಮುಗಳಖೋಡ ಪಿ.ಕೆ.ಪಿ.ಎಸ್. ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವರು. ಬೆಳಗಾವಿ ಜಿಲ್ಲಾ ಪಂಚಾಯತಿ ಪ್ರಥಮ ಬಾರಿಗೆ ಅಸ್ತಿತ್ವಕ್ಕೆ ಬಂದಾಗ ಮುಗಳಖೋಡ ಜಿಲ್ಲಾ ಪಂಚಾಯತಿ ಮತಕ್ಷೇತ್ರದಿಂದ ಇವರ ಪತ್ನಿ ಸರಳಾ ಮಾರುತಿ ಗೋಕಾಕ ಆಯ್ಕೆಯಾದರು. ಈ ಮತಕ್ಷೇತ್ರವು ಮುಗಳಖೋಡ, ಪಾಲಬಾಂವಿ, ಮರಾಕುಡಿ, ಸುಲ್ತಾನಪೂರ, ಕಪ್ಪಲಗುದ್ದಿ, ಹಂದಿಗುಂದ, ಇಟ್ನಾಳ, ಸವಸುದ್ದಿ, ಕಂಕಣವಾಡಿ ಗ್ರಾಮಗಳನ್ನು ಒಳಗೊಂಡಿತ್ತು. ಮಾರುತಿ ಸತ್ಯೆಪ್ಪ ಹಿಪ್ಪರಗಿ ಗ್ರಾಮ ಪಂಚಾಯತಿಗೆ ೩೦ ತಿಂಗಳ ಅವಧಿಗೆ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ರಾಯಬಾಗ ತಾಲೂಕಾ ಪಂಚಾಯತಿಗೆ ಮಹಾದೇವ ಭರಮಪ್ಪ ಶೇಗುಣಶಿ ಮತ್ತು ವಸಂತ ಲಕ್ಷ್ಮಣ ಶೇಗುಣಶಿ ಸದಸ್ಯರಾಗಿ ಮತ್ತು ಸುಮಿತ್ರಾ ಶಿವನಿಂಗ ಮುನ್ಯಾಳ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ಹಣಮಂತ ಮಲ್ಲಪ್ಪ ಶೇಗುಣಶಿ ಕುಡಚಿ ಎ.ಪಿ.ಎಂ.ಸಿ.ಗೆ ಆಯ್ಕೆಗೊಂಡು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ೨೦೧೬ ರಲ್ಲಿ ಪುರಸಭೆಗೆ ನಡೆದ ಚುನಾವಣೆಯಲ್ಲಿ ಜಯಶ್ರೀ ಶಿವಾನಂದ ಗೋಕಾಕ, ಪ್ರತಾಪ ಇಟ್ಟಪ್ಪ ಶೇಗುಣಶಿ, ಜೋತ್ಯೆಪ್ಪ ಸಿದ್ದಪ್ಪ ಮೆಕ್ಕಳಕಿ, ಕರೆಪ್ಪ ಸಿದ್ದಪ್ಪ ಮಂಟೂರ ಸದಸ್ಯರಾಗಿ ಆಯ್ಕೆಯಾಗಿರುವರು. ಭಾಗವ್ವ ಭೀಮಪ್ಪ ಶೇಗುಣಶಿ ಪುರಸಭೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವರು. ಒಟ್ಟು ೨೩ ಸದಸ್ಯರಲ್ಲಿ ೫ ಜನರು ಹಾಲುಮತ ಸಮುದಾಯದಿಂದ ಆಯ್ಕೆಯಾಗಿರುವರು.

ಅಳಗವಾಡಿ ಗ್ರಾಮವು ವಿ. ಎಲ್ ಪಾಟೀಲ ಮನೆತನದ ಮಹಿಳೆಯರನ್ನು ರಾಜಕೀಯಕ್ಕೆ ಪರಿಚಯ ಮಾಡಿಸಿತು. ಈ ಪರಿಸರದಲ್ಲಿ ಕುರುಬರು ಬಹುಸಂಖ್ಯಾತರಾಗಿದ್ದು ತಮ್ಮಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರು ಕೂಡ ರಾಜಕೀಯ ಸಂದರ್ಭಗಳಲ್ಲಿ ಒಮ್ಮತ ನಿರ್ಧಾರ ಕೈಕೊಳ್ಳುತ್ತಾರೆ. ಮಹಾದೇವ ಲಕ್ಷ್ಮಣ ಶಿರಗೂರೆ ೧೯೯೦ ರಿಂದ ೧೯೯೫ರ ಅವಧಿಗೆ ಅಳಗವಾಡಿ ಮತ್ತು ಬಸ್ತವಾಡಗಳಿಂದೊಡಗೂಡಿದ ಸಂಯುಕ್ತ ಗ್ರಾಮ ಪಂಚಾಯತಿಗೆ ಅಧ್ಯಕ್ಷರಾಗಿ ಚುನಾಯಿತರಾದರು. ೧೯೯೫ ರಿಂದ ೧೯೯೯ರ ಅವಧಿಗೆ ಅವರು ರಾಯಬಾಗ ತಾಲೂಕಾ ಪಂಚಾಯತಿಗೆ ಸದಸ್ಯರಾಗಿ ಆಯ್ಕೆಯಾದರು. ನಂತರ ೨೦೦೦ ರಿಂದ ೨೦೦೫ರ ಅವಧಿಗೆ ಬೆಳಗಾವಿ ಜಿಲ್ಲಾ ಪಂಚಾಯತಿಗೆ ಅಳಗವಾಡಿ ಮತಕ್ಷೇತ್ರದಿಂದ ಆಯ್ಕೆಯಾದರು. ೨೦೦೧ ರಿಂದ ೨೦೦೪ರ ಅವಧಿಗೆ ಮಾರುತಿ ಭೀಮಪ್ಪ ಪಡಚಿ, ೨೦೦೮ ರಿಂದ ೨೦೧೦ರ ಅವಧಿಗೆ ಪದ್ಮವ್ವ ಮುತ್ತಪ್ಪ ಬನಶಂಕರಿ, ೨೦೧೦ ರಿಂದ ೨೦೧೩ರ ಅವಧಿಗೆ ಪ್ರದೀಪ ಅಣ್ಣಪ್ಪ ಹಾಲಗುಣಿ ಯವರು ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವರು. ೨೦೦೮ ರಿಂದ ೨೦೧೦ರ ಅವಧಿಗೆ ಸಿದ್ದಪ್ಪ ಮಲಕಾರಿ ಸಪ್ತಸಾಗರ, ಮತ್ತು ಪ್ರಸಕ್ತ ಅವಧಿಗೆ ಮಾರುತಿ ಶಂಕರ ಪಡಚೆ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವರು. ಶಾಮರಾವ ಹಣಮಂತ ಬನಶಂಕರಿ ಅವರು ತಾಲೂಕಾ ಪಂಚಾಯತಿಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುವರು. ೨೦೧೬ ರಲ್ಲಿ ನಡೆದ ತಾಲೂಕ ಪಂಚಾಯತಿ ಚುನಾವಣೆಗೆ ಯಲ್ಲಪ್ಪ ಭೀಮಪ್ಪ ಶಿರಗೂರ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿರುವರು. ರೇವಣ್ಣ ಸಿದ್ದಪ್ಪ ಸರವ ರಾಯಬಾಗ ಯುಥ್ ಕಾಂಗ್ರೇಸ್ ಕಮೀಟಿಯ ಕಾರ್ಯದರ್ಶಿಯಾಗಿ ಮೂರು ವರ್ಷಗಳ ವರೆಗೆ ಮತ್ತು ಕುಡಚಿ ಬ್ಲಾಕ್ ಕಾಂಗ್ರೇಸ್ ಕಮೀಟಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವರು.

೧೯೯೫ರಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತಿಯ ಅಳಗವಾಡಿ ಮತಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗಿ ಸೇವೆ ಸಲ್ಲಿಸಿದವರು ಪ್ರತಿಭಾ ವಸಂತರಾವ ಪಾಟೀಲ. ೨೦೧೬ ರಲ್ಲಿ ನಡೆದ ಇದೇ ಜಿಲ್ಲಾ ಪಂಚಾಯತ ಚುನಾವಣೆಗೆ ಜಿದ್ದಾ-ಜಿದ್ದಿನ ಸ್ಪರ್ಧೆ ಏರ್ಪಟ್ಟಿತು. ವಿ. ಎಲ್. ಪಾಟೀಲ ಮನೆತನದ ಎರಡನೇ ಹಂತದ ಮಹಿಳಾ ಪ್ರತಿನಿಧಿಗಳು ಮೊದಲ ಬಾರಿಗೆ ಚುನಾವಣ ರಂಗಕ್ಕಿಳಿಯುವುದರ ಮೂಲಕ ಚುನಾವಣೆ ವಿಶೇಷತೆಯನ್ನು ಪಡೆದು ಕೊಂಡಿತು. ಕಾಂಗ್ರೇಸ್ ಪಕ್ಷದ ವತಿಯಿಂದ ವಿವೇಕರಾವ ಪಾಟೀಲರ ಸೊಸೆಯಾದ ಗಾರ್ಗಿ ಪ್ರಣಯ ಪಾಟೀಲ ಸ್ಪರ್ಧಿಸಿದರೆ, ಭಾರತೀಯ ಜನತಾ ಪಕ್ಷದಿಂದ ಅಮರಸಿಂಹ ಪಾಟೀಲರ ಮಗಳಾದ ಪೂರ್ಣಿಮಾ ಪಾಟೀಲ ಸ್ಪರ್ಧಿಸಿದ್ದರು. ಈ ಮತಕ್ಷೇತ್ರವು ಅಳಗವಾಡಿ, ಬಸ್ತವಾಡ, ಅಲಕನೂರ, ಪರಮಾನಂದವಾಡಿ, ಖೇಮಲಾಪೂರ, ಸಿದ್ದಾಪೂರ, ಕೋಳಿಗುಡ್ಡ, ಯಬರಟ್ಟಿ ಮತ್ತು ಯಲ್ಪಾರಟ್ಟಿ ವ್ಯಾಪ್ತಿಯ ಒಂಭತ್ತು ಗ್ರಾಮಗಳನ್ನು ಹೊಂದಿದ್ದು ಒಂದು ವಿಶೇಷ. ಈ ಚುನಾವಣೆಯಲ್ಲಿ ಗಾರ್ಗಿ ಪ್ರಣಯ ಪಾಟೀಲ ಅಳಗವಾಡಿ ಮತ ಕ್ಷೇತ್ರದಿಂದ ಆಯ್ಕೆಯಾದರೆ ಅವರ ಪತಿ ಪ್ರಣಯ ವಿವೇಕಾರಾವ ಪಾಟೀಲರು ರಾಯಬಾಗ ಗ್ರಾಮೀಣ ಮತಕ್ಷೇತ್ರದಿಂದ (೨೦೧೧ & ೨೦೧೬) ಜಿಲ್ಲಾ ಪಂಚಾಯತಿಗೆ ಆಯ್ಕೆಯಾದರು.

ಬೆಳಗಾವಿ ಜಿಲ್ಲೆಯ ರಾಜಕಾರಣಿಗಳಲ್ಲಿ ಎಸ್. ಆರ್. ಬಾನೆ ಸರ್ಕಾರ ಕೂಡ ಒಬ್ಬರು. ೨೦ನೇ ವಯಸ್ಸಿನಲ್ಲಿಯೇ ಇವರು ರಾಜಕೀಯ ಬಂದರು. ಮೊರಬ ಗ್ರಾಮದ ರಾಮಾ ಮತ್ತು ಗಂಗವ್ವ ಬಾನೆ ದಂಪತಿಗಳಿಗೆ ಸಿದ್ಲಿಂಗಪ್ಪನವರು ೦೧-೧೨-೧೯೨೮ ರಲ್ಲಿ ಜನಿಸಿದವರು. ತಂದೆ ರಾಮಾ ಬಾನೆ ಗ್ರಾಮದ

ಹಳಬರು. ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ ಸಿದ್ಲಿಂಗಪ್ಪನವರು ಸಮೀಪದ ಚಿಂಚಲಿ ಗ್ರಾಮದ ಮರಾಠಿ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ೭ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆದುಕೊಂಡರು. ತಂದೆಯ ಒತ್ತಾಸೆಯಂತೆ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಕೃಷಿಯತ್ತ ಗಮನ ಹರಿಸಿದರು. ಆ ಸಮಯದಲ್ಲಿಯೆ ಅವರು ಚಿಂಚಲಿ ಸರ್ಕಾರ ಹತ್ತಿರ ನೌಕರಿ ಪಡೆದುಕೊಂಡರು. ಇದು ಅವರನ್ನು ಕೊಲ್ಲಾಪೂರ ಜೊತೆ ಸಂಪರ್ಕ ಏರ್ಪಡಿಸಿತು. ೧೯೪೭ ರಲ್ಲಿ ಮಹಾತ್ಮಾ ಜ್ಯೋತಿರಾವ ಪುಲೆ, ಕೇಶಿರಾವ ವಿಜಾರೆ ಗುರುಜಿ ಮಾರ್ಗದರ್ಶನದಲ್ಲಿ ಸತ್ಯಶೋಧಕ ಸಮಾಜ ತರಬೇತಿಯಲ್ಲಿ ಪಾಲ್ಗೊಂಡು ಸಮಾಜ ಸೇವೆಯನ್ನು ಮೈಗೂಡಿಸಿಕೊಂಡರು. ಕೊಲ್ಲಾಪುರ ಸಂಸ್ಥಾನದ ಆಗಿನ ಮುಖ್ಯ ಮಂತ್ರಿಯಾಗಿದ್ದ ಮಾಧವರಾವ ಭಾಗಲೆ ಅವರ ನೇತೃತ್ವದಲ್ಲಿ ಕೊಲ್ಲಾಪುರ ಪ್ರತ್ಯೇಕ ಸಂಸ್ಥಾನಕ್ಕಾಗಿ ಹೋರಾಟ ನಡೆಯಿತು. ಈ ಚಳುವಳಿಯಲ್ಲಿ ಧುಮುಕುವ ಮೂಲಕ ಸಕ್ರೀಯವಾದ ರಾಜಕೀಯಕ್ಕೆ ಪ್ರವೇಶಿಸಿದರು.

೧೯೪೮ ರಲ್ಲಿ ಬ್ಯಾಕೂಡದ ಗೌಡರಾದ ವಸಂತರಾವ ಪಾಟೀಲರ ಜೊತೆ ಸಂಪರ್ಕ ಏರ್ಪಟ್ಟಿತು. ಪ್ರಾಮಾಣಿಕ ಸೇವೆ ಸಲ್ಲಿಸಿದ ಇವರು ಅಲ್ಪ ಸಮಯದಲ್ಲಿಯೇ ಗೌಡರ ವಿಶ್ವಾಸ ಗೆದ್ದರು. ಪಾಟೀಲರು ಶಾಸಕರಾಗಿ ಆಯ್ಕೆಯಾಗಿ ರಾಜ್ಯ ಮಟ್ಟದಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಕ್ಷೇತ್ರದ ನಿರ್ವಹಣೆಯ ಜವಾಬ್ದಾರಿಯನ್ನು ಬಾನೆಯವರ ಹೇಗಲಿಗೆ ವರ್ಗಾಯಿಸಲಾಯಿತು. ಆನಂತರ ಗೌಡರ ದರ್ಬಾರದಲ್ಲಿ ಇವರದೇ ರಾಜ್ಯಭಾರ ಏರ್ಪಟ್ಟಿತು. ಗೌಡರು ಪ್ರೀತಿಯಿಂದ ಇವರ ಕೆಲಸಕ್ಕೆ ಮೆಚ್ಚಿ ನೀಡಿದ ಬಿರುದು ಸರ್ಕಾರ. ಹೀಗಾಗಿ ಎಸ್. ಆರ್. ಬಾನೆ ಯವರು 'ಬಾನೆ ಸರ್ಕಾರ' ಎಂದು ಬಿರುದಾಂಕಿತರಾದರು. ರಾಯಬಾಗ ಪರಿಸರದ ದಲಿತ, ಹಿಂದುಳಿದ ಮತ್ತು ಬಡ ವಿದ್ಯಾರ್ಥಿಗಳಿಗಾಗಿ ವಿ. ಎಲ್. ಪಾಟೀಲರು ೧೯೪೭ರ ಡಿಸೆಂಬರ ೧೧ರಂದು ರಾಯಬಾಗದಲ್ಲಿ ಉಚಿತ ಪ್ರಸಾದ ನಿಲಯವನ್ನು ಆರಂಭಿಸಿದಾಗ ಅದರ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿ ಇವರದಾಗಿತ್ತು. ನಂತರದಲ್ಲಿ ಆರಂಭಗೊಂಡ 'ರಾಯಬಾಗ ವಿದ್ಯಾಲಯ ರಾಯಬಾಗ' ಪ್ರೌಢಶಾಲೆಯ ಜವಾಬ್ದಾರಿಯು ಕೂಡ ಇವರದಾಗಿತ್ತು. ೧೯೬೨ ರಲ್ಲಿ ಕಾಂಗ್ರೇಸ್ ಪಕ್ಷದಲ್ಲಿ ಪ್ರವೇಶಿಸುವುದರೊಂದಿಗೆ ಪ್ರಥಮ ಬಾರಿಗೆ 'ರಾಯಬಾಗ ತಾಲೂಕಾ ಅಭಿವೃದ್ಧಿ ಮಂಡಳಿ' (ಟಿ. ಡಿ. ಬಿ.)ಯ ಸದಸ್ಯರಾಗಿ ಆಯ್ಕೆಯಾದರು. ನಂತರದಲ್ಲಿ ತಾಲೂಕಾ ಮಾರುಕಟ್ಟೆ ಸೊಸಾಯಿಟಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ರಾಯಬಾಗ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ ಮತ್ತು ಬೆಳಗಾವಿ ಜಿಲ್ಲೆಯ ಹಾಲುಮತ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಆರಂಭಿಸಿದ 'ವಿಜಯನಗರ ಪ್ರಸಾದ ನಿಲಯ'ದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಇಲ್ಲಿಯವರೆಗೆ ವಿ. ಎಲ್. ಪಾಟೀಲ ಮತ್ತು ಎಸ್. ಆರ್. ಬಾನೆ ಸರ್ಕಾರ ಮಧ್ಯೆ ಆತ್ಮೀಯವಾದ ಸಂಪರ್ಕವಿತ್ತು. ನಂತರದ ದಿನಗಳಲ್ಲಿ ಅವರಿಬ್ಬರ ಮಧ್ಯೆದಲ್ಲಿದ್ದ ಮಧುರ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡು ಸರಿಪಡಿಸಲಾರದಷ್ಟು ಪ್ರಮಾಣದಲ್ಲಿ ಕಂದಕ ಏರ್ಪಟ್ಟಿತು. ಇವರು ೧೯೭೨ರ ರಾಯಬಾಗ ವಿಧಾನ ಸಭಾ ಮತಕ್ಷೇತ್ರದಲ್ಲಿ ಇಬ್ಬರು ನಾಯಕರು ಮುಖಾಮುಖಿಯಾಗಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸುವ ಮೂಲಕ ಒಂದು ಉತ್ತರ ಧ್ರುವವಾಗಿ ಇನ್ನೊಂದು ದಕ್ಷಿಣ ಧ್ರುವವಾಗಿ ಬೇರ್ಪಟ್ಟರು. ಚುನಾವಣೆಯಲ್ಲಿ ಕಾಂಗ್ರೇಸ್ ಪಕ್ಷದ ವತಿಯಿಂದ ಸ್ಪರ್ಧಿಸಿದ್ದ ವಿ. ಎಲ್. ಪಾಟೀಲರು ಜಯ ಸಾಧಿಸಿದು ಒಂದರ್ಥದಲ್ಲಿ

ವಿಶೇಷವೇನಲ್ಲ. ಈ ಮೊದಲು ಹಲವು ಬಾರಿ ಘಟಾನುಘಟಿಗಳನ್ನು ಎದುರಿಸಿ ಅವರು ಶಾಸಕರಾಗಿ ಆಯ್ಕೆಯಾಗಿದ್ದರು. ಆದರೆ ಇಲ್ಲಿರುವ ವಿಶೇಷತೆಯೆನೇಂದರೆ ಪಾಟೀಲರ ಗರಡಿಯಲ್ಲಿಯೇ ಬೆಳೆದ ಬಾನೆ ಸರ್ಕಾರ ಗೌಡರ ಜೊತೆ ಸ್ಪರ್ಧಿಸುವಷ್ಟರ ಮಟ್ಟಿಗೆ ನಾಯಕನಾಗಿ ಬೆಳೆದ್ದು ವಿಶೇಷವಾದದ್ದು.

೧೯೬೯ ರಲ್ಲಿ ರಾಷ್ಟ್ರ ಮಟ್ಟದಲ್ಲಿದ್ದ ಕಾಂಗ್ರೇಸ್ ಪಕ್ಷ ಇಬ್ಭಾಗವಾಯಿತು. ವಿ. ಎಲ್. ಪಾಟೀಲರು ರೆಡ್ಡಿ ಕಾಂಗ್ರೇಸ್ ಬೆಂಬಲಿಸಿದ್ದರಿಂದ ಎಸ್. ಆರ್. ಬಾನೆ ಸರ್ಕಾರ ಇಂದಿರಾ ಕಾಂಗ್ರೇಸ್ (ಆಯ್)ನ್ನು ಹಿಂಬಾಲಿಸಿದರು. ಹೀಗಾಗಿ ಇವರು ಇಂದಿರಾ ಕಾಂಗ್ರೇಸ್‌ನ ಬಿ. ಶಂಕರಾನಂದ ಜೊತೆ ಸಂಪರ್ಕ ಹೊಂದುವಂತಾಯಿತು. ಬಿ. ಶಂಕರಾನಂದರು ರಾಯಬಾಗ ತಾಲೂಕಿನಲ್ಲಿ ಹೆಚ್ಚು ಮತಗಳನ್ನು ಪಡೆಯಲುವಂತಾಗಲು ಎಸ್. ಆರ್. ಬಾನೆ (ಸರ್ಕಾರ) ಶ್ರಮಿಸಿದವರು. ಬಿ. ಶಂಕರಾನಂದರು ಲೋಕ ಸಭೆಗೆ ೭ ಬಾರಿ ಆಯ್ಕೆಯಾಗಿರುವುದರಲ್ಲಿ ತಾಲೂಕಿನ ಕಾಂಗ್ರೇಸ್ ನಾಯಕ ಎಸ್. ಆರ್. ಬಾನೆ (ಸರ್ಕಾರ)ರವರ ಪ್ರಯತ್ನವನ್ನು ಅಲ್ಲಗಳೆಯುವಂತಿಲ್ಲ. ಇವರು ಹೆಚ್ಚು-ಕಡಿಮೆ ಶಂಕರಾನಂದರ ಆಧಾರ ಸ್ಥಂಬಗಳಲ್ಲಿ ಒಬ್ಬರಾಗಿದ್ದರು. ರಾಜಕೀಯವಾಗಿ ಶಂಕರಾನಂದ ಮತ್ತು ಬಾನೆ (ಸರ್ಕಾರ) ಆರಂಭದಲ್ಲಿ ಒಂದೇ ಆಗಿದ್ದರು. ಇವರು ಬೆಳಗಾವಿ ಜಿಲ್ಲಾ ಕಾಂಗ್ರೇಸ್ ಕಮೀಟಿಯ ಖಜಾಂಚಿಯಾಗಿ ಸೇವೆ ಸಲ್ಲಿಸಿರುವರು.

ಬಿ. ಶಂಕರಾನಂದರು ಲೋಕಾ ಸಭಾ ಮತ ಕ್ಷೇತ್ರದೆಡೆಗೆ ಗಮನಹರಿಸುತ್ತಿಲ್ಲ ಮತ್ತು ಇಲ್ಲಿಯ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸುತ್ತಿಲ್ಲವೆನ್ನುವ ಕಾರಣಕ್ಕಾಗಿ ಬಾನೆಯವರು ಅವರಿಂದ ದೂರ ಸರಿಯಲಾರಂಭಿಸಿದರು. ಇದರಿಂದಾಗಿ ಅವರಿಬ್ಬರ ಮಧ್ಯೆದಲ್ಲಿ ಭಿನ್ನಾಭಿಪ್ರಾಯಗಳು ಹೊಗೆಯಾಡಲಾರಂಭಿಸಿದವು. ಅಂದಿನಿಂದ ಶಂಕರಾನಂದರ ಪ್ರಭಾವ ಕುಗ್ಗುತ್ತ ಹೋಯಿತು. ಆ ನಂತರದ ಚುನಾವಣೆಯಲ್ಲಿ ಕಾಂಗ್ರೇಸ್ ಪಕ್ಷದಿಂದ ಪಕ್ಷಾಂತರಗೊಂಡ ಎಸ್. ಆರ್. ಬಾನೆಯವರು ಬಿಜೆಪಿಯತ್ತ ವಾಲಿದರು. ಪರಿಣಾಮವಾಗಿ ಬಿ.ಜೆ.ಪಿ. ಅಭ್ಯರ್ಥಿ ರಮೇಶ ಜಿಗಜಿಣಗಿ ಎರಡು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು. "ಆ ಆಯ್ಕೆಯ ಹಿಂದಿನ ಶಕ್ತಿ ಶ್ರೀ ಎಸ್. ಆರ್. ಬಾನೆ ಎಂಬುದನ್ನು ಜನ ಇಂದಿಗೂ ನೆನಪಿಸುತ್ತಾರೆ."[೫]

ಎಸ್. ಆರ್. ಬಾನೆಯವರಿಗೆ ಒಟ್ಟು ಐದು ಜನ ಗಂಡು ಮಕ್ಕಳು. ಮೊದಲನೆಯವರಾದ ಅಜೀತಕುಮಾರ ಬಾನೆ ವೃತ್ತಿಯಿಂದ ವಕೀಲರಾಗಿದ್ದರೂ ಕೂಡ ರಾಜಕೀಯ ನಂಟನ್ನು ಹೊಂದಿದ್ದರು. ಅವರು ಬೆಳಗಾವಿ ಜಿಲ್ಲಾ ಕಾಂಗ್ರೇಸ್ ಕಮೀಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ನಾಲ್ಕನೇ ಮಗನಾದ ಶೇಖರ ಬಾನೆಯವರು ವೃತ್ತಿಯಿಂದ ವಕೀಲರಾದರೂ ರಾಜಕೀಯದಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡವರು. ಇವರು ಮಲಪ್ರಭಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರಾಧಿಕಾರ (ಕಾಡಾ)ದ ಸರ್ಕಾರಿ ನಾಮನಿರ್ದೇಶಕರಾಗಿ, ಕರ್ನಾಟಕ ಪ್ರದೇಶ ಯುವ ಕಾಂಗ್ರೇಸ್ (ಐ) ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಕೆ. ಎಂ. ಎಫ್., ಕರ್ನಾಟಕ ಸ್ಪೋರ್ಟ್ಸ್ ಕೌನ್ಸಿಲ್ ನಿರ್ದೇಶಕರಾಗಿ ಹಾಗೂ ಬೆಳಗಾವಿ ಜಿಲ್ಲಾ ಯುವ ಕಾಂಗ್ರೇಸ್ ಅಧ್ಯಕ್ಷರಾಗಿ ಸುಮಾರು ೯ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ೨೦೦೬ರಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತಿಗೆ ಕುಡಚಿ ಮತಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುವರು.

ಕೊನೆಯವರಾದ ಸಂಜು ಬಾನೆಯವರು ಘಟಪ್ರಭಾ ಯೋಜನಾಮಟ್ಟದ ನೀರು ಬಳಕೆದಾರರ ಮಹಾಮಂಡಳ ಹಿಡಕಲ್ ಡ್ಯಾಂ ಇದರ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು.

ಮೊರಬ ಗ್ರಾಮದಲ್ಲಿ ಹುಟ್ಟಿ ಬೆಳೆದು ಜಿಲ್ಲಾ ಮಟ್ಟದ ರಾಜಕೀಯ ನಾಯಕರಾಗಿ ಗುರುತಿಸಿಕೊಂಡವರು ಧರ್ಮಣ್ಣ ಸಿದ್ದಪ್ಪ ನಾಯಿಕ. ಇವರು ಎಸ್. ಆರ್. ಬಾನೆಯವರ ಗರಡಿಯಲ್ಲಿ ಬೆಳೆದು ಬಂದವರು. ಒಂದೇ ಊರಿನ ಹಳಬ ಮತ್ತು ನಾಯಕ ಮನೆತನದ ಹಿನ್ನಲೆಯನ್ನು ಹೊಂದಿದ ಇಬ್ಬರಲ್ಲೂ ಗಾಢವಾದ ಸ್ನೇಹವಿತ್ತು. ಬಾನೆಯವರ ಎಲ್ಲ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಬಾಗಿಯಾಗುತ್ತಿದ್ದರು. ಇವರು ೨೦೦೦ರ ಬೆಳಗಾವಿ ಜಿಲ್ಲಾ ಪಂಚಾಯತಿಯ ಚಿಂಚಲಿ ಮತಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದರು. ರಾಯಬಾಗ ಬ್ಲಾಕ್ ಕಾಂಗ್ರೇಸ್ ಕಮೀಟಿಯ ಸೆಕ್ರೆಟರಿಯಾಗಿ ನಂತರದಲ್ಲಿ ಉಪಾಧ್ಯಕ್ಷರಾಗಿ ಸುಮಾರು ೧೦ ವರ್ಷ ಸೇವೆ ಸಲ್ಲಿಸಿದ್ದು, ರಾಯಬಾಗದ ಭೂ ನ್ಯಾಯ ಮಂಡಳಿ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವರು. ಕುಡಚಿ ವಿಧಾನ ಸಭಾ ಮತ ಕ್ಷೇತ್ರವಾದ ನಂತರ ಕುಡಚಿ ಬ್ಲಾಕ್ ಕಾಂಗ್ರೇಸ್ ಕಮೀಟಿಯ ಅಧ್ಯಕ್ಷರಾಗಿ ಸುಮಾರು ೧೦ ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದಾರೆ.

ಮೊರಬ ಗ್ರಾಮ ಪಂಚಾಯತಿಯಲ್ಲಿ ಕುರುಬರ ಪ್ರಾಬಲ್ಯ ಕಂಡು ಬರುತ್ತದೆ. ಧರ್ಮಣ್ಣ ಸಿದ್ದಪ್ಪ ನಾಯಿಕ ಅವರು ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಸುಮಾರು ೧೦ ವರ್ಷಗಳವರೆಗೆ ಸೇವೆ ಸಲ್ಲಿಸಿರುವರು. ಸಿದ್ದರಾಮ ಶಾಹು ಶಾಂಡಗೆ, ಅಮರ ಬಾಬು ಪಾಟೀಲ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ಸದ್ಯ ಮಹಾದೇವಿ ವಸಂತ ಸಪ್ತಸಾಗರ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವರು. ಮೀಸಲಾತಿ ಅವಧಿಯನ್ನು ಹೊರತು ಪಡಿಸಿ ಉಳಿದೆಲ್ಲ ಅವಧಿಗೆ ಕುರುಬರು ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವುದು ಕಂಡು ಬರುತ್ತದೆ. ಸಹದೇವ ಮಾರುತಿ ಪಾಟೀಲ, ಸಿಂಧೂತಾಯಿ ಪಾಯಗೊಂಡ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ಸೇವಂತಿ ಸದಾಶಿವ ಹಾಲಾಣಿ, ಜಡೇಸಿದ್ಧ ಅಮ್ಮಣ್ಣ ಒಡೆಯರ ರಾಯಬಾಗ ತಾಲೂಕಾ ಪಂಚಾಯತಿಯ ಕುಡಚಿ ಗ್ರಾಮೀಣ ಮತಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುವರು.

ಶಿರಗೂರದ ಹಾಲಪ್ಪ ನಿಂಗಪ್ಪ ಘಾಳಿಯವರು ಗುಂಡವಾಡ, ಖೇಮಲಾಪೂರ, ಶಿರಗೂರ, ಸಿದ್ದಾಪೂರ, ಪರಮಾನಂದವಾಡಿಗಳನ್ನು ಒಳಗೊಂಡ ಮಂಡಳ ಪಂಚಾಯತಿಯ ಅಧ್ಯಕ್ಷರಾಗಿದ್ದರು. ನಂತರದಲ್ಲಿ ರಾಯಬಾಗ ತಾಲೂಕಾ ಪಂಚಾಯತಿಗೆ ೫ ವರ್ಷಗಳ ಅವಧಿಗೆ ಸದಸ್ಯರಾಗಿ ಆಯ್ಕೆಯಾಗಿ, ೨೦ ತಿಂಗಳ ಅವಧಿಗೆ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿರುವರು. ಅವರ ಪತ್ನಿ ಶ್ರೀಮತಿ ಕೆಂಚವ್ವ ಹಾಲಪ್ಪ ಘಾಳಿ ಬೆಳಗಾವಿ ಜಿಲ್ಲಾ ಪಂಚಾಯತಿಗೆ ೫ ವರ್ಷಗಳ ಅವಧಿಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುವರು.

ಚಿಕ್ಕ ಗ್ರಾಮವಾದ ಅಲಕನೂರಿನಲ್ಲಿ ಬಹುಸಂಖ್ಯಾತರಾದ ಕುರುಬರ ಪ್ರಾಬಲ್ಯವಿರುವುದು. ಈ ಗ್ರಾಮದ ಶಂಕರ ಸಿದ್ದಪ್ಪ ಪೂಜೇರಿಯವರು ಆರಂಭದ ರಾಯಬಾಗ ತಾಲೂಕಾ ಡೆವಲಪಮೆಂಟ ಬೋರ್ಡಗೆ ೫ ವರ್ಷ ಸದಸ್ಯರಾಗಿ, ನಂತರದಲ್ಲಿ ಅಸ್ತಿತ್ವಕ್ಕೆ ಬಂದ ತಾಲೂಕಾ ಪಂಚಾಯತಿಗೆ ಮತ್ತೆ ೫ ವರ್ಷದ ಅವಧಿಗೆ ಆಯ್ಕೆಯಾಗಿದ್ದರು. ಇನ್ನೊಂದು ವಿಶೇಷವೆಂದರೆ ಅಲಕನೂರಿನ ಗ್ರಾಮ ಪಂಚಾಯತಿಯನ್ನು ಮಿಸಲಾತಿ ಹೊರತು ಪಡಿಸಿ ಉಳಿದೆಲ್ಲ ಅವಧಿಗೆ ಅಧ್ಯಕ್ಷರಾಗಿ ಆಡಳಿತ ಮಾಡಿದವರು ಕುರುಬರು. ಉದಾಹರಣೆಗೆ

ಸದಾಶಿವ ಗೂಳಪ್ಪ ಗಡ್ಡಿ, ಶ್ರೀಶೈಲ ಶಂಕರ ಗಡ್ಡಿ, ಶಿವಬಾಯಿ ಯಲ್ಲಪ್ಪ ಗಡ್ಡಿ ಮೊದಲಾದವರು. ೨೦೦೬ ರ ಬೆಳಗಾವಿ ಜಿಲ್ಲಾ ಪಂಚಾಯತ ಚುನಾವಣೆಯಲ್ಲಿ ಚೆನ್ನವ್ವ ಸಿದ್ದಲಿಂಗ ಗಡ್ಡಿ ಆಯ್ಕೆಯಾಗಿ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರುವರು. ವಾಮನ ಲಗಮಣ್ಣ ಹಟ್ಟಿಮನಿಯವರು ರಾಯಬಾಗ ಯುವ ಕಾಂಗೇಸ್ ಘಟಕದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವರು. ನಿಲಜಿ ಮತ್ತು ಸುಟ್ಟಟ್ಟಿ ಗ್ರಾಮಗಳ ತಾಲೂಕಾ ಪಂಚಾಯತಿ ಮತಕ್ಷೇತ್ರಕ್ಕೆ ಮುರಾರಿ ವಿಠ್ಠಲ ಬಾನೆಯವರು ಆಯ್ಕೆಯಾಗಿ ನಂತರ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ರಾಯಬಾಗ ಪರಿಸರದಲ್ಲಿ ಹಾಲುಮತ ಸಮುದಾಯದ ಪ್ರಾಬಲ್ಯ ಹೆಚ್ಚಾಗಿರುವುದು ಕಂಡು ಬರುತ್ತದೆ. ಇಡೀ ಹಾಲುಮತ ಸಮುದಾಯವನ್ನು ರಾಜಕೀಯವಾಗಿ ಸಂಘಟಿಸಿದ ಶ್ರೇಯಸ್ಸು ವಿ. ಎಲ್. ಪಾಟೀಲ ಮತ್ತು ಎಸ್. ಆರ್. ಬಾನೆ ಸರ್ಕಾರ ಇವರಿಗೆ ಸಲ್ಲುತ್ತದೆ. ಸದ್ಯದ ಬೆಳಗಾವಿ ಜಿಲ್ಲೆಯ ಸಕ್ರೀಯ ರಾಜಕೀಯ ವಿದ್ಯಮಾನ್ಯಗಳಲ್ಲಿ ವಿವೇಕರಾವ ಪಾಟೀಲರ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವರು.

ರಾಯಬಾಗ ಪರಿಸರದ ರಾಜಕೀಯ ಚಿತ್ರಣವನ್ನು ಅನುಲಕ್ಷೀಸಿ ಹೇಳುವುದಾದರೆ ಕುರುಬ, ಲಿಂಗಾಯತ, ದಲಿತ, ಜೈನ ಸಮುದಾಯಗಳನ್ನು ಇಲ್ಲಿಯ ಪ್ರಮುಖ ಸಮಬಲ ಸಮುದಾಯಗಳೆಂದು ಗುರುತಿಸಿದರೂ ಕೂಡ, ನಿರ್ಣಾಯಕ ಪಾತ್ರವನ್ನು ನಿರ್ವಹಿಸುವವರು ಕುರುಬರು ಎನ್ನುವುದರಲ್ಲಿ ಎರಡು ಮಾತಿಲ್ಲ. ಕೆಲವು ಊರುಗಳ ರಾಜಕೀಯ ಚರಿತ್ರೆಯನ್ನು ವಿಶ್ಲೇಷಿಸಿದಾಗ, ಮೀಸಲಾತಿ ಅವಧಿಯನ್ನು ಹೊರತು ಪಡಿಸಿ ಉಳಿದೆಲ್ಲ ಅವಧಿಗಳಲ್ಲಿ ಅಂದರೆ ಸಾಮಾನ್ಯ ಮೀಸಲಾತಿ ಇದ್ದಾಗಲೂ ರಾಜಕೀಯ ಪ್ರಾಬಲ್ಯವನ್ನು ಇವರು ಸಾಧಿಸಿದ್ದು ಕಂಡು ಬರುತ್ತದೆ. ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಈ ಸಮುದಾಯದ ಪ್ರಾತಿನಿಧ್ಯ ಎದ್ದು ಕಾಣುತ್ತದೆ. ಅವರು ಒಂದಿಲ್ಲ ಒಂದು ರೀತಿಯಲ್ಲಿ ಆ ಪಕ್ಷಗಳ ಮೇಲೆ ತಮ್ಮ ಚಾಪನ್ನು ಮೂಡಿಸಿ ಪಕ್ಷಕ್ಕೆ ತಾವು ಅನಿವಾರ್ಯ ಎಂಬುದನ್ನು ನಿರೂಪಿಸಿರುವರು.

ರಾಜಕೀಯ ರಂಗದಲ್ಲಿ ಪುರುಷ ಪ್ರಾತಿನಿಧ್ಯದ ಪ್ರಮಾಣವನ್ನು ಗಮನಿಸಿ ಹೇಳುವುದಾದರೆ ಮಹಿಳೆಯರು ರಾಜಕೀಯ ಅವಕಾಶದಿಂದ ವಂಚಿತರು. ಮಹಿಳಾ ಮೀಸಲಾತಿಯನ್ನು ಹೊರತು ಪಡಿಸಿ ಸಾಮಾನ್ಯ ಕ್ಷೇತ್ರಗಳಿಗೆ ಅವರು ಇಲ್ಲಿಯವರೆಗೆ ಸ್ಪರ್ಧಿಸಿಲ್ಲವೆಂಬುದು ಗಮನಿಸಬೇಕಾದ ಅಂಶ. ಮಹಿಳಾ ಮೀಸಲಾತಿಯಿಂದಾಗಿ ಅವರ ರಾಜಕೀಯಕ್ಕೆ ಪ್ರವೇಶಿಸಿದರು ಕೂಡ ಅವರ ಪ್ರಮಾಣ ಶೇಕಡಾ ೧೦ ಕ್ಕಿಂತಲೂ ಕಡಿಮೆಯೆಂದು ವಿಶ್ಲೇಷಿಸಲಾಗುತ್ತದೆ. ಮಹಿಳೆಯರು ಚುನಾವಣೆಯಲ್ಲಿ ಆಯ್ಕೆಗೊಂಡರು ಕೂಡ ಆಡಳಿತ ನಿರ್ವಹಣೆ ಪುರಷರ ಕೈಯಲ್ಲಿಯೇ ಕೇಂದ್ರಿಕೃತವಾಗಿರುವುದು ದುರದೃಷ್ಟಕರವಾದ ವಿಚಾರ. ಇದು ಅನೇರವಾಗಿ ಈ ಸಮಾಜದ ಮಹಿಳೆಯರು ಪುರಷರ ಪ್ರಭಾವದಿಂದ ಇನ್ನೂ ಹೊರಬರಲಾಗದೇ ಸಮಾನತೆಯನ್ನು ಸಾಧಸಿಲ್ಲವೆಂಬ ಅಂಶವನ್ನು ಪ್ರತಿಪಾದಿಸುತ್ತದೆ.

ಶಾಹು ಮಹಾರಾಜರ ಆಡಳಿತದ ನಂತರ ಅಂದರೆ ಸ್ವಾತಂತ್ರ್ಯ ನಂತರದಲ್ಲಿ ಈ ಭಾಗ ಸಂಪೂರ್ಣವಾಗಿ ಹಾಲುಮತ ಸಮುದಾಯದವರ ಹಿಡಿತಕ್ಕೆ ಬಂದು ಅವರು ಪ್ರಾಬಲ್ಯ ಹೊಂದಿದರು. ಇದನ್ನು ಅರಿತುಕೊಂಡೇ ವಿ. ಎಲ್. ಪಾಟೀಲರನ್ನು, ಜೊತೆಗೆ ಹಾಲುಮತ ಸಮುದಾಯದವರ ಪ್ರಾಬಲ್ಯವನ್ನು

ಹತ್ತಿಕ್ಕುವುದಕ್ಕೆಂದೇ ರಾಯಬಾಗ ವಿಧಾನ ಸಭಾ ಕ್ಷೇತ್ರವನ್ನು ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಮೀಸಲು ಕ್ಷೇತ್ರವನ್ನಾಗಿ ಮಾಡಲಾಯಿತೆಂಬ ಗುಮಾನಿ ಕೂಡ ಹಾಲುಮತ ಸಮುದಾಯದವರ ತಲೆಯಲ್ಲಿದೆ. ಒಂದರ್ಥದಲ್ಲಿ ಇದು ನಿಜವೆಂದು ತೋರುತ್ತದೆ. ಗೌಡರು ೧೯೫೨, ೧೯೫೭, ೧೯೬೭ ಮತ್ತು ೧೯೭೨ ರಲ್ಲಿ ಒಟ್ಟು ನಾಲ್ಕು ಬಾರಿ ರಾಯಬಾಗ ಮತಕ್ಷೇತ್ರದಿಂದ ಶಾಸಕರಾಗಿ ಮತ್ತು ೧೯೬೨ ರಲ್ಲಿ ಚಿಕ್ಕೋಡಿ ಲೋಕ ಸಭಾ ಮತಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು. ಇವರನ್ನು ಹೀಗೆಯೇ ಬೆಳೆಯಲು ಬಿಟ್ಟರೆ ಮುಂದೆ ಕರ್ನಾಟಕದ ಪ್ರಮುಖ ನಾಯಕರಾಗಿ ಹೊರಹೊಮ್ಮಬಹುದೆಂಬ ಭಯವಿತ್ತು. ಅದಕ್ಕಾಗಿ ರಾಜ್ಯ ನಾಯಕರು ಪಾಟೀಲರನ್ನು ರಾಜಕೀಯವಾಗಿ ಸೋಲಿಸಲು ಯೋಜನೆ ರೂಪಿಸಿದರು. ಪಾಟೀಲರನ್ನು ಅವರ ತವರು ನೆಲೆಯಾದ ರಾಯಬಾಗದಿಂದ ಸ್ಪರ್ಧಿಸಲು ಅವಕಾಶ ಸಿಗದಂತೆ ಮಾಡಿದರೆ ರಾಜಕೀಯವಾಗಿ ದುರ್ಬಲರಾಗಬಹುದೆಂದು ಕುತಂತ್ರವನ್ನು ಮಾಡಿದರು. ಪಾಟೀಲರನ್ನು ಹತ್ತಿಕ್ಕುವುದರ ಹಿಂದೆ ಇನ್ನೊಂದು ಅಂಶವಿರುವುದನ್ನು ಗುರುತಿಸಬಹುದು. ಗೌಡರು ಅಂದರೆ ಉತ್ತರ ಕರ್ನಾಟಕದವರು ಒಂದು ವೇಳೆ ರಾಜಕೀಯವಾಗಿ ಪ್ರಬಲರಾಗಿ ಬೆಳೆದರೆ ದಕ್ಷಿಣ ಕರ್ನಾಟಕದ ನಾಯಕರ ಕೈಯಿಂದ ಮುಖ್ಯ ಮಂತ್ರಿ ಸ್ಥಾನ ತಪ್ಪಬಹುದೆಂಬ ಪಿತೂರಿ ಇದ್ದರೂ ಇರಬಹುದೆಂಬ ಶಂಕೆ ಇದೆ. ಈ ಎಲ್ಲ ಸಂದೇಹಗಳು ಸಾಕ್ಷಿಯಾದದ್ದು ೧೯೭೮ರ ವಿಧಾನ ಸಭಾ ಚುನಾವಣೆ ಎಂದರೆ ತಪ್ಪಾಗಲಿಕ್ಕಿಲ್ಲ. ಗೌಡರು ತವರು ನೆಲೆವನ್ನು ಕಳೆದುಕೊಂಡು ಅರಬಾಂವಿಯಿಂದ ಸ್ಪರ್ಧಿಸಿದಾಗ ರಾಜ್ಯ ಮತ್ತು ಜಿಲ್ಲಾ ಮುಖಂಡರೆಲ್ಲರ ಷಢ್ಯಂತ್ರದಿಂದಾಗಿ ಸೋಲನ್ನನುಭವಿಸಿದರು. ಈ ಸೋಲು ಅವರ ಉತ್ತರ ಕರ್ನಾಟಕದ ಪ್ರಶ್ನಾತೀತ ನಾಯಕರೆಂಬ ನಾಗಾಲೋಟಕ್ಕೆ ನಿಯಂತ್ರಣ ಹಾಕಿದಂತಾಯಿತು.

೨೦೦೬ ರಲ್ಲಿ ಮತ್ತೊಂದು ಸಲ ಕರ್ನಾಟಕ ರಾಜ್ಯದ ವಿಧಾನ ಸಭೆಗಳ ಕ್ಷೇತ್ರಗಳನ್ನು ಪುನರ್ ವಿಂಗಡನೆ ಮಾಡಿ ಮಿಸಲಾತಿ ಕ್ಷೇತ್ರಗಳನ್ನು ನಿಗದಿ ಪಡಿಸಲಾಯಿತು. 'ಈ ಸಂದರ್ಭದಲ್ಲಿಯೂ ಕೂಡ ಹಾಲುಮತ ಸಮುದಾಯದ ನಾಯಕರನ್ನು ಈ ಕ್ಷೇತ್ರದಿಂದ ದೂರವಿಡಬೇಕೆಂಬ ಹುನ್ನಾರ ಮಾಡಲಾಯಿತೆಂಬ ಶಂಕೆಯಿದೆ. ೨೦೦೬ ಪೂರ್ವದಲ್ಲಿ ರಾಯಬಾಗ ವಿಧಾನ ಸಭಾ ಮತಕ್ಷೇತ್ರವು ಒಂದೇ ಆಗಿತ್ತು. ನಂತರ ಪುನರ್ ವಿಂಗಡೆಯ ಸಂದರ್ಭದಲ್ಲಿ ಅದು ರಾಯಬಾಗ ಮತ್ತು ಕುಡಚಿ ಎಂಬ ಎರಡು ಮತಕ್ಷೇತ್ರಗಳು ಅಸ್ತಿತ್ವಕ್ಕೆ ಬಂದವು. ಈ ಸಮಯದಲ್ಲಾದರೂ ಒಂದು ಮತಕ್ಷೇತ್ರವನ್ನು ಸಾಮಾನ್ಯ ವರ್ಗಕ್ಕೆ ನೀಡಬಹುದಾಗಿತ್ತು. ಆದರೆ ಈ ಎರಡು ಮತ ಕ್ಷೇತ್ರಗಳನ್ನು ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾಗಿ ಮಾಡಲಾಯಿತು. ಈ ರೀತಿಯಾಗಿ ಮೀಸಲಾತಿಯನ್ನು ನಿಗದಿಗೊಳಿಸಲು ಮತ ಕ್ಷೇತ್ರದಲ್ಲಿರುವ ವಿವಿಧ ಜಾತಿಗಳ ಜನಸಂಖ್ಯೆಯನ್ನು ಪರಿಗಣಿಸಲಾಗುತ್ತದೆಂದು ಸಮೀಕ್ಷೆ ಕೈಕೊಂಡ ಅಧಿಕಾರಿಗಳು ಹೇಳುವರು. "ಜನಸಂಖ್ಯೆಯನ್ನೇ ಮಾನದಂಡವನ್ನಾಗಿ ಪರಿಗಣಿಸುವುದಾದರೆ ರಾಯಬಾಗ ಮತ್ತು ಕುಡಚಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕುರುಬ ಸಮುದಾಯದವರ ಜನಸಂಖ್ಯೆ ಇನ್ನಿತರ ಸಮುದಾಯದಗಳ ಜನಸಂಖ್ಯೆಗಿಂತಲೂ ಹೆಚ್ಚಾಗಿದ್ದರೂ ಕೂಡ ಈ ಕ್ಷೇತ್ರಗಳು ಸಾಮಾನ್ಯ ಮತಕ್ಷೇತ್ರಗಳಾಗದೇ ಮೀಸಲು ಕ್ಷೇತ್ರಗಳಾಗಿ ಘೋಷಣೆಯಾಗುವುದರ ಹಿಂದೆ ಯಾವುದೋ ಒಂದು ಷಡ್ಯಂತ್ರ ಇರುವುದರಲ್ಲಿ ಸಂದೇಹವಿಲ್ಲ. ಬಹುಶಃ ಈ

ಮತಕ್ಷೇತ್ರಗಳು ಸಾಮಾನ್ಯ ಮತಕ್ಷೇತ್ರಗಳನ್ನಾಗಿಸಿದರೆ ಇಲ್ಲಿಯ ಬಹಸಂಖ್ಯಾತರಾದ ಕುರುಬರು ಸ್ಪರ್ಧಿಸಿ ಅಧಿಕಾರವಂತರಾಗಿ ಪ್ರಬಲರಾಗಬಹುದೆಂಬ ಕಾರಣದಿಂದಲೇ ಈ ತಂತ್ರಗಾರಿಕೆಯನ್ನು ಮಾಡಿರುವರು.

೧೯೭೮ ರಿಂದ ೨೦೦೬ ರವರೆಗಿನ ರಾಯಬಾಗ ಮತ್ತು ೨೦೦೬ ರಿಂದ ಇಲ್ಲಿಯವರೆಗಿನ ರಾಯಬಾಗ ಮತ್ತು ಕುಡಚಿ ಮೀಸಲು ಕ್ಷೇತ್ರಗಳಲ್ಲಿ ಹಾಲುಮತ ಸಮುದಾಯದವರು ಯಾವ ಪಕ್ಷ/ಅಭ್ಯರ್ಥಿಯನ್ನು ಬೆಂಬಲಿಸುತ್ತಾರೋ ಅವರೇ ಚುನಾವಣೆಯಲ್ಲಿ ಗೆಲ್ಲುತ್ತ ಬಂದಿರುವರು. ಒಂದು ವೇಳೆ ಈ ಮತಕ್ಷೇತ್ರಗಳನ್ನು ಮೀಸಲು ಕ್ಷೇತ್ರಗಳಿಂದ ಸಾಮಾನ್ಯ ಕ್ಷೇತ್ರಗಳಾಗಿ ಪರಿವರ್ತನೆಗೊಂಡಲ್ಲಿ ಮತ್ತೇ ಹಾಲುಮತ ಸಮುದಾಯದ ನಾಯಕರೇ ಚುನಾವಣೆಯಲ್ಲಿ ಜಯ ಪಡೆದು ಶಾಸಕರಾಗುವರು.

೨. ಸಾಮಾಜಿಕ :

ಸ್ವಾತಂತ್ರ್ಯ ನಂತರದಲ್ಲಿ ಅಂದರೆ ೭೦ ವರ್ಷಗಳ ಕಾಲಾವಧಿಯಲ್ಲಿ ಅತೀ ಹೆಚ್ಚು ಪ್ರಮಾಣದ ಶಿಕ್ಷಣ ಸಂಸ್ಥೆಗಳನ್ನು ಹಾಲುಮತದವರು ಈ ತಾಲೂಕಿನಲ್ಲಿ ಸ್ಥಾಪಿಸಿರುವರು. ಹೀಗಾಗಿ ಸುಶಿಕ್ಷಿತರ ಪ್ರಮಾಣವು ಈ ಪರಿಸರದಲ್ಲಿ ಹೆಚ್ಚಾಗಿರುವುದು. ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದವರೆಲ್ಲ ಸುಶಿಕ್ಷಿತರು ಮತ್ತು ಪ್ರತಿಷ್ಠಿತರು. ವಿ. ಎಲ್. ಪಾಟೀಲರು ರಾಯಬಾಗ ತಾಲೂಕಿನ ಜೊತೆಗೆ ಅಥಣಿ ಮತ್ತು ಗೋಕಾಕ ತಾಲೂಕುಗಳಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಇವರು ಶಾಲೆಗಳನ್ನು ಆರಂಭಿಸಿದಂತೆ ಅಲ್ಲಿರುವ ಹಾಲುಮತ ಸಮುದಾಯದವರು ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಪ್ರಯತ್ನ ಮಾಡಲಿಲ್ಲ. ಈ ಎರಡು ತಾಲೂಕುಗಳಲ್ಲಿಯೂ ಪಾಟೀಲರೇ ಶೈಕ್ಷಣಿಕ ಸಂಚಲನವನ್ನುಂಟು ಮಾಡಿದರು. ಶೈಕ್ಷಣಿಕ ಸಂಚಲನದಿಂದಾಗಿಯೇ ಸಾಮಾಜಿಕ ಸಂಚಲನವಾಗುತ್ತದೆ. ಸಾಮಾಜಿಕ ಸಂಚಲನದ ಭದ್ರಬುನಾದಿ ಎಂದರೆ ಶಿಕ್ಷಣ. ಹಾಲುಮತ ಸಮುದಾಯದವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣವನ್ನು ಪಡೆದುಕೊಂಡವರಲ್ಲಿ ಬಹುಪಾಲು ಜನರು ಅದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಶಿಕ್ಷಣವನ್ನು ಪಡೆದು ಕೊಂಡ ಅನೇಕ ಜನ ಅಭಿವೃದ್ಧಿ ಪಥದತ್ತ ಸಾಗಿದರು. ಅವರು ಕೃಷಿ ಜೊತೆ-ಜೊತೆಗೆ ಇನ್ನೂಳಿದ ಕ್ಷೇತ್ರಗಳಾದ ಡಾಕ್ಟರ, ಇಂಜನೀಯರ ಮೊದಲಾದ ಸರ್ಕಾರಿ ಹುದ್ದೆಗಳನ್ನು ಪಡೆದು ಕೊಳ್ಳಲು ಪ್ರಯತ್ನಿಸಿದರು. ಹೀಗೆ ಅವರು ಸಾಮಾಜಿಕವಾಗಿ ಸ್ಥಿತ್ಯಂತರಗೊಂಡರು.

ತಾಲೂಕಿನ ಹಾಲುಮತ ಸುಶಿಕ್ಷಿತರ ಪ್ರಮಾಣ ಹೆಚ್ಚಾಗಿರುವುದರಿಂದ ಉನ್ನತ ಶಿಕ್ಷಣವನ್ನು ಪಡೆದುಕೊಂಡವರು, ಉನ್ನತ ಹುದ್ದೆಯ ನೌಕರಿ ಪಡೆದುಕೊಂಡವರು, ತಾಲೂಕಿನ ಪ್ರತಿಷ್ಠಿತ ಆಸ್ಪತ್ರೆಯ ವೈದ್ಯರು ಇದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ತಾಲೂಕಿನ ಪ್ರಮುಖ ಎರಡು ಕೇಂದ್ರಗಳೆಂದರೆ ಒಂದು ರಾಯಬಾಗ ಇನ್ನೊಂದು ಹಾರೂಗೇರಿ. ಈ ಎರಡು ಕೇಂದ್ರಗಳಲ್ಲಿಯೇ ಪ್ರಮುಖ ಆಸ್ಪತ್ರೆಗಳಿವೆ. ಈ ಎಲ್ಲ ಆಸ್ಪತ್ರೆಗಳಲ್ಲಿರುವ ವೈದ್ಯರೆಲ್ಲರೂ ಹಾಲುಮತ ಸಮುದಾಯದವರೆಂಬುದು ವಿಶೇಷ. ಉದಾಹರಣೆ ಹಾರೂಗೇರಿಯಲ್ಲಿ ಡಾ. ಎಲ್. ಎಸ್. ಜಂಬಗಿ, ಶ್ರೀಮತಿ ಡಾ. ವಿ. ಎಲ್. ಜಂಬಗಿ. ಡಾ. ಎಮ್. ಬಿ. ಒಡೆಯರ, ಡಾ. ಆರ್. ಬಿ. ಒಡೆಯರ, ಶ್ರೀಮತಿ ಡಾ. ಎ. ಎಮ್. ಒಡೆಯರ, ಶ್ರೀಮತಿ ಡಾ. ಎನ್. ಆರ್. ಒಡೆಯರ, ಡಾ. ಕಿರಣ ಹಿಟ್ಟಣಗಿ, ಡಾ. ಎ. ಆಯ್. ಮೇಲಾಪೂರ, ಶ್ರೀಮತಿ ಡಾ. ಆರ್. ಎ. ಮೇಲಾಪೂರ, ಡಾ. ಮಲ್ಲೇಶ ಶೇಂಡಗೆ, ಡಾ. ಆರ್. ಬಿ. ಹಾಡಕಾರ, ರಾಯಬಾಗದಲ್ಲಿ ಡಾ. ಎಸ್. ಎಸ್.

ಬಾನೆ, ಡಾ. ಗಾಯತ್ರಿ ಎಸ್. ಬಾನೆ, ಡಾ. ವಿಠ್ಠಲ ಬಿ. ಗೊಂಡೆ, ಡಾ. ಶಿಂಗಾಡಿ ಮಾ. ಕರಗಾಂವಿ, ಶ್ರೀಮತಿ ಡಾ. ಮಮತಾ ಶಿ. ಕರಗಾಂವಿ, ಡಾ. ಅಪ್ಪಾಸಾವ ಸ. ಹೆಗಡೆ ಮತ್ತು ಕುಡಚಿಯ ಡಾ. ಸಚೀನ ಮನಗುತ್ತಿ, ಡಾ. ಅನೀಲ ಮನಗುತ್ತಿ ಮುಂತಾದ ತಜ್ಞ ವೈದ್ಯರ ದೊಡ್ಡ ಆಸ್ಪತ್ರೆಗಳೇ ಆಗಿವೆ.

ಹಾಲುಮತ ಸಮುದಾಯದ ಕೆಲವು ವೈದ್ಯರು ಬೇರೆ-ಬೇರೆ ಪಟ್ಟಣಗಳಲ್ಲಿ ಮತ್ತೆ ಕೆಲವರು ವಿದೇಶಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವರು. ಹಾರೂಗೇರಿಯ ಡಾ. ರಾವಸಾಬ ಸ. ಬಂತಿ ಕಟಕೋಳದಲ್ಲಿ, ಶ್ರೀಮತಿ ಡಾ. ಸುಧಾ ಜ್ಯೊ. ಬಂತಿ ಮತ್ತು ರಾಯಬಾಗದ ಶ್ರೀಮತಿ ಡಾ. ನೀಲಾಂಬಿಕಾ ಮಾ. ಹೆಗಡೆ ಅಮೇರಿಕಾದಲ್ಲಿ, ಹಾಗೂ ಶ್ರೀಮತಿ ಡಾ. ವಿಜಯಲಕ್ಷ್ಮೀ ಶ್ರೀ. ಹೆಗಡೆ ಇಂಗ್ಲೇಂಡದಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ಹಿಡಕಲ್ಲದ ಸವಿತಾ ವಸಂತರಾವ ಪಾಟೀಲ ಬಿ. ಇ. ಪಧವೀಧರೆ. ಅವರ ಪತಿಯಾದ ಭೀಮು ಕಾಶಿನಾಥ ಗೂಣದಾಳ ಕೂಡ ಬಿ. ಇ. ಪಧವೀದರಾಗಿದ್ದು ಸದ್ಯ ದಂಪತಿಗಳಿಬ್ಬರು ಅಮೇರಿಕಾದಲ್ಲಿ ಸೇವೆ ಸಲ್ಲಿಸುತ್ತಿದ್ದು ಅಲ್ಲಿಯೇ ನೆಲೆಸಿರುವರು. ಸದ್ಯ ಬೆಳಗಾವಿ ಜಿಲ್ಲಾ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಎ. ಎಮ್. ನರಗಟ್ಟಿ ಮೂಲತಃ ಚಿಕ್ಕೋಡಿಯವರಾಗಿದ್ದರೂ ಕೂಡ ಆರಂಭಿಕ ಶಿಕ್ಷಣವನ್ನು ಪಡೆದು ಕೊಂಡದ್ದು ರಾಯಬಾಗದಲ್ಲಿ.

ಹಾರೂಗೇರಿಯ ಡಾ. ಭೀಮಪ್ಪ ಸಿ. ಜಂಬಗಿ ಜಂಟಿ ನಿರ್ದೇಶಕರು ಪಶು ಸಂಗೋಪನಾ ಇಲಾಖೆ ಧಾರವಾಡ. ಡಾ. ಸುಧಾಕರ ಶಿ. ಧರ್ಮಟ್ಟಿ, ಡಾ. ಶ್ರೀಶೈಲ ಭೀ. ಪಡೆದಾರ, ಡಾ. ವಿಶ್ವನಾಥ ವಿ. ಬಂತಿ, ಭಿರಡಿಯ ಡಾ. ಮುರುಸಿದ್ದ ಭ. ಪಾಟೀಲ, ಅಲಕನೂರಿನ ಡಾ. ಗಜಾನನ ಅಥಣಿ ಇವರೆಲ್ಲರು ಪಶು ವೈದ್ಯರಾಗಿದ್ದು ಸರ್ಕಾರಿ ಮತ್ತು ಸ್ವತಂತ್ರವಾಗಿ ಸೇವೆ ಸಲ್ಲಿಸುತ್ತಿರುವರು.

ಸರ್ಕಾರಿ ಅಧಿಕಾರಿಗಳು ಹಿಡಕಲ್ಲದ ಶಿವಲಿಂಗಪ್ಪ ವಸಂತ ಬನಹಟ್ಟಿ (ಕೆ.ಎ.ಎಸ್.) ಉಪ ಅಧೀಕ್ಷಕರು (ಡಿ.ವಾಯ್.ಎಸ್.ಪಿ.) ಅಬಕಾರಿ ಇಲಾಖೆ, ಯಬರಟ್ಟಿಯ ಶಶಿಕಲಾ ಸಿದ್ದಪ್ಪ ಒಡೆಯರ (ಕೆ.ಎ.ಎಸ್.) ಉಪ ಅಧೀಕ್ಷಕರು (ಡಿ.ವಾಯ್.ಎಸ್.ಪಿ.) ಅಬಕಾರಿ ಇಲಾಖೆ, ಮುಗಳಖೋಡದ ಹಣಮಂತ ಇಟ್ಟಪ್ಪ ಕಾಲತಿಪ್ಪಿ (ಕೆ.ಎ.ಎಸ್.) ಜಿಲ್ಲಾ ಖಜಾನೆ ಅಧಿಕಾರಿಗಳು, ಅಳಗವಾಡಿಯ ಶಂಕರ ಮಾರುತಿ ಬನಶಂಕರಿ (ಕೆ.ಎ.ಎಸ್.) ರಾಜ್ಯ ಲೆಕ್ಕ ಪತ್ರ ಪರಿಶೋಧನ ಸಹಾಯಕ ನಿಯಂತ್ರಕರು, ಮಾಡಲಗಿಯ ಶ್ರೀಧರ ಮಹಾದೇವ ಗೋಟೂರ (ಕೆ.ಎ.ಎಸ್.) ತಹಶೀಲ್ದಾರ, ಹಾರೂಗೇರಿಯ ಭೀಮಪ್ಪ ಕರೆಪ್ಪ ಲಾಳಿ (ಕೆ.ಎ.ಎಸ್.) ಕಾರ್ಯ ನಿರ್ವಾಹಕ ಅಧಿಕಾರಿಗಳು ಪಂಚಾಯತ್ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ, ಹಾರೂಗೇರಿಯ ಕೃಷ್ಣಾ ಚಂ, ಬೀಳಗಿ, ಅಶೋಕ ರಾ. ಧರ್ಮಟ್ಟಿ ಸಹಾಯಕ ಇಂಜಿನೀಯರ ನೀರಾವರಿ ಇಲಾಖೆ ಯಲ್ಲಿ ಸೇವೆ ಸಲ್ಲಿಸುತ್ತಿರುವರು.

ಭಾರತ ಪ್ರಮುಖ ಖಾಸಗಿ ಕಂಪನಿಗಳಲ್ಲಿ ಒಂದಾದ ಗ್ಯಾಮನ್ ಇಂಡಿಯಾ ಕಂಪನಿಯಲ್ಲಿ ಮುಖ್ಯ ಇಂಜಿನೀಯರಾಗಿ ಮಾರುತಿ ಸಿ. ಜಂಬಗಿಯವರು ಸೇವೆ ಸಲ್ಲಿರುತ್ತಿರುವರು. ಕಂಪನಿಯು ಕೊಂಕಣ ರೈಲ್ವೇ ನಿರ್ಮಾಣದ ಗುತ್ತಿಗೆಯನ್ನು ಪಡೆದುಕೊಂಡ ಸಂದರ್ಭದಲ್ಲಿ ಮುಖ್ಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಹೆಗ್ಗಳಿಕೆ ಇವರದ್ದಾಗಿದೆ. ಕಂಪನಿಯ ಪರವಾಗಿ ನಡೆಯುತ್ತಿದ್ದ ಕೆಲಸ-ಕಾರ್ಯಗಳ ನಿಮಿತ್ಯ ಜರ್ಮನಿ, ರಿಯಾದ ಇನ್ನೂ ಅನೇಕ ವಿದೇಶಗಳಿಗೆ ಹೋಗಿ ಸೇವೆ ಸಲ್ಲಿಸಿರುವರು.

ರಾಯಬಾಗ ಪರಿಸರದಲ್ಲಿ ಆಯ್. ಎ. ಎಸ್. ಮತ್ತು ಆಯ್. ಪಿ. ಎಸ್. ಉನ್ನತ ಹುದ್ದೆಗಳನ್ನು ಹಾಲುಮತದವರು ಪಡೆದುಕೊಂಡಿಲ್ಲವಾದರೂ ನಂತರದಲ್ಲಿ ಬರುವ ಉನ್ನತ ಹುದ್ದೆಗಳನ್ನು ಇನ್ನಿತರ ಸಮುದಾಯದವರಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಈ ಸಮುದಾಯದವರು ಆ ಹುದ್ದೆಗಳನ್ನು ಪಡೆದುಕೊಂಡಿರುವುದು ಗಮನಿಸಬೇಕಾದ ಅಂಶ. ಈ ಸಮುದಾಯದ ಬಹಳಷ್ಟು ಜನರು ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜ್ಯೋತಿ ಹೊಸುರ, ಆರ್. ಎಸ್. ಬನಹಟ್ಟಿ, ಕೆ. ವಿ. ಬೀಳಗಿ, ಜಿ. ಎಸ್. ಹಿಟ್ಟಣಗಿ, ಬಿ. ಎ. ಜಂಬಗಿ, ಬಿ. ಪಿ. ಯತ್ತಿನಮನಿ, ಎನ್. ಎಮ್. ಹಳಿಂಗಳಿ, ಎಸ್. ಬಿ. ಒಡೆಯರ, ಬಿ. ಬಿ. ಮುಗಳಿಹಾಳ, ಎಸ್. ಆರ್. ದಳವಾಯಿ, ಎಮ್. ಕೆ. ಬೀಳಗಿ, ಬಿ. ಎಲ್. ಬನಶಂಕರಿ, ಡಿ. ಬಿ. ಪಾಂಡ್ರೆ, ಟಿ. ಎಸ್. ಒಂಟಗೂಡಿ, ಕಿರಣ ವ. ಪಾಟೀಲ (ಎಲ್. ಎಲ್. ಬಿ. ಕಾಲೇಜು) ಮುಂತಾದ ಪ್ರಾಚಾರ್ಯರ ಒಂದು ದೊಡ್ಡ ಪಡೆಯನ್ನೇ ಈ ಭಾಗದಲ್ಲಿ ಕಾಣುತ್ತೇವೆ. ಡಾ. ಪುಂಡಲೀಕ ರಾಯಪ್ಪ ಧರ್ಮಟ್ಟಿ ಪ್ರಾಧ್ಯಾಪಕರು ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಮತ್ತು ಡಾ. ಜಗನ್ನಾಥ ಗೇನಣ್ಣವರ ಕನಕ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು. ಉನ್ನತ ಶಿಕ್ಷಣವನ್ನು ಪಡೆದ ಇವರು ಉನ್ನತ ಶಿಕ್ಷಣವನ್ನು ಪ್ರಸಾರ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಸುಮಾರು ೫–೬ ವರ್ಷಗಳ ಅವಧಿಯಲ್ಲಿ ರಾಯಬಾಗ ತಾಲೂಕಿನ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಗಮನಿಸಿದಾಗ, ಹಾಲುಮತ ಸಮುದಾಯದ ಪ್ರಾತಿನಿಧ್ಯವನ್ನು ಅಲ್ಲಗಳೆಯುವಂತಿಲ್ಲ. ಇಡೀ ತಾಲೂಕಿನಲ್ಲಿ ಆಯ್ಕೆಯಾದ ಪಟ್ಟಿಯನ್ನು ಗಮನಿಸಿದರೆ ಅವರಲ್ಲಿ ಬಹುಸಂಖ್ಯಾತರು ಹಾಲುಮತ ಸಮುದಾಯದವರೆ ಆಗಿದ್ದಾರೆ. ಹಾರೂಗೇರಿಯ ಧರ್ಮಟ್ಟಿ ಮನೆತನ ಒಂದರಲ್ಲಿಯೇ ಪ್ರಭಾಕರ ಶಿವಗೊಂಡ ಧರ್ಮಟ್ಟಿ, ಧರ್ಮಾಕರ ಶಿವಗೊಂಡ ಧರ್ಮಟ್ಟಿ, ಹೇಮಂತ ಲಕ್ಕಣ್ಣ ಧರ್ಮಟ್ಟಿ, ರವಿ ಲಕ್ಕಣ್ಣ ಧರ್ಮಟ್ಟಿ, ಪಿ. ಎಸ್. ಆಯ್. ಆಗಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವುದು ವಿಶೇಷ. ಅದೇ ರೀತಿ ಭಾಗ್ಯಶ್ರೀ ಜ್ಯೋತೆಪ್ಪ ಬಂತಿ, ಕುಮಾರ ದುಂ. ಹಾಡಕಾರ ಪಿ. ಎಸ್. ಆಯ್. ಆಗಿ ಕಾರ್ಯ ನಿರ್ವಹಿಸುತ್ತಿರುವರು. ಹಾರೂಗೇರಿಯ ವಿಠ್ಠಲ ಹಳ್ಳೂರ ಮನೆತನದ, ಗೋಪಾಲ ವಿಠ್ಠಲ ಹಳ್ಳೂರ ಪಿ. ಎಸ್. ಆಯ್. ಆಗಿದ್ದು, ಅವರ ಪತ್ನಿ ಶ್ರೀಮತಿ ಪ್ರಭಾವತಿ ಗೋ. ಹಳ್ಳೂರ ಇತ್ತೀಚಿಗೆ ಎ. ಸಿ. ಅಧಿಕಾರಿಯಾಗಿ ಆಯ್ಕೆಯಾಗಿದ್ದಾರೆ. ಕಂಕಣವಾಡಿಯ ಮಲ್ಲಿಕಾರ್ಜುನ ಯ. ಬಾಲದಂಡೆ ಸದ್ಯ ಎಡಿಶನಲ್ ಎಸ್. ಪಿ. ಆಗಿ ಕಾರ್ಯನಿರ್ವಹಿಸುತ್ತಿದ್ದರೆ, ಇವರ ಸಹೋದರ ಹಾಲಪ್ಪ ಯ. ಬಾಲದಂಡೆ ಪಿ. ಎಸ್. ಆಯ್. ಆಗಿ ಮತ್ತು ನಾಗರಾಳದ ರಾಜು ಹಾಲಪ್ಪ ಗೊಂಡೆ ಅಬಕಾರಿ ಪಿ. ಎಸ್. ಆಯ್. ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇತ್ತೀಚಿಗೆ ದೈವಾದೀನರಾದ ಡಿ. ವಾಯ್. ಎಸ್. ಪಿ. ಕಲ್ಲಪ್ಪ ಹಂಡಿಬಾಗ ಮತ್ತು ನಿವೃತ್ತಿ ಹೊಂದಿರುವ ಡಿ. ವಾಯ್. ಎಸ್. ಪಿ. ಸದಾನಂದ ಪಡೋಲಕರ ಕೂಡ ಇದೇ ಪರಿಸರದ ಹಾಲುಮತ ಸಮುದಾಯದವರು. ಧಾರವಾಡದಲ್ಲಿದ್ದ ಪದವಿ–ಪೂರ್ವ ಶಿಕ್ಷಣ ಇಲಾಖೆಯಿಂದ ಬೇರ್ಪಟ್ಟು ಅಸ್ತಿತ್ವಕ್ಕೆ ಬಂದ ಬೆಳಗಾವಿಯ ಪದವಿ–ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸಿದವರು ರಾಯಬಾಗದ ಶ್ರೀಕಾಂತ ರಾಮಚಂದ್ರ ಹೆಗಡೆ. ನಂತರದಲ್ಲಿ ಇವರು ಪದವಿ–ಪೂರ್ವ ಶಿಕ್ಷಣ ಇಲಾಖೆ

ಬೆಂಗಳೂರು ಕಛೇರಿಯ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದರು. ನ್ಯಾಯಾಂಗ ಇಲಾಖೆಯಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಶ್ರೇಯಸ್ಸು ಮೊರಬ ಗ್ರಾಮದ ನಿವೃತ್ತ ನ್ಯಾಯಾಧೀಶರಾದ ಎ. ಬಿ. ಒಡೆಯರ ಇವರಿಗೆ ಸಲ್ಲುತ್ತದೆ. ಇತ್ತೀಚೆಗೆ ನ್ಯಾಯಾಧಿಶರಾಗಿ ನೇಮಕಗೊಂಡವರು ಯಬರಟ್ಟಿ ಗ್ರಾಮದ ಎಮ್. ಆರ್. ಒಡೆಯರ. ರಾಯಬಾಗದ ನ್ಯಾಯಾಲಯದಲ್ಲಿ ಒಟ್ಟು ವಕೀಲರ ಸಂಖ್ಯೆ ೩೬೦. ಇದರಲ್ಲಿ ಹಾಲುಮತ ಸಮುದಾಯದ ವಕೀಲರ ಪ್ರಮಾಣ ಪ್ರತಿಶತ ೬೦ ರಷ್ಟಿದೆ. ರಾಯಬಾಗದವರಾದ ಶ್ರೀಮತಿ ವೀಣಾ ಶ್ರೀಕಾಂತ ಹೆಗಡೆ ಹೈಕೋರ್ಟ ಸರ್ಕಾರಿ ವಕೀಲರಾಗಿ, ಡಿ. ಎಮ್. ನಾಯಿಕ, ಬಿ. ಎಸ್. ಬಂಡಗಾರ, ಎಲ್. ಕೆ. ಖೊತ ನೋಟರಿಯಾಗಿ ಸೇವೆ ಸಲ್ಲಿಸುತ್ತಿರುವರು. ಹೀಗೆ ಸರ್ಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಮತ್ತು ಸಲ್ಲಿಸುತ್ತಿರುವವರ ಪಟ್ಟಿ ಮಾಡುತ್ತ ಹೋದಂತೆ ಅದು ಬೆಳೆಯುತ್ತಲೇ ಹೋಗುತ್ತದೆ.

"ಈ ಹಿಂದೆ ಹಾಲುಮತ ಸಮುದಾಯದಲ್ಲಿರುವ ಯುವಕರು ಶಿಕ್ಷಣ ವಂಚಿತರು. ಅವರ ಪಾಲಕರಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ವಿಚಾರ ಕಡಿಮೆಯಿತ್ತು. ತಾವು ಮಾಡುವ ಕಾಯಕದಲ್ಲಿ ನೇರವಾಗಿ ಮನೆಯಲ್ಲಿಯೇ ಇದ್ದರೆ ಸಾಕೆಂಬ ವಿಚಾರವಿತ್ತು. ಆದರೆ ಇಂದು ತಮ್ಮ ಮಕ್ಕಳು ಕೂಡ ಉನ್ನತ ಶಿಕ್ಷಣ ಪಡೆದುಕೊಳ್ಳಬೇಕೆಂಬ ಇಚ್ಛೆ. ಹೀಗಾಗಿ ಇಂದಿನ ಯುವಕರೆಲ್ಲ ಕನಿಷ್ಠ ಪದವಿ ಹಂತದ ಶಿಕ್ಷಣವನ್ನು ಪಡೆದುಕೊಂಡಿರುವರು. ಒಟ್ಟಾರೆಯಾಗಿ ಈ ಎಲ್ಲಾ ಬೆಳವಣಿಗೆಯನ್ನು .ಪರಿಗಣಿಸಿದರೆ, ಸಾಮಾಜಿಕವಾಗಿ ಹಾಲುಮತ ಸಮುದಾಯದವರು ರಾಯಬಾಗ ತಾಲೂಕಿನಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದಿದ್ದಾರೆ."[2] ಈ ಪ್ರಗತಿಯನ್ನು ಇನ್ನೂಳಿದ ಪ್ರದೇಶಗಳಿಗೆ ಹೋಲಿಸಿದರೆ ಅಂದರೆ ಅತೀ ಸಮೀಪದ ತಾಲೂಕಗಳಾದ ಅಥಣಿ ಮತ್ತು ಗೋಕಾಕ ಇವುಗಳಿಗೆ ಹೋಲಿಸಿದರೆ, ರಾಯಬಾಗ ತಾಲೂಕಿನ ಹಾಲುಮತ ಸಮಾಜದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಜೊತೆಗೆ ರಾಜಕೀಯವಾಗಿ ಅಭಿವೃದ್ಧಿಯನ್ನು ಹೊಂದಿದ್ದಾರೆ.

ಸಾಮಾಜಿಕವಾಗಿಯೇ ಇರುವ ಒಂದು ಅಂಗ ಅಂದರೆ ಆಚರಣೆಗಳು. ಇವತ್ತು ರಾಯಬಾಗ ತಾಲೂಕಿನ ಈ ಪರಿಸರದಲ್ಲಿ ವಿಶೇಷವಾಗಿ ಬಲಿಕೊಡುವ ಸಂಪ್ರದಾಯಗಳು ಬಹಳ ಕಡಿಮೆಯಾಗಿವೆ. ಒಂದು ಕಾಲದಲ್ಲಿ ಬಲಿಕೊಡುವ ಸಂಪ್ರದಾಯ ಅಸ್ತಿತ್ವದಲ್ಲಿರಬಹುದು. ಮೂಡನಂಬಿಕೆಗಳು, ಕಂದಾಚಾರಗಳು ಬಹಳಷ್ಟು ಪ್ರಮಾಣದಲ್ಲಿ ಕಡಿಮೆಯಾಗಿರುವುದನ್ನು ನಾವು ನೋಡುತ್ತೇವೆ. ಈ ರೀತಿ ಕಡಿಮೆಯಾಗಿರುವುದಕ್ಕೆ ಕಾರಣವೇನೆಂದರೆ, ಅವರ ಶೈಕ್ಷಣಿಕ ಬೆಳವಣಿಗೆ. ಜೊತೆಗೆ ಅವರಲ್ಲಿರುವ ಸಾಮಾಜಿಕವಾಗಿ ಇರುವಂತಹ ವೈಚಾರಿಕ ಆಲೋಚನೆಗಳು ಅವರನ್ನು ಈ ಸ್ಥಿತಿಗೆ ತಂದಿರುತ್ತವೆ. ಇವತ್ತು ಬಹಳಷ್ಟು ಪ್ರಮಾಣದಲ್ಲಿ ಇಡೀ ಸಮುದಾಯವೇ ಅಭಿವೃದ್ಧಿಯಲ್ಲಿ ಮಂಚೂಣಿಯಲ್ಲಿದೆ. ಇಂದೂ ಹಾಲುಮತ ಸಮುದಾಯದ ಜನರ ವಿಚಾರಧಾರೆಗಳಲ್ಲೂ ಬದಲಾವಣೆಗಳಾಗಿವೆ.

ಶಿಕ್ಷಣವನ್ನು ಪಡೆದುಕೊಂಡ ಸಮುದಾಯದ ಆಲೋಚನೆಗಳು ಬದಲಾಗುತ್ತಿವೆ. ಕಂದಾಚಾರ ಮೌಢ್ಯಗಳು ಮರೆಯಾಗುತ್ತ ಹೋಗುತ್ತಿವೆ. ಈಗ ಅವರ ಮೊದಲಿನ ವೇಷಭೂಷಣಗಳೆಲ್ಲ ಬದಲಾವಣೆಗೊಂಡಿವೆ. ತೊಗಲಿನ ದಪ್ಪ ಚಪ್ಪಲಿ, ಬಿಳಿ ದೋತರ, ನೆಹರು ಶರ್ಟ ಅಂಗಿ, ತಲೆಯ ಮೇಲೆ ರುಮಾಲು, ಕೈಯಲ್ಲಿ ಒಂದು ಬಡಿಗೆ ಹಿಡಿದು ಬರುತ್ತಿದ್ದ ಪುರುಷರು ತೀವ್ರ ಬದಲಾವಣೆಗೆ ಒಳಗಾದರು.

ರಬಕವಿ, ಇಲಕಲ್ ಸೀರೆ ಮತ್ತು ರವಿಕೆಗಳು ಹೆಣ್ಣು ಮಕ್ಕಳ ಉಡುಪುಗಳಾಗಿದ್ದವು. ಇವತ್ತು ಇವರ ವಸ್ತ್ರ ವಿನ್ಯಾಸ ಸಂಪೂರ್ಣವಾಗಿ ಬದಲಾವಣೆಯಾಗಿದೆ. ಇವರೀಗ ಆಧುನಿಕ ವಸ್ತ್ರ ವಿನ್ಯಾಸ, ವೇಷಭೂಷಣಗಳನ್ನು ಹೊಂದಿರುವರು. ಶಿಕ್ಷಣವನ್ನು ಪಡೆದುಕೊಂಡಿರುವರು. ಇದಲ್ಲದೇ ವೈಚಾರಿಕವಾಗಿ ಬೆಳೆದಿರುವರು. ಒಂದಿಷ್ಟು ಅಭಿವೃದ್ಧಿಪರ ಚಿಂತನೆಗಳನ್ನು ಮಾಡುತ್ತಿರುವರು. ಸಾಮಾಜಿಕವಾಗಿ ಪ್ರತಿಷ್ಠೆಯನ್ನು ಹೊಂದುತ್ತಿರುವರು. ಉದಾಹರಣೆಗೆ ಹಾರೂಗೇರಿ ಪಟ್ಟಣದ ಶ್ರೀ ವಿಠ್ಠಲ ಹಳ್ಳೂರ ತಮ್ಮ ಮಕ್ಕಳ ಮದುವೆಯನ್ನು ಐವತ್ತು ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿ ಮದುವೆ ಮಾಡುತ್ತಾರೆಂದರೆ ಅವರು ಹಣವಂತರಾಗಿರಬೇಕು ಮತ್ತು ಇದರ ಹಿಂದೆ ಶಕ್ತಿಯೊಂದು ಇರಲೇಬೇಕು. ಇದು ಅವರು ಆರ್ಥಿಕವಾಗಿ ಬೆಳೆದಿರುವ ಮತ್ತು ಸಾಮಾಜಿಕ ಪ್ರತಿಷ್ಠೆ ಹೊಂದುತ್ತಿರುವ ಪ್ರಯತ್ನದ ಒಂದು ನಿದರ್ಶನ.

ಹಾಲುಮತ ಸಮುದಾಯದ ಸ್ಥಿತ್ಯಂತರಕ್ಕೆ ಕಾರಣವಾದ ಎರಡನೇ ಅಂಶ, ರಾಯಬಾಗ ತಾಲೂಕಿನ ಪ್ರತಿಶತ ೭೫ ರಷ್ಟು ಜಮೀನು ನೀರಾವರಿ ವ್ಯಾಪ್ತಿಗೆ ಒಳಪಟ್ಟಿದ್ದು. ನೀರಾವರಿ ಸೌಲಭ್ಯ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಕಾರಣವಾದ ಮತ್ತೊಂದು ಪ್ರಮುಖ ಅಂಶ. ರಾಯಬಾಗ ತಾಲೂಕಿನ ಹಾಲುಮತ ಕುಟುಂಬಗಳು ಮೊದಲಿನಿಂದಲೂ ಜಮೀನುಗಳನ್ನು ಹೊಂದಿದ್ದು, ಈ ಜಮೀನುಗಳೆಲ್ಲ ಮರಡಿ ಜಮೀನುಗಳಾಗಿದ್ದು, ಇವು ಪಶುಪಾಲನೆಗೆ ಅನುಕೂಲಕರವಾದ ಜಮೀನುಗಳಾಗಿದ್ದವು. ಕೃಷಿಗೆ ನೀರಾವರಿ ಸೌಲಭ್ಯ ಒದಗಿದಾಗ ಪಶುಪಾಲನೆಗಿಂತ ಕೃಷಿ ಹೆಚ್ಚು ಲಾಭದಾಯಕವೆನಿಸಿತು.

ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆತ ತಕ್ಷಣ ಪಶುಪಾಲನೆ ಅಂದರೆ ಕುರಿಸಾಕಾಣಿಕೆಯನ್ನು ಕಡೆಗಣಿಸ ತೊಡಗಿದರು. ಯಾಕೆಂದರೆ ಅವರು ಕೃಷಿಯತ್ತ ಆಸಕ್ತಿಯನ್ನು ತೋರಿದರು. ಇನ್ನೊಂದು ಕಡೆ ಕುರಿ ಮೇಯಿಸ ಬೇಕಾದರೆ ಮರಡಿ ಜಮೀನು ಬೇಕಾಗಿತ್ತು. ಆದರೆ ನೀರಾವರಿ ಸೌಲಭ್ಯದಿಂದಾಗಿ ಮರಡಿ ಪ್ರದೇಶಗಳೆಲ್ಲ ತೋಟಗಳಾಗಿ ಪರಿವರ್ತಿತವಾಗಿದ್ದವು. ಕುರಿ ಮೇಯಿಸಲು ಜಮೀನುಗಳು ಸಿಗಲಿಲ್ಲ. ಇನ್ನೊಂದೆಡೆ ಕೃಷಿಯಲ್ಲಿ ವಿಫುಲ ಅವಕಾಶಗಳು ಸೃಷ್ಟಿಯಾದವು. ಆಗ ಇವರು ತಮ್ಮ ಮೂಲ ಉದ್ಯೋಗದಿಂದ ಹೊರಬಂದು ಕೃಷಿಯಲ್ಲಿ ತೊಡಗಿಸಿಕೊಂಡರು. ಆದರೆ ಕೃಷಿಯಿಂದ ವ್ಯಾಪಾರಕ್ಕೆ ಹೋಗಲಿಲ್ಲ. ವ್ಯಾಪಾರಿ ಕ್ಷೇತ್ರದಿಂದ ಔದ್ಯೋಗಿಕ ರಂಗಕ್ಕೆ ಹೋಗಲಿಲ್ಲ. ಇಂದಿಗೂ ಕೃಷಿಯಲ್ಲಿಯೇ ಮುಂದುವರೆದಿರುವರು.

ಪಶುಪಾಲನೆಯನ್ನು ಮಾಡುತ್ತ ಅರಣ್ಯ, ಗುಡ್ಡ-ಕಾಡುಗಳಲ್ಲಿ ಬದುಕುವಂತಹ ಒಂದು ಸಮುದಾಯ ಇಂದು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿರುವರು. ಅವರ ಸಾಂಸ್ಕೃತಿಕ ಕ್ಷೇತ್ರಗಳಂತೂ ಸಾಕಷ್ಟು ಅಭಿವೃದ್ಧಿಗೊಂಡಿರುವವು. ಈ ಸಮುದಾಯದ ದೇವಸ್ಥಾನಗಳನ್ನು ನೋಡಿದರೆ ಅದು ದೃಢಪಡುತ್ತದೆ. ಉದಾಹರಣೆಗೆ ಚಿಂಚಲಿಯ ಮಾಯವ್ವ, ಅಲಕನೂರಿನ ಕರೇಸಿದ್ಧೇಶ್ವರ, . ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ ದೇವಸ್ಥಾನಗಳೆಲ್ಲವು ಕೂಡ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿವೆ. ಈ ಎಲ್ಲಾ ದೇವಾಲಯಗಳು ಒಂದೆರಡು ಎಕರೆಗಿಂತಲೂ ಹೆಚ್ಚು ವಿಸ್ತಾರವಾದ ಪ್ರದೇಶವನ್ನು ಹೊಂದಿವೆ. ಇವು ನಮಗೆ ವಿಜಯನಗರ

ಅರಸರ ಕಾಲದ ದೇವಾಯಗಳನ್ನು ನೆನಪಿಸುತ್ತವೆ. ಅವುಗಳ ಬೆಳವಣಿಗೆಯ ಹಿಂದಿನ ಆರ್ಥಿಕ ಶಕ್ತಿಯನ್ನು ಪರಿಗಣಿಸಬೇಕಾಗುತ್ತದೆ.

ರಾಯಬಾಗ ಪರಿಸರದಲ್ಲಿ ಕಂಡು ಬರುವ ಕುರುಬ ಸಮುದಾಯದ ಪ್ರಮುಖ ಪಂಗಡಗಳು ಎರಡು. ಒಂದು ಹತ್ತಿ ಕಂಕಣ ಇನ್ನೊಂದು ಉಣ್ಣಿ ಕಂಕಣ. ಉಣ್ಣೆ ಕಂಕಣದ ಪಂಗಡದವರು ಬಿರಡಿ ಮತ್ತು ಮೊರಬಗಳಲ್ಲಿ ಹೆಚ್ಚಾಗಿ ಕಂಡು ಬರುವರು. ಇವುಗಳನ್ನು ಹೊರತು ಪಡಿಸಿ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ಹತ್ತಿಕಂಕಣದವರು ಕಂಡು ಬರುತ್ತಾರೆ. ಇದಲ್ಲದೆ ಹಂಡೆ ಕುರುಬ, ಝುಂಡೆ ಕುರುಬ ಎಂಬ ಪಂಗಡಗಳನ್ನು ಕಾಣುತ್ತೇವೆ. ಕುರುಬರಲ್ಲಿ ಕಂಡು ಬರುವ ನಾನಾ ವಿಧದ ಭೇಧಗಳು ಇಂದು ಪ್ರಖರವಾಗಿ ಉಳಿದುಕೊಂಡಿಲ್ಲ. ಹೆಚ್ಚು ಕಡಿಮೆ ಅವುಗಳು ಒಂದಾಗಿ, ಕೊಡುಕೊಳ್ಳುವಿಕೆಯಲ್ಲಿಯೂ ಕೂಡ ಒಂದಾಗಿವೆ. ಒಂದಿಷ್ಟು ಮಡಿವಂತಿಕೆ ಕೆಲವರಲ್ಲಿ ಕಂಡು ಬಂದರು ಕೂಡ ಹೆಚ್ಚು ಜನರಲ್ಲಿ ತಾವೆಲ್ಲರೂ ಒಂದೇ ಎಂಬ ಭಾವನೆ ಇದೆ. ವಧುವರರನ್ನು ಆಯ್ಕೆ ಮಾಡುವಾಗ ಮೊದಲಿನ ಭಾವ ಈಗ ಉಳಿದುಕೊಂಡಿಲ್ಲ.

ಮುಗಳಖೋಡ ಪುರಸಭೆ ವ್ಯಾಪ್ತಿಯಲ್ಲಿ ಝುಂಡೆ ಕುರುಬರು (ಗೌಲತ್ತಿನವರ) ಕಂಡು ಬರುತ್ತಾರೆ. ಪುರುಷರು ದನ-ಕರುಗಳ ವ್ಯಾಪಾರವನ್ನು ಮಾಡುತ್ತಿದ್ದರೆ, ಮಹಿಳೆಯರು ಸಂತೆ, ಜಾತ್ರೆಗಳಲ್ಲಿ ಅಲಂಕಾರಿಕ ಮತ್ತು ಮಕ್ಕಳ ಆಟದ ವಸ್ತುಗಳನ್ನು ಮಾರಾಟ ಮಾಡುವ ವೃತ್ತಿಯಲ್ಲಿ ತೊಡಗಿರುವರು. ಇವರಲ್ಲದೆ ಹೆಗಡೆ, ಒಡೆಯರ, ಕರಿಗಾರ, ಈರಗಾರ ಪಂಗಡದವರು ಈ ಪರಿಸರದಲ್ಲಿ ವಾಸಿಸುತ್ತಿರುವರು.

ಇತ್ತಿತ್ತಲಾಗಿ ಇಡೀ ಸಮುದಾಯವೇ ಶಿವಸಂಸ್ಕೃತಿಯಿಂದ ವೈಷ್ಣವ ಸಂಸ್ಕೃತಿಯತ್ತ ವಾಲುತ್ತಿದೆ. ಇದಕ್ಕೆ ಕಾರಣವೆಂದರೆ ಕನಕದಾಸರ ಆರಾಧನೆ. ಇನ್ನೊಂದು ಅಂಶ ಸಂಗೊಳ್ಳಿ ರಾಯಣ್ಣನದು. ಇವತ್ತೂ ಬೆಳಗಾವಿ ಪರಿಸರವಷ್ಟೇ ಅಲ್ಲ, ಇಡೀ ಉತ್ತರ ಕರ್ನಾಟಕದ ತುಂಬ ಹಾಲುಮತದ ಆಸ್ಮಿತೆಯಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಿಂಬಿತಗೊಳ್ಳುತ್ತಿದ್ದಾನೆ. ಇವನ ಹೆಸರಿನಲ್ಲಿ ಅನೇಕ ಸಂಘಟನೆಗಳು ತಲೆ ಎತ್ತಿವೆ.

ಇಂದು ರಾಜ್ಯದಲ್ಲಿ ಕೆ. ಎಸ್. ಈಶ್ವರಪ್ಪನವರು ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಸ್ಥಾಪಿಸಿರುವರು. ಈ ಬ್ರಿಗೇಡ ಸ್ಥಾಪನೆಯ ಮುಖ್ಯ ಉದ್ದೇಶ, ಬ್ರಿಗೇಡ ಬ್ಯಾನರ್‌ನಡಿಯಲ್ಲಿ ಇಡೀ ಹಾಲುಮತ ಸಮುದಾಯವನ್ನು ಸಂಘಟಿಸುವುದಾಗಿದೆ. ಇದಕ್ಕೆ ರಾಜಕೀಯ ಕಾರಣಗಳಿರಬಹುದು. ಆದರೆ ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದೆನೆಂದರೆ, ಸಂಗೊಳ್ಳಿ ರಾಯಣ್ಣನ ಪ್ರಸ್ತಾಪದಿಂದ ಕನಕದಾಸರ ಪ್ರಭಾವಕ್ಕೆ ಹಿನ್ನಡೆಯಾಗುತ್ತಿರುವುದು. ಒಂದು ಕಾಲದಲ್ಲಿ ಅಂದರೆ ಸಂಗೊಳ್ಳಿ ರಾಯಣ್ಣನ ಹೆಸರು ಮುಂಚೂಣಿಗೆ ಬರುವ ಪೂರ್ವದಲ್ಲಿ ಕನಕದಾಸರ ಹೆಸರಿನಡಿಯಲ್ಲಿ ಕರ್ನಾಟಕದ ಹಾಲುಮತ ಸಮುದಾಯದವರು ಸಂಘಟಿತಗೊಳ್ಳುತ್ತಿದ್ದರು. ಆದರೆ ಇಂದು ಉತ್ತರ ಕರ್ನಾಟಕದಲ್ಲಿ ಸಂಗೊಳ್ಳಿ ರಾಯಣ್ಣನ ಹೆಸರಿನಡಿಯಲ್ಲಿ ಸಂಘಟನೆಗಳು ಆರಂಭಗೊಂಡಿವೆ. ಇದು ಕೂಡ ಗಮನಿಸಲೇಬೇಕಾದ ಒಂದು ಸ್ಥಿತ್ಯಂತರ.

ಇನ್ನೂ ಕನಕದಾಸರು ವೈಷ್ಣವ ಸಂಪ್ರದಾಯದ ದಾಸ ಪರಂಪರೆಯ ಹಿನ್ನೆಲೆಯಿಂದ ಬಂದವರು. ಕನಕದಾಸರ ವೈಷ್ಣವ ಪಂಥದ ಹಿನ್ನೆಲೆಯ ಮೂಲಕ ಕೆಲವು ಜನ ಹಾಲುಮತದವರು ಈ ಹಿಂದೆ ವೈಷ್ಣವ ಪಂಥದ ಸೆಳೆತಕ್ಕೆ ಒಳಗಾದರು. ಉದಾಹರಣೆಗೆ ತಿರುಪತಿಯ ತಿಮ್ಮಪ್ಪನ ದರ್ಶನಕ್ಕೆ ಹೋಗುವ ಹಾಲುಮತ

ಸಮುದಾಯದ ಭಕ್ತರನ್ನು ಗುರುತಿಸಬಹುದು. ಹಾಲುಮತ ಸಮುದಾಯದಲ್ಲಿ ತಿಮ್ಮಪ್ಪ ಸೇರಿಕೊಳ್ಳಲು ಕನಕದಾಸರರೇ ಕಾರಣರು. ಕನಕದಾಸರು ಹಾಲುಮತ ಸಮುದಾಯದ ಒಬ್ಬ ದೈವವಾಗಿ ಮಾರ್ಪಟ್ಟಾಗ ತಿಮ್ಮಪ್ಪನ ಪ್ರವೇಶ ಹಾಲುಮತ ಸಮುದಾಯಕ್ಕೆ ಆಯಿತು. ಇದನ್ನು ಮಾಡಿದವರು ನಮ್ಮ ಸಾಂಸ್ಕೃತಿಕ ಲೋಕದವರು. ಇತ್ತೀಚಿಗೆ ಕನಕದಾಸರನ್ನು ಇವರು ಮುಖ್ಯವಾಹಿನಿಗೆ ತಂದರು. ಆನಂತರ ಮತ್ತೆ ಆ ಘಟ್ಟವನ್ನು ದಾಟಿ ಈಗ ಸಂಗೊಳ್ಳಿ ರಾಯಣ್ಣನೆಡೆಗೆ ಬಂದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಈಗ ಸಂಗೊಳ್ಳಿ ರಾಯಣ್ಣನ ಸಂಘಗಳು, ವೃತ್ತಗಳು ಹುಟ್ಟಿಕೊಂಡಿವೆ. ಇವುಗಳನ್ನು ಕನಕದಾಸರಿಗೆ ಹೋಲಿಸಿದರೆ ಇವುಗಳ ಪ್ರಮಾಣ ಹೆಚ್ಚು. ಕನಕದಾಸರ ಹೆಸರಿನಲ್ಲಿರುವ ಸಂಘಗಳು ಮತ್ತು·ವೃತ್ತಗಳು ಕಡಿಮೆ.

ಬೀರಪ್ಪ ದೇವರು ಕುರುಬ ಸಮುದಾಯದ ಅಧಿದೈವ. ಆದರೆ ಕನಕದಾಸರ ಪ್ರಭಾವ ಕುರುಬ ಸಮಾಜದಲ್ಲಿ ಹೆಚ್ಚಾಗುತ್ತಿದ್ದಂತೆ ಕನಕದಾಸರ ಜಯಂತಿ ಆರಂಭವಾಯಿತು. ಕನಕದಾಸರು ಕುರುಬರು. ಕನಕದಾಸರ ಆರಾಧನೆ ಎಂದರೆ ಕುರುಬರ ಆರಾಧನೆ ಎಂಬ ಭಾವ ಬಲಿಯಿತು. ಕನಕದಾಸರು ವಿಷ್ಣು ಉಪಾಸಕರು ಕುರುಬರು ಪ್ರಾರಂಭದಿಂದಲೂ ಶಿವ ಉಪಾಸಕರು. ಕನಕದಾಸರ ಪ್ರವೇಶದಿಂದ ಈ ಕುರುಬ ಸಮುದಾಯ ಶೈವ ಉಪಾಸನೆಯಿಂದ, ವೈಷ್ಣವ ಉಪಾಸನೆಯತ್ತ ಹೊರಳಿಕೊಳ್ಳತೊಡಗಿತು. ಕಾಗಿನೆಲೆ ಗುರುಪೀಠ ಆದ ಮೇಲೆ ಅದು ವಿಷ್ಣು ಉಪಾಸನೆಯತ್ತ ಮುಖಮಾಡಿತು. ಇದು ಇತ್ತೀಚಿನ ಸಂಚಲನ.

ಕುರುಬ ಸಮುದಾಯದಲ್ಲಿ ಮತಾಂತರವಾದದ್ದು ಬಹಳ ಕಡಿಮೆ. ಈ ಮತಾಂತರ ಕಂಡುಬರುವುದು ಸಮಾಜದ ಮೇಲ್ವರ್ಗ ಮತ್ತು ಕೆಳವರ್ಗದಲ್ಲಿ ಮಾತ್ರ. ಕುರುಬರು ಯಾವುದೇ ಮತಾಂತರಕ್ಕೆ ಒಳಗಾಗಲಿಲ್ಲ, ಇದು ಒಂದು ಬಹಳ ವಿಶೇಷವಾದದ್ದು. ಜೈನರು ಲಿಂಗಾಯತ ಧರ್ಮಕ್ಕೆ, ಲಿಂಗಾಯತರು ಜೈನ ಧರ್ಮಕ್ಕೆ ಮತಾಂತರವಾದ ಉದಾಹರಣೆಗಳಿವೆ. ಕೆಳವರ್ಗದವರು ಅಂದರೆ ಅಲೆಮಾರಿ ಜನಾಂಗದವರು ಮುಸ್ಲಿಂ ಧರ್ಮಕ್ಕೆ ಮತಾಂತರವಾದರು. ಉದಾಹರಣೆಗೆ ಪಿಂಜಾರ, ನದಾಫ್ ಇವರೆಲ್ಲರೂ ಆರಂಭದಲ್ಲಿ ಹಿಂದೂಗಳಾಗಿದ್ದರು. ಆದರೆ ಕುರುಬರು ಮಾತ್ರ ಮತಾಂತರವಾಗಲಿಲ್ಲ. ಕುರುಬರು ಲಿಂಗಾಯತ, ಜೈನ, ಮುಸ್ಲಿಂರಾಗಿ ಮತಾಂತರಗೊಳ್ಳಲಿಲ್ಲ. ಸಮಾಜದ ತೀರ ಮೇಲ್ವರ್ಗ ಮತ್ತು ಕೆಳವರ್ಗದಲ್ಲಿ ಮತಾಂತರವಾದರೂ ಇಲ್ಲಿ ಮತಾಂತರವಾಗಲಿಲ್ಲ. ಕಾರಣ ಇವರು ಸಮಾಜದ ಮಧ್ಯ ವರ್ಗಕ್ಕೆ ಸೇರಿದವರು. ಈ ಪರಿಸರದಲ್ಲಿರುವ ಕುರುಬರನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಮತಾಂತರವೇ ನಡೆಯಲಿಲ್ಲ. ಇಲ್ಲಿ ಯಾಕೆ ಮತಾಂತರ ಪ್ರಕ್ರಿಯೆ ನಡೆಯಲಿಲ್ಲ. ಇದು ಬಹಳ ವಿಶಿಷ್ಟವಾಗಿ ಕಾಣಿಸುತ್ತದೆ. ಸಮಕಾಲೀನ ಲೋಭ, ಆಕರ್ಷಣೆಗಳಿಗೆ ಅವರು ಒಳಗಾಗಲಿಲ್ಲ. ಯಾಕೆಂದರೆ ಅವರು ಬಹಳ ಶ್ರದ್ಧಾವಂತರು. ಆ ಶ್ರದ್ಧೆ ಅವರನ್ನು ಮತಾಂತರವಾಲಿಕ್ಕೆ ಬಿಡಲಿಲ್ಲ. ಅವರು ಸ್ಥಿರವಾಗಿ ನಿಲ್ಲುವಂತೆ ಮಾಡಿತು.

ಕನಕನ ಆರಾಧನೆ ಆರಂಭವಾದ ನಂತರ ಕನಕನ ಅಲೆ ಸಮಾಜದಲ್ಲಿ ವ್ಯಾಪಿಸುತ್ತ ಹೋಯಿತು. ಕನಕಸ ಹೆಸರಿನ ಮೇಲೆ ಎಲ್ಲವೂ ಅಸ್ತಿತ್ವಕ್ಕೆ ಬರಲು ಆರಂಭಿಸಿತು. ಕನಕನ ಅಸ್ತಿತ್ವಕ್ಕೆ ಬಂದಾಗ ಕುರುಬರ ಆರಾಧನೆ ವೈಷ್ಣವ ಪಂಥದತ್ತ ತಿರುಗಲಿಲ್ಲ. ಇಲ್ಲಿ ಕುರುಬರು ಕನಕದಾಸರನ್ನು ಮಾತ್ರ ಬರಮಾಡಿಕೊಂಡರು, ಅವರು ವೈಷ್ಣವ ಪಂಥವನ್ನು ಅನುಸರಿಸಲಿಲ್ಲ. ಕನಕರು ಕುರಬ ಸಮಾಜದಲ್ಲಿ ಹುಟ್ಟಿ ವೈಷ್ಣವರಾದರು. ಅಂದು ಕುರುಬರೆಂದರೆ ಕೀಳು ಎಂಬ ಭಾವನೆ ಇತ್ತು. ವೈಷ್ಣವರೆಂದರೆ ಮೇಲೆಂಬ ಭಾವನೆಯಿತ್ತು.

ತಳಸಮುದಾಯದಿಂದ ಮೇಲು ಸಮುದಾಯಕ್ಕೆ ಬರುವ ಯತ್ನವನ್ನು ಕಾಣುತ್ತೇವೆ. ಹಾಲುಮತದವರು ಕನಕದಾಸರನ್ನು ಗೌರವಿಸಿದಂತೆ ವೈಷ್ಣವ ಮತವನ್ನು ಗೌರವಿಸಲಿಲ್ಲ.

ತಳಸಮುದಾಯದಿಂದ ವೈಷ್ಣವ ಪಂಥಕ್ಕೆ ಹೋದ ಕನಕದಾಸರನ್ನು ಮತ್ತೆ ಇವರು ತಮ್ಮ ಸಮುದಾಯಕ್ಕೆ ಬರಮಾಡಿಕೊಂಡರು. ಆದರೆ ವೈಷ್ಣವ ಪಂಥಕ್ಕೆ ತಮ್ಮನ್ನು ತೆರೆದುಕೊಳ್ಳಲಿಲ್ಲ. ತಮ್ಮ ಸಮುದಾಯದಿಂದ ಹೊರಗೆ ಹೋದವನನ್ನು ಬರಮಾಡಿಕೊಂಡು ತಮ್ಮವನನ್ನಾಗಿ ಮಾಡಿಕೊಳ್ಳುವ ಪ್ರಯತ್ನವಾಯಿತು. ಅವರ ಮೂಲಕ ತಮ್ಮ ಸಮಾಜದ ಅಸ್ಮಿತೆಯನ್ನು ಗುರುತಿಸಿಕೊಳ್ಳುವರು. ಇಲ್ಲಿ ಕನಕರಂತೆ ಕುರುಬರು ವೈಷ್ಣವರಾಗಲಿಲ್ಲ. ಅವರ ಕುಲಗುರು ಬೀರಪ್ಪನೇ. ಅವನನ್ನು ಎಂದು ನಿರ್ಲಕ್ಷಿಸುವುದಿಲ್ಲ. ಯಾವ ಸಮುದಾಯಗಳಿಗೂ ಇಲ್ಲದಂಥ ಕೆಲವು ಅಸ್ಮಿತೆಗಳನ್ನು ಈ ಸಮಾಜ ಉಳಿಸಿಕೊಂಡಿದೆ. ಉದಾಹರಣೆಗಾಗಿ ಡೊಳ್ಳು, ಡೊಳ್ಳಿನ ಹಾಡುಗಳು ಮತ್ತು ಇವುಗಳಿಗೆ ಸಂಬಂಧಿಸಿದ ಇತರೆ ಕಲೆಗಳು ದೇವತೆಯ ಆರಾಧನೆಯ ಹಿನ್ನೆಲೆಯಲ್ಲಿ ಹಿಂದಿನಿಂದ ಇವತ್ತಿನ ತನಕವೂ ಉಳಿದುಕೊಂಡು ಬಂದಿವೆ. ಯಾವ ಸಮುದಾಯದಲ್ಲಿಯೂ ಇಂತಹ ಆರಾಧನೆ ಕಲೆಗಳೂ ಇಷ್ಟು ಪ್ರಮಾಣದಲ್ಲಿ ಉಳಿದುಕೊಂಡು ಬಂದಿಲ್ಲ. ಬ್ರಾಹ್ಮಣ, ಜೈನ ಲಿಂಗಾಯತ ಸಮುದಾಯಗಳು ಕಾಲಕ್ಕೆ ತಕ್ಕಂತೆ ಪಲ್ಲಟಗೊಂಡರು ಹಾಲುಮತದವರು ಪಲ್ಲಟಗೊಳ್ಳಲಿಲ್ಲ. ಪರಂಪರಾಗತ ಕಲೆಗಳನ್ನು, ಧಾರ್ಮಿಕ ಆಚರಣೆಗಳನ್ನು ಬಿಟ್ಟು ಕೊಡಲಿಲ್ಲ. ಯಾಕೆಂದರೆ ಇವತ್ತು ಎಷ್ಟೇ ಪ್ರಮಾಣದಲ್ಲಿ ಕುರುಬರು ಸಮುದಾಯದವರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮುಂದುವರೆದಿದ್ದಾರೆ ಎಂದರೂ ಕೂಡ ಮೇಲ್ವರ್ಗದವರಿಗಿಂತಲೂ ಇನ್ನೂ ಹಿಂದುಳಿದುಕೊಂಡಿದ್ದಾರೆ. ಅವರು ತಮ್ಮ ಸಿಮೇಯನ್ನು ದಾಟಿ ಇನ್ನೂ ಹೊರಬಂದಿಲ್ಲ. ಉದಾಹರಣೆಗೆ ತಾವು ವಾಸಿಸಲು ಮನೆಯನ್ನು ಎಷ್ಟೇ ದೊಡ್ಡದಾಗಿ ಕಟ್ಟಿಕೊಂಡರೂ ಆಡಿನಮರಿ, ಕುರಿಮರಿಗಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಸಾಮಾನ್ಯ. ಅವುಗಳ ಓಡಾಟವನ್ನು ಅವರು ನಿರ್ಬಂದಿಸುವುದಿಲ್ಲ ಕಾರಣವೇನೆಂದರೆ, ಪಶುಗಳ ಸಾಕಾಣಿಕೆ ಅವರಿಗೆ ಅನಿವಾರ್ಯ. ಅವುಗಳಿಲ್ಲದೇ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ಅವರು ಇಂದಿಗೂ ಮಾಡಿಕೊಂಡಿಲ್ಲ. ಮಾಡಿಕೊಂಡಿದ್ದರೂ ಅಂತವರ ಸಂಖ್ಯೆ ಬಹಳ ಕಡಿಮೆ. ಬದಲಾವಣೆಗೆ ಒಳಗಾದವರು ಕೆಲವೇ ಕೆಲವು ಜನ ಇದ್ದರೂ ಕೂಡ ಅವರಿಗೆ ಬೆಂಬಲವಾಗಿ ನಿಲ್ಲುವವರು ಬೇರೆ ಸಮುದಾಯದವರೆಂಬುದು ಗಮನಿಸಬೇಕಾದ ಅಂಶ.

ರಾಜಕೀಯವಾಗಿ ಒಬ್ಬ ನಾಯಕ ತನ್ನ ಸಮುದಾಯದಲ್ಲಿ ಮುಂಚೂಣಿಗೆ ಬಂದಾಗ ಸಮುದಾಯದ ಎಲ್ಲ ಜನರು ಅವರನ್ನು ನಂಬಿಕೊಳ್ಳುತ್ತಾರೆ. ಅವರ ಧ್ಯೇಯ–ಧೋರಣೆಗಳು ಸರಿ ಇಲ್ಲದ ಬಗ್ಗೆ ಜನರಿಗೆ ತಿಳಿದಾಗಲೂ ಕೂಡ ತಮ್ಮ ನಾಯಕನನ್ನು ಬಿಟ್ಟು ಬೇರೆಯವರನ್ನು ಬೆಂಬಲಿಸುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಆಯಾ ಜಾತಿಯವರು ತಮ್ಮ ಜಾತಿಯ ನಾಯಕರನ್ನು ನಂಬಿಕೊಂಡು ಬೆನ್ನು ಹತ್ತುವುದು ಕಡಿಮೆ. ಆದರೆ ಕುರುಬರಲ್ಲಿ ಇಂತಹ ನಂಬಿಕೆಗಳು ಬಹಳ ಗಟ್ಟಿಯಾಗಿರುತ್ತವೆ. ಆ ಕಾರಣದಿಂದಾಗಿ ಕುರುಬರು ತಮ್ಮ ಜನಾಂಗದ ನಾಯಕರಿಗೆ ಸಂಪೂರ್ಣ ಬೆಂಬಲಕೊಟ್ಟು ಅವರ ಬೆನ್ನು ಹತ್ತುತ್ತಾರೆ. ಇದಕ್ಕೆ ಕಾರಣ ಅವರು ಸ್ವಭಾವತಃ ನಂಬಿಗಸ್ಥರು. ಅವರಲ್ಲಿ ವೈಚಾರಿಕತೆ ಕಡಿಮೆ. ಅವರು

ತಮ್ಮವರನ್ನು ವಿಚಾರಮಾಡಿ, ವಿಮರ್ಶೆಮಾಡಿ ನೋಡುವುದಿಲ್ಲ. ಅವರು ನಮ್ಮವರೆನ್ನುವ ಒಂದೇ ಕಾರಣಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡುತ್ತಾರೆ.

ಹಾಲುಮತ ಸಮುದಾಯದವರು ಕಾಡಿನಿಂದ ನಾಡಿಗೆ ಬಂದವರು. "ಇವರಲ್ಲಿ ಮುಗ್ಧತೆ, ಪ್ರಾಮಾಣಿಕತೆ ಜೊತೆಗೆ ಹುಂಬತನ ಇರುವುದನ್ನು ಕಾಣುತ್ತೇವೆ. ಯಾವುದೇ ಸಣ್ಣ-ಪುಟ್ಟ ಮೋಸ, ಅನ್ಯಾಯಗಳಾದಾಗ ಅದನ್ನು ಸಹಿಸಿಕೊಳ್ಳುವುದಿಲ್ಲ. ಅದನ್ನು ಪ್ರತಿಭಟಿಸುತ್ತಾರೆ. ಸಂದರ್ಭ ಬಂದರೆ ಸಂಘರ್ಷಕ್ಕೂ ಅಣಿಯಾಗುತ್ತಾರೆ."[೮] ಈ ಎಲ್ಲವುಗಳು ಬುಡಕಟ್ಟು ಜನಾಂಗದ ಲಕ್ಷಣಗಳಾಗಿದ್ದು, ಇವು ಇವರಲ್ಲಿ ಕಂಡು ಬರುತ್ತವೆ. ಆ ಗುಣಗಳೆಲ್ಲ ಅವರಲ್ಲಿ ರಕ್ತಗತವಾಗಿ ಬೆಳೆದು ಬಂದವುಗಳಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಇವರು ಸಮಯ ಸನ್ನಿವೇಶಗಳಿಗೆ ಬೇಗನೆ ಹೊಂದಾಣಿಕೆ ಮಾಡಿಕೊಳ್ಳುವರು. ಅವರು ಬದುಕಿ ಬಂದಿರುವುದೇ ಸಾಮೂಹಿಕ ಬದುಕಿನ ಹಿನ್ನೆಲೆಯಿಂದ. ಅವರು ತಮ್ಮ ಸಮುದಾಯದ ಒಬ್ಬ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಸಂಬಂಧಿಸಿದಂತೆ ಯಾವುದೇ ಘಟನೆ ನಡೆದರು ಅವರೆಲ್ಲರೂ ಒಂದು ಗೂಡುತ್ತಾರೆ.

ಕಾಡಿನ ಹಿನ್ನೆಲೆಯನ್ನು ಹೊಂದಿರುವ ಇವರಿಗೆ ಬಹಳ ಧೈರ್ಯ. ಕಾಡು ಪ್ರಾಣಿಗಳೊಂದಿಗೆ ಬದುಕುವುದು ಇವರ ಸಹಜ ಸ್ವಭಾವ. ಅವರಲ್ಲಿ ಆತ್ಮಸ್ಥೈರ್ಯ ಮತ್ತು ಶಕ್ತಿಗಳು ಕೂಡ ಅಧಿಕ. ಹೀಗಾಗಿ ಅವರು ಹುಲಿಬಾಯಿಂದ ಕುರಿಮರಿಯನ್ನು ಕಸಿದು ಕೊಳ್ಳುವ ಎಂಟೆದೆ ಬಂಟರು. ಈ ಲಕ್ಷಣಗಳು ವಂಶಪಾರಂಪರೆಯಿಂದ ಮುಂದುವರೆದುಕೊಂಡು ಬರುತ್ತವೆ. ಇವು ಎಲ್ಲಿಯವರೆಗೆ ಬೆಳೆದುಕೊಂಡು ಬರುತ್ತವೆಯೆಂದರೆ, ಅವರು ಆರ್ಥಿಕವಾಗಿ, ಬೌದ್ಧಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಬೆಳೆದುಕೊಂಡು ಬರುವವರೆಗೆ ಅವು ಮುಂದುವರೆದುಕೊಂಡು ಬರುತ್ತವೆ. ಎಲ್ಲಿಯವರೆಗೆ ಅವರು ಬದಲಾವಣೆಗೆ ಒಳಗಾಗುವುದಿಲ್ಲವೋ ಅಲ್ಲಿಯವರೆಗೆ ಆ ಲಕ್ಷಣಗಳು ಮುಂದುವರೆದುಕೊಂಡು ಬರುತ್ತವೆ. ಬದಲಾವಣೆಗೊಂಡ ನಂತರ ಮಾತ್ರ ಅವರ ಸ್ವಭಾವಗಳು ಬದಲಾಗುತ್ತವೆ. ಆದರೂ ಎಷ್ಟೇ ಸುಶಿಕ್ಷಿತರಾಗಿದ್ದರೂ ಕೂಡ ಪ್ರಸಂಗ ಬಂದಾಗ ತೀವ್ರವಾಗಿ ಪ್ರತಿಭಟಿಸುವ ಸ್ವಭಾವ ಕಂಡು ಬರುತ್ತದೆ.

ಹಾಲುಮತ ಸಮುದಾಯದವರಲ್ಲಿ ಕಂಡು ಬರುವ ಇನ್ನೊಂದು ವಿಶೇಷವೆಂದರೆ, ಅವರು ಸ್ವಾಭಿಮಾನಿಗಳು ಮತ್ತು ಸ್ವಾವಲಂಬಿಗಳು. ಯಾರಲ್ಲಿ ಸ್ವಾಭಿಮಾನ ಇರುತ್ತದೆಯೋ ಅವರೆಲ್ಲ ಸ್ವಾವಲಂಬಿಗಳಾಗಿರುತ್ತಾರೆ. ಪರಾವಲಂಬಿಗಳಲ್ಲಿ ಸ್ವಾಭಿಮಾನ ಇರುವುದಿಲ್ಲ. ಇವರಲ್ಲಿರುವ ಇನ್ನೊಂದು ಗುಣವೆಂದರೆ ಉದಾರತನ. ವ್ಯವಹಾರ ಜ್ಞಾನ ಕಡಿಮೆ. ವ್ಯವಹಾರ ಜ್ಞಾನವೆಂದರೆ ಇಲ್ಲಿ ವ್ಯಾಪಾರೀಕರಣವೆಂದರ್ಥ. ಒಬ್ಬ ವ್ಯಾಪಾರಸ್ಥ ತನ್ನ ಒಂದು ರೂಪಾಯಿಯೂ ಹಾನಿಯಾಗದಂತೆ ಎಚ್ಚರವಹಿಸುವನು. ಹೇಗಾದರೂ ಮಾಡಿ ತನಗೆ ಬರಬೇಕಾದ ಲಾಭಾಂಶವನ್ನು ಪಡೆದುಕೊಳ್ಳುವನು. ಆದರೆ ಹಾಲುಮತಸ್ಥರು ಈ ರೀತಿಯ ಧೋರಣೆಯನ್ನು ಹೊಂದಿದವರಲ್ಲ. ಅದಕ್ಕಾಗಿ ಜನ ಹೇಳುವರು 'ಕುರುಬರು ಮಳ್ಳರು' ಎಂದು. ಯಾವ ಜನರಲ್ಲಿ ಮುಗ್ಧತೆ ಇರುವುದೋ ಅವರನ್ನು ಸಮಾಜ ಮಳ್ಳರೆಂದು ಕರೆಯುತ್ತದೆ.

ಶರಣರೊಬ್ಬರು ಹೀಗೆ ಹೇಳುತ್ತಾರೆ, 'ಲೋಕದ ಕಣ್ಣಿಗೆ ಶರಣ ಮರಳು, ಶರಣನ ಕಣ್ಣಿಗೆ ಲೋಕ ಮರಳು'. ಮುಗ್ಧರ ಕಣ್ಣಿಗೆ ಜಗತ್ತೇ ಮರುಳೆಂದು ತೋರುವುದು. ಆದರೆ ಜಗತ್ತಿನ ಕಣ್ಣಿನಲ್ಲಿ ಈ ಮುಗ್ಧರು ಮರುಳರೆನಿಸುವರು. ಅಂದರೆ ಇವರು ಜಗತ್ತಿನಲ್ಲಿ ಉದಾರತೆ ಮತ್ತು ಪ್ರಾಮಾಣಿಕತೆಯನ್ನು

ಪ್ರದರ್ಶಿಸುತ್ತಿರುತ್ತಾರೆ. ಅವರಲ್ಲಿ ಮಾನವೀಯತೆ ಮನೆಮಾಡಿಕೊಂಡಿರುತ್ತದೆ. 'ಮಾನವಿಯತೆಯ ಉತ್ಕೃಷ್ಟತೆಯೇ ಉದಾರತೆ'. ಇಲ್ಲಿ ನಾವು ಒಂದು ಸನ್ನಿವೇಶವನ್ನು ಸ್ಮರಿಸಿಕೊಳ್ಳಬಹುದು. ಸಾಮಾನ್ಯವಾಗಿ ವರ್ಷದಲ್ಲಿ ಎರಡು-ಮೂರು ಬಾರಿ ದೇವರಿಗೆ ಹರಿಮರಿಯನ್ನು ಬಲಿ ಕೊಡುವ ಸಂಪ್ರದಾಯಗಳು ಹಳ್ಳಿಗಳಲ್ಲಿ ಇಂದಿಗೂ ನಡೆದುಕೊಂಡು ಬಂದಿವೆ. ಒಂದು ಸೀಮೋಲಂಘನ ಸಮಯದಲ್ಲಿ ಅಂದರೆ ದಸರಾ ಹಬ್ಬದಲ್ಲಿ, ಎರಡನೆಯದು ಮಸೀದಿಯಲ್ಲಿ ದೇವರು ಏಳುವಾಗ, ಮೂರನೆಯದು ಮನೆ ದೇವರಿಗೆ ಪೂಜೆ ಮಾಡುವಾಗ ಬಲಿ ಕೊಡುವ ಸಂಪ್ರದಾಯವಿರುವುದು.

ಈ ಸಮಯದಲ್ಲಿ ಬೇಕಾಗಬಹುದಾದ ಕುರಿಮರಿಗಳನ್ನು ಕುರುಬರ ಹಿಂಡಿನಿಂದ ಪುಕ್ಕಟೆಯಾಗಿಯೇ ಜನ ಪಡೆದುಕೊಳ್ಳುತ್ತಿದ್ದರು. ಆಗ ಕುರುಬರು ಯಾವುದೇ ವ್ಯವಹಾರಿಕವಾದ ಪ್ರತಿಫಲ ಅಪೇಕ್ಷಿಸದೇ ಕುರಿಮರಿಗಳನ್ನು ಬಲಿದಾನಕ್ಕೆ ನೀಡುತ್ತಿದ್ದರು. ಊರಿನ ಹಳಬರು ಈ ಬಲಿಯನ್ನು ಕೊಡುತ್ತಿದ್ದರು. ಬಲಿ ಪ್ರಾಣಿಯ ಮಾಂಸವನ್ನು ಹರಿಜನರು ಪಡೆದು ಕೊಳ್ಳುತ್ತಿದ್ದರು. ಇವು ಪರಂಪರಾತಗವಾಗಿ ನಡೆದುಕೊಂಡ ಬಂದ ಪದ್ಧತಿಗಳು. ಆದರೆ ಇಂದು ಇವುಗಳೆಲ್ಲ ಕಣ್ಮರೆಯಾಗುತ್ತಿವೆ. ಒಂದೆರಡು ಘಟನೆಗಳನ್ನು ಹೊರತುಪಡಿಸಿದರೆ ಈ ಬಲಿ ಕೊಡುವ ಪದ್ಧತಿಗಳು ಇಂದು ನಿಂತುಹೋಗಿವೆ.

೩. ಶೈಕ್ಷಣಿಕ :

ರಾಯಬಾಗ ಪರಿಸರದ ರಾಜಕೀಯ ಚರಿತ್ರೆ ಆರಂಭವಾಗುವುದು ರಟ್ಟರಿಂದ. ೧೧ ರಿಂದ ೧೩ನೇ ಶತಮಾನದವರೆಗೆ ರಟ್ಟರು ರಾಯಬಾಗ ಪರಿಸರವನ್ನು ಆಳಿದ್ದು ಅವರ ಅವಧಿಯಲ್ಲಿ ಜೈನರ ಪ್ರಭಾವ ಅಧಿಕವಾಗಿತ್ತು. ಆ ಮೇಲೆ ಇದು ಮುಸ್ಲಿಂ ಆಡಳಿತದ ತಕ್ಕೆಗೆ ಹೋಗುತ್ತದೆ. ನಂತರ ಮರಾಠರ ಹಿಡಿತ ಪ್ರಾರಂಭವಾಯಿತು. ರಾಯಬಾಗವು ಕೊಲ್ಹಾಪುರದ ಶಾಹು ಮಹಾರಾಜರ ಆಡಳಿತಕ್ಕೆ ಒಳಪಟ್ಟಿತು. ಅವರು ಇಲ್ಲಿರುವ ಬಹುಸಂಖ್ಯಾತರು ಮತ್ತು ಪ್ರಬಲರು ಆದ ಕುರುಬ ಸಮುದಾಯದ ನಾಯಕರಿಗೆ ಪ್ರಾತಿನಿಧ್ಯವನ್ನು ಕೊಟ್ಟರು. ಹೀಗಾಗಿ ಈ ಪರಿಸರದಲ್ಲಿರುವ ಕುರುಬರು ನೆಲದ ಅಧಿಕಾರವನ್ನು ಅಂದರೆ ಪ್ರಮುಖ ಗ್ರಾಮದ ಆಡಳಿತ ಹಕ್ಕನ್ನು ಪಡೆಯುವಂತಾಯಿತು. ಅಂದರೆ ಗೌಡಕಿ, ತಳವಾರ ಮುಂತಾದ ಹುದ್ದೆಗಳು ಲಭಿಸಿದವು. ಶಾಹು ಮಹಾರಾಜರು ಒಬ್ಬ ಮಹಾನ್ ಸಮಾಜ ಸುಧಾರಕರು. ಅಂಬೇಡ್ಕರ ಸಿದ್ಧಾಂತಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಟ್ಟವರು ಶಾಹು ಮಹಾರಾಜರು. ಹೀಗಾಗಿ ಅವರಿಬ್ಬರ ವಿಚಾರಧಾರೆಗಳು ಒಂದೇ ಆಗಿದ್ದವು. ಅದಕ್ಕಾಗಿ ಈ ಪರಿಸರದಲ್ಲಿನ ಬಹುಸಂಖ್ಯಾತರು ಹಾಲುಮತ ಸಮುದಾಯದವರ ಕೈಗೆ ಅಧಿಕಾರವನ್ನು ಕೊಡುತ್ತಾರೆ. ಅಲ್ಲಿಯ ತನಕ ಈ ಪರಿಸರದ ಮೇಲಿನ ಅಧಿಕಾರವು ಬೇರೆ ವರ್ಗದವರಿಂದ ನಿರ್ವಹಿಸಲ್ಪಡುತ್ತಿತ್ತು.

ಮರಾಠಾ ನಾಯಕ ಶಾಹು ಮಹಾರಾಜರು ಸ್ಥಳೀಯ ಮತ್ತು ಬಹು ಸಂಖ್ಯಾತ ಸಮುದಾಯದವರಿಗೆ ಎಂದೂ ಅಧಿಕಾರ ನಿರ್ವಹಣೆಯ ಅಧಿಕಾರವನ್ನು ನೀಡಿದರೋ ಅಂದಿನಿಂದ ಇಂದಿನವರೆಗೂ ಕೂಡ ಹೆಚ್ಚು-ಕಡಿಮೆ, ಈ ಪರಿಸರದ ಮೇಲೆ ಕುರುಬರು ತಮ್ಮ ಹಿಡಿತವನ್ನು ಸಾಧಿಸಿರುವರು. ಮರಾಠರು ಒಂದು ವೇಳೆ ಇಲ್ಲಿಯ ಮೂಲನಿವಾಸಿಗಳಾದ ಕುರುಬರಿಗೆ ಪ್ರಾತಿನಿಧ್ಯ ಕೊಡದಿದ್ದಲ್ಲಿ ಅವರ ಅಧಿಕಾರದ ಯುಗ ಆರಂಭವಾಗುತ್ತಲೇ ಇರುತ್ತಿರಲಿಲ್ಲ. ಈ ನಿಟ್ಟಿನಲ್ಲಿ ಇಲ್ಲಿ

ಉದಯವಾದ ನಾಯಕ ವಿ. ಎಲ್. ಪಾಟೀಲ. ಇವರು ಶಾಹು ಮಹಾರಾಜರ ನಂತರ ಮರಾಠರೊಂದಿಗೆ ಮಧುರವಾದ ಬಾಂಧವ್ಯವನ್ನು ಮುಂದುವರೆಸಿದರು. ಇವರು ಮೇಲಿಂದ ಮೇಲೆ ಕೊಲ್ಹಾಪುರವನ್ನು ಸಂಪರ್ಕಿಸ ಬೇಕಾಗುತ್ತಿತ್ತು. ಈ ಸಂಪರ್ಕದಿಂದಾಗಿ ಮಹಾರಾಷ್ಟ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದ ಹಲವಾರು ಸುಧಾರಣೆಗಳು ಇವರನ್ನು ಆಕರ್ಷಿಸಿದವು. ಅಂತಹ ಸುಧಾರಣೆಗಳಲ್ಲಿ ಶಿಕ್ಷಣವು ಕೂಡ ಒಂದಾಗಿತ್ತು. ಅರಿವಿನ ಮೂಲವಾದ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಅವಶ್ಯಕವೆಂದು ತಿಳಿದುಕೊಂಡ ಗೌಡರು ಈ ಪರಿಸರದಲ್ಲಿಯೂ ಕೂಡ ಅವಶ್ಯಕತೆ ಇದ್ದಲ್ಲಿ ಶಾಲೆ-ಕಾಲೇಜುಗಳನ್ನು ಪ್ರಾರಂಭಿಸಿದರು. ಗೌಡರು ಆರಂಭಿಸಿದ ಶಿಕ್ಷಣ ಪ್ರಸಾರದ ಮೂಲ ಕೇಂದ್ರ ಕೊಲ್ಹಾಪುರ ಆಗಿತ್ತು. ಅಂದು ಕೊಲ್ಹಾಪುರ ಶಿಕ್ಷಣ ಕೇಂದ್ರವೂ, ಸಾಂಸ್ಕೃತಿಕ ಶಕ್ತಿಯೂ ಆಗಿ ಹೆಸರುಗಳಿಸಿತು. ಆ ನಂತರದಲ್ಲಿ ಅದು ರಾಯಬಾಗಕ್ಕೆ ಸ್ಥಳಾಂತರಗೊಂಡಿತು.

ಹಾಲುಮತ ಸಮುದಾಯದ ಸ್ಥಿತ್ಯಂತರಗಳಿಗೆ ಕಾರಣವಾದಂತಹ ಅಂಶಗಳು ಎರಡು. ಒಂದು ಶೈಕ್ಷಣಿಕ ಅಭಿವೃದ್ಧಿ. ಇನ್ನೊಂದು ಈ ಪ್ರದೇಶಕ್ಕೆ ದೊರೆತ ನೀರಾವರಿ ಸೌಲಭ್ಯ. ಶೈಕ್ಷಣಿಕ ಅಭಿವೃದ್ಧಿ ಎಂದರೆ, ತಾಲೂಕಿನ ಪ್ರಮುಖ ಊರುಗಳಲ್ಲಿ ಶಾಲೆ ಕಾಲೇಜುಗಳನ್ನು ಪ್ರಾರಂಭಿಸಿದ ವಿ. ಎಲ್. ಪಾಟೀಲರು ಜನ ಸಾಮಾನ್ಯರನ್ನು ಶಿಕ್ಷಣದತ್ತ ಸೆಳೆದು ಈ ಪರಿಸರದಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ಮಾಡಿದರು. ಅವಶ್ಯಕ ಸ್ಥಳಗಳಲ್ಲಿ ಹೈಸ್ಕೂಲಗಳನ್ನು ಆರಂಭಿಸಿದ್ದರಿಂದ ಹಾಲುಮತದವರೊಂದಿಗೆ ಉಳಿದೆಲ್ಲ ಸಮುದಾಯದ ಮಕ್ಕಳು ಕೂಡ ಶಾಲೆಗಳಿಗೆ ಸೇರಿಕೊಂಡರು. ಅದರಲ್ಲೂ ವಿಶೇಷವಾಗಿ ಇದು ಹಾಲುಮತ ಜನಾಂಗಕ್ಕೆ ಹೆಚ್ಚು ಉಪಯುಕ್ತವಾಯಿತು.

ವಿ. ಎಲ್. ಪಾಟೀಲರು ಮಾಡಿದ ಇನ್ನೊಂದು ಕಾರ್ಯವೇನೆಂದರೆ, ಶಾಲೆಗಳಲ್ಲಿ ಬೋಧಿಸುವ ಶಿಕ್ಷಕ ಮತ್ತು ಮುಖ್ಯೋಪಾಧ್ಯಾಯರನ್ನು ಆಯ್ಕೆ ಮಾಡುವಾಗ ಹಾಲುಮತ ಸಮುದಾಯದವರನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಂಡರು. ಉಳಿದ ಸಮುದಾಯದವರು ಹೆಚ್ಚಿನ ಶಿಕ್ಷಣವನ್ನು ಪಡೆದುಕೊಂಡಿರಲಿಲ್ಲವೆಂತಲ್ಲ. ಅವರೆಲ್ಲರಿಗೂ ಇಲ್ಲಿಯೇ ನೌಕರಿಗೆ ಅವಕಾಶ ಇಲ್ಲದೇ ಇರುವುದರಿಂದಾಗಿ ಅವರು ಬೇರೆ-ಬೇರೆ ಕಡೆಗೆ ಹೋದರು. ಹೀಗಾಗಿ ಪಾಟೀಲರು ಈ ಸಮುದಾಯದವರಿಗೆ ಅವಕಾಶ ಒದಗಿಸಿಕೊಟ್ಟರು. ಈ ಅವಕಾಶಗಳ ಪಡೆದುಕೊಂಡ ಹಾಲುಮತ ಸಮುದಾಯದ ಶಿಕ್ಷಕರು ಅಷ್ಟೇ ನಿಷ್ಪಕ್ಷಪಾತದಿಂದ ಸೇವೆ ಮಾಡಿದರು. ಇದರಿಂದಾಗಿ ಇಡೀ ಸಮುದಾಯ ಶಿಕ್ಷಣದ ಕಡೆಗೆ ನಡೆಯಿತು. ಪಶುಪಾಲನೆಯಿಂದ ಕೃಷಿಗೆ, ಕೃಷಿಯಿಂದ ಶಿಕ್ಷಣದ ಕಡೆಗೆ ನಡೆಯಿತು. ಅಂದರೆ ಕವಲೊಡೆಯಿತು. ಅವರು ವ್ಯಾಪಾರದ ಕಡೆಗೆ ಹೋಗಲಿಲ್ಲ. ಶಿಕ್ಷಣದ ಕಡೆಗೆ ಹೋದರು. ಹೀಗೆ ಶಿಕ್ಷಣದ ಕಡೆಗೆ ಹೋಗಿದ್ದರ ಪರಿಣಾಮವೇ ಇಂದು ಈ ಸಮುದಾಯದಲ್ಲಿ ಡಾಕ್ಟರ, ಇಂಜನೀಯರ, ಪ್ರಾಧ್ಯಾಪಕರು, ಪ್ರಾಚಾರ್ಯರು, ಉಪನ್ಯಾಸಕರು, ರೂಪುಗೊಳ್ಳುವಂತಾಯಿತು.

ವಿ. ಎಲ್. ಪಾಟೀಲ ಬಹುಮುಖ ವ್ಯಕ್ತಿತ್ವದ ನಾಯಕರು. ಅವರ ಸಾಧನೆ ರಾಜಕೀಯ ರಂಗಕಷ್ಟೇ ಸಿಮೀತವಾಗಿರಲಿಲ್ಲ. ಶೈಕ್ಷಣಿಕ, ಸಾಮಾಜಿಕ, ಔದ್ಯೋಗಿಕ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಅವರು ಮಾಡಿದ ಸಾಧನೆಯ ಹೆಜ್ಜೆ ಗುರುತುಗಳನ್ನು ತಾಲೂಕಿನ ಹಿರಿಯರು ಇಂದಿಗೂ ಗುರುತಿಸುತ್ತಾರೆ.

ವಿ. ಎಲ್. ಪಾಟೀಲರು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದರು. ಈ ಪರಿಸರದಲ್ಲಿರುವ ಜನ ಅಭಿವೃದ್ಧಿ ಹೊಂದಬೇಕೆಂಬುದು ಅವರ ಕನಸಾಗಿತ್ತು. ಈ ಕನಸು ನನಸಾಗಬೇಕಾದರೆ ಶಿಕ್ಷಣದ ಪಾತ್ರ

ಮುಖ್ಯವೆಂಬದು ಅವರಿಗೆ ಗೊತ್ತಿತ್ತು. ಅದಕ್ಕಾಗಿಯೇ ಈ ಪರಿಸರ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಶಾಲೆ-ಕಾಲೇಜುಗಳನ್ನು ಆರಂಭಿಸಿದರು. ಇವರು ಈ ಮೊದಲು ಕೊಲ್ಹಾಪೂರ ಶಿಕ್ಷಣ ಪ್ರಸಾರಕ ಮಂಡಳಿಯಲ್ಲಿ ಕಾರ್ಯನಿರ್ವಹಿಸಿ, ಆ ಭಾಗದಲ್ಲಿ ಹಲವಾರು ಶಾಲೆ-ಕಾಲೇಜುಗಳನ್ನು ಹುಟ್ಟು ಹಾಕಿದ್ದರು. ಇಂತಹುದೇ ಶಾಲೆ-ಕಾಲೇಜುಗಳನ್ನು ರಾಯಬಾಗ ಪರಿಸರದಲ್ಲಿ ಸ್ಥಾಪಿಸುವ ವಿಚಾರವನ್ನಿಟ್ಟುಕೊಂಡು ೧೯೪೫ ರಲ್ಲಿ ಕೊಲ್ಹಾಪೂರದಲ್ಲಿ ಆರಂಭಿಸಿದ್ದು 'ಶಿಕ್ಷಣ ಪ್ರಸಾರಕ ಮಂಡಳಿ' ನಂತರದಲ್ಲಿ ಅದು 'ರಾಯಬಾಗ ಶಿಕ್ಷಣ ಪ್ರಸಾರಕ ಮಂಡಳಿ'ಯಾಗಿ ಪರಿವತನೆಗೊಂಡಿತು. ಇದರ ಸಂಸ್ಥಾಪಕ ಅಧ್ಯಕ್ಷರಾದ ಗೌಡರು, ಸಂಸ್ಥೆಯ ವತಿಯಿಂದ ಹಲವಾರು ಶಾಲೆ-ಕಾಲೇಜುಗಳನ್ನು ಬೆಳಗಾವಿ ಜಿಲ್ಲಾ ಸ್ಥಾನವನ್ನು ಒಳಗೊಂಡಂತೆ ರಾಯಬಾಗ, ಗೋಕಾಕ ಮತ್ತು ಅಥಣಿ ತಾಲೂಕುಗಳಲ್ಲಿ ಆರಂಭಿಸುವ ಮೂಲಕ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದರು. ಇವರು ಹೈಸ್ಕೂಲಗಳನ್ನು ಸ್ಥಾಪಿಸುವ ಪೂರ್ವದಲ್ಲಿ, ಇಲ್ಲಿ ಹೈಸ್ಕೂಲ್ ಮತ್ತು ಕಾಲೇಜುಗಳು ಇರಲಿಲ್ಲ. ಅವುಗಳನ್ನು ಮೊಟ್ಟಮೊದಲ ಬಾರಿಗೆ ಇವರು ಆರಂಭಿಸಿದರು.

ವಿ. ಎಲ್. ಪಾಟೀಲರು ಈ ಭಾಗದ ದಲಿತ, ಹಿಂದುಳಿದ ಮತ್ತು ಬಡ ವಿದ್ಯಾರ್ಥಿಗಳಿಗಾಗಿ ೧೯೪೭ರ ಡಿಸೆಂಬರ ೧೧ರಂದು ರಾಯಬಾಗದಲ್ಲಿ ಉಚಿತ ಪ್ರಸಾದ ನಿಲಯವನ್ನು ಆರಂಭಿಸಿದರು. ಅಂದು ರಾಯಬಾಗ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ೭ನೇ ತರಗತಿಯವರೆಗಿನ ಪ್ರಾಥಮಿಕ ಶಾಲೆಗಳಿದ್ದವು. ಉನ್ನತ ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳಿಗಾಗಿ ಪಾಟೀಲರು ಮೊಟ್ಟ ಮೊದಲ ಬಾರಿಗೆ ೧೯೪೯ ರಲ್ಲಿ ರಾಯಬಾಗದಲ್ಲಿ 'ರಾಯಬಾಗ ವಿದ್ಯಾಲಯ ರಾಯಬಾಗ' ಹೆಸರಿನಲ್ಲಿ ಪ್ರೌಢಶಾಲೆಯನ್ನು ಆರಂಭಿಸಿದರು. ಪ್ರೌಢಶಾಲೆಗೆ ಕೊಲ್ಹಾಪೂರ, ಸಾಂಗಲಿ, ವಿಜಾಪೂರ, ಬೆಳಗಾವಿ ಸೇರಿದಂತೆ ಸುತ್ತ-ಮುತ್ತಲಿನ ಪ್ರದೇಶಗಳಿಂದ ಆಗಮಿಸಿದ ವಿದ್ಯಾರ್ಥಿಗಳಿಗಾಗಿ ಉಚಿತ ಪ್ರವೇಶವನ್ನು ನೀಡಿ ಪ್ರಸಾದ ನಿಲಯದ ಸೌಕರ್ಯವನ್ನು ಒದಗಿಸಿ ಕೊಟ್ಟರು. ೧೯೫೭ ರಲ್ಲಿ ಹಾರೂಗೇರಿಯಲ್ಲಿ 'ಹಾರೂಗೇರಿ ವಿದ್ಯಾಲಯ ಹಾರೂಗೇರಿ' ಹೆಸರಿನಲ್ಲಿ ಪ್ರೌಢಶಾಲೆ ಮತ್ತು ಉಚಿತ ಪ್ರಸಾದ ನಿಲಯವನ್ನು ಆರಂಭಸಿದರು. ೧೯೬೫ ರಲ್ಲಿ ಅಥಣಿ ತಾಲೂಕಿನ ಸಂಕ್ರಟ್ಟಿಯಲ್ಲಿ 'ಸಂಕ್ರಟ್ಟಿ ವಿದ್ಯಾಲಯ'ವನ್ನು ಸ್ಥಾಪಿಸಿದರು. ೧೯೭೦ ರಲ್ಲಿ ಹಿಡಕಲ್ಲದಲ್ಲಿ 'ವಸಂತರಾವ ಪಾಟೀಲ ಪ್ರೌಢಶಾಲೆ' ಮತ್ತು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿದರು. ೧೯೭೪ ರಲ್ಲಿ ರಾಯಬಾಗದಲ್ಲಿ 'ಪದವಿ ಕಾಲೇಜ'ನ್ನು ಸ್ಥಾಪಿಸಿದರು, ಜೊತೆಗೆ ಅರುಣಾದೇವಿ ವಿದ್ಯಾರ್ಥಿನಿಯರ ವಸತಿ ನಿಲಯವನ್ನು ಆರಂಭಿಸಿದರು. ಹೀಗೆ ಆರಂಭಗೊಂಡ ಶಾಲೆಗಳು ಶೈಕ್ಷಣಿಕ ಸಂಚಲನವನ್ನುಂಟು ಮಾಡಿದವು. ಈ ಬೆಳವಣಿಗೆ ಸಾಮಾಜಿಕ ಸಂಚಲನಕ್ಕೆ ಕಾರಣವಾಯಿತು. ಅಂದು ಅವರಿಂದ ಆರಂಭಗೊಂಡ ಶೈಕ್ಷಣಿಕ ಕ್ರಾಂತಿಯ ಫಲವಾಗಿ ಇಂದು 'ಶಿಕ್ಷಣ ಪ್ರಸಾರಕ ಮಂಡಳಿ' ರಾಯಬಾಗದ ಅಡಿಯಲ್ಲಿ ೫೦ಕ್ಕೂ ಹೆಚ್ಚು ಶಾಲೆ-ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ತಮ್ಮ ೨೦೦ ಎಕರೆ ಜಮೀನವನ್ನು ಸಂಸ್ಥೆಗೆ ದಾನವಾಗಿ ನೀಡಿರುವರು. ಚಿಕ್ಕೋಡಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾದ ನಂತರದಲ್ಲಿ ಕ್ಷೇತ್ರ ಸುತ್ತಿದರು. ಆಗ ಈ ಭಾಗದಲ್ಲಿ ಮರಾಠಿ ಶಾಲೆಗಳ ಪ್ರಭಾವವಿರುವುದನ್ನು ಗಮನಿಸಿದರು. ಹೀಗಾಗಿ ತಮ್ಮ ಅಧಿಕಾರದ ಅವಧಿಯಲ್ಲಿ ಅವಶ್ಯಕ ಸ್ಥಳಗಳಲ್ಲಿ ಕನ್ನಡ ಶಾಲೆಗಳನ್ನು ಹಳ್ಳಿ-ಹಳ್ಳಿಗಳಿಗೆ ಮಂಜೂರು ಮಾಡಿಸಿದರು.

ವಿ. ಎಲ್. ಪಾಟೀಲರ ಮಕ್ಕಳಲ್ಲಿ ಒಬ್ಬರಾದ ವಿವೇಕರಾವ ಪಾಟೀಲರು ಕೂಡ ತಂದೆಯಂತೆ ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಸಾಧನೆಯನ್ನು ಮಾಡಿರುವರು. 'ಶ್ರೀ ಮಹಾಕಾಳಿ ಶಿಕ್ಷಣ ಸಂಸ್ಥೆ'ಯ ಸಂಸ್ಥಾಪಕರಾದ ಇವರು ಬೆಳಗಾವಿ ಜಿಲ್ಲಾ ಸ್ಥಳವನ್ನು ಒಳಗೊಂಡಂತೆ, ಬೆಳಗಾವಿ, ರಾಯಬಾಗ, ಗೋಕಾಕ ಮತ್ತು ಅಥಣಿ ತಾಲೂಕಿನ ವ್ಯಾಪ್ತಿಯಲ್ಲಿ ಕನ್ನಡ ಹಾಗೂ ಇಂಗ್ಲೀಷ ಮಾಧ್ಯಮದ, ಸುಮಾರು ೩೫ಕ್ಕೂ ಹೆಚ್ಚು ಪ್ರಾಥಮಿಕ, ಪ್ರೌಢ ಮತ್ತು ಪದವಿ-ಪೂರ್ವ ಕಾಲೇಜುಗಳನ್ನು ಹುಟ್ಟು ಹಾಕಿರುವರು. ರಾಯಬಾಗದ ಅಮೋಘ ಮತ್ತು ಬೆಳಗಾವಿ ಫಿನಿಕ್ಸ ಆಂಗ್ಲ ಮಾಧ್ಯಮ ಶಾಲೆ-ಕಾಲೇಜುಗಳು ಜಿಲ್ಲೆಯ ಪ್ರತಿಷ್ಠಿತ ಶಾಲೆ-ಕಾಲೇಜುಗಳಾಗಿವೆ.

ವಿ. ಎಲ್. ಪಾಟೀಲ ಮತ್ತು ವಿವೇಕರಾವ ಪಾಟೀಲರ ವಿಶಿಷ್ಟ ಶೈಕ್ಷಣಿಕ ಸೇವೆಯನ್ನು ಮಾದರಿಯಾಗಿಟ್ಟುಕೊಂಡು ಅಥವಾ ಸುಶಿಕ್ಷಿತರ ಶೈಕ್ಷಣಿಕ ಪ್ರಜ್ಞೆಯಿಂದಾಗಿ ಅನೇಕ ಹಾಲುಮತ ಮತ್ತು ಇನ್ನಿತರ ಸಮುದಾಯದ ವ್ಯಕ್ತಿಗಳು ಕೂಡ ರಾಯಬಾಗ ಪರಿಸರದ ತಮ್ಮ ಊರುಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿರುವರು. ಈ ತಾಲೂಕಿನಲ್ಲಿ ಇರುವಷ್ಟು ಹಾಲುಮತ ಸಮುದಾಯದ ಶಿಕ್ಷಣ ಸಂಸ್ಥೆಗಳು ಬೆಳಗಾವಿ ಜಿಲ್ಲೆಯ ಯಾವ ತಾಲೂಕಿನಲ್ಲಿಯೂ ಇಲ್ಲವೆಂಬುದು ಗಮನಿಸಲೇಬೇಕಾದ ಅಂಶ.

ಬೆಳಗಾವಿ ಜಿಲ್ಲೆಯ ಪ್ರಮುಖ ಶೈಕ್ಷಣಿಕ ಕೇಂದ್ರಗಳಲ್ಲಿ ರಾಯಬಾಗ ಪರಿಸರದ ಹಾರೂಗೇರಿ ಕೂಡ ಒಂದು. ಇಲ್ಲಿ ಸುಮಾರು ೨೦ ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಿದ್ದು ಅವುಗಳಲ್ಲಿ ೭ ಸಂಸ್ಥೆಗಳು ಹಾಲುಮತಸ್ಥರಿಂದ ಆರಂಭಿಸಲ್ಪಟ್ಟವುಗಳು. ಉದಾಹರಣೆಗೆ ಕುರುಬ ಸಮುದಾಯದ ಮುಖಂಡರಿಂದ ಆರಂಭಿಸಲ್ಪಟ್ಟ 'ಶ್ರೀ ಕರೇಸಿದ್ಧೇಶ್ವರ ಶಿಕ್ಷಣ ಸಂಸ್ಥೆ'ಯು ಪ್ರಾಥಮಿಕದಿಂದ ಪ್ರೌಢಶಾಲೆ ಹಂತದವರೆಗೆ, ಎನ್. ಎಸ್. ಚೌಗಲಾ ಅವರ 'ಡಾ. ರಾಮ ಮನೋಹರ ಲೋಹಿಯಾ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆ'ಯು ಪ್ರಾಥಮಿಕ ಶಾಲೆಯಿಂದ ಪದವಿ ಹಂತದವರೆಗೆ ಮತ್ತು ಕೆ. ವಿ. ಬೀಳಗಿ ಅವರ 'ಶ್ರೀ ಮಹಾತ್ಮ ವಿದ್ಯಾವರ್ಧಕ ಸಂಘ'ವು ಪ್ರಾಥಮಿಕ ಶಾಲೆಯಿಂದ ಪದವಿ-ಪೂರ್ವ ಹಂತದವರೆಗೆ, ಡಾ. ಎಲ್. ಎಸ್. ಜಂಬಗಿ ಅವರ 'ಶ್ರೀ ಎಸ್. ಎಸ್. ಜಂಬಗಿ ಮೆಮೊರಿಯಲ್ ಎಜ್ಯುಕೇಶನ್ & ಚಾರಿಟೇಬಲ್ ಟ್ರಸ್ಟ್' ಬಿ. ಎಡ್. ಮತ್ತು ಬಿ. ಎ. ಎಮ್. ಎಸ್. ಕಾಲೇಜುಗಳನ್ನು, ಸಿದ್ದಪ್ಪ ಬಾಳಪ್ಪ ಹಾಡಕಾರ ಅವರ 'ಶ್ರೀ ಶಾರದಾ ಶಿಕ್ಷಣ ಸಂಸ್ಥೆ'ಯು ಬಿ. ಬಿ. ಎ., ಬಿ. ಸಿ. ಎ. ಮತ್ತು ಇಂಗ್ಲೀಷ ಮಿಡಿಯಂ ಪ್ರೈಮರಿ ಸ್ಕೂಲ್‌ಗಳನ್ನು, ವಿಜಯ ಜ್ಯೋ. ಬಂತಿ ಅವರ 'ಶ್ರೀ ಭಾರತಿ ಶಿಕ್ಷಣ ಸಂಸ್ಥೆ'ಯು ಪ್ರಾಥಮಿಕ ಶಾಲೆಯನ್ನು, ಕರೆಪ್ಪ ಸಿ. ಹಾಡಕಾರ ಅವರ 'ಶ್ರೀ ಪ್ರತಿಭಾ ಶಿಕ್ಷಣ ಸಂಸ್ಥೆ'ಯು ಪ್ರಾಥಮಿಕ ಶಾಲೆಯನ್ನು ಆರಂಭಿಸಿ ಶೈಕ್ಷಣಿಕ ರಂಗದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವರು.

ಮೊರಬದ ಎಸ್. ಆರ್. ಬಾನೆಯವರ 'ಶ್ರೀ ಸಿದ್ಧೇಶ್ವರ ಶಿಕ್ಷಣ ಸಂಸ್ಥೆ'ಯು ಮೊರಬ ಮತ್ತು ಚಿಂಚಲಿಗಳಲ್ಲಿ ಪ್ರಾಥಮಿಕದಿಂದ ಪ್ರೌಢಶಾಲೆ ಹಂತದವರೆಗೆ, ಸುಟ್ಟಟ್ಟಿ ಮತ್ತು ಸವಸುದ್ದಿಗಳಲ್ಲಿ ಪ್ರಾಥಮಿಕ ಶಾಲೆ, ಬೆಳಗಾವಿಯಲ್ಲಿ ಇಂಗ್ಲೀಷ ಮಿಡಿಯಂ ಪೂರ್ವ-ಪ್ರಾಥಮಿಕ ಶಾಲೆ, 'ಶ್ರೀ ಗಜಾನನ ಶಿಕ್ಷಣ ಸಂಸ್ಥೆ'ಯ ವತಿಯಿಂದ ಮೊರಬದಲ್ಲಿ ಪ್ರಾಥಮಿಕ ಶಾಲೆ ಮತ್ತು ಪದವಿ-ಪೂರ್ವ ಕಾಲೇಜಗಳನ್ನು ಆರಂಭಿಸಿರುವರು. ಮುಗಳಖೋಡದ ಮಾರುತಿ ಶಿವಪ್ಪ ಗೋಕಾಕ ಅವರ 'ಶ್ರೀ ಯಲ್ಲಾಲಿಂಗೇಶ್ವರ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಭೀಮಪ್ಪ ಇಟ್ಟಪ್ಪ ಬನಶಂಕರಿ ಅವರ 'ಶ್ರೀ ರೇಣುಕಾದೇವಿ ಶಿಕ್ಷಣ ಸಂಸ್ಥೆಯ ಗ್ರಾಮೀಣಾಭಿವೃದ್ಧಿ

ಹಾಗೂ ಶೈಕ್ಷಣಿಕ ಸೇವಾ ಸಂಘ'ದ ಪ್ರಾಥಮಿಕ ಶಾಲೆ, ಬಸಪ್ಪ ಸಿದ್ದಪ್ಪ ಹಳಿಂಗಳಿ ಅವರ 'ಶ್ರೀ ಯಲ್ಲಾಲಿಂಗೇಶ್ವರ ಎಜ್ಯುಕೇಶನ್ & ಸೋಶಿಯಲ್ ವೇಲ್‌ಫೇರ್ ಸೊಸಾಯಿಟಿ' ಇಂಗ್ಲೀಷ ಮಿಡಿಯಂ ಸ್ಕೂಲ್, ಹಿಡಕಲ್ಲ ಗ್ರಾಮದ ರೇಖಾ ಮಧುಸೂದನ ಬೀಳಗಿ ಅವರ 'ಶ್ರೀ ಕನಕದಾಸ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ'ಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳು, ಹೊನ್ನಪ್ಪ ಲ. ಗಲಗಲಿ ಅವರ 'ಶ್ರೀ ಲಕ್ಷ್ಮೀ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಮಾಯಪ್ಪ ಪ್ರ. ಕಂಟಿಕಾರ ಅವರ 'ಶ್ರೀ ಸತ್ಯಪ್ರಭು ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ರಾಯಬಾಗ ಪಟ್ಟಣದ ರಾಮಚಂದ್ರ ಮಾ. ಹೆಗಡೆ ಅವರ 'ಸರ್ವೋದಯ ಶಿಕ್ಷಣ ಹಾಗೂ ಸಮಾಜ ಸೇವಾ ಸಂಸ್ಥೆ'ಯ ಬಿ. ಎಸ್. ಡಬ್ಲು. ಪದವಿ ಕಾಲೇಜು, ಚಂದ್ರಕಾಂತ ರಾ. ಮಶಾಲಜಿ ಅವರ 'ವಿದ್ಯಾ ಚೇತನ ಎಜ್ಯುಕೇಶನ್ ಸೊಸಾಯಿಟಿ'ಯ ಆಯ್. ಟಿ. ಆಯ್. ಕಾಲೇಜು, ರಾಯಪ್ಪ ಹಾ. ಗೊಂಡಿ ಅವರ 'ಶ್ರೀ ಹಾಲಸಿದ್ಧೇಶ್ವರ ಶಿಕ್ಷಣ ಮತ್ತು ಗ್ರಾಮಿಣಾಭಿವೃದ್ಧಿ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಪರಮಾನಂದವಾಡಿಯ ವಸಂತ ಭ. ದಳವಾಯಿ ಅವರ 'ಶ್ರೀ ಹಾಲಸಿದ್ಧೇಶ್ವರ ಶಿಕ್ಷಣ ಸಂಸ್ಥೆ'ಯು ಪ್ರೌಢಶಾಲೆಯಿಂದ ಪದವಿ ಕಾಲೇಜ ವರೆಗೆ, ಬೆಕ್ಕೇರಿಯ ಲಗಮಣ್ಣ ರಾ. ಕಟ್ಟಿಕಾರ ಅವರ 'ಶ್ರೀ ಲಕ್ಷ್ಮೀ ಶಿಕ್ಷಣ ಸಂಸ್ಥೆ'ಯು ಪ್ರಾಥಮಿಕ ಹಂತದಿಂದ ಪದವಿ–ಪೂರ್ವ ಕಾಲೇಜವರೆಗೆ, ಅಳಗವಾಡಿಯ ರಮೇಶ ಹ. ಶಿರಗೂರೆ ಅವರ 'ಶ್ರೀ ಪಾಂಡುರಂಗ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕದಿಂದ ಪ್ರೌಢಶಾಲೆ, ಬ್ಯಾಕೂಡದ ಪ್ರತಾಲರಾವ ಪಾಟೀಲ ಅವರ 'ಶ್ರೀಮತಿ ಅಕ್ಕವ್ವ ಅ. ಪಾಟೀಲ ಎಜ್ಯುಕೇಶನ್ & ಸೊಶಿಯಲ್ ವೇಲ್‌ಫೆರ್ ಸೊಸಾಯಿಟಿ'ಯ ಇಂಗ್ಲೀಷ ಮಿಡಿಯಂ ಸ್ಕೂಲ, ಹುಬ್ಬರವಾಡಿಯ ಭಾರತಿ ಹಾಲಪ್ಪ ಪೂಜೇರಿ ಅವರ 'ಶ್ರೀ ಕೃಷ್ಣ ಕನಕದಾಸ ಕುರಿ ಸಂಗೋಪನಾ ಉಣ್ಣೆ ಉತ್ಪಾದಕರ ಸಹಕಾರಿ ಸಂಘ'ದ ಪ್ರಾಥಮಿಕ ಶಾಲೆ, ಕಂಕಣವಾಡಿಯ ಬಸವರಾಜ ವಿ. ಪೂಜೇರಿ ಅವರ 'ಶ್ರೀ ವಿಠ್ಠಲರಾಯ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಇಟ್ನಾಳದ ವಿಠ್ಠಲ ಲ. ಸುರಾಣಿ ಅವರ 'ಶ್ರೀ ಲಕ್ಷ್ಮೀದೇವಿ ರೂರಲ್ & ಅರ್ಬನ್ ಡೆವಲಪಮೆಂಟ ಎಜ್ಯುಕೇಶನ್ ಸೊಸಾಯಿಟಿ'ಯ ಪ್ರಾಥಮಿಕ ಶಾಲೆ, ಗೋಪಾಲ ಅ. ತೇರದಾಳ ಅವರ 'ಶಾಂತಿ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಬೆಂಡವಾಡದ ರೇವಪ್ಪ ಯ. ಶಿವಣ್ಣಗೋಳ ಅವರ 'ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಸವಸುದ್ದಿಯ ವಿಠ್ಠಲ ಲ. ಅಂಕಲಗಿ ಅವರ 'ವಿಜಯಶ್ರೀ ಗ್ರಾಮಿಣಾಭಿವೃದ್ಧಿ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಖಣದಾಳದ ವಿಠ್ಠಲ ನಿ. ಬಂಡಗಾರ ಅವರ 'ಶ್ರೀ ಹುಲಕಾಂತೇಶ್ವರ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಅಪ್ಪಾಸಾಬ ನಿ. ಬಂಡಗಾರ ಅವರ 'ಶ್ರೀ ಕನಕದಾಸ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕದಿಂದ ಪ್ರೌಢಶಾಲೆವರೆಗೆ, ಯಬರಟ್ಟಿಯ ಎಸ್. ಬಿ. ಒಡೆಯರ ಅವರ 'ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಯಲ್ಪಾರಟ್ಟಿಯ ಚಾಮರಾಜ ಕು. ಒಡೆಯರ ಅವರ 'ಶ್ರೀ ಅರಣ್ಯಸಿದ್ಧೇಶ್ವರ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆ, ಗುಂಡವಾಡದ ಮಾರುತಿ ಭೀ. ಪೂಜೇರಿ ಅವರ 'ಶ್ರೀ ಮಹಾಲಕ್ಷ್ಮೀ ಶಿಕ್ಷಣ ಸಂಸ್ಥೆ'ಯ ಪ್ರಾಥಮಿಕ ಶಾಲೆಗಳು ಸ್ಥಾಪನೆಗೊಂಡು ಶಿಕ್ಷಣ ಪ್ರಸಾರವನ್ನು ಮಾಡುತ್ತಿವೆ. ಈ ಎಲ್ಲ ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ಸೇವೆಯ ಜೊತೆಗೆ ಕನ್ನಡ ನಾಡು–ನುಡಿ–ಸಂಸ್ಕೃತಿಯ ಸಂವರ್ಧನೆಗಾಗಿ ತಮ್ಮನ್ನು ತೊಡಗಿಸಿಕೊಂಡಿವೆ.

ವಿ. ಎಲ್. ಪಾಟೀಲರ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳನ್ನು ಬಿಟ್ಟು ಉಳಿದೆಲ್ಲ ಹಾಲುಮತ ಶಿಕ್ಷಣ ಸಂಸ್ಥೆಗಳು ೧೯೯೦ರ ನಂತರದಲ್ಲಿಯೇ ರಾಯಬಾಗ ಪರಿಸರದಲ್ಲಿ ಸ್ಥಾಪನೆಗೊಂಡವು. ತಮ್ಮವರೇ ಆರಂಭಿಸಿದ ಶಾಲೆಗಳಿಗೆ ಹಾಲುಮತಸ್ಥರು ತಮ್ಮ ಮಕ್ಕಳನ್ನು ಕಳುಹಿಸಿ ಅವರೆಲ್ಲ ಶಿಕ್ಷಣವನ್ನು ಪಡೆದು ಕೊಂಡು ಅಭಿವೃದ್ಧಿ ಹೊಂದಬೇಕೆಂದು ಹಂಬಲಿಸಿರು. ಆದರೆ ಇವರು ಜ್ಞಾನ ಸಂಪಾದನೆಗಾಗಿ ಶಿಕ್ಷಣವನ್ನು ಪಡೆದು ಕೊಳ್ಳದೆ, ಜೀವನ ಭದ್ರತೆಗಾಗಿ ಅಂದರೆ ನೌಕರಿಗಾಗಿ ಶಿಕ್ಷಣವನ್ನು ಪಡೆದು ಕೊಳ್ಳುವ ವಿಚಾರವನ್ನು ಹೊಂದಿರುವರು. ಹೀಗಾಗಿ ಸಾಮಾನ್ಯ ಉನ್ನತ ಶಿಕ್ಷಣವನ್ನು ಪಡೆದುಕೊಂಡ ಯುವಕರಲ್ಲಿ ಪ್ರತಿಶತ ೭೦-೮೦ ರಷ್ಟು ಯುವಕರು ನಿರುದ್ಯೋಗಿಗಳಾಗಿದ್ದಾರೆ. ಇವರೆಲ್ಲಾ ಸಣ್ಣ, ಅತೀ ಸಣ್ಣ ಮತ್ತು ಮಧ್ಯಮ ವರ್ಗದ ಸಾಮಾನ್ಯ ರೈತ ಕುಟುಂಬಕ್ಕೆ ಸೇರಿದವರಾಗಿದ್ದು, ಸರ್ಕಾರಿ ನೌಕರಿ ಸಿಗದೆ, ಸ್ವ ಉದ್ಯೋಗವನ್ನು ಮಾಡಲಾಗದೆ, ಕೃಷಿಯಲ್ಲಿ ಮನಸಾರೆ ತೊಡಗಿಸಿಕೊಳ್ಳಲಾಗದೆ ಅತಂತ್ರ ಸ್ಥಿತಿಯನ್ನು ಹೊಂದುತ್ತಿರುವರು.

"ಕಳೆದ ಹತ್ತು ವರ್ಷಗಳಲ್ಲಿ ವೈದ್ಯಕೀಯ, ಇಂಜನೀಯರ, ಇನ್ನಿತರ ವೃತ್ತಿಪರ ಕೋರ್ಸಗಳಿಗೆ ಕುರುಬ ಜನಾಂಗದ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳುತ್ತಿರುವರು ಆದರೆ ಇವರ ಪ್ರಮಾಣ ಬಹಳಷ್ಟು ಕಡಿಮೆ. ಬಡತನದ ಹಿನ್ನೆಲೆಯ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸಗಳ ದುಬಾರಿ ಶುಲ್ಕದಿಂದಾಗಿ ಅತ್ತ ಮುಖಮಾಡುತ್ತಿಲ್ಲ. ಇಂತವರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಇನ್ನೂ ಹೆಚ್ಚಿನ ಯೋಜನೆಗಳನ್ನು ಜಾರಿಗೊಳಿಸಬೇಕಾಗಿರುವುದು."[೯] ಈ ಕಾರಣಕ್ಕಾಗಿಯೇ ಕುರುಬ ಸಮುದಾಯವನ್ನು ಪ್ರವರ್ಗ ೨-ಎ ದಿಂದ ಪರಿಶಿಷ್ಟ ಪಂಗಡಕ್ಕೆ ವರ್ಗಾಯಿಸುವಂತೆ ಕಳೆದ ಎರಡು ವರ್ಷಗಳಿಂದ ಸರ್ಕಾರಕ್ಕೆ ಮನವಿಗಳನ್ನು ಅರ್ಪಿಸುತ್ತಿರುವರು.

ಇನ್ನೂ ಕೆಲವು ಕುಟುಂಬಗಳಲ್ಲಿನ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವ ಕುರಿತು ಅಷ್ಟಾಗಿ ಧನಾತ್ಮಕ ಧೋರಣೆ ಕಂಡು ಬರುತ್ತಿಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಎಷ್ಟೇ ಕೊಡಿಸಿದರು ಅದರ ಲಾಭ ತಮಗಲ್ಲ, ಅದು ಅವಳು ಮದುವೆಯಾಗಿ ಹೋಗುವ ಗಂಡನ ಮನೆಯವರಿಗೆ ಲಾಭ ಎನ್ನುವ ಸಂಕುಚಿತ ಮನೋಭಾವನೆಯನ್ನು ಹೊಂದಿರುವವರ ಪ್ರಮಾಣವೇ ಹೆಚ್ಚಾಗಿರುವುದು. ಗಂಡು ಮಕ್ಕಳಿಗೆ ನೀಡುವಷ್ಟು ಪ್ರಾಮುಖ್ಯತೆಯನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೀಡುತ್ತಿಲ್ಲ. ಗ್ರಾಮಿಣ ಭಾಗದ ಹಲವರು ಗಂಡು ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರಮುಖ ನಗರಗಳ ಪ್ರತಿಷ್ಠಿತ ಕಾಲೇಜುಗಳಲ್ಲಿ ಹೆಚ್ಚು ಹಣವನ್ನು ನೀಡಿ ದಾಖಲಾತಿ ಪಡೆದು ಕೊಳ್ಳುವರು. ಅದೇ ಹೆಣ್ಣು ಮಕ್ಕಳ ಶಿಕ್ಷಣದ ವಿಚಾರ ಬಂದಾಗ ಧನಾತ್ಮಕವಾಗಿ ಆಲೋಚಿಸುವುದಿಲ್ಲ. "ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಿಸಿದಲ್ಲಿ ಅವಳಿಗೆ ತಕ್ಕನಾದ ವರನಿಗೆ ಕೊಟ್ಟು ಮದುವೆ ಮಾಡಬೇಕಾಗುತ್ತದೆ. ಸುಕ್ಷಿತ ಮತ್ತು ನೌಕರಿ ಇರುವ ವರನಿಗೆ ಮಗಳನ್ನು ವಿವಾಹ ಮಾಡಿ ಕೊಡಬೇಕಾದರೆ ಹೆಚ್ಚು ಪ್ರಮಾಣದ ವರದಕ್ಷಿಣೆ ಕೊಡಬೇಕಾದ ಪ್ರಸಂಗ ಬರಬಹುದು. ಅದಕ್ಕಾಗಿ ಅವಳಿಗೆ ಓದು ಬರಹಕ್ಕಾಗಿ ಮಾತ್ರ ಪ್ರೌಢಶಿಕ್ಷಣವನ್ನು ಕೊಡಿಸಿದರೆ ಸಾಕು ಎಂಬ ಭಾವನೆ ಇಂದಿಗೂ ಬಹಳಷ್ಟು ಜನರಲ್ಲಿದೆ. ಇಂದಿಗೂ ಕೆಲವರನ್ನು ಹೊರತು ಪಡಿಸಿ ಇನ್ನೂಳಿದ ಬಹುಸಂಖ್ಯಾತ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರು."[೧೦] ಹೀಗಾಗಿ ಹಾಲುಮತದ ಮಹಿಳಾ ನೌಕರರ ಪ್ರಮಾಣ ಕಡಿಮೆ. ಇದು ಒಂದು ರೀತಿಯಲ್ಲಿ ಹೆಣ್ಣು ಕುಲದ ಬಗ್ಗೆ ಇವರಿಗಿದ್ದ ತಾತ್ಸಾರ ಮನೋಭಾವನೆಯನ್ನು ವ್ಯಕ್ತಪಡಿಸುತ್ತದೆ. ಸರ್ಕಾರಗಳು ಹೆಣ್ಣು

ಮಕ್ಕಳ ಶಿಕ್ಷಣ ಮತ್ತು ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡುತ್ತಿದ್ದರು ಕೂಡ ಹಾಲುಮತ ಸಮುದಾಯ ಅದನ್ನು ಸದ್ಬಳಕೆ ಮಾಡಿಕೊಳ್ಳುವಷ್ಟು ಪ್ರಬುದ್ಧರಾಗಿಲ್ಲವೆಂದು ವಿಶ್ಲೇಷಿಸಬೇಕಾಗುತ್ತದೆ.

೪. ಧಾರ್ಮಿಕ ಮತ್ತು ಸಾಂಸ್ಕೃತಿಕ :

ರಾಯಬಾಗ ಪರಿಸರದ ಹಾಲುಮತ ಸಮುದಾಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಇವರು ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದವರು. ಇದರಲ್ಲಿ ಸಂದೇಹವೇ ಇಲ್ಲ. ಆದರೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಪ್ರದರ್ಶಿಸಿಲ್ಲ. ಈ ಸಮುದಾಯದ ಯಾವೊಬ್ಬ ಕಲಾವಿದನು ಕೂಡ ರಾಜ್ಯ ಮಟ್ಟದಲ್ಲಾಗಲಿ ಅಥವಾ ರಾಷ್ಟ್ರ ಮಟ್ಟದಲ್ಲಾಗಲಿ ಗುರುತಿಸಿಕೊಂಡಿಲ್ಲ. ಸ್ಥಳೀಯ ಮಟ್ಟದಲ್ಲಿರುವ ಡೊಳ್ಳಿನ ಹಾಡುಗಾರರು, ಡೊಳ್ಳು ಬಾರಿಸುವ, ದಟ್ಟಿ ಕುಣಿಯುವ, ಕೈ ಪಟ್ಟು ನುಡಿಸುವ ಕಲಾವಿದರಿದ್ದು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿರುವರು. ಹೀಗೆ ಒಂದು ಜಿಲ್ಲೆಗೆ ಸೀಮಿತವಾಗಿರುವಂತದ್ದು, ಬಹಳವೆಂದರೆ ಒಂದು ವಿಭಾಗಕ್ಕೆ ಸೀಮಿತವಾಗಿರುವಂತದ್ದು ಕಂಡು ಬರುತ್ತದೆಯೇ ವಿನಾಃ ರಾಜ್ಯ ಮಟ್ಟದವರೆಗೆ ಬೆಳೆದಿರುವಂತವರು ಬಹಳಷ್ಟು ಕಡಿಮೆ. ಬಹುಶಃ ಇಲ್ಲವೆಂದೇ ಹೇಳಬಹುದು. ಇನ್ನೂ ಸಾಹಿತ್ಯ ಕ್ಷೇತ್ರದಲ್ಲಿ, ಜನಪದ ತಜ್ಞ ಜ್ಯೋತಿ ಹೊಸುರ ರಾಜ್ಯ ಮಟ್ಟದಲ್ಲಿ ಗುರುತಿಸಲ್ಪಟ್ಟ ಸಾಹಿತಿಗಳು. ಇವರನ್ನು ಹೊರತು ಪಡಿಸಿದರೆ ಈ ಪರಿಸರದ ಹಾಲುಮತ ಸಮುದಾಯದ ಯಾರೂ ಕೂಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿಲ್ಲ.

ಈ ಪರಿಸರದಲ್ಲಿರುವ ಜನಪದ ಕಲಾವಿದರಲ್ಲಿ ಬಹಳಷ್ಟು ಜನ ಹಾಲುಮತ ಸಮುದಾಯದವರು. ಸದ್ಯದ ಸಂದರ್ಭದಲ್ಲಿಯೂ ಸ್ಥಳೀಯ ಮಟ್ಟದಲ್ಲಿ ಈ ಸಮುದಾಯದ ಜನಪದ ಕಲಾವಿದರಿರುವರು. "ಇವತ್ತಿಗೂ ಕೂಡ ಜನಪದ ಕಲೆ ಅನ್ನುವುದೇನಾದರೂ ಉಳಿದಿದ್ದರೆ ಅದು ಹಾಲುಮತ ಸಮುದಾಯದಲ್ಲಿಯೇ ಉಳಿದು ಕೊಂಡಿರುವುದು. ಡೊಳ್ಳಿನ ಹಾಡುಗಳು, ಡೊಳ್ಳು ಬಾರಿಸುವುದು, ಡೊಳ್ಳು ಕುಣಿತ, ದಟ್ಟಿ ಕುಣಿತ ಮುಂತಾದವುಗಳೆಲ್ಲವು ಹಾಲುಮತ ಸಮುದಾಯದ ದೈವಗಳ ಆರಾಧನೆಯ ಒಂದು ಭಾಗವಾಗಿರುವುದರಿಂದ ಇವತ್ತಿಗೂ ಈ ಕಲೆಗಳೆಲ್ಲ ಜೀವಂತವಾಗಿ ಉಳಿದುಕೊಂಡಿವೆ."[೧೧] ಅಲಕನೂರಿನ ಕರೇಸಿದ್ಧೇಶ್ವರ, ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ, ಕಂಕಣವಾಡಿಯ ಹಾಲಸಿದ್ಧೇಶ್ವರ, ಬೆಕ್ಕೇರಿ ಲಕ್ಕವ್ವ, ಚಿಂಚಲಿಯ ಮಾಯವ್ವಾ ಮುಂತಾದ ದೇವಸ್ಥಾನಗಳಲ್ಲಿ ಓಲಗದ ಮೇಳಗಳಿವೆ. ಓಲಗಗಳೆಂದರೆ ಡೊಳ್ಳಿನ ಹಾಡುಗಳ ಮೇಳಗಳು. ದೇವರ ಜಾತ್ರೆ, ಉತ್ಸವ, ಮುಂತಾದ ಸಂದರ್ಭಗಳಲ್ಲಿ, ದೇವರ ಪಲ್ಲಕ್ಕಿಯನ್ನು ಮುಂದಿಟ್ಟುಕೊಂಡು ಅಥವಾ ಜೊತೆ-ಜೊತೆಯಾಗಿ ಓಲಗದವರು ಹೋಗುವರು.

ಈ ಪರಿಸರದಲ್ಲಿ ಹಾಲುಮತದ ಆರಾಧನೆಯ ಒಂದು ಭಾಗವಾಗಿರುವ ಕಲೆಗಳ ಪ್ರಭಾವ ಎಷ್ಟಿದೆಯೆಂದರೆ ಹಾಲುಮತಸ್ಥರಲ್ಲದವರು ಕೂಡ ಡೊಳ್ಳಿನ ಮೇಳಗಳನ್ನು ಕಟ್ಟಿಕೊಂಡು ಹಾಡುತ್ತ ಕುಣಿಯುತ್ತಿರುವುದನ್ನು ನಾವು ಕಾಣುತ್ತೇವೆ. ಅಂದರೆ ಡೊಳ್ಳಿನ ಹಾಡು, ಕೈಪಟ್ಟು, ಡೊಳ್ಳುವಾದನ ಈ ತಾಲೂಕಿನಲ್ಲಿ ಕೇವಲ ಹಾಲುಮತ ಸಮುದಾಯದವರಿಗೆ ಮಾತ್ರ ಸಿಮೀತವಾಗಿ ಉಳಿದಿಲ್ಲ. ಇದು ಹಾಲುಮತದವರು ಅನ್ಯ ಸಮಾಜ ಬಾಂಧವರ ಮೇಲೆ ಬೀರಿದ ಪ್ರಭಾವವೆಂದು ಹೇಳಬಹುದಾಗಿದೆ.

ಈ ಪರಿಸರದಲ್ಲಿರುವ ಹಾಲುಮತ ಸಮುದಾಯಕ್ಕೆ ಸೇರಿರುವ ಕಲಾವಿದರ ಸಂಖ್ಯೆ ಹೆಚ್ಚು ಪ್ರಮಾಣದಲ್ಲಿದೆ. ಆದರೆ ಜನಪದ ಕವಿಗಳನ್ನು ಹುಡುಕುವ ಮತ್ತು ಗುರುತಿಸುವ ಪ್ರಯತ್ನದ ಸಂದರ್ಭದಲ್ಲಿ ಹಾಲುಮತ ಸಮುದಾಯದವರ ಪ್ರಮಾಣ ಕಡಿಮೆ ಎಂಬುದು ಗೋಚರಿಸುತ್ತದೆ. ಅನ್ಯಮತದವರು ಬರೆದ ಡೊಳ್ಳಿನ ಹಾಡುಗಳನ್ನು ಇವರು ಹಾಡುತ್ತ ಬಂದಿರುವರು. ಶಿರಗೂರದ ಕಲ್ಮೇಶ, ದಿಗ್ಗೇವಾಡಿಯ ರಾಚೋಟಿ ಮತ್ತು ಬಾಬಾಜಿ ಜಮಾದಾರ, ಹಾರೂಗೇರಿಯ ಅಲಬೈರಿ, ಮತ್ತು ಅವರ ಮಗ ರಾಮು ಸುಬ್ಬಣ್ಣವರ, ಮುಗಳಖೋಡದ ರಾಚಯ್ಯ, ಹಿಡಕಲ್ಲದ ರಾಣಬಾ ಕದಮ, ಕುಡಚಿಯ ಶೆಟಿಬೈರಿ, ಪರಮಾನಂದವಾಡಿಯ ಮೀರಾ ಮುಲ್ಲಾ ಇವರೆಲ್ಲ ಈ ಪರಿಸರದ ಅನುಭಾವಿಗಳು ಮತ್ತು ಜನಪದ ಕವಿಗಳು. ಬಾವನಸೌದತ್ತಿಯ ಸಿದ್ದಪ್ಪನೊಬ್ಬನನ್ನು ಹೊರತುಪಡಿಸಿ ಉಳಿದವರೆಲ್ಲರು ವಿಭಿನ್ನ ಸಮುದಾಯಕ್ಕೆ ಸೇರಿದ ಹಾಲುಮತೇತರ ಜನಪದ ಕವಿಗಳು. ಈ ಅಂಶ ಒಂದಿಷ್ಟು ಚಿಂತನಿಯವೆನಿಸುತ್ತದೆ. ಏಕೆಂದರೆ "ಜನಪದ ಕಲಾವಿದರು ಹಾಲುಮತದವರಾಗಿದ್ದರೂ ಕೂಡ, ಕವಿಗಳು ಮಾತ್ರ ಆ ಸಮುದಾಯಕ್ಕೆ ಸೇರಿದವರಾಗಿರುವುದಿಲ್ಲ. ಇದು ಹಾಲುಮತ ಸಮುದಾಯದ ಅನಕ್ಷರತೆಯ ಜೊತೆಗೆ ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಗೆ ನಿದರ್ಶನವಾಗಿದೆ."[೨]

ಚಿಂಚಲಿಯ ಮಾಯವ್ವನ ದೇವಸ್ಥಾನ ಇಂದು ಸ್ಥಿತ್ಯಂತರಗೊಂಡಿರುವುದು. ಆರಂಭದಿಂದಲೂ ಇವತ್ತಿನವರೆಗೂ ಈ ದೇವಾಲಯವು ಹಾಲುಮತ ದೇವತೆಯ ಆರಾಧನಾ ಕೇಂದ್ರವಾಗಿ ಕಂಡು ಬರುತ್ತದೆ. ಆದರೆ ಇಂದು ಅದರ ಒಡೆತನ ಕುರುಬ ಕೈಯಲ್ಲಿ ಮಾತ್ರ ಉಳಿಯಲಿಲ್ಲ ಅದು ಸದ್ಯ ಕುರುಬ ಮತ್ತು ಲಿಂಗಾಯತರಲ್ಲಿ ಹಂಚಿಹೋಗಿರುವುದು. ಇಲ್ಲಿರುವ ಪೂಜಾರಿಗಳು ಹಾಲುಮತ ಮತ್ತು ಲಿಂಗಾಯತ ಎರಡು ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿದ ಪೂಜಾರಿಗಳು ಈ ದೇವಸ್ಥಾನದಲ್ಲಿ ಯಾವಾಗ ಸೇರ್ಪಡೆಗೊಂಡರು? ಯಾಕೆ ಸೇರ್ಪಡೆಗೊಂಡರು? ಇದರ ಪರಿಣಾಮವೇನು? ಈ ಎಲ್ಲ ವಿಷಯಗಳು ಇಂದು ಚಿಂತನಿಯವಾದಂತಹ ವಿಷಯವಾಗಿದೆ. ಈ ವಿಷಯವನ್ನು ಹಲವಾರು ಮಗ್ಗಲುಗಳಲ್ಲಿ ತರ್ಕಿಸಬಹುದಾಗಿದೆ. ಒಂದು, ಪ್ರಾಯಶಃ ಹಾಲುಮತದವರ ಪ್ರಭಾವ ಕಡಿಮೆಯಾದಾಗ ಇಲ್ಲವೇ ಹಾಲುಮತೇತರರ ಪ್ರಭಾವ ಹೆಚ್ಚಾದಾಗ ಅವರಿಬ್ಬರಲ್ಲಿ ಒಂದು ಸಮನ್ವಯವನ್ನು ರೂಪಿಸುವುದಕ್ಕಾಗಿ ಚಿಂಚಲಿ ಮಾಯವ್ವನ ದೇವಸ್ಥಾನದ ಹೋಣೆಗಾರಿಕೆಯನ್ನು ಹೊತ್ತು ಕೊಳ್ಳುವಲ್ಲಿ ಇತರರು ಪ್ರವೇಶಿಸಿದಂತೆ ಕಾಣುತ್ತದೆ. ಎರಡು, ಮಾಯಕ್ಕಾ ದೇವಿಯ ಪೂಜಾ ವಿಧಿ-ವಿಧಾನಗಳ ನಿರ್ವಹಣೆಯಲ್ಲಿ ತೊಡಗಿದ ತಾವು ಹಾಲುಮತಸ್ಥರಲ್ಲಿಯೇ ಶ್ರೇಷ್ಠರೆಂದು ಗುರುತಿಸಿಕೊಳ್ಳುವ ಮೂಲಕ, ಮೂಲ ಪೂಜಾರಿಗಳಲ್ಲಿಯ ಒಂದು ಗುಂಪು ಭಂಡಾರ ಸಂಸ್ಕೃತಿಯಿಂದ ವಿಭೂತಿ ಸಂಸ್ಕೃತಿಯತ್ತ ಪರಿವರ್ತನೆಗೊಂಡಿರುವ ಸಾಧ್ಯತೆಯನ್ನು ಕೂಡ ಅಲ್ಲಗಳೆಯುವಂತಿಲ್ಲ.

ಯಲ್ಪಾರಟ್ಟಿ ಅರಣ್ಯಸಿದ್ಧೇಶ್ವರನ ದೇವಸ್ಥಾನದಲ್ಲಿ ಆರಾಧನೆಯು ಹಾಲುಮತಸ್ಥರ ಕೈಯಲ್ಲಿದ್ದರೆ ದೇವಾಲಯದ ಆಡಳಿತ ಲಿಂಗಾಯತರ ಆಧೀನದಲ್ಲಿದೆ. ಇಂದು ದೇವಾಲಯದಲ್ಲಿ ಕುರುಬ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಕೇತಗಳು ಮರೆಯಾಗುತ್ತಿವೆ. ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಟಗರುಗಳ ಮೂರ್ತಿಗಳನ್ನು ಜೀರ್ಣೋದ್ಧಾರದ ಸಮಯದಲ್ಲಿ ತೆಗೆದುಹಾಕಲಾಗಿದೆ. ದೀಪ ಸ್ಥಂಬದ ಹತ್ತಿರವಿದ್ದ ಕರ್ಪೂರ

ಕಟ್ಟೆಯ ಸಮೀಪ ಲಿಂಗ ಮತ್ತು ಬಸವಣ್ಣ (ಎತ್ತು) ಮೂರ್ತಿಗಳು ಗೋಚರಿಸುತ್ತವೆ. ಭಂಡಾರ ಸಂಸ್ಕೃತಿಯಿಂದ ವಿಭೂತಿ ಸಂಸ್ಕೃತಿಯತ್ತ ಹೊರಳುತ್ತಿರುವ ಸೂಕ್ಷ್ಮ ಸಂಚಲನವನ್ನು ಗುರುತಿಸಬಹುದು.

ರಾಯಬಾಗ ತಾಲೂಕಿನ ಅಲಕನೂರಿನ ಕರೇಸಿದ್ಧೇಶ್ವರ, ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ, ಕಂಕಣವಾಡಿಯ ಹಾಲಸಿದ್ಧೇಶ್ವರ, ಚಿಂಚಲಿಯ ಮಾಯವ್ವ, ಬೆಕ್ಕೇರಿಯ ಲಕ್ಕವ್ವ ಮೊದಲಾದ ಪ್ರಮುಖ ಹಾಲುಮತದ ಪುರುಷ ಮತ್ತು ಸ್ತ್ರೀ ದೈವಗಳೆಲ್ಲವೂ ಇಂದು ಕೇವಲ ಹಾಲುಮತ ಸಮುದಾಯಕ್ಕೆ ಮಾತ್ರ ಸಿಮೀತವಾಗಿ ಉಳಿದಿಲ್ಲ. ಅವು ತಾಲೂಕಿನಲ್ಲಿರುವ ಎಲ್ಲಾ ಸಮುದಾಯಗಳ ಆರಾಧನೆಯ ದೈವಗಳಾಗಿ ಬೆಳೆದಿರುವುದು ಹಾಲುಮತ ಸಮುದಾಯದ ಪ್ರಾಬಲ್ಯವನ್ನು ಸೂಚಿಸುತ್ತವೆ.

ರಾಯಬಾಗ ತಾಲೂಕಿನ ಬಹಳಷ್ಟು ಹಳ್ಳಿಗಳಲ್ಲಿ ಧಾರ್ಮಿಕ ಸಂಚಲನ ಉಂಟಾಗಿದೆ. ಇದರ ಫಲವಾಗಿ ಪ್ರಮುಖ ರಸ್ತೆಗಳಲ್ಲಿ ವೃತ್ತಗಳು ನಿರ್ಮಾಣಗೊಂಡಿವೆ. ಉದಾಹರಣೆಗೆ ಕನಕದಾಸ ವೃತ್ತ, ಸಂಗೊಳ್ಳಿ ರಾಯಣ್ಣನ ವೃತ್ತ. ಈ ವೃತ್ತಗಳು ಹಳ್ಳಿ-ಹಳ್ಳಿಗಳಲ್ಲಿ ನಿರ್ಮಿಸಲಾಗಿದೆ. ಇವುಗಳು ಅಧಿಕೃತ ಅಲ್ಲದಿದ್ದರೂ, ಅನಧಿಕೃತ ಎನಿಸಿದರು ಕೂಡ ಆಯಾ ಹಳ್ಳಿಗಳಲ್ಲಿ ಆ ಸಮುದಾಯದ ಪ್ರಾಬಲ್ಯದ ಸೂಚನೆಯಾಗಿವೆ. ಜೊತೆಗೆ ರಾಜಕೀಯ ಶಕ್ತಿಯ ಪ್ರದರ್ಶನವು ಹೌದು.

೫. ಸಹಕಾರಿ ಮತ್ತು ಆರ್ಥಿಕ :

ಇಲ್ಲಿಯ ಹಾಲುಮತ ಸಮುದಾಯದವರು ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧಿಸಿದಷ್ಟು ಅಭಿವೃದ್ಧಿಯನ್ನು ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿಲ್ಲ. ಈ ಹಿಂದೆ ಉಲ್ಲೇಖಿಸಿದಂತೆ ಸಮುದಾಯದ ಜನ ಭೂ ಹಿಡುವಳಿದಾರರಾಗಿದ್ದರೂ ಕೆಲವರು ನೂರಾರು ಎಕರೆಗಳಷ್ಟು ಭೂ ಒಡೆತನ ಹೊಂದಿದ್ದರು. ಕೃಷಿ ಸಂಬಂಧಿತ ಉದ್ಯಮಗಳಿಗೆ ಗಮನ ಹರಿಸಿಲ್ಲ. ಬ್ಯಾಕೂಡದ ಪಾಟೀಲ, ಮೊರಬದ ಬಾನೆ, ಹಿಡಕಲ್ಲದ ಬನಹಟ್ಟಿ, ಹಾರೂಗೇರಿಯ ಬಂತಿ, ಧರ್ಮಟ್ಟಿ, ಹಾಡಕಾರ, ಚೌಗಲಾ ಮುಗಳಖೋಡದ ಗೋಕಾಕ, ಶೇಗುಣಸಿ, ಮೆಕ್ಕಳಕಿ, ಹಿಪ್ಪರಗಿ ಮುಂತಾದ ಮನೆತನಗಳು ವಿಸ್ತಾರವಾದ ಕೃಷಿ ಭೂಮಿಯನ್ನು ಹೊಂದಿದ್ದರೂ ಅದರಾಚೆ ಅಭಿವೃದ್ಧಿ ಚಿಂತನೆ ಮಾಡದಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಅವರು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಲು ಆಸಕ್ತಿವಹಿಸಿದಷ್ಟು ಆರ್ಥಿಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಲು ಆಸಕ್ತಿ ವಹಿಸಲಿಲ್ಲ. ಭಾರತ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಸಹಕಾರ ಚಳುವಳಿಯ ಬೀಜವನ್ನು ನೆಟ್ಟು ಬೆಳೆಸಿದ ಗದುಗಿನ ಸಿದ್ದನಗೌಡ ಪಾಟೀಲ ಹಾಲುಮತ ಸಮುದಾಯದವರು. ಆದರೆ ಈ ತಾಲೂಕಿನಲ್ಲಿ ಸಹಕಾರದೆಡೆಗೆ ಹಾಲುಮತಸ್ಥರು ಗಮನ ಹರಿಸಲಿಲ್ಲ.

ಇಡೀ ತಾಲೂಕಿನಲ್ಲಿ ಹೇಳಿಕೊಳ್ಳುವಂತ ಕುರುಬರೇ ಕಟ್ಟಿರುವಂತ ಬ್ಯಾಂಕುಗಳ ಸಂಖ್ಯೆ ಬಹಳಷ್ಟು ಕಡಿಮೆ. ಹಾರೂಗೇರಿಯ ಅರ್ಬನ್ ಬ್ಯಾಂಕ, ರಾಯಬಾಗದ ಬೀರೇಶ್ವರ ಬ್ಯಾಂಕಗಳು ಸ್ಥಾಪನೆಗೊಂಡರು ಕೂಡ ಇಂದು ಅವು ಸ್ಥಗಿತಗೊಂಡಿವೆ. ಅಂದರೆ "ಆರ್ಥಿಕ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ಸರಿದೂಗಿಸಿಕೊಂಡು ಹೋಗುವ ವ್ಯವಹಾರ ಜಾಣ್ಮೆ ಕುರುಬರಲ್ಲಿ ಇಲ್ಲ. ವೈಯಕ್ತಿಕ ಹಿತಸಾಧನೆಗೆ ಈ ಸಂಸ್ಥೆಗಳನ್ನು ಬಳಸಿಕೊಂಡಿದ್ದರಿಂದ ಈ ಬ್ಯಾಂಕುಗಳು ನಷ್ಟವನ್ನನುಭವಿಸಿ ಸ್ಥಗಿತಗೊಂಡವು."[೧೩] ಅಂದರೆ

ಇವರು ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸಾಮಾಜಿಕ ಕ್ಷೇತ್ರವನ್ನು ಪರಿಭಾವಿಸಿಲ್ಲ. ಉದಾಹರಣೆಗೆ, ಹಾರೂಗೇರಿಯಲ್ಲಿರುವ ಜನತಾ ಕೋ-ಆಪ್ ಬ್ಯಾಂಕ್, ಜಾಗೃತಿ ಕೋ-ಆಪ್ ಬ್ಯಾಂಕ್‌ಗಳಿಗಿಂತಲೂ ಮೊದಲು ಆರಂಭಗೊಂಡ ಅರ್ಬನ್ ಬ್ಯಾಂಕ್, ಹಾರೂಗೇರಿ ಸುತ್ತ-ಮುತ್ತಲಿನ ಪರಿಸರದ ಪ್ರಮುಖ ಬ್ಯಾಂಕ ಆಗಿತ್ತು. ಈ ಎರಡು ಬ್ಯಾಂಕುಗಳಿಗೆ ಸ್ಪರ್ಧಿಯಾಗಿದ್ದ ಅರ್ಬನ್ ಬ್ಯಾಂಕ್ ತನ್ನ ಕಾರ್ಯನಿರ್ವಹಿಸಿದರೂ ಕೂಡ ನಂತರದ ವರ್ಷಗಳಲ್ಲಿ ಅದು ಮುಚ್ಚಿಹೋಯಿತು. ಹಾಗೆಯೇ ತಾಲೂಕಿನ ಮಟ್ಟದಲ್ಲಿಯೂ ಕುರುಬರು ಕಟ್ಟಿದ ಹೇಳಿಕೊಳ್ಳುವ ಯಾವ ಪ್ರಮುಖ ಬ್ಯಾಂಕಗಳು ಮೂಂಚೂಣಿಯಲಿಲ್ಲ.

ಸಹಕಾರಿ ಕ್ಷೇತ್ರದಲ್ಲಿ ರಾಯಬಾಗ ಪರಿಸರದ ಹಾಲುಮತ ಸಮುದಾಯದವರ ಕೊಡುಗೆ ಬಹಳಷ್ಟು ಕಡಿಮೆ. ಹಾಗೆ ನೋಡಿದರೆ ಕರ್ನಾಟಕ ರಾಜ್ಯದಲ್ಲಿ ಸಹಕಾರ ರಂಗವನ್ನು ಆರಂಭಿಸಿದ ಕೀರ್ತಿ ಹಾಲುಮತದ ಸಮುದಾಯಕ್ಕೆ ಸೇರಿದ ಶಿದ್ಧನಗೌಡ ಸಣ್ಣರಾಮನಗೌಡ ಪಾಟೀಲರಿಗೆ ಸಲ್ಲುತ್ತದೆ. ಅವರು ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದವರು. ಇವರು ಬ್ರಿಟಿಷರ ಆಳ್ವಿಕೆಯಲ್ಲಿ ಅಧಿಕಾರಿಗಳಿಗೆ ಷರತ್ತು ಹಾಕಿ ಗ್ರಾಮಕ್ಕೆ ಕುಡಿಯುವ ನೀರು ಮತ್ತು ರೇಲ್ವೆ ಮಾರ್ಗಗಳನ್ನು ಹಾಕಿಸಿಕೊಳ್ಳುವ ಮೂಲಕ ಸಹಕಾರಿ ಸಂಘವನ್ನು ಸ್ಥಾಪನೆ ಮಾಡಿದರು. "೧೯೦೫ರ ಮೇ ೮ ರಂದು ಈಗಿನ ಗದಗ ಜಿಲ್ಲೆಯ ಪುಟ್ಟ ಗ್ರಾಮ ಕಣಗಿನಹಾಳದಲ್ಲಿ ಸ್ಥಾಪಿಸಿದ ಸಹಕಾರಿ ಸಂಘವೇ ಇಂದು ದೇಶದ ಸಹಕಾರ ಉತ್ಥಾನಕ್ಕೆ ನಾಂದಿಯಾಗಿದ್ದು. ಅಷ್ಟೇ ಅಲ್ಲಾ ಇಡೀ ಏಷಿಯಾ ಖಂಡದ ಮೊದಲ ಸಹಕಾರಿ ಸಂಘ ಎಂಬ ಹೆಗ್ಗಳಿಕೆಯನ್ನು ತಂದುಕೊಟ್ಟಿದ್ದು ಎಂಬುದು ಅತ್ಯಂತ ಮಹತ್ವದ ಸಂಗತಿ."[೧೪]

ಶ್ರೀ ವಿ. ಎಲ್. ಪಾಟೀಲರ ಪ್ರಯತ್ನದಿಂದಾಗಿ ಸ್ವಾತಂತ್ರ್ಯ ನಂತರದಲ್ಲಿ ಸಹಕಾರ ತತ್ವದ ಅಡಿಯಲ್ಲಿ ರಾಯಬಾಗದಲ್ಲಿ 'ರಾಯಬಾಗ ಸಕ್ಕರೆ ಕಾರ್ಖಾನೆ' ಸ್ಥಾಪನೆಗೊಂಡಿತು. ಆದರೆ ಇಂದು ಅದು ಬೇರೆಯವರ ನಿರ್ವಹಣೆಯಲ್ಲಿದ್ದು, ಆಡಳಿತ ಮಂಡಳಿಗೆ ಸಂಬಂಧಿಸಿದಂತೆ ಸಂಘರ್ಷ ಇರುವುದನ್ನು ಕಾಣುತ್ತೇವೆ. ಆರಂಭದಲ್ಲಿ ಈ ಸಕ್ಕರೆ ಕಾರ್ಖಾನೆಯಲ್ಲಿ ಎಲ್ಲಾ ಸಮುದಾಯದವರು ಸದಸ್ಯರಾಗಿದ್ದರು. ಅದರಲ್ಲಿ ಬಹು ಸಂಖ್ಯಾತ ಸದಸ್ಯರು ಮತ್ತು ನಿರ್ದೇಶಕರು ಹಾಲುಮತ ಸಮುದಾಯದಕ್ಕೆ ಸೇರಿದವರೆಂಬುದರಲ್ಲಿ ಎರಡು ಮಾತಿಲ್ಲ. ಅಂದರೆ ಈ ಕಾರ್ಖಾನೆ ಅವರ ಕೈಯಲ್ಲಿಯೇ ಇದ್ದು, ಅದರ ನಿರ್ವಹಣೆ ಅವರಿಂದಲೇ ನಡೆಯುತ್ತಿತ್ತು. ಅದು ಕೂಡ ಇಂದು ಹಸ್ತಾಂತರಗೊಂಡಿದೆ. ಈಗ ಖಾಸಗಿ ಒಡೆತನದ ಕಂಪನಿಯೊಂದು ಕಾರ್ಖಾನೆಯನ್ನು ನಡೆಸುತ್ತಿದೆ.

ಬಾಗೆನಾಡಿನ ಉತ್ತರ ದಿಕ್ಕಿನಲ್ಲಿ ಕೃಷ್ಣಾ ನದಿ (ಹಿರಿಹೊಳೆ) ಹರಿಯುತ್ತಿದ್ದರೆ, ದಕ್ಷಿಣದಲ್ಲಿ ಸಣ್ಣ-ಪುಟ್ಟ ಬೆಟ್ಟ-ಗುಡ್ಡಗಳಿಂದ ಕೂಡಿದ ಮೊರಡಿ ಪ್ರದೇಶವಿದೆ. ಬಾವನಸೌದತ್ತಿ, ಜಲಾಲಪುರ, ಬಿರಡಿ, ಚಿಂಚಲಿ, ಕುಡಚಿ, ಶಿರಗೂರ, ಸಿದ್ದಾಪೂರ, ಖೇಮಲಾಪೂರ ನದಿ ತೀರದ ಗ್ರಾಮಗಳು. ಇನ್ನೂಳಿದಂತೆ ತಾಲೂಕಿನ ಎಲ್ಲ ಊರುಗಳು ಬಯಲು ಪ್ರದೇಶದಲ್ಲಿದ್ದು ಮೊರಡಿ ಜಮೀನವನ್ನು ಹೊಂದಿವೆ. ಈ ಪ್ರದೇಶವು ಪಶುಪಾಲನೆಗೆ ಸಹಾಯಕವಾಗಿದ್ದು ಈ ಪ್ರದೇಶದಲ್ಲಿ ಹಾಲುಮತ ಸಮುದಾಯ ಹರಡಿಕೊಂಡಿದೆ.

ಒಂದು ಸಲ ಕೊಲ್ಹಾಪೂರದ ಮರಾಠ ಅರಸರು ಬಾಗಿ ಗುಡ್ಡದ ದಟ್ಟ ಅರಣ್ಯದಲ್ಲಿ ಕ್ರೂರ ಮೃಗವೊಂದನ್ನು ಬೇಟೆಯಾಡಲು ಬೆನ್ನುಹತ್ತಿ ಅಪಾಯಕ್ಕೆ ಸಿಲುಕಿಕೊಂಡರು. ಆಗ ಅಲ್ಲಿಯೇ ಕುರಿ

ಕಾಯುತ್ತಿದ್ದ ಕುರುಬನೊಬ್ಬ ಮಹಾರಾಜರನ್ನು ಅಪಾಯದಿಂದ ಉಪಾಯವಾಗಿ ಪಾರುಮಾಡಿದನು. ಜೀವ ರಕ್ಷಿಸಿದ ಅವನ ಕುರಿತು ಅಭಿಮಾನ ಮತ್ತು ಗೌರವ ಮೂಡಿ, ನಿನಗೆ ಬಹುಮಾನ ಏನು ಬೇಕು? ಕೇಳು ಕೊಡುತ್ತೇನೆಂದಾಗ, ಕುರಿಗಾರನು ಕುರಿ ಮೇಯಿಸಲು ವಿಶಾಲವಾದ ಮೊರಡಿ ಜಮೀನು ಬೇಕೆಂದು ಕೇಳಿದನು. ಅವನ ಮುಗ್ಧ ಬೇಡಿಕೆಯನ್ನು ಒಪ್ಪಿಕೊಂಡ ಮಹಾರಾಜರು, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಬೇರೆ-ಬೇರೆ ಊರುಗಳಲ್ಲಿದ್ದ ಕುರಿಗಾರರಿಗೆ ಕುರಿ ಮೇಯಿಸಲು ಅವಶ್ಯಕವಿದ್ದ ಭೂಮಿಯನ್ನು ನೀಡಿದರು. ಹೀಗಾಗಿ ಈ ಪರಿಸರದ ಬಹುಭಾಗವೆಲ್ಲ ಕುರಿಗಾಹಿಗಳಿಗೆ ಲಭಿಸಿ, ಹೆಚ್ಚು ಪ್ರಮಾಣದಲ್ಲಿ ಭೂ ಒಡೆತನವನ್ನು ಹೊಂದುವಂತಾಯಿತು. "ಇಂದು ಕೂಡ ಮರಡಿ ಪ್ರದೇಶಗಳಲ್ಲಿರುವ ಜಮೀನುಗಳ ಒಡೆತನವನ್ನು ಈ ಸಮುದಾಯದವರೇ ಹೊಂದಿರುವರು."[೧೫] ಈ ನಾಡಿನ ಮೂಲ ನಿವಾಸಿಗಳಾದ ಇವರು ಪಶುಪಾಲನೆಯ ಹಂತದಲ್ಲಿದ್ದಾಗ ನೂರಾರು ಎಕರೆ ಭೂಮಿಗಳ ಮಾಲಿಕತ್ವವನ್ನು ಹೊಂದಿದರು. ನಂತರದಲ್ಲಿ ಅವಿಭಕ್ತ ಕುಟುಂಬಗಳು ಚಿಕ್ಕ-ಚಿಕ್ಕ ಕುಟುಂಬಗಳಾಗಿ ವಿಂಗಡನೆಗೊಂಡರು ಕೂಡ ಇನ್ನೂ ಕೆಲವು ಕುಟುಂಬಗಳು ನಲವತ್ತು-ಐವತ್ತು ಎಕರೆಗಳ ಭೂ ಒಡೆತನ ಹೊಂದಿರುವುದನ್ನು ವಿಶೇಷವೆಂದೇ ಪರಿಗಣಿಸಬೇಕಾಗುತ್ತದೆ.

ಔದ್ಯೋಗಿಕರಣ :

ಕರ್ನಾಟಕ ರಾಜ್ಯದ ಒಟ್ಟು ಔದ್ಯೋಗಿಕರಣದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ರಾಯಬಾಗ ತಾಲೂಕು ಔದ್ಯೋಗೀಕರಣ ಕ್ಷೇತ್ರದಲ್ಲಿ ತೀರ ಹಿಂದುಳಿದೆ. ಸಕ್ಕರೆ ಕಾರ್ಖಾನೆಯನ್ನು ಹೊರತು ಪಡಿಸಿ ಯಾವ ಪ್ರಮುಖವಾದ ಉದ್ದಿಮೆಗಳು ಇಲ್ಲಿಲ್ಲ. ಹಾಲುಮತ ಸಮುದಾಯದಲ್ಲಿ ಔದ್ಯೋಗಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಳಿಬರುವ ಹೆಸರು ಬಿರಡಿ ಗ್ರಾಮದ ಸದಾಶಿವ ವಸಂತ ದೇಶಿಂಗೆಯವರದು. ಇವರು ಶ್ರೀ ಆಂಜನೇಯ ಗ್ರೂಪ್ಸ್ ಅಡಿಯಲ್ಲಿ ಕೋಳಿ ಫಾರ್ಮಗಳನ್ನು ತಾಲೂಕಿನ ಬಿರಢಿ, ಹಾರೂಗೇರಿ (ಬೀರಪ್ಪನ ಮರಡಿ), ಜೋಡಟ್ಟಿ ಮೊದಲಾದ ಸ್ಥಳಗಳಲ್ಲಿ ಸ್ಥಾಪಿಸಿರುವರು. ಮಾಂಸದ ಕೋಳಿ, ತತ್ತಿಗಳನ್ನಿಡುವ ಕೋಳಿಗಳನ್ನು ಸಾಕುತ್ತಿರುವರು. ಕೋಳಿ ಮರಿಗಳ ಉತ್ಪಾದನೆಯ ಹ್ಯಾಚರಿ ಘಟಕ ಮತ್ತು ಕೋಳಿ ಆಹಾರ ತಯಾರಿಸುವ ಚಿಕ್ಕ ಘಟಕವನ್ನು ಕೂಡ ಸ್ಥಾಪಿಸಿದ್ದು ಈ ರಂಗದಲ್ಲಿ ವಿಶೇಷ ಸಾಧನೆಯನ್ನು ಮಾಡಿರುವರು. ಕೋಳಿ ಸಾಕಾಣಿಕೆಗೆ ಬಯಸಿ ಶೆಡ್ ನಿರ್ಮಿಸಿದವರಿಗೆ ಒಪ್ಪಂದದ ಮೇರೆಗೆ ಕೋಳಿಮರಿ ಮತ್ತು ಆಹಾರವನ್ನು ನೀಡುತ್ತಾರೆ. ಹೀಗಾಗಿ ಸದ್ಯ ಔದ್ಯೋಗಿಕ ಕ್ಷೇತ್ರದಲ್ಲಿ ಅವರ ಹೆಸರು ಮುಂಚೂಣಿಯಲ್ಲಿದೆ. ಇವರ ಸಾಧನೆಯ ಪ್ರಭಾವದಿಂದಾಗಿ ಇಂದು ಕುರುಬರು ಕೋಳಿ ಸಾಕಾಣಿಕೆ ಮುಂದಾಗಿದ್ದಾರೆ.

ಸರಕಾರಿ ನೌಕರಿಗೆ ರಾಜೀನಾಮೆ ಸಲ್ಲಿಸಿ ಕೋಳಿ ಸಾಕಾಣಿಕೆಯಲ್ಲಿ ತೊಡಗಿದ ಇನ್ನೊಬ್ಬ ಉದ್ಯಮಿ ಹಿಡಕಲ್ಲದ ವಾಸುದೇವ ಭೀ ಗಲಗಲಿ. ಕೃಷಿ ವಿಜ್ಞಾನ ಪದವಿಧರರಾದ ಇವರು ತಮ್ಮ ತೋಟದಲ್ಲಿ ಸುಮಾರು ೩೦ ಲಕ್ಷ ರೂ. ಗಳ ವೆಚ್ಚದಲ್ಲಿ ೧೫ ಸಾವಿರ ಕೋಳಿಗಳ ಸಾಕಾಣಿಕಾ ಕೇಂದ್ರವನ್ನು ಸ್ಥಾಪಿಸಿ ತಿಂಗಳಿಗೆ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಸಂಪಾದಿಸುತ್ತಿರುವುದು ನಿರುದ್ಯೋಗಿ ಯುವಕರಿಗೆ ಮಾದರಿಯಾಗಿದೆ. ಸ್ನಾತಕೋತ್ತರ ಪದವಿ ಪೂರೈಸಿರುವ ಆನಂದ ತ. ಗಲಗಲಿ ಯವರು ತಮ್ಮ ಹೋಲದಲ್ಲಿ ಸುಮಾರು ೧೦

ಲಕ್ಷ ರೂ. ಗಳ ವೆಚ್ಚದಲ್ಲಿ ೫ ಸಾವಿರ ಕೋಳಿಗಳ ಸಾಕಾಣಿಕೆ ಕೇಂದ್ರವನ್ನು ಸ್ಥಾಪಿಸಿದ್ದು, ತಿಂಗಳಿಗೆ ೫೦ ಸಾವಿರಕ್ಕಿಂತ ಹೆಚ್ಚು ಆದಾಯವನ್ನು ಪಡೆದು ಕೊಳ್ಳುತ್ತಿರುವುದಾಗಿ ಹೇಳುತ್ತಾರೆ.

ಔದ್ಯೋಗಿಕ ಕ್ಷೇತ್ರದಲ್ಲಿ ಕಂಡು ಬರುವ ಇನ್ನೊಂದು ಹೆಸರು ಹಾರೂಗೇರಿಯ ಭೀಮಪ್ಪ ಪ್ರಧಾನಿ ಭಂಡಾರಿ. ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸುವ ಮಾಲೀಕರಾದ ಇವರು ಸುಮಾರು ೩೦ ವರ್ಷಗಳಿಂದಲೂ ಈ ಕಾಯಕದಲ್ಲಿ ನಿರತರಾಗಿರುವರು. ಇವರ ಪುಟ್ಟ ಕಾರ್ಖಾನೆಯಲ್ಲಿ ತಯಾರಿಸಿದ ಕೃಷಿ ಉಪಕರಣಗಳು ಗುಣಮಟ್ಟದ ತಂತ್ರಜ್ಞಾನವನ್ನು ಹೊಂದಿದ್ದು ಮಾರುಕಟ್ಟೆಯಲ್ಲಿ ಬಹುಬೇಡಿಕೆಯನ್ನು ಪಡೆದಿವೆ. ಭೀಮಪ್ಪ ಅವರ ಅಣ್ಣ ಅರ್ಜುನ. ಮೂಲತಃ ಅಥಣಿಯರಾದ ಅರ್ಜುನ ಮೇಸ್ತ್ರಿ ೧೯೮೦ರ ದಶಕದಲ್ಲಿ ಹಾರೂಗೇರಿಗೆ ಆಗಮಿಸಿ ಕೋಣೆಯೊಂದನ್ನು ಬಾಡಿಗೆಗೆ ಪಡೆದು ಸಣ್ಣ ಪ್ರಮಾಣದ ಗ್ಯಾರೇಜು ಆರಂಭಿಸಿದರು. ಆರಂಭದಲ್ಲಿ ಇವರು ಲೇತ್, ವೇಲ್ಡಿಂಗ್ ಯಂತ್ರಗಳನ್ನು ಹೊಂದಿದ್ದು, ಕೃಷಿ ಸಾಗುವಳಿ ಯಂತ್ರೋಪಕರಣಗಳನ್ನು ರಿಪೇರಿ ಮಾಡುತ್ತಿದ್ದರು. ನಂತರ ಇಬ್ಬರು ಸಹೋದರರು ಕೂಡಿಕೊಂಡು ಅದನ್ನು ಕೃಷಿ ಸಾಗುವಳಿ ಯಂತ್ರೋಪಕರಣಗಳನ್ನು ತಯಾರಿಸುವ ಕಾರ್ಖಾನೆಯನ್ನಾಗಿ ಪರಿವರ್ತಿಸಿದರು. ಕೆಲವು ವರ್ಷಗಳ ಹಿಂದೆ ಅರ್ಜುನ ಮೇಸ್ತ್ರಿ ಅಥಣಿಗೆ ಮರಳಿದ್ದು, ಸದ್ಯ ಹಾರೂಗೇರಿಯಲ್ಲಿ ಭೀಮಪ್ಪ ಮೇಸ್ತ್ರಿ ಮಾತ್ರ ಇದ್ದು, ರಾಯಬಾಗ ಪರಿಸರದ ಪೂರ್ವ ಭಾಗದ ಜನರಿಗೆ ಭಂಡಾರಿ ಮೇಸ್ತ್ರಿ ಎಂದು ಖ್ಯಾತಿಯನ್ನು ಹೊಂದಿರುವರು.

ಒಕ್ಕಲುತನಕ್ಕೆ ಬೇಕಾಗುವ ಕೂರಿಗೆ, ಗಳೆ, ರೆಂಟೆ, ಅರಿಶಿಣ ಪಾಲಿಶ ಮಾಡುವ ಮಶಿನ್ ಮುಂತಾದ ಕೃಷಿ ಯಂತ್ರೋಪಕರಣಗಳನ್ನು ಸದ್ಯ ತಮ್ಮ ಕಾರ್ಖಾನೆಯಲ್ಲಿಯೇ ತಯಾರಿಸುತ್ತಾರೆ. ನೀರು ಕಾಯಿಸುವ ಬಂಬಗಳನ್ನು ತಯಾರಿಸುತ್ತಿದ್ದಾರೆ. ಸದ್ಯ ಇವರು ಎರಡು ಕಾರ್ಖಾನೆಗಳ ಮಾಲೀಕರಾಗಿದ್ದು, ೨೦ಕ್ಕೂ ಹೆಚ್ಚು ಆಯ್. ಟಿ. ಆಯ್. ತರಬೇತಿದಾರರು ಮತ್ತು ತರಬೇತಿ ಹೊಂದದ ಅನುಭವಿಗಳಿಗೆ ಉದ್ಯೋಗವನ್ನು ನೀಡಿದ್ದು ಅವರ ಉಪಜೀವನಕ್ಕೆ ಆಸರೆಯಾಗಿದಾರೆ. ಭೀಮಪ್ಪ ಮೇಸ್ತ್ರಿ ಯಾವುದೇ ಶಾಲೆ, ಕಾಲೇಜುಗಳಲ್ಲಿ ತಂತ್ರಜ್ಞಾನದ ಶಿಕ್ಷಣವನ್ನು ಪಡೆದವರಲ್ಲ. ವೃತ್ತಿ ಕೌಶಲದ ಮೇಲೆ ಕಾರ್ಖಾನೆಯನ್ನು ಆರಂಭಿಸಿದವರು.

ರಾಯಬಾಗದ ಚಂದ್ರಕಾಂತ ರಾಮಚಂದ್ರ ಮಶಾಲಜಿಯವರು ರಾಜಶ್ರೀ ಫಾರ್ಮ ಆಫ್ ಇಂಪ್ಲೀಮೆಂಟ & ಇಕ್ಯುಪಮೆಂಟ ಕಾರ್ಖಾನೆಯ ಮಾಲೀಕರಾಗಿದ್ದು, ಒಕ್ಕಲುತನಕ್ಕೆ ಅವಶ್ಯಕ ಉಪಕರಣಗಳಾದ ಗಳೆ, ರೆಂಟೆ, ಕೂರಿಗೆ ಮೊದಲಾದ ಯಂತೋಪಕರಣಗಳನ್ನು ತಯಾರಿಸುತ್ತಿರುವರು. ಸುಮಾರು ೨೨ ವರ್ಷಗಳಿಂದ ವರ್ಷಕ್ಕೆ ೩೫ ರಿಂದ ೪೦ ರಾಜಶ್ರೀ ಟ್ರ್ಯಾಕ್ಟರ ಟ್ರೇಲರ್‌ಗಳನ್ನು ತಯಾರಿಸುತ್ತಿದ್ದು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೊಂದಿವೆ. ಕಾರ್ಖಾನೆಯಲ್ಲಿ ಹಲವಾರು ಕಾರ್ಮಿಕರು ದುಡಿಯುತ್ತಿದ್ದು ಅವರ ಜೀವನೋಪಾಯಕ್ಕೆ ಆಸರೆಯಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ವಿದ್ಯಾ ಚೇತನ ಎಜ್ಯುಕೇಶನ್ ಸೊಸಾಯಿಟಿ ರಾಯಬಾಗ' ಆರಂಭಿಸಿದ್ದು, ಅದರ ವತಿಯಿಂದ ಚಾಣಕ್ಯ ಪ್ರೈವೇಟ ಆಯ್. ಟಿ. ಆಯ್. ಕಾಲೇಜನ್ನು ಪ್ರಾರಂಭಿಸಿದ್ದಾರೆ. ಇದು ಫಿಟ್ಟರ್ ಮತ್ತು ಎಲೇಕ್ಟ್ರೀಶಿಯನ್ ವಿಭಾಗಗಳನ್ನು ಹೊಂದಿದ್ದು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವರದಾನವಾಗಿದೆ.

ಚಿಂಚಲಿಯ ಸುರೇಶ ತಮ್ಮಣ್ಣ ಪಡೋಲಕರ ಲೇತ್, ವೇಲ್ಡಿಂಗ ಮಶಿನ್‌ಗಳಿಂದ ಕೂಡಿದ ಗ್ಯಾರೇಜನ್ನು ಸ್ಥಾಪಿಸಿರುವರು. ಕೃಷಿ ಉಪಕರಣ, ನೀರೆತ್ತುವ ಪಂಪ್‌ಸೆಟ್, ಟ್ರೇಲರ್, ಮೊದಲಾದ ಕೃಷಿ ಮತ್ತು ಗೃಹೋಪಯೋಗಿ ವಸ್ತಗಳನ್ನು ರೀಪೇರಿ ಮಾಡುತ್ತಾರೆ. ಈ ಕಾರ್ಖಾನೆಯಲ್ಲಿ ಐದು ಜನ ಅನುಭವಿಕ ಕಾರ್ಮಿಕರು ಕೆಲಸ ಮಾಡುತ್ತಿರುವರು.

ಹಾಲಿನ ಡೇರೆಗಳು :

ಕುರುಬರಲ್ಲಿಯ ಕೆಲವರು ಹಾಲು ಸಂಸ್ಕರಣೆ ಮತ್ತು ಮಾರಾಟ ಕೇಂದ್ರಗಳನ್ನು ಸ್ಥಾಪಿಸಿರುವರು. ಹಾರೂಗೇರಿಯ ಸಹದೇವ ಯಲ್ಲಪ್ಪ ಲಾಳಿ, 'ಶಿವಾ ಡೇರಿ'ಯನ್ನು ಸ್ಥಾಪಿಸಿದ್ದು ಹಾಲು, ಮೊಸರು, ಕವಾ, ಪೇಡೆ, ಶ್ರೀಖಂಡ, ತುಪ್ಪ ಮುಂತಾದ ಹಾಲಿನ ಉತ್ಪನ್ನಗಳನ್ನು ತಯಾರಿಸುತ್ತಾರೆ. ಚಿಂಚಲಿಯ ಮಹಾದೇವ ಈರಗಾರ, ಮಾಳಶೆಟ್ಟಿ ಭರಮಾ ಈರಗಾರ, ಅಜಿತ ಮಹಾವೀರ ಪೂಜೇರಿ, ಪೀರಪ್ಪ ಜಯಪ್ಪ ಬಾಣಸೆ ಇವರೆಲ್ಲರೂ ಹಾಲಿನ ಡೇರೆಗಳನ್ನು ಹೊಂದಿರುವರು. ಇವರು ರೈತರು ಮತ್ತು ಗೌಳಿಗರಿಂದ ಹಾಲನ್ನು ಖರೀದಿಸಿ, ಸಂಸ್ಕರಿಸಿ ಹಾಲಿನ ಉತ್ಪನ್ನಗಳನ್ನು ತಯಾರಿಸುತ್ತಾರೆ. ಇಲ್ಲಿ ತಯಾರಾದ ವಸ್ತುಗಳು ಸ್ಥಳೀಯ ಮಾರುಕಟ್ಟೆಗಳಲ್ಲಿ ಬೇಡಿಕೆಯನ್ನು ಹೊಂದಿವೆ. ಕೆಲವರು ಹಾಲನ್ನು ಸಂಸ್ಕರಿಸಿ ಮಹಾರಾಷ್ಟ್ರದ ಡೇರೆಗಳಿಗೆ ಪೂರೈಸುತ್ತಾರೆ.

ಆಲೆಮನೆಗಳು :

ತೋಟಗಳಲ್ಲಿ ಸ್ಥಾಪನೆಗೊಂಡಿರುವ ಆಲೆಮನೆಗಳನ್ನು ಕೈಗಾರಿಕೆಗಳಲ್ಲ. ಅವು ಕೃಷಿ ಕೈಗಾರಿಕೆಯ ಚಿಕ್ಕ ಘಟಕಗಳು. ಹಾಗೆ ನೋಡಿದರೆ ಇವುಗಳ ಸ್ಥಾಪನೆಯಲ್ಲಿ ಹಾಲುಮತ ಸಮುದಾಯದವರ ಪ್ರಾಬಲ್ಯವನ್ನು ಕಾಣುವುದಿಲ್ಲ. ಎಲ್ಲ ಸಮುದಾಯದವರು ಈ ಘಟಕಗಳನ್ನು ಅವಶ್ಯಾನುಸಾರ ಸ್ಥಾಪಿಸಿಕೊಂಡಿರುವರು. ಇಲ್ಲಿರುವ ಜನರು ಈ ಘಟಕಗಳನ್ನು ಕೈಗಾರಿಕೆಗಳೆಂದು ಪರಿಗಣಿಸಿಲ್ಲ.

ವಾಣಿಜ್ಯ ಕ್ಷೇತ್ರ :

ವ್ಯಾಪಾರ ರಂಗದಲ್ಲಿಯೂ ಹಾಲುಮತ ಸಮುದಾಯದವರ ಸಾಧನೆ ಕಂಡು ಬರುವುದಿಲ್ಲ. ಇದರಲ್ಲಿಯೂ ಹಿಂದುಳಿದಿದ್ದಾರೆ. ತಾಲೂಕಿನ ಪ್ರಮುಖ ಪಟ್ಟಣಗಳಾದ ರಾಯಬಾಗ, ಹಾರೂಗೇರಿ, ಕುಡಚಿ, ಚಿಂಚಲಿ, ಕಂಕಣವಾಡಿಗಳ ವ್ಯಾಪಾರ ವಹಿವಾಟಗಳನ್ನು ಅವಲೋಕಿಸಿದಾಗ ಹಾಲುಮತ ಸಮುದಾಯದವ ಯಾವೊಬ್ಬ ಪ್ರಮುಖ ವ್ಯಾಪಾರಸ್ಥರು ಕಂಡು ಬರುವುದಿಲ್ಲ. ಮಾರುಕಟ್ಟೆಗಳಲ್ಲಿ ಪ್ರಾಬಲ್ಯ ಹೊಂದಿರುವ ಪ್ರಮುಖ ಕಂಪನಿಗಳ ಮತ್ತು ಅವುಗಳ ಉತ್ಪನ್ನಗಳ ಅಧಿಕೃತ ಮಾರಾಟದ ಪರವಾನಿಗೆ ಪಡೆದುಕೊಂಡವರು ಒಬ್ಬಿಬ್ಬರು ಮಾತ್ರ, ಉಳಿದವರೆಲ್ಲ ಕಿರುಕಳ ವ್ಯಾಪಾರಸ್ಥರು.

ಕಿರಾಣಿ ವ್ಯಾಪರದಲ್ಲಿ ಹಾರೂಗೇರಿಯ ನಿಂಗಪ್ಪ ಸಿದ್ದಪ್ಪ ಚೌಗಲಾ, ತಮ್ಮಣ್ಣ ಕುರಿ, ಶಂಕರ ಹೆಗಡೆ, ಹಿಡಕಲ್ಲದ ವಂಸತ ಬನಹಟ್ಟಿ, ಚಿಂಚಲಿಯ ಬಳವಂತ ಮೋಟೆ, ಮೊಬೈಲ್ ಮಾರಾಟದಲ್ಲಿ ಚಿಂಚಲಿಯ ಅಜಿತ ಗೊಂಗಡಿ, ಬೀಜ ಮತ್ತು ಕೀಟನಾಶಕ ವ್ಯಾಪಾರದಲ್ಲಿ ಹಾರೂಗೇರಿಯ ಅಶೋಕ ಭೀ ಪಡೆದಾರ, ಶಿವಪ್ಪ ದಳವಾಯಿ, ಕಂಕಣವಾಡಿಯ ವಸಂತ ಪೂಜೇರಿ, ರಸಗೊಬ್ಬರ ವ್ಯಾಪಾರದಲ್ಲಿ ಕಂಕಣವಾಡಿಯ,

ವಸಂತ ಪೂಜೇರಿ (ಭೂಮಿ ಅಗ್ರೋ ಕೇಂದ್ರ), ಬಾಳು ಪೂಜೇರಿ (ಹಾಲಸಿದ್ಧನಾಥ ಅಗ್ರೋ ಕೇಂದ್ರ), ಮಹೇಶ ಬಾಲದಂಡೆ ಮುಗಳಖೋಡದ ಮಲ್ಲಪ್ಪ ಕುರುಬಳ್ಳಿ, ರಾಯಬಾಗದ ಕಲ್ಲಪ್ಪ ಹಳಿಂಗಳಿ, ಹಾರ್ಡವೇರ ವ್ಯಾಪಾರದಲ್ಲಿ ಚಿಂಚಲಿಯ ಸುಶಾಂತ ಸುರೇಶ ಪಡೋಲಕರ, ಹಾರೂಗೇರಿಯ ಶ್ರೀಮಂತ ದಳವಾಯಿ, ಟಿ. ವಿ. ಮತ್ತು ಗೃಹೋಪಯೋಗಿ ವಸ್ತುಗಳ ಮಾರಾಟದಲ್ಲಿ ಚಿಂಚಲಿಯ ಪ್ರಕಾಶ ಮಹಾದೇವ ಪಡೋಲಕರ, ಸಿಮೆಂಟ ವ್ಯಾಪಾರದಲ್ಲಿ ಮುಗಳಖೋಡದ ಶಿವಾನಂದ ಮಾ. ಗೋಕಾಕ, ಹಾರೂಗೇರಿಯ ಬಸವರಾಜ ಬಿರಡಿ, ಬುಕ್‌ಸ್ಟಾಲ್ ವ್ಯಾಪಾರದಲ್ಲಿ ಹಾರೂಗೇರಿಯ ಸದಾಶಿವ ಹಳಿಂಗಳಿ, ಮೆಡಿಕಲ್ಲ ಶಾಪ ವ್ಯಾಪಾರದಲ್ಲಿ ಸಂತೋಷ ಸಿಂಗಾಡಿ, ಬಟ್ಟೆ ವ್ಯಾಪಾರದಲ್ಲಿ ಮಾರುತಿ ರಾ. ಧರ್ಮಟ್ಟಿ, ಮುದ್ರಣಾಲಯದಲ್ಲಿ ರಾಜು ಕುರಿ, ವೈನ್‌ಶಾಫ್ ವ್ಯಾಪಾರದಲ್ಲಿ ಸಂಜು ಬಿರಡಿ, ಅಟೋಮೊಬೈಲ್ ಕ್ಷೇತ್ರದಲ್ಲಿ ರಮೇಶ ಕ. ನಾಟಿಕಾರ (ಶ್ರೀ ಭಾರತಿ ಅಟೋಮೊಬೈಲ್ (ಹೀರೊ ಮೋಟರ್ಸ್ ಸ್ಪಾಕ್ ಪಾಯಿಂಟ ಮತ್ತು ಸರ್ವಿಸ್ ಸೆಂಟರ) ಅಣ್ಣಪ್ಪ ಸಿಂಗಾಡಿ (ವ್ಹೀಲ್ ಅಲೈನ್‌ಮೆಂಟ ಸೆಂಟರ), ಕಾಳಿನ ವ್ಯಾಪಾರದಲ್ಲಿ ಮುಗಳಖೋಡದ ವಸಂತ ಶೇಗುಣಸಿ, ಹೋಟೆಲ ಉದ್ಯಮದಲ್ಲಿ ಚಿಂಚಲಿಯ ಮಲ್ಲು ಭೂಪಾಲ ಬನಗೆ ಮೊದಲಾದವರು ತೊಡಗಿಕೊಂಡಿರುವರು. "ಕುರುಬ ವ್ಯಾಪಾರಸ್ಥರು ಸಗಟು ವ್ಯಾಪಾರಸ್ಥ(ಹೋಲ್‌ಸೇಲ್)ರಲ್ಲ. ಇವರೆಲ್ಲ ಸಣ್ಣ ವ್ಯಾಪಾರಸ್ಥರಾಗಿದ್ದು ಮಾರುಕಟ್ಟೆಯಲ್ಲಿ ಇವರ ಪ್ರಾಬಲ್ಯ ಅತ್ಯಲ್ಪ. ಇಲ್ಲಿಯವರೆಗೆ ವ್ಯಾಪಾರಿ ಕ್ಷೇತ್ರದಲ್ಲಿ ಹಾಲುಮತದವರು ಧೈರ್ಯದಿಂದ ಮುನ್ನುಗ್ಗಿಲ್ಲ ಮತ್ತು ಹೇಳಿಕೊಳ್ಳುವಂತ ಸಾಧನೆಯನ್ನು ಮಾಡಿಲ್ಲ."[೧೬]

ಔದ್ಯೋಗಿಕ ಮತ್ತು ವ್ಯಾಪಾರಿ ಕ್ಷೇತ್ರಗಳಲ್ಲಿ ಹಾಲುಮತ ಸಮುದಾಯದವರ ಸಾಧನೆ ಬಹಳಷ್ಟಿಲ್ಲ. ಇದಕ್ಕೆ ಕಾರಣಗಳು ಹಲವಾರು ಇರಬಹುದು. ಅವುಗಳಲ್ಲಿ ಮುಖ್ಯ ಕಾರಣವೆಂದರೆ, ಅವರ ಮುಖ್ಯ ಕಸಬು ಪಶುಪಾಲನೆ. ಈ ಹಂತವನ್ನು ದಾಟಿದ ಅವರು ಕೃಷಿಯತ್ತ ಮುನ್ನಡೆದರು. ಕೃಷಿಯಿಂದ ವ್ಯಾಪಾರದತ್ತ ಬದಲಾವಣೆಯನ್ನು ಹೊಂದಲಿಲ್ಲ. ಯಾವುದೇ ಸಮುದಾಯವನ್ನು ತೆಗೆದುಕೊಂಡು ನೋಡಿದರು ಕೂಡ, ಯಾವ ಸಮುದಾಯ ವ್ಯಾಪಾರದಲ್ಲಿ ತನ್ನನ್ನು ತೊಡಗಿಸಿಕೊಂಡಿದೆಯೋ ಅವರು ಮಾತ್ರ ಆರ್ಥಿಕವಾಗಿ ಸಬಲರಾಗಿದ್ದಾರೆ. ಉದಾಹರಣೆಗೆ ಜೈನ ಸಮುದಾಯ. ಇವರು ಅಲ್ಪಸಂಖ್ಯಾತರಾಗಿದ್ದರೂ ಕೂಡ, ಅವರಿರುವ ಪರಿಸರದಲ್ಲಿನ ಇಡೀ ಮಾರುಕಟ್ಟೆಯ ಮೇಲೆ ತಮ್ಮ ಹಿಡಿತವನ್ನು ಸಾಧಿಸಿರುವರು. ನಾವು ಅಲ್ಪಸಂಖ್ಯಾತರಾಗಿದ್ದರೂ ಕೂಡ ದೇಶದಲ್ಲಿ ಅತೀ ಹೆಚ್ಚು ತೆರಿಗೆಯನ್ನು ಕೊಡುವ ಸಮುದಾಯ ನಮ್ಮದೆಂದು ಅವರು ಅಭಿಮಾನದಿಂದ ಹೇಳಿಕೊಳ್ಳುವರು. ದೇಶದ ಒಟ್ಟು ವ್ಯಾಪಾರ ಮತ್ತು ವಹಿವಾಟದ ಬಹುಪಾಲು ಅವರ ಸಮುದಾಯದವರಾಗಿದ್ದರಿಂದ, ಅತೀ ಹೆಚ್ಚು ತೆರಿಗೆಯನ್ನು ಅವರು ಕಟ್ಟುತ್ತಾರೆ. ಅದರಲ್ಲಿಯೂ ವಿಶೇಷವಾಗಿ ಉತ್ತರ ಭಾರತದ ಜೈನ ಸಮುದಾಯದವರು ಸಂಪೂರ್ಣವಾಗಿ ತಮ್ಮನ್ನು ವಾಣಿಜ್ಯೋದ್ಯಮದಲ್ಲಿ ತೊಡಗಿಸಿಕೊಂಡಿರುವದರಿಂದ, ದಕ್ಷಿಣ ಭಾರತದ ಜೈನ ಸಮುದಾಯದವರಿಗಿಂತಲೂ ಹೆಚ್ಚು ಪ್ರಮಾಣದ ತೆರಿಗೆಯನ್ನು ಕಟ್ಟುತ್ತಾರೆ.

ದಕ್ಷಿಣ ಭಾರತದ ಜೈನರು ಕೃಷಿ ಹಿನ್ನೆಲೆಯಿಂದ ಬಂದವರು. ಒಂದು ವೇಳೆ ದಕ್ಷಿಣ ಭಾರತದ ಜೈನ ಸಮುದಾಯ ವ್ಯಾಪಾರಿಯೊಬ್ಬ ಹೆಚ್ಚು ತೆರಿಗೆಯನ್ನು ಕಟ್ಟುತ್ತಿದ್ದರೆ, ಬಹುಶಃ ಮೂಲತಃ ಅವರು ಉತ್ತರ ಭಾರತದ ಮೂಲದವರಾಗಿರಬಹುದು. ಉತ್ತರ ಭಾರತದ ಶ್ವೇತಾಂಬರ ಪಂಥಧ ಜೈನರ ಮೂಲ ಉದ್ಯೋಗ

ವ್ಯಾಪಾರ, ದಕ್ಷಿಣ ಭಾರತದ ಜೈನರ ಮೂಲ ಉದ್ಯೋಗ ಕೃಷಿ. ಅಂದರೆ ಒಟ್ಟು ತೆರಿಗೆ ಸಲ್ಲಿಸುವ ಸಮುದಾಯದವರನ್ನು ವಿಶ್ಲೇಷಣೆಗೆ ಒಳಪಡಿಸುವ ಮುಖ್ಯ ಉದ್ದೇಶವೇನೆಂದರೆ, ಕೃಷಿ ಹಿನ್ನೆಲೆಯನ್ನು ಹೊಂದಿದವರ ಆದಾಯ ಬಹಳಷ್ಟು ಕಡಿಮೆಯಿದೆ. ಅವರು ಹೆಚ್ಚು ತೆರಿಗೆಯನ್ನು ಕಟ್ಟಲು ಸಾಧ್ಯವಿಲ್ಲ. ಹೀಗಾಗಿ ಕೃಷಿ ವಲಯದಲ್ಲಿರುವಂತಹ ಇಲ್ಲಿಯ ಜೈನ ಸಮುದಾಯದವರು ಕೂಡ ವ್ಯಾಪಾರ ಕ್ಷೇತ್ರದತ್ತ ಬಂದಿಲ್ಲ.

ಇನ್ನೂ ಲಿಂಗಾಯತ ಸಮುದಾಯವನ್ನು ಉದಾಹರಿಸಿ ಹೇಳುವುದಾದರೆ, ಲಿಂಗಾಯತರಲ್ಲಿ ಕೆಲವರು ಕೃಷಿ ವಲಯದಲ್ಲಿದ್ದರೇ ಇನ್ನೂ ಕೆಲವರು ವ್ಯಾಪಾರಿ ವಲಯದಲ್ಲಿರುವರು. ಉದಾಹರಣೆಗೆ ಬಣಜಿಗರು ವ್ಯಾಪಾರಿ ರಂಗದಲ್ಲಿರುವರು. ಕೃಷಿ ಮತ್ತು ವ್ಯಾಪಾರ ಉಭಯ ರಂಗಗಳಲ್ಲಿಯೂ ಲಿಂಗಾಯತ ಸಮುದಾಯದವರು ವ್ಯಾಪಿಸಿಕೊಂಡಿರುವರು. ಆದರೆ ಹಾಲುಮತ ಸಮುದಾಯದ ಕೃಷಿ ಮತ್ತು ವ್ಯಾಪಾರ ಎರಡು ರಂಗದಲ್ಲಿ ವ್ಯಾಪಿಸಿಕೊಂಡಿರದೇ ಕೇವಲ ಕೃಷಿ ರಂಗದಲ್ಲಿ ಮಾತ್ರ ಸೀಮಿತಗೊಂಡಿದೆ. ಪಶುಪಾಲಕರಾದ ಇವರ ಪ್ರಗತಿ ಪಶುಪಾಲನೆಯಿಂದ ಕೃಷಿ ರಂಗಕ್ಕೆ ಮುಂದುವರೆದು ಅಲ್ಲಿಗೆ ಸಿಮೀತಗೊಂಡಿತು. ಒಂದು ವೇಳೆ ವ್ಯಾಪಾರದ ಕಡೆಗೆ ಹೋಗಿದ್ದರೆ ಔದ್ಯೋಗಿಕ ಕ್ಷೇತ್ರದತ್ತ ಅವರು ಹೋಗುತ್ತಿದ್ದರು. ಇವರು ಮೂಲತಃ ಇನ್ನೂ ವ್ಯಾಪಾರಿ ರಂಗಕ್ಕೆ ಬಂದಿಲ್ಲ. ಹೀಗಾಗಿ ಔದ್ಯೋಗಿಕ ರಂಗಕ್ಕೆ ಇವರು ಪಾದಾರ್ಪಣೆ ಮಾಡುವುದು ದೂರದ ವಿಚಾರವೇ ಆಗಿದೆ.

ಟಿಪ್ಪಣಿಗಳು :

೧) ಸುರೇಶ ಚೌಗುಲೆ (ಸಂ) **ಅಬಾಜಿ ನೆನಪಿನ ಬುತ್ತಿ,** ಪ್ರಕಾಶನ. ಅಖಿಲ ಭಾರತ ಜನಮಾನ್ಯ ಧಿ. ವ್ಹಿ. ಎಲ್. ಪಾಟೀಲ ಫೌಂಡೇಶನ್ ರಾಯಬಾಗ, ೨೦೧೬ ಪುಟ-೧೬

೨) ವಕ್ತೃ ಅಣ್ಣಪ್ಪ ಪೀರಪ್ಪ ಘಂಟಿ. ಬೆಕ್ಕೇರಿ

೩) ವಕ್ತೃ ಆರ್. ಎಸ್. ಬನಹಟ್ಟಿ. ಹಿಡಕಲ್ಲ

೪) ವಕ್ತೃ ವಸಂತರಾವ ಸಿದಗೌಡ ಪಾಟೀಲ. ಹಿಡಕಲ್ಲ

೫) ವಕ್ತೃ ಹಾಲಪ್ಪ ನಿಂಗಪ್ಪ ಫಾಳಿ. ಶಿರಗೂರ

೬) ವಕ್ತೃ ಸಂಜೀವಕುಮಾರ ಸಿದ್ದಲಿಂಗಪ್ಪ ಬಾನೆ. ಮೊರಬ

೭) ವಕ್ತೃ ಬಾಳಕೃಷ್ಣ ಆದಪ್ಪ ಜಂಬಗಿ. ಹಾರೂಗೇರಿ

೮) ವಕ್ತೃ ಭೀಮಪ್ಪ ಇಟ್ಟಪ್ಪ ಬನಶಂಕರಿ. ಮುಗಳಖೋಡ

೯) ವಕ್ತೃ ವಾಸುದೇವ ಭೀಮರಾಯ ಗಲಗಲಿ. ಹಿಡಕಲ್ಲ

೧೦) ವಕ್ತೃ ವಿಠ್ಠಲ ನಿಂಗಪ್ಪ ಬಂಡಗಾರ. ಹಿಡಕಲ್ಲ

೧೧) ವಕ್ತೃ ಭೀಮರಾವ ಲಗಮಣ್ಣ ಘಂಟಿ. ಹಿಡಕಲ್ಲ

೧೨) ವಕ್ತೃ ತುಕಾರಾಮ ಶಂಕರ ವಂಟಗೂಡಿ. ಹಿಡಕಲ್ಲ

೧೩) ವಕ್ತೃ ಬಾಳಕೃಷ್ಣ ಆದಪ್ಪ ಜಂಬಗಿ. ಹಾರೂಗೇರಿ

೧೪) ಮಂಜುನಾಥ ಬಮ್ಮನಕಟ್ಟಿ (ಲೇ) **ಸಹಕಾರಿ ಪಿತಾಮಹ ಶಿದ್ಧನಗೌಡ ಪಾಟೀಲ** ಡಾ. ಎಫ್. ಟಿ. ಹಳ್ಳಿಕೇರಿ (ಸಂ) **ಹಾಲುಮತ ಅಧ್ಯಯನ-೧** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦ ಪುಟ-೧೨೧

೧೫) ವಕ್ತೃ ಪಾಂಡುರಂಗ ಮಾರುತಿ ಧರ್ಮಟ್ಟಿ. ಹಾರೂಗೇರಿ

೧೬) ವಕ್ತೃ ಸದಾಶಿವ ವಸಂತ ದೇಶಿಂಗೆ. ಬಿರಡಿ

ಅಧ್ಯಾಯ : ಏಳು

ಸಮಾರೋಪ

ರಾಯಬಾಗ ಪರಿಸರದ ಹಾಲುಮತ ದೈವಗಳ ಸಾಂಸ್ಕೃತಿಕ ಅಧ್ಯಯನ, ಪರಂಪರಾಗತವಾಗಿ ಬೆಳೆದು ಬಂದ ಜನಪದೀಯ ಕಲೆಗಳು, ಜನಾಂಗದಲ್ಲಿ ಕಂಡುಬರುವ ವಿವಿಧ ಪಂಗಡಗಳು ಮತ್ತು ಸಾಧಕರು, ಜೊತೆಗೆ ಆಧುನಿಕ ಸಂದರ್ಭದಲ್ಲಾದ ಹಲವು ಸ್ಥಿತ್ಯಂತರಗಳನ್ನು ವಿಶ್ಲೇಷಿಸಿದೆ. ಹಾಲುಮತದ ಉಗಮ, ವಿಕಾಸವನ್ನು ಅಧ್ಯಯನಕ್ಕೆ ಹಿನ್ನೆಲೆಯಾಗಿ ಬಳಸಿಕೊಂಡು ಚರ್ಚಿಸಲಾಗಿದೆ. ಅಧ್ಯಯನದ ಪ್ರಮುಖ ಫಲಿತಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

ರಾಯಬಾಗ ತಾಲೂಕಿನಲ್ಲಿ ಬಹುಸಂಖ್ಯಾತರು (ಒಟ್ಟು ಜನಸಂಖ್ಯೆಯ ಪ್ರತಿಶತ ೩೮ ರಷ್ಟು) ಕುರುಬ ಸಮುದಾಯದವರಿದ್ದಾರೆ. ಒಂದು ಕಾಲಕ್ಕೆ ಪಶುಪಾಲನೆ ಅಥವಾ ಕೃಷಿಯೊಂದಿಗೆ ಸಾಂಸ್ಕೃತಿಕವಾಗಿ ಅತ್ಯಂತ ಕಚ್ಚಾ ಮಾದರಿಯಲ್ಲಿದ್ದ ರಾಯಬಾಗ ಪರಿಸರದ ಹಾಲುಮತ ಜನಸಮುದಾಯ ಶಿಕ್ಷಣವೇ ಕಾರಣವಾಗಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಒಮ್ಮೇಲೆ ಜಾಗೃತಗೊಂಡು ಸ್ಪರ್ಧಾತ್ಮಕ ರೀತಿಯಲ್ಲಿ ಬೆಳವಣಿಗೆ ಕಂಡಿದ್ದು ಚಾರಿತ್ರಿಕ ಸತ್ಯವಾಗಿ ತೋರುತ್ತದೆ. ಜನಸಂಖ್ಯೆ ಮತ್ತು ಶಿಕ್ಷಣದ ಅನುಪಾತವನ್ನು ನೋಡಿದರೆ ಬಹುಶಃ ರಾಯಬಾಗ ತಾಲೂಕಿನ ಹಾಲುಮತ ಸಮುದಾಯ ಸಾಧಿಸಿದಷ್ಟು ಸಾಧನೆಯನ್ನು ಕರ್ನಾಟಕದ ಉಳಿದ ಪ್ರದೇಶದಲ್ಲಿ ಕಾಣುವುದು ಕಷ್ಟ.

ಪ್ರಬಂಧದ ಎರಡನೇ ಅಧ್ಯಾಯದಲ್ಲಿ ಒಟ್ಟಾರೆ ಹಾಲುಮತದ ಉಗಮ ಮತ್ತು ವಿಕಾಸದ ಆರಂಭಿಕ ಹೆಜ್ಜೆಗಳನ್ನು ಪೌರಾಣಿಕ ಮತ್ತು ಚಾರಿತ್ರಿಕ ಮೂಲಗಳಿಂದ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಾಲುಮತದ ಮೂಲ ನೆಲೆಗಳು ಇಲ್ಲಿರುವುದನ್ನು ಜನಪದ ಮಹಾಕಾವ್ಯಗಳು ಉಲ್ಲೇಖಿಸುತ್ತಿವೆಯಾದರೂ ಅವುಗಳಿಗೆ ಚಾರಿತ್ರಿಕವಾದ ದಾಖಲೆಗಳೂ ಸಿಗುವುದಿಲ್ಲ. ಹಾಲುಮತದವರು ಪಶುಪಾಲಕರಾಗಿದ್ದು ಆರಂಭದಲ್ಲಿ ಅಲೆಮಾರಿಗಳು ಮತ್ತು ಅನಕ್ಷರಸ್ಥರಾಗಿರುವುದರಿಂದ ಇವರ ಚರಿತ್ರೆಯನ್ನು ಕಟ್ಟುವಲ್ಲಿ ಆಕರಗಳ ಕೊರತೆ ಎದುರಾಗುವುದು ಸಹಜ. ಆದ್ದರಿಂದ ಮೌಖಿಕ ಪರಂಪರೆಯ ಹೇಳಿಕೆಗಳನ್ನು ಇಲ್ಲಿ ಅಧಿಕವಾಗಿ ಬಳಸಿಕೊಳ್ಳಲಾಗಿದೆ.

ಐತಿಹ್ಯಗಳು ಮತ್ತು ಜನಪದ ಮಹಾಕಾವ್ಯಗಳಲ್ಲಿ ಬರುವಂತಹ ಘಟನೆಗಳು ಸಾಮಾನ್ಯವಾಗಿ ಎಲ್ಲ ಕಡೆಗೂ ಒಂದೇ ತೆರನಾಗಿರುವಂತೆ ಕಂಡು ಬರುತ್ತವೆ. ಸ್ಥಳೀಯ ಚರಿತ್ರೆಯನ್ನು ಕಟ್ಟುವ ಸಂದರ್ಭದಲ್ಲಿ ಅಲ್ಲಿರುವ ಪವಾಡಗಳು ಮತ್ತು ಘಟನೆಗಳು ಆಯಾ ಸ್ಥಳೀಯ ಚರಿತ್ರೆಗಳ ಮೇಲೆ ಪ್ರಭಾವ ಬೀರುವುದನ್ನು ಕಾಣುತ್ತೇವೆ. ಉದಾಹರಣೆಗೆ, ರಾಯಬಾಗ ಪರಿಸರದಲ್ಲಿರುವ ಒಂದು ಪ್ರಮುಖ ದೈವ ಮಾಯವ್ವ, ಇವಳ ದೇವಸ್ಥಾನ ಚಿಂಚಲಿಯಲ್ಲಿರುವುದು. ಮಾಯವ್ವ, ಬೀರಪ್ಪನ ಅಕ್ಕನೆಂಬ ಪ್ರಚಲಿತ ಸಂಗತಿಗಳನ್ನಿಟ್ಟುಕೊಂಡು ಜನಪದ ಮಹಾಕಾವ್ಯಗಳು, ಈ ಹಾಲುಮತದ ಮೂಲ ನೆಲೆಗಳನ್ನು ಅಥವಾ ಹಾಲುಮತದ ಮಹಾನಾಯಕನಾಗಿರುವಂತಹ ಬೀರಪ್ಪ(ಕರೇಸಿದ್ಧ)ನ ಜನನ, ಬಾಲ್ಯ ಮತ್ತು ಅವನ ಲೀಲೆಗಳ ಪೌರಾಣಿಕ ಘಟನೆಗಳಿಗೆ ಸ್ಥಳೀಯ ಸ್ಪರ್ಶವನ್ನು ಕೊಡಲಾಗಿದೆ. ಇದಕ್ಕೆ ಪೂರಕವಾದ ಮತ್ತು ವೈವಿಧ್ಯ ರೀತಿಯಲ್ಲಿರುವ

ಐತಿಹ್ಯಗಳನ್ನು ಜೋಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ದೃಷ್ಟಿಯಿಂದ ಇಂತಹ ಅನೇಕ ಐತಿಹ್ಯಗಳನ್ನು ಕರ್ನಾಟಕದ ತುಂಬಾ ಮತ್ತು ಕರ್ನಾಟಕದ ಹೊರಗಿನಿಂದ ಕ್ರೋಢೀಕರಿಸಿ ಚರ್ಚಿಸಲಾಗಿದೆ. ಪ್ರಸ್ತುತ ಪ್ರಬಂಧ ಇದಕ್ಕೊಂದು ಪ್ರೇರಣಾ ನೆಲೆಯೆಂದು ಭಾವಿಸುತ್ತೇನೆ.

ಈ ಎಲ್ಲ ಅಂಶಗಳನ್ನು ಪರಿಗಣಿಸಿದರೆ ಹಾಲುಮತದ ಉಗಮ ಮತ್ತು ವಿಕಾಸವನ್ನು ನಿರ್ದಿಷ್ಟವಾಗಿ ಕಂಡು ಹಿಡಿಯುವುದು ಕ್ರಮೇಣ ಸಾಧ್ಯವಾಗಬಹುದು. ಆದರೆ ಈ ದಿಸೆಯಲ್ಲಿ ಶಂ. ಬಾ. ಜೋಶಿಯವರು ಮಾಡಿದಂತಹ ಪ್ರಯತ್ನ ಅತ್ಯಂತ ಸುತ್ತ್ಯಾರ್ಹವಾದುದು ಮತ್ತು ಅವರ ಅಂದಿನ ಸಂಶೋಧನೆಗಳೇ ಇವತ್ತಿನ ರಾಮಚಂದ್ರ ಚಿಂತಾಮಣಿ ಢೇರೆಯವರಂತಹ ಸಂಶೋಧನೆಗಳಿಗೆ ಮೂಲ ಅನ್ನುವುದನ್ನು ನಾನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮೂರನೇ ಅಧ್ಯಾಯದಲ್ಲಿ ಹಾಲುಮತದ ನೆಲೆಗಳ ಜೊತೆಗೆ ಅಲ್ಲಿರುವ ದೈವಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ. ಇವು ಇಡೀ ಹಾಲುಮತ ಜನ ಸಮುದಾಯವನ್ನು ಆಕರ್ಷಿಸುವಂತಹ ಪ್ರಬಲ ಕೇಂದ್ರಗಳಾಗಿವೆ. ಇಲ್ಲಿ ಹಲವು ವೈಶಿಷ್ಟ್ಯಗಳಿಂದ ಕೂಡಿರುವ ಈ ಹಾಲುಮತ ದೈವಗಳನ್ನು ಒಟ್ಟಾಗಿ ಅಭ್ಯಸಿಸಲಾಗಿದೆ. ಆದರೆ ಒಂದೊಂದು ದೈವಗಳು (ಎಂ. ಫಿಲ್. ಅಥವಾ ಪಿ. ಎಚ್‌ಡಿಯಂತಹ) ಪ್ರತ್ಯೇಕವಾದ ಅಧ್ಯಯನಗಳನ್ನು ಕೈಕೊಳ್ಳುವಷ್ಟು ಸಮೃದ್ಧವಾಗಿದ್ದು ಸ್ವತಂತ್ರ ಅಧ್ಯಯನಗಳಾಗಿ ಮುಂದುವರೆಯಬೇಕಾಗಿದೆ. ಆಗ ಮಾತ್ರ ಹಾಲುಮತ ಸಮುದಾಯದ ಸಾಂಸ್ಕೃತಿಕ ನೆಲೆಗಳು ನೈಜವಾಗಿ ಅನಾವರಣಗೊಳ್ಳಲು ಸಾಧ್ಯ.

ರಾಯಬಾಗ ಪರಿಸರದ ಎಲ್ಲ ಹಾಲುಮತ ದೈವಗಳ ಮೂರ್ತಿಗಳು ಮಾತ್ರ ಸ್ಪಷ್ಟ ವಿನ್ಯಾಸಗಳನ್ನು ಹೊಂದಿರದೆ ಅಸ್ಪಷ್ಟವಾಗಿವೆ. ಇದು ಹಾಲುಮತ ಸಮುದಾಯದಲ್ಲಿ ಇವತ್ತಿಗೂ ಕೂಡ ಅಮೂರ್ತ ಕಲ್ಪನೆ ಜೀವಂತವಾಗಿರುವುದನ್ನು ತಿಳಿಸುತ್ತದೆ.

ಇದೇ ಅಧ್ಯಾಯದಲ್ಲಿ ಹಾಲುಮತ ನೆಲೆಗಳ ಸಾಂಸ್ಕೃತಿಕ ಚರಿತ್ರೆಯನ್ನು ಅಗೆಯಲಾಗಿದೆ. ಕರೇಸಿದ್ಧ, ಅರಣ್ಯಸಿದ್ಧ, ಹಾಲಸಿದ್ಧ ಮುಂತಾದ ಎಲ್ಲ ಸಿದ್ಧರೂ ಹಾಲುಮತ ಸಮುದಾಯದ ಸ್ಥಳೀಯ ನಾಯಕರು. ಆ ಚಾರಿತ್ರಿಕ ಪುರುಷರು ಕಾಲಾನಂತರದಲ್ಲಿ ದೈವಗಳಾಗಿ, ನಂತರ ಪುರಾಣ ಪುರುಷರಾಗಿ ಮಾರ್ಪಟ್ಟಿರುವುದು ಖಚಿತ. ಆದರೆ ಚಾರಿತ್ರಿಕ ಆಕರಗಳ ಅಲಭ್ಯತೆಯಿಂದಾಗಿ ಆ ಮೂಲ ನೆಲೆಗಳ ಕುರಿತು ಅಂತಿಮ ತೀರ್ಮಾನ ನೀಡುವುದು ಸಾಧ್ಯವಾಗುವುದಿಲ್ಲ.

ಇಡೀ ಉತ್ತರ ಕರ್ನಾಟಕದಲ್ಲಿ ಹಾಲುಮತ ಸಮುದಾಯದಲ್ಲಿ ಅತ್ಯಂತ ಪ್ರಸಿದ್ಧವಾದ ಕರೇಸಿದ್ಧನ ದೇವಸ್ಥಾನ ಇರುವುದು ಜಮಖಂಡಿ ತಾಲೂಕಿನ ಕ್ವಾಣೂರಿನಲ್ಲಿ. ಇದನ್ನು ಹೊರತು ಪಡಿಸಿದರೇ ಕರೇಸಿದ್ಧೇಶ್ವರ ದೇವಸ್ಥಾನ ಇರುವುದು ಅಲಕನೂರಿನಲ್ಲಿ. ಬೀರದೇವನಿಗೆ ಇರುವ ಇನ್ನೊಂದು ಹೆಸರು ಕರೇಸಿದ್ಧ. ಈ ಬೀರ(ವೀರ)ನು ಒಬ್ಬ ಸಿದ್ಧನೇ? ಬಹುಶಃ ಬೀರದೇವನೂ ಕೂಡ ಒಬ್ಬ ಸಿದ್ಧನಿರಬಹುದು. ಯಾಕೆಂದರೆ ಬೀರಸಿದ್ಧನೆಂಬ ಹೆಸರುಗಳು ಕೂಡ ಈ ಪರಿಸರದಲ್ಲಿ ಕಂಡು ಬರುತ್ತವೆ. ಹೀಗಾಗಿ ಕರೇಸಿದ್ಧನೂ ಕೂಡ ಸಿದ್ಧ ಪರಂಪರೆಗೆ ಸೇರಿದ ಒಬ್ಬ ವ್ಯಕ್ತಿ.

ಈ ಪರಿಸರದ ಹಾಲುಮತ ದೈವಗಳೆಲ್ಲವು ಸಿದ್ಧ ಪರಂಪರೆಗೆ ಸಂಬಂಧಿಸಿದವು. ಈ ಸಿದ್ಧ ಪರಂಪರೆಯ ಕುರಿತಾಗಿಯೇ ಪೌರಾಣಿಕ ಅಥವಾ ಚಾರಿತ್ರಿಕ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿಯೇ ಅಧ್ಯಯನ ನಡೆಯುವ ಅಗತ್ಯವಿದೆ. ರಾಯಬಾಗ ಪ್ರದೇಶವು ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವುದರಿಂದ ಆ ಎರಡು ರಾಜ್ಯಗಳ ಗಡಿಯಲ್ಲಿ ಈ ಸಿದ್ಧ ಪರಂಪರೆ ವ್ಯಾಪಕವಾಗಿ ವ್ಯಾಪಿಸಿಕೊಂಡಿದೆ. ಉದಾಹರಣೆಗಾಗಿ ಈ ತಾಲೂಕಿನ ಪ್ರಮುಖ ಹಾಲುಮತ ದೈವಗಳಲ್ಲಿ ಒಂದಾದ ಹಾಲಸಿದ್ಧೇಶ್ವರನ ಮೂಲ ನೆಲೆ ಮಹಾರಾಷ್ಟ್ರದ ಗಡಿಯಲ್ಲಿರುವ ಕರ್ನಾಟಕದ ನಿಪ್ಪಾಣಿ ಸಮೀಪದಲ್ಲಿದ ಅಪ್ಪಾಚಿವಾಡಿ. ಆದರೆ ಆತನಿಗೆ ಸಂಬಂಧಿಸಿದಂತಹ ಎಲ್ಲ ಕಥನಗಳು ಕೊಲ್ಹಾಪೂರದ ಪ್ರದೇಶಕ್ಕೆ ಸಂಬಂಧಿಸಿದವುಗಳಾಗಿವೆ.

ಹಾಲುಮತದ ಇನ್ನೊಂದು ಮಹಾದೈವವೆಂದರೆ ಕಡೋಲಿಯ ವಿಠ್ಠಲರಾಯ. ಇವನು ಮಹಾರಾಷ್ಟ್ರದ ಕೊಲ್ಹಾಪೂರ ಸಮೀಪವೇ ನೆಲೆಸಿರುವನು. ಈ ದೇವತೆಗೂ ಮತ್ತು ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರನಿಗೂ ನಂಟಿರುವುದು ಕಂಡು ಬರುತ್ತದೆ. ಈತನೂ ಸಿದ್ಧ ಪರಂಪರೆಗೆ ಸೇರಿದವನಾಗಿದ್ದು ಇವನ ಸಂಸ್ಕೃತಿಯೂ ಇಂದು ಪಕ್ಕದ ಮಹಾರಾಷ್ಟ್ರದ ಗಡಿ ತಾಲೂಕಿನ ಚಿಕ್ಕೋಡಿಗೂ ವ್ಯಾಪಿಸಿಕೊಂಡಿದೆ. ಈ ವಿಚಾರವನ್ನು ಗಮನಿಸಿದಾಗ ರಾಯಬಾಗ ಪರಿಸರದ ಸಿದ್ಧ ಪರಂಪರೆಯೂ ಮತ್ತು ಮಹಾರಾಷ್ಟ್ರದ ಗಡಿಯಲ್ಲಿರುವಂತಹ ಸಿದ್ಧ ಪರಂಪರೆಯೂ ಎರಡು ಒಂದೇ ಆಗಿವೆ. ಇದರ ಬಗ್ಗೆ ವ್ಯಾಪಕವಾಗಿ ಅಧ್ಯಯನ ನಡೆಸುವ ಅಗತ್ಯವನ್ನು ಈ ಪ್ರಬಂಧ ಪ್ರತಿಪಾದಿಸುತ್ತದೆ.

ರಾಯಬಾಗ ಪರಿಸರದ ಚಿಂಚಲಿಯ ಮಾಯವ್ವ ಇಡೀ ಉತ್ತರ ಕರ್ನಾಟಕ ಮತ್ತು ಕೊಂಕಣ, ಮಹಾರಾಷ್ಟ್ರಗಳ ಪ್ರಮುಖ ಸ್ತ್ರೀ ದೇವತೆ. ಇವಳ ಕುರಿತಾಗಿರುವ ಸಾಂಸ್ಕೃತಿಕ ನೆಲೆಯನ್ನು ನಾವು ಅಗೆಯ ಬೇಕಾದರೆ ಕೇವಲ ಕರ್ನಾಟಕದ ರಾಯಬಾಗ ಪರಿಸರವನ್ನಷ್ಟೇ ಸೀಮಿತಗೊಳಿಸಿದರೆ ಸಾಧ್ಯವಾಗುವುದಿಲ್ಲ. ನೆರೆಯ ಮಹಾರಾಷ್ಟ್ರದ ಕೊಂಕಣ ಪ್ರದೇಶಕ್ಕೂ ನಮ್ಮ ಅಧ್ಯಯನ ವಿಸ್ತರಿಸಬೇಕಾಗಿರುವುದು. ಕಾರಣವೇನೆಂದರೆ ಮಾಯವ್ವನ ತವರುಮನೆ ಮಹಾರಾಷ್ಟ್ರದ ಕೊಂಕಣ. ಹೀಗಾಗಿ ಇವಳ ಕುರಿತಾಗಿರುವಂತ ಕನ್ನಡ ಜಾನಪದ ಸಾಹಿತ್ಯಕ್ಕಿಂತಲೂ ಮರಾಠಿ ಜಾನಪದ ಸಾಹಿತ್ಯ ವಿಪುಲವಾಗಿ ದೊರೆಯುತ್ತದೆ. ಆದರೆ ನಾವು ಇಲ್ಲಿಯವರೆಗೆ ಸ್ಥಳೀಯವಾಗಿ ದೊರೆಯುವ ಐತಿಹ್ಯ, ನಂಬಿಕೆ, ಚರಿತ್ರೆ, ಜಾನಪದ ಸಾಹಿತ್ಯ ಅದರಲ್ಲಿಯೂ ಡೊಳ್ಳಿನ ಹಾಡುಗಳನ್ನಿಟ್ಟುಕೊಂಡು ಲಭ್ಯವಾಗುವ ಆಕರಗಳನ್ನು ಆಧರಿಸಿ ಮಾಯವ್ವನ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದೇವೆ. ಅವಳ ಕುರಿತಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಪರಿಪೂರ್ಣಗೊಳ್ಳಬೇಕಾದರೆ ಮರಾಠಿ ಜಾನಪದ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸುವ ಅನಿವಾರ್ಯತೆ ಎದ್ದು ಕಾಣುತ್ತದೆ. ಅಂದರೆ ಇಲ್ಲಿ ಕನ್ನಡದ ಭಾಷಿಕ ಸೀಮೆಯನ್ನು ದಾಟಿ ಮರಾಠಿ ಭಾಷಿಕ ಅಧ್ಯಯನವನ್ನು ಕೈಕೊಳ್ಳುವ ಅವಶ್ಯಕತೆಯಿದೆ.

ರಾಯಬಾಗ ಪರಿಸರದ ಇನ್ನೊಂದು ವಿಶೇಷವೆಂದರೆ ಇಲ್ಲಿರುವ ಹಾಲುಮತ ದೈವಗಳು ಕೇವಲ ಹಾಲುಮತ ಸಮುದಾಯಕಷ್ಟೇ ಸಿಮೀತಗೊಂಡಿಲ್ಲ. ಇಂದು ಈ ಎಲ್ಲ ದೈವಗಳು ಜಾತ್ಯಾತೀತವಾಗಿ ಮತ್ತು ಧರ್ಮಾತೀತವಾಗಿ ಅನ್ಯ ಸಮುದಾಯದವರಿಂದ ಪೂಜೆಗೊಳ್ಳುತ್ತಿವೆ. ಉದಾಹರಣೆಗೆ ಯಲ್ಪಾರಟ್ಟಿಯ

ಅರಣ್ಯಸಿದ್ಧೇಶ್ವರ ದೇವಸ್ಥಾನದ ಆಡಳಿತ ಮಂಡಳಿಯಲ್ಲಿರುವ ಬಹುಸಂಖ್ಯಾತರು ಲಿಂಗಾಯತರು. ಚಿಂಚಲಿಯ ಮಾಯವ್ವನ ಪೂಜೆಯ ಒಂದು ಪಾಲ(ಹಕ್ಕ)ನ್ನು ಲಿಂಗಾಯತರು ಪಡೆದಿರುವರು. ಕಂಕಣವಾಡಿಯ ಹಾಲಸಿದ್ಧ, ಗಜಬರಸಾಬನನ್ನು ಸೋಲಿಸಿ ಅವನಿಂದ ಹುದೆ(ಖಡ್ಗ)ವನ್ನು ಕಾಣಿಕೆಯಾಗಿ ಪಡೆದುಕೊಂಡ. ಅದು ನಿತ್ಯ ದೇವಾಲಯದಲ್ಲಿ ಪೂಜೆಗೊಳ್ಳುತ್ತಿರುವುದರ ಜೊತೆಗೆ ದೇವಾಲಯವು ಇಂಡೋ-ಇಸ್ಲಾಮಿಕ ಶೈಲಿಯಲ್ಲಿ ನಿರ್ಮಿತವಾಗಿದ್ದು ಹಿಂದೂ-ಮುಸ್ಲಿಂ ಭಾವೈಕ್ಯದ ಸಂಕೇತವಾಗಿದೆ. ಇದು ಸಾಂಸ್ಕೃತಿಕ ಸಯನ್ವಯವನ್ನು ತೋರಿಸುತ್ತದೆ. ಇಂತಹ ಭಾವೈಕ್ಯದ ನೆಲೆಗಳನ್ನು ಬರವಣಿಗೆಗಳ ಮೂಲಕ ಮುಂದಿನ ಜನಾಂಗಕ್ಕೂ ನಾವು ಕೊಂಡೊಯ್ಯಬೇಕಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಹಾಲುಮತದ ಆರಾಧನಾ ಕಲೆಗಳಾದ ಡೊಳ್ಳು ಕುಣಿತ (ಡೊಳ್ಳು ಬಾರಿಸುವುದು), ಡೊಳ್ಳಿನ ಹಾಡುಗಳು, ದಟ್ಟಿ ಕುಣಿತ, ಡೊಳ್ಳಿನ ಕೈ ಪಟ್ಟು ವಾದನ, ಅಲಗ ಹಾಯುವುದು ಮತ್ತು ಸಾಮಾಜಿಕ ಆಚರಣೆಗಳಾದ ವಿವಾಹ, ಗೋತ್ರಗಳು ಮತ್ತು ಬೆಡಗುಗಳು, ಈರಮುಖ (ವೀರಮುಖ), ಗುಗ್ಗಳ, ಹೊಂಗೊಡ, ಧಾರ್ಮಿಕ ಆಚರಣೆಗಳಾದ ಭಂಡಾರ ಹಿಡಿಯುವುದು (ಭಟ್ಟ ಕೊಡುವುದು), ಶಿವಸ್ಥಾನ, ಕರೀ ಕಟ್ಟುವುದು, ನಂಬಿಕೆ-ಸಂಪ್ರದಾಯಗಳಾದ ದೇವರ ಕೌಲ, ಭಂಡಾರ ಸೇವೆ ಮತ್ತು ಮಹಿಮೆ, ಕಂಬಳಿ (ಜೀವಂತ ಮಡಿ ಗದ್ದುಗೆ), ಕುರುಬರ ಬೋನಿಗೆ, ಹಟ್ಟಿ ಹಬ್ಬ ಮುಂತಾದಗಳ ಮುಖಾಂತರ ವಿವರಿಸಲಾಗಿದೆ. ಪರಂಪರಾಗತವಾಗಿ ಬೆಳೆದು ಬಂದಿರುವ ಇವುಗಳ ಅಧ್ಯಯನ ಕುತೂಹಲಕಾರಿಯಾಗಿದೆ.

ಈ ಎಲ್ಲ ಆರಾಧನಾ ಕಲೆ, ಆಚರಣೆ, ನಂಬಿಕೆ-ಸಂಪ್ರದಾಯಗಳು ಹಲವು ನೆಲೆಗಳಲ್ಲಿ ಹುಟ್ಟಿಕೊಂಡ ಜನಪದ ಸಂಸ್ಕೃತಿ ಅಧ್ಯಯನದ ಪ್ರಮುಖ ಆಕರಗಳಾಗಿವೆ. ಇವು ಮುಖ್ಯವಾಗಿ ಜನಪದರ ವೈಯಕ್ತಿಕ ಹಾಗೂ ಸಾಮುದಾಯಿಕ ಸಂವೇದನೆಗಳ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಈ ಕಾರಣದಿಂದಲೇ ಈ ಪರಿಸರದಲ್ಲಿ ಹಾಲುಮತ ಸಂಸ್ಕೃತಿಯ ಹಿನ್ನೆಲೆಯ ಹಲವು ಕಲೆ, ಆಚರಣೆ, ಸಂಪ್ರದಾಯಗಳು ಇಂದಿಗೂ ಅಸ್ತಿತ್ವದಲ್ಲಿವೆ. ವಿಶೇಷವೆಂದರೆ ಇವು ಕೇವಲ ಹಾಲುಮತ ಸಮುದಾಯದವರನ್ನು ಮಾತ್ರ ಒಳಗೊಂಡಿಲ್ಲ, ಇನ್ನಿತರ ಸಮುದಾಯಗಳ ಕವಿ-ಕಲಾವಿದರಿಂದಲೂ ರಚನೆಗೊಂಡಿವೆ. ಇದನ್ನು ಗಮನಿಸಿದಾಗ ಹಾಲುಮತ ಸಂಸ್ಕೃತಿ ಎನ್ನುವುದು ಕೇವಲ ಹಾಲುಮತಕ್ಕೆ ಮಾತ್ರ ಸಿಮೀತಗೊಳ್ಳದೆ ಅವರ ದಟ್ಟ ಪ್ರಭಾವದಿಂದಾಗಿ ಅನ್ಯ ಸಮುದಾಯಗಳಲ್ಲಿಯೂ ವ್ಯಾಪಿಸಿರುವುದು ಗಮನಾರ್ಹ ಸಂಗತಿ.

ಈಗಿನ ಆಧುನಿಕತೆಯ ಸಂದರ್ಭದಲ್ಲಿ ಹಾಲುಮತದ ಕಲೆಗಳು ಅವಸಾನದ ಹಂತವನ್ನು ತಲಪುತ್ತಿವೆ. ಆಧುನಿಕ ಸಂವಹನ ಮಾಧ್ಯಮಗಳ ಪ್ರಾಮುಖ್ಯತೆಯಿಂದಾಗಿ ಹಾಲುಮತದ ಕಲೆಗಳೆಲ್ಲ ಕಣ್ಮರೆಯಾಗುತ್ತಿವೆ. ಕಲಾವಿದರು ಕೂಡ ಇದಕ್ಕೆ ಹೊರತಾಗಿಲ್ಲ. ಜನಪದೀಯ ಹಿನ್ನೆಲೆಯ ಹಾಲುಮತ ಕಲೆಗಳನ್ನು ಹಿರಿಯ ಕಲಾವಿದರಿಂದ, ಇಂದಿನ ಮಕ್ಕಳು ಕಲಿಯುವುದಕ್ಕೆ ಆಸಕ್ತಿ ತೋರುತ್ತಿಲ್ಲ. ಆಧುನಿಕ ಶೈಲಿ ಹಾಡುಗಳಂತೆ, ಡೊಳ್ಳಿನ ಹಾಡುಗಳು ಸಾಕಷ್ಟು ಪ್ರಮಾಣದಲ್ಲಿ ಕಿರಿಯ ಕಲಾವಿದರಿಗೆ ರವಾನೆ ಆಗುತ್ತಿಲ್ಲ. ಸಿನಿಮಯ ಶೈಲಿಯ ಹಾಡುಗಳೇ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿವೆ. ಇದೇ ಪರಂಪರೆ ಇನ್ನೂ ಕೆಲವು ವರ್ಷಗಳವರೆಗೆ ಹೀಗೆಯೇ ಮುಂದುವರೆದರೆ ಪಾರಂಪರಿಕವಾಗಿ ಬಂದಿರುವ ಡೊಳ್ಳಿನ ಹಾಡುಗಳು ಕ್ರಮೇಣ ಕಣ್ಮರೆಯಾಗುವ ಸಾಧ್ಯತೆ ಇದೆ.

ನಿಜವಾದ ಜನಪದ ಕಲೆಗಳು ಆಧುನಿಕತೆಯ ಜೊತೆ ಎಂದೂ ಪೈಪೋಟಿ ಮಾಡಲಾರವು. ಅವುಗಳಿಗೆ ತಮ್ಮದೇ ಆದ ಪರಂಪರಾಗತ ನಡೆಯಿದೆ. ಜನಪದ ಕಲೆಗಳು ಅಳಿವಿನ ಅಂಚಿಗೆ ಬಂದು ನಿಲ್ಲಲು ಆಧುನಿಕತೆಯೊಂದೇ ಕಾರಣವಲ್ಲ. ಇಂದು ಗ್ರಾಮ ಸಂಸ್ಕೃತಿ ಮತ್ತು ಸಮುದಾಯ ಸಂಸ್ಕೃತಿಯ ಸೃಜನಶೀಲತೆ ಮಾಯವಾಗುತ್ತಿದೆ ಎನ್ನುವ ಆತಂಕ ಉಂಟಾಗುತ್ತಿದೆ. ಆದ್ದರಿಂದ ಇಂದು ಕವಲು ದಾರಿಯಲ್ಲಿರುವ ಹಾಲುಮತದ ಆರಾಧನಾ ಕಲೆಗಳನ್ನು ಆರೋಗ್ಯಕರವಾದ ನೆಲೆಯಲ್ಲಿ ಉಳಿಸಿಕೊಳ್ಳುವ ಬಗ್ಗೆ ಆಲೋಚನೆಗಳನ್ನು ಮಾಡಬೇಕಾಗಿದೆ. ಇಂತಹ ಹಲವಾರು ತಲ್ಲಣಗಳ ಬಗ್ಗೆ ಇಲ್ಲಿ ವಿಶ್ಲೇಷಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಹಾಲುಮತಸ್ಥರಲ್ಲಿ ಕಂಡು ಬರುವ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ, ಒಡೆಯರು, ಈರಗಾರರು ಇನ್ನೂ ಮೊದಲಾದ ಒಳಪಂಗಡಗಳ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗಿದೆ. ಒಂದು ಸಮುದಾಯದಲ್ಲಿರುವ ಒಳಪಂಗಡಗಳು ಆ ಸಮುದಾಯದ ಸಾಂಸ್ಕೃತಿಕ ಅಸ್ಮಿತೆಗಳಾಗಿರುವುದರಿಂದ ಸಮುದಾಯದ ಅಭಿವೃದ್ಧಿಗೆ ಇಂಥ ಅಧ್ಯಯನಗಳು ಮಾರ್ಗದರ್ಶಿಗಳಾಗಿವೆ. ಹೀಗಾಗಿ ರಾಯಬಾಗ ಪರಿಸರದಲ್ಲಿ ಕಂಡು ಬರುವ ವಿವಿಧ ಪಂಗಡಗಳ ಮೂಲಕ ಹಾಲುಮತ ಸಮುದಾಯದ ಚರಿತ್ರೆಯನ್ನು ಸಮಷ್ಟಿ ನೆಲೆಯಲ್ಲಿ ಅರ್ಥೈಸುವ ಮತ್ತು ಕಟ್ಟಿಕೊಡುವ ಮುಖ್ಯ ಉದ್ದೇಶವನ್ನು ಇಲ್ಲಿ ಸಾಧಿಸಲಾಗಿದೆ.

ಈ ಪರಿಸರವು ಪಶುಪಾಲನೆಗೆ ಅದರಲ್ಲಿಯೂ ಕುರಿ, ಮೇಕೆಗಳ ಸಾಕಾಣಿಕೆಗೆ ತುಂಬಾ ಅನುಕೂಲವಾಗಿರುವುದರಿಂದ ಇಲ್ಲಿ ಹಾಲುಮತ ನೆಲೆಗಳು ಸ್ಥಾಪಿತವಾಗಿವೆ. ಕಾರಣವೇನೆಂದರೆ ಒಂದು ಕಡೆ ನದಿ ಪಾತ್ರವಿದ್ದು ಇನ್ನೊಂದು ಕಡೆ ಕುರಿ ಮೇಕೆಗಳನ್ನು ಮೇಯಿಸುವುದಕ್ಕೆ ಬೇಕಾದ ಮೊರಡಿ ಪ್ರದೇಶವಿದೆ. ಇಡೀ ರಾಯಬಾಗ ಪರಿಸರದ ಭೂಗೋಳವನ್ನು ಅನುಲಕ್ಷಿಸಿ ಹೇಳುವುದಾದರೆ ಇಲ್ಲಿ ಸಣ್ಣ-ಪುಟ್ಟ, ಬೆಟ್ಟ-ಗುಡ್ಡಗಳಿಂದ ಕೂಡಿದಂತಹ ಸಮತಟ್ಟಲ್ಲದ ಭೂ ಪ್ರದೇಶವನ್ನು ಕಾಣುತ್ತೇವೆ. ಯಾವಾಗ ಈ ಪ್ರದೇಶವು ನೀರಾವರಿ ಸೌಲಭ್ಯಕ್ಕೆ ಒಳಗಾಯಿತೋ ಆಗ ಇದು ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿತವಾಯಿತು. ಆಗ ಇವರು ಪಶುಪಾಲನೆ ಹಂತದಿಂದ ಕೃಷಿ ಹಂತದೆಡೆಗೆ ವಾಲಿದರು. ಈ ಸಾಮಾಜಿಕ ಸ್ಥಿತ್ಯಂತರಕ್ಕೂ ಕಾರಣವಾದ ಅಂಶವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಹಾಲುಮತದ ಒಳಪಂಗಡಗಳಾದ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣಗಳು ವಿಶೇಷವಾದ ಭೇದಭಾವ ಹೊಂದಿದ್ದು ಅಧ್ಯಯನದ ದೃಷ್ಟಿಯಿಂದ ಮುಖ್ಯವಾದವುಗಳಾಗಿವೆ. ಉಣ್ಣೆ ಕಂಕಣದ ಹಂತವು ಪಶುಪಾಲನೆಯ ಘಟ್ಟವನ್ನು ತಿಳಿಸಿದರೆ ಹತ್ತಿ ಕಂಕಣದ ಘಟ್ಟವು ಇವರು ಕೃಷಿಯೆಡೆಗೆ ಸಾಗಿಬಂದದ್ದನ್ನು ತಿಳಿಸುತ್ತದೆ. ಈ ಪರಿಸರದಲ್ಲಿ ಹತ್ತಿ ಕಂಕಣದವರು ಉಣ್ಣೆ ಕಂಕಣದವರ ಸಂಖ್ಯೆಗಿಂತ ಹೆಚ್ಚಾಗಿ ಕಂಡು ಬರುವುದರ ಹಿಂದಿನ ಕಾರಣವೇನೆಂದರೆ ಇವರು ಪಶುಪಾಲನಾ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಯ ಕಡೆಗೆ ವಾಲಿದರ ಲಕ್ಷಣವಾಗಿದೆ. ಹೀಗಾಗಿ ಈ ಎರಡು ಪಂಗಡಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಲಾಗಿದೆ.

ಎರಡು ಪಂಗಡಗಳ ಮಧ್ಯೆ ವೈವಾಹಿಕ ಸಂಬಂಧವನ್ನು ಬಿಟ್ಟು ಬೇರೆಲ್ಲ ವ್ಯವಹಾರಗಳು ಭಿನ್ನ-ಭೇದವಿಲ್ಲದೆ ನಡೆಯುತ್ತವೆ. ಆದರೆ ವಿವಾಹಗಳು ಮಾತ್ರ ನಿಷೇಧಿತವಾಗಿವೆ. ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಕ್ರಮಗಳಲ್ಲಿ ಯಾವುದೇ ಭಿನ್ನ ಭಾವನೆಗಳಿಲ್ಲದೆ ಬೆರೆಯುತ್ತಾರೆ. ಆರಂಭದಲ್ಲಿ ಇದ್ದ ಎರಡು ಪಂಗಡಗಳ ಮಧ್ಯದ ಬಿಗುವು ಸಧ್ಯ ಅಷ್ಟಾಗಿ ಕಂಡು ಬರುತ್ತಿಲ್ಲ. ಇತ್ತೀಚಿಗೆ ಸಮುದಾಯದ ಚಿಂತಕರ

ಆಧುನಿಕ-ಶೈಕ್ಷಣಿಕ ವಿಚಾರಗಳು ಹಾಗೂ ಕನಕದಾಸ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘಟನೆಗಳು ಈ ಎರಡು ಪಂಗಡಗಳನ್ನು ಒಂದೇ ನೆಲೆಯಲ್ಲಿ ಒಂದುಗೂಡಿಸುವ ಕಾರ್ಯದಲ್ಲಿ ಸಹಕಾರಿಯಾಗಿವೆ.

ಕುರುಬರ ಗುರುವರ್ಗ ಒಡೆಯರರಾಗಿದ್ದು ಅವರಲ್ಲಿ ಎರಡು ಪಂಗಡಗಳು. ಒಂದು ಪಂಗಡ ಅರಣ್ಯಸಿದ್ಧನ ಒಡೆಯರು, ಇನ್ನೊಂದು ಪಗಂಡ ಅಮೋಘಸಿದ್ಧನ ಒಡೆಯರು. ಅರಣ್ಯಸಿದ್ಧನ ಮೂಲವನ್ನು ಹೊನ್ನಚೌಡಲ ಮುತ್ಯಾನಲ್ಲಿ ಕಾಣುತ್ತವೆ. ಇವನ ಬೆಡಗು ನಡಟ್ಟಿ ನಾಗರಾಯ. ಈ ಬೆಡಗಿನ ಒಡೆಯರರು ಯಲ್ಪಾರಟ್ಟಿ ಕಂಡು ಬರುವುದು ವಿಶೇಷ.

ಕುರುಬ ಒಳಪಂಗಡದವರು ಒಡೆಯರ ಜೊತೆ ಸಂಬಂಧ ಹೊಂದಲು ಹಿಂದೇಟು ಹಾಕುವರು. ಇದಕ್ಕೆ ಕಾರಣ ಒಡೆಯರ ಜೊತೆ ಸಂಬಂಧ ಬೆಳೆಸಿದಲ್ಲಿ ಕೆಲವು ಕಟ್ಟು ಪಾಡುಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಇವರಿಗೆ ಮಧ್ಯಪಾನ ಮತ್ತು ಮಾಂಸಾಹಾರ ಸೇವನೆ ನಿಷಿದ್ಧ. ಒಡೆಯರು ಶುದ್ಧ ಶಾಕಾಹಾರಿಗಳಾಗಿದ್ದು ನಾಡು ಸಂಸ್ಕೃತಿಯ ಪ್ರತೀಕವಾದರೆ, ಮಾಂಸಾಹಾರಿಗಳಾದ ಕುರುಬರು ಕಾಡು ಸಂಸ್ಕೃತಿಯ ಪ್ರತೀಕವಾಗಿದ್ದಾರೆ. ಈ ವ್ಯವಸ್ಥೆಯಿಂದಾಗಿ ಕುರುಬ ಸಮುದಾಯದ ಗುರುಗಳಾದ ಒಡೆಯರರ ಗುರುಪರಂಪರೆ ಭಾರತದಲ್ಲಿಯೇ ವಿಶಿಷ್ಟವಾದದ್ದು ಮತ್ತು ಅನನ್ಯವಾದದ್ದು. ಪ್ರಾಯಶಃ ಇವರನ್ನು ಕುರುಬ ಲಿಂಗಾಯತರೆಂದು ಪರಿಗಣಿಸಬಹುದಾಗಿದೆ.

ಈರ(ವೀರ)ಗಾರರು ಬೀರಪ್ಪ(ವೀರ)ನ ಆರಾಧಕರು. ಆದರೆ ರಾಯಬಾಗ ಪರಿಸರದ ಚಿಂಚಲಿಯ ಮಾಯವ್ವನಿಗೆ ಈರಗಾರ ಸೇವಕರಿರುವುದು ವಿಶೇಷ. ಈ ಸಮುದಾಯದವರು ರಾಯಬಾಗ ಪರಿಸರದ ಚಿಂಚಲಿಯಲ್ಲಿ ಮಾತ್ರ ಕಂಡು ಬರುತ್ತಾರೆ. ಈರಗಾರರು ದನಗಳ ಹಿಂಡಿನ ಕಾವಲುಗಾರರಾಗಿರಬಹುದು. ಪುರುಷರಂತೆ ಮಹಿಳೆಯರು ಕೂಡ ಪಶುಧನಗಳ ಒಡೆಯರಾಗಿದ್ದುದಕ್ಕೆ ಮಾಯವ್ವ ಒಂದು ಉದಾಹರಣೆ.

ಸ್ವಾತಂತ್ರ್ಯಾ ನಂತರ ಭಾರತದ ಸಮಾಜ ಬಹಳಷ್ಟು ಬದಲಾವಣೆಗೆ ಒಳಗಾಯಿತು. ಈ ಬದಲಾವಣೆಯಲ್ಲಿ ಇಡೀ ರಾಯಬಾಗ ಪರಿಸರದಲ್ಲಿರುವ ಹಾಲುಮತ ಸಮುದಾಯದಲ್ಲಿ ಉಂಟಾದ ಸಂಚಲನಗಳನ್ನು ಆರನೇ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಹಾಲುಮತ ಸಮುದಾಯದವರ ಪಾತ್ರವನ್ನು ಚರ್ಚಿಸಲಾಗಿದೆ. ಇವರನ್ನು ಅನ್ಯ ಸಮುದಾಯಗಳ ಹೋರಾಟಗಾರರಿಗೆ ಹೋಲಿಸಿದರೆ ಇವರ ಪ್ರಮಾಣ ಹೆಚ್ಚಾಗಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣವೇನೆಂದರೆ ಒಂದು ಅವರಿಗೆ ಸ್ವಾತಂತ್ರ್ಯದ ಅರಿವಿತ್ತು. ಇನ್ನೊಂದು ಅವರು ಈ ಪರಿಸರದ ಬಹುಸಂಖ್ಯಾತರು. ಹೀಗಾಗಿ ' ಈ ಹೋರಾಟದಲ್ಲಿ ಇವರು ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರಾಯಬಾಗ ಪರಿಸರದಲ್ಲಿರುವ ಒಟ್ಟು ೫೮ ಶಿಕ್ಷಣ ಸಂಸ್ಥೆಗಳಲ್ಲಿ ೩೫ ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಹಾಲುಮತ ಸಮುದಾಯಕ್ಕೆ ಸೇರಿದವುಗಳಾಗಿವೆ. ಇದಕ್ಕೆ ಹೋಲಿಸಿದರೆ ಹಾಲುಮತ ಸಮುದಾಯಕ್ಕೆ ಸೇರಿದ ಸಾಹಿತಿಗಳ ಸಂಖ್ಯೆ ಬಹಳಷ್ಟು ಕಡಿಮೆ. ಆದರೆ ಇದ್ದಷ್ಟು ಜನ ಮೌಲಿಕವಾದ ಗ್ರಂಥಗಳನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ನೀಡಿದ್ದಾರೆ.

ಸ್ವಾತಂತ್ರ್ಯ ನಂತರದಿಂದ ೧೯೭೮ರ ವರೆಗೆ ನಡೆದ ರಾಯಬಾಗ ವಿಧಾನ ಸಭಾ ಚುನಾವಣೆಗೆ ಹಾಲುಮತದ ನಾಯಕರಾದ ವಿ. ಎಲ್. ಪಾಟೀಲ ಸ್ಪರ್ಧಿಸಿ ಆಯ್ಕೆಯಾಗಿ ಈ ಪರಿಸರದ ಮುಂದಾಳತ್ವವನ್ನು ಹೊಂದಿದ್ದರು. ಆದರೆ ೧೯೭೮ ರಲ್ಲಿ ರಾಯಬಾಗ ವಿಧಾನ ಸಭಾ ಕ್ಷೇತ್ರವು ಮೀಸಲು ಕ್ಷೇತ್ರವಾಗಿ ಮಾರ್ಪಟ್ಟಿದ್ದರಿಂದ ಹಾಲುಮತದ ನಾಯಕರು ತವರು ನೆಲದಿಂದ ಸ್ಪರ್ಧಿಸುವ ಅವಕಾಶದಿಂದ ವಂಚಿತರಾಗಿದ್ದಾರೆ. ಈ ಮತಕ್ಷೇತ್ರಗಳು ಸಾಮಾನ್ಯ ಮತಕ್ಷೇತ್ರಗಳನ್ನಾಗಿಸಿದರೆ ಇಲ್ಲಿಯ ಬಹಸಂಖ್ಯಾತರಾದ ಕುರುಬರು ಸ್ಪರ್ಧಿಸಿ ಅಧಿಕಾರವಂತರಾಗಿ ಪ್ರಬಲರಾಗಬಹುದೆಂಬ ಕಾರಣದಿಂದಲೇ ಈ ತಂತ್ರಗಾರಿಕೆಯನ್ನು ಮಾಡಿರುವರೆಂದು ಕುರುಬ ಜನಸಮುದಾಯದವರ ಅಭಿಪ್ರಾಯವಾಗಿದೆ.

ರಾಜಕಾರಣದಲ್ಲಿ ಹಾಲುಮತ ಸಮುದಾಯದ ನಾಯಕರು ಇನ್ನೂ ಪ್ರಾಬಲ್ಯ ಹೊಂದಿರುವುದು ಕಂಡು ಬರುತ್ತದೆ. ರಾಯಬಾಗ ತಾಲೂಕಿನ ರಾಜಕೀಯವೆಂದರೆ ಅದು ಹೆಚ್ಚು ಕಡಿಮೆ ಹಾಲುಮತ ಸಮುದಾಯದ ರಾಜಕೀಯವೆಂದು ಗುರುತಿಸಲಾಗುತ್ತದೆ. ಈ ಪರಿಸರದ ಜನಪ್ರತಿನಿಧಿಗಳು ಆಯ್ಕೆಯಾಗುವುದರಲ್ಲಿ ಹಾಲುಮತದವರು ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಾರೆ.

ಹಾಲುಮತ ಸಮುದಾಯದ ಸ್ಥಿತ್ಯಂತರಗಳಿಗೆ ಕಾರಣವಾದಂತಹ ಪ್ರಮುಖವಾದ ಅಂಶ ಶೈಕ್ಷಣಿಕ ಅಭಿವೃದ್ಧಿ. ರಾಯಬಾಗ ಪರಿಸರದಲ್ಲಿನ ಶೈಕ್ಷಣಿಕ ಕ್ರಾಂತಿಯ ಹರಿಕಾರರೆಂದರೆ ವಿ. ಎಲ್. ಪಾಟೀಲರು. ಇವರೇ ಹಾಲುಮತ ಸಮುದಾಯದ ಮುಂದಾಳಾಗಿದ್ದು ಮಾಜಿ ಶಾಸಕರು, ಮಂತ್ರಿಗಳು ಆಗಿದ್ದರು. ಇವರ ಪ್ರಯತ್ನದ ಫಲವಾಗಿ ಈ ತಾಲೂಕಿನಲ್ಲಿ ಮತ್ತು ಈ ತಾಲೂಕಿಗೆ ಹೊಂಸಿಕೊಂಡಿರುವಂತೆ ಇರುವ ಗೋಕಾಕ ಮತ್ತು ಅಥಣಿ ತಾಲೂಕಗಳಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳು ತೆರೆಯಲ್ಪಟ್ಟವು. ಆ ಶೈಕ್ಷಣಿಕ ಜಾಗೃತಿಯ ಫಲವೇ ಈ ತಾಲೂಕಿನ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯೆಂದು ಹೇಳಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಅಥಣಿ ತಾಲೂಕಿನ ದಕ್ಷಿಣ ಭಾಗವನ್ನು ವ್ಯಾಪಿಸಿಕೊಂಡಿದ್ದ ರಾಯಬಾಗ ಪ್ರದೇಶವು ೧೯೩೩ರ ಸುಮಾರಿನಲ್ಲಿ ಸ್ವತಂತ್ರ ತಾಲೂಕಿನ ಅಸ್ತಿತ್ವವನ್ನು ಪಡೆದುಕೊಂಡಿತು. ಆ ಕಾಲದಲ್ಲಿ ಈ ಪರಿಸರವು ಕರ್ನಾಟಕದ ತೀರ ಹಿಂದುಳಿದ ತಾಲೂಕುಗಳಲ್ಲಿ ಒಂದಾಗಿತ್ತು. ನಂಜುಂಡಪ್ಪ ವರದಿಯಲ್ಲಿ ಇದು ಹಿಂದುಳಿದ ತಾಲೂಕು ಎಂದು ಗುರುತಿಸಲ್ಪಟ್ಟಿದೆ. ಕಳೆದ ೬೦ ವರ್ಷಗಳಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ನಿರ್ಮಾಣವಾಗಿ ನೀರಾವರಿ ಸೌಲಭ್ಯ ದೊರಕಿದ ಮೇಲೆ ಇದರ ಮೂಲ ಸ್ವರೂಪವೇ ಬದಲಾಗಿ ಅತ್ಯಂತ ತೀವ್ರ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದೆ. ರಾಯಬಾಗ ತಾಲೂಕಿನ ಪ್ರತಿಶತ ೭೩ ರಷ್ಟು ಜಮೀನು ನೀರಾವರಿ ವ್ಯಾಪ್ತಿಗೆ ಒಳಪಟ್ಟಿದೆ. ಹಾಲುಮತ ಕುಟುಂಬಗಳು ಹೊಂದಿರುವ ಜಮೀನುಗಳೆಲ್ಲ ಮರಡಿ ಜಮೀನುಗಳಾಗಿದ್ದು ಆರಂಭದಲ್ಲಿ ಪಶುಪಾಲನೆಗೆ ಅನುಕೂಲಕರವಾಗಿದ್ದವು. ನೀರಾವರಿ ಸೌಲಭ್ಯ ಒದಗಿದಾಗ ಇವರು ತಮ್ಮ ಮೂಲ ಉದ್ಯೋಗದಿಂದ ಹೊರಬಂದು ಕೃಷಿಯಲ್ಲಿ ತೊಡಗಿಸಿಕೊಂಡರು. ಆದರೆ ಕೃಷಿಯಿಂದ ವ್ಯಾಪಾರಕ್ಕೆ, ವ್ಯಾಪಾರದಿಂದ ಔದ್ಯೋಗಿಕ ರಂಗಕ್ಕೆ ಹೋಗಲಿಲ್ಲ. ಇಂದಿಗೂ ಕೃಷಿಯಲ್ಲಿಯೇ ಮುಂದುವರೆದಿರುವರು.

ಇಲ್ಲಿಯ ಹಾಲುಮತ ಸಮುದಾಯದವರು ಸಾಧಿಸಿದ ಪ್ರಗತಿಯನ್ನು ಇನ್ನುಳಿದ ಪ್ರದೇಶಗಳಿಗೆ ಅಂದರೆ ಅತೀ ಸಮೀಪದ ತಾಲೂಕಗಳಾದ ಅಥಣಿ ಮತ್ತು ಗೋಕಾಕಗಳಿಗೆ ಹೋಲಿಸಿದರೆ ಇವರು ಅವರಿಂತಲೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಜೊತೆಗೆ ರಾಜಕೀಯವಾಗಿ ಅಭಿವೃದ್ಧಿಯನ್ನು ಹೊಂದಿದ್ದಾರೆ.

ಬಹುಶಃ ಕರ್ನಾಟಕದಲ್ಲಿಯ ಜನಸಂಖ್ಯೆಯ ಅನುಪಾತವನ್ನು ನೋಡಿದರೆ ಇಲ್ಲಿ ಬಹುಸಂಖ್ಯಾತರು ಉನ್ನತ ಶಿಕ್ಷಣವನ್ನು ಪಡೆದುಕೊಂಡವರೆಂಬುದು ಕಂಡು ಬರುತ್ತದೆ. ಈ ಪರಿಸರದಲ್ಲಿರುವ ಇತರೇ ಸಮುದಾಯದವರಿಗಿಂತಲೂ ಇವರು ಅಭಿವೃದ್ಧಿಯ ಮುನ್ನೆಲೆಗೆ ಬಂದು ತಲುಪಿರುವರು. ಇವರ ಜೊತೆ ಸ್ಪರ್ಧಿಸುವ ಅಥವಾ ಇವರನ್ನು ಮೀರಿಸುವ ಅನ್ಯ ಸಮುದಾಯದ ಜನ ಇಲ್ಲಿ ಇಲ್ಲವೆಂದೇ ಹೇಳಬಹುದು.

ಒಂದು ಕಾಲದಲ್ಲಿ ಸಮಾಜದಲ್ಲಿರುವ ಅನ್ಯ ಸಮುದಾಯದವರ ಜೊತೆ ಸ್ಪರ್ಧಿಸಲು ಶಕ್ತಿಯನ್ನು ಹೊಂದದೇ ಇದ್ದಂತಹ ಹಾಲುಮತ ಸಮುದಾಯದವರು ಇಂದು ಇತರ ಸಮುದಾಯದವರ ಜೊತೆ ಸ್ಪರ್ಧಿಸುತ್ತಿರುವರು. ಒಂದು ಕಾಲಕ್ಕೆ ಇವರು ಅನ್ಯರೊಂದಿಗೆ ಸ್ಪರ್ಧಿಸಲಾರದಷ್ಟು ಹಿಂದುಳಿದಿದ್ದರು. ಕೆಲವೊಂದು ಮುಂದುವರೆದ ಸಮುದಾಯಗಳು ನೂರಾರು ವರ್ಷಗಳಿಂದ ಪ್ರಗತಿ ಹೊಂದಲು ಪ್ರಯತ್ನಿಸಿ ಜಾಗೃತಿ ಹೊಂದಿರುವರು. ಆದರೆ ಹಾಲುಮತದವರು ಇತ್ತೀಚಿನ ೨೫-೩೦ ವರ್ಷಗಳಲ್ಲಿ ಜಾಗೃತಿಯನ್ನು ಹೊಂದಿ ಮುನ್ನಲೆಗೆ ಬಂದಿರುವರು. ಈ ಜಾಗೃತಿ ಕ್ರಾಂತಿಕಾರಿ ರೂಪದಲ್ಲಾಗಿರುವುದು ಕಂಡು ಬರುತ್ತದೆ.

ಆರಂಭದಲ್ಲಿ ಈ ಪರಿಸರದಲ್ಲಿ ಜೈನರು ಪ್ರಾಬಲ್ಯವನ್ನು ಹೊಂದಿದವರಾಗಿದ್ದರು. ಆದರೆ ಇಂದು ಹಾಲುಮತದವರು ಪ್ರಗತಿಯಲ್ಲಿ ಅವರನ್ನು ಹಿಂದಿಕ್ಕಿ ಮುಂಚೂಣಿಯಲ್ಲಿ ಬಂದು ನಿಂತಿರುವರು. ಅನ್ಯ ಸಮುದಾಯದವರು ಆರ್ಥಿಕವಾಗಿ ಭೂಮಾಲಿಕತ್ವದಲ್ಲಿ ಶ್ರೀಮಂತಿಕೆ ಹೊಂದಿದವರಾಗಿರಬಹುದು ಆದರೆ ಸಾಮಾಜಿಕವಾಗಿ, ರಾಜಕೀಯವಾಗಿ ಪ್ರಾಬಲ್ಯವನ್ನು ಹಾಲುಮತದವರು ಹೊಂದಿರುವರು.

ಇತ್ತಿತ್ತಲಾಗಿ ಇಡೀ ಹಾಲುಮತ ಸಮುದಾಯ ಧಾರ್ಮಿಕವಾಗಿ ಶಿವಸಂಸ್ಕೃತಿಯಿಂದ ವೈಷ್ಣವ ಸಂಸ್ಕೃತಿಯತ್ತ ವಾಲುತ್ತಿದ್ದಂತೆ ತೋರುತ್ತಿದೆ. ಇದಕ್ಕೆ ಕಾರಣ ಕನಕದಾಸರ ಆರಾಧನೆ. ಕನಕದಾಸರು ವೈಷ್ಣವ ಸಂಪ್ರದಾಯದ ದಾಸ ಪರಂಪರೆಯ ಹಿನ್ನೆಲೆಯಿಂದ ಬಂದವರು. ಕೆಲವರು ಕನಕದಾಸರ ಪ್ರಭಾವದಿಂದಾಗಿ ತಿರುಪತಿಯ ತಿಮ್ಮಪ್ಪನ ದರ್ಶನವನ್ನು ಪಡೆದುಕೊಂಡರೂ ಕೂಡ ವೈಷ್ಣವ ಪಂಥದ ಸೆಳೆತಕ್ಕೆ ಒಳಗಾಗಿಲ್ಲ. ಮೂಲತಃ ಹಾಲುಮತದವರು ಶೈವ ಸಂಪ್ರದಾಯದವರು. ಕನಕದಾಸರನ್ನು ಭಕ್ತಿ ನೆಲೆಯಲ್ಲಿ ಬರಮಾಡಿಕೊಂಡಿದ್ದಾರೆಯೇ ಹೊರತು ಅವರನ್ನು ವೈಷ್ಣವ ಪಂಥದ ಹಿನ್ನೆಲೆಯಲ್ಲಿ ಸ್ವೀಕರಿಸಿಲ್ಲವೆಂಬುದು ಕಂಡು ಬರುತ್ತದೆ.

ಸಾಮಾಜಿಕ ಸ್ಥಿತ್ಯಂತರಕ್ಕೆ ಕಾರಣವಾದ ಇನ್ನೊಂದು ಅಂಶ ಸಂಗೊಳ್ಳಿ ರಾಯಣ್ಣನದು. ಇವತ್ತೂ ಬೆಳಗಾವಿ ಪರಿಸರವಷ್ಟೇ ಅಲ್ಲ, ಇಡೀ ಉತ್ತರ ಕರ್ನಾಟಕದ ತುಂಬ ಹಾಲುಮತದ ಅಸ್ಮಿತೆಯಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಿಂಬಿತಗೊಳ್ಳುತ್ತಿದ್ದಾನೆ. ಒಂದು ಕಾಲದಲ್ಲಿ ಕನಕದಾಸರ ಹೆಸರಿನಡಿಯಲ್ಲಿ ಕರ್ನಾಟಕದ ಹಾಲುಮತ ಸಮುದಾಯದವರು ಸಂಘಟಿತಗೊಳ್ಳುತ್ತಿದ್ದರು. ಆದರೆ ಇಂದು ಉತ್ತರ ಕರ್ನಾಟಕದಲ್ಲಿ ಸಂಗೊಳ್ಳಿ

ರಾಯಣ್ಣನ ಹೆಸರಿನಡಿಯಲ್ಲಿ ಸಂಘಟನೆಗಳು ಆರಂಭಗೊಂಡಿವೆ. ಇದು ಕೂಡ ಗಮನಿಸಲೇಬೇಕಾದ ಒಂದು ಸ್ಥಿತ್ಯಂತರ.

ಇಲ್ಲಿಯ ಹಾಲುಮತ ಸಮುದಾಯದವರು ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧಿಸಿದಷ್ಟು ಅಭಿವೃದ್ಧಿಯನ್ನು ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿಲ್ಲ. ಇವರು ವಾಣಿಜ್ಯ ಕ್ಷೇತ್ರದತ್ತ ಗಮನ ಹರಿಸಿಲ್ಲ.

ಆದರೆ ಇವರು ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದವರು. ಇದರಲ್ಲಿ ಸಂದೇಹವೇ ಇಲ್ಲ. ಚಿಂಚಲಿಯ ಮಾಯವ್ವನ ದೇವಸ್ಥಾನ ಇಂದು ಸ್ಥಿತ್ಯಂತರಗೊಂಡಿರುವುದು. ಆರಂಭದಿಂದಲೂ ಈ ದೇವಾಲಯವು ಹಾಲುಮತ ದೇವತೆಯ ಆರಾಧನಾ ಕೇಂದ್ರವಾಗಿತ್ತು. ಆದರೆ ಇಂದು ಅದರ ಒಡೆತನ ಕುರುಬ ಮತ್ತು ಲಿಂಗಾಯತರಲ್ಲಿ ಹಂಚಿಹೋಗಿದ್ದು ಪೂಜಾರಿಗಳು ಎರಡೂ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿದ ಪೂಜಾರಿಗಳು ಈ ದೇವಸ್ಥಾನದಲ್ಲಿ ಯಾವಾಗ ಸೇರ್ಪಡೆಗೊಂಡರು? ಯಾಕೆ ಸೇರ್ಪಡೆಗೊಂಡರು? ಇದರ ಪರಿಣಾಮವೇನು? ಈ ಎಲ್ಲ ವಿಷಯಗಳು ಇಂದು ಅಭ್ಯಸನೀಯವಾಗಿವೆ. ಇದೇ ರೀತಿ ಯಲ್ಲಾರಟ್ಟಿ ಅರಣ್ಯಸಿದ್ಧೇಶ್ವರನ ದೇವಸ್ಥಾನದಲ್ಲಿ ಆರಾಧನೆಯು ಹಾಲುಮತಸ್ಥರ ಕೈಯಲ್ಲಿದ್ದರೆ ದೇವಾಲಯದ ಆಡಳಿತ ಲಿಂಗಾಯತರ ಆಧೀನದಲ್ಲಿದೆ. ಇಂದು ಹಲವು ದೇವಾಲಯಗಳಲ್ಲಿ ಕುರುಬ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಕೇತಗಳು ಮರೆಯಾಗುತ್ತಿವೆ. ಇಲ್ಲಿ ಭಂಡಾರ ಸಂಸ್ಕೃತಿಯಿಂದ ವಿಭೂತಿ ಸಂಸ್ಕೃತಿಯತ್ತ ಹೊರಳುತ್ತಿರುವ ಸೂಕ್ಷ್ಮ ಸಂಚಲನವನ್ನು ಗುರುತಿಸಬಹುದು.

ಈ ಅಧ್ಯಯನವು ರಾಯಬಾಗ ಪರಿಸರದ ವ್ಯಾಪ್ತಿಗೆ ಸಿಮೀತವಾಗಿದ್ದು ಇಲ್ಲಿರುವ ಹಾಲುಮತದ ಪ್ರಮುಖ ಕ್ಷೇತ್ರ ಮತ್ತು ದೈವಗಳನ್ನು ವಿಶೇಷ ಒತ್ತು ಕೊಟ್ಟು ಅಧ್ಯಯನ ಮಾಡಲಾಗಿದೆ. ಕ್ಷೇತ್ರ ಕಾರ್ಯವೇ ಪ್ರಸ್ತುತ ಅಧ್ಯಯನದ ಜೀವಾಳವಾಗಿರುವುದರಿಂದ ಆಕರಗಳ ಶೋಧ ಹಾಗೂ ದಾಖಲೀಕರಣ ಕಾರ್ಯ ಸವಾಲಿನದಾಗಿದೆ. ಆದರೂ ಈ ಅಧ್ಯಯನವು ಹಲವು ಎಡರು-ತೊಡರುಗಳ ಮಧ್ಯದಲ್ಲೂ ರಾಯಬಾಗ ಪರಿಸರದ ಹಾಲುಮತ ಸಂಸ್ಕೃತಿಯ ಚರಿತ್ರೆಗೆ ಮುನ್ನುಡಿ ಬರೆದದ್ದು ಸ್ಪಷ್ಟ. ನಿಸ್ಸಂದೇಹವಾಗಿಯೂ ಇದು ಭವಿಷ್ಯತ್ತಿನ ಸಂಶೋಧಕರಿಗೆ ದಿಕ್ಸೂಚಿಯಾಗಲಿದೆ.

ಅನುಬಂಧ : ಒಂದು

ಕರ್ನಾಟಕ



ಬೆಳಗಾವಿ




ರಾಯಬಾಗ (ಬಾಗೆನಾಡು) ಪರಿಸರ



ಹಾಲುಮತ ಪ್ರಾಬಲ್ಯದ ಪ್ರಮುಖ ಊರುಗಳು

೧. ರಾಯಬಾಗ ೨. ಚಂಚಲಿ ೩. ಹಾರೂಗೇರಿ ೪. ಮುಗಳಖೋಡ ೫. ಹಿಡಕಲ್ ೬. ಕಂಕಣವಾಡಿ ೭. ಅಲಖನೂರ
೮. ಬೆಕ್ಕೇರಿ ೯. ಭಿರಡಿ ೧೦. ಅಳಗವಾಡಿ ೧೧. ಬೊಮ್ಮನಾಳ ೧೨. ಸುಟ್ಟಟ್ಟಿ ೧೩. ಮಾವಿನಹೊಂಡ ೧೪. ಶಿರಗೂರ
೧೫. ಮೊರಬ ೧೬. ಬೂದಿಹಾಳ ೧೭. ಯಲ್ಪಾರಟ್ಟಿ ೧೮. ಬಿರನಾಳ ೧೯. ಮೇಖಳಿ ೨೦. ಗುಡ್ಡದ ಬ್ಯಾಕೂಡ ೨೧. ಬೆಂಡವಾಡ
೨೨. ಇಟನಾಳ ೨೩. ಹುಬ್ಬರವಾಡಿ ೨೪. ನಿಲಜಿ ೨೫. ಬಾವಚಿ ೨೬. ಮಾಡಲಗಿ ೮. ಪರಮಾನಂದವಾಡಿ

ಶಂ.ಬಾ.ಜೋಶಿಯವರು ನೀಡಿದ ಹಾಲುಮತ ಸಮುದಾಯದ ವಂಶವೃಕ್ಷ



ಅನುಬಂಧ : ಮೂರು

ವಕ್ತೃಗಳು

ಅ. ಸಂ.	ಹೆಸರು	ವಯಸ್ಸು	ಉದ್ಯೋಗ	ಊರು
೧	ಶಿಂಗಾಡಿ ನಾಗಪ್ಪ ಕಂಠಿಕಾರ	೩೬	ಪೂಜಾರಿ	ಅಲಕನೂರ
೨	ದೇವಪ್ಪ ಹೊನ್ನಪ್ಪ ಯಲ್ಲಟ್ಟಿ	೪೨	ವಕೀಲ	ಅಲಕನೂರ
೩	ವಾಮನ ಲಗಮಣ್ಣ ಹಟ್ಟಿಮನಿ	೪೬	ಸಮಾಜಸೇವೆ	ಅಲಕನೂರ
೪	ಮಹಾದೇವ ಲಕ್ಷ್ಮಣ ಶಿರಗೂರೆ	೭೦	ಸಮಾಜಸೇವೆ	ಅಳಗವಾಡಿ
೫	ರೇವಣ್ಣ ಸಿದ್ದಪ್ಪ ಸರವ	೩೫	ಸಮಾಜಸೇವೆ	ಅಳಗವಾಡಿ
೬	ವಿಠ್ಠಲ ಲಕ್ಕಪ್ಪ ಸುರಾಣಿ	೩೮	ಒಕ್ಕಲುತನ	ಇಟ್ನಾಳ
೭	ಗೋಪಾಲ ಅಪ್ಪಯ್ಯ ತೇರದಾಳ	೪೦	ವ್ಯಾಪಾರ	ಇಟ್ನಾಳ
೮	ಪದ್ಮಣ್ಣ ಹಾಲಪ್ಪ ಪೂಜೇರಿ	೫೫	ಒಕ್ಕಲುತನ	ಕಂಕಣವಾಡಿ
೯	ಬಸವರಾಜ ವಿಠ್ಠಲ ಪೂಜೇರಿ	೪೪	ಪೂಜೇರಿ	ಕಂಕಣವಾಡಿ
೧೦	ಮಾರುತಿ ಸಿದ್ದಪ್ಪ ಪೂಜೇರಿ	೪೫	ಪೂಜೇರಿ	ಕಂಕಣವಾಡಿ
೧೧	ಪುರಂದರ ರಾಯಪ್ಪ ಜೋಡಟ್ಟಿ	೪೫	ಸಮಾಜಸೇವೆ	ಖಣದಾಳ
೧೨	ಅಪ್ಪಾಸಾಬ ನಿಂಗಪ್ಪ ಬಂಡಗಾರ	೪೨	ವೈದ್ಯ	ಖಣದಾಳ
೧೩	ಮಾರುತಿ ಭೀಮಪ್ಪ ಪೂಜೇರಿ	೬೦	ಒಕ್ಕಲುತನ	ಗುಂಡವಾಡ
೧೪	ಅಶೋಕ ಶಿವರಾಮ ಬನಗೆ	೬೦	ಸಮಾಜಸೇವೆ	ಚಿಂಚಲಿ
೧೫	ಸುಶಾಂತ ಸುರೇಶ ಪಡೋಳಕರ	೨೮	ವ್ಯಾಪಾರ	ಚಿಂಚಲಿ
೧೬	ಮಲ್ಲು ಭೂಪಾಲ ಬನಗೆ	೩೫	ವ್ಯಾಪಾರ	ಚಿಂಚಲಿ
೧೭	ಅಣ್ಣಾಸಾಬ ಬಾಳೇಶಿ ಪೂಜೇರಿ	೭೦	ಪೂಜೇರಿ	ಚಿಂಚಲಿ
೧೮	ಮಹಾದೇವ ಬಾಬು ಈರಗಾರ	೭೨	ಕಲಾವಿದ (ಅಲಗ)	ಚಿಂಚಲಿ
೧೯	ವಿಠ್ಠಲ ಕರೆಪ್ಪ ಗೊಂಗಡಿ	೪೦	ಒಕ್ಕಲುತನ	ಚಿಂಚಲಿ
೨೦	ಅಣ್ಣಾಸಾಬ ತಮ್ಮಣಿ ಹಿಡಕಲ್ಲ	೫೦	ಒಕ್ಕಲುತನ	ಜಲಾಲಪೂರ
೨೧	ಅಪ್ಪು ಕಲ್ಲಪ್ಪ ಸಿಂಗಾಡಿ	೩೨	ವ್ಯಾಪಾರ	ಜಲಾಲಪೂರ
೨೨	ವಸಂತ ಭರಮಪ್ಪ ದಳವಾಯಿ	೫೬	ಒಕ್ಕಲುತನ	ಪರಮಾನಂದವಾಡಿ
೨೩	ನಿಂಗಪ್ಪ ಸಿದ್ದಪ್ಪ ಬಂಡಗಾರ	೩೧	ಉಪನ್ಯಾಸಕ	ಪರಮಾನಂದವಾಡಿ
೨೪	ಸದಾಶಿವ ವಸಂತ ದೇಶಿಂಗೆ	೪೨	ಉದ್ಯಮಿ	ಬಿರಡಿ
೨೫	ರಾಜಗೌಡ ಬಸಗೌಡ ಪಾಟೀಲ	೪೧	ಒಕ್ಕಲುತನ	ಬಿರಡಿ
೨೬	ಕರೆಪ್ಪ ಯಶವಂತ ಬಾಗಿ	೬೨	ಒಕ್ಕಲುತನ	ಬಿರಡಿ
೨೭	ಮಹಾವೀರ ಗುರುಪಾದ ಉಮರಾಣಿ	೪೨	ಒಕ್ಕಲುತನ	ಬಿರಡಿ

೨೮	ಮುರಸಿದ್ಧ ದತ್ತಾ ಪಾಟೀಲ	೪೫	ಒಕ್ಕಲುತನ	ಬಿರಡಿ
೨೯	ರೇವಪ್ಪ ಯಲ್ಲಪ್ಪ ಶಿವಣ್ಣಗೋಳ	೩೫	ಒಕ್ಕಲುತನ	ಬೆಂಡವಾಡ
೩೦	ಲಗಮಣ್ಣ ರಾಮಪ್ಪ ಕಂಟಿಕಾರ	೪೫	ಒಕ್ಕಲುತನ	ಬೆಕ್ಕೇರಿ
೩೧	ಅಣ್ಣಪ್ಪ ಹೀರಪ್ಪ ಘಂಟಿ	೬೮	ಸಮಾಜಸೇವೆ	ಬೆಕ್ಕೇರಿ
೩೨	ವಿಶ್ವನಾಥ ಕರೆಪ್ಪ ಬೀಳಗಿ	೪೪	ಜನಪದ ಕಲಾವಿದ	ಮುಗಳಖೋಡ
೩೩	ಭೀಮಪ್ಪ ಇಟ್ಟಪ್ಪ ಬನಶಂಕರಿ	೪೦	ಸಮಾಜಸೇವೆ	ಮುಗಳಖೋಡ
೩೪	ಶಿವಾನಂದ ಮಾರುತಿ ಗೋಕಾಕ	೪೦	ಸಮಾಜಸೇವೆ	ಮುಗಳಖೋಡ
೩೫	ಮಾರುತಿ ಪುಂಡಲೀಕ ಹಳಿಂಗಳಿ	೫೮	ಒಕ್ಕಲುತನ	ಮುಗಳಖೋಡ
೩೬	ಮಾರುತಿ ಶಿವಪ್ಪ ಗೋಕಾಕ	೭೨	ಸಮಾಜಸೇವೆ	ಮುಗಳಖೋಡ
೩೭	ಚಂದ್ರು ಭೀಮಪ್ಪ ಕುಲಿಗೋಡ	೭೪	ಸಮಾಜಸೇವೆ	ಮುಗಳಖೋಡ
೩೮	ಸಂಜೀವಕುಮಾರ ಸಿದ್ದಲಿಂಗಪ್ಪ ಬಾನೆ	೪೦	ಸಮಾಜಸೇವೆ	ಮೊರಬ
೩೯	ಡಿ. ಎಸ್. ನಾಯಿಕ	೭೫	ಸಮಾಜಸೇವೆ	ಮೊರಬ
೪೦	ಸಿದ್ರಾಮಪ್ಪ ಯಲ್ಲಪ್ಪ ಲಾಳಿ	೭೦	ಜನಪದ ಕಲಾವಿದ	ಯಲ್ಪಾರಟ್ಟಿ
೪೧	ಮಾರ್ತಾಂಡ ಭರಮಪ್ಪ ಲಾಳಿ	೪೦	ಒಕ್ಕಲುತನ	ಯಲ್ಪಾರಟ್ಟಿ
೪೨	ಅನಿಲ ಶಿವಮೂರ್ತಿ ಒಡೆಯರ	೪೫	ಒಕ್ಕಲುತನ	ಯಲ್ಪಾರಟ್ಟಿ
೪೩	ರಾಮಪ್ಪ ನಾಗಪ್ಪ ಮುರಾರಿ	೪೦	ಶಿಕ್ಷಕ	ಯಲ್ಪಾರಟ್ಟಿ
೪೪	ಚಾಮರಾಜ ಕುಶಾಲ ಒಡೆಯರ	೩೮	ಪೂಜಾರಿ	ಯಲ್ಪಾರಟ್ಟಿ
೪೫	ಚಂದ್ರಶೇಖರ ಸಿದ್ದಪ್ಪ ಒಡೆಯರ	೩೨	ಸಮಾಜಸೇವೆ	ಯಬರಟ್ಟಿ
೪೬	ರಾಮಚಂದ್ರ ಮಾರುತಿ ಹೆಗಡೆ	೪೨	ವಕೀಲ	ರಾಯಬಾಗ
೪೭	ರಾಜು ಕೆಂಚಪ್ಪ ಪೂಜೇರಿ	೪೬	ಸಮಾಜಸೇವೆ	ರಾಯಬಾಗ
೪೮	ಬೀರಪ್ಪ ಸಿದ್ಧಲಿಂಗ ಗಡ್ಡೆ	೪೪	ವಕೀಲ	ರಾಯಬಾಗ
೪೯	ಚಂದ್ರಕಾಂತ ರಾಮಚಂದ್ರ ಮಸಾಲಜಿ	೫೦	ಉದ್ಯಮಿ	ರಾಯಬಾಗ
೫೦	ರಾಯಪ್ಪಾ ಹಾಲಪ್ಪ ಗೊಂಡಿ	೩೫	ವಕೀಲ	ರಾಯಬಾಗ ಸ್ಟೇಷನ್
೫೧	ಹಾಲಪ್ಪ ನಿಂಗಪ್ಪ ಫಾಳಿ	೭೬	ಸಮಾಜಸೇವೆ	ಶಿರಗೂರ
೫೨	ಲಕ್ಷ್ಮಣ ಮುರಾರಿ ದಳವಾಯಿ	೬೪	ಒಕ್ಕಲುತನ	ಶಿರಗೂರ
೫೩	ಮುರಾರಿ ವಿಠ್ಠಲ ಬಾನೆ	೫೫	ಸಮಾಜಸೇವೆ	ಸುಟ್ಟಟ್ಟಿ
೫೪	ಎಲ್. ಕೆ. ಖೋತ	೩೮	ವಕೀಲ	ಸುಟ್ಟಟ್ಟಿ
೫೫	ಲಕ್ಕಪ್ಪ ಬೀರಪ್ಪ ಹಳಿಂಗಳಿ	೪೫	ಕಲಾವಿದ	ಸುಟ್ಟಟ್ಟಿ
೫೬	ವಿಠ್ಠಲ ಲಕ್ಕಪ್ಪ ಅಂಕಲಗಿ	೪೫	ಶಿಕ್ಷಕ	ಸೌಸುದ್ದಿ
೫೭	ಬಾಳಕೃಷ್ಣ ಆದಪ್ಪ ಜಂಬಗಿ	೭೫	ನಿವೃತ್ತ ಪ್ರಾಚಾರ್ಯ	ಹಾರೂಗೇರಿ
೫೮	ಅಶೋಕ ಭೀಮಪ್ಪ ಪಡೆದಾರ	೪೯	ಸಮಾಜಸೇವೆ	ಹಾರೂಗೇರಿ

೫೯	ಪಾಂಡುರಂಗ ಮಾರುತಿ ಧರ್ಮಟ್ಟಿ	೫೯	ಉಪನ್ಯಾಸಕ	ಹಾರೂಗೇರಿ
೬೦	ಮುದಕ್ಕಪ್ಪ ಕರೆಪ್ಪ ಪೂಜೇರಿ	೬೦	ಪೂಜೇರಿ	ಹಾರೂಗೇರಿ
೬೧	ಮಾರುತಿ ರಾಯಪ್ಪ ಧರ್ಮಟ್ಟಿ	೫೪	ವ್ಯಾಪಾರ	ಹಾರೂಗೇರಿ
೬೨	ಡಿ. ಎಸ್. ಸದಲಗಿ	೭೫	ಸಮಾಜಸೇವೆ	ಹಾರೂಗೇರಿ
೬೩	ವಿಠ್ಠಲ ನಿಂಗಪ್ಪ ಬಂಡಗಾರ	೭೦	ವೈದ್ಯ	ಹಿಡಕಲ್ಲ
೬೪	ಭೀಮರಾವ ಲಗಮಣ್ಣ ಘಂಟಿ	೪೨	ಶಿಕ್ಷಕ	ಹಿಡಕಲ್ಲ
೬೫	ವಸಂತರಾವ ಸಿದಗೌಡ ಪಾಟೀಲ	೭೫	ಸಮಾಜಸೇವೆ	ಹಿಡಕಲ್ಲ
೬೬	ವಾಸುದೇವ ಭೀಮರಾಯ ಗಲಗಲಿ	೫೫	ನಿವೃತ್ತ ಉಪನ್ಯಾಸಕ	ಹಿಡಕಲ್ಲ
೬೭	ಮಧ್ವರಾಜ ಬಾಳಕೃಷ್ಣ ದೇಶಪಾಂಡೆ	೮೪	ಸ್ವಾತಂತ್ರ್ಯ ಹೋರಾಟಗಾರ	ಹಿಡಕಲ್ಲ
೬೮	ಮಾಳಸಿದ್ಧ ದುಂಡಪ್ಪ ಒಡೆಯರ	೩೫	ವ್ಯಾಪಾರ	ಹಿಡಕಲ್ಲ
೬೯	ಆರ್. ಎಸ್. ಬನಹಟ್ಟಿ	೭೫	ನಿವೃತ್ತ ಪ್ರಾಚಾರ್ಯ	ಹಿಡಕಲ್ಲ
೭೦	ರಾವಸಾಬ ಸಿದ್ದಪ್ಪ ಮುರಗೋಜಿ	೭೫	ಒಕ್ಕಲುತನ	ಹಿಡಕಲ್ಲ
೭೧	ರಾಮಣ್ಣ ಗುರುಸಿದ್ದಪ್ಪ ಕಂಕಣವಾಡಿ	೪೨	ಸಮಾಜಸೇವೆ	ಹಿಡಕಲ್ಲ
೭೨	ತುಕಾರಾಮ ಶಂಕರ ವಂಟಗೂಡಿ	೪೨	ಪ್ರಾಚಾರ್ಯ	ಹಿಡಕಲ್ಲ

ಅನುಬಂಧ : ನಾಲ್ಕು

ಆಯ್ದ ಐದು ಸಂದರ್ಶನಗಳು

ಸಂದರ್ಶನ-೦೧

೧. ಸಂದರ್ಶಕರ ವೈಯಕ್ತಿಕ ವಿವರಗಳು :

೧.೧	ಸಂದರ್ಶಕರ ಹೆಸರು ಮತ್ತು ವಿಳಾಸ	: **ಸಿದ್ರಾಮಪ್ಪ ಯಲ್ಲಪ್ಪ ಲಾಳಿ. ಯಲ್ಲಾಪರಟ್ಟಿ**
೧.೨	ದೂರವಾಣಿ ಸಂಖ್ಯೆ	: **೯೭೪೫೧೮೮೮೩೪**
೧.೩	ಜಾತಿ & ಒಳ ಪಂಗಡ	: **ಕುರುಬ. ಹತ್ತಿ ಕಂಕಣ**
೧.೪	ವಯಸ್ಸು	: **೭೦**
೧.೫	ಶಿಕ್ಷಣ	: **೨ನೇ ತರಗತಿ**
೧.೬	ಪತ್ನಿ ಮತ್ತು ಮಕ್ಕಳ ಶಿಕ್ಷಣ	: **ಪತ್ನಿ ಶಿಕ್ಷಣ ಇಲ್ಲ. ಮಗ ೪ನೇ ತರಗತಿ**
೧.೭	ಮನೆ / ಜಮೀನು	: **೩ ಎಕರೆ ೨೦ ಗುಂಟೆ**
೧.೮	ಕುಟುಂಬ ವಿಭಕ್ತ / ಅವಿಭಕ್ತ	: **ವಿಭಕ್ತ ಕುಟುಂಬ**
೧.೯	ಸದಸ್ಯರ ಸಂಖ್ಯೆ	: **೭ ಜನ**
೧೧೦	ಉದ್ಯೋಗ	: **ಒಕ್ಕಲುತನ**
೧.೧೧	ಕುಟುಂಬದಲ್ಲಿ ದುಡಿಯುವವರ ಸಂಖ್ಯೆ	: **೪**
೧.೧೨	ಕುಟುಂಬದ ಆರ್ಥಿಕ ಮೂಲ	: **ಒಕ್ಕಲುತನ ಆಡು ಸಾಕಾಣಿಕೆ**
೧.೧೩	ವಾರ್ಷಿಕ ಆದಾಯ	: **೫೫೦೦೦=೦೦**

೨. ಮನೆತನದ ಮುಖ್ಯ ಉದ್ಯೋಗ, ಇಂದಿನ ಉದ್ಯೋಗ ಹೊಂದಲು ಕಾರಣವೇನು ?

ದನ ಮತ್ತು ಕುರಿಸಾಕಾಣಿಕೆ. ನೀರಾವರಿ ಸೌಕರ್ಯದಿಂದಾಗಿ ಇರುವ ಭೂಮಿಯಲ್ಲಿಯೇ ಒಕ್ಕಲುತನ ಮಾಡುತ್ತಿದ್ದೇವೆ.

೩. ಗ್ರಾಮದಲ್ಲಿ ನಡೆಯುವ ಇತರೆ ಸಮುದಾಯಗಳ ಕಾರ್ಯಕ್ರಮದಲ್ಲಿ ನೀವು ಯಾವ-ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಿ ಮತ್ತು ಯಾಕೆ? ನಿಮಗೆ ಭಾಗವಹಿಸಲಿಕ್ಕೆ ಅವಕಾಶವಿರದ ಕಾರ್ಯಕ್ರಮಗಳು ಯಾವುವು? ಅದಕ್ಕೆ ನಿಮ್ಮ ಅಭಿಪ್ರಾಯವೇನು ?

ಗ್ರಾಮದಲ್ಲಿರು ಎಲ್ಲ ಸಮುದಾಯದವರ ಜೊತೆ ಒಳ್ಳೆಯ ಸಂಬಂಧವಿದೆ. ಅವರು ಕಾರ್ಯಕ್ರಮಗಳಿಗೆ ಕರೆಯುತ್ತಾರೆ ನಾವು ತಪ್ಪದೆ ಹೋಗುತ್ತೇವೆ. ನಾನು ಡೊಳ್ಳಿನ ಹಾಡುಗಾರ ಹೀಗಾಗಿ ಎಲ್ಲ ಕಡೆಗೂ ಹೋಗುತ್ತೇನೆ. ಚೌಡಕಿ ಪದಗಳನ್ನು ಹಾಡುತ್ತೇನೆ. ಕರಬಲ ಹಾಡುಗಳನ್ನು ಹಾಡುವುದರಿಂದ ಮುಸ್ಲಿಂರ ಹಬ್ಬಕ್ಕೂ ಹೋಗುತ್ತೇನೆ.

೪. ನಿಮ್ಮ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಆಹ್ವಾನಿಸುತ್ತಿರಾ ? ಯಾಕೆ ?

ನಮ್ಮೂರಲ್ಲಿ ಜಾತಿ ಭೇದ ಕಡಿಮೆ. ನಾನಂತೂ ಇಂಚಗೇರಿ ಸಂಪ್ರದಾಯದವ ಹೀಗಾಗಿ ಸತ್ಯ, ಧರ್ಮಕ್ಕೆ ಸ್ಥಾನ ಇರುವ ಎಲ್ಲ ಕಡೆಗೆ ಹೋಗುತ್ತೇನೆ. ಅವರು ಕಾರ್ಯಕ್ಕೆ ನಾವು ಹೋಗುತ್ತೇವೆ ನಮ್ಮ ಕಾರ್ಯಕ್ಕೆ ಅವರು ಬರುತ್ತಾರೆ.

೫. ಆಹಾರ ಪದ್ಧತಿ. ಸಸ್ಯಹಾರಿ / ಮಾಂಸಾಹಾರಿ ಯಾಕೆ ? ಧರ್ಮದ/ ಸಂಪ್ರದಾಯಗಳ ನಿರ್ಬಂಧವಿದೆಯೇ?

ನಾವು ಪಕ್ಕಾ ಸಸ್ಯಾಹಾರಿಗಳು. ನಮ್ಮಲ್ಲಿ ಮಾಂಸಾಹಾರ ನಡೆಯುವುದಿಲ್ಲ. ನಮ್ಮದೂ ಅರಣ್ಯಸಿದ್ಧನ ಸಂಪ್ರದಾಯ

೬. ಹಬ್ಬ-ಹರಿದಿನ ಮದುವೆ/ ಇನ್ನಿತರ ಸಮಾರಂಭಗಳಲ್ಲಿ ಪ್ರಾಣಿ ಬಲಿ ಕೊಡುತ್ತಿರಾ ಯಾಕೆ ?

ನಮ್ಮ ಮನೆಯಲ್ಲಿ ಪ್ರಾಣಿ ಬಲಿ ಪದ್ಧತಿ ಇಲ್ಲ. ನಮ್ಮ ಯಲ್ಪಾರಟ್ಟಿ ಊರಾಗ ಬಹಳ ಕಡಿಮೆ.

೭. ಮದುವೆ ಪದ್ಧತಿ ಹೇಗಿದೆ ? ಯಾವ ರೀತಿಯಲ್ಲಿ ವಧು ವರರ ಆಯ್ಕೆ ಮಾಡುತ್ತೀರಿ ? ನಿಮ್ಮಲ್ಲಿಯೇ ಇರುವ ಯಾವ-ಯಾವ ಉಪ ಪಂಗಡಗಳ ಜೊತೆಯಲ್ಲಿ ವಿವಾಹ ಸಂಬಂಧಗಳು ನಡೆಯುತ್ತವೆ / ನಡೆಯುವುದಿಲ್ಲ. ಕಾರಣವೇನು ?

ನನ್ನದು ಮೂರದಿನದ ಮದುವೆ ಆಗಿತ್ತು. ನನ್ನ ಮಗ ಮದುವೆ ಒಂದು ದಿನದ್ದು.

೮. ಮನೆತನದ ಮೂಲ ದೈವ (ಮನೆ ದೇವರು) ಮತ್ತು ಇತರ ಆಚರಣೆ ದೈವಗಳು ಯಾವುವು?

ಕರೇಸಿದ್ಧ ನಂತರದಲ್ಲಿ ಅರಣ್ಯಸಿದ್ಧ, ಮಾಯವ್ವ, ಯಲ್ಲವ್ವ

೯. ನಿಮ್ಮ ಮನೆತನದ ದೇವಾಲಯ/ ಮಠಗಳಿಗೆ ಯಾವಾಗ ಭೇಟ್ಟಿ ಕೊಡುತ್ತೀರಿ? ಪ್ರತಿ ದಿನ/ ವಾರ/ತಿಂಗಳು/ವರ್ಷ. ನಿಮ್ಮೂರನ್ನು ಹೊರತು ಪಡಿಸಿ ನೀವು ಭೇಟ್ಟಿ ನೀಡುವ ಧಾರ್ಮಿಕ ಸ್ಥಳಗಳು. ಯಾಕೆ?

ಕರೇಸಿದ್ಧ ಮತ್ತು ಅರಣ್ಯಸಿದ್ಧರಿಗೆ ಗುರುವಾರ ಮತ್ತು ರವಿವಾರಗಳಂದು ಅಂದರೆ ವಾರಕ್ಕೆ ಎರಡು ಸಲ ಹಾಗೂ ಹುಣ್ಣಿಮೆ, ಅಮವಾಸ್ಯೆ, ಜಾತ್ರೆಗಳಂದು ಹೋಗುತ್ತೇವೆ. ನಮ್ಮ ತಂದೆಯವರು ಮಾಲಾ ಧರಿಸಿದ್ದರು ಅದಕ್ಕಾಗಿ ಪಂಡರಪುರದ ಪಾಂಡುರಂಗನ ಗುಡಿಗೆ ವರ್ಷಕ್ಕೆ ಒಂದು ಸಲವಾದರೂ ಹೋಗುತ್ತೇವೆ. ನಾನು ಇಂಚಗೇರಿ ಮಠದ ಭಕ್ತ. ಗುರುಗಳಿಂದ ಉಪದೇಶವನ್ನು ಪಡೆದುಕೊಂಡಿದ್ದೇನೆ ಹಾಗಾಗಿ ಇಂಚಗೇರಿ ಮಠಕ್ಕೂ ನಾನು ಹೋಗುತ್ತೇನೆ.

೧೦. ವರ್ಷದಲ್ಲಿ ಆಚರಿಸುವ ಹಬ್ಬಗಳಿಗಾಗಿ ಮಾಡುವ ಖರ್ಚು ಎಷ್ಟು ? ಇನ್ನಿತರ (ಶಿಕ್ಷಣ ಮತ್ತು ಸಾಮಾಜಿಕ) ಕಾರ್ಯಗಳಿಗಾಗಿ ಮಾಡುವ ಖರ್ಚು ಎಷ್ಟು ?

ಹಬ್ಬ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆಗಳಿಗಾಗಿ ವರ್ಷಕ್ಕೆ ಸುಮಾರು ೩೦ ರಿಂದ ೪೦ ಸಾವಿರ ರೂ. ಗಳ ವರೆಗೆ ಖರ್ಚಾಗುತ್ತದೆ. ಮೊಮ್ಮಕ್ಕಳು ಚಿಕ್ಕವರಿದ್ದಾರೆ ಅವರು ಸರ್ಕಾರಿ ಶಾಲೆಗಳಿಗೆ ಹೋಗುತ್ತಾರೆ ಖರ್ಚು ಕಡಿಮೆ ಇದೆ.

೧೧. ನೀವು ಆಚರಿಸಲೇ ಬೇಕಾದ ಧಾರ್ಮಿಕ ಆಚರಣೆಗಳಾವವು? ಈ ಆಚರಣೆಗಳಿಂದ ನಿಮಗಾಗುವ ಲಾಭಗಳೇನು? ಈ ಆಚರಣೆಗಳನ್ನು ಮುಂದುವರೆಸಬೇಕೆ/ ಮೊಟಕುಗೊಳಿಸಬೇಕೆ. ಯಾಕೆ ? ಇತ್ತೀಚಿಗೆ

ಧಾರ್ಮಿಕ ಮೌಢ್ಯಗಳನ್ನು ಕೈ ಬಿಡುವಂತೆ ಸಮಾಜ ಸುಧಾರಕರು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಯುಗಾದಿ ಹಬ್ಬ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತೇವೆ. ಕಾರ ಹುಣ್ಣಿಮೆಯಂದು ದನ-ಕರುಗಳನ್ನೆಲ್ಲ ಮೈತೊಳೆದು ಅಲಂಕರಿಸಿ ಪೂಜೆ ಮಾಡುತ್ತೇವೆ. ಹೀಗೆ ಮಾಡುವುದುರಿಂದ ನೆಮ್ಮದಿ-ಸಮಾಧಾನ ದೊರೆಯುತ್ತದೆ. ಆದರೆ ಶಾಲೆ ಕಲಿತವರು ಈ ಆಚರಣೆಗಳನ್ನು ಮಾಡುವುದಿಲ್ಲ.

೧೨. ನಿಮ್ಮ ಕುಟುಂಬ/ ಸಮುದಾಯದಲ್ಲಿ ಅಂತರ ಜಾತಿ ವಿವಾಹಗಳಾಗಿವೆಯೇ? ಅವರ ಜೊತೆ ನಿಮ್ಮ ಸಂಪರ್ಕ ಹೇಗಿದೆ? ಹಬ್ಬ-ಹರಿದಿನ, ಧಾರ್ಮಿಕ & ಸಾರ್ವಜನಿಕ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿತ್ತಿರಾ/ಅಹ್ವಾನಿಸುವುದಿಲ್ಲ ಯಾಕೆ ? ಅವರ ಮಕ್ಕಳ ಜೊತೆ ವಿವಾಹ ಸಂಪರ್ಕ ಬೆಳೆಸಲು ಇಷ್ಟ ಪಡುತ್ತಿರಾ ?

ನಮ್ಮ ಮನೆತನದಲ್ಲಿ ಬೇರೆ ಜಾತಿಯವರೊಂದಿಗೆ ಮದುವೆಯಾಗುವುದಿಲ್ಲ. ಒಂದು ವೇಳೆ ಊರಾಗ ಯಾರಾದರೂ ಆದರೆ ಅವರನ್ನು ದೂರ ಇಡುತ್ತೇವೆ. ಅವರ ಜೊತೆ ಸಂಪರ್ಕ ಮಾಡುವುದಿಲ್ಲ.

೧೩. ವಿಧವಾ ವಿವಾಹಕ್ಕೆ ನಿಮ್ಮ ಸಮುದಾಯಗಳಲ್ಲಿ ಅವಕಾಶವಿದೆಯೇ ?

ಉಡಿಕೆ ಮದುವೆಗಳು ಬಹಳ ಕಡಿಮೆ ಪ್ರಮಾಣದಲ್ಲಾಗುತ್ತವೆ. ಕೆಲವು ಜನ ಗಂಡ ಸತ್ತ ಮೇಲೆ ಮದುವೆ ಆಗುವುದಿಲ್ಲ.

೧೪. ಶವ ಸಂಸ್ಕಾರ ಪದ್ಧತಿ ಹೇಗಿದೆ ?

ಸಾಮಾನ್ಯವಾಗಿ ನಮ್ಮಲ್ಲಿ ಮಣ್ಣ ಕೊಡುವ ಪದ್ಧತಿ ಇದೆ. ಮಾಲೆ ಧರಿಸಿದವರು, ಮುತ್ತ ಕಟ್ಟಿದ ಹೆಂಗಸರನ್ನು ಮಾತ್ರ ಸುಡುವ ಪದ್ಧತಿ ಇದೆ.

೧೫. ನೀವು ರಾಜಕೀಯ ಸಂಪರ್ಕ ಹೊಂದಿದ್ದಿರಾ ? ಯಾವುದಾದರೂ ಚುನಾವಣೆಗೆ ಸ್ಪರ್ಧಿಸಿದ್ದಾರಾ?

ರಾಜಕೀಯ ಗೊತ್ತಿಲ್ಲ. ಎಲೆಕ್ಷನದಾಗ ಓಟ ಹಾಕಿ ಬರುತ್ತವೆ. ಎ. ಎಲ್. ಎ. ಪರಿಚಯವಿದೆ ಮನೆ ಮಂಜೂರ ಮಾಡಿದ್ದೇವೆಂದು ಹೇಳಿದ್ದಾರೆ. ಇನ್ನೂ ಸೌಲಭ್ಯ ಬಂದು ತಲುಪಿಲ್ಲ.

೧೬. ನಿಮ್ಮ ಸಮುದಾಯದ ಸಮಸ್ಯೆಗಳಿಗಾಗಿ ಯಾವುದಾದರೂ ನಾಯಕರನ್ನು ಸಂಪರ್ಕಿಸಿದ್ದಾರಾ ? ಅವರಿಂದ ಸೂಕ್ತ ಮಾರ್ಗದರ್ಶನ ಸೌಲಭ್ಯಗಳು ನಿಮಗೆ ದೊರಕಿವೆಯೇ ?

ನಮಗೆ ಬೇರೆ ಯಾವ ರಾಜಕೀಯ ನಾಯಕರ ಬಗ್ಗೆ ಗೊತ್ತಿಲ್ಲ.

೧೭. ನಿಮಗೆ ಮತ್ತು ನಿಮ್ಮ ಸಮುದಾಯದ ಅಭಿವೃದ್ಧಿಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮಗೆ ಅರಿವಿದೆಯೆ? ಇಲ್ಲಿಯವರೆಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅನಿಸಿಕೆಗಳೇನು?

ನಮಗೆ ಗೊತ್ತಿಲ್ಲ.

೧೮. ನೀವು ಯಾವುದಾದರೂ ಸರ್ಕಾರದ ಯೋಜನೆಗಳ ಫಲವನ್ನು ಪಡೆದುಕೊಂಡಿದ್ದಾರಾ? ಇನ್ನಿತರರಿಗೆ ಕಾರ್ಯಕ್ರಮಗಳ ಬಗ್ಗೆ ಅರಿವನ್ನು ನೀಡಿದ್ದಾರಾ?

ಸರ್ಕಾರದ ಯಾವ ಯೋಜನೆಗಳನ್ನು ನಾವು ಇಲ್ಲಿಯವರೆಗೆ ಪಡೆದುಕೊಂಡಿಲ್ಲ.

೧೯. ಸರ್ಕಾರದಿಂದ ಇನ್ನೂ ಯಾವ ಯೋಜನೆಗಳು ಜಾರಿಗೊಳ್ಳಬೇಕೆಂದು ಇಚ್ಚಿಸುತ್ತೀರಿ?

ಯೋಜನೆಗಳ ಬಗ್ಗೆ ತಿಳವಳಿಕೆ ಇಲ್ಲ.

೨೦. ಸದ್ಯ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿರುವ ಮಾನ್ಯ ಶ್ರೀ ಸಿದ್ಧರಾಮಯ್ಯನವರು ನಿಮ್ಮ ಸಮುದಾಯಕ್ಕೆ ಸೇರಿದವರು. ನಿಮ್ಮ ಸಮುದಾಯದವರೊಬ್ಬರು ಮುಖ್ಯಮಂತ್ರಿಯಾಗಿರುವುದರಿಂದ ನಿಮಗೆ ಮತ್ತು ನಿಮ್ಮ ಸಮುದಾಯಕ್ಕೆ ವಿಶೇಷವಾಗಿ ದೊರೆತ ಸೌಲಭ್ಯಗಳೇನು?

ನಮ್ಮವರು ಮುಖ್ಯ ಮಂತ್ರಿಯಾಗಿದ್ದಾರೆ ಎಂಬ ಅಭಿಮಾನವಿದೆ. ನಮಗೆ ಯಾವ ಯೋಜನೆಗಳು ಗೊತ್ತಿಲ್ಲ. ಹೀಗಾಗಿ ಯಾವುಗಳನ್ನು ಪಡೆದು ಕೊಂಡಿಲ್ಲ.

೨೧. ಅವರು ಮುಖ್ಯಮಂತ್ರಿಯಾಗಿರುವುದರಿಂದ ನಿಮ್ಮ ಸಮುದಾಯ ಅಭಿವೃದ್ಧಿಗೆ ಏನಾದರೂ ಸಹಾಯವಾಗಿದೆಯೇ?

ಇಲ್ಲಿ ತನಕ ಏನು ಮಾಡಿಲ್ಲ. ಮುಂದೆ ಮಾಡಬಹುದು.

೨೨. ಅಹಿಂದ ವರ್ಗಗಳ ಅಭಿವೃದ್ಧಿಗೆ ಅವರು ಜಾರಿಗೊಳಿಸಿರುವ ಯೋಜನೆಗಳು ನಿಮಗೆ ತಲುಪಿವೆಯೇ?

ಗೊತ್ತಿಲ್ಲ.

೧. ಸಂದರ್ಶಕರ ವೈಯಕ್ತಿಕ ವಿವರಗಳು :

೧.೧	ಸಂದರ್ಶಕರ ಹೆಸರು ಮತ್ತು ವಿಳಾಸ	: ಮಾರುತಿ ಭರಮಪ್ಪ ಪೂಜೇರಿ. ಅಲಕನೂರ
೧.೨	ದೂರವಾಣಿ ಸಂಖ್ಯೆ	: ಮೊಬೈಲ ಇಲ್ಲ
೧.೩	ಜಾತಿ & ಒಳ ಪಂಗಡ	: ಕುರುಬ. ಹತ್ತಿ ಕಂಕಣ
೧.೪	ವಯಸ್ಸು	: ೬೫
೧.೫	ಶಿಕ್ಷಣ	: ರಾತ್ರಿ ಶಾಲೆ ಕಲಿತಿದ್ದೇನೆ. ಓದಲು ಬರುತ್ತದೆ ಸಾವಕಾಶವಾಗಿ ಬರೆಯುತ್ತೇನೆ.
೧.೬	ಪತ್ನಿ ಮತ್ತು ಮಕ್ಕಳ ಶಿಕ್ಷಣ	: ಪತ್ನಿ ಶಾಲೆ ಕಲಿತಿಲ್ಲ. ಇಬ್ಬರು ಜನ ಗಂಡು ಮಕ್ಕಳು ಶಾಲೆ ಕಲಿತಿದ್ದಾರೆ. ಇಬ್ಬರು ಹೆಣ್ಣು ಮಕ್ಕಳು ಶಾಲೆಗೆ ಹೋಗಿಲ್ಲ.
೧.೭	ಮನೆ / ಜಮೀನು	: ೧೦ ಎಕರೆ
೧.೮	ಕುಟುಂಬ ವಿಭಕ್ತ / ಅವಿಭಕ್ತ	: ವಿಭಕ್ತ ಕುಟುಂಬ
೧.೯	ಸದಸ್ಯರ ಸಂಖ್ಯೆ	: ೬ ಜನ
೧೧೦	ಉದ್ಯೋಗ	: ಒಕ್ಕಲುತನ
೧.೧೧	ಕುಟುಂಬದಲ್ಲಿ ದುಡಿಯುವವರ ಸಂಖ್ಯೆ	: ೪
೧.೧೨	ಕುಟುಂಬದ ಆರ್ಥಿಕ ಮೂಲ	: ಒಕ್ಕಲುತನ ಆಡು-ಕುರಿ, ದನ-ಕರ ಸಾಕಾಣಿಕೆ
೧.೧೩	ವಾರ್ಷಿಕ ಆದಾಯ	: ೧,೦೦,೦೦೦=೦೦

೨. ಮನೆತನದ ಮುಖ್ಯ ಉದ್ಯೋಗ, ಇಂದಿನ ಉದ್ಯೋಗ ಹೊಂದಲು ಕಾರಣವೇನು ?

೧೦ ಎಕರೆ ನೀರಾವರಿ ಜಮೀನು ಇರುವುದರಿಂದ ಒಕ್ಕಲುತನ ಮುಖ್ಯ ಉದ್ಯೋಗವಾಗಿದೆ. ಜೊತೆಗೆ ಹಾಲು-ಹೈನ ಮತ್ತು ತೋಟದ ಗೊಬ್ಬರಕ್ಕಾಗಿ ದನ-ಕರಗಳನ್ನು ಸಾಕಾತ್ತೇವೆ.

೩. ಗ್ರಾಮದಲ್ಲಿ ನಡೆಯುವ ಇತರೆ ಸಮುದಾಯಗಳ ಕಾರ್ಯಕ್ರಮದಲ್ಲಿ ನೀವು ಯಾವ-ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಿ ಮತ್ತು ಯಾಕೆ? ನಿಮಗೆ ಭಾಗವಹಿಸಲಿಕ್ಕೆ ಅವಕಾಶವಿರದ ಕಾರ್ಯಕ್ರಮಗಳು ಯಾವುವು? ಅದಕ್ಕೆ ನಿಮ್ಮ ಅಭಿಪ್ರಾಯವೇನು ?

ಊರಲ್ಲಿ ಕುರುಬರೇ ಹೆಚ್ಚಾಗಿದ್ದೇವೆ. ಇನ್ನೊಳಿದ ಜಾತಿಯವರು ಕಡಿಮೆ. ನಮ್ಮಲ್ಲಿ ಯಾವುದೇ ಭೇದ-ಭಾವ ಇಲ್ಲ ಬೇರೆ ಸಮುದಾಯದವರ ಜೊತೆ ಒಳ್ಳೆಯ ಸಂಬಂಧವಿದೆ. ಎಲ್ಲರು ಕರೇಸಿದ್ಧಗ ಬರುತ್ತಾರೆ. ನಮ್ಮನ್ನು ಅವರ ಕಾರ್ಯಕ್ರಮಗಳಿಗೆ ಕರೆಯುತ್ತಾರೆ ನಾವು ಹೋಗುತ್ತೇವೆ.

೪. ನಿಮ್ಮ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಆಹ್ವಾನಿಸುತ್ತಿರಾ ? ಯಾಕೆ ?

ಊರಲ್ಲಿರುವ ಎಲ್ಲಾ ಜಾತಿಯವರನ್ನು ನಮ್ಮ ಕಾರ್ಯಗಳಿಗೆ ಕರೆಯುತ್ತೇವೆ. ಎಲ್ಲ ಜಾತಿಯವರು ಬರುತ್ತಾರೆ. ನಮ್ಮನ್ನು ಕರೆಯುತ್ತಾರೆ ನಾವು ಅವರ ಕಾರ್ಯಗಳಿಗೆ ಹೋಗುತ್ತೇವೆ.

೫. ಆಹಾರ ಪದ್ಧತಿ. ಸಸ್ಯಹಾರಿ / ಮಾಂಸಾಹಾರಿ ಯಾಕೆ ? ಧರ್ಮದ/ ಸಂಪ್ರದಾಯಗಳ ನಿರ್ಬಂಧವಿದೆಯೇ?

ನಮಗ ಸಸ್ಯಾಹಾರ ಮತ್ತು ಮಾಂಸಾಹಾರ ಎರಡು ನಡೆಯುತ್ತದೆ. ಆದರೆ ಮಾಂಸಾಹಾರ ಸೇವನೆ ಮಾಡಿದಾಗ ಕರೇಸಿದ್ಧನ ಗುಡಿಗೆ ಹೋಗುವುದಿಲ್ಲ. ಮರುದಿನ ಜಳಕ ಮಾಡಿಯೇ ಗುಡಿಗೆ ಹೋಗುತ್ತೇವೆ.

೬. ಹಬ್ಬ-ಹರಿದಿನ ಮದುವೆ/ ಇನ್ನಿತರ ಸಮಾರಂಭಗಳಲ್ಲಿ ಪ್ರಾಣಿ ಬಲಿ ಕೊಡುತ್ತಿರಾ ಯಾಕೆ ?

ನಮ್ಮಲ್ಲಿ ಪ್ರಾಣಿ ಬಲಿ ಕೊಡುತ್ತೇವೆ. ಸೀಮೆ ಲಕ್ಕವ್ವ, ಬಾಂವಿ ಲಕ್ಕವ್ವಗ ಕೋಳಿ, ಹುಂಜ, ಹೋತಗಳನ್ನು ಬಲಿ ಕೋಡುತ್ತಾರೆ.

೭. ಮದುವೆ ಪದ್ಧತಿ ಹೇಗಿದೆ ? ಯಾವ ರೀತಿಯಲ್ಲಿ ವಧು ವರರ ಆಯ್ಕೆ ಮಾಡುತ್ತೀರಿ ? ನಿಮ್ಮಲ್ಲಿಯೇ ಇರುವ ಯಾವ-ಯಾವ ಉಪ ಪಂಗಡಗಳ ಜೊತೆಯಲ್ಲಿ ವಿವಾಹ ಸಂಬಂಧಗಳು ನಡೆಯುತ್ತವೆ / ನಡೆಯುವುದಿಲ್ಲ. ಕಾರಣವೇನು ?

ನನ್ನದು ಮೂರದಿನದ ಮದುವೆ ಆಗಿತ್ತು. ಈಗೆಲ್ಲ ಒಂದ ದಿನದ ಮದುವೆ ನಡೆಯುತ್ತಿವೆ. ಮದುವೆಯಲ್ಲಿ ಗುಗ್ಗಳ ಹೊಂಗಾಡ ಇದೆ.

೮. ಮನೆತನದ ಮೂಲ ದೈವ (ಮನೆ ದೇವರು) ಮತ್ತು ಇತರ ಆಚರಣೆ ದೈವಗಳು ಯಾವುವು?

ಮೂಲ ಮನೆ ದೇವರು ಕರೇಸಿದ್ಧ. ಇದಲ್ಲದೆ ಹಳ್ಯಾಳ (ಅಥಣಿ ತಾಲೂಕ) ಶಿವರಾಯ ಮುತ್ಯಾ, ಕಡೋಳಿ ಇಟರಾಯ, ಚಿಂಚಲಿ ಮಾಯವ್ವ, ಗುಡ್ಡದ ಯಲ್ಲವ್ವ, ಯಲ್ಪಾರಟ್ಟಿ ಅರಣ್ಯಸಿದ್ಧ ದೇವರಿಗೆ ಹೋಗುತ್ತವೆ.

೯. ನಿಮ್ಮ ಮನೆತನದ ದೇವಾಲಯ/ ಮಠಗಳಿಗೆ ಯಾವಾಗ ಭೇಟ್ಟಿ ಕೊಡುತ್ತೀರಿ? ಪ್ರತಿ ದಿನ/ ವಾರ/ತಿಂಗಳು/ವರ್ಷ. ನಿಮ್ಮೂರನ್ನು ಹೊರತು ಪಡಿಸಿ ನೀವು ಭೇಟ್ಟಿ ನೀಡುವ ಧಾರ್ಮಿಕ ಸ್ಥಳಗಳು. ಯಾಕೆ?

ಕರೇಸಿದ್ಧ ಪ್ರತಿ ದಿನ ಬರುತ್ತೇನೆ. ಗುರುವಾರ ಮತ್ತು ರವಿವಾರಗಳಂದು ಹುಣ್ಣಿಮೆ, ಅಮವಾಸ್ಯೆಗಳಂದು ತಪ್ಪದೇ ದೇವರ ಗುಡಿಗೆ ಹೋಗುತ್ತೇನೆ. ಚಿಂಚಲಿ ಮಾಯವ್ವನ ಜಾತ್ರೆ, ಕಡೋಲಿ ಇಟ್ಟಪ್ಪನ ಜಾತ್ರೆಗೆ ಹೋಗುತ್ತೇವೆ.

೧೦. ವರ್ಷದಲ್ಲಿ ಆಚರಿಸುವ ಹಬ್ಬಗಳಿಗಾಗಿ ಮಾಡುವ ಖರ್ಚು ಎಷ್ಟು ? ಇನ್ನಿತರ (ಶಿಕ್ಷಣ ಮತ್ತು ಸಾಮಾಜಿಕ) ಕಾರ್ಯಗಳಿಗಾಗಿ ಮಾಡುವ ಖರ್ಚು ಎಷ್ಟು ?

ಹಬ್ಬ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆಗಳಿಗಾಗಿ ವರ್ಷಕ್ಕೆ ಸುಮಾರು ೨೦ ರಿಂದ ೨೫ ಸಾವಿರ ರೂ. ಗಳ ವರೆಗೆ ಖರ್ಚಾಗುತ್ತದೆ. ಶಿಕ್ಷಣಕ್ಕಾಗಿ ವರ್ಷಕ್ಕೆ ೧೫ ರಿಂದ ೨೦ ಸಾವಿರ ರೂ. ಗಳು ಖರ್ಚಾಗುತ್ತವೆ.

೧೧.ನೀವು ಆಚರಿಸಲೇ ಬೇಕಾದ ಧಾರ್ಮಿಕ ಆಚರಣೆಗಳಾವವು? ಈ ಆಚರಣೆಗಳಿಂದ ನಿಮಗಾಗುವ ಲಾಭಗಳೇನು? ಈ ಆಚರಣೆಗಳನ್ನು ಮುಂದುವರೆಸಬೇಕೆ/ ಮೊಟಕುಗೊಳಿಸಬೇಕೆ. ಯಾಕೆ ? ಇತ್ತೀಚಿಗೆ ಧಾರ್ಮಿಕ ಮೌಢ್ಯಗಳನ್ನು ಕೈ ಬಿಡುವಂತೆ ಸಮಾಜ ಸುಧಾರಕರು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ವರ್ಷದಕ್ಕೊಮ್ಮೆ ಬರುವ ಯುಗಾದಿ ಹಬ್ಬ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತೇವೆ. ಕಾರ ಹುಣ್ಣಿಮೆಯಂದು ದನ-ಕರುಗಳನ್ನೆಲ್ಲ ಮೈತೊಳೆದು ಗುಲ್ಲಾ ಹಚ್ಚಿ ಪೂಜೆ ಮಾಡುತ್ತೇವೆ. ಮೊದಲಿನಿಂದಲೂ ಹಿರಿಯರು ಇವುಗಳನ್ನು ಮಾಡಿಕೊಂಡು ಬಂದಿದ್ದಾರೆ. ನಾವು ಮಾಡಿಕೊಂಡು ಹೋಗುತ್ತಿದ್ದೇವೆ. ಒಂದು ವೇಳೆ

ಮನೆಯಲ್ಲಿ ಯಾರಾದರೂ ತೀರಿಕೊಂಡರು ಕೂಡ ಅಂತ್ಯ ಕ್ರಿಯೆ ಮಾಡಿ ಮುಗಿಸಿ ಇವುಗಳ ಆಚರಣೆ ಮಾಡುತ್ತೇವೆ. ಇವುಗಳನ್ನು ಆಚರಿಸದೆ ಬಿಡುವುದಿಲ್ಲ.

೧೨.ನಿಮ್ಮ ಕುಟುಂಬ/ ಸಮುದಾಯದಲ್ಲಿ ಅಂತರ ಜಾತಿ ವಿವಾಹಗಳಾಗಿವೆಯೇ? ಅವರ ಜೊತೆ ನಿಮ್ಮ ಸಂಪರ್ಕ ಹೇಗಿದೆ? ಹಬ್ಬ-ಹರಿದಿನ, ಧಾರ್ಮಿಕ & ಸಾರ್ವಜನಿಕ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿತ್ತಿರಾ/ಅಹ್ವಾನಿಸುವುದಿಲ್ಲ ಯಾಕೆ ? ಅವರ ಮಕ್ಕಳ ಜೊತೆ ವಿವಾಹ ಸಂಪರ್ಕ ಬೆಳೆಸಲು ಇಷ್ಟ ಪಡುತ್ತಿರಾ ?

ನಮ್ಮ ಮನೆತನದಲ್ಲಿ ಅಂತರ್ ಜಾತಿ ಮದುವೆಗೆ ಅವಕಾಶವಿಲ್ಲ. ಧಾರ್ಮಿಕ ಆಚರಣೆಗಳಿಗೆ ಅವರನ್ನು ಕರೆಯುವುದಿಲ್ಲ. ಕರೆದರು ಊಟಕ್ಕಷ್ಟೇ ಕರೆಯುತ್ತೇವೆ. ಅಂಥವರ ಜೊತೆ ನಮ್ಮ ಸಂಪರ್ಕ ಕಡಿಮೆ.

೧೩.ವಿಧವಾ ವಿವಾಹಕ್ಕೆ ನಿಮ್ಮ ಸಮುದಾಯಗಳಲ್ಲಿ ಅವಕಾಶವಿದೆಯೇ ?

ಉಡಿಕೆ ಪದ್ಧತಿ ಜಾರಿಯಲ್ಲಿವೆ.

೧೪.ಶವ ಸಂಸ್ಕಾರ ಪದ್ಧತಿ ಹೇಗಿದೆ ?

ಸಾಮಾನ್ಯವಾಗಿ ಕರೇಸಿದ್ಧನ ಪೂಜೇರಿಗಳನ್ನು ಕಿಚ್ಚ (ದಹನ) ಕೊಡುತ್ತಾರೆ. ಇವರನ್ನು ಬಿಟ್ಟು ಉಳಿದ ಜನರನ್ನು ಮಣ್ಣ ಕೊಡುವ ಪದ್ಧತಿ ಇದೆ. ಅಪಘಾತದಲ್ಲಿ ಮಡಿದವರು, ಮಾಲೆ ಧರಿಸಿದವರು, ಮುತ್ತ ಕಟ್ಟಿದ ಹೆಂಗಸರನ್ನು ಮಾತ್ರ ಸುಡುತ್ತಾರೆ.

೧೫.ನೀವು ರಾಜಕೀಯ ಸಂಪರ್ಕ ಹೊಂದಿದ್ದಿರಾ ? ಯಾವುದಾದರೂ ಚುನಾವಣೆಗೆ ಸ್ಪರ್ಧಿಸಿದ್ದಾರಾ?

ಕರೇಸಿದ್ಧನ ಗುಡಿಗೆ ರಾಜಕಾರಣಿಗಳು ಬರುತ್ತಾರೆ. ಆಗ ಮಾತ್ರ ಅವರ ಪರಿಚಯ. ಇದನ್ನು ಬಿಟ್ಟು ರಾಜಕೀಯ ನಮಗೆ ಗೊತ್ತಿಲ್ಲ. ಸಮಾಜದ ಮುಖಂಡರು ಹೇಳಿದ ಹಾಗೆ ಎಲೆಕ್ಷನದಾಗ ಓಟ ಹಾಕಿ ಬರುತ್ತವೆ. ಎ. ಎಲ್. ಎ. ಪರಿಚಯವಿದೆ. ಸರ್ಕಾರದ ಯಾವ ಯೋಜನೆಗಳು ತಲುಪಿಲ್ಲ. ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಇಲ್ಲ.

೧೬.ನಿಮ್ಮ ಸಮುದಾಯದ ಸಮಸ್ಯೆಗಳಿಗಾಗಿ ಯಾವುದಾದರೂ ನಾಯಕರನ್ನು ಸಂಪರ್ಕಿಸಿದ್ದಾರಾ ? ಅವರಿಂದ ಸೂಕ್ತ ಮಾರ್ಗದರ್ಶನ ಸೌಲಭ್ಯಗಳು ನಿಮಗೆ ದೊರಕಿವೆಯೇ ?

ನಮಗೆ ರಾಜಕೀಯ ನಾಯಕರ ಜೊತೆಗೆ ಹೆಚ್ಚು ಸಂಪರ್ಕವಿಲ್ಲ.

೧೭.ನಿಮಗೆ ಮತ್ತು ನಿಮ್ಮ ಸಮುದಾಯದ ಅಭಿವೃದ್ಧಿಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮಗೆ ಅರಿವಿದೆಯೆ? ಇಲ್ಲಿಯವರೆಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಸರ್ಕಾರದ ಯಾವ ಯೋಜನೆಗಳ ಬಗ್ಗೆ ನಮಗೆ ಗೊತ್ತಿಲ್ಲ.

೧೮.ನೀವು ಯಾವುದಾದರೂ ಸರ್ಕಾರದ ಯೋಜನೆಗಳ ಫಲವನ್ನು ಪಡೆದುಕೊಂಡಿದ್ದಾರಾ? ಇನ್ನಿತರರಿಗೆ ಕಾರ್ಯಕ್ರಮಗಳ ಬಗ್ಗೆ ಅರಿವನ್ನು ನೀಡಿದ್ದಾರಾ?

ಸರ್ಕಾರದ ಯಾವ ಯೋಜನೆಗಳನ್ನು ನಾವು ಇಲ್ಲಿಯವರೆಗೆ ಪಡೆದುಕೊಂಡಿಲ್ಲ.

೧೯.ಸರ್ಕಾರದಿಂದ ಇನ್ನೂ ಯಾವ ಯೋಜನೆಗಳು ಜಾರಿಗೊಳ್ಳಬೇಕೆಂದು ಇಚ್ಚಿಸುತ್ತೀರಿ?

ಯೋಜನೆಗಳ ಬಗ್ಗೆ ತಿಳವಳಿಕೆ ಇಲ್ಲ.

೨೦.ಸದ್ಯ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿರುವ ಮಾನ್ಯ ಶ್ರೀ ಸಿದ್ಧರಾಮಯ್ಯನವರು ನಿಮ್ಮ ಸಮುದಾಯಕ್ಕೆ ಸೇರಿದವರು. ನಿಮ್ಮ ಸಮುದಾಯದವರೊಬ್ಬರು ಮುಖ್ಯಮಂತ್ರಿಯಾಗಿರುವುದರಿಂದ ನಿಮಗೆ ಮತ್ತು ನಿಮ್ಮ ಸಮುದಾಯಕ್ಕೆ ವಿಶೇಷವಾಗಿ ದೊರೆತ ಸೌಲಭ್ಯಗಳೇನು?

ನಮ್ಮವರು ಒಮ್ಮೆಯಾದರೂ ಮುಖ್ಯ ಮಂತ್ರಿಯಾಗಿದ್ದಾರೆ ನಮಗಷ್ಟೇ ಸಾಕು. ಸರ್ಕಾರದ ಯಾವ ಯೋಜನೆಗಳು ನಮಗೆ ಗೊತ್ತಿಲ್ಲ. ಹೀಗಾಗಿ ಯಾವುಗಳನ್ನು ನಾವು ಇಲ್ಲಿಯವರೆಗೆ ಪಡೆದು ಕೊಂಡಿಲ್ಲ.

೨೧.ಅವರು ಮುಖ್ಯಮಂತ್ರಿಯಾಗಿರುವುದರಿಂದ ನಿಮ್ಮ ಸಮುದಾಯ ಅಭಿವೃದ್ಧಿಗೆ ಏನಾದರೂ ಸಹಾಯವಾಗಿದೆಯೇ?

ನಮಗೆ ಅದೆಲ್ಲ ತಿಳಿಯುವುದಿಲ್ಲ. ಆದರೂ ಕೆಳಗಿನ ಜಾತಿಯವರಿಗೆಲ್ಲ ಒಳ್ಳೆ ಕೆಲಸ ಮಾಡ್ಯಾರಂತ ಹೇಳುತ್ತಾರೆ. ಅದರ ಬಗ್ಗೆ ನಮಗೆ ಗೊತ್ತಿಲ್ಲ.

೨೨.ಅಹಿಂದ ವರ್ಗಗಳ ಅಭಿವೃದ್ಧಿಗೆ ಅವರು ಜಾರಿಗೊಳಿಸಿರುವ ಯೋಜನೆಗಳು ನಿಮಗೆ ತಲುಪಿವೆಯೇ?

ಅವುಗಳ ಬಗ್ಗೆ ನಮಗೆ ಮಾಹಿತಿ ಗೊತ್ತಿಲ್ಲ.

೧. ಸಂದರ್ಶಕರ ವೈಯಕ್ತಿಕ ವಿವರಗಳು :

೧.೧	ಸಂದರ್ಶಕರ ಹೆಸರು ಮತ್ತು ವಿಳಾಸ	: ಲಗಮಣ್ಣಾ ಲಕ್ಕಣ್ಣಾ ಘಂಟಿ. ಒಡಕಲ್ಲ
೧.೨	ದೂರವಾಣಿ ಸಂಖ್ಯೆ	: ೯೯೦೨೧೫೪೮೫೩೨
೧.೩	ಜಾತಿ & ಒಳ ಪಂಗಡ	: ಕುರುಬ. ಹತ್ತಿ ಕಂಕಣ
೧.೪	ವಯಸ್ಸು	: ೬೦
೧.೫	ಶಿಕ್ಷಣ	: ವಯಸ್ಕರ ಶಿಕ್ಷಣ ಕಲಿತಿದ್ದೇನೆ. ಅಲ್ಪ ಪ್ರಮಾಣದಲ್ಲಿ ಓದಲು ಬರೆಯಲು ಬರುತ್ತದೆ.
೧.೬	ಪತ್ನಿ ಮತ್ತು ಮಕ್ಕಳ ಶಿಕ್ಷಣ	: ಪತ್ನಿ ಶಾಲೆ ಕಲಿತಿಲ್ಲ. ಮೂವರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆದುಕೊಂಡಿದ್ದಾರೆ.
೧.೭	ಮನೆ / ಜಮೀನು	: ೪ ಎಕರೆ
೧.೮	ಕುಟುಂಬ ವಿಭಕ್ತ / ಅವಿಭಕ್ತ	: ವಿಭಕ್ತ ಕುಟುಂಬ
೧.೯	ಸದಸ್ಯರ ಸಂಖ್ಯೆ	: ೧೦ ಜನ
೧೧೦	ಉದ್ಯೋಗ	: ಒಕ್ಕಲುತನ
೧.೧೧	ಕುಟುಂಬದಲ್ಲಿ ದುಡಿಯುವವರ ಸಂಖ್ಯೆ	: ೩
೧.೧೨	ಕುಟುಂಬದ ಆರ್ಥಿಕ ಮೂಲ	: ಒಕ್ಕಲುತನ ಆಡು-ಕುರಿ, ದನ-ಕರ ಸಾಕಾಣಿಕೆ
೧.೧೩	ವಾರ್ಷಿಕ ಆದಾಯ	: ೮೦,೦೦೦=೦೦

೨. ಮನೆತನದ ಮುಖ್ಯ ಉದ್ಯೋಗ, ಇಂದಿನ ಉದ್ಯೋಗ ಹೊಂದಲು ಕಾರಣವೇನು ?

೪ ಎಕರೆ ನೀರಾವರಿ ಜಮೀನು ಇರುವುದರಿಂದ ಒಕ್ಕಲುತನ ಮುಖ್ಯ ಉದ್ಯೋಗವಾಗಿದೆ. ಇತ್ತೀಚಿಗೆ ಆಡು-ಕುರಿಗಳ ಸಾಕಾಣಿಕೆಯಿಂದ ಲಾಭವಾಗುತ್ತದೆಂದು ೨೦-೨೫ ಆಡು-ಕುರಿಗಳನ್ನು ಸಾಕಿದ್ದೇವೆ. ಜೊತೆಗೆ ಹಾಲು-ಹೈನ ಮತ್ತು ತೋಟದ ಗೊಬ್ಬರಕ್ಕಾಗಿ ದನ-ಕರಗಳನ್ನು ಸಾಕಿದ್ದೇವೆ.

೩. ಗ್ರಾಮದಲ್ಲಿ ನಡೆಯುವ ಇತರೆ ಸಮುದಾಯಗಳ ಕಾರ್ಯಕ್ರಮದಲ್ಲಿ ನೀವು ಯಾವ-ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಿ ಮತ್ತು ಯಾಕೆ? ನಿಮಗೆ ಭಾಗವಹಿಸಲಿಕ್ಕೆ ಅವಕಾಶವಿರದ ಕಾರ್ಯಕ್ರಮಗಳು ಯಾವುವು? ಅದಕ್ಕೆ ನಿಮ್ಮ ಅಭಿಪ್ರಾಯವೇನು ?

ನಮ್ಮ ಗ್ರಾಮದಲ್ಲಿ ಎಲ್ಲ ಜಾತಿಯವರು ಇದ್ದಾರೆ. ನಮ್ಮಲ್ಲಿ ಜಾತಿ ಜಗಳ ಇಲ್ಲ. ಎಲ್ಲರೂ ಒಟ್ಟಾಗಿ ಗ್ರಾಮದಲ್ಲಿರುವ ದೇವತೆಗಳ ಜಾತ್ರೆ-ಜಯಂತಿಗಳನ್ನು ಮಾಡುವುದರಿಂದ ಒಳ್ಳೇಯ ಬಾಂಧವ್ಯವಿದೆ. ನಮ್ಮ ದೇವರ ಜಾತ್ರೆಗೆ ಬೇರೆಯವರು ಬರುತ್ತಾರೆ. ಅವರ ದೇವರುಗಳ ಜಾತ್ರೆಗೆ ನಾವು ಹೋಗುತ್ತೇವೆ. ಗ್ರಾಮದಲ್ಲಿ ಸಭೆ-ಸಮಾರಂಭಗಳನ್ನು ಮಾಡುವಾಗ ನಮ್ಮಲ್ಲಿ ಬೇಧ-ಭಾವಗಳಿಲ್ಲ.

೪. ನಿಮ್ಮ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಆಹ್ವಾನಿಸುತ್ತಿರಾ ? ಯಾಕೆ ?

ಗ್ರಾಮದಲ್ಲಿರುವ ಎಲ್ಲ ಸಮುದಾಯದವರನ್ನು ನಮ್ಮ ಮನೆಯಲ್ಲಿ ನಡೆಯುವ ಕಾರ್ಯಕ್ರಮಗಳಾದ ಮದುವೆ, ಕುಬುಸ ಇನ್ನೂಳಿದಂತ ಎಲ್ಲ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಕರೆಯುತ್ತೇವೆ. ನಮ್ಮನ್ನು ತಮ್ಮ ಕಾರ್ಯಕ್ರಮಗಳಿಗೆ ಕರೆಯುತ್ತಾರೆ ನಾವು ಹೋಗುತ್ತೇವೆ.

೫. ಆಹಾರ ಪದ್ಧತಿ. ಸಸ್ಯಹಾರಿ / ಮಾಂಸಾಹಾರಿ ಯಾಕೆ ? ಧರ್ಮದ/ ಸಂಪ್ರದಾಯಗಳ ನಿರ್ಬಂಧವಿದೆಯೇ?

ನಮ್ಮದು ಶಾಖಾಹಾರಿ. ನಾವು ಹಾಲಸಿದ್ಧನ ಭಕ್ತರು. ಸಂಪ್ರದಾಯದ ಪ್ರಕಾರ ಮಾಂಸಾಹಾರಕ್ಕೆ ನಿರ್ಭಂದವಿದೆ.

೬. ಹಬ್ಬ-ಹರಿದಿನ ಮದುವೆ/ ಇನ್ನಿತರ ಸಮಾರಂಭಗಳಲ್ಲಿ ಪ್ರಾಣಿ ಬಲಿ ಕೊಡುತ್ತಿರಾ ಯಾಕೆ ?

ನಮ್ಮಲ್ಲಿ ಪ್ರಾಣಿ ಬಲಿ ಇಲ್ಲ. ಆದರೆ ನಮ್ಮ ಊರಲ್ಲಿರುವ ನಮ್ಮ ಸಮುದಾಯದವರು ಬಲಿ ಕೊಡುತ್ತಾರೆ. ಸೀಮೆ ಲಕ್ಕವ್ವ, ಬಾಂವಿ ಲಕ್ಕವ್ವಗ ಕೋಳಿ, ಹುಂಜ, ಹೋತಗಳನ್ನು ಬಲಿ ಕೋಡುತ್ತಾರೆ.

೭. ಮದುವೆ ಪದ್ಧತಿ ಹೇಗಿದೆ ? ಯಾವ ರೀತಿಯಲ್ಲಿ ವಧು ವರರ ಆಯ್ಕೆ ಮಾಡುತ್ತೀರಿ ? ನಿಮ್ಮಲ್ಲಿಯೇ ಇರುವ ಯಾವ-ಯಾವ ಉಪ ಪಂಗಡಗಳ ಜೊತೆಯಲ್ಲಿ ವಿವಾಹ ಸಂಬಂಧಗಳು ನಡೆಯುತ್ತವೆ / ನಡೆಯುವುದಿಲ್ಲ. ಕಾರಣವೇನು ?

ನಮ್ಮದು ಹತ್ತಿ ಕಂಕಣ. ಈ ಕಂಕಣದಲ್ಲಿಯೇ ವಧು-ವರರನ್ನು ಆಯ್ಕೆ ಮಾಡುತ್ತೇವೆ. ಬೇರೆ ಪಂಗಡಗಳ ಜೊತೆ ಮದುವೆ ನಡೆಯುವುದಿಲ್ಲ. ಏಕೆಂದರೆ ನಮ್ಮ ಸಮುದಾಯದಲ್ಲಿ ಅದಕ್ಕೆ ಗೌರವ ಸಿಗುವುದಿಲ್ಲ. ಈಗ ಒಂದು ದಿನದ ಮದುವೆಗಳೇ ಹೆಚ್ಚಾಗಿ ನಡೆಯುತ್ತಿವೆ. ಅದರಲ್ಲಿಯೂ ಇತ್ತೀಚಿಗೆ ಯಾದಿ ಮೇ ಶಾದಿಗಳು ಹೆಚ್ಚಾಗಿ ಕಂಡು ಬರುತ್ತಿವೆ. ವಧು-ವರರನ್ನು ನಿಶ್ಚಿತ ಮಾಡಿದ ಸಮಯದಲ್ಲಿ (ಕೆಲವು ಸಲ ರಾತ್ರಿ) ಮದುವೆ ಮಾಡುತ್ತಾರೆ. ಈ ಮದುವೆಗಳ ಖರ್ಚು-ವೆಚ್ಚ, ಕೆಲಸ-ಕಾರ್ಯಗಳು ಕಡಿಮೆ. ಒಂದು ದಿನದಾಗ ಮದುವೆ ಮುಗಿದು ಹೋಗುತ್ತದೆ.

೮. ಮನೆತನದ ಮೂಲ ದೈವ (ಮನೆ ದೇವರು) ಮತ್ತು ಇತರ ಆಚರಣೆ ದೈವಗಳು ಯಾವುವು?

ಮನೆ ದೇವರು ಕಂಕಣವಾಡಿ ಹಾಲಸಿದ್ಧ. ನಮ್ಮೂರಲ್ಲಿಯೂ ಹಾಲಸಿದ್ಧ ಇದ್ದಾನೆ ಇಬ್ಬರಿಗೂ ನಡೆದುಕೊಳ್ಳುತ್ತೇವೆ. ಇದಲ್ಲದೆ ಬೆಕ್ಕೇರಿ ಲಕ್ಕವ್ವ, ಚಿಂಚಲಿ ಮಾಯವ್ವ, ಅಲಕನೂರ ಕರೇಸಿದ್ಧ, ಯಲ್ಪಾರಟ್ಟಿ ಅರಣ್ಯಸಿದ್ಧ, ಗುಡ್ಡದ ಯಲ್ಲವ್ವ ದೇವರಿಗೆ ಹೋಗುತ್ತವೆ.

೯. ನಿಮ್ಮ ಮನೆತನದ ದೇವಾಲಯ/ ಮಠಗಳಿಗೆ ಯಾವಾಗ ಭೇಟ್ಟಿ ಕೊಡುತ್ತೀರಿ? ಪ್ರತಿ ದಿನ/ ವಾರ/ತಿಂಗಳು/ವರ್ಷ. ನಿಮ್ಮೂರನ್ನು ಹೊರತು ಪಡಿಸಿ ನೀವು ಭೇಟ್ಟಿ ನೀಡುವ ಧಾರ್ಮಿಕ ಸ್ಥಳಗಳು. ಯಾಕೆ?

ಗುರುವಾರ ಮತ್ತು ರವಿವಾರಗಳಂದು ಹಾಲಸಿದ್ಧನಿಗೆ ಬರುತ್ತೇನೆ. ಅಲ್ಲದೆ ಹುಣ್ಣಿಮೆ, ಅಮವಾಸ್ಯೆಗಳಂದು ತಪ್ಪದೇ ದೇವರ ಗುಡಿಗೆ ಹೋಗುತ್ತೇನೆ. ಕಂಕಣವಾಡಿ ಹಾಲಸಿದ್ಧ, ಬೆಕ್ಕೇರಿ ಲಕ್ಕವ್ವ, ಚಿಂಚಲಿ ಮಾಯವ್ವ, ಅಲಕನೂರಿನ ಕರೇಸಿದ್ಧನ ಜಾತ್ರೆಗಳಿಗೆ ತಪ್ಪದೇ ಹೋಗುತ್ತೇವೆ.

೧೦. ವರ್ಷದಲ್ಲಿ ಆಚರಿಸುವ ಹಬ್ಬಗಳಿಗಾಗಿ ಮಾಡುವ ಖರ್ಚು ಎಷ್ಟು ? ಇನ್ನಿತರ (ಶಿಕ್ಷಣ ಮತ್ತು ಸಾಮಾಜಿಕ) ಕಾರ್ಯಗಳಿಗಾಗಿ ಮಾಡುವ ಖರ್ಚು ಎಷ್ಟು ?

ಹಬ್ಬ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆಗಳಿಗಾಗಿ ವರ್ಷಕ್ಕೆ ಸುಮಾರು ೧೫ ರಿಂದ ೨೦ ಸಾವಿರ ರೂ. ಗಳ ವರೆಗೆ ಖರ್ಚಾಗುತ್ತದೆ. ಮೊಮ್ಮಕ್ಕಳ ಶಿಕ್ಷಣಕ್ಕಾಗಿ ವರ್ಷಕ್ಕೆ ೨೫ ರಿಂದ ೩೦ ಸಾವಿರ ರೂ. ಗಳು ಖರ್ಚಾಗುತ್ತವೆ.

೧೧.ನೀವು ಆಚರಿಸಲೇ ಬೇಕಾದ ಧಾರ್ಮಿಕ ಆಚರಣೆಗಳಾವವು? ಈ ಆಚರಣೆಗಳಿಂದ ನಿಮಗಾಗುವ ಲಾಭಗಳೇನು? ಈ ಆಚರಣೆಗಳನ್ನು ಮುಂದುವರೆಸಬೇಕೆ/ ಮೊಟಕುಗೊಳಿಸಬೇಕೆ. ಯಾಕೆ ? ಇತ್ತೀಚಿಗೆ ಧಾರ್ಮಿಕ ಮೌಢ್ಯಗಳನ್ನು ಕೈ ಬಿಡುವಂತೆ ಸಮಾಜ ಸುಧಾರಕರು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಯುಗಾದಿ, ದೀಪಾವಳಿ, ಪಂಚಮಿ ಹೆಚ್ಚು-ಕಡಿಮೆ ಎಲ್ಲ ಹಬ್ಬಗಳನ್ನು ಆಚರಿಸುತ್ತೇವೆ. ಕಾರ ಹುಣ್ಣಿಮೆಯಂದು ದನ-ಕರುಗಳ ಮೈತೊಳೆದು ಬಣ್ಣ ಹಚ್ಚಿ ಪೂಜೆ ಮಾಡುತ್ತೇವೆ. ಹಬ್ಬದ ದಿವಸ ಹೋಳಿಗೆ-ಕಡಬು ಮಾಡುತ್ತಾರೆ ದೇವರಿಗೆ ನೈವೇದ್ಯ ಅರ್ಪಿಸಿ ಮನೆಯವರೆಲ್ಲ ತಿನ್ನುತ್ತೇವೆ ಹೊಟ್ಟೆ ತುಂಬುತ್ತದೆ ಮತ್ತು ಮನಸ್ಸು ಶಾಂತವಾಗುತ್ತದೆ. ಧಾರ್ಮಿಕ ಆಚರಣೆಗಳನ್ನು ಸಮುದಾಯದ ಎಲ್ಲರೂ ಕೂಡಿಕೊಂಡು ಆಚರಿಸುವುದರಿಂದ ನಮ್ಮಲ್ಲಿ ಪ್ರೀತಿ, ಬಾಂಧವ್ಯಗಳು ಹೆಚ್ಚಾಗುತ್ತವೆ. ಮೊದಲಿನಿಂದಲೂ ಹಿರಿಯರು ಸಂಪ್ರದಾಯಗಳನ್ನು ಮಾಡಿದ್ದಾರೆ. ನಾವು ಅವುಗಳ ಆಚರಣೆಯನ್ನು ಬಿಡುವುದಿಲ್ಲ.

೧೨.ನಿಮ್ಮ ಕುಟುಂಬ/ ಸಮುದಾಯದಲ್ಲಿ ಅಂತರ ಜಾತಿ ವಿವಾಹಗಳಾಗಿವೆಯೇ? ಅವರ ಜೊತೆ ನಿಮ್ಮ ಸಂಪರ್ಕ ಹೇಗಿದೆ? ಹಬ್ಬ-ಹರಿದಿನ, ಧಾರ್ಮಿಕ & ಸಾರ್ವಜನಿಕ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿತ್ತಿರಾ/ಅಹ್ವಾನಿಸುವುದಿಲ್ಲ ಯಾಕೆ ? ಅವರ ಮಕ್ಕಳ ಜೊತೆ ವಿವಾಹ ಸಂಪರ್ಕ ಬೆಳೆಸಲು ಇಷ್ಟ ಪಡುತ್ತಿರಾ ?

ನಮ್ಮಲ್ಲಿ ಅಂತರ್ ಜಾತಿ ಮದುವೆಗಳು ನಡೆಯುವುದಿಲ್ಲ. ಆದರೂ ಶಾಲೆ ಕಲಿತ ಹುಡುಗರು ಜಾತಿ ನೋಡಲಾರದೆ ಮದುವೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮಂಥ ಸಣ್ಣವರ ಮನೆಯಲ್ಲಿ ನಡೆದರೆ ಸಮಸ್ಯೆಯಾಗುತ್ತದೆ. ದೊಡ್ಡವರ ಮನೆಗೆ ಇಂಥ ಮದುವೆಯಾದರೆ ಏನೂ ಸಮಸ್ಯೆಯಾಗುವುದಿಲ್ಲ.

೧೩.ವಿಧವಾ ವಿವಾಹಕ್ಕೆ ನಿಮ್ಮ ಸಮುದಾಯಗಳಲ್ಲಿ ಅವಕಾಶವಿದೆಯೇ ?

ಈ ಪದ್ಧತಿ ಬಹಳ ಕಡಿಮೆ ಪ್ರಮಾಣದಲ್ಲಿದೆ. ಮಕ್ಕಳಾದ ಮೇಲೆ ಗಂಡ ತೀರಿಕೊಂಡರೆ ಅವರು ಮರು ಮದುವೆಯಾಗುವುದಿಲ್ಲ. ಮಕ್ಕಳಾಗದೆ ಚಿಕ್ಕ ವಯಸ್ಸಿನಲ್ಲಿದ್ದಾಗ ಗಂಡ ತೀರಿಕೊಂಡಾಗ ಮರು ಮದುವೆ ಮಾಡುವರು.

೧೪.ಶವ ಸಂಸ್ಕಾರ ಪದ್ಧತಿ ಹೇಗಿದೆ ?

ಸಾಮಾನ್ಯವಾಗಿ ಮಣ್ಣು ಕೊಡುವ (ಹೂಳುವ) ಪದ್ಧತಿಯನ್ನೇ ಮಾಡುತ್ತೇವೆ. ಇತ್ತೀಚಿಗೆ ಸುಡುವ ಪದ್ಧತಿ ಕಂಡು ಬರುತ್ತಿದೆ. ಅಪಘಾತದಲ್ಲಿ ಮಡಿದವರು, ಮಾಲೆ ಧರಿಸಿದವರು, ಮುತ್ತ ಕಟ್ಟಿದ ಹೆಂಗಸರನ್ನು ಕಿಚ್ಚಾ (ದಹನ) ಕೊಡುತ್ತಾರೆ.

೧೫.ನೀವು ರಾಜಕೀಯ ಸಂಪರ್ಕ ಹೊಂದಿದ್ದಿರಾ? ಯಾವುದಾದರೂ ಚುನಾವಣೆಗೆ ಸ್ಪರ್ಧಿಸಿದ್ದಾರಾ?

ನನಗೆ ವೈಯಕ್ತಿಕವಾಗಿ ರಾಜಕಾರಣಿಗಳ ಪರಿಚಯವಿಲ್ಲ. ಆದರೆ ಮಕ್ಕಳು ಮತ್ತು ಸೊಸೆಯಂದಿರು ಎಲೆಕ್ಷನಗೆ ಸ್ಪರ್ಧಿಸಿದ್ದರು. ಒಬ್ಬ ಮಗ ಪಂಚಾಯತಿ ಏಲೆಕ್ಷನಗೆ ನಿಂತ ಆರಿಸಿ ಬಂದಿದ್ದಾನೆ. ನನ್ನದು ಎಲೆಕ್ಷನದಾಗ ಓಟ ಹಾಕಿ ಬಂದರೆ ಮುಗಿಯಿತು.

೧೬.ನಿಮ್ಮ ಸಮುದಾಯದ ಸಮಸ್ಯೆಗಳಿಗಾಗಿ ಯಾವುದಾದರೂ ನಾಯಕರನ್ನು ಸಂಪರ್ಕಿಸಿದ್ದಾರಾ? ಅವರಿಂದ ಸೂಕ್ತ ಮಾರ್ಗದರ್ಶನ ಸೌಲಭ್ಯಗಳು ನಿಮಗೆ ದೊರಕಿವೆಯೇ ?

ರಾಜಕೀಯ ನಾಯಕರ ಪರಿಚಯವಿಲ್ಲ. ಸರ್ಕಾರದ ಯಾವ ಯೋಜನೆಗಳ ಬಗ್ಗೆ ನಾವು ಮಾರ್ಗದರ್ಶನ ಪಡೆದು ಕೊಂಡಿಲ್ಲ.

೧೭.ನಿಮಗೆ ಮತ್ತು ನಿಮ್ಮ ಸಮುದಾಯದ ಅಭಿವೃದ್ಧಿಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮಗೆ ಅರಿವಿದೆಯೆ? ಇಲ್ಲಿಯವರೆಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಸರ್ಕಾರದ ಯಾವ ಯೋಜನೆಗಳ ಬಗ್ಗೆ ನಮಗೆ ಅರಿವು ಇಲ್ಲ. ನಮಗೆ ರಾಜಕೀಯ ನಾಯಕರ ಜೊತೆಗೆ ಹೆಚ್ಚು ಸಂಪರ್ಕವಿಲ್ಲ. ಶಾಲೆಯ ಮಕ್ಕಳಿಗೆ ಸ್ಕಾಲರಶಿಪ್ ಕೊಡುತ್ತಾರೆ. ಅದು ಇನ್ನೂ ಹೆಚ್ಚಿಗೆ ಆಗಬೇಕು. ನಮ್ಮ ಹುಡುಗರಿಗೆ ಇನ್ನೂ ಹೆಚ್ಚು ನೌಕರಿ ಸಿಗುವಂತೆ ಸರ್ಕಾರ ಅವಕಾಶ ಮಾಡಿ ಕೊಡಬೇಕು. ಡಾಕ್ಟರ ಸೀಟ ನಮ್ಮ ಹುಡುಗರಿಗೆ ಸಿಗುವಂತಾಗಬೇಕು.

೧೮.ನೀವು ಯಾವುದಾದರೂ ಸರ್ಕಾರದ ಯೋಜನೆಗಳ ಫಲವನ್ನು ಪಡೆದುಕೊಂಡಿದ್ದಾರಾ? ಇನ್ನಿತರರಿಗೆ ಕಾರ್ಯಕ್ರಮಗಳ ಬಗ್ಗೆ ಅರಿವನ್ನು ನೀಡಿದ್ದಾರಾ?

ಸರ್ಕಾರದ ಯಾವ ಯೋಜನೆಗಳನ್ನು ನಾವು ಇಲ್ಲಿಯವರೆಗೆ ಪಡೆದುಕೊಂಡಿಲ್ಲ.

೧೯.ಸರ್ಕಾರದಿಂದ ಇನ್ನೂ ಯಾವ ಯೋಜನೆಗಳು ಜಾರಿಗೊಳ್ಳಬೇಕೆಂದು ಇಚ್ಚಿಸುತ್ತೀರಿ?

ಯೋಜನೆಗಳ ಬಗ್ಗೆ ತಿಳವಳಿಕೆ ಇಲ್ಲ.

೨೦.ಸದ್ಯ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿರುವ ಮಾನ್ಯ ಶ್ರೀ ಸಿದ್ಧರಾಮಯ್ಯನವರು ನಿಮ್ಮ ಸಮುದಾಯಕ್ಕೆ ಸೇರಿದವರು. ನಿಮ್ಮ ಸಮುದಾಯದವರೊಬ್ಬರು ಮುಖ್ಯಮಂತ್ರಿಯಾಗಿರುವುದರಿಂದ ನಿಮಗೆ ಮತ್ತು ನಿಮ್ಮ ಸಮುದಾಯಕ್ಕೆ ವಿಶೇಷವಾಗಿ ದೊರೆತ ಸೌಲಭ್ಯಗಳೇನು?

ಅವರು ಬೆಂಗಳೂರಾಗ ಇರುವವರು. ನಮಗೇನು ಮಾಡತಾರ. ಎ. ಎಮ್.ಎಲ್. ಏಲೆಕ್ಷನದಾಗ ಕೆಲವರು ಬಂದು ಸಿದ್ಧರಾಮಯ್ಯನನ್ನು ಮುಖ್ಯ ಮಂತ್ರಿ ಮಾಡುವುದೈತಿ ನಮಗ ಓಟ ಹಾಕರಿ ಅಂತ ಬಂದಿದ್ದರು. ನಂತರ ಅವರು ತಿರುಗಿ ನಮ್ಮ ಕಡೆಗೆ ಬಂದಿಲ್ಲ. ಆದರೂ ನಮ್ಮ ಜಾತಿಯ ಸಿದ್ಧರಾಮಯ್ಯ ಮುಖ್ಯ ಮಂತ್ರಿಯಾಗಿದ್ದಾನೆ ನಮಗ ಖುಷಿಯಿದೆ. ನಾವು ರೈತರು ಎರಡು–ಮೂರು ವರ್ಷ ಸರಿಯಾಗಿ ಮಳೆ–ಬೆಳೆ ಬಂದಿಲ್ಲ. ಸಾಲ ಸೂಟ (ಮನ್ನಾ) ಮಾಡಿದರೆ ಒಳ್ಳೇಯದಾಗುತ್ತದೆ.

೨೧.ಅವರು ಮುಖ್ಯಮಂತ್ರಿಯಾಗಿರುವುದರಿಂದ ನಿಮ್ಮ ಸಮುದಾಯ ಅಭಿವೃದ್ಧಿಗೆ ಏನಾದರೂ ಸಹಾಯವಾಗಿದೆಯೇ?

ನಮಗೆ ಅದರ ಬಗ್ಗೆ ಹೆಚ್ಚಾಗಿ ಗೊತ್ತಿಲ್ಲ. ನಮ್ಮ ಜಾತಿಯ ಬಡ ಹುಡುಗರಿಗೆ ಪುಕ್ಕಟೆ ಶಾಲೆ ಕಾಲೇಜುಗಳನ್ನು ತೆಗೆಯಬೇಕು. ಹಾಸ್ಟೇಲಗಳನ್ನು ಆರಂಭಿಸಬೇಕು. ಆಗ ಏನಾದರೂ ಸ್ವಲ್ಪ ನಮ್ಮ ಜನ ಸುಧಾರಿಸುತ್ತಾರೆ ಅಭಿವೃದ್ಧಿ ಆಗುತ್ತದೆ.

೨೨.ಅಹಿಂದ ವರ್ಗಗಳ ಅಭಿವೃದ್ಧಿಗೆ ಅವರು ಜಾರಿಗೊಳಿಸಿರುವ ಯೋಜನೆಗಳು ನಿಮಗೆ ತಲುಪಿವೆಯೇ?

ಯೋಜನೆಗಳ ಬಗ್ಗೆ ನಮಗೆ ಮಾಹಿತಿ ಗೊತ್ತಿಲ್ಲ.

೧. ಸಂದರ್ಶಕರ ವೈಯಕ್ತಿಕ ವಿವರಗಳು :

೧.೧	ಸಂದರ್ಶಕರ ಹೆಸರು ಮತ್ತು ವಿಳಾಸ	: ಭೀಮಪ್ಪ ಪುಂಡಲೀಕ ಕಟ್ಟಿಕಾರ. ಬೆಕ್ಕೇರಿ
೧.೨	ದೂರವಾಣಿ ಸಂಖ್ಯೆ	: ೮೦೮೮೧೭೫೮೪
೧.೩	ಜಾತಿ & ಒಳ ಪಂಗಡ	: ಕುರುಬ. ಹಾಲುಮತ ಹತ್ತಿ ಕಂಕಣ
೧.೪	ವಯಸ್ಸು	: ೫೫
೧.೫	ಶಿಕ್ಷಣ	: ಶಾಲೆ ಕಲಿತಿಲ್ಲ
೧.೬	ಪತ್ನಿ ಮತ್ತು ಮಕ್ಕಳ ಶಿಕ್ಷಣ	: ಪತ್ನಿ ಶಾಲೆ ಕಲಿತಿಲ್ಲ. ಒಬ್ಬ ಗಂಡು ಮಗ ೬ನೇ ತರಗತಿಯವರೆಗೆ ಶಾಲೆ ಕಲಿತಿದ್ದಾನೆ.
೧.೭	ಮನೆ / ಜಮೀನು	: ೧ ಎಕರೆ
೧.೮	ಕುಟುಂಬ ವಿಭಕ್ತ / ಅವಿಭಕ್ತ	: ವಿಭಕ್ತ ಕುಟುಂಬ
೧.೯	ಸದಸ್ಯರ ಸಂಖ್ಯೆ	: ೩ ಜನ
೧೧೦	ಉದ್ಯೋಗ	: ಒಕ್ಕಲುತನ
೧.೧೧	ಕುಟುಂಬದಲ್ಲಿ ದುಡಿಯುವವರ ಸಂಖ್ಯೆ	: ೧
೧.೧೨	ಕುಟುಂಬದ ಆರ್ಥಿಕ ಮೂಲ	: ಒಕ್ಕಲುತನ ಆಡು-ಕುರಿ, ದನ-ಕರ ಸಾಕಾಣಿಕೆ
೧.೧೩	ವಾರ್ಷಿಕ ಆದಾಯ	: ೨೦,೦೦೦=೦೦

೨. ಮನೆತನದ ಮುಖ್ಯ ಉದ್ಯೋಗ, ಇಂದಿನ ಉದ್ಯೋಗ ಹೊಂದಲು ಕಾರಣವೇನು ?

೧ ಎಕರೆ ನೀರಾವರಿ ಜಮೀನು ಇರುವುದರಿಂದ ಒಕ್ಕಲುತನ ಮುಖ್ಯ ಉದ್ಯೋಗವಾಗಿದೆ. ಇತ್ತೀಚಿಗೆ ಹಾಲು-ಹೈನ ಮತ್ತು ತೋಟದ ಗೊಬ್ಬರಕ್ಕಾಗಿ ದನ-ಕರಗಳನ್ನು ಸಾಕಿದ್ದೇವೆ.

೩. ಗ್ರಾಮದಲ್ಲಿ ನಡೆಯುವ ಇತರೆ ಸಮುದಾಯಗಳ ಕಾರ್ಯಕ್ರಮದಲ್ಲಿ ನೀವು ಯಾವ-ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಿ ಮತ್ತು ಯಾಕೆ? ನಿಮಗೆ ಭಾಗವಹಿಸಲಿಕ್ಕೆ ಅವಕಾಶವಿರದ ಕಾರ್ಯಕ್ರಮಗಳು ಯಾವುವು? ಅದಕ್ಕೆ ನಿಮ್ಮ ಅಭಿಪ್ರಾಯವೇನು ?

ಗ್ರಾಮದಲ್ಲಿ ಎಲ್ಲ ಜಾತಿಯವರು ಒಳ್ಳೇಯ ಭಾಂದವ್ಯದಿಂದ ಇದ್ದೇವೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಎಲ್ಲರೂ ಗ್ರಾಮದ ಲಕ್ಕವ್ವ ದೇವಿ ಮತ್ತು ಇತರ ಜಾತ್ರೆ-ಜಯಂತಿಗಳನ್ನು ಒಟ್ಟಾಗಿ ಮಾಡುತ್ತೇವೆ. ನಾವು ಅವರ ಕಾರ್ಯಕ್ರಮಗಳಿಗೆ ಹೋಗುತ್ತೇವೆ. ಅವರು ನಮ್ಮ ಕಾರ್ಯಕ್ರಮಗಳಿಗೆ ಬರುತ್ತಾರೆ.

೪. ನಿಮ್ಮ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಆಹ್ವಾನಿಸುತ್ತಿರಾ ? ಯಾಕೆ ?

ಗ್ರಾಮದಲ್ಲಿರುವ ಎಲ್ಲ ಜನರು ಹೊಂದಾಣಿಕೆಯಿಂದ ಇದ್ದೇವೆ. ಹೀಗಾಗಿ ನಮ್ಮ ಮನೆಯಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಕರೆಯುತ್ತೇವೆ. ಅವರು ಕರೆಯುತ್ತಾರೆ ನಾವು ಕೂಡ ಅವರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇವೆ.

೫. ಆಹಾರ ಪದ್ಧತಿ. ಸಸ್ಯಹಾರಿ / ಮಾಂಸಾಹಾರಿ ಯಾಕೆ ? ಧರ್ಮದ/ ಸಂಪ್ರದಾಯಗಳ ನಿರ್ಬಂಧವಿದೆಯೇ?

ನಮ್ಮದು ಶಾಖಾಹಾರಿ ಮತ್ತು ಮಾಂಸಾಹಾರಿ ಎರಡು ನಡೆಯುತ್ತದೆ. ಮಾಂಸಾಹಾರದ ಊಟ ಮಾಡಿದಾಗ ಗುಡಿ ಗುಂಡಾರಗಳಿಗೆ ಹೋಗುವುದಿಲ್ಲ. ಸಂಪ್ರದಾಯದ ಪ್ರಕಾರ ಮಾಂಸಾಹಾರಕ್ಕೆ ನಿರ್ಭಂದವಿದೆ.

೬. ಹಬ್ಬ-ಹರಿದಿನ ಮದುವೆ/ ಇನ್ನಿತರ ಸಮಾರಂಭಗಳಲ್ಲಿ ಪ್ರಾಣಿ ಬಲಿ ಕೊಡುತ್ತಿರಾ ಯಾಕೆ ?

ನಮ್ಮಲ್ಲಿ ಪ್ರಮುಖ ದೇವತೆಗಳಿಗೆ ಪ್ರಾಣಿ ಬಲಿ ಕೊಡುವುದಿಲ್ಲ. ಆದರೆ ಸೀಮೆ ಲಕ್ಕವ್ವ, ಬಾಂವಿ ಲಕ್ಕವ್ವಗ ಕೋಳಿ, ಹುಂಜ, ಹೋತಗಳನ್ನು ಬಲಿ ಕೋಡುತ್ತಾರೆ.

೭. ಮದುವೆ ಪದ್ಧತಿ ಹೇಗಿದೆ ? ಯಾವ ರೀತಿಯಲ್ಲಿ ವಧು ವರರ ಆಯ್ಕೆ ಮಾಡುತ್ತೀರಿ ? ನಿಮ್ಮಲ್ಲಿಯೇ ಇರುವ ಯಾವ-ಯಾವ ಉಪ ಪಂಗಡಗಳ ಜೊತೆಯಲ್ಲಿ ವಿವಾಹ ಸಂಬಂಧಗಳು ನಡೆಯುತ್ತವೆ / ನಡೆಯುವುದಿಲ್ಲ. ಕಾರಣವೇನು ?

ನಮ್ಮದು ಹತ್ತಿ ಕಂಕಣ. ನಮ್ಮ ಕಂಕಣದ ವಧು-ವರರನ್ನೇ ಆಯ್ಕೆ ಮಾಡುತ್ತೇವೆ. ಬೇರೆ ಪಂಗಡಗಳ ಜೊತೆ ಮದುವೆ ಮಾಡುವುದಿಲ್ಲ. ಒಂದು ದಿನದ ಮದುವೆಗಳು ಅಂದರೆ ಯಾದಿ ಮೇ ಶಾದಿಗಳು ಹೆಚ್ಚಾಗಿ ಕಂಡು ಬರುತ್ತಿವೆ. ಇದರಿಂದ ಮದುವೆಗಳ ಖರ್ಚು-ವೆಚ್ಚ, ಕೆಲಸ-ಕಾರ್ಯಗಳು ಕಡಿಮೆ.

೮. ಮನೆತನದ ಮೂಲ ದೈವ (ಮನೆ ದೇವರು) ಮತ್ತು ಇತರ ಆಚರಣೆ ದೈವಗಳು ಯಾವುವು?

ಮನೆ ದೇವರು ಕಡೋಲಿ ವಿಠ್ಠಲರಾಯ, ಮನ್ನೊಳ್ಳಿ ಸಿದ್ಧರಾಯ. ಇದಲ್ಲದೆ ಊರ ದೇವರು ಲಕ್ಕವ್ವ, ಚಿಂಚಲಿ ಮಾಯವ್ವ, ಕಂಕಣವಾಡಿ ಹಾಲಸಿದ್ಧ, ಅಲಕನೂರ ಕರೇಸಿದ್ಧ, ಯಲ್ಪಾರಟ್ಟಿ ಅರಣ್ಯಸಿದ್ಧ, ಗುಡ್ಡದ ಯಲ್ಲವ್ವ ದೇವರಿಗೆ ಹೋಗುತ್ತವೆ.

೯. ನಿಮ್ಮ ಮನೆತನದ ದೇವಾಲಯ/ ಮಠಗಳಿಗೆ ಯಾವಾಗ ಭೇಟ್ಟಿ ಕೊಡುತ್ತೀರಿ? ಪ್ರತಿ ದಿನ/ ವಾರ/ತಿಂಗಳು/ವರ್ಷ. ನಿಮ್ಮೂರನ್ನು ಹೊರತು ಪಡಿಸಿ ನೀವು ಭೇಟ್ಟಿ ನೀಡುವ ಧಾರ್ಮಿಕ ಸ್ಥಳಗಳು. ಯಾಕೆ?

ಗುರುವಾರ ಮತ್ತು ರವಿವಾರಗಳಂದು ಹಾಲಸಿದ್ಧನಿಗೆ ಬರುತ್ತೇನೆ. ಅಲ್ಲದೆ ಹುಣ್ಣಿಮೆ, ಅಮವಾಸ್ಯೆಗಳಂದು ತಪ್ಪದೇ ದೇವರ ಗುಡಿಗೆ ಹೋಗುತ್ತೇನೆ. ಕಂಕಣವಾಡಿ ಹಾಲಸಿದ್ಧ, ಬೆಕ್ಕೇರಿ ಲಕ್ಕವ್ವ, ಚಿಂಚಲಿ ಮಾಯವ್ವ, ಅಲಕನೂರಿನ ಕರೇಸಿದ್ಧನ ಜಾತ್ರೆಗಳಿಗೆ ತಪ್ಪದೇ ಹೋಗುತ್ತೇವೆ.

೧೦. ವರ್ಷದಲ್ಲಿ ಆಚರಿಸುವ ಹಬ್ಬಗಳಿಗಾಗಿ ಮಾಡುವ ಖರ್ಚು ಎಷ್ಟು ? ಇನ್ನಿತರ (ಶಿಕ್ಷಣ ಮತ್ತು ಸಾಮಾಜಿಕ) ಕಾರ್ಯಗಳಿಗಾಗಿ ಮಾಡುವ ಖರ್ಚು ಎಷ್ಟು ?

ಹಬ್ಬ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆಗಳಿಗಾಗಿ ವರ್ಷಕ್ಕೆ ಸುಮಾರು ೪ ರಿಂದ ೫ ಸಾವಿರ ರೂ. ಗಳ ವರೆಗೆ ಖರ್ಚಾಗುತ್ತದೆ. ಒಬ್ಬ ಗಂಡು ಮಗನಿದ್ದು ಅವನಿಗೆ ೧೪-೧೫ ವರ್ಷ. ಅವನು ಶಾಲೆಗೆ ಹೋಗುವುದಿಲ್ಲ ಖರ್ಚು ಇಲ್ಲ.

೧೧. ನೀವು ಆಚರಿಸಲೇ ಬೇಕಾದ ಧಾರ್ಮಿಕ ಆಚರಣೆಗಳಾವವು? ಈ ಆಚರಣೆಗಳಿಂದ ನಿಮಗಾಗುವ ಲಾಭಗಳೇನು? ಈ ಆಚರಣೆಗಳನ್ನು ಮುಂದುವರೆಸಬೇಕೆ/ ಮೊಟಕುಗೊಳಿಸಬೇಕೆ. ಯಾಕೆ ? ಇತ್ತೀಚಿಗೆ

ಧಾರ್ಮಿಕ ಮೌಢ್ಯಗಳನ್ನು ಕೈ ಬಿಡುವಂತೆ ಸಮಾಜ ಸುಧಾರಕರು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಯುಗಾದಿ, ದೀಪಾವಳಿ, ಹೆಚ್ಚು-ಕಡಿಮೆ ಎಲ್ಲ ಹಬ್ಬಗಳನ್ನು ಆಚರಿಸುತ್ತೇವೆ. ಮೊದಲಿನಿಂದಲೂ ಹಿರಿಯರು ಸಂಪ್ರದಾಯಗಳನ್ನು ಮಾಡಿಕೊಂಡು ಬಂದಿದ್ದಾರೆ. ನಾವು ಅವುಗಳ ಆಚರಣೆಯನ್ನು ಮಾಡಿಕೊಂಡು ಹೊರಟಿದ್ದೇವೆ.

೧೨.ನಿಮ್ಮ ಕುಟುಂಬ/ ಸಮುದಾಯದಲ್ಲಿ ಅಂತರ ಜಾತಿ ವಿವಾಹಗಳಾಗಿವೆಯೇ? ಅವರ ಜೊತೆ ನಿಮ್ಮ ಸಂಪರ್ಕ ಹೇಗಿದೆ? ಹಬ್ಬ-ಹರಿದಿನ, ಧಾರ್ಮಿಕ & ಸಾರ್ವಜನಿಕ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿತ್ತಿರಾ/ಅಹ್ವಾನಿಸುವುದಿಲ್ಲ ಯಾಕೆ ? ಅವರ ಮಕ್ಕಳ ಜೊತೆ ವಿವಾಹ ಸಂಪರ್ಕ ಬೆಳೆಸಲು ಇಷ್ಟ ಪಡುತ್ತಿರಾ ?

ನಮ್ಮಲ್ಲಿ ಅಂತರ್ ಜಾತಿ ಮದುವೆಗಳಿಗೆ ಅವಕಾಶವಿಲ್ಲ. ಬೇರೆ ಜಾತಿಯವರನ್ನು ಮದುವೆಯಾದರೆ ಸಮಸ್ಯೆಯಾಗುತ್ತದೆ, ಸಮಾಜದಿಂದ ಹೊರಗಿಡುತ್ತಾರೆ.

೧೩.ವಿಧವಾ ವಿವಾಹಕ್ಕೆ ನಿಮ್ಮ ಸಮುದಾಯಗಳಲ್ಲಿ ಅವಕಾಶವಿದೆಯೇ ?

ನಮ್ಮಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿಲ್ಲ. ಕಟ್ಟಿಕಾರ ಮತ್ತು ಪೂಜೇರಿ ಮನೆತನಗಳಲ್ಲಂತೂ ಇದಕ್ಕೆ ಅವಕಾಶವಿಲ್ಲ. ಪೂಜೇರಿ ಬೇಕಾದಷ್ಟು ಮದುವೆ ಮಾಡಿಕೊಳ್ಳಬಹುದು. ಒಂದು ವೇಳೆ ಮದುವೆಯಾಗಿ ದೇವರ ಗದ್ದುಗೆ ಮುಟ್ಟಿದರೆ ನಾಶವಾಗುತ್ತಾರೆ. ಚಿಂಚಲಿ ಮಾಯವ್ವ ಮತ್ತು ಬೆಕ್ಕೇರಿ ಲಕ್ಕವ್ವ ಪೂಜಾರಿಗಳು ಉಡಿಕೆ ಮದುವೆ ಮಾಡಿಕೊಳ್ಳುವುದಿಲ್ಲ. ಮಾಡಿಕೊಂಡರೆ ಪೂಜಾ ಹಕ್ಕು ಅವರಿಗೆ ಸಿಗುವುದಿಲ್ಲ.

೧೪.ಶವ ಸಂಸ್ಕಾರ ಪದ್ಧತಿ ಹೇಗಿದೆ ?

ಸಾಮಾನ್ಯವಾಗಿ ಮಣ್ಣು ಕೊಡುವ (ಹೂಳುವ) ಪದ್ಧತಿಯನ್ನೇ ಮಾಡುತ್ತೇವೆ. ಇತ್ತೀಚಿಗೆ ಸುಡುವ ಪದ್ಧತಿ ಕಂಡು ಬರುತ್ತಿದೆ. ಅಪಘಾತದಲ್ಲಿ ಮಡಿದವರು, ಮಾಲೆ ಧರಿಸಿದವರು, ಮುತ್ತ ಕಟ್ಟಿದ ಹೆಂಗಸರನ್ನು ಕಿಚ್ಚಾ (ದಹನ) ಕೊಡುತ್ತಾರೆ.

೧೫.ನೀವು ರಾಜಕೀಯ ಸಂಪರ್ಕ ಹೊಂದಿದ್ದಿರಾ ? ಯಾವುದಾದರೂ ಚುನಾವಣೆಗೆ ಸ್ಪರ್ಧಿಸಿದ್ದಾರಾ?

ನನಗೆ ರಾಜಕಾರಣಿಗಳ ಜೊತೆಗೆ ಸಂಪರ್ಕವಿಲ್ಲ. ನಮ್ಮ ಲೀಡರಗಳು ಹೇಳಿದ ಹಾಗೆ ನಾವು ಎಲೆಕ್ಷನದಾಗ ಓಟ ಹಾಕಿ ಬರುತ್ತೇವೆ.

೧೬.ನಿಮ್ಮ ಸಮುದಾಯದ ಸಮಸ್ಯೆಗಳಿಗಾಗಿ ಯಾವುದಾದರೂ ನಾಯಕರನ್ನು ಸಂಪರ್ಕಿಸಿದ್ದಾರಾ? ಅವರಿಂದ ಸೂಕ್ತ ಮಾರ್ಗದರ್ಶನ ಸೌಲಭ್ಯಗಳು ನಿಮಗೆ ದೊರಕಿವೆಯೇ ?

ನನಗೆ ರಾಜಕೀಯ ನಾಯಕರ ಪರಿಚಯವಿಲ್ಲ. ಯಾವ ಯೋಜನೆಗಳ ಬಗ್ಗೆ ನನಗೆ ಮಾಹಿತಿಯಿಲ್ಲ. ಯಾವ ಮಾರ್ಗದರ್ಶನ ಪಡೆದು ಕೊಂಡಿಲ್ಲ.

೧೭.ನಿಮಗೆ ಮತ್ತು ನಿಮ್ಮ ಸಮುದಾಯದ ಅಭಿವೃದ್ಧಿಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮಗೆ ಅರಿವಿದೆಯೆ? ಇಲ್ಲಿಯವರೆಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಸರ್ಕಾರದ ಯಾವ ಯೋಜನೆಗಳ ಬಗ್ಗೆ ನಮಗೆ ಅರಿವು ಇಲ್ಲ. ಒಂದು ವೇಳೆ ಯಾವುದಾದರೂ ಯೋಜನೆಗಳು ಬಂದರು ಅವು ನಮ್ಮಂತವರಿಗೆ ದೊರೆಯುವುದಿಲ್ಲ. ಅವೆಲ್ಲ ದೊಡ್ಡ-ದೊಡ್ಡ ಮಂದಿನ ತೆಗೆದುಕೊಳ್ಳುವರು.

೧೮.ನೀವು ಯಾವುದಾದರೂ ಸರ್ಕಾರದ ಯೋಜನೆಗಳ ಫಲವನ್ನು ಪಡೆದುಕೊಂಡಿದ್ದಾರಾ? ಇನ್ನಿತರರಿಗೆ ಕಾರ್ಯಕ್ರಮಗಳ ಬಗ್ಗೆ ಅರಿವನ್ನು ನೀಡಿದ್ದಾರಾ?

ಸರ್ಕಾರದ ಯೋಜನೆಗಳನ್ನು ಪಡೆಯಲು ಸಾಕಷ್ಟ ಸಲ ಓಡಾಡಬೇಕು ಮತ್ತು ಲಂಚ ಕೊಡಬೇಕಾಗುತ್ತದೆ. ಕೊಟ್ಟರು ಕೆಲವು ಸಲ ಕೆಲಸ ಆಗುವುದಿಲ್ಲಂತ ಹೇಳತಾರ, ಅದಕ್ಕಾಗಿ ಇಲ್ಲಿಯವರೆಗೆ ಯಾವ ಸೌಲಭ್ಯಗಳನ್ನು ನಾವು ಪಡೆದುಕೊಂಡಿಲ್ಲ. ಒಂದು ಕಾರ್ಡಿಗೆ ಹತ್ತು ಕಿಲೋ ಅಕ್ಕಿ ರೇಶನ ಅಂಗಡಿಯವರು ಕೊಡುತ್ತಿದ್ದಾರೆ. ಸಿದ್ದರಾಮಯ್ಯ ಇದೊಂದು ಬಡವರಿಗಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ.

೧೯.ಸರ್ಕಾರದಿಂದ ಇನ್ನೂ ಯಾವ ಯೋಜನೆಗಳು ಜಾರಿಗೊಳ್ಳಬೇಕೆಂದು ಇಚ್ಚಿಸುತ್ತೀರಿ?

ಸೌಲಭ್ಯಗಳ ಬಗ್ಗೆಯಾಗಲಿ, ಯೋಜನೆಗಳ ಬಗ್ಗೆ ಮಾಹಿತಿ ತಿಳವಳಿಕೆಗಳೇ ಇಲ್ಲ.

೨೦.ಸದ್ಯ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿರುವ ಮಾನ್ಯ ಶ್ರೀ ಸಿದ್ಧರಾಮಯ್ಯನವರು ನಿಮ್ಮ ಸಮುದಾಯಕ್ಕೆ ಸೇರಿದವರು. ನಿಮ್ಮ ಸಮುದಾಯದವರೊಬ್ಬರು ಮುಖ್ಯಮಂತ್ರಿಯಾಗಿರುವುದರಿಂದ ನಿಮಗೆ ಮತ್ತು ನಿಮ್ಮ ಸಮುದಾಯಕ್ಕೆ ವಿಶೇಷವಾಗಿ ದೊರೆತ ಸೌಲಭ್ಯಗಳೇನು?

ಅವರನ್ನು ಟಿ. ವಿ.ಯಲ್ಲಿ ನೋಡಿದ್ದೇವೆ. ವೈಯಕ್ತಿಕವಾಗಿ ನನಗೇನೂ ಲಾಭವಾಗಿಲ್ಲ. ಆದರೆ ನಮ್ಮವರು ಮುಖ್ಯ ಮಂತ್ರಿ ಆಗಿದ್ದಾರೆ ಎನ್ನುವುದೇ ಖುಷಿ. ನಮ್ಮ ಸಮುದಾಯಕ್ಕೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳುತ್ತಾರೆ. ಅವು ಯಾವುವು ನನಗೆ ಗೊತ್ತಿಗಿಲ್ಲ. ಬಡ ರೈತರ ಸಾಲ ಮನ್ನಾ ಮಾಡಿದರ ನಮಗ ಒಳ್ಳೆಯದಾಗುತ್ತದೆ.

೨೧.ಅವರು ಮುಖ್ಯಮಂತ್ರಿಯಾಗಿರುವುದರಿಂದ ನಿಮ್ಮ ಸಮುದಾಯ ಅಭಿವೃದ್ಧಿಗೆ ಏನಾದರೂ ಸಹಾಯವಾಗಿದೆಯೇ?

ನಮಗೆ ಅದರ ಬಗ್ಗೆ ಹೆಚ್ಚಾಗಿ ತಿಳಿಯುವುದಿಲ್ಲ.

೨೨.ಅಹಿಂದ ವರ್ಗಗಳ ಅಭಿವೃದ್ಧಿಗೆ ಅವರು ಜಾರಿಗೊಳಿಸಿರುವ ಯೋಜನೆಗಳು ನಿಮಗೆ ತಲುಪಿವೆಯೇ?

ನಮಗೆ ಯಾವ ಯೋಜನೆಗಳ ಬಗ್ಗೆ ಮಾಹಿತಿ ಗೊತ್ತಿಲ್ಲ.

೧. ಸಂದರ್ಶಕರ ವೈಯಕ್ತಿಕ ವಿವರಗಳು :

೧.೧	ಸಂದರ್ಶಕರ ಹೆಸರು ಮತ್ತು ವಿಳಾಸ	: **ಪದ್ಮಣ್ಣ ಹಾಲಪ್ಪ ಪೂಜೇರಿ. ಕಂಕಣವಾಡಿ**
೧.೨	ದೂರವಾಣಿ ಸಂಖ್ಯೆ	: **೭೭೬೦೨೪೫೨೪೮**
೧.೩	ಜಾತಿ & ಒಳ ಪಂಗಡ	: **ಕುರುಬ. ಹಾಲುಮತ ಹತ್ತಿ ಕಂಕಣ**
೧.೪	ವಯಸ್ಸು	: **೫೫**
೧.೫	ಶಿಕ್ಷಣ	: **೬ನೇ ತರಗತಿಯವರೆಗೆ ಶಾಲೆ ಕಲಿತಿದ್ದಾರೆ**
೧.೬	ಪತ್ನಿ ಮತ್ತು ಮಕ್ಕಳ ಶಿಕ್ಷಣ	: **ಪತ್ನಿ ೭ನೇ ತರಗತಿಯವರೆಗೆ ಶಾಲೆ ಕಲಿತಿದ್ದಾರೆ. ಒಬ್ಬ ಗಂಡು ಮಗ ಪಿ.ಯು.ಸಿ ಸೆಂಕೆಡ ಇಯರ್, ಇನ್ನೊಬ್ಬ ಮಗ ಬಿ. ಎ. ಮಾಡಿದ್ದಾನೆ.**
೧.೭	ಮನೆ / ಜಮೀನು	: **೮ ಎಕರೆ**
೧.೮	ಕುಟುಂಬ ವಿಭಕ್ತ / ಅವಿಭಕ್ತ	: **ವಿಭಕ್ತ ಕುಟುಂಬ**
೧.೯	ಸದಸ್ಯರ ಸಂಖ್ಯೆ	: **೪ ಜನ**
೧೧೦	ಉದ್ಯೋಗ	: **ಒಕ್ಕಲುತನ. ೧೫-೨೦ ಕುರಿಗಳ ಸಾಕಾಣಿಕೆ ಇದೆ. ಡೊಳ್ಳಿನ ಹಾಡಿಕೆ ಕಲಾವಿದ.**
೧.೧೧	ಕುಟುಂಬದಲ್ಲಿ ದುಡಿಯುವವರ ಸಂಖ್ಯೆ	: **೧**
೧.೧೨	ಕುಟುಂಬದ ಆರ್ಥಿಕ ಮೂಲ	: **ಒಕ್ಕಲುತನ ಆಡು-ಕುರಿ, ದನ-ಕರ ಸಾಕಾಣಿಕೆ**
೧.೧೩	ವಾರ್ಷಿಕ ಆದಾಯ	: **೨,೦೦,೦೦೦=೦೦**

೨. ಮನೆತನದ ಮುಖ್ಯ ಉದ್ಯೋಗ, ಇಂದಿನ ಉದ್ಯೋಗ ಹೊಂದಲು ಕಾರಣವೇನು ?

೮ ಎಕರೆ ನೀರಾವರಿ ಜಮೀನು ಇರುವುದರಿಂದ ಒಕ್ಕಲುತನ ಮುಖ್ಯ ಉದ್ಯೋಗವಾಗಿದೆ. ಹಾಲು-ಹೈನ ಮತ್ತು ತೋಟದ ಗೊಬ್ಬರಕ್ಕಾಗಿ ದನ-ಕರಗಳನ್ನು ಸಾಕಿದ್ದೇವೆ. ೨೦ ಆಡು-ಕುರಿಗಳನ್ನು ಸಾಕಿದ್ದೇವೆ. ಹಾಡಿಕೆ ಇದ್ದಲ್ಲಿ ನಾನು ಡೊಳ್ಳಿನ ಹಾಡುವುದಕ್ಕೆ ಹೋಗುತ್ತೇನೆ.

೩. ಗ್ರಾಮದಲ್ಲಿ ನಡೆಯುವ ಇತರೆ ಸಮುದಾಯಗಳ ಕಾರ್ಯಕ್ರಮದಲ್ಲಿ ನೀವು ಯಾವ-ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಿ ಮತ್ತು ಯಾಕೆ? ನಿಮಗೆ ಭಾಗವಹಿಸಲಿಕ್ಕೆ ಅವಕಾಶವಿರದ ಕಾರ್ಯಕ್ರಮಗಳು ಯಾವುವು? ಅದಕ್ಕೆ ನಿಮ್ಮ ಅಭಿಪ್ರಾಯವೇನು ?

ಗ್ರಾಮದಲ್ಲಿ ಕುರುಬರು, ಉಪ್ಪಾರರು, ಲಿಂಗಾಯತರು ಸರಿ ಪ್ರಮಾಣದಲ್ಲಿದ್ದೇವೆ. ನಾವು ಹಾಲಸಿದ್ಧನ ಪೂಜಾರಿಗಳು ನಮ್ಮನ್ನು ಎಲ್ಲ ಜಾತಿಯವರು ಎಲ್ಲಾ ಕಾರ್ಯಗಳಿಗೆ ಕರೆಯುತ್ತಾರೆ. ನಾವು ಭೇದ-ಭಾವ ಮಾಡುವುದಿಲ್ಲ ಎಲ್ಲರ ಕಾರ್ಯಕ್ರಮಗಳಿಗೆ ಹೋಗುತ್ತೇವೆ. ಎಲ್ಲ ಜಾತಿಯವರು ಒಳ್ಳೇಯ ಭಾಂದವ್ಯದಿಂದ ಇದ್ದೇವೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಎಲ್ಲರೂ ಒಟ್ಟಾಗಿ ಕೂಡಿಕೊಂಡು ಹಾಲಸಿದ್ಧನ

ಜಾತ್ರೆಯನ್ನು ಮಾಡುತ್ತೇವೆ. ಊರಲ್ಲಿರುವ ಎಲ್ಲ ಜಾತಿಯವರ ಜೊತೆ ನಮ್ಮ ಸಂಬಂಧ ಒಳ್ಳೆಯದಾಗಿದೆ. ನಾವು ಅವರ ಕಾರ್ಯಕ್ರಮಗಳಿಗೆ ಹೋಗುತ್ತೇವೆ. ಅವರು ನಮ್ಮ ಕಾರ್ಯಕ್ರಮಗಳಿಗೆ ಬರುತ್ತಾರೆ.

೪. ನಿಮ್ಮ ಕಾರ್ಯಕ್ರಮಗಳಿಗೆ ಬೇರೆ ಸಮುದಾಯದವರನ್ನು ಆಹ್ವಾನಿಸುತ್ತಿರಾ ? ಯಾಕೆ ?

ಗ್ರಾಮದಲ್ಲಿರುವ ಎಲ್ಲ ಜನರು ನಮ್ಮನ್ನು ಅವರ ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಾರೆ. ನಾವು ಕೂಡ ಅವರ ಕಾರ್ಯಕ್ರಮಗಳಿಗೆ ಹೋಗುತ್ತೇವೆ. ಊರಲ್ಲಿ ಸೌಹಾರ್ದತೆ ಇದೆ.

೫. ಆಹಾರ ಪದ್ಧತಿ. ಸಸ್ಯಹಾರಿ / ಮಾಂಸಾಹಾರಿ ಯಾಕೆ ? ಧರ್ಮದ/ ಸಂಪ್ರದಾಯಗಳ ನಿರ್ಬಂಧವಿದೆಯೇ?

ನಮ್ಮದು ಶುದ್ಧ ಸಸ್ಯಾಹಾರಿ. ನಮಗೆ ಮಾಂಸಾಹಾರ ನಿಷಿದ್ಧ. ಹಾಲಸಿದ್ಧನ ಪೂಜಾರಿಗಳು ಮಾಂಸಾಹಾರವನ್ನು ಸೇವಿಸುವಂತಿಲ್ಲ. ಸೇವಿಸಿ ಗುಡಿ ಒಳಗೆ ಪ್ರವೇಶಿಸುವಂತಿಲ್ಲ ಮತ್ತು ಗದ್ದುಗೆ ಮುಟ್ಟುವಂತಿಲ್ಲ.

೬. ಹಬ್ಬ-ಹರಿದಿನ ಮದುವೆ/ ಇನ್ನಿತರ ಸಮಾರಂಭಗಳಲ್ಲಿ ಪ್ರಾಣಿ ಬಲಿ ಕೊಡುತ್ತಿರಾ ಯಾಕೆ ?

ಹಾಲಸಿದ್ಧನಿಗೆ ಪ್ರಾಣಿ ಬಲಿ ಕೊಡುವುದಿಲ್ಲ. ಆದರೆ ಊರರಲ್ಲಿರುವ ಇತರ ಜಾತಿಯವರು ಬಲಿ ಕೋಡುತ್ತಾರೆ.

೭. ಮದುವೆ ಪದ್ಧತಿ ಹೇಗಿದೆ ? ಯಾವ ರೀತಿಯಲ್ಲಿ ವಧು ವರರ ಆಯ್ಕೆ ಮಾಡುತ್ತೀರಿ ? ನಿಮ್ಮಲ್ಲಿಯೇ ಇರುವ ಯಾವ-ಯಾವ ಉಪ ಪಂಗಡಗಳ ಜೊತೆಯಲ್ಲಿ ವಿವಾಹ ಸಂಬಂಧಗಳು ನಡೆಯುತ್ತವೆ / ನಡೆಯುವುದಿಲ್ಲ. ಕಾರಣವೇನು ?

ನಮ್ಮದು ಹತ್ತಿ ಕಂಕಣ. ಬೇರೆ ಪಂಗಡಗಳ ಜೊತೆ ಮದುವೆ ಮಾಡುವುದಿಲ್ಲ. ನಮ್ಮ ಪಂಗಡದ ವಧು-ವರರನ್ನೇ ಆಯ್ಕೆ ಮಾಡುತ್ತೇವೆ. ನಮ್ಮಲ್ಲಿ ಎರಡು ದಿನಗಳ ಮದುವೆಯಾಗುತ್ತದೆ. ಮೊದಲ ದಿನ ಅರಿಷಿಣ ಕಾರ್ಯಕ್ರಮ. ಎರಡನೇ ದಿನ ಗುಗ್ಗಳ ಮತ್ತು ಅಕ್ಷತೆ. ಪೂಜಾರಿಗಳ ಮದುವೆ ಹಾಲಸಿದ್ಧನ ಗುಡಿಯಲ್ಲಿಯೇ ಆಗಬೇಕು. ಬೇರೆ ಸ್ಥಳದಲ್ಲಿ ಮದುವೆಯಾದರೆ ಅವರಿಗೆ ಹಾಲಸಿದ್ಧನ ಪೂಜಾ ಹಕ್ಕು ಸಿಗುವುದಿಲ್ಲ. ನಮ್ಮಲ್ಲಿ ಯಾದಿ ಮೇ ಶಾದಿ ನಡೆಯುವುದಿಲ್ಲ.

೮. ಮನೆತನದ ಮೂಲ ದೈವ (ಮನೆ ದೇವರು) ಮತ್ತು ಇತರ ಆಚರಣೆ ದೈವಗಳು ಯಾವುವು?

ಮನೆ ದೇವರು ಹಾಲಸಿದ್ಧ. ಇದಲ್ಲದೆ ಕಡೋಲಿ ವಿಠ್ಠಲರಾಯ, ಚಿಂಚಲಿ ಮಾಯವ್ವ, ಕಟಗೇರಿ ಲಕ್ಕವ್ವ, ಅಲಕನೂರ ಕರೇಸಿದ್ಧ, ಅಪ್ಪಾಚಿವಾಡಿ ಹಾಲಸಿದ್ಧನಿಗೆ ನಡೆದುಕೊಳ್ಳುತ್ತೇವೆ. ಇದಲ್ಲದೆ ಯಲ್ಲಾರಟ್ಟಿ ಅರಣ್ಯಸಿದ್ಧ, ಗುಡ್ಡದ ಯಲ್ಲವ್ವ ದೇವರಿಗೆ ಹೋಗುತ್ತವೆ.

೯. ನಿಮ್ಮ ಮನೆತನದ ದೇವಾಲಯ/ ಮಠಗಳಿಗೆ ಯಾವಾಗ ಭೇಟ್ಟಿ ಕೊಡುತ್ತೀರಿ? ಪ್ರತಿ ದಿನ/ ವಾರ/ತಿಂಗಳು/ವರ್ಷ. ನಿಮ್ಮೂರನ್ನು ಹೊರತು ಪಡಿಸಿ ನೀವು ಭೇಟ್ಟಿ ನೀಡುವ ಧಾರ್ಮಿಕ ಸ್ಥಳಗಳು. ಯಾಕೆ?

ಪ್ರತಿ ದಿನವೂ ಹಾಲಸಿದ್ಧನಿಗೆ ತಪ್ಪದೇ ಬರುತ್ತೇವೆ. ಗುರುವಾರ ಮತ್ತು ರವಿವಾರಗಳಂದು, ಅಲ್ಲದೆ ಹುಣ್ಣಿಮೆ, ಅಮವಾಸ್ಯೆಗಳಂದು ತಪ್ಪದೇ ಹಾಲಸಿದ್ಧನಿಗೆ ದೇವರ ಗುಡಿಗೆ ಹೋಗುತ್ತೇನೆ. ಅಪ್ಪಾಚಿವಾಡಿ ಮತ್ತು ಹಿಡಕಲ್ಲ ಹಾಲಸಿದ್ಧ, ಚೆಕ್ಕೇರಿ ಲಕ್ಕವ್ವ, ಚಿಂಚಲಿ ಮಾಯವ್ವ, ಅಲಕನೂರಿನ ಕರೇಸಿದ್ಧನ ಜಾತ್ರೆಗಳಿಗೆ ತಪ್ಪದೇ ಹೋಗುತ್ತೇವೆ.

೧೦. ವರ್ಷದಲ್ಲಿ ಆಚರಿಸುವ ಹಬ್ಬಗಳಿಗಾಗಿ ಮಾಡುವ ಖರ್ಚು ಎಷ್ಟು ? ಇನ್ನಿತರ (ಶಿಕ್ಷಣ ಮತ್ತು ಸಾಮಾಜಿಕ) ಕಾರ್ಯಗಳಿಗಾಗಿ ಮಾಡುವ ಖರ್ಚು ಎಷ್ಟು ?

ಹಬ್ಬ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆಗಳಿಗಾಗಿ ವರ್ಷಕ್ಕೆ ಸುಮಾರು ೧೦ ರಿಂದ ೧೫ ಸಾವಿರ ರೂ. ಗಳ ವರೆಗೆ ಖರ್ಚಾಗುತ್ತದೆ. ಇಬ್ಬರು ಗಂಡು ಮಕ್ಕಳು ಅವರ ಶಾಲೆ-ಕಾಲೇಜುಗಳಿಗೆ ವರ್ಷಕ್ಕೆ ಸುಮಾರು ೧೫-೨೦ ರೂಪಾಯಿಗಳು ಖರ್ಚುಗುತ್ತದೆ.

೧೧.ನೀವು ಆಚರಿಸಲೇ ಬೇಕಾದ ಧಾರ್ಮಿಕ ಆಚರಣೆಗಳಾವವು? ಈ ಆಚರಣೆಗಳಿಂದ ನಿಮಗಾಗುವ ಲಾಭಗಳೇನು? ಈ ಆಚರಣೆಗಳನ್ನು ಮುಂದುವರೆಸಬೇಕೆ/ ಮೊಟಕುಗೊಳಿಸಬೇಕೆ. ಯಾಕೆ ? ಇತ್ತೀಚಿಗೆ ಧಾರ್ಮಿಕ ಮೌಢ್ಯಗಳನ್ನು ಕೈ ಬಿಡುವಂತೆ ಸಮಾಜ ಸುಧಾರಕರು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಯುಗಾದಿ, ದೀಪಾವಳಿ, ಪಂಚಮಿ, ಹೆಚ್ಚು-ಕಡಿಮೆ ಎಲ್ಲ ಹಬ್ಬಗಳನ್ನು ಆಚರಿಸುತ್ತೇವೆ. ಹಿರಿಯರು ಹಿಂದಿನಿಂದಲೂ ಆಚರಿಸಿಕೊಂಡುಬಂದ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಹಾಲಪ್ಪ ರಾಮಪ್ಪ ಪೂಜೇರಿ ಇವರು ಮಹಾನವಮಿ ಜಾತ್ರೆ, ಅಮವಾಸ್ಯೆ, ಯುಗಾದಿ, ಶ್ರಾವಣಗಳಲ್ಲಿ ನುಡಿ (ಭವಿಷ್ಯ) ಹೇಳುತ್ತಾರೆ. ಅವು ಕರೇ ಆಗುತ್ತವೆ.

೧೨.ನಿಮ್ಮ ಕುಟುಂಬ/ ಸಮುದಾಯದಲ್ಲಿ ಅಂತರ ಜಾತಿ ವಿವಾಹಗಳಾಗಿವೆಯೇ? ಅವರ ಜೊತೆ ನಿಮ್ಮ ಸಂಪರ್ಕ ಹೇಗಿದೆ? ಹಬ್ಬ-ಹರಿದಿನ, ಧಾರ್ಮಿಕ & ಸಾರ್ವಜನಿಕ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿತ್ತಿರಾ/ಅಹ್ವಾನಿಸುವುದಿಲ್ಲ ಯಾಕೆ ? ಅವರ ಮಕ್ಕಳ ಜೊತೆ ವಿವಾಹ ಸಂಪರ್ಕ ಬೆಳೆಸಲು ಇಷ್ಟ ಪಡುತ್ತಿರಾ ?

ನಮ್ಮಲ್ಲಿ ಅಂತರ್ ಜಾತಿ ಮದುವೆಗಳಿಗೆ ಅವಕಾಶವಿಲ್ಲ. ಬೇರೆ ಜಾತಿಯವರನ್ನು ಮದುವೆಯಾದರೆ ಹಾಲಸಿದ್ಧನ ಪೂಜಾ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಅನ್ಯ ಜಾತಿಯವರನ್ನು ಮದುವೆಯಾದವರು ಹಾಲಸಿದ್ಧನ ಗದ್ದುಗೆ ಹಿಡಿಯುವ ಹಾಗಿಲ್ಲ ಮತ್ತು ಪಲ್ಲಕ್ಕಿಯನ್ನು ಹೋರುವಂತಿಲ್ಲ ಎಂಬ ನಿಯಮವಿದೆ.

೧೩.ವಿಧವಾ ವಿವಾಹಕ್ಕೆ ನಿಮ್ಮ ಸಮುದಾಯಗಳಲ್ಲಿ ಅವಕಾಶವಿದೆಯೇ ?

ನಮ್ಮ ಪೂಜಾರಿಗಳ ಮನೆತನದಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿಲ್ಲ. ಒಂದು ವೇಳೆ ಮರು ಮದುವೆ ಅಥವಾ ಉಡಿಕೆ ಮಾಡಿಕೊಂಡರೆ ಅವರಿಗೆ ಹಾಲಸಿದ್ಧನ ಪೂಜಾ ಹಕ್ಕು ಸಿಗುವುದಿಲ್ಲ. ಅವರು ಗದ್ದುಗೆಯನ್ನು ಮುಟ್ಟುವಂತಿಲ್ಲ ಮತ್ತು ಪಲ್ಲಕ್ಕಿಯನ್ನು ಹೊರುವಂತಿಲ್ಲ. ಉಡಿಕೆಯ ಮಕ್ಕಳಿಗೂ ಇದು ಅನ್ವಯಿಸುತ್ತದೆ.

೧೪.ಶವ ಸಂಸ್ಕಾರ ಪದ್ಧತಿ ಹೇಗಿದೆ ?

ಸಾಮಾನ್ಯವಾಗಿ ಮಣ್ಣು ಕೊಡುವ (ಹೂಳುವ) ಪದ್ಧತಿಯಿದೆ. ಸುಡುವ (ದಹನ) ಪದ್ಧತಿಯಿಲ್ಲ.

೧೫.ನೀವು ರಾಜಕೀಯ ಸಂಪರ್ಕ ಹೊಂದಿದ್ದಿರಾ ? ಯಾವುದಾದರೂ ಚುನಾವಣೆಗೆ ಸ್ಪರ್ಧಿಸಿದ್ದಾರಾ?

ನನಗೆ ರಾಜಕಾರಣಿಗಳ ಜೊತೆಗೆ ಸಂಪರ್ಕವಿಲ್ಲ. ನಮ್ಮ ಸಮುದಾಯದ ಮುಖಂಡರು ಹೇಳಿದ ಹಾಗೆ ನಾವು ಎಲೆಕ್ಷನದಾಗ ಓಟ ಹಾಕಿ ಬರುತ್ತೇವೆ.

೧೬.ನಿಮ್ಮ ಸಮುದಾಯದ ಸಮಸ್ಯೆಗಳಿಗಾಗಿ ಯಾವುದಾದರೂ ನಾಯಕರನ್ನು ಸಂಪರ್ಕಿಸಿದ್ದಾರಾ? ಅವರಿಂದ ಸೂಕ್ತ ಮಾರ್ಗದರ್ಶನ ಸೌಲಭ್ಯಗಳು ನಿಮಗೆ ದೊರಕಿವೆಯೇ ?

ನಮಗೆ ರಾಜಕೀಯ ನಾಯಕರ ಸಂಪರ್ಕವಿಲ್ಲ. ಸರ್ಕಾರದ ಯಾವ ಯೋಜನೆಗಳ ಬಗ್ಗೆ ನಮಗೆ ಮಾಹಿತಿಯಿಲ್ಲ. ಯಾವ ಯೋಜನೆಗಳ ಬಗ್ಗೆಯೂ ಮಾರ್ಗದರ್ಶನ ಪಡೆದು ಕೊಂಡಿಲ್ಲ.

೧೭.ನಿಮಗೆ ಮತ್ತು ನಿಮ್ಮ ಸಮುದಾಯದ ಅಭಿವೃದ್ಧಿಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮಗೆ ಅರಿವಿದೆಯೆ? ಇಲ್ಲಿಯವರೆಗೆ ಸರ್ಕಾರಗಳು ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಸರ್ಕಾರದ ಯಾವ ಯೋಜನೆಗಳ ಬಗ್ಗೆ ನಮಗೆ ಅರಿವು ಇಲ್ಲ.

೧೮.ನೀವು ಯಾವುದಾದರೂ ಸರ್ಕಾರದ ಯೋಜನೆಗಳ ಫಲವನ್ನು ಪಡೆದುಕೊಂಡಿದ್ದಾರಾ? ಇನ್ನಿತರರಿಗೆ ಕಾರ್ಯಕ್ರಮಗಳ ಬಗ್ಗೆ ಅರಿವನ್ನು ನೀಡಿದ್ದಾರಾ?

ಸರ್ಕಾರದ ಯಾವ ಯೋಜನೆಗಳನ್ನು ಪಡೆದು ಕೊಂಡಿಲ್ಲ. ನಾವಂತೂ ಯಾವ ಸೌಲಭ್ಯವನ್ನು ಪಡೆದು ಕೊಂಡಿಲ್ಲ. ಹೀಗಾಗಿ ಯಾರಿಗೂ ಅವುಗಳ ಬಗ್ಗೆ ಹೇಳಿಲ್ಲ.

೧೯.ಸರ್ಕಾರದಿಂದ ಇನ್ನೂ ಯಾವ ಯೋಜನೆಗಳು ಜಾರಿಗೊಳ್ಳಬೇಕೆಂದು ಇಚ್ಚಿಸುತ್ತೀರಿ?

ನಾವು ಒಕ್ಕಲುತನ ಮತ್ತು ಡೊಳ್ಳಿನ ಹಾಡುಗಾರಿಕೆಯನ್ನು ಬಿಟ್ಟು ಬೇರೆ ಯಾವುದು ನಮಗೆ ಗೊತ್ತಿಲ್ಲ. ಕಳೆದ ಎರಡು ವರ್ಷಗಳಿಂದ ಮಳೆ ಸರಿಯಾಗಿ ಆಗಿಲ್ಲ. ಹೋಲದ ಉತ್ಪನ್ನಗಳು ಸರಿಯಾಗಿ ಬಂದಿಲ್ಲ. ಸರ್ಕಾರ ರೈತರ ಸಾಲ ಮನ್ನಾ ಮಾಡಿದರೆ ಒಳ್ಳೆಯದಾಗುತ್ತದೆ.

೨೦.ಸದ್ಯ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿರುವ ಮಾನ್ಯ ಶ್ರೀ ಸಿದ್ಧರಾಮಯ್ಯನವರು ನಿಮ್ಮ ಸಮುದಾಯಕ್ಕೆ ಸೇರಿದವರು. ನಿಮ್ಮ ಸಮುದಾಯದವರೊಬ್ಬರು ಮುಖ್ಯಮಂತ್ರಿಯಾಗಿರುವುದರಿಂದ ನಿಮಗೆ ಮತ್ತು ನಿಮ್ಮ ಸಮುದಾಯಕ್ಕೆ ವಿಶೇಷವಾಗಿ ದೊರೆತ ಸೌಲಭ್ಯಗಳೇನು?

ನಮ್ಮ ಸಮುದಾಯದವರೊಬ್ಬರು ಮೊಟ್ಟ ಮೊದಲ ಬಾರಿಗೆ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾರೆ ನಮಗೆ ತುಂಬಾ ಖುಷಿಯಾಗಿದೆ. ಅಧಿಕಾರಕ್ಕೆ ಬಂದಾಗ ಕುರಿಗಾರರು ಪಡೆದು ಕೊಂಡ ಸಾಲವನ್ನು ಮನ್ನಾ ಮಾಡಿದ್ದಾರೆ. ಇದರಿಂದ ಕುರಿಗಾರರಿಗೆ ಲಾಭವಾಗಿದೆ. ಇತ್ತೀಚಿಗೆ ಕುರಿ–ಆಡು, ಆಕಳು–ಎಮ್ಮೆಗಳನ್ನು ಕೊಳ್ಳಲು ಸಹಾಯ ಧನವನ್ನು ನೀಡುತ್ತಿದ್ದಾರೆ. ನಾನು ಪಡೆದು ಕೊಂಡಿಲ್ಲ. ಕೆಲವರು ಪಡೆದು ಕೊಂಡಿದ್ದಾರೆ.

೨೧.ಅವರು ಮುಖ್ಯಮಂತ್ರಿಯಾಗಿರುವುದರಿಂದ ನಿಮ್ಮ ಸಮುದಾಯ ಅಭಿವೃದ್ಧಿಗೆ ಏನಾದರೂ ಸಹಾಯವಾಗಿದೆಯೇ?

ಕುರುಬ ಸಮುದಾಯವನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಕೆಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆಂದು ಹೇಳುವರು. ಆದರೆ ಅವುಗಳ ಬಗ್ಗೆ ನಮಗೆ ಮಾಹಿತಿಯಿಲ್ಲ.

೨೨.ಅಹಿಂದ ವರ್ಗಗಳ ಅಭಿವೃದ್ಧಿಗೆ ಅವರು ಜಾರಿಗೊಳಿಸಿರುವ ಯೋಜನೆಗಳು ನಿಮಗೆ ತಲುಪಿವೆಯೇ?

ಶಾಲೆ–ಕಾಲೇಜು ಕಲಿಯುತ್ತಿರುವ ಮಕ್ಕಳಿಗೆ ಮೊದಲಿನಗಿಂತಲೂ ಹೆಚ್ಚಿಗೆ ಸ್ಕಾಲರ್‌ಶಿಪ ಹಣವನ್ನು ಕೊಡುತ್ತಿದ್ದಾರೆ. ಇನ್ನೂ ಹೆಚ್ಚಿನ ಯೋಜನೆಗಳ ಬಗ್ಗೆ ಮಾಹಿತಿ ಗೊತ್ತಿಲ್ಲ.

ಅನುಬಂಧ : ಐದು

ಹಾಲುಮತದ ಕುಲದೈವ ಬೀರದೇವರ ಬಾವನ್ನ ಬಿರುದುಗಳು

೧	ಚಿನಗಾಳಿ	೨	ಹೆಗ್ಗಾಳಿ
೩	ಡಾಲ	೪	ಕಳಸ
೫	ಡಪ್ಪ	೬	ಹಂದಿಕ್ವಾರಿ
೭	ಪದಕಹಾರ	೮	ನಡಕಟ್ಟ
೯	ರುಳಿಪದಕ	೧೦	ಕಠಾರಿ
೧೧	ಮುಳ್ಳಾವಿಗೆ	೧೨	ಕಂಕಣಗತ್ತಿ
೧೩	ಶಂಖ	೧೪	ಕಣ್ಣಬಟ್ಟು
೧೫	ದಂಡಿಗೆ	೧೬	ಚೌಕ
೧೭	ಸಿಂಹಮುಖ	೧೮	ದೀವಟಿಗೆ
೧೯	ವಜ್ರಗತ್ತಿ	೨೦	ಚಪ್ಪುಕೊಡಲಿ
೨೧	ವಜ್ರಮುಷ್ಠಿ	೨೨	ಗಜಾಂಕುಶ
೨೩	ಬಿಲ್ಲುಬಾಣ	೨೪	ಕೆಂಪುಬಾಣ
೨೫	ಕೇತುಬಾಣ	೨೬	ಉರಿಬಾಣ
೨೭	ದಂಡ	೨೮	ಗುಂಡ
೨೯	ಕೈಕಡಗ	೩೦	ಕಾಲ್ಕಡಗ
೩೧	ಬೆತ್ತ	೩೨	ಹರಳೆಲಿ
೩೩	ಕೊಳಲ	೩೪	ನಾಗಬಂಭ
೩೫	ನಂದಿಕೋಲ	೩೬	ಕ್ಯಾದಿಗಿ ತೆನಿ
೩೭	ನಂದಾದೀಪ	೩೮	ಬೆಳ್ಳಿತೊಟ್ಟಿಲ
೩೯	ಹಣೆಪಟ್ಟಿ	೪೦	ರುದ್ರಾಕ್ಷಿ
೪೧	ಹೂವಿನಬುಟ್ಟಿ	೪೨	ಸಿತಾಳಬಿಂದಿಗೆ
೪೩	ಬುರುಗ	೪೪	ಕಿರಿಗೆಜ್ಜೆ
೪೫	ಜಿಗಜಿಂಪು	೪೬	ಅಪ್ತಾಗಿರಿ
೪೭	ನಿಶಾನಿ	೪೮	ಕ್ವಾರಿಮೀಸೆ
೪೯	ಮುಂಡಾಸ	೫೦	ತಾಳ
೫೧	ಕಟಗಿಕುದರಿ	೫೨	ಡೊಳ್ಳು

ಅನುಬಂಧ : ಆರು

ಡೊಳ್ಳಿನ ಹಾಡುಗಳ ಮೇಳ(ಸಂಘ)ಗಳು

೧) ಶ್ರೀ ಅರಣ್ಯಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ

೨) ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ

೩) ಶ್ರೀ ಕರೇಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ

೪) ಶ್ರೀ ಭೂತಾಳಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ

೫) ಶ್ರೀ ಅರಣ್ಯಸಿದ್ಧೇಶ್ವರ ಹಿರಿಯ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ

೬) ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ

೭) ಶ್ರೀ ಮಹಾಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ

೮) ಶ್ರೀ ಮಲಕಾರಿಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ

೯) ಶ್ರೀ ಮಾಳಿಂಗರಾಯ ಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕೆಂಪಟ್ಟಿ

೧೦) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ

೧೧) ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ

೧೨) ಶ್ರೀ ರೇವಣಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ

೧೩) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ

೧೪) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ–ಮುಗಳಖೋಡ

೧೫) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಮುಗಳಖೋಡ ಕ್ರಾಸ್

೧೬) ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಮುಗಳಖೋಡ

೧೭) ಶ್ರೀ ಕರೇಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಮುಗಳಖೋಡ

೧೮) ಶ್ರೀ ರೇವಣಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಮುಗಳಖೋಡ

೧೯) ಶ್ರೀ ಕರೇಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ

೨೦) ಶ್ರೀ ಕರೇಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ

೨೧) ಶ್ರೀ ಕರೇಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ

೨೨) ಶ್ರೀ ಮಾಳಿಂಗರಾಯ ಡೊಳ್ಳಿನ ಗಾಯನ ಸಂಘ, ಅಲಕನೂರ

೨೩) ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ

೨೪) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಬೆಕ್ಕೇರಿ

೨೫) ಶ್ರೀ ಮಾಳಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಅಳಗವಾಡಿ

೨೬) ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಳಗವಾಡಿ

೨೭) ಶ್ರೀ ಅವಧೂತ ಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಳಗವಾಡಿ

೨೮) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಪರಮಾನಂದವಾಡಿ

೨೯) ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಖಣದಾಳ

೩೦) ಶ್ರೀ ಯಲ್ಲಮ್ಮದೇವಿ ಡೊಳ್ಳಿನ ಗಾಯನ ಸಂಘ, ಇಟನಾಳ
೩೧) ಶ್ರೀ ಬಸವೇಶ್ವರ ಡೊಳ್ಳಿನ ಗಾಯನ ಸಂಘ, ಇಟನಾಳ
೩೨) ಶ್ರೀ ಮಲ್ಲಯ್ಯದೇವರ ಡೊಳ್ಳಿನ ಗಾಯನ ಸಂಘ, ಇಟನಾಳ
೩೩) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೪) ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೫) ಶ್ರೀ ಅರಣ್ಯಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೬) ಶ್ರೀ ಹುಲಿಕಾಂತೇಶ್ವರ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೭) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಬ್ಯಾಕೂಡ
೩೮) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಬ್ಯಾಕೂಡ
೩೯) ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಬಿರನಾಳ
೪೦) ಶ್ರೀ ಯಲ್ಲಮ್ಮದೇವಿ ಡೊಳ್ಳಿನ ಗಾಯನ ಸಂಘ, ಬಿರನಾಳ
೪೧) ಶ್ರೀ ಮಾಯಕ್ಕದೇವಿ ಡೊಳ್ಳಿನ ಗಾಯನ ಸಂಘ, ಚಿಂಚಲಿ
೪೨) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಚಿಂಚಲಿ
೪೩) ಶ್ರೀ ಮಹಾಕಾಳಿ ಡೊಳ್ಳಿನ ಗಾಯನ ಸಂಘ, ಚಿಂಚಲಿ
೪೪) ಶ್ರೀ ಕೊರವಂಜಿ ಡೊಳ್ಳಿನ ಗಾಯನ ಸಂಘ, ಕಪ್ಪಲಗುದ್ದಿ
೪೫) ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ರಾಯಬಾಗ
೪೬) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕಂಕಣವಾಡಿ
೪೭) ಶ್ರೀ ವಿಠ್ಠಲದೇವರ ಡೊಳ್ಳಿನ ಗಾಯನ ಸಂಘ, ಕಂಕಣವಾಡಿ
೪೮) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಶಿರಗೂರ
೪೯) ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಸುಟ್ಟಟ್ಟಿ
೫೦) ಶ್ರೀ ಅಡವಿಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಸುಟ್ಟಟ್ಟಿ
೫೧) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹುಬ್ಬರವಾಡಿ
೫೨) ಶ್ರೀ ತಾಯಿಬಾಯಿ ಡೊಳ್ಳಿನ ಗಾಯನ ಸಂಘ, ಜಲಾಲಪುರ
೫೩) ಶ್ರೀ ಬೀರದೇವರ ಡೊಳ್ಳಿನ ಗಾಯನ ಸಂಘ, ದಿಗ್ಗೇವಾಡಿ
೫೪) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಬೊಮನಾಳ
೫೫) ಶ್ರೀ ಬೀರದೇವರ ಡೊಳ್ಳಿನ ಗಾಯನ ಸಂಘ, ನಸಲಾಪೂರ
೫೬) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕಂಚಕರವಾಡಿ
೫೭) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹಾಲಶಿರಗೂರ
೫೮) ಶ್ರೀ ವಿಠ್ಠಲದೇವರ ಡೊಳ್ಳಿನ ಗಾಯನ ಸಂಘ, ಬೂದಿಹಾಳ
೫೯) ಶ್ರೀ ಭರಮಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಕಪ್ಪಲಗುದ್ದಿ
೬೦) ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕಪ್ಪಲಗುದ್ದಿ

೬೧) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಂದಿಗುಂದ

೬೨) ಶ್ರೀ ಭರಮಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಪಾಲಬಾವಿ

೬೩) ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ನಿಡಗುಂದಿ

೬೪) ಶ್ರೀ ಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ನಿಡಗುಂದಿ

೬೫) ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ನಿಡಗುಂದಿ

೬೬) ಶ್ರೀ ಮಾಳಿಂಗರಾಯ ಡೊಳ್ಳಿನ ಗಾಯನ ಸಂಘ, ಬೂದಿಹಾಳ

ಅನುಬಂಧ : ಏಳು

ಹಾಲುಮತದ ಶಿಕ್ಷಣ ಸಂಸ್ಥೆಗಳು

ಕರ್ನಾಟಕ ಪ್ರದೇಶ ಶಿಕ್ಷಣ ಪ್ರಸಾರಕ ಮಂಡಳ ರಾಯಬಾಗ ಅಂಗ ಸಂಸ್ಥೆಗಳು

ಪ್ರೌಢಶಾಲೆ ಮತ್ತು ಪದವಿ-ಪೂರ್ವ ಮಹಾವಿದ್ಯಾಲಯಗಳು

೧. ಆರ್. ವ್ಹಿ. ಆರ್. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ರಾಯಬಾಗ

೨. ಎಚ್. ವ್ಹಿ. ಎಚ್. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ಹಾರೂಗೇರಿ

೩. ವ್ಹಿ. ಪಿ. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ಹಿಡಕಲ್ಲ

೪. ಎಸ್. ಜಿ. ಎಸ್. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ಮದಭಾವಿ ತಾ. ಅಥಣಿ

೫. ಎ. ವ್ಹಿ. ಎಂ. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ವಡಗಾಂವ ಬೆಳಗಾವಿ

೬. ಎಸ್. ವ್ಹಿ. ಎಂ. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ಶಂಕರಹಟ್ಟಿ ತಾ. ಅಥಣಿ

೭. ಎಸ್. ವ್ಹಿ. ಎಂ. ಸಂಯುಕ್ತ ಪದವಿ-ಪೂರ್ವ ಮಹಾವಿದ್ಯಾಲಯ ಧರ್ಮಟ್ಟಿ ತ. ಗೋಕಾಕ

೮. ಶ್ರೀ ಕಾಡಸಿದ್ಧೇಶ್ವರ ಪ್ರೌಢಶಾಲೆ ಗುಂಡೇವಾಡಿ ತಾ. ಅಥಣಿ

೯. ಆನಂದಿಬಾಯಿ ಬಾಲಕಿಯರ ಪ್ರೌಢಶಾಲೆ ರಾಯಬಾಗ

೧೦. ಎಸ್. ಬಿ. ಡಿ. ಬಾಲಕಿಯರ ಪ್ರೌಢಶಾಲೆ ಹಾರೂಗೇರಿ

೧೧. ಶ್ರೀ ವಿವೇಕಾನಂದ ಕಲಾ ಮಂದಿರ ರಾಯಬಾಗ

ಪದವಿ ಮಹಾವಿದ್ಯಾಲಯಗಳು

೧೨. ಎಸ್. ಪಿ. ಎಂ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ರಾಯಬಾಗ

೧೩. ಎಸ್. ಪಿ. ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಹಾರೂಗೇರಿ

೧೪. ಎಸ್. ಪಿ. ಎಂ. ಎಸ್. ಜಿ. ಎಸ್. ಕಲಾ ಮಹಾವಿದ್ಯಾಲಯ ಮದಭಾವಿ ತಾ. ಅಥಣಿ

ವೃತ್ತಿ ಶಿಕ್ಷಣ ಸಂಸ್ಥೆಗಳು

೧೫. ಎಸ್. ಪಿ. ಎಂ. ಶಿಕ್ಷಣ ಮಹಾವಿದ್ಯಾಲಯ (ಬಿ. ಇಡಿ.) ಹಾರೂಗೇರಿ

೧೬. ಹಾ. ವಿ. ಶಿಕ್ಷಕರ ತರಬೇತಿ ಕೇಂದ್ರ (ಡಿ. ಇಡಿ.) ಹಾರೂಗೇರಿ

೧೭. ಅರುಣಾದೇವಿ ಶಿಕ್ಷಕಿಯರ ತರಬೇತಿ ಕೇಂದ್ರ (ಡಿ. ಇಡಿ.) ರಾಯಬಾಗ

೧೮. ಎಸ್. ಜಿ. ಎಸ್. ಶಿಕ್ಷಕರ ತರಬೇತಿ ಕೇಂದ್ರ (ಡಿ. ಇಡಿ.) ಮದಭಾವಿ ತಾ. ಅಥಣಿ

೧೯. ಎ. ವ್ಹಿ. ಎಂ ಶಿಕ್ಷಕರ ತರಬೇತಿ ಕೇಂದ್ರ (ಡಿ. ಇಡಿ.) ವಡಗಾಂವ. ಬೆಳಗಾವಿ

ಇತರ ಸಂಸ್ಥೆಗಳು

೨೦. ರಾಯಬಾಗ ಉಚಿತ ಪ್ರಸಾದ ನಿಲಯ ರಾಯಬಾಗ

೨೧. ವಿದ್ಯಾರ್ಥಿ ಉಚಿತ ಪ್ರಸಾದ ನಿಲಯ ಹಾರೂಗೇರಿ

೨೨. ಪದವಿ ಕಾಲೇಜಿನ ವಿದ್ಯಾರ್ಥಿನಿಯರ ವಸತಿ ನಿಲಯ ಹಾರೂಗೇರಿ

ಶ್ರೀ ಮಹಾಕಾಳಿ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಗಳು

೧) ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ರಾಯಬಾಗ

೨) ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ರಾಯಬಾಗ ಪ್ಯಾಕ್ಟರಿ

೩) ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಜಲಾಲಪೂರ

೪) ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ರಾಯಬಾಗ ಸ್ಟೇಶನ್

೫) ಅಮರ ಕ. ಮಾ. ಪ್ರಾಥಮಿಕ ಶಾಲೆ ಬೆಕ್ಕೇರಿ

೬) ಪಿ. ಆರ್. ಪಾಟೀಲ ಅನುದಾನಿತ ಪ್ರಾಥಮಿಕ ಶಾಲೆ ಭಿರಡಿ

೭) ಶ್ರೀ ಗುರುಬಗರಹ್ಮಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಪರಮಾನಂದವಾಡಿ

೮) ವಿವೇಕಾನಂದ ವಿದ್ಯಾಮಂದಿರ ಚಿಂಚಲಿ

೯) ಶ್ರೀ ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಹಾರೂಗೇರಿ

೧೦) ಶ್ರೀ ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಮುಗಳಖೋಡ

೧೧) ಶ್ರೀ ಭಲಬೀಮ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಹಿಡಕಲ್ಲ

೧೨) ಶ್ರೀ ಮಹಾಲಕ್ಷ್ಮೀ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಇಟನಾಳ

೧೩) ಶ್ರೀ ಸೆಂಟಪಿಟರ್ಸ್ ಕ. ಮಾ. ಪ್ರಾಥಮಿಕ ಶಾಲೆ ಹಾರೂಗೇರಿ

೧೪) ಶ್ರೀ ಲಕ್ಷ್ಮೀದೇವಿ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಧರ್ಮಟ್ಟಿ ತಾ. ಗೋಕಾಕ

೧೫) ಶ್ರೀ ವಿವೇಕಾನಂದ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಲೋಳಸೂರ ತಾ. ಗೋಕಾಕ

೧೬) ಶ್ರೀ ಹಾಲಸಿದ್ಧೇಶ್ವರ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ದುರದುಂಡಿ ತಾ. ಗೋಕಾಕ

೧೭) ಶ್ರೀ ಸಿದ್ಧರಾಮೇಶ್ವರ ಅನುದಾನಿತ ಕ. ಮಾ. ಪ್ರಾಥಮಿಕಶಾಲೆ ಶಿಂಧಿಕುರಬೇಟ ತಾ.ಗೋಕಾಕ

೧೮) ಶ್ರೀ ಮಹಾಲಕ್ಷ್ಮೀ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಮೊಳವಾಡ ತಾ. ಅಥಣಿ

೧೯) ಶ್ರೀ ಬಸವೇಶ್ವರ ಅನುದಾನಿತ ಕ. ಮಾ. ಫಪ್ರಾಥಮಿಕ ಶಾಲೆ ಮಸಗುಪ್ಪಿ ತಾ. ಅಥಣಿ

ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳು

೨೦) ಅಮೋಘ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ರಾಯಬಾಗ

೨೧) ರಿವರ್‌ಸೈಡ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಚಿಂಚಲಿ

೨೨) ಸೆಂಟ ಫೀಟರ್ಸ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾರೂಗೇರಿ

೨೩) ಸ್ವತಂತ್ರ ಸೇನಾನಿ ಶ್ರೀ ವಸಂತರಾವ ಪಾಟೀಲ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಜಲಾಲಪೂರ

೨೪) ಫಿನಿಕ್ಸ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಬೆಳಗಾವಿ

೨೫) ಫಿನಿಕ್ಸ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹೊನಗಾ

ಕನ್ನಡ ಮಾಧ್ಯಮ ಪ್ರೌಢಶಾಲೆಗಳು

೨೬) ವಿವೇಕಾನಂದ ಪ್ರೌಢಶಾಲೆ ರಾಯಬಾಗ

೨೭) ದಿಗ್ಗೇವಾಡಿ ಪ್ರೌಢಶಾಲೆ ದಿಗ್ಗೇವಾಡಿ

೨೮) ಭಿರಡಿ ಪ್ರೌಢಶಾಲೆ ಭಿರಡಿ

೨೯) ಇಟ್ನಾಳ ಪ್ರೌಢಶಾಲೆ ಇಟ್ನಾಳ

೩೦) ಮೊಳವಾಡ ಪ್ರೌಢಶಾಲೆ ಮೊಳವಾಡ ತಾ. ಅಥಣಿ

೩೧) ಇಂಗಳಿ ಪ್ರೌಢಶಾಲೆ ಇಂಗಳಿ ತಾ. ಅಥಣಿ

೩೨) ಶಿಂಧಿಕುರಬೇಟ ಪ್ರೌಢಶಾಲೆ ಶಿಂಧಿಕುರಬೇಟ ತಾ. ಗೋಕಾಕ

ಪದವಿ-ಪೂರ್ವ ಕಾಲೇಜುಗಳು

೩೩) ಅಮೋಘ ಪದವಿ-ಪೂರ್ವ ಕಾಲೇಜು ರಾಯಬಾಗ

೩೪) ಮಹಾಕಾಳಿ ಪದವಿ-ಪೂರ್ವ ಕಾಲೇಜು ಚಿಂಚಲಿ

೩೫) ಆಯ್. ಸಿ. ಎಸ್. ಸಿ. ಕಾಲೇಜು ಹೊನಗಾ ಬೆಳಗಾವಿ

ರಾಯಬಾಗ ಪರಿಸರದ ಹಾಲುಮತದ ಇತರ ಶಿಕ್ಷಣ ಸಂಸ್ಥೆಗಳು

ಶ್ರೀ ಸಿದ್ಧೇಶ್ವರ ಶಿಕ್ಷಣ ಸಂಸ್ಥೆ ಮೊರಬ

೧) ಅಜಿತಕುಮಾರ ಎಸ್. ಬಾನೆ ಅನುದಾನಿತ ಕ. ಮಾ. ಪ್ರಾಥಮಿಕ ಮತ್ತು ಪ್ರೌಢಶಾಲೆ ಮೊರಬ

೨) ಶ್ರೀ ಲಕ್ಷ್ಮೀದೇವಿ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಸುಟ್ಟಟ್ಟಿ

೩) ಶ್ರೀ ಬಸವೇಶ್ವರ ಅನುದಾನಿತ ಕ. ಮಾ. ಪ್ರಾಥಮಿಕ ಶಾಲೆ ಸವಸುದ್ದಿ

೪) ಅಜಿತಕುಮಾರ ಎಸ್. ಬಾನೆ ಕ. ಮಾ. ಪ್ರಾಥಮಿಕ ಮತ್ತು ಪ್ರೌಢಶಾಲೆ ಚಿಂಚಲಿ

೫) ಸೆಂಟವೇಲೆಂಟನ್ ಫ್ರೀ ಪ್ರೈಮರಿ ಸ್ಕೂಲ ಬೆಳಗಾವಿ

ಶ್ರೀ ಗಜಾನನ ಶಿಕ್ಷಣ ಸಂಸ್ಥೆ ಮೊರಬ

೧) ದಿ. ಶೇಖರ ಎಸ್.ಬಾನೆ (ಸರಕಾರ) ಇಂಗ್ಲೀಷ ಮಿಡಿಯಂ ಪ್ರೈಮರಿ & ಹೈಯರ ಪ್ರೈಮರಿ ಸ್ಕೂಲ ಮೊರಬ

೨) ದಿ. ಎಸ್.ಆರ್. ಬಾನೆ (ಸರಕಾರ) ಸ್ವತಂತ್ರ ಪದವಿ-ಪೂರ್ವ ಕಾಲೇಜು ಮೊರಬ

ಹಾರೂಗೇರಿ ಪುರಸಭೆಯ ವ್ಯಾಪ್ತಿಯಲ್ಲಿರುವ ಹಾಲುಮತ ಶಿಕ್ಷಣ ಸಂಸ್ಥೆಗಳು

೧) ಶ್ರೀ ಕರೇಸಿದ್ಧೇಶ್ವರ ಶಿಕ್ಷಣ ಸಂಸ್ಥೆ

೧) ಶ್ರೀ ಕರೇಸಿದ್ಧೇಶ್ವರ ಅನುದಾನಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ಶ್ರೀ ಕರೇಸಿದ್ಧೇಶ್ವರ ಅನುದಾನಿತ ಪ್ರೌಢ ಶಾಲೆ

೨) ಡಾ. ರಾಮ ಮನೋಹರ ಲೋಹಿಯಾ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆ

೧) ಕಾಳಿದಾಸ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ಶ್ರೀ ಸಿದ್ಧೇಶ್ವರ ಪ್ರೌಢ ಶಾಲೆ

೩) ಶ್ರೀ ಸಿದ್ಧೇಶ್ವರ ಪದವಿ-ಪೂರ್ವ ಕಾಲೇಜು

೪) ಶ್ರೀ ಸಿದ್ಧೇಶ್ವರ ಕಲಾ ಪದವಿ ಕಾಲೇಜು

೩) ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ

೧) ಸುಮಧರ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ಶ್ರೀ ವಿದ್ಯಾಗಂಗಾ ಪ್ರೌಢಶಾಲೆ

೩) ಯುನಿವರ್ಸಲ್ ಪದವಿ-ಪೂರ್ವ ಕಾಲೇಜು

೪) ಶ್ರೀ ಎಸ್. ಎಸ್. ಜಂಬಗಿ ಮೆಮೊರಿಯಲ್ ಎಜ್ಯುಕೇಶನ್ & ಚಾರಿಟೇಬಲ್ ಟ್ರಸ್ಟ್

೧) ಶ್ರೀ ಸಿದ್ಧಿವಿನಾಯಕ ಗ್ರಾಮಿಣ ಶಿಕ್ಷಣ ಮಹಾವಿದ್ಯಾಲಯ (ಬಿ. ಎಡ್.)

೨) ಶ್ರೀ ಸಿದ್ಧಿವಿನಾಯಕ ಗ್ರಾಮಿಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ

೫) ಶ್ರೀ ಶಾರದಾ ಶಿಕ್ಷಣ ಸಂಸ್ಥೆ

೧) ಸ್ವಾಮಿ ವಿವೇಕಾನಂದ ಬಿ. ಬಿ. ಎ. ಮತ್ತು ಬಿ. ಸಿ. ಎ. ಮಹಾವಿದ್ಯಾಲಯ

೨) ಸೇಂಟ ಜೋಸೆಪ್ ಇಂಗ್ಲೀಷ ಮಿಡಿಯಂ ಪ್ರೈಮರಿ ಸ್ಕೂಲ್

೬) ಭಾರತಿ ಶಿಕ್ಷಣ ಸಂಸ್ಥೆ

೧) ಭಾರತಿ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೭) ಶ್ರೀ ಪ್ರತಿಭಾ ಶಿಕ್ಷಣ ಸಂಸ್ಥೆ

೧) ಪ್ರತಿಭಾ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ (ಹಾಡಕಾರ ತೋಟ)

ಮುಗಳಖೋಡ ಪುರಸಭೆಯ ವ್ಯಾಪ್ತಿಯಲ್ಲಿರುವ ಹಾಲುಮತ ಶಿಕ್ಷಣ ಸಂಸ್ಥೆಗಳು

೧) ಶ್ರೀ ಯಲ್ಲಾಲಿಂಗೇಶ್ವರ ಶಿಕ್ಷಣ ಸಂಸ್ಥೆ

೧) ಶ್ರೀ ಸಿದ್ದಲಿಂಗೇಶ್ವರ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ಶ್ರೀ ರೇಣುಕಾದೇವಿ ಶಿಕ್ಷಣ ಸಂಸ್ಥೆಯ ಗ್ರಾಮೀಣಾಭಿವೃದ್ದಿ ಹಾಗೂ ಶೈಕ್ಷಣಿಕ ಸೇವಾ ಸಂಘ

೧) ಶ್ರೀ ಮುರುಘರಾಜೇಂದ್ರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ

೩) ಶ್ರೀ ಯಲ್ಲಾಲಿಂಗೇಶ್ವರ ಎಜ್ಯುಕೇಶನ್ & ಸೋಶಿಯಲ್ ವೇಲ್‌ಫೇರ್ ಸೊಸಾಯಿಟಿ

೧) ಸಂತ ಇಂಗ್ಲೀಷ ಮಿಡಿಯಂ ಸ್ಕೂಲ್ ಮುಗಳಖೋಡ

ಹಿಡಕಲ್ಲ ಗ್ರಾಮದ ಹಾಲುಮತ ಶಿಕ್ಷಣ ಸಂಸ್ಥೆಗಳು

೧) ಶ್ರೀ ಕನಕದಾಸ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ

೧) ಕವಿರತ್ನ ಕಾಳಿದಾಸ ಅನುದಾನಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ಶ್ರೀ ಬೀರೇಶ್ವರ ಪ್ರೌಢ ಶಾಲೆ

೨) ಶ್ರೀ ಲಕ್ಷ್ಮೀ ಶಿಕ್ಷಣ ಸಂಸ್ಥೆ

೧) ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೩) ಶ್ರೀ ಸತ್ಯಪ್ರಭು ಶಿಕ್ಷಣ ಸಂಸ್ಥೆ

೧) ಶ್ರೀ ಲಕ್ಕಮ್ಮದೇವಿ ಕನ್ನಡ ಮಾಧ್ಯಮದ ಕಿರಿಯ ಪ್ರಾಥಮಿಕ ಶಾಲೆ

ರಾಯಬಾಗ ಪಟ್ಟಣದ ಹಾಲುಮತ ಶಿಕ್ಷಣ ಸಂಸ್ಥೆಗಳು

ಸರ್ವೋದಯ ಶಿಕ್ಷಣ ಹಾಗೂ ಸಮಾಜ ಸೇವಾ ಸಂಸ್ಥೆ

೧) ಸರ್ವೋದಯ ಬಿ. ಎಸ್. ಡಬ್ಲ್ಯು. ಪದವಿ ಮಹಾವಿದ್ಯಾಲಯ

ವಿದ್ಯಾ ಚೇತನ ಎಜ್ಯುಕೇಶನ್ ಸೊಸಾಯಿಟಿ

೧) ಚಾಣಕ್ಯ ಪ್ರೈವೇಟ ಆಯ್. ಟಿ. ಆಯ್. ಕಾಲೇಜು

ಶ್ರೀ ಹಾಲಸಿದ್ಧೇಶ್ವರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಖೈರವಾಡಿ (ರಾಯಬಾಗ ರೈಲ್ವೆ ಸ್ಟೇಶನ್)

೧) ಶ್ರೀ ಹಾಲಸಿದ್ಧೇಶ್ವರ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಖೈರವಾಡಿ (ರಾಯಬಾಗ ಗ್ರಾಮೀಣ)

ರಾಯಬಾಗ ತಾಲೂಕಿ ವಿವಿಧ ಊರುಗಳಲ್ಲಿನ ಹಾಲುಮತ ಶಿಕ್ಷಣ ಸಂಸ್ಥೆಗಳು

ಶ್ರೀ ಹಾಲಸಿದ್ಧೇಶ್ವರ ಶಿಕ್ಷಣ ಸಂಸ್ಥೆ ಶಿರಗೂರ

೧) ಎಸ್. ಆರ್. ದಳವಾಯಿ ಪ್ರೌಢಶಾಲೆ ಪರಮಾನಂದವಾಡಿ

೨) ಎಸ್. ಆರ್. ದಳವಾಯಿ ಸಂಯುಕ್ತ ಪದವಿ-ಪೂರ್ವ ಕಾಲೇಜು ಪರಮಾನಂದವಾಡಿ

೩) ಜೆ. ಪಿ. ಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಪರಮಾನಂದವಾಡಿ

ಶ್ರೀ ಲಕ್ಷ್ಮೀ ಶಿಕ್ಷಣ ಸಂಸ್ಥೆ ಬೆಕ್ಕೇರಿ

೧) ರಾಮಕೃಷ್ಣ ಪಬ್ಲಿಕ್ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ರಾಮಕೃಷ್ಣ ಪ್ರೌಢಶಾಲೆ

೩) ರಾಮಕೃಷ್ಣ ಸ್ವತಂತ್ರ ಪದವಿ-ಪೂರ್ವ ಕಾಲೇಜು

ಶ್ರೀ ಪಾಂಡುರಂಗ ಶಿಕ್ಷಣ ಸಂಸ್ಥೆ ಅಳಗವಾಡಿ

೧) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ. ಮಾ. ಅನುದಾನಿತ ಪ್ರಾಥಮಿಕ ಶಾಲೆ

೨) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರೌಢ ಶಾಲೆ

ಶ್ರೀಮತಿ ಅಕ್ಕವ್ವ ಅ. ಪಾಟೀಲ ಎಜ್ಯುಕೇಶನ್ & ಸೊಶಿಯಲ್ ವೇಲ್‌ಫೇರ್ ಸೊಸಾಯಿಟಿ ಬ್ಯಾಕೂಡ

೧) ಶ್ರೀಮತಿ ಎ. ಎ. ಪಾಟೀಲ ಇಂಗ್ಲೀಷ ಮಿಡಿಯಂ ಸ್ಕೂಲ

ಶ್ರೀ ಕೃಷ್ಣ ಕನಕದಾಸ ಕುರಿ ಸಂಗೋಪನಾ ಉಣ್ಣೆ ಉತ್ಪಾದಕರ ಸಹಕಾರಿ ಸಂಘ ಹುಬ್ಬರವಾಡಿ

೧) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ

ಶ್ರೀ ವಿಠ್ಠಲರಾಯ ಶಿಕ್ಷಣ ಸಂಸ್ಥೆ ಕಂಕಣವಾಡಿ

೧) ಶ್ರೀ ವಿಠ್ಠಲರಾಯ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ

ಶ್ರೀ ಲಕ್ಷ್ಮೀದೇವಿ ರೂರಲ್ & ಅರ್ಬನ್ ಡೆವಲಪಮೆಂಟ ಎಜ್ಯುಕೇಶನ್ ಸೊಸಾಯಿಟಿ ಇಟ್ನಾಳ

೧) ವಿದ್ಯಾ ಸರಸ್ವತಿ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

ಶಾಂತಿ ಶಿಕ್ಷಣ ಸಂಸ್ಥೆ ಇಟ್ನಾಳ

೧) ವಿದ್ಯಾ ಚೇತನ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ ಬೆಂಡವಾಡ

೧) ಶ್ರೀ ಸ್ವಾಮಿ ವಿವೇಕಾನಂದ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ

ವಿಜಯಶ್ರೀ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸವಸುದ್ದಿ

೧) ವಿದ್ಯಾನಿಧಿ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

ಶ್ರೀ ಹುಲಕಾಂತೇಶ್ವರ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆ ಖಣದಾಳ

೧) ಶ್ರೀ ಹುಲಕಾಂತೇಶ್ವರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ

ಶ್ರೀ ಕನಕದಾಸ ಶಿಕ್ಷಣ ಸಂಸ್ಥೆ ಖಣದಾಳ

೧) ಶ್ರೀ ಶಾರದಾ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

೨) ಶ್ರೀ ಎನ್. ಕೆ. ಬಂಡಗಾರ ಪ್ರೌಢಶಾಲೆ

ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ ಯಬರಟ್ಟಿ

೧) ಸ್ವಾಮಿ ವಿವೇಕಾನಂದ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

ಶ್ರೀ ಅರಣ್ಯಸಿದ್ಧೇಶ್ವರ ಶಿಕ್ಷಣ ಸಂಸ್ಥೆ ಯಲ್ಪಾರಟ್ಟಿ

೧) ಶ್ರೀಮತಿ ಗೌರವ್ವ ಸಿ. ಒಡೆಯರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ

ಶ್ರೀ ಮಹಾಲಕ್ಷ್ಮೀ ಶಿಕ್ಷಣ ಸಂಸ್ಥೆ ಗುಂಡವಾಡ

೧) ಶ್ರೀ ಮಹಾಲಕ್ಷ್ಮೀ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ

ಅನುಬಂಧ : ಎಂಟು

ಹಾಲುಮತ ದೇವತೆಗಳ ಕುರಿತಾದ ಜನಪದ ತ್ರಿಪದಿಗಳು

ಜನಪದ ತ್ರಿಪದಿಗಳಲ್ಲಿ ಯಲ್ಲಾರಟ್ಟಿಯ ಅರಣ್ಯಸಿದ್ಧೇಶ್ವರ :

೧) ಆರ್ಯಾಣ ಸಿದ್ಧಗ ಆರ ಕಾಲಿನ ಮಂಚೋ ।
ಯೊಳ್ಯಾಡಿ ಸರ್ಪ ತಲೆದಿಂಬಿಗ್ಯೋ ॥ ಇಟ್ಟುಕೊಂಡ ।
ಆರ್ಯಾಣದಾಗ ಅವನ ಸುಖನಿದ್ರ್ಯೋ ।

೨) ಊರೀಗಿ ಹೋಗುದುಕ, ಹೋರೀಗಿ ತಡಿಹಾಕಿ ।
ಊರ ದೂರವನ ಗುಡಿ ದೂರ ॥ ಆರ್ಯಾಣಸಿದ್ಧ ।
ಊರಿಗಿ ದೂರಾಗಿ ನೆನದಾನ ।

೩) ಹೊತ್ತ್ಯಾಳಿ ಬಂದಾಗ, ಮತ್ತ್ಯಾರನ ನೆನಯಲಿ ।
ಅತ್ತೀಯ ಮನಿಯ ಗುರುಸ್ವಾಮಿ ॥ ಆರ್ಯಾಣಸಿದ್ದ ।
ಹೊತ್ತ್ಯಾಳಿ ಬಂದಾಗ ನೆನದೀನ ।

೪) ಕಳ್ಳೀಯ ಸಾಲಿನ್ಯಾಗ, ಬೆಳ್ಳೀಯ ಪಲ್ಲಕ್ಕಿ ।
ಡೊಳ್ಳಿಟ್ಟ ದೊರೆಯ ಮನಿಗ್ಯಾನ ॥ ಆರ್ಯಾಣಸಿದ್ದ ।
ನಿನ ಡೊಳ್ಳಿಗಿ ಆರೂತಿ ಬೆಳಗೀನ ।

ಜನಪದ ತ್ರಿಪದಿಗಳಲ್ಲಿ ಅಲಕನೂರಿನ ಕರೇಸಿದ್ಧೇಶ್ವರ :

೧) ಅಂಬಲಿ ಮಾಡಿರೆಂದ, ಗೊಂಗಡಿ ಹೊರರೆಂದ ।
ಒಂಬತ್ತ ಡೊಳ್ಳ ಬಡಿಯಂದ ॥ ಕರೇಸಿದ್ದ ।
ತಪ್ಪದ ಸೇವಕ ಬರ್ರೆಂದ ।

೨) ಬಾಳಾನ ಎತ್ಕೊಂಡ, ಬಾಳೋತ ನಿಂತೀನ ।
ಬಾಗಲ ತೆರಿಯೋ ಕರಿಯಪ್ಪ ॥ ನಿನಮುಂದ ।
ಬಾಳಾನ ಜಡಿಯ ತಗಿಸೀನ ।

೩) ಬೇಡಿಕೊಂಡೀನ ನಾನು, ಬೆಳ್ಳಿಮಕದಯ್ಯಾಗ ।
ಕೈಯ್ಯಾಗ ಬೆತ್ತ ಕರಿಗೊಂಗಡಿ ॥ ಆಲಕನೂರ ।
ಸಿದ್ದಾ ನಿನ್ನ ಹರಕಿ ಮರೆತಿಲ್ಲ ।

೪) ಗೂಳಿ ಗೂಳೆಂದರ, ಯಾವ ದೇವರ ಗೂಳಿ ।
ಆಲಕನೂರ ಕರಿಗೂಳಿ ॥ ಹೆಸರಿಟ್ಟ ।
ಆಡೂ ಬಾಳಾನ ಕರೆದೀನ ।

೫) ಹಳ್ಳೀಯ ಊರಾಗ, ಒಳ್ಳ್ಯಾಂವ ನನ ಬೀರಪ್ಪ ।
ಬೆಳ್ಳೀಯ ಚೌಕ ಎದಿ ಮ್ಯಾಲ ॥ ಇಟಗೊಂಡ ।
ಹೊಳ್ಳೊಳ್ಳಿ ಕೌಲ ಕೊಡತಾನ ।

೬) ಕಕನೋಡಿ ಕರಿಜ್ವಾಳ ಜಮಖಂಡಿ ಬಿಳಿಜ್ವಾಳ ।
ಬೋರ್‍ಯಾಡತಾವ ಗಿಣಿಹಿಂಡ ॥ ಕರಿಸಿದ್ಧ ।
ಕುಣಿಸ್ಯಾಡತಾನ ಮರಿಗುವರಿ ।

೭) ಕಾಶೀಯ ನಿಂಗಗ, ಕಾಡ್ನಿ ಹಗ್ಗವ ಬೇಕ ।
ಸಂಗಾಟ ಬೇಕ ಹಳಬರ ॥ ನಮ ಸ್ವಾಮಿಗಿ ।
ಹೆಜ್ಜಿಗೊಂದ ಹರಿಮರಿ ಹರದಾರ ।

೮) ಪಲ್ಲಕ್ಕಿ ಬರತೈತೆತ್ತ, ನೆಲ್ಲಕ್ಕಿಗಿ ಎಸರಿಟ್ಟ ।
ಬೆಲ್ಲಕ ಹೋಗಿ ತಡದೀನ ॥ ನನ ಕರಸಿದ್ಧ ।
ನಿಲ್ಲದ ಪೌಳಿ ಹೊಗತಾನ ।

೯) ಸಿದ್ಧಸಿದ್ಧರು ಕೂಡಿ, ಬುದ್ಧಿವಂತರು ಕೂಡಿ ।
ಸಿದ್ಧರೊಳಗೊಬ್ಬ ಸಿವ ಕೂಡಿ ॥ ಮಾಡ್ಯಾರ ।
ಬುದ್ಯುಳ್ಳ ಬಾಳಾನ ಮದುವೀಯ ।

ಜನಪದ ತ್ರಿಪದಿಗಳಲ್ಲಿ ಚಿಂಚಲಿಯ ಮಾಯವ್ವ :

೧) ಚಿಂತೀಯ ಬಿಡಸವ್ವ, ಚಿಂಚಲಿ ಮಾಯವ್ವ ।
ಚಿಂತೆಲ್ಲ ಹೋಗಿ ಪರಿಹಾರ ॥ ಆದಿಂದ ।
ನನ ಚಿತ್ತಾಕ ಮ್ಯಾಲ ನಿನ ರೂಪ ।

೨) ಜಾಣಿ ಬರತಾಳಂತ, ಜತರಗಿ ಹ್ವಾದೀನ ।
ಜಾಣಿ ಹಡದವ್ವ ಬರಲಿಲ್ಲ ॥ ಚಿಂಚಲಿ ।
ಜಾತರಿ ನನಗ ಸೊಗಸಿಲ್ಲ ।

೩) ಚಿಂಚಲಿ ಹಾದಿಲೇ ಮಿಂಚ ಹೊಡೆಯುವುದೆನೋ ।
ಕಂಚಗಾರ ಹುಡುಗ ತಿದಿನೂದಿ ॥ ಮಾಡ್ಯಾನೋ ।
ಚಿಂಚಲಿ ಮಾಯಕ್ಕನ ಗುಡಿ ಕಳಸ ।

ಜನಪದ ತ್ರಿಪದಿಗಳಲ್ಲಿ ಬೆಕ್ಕೇರಿ ಲಕ್ಕವ್ವ :

೧) ಬೆಕ್ಕೇರಿ ಲಕ್ಕವ್ವಗ, ಒಂಭತ್ತ ಬಾಗಿಲ ।
ಹೊಂದಿಸಿ ಕುತ್ತಾರ ರೈತರ ॥ ಬರುವಾಗ ।
ತುಂಬೀದ ಕೌಲ ಕೊಡತಾಳ ।


೨) ಎಲ್ಲಾರು ಉಟ್ಟಾರ, ಎಳ್ಳ ಹೂವಿನ ಸೀರಿ ।
ಇಲ್ಲದ ಬಡವಿ ಲಗಮವ್ವ ॥ ಉಟ್ಟಾಳ ।
ಏಳ ಸಾವಿರದ ಜರತಾರ ।

೩) ಸಾವಿರಕ ಸದರೇರಿ, ನಮ್ಮಣ್ಣ ಕುದರೇರಿ ।
ತಾಯಿ ಲಕ್ಕವ್ವ ನವಿಲೇರಿ ॥ ಬರುವಾಗ ।
ನವಿಲಿಗಿ ಆರೂತಿ ಬೆಳಗೀನ ।

೪) ತಾಯಿ ನನ ಲಕ್ಕವ್ವನ, ಮಾರ್ಯಾಕ ಬಾಡ್ಯಾವ ।
ರಾಜಂಗಳ್ಯಾರ ಉಡಗಿಲ್ಲ ॥ ಶುಕ್ರವಾರದಿನ ।
ಪಗಡಿ ಪಲ್ಲಕ್ಕಿ ತಿರಿಗಿಲ್ಲ ।

ಶ್ರೀ ಕರೇಸಿದ್ಧೇಶ್ವರ ದೇವಸ್ಥಾನ ಅಲಖನೂರ







ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನ ಬೆಂಡವಾಡ




ಶ್ರೀ ಕರೇಸಿದ್ಧೇಶ್ವರ ದೇವಸ್ಥಾನ ಕ್ವಾಣೂರು



ಶ್ರೀ ವಿಠ್ಠಲಬೀರದೇವ ದೇವಸ್ಥಾನ ಕಡೋಲಿ (ಮಹಾರಾಷ್ಟ್ರ)



ಶ್ರೀ ಬೀರೇಶ್ವರ ದೇವಸ್ಥಾನ ರಾಯಬಾಗ






ಶ್ರೀ ಬೀರಸಿದ್ದೇಶ್ವರ ದೇವಸ್ಥಾನ ಯಕ್ಸಂಬಾ



ಶ್ರೀ ಅರಣ್ಯಸಿದ್ದೇಶ್ವರ ದೇವಸ್ಥಾನ ಯಲ್ಲಾರಟ್ಟಿ







ಶ್ರೀ ಹಾಲಸಿದ್ಧೇಶ್ವರ ದೇವಸ್ಥಾನ ಕಂಕಣವಾಡಿ







ಶ್ರೀ ಮಾಯವ್ವ ದೇವಸ್ಥಾನ ಚಿಂಚಲಿ







ಶ್ರೀ ಮಾಯವ್ವ ದೇವಸ್ಥಾನ ಚಿಂಚಲಿ (ಕೀಲಕಟ್ಟ ಮಂಟಪ)







ಶ್ರೀ ಮಾಯವ್ವ ದೇವಸ್ಥಾನ ಚಿಂಚಲಿ (ಉಣ್ಣೆ ಮಂಟೆಪ್ಪನ ಕಲ್ಲು)




ಶ್ರೀ ಮಾಯವ್ವನ ಕುದುರೆ



ಶ್ರೀ ಮಾಯವ್ವ ದೇವಸ್ಥಾನ ಯಾತ್ರಿ ನಿವಾಸ



ಶ್ರೀ ಲಕ್ಕವ್ವ ದೇವಸ್ಥಾನ ಬೆಕ್ಕೇರಿ







ಅಲಗ ಹಾಯುವುದು



ಭಂಡಾರ ಸೇವೆ



ಕಂಬಳಿ ಮಾರಾಟ



ಗುಗ್ಗಳ ಆಚರಣೆ



ಡೊಳ್ಳಿನ ಹಾಡು



ಪಲ್ಲಕಿ ಸೇವೆ



ರಾಯಬಾಗದ ಶಾಹು ಮಹಾರಾಜರ ಅರಮನೆಯ ಅವಶೇಷಗಳು







ಅನುಬಂಧ : ಹತ್ತು

ಆಕರ ಗ್ರಂಥಗಳು

ಗ್ರಂಥಗಳು

೧)	ಅಡಿವೆಪ್ಪ ಮಹಾರಾಯರು	**ಶ್ರೀ ಮಹಾಲಿಂಗರಾಯರ ಹಾಲುಮತದ ಅನುಭವ ವಚನಗಳು**	
		ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೧
		ಸುಕ್ಷೇತ್ರ ಹುಲಜಂತಿ ಮಠದವರಿಂದ	
		ಹಾಲುಮತ ಚರಿತ್ರೆಗಳ ವಿಮರ್ಶೆ	
		ಬಿ. ಎಸ್. ಎ. ಪ್ರಕಾಶನ, ಅಡವಿಸೋಮಾಪೂರ, ಗದಗ	೨೦೧೪
೨)	ಅಡಿವೆಪ್ಪ ಮಾಳಪ್ಪ ಸೋಮುತ್ತೆ (ಒಡೆಯರ)	**ಸುಕ್ಷೇತ್ರ ಹುಲಜಂತಿ ಶ್ರೀ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ**	
		ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೦
೩)	ಅಣ್ಣಪ್ಪ ವಾ. ಮುತ್ತೂರ	**ಹಾಲ್ಮತದ ಶ್ರೀ ಸಿದ್ಧಬೀರೇಶ್ವರ**	
		ಅರ್ಥಾತ್ ಶ್ರೀ ಕರಿಸಿದ್ಧೇಶ್ವರ ಪುರಾಣ	
		ವಿದ್ಯಾನಿಧಿ ಪ್ರಕಾಶನ, ಗದಗ	೨೦೧೧
೪)	ಅನ್ನಪೂರ್ಣ ಗೋಸ್ಬಾಳ	**ಹಾಲುಮತ ಚರಿತ್ರೆ ಯಲ್ಲನಗೌಡ ಫ. ಅತ್ತಿಕೊಳ್ಳ (ಸಂ)**	
		ಹಾಲುಮತ ಸಂಸ್ಕೃತಿ ಸಂಶೋಧನೆ ಪ್ರತಿಷ್ಠಾನ, ಹೊಸಪೇಟೆ	೨೦೧೨
		ಹಾಲುಮತ ಅಧ್ಯಯನದ ಆಕರಗಳು	
		ಸ್ವರೂಪ ಮತ್ತು ವಿಶ್ಲೇಷಣೆ	
		ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೨-೧೩
		ಹಾಲುಮತ ಕಿರಣ	
		ಹಾಲುಮತ ಸಂಸ್ಕೃತಿ ಸಂಶೋಧನೆ ಪ್ರತಿಷ್ಠಾನ, ಹೊಸಪೇಟೆ	೨೦೧೪
೫)	ಅಶೋಕ ನರೋಡೆ	**ಗತಿಶೀಲ ಸಾಂಸ್ಕೃತಿಕ ಚಿಂತಕ**	
		ಚೈತನ್ಯ ಬಳಗ ಪ್ರಕಾಶನ, ಮೂಡಲಗಿ	೨೦೧೦
೬)	ಎ. ವಿ. ನಾವಡ	**ಹರಿದಾಸರ ಪಾಂಡುರಂಗ ವಿಠ್ಠಲ (ಸಂ)**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೫
೭)	ಒಡೆಯರ್ ಡಿ. ಹೆಗ್ಗಡೆ	**ಹಾಲುಮತ ಕುರುಬ ಜನಾಂಗದ ಇತಿಹಾಸ**	
		ಅಖಿಲಾ ಏಜೆನ್ಸೀಸ್, ಅಂಜನಾದ್ರಿ, ಮೈಸೂರು	೨೦೦೫
		ಕುರುಬ ಜನಾಂಗದ ಪ್ರಸಿದ್ಧ ಸಾಹಿತಿಗಳು ಮತ್ತು ಕಲಾವಿದರು	
		ಅಖಿಲಾ ಏಜೆನ್ಸೀಸ್, ಅಂಜನಾದ್ರಿ, ಮೈಸೂರು	೨೦೦೫
		ಶ್ರೀ ಮೈಲಾರಲಿಂಗ	
		ಅಖಿಲಾ ಏಜೆನ್ಸೀಸ್, ಅಂಜನಾದ್ರಿ, ಮೈಸೂರು	೨೦೦೫

		ರಾಣಿ ಅಹಲ್ಯಾದೇವಿ ಹೋಳ್ಕರ್ ಮತ್ತು ಇತರ ಪ್ರಸಿದ್ಧ ಮಹಿಳೆಯರು	
		ಅಖಿಲಾ ಏಜೆನ್ಸೀಸ್, ಅಂಜನಾದ್ರಿ, ಮೈಸೂರು	೨೦೦೫
		ಹಾಲುಮತ ಕುರುಬ ಜನಾಂಗದ ಚರಿತ್ರೆ	
		ಒಡೆಯರ್ ಪಬ್ಲಿಕೇಶನ್ಸ್, ರಾಮಕೃಷ್ಣನಗರ, ಮೈಸೂರು	೨೦೦೯
೮)	ಕನ್ನಯ್ಯ ಮಹಾರಾಜರು (ಕೆ. ಎನ್. ಒಡೆಯರ)	**ಹಾಲುಮತ ಶ್ರೀ ಗೊಲ್ಲಾಳೇಶ್ವರ ಪ್ರಭೆ**	
		ಪ್ರಕಾಶಕರು, ಅಭಿಲಾಷ ಪ್ರಕಾಶನ, ಗೋಕಾಕ	೨೦೧೪
		ಹಾಲುಮತ ಧರ್ಮದ ಬೆಳಕು	
		ಪ್ರಕಾಶಕರು, ಅಭಿಲಾಷ ಪ್ರಕಾಶನ, ಗೋಕಾಕ	೨೦೧೪
೯)	ಕಾಮಣ್ಣಾ ಸಿದ್ಧಪ್ಪಾ ಘೀವಾರಿ	**ಹಾಲುಮತದ ಕಿರಣಗಳು**	
		ಪ್ರಕಾಶಕರು, ಕಾಮಣ್ಣಾ ಸಿ. ಘೀವಾರಿ, ಕಬ್ಬೂರ ತಾ. ಚಿಕ್ಕೋಡಿ	
೧೦)	ಕೆ. ವ್ಹಿ. ಬೀಳಗಿ	**ಹಾಲುಮತ ಪುರಾಣ ದರ್ಶನ**	
		ಪ್ರಕಾಶನ, ಶ್ರೀ ಮಹಾತ್ಮಾ ವಿದ್ಯಾವರ್ಧಕ ಸಂಘ, ಹಾರೂಗೇರಿ	೨೦೧೬
೧೧)	ಕೇದಾರಿ ಪುಂಡಲೀಕ ಬರಗೆ	**ಹಾಲ್ಮತೋತ್ತೇಜಕ ಪುರಾಣ**	
		ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೪
೧೨)	ಗಂಗಾಧರ ದೈವಜ್ಞ	**ಬುಡಕಟ್ಟು ಮಹಾಕಾವ್ಯ ಮಾಲೆ ಅಡಿವೆಪ್ಪ ಒಡೆಯರು ಹಾಡಿದ ಮಾಳಿಂಗರಾಯನ ಕಾವ್ಯ (ಸಂ)**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೧೯೯೯
೧೩)	ಚನ್ನಪ್ಪ ಕಟ್ಟಿ	**ಕುರುಬ ಜನಪದ (ಸಂ)**	
	ಆರ್. ಎಸ್. ಮಾಡೇದ	ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ವಿಜಾಪುರ	೧೯೯೭
೧೪)	ಚನ್ನಪ್ಪ ಕಟ್ಟಿ	**ಅರಕೇರಿ ಅಮೋಘಸಿದ್ಧೇಶ್ವರ**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೨
೧೫)	ಚಂದ್ರಕಾಂತ ಬಿಜ್ಜರಗಿ	**ಕುರುಬರ ಹೆಜ್ಜೆಗಳು ಒಂದು ಅಧ್ಯಯನ**	
		ಶೈಲಚಂದ್ರ ಪ್ರಕಾಶನ, ವಿಜಾಪೂರ	೨೦೦೬
		ಕುರುಬರ ಗುರು ರೇವಣಸಿದ್ಧ	
		ಶೈಲಚಂದ್ರ ಪ್ರಕಾಶನ, ವಿಜಾಪೂರ	೨೦೦೯
		ಬೀರದೇವರ ಅವತಾರಗಳು	
		ಶೈಲಚಂದ್ರ ಪ್ರಕಾಶನ, ವಿಜಾಪುರ	೨೦೧೧
೧೬)	ಚಂದ್ರಪ್ಪ ಸೊಬಟಿ	**ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ**	
		ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೩
		ಹಾಲುಮತ ಸಾಂಸ್ಕೃತಿಕ ಕಥನ	
		ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೩
೧೭)	ಜ್ಯೋತಿ ಹೊಸುರು	**ಸಂಗೊಳ್ಳಿ ರಾಯಣ್ಣ ಚರಿತ್ರೆ ಸಂಶೋಧನೆ**	
		ಕಾಲಗತಿ ಪ್ರಕಾಶನ ರಾಯಬಾಗ, ಬೆಳಗಾವಿ	೨೦೧೫

		ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು	
		ಜಾನಪದ ಮಂಟಪ, ಕಾಲಗತಿ ಪ್ರಕಾಶನ, ಬೆಳಗಾವಿ	೨೦೦೭
		ಡಾ. ಶಂಬಾ ಜೋಶಿಯವರ ಅಸಂಕಲಿತ ಲೇಖನಗಳು	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೧
೧೮)	ತಾರಿಹಳ್ಳಿ ಹನುಮಂತಪ್ಪ	**ಕರ್ನಾಟಕದ ಬುಡಕಟ್ಟು ಸಮುದಾಯಗಳು**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೦
		ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೨
೧೯)	ಟಿ. ಎಸ್. ವಂಟಗೂಡಿ	**ರಾಯಬಾಗ ತಾಲೂಕಿನ ಹಾಲುಮತ ದೈವಗಳು**	
		ಪ್ರಕಾಶನ, ವಿದ್ಯಾ ಪ್ರಕಾಶನ, ಹಿಡಕಲ್ಲ	೨೦೧೦
೨೦)	ನಿಂಗಣ್ಣ ಸಣ್ಣಕ್ಕಿ	**ಹಾಲುಮತದ ಪುರಾಣ**	
		ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೦೮
		ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ಚರಿತ್ರೆ–ಪರಿವಾರ	
		ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೦೯
೨೧)	ಎಫ್. ಟಿ. ಹಳ್ಳಿಕೇರಿ	**ಕುರುಬರ ಗುರು ಒಡೆಯರು (ಸಂ)**	
		ವಿಕಾಸ ಪ್ರಕಾಶನ, ಎಂ. ಪಿ. ಪ್ರಕಾಶ ನಗರ, ಹೊಸಪೇಟೆ	೨೦೦೭
		ರಸ್ತಾಪುರ ಭೀಮಕವಿಯ ಹಾಲಮತೋತ್ತೇಜಕ ಪುರಾಣ	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೮
		ಹಾಲುಮತ ವ್ಯಾಸಂಗ–೧	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೯
		ಹಾಲುಮತ ಅಧ್ಯಯನ ಸಂಪುಟ–೧	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೦
		ಹಾಲುಮತ ವ್ಯಾಸಂಗ–೨	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೦
		ಹಾಲುಮತ ಅಧ್ಯಯನಗಳು	
		ವಿಕಾಸ ಪ್ರಕಾಶನ, ಎಂ. ಪಿ. ಪ್ರಕಾಶ ನಗರ, ಹೊಸಪೇಟೆ	೨೦೧೦
		ಹಾಲುಮತ ಸಂಸ್ಕೃತಿ ಸಂಪುಟ–೧	
		ವಿಕಾಸ ಪ್ರಕಾಶನ, ಎಂ. ಪಿ. ಪ್ರಕಾಶ ನಗರ, ಹೊಸಪೇಟೆ	೨೦೧೧
		ಹಾಲುಮತ ವ್ಯಾಸಂಗ–೩	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೧
		ಹಾಲುಮತ ವ್ಯಾಸಂಗ–೪	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೩

ಹಾಲುಮತ ಮಹಿಳಾ ಸಾಧಕರು
ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ,
ದೇವದುರ್ಗ(ತಿಂಥಣಿ ಬ್ರಿಡ್ಜ್) ೨೦೧೫

೨೨) ಎಫ್. ಟಿ. ಹಳ್ಳಿಕೇರಿ
ಎನ್. ಬಿ. ವಿರೂಪಾಕ್ಷಿ
ಮಾರ್ಗದ ಮಹಾಕಾವ್ಯಗಳು (ಸಂ)
ವಿಕಾಸ ಪ್ರಕಾಶನ, ಎಂ. ಪಿ. ಪ್ರಕಾಶ ನಗರ, ಹೊಸಪೇಟೆ ೨೦೧೨

೨೩) ಬ. ನೀ. ಹಳವಳ್ಳಿ
ಬೀರೇಶ್ವರ ಚರಿತ್ರೆ
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೩

೨೪) ಬ. ಪ. ನಾಯ್ಕರ
ಹಾಲುಮತಸ್ಥರು
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೧

೨೫) ಬಸವರಾಜ ಸಬರದ
ಜನಪದ ದೈವಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೯

೨೬) ಬಸವರಾಜ ಜಗಜಂಪಿ
ಬೆಳಗಾವಿ ಭಾಗ್ಯ (ಸಂ)
ಪ್ರಕಾಶನ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಬೆಳಗಾವಿ ೨೦೧೦

೨೭) ಬಿ. ಷೇಕ್ ಅಲಿ &
ಜಿ. ಆರ್. ರಂಗಸ್ವಾಮಯ್ಯ
ದಕ್ಷಿಣ ಭಾರತದ ಇತಿಹಾಸ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ೧೯೮೪

೨೮) ಬಿ. ಎಚ್. ಮಾದರ
ಹಾಲ್ಮತೋತ್ತೇಜಕ ಪುರಾಣ
ಕವಿ ಚಕ್ರವರ್ತಿ ರನ್ನ ಪ್ರಕಾಶನ, ಮಹಾಲಿಂಗಪೂರ ೨೦೦೧

೨೯) ಬಾ. ಯ. ದೇಶಪಾಂಡೆ
(ಅಂಣು ಗುರೂಜಿ)
ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಸಮರ ಸಂಪುಟ–೧
ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ,
ಬೆಳಗಾವಿ ೧೯೭೩
ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಸಮರ ಸಂಪುಟ–೨
ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ,
ಬೆಳಗಾವಿ ೧೯೭೩

೩೦) ಬಾಲಕೃಷ್ಣ ಜಂಬಗಿ
ನಮ್ಮೂರ ಜಾನಪದ
ಆದಿ ಗಂಗಾ ಪ್ರಕಾಶನ, ಕಾಲೇಜು ರಸ್ತೆ, ಹಾರೂಗೇರಿ ೨೦೧೩

೩೧) ಬೋನಾ ಬಸವರಾಜ
ಹಾಲುಮತದ ಹುಟ್ಟು
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೬–೦೭
ಭಗವಾನ್ ಬೀರೇಶ್ವರರು
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೭
ಮುಗಳಖೋಡದ ಮಹಾಚೇತನ ಎಲ್ಲಾಲಿಂಗರು
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೭

೩೨) ಮದಗೊಂಡ ದುಂ. ಒಡೆಯರ
ಸಿದ್ಧಸಿರಿ ಶ್ರೀ ಅಮೋಘಸಿದ್ಧೇಶ್ವರ ಚರಿತಾಮೃತ ಸಂಪುಟ–೧
ಪ್ರಕಾಶಕರು, ಶ್ರೀ ರೇವಣಸಿದ್ಧ ಗುರೂಜಿ ನಾಗಣಸೂರ,
ತಾ. ಅಕ್ಕಲಕೋಟ ೨೦೦೮

೩೩)	ಮಂಜುನಾಥ ಬೇವಿನಕಟ್ಟಿ	**ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೯
೩೪)	ಮಲ್ಲೇಪುರಂ ಜಿ. ವೆಂಕಟೇಶ	**ಶಂಬಾ ಕೃತಿ ಸಂಪುಟ ೧ ಕಂನಾಡು-ಕರ್ನಾಟಕ(ಸಂ)**	
		ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರ	೧೯೯೯
		ಶಂಬಾ ಕೃತಿ ಸಂಪುಟ-೩. ಕರ್ಣಾಟ-ಸಂಸ್ಕೃತಿಕನ್ನಡ ಪುಸ್ತಕ	
		ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರ	೧೯೯೯
೩೫)	ಮ. ಸು. ಕೃಷ್ಣಮೂರ್ತಿ	**ಸಿದ್ಧ ಸಾಹಿತ್ಯ**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೧೦
೩೬)	ಎಂ. ಕೆ. ಮೇತ್ರಿ	**ಬುಡಕಟ್ಟು ಕುಲಕಸಬುಗಳು**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೨
೩೭)	ಎಂ. ಜೈಕುಮಾರ್	**ಪಾವನ**	
		ಕಾಗಿನಲೆ ಪ್ರಸಾರಾಂಗ, ಬೆಂಗಳೂರು	೧೯೯೨
		ಚಲುವು ಚಪ್ಪರ	
		ಕುರುಬ ಸಮಾಜ ಸಂಸ್ಕೃತಿಕ ಕುರಿತ ಸಂಪ್ರಬಂಧಗಳು	
		ಹಾಲುಮತ ಸಂಸ್ಕೃತಿ ಸಂಶೋಧನೆ ಪ್ರತಿಷ್ಠಾನ, ಹೊಸಪೇಟೆ	೨೦೧೩
೩೮)	ಎಂ. ಎಂ. ಕಲಬುರ್ಗಿ	**ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು**	
		ಪ್ರಕಾಶನ, ಸಪ್ನ ಬುಕ್ ಹೌಸ್, ಬೆಂಗಳೂರು	೨೦೧೧
		ಮಾರ್ಗ ಸಂಪುಟ-೪	
		ಪ್ರಕಾಶನ, ಸಪ್ನ ಬುಕ್ ಹೌಸ್, ಬೆಂಗಳೂರು	೨೦೧೧
		ಬಸವಣ್ಣನವರ ವಚನ ಸಂಪುಟ-೧	
		ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು	
೩೯)	ಎಂ. ಎಂ. ಜಯದೇವ	**ಹಾಲುಮತ ಹೆಳವರ ಕಥಾಸಾರ (ಸಂ)**	
		ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ	೨೦೧೫
೪೦)	ಎಂ. ಎಸ್. ಬೈರನಟ್ಟಿ	**ಜಗದ್ಗುರು ಶ್ರೀ ರೇವಣಸಿದ್ಧೇಶ್ವರ ಮಹಿಮೆ**	
		ಪಂಚಾಕ್ಷರಿ ಪ್ರಕಾಶನ, ಮಮದಾಪೂರ ತಾ. ಗೋಕಾಕ	೨೦೧೨
೪೧)	ಯರ್ರಪ್ಪ ಡಿ	**ಅಲೆಮಾರಿ ಕುರುಬ**	
		ಪ್ರಕಾಶನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು	೨೦೦೮
೪೨)	ವಾಯ್. ಕೆ. ಗುಂಡಕರ್ಜಗಿ	**ಹಾಲುಮತದ ಚರಿತ್ರೆ**	
		ವಿಜೇತ್ ಪ್ರಕಾಶನ, ಗದಗ	೨೦೧೧
೪೩)	ರಹಮತ್ ತರೀಕೆರೆ	**ಕರ್ನಾಟಕದ ನಾಥಪಂಥ**	
		ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೯
೪೪)	ರಾಜಶ್ರೀ ಪಾಟೀಲ	**ಹಾಲುಮತ ಗುರು ಸರೂರ ಶಾಂತಮುತ್ತಯ್ಯ**	
		ವಿಕಾಸ ಪ್ರಕಾಶನ, ಎಂ. ಪಿ. ಪ್ರಕಾಶನಗರ, ಹೊಸಪೇಟೆ	೨೦೧೧

೪೫) ರಾಮಪ್ಪಾ ಭೀಮಪ್ಪ ಚೌಗಲಾ **ಜನಪದರ ಬಾಯಲ್ಲಿ ಹಾಲುಮತದ ಇತಿಹಾಸ**
ಪ್ರಕಾಶಕರು, ರೋಹಿಣಿ ಎಂಟರ್ ಪ್ರೈಸಸ್ ಕೊಟ್ಟಿಗೇಪಾಳ್ಯ,
ಮಾಗಡಿ ಮುಖ್ಯರಸ್ತೆ, ಬೆಂಗಳೂರು ೨೦೧೧

೪೬) ಆರ್. ಗೋಪಾಲ್ **ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಸಂ)**
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
ಮೈಸೂರು ೨೦೧೦

೪೭) ಎಲ್. ಶ್ರೀನಿವಾಸ **ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು (ಸಂ)**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦

೪೮) ಲಕ್ಷ್ಮಣ ತೆಲಗಾವಿ **ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೩

೪೯) ಲಕ್ಷ್ಮಣ ಸಿ. ಪಟಾತ **ಹಾಲುಮತದ ಪುರಾಣವು**
ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೩

೫೦) ಲಿಂಗದಳ್ಳಿ ಹಾಲಪ್ಪ **ದಳವಾಯಿ**
(ಕುರುಬ ಜನಾಂಗದ ಜೀವಂತ 'ದೇವರು' ಬೀರಪ್ಪ)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೧

ಹಾಲುಮತ ಸಂಗಮಕುಲ ಗುರು
ಭಿಂಗಯ್ಯ (ಸಾಂಸ್ಕೃತಿಕ ಅಧ್ಯಯನ)
ಹಾಲುಮತ ಸಂಸ್ಕೃತಿಕ ಸಂಶೋಧನೆ ಪ್ರತಿಷ್ಠಾನ, ಹೊಸಪೇಟೆ ೨೦೧೨

ಬೀರದೇವರು
(ಹಾಲುಮತ ಧಾರ್ಮಿಕ ಸಾಮ್ರಾಜ್ಯದ ಚಕ್ರವರ್ತಿ, ಕುಲದೈವ)
ವಿದ್ಯಾನಿಧಿ ಪ್ರಕಾಶನ, ಶ್ರೀ ಶಿವಕುಮಾರ ಏಜನ್ಸಿ, ಗದಗ ೨೦೧೩

ಹಾಲುಮತ ಪರಂಪರೆ ಸಂಪುಟ-೧
ವಿದ್ಯಾನಿಧಿ ಪ್ರಕಾಶನ, ಶ್ರೀ ಶಿವಕುಮಾರ ಏಜನ್ಸಿ, ಗದಗ ೨೦೧೪

ಬಳ್ಳಾರಿ ಪರಿಸರದ ಹಾಲುಮತ ದೈವಗಳು
ಹಾಲುಮತ ಸಂಸ್ಕೃತಿಕ ಸಂಶೋಧನೆ ಪ್ರತಿಷ್ಠಾನ, ಹೊಸಪೇಟೆ ೨೦೧೫

೫೧) ವಿಜಯ್ ಪೂಣಚ್ಚ ತಂಬಂಡ **ಪಳಮೆ ಮೌಖಿಕ ಆಕರಗಳು ಕಟ್ಟಿಕೊಡುವ ಕನ್ನಡ-ಕೊಡಗು-**
ತುಳುನಾಡಿನ ಅಧ್ಯಯನ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೪

ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ
ಬರವಣಿಗೆ ಕ್ರಮ ಮತ್ತು ವಿಮರ್ಶೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೯

೫೨) ವಿರೂಪಾಕ್ಷ ಪೂಜಾರಹಳ್ಳಿ **ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೮

೫೩) ವಿಷ್ಣು ಎಂ. ಶಿಂದೆ — **ಮಹಾಶಕ್ತಿ ಚಿಂಚಲಿ ಮಾಯಕ್ಕದೇವಿ**
ಪ್ರಕಾಶಕರು, ಶ್ರೀ ಮಾಯಕ್ಕಾದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ
ಚಿಂಚಲಿ, ರಾಯಬಾಗ ೨೦೦೦

೫೪) ವೀರಣ್ಣ ದಂಡೆ — **ಜನಪದ ಹಾಲುಮತ ಮಹಾಕಾವ್ಯ (ಸಂ)**
ಸಾಗರ್ ಪ್ರಕಾಶನ, ಬೆಂಗಳೂರು ೨೦೧೩

೫೫) ಶಂಕರ ಶಿ. ಕುಂಬಾರ — **ಹಾಲುಮತದ ಮೂಲಗುರು ರೇವಣಸಿದ್ಧರು**
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೬-೦೭
ಹಾಲುಮತದ ಸಿದ್ಧರಾಮ
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೬-೦೭
ಹಾಲುಮತದ ಗುರು ಶಿಷ್ಯರು
ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೭
ಹಾಲುಮತದ ಸ್ತ್ರೀಯರು
ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೦೯
ಹಾಲುಮತದಲ್ಲಿ ಕುರಿಕಾಯ್ದ ಮೂಲ ಕುರುಬರು
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೨
ಹಾಲುಮತದ ವಿಠ್ಠಲನ ಪರಮ ಭಕ್ತರು
ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೨
ರೂಪಧಾರಿಗಳು ಹಾಲುಮತದಲ್ಲಿ ದೇವರುಗಳಲ್ಲಿ
ವಿಜೇತ್ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೩

೫೬) ಶ್ರೀರಾಮ ಇಟ್ಟಣ್ಣವರ — **ಹಾಲುಕೆನೆ (ಸಂ)**
ಪ್ರಕಾಶನ, ಅಧ್ಯಕ್ಷರು ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ವಿಜಾಪುರ ೨೦೦೨

೫೭) ಶೈಲಜ ಹಿರೇಮಠ — **ಹರದೇಶಿ-ನಾಗೇಶಿ ಕಲೆ ಮತ್ತು ಕಲಾವಿದರು ಲಿಂಗಸಂಬಂಧಿ ಅಧ್ಯಯನ** ೨೦೧೧
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೮) ಎಸ್. ಎಫ್. ಜಕಬಾಳ — **ಕುರುಬರ ರಟ್ಟಮತಶಾಸ್ತ್ರ**
ವಿದ್ಯಾನಿಧಿ ಪ್ರಕಾಶನ, ಗದಗ ೨೦೧೦-೧೧

೫೯) ಎಸ್. ಎಂ. ಸಂಗಾಪೂರ — **ಹಾಲಿನಂಥ ನನ ಹಾಲುಮತ**
ಶ್ರೀ ವೈಭವಲಕ್ಷ್ಮೀ ಪ್ರಕಾಶಕರು, ಸ್ಟೇಷನ್ ರಸ್ತೆ, ಹುಬ್ಬಳ್ಳಿ ೨೦೧೨

೬೦) ಎಸ್. ಎಸ್. ಅಂಗಡಿ — **ಕುರುಬರ ಸಮುದಾಯ ಭಾಷೆ ಮಾನವಭಾಷಾಶಾಸ್ತ್ರ ಅಧ್ಯಯನ**
ಪ್ರಕಾಶನ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ,
ಚಿತ್ರದುರ್ಗ ಜಿಲ್ಲೆ ೨೦೦೯
ಶಂಬಾ ಜೋಶಿ ಭಾಷಿಕ ವಿವೇಚನೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦

೬೧) ಸ. ಚಿ. ರಮೇಶ — **ಕರ್ನಾಟಕದ ಜನಪದ ಆಚರಣೆಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦

೬೨) ಸದಾಶಿವ ಅಪ್ಪಣ್ಣ ಜುಮ್ಮಣ್ಣವರ — **ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣ**
ಪ್ರಕಾಶಕರು, ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಸಂಘ, ಲೋಣಿ
(ಬಿ. ಕೆ.) ಇಂಡಿ, ವಿಜಾಪುರ ೨೦೦೯

೬೩) ಸರೋಜಿನಿ ಚವಲಾರ — **ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು**
ಪ್ರಕಾಶಕರು, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ
ಮಂಡಳ, ಮೂರುಸಾವಿರ ಮಠ, ಹುಬ್ಬಳ್ಳಿ ೧೯೮೮

೬೪) ಸಿ. ಕೆ. ನಾವಲಗಿ — **ಜಾನಪದ ಸಡಗರ**
ಸಾಗರ್ ಪ್ರಕಾಶನ, ನಾಗರಬಾವಿ, ೨ನೇ ಹಂತ, ಬೆಂಗಳೂರು ೨೦೧೧

೬೫) ಸಿ. ಟಿ. ಗುರುಪ್ರಸಾದ್ — **ಏಳು ಊರಿನ ದೇವತೆಗಳು ಒಂದು ಅಧ್ಯಯನ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫

೬೬) ಸಿ. ಮಹದೇವ — **ಮೈಲಾರ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೨

೬೭) ಸಿದ್ದು ಹುಲ್ಲೋಳಿ — **ಬಾಗೇನಾಡಿನ ಜನಪದ ಕಲಾವಿದರು**
ಸಿದ್ಧಕೀರ್ತಿ ಪ್ರಕಾಶನ, ಮುಗಳಖೋಡ ೨೦೧೧

೬೮) ಸಿದ್ಧಲಿಂಗಯ್ಯ — **ಗ್ರಾಮದೇವತೆಗಳು**
ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು ೨೦೦೯

೬೯) ಸುಮಿತ್ರಾ ದಳವಾಯಿ — **ಹಾಲುಮತ ಕುರುಬರ ದೈವಗಳ ಆಚರಣೆ**
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೫

೭೦) ಸುರೇಶ ಚೌಗುಲೆ — **ಅಬಾಜಿ ನೆನಪಿನ ಬುತ್ತಿ (ಸಂ)**
ಪ್ರಕಾಶನ, ಅಖಿಲ ಭಾರತ ಜನಮಾನ್ಯ ದಿ. ವ್ಹಿ. ಎಲ್.
ಪಾಟೀಲ ಪೌಂಡೇಶನ್, ರಾಯಬಾಗ ೨೦೧೬

೭೧) ಸೂರ್ಯನಾಥ ಕಾಮತ್ — **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಪ್ರಥಮ ಸಂಪುಟ**
ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿಕ ನಿರ್ದೇಶನಾಯಲ,
ಬೆಂಗಳೂರು ೧೯೯೮

ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ತೃತೀಯ ಸಂಪುಟ
ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿಕ ನಿರ್ದೇಶನಾಯಲ,
ಬೆಂಗಳೂರು ೧೯೯೮

೭೨) ಹಳೆಮನೆ ರಾಜಶೇಖರ — **ಬೀರಪ್ಪ**
ಪ್ರಕಾಶಕರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ,
ವೀರಗೋಟಿ, ದೇವದುರ್ಗ ೨೦೦೮

೭೩) ಹಾಲೇಶ್ ಎಂ. ಮೇಟಿ — **ಡೊಳ್ಳಿನ ಹಾಡುಗಳು**
ಎಂ. ಎಂ. ಕರಡಿ ಬುಕ್ ಸೆಲ್ಲರ್, ಹುಬ್ಬಳ್ಳಿ ೧೯೫೯,

೭೪) ಹಿ. ಚಿ. ಬೋರಲಿಂಗಯ್ಯ **ಕರ್ನಾಟಕ ಜನಪದ ಕಲೆಗಳ ಕೋಶ (ಸಂ)**
ಪ್ರಕಾಶಕರು, ಪ್ರಸಾರಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ ೧೯೯೬
೭೫) ಹೆಚ್. ಚಂದ್ರಪ್ಪ ಅಜ್ಜಂಪುರ **ಕುರುಬರ ಕುರುಹುಗಳು**
ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಗದಗ ೨೦೧೧
೭೬) ಹೆಬ್ಬಾಲೆ ಕೆ. ನಾಗೇಶ್ **ಬಹು ಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಮಹಾಸಮನ್ವಯ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೧

ಕನ್ನಡ ಗ್ಯಾಸೆಟಿಯರ್

೧) ಡಾ. ಆರ್. ಮುನಿಸ್ವಾಮಿ **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ವಿಜಾಪುರ ಜಿಲ್ಲೆ (ಸಂ)**
ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು ೧೯೯೯

ಶಾಸನ ಸಂಪುಟಗಳು

೧) ಜಿ. ಎನ್. ಉಪಾಧ್ಯ **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬**
ದೇವರಕೊಂಡಾರೆಡ್ಡಿ **ಮಹಾರಾಷ್ಟ್ರದ ಕನ್ನಡ ಶಾಸನಗಳು (ಸಂ)**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ೨೦೦೧
೨) ಶ್ರೀನಿವಾಸ ರಿತ್ತಿ ಮತ್ತು **ಕೊಲ್ಹಾಪೂರ ಜಿಲ್ಲೆಯ ಶಾಸನಗಳು (ಸಂ)**
ಅನಂತ ಬಿ. ಕರವೀರಕರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ೨೦೦೦

ನ್ಯಾಯಾಲಯದ ಆದೇಶ ಪ್ರತಿ

೧) ಬೆಳಗಾವಿ **ಜಿಲ್ಲಾ ಡಿವಿಜಿನಲ್ ಸೆಷನ್ ನ್ಯಾಯಾಲಯ**
ಸ್ಪೆಶಲ್ ಕೇಸ ನಂ ೧/೧೯೪೩ ೧೯೪೩

ಇಂಗ್ಲೀಷ ಗ್ಯಾಸೆಟಿಯರ್

೧) James M. Campbell **GAZETTEER BELGAUM**
GOVERNMENT CENTRAL PRESS, BOMBAY. ೧೮೮೪

ಅಪ್ರಕಟಿತ ಪಿಎಚ್. ಡಿ ಮತ್ತು ಎಂ. ಫಿಲ್ ಪ್ರಬಂಧಗಳು

೧) ಉಮೇಶ ಗುರಿಕಾರ **ಹೈದರಾಬಾದ ಕರ್ನಾಟಕ ಕುರುಬರ ಚಾರಿತ್ರಿಕ ಅಧ್ಯಯನ**
(ಕೊಪ್ಪಳ ಜಿಲ್ಲೆಯನ್ನು ಅನುಲಕ್ಷಿಸಿ)
(ಪಿಎಚ್. ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭
೨) ಬಸವರಾಜ ಯಲಶೆಟ್ಟಿ **ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು**
(ಎಂ. ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೧
೩) ಮಧುಸೂದನ ಬೀಳಗಿ **ಹಿಡಕಲ್ಲದ ಸ್ವಾತಂತ್ರ್ಯ ಹೋರಾಟಗಾರರು**
(ಎಂ. ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೧



